Registered No. M. 488

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಂದಕ್ಕೆ ರೂ 1-1-0 ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ X ಮಂಗಳೂರು ತಾ 7ನೇ ಜನವರಿ ಶುಕ್ರವಾರ 1910 ಸಂಚಿಕೆ 1

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

(ರಜಿಸ್ಟರ್)

1. ಇದು [illegible] ಶೀಘ್ರದಲ್ಲಿ ಪರಿಹರಿಸುವುದು.

2. [illegible] ಮಹಾಪ್ರಸಾದವಾಗಿರುವುದು.

3. ಊಟವಾದನಂತರ [illegible] ಈ ಮಾತ್ರೆಗಳನ್ನುಪಯೋಗಿಸುತ್ತ [illegible] ಜೀರ್ಣವಾಗುವಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ [illegible]

4. ಬಾಯಿಯ ದುರ್ವಾಸನೆಯನ್ನು [illegible] ಸುವಾಸನೆಯನ್ನು [illegible]

5. [illegible] ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. [illegible]

7. [illegible]

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0 200 ಮಾತ್ರೆಗಳ ಪೊಟ್ಟ 1ಕ್ಕೆ 0—[illegible]—0 80 ಮಾತ್ರೆಗಳ [illegible] 1ಕ್ಕೆ 0—4—0 550 ಮಾತ್ರೆಗಳ [illegible] 1ಕ್ಕೆ 1—0—0
95 „ „ 0—4—0 200 „ ಟಿನ್ „ 0—9—0 100 „ „ 0—4—0 1200 „ „ „ 2—[illegible]

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ [illegible]

☞ ಬರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ಡಿ. ಉ[illegible]ಸ್‌ಮಾರ್ಟಿನ್, ಮಂಗಳೂರು

ಸೋಲ್ ಏಜಂಟ್ಸ್ — ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2

TOM VICTOR & CO'S
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from "Oct. 10th to Jan 10th, Jan 15th to April 15, June 15th to Sept. 15th"

N B JOB WORK and Typewriter Repairs undertaken at very cheap rates

MILAGRES, Mangalore.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ್ಯಕ್ ವ್ಯಕ್ತವಾಗುವದು ಕನ್ನಡ ನುಡಿಯು ಬಲ್ಲ ನಾಟಿವೈದ್ಯರುಗಳೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ವಿಳಾಸವನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನ್‌ಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ ರಾ ಬಿ ವೆಂಕಟರಾವ್ ಎಂ.ಎ.,ಎಲ್ ಎಲ್ ಬಿ ಅವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀ ಪುರುಷರೂ ಬಾಲ್ಯ ವಯಸ್ಸಿನವರೂ ಓದುವದಕ್ಕೆ ತಕ್ಕದಾಗಿಯೂ ಇದ್ದು, ಸಂಸಾರಿಕರು ನಡೆಯಬೇಕಾದ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ:— ಮ್ಯಾನೇಜರ್,
ಶಾರದಾ ಪ್ರೆಸ್, ಮಂಗಳೂರು, ಎಸ್. ಕೆ.

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ
ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೊ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ, ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮಿದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ ಬರೇ ಮಾತುಗಳಿಂದ ವರ್ಣಿಸುವದರಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು— ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣ್ ರ್ ಮೈಭರಣ 1, ತಾಂಬೂಲ ಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ. ಎ. ಎಸ್. ಪಾಣಾ ಕಂಪೆನಿ,
3 ಇರುಳಪ್ಪನ್ ಬೀದಿ, ಮದರಾಸು

ಜಯವಿಜಯ
ಅಥವಾ
ತೂಗಾಡುವ 'ಅಸ್ಥಿಪಂಜರ'.

ಇದರಲ್ಲಿ "ದಿಲೀಪಸಿಂಹ ಉರಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗ್ಗಾಗಿ ತೂಗಹಾಕಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವೆ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗ್ರಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. C. Amin**
C/o E. A. Goll Esq.
Sirdar Palace, Apollo Street, BOMB.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿದೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ."

ಮ|| ರಾ|| ಬಿ. ರಾಮರಾವ್ ಎಂ ಎ, ಎಲ್. ಎಲ್. ಬಿ, ಗವರ್ನಮೆಂಟ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. • • • • ಇದರಂತೆಯೇ ನಮ್ಮ ಸಮಾಜದಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ.— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಟೀ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಕಲ್ಕತ್ತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬಿ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಇಳಕಲ ಸೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ನ್ಯೂ ನಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ—ವಾತ, ಸಂದಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ. ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ. 5—4—0. ವಿ ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ.—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಕ್ರೂಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸ್‌ವೆಲ್, ಮೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

ಫ್ರೇಯರ್ ರೋಡ್, ಮುಂಬಯಿ

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು „	219,100—0—0
Paid up Capital	194,100—0—0	ಆಗತ ಮೂಲ ಧನವು „	194,100—0—0
Deposits	371,976—4—4	ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	371,976—4—4
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs 28,485/ have been invested in Government Paper of the face value of Rs 29,300/-

Dividends of not less than 6%. paid during the past years and a bonus of 1%. to 2%. paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4⅛%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ರೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿರೇವಣಾತಿಗಳು ರೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ರೇವಣಾತಿ ಇಡೋಣಾವೀತು. ಈ ರೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd,
Mangalore, 1st December 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.



(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯುತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊಮೋಹಿನಿಯು ಶಾಶ್ವತಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಪಡಿಸಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾ' ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನೆರ್ವಾ, ಸ್ಟೇನಿಯಾ ಮತ್ತು ಥೊಬ್ಬನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Agents:—**MOHINI AGENCY,**
3 Fida Building, Jumma Musjid, BOMBAY.
—Bhagavandas Choonilal & Co.

ಪ್ರೊಪ್ರೈಟರರು:—ಒರಿಯೆಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಸುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ| ಜೋರ್ಜ್‌ಕಿಂಗ್ ಎಫ್. ಐ. ಎ. ಎಫ್. ಎ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ| ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲೆಬಾರ, ತಿರುವಾಂಕೋಡು, ಮತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಸುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಾಡಿಯಾರನ ರುಜು.

(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡ್ಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಸುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಸುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಾ ಹಣವನ್ನು ಪಡಕೊಳ್ಳುವ ಹಾಗೆ, ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು,—ಇದೊಂದು [illegible] ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಕೆ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ [illegible])

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಸ್ವೆ ವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY.

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪರ್ಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶೂಲೆ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ [illegible]

Chemist, [illegible]

[illegible] BOMBAY. [illegible]

Peoples Park Fair Reward.

ಸುಂದರವಾದ] 1916 [ಕಾಲೆಂಡರು.



ಕರ್ನಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟ-ಲಾಗು ಇನಾಮಾಗಿ ಕಳುಹಿಸುವೆವು. ತ್ವರೆಮಾಡಿರಿ.

ವಿಳಾಸ:— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0. ಟಪ್ಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3, ಇರುಳಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯತು ಬ್ರಿಟಿಷ್ ಮಹಾರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸಂಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತದ್ಪ್ರತಿಗಳೂ ಕೂಡಾ ಛಂದವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು. ಹೋಟೆಲ್, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲಿಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಛಂದವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ. ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ.

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ.
ಸಮಯಾನುಸಾರ ಕ್ರಯವು 0—4—0 ಏರಿಸಲಾದೀತು.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಶನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು:— ಎನ್. ಎ. ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮುಣಂಜೆಗುತ್ತು,
ಪೋಸ್ಟು ಪೊಳಲಿ, ದ. ಕ. ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು.
3. ಬಂಟರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5. ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6. ಪ್ರಭಾಕರ ಮುದ್ರಾಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವುದು.

ಉಚಿತ! ಉಚಿತ! ಟಪ್ಪಾಲು ಹಾಸಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟ ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವುದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದ್ದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು. ಖರ್ಚು ಒಂದಿಷ್ಟಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಮಾಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಠ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಬೈರಾಬಜಾರ್ ರಸ್ತೆ, ಮದರಾಸು.

ಸಫಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ

ಆರೋಗ್ಯ ದೃಢಕಾಯವನ್ನು ಆದರಿಸಿರುವೆದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಫಳಿಸಿಕೊಳ್ಳಬಹುದು. ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿತ್ರಾಣಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದುಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಠ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಬೈರಾಬಜಾರ್ ರಸ್ತೆ ಮದರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 7ನೇ ಜನವರಿ 1916

ರಾಷ್ಟ್ರೀಯ ಪ್ರಗತಿಯ ಗತಿಯು ಹೇಗೆ ನಿಶ್ಚಯಿಸಲ್ಪಟ್ಟಿರುವದು?

ಕಳೆದ ದಶಂಬರ ತಿಂಗಳಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಅಧ್ಯಕ್ಷರು ಮಾಡಿದ ಭಾಷಣವನ್ನೂ ಅದರಲ್ಲಿ ನಿಶ್ಚಿತವಾದ ನಿರ್ಣಯಗಳನ್ನೂ ಕುರಿತು ಇನ್ನೊಮ್ಮೆ ಪ್ರಸ್ತಾಪಿಸುವೆವು ಎಂತ ಕಳೆದ ಸಂಚಿಕೆಯಲ್ಲಿ ಹೇಳಿದೆವು. ಅಧ್ಯಕ್ಷರ ಭಾಷಣದಲ್ಲಿ ಸಾಮಾನ್ಯವಾಗಿ ಸಭೆಯವರು ಅನುಸರಿಸಬೇಕಾದ ಮಾರ್ಗವು ಸೂಚಿಸೋಣಾಗುತ್ತದೆ. ಬಹು ಪಕ್ಷ ಇಂಥಾ ಸೂಚನೆಗಳನ್ನು ಅನುಸರಿಸಿಕೊಂಡು ನಿರ್ಣಯಗಳು ಮಾಡೋಣಾಗುತ್ತವೆ. ಆದ್ದರಿಂದ ಭಾಷಣವನ್ನೂ ನಿರ್ಣಯಗಳನ್ನೂ ಬೇರೆ ಬೇರೆಯಾಗಿ ಪ್ರಸ್ತಾಪಿಸಬೇಕೆಂತಿಲ್ಲ. ಇವುಗಳನ್ನು ಒಟ್ಟಾಗಿ ತಕ್ಕೊಂಡು ಇವುಗಳ ಫಲವಿಚಾರವನ್ನು ಮಾಡಿದರೆ ನಿರ್ಣಯಗಳ ತಾತ್ಪರ್ಯವು ತನ್ನಷ್ಟಕ್ಕೆನೇ ಸ್ಪಷ್ಟವಾಗುವದು ಮತ್ತು ದೇಶದ ಮುಂದಾಳುಗಳಿಂದ ರಾಷ್ಟ್ರೀಯ ಪ್ರಗತಿಯ ಗತಿಯು ಹೇಗೆ ನಿಶ್ಚಯಿಸಲ್ಪಟ್ಟಿರುವುದೆಂಬುದು ವ್ಯಕ್ತವಾಗುವದು.

ಸುರತಿನಲ್ಲಿ ಕೂಡಿದ ರಾಷ್ಟ್ರೀಯ ಸಭೆಯಲ್ಲಿ ಯಾವ ಸಭಾಕಾರ್ಯವೂ ನೆರವೇರದೆ ಸಭೆಯು ಗೊಂದಲದಲ್ಲಿ ಮುಗಿದುಹೋಯಿತಾದರೂ ಅಂದಿನಿಂದ ರಾಷ್ಟ್ರೀಯ ಸಂಗಡದವರಲ್ಲಿ ಎರಡು ಪಕ್ಷಗಳು ಬೆಳೆದುಹೋಗಿವೆ. ಈ ಎರಡು ಪಕ್ಷಗಳ ಧ್ಯೇಯವು ಒಂದೇಯಾಗಿರುವದರಿಂದ ಇವೆರಡರ ಏಕೀಕರಣದ ಸಂಭವವು ಯಾವಾಗ ಪ್ರಾಪ್ತವಾಗಬಹುದೆಂಬ ಕಾಲನಿರೀಕ್ಷಣೆಯನ್ನು ಯೋಚಿಸಿಕೊಂಡಿರುವಂಥವರಿಗೆ ನಿರಾಶೆಯೇ ಪ್ರಾಪ್ತಿಯೆಂತ ಕಳೆದ ಸಾರಿಯ ಸಭಾಕಾರ್ಯ ವಿವರದಿಂದ ಗೊತ್ತಾಗುತ್ತದೆ. ಆದ್ದರಿಂದ ಈ ದೇಶದ ರಾಷ್ಟ್ರೀಯ ಪ್ರಗತಿಯ ಗತಿನಿರ್ಣಯದಲ್ಲಿ ಸರಕಾರದ ಭೇದಬುದ್ಧಿಯಲ್ಲದೆ ಈ ಎರಡು ಸಂಗಡದವರ ಮತಭೇದವನ್ನು ಸಹ ಗಣನೆಗೆ ತಂದುಕೊಳ್ಳಬೇಕಾಗಿರುವದು. ಪ್ರಜಾವರ್ಗದೊಳಗಣ ಈ ಭೇದವನ್ನು ಹೋಗಗೊಳಿಸುವದು ರಾಷ್ಟ್ರೀಯ ಸಭೆಯಲ್ಲಿ ಕಷ್ಟಸಾಧ್ಯವೆಂತ ತಿಳಕೊಂಡಿದ್ದ ಆನ್ನಿಬಿಸೆಂಟರಂಥ ಕೆಲವು ಕಾರ್ಯಪಟುಗಳು 'ಹೋಮ್‌ರೂಲ್ ಲೀಗ್' ಎಂಬ ಬ್ರಿಟಿಷ ಸಾಮ್ರಾಜ್ಯದೊಳಗಣ-ಸ್ವರಾಜ್ಯ ಪ್ರಾಪ್ತಿ ಸಾಧನೆಯ ಸಂಘವೆಂಬ ಉಪಾಯದಿಂದ ಈ ಎರಡು ಪಕ್ಷಗಳನ್ನು ಏಕೀಕರಿಸಲು ಕೆಲವು ಸಮಯದಿಂದ ಸಾಧನೆ ನಡಿಸುತ್ತಿದ್ದರು. ಈ ಸಾಧನೆಯು ಸಹ ರಾಷ್ಟ್ರೀಯ ಸಭೆಯ ಮೂಲಕ ತತ್ಕಾಲಕ್ಕೆ ಬಿದ್ದುಹೋಗಿರುವದು. ಆದರೆ ಈ ಸರ್ತಿ ಮಹಮ್ಮದೀಯರ 'ಲೀಗ್' ಎಂಬುವ ಮಹಮ್ಮದೀಯರ ಸಂಘವೂ ರಾಷ್ಟ್ರೀಯ ಸಭೆಯೂ ಮುಂಬಯಿಯಲ್ಲಿಯೇ ಕೂಡಿಬಂದುದರಿಂದ ಹಿಂದೂ ಮಹಮ್ಮದೀಯರೊಳಗಣ ಐಕ್ಯಭಾವನೆಯ ಬೆಳವಣಿಕೆಗೆ ವಿಶೇಷ ಆಸ್ಪದವು ದೊರಕಿರುವದು. ರಾಷ್ಟ್ರದ ಐಕ್ಯಕ್ಕೆ ಹಿಂದೂ ಮುಸಲ್ಮಾನರ ಐಕ್ಯವು ಅಗತ್ಯವಾದುದರಿಂದ ಇಂಥಾ ಸಂದರ್ಭವು ಶುಭಸೂಚಕವೇ ಎಂತ ಹೇಳಬೇಕಾಗಿದೆ. ರಾಜಕೀಯ ಚಳವಳದಲ್ಲಿ ಇನ್ನು ಮುಂದೆ ಈಗಿನಕ್ಕಿಂತ ಹೆಚ್ಚಿನ ಸಹಕಾರವು ಮಹಮ್ಮದೀಯರಿಂದ ದೊರಕಲು ಅವಕಾಶವಾಯಿತೆಂದು ಈ ಮೂಲಕ ಸೂಚಿಸಲು ಸಂತೋಷಪಡುತ್ತೇವೆ.

ಸ್ವರಾಜ್ಯ ಪ್ರಾಪ್ತಿಯ ಧ್ಯೇಯವನ್ನು ಮುಂದಿಟ್ಟು ಇದಕ್ಕೆ ಅನುಸಾರವಾಗಿ ಬಾಕಿ ನಿರ್ಣಯಗಳೆಲ್ಲವೂ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾಗಿರುವವು. ಪಾಶ್ಚಾತ್ಯ ಜನಾಂಗಗಳಂತೆ ಭಾರತೀಯರು ಸ್ವರಾಜ್ಯಪದವಿಗೆ ಎಂದೂ ಅರ್ಹರಲ್ಲವೆಂಬ ಅಭಿಪ್ರಾಯವು ನಮ್ಮನ್ನಾಳುವ ಹಲವರಲ್ಲಿದೆಂಬ ಅಂಜಿಕೆಯು ಪ್ರಜಾವರ್ಗಗಳಲ್ಲಿ ಬಹಳವಾಗಿರಬಹುದು. ಇಂಥಾ ಅಂಜಿಕೆಯನ್ನು ಹೋಗಲಾಡಿಸುವುದಕ್ಕೂ ಬ್ರಿಟಿಷರಲ್ಲಿ ಇಲ್ಲಿಯ ಜನರಿಗೆ ಇನ್ನೂ ಹೆಚ್ಚಾಗಿ ಪ್ರೀತಿ ವಿಶ್ವಾಸಗಳು ಉಂಟಾಗುವಂತೆಯೂ ಹಿಂದೂಸ್ಥಾನದ ರಾಜ್ಯದಾಡಳಿತೆಯನ್ನು ಸ್ವರಾಜ್ಯದ ಧ್ಯೇಯಕ್ಕೆ ಅನುಸಾರವಾಗಿ ನಡೆಸುವೆವೆಂಬ ನಿರೂಪಣೆಯನ್ನು ಸಾಮ್ರಾಜ್ಯ ಸರಕಾರದವರು ದಯಪಾಲಿಸಬೇಕೆಂದು ಸಭಾಧ್ಯಕ್ಷರು ಸೂಚಿಸಿರುವರೆಂಬ ವಿವರವನು ಹಿಂದೊಮ್ಮೆ ಹೇಳಿರುವೆವು. ಸ್ವರಾಜ್ಯ ಪ್ರಾಪ್ತಿಯು ಕ್ರಮೇಣ ದೊರಕುವಂತೆ ನಡಿಸಬೇಕಾದ ಸಾಧನೆಯು ಸಭಾ ಅಧ್ಯಕ್ಷರ ಭಾಷಣದಲ್ಲಿಯೂ ಸಭೆಯ ನಿರ್ಣಯಗಳಲ್ಲಿಯೂ ವಿವರಿಸಲ್ಪಟ್ಟಿರುವದು. ಬ್ರಿಟಿಷ ಸಾಮ್ರಾಜ್ಯದ ಅಧೀನತೆಯಲ್ಲಿರುವ ವಸಾಹತಿಗಳಿಗೆ ತಮ್ಮ ಆದಾಯ ವ್ಯಯಗಳನ್ನು ವ್ಯವಸ್ಥೆಪಡಿಸುವ ಪೂರ್ಣ ಸ್ವತಂತ್ರವು ಇರುವ ರೀತಿಯಲ್ಲಿಯೇ ಈ ಸ್ವತಂತ್ರವು ಹಿಂದೂಸ್ಥಾನಕ್ಕೆ ಇರಬೇಕು. ಹಿಂದೂಸ್ಥಾನದ ಖಜಾನೆಯ ಅಧಿಕಾರದ ಸ್ವತಂತ್ರವು ಪೂರ್ಣವಾಗಿ ಇಲ್ಲಿಯ ಸರಕಾರದವರಿಗೆ ಇಲ್ಲದ್ದರಿಂದ ಯಾವ ಕಾರ್ಯಸಾಧನೆಯನ್ನಾದರೂ ಸಾಮ್ರಾಜ್ಯ ಸರಕಾರದವರ ಅಪ್ಪಣೆಯಿಲ್ಲದೆ ಮಾಡುವದು ಅಸಾಧ್ಯವಾಗಿದೆ. ಆದ್ದರಿಂದ ಇಂಥಾ ಅಧಿಕಾರವನ್ನು ಹಿಂದೂಸ್ಥಾನಕ್ಕೆ ಕೊಡೋಣಾಗಬೇಕೆಂದು ರಾಷ್ಟ್ರೀಯ ಸಭೆಯವರು ಸರಕಾರದವರನ್ನು ಕೇಳಿಕೊಂಡಿರುವರು. ಸ್ವರಾಜ್ಯ ಪ್ರಾಪ್ತಿಯು ಕ್ರಮೇಣ ದೊರಕುವಂತೆ ಯಾವ್ಯಾವ ಏರ್ಪಾಡುಗಳು ಅಗತ್ಯವೆಂಬ ವಿಷಯವನ್ನು ಪರಿಶೀಲಿಸಿ ಬೇಕಾದ ಸೂಚನೆಗಳನ್ನು ಮಾಡಲು ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿರುವದು. ಮುದ್ರಣಾಲಯಗಳ ಮೇಲಿರುವ ನಿರ್ಬಂಧಗಳನ್ನು ಹೋಗಗೊಳಿಸಲು ಪ್ರೆಸ್ ಆಕ್ಟನ್ನು ತಿದ್ದಬೇಕೆಂದು ಸೂಚಿಸಲ್ಪಟ್ಟದೆ. ಭೂಕಂದಾಯದ ಮಿತಿಯನ್ನು ಸರಕಾರದವರು ಖಂಡಿತವಾಗಿ ಒಂದೇ ಸಲ ನಿರ್ಣಯಿಸುವದು ಅಗತ್ಯವೆಂತಲೂ ರೈತವಾರಿ ಜಮೀನುಗಳಲ್ಲಿ ಕಂದಾಯದ ಸೆಟ್ಲ್‌ಮೆಂಟುಗಳನ್ನು ಕನಿಷ್ಟಪಕ್ಷಕ್ಕೆ 60 ವರುಷಗಳ ಮೊದಲು ಮಾಡಕೂಡದೆಂದೂ ಸಭಿಕರು ತಮ್ಮ ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಅಂಗ್ಲಾಳದಲ್ಲಿ ಭಾರತೀಯ ವಿದ್ಯಾರ್ಥಿಗಳ ಸ್ಥಿತಿಗತಿ, ಸ್ವದೇಶಿ ಚಳವಳ, ಹ್ಯಾಕೋರ್ಟುಗಳನ್ನು ಸ್ಥಾಪನೆ, ವಸಾಹತಿಗಳ ಬಗ್ಗೆ ಕೂಲಿ ಕೆಲಸದವರನ್ನು ಕರಾರುಗಳ ನಿರ್ಬಂಧದಿಂದ ಸಂಗ್ರಹಿಸುವ ವಿಧಾನ, ಮೊದಲಾದ ವಿಷಯಗಳಲ್ಲಿ ಪ್ರಜಾಭಿಪ್ರಾಯವೇನೆಂತ ರಾಷ್ಟ್ರೀಯ ಸಭೆಯವರು ಕಂಠೋಕ್ತವಾಗಿ ಸೂಚಿಸಿರುವರು. ಎಲ್ಲಾ ನಿರ್ಣಯಗಳು ರಾಷ್ಟ್ರೀಯ ಸಭೆಯ ಸ್ವರಾಜ್ಯಭಾರದ ರಾಜಕೀಯಧ್ಯೇಯವನ್ನು ಅನುಸರಿಸಿ ಇವೆ.

ಪ್ರಜಾಜನರ ಉದ್ದೇಶವು ಒಂದೇ. ಉದ್ದೇಶಸಾಧನೆಗಳಲ್ಲಿ ಮಾತ್ರ ಭೇದಗಳು ಕಂಡುಬಂದದ್ದರಿಂದ ತಂಡಗಳು ಎರಡು ಇರುವವೆಂದು ಕಂಡುಬರಬಹುದು. ಆದರೆ ಯಾವ ತಂಡದ ಅಭಿಪ್ರಾಯಗಳು ದೇಶಕ್ಕೆ ಹಿತಕರವೆಂಬುದು ಸಭೆಗಳಲ್ಲಿ ಅಥವಾ ಪತ್ರಗಳಲ್ಲಿ ನಡಿಯುವ ವಾದಗಳಿಂದ ನಿರ್ಣಯಿಸುವ ಬದಲಿಗೆ ಕಾರ್ಯಸಾಧನೆಯಲ್ಲಿ ಇದನ್ನು ಗೊತ್ತುಮಾಡುವದು ಲೇಸು. ನಿರ್ಗತಿಕರು, ನಿರಕ್ಷರಕುಕ್ಷಿಗಳು, ದರಿದ್ರರು, ಜ್ಞಾನಶೂನ್ಯರು ಪ್ರಜಾವರ್ಗದಲ್ಲಿ ರಾಶಿರಾಶಿಯಾಗಿ ತುಂಬಿರುವರು. ಇವರನ್ನು ಉದ್ಧರಿಸುವ ಸಾಧನೆಯ ಅಭಿಪ್ರಾಯವು ಒಂದೇ, ಮಾರ್ಗವು ಸಹ ಒಂದೇ. ತಂಡಭೇದಗಳ ವಿಚಾರವೇ ಇಂಥವರ ಉದ್ಧರಣೆಯಲ್ಲಿ ಅಗತ್ಯವಿರದು. ಇಂಥವರ ಉದ್ಧರಣೆಯಿಂದ ಸ್ವರಾಜ್ಯದ ಪದವಿಯು ನಮಗೆ ಪ್ರಾಪ್ತವಾಗಬೇಕಾದ್ದರಿಂದ ಸರ್ವರೂ ಈ ಕಾರ್ಯದಲ್ಲಿ ಒಂದಾಗಿ ದೇಶಾಭ್ಯುದಯವನ್ನು ಸಾಧಿಸಬೇಕೆಂದು ಅಧ್ಯಕ್ಷರು ದೇಶಬಾಂಧವರನ್ನೆಲ್ಲಾ ಪ್ರಾರ್ಥಿಸಿರುವರು. ಈ ಪ್ರಾರ್ಥನೆಯು ಎಲ್ಲಾ ಕಡೆಗಳಲ್ಲಿಯೂ ಕೇಳಿಸಲೆಂಬುದಾಗಿ ಕೋರುತ್ತೇವೆ.

ಕೆನರಾ ಹ್ಯಾಸ್ಕೂಲ್, ಮಂಗಳೂರು.

ಈ ಶಾಲೆಯ ವರ್ಧಂತಿ ದಿನಾಚರಣೆಯು ಕಳೆದ ತಿಂಗಳ ತಾ. ೨೭ರಲ್ಲಿ ಆಚ[illegible] ಸಲ್ಪಟ್ಟ ವರ್ತಮಾನವನ್ನು ಅದೇ ತಿಂಗಳ ತಾ. ೩೧ರ ಸಂಚಿಕೆಯಲ್ಲಿ ವಾಚಕರು ಓದಿರಬಹುದು. ಶಾಲಾ ವರದಿ, ಅಧ್ಯಕ್ಷರ ಭಾಷಣ ಮತ್ತು ಶಾಲೆಯ ಹಳೆ ವಿದ್ಯಾರ್ಥಿ[illegible] ಗಳಿಗೆ ಶಾಲೆಯ ಮೇಲಿರುವ ಅಭಿಮಾನ, ಇವುಗಳ ವಿಷಯ ಪ್ರಸ್ತಾಪಿಸಲು ಹಿಂದಿ[illegible] ಸಂಚಿಕೆಯಲ್ಲಿ ಸ್ಥಳ ಸಾಲದೆ ಹೋಯಿತು. ಶಾಲಾ ಪರೀಕ್ಷೆಗಳ ಫಲವನ್ನೂ, [illegible] ಶಾಲೆಯ ವಿಷಯ ಇನ್ಸ್‌ಪೆಕ್ಟರರವರು ಪಟ್ಟ ಅಭಿಪ್ರಾಯವನ್ನೂ ನೋಡಿದರೆ ಶಾ[illegible] ಯಲ್ಲಿ ಶಿಕ್ಷಣಾ ಅಭ್ಯಾಸವು ಚಲೋದಾಗಿ ನಡಿಯುವದೆಂದು ಸ್ಪಷ್ಟವಾಗುವದು[illegible] ಸ್ಕೂಲು ಫ್ಯಾನಲ್ ಪರೀಕ್ಷೆಯಲ್ಲಿ ಆಯಾ ವಿಷಯಗಳಲ್ಲಿ ಈ ಶಾಲೆಯ ವಿದ್ಯಾರ್ಥಿ[illegible] ಗಳಿಗೆ ದೊರಕಿದ ಮಾರ್ಕುಗಳು ಸಂಸ್ಥಾನದ ಶಾಲೆಗಳ ಸರಾಸರಿಗೆ ಮಿಕ್ಕಿರುವದು[illegible] ಶಾಲೆಯ ಉಪಾಧ್ಯಾಯರ ಸಿಬಂದಿಯೂ ಯೋಗ್ಯವಾಗಿದ್ದು ಶಿಕ್ಷಣವು ಒಳ್ಳೇದಾಗಿದೆ[illegible] ಶಾಲಾ ಅಧಿಕಾರಿಗಳ ಮತ್ತು ಉಪಾಧ್ಯಾಯರೊಳಗೆ ಅನುವಾದವು ಸರಿಯಾಗಿರುವದ[illegible] ಎಂಬ ಇನ್ಸ್‌ಪೆಕ್ಟರರ ಅಭಿಪ್ರಾಯವು ವರದಿಯಲ್ಲಿ ತೋರುವದು. ಶಾಲೆಯ [illegible] ವಿದ್ಯಾರ್ಥಿಗಳಲ್ಲಿ ಲೆಪ್ಟನೆಂಟ್ ಮಿರಾಜಕಾರ್ ಮತ್ತು ಮಲ್ಯರವರು ಯುದ್ಧರಂಗದ[illegible] ಸಾಮ್ರಾಜ್ಯದ ಸೇನೆಯ ಸೇವೆಯನು ಮಾಡುತಿರುವರು. ಲೆಪ್ಟನೆಂಟ್ ರೋಬರ್ಟ್[illegible]

ಎಂಬವರು ಮೆಸೊಪೊಟೊಮಿಯಾದಲ್ಲಿ ಬ್ರಿಟಿಷ ಸೇನೆಯ ಸೇವೆಗಾಗಿ ತೆರಳಿರುವರು, ಮತ್ತು ಡಾಕ್ಟರ್ ಎಮ್. ನರಸಿಂಗರಾವ್‌ರವರು ಯುದ್ಧರಂಗಗಳಿಗೆ ಹೋಗಿ ಗಾಯ ಪಡೆದ ಸೇನಿಕರನ್ನು ಚಿಕಿತ್ಸೆ ಬಗ್ಯೆ ತರುತ್ತಿರುವ 'ಮದ್ರಾಸ್ ಹೊಸ್ಪಿಟಲ್ ಶಿಪ್' ಎಂಬ ನಾವೆಯ ಮೇಲಿರುವ ವೈದ್ಯರ ಸಿಬಂದಿಯನ್ನು ಸೇರಿರುವರು, ಸವೂರ್ ಶಂಕರ್‌ರಾವ್‌ರವರು ಸಿವಿಲ್ ಸರ್ವಿಸ್ ಪರೀಕ್ಷೆಯ ಬಗ್ಯೆಯೂ ತೊಂಬತ್ತ ಸಖಾರಾಮರಾವ್‌ರವರೂ ಮಹಾಲಿಂಗ ಅಡ್ಡಂತಯ್ಯನವರೂ ಇಂಜಿನೀಯರಿಂಗ್ ಪರೀಕ್ಷೆಯ ಬಗ್ಗೆಯೂ ಕಲಿಯುತ್ತಿದ್ದಾರೆ—ಎಂಬ ಪ್ರಶಂಸೆಯು ಶಾಲಾ ವರದಿಯಲ್ಲಿರುವದು. ಸಮುದ್ರಯಾತ್ರೆಗಳ ಮೂಲಕ ವಿದೇಶಗಳಿಗೆ ವಿದ್ಯಾರ್ಥಿಗಳು ಹೋದ ದೃಷ್ಟಾಂತಗಳು ಬಹಳ ಅಪರೂಪವಾದ ಈ ಜಿಲ್ಲೆಯಲ್ಲಿ ಕೆನರಾ ಹ್ಯಾಸ್ಕೂಲಿನ ಈ ಹಳೆ ವಿದ್ಯಾರ್ಥಿಗಳ ಈ ಸಹಸ ಬುದ್ಧಿಯು ಪ್ರಶಂಸನೀಯವಾಗಿದೆ. ಶಾಲೆಗೆ ಬರುವ ಪರಊರುಗಳ ವಿದ್ಯಾರ್ಥಿಗಳಿಗೆ ಅನುಕೂಲವಾದ ವಿದ್ಯಾರ್ಥಿಭವನವೂ, ಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕೆ ತಕ್ಕುದಾದ ೪೫೦೦ ಪುಸ್ತಕಗಳಿರುವ ಪುಸ್ತಕ ಭಂಡಾರವೂ ಈ ವಿದ್ಯಾಸಂಸ್ಥೆಯ ವಿನಿಯೋಗದ ಬಗ್ಗೆ ಇವೆ. ಶಾಲೆಯ ಆದಾಯ ವೆಚ್ಚಗಳ ಸ್ಥಿತಿಯಾದರೂ ಬಹಳ ದುಃಖಕರವಾಗಿರುವದು. ಖರ್ಚು ರೂ. ೨೩,೦೩೭-೬-೧, ಜಮೆ ೧೬,೭೭೯-೪-೨ ಅಂದರೆ "ಆಮದ್ ಥೋಡಾ ಖರಚ್ ಬಡಾ"—ಇದರಿಂದ ವ್ಯಕ್ತವಾಗುವ 'ನಿಶಾನಿ'ಯು ಸೂಚಿಸುವ ಗತಿಯು ಸರ್ವರಿಗೂ ತಿಳಿದೇ ಇದೆ. ಪ್ರಜಾಜನರಲ್ಲಿ ಹಲವು ವಿದ್ಯಾವಂತರು ಸ್ವತಂತ್ರವಾಗಿ ಜನರ ವಿದ್ಯಾಭ್ಯಾಸದ ಬಗ್ಯೆ ಸ್ಥಾಪಿಸಿದ ಇಂಥಾ ವಿದ್ಯಾಸಂಸ್ಥೆಗಳೆಲ್ಲವುಗಳಿಗೂ ಈ 'ನಿಶಾನಿ'ಯು ಸಾಮಾನ್ಯವಾಗಿರುವಂಥಾದ್ದು ಬಹಳ ಶೋಚನೀಯ ವಿಷಯವಾಗಿರುವದು. ಈ ದುಃಖಕರ ಸ್ಥಿತಿಯ ನಿವಾರಣೆಗೆ ತಕ್ಕ ಉಪಾಯವು ದೊರಕುವತನಕ ಇಂಥಾ ದುಃಖಮಯ ಸ್ಥಿತಿಯನ್ನು ಸಂಪನ್ನರಾದ ದೇಶಬಾಂಧವರ ಮತ್ತು ಮರಾಧಿಪತಿಗಳ ಲಕ್ಷ್ಯಕ್ಕೆ ಪದೇ ಪದೇ ತರುವದು ಅಗತ್ಯವಾಗಿರುವದು. ಶಾಲೆಯ ವರ್ಧಂತಿಯ ದಿನ ಅಧ್ಯಕ್ಷರು ಸಹ ಶಾಲೆಯ ಈ ಬಡಸ್ಥಿತಿಯನ್ನು ಅದರ ಅಧಿಕಾರಿಗಳ ಲಕ್ಷ್ಯಕ್ಕೆ ತಂದಿರುವರು. ಶಾಲಾಧಿಕಾರಿಗಳಲ್ಲಿಯೂ ಉಪಾಧ್ಯಾಯರುಗಳಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ವಿದ್ಯಾಸಾಧನೆಗೆ ಬೇಕಾದ ಆಸಕ್ತಿಯು ಉಂಟಾಗುವಂತೆ ಶಾಲೆಯ ಕಾರ್ಯವೃತ್ತಾಂತವನ್ನು ಶ್ಲಾಘಿಸಿ ವರ್ಧಂತಿ ದಿನದ ಸಭಾಕಾರ್ಯಗಳನ್ನು ಅಧ್ಯಕ್ಷರವರು ಅಂದದಿಂದ ನೆರವೇರಿಸಿಕೊಟ್ಟಿರುವರು.

ಶಾಲೆಯ ಹಳೆ ವಿದ್ಯಾರ್ಥಿಗಳ ಅಭಿಮಾನದ ವಿಷಯ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ವರ್ಧಂತಿ ದಿನವನ್ನು ಆಚರಿಸುವ ಬಗ್ಯೆ ಈ ವಿದ್ಯಾರ್ಥಿಗಳು ಚಂದಾ ಕೂಡಿಸಿಕೊಡುವಂಥಾದ್ದು ಬಹಳ ಸಂತೋಷಕರ ವಿಷಯ. ಈ ವರುಷವು (೧೯೧೬) ಶಾಲೆಯ ಸಿಲ್ವರ್ ಅಂದರೆ ೨೫ನೇ ವರುಷದ ಜುಬಿಲಿ ವರುಷವೆಂತ ತಿಳಿಯುತ್ತೇವೆ. ಈ ವರುಷದ ವರ್ಧಂತಿಯನ್ನು ಸಾಂಗವಾಗಿ ನೆರವೇರಿಸುವಂತೆ ಹಳೆ ವಿದ್ಯಾರ್ಥಿಗಳು ಬೇಕಾದ ವ್ಯವಸ್ಥೆಯನ್ನು ಮಾಡಲು ನಿರ್ಣಯಿಸಿರುವರು. ತಿಂಡಿ, ಕಾಫಿ, ಚಾ ಮೊದಲಾದ ತತ್ಕಾಲಿಕ ಉಪಚಾರಗಳಿಂದ ಮಾತ್ರವಲ್ಲ; ಶಾಲೆಯ ಸ್ಥಾಪನೆಯ ಕಾಲದಲ್ಲಿಯೂ ನಂತರ ಅದರ ವೃದ್ಧಿಯ ಬಗ್ಗೆಯೂ ಹಲವು ವರುಷಗಳ ವರೆಗೆ ಶಾಲಾ ಕೆಲಸದಲ್ಲಿ ವಿಶೇಷ ಶ್ರಮಪಟ್ಟ ಶಾಲೆಯ ಮಾಜಿ ಹೆಡ್‌ಮಾಸ್ಟರ್ ಮ| ರಾ| ರಾ| ಅರ್ಕಳ ವಾಸುದೇವರಾವ್, ಮತ್ತು ಸ್ವರ್ಗಸ್ಥ ಅರ್ಕಳ ಶ್ರೀನಿವಾಸರಾವ,—ಇವರಿಬ್ಬರ ಉಪಕಾರಸ್ಮರಣಾರ್ಥವಾಗಿ ಶಾಲೆಗೆ ಉಪಯೋಗಕರವಾದ ಯಥೋಚಿತ ಸ್ಮಾರಕಗಳನ್ನು ಈ ಸರ್ತಿ ಸಂಗ್ರಹಿಸೋಣಾಗುವ ಚಂದಾ ಮೊಬಲಗುಗಳಿಂದ ನೆರವೇರಿಸಬೇಕೆಂದು ನಿರ್ಣಯಿಸಲ್ಪಟ್ಟಿರುವದು. ದೇಶದ ಆಯಾ ಕಡೆಗಳಲ್ಲಿರುವ ಈ ಶಾಲೆಯ ಹಳೆ ವಿದ್ಯಾರ್ಥಿಗಳು ತಮ್ಮ ಭ್ರಾತೃಗಳು ಮಾಡಿರುವ ಈ ನಿರ್ಣಯಗಳನ್ನು ನೆರವೇರಿಸುವ ಬಗ್ಯೆ ಬೇಕಾದ ಸಹಾಯವನ್ನು ಮಾಡುವರಾಗಿ ಕೋರುತ್ತೇವೆ.

ಸಮಾಜ ಸುಧಾರಣೆಯ ಚಳವಳವು.

ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯು ಕೂಡಿತ್ತು ಎಂತ ಹೇಳಿದನಂತರ ಇತರ ಎಲ್ಲಾ ಬಗೆಗಳ ಪರಿಷತ್ತುಗಳು ಅಲ್ಲಿಯೇ ಕೂಡುವವು ಎಂಬ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕೆಂತಿಲ್ಲ. ಏಕೆಂದರೆ ರಾಷ್ಟ್ರೀಯ ಸಭೆಯ ಬೆಂಬಲದಲ್ಲಿ ಮಿಕ್ಕ ಎಲ್ಲಾ ಬಗೆಯ ಪರಿಷತ್ತುಗಳು ಕೂಡುವ ವಾಡಿಕೆಯು ಇತ್ತಲಾಗೆ ಹತ್ತಿಪ್ಪತ್ತು ವರುಷಗಳಿಂದ ನಡೆಯುತ್ತಿರುವದು. ರಾಜಕೀಯ ಚಳವಳದ ಕೋಲಾಹಲವು ರಾಷ್ಟ್ರೀಯ ಸಭೆಯಲ್ಲಿ ಮುಗಿಯುತ್ತಿರುವಾಗ ಸಮಾಜ ಸುಧಾರಣೆಯ ಕೋಲಾಹಲಕ್ಕೆ ಸಾಮಾಜಿಕ ಪರಿಷತ್ತಿನಲ್ಲಿ ಪ್ರಾರಂಭವಾಗುವದು. ಈ ವಾಡಿಕೆಯನ್ನನುಸರಿಸಿ ಸಾಮಾಜಿಕ ಪರಿಷತ್ತು ಪುನೆಯ ಅನಾಥ ಬಾಲಿಕಾಶ್ರಮದ ಸಂಸ್ಥಾಪಕರಾದ ಪಂಡಿತ ಕರ್ವೆಯವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಮಾಜ ಸೇವೆಯ ಧೀಕ್ಷೆಯನ್ನು ಬಹಳ ಕಾಲದಿಂದ ಕೈಕೊಂಡು ಯಥಾರ್ಥವಾದ ಸುಧಾರಣೆಯ ತತ್ವದ ಕಾರ್ಯಮಾರ್ಗವನ್ನು ಬಹಳ ವರುಷಗಳಿಂದ ಅನುಸರಿಸುತ್ತಿರುವ ಕರ್ವೆಯರ ಅನುಭವ ಜ್ಞಾನವು ಬಹಳ ಅಮೂಲ್ಯವಾದದ್ದಾಗಿದೆ. ಗೋಖಲೆ, ಮೇಥಾ, ವಾಚಾ! ಮೊದಲಾದ ಮಹನೀಯರ ಅನುಭವವು ರಾಜಕೀಯ ವಿಷಯಗಳಲ್ಲಿ ಎಷ್ಟು ಅಮೂಲ್ಯವಾಗಿದ್ದಿತೋ ಅಷ್ಟೇ ಸಾಮಾಜಿಕ ವಿಷಯಗಳಲ್ಲಿ ಕರ್ವೆಯವರ ಅನುಭವವು ಅಮೂಲ್ಯವಾಗಿದೆ. ಸ್ತ್ರೀವರ್ಗದ ನಿರ್ಗತಿಕತನ ಮತ್ತು ಅಜ್ಞಾನ ಇವು ಸಮಾಜ ಸುಧಾರಣೆಗೆ ಇರುವ ಅಭ್ಯಂತರಗಳಲ್ಲಿ ಮುಖ್ಯವಾಗಿರುವವು. ಆದ್ದರಿಂದ ಪುನೆಯಲ್ಲಿ ವಿಧವಾಗ್ರಹ, ಮಹಿಳಾ ವಿದ್ಯಾಲಯ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿ ಈ ಮುಖ್ಯ ಅಭ್ಯಂತರಗಳ ನಿವಾರಣೆಯನ್ನು ಪ್ರತಿನಿತ್ಯದಲ್ಲಿಯೂ ಸಾಧಿಸುತ್ತಿರುವ ಕರ್ವೆಯವರಿಗೆ ನಮ್ಮ ಸಾಮಾಜಿಕ ಸಂಕಷ್ಟಗಳ ಪ್ರತ್ಯಕ್ಷ ಜ್ಞಾನವು ವಿಶೇಷವಾಗಿರುವದು. ಸ್ತ್ರೀಯರ ಉದ್ಧರಣೆ ಮತ್ತು ಸ್ತ್ರೀಯರ ಶಿಕ್ಷಣ ಇವೆರಡನ್ನು ತಮ್ಮ ಭಾಷಣ ಮುಖ್ಯ ವಿಷಯಗಳನ್ನಾಗಿ ಇಟ್ಟುಕೊಂಡು ಕರ್ವೆಯವರು ಸಮಾಜ ಸುಧಾರಣೆಯ ಮಾರ್ಗವನ್ನು ಸಾಮಾಜಿಕ ಪರಿಷತ್ತಿನ ೨೦ನೇ ಅಧಿವೇಶನದಲ್ಲಿ ಸೂಚಿಸಿರುವರು.

ಮೂಲಪಾಠ ಶಾಲೆಗಳಲ್ಲಿಯೂ, ಸೆಕೆಂಡರಿ ಶಾಲೆಗಳಲ್ಲಿಯೂ, ಕಾಲೇಜುಗಳಲ್ಲಿಯೂ ಸ್ತ್ರೀಯರಿಗೆ ಎಂಥಾ ಶಿಕ್ಷಣವನ್ನು ಕೊಡಬಹುದೆಂಬುದನ್ನು ಕರ್ವೆಯವರು ಬಹಳ ಸಮರ್ಪಕವಾದ ರೀತಿಯಲ್ಲಿ ಶೀರ್ಮಾನಿಸಿ ಹೇಳಿರುತ್ತಾರೆ. ಇಂಗ್ಲಿಷ ಭಾಷೆಯನ್ನು ಸಹಾಯಕ ವಿಷಯವನ್ನಾಗಿ ಮಾಡಿ ಎಲ್ಲಾ ಬಗೆಯ ಶಿಕ್ಷಣವನ್ನು ದೇಶಭಾಷೆಗಳಲ್ಲಿ ಸ್ತ್ರೀಯರಿಗೆ ಕೊಡಬೇಕೆಂಬುದು ಇವರ ಮುಖ್ಯ ತಾತ್ಪರ್ಯವಾಗಿರುವದು. ಸ್ತ್ರೀಯರ ಬಗ್ಯೆ ದೇಶಭಾಷೆಗಳ ಸರ್ವ ವಿದ್ಯಾ ನಿಲಯಗಳು ಜಪಾನಿನಲ್ಲಿ ಹೇಗೆ ಸ್ಥಾಪಿಸಲ್ಪಟ್ಟಿರುವವೋ ಹಾಗೆಯೇ ಇಲ್ಲಿ ಸಹಾ ಅಂಥಾ ವಿದ್ಯಾ ನಿಲಯಗಳನ್ನು ಸ್ಥಾಪಿಸುವದು ಅಗತ್ಯವೆಂತ ಕರ್ವೆಯವರು ಹೇಳಿರುವರು. ಸಮಾಜದಲ್ಲಿ ಸ್ತ್ರೀಪುರುಷರ ಸ್ಥಾನಗಳು ಯಾವವು, ಆದ್ದರಿಂದ ಈ ಎರಡು ವರ್ಗಗಳಿಗೂ ಒಂದೇ ಸಮವಾದ ಶಿಕ್ಷಣವು ಕೊಡೋಣಾಗುವದು ಅಗತ್ಯವೋ ಎಂಬುವ ವಿಚಾರಗಳನ್ನು ಯುಕ್ತವಾದ ರೀತಿಗಳಲ್ಲಿ ವಾದಿಸಿರುತ್ತಾರೆ. ಇಂಥಾ ವಿಚಾರಗಳನ್ನು ಸಂಗ್ರಹವಾಗಿ ಪ್ರಸ್ತಾಪಿಸುವದಕ್ಕಿಂತ ಒಂದೊಂದನ್ನೆ ಎತ್ತಿಕೊಂಡು ಪ್ರಸ್ತಾಪಿಸುವದು ಯುಕ್ತ ಕಾಣುವದರಿಂದ ಇವುಗಳನ್ನು ಮುಂದಿನ ಸಂಚಿಕೆಗಳಲ್ಲಿ ವಾದಿಸಿಕೊಂಡು ಬರೆಯಬೇಕೆಂತಿದ್ದೇವೆ.

ಜಾತಿಗಳ ಏಕೀಕರಣವೆಂದರೇನು? ಅಸ್ಪೃಶ್ಯ ಜನರ ಉದ್ಧರಣೆ ಮೊದಲಾದ ಇನ್ನೂ ಕೆಲವು ಸಾಮಾಜಿಕ ವಿಷಯಗಳು ಕರ್ವೆಯವರ ಭಾಷಣದಲ್ಲಿ ಅಡಕವಾಗಿರುವವು. ಸಮಾಜ ಸುಧಾರಣೆಯ ಸಾಧನೆಗೆ ಅಗತ್ಯವಿರುವ ನಿರ್ಣಯಗಳನ್ನು ಇಷ್ಟು ವರುಷಗಳಲ್ಲಿ ಮಾಡಿಕೊಂಡಂತೆಯೇ ಈ ವರುಷದಲ್ಲಿ ಸಹ ಮಾಡಿ ಈ ಸರ್ತಿಯ ಸಾಮಾಜಿಕ ಪರಿಷತ್ತಿನ ಅಧಿವೇಶನವು ಮುಗಿದಿರುವದು. ಸ್ತ್ರೀಶಿಕ್ಷಣದ ಪ್ರಸರಣೆಯನ್ನು ಸರಕಾರದವರು ಹೆಚ್ಚಿನ ಆಗ್ರಹದಿಂದ ನಡೆಸಬೇಕೆಂತ ವ್ಯಾಸರಾಯಿ ಪ್ರಭುಗಳಿಗೆ ಒಂದು ವಿನ್ನಹಪತ್ರವನ್ನು ಬರಕೊಳ್ಳಬೇಕೆಂತ ಪರಿಷತ್ತಿನಲ್ಲಿ ನಿರ್ಣಯಿಸಿರುತ್ತಾರೆ.

ಸಾಮಾಜಿಕ ಪರಿಷತ್ತಿನ ಹೊರತು ಸುಧಾರಣೆಯ ಪರವಾಗಿ ಇನ್ನೂ ಸ್ವಲ್ಪ ಚಳವಳವು ನಡೆದಿದೆ. ಹಿಂದುಗಳ ಎಲ್ಲಾ ಜಾತಿವರ್ಗಗಳಿಗೆ ಮುಜಾಫರ್‌ಬಾದ ಸಭಾಸದನದಲ್ಲಿ ಒಂದು ಔತಣವು ಕೊಡೋಣಾಯಿತು. ಬ್ರಾಹ್ಮಣರು, ಶೂದ್ರರು, ವೈಶ್ಯರು, ಪಂಚಮರು ಎಂಬ ಭೇದಗಳನ್ನು ಗಣನೆಗೆ ತಾರದೆ ಸರ್ವರೂ ಸಹಪಂಕ್ತಿ ಭೋಜನವನ್ನು ಮಾಡಿದರು. ಒಟ್ಟಿಗೆ ಕೂಡಿಬಂದ ೪೫೦ ಜನರಲ್ಲಿ ೧೫೦ ಜನ ಬ್ರಾಹ್ಮಣರೂ, ೩೦ ಜನ ಪಂಚಮರೂ ಹಾಜರಿದ್ದರು. ಹಿಂದೂ ಮಹಮ್ಮದೀಯರೊಳಗಣ ಭ್ರಾತೃಭಾವನೆಯು ಹೆಚ್ಚುವಂತೆ ಮಹಮ್ಮದೀಯರ ಲೀಗೆಂಬ ಸಂಘದ ಮೆಂಬರರನ್ನು ಮುಂಬಯಿಯ ಹಿಂದುಗಳು ಕಾಫಿ, ಚಾ ಇತ್ಯಾದಿಗಳಿಂದ ಆದರಪುರಸ್ಸರ ಸತ್ಕರಿಸಿದರು.

ಗ್ರಾಮಸ್ಥರಿಗೆ ಅವಶ್ಯವಾದ ಏರ್ಪಾಡುಗಳು.

ಗ್ರಾಮವಾಸಿಗಳನ್ನು ಒಂದು ಕಟ್ಟುಪಾಡಿಗೆ ತಂದು, ಅವರು ತಮ್ಮ ತಮ್ಮ ಕಾರ್ಯಗಳನ್ನು ಕ್ರಮಪ್ರಕಾರ ನಡೆಸುವಂತೆ ಏರ್ಪಾಡಿಟ್ಟರೆ, ದೇಶದ ಪುರೋವೃದ್ಧಿಗೆ ಬಹಳ ಸಹಾಯವಾಗುವುದು. "ಆದರೆ ಅದನ್ನು ನಡೆಸಬೇಕಾದ ಕ್ರಮವು ಯಾವುದು?"—ಎಂಬುದೇ ಪ್ರತಿಯೊಬ್ಬರೂ ಕೇಳುವ ಪ್ರಶ್ನೆ. ಅಮೇರಿಕಾ ದೇಶದ ವ್ಯವಸಾಯ ಇಲಾಖೆಯ ಬಬ್ಬ ದೊಡ್ಡ ಅಧಿಕಾರಿಯು ಈ ವಿಚಾರದಲ್ಲಿ ಕೆಲವು ಸಲಹೆ

ಗಳನ್ನು ಕೊಟ್ಟಿರುತ್ತಾರೆ. ಅವು ನಮ್ಮ ದೇಶಕ್ಕೂ ಬಹಳಮಟ್ಟಿಗೆ ಸರಿಹೊಂದಬಹುದಾಗಿ ಕಂಡುಬರುವುದರಿಂದ ಅವುಗಳನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸಿದೆ.

ಗ್ರಾಮಸ್ಥರು ಸಾಮಾನ್ಯವಾಗಿ ಗಮನ ಕೊಡಬೇಕಾದ ವಿಷಯಗಳನ್ನು ಹತ್ತು ಪಂಗಡಗಳಾಗಿ ವಿಭಾಗಿಸಬಹುದೆಂದು ಅವರು ಅಭಿಪ್ರಾಯಪಡುತ್ತಾರೆ. ಅವು ಯಾವುವೆಂದರೆ:—

ಮೊದಲನೆಯದು,—ಆಯವ್ಯಯ ಮಾರ್ಗಗಳು. ೧. ಜಮೀನಿನ ಉತ್ಪತ್ತಿಯನ್ನು ಹೆಚ್ಚಿಸುವುದು. ೨. ಬೆಳಸನ್ನು ನಷ್ಟವಿಲ್ಲದಂತೆ ಮಾರುವುದು. ೩. ಹೊರಗಿನ ಸರಕುಗಳನ್ನು ಅಗ್ಗವಾಗಿ ಕೊಳ್ಳುವುದು. ೪. ಹಣಕಾಸಿಗೆ ಅನುಕೂಲತೆಗಳನ್ನು ಹೆಚ್ಚಿಸುವುದು. ೫. ಪ್ರಯಾಣಸೌಕರ್ಯವನ್ನು ಒದಗಿಸುವುದು.

ಎರಡನೆಯದು,—ಸಾಮಾಜಿಕ ವಿಷಯಗಳು. ೧. ವಿದ್ಯಾಭ್ಯಾಸ. ೨. ಗ್ರಾಮನೈರ್ಮಲ್ಯ. ೩. ಗ್ರಾಮಸ್ಥರ ವಿಹಾರಕ್ಕೆ ತಕ್ಕ ಅನುಕೂಲಗಳನ್ನು ಕಲ್ಪಿಸುವುದು. ೪. ಪುರಶೃಂಗಾರ. ೫. ಗೃಹಕೃತ್ಯ ವಿಚಾರ.

ಈ ರೀತಿಯಾದ ಹತ್ತು ವಿಷಯಗಳಿಗೂ ಹತ್ತು ಪ್ರತ್ಯೇಕವಾದ ಸಬ್ ಕಮಿಟಿ (ಅಥವಾ ಉಪಸಭೆ)ಗಳನ್ನು ಏರ್ಪಾಡು ಮಾಡಿಕೊಂಡು, ಪ್ರತಿಯೊಬ್ಬರೂ ಅವರವರಿಗೆ ಅನುಕೂಲಿಸುವಂತೆ ಒಂದೊಂದು ಕಮಿಟಿಗೆ ಸೇರಿಕೊಳ್ಳಬೇಕು. ಈ ಹತ್ತು ಕಮಿಟಿಗಳಿಗೆ ಕೆಲಸವನ್ನು ನೇಮಿಸುವುದಕ್ಕೂ ಅವು ಒಂದಕ್ಕೊಂದು ಅನುಸರಿಸಿಕೊಂಡು ತಮ್ಮ ತಮ್ಮ ಕೆಲಸಗಳನ್ನು ನಡೆಯಿಸುವುದಕ್ಕೂ ಅನುಕೂಲವಾಗುವಂತೆ, ಒಂದು ಪ್ರಧಾನ ಕಾರ್ಯನಿರ್ವಾಹಕ ಮಂಡಲಿಯನ್ನು ಏರ್ಪಡಿಸಬೇಕು. ಈ ಕಾರ್ಯನಿರ್ವಾಹಕ ಮಂಡಲಿಗೆ ಉಳಿದ ಹತ್ತು ಕಮಿಟಿಗಳ ಸಭಾಧ್ಯಕ್ಷರುಗಳೇ ಮೆಂಬರುಗಳು. ಇದಕ್ಕೆ ಪ್ರತ್ಯೇಕವಾಗಿ ಒಬ್ಬರು ಅಧ್ಯಕ್ಷರು, ಒಬ್ಬ ಕಾರ್ಯದರ್ಶಿ ಇವರೇ ಮೊದಲಾದ ಅಧಿಕಾರಿಗಳನ್ನು ಗೊತ್ತುಮಾಡಬೇಕು. ಈ ಮಂಡಲಿಯವರು ಈ ಏರ್ಪಾಡಿಗೆ ಸಂಬಂಧಪಟ್ಟ ವಿಶಿಷ್ಟ ಕಾರ್ಯಗಳನ್ನೂ ನಡೆಸಬೇಕು. ಹಣಕಾಸು ವಸೂಲ್ಮಾಡುವುದೂ, ಅವಶ್ಯವಾದ ಸಿಬ್ಬಂದಿಯನ್ನು ನೇಮಿಸುವುದೂ, ಹೊರಗಿನವರೊಡನೆ ನಡವಳಿಕೆ ನಡೆಸುವುದೂ, ಇವೇ ಮುಂತಾದ ಕೆಲಸಗಳಿಗೆ ಇವರು ಗಮನಕೊಡಬೇಕು.

ಹತ್ತು ಸಬ್ ಕಮಿಟಿ (ಅಥವಾ ಉಪಸಭೆ)ಯವರು ಮಾಡಬಹುದಾದ ಕೆಲಸಗಳ ವಿಚಾರದಲ್ಲಿ ಕೊಟ್ಟಿರುವ ಸಲಹೆಗಳೊಳಗೆ ಮುಖ್ಯವಾದ ಕೆಲವನ್ನು ಇಲ್ಲಿ ಸೂಚಿಸಿದೆ.

೧. ಜಮೀನಿನ ಉತ್ಪತ್ತಿ ವಿಷಯದ ಸಬ್ ಕಮಿಟಿ:—ಉತ್ಪತ್ತಿ ಮಾರ್ಗಗಳನ್ನು ಪರೀಕ್ಷೆಮಾಡುವುದು; ಲೋಪಗಳನ್ನು ನಿವಾರಣೆಮಾಡಿ, ಉತ್ತಮ ಮಾರ್ಗವನ್ನು ಅವಲಂಬಿಸುವುದು; ಶಾಸ್ತ್ರಜ್ಞರಿಂದ ಭೂಗುಣಗಳನ್ನು ಪರೀಕ್ಷಿಸಿ, ತಪಶೀಲನ್ನು ಪ್ರಚುರ ಪಡಿಸುವುದು, ಬೀಜ ಚುನಾವಣೆಗೆ ಹೆಚ್ಚು ಗಮನ ಕೊಡುವುದು; ಗೊಬ್ಬರವನ್ನು ನಷ್ಟವಿಲ್ಲದ ರೀತಿಯಲ್ಲಿ ಇಡುವುದು; ಫಸಲನ್ನು ಬದಲಾಯಿಸುವ ಪದ್ಧತಿಯನ್ನು ಪರಿಶೀಲಿಸುವುದು; ಕಾಲಕಾಲಕ್ಕೆ ಉಳುಮೆ ಮಾಡಿಸಿ, ಗೊಬ್ಬರ ಹಾಕಿಸುವುದು;—ಇವೇ ಮುಂತಾದ ಏರ್ಪಾಡುಗಳು.

೨. ಬೆಳಸನ್ನು ಮಾರುವ ಸಬ್ ಕಮಿಟಿ:—ಹೆಚ್ಚಿನ ಲಾಭವು ಬರುವಂತೆ ಬೆಳಸನ್ನು ಮಾರಬೇಕಾದ ಕ್ರಮ; ಹೆಚ್ಚಾಗಿ ಗಿರಾಕಿಯಿರುವ ಪದಾರ್ಥಗಳ ಗುಣನಿರ್ಣಯ; ಸರಕನ್ನು ಸಾಗಿಸುವುದಕ್ಕೆ ಇರತಕ್ಕ ಸಾಧನಗಳು; ಮುಖ್ಯವಾದ ಸ್ಥಳಗಳಲ್ಲಿ ಮಾರುವುದಕ್ಕೆ ಏಜಂಟರನ್ನಿಡುವುದು; ಇವೇ ಮುಂತಾದ ಕೆಲಸಗಳು.

೩. ಹೊರಗಿನಿಂದ ಸರಕನ್ನು ತರಿಸುವ ಸಬ್ ಕಮಿಟಿ:—ಒಟ್ಟಾಗಿ ತರಿಸಲು ಆವಶ್ಯಕವಾದ ಏರ್ಪಾಡನ್ನು ಮಾಡುವುದು; ಅಗ್ಗವಾಗಿ ಒಳ್ಳೆಯ ಸಾಮಾನುಗಳು ಸಿಕ್ಕುವ ಪ್ರದೇಶಗಳನ್ನು ವಿಚಾರಮಾಡುವುದು; ಸ್ಥಳದಲ್ಲಿ ಇರತಕ್ಕ ಕೆಲಸಗಾರರಿಂದ ಅವರಿಗೆ ಸಾಧ್ಯವಾದ ಕೆಲಸಗಳನ್ನು, ಎಂದರೆ, ಹಗ್ಗ, ಬುಟ್ಟಿ, ಬಾಗಿಲು ಚೌಕಟ್ಟು, ಇವೇ ಮೊದಲಾದ ಸಾಮಾನುಗಳನ್ನು ತಯಾರುಮಾಡಿಸುವುದು; ಮರ ಮತ್ತು ಕಬ್ಬಿಣದ ಕಾರ್ಖಾನೆಯನ್ನು ಇಡಿಸುವುದು; ಇತ್ಯಾದಿ.

೪. ಲೇವಾದೇವಿಯ ಸಬ್ ಕಮಿಟಿ:—ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಬೇಕಾಗುತ್ತದೆಂಬುದನ್ನು ಮುಂದಾಗಿ ಆಲೋಚಿಸುವುದು; ಹಣವನ್ನು ಸಕಾಲದಲ್ಲಿ ಒದಗಿಸುವ ಏರ್ಪಾಡು ಮಾಡುವುದು; ಸಹಕಾರ ಸಂಘಗಳನ್ನು ಏರ್ಪಡಿಸಿ ನಡೆಸುವುದು; ಕ್ರಮವಾಗಿ ಲೆಕ್ಕಾಚಾರಗಳನ್ನಿಡಲು ಸಲಹೆ ಕೊಡುವುದು; ಇವೇ ಮುಂತಾದುವು.

೫. ಪ್ರಯಾಣ ಸೌಕರ್ಯವನ್ನು ಒದಗಿಸುವ ಸಬ್ ಕಮಿಟಿ:—ಈಗ ಇರತಕ್ಕ ರಸ್ತೆಗಳನ್ನು ಚೆನ್ನಾಗಿ ಇಟ್ಟುಕೊಳ್ಳುವುದು; ಅವಶ್ಯವಾಗಿ ಬೇಕಾದ ಕಡೆ ಹೊಸ ರಸ್ತೆಗಳನ್ನು ಮಾಡಲು ಏರ್ಪಡಿಸುವುದು; ರಸ್ತೆಗಳಿಲ್ಲದಿರುವುದರಿಂದ ಆಗುತ್ತಿರುವ ಕಷ್ಟನಷ್ಟಗಳನ್ನು ವಿಶದಪಡಿಸಿ, ಅದಕ್ಕಾಗಿ ಅವಶ್ಯವಾದ ಹಣವನ್ನು ಕೇಳಿಕೊಳ್ಳುವುದು; ಶೀಘ್ರವಾಗಿ ಪ್ರಯಾಣಮಾಡುವುದಕ್ಕೆ ಬೇಕಾದ ಸೌಕರ್ಯಗಳನ್ನು ಹೆಚ್ಚಿಸುವುದು; ಇವೇ ಮುಂತಾದುವು.

೬. ವಿದ್ಯಾಭ್ಯಾಸದ ಸಬ್ ಕಮಿಟಿ:—ಪಾಠಶಾಲೆಗಳನ್ನು ಹೆಚ್ಚಿಸುವುದು; ಉಪನ್ಯಾಸ, ವಾಚಕ ಮಂದಿರ, ಮ್ಯಾಜಿಕ್ ಲ್ಯಾಂಟರ್ನ್ (ಅಥವಾ ಛಾಯಾ ಯಂತ್ರ ದೀಪದ) ಪ್ರದರ್ಶನ, ಇವುಗಳನ್ನು ಏರ್ಪಡಿಸುವುದು; ಪ್ರತಿಯೊಂದು ಭಾಷೆಯಿಂದಲೂ ಪ್ರಕಟವಾಗುತ್ತಿರುವ ಪತ್ರಿಕೆಗಳನ್ನು ಹೆಚ್ಚು ಹೆಚ್ಚಾಗಿ ಪ್ರಚಾರಪಡಿಸುವುದು; ಕಾಲ ಕಾಲಕ್ಕೆ ಪಾಠಶಾಲೆಗಳನ್ನು ವಿದ್ಯಾವಂತರಿಂದ ಪರೀಕ್ಷೆ ಮಾಡಿಸುವುದು; ಸ್ತ್ರೀವಿದ್ಯಾಭ್ಯಾಸಕ್ಕೆ ಆಸಕ್ತಿ ಹೆಚ್ಚಿಸುವುದು, ಕೃಷಿವಿದ್ಯಾ ಪಾಠಶಾಲೆಗಳಲ್ಲಿ ಕೆಲಸಗಾರರನ್ನು ತರಬೇತು ಮಾಡಿಸುವುದು, [illegible] ವಿದ್ಯಾ ವಿಚಾರದಲ್ಲಿ ಶ್ರೇಷ್ಠರೆನಿಸಿಕೊಳ್ಳಲು ಪ್ರಯತ್ನಿಸುವುದು. ಇವೇ ಮುಂತಾದುವು.

೭. ಗ್ರಾಮನೈರ್ಮಲ್ಯದ ಸಬ್ ಕಮಿಟಿ:—[illegible] ಗಿಡುವುದು; [illegible] ಜನರಿಗೆ [illegible] ಏರ್ಪಡಿಸುವುದು, ವಿದ್ಯಾರ್ಥಿಗಳ [illegible] ಆರೋಗ್ಯವನ್ನು ವೈದ್ಯರಿಂದ [illegible] ಪರೀಕ್ಷೆ ಮಾಡಿಸುವುದು. ಸಾಮಾನ್ಯವಾಗಿ ಗ್ರಾಮಾರೋಗ್ಯಕ್ಕೆ ಸಂಬಂಧಪಟ್ಟ [illegible] ಗಮನ ಕೊಡುವುದು; ಆಹಾರ [illegible] ಜನರಿಗೆ ಬೋಧಿಸುವುದು; ಆಸ್ಪತ್ರೆಗಳನ್ನು ಹೆಚ್ಚಿಸುವುದು, ಇವೇ ಮುಂತಾದ ಕಾರ್ಯಗಳು.

೮. ವಿಹಾರದ ಸಬ್ ಕಮಿಟಿ:—[illegible] ವಿಚಾರಗಳನ್ನು ಏರ್ಪಡಿಸುವುದು. [illegible] ಕಟ್ಟಿಸುವುದು. [illegible] ಏರ್ಪಡಿಸುವುದು. [illegible] ಮಾಡಿಸುವುದು; ಕೂಟಗಳನ್ನು [illegible] ಏರ್ಪಡಿಸುವುದು. [illegible] ಪ್ರಾಣ್ಯಕಥೆಗಳನ್ನು ಹೇಳಿಸುವುದು. ಇವೇ ಮುಂತಾದ ಕಾರ್ಯಗಳು.

೯. ಪುರಶೃಂಗಾರದ ಸಬ್ ಕಮಿಟಿ:—[illegible] ಬೆಳೆಯಿಸುವುದು ಫಲಪುಷ್ಪ ವೃಕ್ಷಗಳನ್ನು ನೆಡಿಸುವುದು, [illegible]; ಗ್ರಾಮಗಳನ್ನು ಅಂದವಾಗಿ ಮಾಡುವುದು. ಇವೇ ಮುಂತಾದುವು.

೧೦. ಗೃಹಕೃತ್ಯದ ಸಬ್ ಕಮಿಟಿ:—ಸಂಸಾರಕ್ಕೆ ಬೇಕಾದ ಅನುಕೂಲ್ಯಗಳನ್ನು ಸುಲಭ ಬೆಲೆಗೆ ಒದಗಿಸುವುದು, ಅನುಕೂಲವಿರುವ ಪ್ರತಿಯೊಬ್ಬರೂ ತಮ್ಮ ಆದಾಯ ವ್ಯಯಗಳ ಲೆಕ್ಕವನ್ನಿಡಲು ಪ್ರೋತ್ಸಾಹಿಸುವುದು, ಕುಟುಂಬದ ಕಾರ್ಯಗಳಲ್ಲಿ ಊರಿನ ಪ್ರತಿಯೊಬ್ಬರೂ ತಮ್ಮ [illegible] ಸೇರಿಸಿಕೊಳ್ಳುವುದು; ಆಹಾರ ವಿಚಾರಗಳಿಗೆ ತಕ್ಕ ಗಮನವನ್ನು ಕೊಡಿಸುವುದು; ಪ್ರತಿ ಕುಟುಂಬಿಯೂ ತನ್ನ ಸಂಸಾರಕ್ಕೆ [illegible] ಸಾಕಾಗುವಷ್ಟು ಧನವನ್ನೂ, ಕಾಲ ಕಷ್ಟಗಳನ್ನೂ ಕಡಿಮೆ ಮಾಡಲು ಪ್ರೋತ್ಸಾಹಿಸಿ, ಅದಕ್ಕೆ ತಕ್ಕ ಸೌಕರ್ಯವನ್ನು ಒದಗಿಸುವುದು; ಗೃಹಕೃತ್ಯದಲ್ಲಿ ಸಾಮಾನ್ಯವಾಗಿ ಸ್ತ್ರೀಯರಿಗಿರುವುದಕ್ಕೆ ತಕ್ಕ ಸಲಹೆಗಳನ್ನು ಕೊಡುವುದು, ಇವೇ ಮುಂತಾದ ವಿಚಾರಗಳು.

ಈ ವಿಷಯಗಳಿಗೆ ನಮ್ಮ ಪ್ರಜಾ ಮುಖಂಡರು ವಿಶೇಷವಾಗಿ ಗಮನಕೊಟ್ಟು ಪ್ರತಿಯೊಂದು ಹೋಬಳಿಯಲ್ಲಿಯೂ ಪ್ರತಿ ತಾಲೂಕಿನಲ್ಲಿಯೂ, ಅವರವರಿಗೆ ಅವಶ್ಯ ತೋರಿದಮಟ್ಟಿಗೆ ಕಮಿಟಿಗಳನ್ನು ಏರ್ಪಡಿಸಿಕೊಂಡು ತಮ್ಮ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ಪಡಬಹುದಾಗಿ ತೋರುತ್ತದೆ. ಮೇಲೆ ಹೇಳಿದ ವಿಷಯಗಳೆಲ್ಲವೂ ನಮ್ಮ ಜನರಿಗೂ ಅವಶ್ಯವಾದುವುಗಳೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ಸೂಚಿಸಿರುವ ಮಾರ್ಗಗಳು ಈಗ ನಮ್ಮ ಸಂಸ್ಥಾನದಲ್ಲಿ ಏರ್ಪಡಿಸಿರುವ ಕಮಿಟಿಗಳನ್ನು ವಿಸ್ತರಿಸಿದಂತಾಗುತ್ತದೆ. ಆದಕಾರಣ ಉತ್ಸಾಹಶಾಲಿಗಳಾದ ದೇಶಾಭಿಮಾನಿಗಳು ಈ ವಿಷಯದಲ್ಲಿ ಶ್ರದ್ಧೆ ವಹಿಸುವುದಕ್ಕೆ ಇದು ಯೋಗ್ಯವಾದ ವಿಚಾರವಾಗಿದೆ.

ಅರ್ಥಸಾಧಕ ಪ.

ಕಮರ್ಷಿಯಲ್_ಕಾಂಗ್ರೆಸ್ ಎಂಬ ವ್ಯಾಪಾರ ಸಮಿತಿಯು.

ಅನ್ಯಾಂಗಗಳ ಇತಿಹಾಸಗಳನ್ನು ಓದಿ ಗೊತ್ತಿರುವವರೆಲ್ಲರಿಗೂ ವ್ಯಾಪಾರದ ವಿಷಯ ಮಹತ್ವವು ಗೊತ್ತಾಗದೆ ಇರದು. ದೇಶದ ಸಮೃದ್ಧಿಗೆ ವ್ಯಾಪಾರವೇ ಮೂಲ. ಶ್ರೇಷ್ಠ ವ್ಯಾಪಾರಸ್ಥರ ವರ್ಗವು ಯಾವ [illegible]

ಲೋಕದಲ್ಲಿ ಶ್ರೇಷ್ಠ ಅಧಿಕಾರಿಗಳಾಗುವರು. ವ್ಯಾಪಾರಿಗಳ ಜನಾಂಗವೆಂತ ಖ್ಯಾತಿ ಪಡೆದಿರುವ ನಮ್ಮ ಅಣ್ಣಂದಿರಾದ ಬ್ರಿಟಿಷ ಜನಾಂಗದ ಇತಿಹಾಸವು ಇದೇ ತತ್ವವನ್ನು ಸೂಚಿಸುವದು. ಭರತಖಂಡವು ಸಮೃದ್ಧಿ ಸ್ಥಿತಿಯಲ್ಲಿದ್ದಾಗ ಲೋಕದ ವ್ಯಾಪಾರವೆಲ್ಲಕ್ಕೆ ಭಾರತೀಯರೇ ನಾಯಕರಾಗಿದ್ದರು. ಆದ್ದರಿಂದ ಇತರ ಚಳವಳಿಗಳೊಂದಿಗೆ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಬೇಕಾದ ಚಳವಳಿಗಳನ್ನು ವ್ಯವಸ್ಥೆಗೊಳಿಸಲು ವ್ಯಾಪಾರ ಸಮಿತಿಯೆಂಬುವ ನೂತನ ಸಂಸ್ಥೆಯು ಮುಂಬಯಿಯಲ್ಲಿ ರೂಪುಗೊಂಡು ಅದರ ಮೊದಲನೆಯ ಅಧಿವೇಶನವು ಮುಂಬಯಿಯಲ್ಲಿ ಕೂಡಿತು. ಬಹುಮಾನಪಟ್ಟ ಡಿ. ಇ. ವಾಚಾಧವರು ಈ ಸಮಿತಿಯ ಆಮಂತ್ರಣ ಸಭೆಯ ಅಧ್ಯಕ್ಷರೂ ಬಹುಮಾನಪಟ್ಟ ಸೆರ್ ಫಾಜಲ್‌ಭಾಯಿ ಕರಿಮ್‌ಭಾಯಿಯವರು ಸಮಿತಿಯ ಅಧ್ಯಕ್ಷರೂ ಆಗಿದ್ದರು.

ಕಂಪೆನಿ ಸರಕಾರದವರಿಂದ ಹಿಂದೂಸ್ಥಾನದ ಸಾಂಪತ್ತಿಕ ಸ್ಥಿತಿಗೆ ಹೇಗೆ ಹಾನಿ ಉಂಟಾಯಿತು, ನಂತರ ಈ ದೇಶದ ಆಡಳಿತೆಯನ್ನು ಬ್ರಿಟಿಷ ಸಾಮ್ರಾಜ್ಯ ಸರಕಾರದವರು ವಹಿಸಿಕೊಂಡು ದೇಶದ ವ್ಯಾಪಾರವು ಹೇಗೆ ಕ್ರಮೇಣ ಅಭಿವೃದ್ಧಿಗೊಳ್ಳುತ್ತಿರುವದು, ಸರಕಾರದವರಿಂದ ನೆರವೇರಬೇಕಾದ ಇಂಥಾ ಅಭಿವೃದ್ಧಿಗೆ ಅಗತ್ಯವಿರುವ ಸಾಧನಗಳು ಇನ್ನೂ ಯಾವವಿರುವವೆಂಬುದನ್ನು ಬಹುಮಾನಪಟ್ಟ ವಾಚಾರವರೂ ಸರ್ ಫಾಜಲ್‌ಭಾಯಿ ಕರಿಮ್‌ಬಾಯಿಯವರೂ ತಮ್ಮ ಭಾಷಣಗಳಲ್ಲಿ ಸೂಚಿಸಿರುತ್ತಾರೆ. ಕೈಗಾರಿಕೆಗಳ ಮತ್ತು ಭೂವ್ಯವಸಾಯಗಳ ಉತ್ಪತ್ತಿಯು ಹೆಚ್ಚುವ ಮೂಲಕ ವ್ಯಾಪಾರವು ಅಭಿವೃದ್ಧಿಗೊಳ್ಳಬೇಕಾಗಿರುವದರಿಂದ ಇವುಗಳ ಅಭಿವೃದ್ಧಿಯ ಸಾಧನೆಯ ಪ್ರಸ್ತಾಪವು ಇವರ ಭಾಷಣಗಳಲ್ಲಿದೆ. ವ್ಯಾಪಾರವು ಲಾಭಕರವಾಗಿ ಪರಿಣಮಿಸುವದಕ್ಕೆ ವಯ್ಯೋಣ ಸೌಕರ್ಯಗಳಿರಬೇಕು. ಈಗಿನ ರೈಲ್ವೆಗಳಲ್ಲಿ ವ್ಯಾಪಾರಸ್ಥರಿಗಿರುವ ಸಂಕಷ್ಟಗಳು ಯಾವುವೆಂಬುದು ಈ ಸಂದರ್ಭದಲ್ಲಿ ಪ್ರಸ್ತಾಪಿಸಲ್ಪಟ್ಟಿರುವದು. ಸಮುದ್ರಮಾರ್ಗವಾಗಿ ನಡೆಯುವ ವ್ಯಾಪಾರ ವ್ಯವಹಾರಗಳಲ್ಲಿ ದೊರೆಯುವ ಹಡಗುಗಳ ಬಾಡಿಗೆಗಳನ್ನು ವಿದೇಶಸ್ಥರೇ ಪ್ರಕೃತ ಪಡೆಯುವದರಿಂದ ಈ ದೇಶದವರು ಹಡಗುಗಳನ್ನು ಕಟ್ಟಿಸಿ ಇಂಥಾ ವ್ಯವಹಾರಗಳನ್ನು ದೇಶೀಯ ಹಡಗುಗಳ ಮೂಲಕ ನಡಿಸುವದು ಅಗತ್ಯವೆಂತ ವಾಚಾರವರು ಸೂಚಿಸಿರುತ್ತಾರೆ. ಈ ಬಗ್ಗೆ ಹಡಗುಗಳನ್ನು ತಯ್ಯಾರಿಸುವ ಉದ್ದಿಮೆಯನ್ನು ಈ ದೇಶದಲ್ಲಿ ಪ್ರಾರಂಭಿಸಬೇಕೆಂದು ಇವರು ಹೇಳಿರುವರು. ಹಿಂದೂಸ್ಥಾನದ ಅರ್ಥಸಾಧನೆಯನ್ನು ದೇಶಕ್ಕೆ ಹಿತಕರವಾದ ಮಾರ್ಗಗಳಲ್ಲಿ ನಡಿಸಲು ಬೇಕಾದ ಸ್ವತಂತ್ರವು ಹಿಂದೂಸ್ಥಾನದ ಸರಕಾರಕ್ಕೆ ಇರದು. ಈ ವಿಷಯಗಳಲ್ಲಿ ಸಾಮ್ರಾಜ್ಯ ಸರಕಾರದವರು ತೋರಿಸುವ ಹಾದಿಯಲ್ಲಿ ಹೆಜ್ಜೆ ಇಟ್ಟುಕೊಂಡು ಇಂಡಿಯಾ ಸರಕಾರದವರು ನಡಿಯಬೇಕಾಗಿದೆ. ಸಾಮ್ರಾಜ್ಯ ಸರಕಾರದವರನ್ನು ಆಟೋಪಿಸಲು ಶಕ್ತಿಯುಳ್ಳಂಥಾ ಲಂಕಶಾಯರ್ ಮೊದಲಾದ ಪ್ರಾಂತ್ಯಗಳ ವರ್ತಕರು ತಮ್ಮ ಲಾಭದ ಬಗ್ಗೆ ಹಿಂದೂಸ್ಥಾನದಲ್ಲಿ ಯಾವ ಸಾಧನೆಯು ಬೇಕಾಗಿರುವದೋ ಅಂಥಾದ್ದನ್ನೇ ಸಾಮ್ರಾಜ್ಯ ಸರಕಾರದವರ ಮೂಲಕ ಮಾಡಿಸುವರು. ಆದ್ದರಿಂದ ಈ ದೇಶದ ಆಯವ್ಯಯಗಳ ವಿಷಯಗಳಲ್ಲಿ ಇಂಡಿಯಾ ಸರಕಾರದವರಿಗೆ ಸ್ವತಂತ್ರವನ್ನು ಸಾಮ್ರಾಜ್ಯ ಸರಕಾರದವರು ಕೊಡಬೇಕೆಂತ ಸೂಚಿಸಲ್ಪಟ್ಟಿರುತ್ತದೆ. ವ್ಯಾಪಾರ ಸಮಿತಿಯ ಕಾರ್ಯಸಾಧನೆಯು ವರುಷದ ಎಲ್ಲಾ ಕಾಲಗಳಲ್ಲಿಯೂ ನಡಿಯುವಂತೆ ದೇಶದ ಎಲ್ಲಾ ಕಡೆಗಳ ಪ್ರತಿನಿಧಿಗಳುಳ್ಳ ಎಸೋಸಿಯೇಟೆಡ್ ಚೇಂಬರ್ ಒಫ್ ಕೊಮರ್ಸ್ ಎಂಬ ಸಂಘವನ್ನು ಏರ್ಪಡಿಸಬೇಕೆಂದು ನಿರ್ಣಯಿಸಿರುತ್ತಾರೆ. ರೈಲ್ವೆಗಳಲ್ಲಿ ದೊರೆಯಬೇಕಾದ ರಿಯಾಯತಿ ಮೊದಲಾದ ಹಲವು ವಿಷಯಗಳನ್ನು ಕುರಿತಿರುವ ನಿರ್ಣಯಗಳನ್ನು ಮಾಡಿ ಸಭೆಯು ಮುಕ್ತಾಯಗೊಂಡಿರುವದು.

ಪತ್ರವ್ಯವಹಾರ.

ಅಯ್ಯಾ, ಮದ್ರಾಸು ಗವರ್ನರರ ನ್ಯಾಯನಿರ್ಮಾಣ ಸಭೆಗೆ ಪ್ರತಿನಿಧಿಯಾಗಿ ರಾ। ವಕೀಲ ಸದಾಶಿವ ಭಟ್ಟರವರನ್ನು ಆರಿಸಬೇಕೆಂತ ತಮ್ಮ ಪತ್ರದಲ್ಲಿ ಬರಿಯೋಣಾದ ಅಗ್ರಲೇಖನದ ಚರ್ಚೆಯು ನಮ್ಮ ಉಡ್ಪಿ ಪ್ರಾಂತ್ಯಗಳಲ್ಲಿ ನಡೆಯುತ್ತಿರುವದು. ಈ ಜಿಲ್ಲೆಯಿಂದ ಉಮೇದ್ವಾರರಾಗಿ ನಿಲ್ಲುವವರಿಗೆ ಎಷ್ಟುಮಾತ್ರಕ್ಕೂ ಈ ಮೆಂಬರತನವು ದೊರಕಲಿಕ್ಕಿಲ್ಲ. ಮಲೆಬಾರಿನಲ್ಲಿ ಇರುವಷ್ಟು ತಾಲೂಕು ಬೋರ್ಡುಗಳು, ಮುನ್ಸಿಪಲ್ ಕೌನ್ಸಿಲುಗಳು ನಮ್ಮ ಜಿಲ್ಲೆಯಲ್ಲಿರುವುದಿಲ್ಲ. ಆದ್ದರಿಂದ ಸುಮ್ಮನೆ ನಮ್ಮ ಜಿಲ್ಲೆಯವರು ಯಾವ ಬಗ್ಗೆ ಉಮೇದ್ವಾರರಾಗಿ ನಿಲ್ಲುವದು? ಮಲೆಬಾರಿನವರ ಪೈಕಿ ಯಾರಿಗೆ ಹೆಚ್ಚು ವೋಟುಗಳು ದೊರಿಯುವವೆಂಬುದನ್ನು ನೋಡಿಕೊಂಡು ಅಂಥವರಿಗೆನೇ ವೋಟುಗಳನ್ನು ಕೊಡುವದು ಉತ್ತಮ. ಅಲ್ಲದೆ ಹೀಗೆ ವೋಟುಗಳನ್ನು ಕೊಡುವುದರಿಂದ ಯಾರ ಅಪ್ರೀತಿಗೂ ನಾವು ಪಾತ್ರರಾಗುವುದಿಲ್ಲ. ಸುಮ್ಮನೆ ದೊಡ್ಡ ಅಧಿಕಾರಸ್ಥರ ಕೂಡೆ ನಿಸ್ಟುರ ಕಟ್ಟಿಕೊಳ್ಳುವದು ಯಾಕೆ? ಹಾಗೆ ಕಟ್ಟಿಕೊಂಡರೂ ಈ ಜಿಲ್ಲೆಯ ಉಮೇದ್ವಾರರು ಜಯಶೀಲರಾಗುವ ಸಂಭವವಿರದು. ಆದ್ದರಿಂದ ಘಾಳಿ ಯಾವ ಕಡೆ ಬೀಸುತ್ತದೋ ಆ ಕಡೆಗೆ ಹಾಯಿಯನ್ನು ತಿರುಗಿಸಿಕೊಂಡು ಸುಮ್ಮನಿರುವದು ಜಾಣತನವೆಂತ ಕೆಲವರು ಚರ್ಚೆ ನಡಿಸಲು ಪ್ರಾರಂಭಿಸಿರುತ್ತಾರೆ. ಸ್ವಾಮಿ, ಪತ್ರಕರ್ತರೇ, ಇಂಥಾ ಚರ್ಚೆಯಿಂದ ಮುಖ್ಯವಾಗಿ ಈ ವಿಷಯದಲ್ಲಿ ಜನರಲ್ಲಿ ನಿರಾಶೆಯನ್ನು ಉಂಟುಮಾಡಿ ತಮ್ಮ ಸ್ವಂತ ಪ್ರಯೋಜನವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂತ ಕಾಣುತ್ತದೆ. ಗಾಳಿ ಬೀಸಿದಂತೆ ಹಾಯಿ ತಿರುಗಿಸುವುದರಿಂದ ಸ್ವಾರ್ಥವನ್ನು ಸಾಧಿಸಬಹುದಲ್ಲದೆ ಜನರಿಗೆ ಇಂಥಾ ಸಾಧಕರಿಂದ ಎಳ್ಳಷ್ಟಾದರೂ ಪ್ರಯೋಜನವಿರದು. ಮತ್ತು ಈ ರೀತಿ ನಡಿಯುವಂಥವರು ಎಂದಿಗೂ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಮೆಂಬರರಾಗಲಿಕ್ಕೆ ಯೋಗ್ಯರಲ್ಲ. ಜನರ ಬಗ್ಗೆ ಬೇಕಾದ ಸಾಧನಗಳನ್ನು ಯಾರ ನಿಸ್ಟುರಕ್ಕೂ ಪಾತ್ರರಾದರೂ ಚಿಂತೆಯಿಲ್ಲ ಎಂತ ಕಾರ್ಯಪ್ರವರ್ತರಾಗುವವರು ಮಾತ್ರ ಜನರ ಪ್ರತಿನಿಧಿಗಳೆನ್ನಿಸಿಕೊಳ್ಳುವರು. ಆ ಮಾತು ಹ್ಯಾಗೂ ಇರಲಿ. ನಮ್ಮ ಜಿಲ್ಲೆಯ ಉಮೇದ್ವಾರರಿಗೆನೇ ಈ ಸರ್ತಿ ವೋಟು ಕೊಡಬೇಕೆಂತ ತಾವು ಬರೆದ ಲೇಖನಕ್ಕೆ ಒಂದೆರಡು ಕಾರಣಗಳನ್ನು ಕೊಡಬೇಕೆಂತ ಇದ್ದೇನೆ. ನಾವು ಈ ಸರ್ತಿ ವೋಟು ನಮ್ಮವರಿಗೆನೇ ಕೊಡುವದು ನಮ್ಮ ಜಿಲ್ಲೆಯವರೇ ಜಯಶೀಲರಾಗುವರೆಂಬ ಪೂರ್ಣ ಭರವಸೆಯಿಂದಲ್ಲ. ನಮ್ಮ ಜಿಲ್ಲೆಯ ವಿಷಯಗಳನ್ನು ಸರಕಾರದವರ ಮುಂದೆ ತರಲಿಕ್ಕೆ ಪ್ರತ್ಯೇಕ ಒಬ್ಬ ಮೆಂಬರನ ಅಗತ್ಯವು ಇದೆ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿರುವ ವಿಷಯಗಳನ್ನು ಆಗಿಂದಾಗ್ಯೆ ಜಿಲ್ಲೆಯ ಹೊರಗಿನವರಿಂದ ಚೆನ್ನಾಗಿ ತಿಳಕೊಳ್ಳಲು ಸಾಧ್ಯವಿಲ್ಲ. ನಮ್ಮ ಜಿಲ್ಲೆಯವರೇ ಈ ಬಗ್ಗೆ ಬೇಕಾಗಿರುವರು. ಆದ್ದರಿಂದ ಈ ಜಿಲ್ಲೆಯನ್ನು ಮಲೆಬಾರಿನೊಟ್ಟಿಗೆ ಸೇರಿಸಿ ನಮ್ಮ ಬಗ್ಗೆ ಪ್ರತಿನಿಧಿಯನ್ನು ಆರಿಸುವ ಕ್ರಮದಿಂದ ನಮಗೆ ಅನ್ಯಾಯವಾಗುತ್ತದೆ. ಇಷ್ಟೆಲ್ಲ ವಿಷಯಗಳಲ್ಲಿ ಇಲ್ಲಿಯವರ ಅಭಿಪ್ರಾಯವು ಒಂದಾಗಿದೆ ಮತ್ತು ಈ ಜಿಲ್ಲೆಯವರು ಒಟ್ಟುಕೂಡಿದರೂ ಸಹ ನಮಗೆ ಬೇಕಾದಂಥವರನ್ನು ಆರಿಸುವದು ಪೂರ್ಣ ಅಸಾಧ್ಯವಾಗುತ್ತದೆ. ಈ ಎಲ್ಲಾ ವಿವರವನ್ನು ಸರಕಾರದವರ ಲಕ್ಷ್ಯಕ್ಕೆ ನಾವು ಸರಿಯಾಗಿ ಕೊಡಬೇಕಾದರೆ ಈ ಜಿಲ್ಲೆಯವರೆಲ್ಲರೂ ಒಟ್ಟುಕೂಡಬೇಕು. ಮೇಲಣ ಅಭಿಪ್ರಾಯ ಐಕ್ಯವನ್ನು ಸಂದರ್ಭಗಳು ಸಿಕ್ಕಿದಂತೆ ಸರಕಾರದವರ ಲಕ್ಷ್ಯಕ್ಕೆ ತರುತ್ತಾ ಇರಬೇಕು. ಇಂಥಾ ಉದ್ದೇಶವು ಈ ಸರ್ತಿ ಈ ಜಿಲ್ಲೆಯವರೆಲ್ಲರೂ ಕೂಡಿಕೊಂಡು ನಮ್ಮ ಜಿಲ್ಲೆಯ ಉಮೇದ್ವಾರರಿಗೆನೇ ಅಂದರೆ ಈ ಸರ್ತಿ ರಾ। ಸದಾಶಿವ ಭಟ್ಟರವರಿಗೆ ವೋಟು ಕೊಡುವುದರಿಂದ ನೆರವೇರಲಿಕ್ಕೆ ಸಾಧ್ಯವಾಗುವುದು. ಆದ್ದರಿಂದ ಒಂದುವೇಳೆ ಈ ಸಾರಿ ಸದಾಶಿವ ಭಟ್ಟರವರು ಜಯಶೀಲರಾಗದೆ ಹೋದರೂ ಅವರಿಗೆ ವೋಟು ಕೊಡುವುದರಿಂದ ನಮ್ಮ ಜಿಲ್ಲೆಯ ಹಿತವನ್ನು ಸಾಧಿಸಿದಂತೆ ಆಗುತ್ತದೆ. ಇನ್ನೊಂದು ಮಾತು. ರಾ। ಸದಾಶಿವ ಭಟ್ಟರವರು ಜಯಶೀಲರಾಗುವರೋ? ಈಗಿನ ವಿದ್ಯಮಾನಗಳಲ್ಲಿ ಇವರು ಜಯಶೀಲರಾಗುವ ಸಂಭವವು ಹೆಚ್ಚಿರುವುದು. ಮಲೆಬಾರಿನಲ್ಲಿ ಈ ಮೆಂಬರತನ ಎರಡು ಯಾ ಮೂರು ಜನರು ಉಮೇದ್ವಾರರಾಗಿ ನಿಂತಿರುವರೆಂತ ತಿಳಿದುಬರುತ್ತದೆ. ಮಲೆಬಾರಿನವರ ವೋಟುಗಳು ಹೀಗೆ ಇಬ್ಬರು ಮೂವರಲ್ಲಿ ಪಾಲಾಗಿ ಹಂಚಿ ಹೋದರೆ ನಮ್ಮವರು ಒಟ್ಟುಕೂಡಿ ಯಾರಿಗೆ ವೋಟು ಕೊಡುವರೋ ಅವರೇ ಜಯಶೀಲರಾಗುವರು. ಆದ್ದರಿಂದ ಈ ಜಿಲ್ಲೆಯ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡ್ ಮೆಂಬರರು ಈ ಸರ್ತಿ ತಾವು ಹೇಳಿದಂತೆ ಐಕ್ಯವನ್ನು ತೋರ್ಪಡಿಸುವದು ಅಗತ್ಯವಾಗಿರುವದು. ಚರ್ಚೆ ನಡಿಸುವವರು ನಮ್ಮ ಜಿಲ್ಲೆಯ ಶ್ರೇಯೋಭಿವೃದ್ಧಿ ಬಗ್ಗೆ ಚರ್ಚೆ ನಡಿಸುವಾಗ ಈ ವಿಚಾರಗಳನ್ನು ಮನಸ್ಸಿಗೆ ತಂದುಕೊಳ್ಳಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಉಡ್ಪಿ, ತಾ. 3—1—1916. ಜಿಲ್ಲೆಯವ.

ಸ್ವಾಮಿ,

ಪಟ್ಟಣವನ್ನು ಶುಚಿಯಾಗಿಡಲಿಕ್ಕೆ ಪ್ರಯತ್ನಗಳು ನಡೆಯುತ್ತಾ ಇವೆ. ರಸ್ತೆ ಕಿನಾರೆಗಳಲ್ಲಿ ಚರಂಡಿಗಳನ್ನು ಕಟ್ಟಿಸುತ್ತಿದ್ದಾರೆ. ಅಲ್ಲಲ್ಲಿ ರಾಶಿಬೀಳುವ ಹೊಲಸು ಪದಾರ್ಥಗಳನ್ನು ದೂರ ವಯ್ಯುತ್ತಿರುವರು. ಈ ಬಗ್ಗೆ ತೋಟಿಗಳ ಸರಬರಾಯಿಯು ಸಹ ಇರುವದು. ಈ ಪ್ರಯತ್ನಗಳು ಹೀಗೆ ನಡಿಯುತ್ತಿರುವಾಗ ಪಟ್ಟಣವನ್ನು ಹೊಲಸಾಗಿ ಮಾಡುವ ಸಾಧನೆಯೂ ನಡಿಯುತ್ತಿರುವದು. ಕಾಫಿ ಹೊಟೇಲುಗಳು. ಜನರಲ್ಲಿ ಕುಡಿಕತನವನ್ನು ಕಡಮ್ಮೆಮಾಡಲಿಕ್ಕೆ ಕಾಫಿ ಚಾಹೊಟೇಲುಗಳನ್ನು ಹೆಚ್ಚಿಸಬೇಕೆಂತ ಸರಕಾರದವರ ಅಭಿಪ್ರಾಯವು ಸಹ ಇರುವದಲ್ಲ. ಇಂಥಾ ಹೊಟೇಲುಗಳು ಹೆಚ್ಚುತ್ತಲಿವೆ. ಹೊಟ್ಟೇಲುಗಳಿಗೆ ಯೋಗ್ಯ ಸ್ಥಳಗಳು ಯಾವವೆಂಬದನ್ನು ಸಹ ಆಲೋಚನೆ ಮಾಡದೆ ಏನೂ ಸ್ಥಳ ಸಾಕಾಗದ ಚೀಣಸು ಅಂಗಡಿಗಳಲ್ಲಿ ಸಹ ಹೊಟೇಲುಗಳನ್ನು ಇಡುತ್ತಿರುವರು. ಪ್ರತಿನಿತ್ಯವು ಹೊಲಸುನೀರಿನ ಪ್ರವಾಹವು ಹರಿಯುತ್ತಿರುವದು. ಹರಿಯುವದು ಎಲ್ಲಿ? ರಸ್ತೆ ಕಿನಾರೆಗಳ ಚರಂಡಿಗಳಲ್ಲಿ. ಅಲ್ಲಿಯೇ ಈ ನೀರು ಕಸಕಡ್ಡಿಗಳಿಂದ ಕೂಡಿಕೊಂಡು ಕೊಳೆಯುತ್ತಿರುವದು. ಈ ಅನಾಚಾರವು ಸರ್ವರ ಕಣ್ಣಿಗೆ ಪ್ರತಿನಿತ್ಯದಲ್ಲಿ ಬೀಳುವದಾದರೂ ಈ ತನಕ ಇದು ಪಟ್ಟಣದ ಆರೋಗ್ಯಕ್ಕೆ ಅಪಾಯಕರವೆಂತ ತೋರಿ ಬಂದದ್ದಿಲ್ಲ. ಆದ್ದರಿಂದ ಈ ಅನಾಚಾರಕ್ಕೆ ಉಪಾಯವೇನು. ಹೊಟೇಲುಗಳ ತನಖಿಗೆ ಹೋಗಿ ಕಾಫಿ ಕುಡಿಯುವದೋ ಅಥವಾ ಎಲ್ಲೆಲ್ಲಿ ಈ ಹೊಟೇಲುಗಳು ಸ್ಥಾಪಿಸಲ್ಪಡುವವೋ ಅಲ್ಲಲ್ಲಿ ರಸ್ತೆ ಕಿನಾರೆಗಳಲ್ಲಿ ಮುನ್ಸಿಪಾಲಿಟಿಯವರು ಹೊಂಡಗಳನ್ನು ತೆಗಿಸಿ ಇವುಗಳನ್ನು ಸೀಮೆಂಟಿನಿಂದ ಬೋಳಾಯಿಸಿ ನೀರು ತುಂಬಿದಂತೆ ಇದನ್ನು ತೆಗೆಯಲು ದೊಡ್ಡ ದೊಡ್ಡ ಸಿಬಂದಿಗಳನ್ನು ಏರ್ಪಡಿಸುವದೋ ಅಥವಾ ಇದಕ್ಕೆ ಏನಾದರೂ ನಿವಾರಣೋಪಾಯವಿದ್ದರೂ ಇದನ್ನು ನೋಡಿದ ಕೂಡಲೇ ಕಣ್ಣುಮುಚ್ಚಿ ಸುಮ್ಮನಿರುವದೋ?

ಮಂಗಳೂರಲ್ಲಿ ಪ್ಲೇಗು ಹೆಚ್ಚುತ್ತಿದೆ, ಇತರ ರೋಗಗಳೂ ತುಂಬಾ ಇವೆ, ಆರೋಗ್ಯವು ಬಹಳ ಕೆಟ್ಟುಹೋಗಿದೆ. ಈ ಮಾತುಗಳಿಗೆ ಮೇಲಿನ ವಿವರದಲ್ಲಿ ಏನಾದರೂ ಆಸ್ಪದ ದೊರಕಬಹುದೋ?

ಪಟ್ಟಣಿಗ.

ಯುದ್ಧ ಸಮಾಚಾರ.

ತಾ. ೨೯ನೇ ದಶಂಬರ.

ಒಸೆಜಿಸ್ ಪ್ರಾಂತ್ಯದಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿರುವದು. ಕಂದಕಗಳಿಂದ ಹೊರ ಬರಲಿಕ್ಕೆ ಪ್ರಯತ್ನಿಸಿದ ಶತ್ರುಗಳನ್ನು ಮಿತ್ರ ಸೇನಿಕರ ಫಿರಂಗಿಗಳು ತಡೆದಿರುತ್ತವೆ.

ಬ್ರಿಟಿಷ ದ್ವೀಪಗಳಲ್ಲಿ ಸುಂಟರ ಗಾಳಿಯು ಬೀಸಿ ಪ್ರತಿ ಕಡೆಯಲ್ಲಿಯೂ ವಿಶೇಷ ನಷ್ಟ ಉಂಟಾಗಿರುವದು. ವೇಲ್ಸ ಪ್ರದೇಶಕ್ಕೆ ಹೋಗುವ ಟೆಲಗ್ರಾಫ್, ಟೆಲಫೋನ್ ವ್ಯವಹಾರವು ಬಿರುಗಾಳಿಯಿಂದ ಹಾಳಾಗಿರುತ್ತದೆ. ಮನೆಗಳ ನೂರಾರು ಮಾಡುಗಳು ಕೆಳ ಬಿದ್ದಿರುತ್ತವೆ.

ಚೀನ ದೇಶದ ದಂಗೆಗಾರರ ಚಳವಳವು ಯುನಾನ್ ಪ್ರದೇಶದಲ್ಲಿ ಮಾತ್ರವಲ್ಲ. ದೇಶದ ಇತರ ಕಡೆಗಳಿಗೂ ಪ್ರಸರಿಸಿರುತ್ತದೆಂಬ ವಾರ್ತೆ ಇದೆ.

ರುಶ್ಯಾದೇಶದಲ್ಲಿ ಕಳೆದ ವರ್ಷಗಳಿಗಿಂತಲೂ ಛಳಿಯು ವಿಶೇಷವಾಗಿರುತ್ತದೆ. ಡ್ವಿನಾದಲ್ಲಿ ತೋಳಗಳು ಹಗಲಲ್ಲೇ ಕಾಣಿಸಿಕೊಂಡು ಬೇಸಾಯಗಾರರ ಮೇಲೆ ಬೀಳುತ್ತಲಿವೆಯಲ್ಲದೆ ಅವರ ಪಶುಗಳನ್ನು ಕೊಂದು ತಿನ್ನುತ್ತಿವೆ.

ಜರ್ಮನರು ರುಶ್ಯ ರಣರಂಗದ ತಮ್ಮ ನೆಲೆಗಳನ್ನೆಲ್ಲಾ ಭೀಮರೂಪಕವಾದ ಕೋಟೆಕೊತ್ತಲುಗಳಿಂದ ಬಲಕಾಯಿಸುತ್ತಲಿರುವರು. ಜರ್ಮನರು ಯಂತ್ರ ಮೂಲಕ ನಡಿಯುವ ಫಿರಂಗಿಗಳನ್ನೂ ಇತರ ಯುದ್ಧ ಸಾಮಾಗ್ರಿಗಳನ್ನೂ ಬಹಳವಾಗಿ ಅಲ್ಲಿಗೆ ಸಾಗಿಸುತ್ತಲಿದ್ದಾರೆ. ಆದರೂ ಜರ್ಮನರ ಸೇನೆಯು ಈಗ ಕನಿಷ್ಟಾವಸ್ಥೆಯಲ್ಲಿರುವದು. ಆಸ್ಟ್ರಿಯ ಸೇನೆಯು ಯುದ್ಧ ಪ್ರಾರಂಭಕಾಲದಲ್ಲಿದ್ದ ಹಾಗೆ ಕನಿಷ್ಟವಾಗಿಲ್ಲ, ಈಗ ಶರಣಾಗತರಾಗುವದು ಬಹಳ ಕಡಿಮೆ ಎಂತ ಪೆಟ್ರೊಗ್ರೇಡಿನಿಂದ ವಾರ್ತೆ ಬಂದಿದೆ.

ಬಲ್ಗೇರಿಯನ್ ಕರಾವಳಿಯಲ್ಲಿ ರುಶ್ಯನರ ಒಂದು ಡಿಸ್ಟ್ರಾಯರ್ ನಾವೆಗೂ ಶತ್ರುಗಳ ಜಲಂತರ್ಗಾಮಿ ನಾವೆಗಳಿಗೂ ಕದನ ನಡೆದು ಶತ್ರುಗಳ ಒಂದು ಜಲಂತರ್ಗಾಮಿ ನಾವೆಯು ಮುಳುಗಿ ಹೋಗಿರುತ್ತದೆ.

ತಾ. ೩೦ನೇ ದಶಂಬರ.

ಬ್ರಿಟಿಷರ "ವೆನಿಸ್ಟಿರನ್" ಮತ್ತು "ಮೊರ್ನಿಂಗ್" ಎಂಬ ಹಡಗಗಳನ್ನು ಶತ್ರುಗಳ ಜಲಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ.

ಲಾಬಾಸ್ಸೆ ಮತ್ತು ವೈಪ್ರೆಸಿನಲ್ಲಿ ತೋಪು ಕಾಳಗವು ನಡೆಯುತ್ತಿರುವದು. ಕೆಲವು ಕಡೆಗಳಲ್ಲಿ ನಮ್ಮವರ ಸೇನಿಕರು ಶತ್ರುಗಳ ರೈಲ್ವೆ ಸ್ಟೇಶನುಗಳ ಮತ್ತು ಆಯುಧ ಸಾಮಾಗ್ರಿಗಳನ್ನಿಟ್ಟಿದ್ದ ಕೊಠಡಿಗಳ ಮೇಲೆ ಗುಂಡು ಹಾರಿಸಿ ವಿಶೇಷ ನಷ್ಟಪಡಿಸಿರುವರು.

ಬಾಲ್ಟಿಕ್ ಸರೋವರದ ಬಳಿ ರುಶ್ಯನರು ಜರ್ಮನರನ್ನು ಸೋಲಿಸಿರುತ್ತಾರೆ. ಗೆಲೀಸಿಯದಲ್ಲಿ ಕಠಿಣ ಕಾಳಗ ನಡೆಯುತ್ತಿದೆ.

ರುಶ್ಯನರು ಪುನಃ ವರ್ನಾ ಪಟ್ಟಣದ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ. ಬಲ್ಗೇರಿಯನರ ಒಂದು ಟೊರ್ಪೆಡೋ ಹಡಗವನ್ನು ಮುಳುಗಿಸಿ ಇಟಲಿಯನರ ಸೇನೆಯು ಎಪಿರಸ್ ಸರಹದ್ದಿನ ಹತ್ತಿರ ಸೇರಿರುವದು.

ಈಜಿಪ್ತ ಸರಹದ್ದಿನಲ್ಲಿ ಕದನ ನಡೆದಿರುವದೆಂಬದಾಗಿ ಟರ್ಕಿ ಸರಕಾರದವರು ಪ್ರಕಟಿಸಿರುವರು. ಆದರೆ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಈ ರೀತಿ ಪ್ರಕಟಿಸಿರುವರು:—ದಶಂಬರ ತಾ. ೧೪—೨೪ರ ವರೆಗೆ ಈಜಿಪ್ತ ಸರಹದ್ದಿನಲ್ಲಿ ಕದನ ನಡೆಯಲಿಲ್ಲ. ತಾ. ೨೫ರಲ್ಲಿ ಅರಬಿಯರ ಒಂದು ಸೇನೆಯನ್ನು ಬ್ರಿಟಿಷರ ನ್ಯೂಜೀಲೇಂಡ್ ಮತ್ತು ಸಿಕ್ಕ ಸೇನಿಕರು ಓಡಿಸಿರುತ್ತಾರೆ.

ತಾ. ೩೧ನೇ ದಶಂಬರ.

ಫ್ರಾನ್ಸ ರಣರಂಗದಲ್ಲಿ ಸಣ್ಣ ಕದನಗಳು ನಡೆಯುತ್ತಿರುವವು. ಪ್ರತಿ ಕಡೆಯಲ್ಲಿಯೂ ನಮ್ಮವರು ಶತ್ರುಗಳ ಕಂದಕ ಇತ್ಯಾದಿಗಳನ್ನು ಹಾಳುಪಡಿಸುತ್ತಲಿರುವರು.

ಈ ವರೆಗೆ ಸೇನೆಗೆ ಸೇರಿಕೊಳ್ಳದ ಆಂಗ್ಲೇಯ ಯುವಕರನ್ನು ಬಲತ್ಕಾರದಿಂದಲಾದರೂ ಸೇನೆಗೆ ಸೇರಿಕೊಳ್ಳಬೇಕೆಂಬ ಇಛ್ಛೆಯು [illegible]

ಜರ್ಮನ್ ಕೈಸರರವರಿಗೆ ಗಂಟಲಿನಲ್ಲಿ ಹುಣ್ಣಾಗಿರುವದೆಂದೂ ಆ ಹುಣ್ಣನ್ನು ಶಸ್ತ್ರಪ್ರಯೋಗ ಮಾಡಿ ತೆಗೆಯುವ ವರೆಗೆ ಅವರು ಮಲಗಿಕೊಂಡೇ ಇರಬೇಕಾಗುವದೆಂದೂ ವಾರ್ತೆ ಬಂದದೆ.

ರುಶ್ಯನರ ಸೇನೆಯು ಬಕೋವಿನದಲ್ಲಿ ಶತ್ರುಗಳ ಕೂಡೆ ಕದನ ಮಾಡುತ್ತಿರುವದು. ಪ್ರುತ್ ಮತ್ತು ನೀಸ್ಟರ್ ನದಿಗಳ ಮಧ್ಯೆ ಕದನ ನಡೆಯುತ್ತಿದೆ. ಈ ಕದನವು ಈವರೆಗೆ ರುಶ್ಯನರಿಗೇನೇ ಅನುಕೂಲವಾಗಿರುವದು.

ಆಸ್ಟ್ರೀಯನರ ಸೇನೆಯು ಮೊಂಟೆನಿಗ್ರೋಯನರ ಲೋವನ್ ಪರ್ವತದ ಮೇಲ್ಭಾಯಿದಿರುವದು. ಆದರೆ ಮೊಂಟೆನಿಗ್ರೋಯನರು ಶತ್ರುಗಳನ್ನು ಹಿಂದಕ್ಕೆ ಅಟ್ಟಿರುತ್ತಾರೆ. ಮೊಂಟೆನಿಗ್ರೊ ಸೇನೆಯಲ್ಲಿ ೩ ಮಂದಿ ಗಾಯಪಟ್ಟರು, ೩ ಮಂದಿ ಹತರಾದರು. ಲಿಪಂಟಾಜ್ ಎಂಬಲ್ಲಿ ನಡೆದ ಕದನದಲ್ಲಿ ಆಸ್ಟ್ರಿಯನರ ೩೦೦೦ ಸೇನಿಕರು ಹತರಾಗಿರುವರು.

ಪಾರ್ಶಿಸ್ಥಾನದಲ್ಲಿ ರುಶ್ಯನರು ಕಾಗನ್ ಪಟ್ಟಣವನ್ನು ಸ್ವಾಧೀನಮಾಡಿಕೊಂಡು ಇಸ್ಪಾನಿಗೆ ಮುಂದರಿಯುತ್ತಲಿದ್ದಾರೆ.

ಮಿತ್ರರ ವಾಯುನಾವೆಯು ಗೋಲ್ಡನ್ ಹೊರ್ನಿನಲ್ಲಿದ್ದ ತುರ್ಕರ ಆಯುಧ ಸಾಮಾಗ್ರಿಗಳ ಕಾರ್ಖಾನೆಗೆ ಸಿಡಿಮದ್ದನ್ನು ಹಾರಿಸಿರುವದು. ೫೦೦ ತುರ್ಕರು ಹತರಾಗಿರುವರು ಎಂಬ ವಾರ್ತೆ ಇದೆ.

ತಾ. ೧ನೇ ಜನವರಿ ೧೯೧೬.

ಬ್ರಿಟಿಷರ "ನೇಟಲ್" ಎಂಬ ಕ್ರೂಜರ್ ನಾವೆಯಲ್ಲಿ ಸಿಡಿತ ಉಂಟಾಗಿ ಮುಳುಗಿಹೋಗಿರುತ್ತದೆ. ನಾವೆಯಲ್ಲಿದ್ದ ಸುಮಾರು ೭೦೦ಮಂದಿಯಲ್ಲಿ ಸುಮಾರು ೪೦೦ಮಂದಿ ಮಾತ್ರಬದುಕಿರುವರು.

ಪೂರ್ವ ಗೆಲೀಸಿಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ರುಶ್ಯನರು ಬೆಸ್ಸಾರಬಿಯ ಸರಹದ್ದಿನಲ್ಲಿ ಮಾತ್ರವೇ ಅಲ್ಲ. ಸ್ಟ್ರೈಪದಲ್ಲಿರುವ ಆಸ್ಟ್ರೀಯನರ ನೆಲೆಯ ಮೇಲೆಯೂ ಬಿದ್ದು ಕದನ ಮಾಡುತ್ತಿರುವರು ಎಂತ ಆಸ್ಟ್ರಿಯನರು ಪ್ರಕಟಿಸಿರುತ್ತಾರೆ.

ಡುರಾಜ್ಜೊದ ಮೇಲೆ ಹಲ್ಲಾ ಮಾಡುವ ಉದ್ದೇಶದಿಂದ ಆಸ್ಟ್ರಿಯನರ ಯುದ್ಧನಾವೆಗಳು ಕೆಟ್ಟಾರೋದಿಂದ ಹೊರಟು ಬಂದವು. ಆದರೆ ಮಿತ್ರರ ಫ್ಲೋಟಿಲ್ಲಾ ನಾವೆಗಳು ಆಸ್ಟ್ರೀಯನರ ಯುದ್ಧನಾವೆಗಳೊಡನೆ ಕದನ ಮಾಡಿ ಅವರ ಎರಡು ಯುದ್ಧನಾವೆಗಳನ್ನು ಮುಳುಗಿಸಿದವು.

ಡೊರ್ಯಾನಿನ ಪೂರ್ವದಲ್ಲಿದ್ದ ಬಲ್ಗೇರಿಯನರ ಸೇನಾಶಾಳೆಯಗಳ ಮೇಲೆ ಫ್ರೆಂಚ ಯುದ್ಧನಾವೆಗಳು ಬೊಂಬುಗಳನ್ನು ಎಸೆದಿರುತ್ತವೆ.

ಇಟಲಿಯನರ ಸೇನೆಯು ಡುರಾಜ್ಜೊ ಪಟ್ಟಣಕ್ಕೆ ಹೋಗಿರುತ್ತದೆ. ಸರ್ವಿಯ ಸರಕಾರದ ಖಜಾನೆಯು ಪಾರಿಸ್ ನಗರಕ್ಕೆ ಸಾಗಿಸಲ್ಪಟ್ಟಿರುವದು. ಬಲ್ಗೇರಿಯನರು ಅಲ್ಬಾನಿಯದಲ್ಲಿ ಸರ್ವಿಯನರೊಡನೆ ಕೆಲವು ಕದನಗಳನ್ನು ಮಾಡಿ ಎಲ್ಬಾಸಾನನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ತಾ ೩ನೇ ಜನವರಿ.

ಲಂಡನಿನಿಂದ ಮುಂಬಾಯಿಗೆ ಬರುತ್ತಿದ್ದ ಪಿ. ಎಂಡ್ ಓ ಕಂಪೆನಿಯ "ಪರ್ಶಿಯ" ಎಂಬ ಹಡಗವು ದಶಂಬರ ತಾ. ೩೦ರಲ್ಲಿ ಮುಳುಗಿಸಲ್ಪಟ್ಟಿರುತ್ತದೆ. "ಪರ್ಶಿಯ" ಹಡಗವು ೭,೯೭೪ ಟನ್ ಭರಾವಣೆದ್ದು. ಹಡಗದಲ್ಲಿ ನಾವಿಕರನ್ನು ಬಿಟ್ಟು ೨೩೧ ಪ್ರಯಾಣಿಕರಿದ್ದರು. ಈ ಪೈಕಿ ೮೭ ಹೆಂಗಸರು, ೨೫ಮಕ್ಕಳು. ಅಮೇರಿಕಾದವರಲ್ಲಿ ೩ ಮಂದಿ ಹಡಗದಲ್ಲಿದ್ದರು. ಹಡಗದಲ್ಲಿ ಪಾರ್ಸೆಲ್ ಪೋಸ್ಟುಗಳು ತುಂಬಾ ಇದ್ದವು. ಪ್ರಯಾಣಿಕರಲ್ಲಿ ಹೆಚ್ಚಿನವರು ಮುಂಬಾಯಿಗೆ ಬರುವವರಾಗಿದ್ದರು. ದೊಡ್ಡ ದೊಡ್ಡ ಆಫೀಸರರೂ ಹಡಗದಲ್ಲಿದ್ದರು. ಹಡಗವು ೫ ನಿಮಿಷಗಳಲ್ಲಿ ಮುಳುಗಿ ಹೋಯಿತು. ಹಡಗದಲ್ಲಿದ್ದ ೫೫೦ ಮಂದಿಯಲ್ಲಿ ಸುಮಾರು ೧೬೦ ಮಂದಿ ರಕ್ಷಣೆ ಹೊಂದಿರುತ್ತಾರೆ. "ಪರ್ಶಿಯ"ದ ಕೆಪ್ಟನನು ಮುಳುಗಿ ಸತ್ತಿರುತ್ತಾನೆ. ಅಮೇರಿಕಾದವರಲ್ಲಿ ಎಡನಿನ ಕಾನ್ಸೆಲ್ಲರಾದ ಮಿ| ಮೆಕ್‌ನೇಲಿಯವರು ಮುಳುಗಿ ಸತ್ತಿರುವರು. ಇತರರಿಬ್ಬರು ಬದುಕಿಕೊಂಡಿರುವರು.

ಫ್ರಾನ್ಸ ರಣರಂಗದಲ್ಲಿ ತೋಪು ಕಾಳಗವು ನಡೆಯುತ್ತಿದೆ. ಕೆಲವು ಕಡೆಗಳಲ್ಲಿ ಮಿತ್ರ ಸೇನಿಕರ ತೋಪುಗಳು ಜರ್ಮನರ ಕಂದಕ, ಬ್ಯಾಟರಿ ಇತ್ಯಾದಿಗಳ ಮೇಲೆ ಗುಂಡು ಹಾರಿಸಿ ಅವನ್ನು ಹಾಳುಪಡಿಸಿರುತ್ತವೆ.

ಜರ್ಮನರ ಕೈಸರರು ಕಠಿಣ ಅಸ್ವಸ್ಥದಲ್ಲಿರುವರು. ಕೈಸ [illegible]

ಕುರುಗಳು ಕಾಣಿಸಿಕೊಂಡದ್ದರಿಂದ ಅವರು ಬರ್ಲಿನಿಗೆ ಬಂದರು. ಕೈಸರರು ಹಾಸಿಗೆಯಲ್ಲಿ ಮಲಗಿಕೊಂಡಲ್ಲಿಯೇ ಇರುವರು. ಕೈಸರೀನರು ಅವರ ಪರಾಂಬರಿಕೆ ಮಾಡುತ್ತಲಿರುವರು.

ಸ್ಟ್ರಿಪೆಟ್ ನದಿಯ ದಕ್ಷಿಣ ಕಡೆಯಲ್ಲಿ ರುಶ್ಯನರಿಗೆ ಜಯವಾಗುತ್ತಲಿದೆ. ಸ್ಟ್ರಿಪ ನದಿ ಪ್ರಾಂತ್ಯದಲ್ಲಿ ರುಶ್ಯನರು ಜರ್ಮನರನ್ನು ಹಿಂದಕ್ಕೆ ಓಡಿಸಿರುವರು. ಗೆಲೀಸಿಯದ ಸಜರ್ನೊವಿಡ್ಜನಲ್ಲಿ ರುಶ್ಯನರು ಆಸ್ಟ್ರಿಯನರನ್ನು ಸೋಲಿಸಿ ೮೭೦ ಮಂದಿಯನ್ನು ಸೆರೆಹಿಡಿದಿರುವರು.

ಜರ್ಮನರ ವಾಯುನಾವಿಕರು ಸಲೋನಿಕದಲ್ಲಿ ಕಾಣಿಸಿಕೊಂಡು ಗ್ರೀಕ ಸೇನೆಯ ಮೇಲೆ ಬೊಂಬುಗಳನ್ನು ಬಿಸಾಡಿರುವರು. ಫ್ರೆಂಚರ ಒಂದು ಜಲಂತರ್ಗಾಮಿ ನಾವೆಯು ಅಡ್ರಿಯಾಟಿಕಿನಲ್ಲಿ ಶತ್ರುಗಳ ಒಂದು ಹಡಗವನ್ನು ಮುಳುಗಿಸಿರುತ್ತದೆ. ಮೊಂಟೆನಿಗ್ರೊಯನರಿಗೆ ಪುನಃ ಕೆಲವು ಕಡೆಗಳಲ್ಲಿ ಜಯವಾಗಿರುತ್ತದೆ.

ಬೆಸ್ಸಾರಬಿಯದಲ್ಲಿ ರುಶ್ಯನರು ಯುದ್ಧ ಮಾಡುತ್ತಿರುವದರಿಂದ ಮೆಕೆದೋನಿಯದಲ್ಲಿದ್ದ ಶತ್ರುಸೇನೆಯು ಮೆಕೆದೋನಿಯವನ್ನು ಬಿಟ್ಟುಹೋಗಿರುತ್ತದೆಂಬ ವಾರ್ತೆ ಬಂದದೆ. ಇನ್ನು ಎರಡು ತಿಂಗಳೊಳಗೆ ಸರ್ವಿಯಾನರು ೧೦೦,೦೦೦ ಸೇನಿಕರನ್ನು ಮಿತ್ರರ ಸಹಾಯಕ್ಕೆ ಕಳುಹಿಸಿಕೊಡಲು ಶಕ್ತರಾಗುವರೆಂತ ಸರ್ವಿಯಾದ ಯುದ್ಧ ಮಂತ್ರಿಯವರು ಹೇಳಿರುವರು.

ಸರ್ವಿಯಾ ದೇಶದ ಅರಸರವರು ಸಲೋನಿಕಕ್ಕೆ ಬಂದಿರುವರು. ಜರ್ಮನರ ವಾಯುನಾವೆಗಳು ಗ್ರೀಕ ಪ್ರಾಂತ್ಯದ ಮೇಲೆ ಬೊಂಬುಗಳನ್ನು ಬಿಸಾಡಿದ ಕೃತ್ಯವನ್ನು ಗ್ರೀಕ ಸರಕಾರದವರು ವಿರೋಧಿಸಿರುತ್ತಾರೆ.

ರುಮೇನಿಯವು ಮಿತ್ರ ರಾಜ್ಯಗಳ ಪಕ್ಷ ಸೇರುವದು ಯಾ ರುಶ್ಯದವರಿಗೆ ದಾರಿಬಿಟ್ಟು ಕೊಡುವದು ಎಂಬ ವಾರ್ತೆ ಇದೆ.

ಮಿತ್ರ ತೋಪುಗಳು ಡರ್ಡನೆಲ್ಸಿನಲ್ಲಿ ಆಸ್ಯಾ ಕರಾವಳಿಯ ಮೇಲೆ ಗುಂಡು ಹಾರಿಸಿ ಕೆಲವು ಫಿರಂಗಿಗಳನ್ನೂ ಮದ್ದುಗುಂಡುಗಳ ಕೊಠಡಿಯನ್ನೂ ನಾಶ ಮಾಡಿರುತ್ತವೆ.

ಮೆಸಪೊಟಾಮಿಯದಲ್ಲಿ ತುರ್ಕರು ತಮ್ಮ ಸೇನೆಯನ್ನು ಹಿಂದೆ ಕರಿಸಲಿಕ್ಕಿರುವರು. ದಶಂಬರ ತಾ. ೨೯ರಲ್ಲಿ ಶತ್ರುಗಳು ತಮ್ಮಲ್ಲಿ ಸತ್ತವರನ್ನು ಹೂಳಿಡುವ ಬಗ್ಗೆ ಯುದ್ಧವನ್ನು ತತ್ಕಾಲಿಕ ನಿಲ್ಲಿಸಬೇಕೆಂದು ಕೇಳಿಕೊಂಡರು. ಕೆಲವು ಶರ್ತಗಳ ಮೇಲೆ ಯುದ್ಧವು ತತ್ಕಾಲಿಕ ನಿಲ್ಲಿಸಲ್ಪಟ್ಟಿತು. ದಶಂಬರ ತಾ. ೨೫ರ ಮೇರೆಗೆ ಸಟಿಸ್ಫೋನಿನಲ್ಲಿ ಶತ್ರುಗಳ ೧೦,೫೦೦ ಸೇನಿಕರು ಸೆರೆ ಬಿದ್ದಿರುವರು. ನದಿಯ ಬಲದಡದಲ್ಲಿ ನಮ್ಮವರು ಸ್ವಾಧೀನಮಾಡಿಕೊಂಡ ಗ್ರಾಮಗಳ ಮೇಲೆ ದಶಂಬರ ತಾ. ೨೭-೨೮-೨೯ರಲ್ಲಿ ಶತ್ರುಗಳು ತೋಪು ಹಾರಿಸ ಪ್ರಾರಂಭಿಸಿರುವರು. ದಶಂಬರ ತಾ. ೩೦ರಲ್ಲಿ ನಮ್ಮವರ ನೆಲೆಗೆ ಶತ್ರುಗಳ ತೋಪುಗಳು ವಿಶೇಷವಾಗಿ ತೋಪು ಹಾರಿಸಿದುದರಿಂದ ನಮ್ಮವರ ಆಸ್ಪತ್ರಿಯಲ್ಲಿದ್ದವರಲ್ಲಿ ಕೆಲವರಿಗೆ ಪ್ರಾಣಾಪಾಯ ಉಂಟಾಗಿರುವದು.

ಪಾರ್ಶಿಸ್ಥಾನದಲ್ಲಿ ರುಶ್ಯನರು ಕಮ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡರು ಅಲ್ಲಿ ರುಶ್ಯರಿಗೆ ೧೬,೦೦,೦೦೦ ರೈಪಲ್ ತೋಟೆಗಳೂ ೩೦೦೦ ಫಿರಂಗಿ ತೋಟೆಗಳೂ ದೊರಕಿರುತ್ತವೆ.

ಈಜಿಪ್ತ ಸರಹದ್ದಿನಲ್ಲಿ ನಡೆದ ಕದನದಲ್ಲಿ ಅರಬಿಯರಲ್ಲಿ ೪೦೦ ಮಂದಿ ಮಡಿದರು. ೮೪ ಅರಬಿಯರು ಸೆರೆಬಿದ್ದರು. ನಮ್ಮವರಲ್ಲಿ ೧೦ ಮಂದಿ ಮಾತ್ರ ಹತರಾದರು. ೫೩ ಮಂದಿ ಗಾಯಪಟ್ಟರು.

ತಾ. ೪ನೇ ಜನವರಿ.

"ಪರ್ಶಿಯ" ಹಡಗವನ್ನು ಐದೇ ನಿಮಿಷದೊಳಗೆ ಮುಳುಗಿಸಿ ಅದರಲ್ಲಿದ್ದ ನಿರಾಪರಾಧಿಗಳಾದ ಪ್ರಯಾಣಿಕರ ನಾಶಕ್ಕೆ ಕಾರಣವಾದ ಶತ್ರುಗಳ ಜಲಂತರ್ಗಾಮಿ ನಾವೆಗಳ ಕೃತ್ಯವನ್ನು ವರ್ತಮಾನ ಪತ್ರಗಳೆಲ್ಲಾ ಬಹಳವಾಡಿ ದೂಷಿಸುತ್ತಲಿವೆ. ಅಮೇರಿಕಾ ಪತ್ರಿಕೆಗಳೂ ಶತ್ರುಗಳ ಈ ವಾರ್ತೆಯನ್ನು ಖಂಡಿಸುತ್ತಲಿವೆ.

ಬ್ರಿಟಿಷರ ೯೦೦೦ ಟನ್ ಭರಾವಣೆಯ "ಗ್ಲೆನ್‌ಗೈಲ್" ಮತ್ತು ಜಾಪಾನರ "ಕೆಂಕೋಕ್‌ಮಾರು" ಎಂಬ ಹಡಗಗಳನ್ನೂ ಬಹುಶಃ "ಪರ್ಶಿಯ" ಹಡಗವನ್ನು ಮುಳುಗಿಸಿದ ಜಲಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ. ಜನವರಿ ತಾ. ೨ರಲ್ಲಿ "ಗ್ಲೆನ್‌ಗೈಲ್" ನಾವೆಯು ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿಸಲ್ಪಟ್ಟಿತು. ಈ ಹಡಗದಲ್ಲಿ ೧೨೦ ಪ್ರಯಾಣಿಕರು ಮತ್ತು ನಾವಿಕರಿದ್ದರು [illegible]

ಅರ್ಗೋನ್ನೆಯಲ್ಲಿ ಜರ್ಮನರು ಫ್ರೆಂಚರ ಕೋವುಗಳ ಹೊಡತಕ್ಕೆ ನಿಲ್ಲಲಾರದೆ ಹಿಂದೆ ಸರಿದಿರುತ್ತಾರೆ.

ಸಲೋನಿಕದಲ್ಲಿದ್ದ ಜರ್ಮನ್ ಆಸ್ಟ್ರಿಯ ಮತ್ತು ಬಲ್ಗೇರಿಯನರ ಕಾನ್ಸಲ್ಲರನ್ನು ಮಿತ್ರ ಸೇನಿಕರು ಹಿಡಿದಿರುವರು. ಈ ಕೃತ್ಯವನ್ನು ಗ್ರೀಕ್ ಸರಕಾರದವರು ವಿರೋಧಿಸಿರುತ್ತಾರೆ.

ಸರ್ವಿಯ ಸರಕಾರವು ಸಲೋನಿಕದಲ್ಲಿ ಸ್ಥಾಪಿಸಲ್ಪಟ್ಟಿರುವದು.

ಉತ್ತರ ಹಿಂದೂಸ್ಥಾನ.

ಹಿಂದುಗಳ ಆಯಾ ಜಾತಿಗಳೊಳಗಣ ಭೇದಾಭೇದಗಳನ್ನು ಹೋಗಲಾಡಿಸುವ ಉದ್ದೇಶದಿಂದ ಹಿಂದೂ ಸಮಾಜ ಸುಧಾರಕ ಮುಂದಾಳುಗಳಿಂದ ಏರ್ಪಡಿಸೋಣಾದ ಸಹಪಂಕ್ತಿ ಭೋಜನವು ಇದೇ ತಾ. ೨೯ನೇ ರಾತ್ರಿ ಮುಂಬಾಯಲ್ಲಿ ನಡೆಯಿತು. ೪೫೦ ಅತಿಥಿಗಳು ಹಾಜರಿದ್ದರು. ಮುಂಬಾಯಿ, ಮದ್ರಾಸ್, ಪಂಜಾಬು, ಸಂಯುಕ್ತ ಸಂಸ್ಥಾನ, ಬಂಗಾಳ, ಸಿಂಧು, ಮಧ್ಯಸಂಸ್ಥಾನಗಳಲ್ಲಿಯ ಆಯಾ ಹಿಂದೂ ಜಾತಿಗಳ ಮುಂದಾಳುಗಳು ಈ ಅತಿಥಿ ಸತ್ಕಾರಕ್ಕೆ ಬಂದಿದ್ದುದರಿಂದ ಸುಧಾರಕ ಮುಂದಾಳುಗಳ ಉದ್ದೇಶವು ನೆರವೇರಿದಂತಾಯಿತು. ೭೦೦ ಆಮಂತ್ರಣ ಪತ್ರಗಳಲ್ಲಿ ಸುಮಾರು ೪೦೦ಕ್ಕಿಂತಲೂ ಹೆಚ್ಚಿಗೆ ಸ್ವೀಕರಿಸೋಣಾಗಿದ್ದು ೪೭೦ ಮಂದಿ ಊಟಕ್ಕೆ ಚಿತ್ತೈಸಿದ್ದರು. ೫೦ ಹೆಂಗಸರೂ ೧೨೯ ಬ್ರಾಹ್ಮಣರೂ ಮುಟ್ಟಿಕೂಡದವರೆಂದು ತಿರಸ್ಕರಿಸಲ್ಪಡುವ ೨೦ ಪತಿತರೂ ಊಟಕ್ಕಿದ್ದರು. ಭೋಜನವಾದನಂತರ ಸರ್ ನಾರಾಯಣ ಚಂದಾವರಕಾರರವರು ಕಾಲೋಚಿತ ಭಾಷಣ ಕೊಟ್ಟು ಹಿಂದೂ ಜಾತಿಯಲ್ಲಿ ತುಂಡುತುಂಡಾಗಿ ಹೋದ ಆಯಾ ಮತದವರನ್ನು ಒಟ್ಟುಕೂಡಿಸಿ ಅವರೊಳಗೆ ಅನ್ಯೋನ್ಯತ್ವವನ್ನು ಹುಟ್ಟಿಸುವದೇ ಈ ಭೋಜನವನ್ನು ಮಾಡಿದುದರ ಉದ್ದೇಶವೆಂದು ಹೇಳಿದರು.

ಮಹಮ್ಮದೀಯರ ಎಜ್ಯುಕೇಶನಲ್ ಕನ್ಫರೆನ್ಸ್ ಎಂಬ ವಿದ್ಯಾ ಸಂಬಂಧವಾದ ಸಭೆಯು ಇದೇ ಕಳೆದ ದಶಂಬರ ತಾ. ೨೮ರಲ್ಲಿ ಪೂನೆಯಲ್ಲಿ ಕೂಡಿ ಬಂದಿರುವದು. ಈ ಸಭೆಗೆ ಬಹುಮಾನಪಟ್ಟ ಜಸ್ಟಿಸ್ ಅಬ್ದುರ್ ರಹಿಮಾನರವರು ಅಧ್ಯಕ್ಷರಾಗಿದ್ದರು. ಭಾಷಣಗಳೆಲ್ಲಾ ಉರ್ದು ಭಾಷೆಯಲ್ಲೇ ನಡೆದಿರುವದು. ಮಹಮ್ಮದೀಯರೊಳಗೆ ವಿದ್ಯಾಭ್ಯಾಸದ ಅಭಿವೃದ್ಧಿಯನ್ನುಂಟು ಮಾಡುವ ಪ್ರಯತ್ನಮಾಡಬೇಕೆಂಬದೇ ಅಧ್ಯಕ್ಷರ ಭಾಷಣದ ಉದ್ದೇಶವಾಗಿತ್ತು.

ದಶಂಬರ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೨೫೮ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೩೧೮೭ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಲ್ಲಿ ೧೮೨೭ ಮದ್ರಾಸ್ ೨೦೩ ಬಿಹಾರ್ ಮತ್ತು ಒರಿಸ್ಸ ೧೯೯; ಸಂಯುಕ್ತ ಸಂಸ್ಥಾನ ೪೯೪; ಮೈಸೂರು ೧೧೭; ಕಾಶ್ಮೀರ ೧೭ ಮರಣಗಳಾದವು.

ವೈಸರಾಯ ಪ್ರಭುಗಳವರು ಗ್ವಾಲಿಯೋರ್ ಸಂಸ್ಥಾನದಿಂದ ದೆಹಲಿ ನಗರಕ್ಕೆ ಹಿಂತಿರುಗಿರುತ್ತಾರೆ.

ಇದೇ ಕಳೆದ ದಶಂಬರ ತಾ. ೩೧ರಲ್ಲಿ ಮುಂಬಾಯಿಯ ಹೆಂಗಸರ ಒಂದು ಸಭೆಯು ಕೂಡಿ ಹಿಂದೂಸ್ಥಾನದ ಹೆಂಗಸರ ವಿದ್ಯಾಭ್ಯಾಸ ಪ್ರಸರಣೆ ಬಗ್ಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬ ವಿಜ್ಞಾಪನೆಯನ್ನು ವೈಸರಾಯ ಪ್ರಭುಗಳವರಿಗೆ ಕಳುಹಿಸಿಕೊಡಬೇಕೆಂಬ ನಿರ್ಣಯ ಮಾಡಿರುವರು. ಈ ಸಭೆಗೆ ಮಿಸೆಸ್ ಶಾರದ ಸುಮಂತ ಮೇಥಾ ಬಿ. ಎ.,ರವರು ಅಧ್ಯಕ್ಷರಾಗಿದ್ದು ಭಾರತೀಯರ ಹೆಂಗಸರ ವಿದ್ಯಾಭ್ಯಾಸ ಕ್ರಮದಲ್ಲಿರುವ ಕೊರತೆಗಳನ್ನು ತೋರಿಸಿಕೊಟ್ಟು ಪ್ರತಿ ಹೆಂಗಸರು ತಾವಾಗಿ ಈ ಬಗ್ಗೆ ತಕ್ಕ ಪ್ರಯತ್ನ ಮಾಡಬೇಕೆಂದು ಕೂಡಿದ್ದ ಹೆಂಗಸರನ್ನು ಬೇಳ್ಕೊಂಡರು. ಮಿಸೆಸ್ ಸರೋಜಿನಿ ನ್ಯಾಡುರವರು ಈ ಸಭೆಯಲ್ಲಿ ಹಾಜರಿದ್ದು ಹಿಂದೂಸ್ಥಾನದ ಪ್ರತಿ ಜಾತಿ, ಮತಶಾಖೆಗಳ ಪ್ರತಿ ಹೆಮ್ಮಕ್ಕಳು ವಿದ್ಯಾಭ್ಯಾಸ ಹೊಂದುವ ಹಾಗೆ ಪ್ರಯತ್ನಿಸುವದೇ ವೈಸರಾಯ ಪ್ರಭುಗಳವರಿಗೆ ಕಳುಹಿಸಿಕೊಡುವ ವಿಜ್ಞಾಪನೆಯ ಉದ್ದೇಶವಾಗಿರಬೇಕೆಂದು ಹೇಳಿದರು. ಕಡೆಗೆ ಸಭೆಯಲ್ಲಿ ಹೆಂಗಸರ ಈಗಿನ ವಿದ್ಯಾಭ್ಯಾಸದ ಕ್ರಮದಲ್ಲಿರುವ ನ್ಯೂನತೆಗಳನ್ನು ಕಂಡುಕೊಳ್ಳುವ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸುವದು, ಹೆಂಗಸರ ಬಗ್ಗೆ ಟ್ರೈನಿಂಗ್ ಶಾಲೆ, ಮೋಡೆಲ್ ಸ್ಕೂಲು, ಮತ್ತು ಕೋಲೇಜುಗಳನ್ನು ತೆರೆದು ಪ್ರಾಯ ಬಂದ ಹುಡುಗಿಯರ ಮತ್ತು ವಿಧವೆಗಳ ಬಗ್ಗೆ ಮನೆವಾರ್ತೆ ಸಂಬಂಧವಾದ ಮಾಹಿತಿಗಳನ್ನು ಕೊಡುವ ಏರ್ಪಾಡು ಮಾಡುವದು, ಬಡ ಹೆಂಗಸರ ಮತ್ತು ವಿಧವೆಗಳ ಬಗ್ಗೆ ಶಾಲೆಗಳನ್ನು ತೆರೆದು ಅವರು ಸಭ್ಯರೀತಿಯಿಂದ ಜೀವನ ಮಾಡುವ ಉಪಾಯ ಕಲ್ಪಿಸಿಕೊಡುವದು ಇವೇ ಮೊದಲಾದ ನಿರ್ಣಯಗಳು ಈ ಸಭೆಯಲ್ಲಿ ಮಂಜೂರಾಗಿರುತ್ತವೆ.

ಭರತಖಂಡದ ಸಕಲ ಮಹಮ್ಮದೀಯ ಸಭೆಯು ಕಳೆದ ದಶಂಬರ ತಾ. ೩೦ರಲ್ಲು ಮಿ. ಮಜರುಲ ಹಾಕರವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಅಧ್ಯಕ್ಷರವರು ಕಾಲೋಚಿತವಾದ ಭಾಷಣಕೊಟ್ಟು ದೇವರ ಕಡೆಗಿರುವ ಕರ್ತವ್ಯಗಳ್ಯಾವವು, ಅರಸರ ಕಡೆಗಿರುವ ಕರ್ತವ್ಯಗಳ್ಯಾವವು, ತಮ್ಮ ಕಡೆಗಿರುವ ಕರ್ತವ್ಯಗಳ್ಯಾವವು ಎಂಬ ವಿಷಯಗಳನ್ನು ತೋರಿಸಿ, ಈ ಕರ್ತವ್ಯಗಳನ್ನು ಸರಿಯಾಗಿ ಮಾಡಿದರೆ ಸರಕಾರದವರು ಕೂಡಾ ನಮ್ಮ ಕಡೆಗಿರುವ ತಮ್ಮ ಋಣಬದ್ಧತೆಯನ್ನು ತೀರಿಸುವರೆಂಬದನ್ನು ಸಭಿಕರಲ್ಲಿ ಪ್ರತಿಪಾದಿಸಿದರು. ಅನಂತರ ಅಧ್ಯಕ್ಷರು ಮಹಮ್ಮದೀಯರಿಗೆ ಸೇನೆಯಲ್ಲಿ ಸುಭೇದಾರ-ಮೇಜರ್-ಅಥವಾ ರಶೀಲ್ದಾರ ಮೇಜರ್‌ಗಿಂತ ಮೇಲಿನ ಹುದ್ದೆಯೂ ನೌಕಾವಳಿಯಲ್ಲಿ ಕಲಾಸಿಗಳಿಗಿಂತ ಮೇಲಿನ ಕೆಲಸವೂ ಕೊಡೋಣಾಗುವದಿಲ್ಲವೆಂಬದನ್ನು ಸೂಚಿಸಿ, ಇದಕ್ಕಿಂತ ಮೇಲಿನ ಕೆಲಸಗಳಿಗೂ ಮಹಮ್ಮದೀಯರು ಅರ್ಹರು ಎಂಬದನ್ನು ತನ್ನ ಭಾಷಣದಲ್ಲಿ ತೋರಿಸಿಕೊಟ್ಟರು.

ತಾ. ೩೧ರಲ್ಲು ಪುನಃ ಮಹಮ್ಮದೀಯರ ಸಭೆಯು ಕೂಡಿ ಬಂದು ಗಲಿಬಿಲಿಯಿಂದ ಸಭೆಯು ಅಂತ್ಯವಾಯಿತು. ಈ ದಿನದ ಸಭೆಯಲ್ಲಿ ರಾಜಭಕ್ತಿ, ವೈಸರಾಯ ಹಾರ್ಡಿಂಜ ಪ್ರಭುಗಳವರ ಕೆಲಸದವಧಿಯನ್ನು ಹೆಚ್ಚಿಸುವದು, ಸೆಲ್ಫ್ ಗವರ್ನಮೆಂಟ್ ಸಂಬಂಧದಲ್ಲಿ ಒಂದು ಕಮಿಟಿಯನ್ನು ರೂಪಿಸುವದು,—ಈ ಮಸೂದೆಗಳನ್ನು ಸಭೆಯ ಮುಂದಿಡಲಿಕ್ಕಿದ್ದರು. ಆದರೆ ಸಭಾ ಕೆಲಸ ಪ್ರಾರಂಭವಾಗುವ ಮೊದಲು ಅಲಿಗರದ ಮಿ। ಅಸ್ರತ್ ಮೊಹನಿಯವರು ರಾಜಭಕ್ತಿಯನ್ನು ಸೂಚಿಸುವ ಮಸೂದೆಯನ್ನಲ್ಲದೆ ಇತರ ಮಸೂದೆಗಳನ್ನು ಸಭೆಯ ಮುಂದೆ ತರಕೂಡದೆಂದು ಹೇಳಿದರು; ಪ್ರೆಸಿಡೆಂಟರು ರಾಜಭಕ್ತಿಯನ್ನು ಸೂಚಿಸುವ ಮಸೂದೆಯನ್ನು ಸಭೆಯ ಮುಂದಿಟ್ಟರು. ಆದರೆ ಮಿ। ಮೊಹನಿಯವರು ಎದ್ದುನಿಂತು ಸಭೆಯ ಕೆಲಸಗಳನ್ನು ಮುಂದಿಡೋಣಾಗಬೇಕೆಂಬ ತನ್ನ ಸೂಚನೆಯ ವಿಷಯ ಮೊದಲಾಗಿ ಚರ್ಚಿಸಬೇಕೆಂಗು ಹೇಳಿದರು. ಪ್ರೆಸಿಡೆಂಟರು ಮಿ। ಮೊಹನಿಯರನ್ನು ಕೂತುಕೊಳ್ಳಲು ಹೇಳಿ ರಾಜಭಕ್ತಿಯನ್ನು ಮತ್ತು ವೈಸರಾಯರ ಕಾರ್ಯಭಾರದ ಅವಧಿಯನ್ನು ಹೆಚ್ಚಿಸಬೇಕೆಂದು ಸೂಚಿಸುವ ಮಸೂದೆಗಳನ್ನು ಸಭೆಯ ಮುಂದಿಟ್ಟರು. ಈ ಮಸೂದೆಗಳು ಅನುಮೋದಿಸಲ್ಪಟ್ಟನಂತರ ಮಿ। ಜಿನ್ನರವರು ೩ನೇ ಮಸೂದೆಯನ್ನು ಸಭೆಯ ಮುಂದಿಡಲಿಕ್ಕಿರುವಾಗ ಪುನಃ ಗಲಭೆಯುಂಟಾಗಿ ಈ ಗಲಭೆಯನ್ನು ನಿಲ್ಲಿಸುವದು ಅಸಾಧ್ಯವಾದ್ದರಿಂದ ಸಭಾ ಕೆಲಸವನ್ನು ಅಂದಿಗೆ ಅಂತ್ಯಮಾಡಿದರು.

ಭಾರತೀಯ ಸಂಘ ಸಂಸ್ಕರಣ ಸಭೆಯ ೨೯ನೇ ಅಧಿವೇಶನವು ರಾಷ್ಟ್ರೀಯ ಸಭೆಯ ಮಂಟಪದಲ್ಲಿ ಪ್ರೊಫೆಸರ್ ಕಾರ್ವೆಯವರ ಅಧ್ಯಕ್ಷತೆಯಲ್ಲಿ ತಾ. ೩೦ರಲ್ಲು ಜರಗಿತು. ಮಂಟಪವು ಸರ್ವಜಾತಿಯ ಪ್ರತಿನಿಧಿಗಳಿಂದಲೂ ಸಂದರ್ಶಕರಿಂದಲೂ ತುಂಬಿಹೋಗಿತ್ತು. ಈ ಸಾರಿಯ ಸಭೆಯಲ್ಲಿ ಸುಮಾರು ನೂರಕ್ಕಿಂತಲೂ ಹೆಚ್ಚಿಗೆ ಹೆಂಗಸರು ಹಾಜರಿದ್ದದ್ದೇ ವಿಶೇಷವಾಗಿತ್ತು. ಸರ್. ನಾರಾಯಣ ಚಂದಾವರಕಾರರವರು ಸ್ವಾಗತ ಭಾಷಣದಲ್ಲಿ ಜಾತಿಭೇದಗಳ ಕೆಡಕು, ಸಹಪಂಕ್ತಿ ಭೋಜನ ಮತ್ತು ಆಯಾ ಜಾತಿಗಳೊಳಗೆ ಆಗುವ ವಿವಾಹಗಳಿಗೆ ಪ್ರೋತ್ಸಾಹಕೊಡುವದು ಈ ವಿಷಯಗಳಮೇಲೆ ಒತ್ತಿ ಮಾತಾಡಿದರು. ಜಾತಿಭೇದಗಳನ್ನು ತೆಗೆದುಹಾಕುವದು, ಆಯಾ ಜಾತಿಗಳೊಳಗೆ ವಿವಾಹವಾಡಿಕೊಳ್ಳುವದು, ಹುಡುಗಿಯರ ವಿದ್ಯಾಭ್ಯಾಸ ವಿಧವಾ ಪುನರ್ವಿವಾಹ, ಹುಡುಗಿಯರ ವಿವಾಹಪ್ರಾಯವನ್ನು ೧೬ ವರ್ಷ ವಯಸ್ಸಿಗೆ ಹೆಚ್ಚಿಸುವದು, ಪರದಾ ಪದ್ಧತಿಯನ್ನು ತೆಗೆದುಹಾಕುವದು, ವಿಧವೆಗಳಿಗೆ ವಿದ್ಯಾಭ್ಯಾಸ ಕೊಡುವದು, ಪತಿತರ ಉದ್ಧರಣೆ ಮೊದಲಾದ ವಿಷಯಗಳನ್ನು ಸೂಚಿಸುವ ಮಸೂದೆಗಳು ಸಭೆಯ ಮುಂದೆ ತರಲ್ಪಟ್ಟು ಸಭಿಕರ ಮಂಜೂರಾತಿಯನ್ನು ಹೊಂದಿರುತ್ತದೆ.

ದಶಂಬರ ತಾ. ೩೦ರಲ್ಲು ಸಕಲ ಭಾರತೀಯ ಕ್ರೈಸ್ತ ಸಮ್ಮೇಳನವು ಅಲ್ಲಹಾಬಾದಿನಲ್ಲಿ ರಾಜ ಸರ್. ಹರ್ನಾಮ ಸಿಂಘರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಆಯಾ ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿಯೂ, ಶ್ರೇಷ್ಠ ನ್ಯಾಯವಿಧಾಯಕ ಸಭೆಯಲ್ಲಿಯೂ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ಭಾರತೀಯ ಕ್ರೈಸ್ತ ಪ್ರತಿನಿಧಿಗಳು ಸೇರುವ ಸಂದರ್ಭ ಉಂಟಾಗುವಂತೆ ತಕ್ಕ ಏರ್ಪಾಡು ಮಾಡಬೇಕೆಂಬ ವಿಜ್ಞಾಪನೆಯನ್ನು ವೈಸರಾಯ ಪ್ರಭುಗಳವರಿಗೆ ಮಾಡಬೇಕೆಂಬದಾಗಿಯೂ ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತರಿಗೆ ಇರುವ ತೊಂದರೆಗಳನ್ನು ಹೋಗಲಾಡಿಸುವ ಬಗ್ಗೆ ಮೈಸೂರು ಮಹಾರಾಜರವರಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂಬದಾಗಿಯೂ ಈ ಸಭೆಯಲ್ಲಿ ನಿರ್ಣಯವಾಗಿರುವದು.

ಮದ್ಯಪಾನ ನಿವಾರಣಾ ಸಭೆಯ ೧೨ನೇ ಅಧಿವೇಶನವು ದಶಂಬರ ತಾ. ೩೦ರಲ್ಲು ಸಂಯುಕ್ತ ಸಂಸ್ಥಾನ ಬಹುಮಾನಪಟ್ಟ ರಾಯಬಹದ್ದೂರ್ ಮುನ್ಶಿ ಗೋಕುಲ ಪ್ರಸಾದರವರ ಅಧ್ಯಕ್ಷತೆಯಲ್ಲಿ ಮುಂಬಾಯಲ್ಲಿ ಕೂಡಿ ಬಂದಿರುತ್ತದೆ. ಅಧ್ಯಕ್ಷರವರು ಆಯಾ ಸಂಸ್ಥಾನಗಳ ಮದ್ಯಪಾನ ನಿವಾರಣಾ ಸಂಘಗಳ ಗತವರ್ಷದ ಕೆಲಸಗಳನ್ನು ಪರಿಶೀಲಿಸಿ, ವಿದ್ಯಾಶಾಖೆಯವರು ಶಾಲೆಗಳ ಶಿಕ್ಷ

ಪುಸ್ತಕಗಳಲ್ಲಿ ಈ ಸಂಬಂಧವಾದ ಪಾಠಗಳನ್ನು ಸೇರಿಸುವ ಹಾಗೆ ಪ್ರಯತ್ನ ಮಾಡಬೇಕು, ಜನಭರಿತರಾಗಿರುವ ಪಟ್ಟಣಗಳಲ್ಲಿರುವ ಮದ್ಯದಂಗಡಿಗಳನ್ನು ತೆಗೆಯುವ ಹಾಗೆಯೂ ಹಬ್ಬ ಉತ್ಸವಗಳ ಸಮಯ ಮದ್ಯ ಮಾರದ ಹಾಗೆಯೂ ಆಯಾ ಪಟ್ಟಣದ ಅಧಿಕಾರಗಳನ್ನು ಪ್ರೇರೇಪಿಸಬೇಕು. ದೇಶೀಯ ಮದ್ಯಗಳನ್ನು ವಿದೇಶಿ ಮದ್ಯಗಳಂತೆಯೇ ಮೊಹರು ಹಾಕಿದ ಬಾಟ್ಲಿಗಳಲ್ಲಿ ಮಾರುವಂತೆಯೂ ಮದ್ಯದಂಗಡಿಗಳಲ್ಲಿಯೇ ದೇಶೀಯ ಮದ್ಯಗಳನ್ನು ಕುಡಿಯದಂತೆಯೂ, ಮದ್ಯಗಳನ್ನು ಮಾರುವ ಸಮಯವನ್ನು ಕಡಿಮೆ ಮಾಡುವಂತೆಯೂ ಸರಕಾರದವರನ್ನು ವಿಜ್ಞಾಪಿಸಿಕೊಳ್ಳಬೇಕೆಂಬಿತ್ಯಾದಿ ವಿಷಯಗಳನ್ನು ಅಧ್ಯಕ್ಷರು ತನ್ನ ಭಾಷಣದಲ್ಲಿ ಸೂಚಿಸಿರುವರು

~~~~~

ಅಹಮ್ಮದ್ ನಗರದಲ್ಲಿಯ ಶತ್ರುಗಳ ಪಾಳಯದಲ್ಲಿರುವ ಶತ್ರುಗಳು ಇನ್ನು ಮುಂದಕ್ಕೆ ಕೆಳಗೆ ಬರೆದಿರುವ ಸಾಮಾನುಗಳಿರುವ ರೈಲ್ವೆ ಯಾ ಪೋಸ್ಟಲ್ ಪಾರ್ಸೆಲುಗಳನ್ನು ಸ್ವೀಕರಿಸಕೂಡದೆಂದು ಪ್ರಕಟವಾಗಿದೆ ಟೈಪ್‌ರೈಟರ್ಸ್, ಡ್ಯೂಪ್ಲಿಕೇಟರ್ಸ್, ಫೋಟಗ್ರಾಫ್ ಸಾಹಿತ್ಯಗಳು, ವೈನ್, ಬೀಯರ್, ಸ್ಪಿರಿಟ್ ಮತ್ತು ಮದ್ಯಗಳು, ಹಣ್ಣುಗಳು, ಹಂದೀಬಾಡು, ಕೋಳಿ ಇತ್ಯಾದಿಗಳು, ಟಿನ್‌ಪೆಟ್ಟಿಗೆಗಳಲ್ಲಿ ಮುಚ್ಚಿರುವ ಇತರ ತಿನ್ನುವ ಸಾಮಾನುಗಳು, ಔಷಧಗಳು, ೨೦೦ಕ್ಕಿಂತ ಹೆಚ್ಚಿಗೆ ಚುರುಟು, ೨ ರಾತ್ತಲಿಗಿಂತ ಹೆಚ್ಚಿಗೆ ಹೊಗೆಸೊಪ್ಪು, ೫೦೦ಕ್ಕಿಂತ ಹೆಚ್ಚಿಗೆ ಸಿಗರೇಟು.

~~~~~

ಜಯಪುರದ ಮಹಾರಾಜರವರು ಹಿಂದೂ ಯೂನಿವರ್ಸಿಟಿಗೆ ೫ ಲಕ್ಷ ರೂಪಾಯಿ ದಾನ ಮಾಡಿರುವರು ಈ ಪೈಕಿ ೨ ಲಕ್ಷ ರೂಪಾಯಿ ಕೊಟ್ಟಿರುತ್ತಾರೆ

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಬೆಂಗಳೂರ ಶ್ರೀನಿವಾಸಮಂದಿರದ ಸ್ತ್ರೀಶಾಖಾ ಸಮಾಜದವರು ಈಗ ಈಜಿಪ್ಟಿನ ರಣಭೂಮಿಯಲ್ಲಿ ಕಾದಾಡಿ ತಮ್ಮ ಶೌರ್ಯವನ್ನು ಪ್ರದರ್ಶಿಸುತ್ತಿರುವ ಮೈಸೂರು ಶೀಮೆಯ ಇಂಪೀರಿಯಲ್ ಲ್ಯಾನ್ಸರ್ಸ್ ಯೋಧರ ಸಾಹಾಯಾರ್ಥವಾಗೇರ್ಪಡಿಸಲ್ಪಡುತ್ತಿರುವ ಫಂಡಿಗೆ ದ್ರವ್ಯಸಹಾಯ್ಯ ಮಾಡಲು ಇದೇ ಕಳೆದ ದಶಂಬರ ತಿಂಗಳ ಕಡೇ ವಾರದಲ್ಲಿ ಮಂದಿರದಲ್ಲಿ ಫ್ಯಾನ್ಸಿಸೇಲ್ ಎಂಬ ವಿಚಿತ್ರ ಪದಾರ್ಥಗಳನ್ನು ಮಾರಾಟಕಿಟ್ಟಿದ್ದರು. ಈ ಅಂಗಡಿಗೆ ಬೆಂಗಳೂರ ಯುರೋಪ್ಯ ಮತ್ತು ಸ್ತ್ರೀಯರನೇಕರುಗಳು ವಿಧವಿಧವಾದ ವಿನೋದ ಪದಾರ್ಥಗಳನ್ನು ಕಳುಹಿಸಿಕೊಟ್ಟಿದ್ದರಲ್ಲದೆ ಶ್ರೀಮದ್ಯುವರಾಣಿಯವರು ಮತ್ತು ಬ್ರಿಟಿಷ್ ರೆಸಿಡೆಂಟರ ಪತ್ನಿಯವರೇ ಮೊದಲಾಗಿ ಅನೇಕ ಪ್ರಮುಖ ಸ್ತ್ರೀಯರು ದಯಮಾಡಿ ಮೂರು ದಿನಗಳಲ್ಲೂ ಬಹಳ ಪದಾರ್ಥಗಳನ್ನು ಕ್ರಯಕ್ಕೆ ತೆಗೆದುಕೊಂಡರು. ಇದರಾರಂಭೋತ್ಸವವನ್ನು ಶ್ರೀಮದ್ಯುವರಾಣಿಯವರು ನಡೆಯಿಸುವಾಗ್ಗೆ—"ಸ್ವದೇಶದ ಕೈಗಾರಿಕೆಯ ವಿಚಿತ್ರ ಪದಾರ್ಥಗಳನ್ನು ಕೊಂಡುಕೊಳ್ಳಲು 'ನೂತನಾವಕಾಶವನ್ನುಂಟು ಮಾಡಿಕೊಟ್ಟದು ಸಂತೋಷಾಸ್ಪದವಾಗಿದೆ. ನಮ್ಮ ದೇಶದ ಯೋಧರು ಈಜಿಪ್ಟಿನಲ್ಲಿ ಆಗಲೇ ಒಳ್ಳೆಯ ಹೆಸರನ್ನು ಪಡೆದಿರುವುದನ್ನು ನೀವೆಲ್ಲರೂ ಬಲ್ಲಿರಿ. ಪೂರ್ವಕಾಲದ ಆರ್ಯಮಹಿಳೆಯರು ವೀರಭಟರಿಗೆ ಉತ್ತೇಜನವನ್ನು ಕೊಟ್ಟು ಸಾಹಾಯ್ಯಮಾಡಿರುವ ಅನೇಕ ನಿದರ್ಶನಗಳನ್ನು ನೀವು ಕೇಳಿ ಬಲ್ಲಿರಿ. ಯುದ್ಧದಲ್ಲಿ ದಶರಥನಿಗೆ ಅವನ ಪತ್ನಿಯಾದ ಕೈಕೇಯಿಯು ಹೇಗೆ ಸಾಹಾಯ್ಯ ಮಾಡಿದಳೆಂಬುದನ್ನೂ, ಪೃಥ್ವೀರಾಜನು ಯುದ್ಧಮಾಡಲು ತನ್ನ ಪತ್ನಿಯಿಂದ ಹೇಗೆ ಉತ್ತೇಜನಗೊಳಿಸಲ್ಪಟ್ಟನೆಂಬುದನ್ನೂ, ಸೀತಾಪಹರಣದಲ್ಲಿ ಕ್ಷತ್ರಿಯನ ಕರ್ತವ್ಯ ಕರ್ಮವೇನೆಂಬುದನ್ನು ಮಹಾರಾಜ ಭೋಜನು ಹೇಗೆ ನಿದರ್ಶನಗೊಳಿಸಿದನೆಂಬುದನ್ನೂ ನಾವೆಲ್ಲರೂ ತಿಳಿದಿರುತ್ತೇವೆ. ಅನುಕಾರಣ ಆರ್ಯ ಮಹಿಳೆಯರು ಪೂರ್ವಕಾಲದಿಂದಲೂ ಯುದ್ಧಭಟರ ವಿಚಾರದಲ್ಲೂ, ಜಯಪ್ರದರಾದ ಜನರ ವಿಚಾರದಲ್ಲೂ ಹೇಗೆ ಸಾಹಾಯ್ಯಕರರಾಗಿದ್ದರೆಂಬುವ ವಿಚಾರದಲ್ಲಿ ನಾವು ಲೇಶಮಾತ್ರವೂ ಸಂಶಯಪಡಬೇಕಾದುದಿಲ್ಲವು. ಮತ್ತೂ ಅವರ ಲೋಕೋತ್ತರವಾದ ಮಾರ್ಗವನ್ನನುಸರಿಸುವುದು ನಮ್ಮ ಕರ್ತವ್ಯ ಕರ್ಮವಾಗಿದೆ. ನಮ್ಮ ಸ್ತ್ರೀ ಸಮಾಜದ ಸ್ಥಿತಿಯನ್ನುತ್ತಮಪಡಿಸುವುದಕ್ಕಾಗಿ ನೀವು ಮಾಡುತ್ತಿರುವ ಸತ್ಪ್ರಯತ್ನದಲ್ಲಿ ಯಾವ ಪ್ರತಿಬಂಧಕವೂ ಉಂಟಾಗುವುದಿಲ್ಲವು ನಮ್ಮ ಇತರ ನಾರೀಮಣಿಯರು ನಿಮ್ಮ ಮಾರ್ಗಾವಲಂಬಿಗಳಾಗುವರೆಂದು ನಿರೀಕ್ಷಿಸುತ್ತೇನೆ ನಮ್ಮ ಯೋಧರು ಜಯಶೀಲರಾಗಲೆಂದೂ, ನಮ್ಮ ಬ್ರಿಟಿಷ್ ಸಾಮ್ರಾಜ್ಯಕ್ಕೆ ಶೀಘ್ರದಲ್ಲಿ ಜಯಲಕ್ಷ್ಮಿಯು ಪ್ರಸನ್ನಳಾಗಲೆಂದೂ ಪ್ರಾರ್ಥಿಸುತ್ತೇನೆ" ಎಂದು ಅಪ್ಪಣೆಕೊಡಿಸಿ ಆ ಪದಾರ್ಥಗಳ ವಿಕ್ರಯಕ್ಕುಪಕ್ರಮಿಸಿದರು.

~~~~~

ದಕ್ಷಿಣ ಕನ್ನಡ.

~~~~~

ಉಡುಪಿ:— ಇದೇ ತಿಂಗಳ ತಾ ೨ನೇ ರಾತ್ರೆ ಇಲ್ಲಿ ಭೀಮನಕಟ್ಟೆ ಮಠದ ಜಗಲಿಯಲ್ಲಿ ಮಲಗಿದ್ದ ಒಂದು ಯಾತ್ರೆ ಹೆಂಗಸಿನ ಮಗುವಿನ ಕೈಯಲ್ಲಿದ್ದ ಸುಮಾರು ೩ ಪವನಿನ ಕಾಪನ್ನು ಯಾರೋ ಒಬ್ಬ ಕಳ್ಳನು ಕಿತ್ತುಕೊಂಡು ಹೋದನು. ಇದರಿಂದ ಜಾತ್ರೆ ಸಂಬಂಧ ಕಳವುಗಳಿಗೆ 'ಅಂಕುರಾರ್ಪಣೆ' ಮಾಡಿದಂತಾಯಿತು. ಯಾತ್ರಿಕರು ಜಾಗ್ರತೆಯಲ್ಲಿರುವುದು ಒಳ್ಳೇದು

ಈ ತಾ ೧ಲ್ಲು ಕೆಲವು ಮಿಶ್ಶನ್ ಹುಡುಗರು ಒಂದು ಮನೆಯಲ್ಲಿ ಗನ್ಪಾಉಡರ್ ನಮೂನೆಯ ಒಂದು ಜೈನಂಡೆಯನ್ನು ಒಡೆಯುತ್ತಿರುವಾಗ ಅದು ಸಿಡಿದು ಒಬ್ಬನಿಗೆ ಬಹಳ ಜಖಂ ಆಗಿ ಅವನು ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುವನು

ಈ ತಾ. ೪ಲ್ಲು ಪಿ. ರಾಮರಾವ್ ಎಂಬ ಹುಡುಗನು ಕಿನ್ನಿಮುಲ್ಕಿ ಸಮೀಪ ಸ್ಯಾಕಲನ್ನು ಅತಿ ಜೋರಾಗಿ ಓಡಿಸುತ್ತಿರುವಾಗ ಒಬ್ಬ ಜಾಡರ ಹುಡುಗಿಯ ಮೇಲೆ ಹಾದು ಬಹಳ ಜಖಮಾಗಿರುವದು. ಹುಡುಗಿಯು ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುವಳು.

ಇಲ್ಲಿ ಜಾತ್ರೆ ಸಮಯದಲ್ಲಿ ಪ್ರತಿ ಮಠಗಳವರು ತಮ್ಮ ಮಠಗಳ ಎದುರು ಹಂದರಗಳನ್ನು ಹಾಕಿ ವಿಧವಿಧವಾಗಿ ಅಲಂಕರಿಸುವ ಸಂಪ್ರದಾಯವಿರುತ್ತಿತ್ತು. ಉತ್ಸವಾದಿಗಳನ್ನು ನೋಡತಕ್ಕವರಿಗೆ, ವಿಶೇಷವಾಗಿ ಸ್ತ್ರೀಯರಿಗೆ, ಈ ಚಪ್ಪರಗಳು ನಿಂತುಕೊಳ್ಳುವದಕ್ಕೆ ಅನುಕೂಲವಾಗುತ್ತಾ ಇತ್ತು. ಇತ್ತಲಾಗೆ ಕೆಲವು ಮಠಗಳವರು ತಮ್ಮ ಮಠಗಳ ಅಂಗಳಗಳನ್ನು ಕಾಫಿ ಹೊಟೆಲುಗಳಿಗೂ, ಇತರ ವ್ಯಾಪಾರದವರಿಗೂ ಬಾಡಿಗೆಗೆ ಕೊಟ್ಟುಬಿಡುತ್ತಾರೆ. ಇದರಿಂದ ಜನರಿಗೆ ತುಂಬ ಅಡಚಣೆಯಾಗುವದರಲ್ಲಿ ಸಂದೇಹವಿಲ್ಲ.

~~~~~

ಪುತ್ತೂರು:— ಇದೇ ೧೯೧೬ನೇ ಇಸವಿಯ ಉಪ್ಪಿಂಗಡಿ ತಾಲೂಕಿನ ವರುಷಾವಧಿ ಜಮಾಬಂದಿಯು ಪುತ್ತೂರು ಡಿವಿಜನ್ ಡಿಪ್ಯುಟಿ ಕಲೆಕ್ಟರವರಾದ ಮ. ರಾ. ರಾ. ಕೆ. ರಾಮವರ್ಮರಾಜರವರಿಂದ ಇದೇ ಜನವರಿ ತಾ. ೧೦ರಿಂದ ತಾ ೧೬ ಬೆಳ್ಳಾರೆ, ತಾ. ೧೮ರಿಂದ ೨೫ರ ವರೆಗೆ ಉಪ್ಪಿನಂಗಡಿ, ತಾ ೨೭ರಿಂದ ಫೆಬ್ರವರಿ ತಾ. ೩ರ ವರೆಗೆ ಬೆಳ್ತಂಗಡಿ, ತಾ ೫ರಿಂದ ೧೧ರವರೆಗೆ ಪುತ್ತೂರು ಮೊಕ್ಕಾಂಗಳಲ್ಲಿ ನಡಿಸಲಾದೀತೆಂತಲೂ ರೈತರು ಹಾಲಹವಾಲೆಗಳನ್ನು ಆ ಸಮಯ ಹೇಳಿಕೊಳ್ಳಬೇಕೆಂತಲೂ ಪ್ರಕಟಿಸಿರುವರು.

ಡಿಲ್ಲಿ ದರ್ಬಾರ ಜ್ಞಾಪಕಾರ್ಥವಾಗಿ ಇಲ್ಲಿಯ ಸಾಹುಕಾರ ಮ ರಾ ರಾ. ಪಾಣೆಮಂಗಳೂರು ವಾಸ್ತವ್ಯಾಕರವರು ಇಲ್ಲಿಯ ಪಂಚಮರ ಶಾಲೆಯ ೩೪ ವಿದ್ಯಾರ್ಥಿಗಳಿಗೆ ಒಹದ್ದೂರ ಟೊಪ್ಪಿಗಳನ್ನು ಹಂಚಿದರು. ವಿದ್ಯಾರ್ಥಿಗಳು ಟೊಪ್ಪಿಗಳನ್ನು ಹಾಕಿಕೊಂಡು ಸದರಿಯವರ ಅಂಗಡಿಯ ಎದುರು ಹಾಡುಗಳನ್ನು ಹಾಡಿ ಸಾಹುಕಾರನ್ನು ವಂದಿಸಿ ಸಲಾಂ ಮಾಡಿ ಪೇಟೆಯಿಂದ ಮೆರವಣಿಗೆ ಮಾಡಿದರು

~~~~~

ಮಂಗಳೂರು.

~~~~~

ಇದೇ ೧೯೧೬ನೇ ಎಪ್ರೀಲ್ ೧ಕ್ಕೆ ಆರಂಭವಾಗಿ ೧೯೧೭ನೇ ಇಸವಿ ಮಾರ್ಚಿ ಆಖೈರಿಗೆ ಅಂತ್ಯವಾಗುವ ವರುಷದ ಬಾಬತು ಶೆರಾಬು, ಅಫೀಮು, ಗಾಂಜಾ ಅಂಗಡಿಗಳು ಇದೇ ಬರುವ ಫೆಬ್ರವರಿ ತಾ ೩ರಲ್ಲು ಬೆಳ್ತಂಗಡಿ, ತಾ. ೪ಲ್ಲು ಕುಂದಾಪುರ, ತಾ ೫ ಪುತ್ತೂರು, ತಾ. ೭ ಉಡ್ಪಿ, ತಾ ೯ ಮಂಗಳೂರು, ತಾ. ೧೦ ಕಾರ್ಕಳ, ತಾ. ೧೮ರಲ್ಲು ಕಾಸರಗೋಡು ಈ ಮೊಕ್ಕಾಂಗಳಲ್ಲಿ ಆಯಾಯ ಡಿವಿಜನ್ ಡಿಪುಟಿ ಕಲೆಕ್ಟರವರಿಂದ ಏಲಂ ಮಾಡೋಣಾಗುವದು.

ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಸರಕಾರಿ ಉದ್ಯೋಗವನ್ನು ಪಡೆಯಬೇಕೆಂದಿರುವವರು ಮಳೆಯಾಲ ಮತ್ತು ಕನ್ನಡ ಭಾಷೆಗಳಲ್ಲಿ ಪರೀಕ್ಷೆ ಕೊಡಬೇಕೆಂಬ ಡಿಸ್ಟ್ರಿಕ್ಟ್ ಕಲೆಕ್ಟರರ ಅಭಿಪ್ರಾಯಕ್ಕೆ ಮದರಾಸ್ ಸರಕಾರದವರು ಒಪ್ಪಿಗೆ ಕೊಟ್ಟಿರುತ್ತಾರೆಂತ ತಿಳಿಯುತ್ತೇವೆ.

ಉಡ್ಪಿ ಪರ್ಯಾಯೋತ್ಸವ ಸಂಬಂಧ ಇಲ್ಲಿಯ ಡಾಕ್ಟರ್ ನರಸಪ್ಪಯ್ಯನವರು ಸ್ಪೆಶ್ಯಲ್‌ಡ್ಯೂಟಿಯ ಮೇಲೆ ಉಡ್ಪಿಗೆ ಹೋಗಿರುವರು.

ಒಂದರೆ ಮೊಕದಮೆ ಸಂಬಂಧ ಉಳ್ಳಾಲದ ಮಾಪಿಳ್ಳೆಯೊಬ್ಬನ ಮನೆಯನ್ನು ಪೋಲಿಸಿನವರು ಜಪ್ತಿಮಾಡುವಾಗ ಆ ಮನೆಯಲ್ಲಿ ಕಳವಿನ ಕಾಫಿ ಇತ್ಯಾದಿಗಳು ದೊರಕಿರುವದೆಂತ ಕೇಳುತ್ತೇವೆ.

ಬಾಸೆಲ್ ಮಿಶ್ಶನ್ ನೇಯುವ ಕಾರ್ಖಾನೆಯಲ್ಲಿ ಬನಿಯೆನುಗಳನ್ನು ಕಳವು ಮಾಡಿದ್ದರೆಂದು ಆಪಾದಿಸಲ್ಪಟ್ಟಿದ್ದ ಕಾರ್ಖಾನೆಯಲ್ಲಿ ನೇಯುವ ಕೆಲಸದಲ್ಲಿದ್ದ 'ದಾನಿಯೆಲ್ ಸಾಂತಪ್ಪನಿಗೆ ನಾಲ್ಕು ತಿಂಗಳ ಕಠಿಣ ಸಜೆಯೂ ಬೆಂಜಮಿನ್ ಅಧಾಮನಿಗೆ ೪ ತಿಂಗಳ ಕಠಿಣ ಸಜೆಯೂ ಸದರಿ ಕಾರ್ಖಾನೆಯ ಮೆನೇಜರರ ಗಾಡಿಯವನಾದ
~~~~~

ಹೊಲೆಯ ಕೊರಗನಿಗೆ ೨ ತಿಂಗಳ ಕಠಿಣ ಸಜೆಯೂ ವಿಧಿಸೋಣಾಗಿರುತ್ತದೆ. ಸದರಿ ಕಾರ್ಖಾನೆಯ ಜರ್ಮನ್ ಮೆನೇಜರರು ಹೋಗುತ್ತಲೇ ಹೆಚ್ಚಿನ ಅನುಭವವಿಲ್ಲದ ಸ್ವಿಸ್ ಮೆನೇಜರರು ಬಂದದ್ದರಿಂದ ಕೆಲಸಗಾರರಲ್ಲಿ ಕೆಲವರಿಗೆ ಕಳವು ಮಾಡುವ ಅನುಕೂಲ ಉಂಟಾಯಿತು. ಇಂಥವರು ರಾತ್ರಿಕಾಲ ಆಫೀಸಿನ ಕಿಟಕಿಯ ಕನ್ನಡಿಯನ್ನು ಮೆಲ್ಲನೆ ತೆಗೆದು ಒಳಗೆ ಹೋಗಿ ನೂರಾರು ರೂಪಾಯಿ ಕ್ರಯಬಾಳುವ ಬನಿಯನುಗಳನ್ನು ಕದ್ದುಕೊಂಡು ಕುಂಬಳೆ, ಕಾಸರಗೋಡು, ಕಲಿಕೋಟೆ ಮೊದಲಾದ ಸ್ಥಳಗಳಿಗೆ ಹೋಗಿ ಕಳವು ಬನಿಯನುಗಳನ್ನು ಅಗ್ಗವಾಗಿ ಮಾರಿ ದೊರಕಿದ ಹಣದಿಂದ ಮೆರೆಯ ಪ್ರಾರಂಭಿಸಿದರು. ಒಂದು ದಿನ ರಾತ್ರಿ ಸುಮಾರು ಸಾವಿರ ರೂಪಾಯಿ ಕ್ರಯ ಬಾಳುವ ಬನಿಯನಿನ ಒಂದು ಕಟ್ಟು ಕಾಣೆಯಾಗಿ ಹೋಗಿದ್ದಿತು. ಅದನ್ನು ಕಾರ್ಖಾನೆಯ ಮೆನೇಜರರು ಕಂಡು ಅನುಮಾನದ ಮೇಲೆ ಕೆಲಸಗಾರರಲ್ಲಿ ಕೆಲವರನ್ನು ಕೆಲಸದಿಂದ ತೆಗೆದು ಹಾಕಿದರು. ಈ ಪೈಕಿ ಬೆಂಜಮಿನ್ ಆದಾಮನೆಂಬವನು ತನಗೆ ಪುನಃ ಕೆಲಸ ಸಿಕ್ಕಬೇಕೆಂಬ ಆಶೆಯಿಂದ ಕಾರ್ಖಾನೆಯ ಮೆನೇಜರರ ಬಳಿಗೆ ಬಂದು ದಾನಿಯೇಲ್ ಸಾಂತಪ್ಪ ಮತ್ತು ತಾನು ಕೂಡಿ ಬನಿಯನುಗಳನ್ನು ಮಾರಿದ ಸ್ಥಳಗಳನ್ನು ಹೇಳಿದ್ದರಿಂದ ಪೋಲೀಸಿನವರು ಈ ವಿಷಯ ತನಿಖೆ ನಡಸಿ ಕಾಸರಗೋಡು ಮೊದಲಾದ ಸ್ಥಳಗಳಲ್ಲಿ ಕೆಲವು ಸಾಹುಕಾರರೂ ಮಾನ್ಯ ಗೃಹಸ್ಥರೂ ಕೊಂಡ ಈ ಬನಿಯನುಗಳನ್ನು ಹಿಡಿದು ಆಪಾದಿತರಿಬ್ಬರನ್ನೂ ವಿಚಾರಣೆಗೆ ಗುರಿಮಾಡಿದರು. ಈ ಮಧ್ಯೆ ಪೋಲೀಸಿನವರ ತನಿಖೆ ಕಾಲ ಕಾರ್ಖಾನೆಯ ಮೆನೇಜರರ ಗಾಡಿ ಹೊಡೆಯುವ ಕೊರಗನಲ್ಲಿ ಕೆಲವು ಡಜನ್ ಬನಿಯನುಗಳು ಸಿಕ್ಕಿದ್ದರಿಂದ ಅವನನ್ನೂ ವಿಚಾರಣೆಗೆ ಗುರಿಮಾಡಿದರು. ಆಪಾದಿತರಲ್ಲಿ ಕಲ್ಲಿಕೋಟೆಯವನೊಬ್ಬನ ತನಿಖೆಯು ಬಾಕಿಯಿದೆ

ಮು. ರಾ. ಕಚ್ಚಾಡ ರಾಮರಾಯರ ಮನೆಯಲ್ಲಿ ಕೆಲಸಕ್ಕಿದ್ದ ಉಚ್ಚಿಲದ ಬೋವಿ ಮಂಜಪ್ಪನೆಂಬವನು ಅವರ ಮನೆಯಿಂದ ಒಂದು ಕ್ಷೌರಕತ್ತಿ ಕಳವು ಮಾಡಿ ಮುಲ್ಕಿ ಕಡೆ ಪರಾರಿಯಾಗಿದ್ದನು. ಪೋಲೀಸಿನವರು ಸದರಿ ಮಂಜಪ್ಪನ ಪತ್ತೆಮಾಡಿ ವಿಚಾರಣೆಗೆ ಗುರಿಪಡಿಸಿದ್ದಲ್ಲಿ ಮೇಜಿಸ್ಟ್ರೇಟರು ಆಪಾದಿತನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ನೋಟುಗಳನ್ನು ಮಠಾಯಿಸುವಾಗ ಸಾಹುಕಾರರನ್ನು ಸುಲಿಯುವ ಒಂದು ಹೊಸ ಕ್ರಮವು ಇಲ್ಲಿ ತಲೆದೋರಿರುವದೆಂಬ ವಾರ್ತೆಯು ಕೇಳಿಸಿಕ್ಕುವದರಿಂದ ಸಾಹುಕಾರರು ಈ ವಿಷಯ ಜಾಗರೂಕತೆಯಿಂದ ಇರಬೇಕಾಗಿರುವದು. ಇದೇ ತಾ ೬ನೇ ಸೋಮವಾರ ಬಿಳಿ ಪೋಷಾಕು, ಚಿನ್ನದ ವಾಚುಸರಪಣಿ ಇತ್ಯಾದಿ ದರಿಸಿದ, ಜಾತಿಯಲ್ಲಿ ಕ್ರೈಸ್ತಮತದವನಂತೆ ತೋರುವ ಒಬ್ಬ ಮನುಷ್ಯನು ಹಂಪನಕಟ್ಟೆಯಲ್ಲಿರುವ ಇಕ್ವಿಟಿ ಸ್ಟೋರಿಗೆ ಬಂದು ಸದರಿ ಸ್ಟೋರಿನ ಮ್ಯಾನೇಜರೊಡನೆ ಸವಿನುಡಿಗಳನ್ನಾಡಿ ಕಡೆಗೆ ಹತ್ತತ್ತು ರೂಪಾಯಿಗಳ ೬ ಕರೆನ್ಸಿ ನೋಟುಗಳನ್ನು ಚೀಲದಿಂದ ತೆಗೆದು ಅದನ್ನು ಮಠಾಯಿಸಿಕೊಡಬೇಕೆಂದು ಹೇಳಿದನಂತೆ. ಆದರೆ ಸದರಿ ಸಾಹುಕಾರರು ತನ್ನಲ್ಲಿ ಹಣವಿಲ್ಲವೆಂದು ಹೇಳಿದರೂ ಆ ಮನುಷ್ಯನು ಹೇಗಾದರೂ ತನಗೆ ಹಣ ಮಠಾಯಿಸಿ ಕೊಡಬೇಕೆಂದು ಒತ್ತಾಯ ಪಡಿಸಿದರಿಂದಲೂ ಅವನ ಸವಿನುಡಿಗಳಿಗೆ ಮರುಳಾಗಿಹೋದ ರಿಂದಲೂ ತಾನೇ ಮತ್ತೊಂದು ಅಂಗಡಿಗೆ ಹೋಗಿ ೬ ನೋಟುಗಳನ್ನು ಮಠಾಯಿಸಿ ೬೦ ರೂಪಾಯಿಗಳನ್ನು ತಂದುಕೊಟ್ಟಲ್ಲಿ ಆ ಮನುಷ್ಯನು ತಾನು ಮಠಾಯಿಸಲು ೭ ನೋಟುಗಳನ್ನು ಕೊಟ್ಟಿದ್ದೇನೆಂದು ಹೇಳಿ ತಿರಿಗಿ ೧೦ ರೂಪಾಯಿಗಳನ್ನು ಕೇಳಿದನಂತೆ. ಸದರಿ ಸಾಹುಕಾರರು ಬೆಚ್ಚಿಬಿದ್ದು ಮಠಾಯಿಸಲು ಆರೇ ನೋಟು ಕೊಟ್ಟದೆಂಬದನ್ನು ವಿಧವಿಧವಾಗಿ ಖಚಿತಪಡಿಸ ನೋಡಿದರೂ ಆ ಮನುಷ್ಯನು ಒಪ್ಪದೆ ಸಾಹುಕಾರರ ಚೀಲ ಜಪ್ತಿ ಮಾಡಲು ಯತ್ನಮಾಡಿದ್ದರಿಂದ ಸದರಿ ಸಾಹುಕಾರರು ಸಿಟ್ಟುಗೊಂಡು ಈ ವಿಷಯವನ್ನು ಪೋಲಿಸಿಗೆ ಮರದಿಮಾಡಲಿಕ್ಕೆ ಜನ ಕಳುಹಿಸುವಷ್ಟರಲ್ಲಿ ಆ ಮನುಷ್ಯನು ಪರಾರಿಯಾಗಿ ಹೋದನೆಂತ ಕೇಳುತ್ತೇವೆ

ಬಂದರದಲ್ಲಿ ಗೋಣಿಚೀಲಗಳನ್ನು ಕಳವು ಮಾಡುತ್ತಿದ್ದ ಮರವೂರು ಇದ್ದಿನಬ್ಬ ಬ್ಯಾರಿಗೆ ೬ ವಾರಗಳ ಸಜಾ ವಿದಿಸೋಣಾಗಿರುತ್ತದೆ.

ಮ| ರಾ| ಬೋಳಾರ ಕೂಸಯ್ಯನವರು ಇಲ್ಲಿಯ ನಿರಾಶ್ರಿತ ಜನರ ರೀಡಿಂಗ್‌ಕ್ಲಬ್ ಯಾನೆ ಮಿತ್ರಮಂಡಳಿಗೆ ಕೆಲವು ವಾರ ಪತ್ರಿಕೆಗಳನ್ನೂ ಮಾಸಪತ್ರಿಕೆಗಳನ್ನೂ ಉಚಿತವಾಗಿ ತರಿಸಿಕೊಡುತ್ತಿದ್ದಾರೆಂತ ತಿಳಿಯುತ್ತೇವೆ.

ಉಳ್ಳಾಲದ ತೋಯಿ ಹೆಂಗಸು ಮಗಳು ಸುಮಾರು ೧೪ ವರ್ಷ ವಯಸ್ಸಿನ ತಂಕು ಎಂಬ ಹುಡುಗಿಯು ಈಚೆಗೆ ಕಾಣೆಯಾಗಿದ್ದಳೆಂಬ ರಿಪೋರ್ಟು ಆಗಿತ್ತು. ಈ ವಿಷಯ ತಾಲೂಕು ಪೋಲಿಸ್ ಸ್ಟೇಶನಿನವರು ತಕ್ಕ ತನಿಖೆ ನಡಿಸಿ, ತಿಮ್ಮ ಬೈದನ ಮಗ ಮಂಜಪ್ಪ ಮತ್ತು ಬೋಳ್ಕ ತ್ಯಾಂಪು ಸೆಟ್ಟಿ ಅಳಿಯ ಸಂಕಪ್ಪ ಸೆಟ್ಟಿ ಎಂಬ ಇಬ್ಬರನ್ನು ಜಪ್ಪಿನಲ್ಲಿ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಈ ಇಬ್ಬರು ಆ ಹುಡುಗಿಯನ್ನು ಬಲತ್ಕಾರದಿಂದ ಜಪ್ಪಿಗೆ ಒಯ್ದಿದ್ದರು ಎಂತ ತಿಳಿಯುತ್ತೇವೆ.

ತಿರುಪತಿಯ ಕಡೆ ಹೋಗಿದ್ದ ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರವರು ತಾ. ೩ರಲ್ಲು ಇಲ್ಲಿಗೆ ಹಿಂತಿರುಗಿ ಬಂದಿರುವರು.

ಮಂಗಳೂರು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ಪಿ. ಎಸ್ ಲೋಬೊರವರು ಇತರ ಡ್ಯೂಟಿಯ ಮೇಲಿರುವದರಿಂದ ಕಲೆಕ್ಟರ ಆಫೀಸಿನ ೩ನೇ ಆಕ್ಟಿಂಗ್ ಕರಸ್ಪೋಂಡೆಂಟ ಕ್ಲಾರ್ಕರಾದ ಮ. ರಾ. ಎ. ತಿಮ್ಮಪ್ಪ ಪೊಂಜರವರು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿತ್ತಾರೆ.

ಲೇಂಡ್ ರಿಕೋರ್ಡ್ಸ ತಹಸೀಲದಾರರಾದ ಮ| ರಾ| ಎಚ್ ಶಂಕರರಾಯರಿಗೆ ಹೆಚ್ಚಿಗೆ ೧೫ ದಿವಸಗಳ ಪ್ರಿವಿಲೇಜ್ ರಜೆ ಕೊಡೋಣಾಗಿದೆ.

ಕಲೆಕ್ಟರ ಆಫೀಸಿನ ೧ನೇ ಕರಸ್ಪೋಂಡೆಂಟ ಕ್ಲಾರ್ಕರಾದ ರಾ| ಪಿ. ಸುಂದರರಾಯರು ಒಂದುವರೆ ತಿಂಗಳ ರಜೆ ತಕ್ಕೊಂಡಿರುವದರಿಂದ ಕಲೆಕ್ಟರ ಆಫೀಸಿನ ೨ನೇ ಆಕ್ಟಿಂಗ್ ಎಕೌಂಟಾಂಟರಾದ ರಾ| ಪಿ. ಪಟ್ಟಾಭಿರಾಮರಾಯರು ೧ನೇ ಕರಸ್ಪೋಂಡೆಂಟ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ಜನವರಿ ತಾ. ೧೦ ಮೂಡಬಿದ್ರೆ, ತಾ. ೧೧-೧೩ ಕಾರ್ಕಳ, ತಾ. ೧೪-೧೫ ಬೈಲೂರು, ತಾ. ೧೬-೧೮ ಉಡ್ಪಿ, ತಾ. ೧೯-೨೧ ಕುಂದಾಪುರ, ತಾ. ೨೨-೨೩ ಬೈಂದೂರು, ತಾ. ೨೪-೨೫ ಕಿರಮಂಜೇಶ್ವರ, ತಾ. ೨೬-೨೭ ಬ್ರಹ್ಮಾವರ, ತಾ. ೨೮-೨೯ ಮುಲ್ಕಿ, ಈ ರೀತಿ ಸರ್ಕೀಟು ಬೆಳಸಿ ತಾ. ೩೦ರಲ್ಲು ಮಂಗಳೂರಿಗೆ ಹಿಂತಿರಳಿ ಬರುವರು.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೬ ಪ್ಲೇಗು ಮರಣಗಳಿದುವು.

ರಾಮ ಭಂಡಾರಿಯವರ ಕೊಲೆ ಮೊಕದ್ದಮೆಯ ತನಿಖೆಯು ಇದೇ ತಾ. ೮ರಲ್ಲು ಪ್ರಾರಂಭವಾಗಿ ಪ್ರೊಸಿಕ್ಯೂಶನ್ ಕಡೆಯ ಸಾಕ್ಷಿಗಾರರ ವಿಚಾರಣೆಯು ನಡೆಯುತ್ತಿದೆ.

ನೋಟೀಸು.

ಕೆನರಾ ಹ್ಯಾಸ್ಕೂಲು ಎಮೆಚ್ಯೂರ್ ಡ್ರಾಮೆಟಿಸ್ಟ್ಸರು ಪೂರ್ಣ ಹೊಸದಾಗಿ ತಯಾರಿಸಿದ ಜುಗಲ್ ಜುಗಾರಿ ಎಂಬ ಕರ್ನಾಟಕ ಸಂಗೀತ ನಾಟಕವನ್ನು ಸದರಿ ಶಾಲೆಯ ಭುವನೇಂದ್ರ ಹೋಲಿನಲ್ಲಿ ತಾ. ೧೫ನೇ ಜನವರಿ ೧೯೧೬ನೇ ಇಸವಿ (ಪುಷ್ಯ ಶು ೧೧) ಶನಿವಾರ ರಾತ್ರೆ ೯-೩೦ ಘಂಟೆಗೆ ಶುರುಮಾಡಿ ಆಡಿ ತೋರಿಸುವೆವು. ಇದು ಹೊಸ ಸಿನೆರಿಗಳು ಮತ್ತು ಹಾಸ್ಯ ದುಃಖ ಮತ್ತು ಸಂತೋಷ ವಗೈರೆ ಎಲ್ಲ ರಸಗಳುಳ್ಳ ಗದ್ಯ ವ ನವೀನ ರಾಗಗಳ ಚಲೋ ಅನೇಕ ಪದ್ಯಗಳುಳ್ಳದ್ದಾಗಿ ನೇತ್ರ, ಕರಣ, ಮನಸ್ಸು ವ ಅಂತಃಕರಣ ಇವುಗಳಿಗೆ ಅತೀ ರಂಜನಕರವಾಗಿರುವುದು. ಮತ್ತು ಗ್ರಹಕೃತ್ಯದ ಸ್ತ್ರೀ ಪುರುಷರು ಮತ್ತು ಮಕ್ಕಳು ಅಂಗೀಕರಿಸಬೇಕಾದ ಧರ್ಮಾಚರಣೆ ಕೂಡಾ ಪ್ರದರ್ಶಿಸುವುದು. ಟಿಕೇಟು ದರ:—ಪುರುಷರಿಗೆ ಮತ್ತು ಕುಲೀನ ಸ್ತ್ರೀಯರಿಗೆ:—ಸ್ಪೆಶ್ಯಲ್ ಕ್ಲಾಸ ಕುರ್ಚಿಗೆ ರೂ. 2—0—0; ೧ನೇ ಕ್ಲಾಸ್ ಕುರ್ಚಿಗೆ ರೂ. 1—8—0; ೨ನೇ ಕ್ಲಾಸ್ ಕುರ್ಚಿಗೆ ರೂ. 1—0—0; ೩ನೇ ಕ್ಲಾಸ್ ಬೆಂಚಿಗೆ ರೂ 0—8—0; ೭ ವರುಷಗಳಿಕ್ಕಿಂತ ಕಡಿಮೆ ಕಡಿಮೆ ಪ್ರಾಯದ ಮಗುವಿಗೆ ಆಯಾಯ ಕ್ಲಾಸಿನ ಫೀಸಿನ ಅರ್ಧ

ಜೇನಸು ಧಾರಣೆ.

ಮಸೂರಿ ಹೊಸ ಅಕ್ಕಿ .	5— 4—0	5—12—0
ಗಾಡಿ ರಾಶಿ ಹೊಸ ,, .	4—14—0	4—15—0
ಗುಡ್ಡು ,, ,,	5— 2—0	5— 7—0
ಅನ್ವಲ್ ಬೆಳ್ತಿಗೆ ,, .	5—12—0	6— 0—0
ಗುಡ್ಡು ಬೆಳ್ತಿಗೆ ,, .	5— 6—0	5— 8—0
ರಂಗೂನು ಬೆಳ್ತಿಗೆ ಗೋಣಿ ೧ರ	11— 4—0	10—12—0
ಗೋದಿ ಗೋಣಿ ೧ರ .	13— 8—0	14— 0—0
ಹುರುಳಿ ಗೋಣಿ ೧ರ ...	6— 0—0	7— 0—0
ಕಡಲೆ ಗೋಣಿ ೧ರ ಬೊಂಬ್ಯ	9— 8—0	10—0—0
ತೊಗರಿ ಗೋಣಿ ೧ರ ...	12— 6—0	13— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 8—0
ಉದ್ದು ಗೋಣಿ ೧ರ .	11— 8—0	11—12—0
ಊರುಬೆಲ ಖಂಡಿ ೧ರ ...	... ...	47— 8—0
ಉಪ್ಪು ಗೋಣಿ ೧ರ . .	3— 2—0	3— 4—0
ಖೊಬ್ಬ ಖಂಡಿ ೧ರ . .	95— 0—0	105— 8—0
ಖೊಬ್ಬರಿಹಿಂಡಿ ಖಂಡಿ ೧ರ .	24—8—0	25— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	25— 0—0	32— 8—0
ಖೊಬ್ಬ ಎಣ್ಣೆ ಮುಡಿ ೧ರ. .	6—10—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ) . . .		4—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	4— 9—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ.	4—12—0	4—13—0
ಕಾಫಿ ಖಂಡಿ ೧ರ . .	240— 0—0	262— 0—0
ಹೊಸಬಿಳಿಗೋಟು ಖಂಡಿ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ		2—15—0
ಕಬ್ಬಿಣ ಖಂಡಿ ೧ರ		60— 0—0
ತಾಂಬ್ರ ತಗಡು ಮುಡಿ ೧ರ.		20— 0—0
ತಾಂಬ್ರ ಪಾತ್ರೆಗಳು ಮುಡಿ ೧ರ. . . .		22— 0—0
ಚೀನಿ ಬೆಳ್ಳಿ ಕೇರು ೧ರ.		18—12—0
ಪಚ್ಚೆಹೆಸರು ಮುಡಿ ೧ರ .	5—12—0	5—14—0

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪ್ರೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟ್ಯಾಂಪ್ ಡ್ಯೂಟಿ, ನೋಟು, ವಿಲ್ಲಾಪ, ಬಾಡಿಗೆ ಚೀಟು, ರಿಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ಮೊಕಾಬಿಲೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವ್ಯಕ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೋಕೇಟು ಬೂಕು

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4

ವ್ಯಾಪಾರಸ್ಥರಿಗೂ ರಖ್ಖಂತಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕುಟುಂಬ ಸಂಜೀವಿನೀ.

ಛಳಿಕಾಲದಲ್ಲಿ ತಲೆದೋರುವ ಶೀತ, ಕೆಮ್ಮು, ನೆಗಡಿ, ಶೀತಬೇಧಿ, ವಾತರೋಗಗಳಿಗೆ ಯುಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಮೈಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆ ನೋವು, ತಲೆಸಿಡಿತ ದುರ್ವ್ಯಾಪ್ತಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯುಕಲಿಪ್ಟಸ್ ತೈಲವು ಸಿದ್ಧೌಷಧಿ ಎಂದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಒಂದಿರುತ್ತವೆ ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?



ಔನ್ಸ್ ಸೀಸೆ 1ಕ್ಕೆ 5 ಆಣೆ ವಿ ಪಿ ಚಾರ್ಜು ಬೇರೆ ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ 3—10—0

☞ ಕಮ್ಮಿ ದರದ ರಕ್ಕು ಯುಕಲಿಪ್ಟಸ್ ತೈಲವನ್ನು ಕೊಂಡ ಕೊಂಡು ಮೋಸಹೋಗಬೇಡಿರಿ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ। **ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:**—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ। **ವೈ. ಕೊರಗಪ್ಪ ಮುಂಬಾಯಿ**—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೊಳೆ ತಾಗಿ ಕೊಳೆಯುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ ದಯಮಾಡಿ 3 ಕರಡಿಗೆಗಳನ್ನು ವಿ ಪಿ ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ. ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇರೆ

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಸಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ ಖರ್ಚೇನೂ ವಿಶೇಷವಿಲ್ಲ ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಒರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ — ಸೋಮೇಶ್ವರ ನರಸಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ವಿಷ್ಯಸ ರೋಗಗಳಿಗೂ ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣವಾಗುವುದು ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ನಳಿಗೆಗಳು ಹೆಚ್ಚಿಗೆ ಸ್ಯಾಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ ಪಿ ಮಾಫಿ

ವಿಸ್ಫೋಟಕ ಮಾತ್ರೆ—ಈ ಮಾತ್ರೆಯು ಮಲೇರಿಯಾ, ಸಿಡುಬು ಕೋರ, ಕೋಟ್ಲೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು ಎಲ್ಲರ ಚೇಷ್ಟೆಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು

ಸ್ವರಸುಖಿ—ಕೆಮ್ಮು, ಗಂಟ್ಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಗುಣಕಾರಿ ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪ್ಯಾಕೆಟ್ಟು 1ಕ್ಕೆ ಕ್ರಯ 0—1—6 ಸ್ಯಾಂಪಲ್ ಫ್ರೀ

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ ಹಲ್ಲುಹುಳುಕು, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—2—0

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ನಿಸ್ಸಂಶಯವಾಗುವದು ಗ್ಲಾಸಿನ ಡಬ್ಬಿ 1ರ ಕ್ರಯ 0—4—0, ಒಂದು ಡಜನ್ ಡಬ್ಬಿಗಳಿಗೆ ರೂ 2—8—0 ವಿ ಪಿ ಬೇರೆ

M D R & Sons

Srimangireesh Aushadalaya,

UDIPI S C.

ಓದಿನೋಡಿ! ಬೆಲೆ ಸುಲಭ!! ಅಂದವಾದ ಮುದ್ರಣ!!!

ದಪ್ಪ ಕಾಗದ, ವೇದಮಂತ್ರಗಳಿಗೆ ಸ್ವರಹಾಕಿದ ಕನ್ನಡಾಕ್ಷರ.

ಆಹ್ನಿಕಮಂಜರಿ.

ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕವು.

ಇದರಲ್ಲಿ ಮಂಗಲಾಚರಣ, ಗುರುಸ್ತುತಿ, ಪ್ರಾತಸ್ಮರಣ, ಭಸ್ಮಧಾರಣ ವಿಧಿ, ಆಚಮನ ವಿಧಿ, ಪ್ರಾತಸ್ಸಂಧ್ಯಾ, ಅಗ್ನಿಕಾರ್ಯ, ಮಧ್ಯಾಹ್ನ ಸಂಧ್ಯಾ, ಬ್ರಹ್ಮಯಜ್ಞ, ಪಂಚಾಯತನ, (ದೇವ) ಪೂಜಾ ಪಂಚಾಯತನ ದೇವತಾ ಸ್ಥಾಪನಚಕ್ರ, ಪೂಜಾವಿಧಿ, ಅಗ್ನಿಮೀಳೇ ಸೂಕ್ತ, ಪಂಚಾಮೃತ ಸ್ನಾನ, ರುದ್ರ, ಚಮೆ, ಪುರುಷಸೂಕ್ತ, ಶ್ರೀಸೂಕ್ತ, ವಿಷ್ಣುಸೂಕ್ತ, ಅಹಂರುದ್ರಾಸೂಕ್ತ (ದೇವಿಸೂಕ್ತ) ಪವಮಾನ, ದ್ವಾದಶ ನಾಮಗಳು, (೫ ದೇವರದ್ದು) ದ್ವಾದಶನಾಮಸ್ತೋತ್ರ, ಲಘುನ್ಯಾಸ, ೫ ಅಷ್ಟೋತ್ತರಗಳು, ದೇವೀ ವೇದ ಪಾದಸ್ತವ, ವಿಷ್ಣುವೇದ ಪಾದಸ್ತವ ಇನ್ನೂ ಅನೇಕ ಸ್ತೋತ್ರಗಳೂ ಅಡಗಿವೆ. ಅಲ್ಲಲ್ಲಿ ಟಿಪ್ಪಣಿ ಕೊಟ್ಟು, ಅಂದವಾದ ಮುದ್ರಣದಿಂದ ಸುಂದರವಾದ ಬುಕ್ಕು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಅತ್ಯಗತ್ಯ ಬೇಕಾದುದು.

ಇನ್ನು ಹೆಚ್ಚಿನ ವಿಷಯ ಪತ್ರದ್ವಾರಾ ತಿಳಿಯಬಹುದು ವ್ಯಾಪಾರಸ್ಥರಿಗೆ ಯೋಗ್ಯವಾದ ಕಮಿಶನ್ ಕೊಡಲಾಗುವುದು.

ಬೆಲೆ: ಪುಸ್ತಕ 1ಕ್ಕೆ 1—0—0, ಪೋಸ್ಟೇಜು ಬೇರೆ.

ವಿಳಾಸ:— ಎಚ್. ವಿ. ಕೃಷ್ಣಭಟ್ಟ,
ವೇದಪಾಠಶಾಲಾ, ತೀರ್ಥಮುಕ್ತಾಪುರೀ,
ಆಗುಂಬೆ ಪೋಸ್ಟು, ತೀರ್ಥಹಳ್ಳಿ ತಾಲೂ

ಕನ್ನಡ ಕಥೆ ಪುಸ್ತಕಗಳು.

ಮುದ್ರಾಮಂಜೂಷ	1	12	0	ನಿರ್ಮಲೆ	0	12	0
ಅರೇಬಿಯನ್ ನ್ಯಾಟ್ಸ್	2	4	0	ಸಚಿತ್ರ ಭಟ್ಟಿ ವಿಕ್ರಮಾದಿತ್ಯ			
ರಮಾಮಾಧವ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂಜರಿ	1	4	0
ಕೃಷ್ಣಾಕುಮಾರಿ	0	10	0	ಪತಿವ್ರತಾ ಮಹಾತ್ಮೆ	0	6	0
ಪರಿಮಳಾ	0	12	0	ಹರಿಶ್ಚಂದ್ರನ ಕಥೆ.	0	4	0
ಮಹಾರಾಣಿ ಗೃಹಶೀಲೆ	0	[illegible]	0	ನಳದಮಯಂತಿಯ ಕಥೆ	0	6	0
ದುರ್ಗಾದಾಸ	[illegible]	12	0	ಶ್ರೀ ಕೃಷ್ಣಬೋಧಾಮೃತ	0	8	0
ಚಂಚಲ ಕುಮಾರಿ	[illegible]	[illegible]	[illegible]	[illegible]	0	8	[illegible]
ಪ್ರಬಂಧ ಮುಕ್ತಾವಳಿ	0	12	0	[illegible]	0	10	0
ಚಂದ್ರಮತಿ	0	[illegible]		[illegible]	0	1	6
ದಯಾಮತಿ	0	2	0	[illegible]	[illegible]	4	0
ಕಳಾವತಿ	0	2	0	ನಿರುಪಮಾ	0	12	0
ಸಂಗೀತ ಸಮಯಸಾರ	1	4	[illegible]	[illegible]	[illegible]	2	0
ಬಾಲಕಾಗೀತ ಮುಕ್ತಾಕಲಾಪ	0	1	[illegible]	[illegible]	0	4	[illegible]
ವಿಷವೃಕ್ಷ	1	8	[illegible]	[illegible]	0	2	0
ದುರ್ಗೇಶನಂದಿನಿ	1	4	[illegible]	ಪದ್ಮಿನಿ.	0	2	0
ಸ್ತ್ರೀಮಲೆಯಾಳ	[illegible]	8	0	ತಾರಾಸುಂದರಿ	0	8	0
[illegible]	[illegible]	2	[illegible]	ಅನಂಗಸುಂದರಿ	0	8	0
ಕುಮುದಿನಿ	[illegible]	[illegible]	[illegible]	ಸತ್ಯಸಂಜೀವಿನಿ	0	6	0
ಸಾಧ್ವಿಗುಣಮಂಜರಿ	[illegible]	[illegible]	0	[illegible] ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ	[illegible]	4	[illegible]	[illegible] ಪ್ರಹಸನ.	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	2	0	0	ಚಂದ್ರಕಳಾ	0	9	0
ರೋಹಿಣಿ (ನಾಟ್ಯ[illegible])	1	0	0	ಸತೀರೋಹಿಣಿ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್ಸ್ ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿತ್ನ, [illegible], ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ. ಮಂಗಳೂರು.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:— ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಸುಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ— ಅಭ್ಯಾಸವಿಲ್ಲದವರು 1 ಪಾವಲಿ ತೂಕ ಯಾ ಗೋಲಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಪ್ಪಿಗೆ ಕ್ರಯ: 2—0—0.

ಚಂದ್ರೋದಯಾವರ್ತಿ:— ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಗಣ್ಣು, ತಾಪದಿಂದು ಗುಣ.

ಕ್ರಯ: ರೂ 0—12—0

ಮಹಾಜ್ವರಾಂಕುಶ:— ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—8—0.

ಮೇಹಮುದ್ಗರವಟಿ:— 20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:— ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:— ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೇಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮೋಹರಣ ತೈಲ— ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ರಣಗಳ ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂಠಮಾಲೆ, ತೊಡಬಾಳೆ, ಗೆಡ್ಡೆಗಳು, ಕುಸುಮ ರೋಗ ವ್ರಣಗಳು, ಅಸನ ಪೌತ್ರಗಳು, ಲಿಂಗವ್ರಣ, ಯೋನಿವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಘಾಯಗಳು ಅವುಗಳಲ್ಲಿ ಹುಟ್ಟುವ ಹುಳವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 3 ಸೀಸೆವರೆಗೂ 5 ಆಣೆ.

ಮಧುರಧ್ವನಿ ಮಾತ್ರೆ— ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ— ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ, ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ ಚರ್ಮವನ್ನು ಮೃದುಮಾಡಿ ಮಿಂಚುವಂತೆ ಹೊಳಪು ಹುಟ್ಟಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಪೆಟ್ಟಿಗೆಗಳವರೆಗೂ 5 ಆಣೆ.

ಸಂಜೀವನ ಮಾತ್ರೆಗಳು— ಮಕ್ಕಳಿಗೆ ಜ್ವರ, ನರಗಳ ಸೆಳತ, ನಿದ್ರೆಬಾರದಿರುವದು, ಅಧಿಕವಾಗಿ ಹೊಸುವದು, ಭೇಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ 1ಕ್ಕೆ 10 ಆಣೆ. ವಿ. ಪಿ. ಚಾರ್ಜು 6 ಸೀಸೆವರೆಗೆ 5 ಆಣೆ.

ಮಹಾಗೋರೋಜನ ಮಾತ್ರೆ— ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧ ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ ಅತಿಸಾರ, ನರಗಳ ಎಳತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು, ಭೇಳಿ ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರ ಮಾಡುವದು. ಸೀಸೆ 1ಕ್ಕೆ 10 ಆಣೆ. ವಿ. ಪಿ. 9 ಸೀಸೆವರೆಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ,ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY. TANJORE.	ಸನ್ನಿಧಿ, ತಂಜಾವೂರು.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ ಟೌನ್ ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್

ಖಿಜಾಬೆ ಮಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವುವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ನೈಸರ್ಗಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುದು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ (ಒಲೆಯ) ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಕಾವು ಉಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಕಾವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು. ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧ಂನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ	7	8	0
ಬರೀ ಒಲೆಗೆ ಮಾತ್ರ ಕ್ರಯ ರೂ.	5	12	0
೫ನೇ ಮತ್ತು ೧ಂನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟವ್ ಡಿಪೊ,
೩೩೭ ಗಿರಗಾಂ ಬೊಂಬಾಯಿ.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು ಬಚ್ಚು, ಸುಟ್ಟ ಘಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ತಾಯಿತಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
ಕದ್ರಿ, ಮಂಗಳೂರು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ, ಕ್ಷಯ ಮೊದಲಾದ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು ವಿಶೇಷ ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಾಟ್ಲಿ 1ಕ್ಕೆ 3-4-0 ಅರ್ಧ ಬಾಟ್ಲಿಗೆ 1-12-0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ

ಯು. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಪುಕ್ಕಟೆಯಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿರಿ—ಇವರ ಬೆಲೆ 11 ಆಣೆ ಪ್ಯಾಕಿಂಗ್ ಪೋಸ್ಟೇಜು ಅಲ್ಲದೆ

ವಾಲ್ಮೀಕಿಯು ಜ[illegible] ಆಣೆ 6, ವೈಕ[illegible] ಆಣೆ 5 ಸ[illegible] ಪ್ರಭಾವ ಸ[illegible] ಆಣೆ 8 ಸ[illegible] 1-2 ಧ[illegible] ಆಣೆ 6 ಭಕ್ತಿ[illegible] ಆಣೆ [illegible] ಮ[illegible] ಆಣೆ [illegible] ಧ[illegible] [illegible] ಆಣೆ 2 ರಾಜಭಕ್ತಿ ಆಣೆ 6, ದೇಶಭಕ್ತಿ ಆಣೆ 10

[ಈ ಪೈಕಿ ರೂ 2-8-0ರ ಬೆಲೆಯ ಪುಸ್ತಕಗಳಿಗೆ ಈ ಬಗೆ ಕ್ಯಾಲೆಂಡರ್ ಬಹುಮಾನ]

ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1-4	ಪ್ರಬಂಧ ಮುಕ್ತಾವಳಿ	0-12
ಹಾರ್ಮೋನಿಯಂ ಸ್ವಯಂ ಬೋಧಿನಿ	0-4	ಕನ್ನಡ ಅರೀಬಿಯನ್ ನೈಟ್ಸ್	2-2
ಹಾಲೀಸಂಗೀತ ಮುಕ್ತಾವಳಿ ಸ್ವರಯುಕ್ತ	0-9	ಮುದ್ರಾರಾಕ್ಷಸ	1-10
ಕಲ್ಯಾಣ ಗೀತಾವಳಿ	0-6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3-2
ಅಭಿನವ ಸಂಗೀತ ಮಂಜರಿ	0-4	ಆಧ್ಯಾತ್ಮ[illegible]	2-0
[illegible] ಜನಸಾರಸಂಗ್ರಹ ಭರತ ಶಾಸ್ತ್ರ	1-8	[illegible]	1-9
ಸ್ತ್ರೀಧರ್ಮನೀತಿ	0-9		

ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್)	0-12	ಮಾಧವೀ ಕಂಕಣ (ಬಂಗಾಳಿ ನಾವೆಲ್)	1-0
ಪ್ರಫುಲ್ಲೆ	0-12	ಶಕ್ತಿ	0-12
ಸುಸ್ಮಿತೆ ,	0-[illegible]	ಶೋಧನೆ ,,	0-12
[illegible] ವಿವಾಹ ,	0-4	ಚಂದ್ರಪ್ರಭಾ ಕಾದಂಬರಿ	0-14
ಸೌದಾಮಿನಿ	0-8	ಸುಭದ್ರೆ ,,	0-5
[illegible] ,,	0-[illegible]	ಕಲಿಯುಗ ,	0-5
[illegible] ,	0-2	ಕಲಾನಾಥ ,	0-8
[illegible]ನಾಥ ಪ್ರೀತ ,,	0-1	ನನ್ನ ಆಚಾರ್ಯ (My Master)	0-4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳನ್ನು ಒಂದಾವರ್ತಿ ತರಿಸುವವರಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ

ಕಾದಂಬರಿಗಳು

[illegible] ಶ್ರೀ ತಿರುಮಲಮ್ಮನವರಿಂದ	0-6	ದೇವಿ ಚೌಧುರಾಣಿ ಬಿ ವೆಂಕಟಾಚಾರ್	1-4
[illegible] (ನಥಾ ಭಾಗ 1) ,,	0-8	ಮನೋರಮಾ ,,	1-0
[illegible]ರಾಗಿಣಿ (ಡಿಟ್ಟೊ 2) ,,	1-0	ಪರಿಮಳ ,,	0-10
[illegible] (ಚರಿತೆ) ,,	0-14	ಕೊಹಿನೂರು ,,	0-12
[illegible] ಕನ್ಯಾ ,,	1-8	ಸಾಧನೆ ,,	0-8

(ಇತ್ಯಾದಿ ಇತರ ಎಲ್ಲಾ ಕಾದಂಬರಿಗಳು.)

ಕಲ್ಯಾಣ! ಕಲ್ಯಾಣ!! ಕಲ್ಯಾಣ!!!

ಬಂಧುಗಳೇ! ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ — *Address* —

ಎಸ್ ಪಿ. ರಾಜಾ ಮತ್ತು ಕಂಪೆನಿ, **S P RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ ಕ POST POLALY, S C.

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದ್ದು ಬೇರೆ ಇಲ್ಲ ಬೆಲೆ 10 ಆಣೆ ಮಾತ್ರ

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0 1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು

ವಿಳಾಸ — ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕ! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟಜ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧ ಕಂಠೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಶುಷ್ಕಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ 16 ಮಾತ್ರೆ ರೂ 1

೨ ಸೂರ್ಯಪ್ರಭಾ ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ ತೊಲೆ 1ಕ್ಕೆ ರೂ 1

೩ ಅಶೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ ಬಾಟ್ಲಿ 1ಕ್ಕೆ ರೂ 1-4-0

೪ ಗರ್ಭ ಪುಷ್ಟಿಕರಣ ಇದು ಸ್ತ್ರೀಯರ ಎಲ್ಲಾ ಜಾವ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ 1

೫ ಮಧುಮಾಧವಿ ಪಿಲ್ಸ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2

೬. ಬಾಲಶಂಕರಿ ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1-8-0

೭. ದರ್ಬಾರ್ ಬ್ಯೂಟಿ ವೆಸ್ಲಿನ್ ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ ಬಾಟ್ಲಿ 1ಕ್ಕೆ 0-8-0

೮. ಅಮೃತಸಾರ್. ಇದು ವಾಯು ದುನ್ಯಾನ್ ಎಂಬ ಬಹ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ಪ್ರಾವಕಕ್ಕೆ ರೂ 1.

N. B.— ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ-ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೨ ಬಾಟ್ಲಿಗೆ ೨ ರೂ. ೧೦ ಆಣೆ.

೨ ಪ್ರಮೇಹರಿಪು ಬಿಂದು. ಉರಿಯು ಮೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಶಂಖಪೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ.

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

ತಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*

Vepery Post, MADRAS.

ಮಂಗಳೂರು

ಬಾಸೆಲ್ ಮಿಶ್ಯನ್ ಪುಸ್ತಕಖಾನೆಯವರು

ಪ್ರಚುರಪಡಿಸಿರುವ ಪುಸ್ತಕಗಳ ಪಟ್ಟಿ.

(ಮುಂಬಯಿ ಇಲಾಖೆಯೊಳಗಿನ ಸರಕಾರಿ ಪುಸ್ತಕಗಳು.)

ಕನ್ನಡ	ರೂ	ಆ	ಪೈ		ರೂ	ಆ	ಪೈ
ಛಂದಸ್ಸಾರ	0	4	0	ಪ್ರಾಕೃತಿಕ ಭೂಗೋಲಶಾಸ್ತ್ರ	0	9	0
ಸಂಸ್ಕೃತ ಕನ್ನಡ ಶಬ್ದವ್ಯುತ್ಪತ್ತಿ	0	4	0	ವಸ್ತುಪಾಠಗಳು	0	3	0
ಕರ್ಣಾಟಕದ ಚರಿತ್ರೆ	0	5	0	ಬೀಜಗಣಿತ,	1	6	0
ಭೂಗೋಲ, 2ನೇ ಭಾಗ	0	1	6	ಪದಾರ್ಥವಿಜ್ಞಾನಶಾಸ್ತ್ರದ ಮೂಲತತ್ವಗಳು	0	9	0
ಕೊಲೆನ್ಸೊಯವರ ಲೆಕ್ಕಪುಸ್ತಕ, 1ನೇ ಭಾಗ	0	10	0	ಪದಾರ್ಥವಿಜ್ಞಾನಶಾಸ್ತ್ರ	0	12	6
2ನೇ ,,	0	9	6	ಶಿಕ್ಷಾಪದ್ಧತಿ	0	11	0
ರೇಖಾಗಣಿತ, 1ನೇ ಪುಸ್ತಕ	0	4	0	ಬಾಯಿಲೆಕ್ಕದ ಪುಸ್ತಕ	0	2	0
,, 1ರಿಂದ 6 ಪುಸ್ತಕಗಳು	1	12	0	**ಸಂಸ್ಕೃತ ಕನ್ನಡ**			
ಕ್ಷೇತ್ರಫಲ	0	3	0	ಮೊದಲನೇ ಪುಸ್ತಕ	0	8	6
ಆರೋಗ್ಯವಿದ್ಯೆ	0	2	9	ಎರಡನೇ ,,	1	2	0

25 ರೂಪಾಯಿ ಅಥವಾ ಹೆಚ್ಚಿನ ಮೌಲ್ಯದ ಪುಸ್ತಕಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಶೇಕಡ 15ರ ಪ್ರಕಾರ ಡಿಸ್ಕೌಂಟು ಬಿಟ್ಟುಕೊಡುತ್ತೇವೆ. ಕಳುಹಿಸಿಕೊಡುವ ಖರ್ಚನ್ನು ತರಿಸಿಕೊಳ್ಳುವವರು ಕೊಡಬೇಕು. 5 ರೂಪಾಯಿ ಅಥವಾ 5 ರೂಪಾಯಿಗಳಿಗಿಂತ ಹೆಚ್ಚಿಗೆ ಮೌಲ್ಯದ ಪುಸ್ತಕಗಳನ್ನು ತರಿಸಿಕೊಳ್ಳುವವರು ಅರೆವಾಸಿ ಮೌಲ್ಯವನ್ನು ಮುಂಗಡ ಪಾವತಿಮಾಡಬೇಕು.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ:

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಸನ್ ೧೯೧೬ನೇ ಇಸವಿಯ

ಡೋಂಗರೆ

ಇವರ ಬಾಲಾಮೃತದ

ಸಚಿತ್ರ

ಕನ್ನಡ ಕೆಲೆಂಡರವು!

ಪುಗಸಾಟೆ ಕಳುಹಿಸುವೆವು.

ಮತ್ತು ಅಂಗಡಿಕಾರರಿಗೆ ಬಣ್ಣದ ಅಂದವಾದ ಚಿತ್ರದ ಬೋರ್ಡು ಸಹ ಉಚಿತವಾಗಿಯೇ ಕಳುಹಿಸಿಕೊಡುತ್ತೇವೆ.

ತಮ್ಮ ವಿಳಾಸವನ್ನು ತಿಳಿಸಿರಿ.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ.

Girgaum, Bombay. ಗಿರಗಾಂ ಮುಂಬಯಿ.

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವವರಿಗೆ ದೊರಕುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನು ಬೋಧಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುಸ್ಸನ್ನು ಕೊಡುವದು. ಈ ಪುಸ್ತಕವು ಇನಾಮವಾಗಿ ಕಳುಹಿಸಲ್ಪಡುವದು ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿ ಬರೆಯಬೇಕು. (೪)

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ,

157 ಬ್ರಾಡ್ವೆ ಮದ್ರಾಸ್.

S. U. N. & CO.,
BENARES CITY, U P.

ಐವತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ ವ ಗುಟ, ದಮಾಲ, ಕಣಗಳ, ಕೋಟ ಸಿಲ್ಕುಥಾನುಗಳು ಪಮರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ್ಡ ಶೀರೆ, ರದಾಶ್ಮಿ ಮೊದಲಾದ ಎಲ್ಲಾ ತರದ ಸುಮಾರು ೫೫೦೦೦ ರೂಪಾಯಿನ ಮಾಲುಗಳ ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳ ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ — ಯುಸ್. ಯು. ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ ಕಿಮ್ಮತ್ತು ರೂ ೧—೮—೦ ವಿದ್ಯಾರ್ಥಿಯರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ ಪುಟ 560

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣಫಲ, ಜ್ಯೋತಿಷ ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬. ಪಾನು ಡೆಮಿ ಅಷ್ಟಪತ್ರದ ಪುಟ ೧೫೦, ಟಪ್ಪಾಲು ಖರ್ಚು ಬೇರೆ

ಈ ಗ್ರಂಥವನ್ನು ಹಿಂದಿ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ. ಎಲ್ ಎಲ್ ಬಿ, ಹೈಕೋರ್ಟ ವಕೀಲ್ ರಂಗೂನ್, ಇವರು ಮಾಡಿರುತ್ತಾರೆ ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರಿ ಮತ್ತು ಕಟುವಾದ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಿಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕು ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.
(೧)

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಿಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷದಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ ಕೆಮ್ಮು ಗಸಬೀನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ ಮಕ್ಕಳ ಎಳವು, ಜ್ವರ, ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 26 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎಸ್ ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ 2 ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ವಿಶೇಷವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ। ರಾ। ಪಿ ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರ ಗವರ್ನಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳಾ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷದಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‌ಗಳಲ್ಲಿ ಸುವರ್ಣ 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ

ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಡಿಬ್ಬಿಗಳು ತೊಲಾ 1ಕ್ಕೆ 2—0—0, 1—0—0. 0—12—0, 0—6—0.

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ರೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0 2 0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದೆ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೭೯೭ ಪುಟಗಳುಳ್ಳದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಇಂಗ್ಲಿಷ್ ಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ಸನಮೋಹನತರಂಗಿಣಿ.

ಈ ಗ್ರಂಥವು ನಿರಕ್ಷೈವಮತದ ಕವಿಶ್ರೇಷ್ಠರೆನ್ನಿಸಿಕೊಂಡ ಕೋಳೂರು ಶಂಕರ ಕವಿಯಿಂದ ಗ್ಯನೆಯು ಶತಮಾನದ ಆದಿಯಲ್ಲಿ ಛಾಪಿಸಿಪಟ್ಟದಿ ರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಳಾಪವು, ಪಾರ್ವತೀ ಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರ ಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚು ಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧—೦—೦

ವಿಳಾಸ:— **ಟಿ. ಎ. ಮಾಣಿಕ್ಯಂ ಶೆಟ್ಟಿ,**
ಮಾಣಿಕ್ಯಮಂದಿರ ಬುಕ್‌ಡಿಪೋ, ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಪುಷ್ಟಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎತ್ತಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನು ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುದ್ದಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)

ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ 1—0—0.
,, ,, 3ಕ್ಕೆ ,, 2–10—0
ವಿ ಪಿ ಚಾರ್ಜು ಅಲಾಯಿದ.

N B. — ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎಂಬುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, 'ಶರತ್' ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.
,, ಮಿಡಿಯಂ ,, ,, 0–12—0.
,, ½ ಔನ್ಸಿನ ,, ,, 2—0—0.
ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.
ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪ್ರೆಪ್ರಸ್ ಸಾಲ್ಟ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ. 1—0—0. ಟಪ್ಪಾಲು ಖರ್ಚು 4 ಆಣೆ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ಡಿ. ಜೂಲನ್ ವಾಟ್ಸ್. ಮಂಗಳೂರು ದ. ಕನಡಾ.**

Printed & Published by V. S. Kamath at the Mangalore Trading Association's Sharada Press, Mangalore

Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X — ಮಂಗಳೂರು ತಾ. 14 ನೇ ಜನವರಿ ಶುಕ್ರವಾರ 1916. — ಸಂಚಿಕೆ 2

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಗೊಳಿಸುವುದಲ್ಲದೆ ತಲೆಯಸೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ [illegible] ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದದ್ದು ಜೀರ್ಣವಾಗುವುದಲ್ಲದೆ, [illegible] ಅಸ್ವಸ್ಥತೆಯುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ [illegible] ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ನಾಟಕಶಾಲೆಯವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

6. [illegible] ಎಲ್ಲಾ [illegible] ರೋಗಗಳನ್ನು [illegible] ನಿವಾರಣೆಯನ್ನು ಮಾಡುವುದು.

7. [illegible]

[illegible] ಗುಣಕಾರಿಯಾದ ಸೆಶಿಂತಾನದ ಒಂದು ಪೆಟ್ಟಿಗೆಯನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ [illegible] 1 ಕ್ಕೆ 0—2—0 200 ಮಾತ್ರೆಗಳ [illegible] 1 ಕ್ಕೆ 0—7—0 80 ಮಾತ್ರೆಗಳ ಟಿನ್ 1 ಕ್ಕೆ 0—4—0 550 ಮಾತ್ರೆಗಳ ಪಾಕೆಟ್ಟಿಗೆ 1 ಕ್ಕೆ 1—0—0

[illegible] „ „ „ 0—4—0 300 „ [illegible] „ 0—9—0 100 „ [illegible] „ 0—4—6 1200 „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು.

ಸೋಲ್ ಏಜಂಟ್ಸ್— ಸೆಶಿಂತಾನ್ ಡಿಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

TOM VICTOR & CO'S. BUSINESS **Shorthand and Typewriting Institution.**

Instruction given in Commercial Subjects, French, Shorthand and Typewriting: from Oct. 10th to Jan. 10th; Jan. 15th to April 15; June 15th to Sept. 15th.

N. B. JOB-WORK and Typewriter Repairs undertaken at very cheap rates.

MILAGRES, Mangalore.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ.

ದೇಶೀಯ ಚಿಕಿತ್ಸೆಯನ್ನು ಸರ್ವಸಾಧಾರಣ ಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸವಿಸ್ತರ ವ್ಯಕ್ತವಾಗುವದು. ಕನ್ನಡ ನುಡಿಯ ಓದ ಬಲ್ಲವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯವೈದ್ಯಶಾಸ್ತ್ರದ ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತನ್ನ ಆಯುಷ್ಯಪ್ರಮಾಣದಲ್ಲಿ ಕಾಲುಭಾಗ [illegible] ಸಮಯವನ್ನು [illegible] ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ವಿಳಾಸವನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿದರೆ ಈ ಪುಸ್ತಕವು ದೊರೆಯುವದು.

[illegible]

ರಮಾಮಾಧವ.

ಮುದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ. ರಾ. ಬಿ. ರಾಮರಾವ್ [illegible] ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, [illegible] ಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ [illegible] ಹಾಸಲು ಬೇರೆ.

[illegible] ಮ್ಯಾನೇಜರ್.

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮೆದುಳನ್ನು ಶಮಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ ಬರೇ ಮಾತುಗಳಿಂದ ವರ್ಣಿಸುವದರಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು— ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣೆ 6, ಮೈಛಂಗಿ 1, ತಾಂಬೂಲ ಪಾತ್ರೆ, 40, ...ಂಷದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ...ರ್ಚು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ.— ವಿ. ಎ. ಎಸ್. ಫಾರ್ಮ ಕಂಪೆನಿ,

3 ಇರುಳಪ್ಪನ್ ಬೀದಿ, ಮದರಾಸು

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಉರಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು!

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. C. Amin**
C/o E. A. Goll Esq
Sirdar Palace, Apollo Street, BOM.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳ ಛಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ. ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯು ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ."

ಮ|| ರಾ|| ಬಿ. ರಾಮರಾವ್ ಎಂ ಎ., ಎಲ್. ಎಲ್. ಬಿ., ಗವರ್ನಮೆಂಟು ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. * * * * ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ— ಎಚ್. ಎನ್. ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಟೀ. ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಿಲ್ಹಿತ ಮಿಶ್ಶನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ...ಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ...ರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟಿ ಒಂದರ ಕಿಮ್ಮತ್ತು ಆಣೆ 8. ಡಜನ್ 1ಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಕ್ಯಾಸ್ಟರ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟಿ ಒಂದರ ಕಿಮ್ಮತ್ತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. 1ಕ್ಕೆ ರೂ 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸ್‌ವೆಲ್, ಮೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೇಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೇನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್, ಉಡ್ಪಿ

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು

109 ಫ್ರೇಯರ್ ರೋಡ್,
ಮುಂಬಯಿ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	371,976—4—4
Reserve Fund	33,500—0—0

Besides the uncalled capital of Rs 25,000/ 25% of the net profits are added annually to the Reserve Fund Rs 28,485/ have been invested in Government Paper of the face value of Rs 29,300/-

Dividends of not less than 6% paid during the past years and a bonus of 1% to 2% paid in addition during the last three years

Fixed Deposits of Rs 50/ and above in multiples of Rs 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than Rs and multiples thereof and interest paid @ 4%

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore 11 December 1915

ನಿಯಮಿತ ಮೂಲ ಧನವು ರೂಪಾಯಿ	300 000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	219,100—0—0
ಆಗತ ಮೂಲ ಧನವು ,,	194,100—0—0
ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು	371,976—4—4
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮಾಲ್ಕರಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ 29,300ರ ಧರ್ಮಶಾಸ್ತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ವೃದ್ಧಿ ಪ್ರಕಾರ ರೂ 50 ಯಾ 5ರ ಮಿಕ್ಕ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬ್ಯಾಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡಲ್ಪಡಾಗುವವು

ಸೇವಿಂಗ್ಸ್ ಬ್ಯಾಂಕಿನಲ್ಲಿ 4ಕ್ಕೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಲ್ಪಡಾದೀತು. ಆ ಠೇವಣಾತಿಗಳಿಗೆ ಸೇಕಡಾ 4ರ ದರ ಬಡ್ಡಿಯು ಕೊಡಲ್ಪಡಾಗುವುದು

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡಲ್ಪಡಾಗುತವೆ

ಮೊಹರು ಹಾಕಲ್ಪಟ್ಟ ಪೆಟ್ಟಿಗೆ ಮೊದಲಾದವುಗಳನ್ನು ಭದ್ರತೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

P. Gopal Naik,
Director

ಅತ್ತರು ಮತ್ತು ಸುಗಂಧಗಳಲ್ಲಿ ಮುಖ್ಯವಾಗಿ ನಡೆಯುತಿರುವ



ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)



ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಅದರ ರಮ್ಯವಾದ ಅತ್ಯಂತ ಶ್ರೇಷ್ಠವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವನ್ನದಲ್ಲಿ ನಾಲ್ಕು ತೊಟ್ಟುಗಳನ್ನು ಹಾಕಿರುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂಗಳಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಟ್ಟಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಿಕರಿವೆ!

Proprietors:—**The Oriental Drug & Chemical Co.** ಪ್ರೊಪ್ರೈಟರರು:—ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ

Sole Agents:—**MOHINI AGENCY,** ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ

3 Fida Building, Jumma Musjid, **BOMBAY.** 3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ

Agents:—**Bhagavandas Choonilal & Co.** ಏಜಂಟರು:—ಭಗವಾನ್ ದಾಸ್ ಚೂನಿಲಾಲ್ ಎಂಡ್ ಕೋ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್ !!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು: — ಒಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮುಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಪ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ: — ಮಿ| ಜೋರ್ಜ್ ಕಿಂಗ್ ಎಫ್. ಎಫ್ ಎ ಎಫ್. ಐ. ಎ.

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್. ರಾವ್, ಎಮ್ ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್: — ರಾ| ಕೆ. ಸುಬ್ರಮಣ್ಯಯ್ಯರ್, ಬಿ ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ರೇವಣಾತಿಯಾಗಿಟ್ಟಿರವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ: —

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲ ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ ಎಂಬುವೆ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಆತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತ.) ಹಾರಾಡಿ ಆನಂದರಾಯ ಘುಡಿಯಾರನ ರುಜು.

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲ್ಕ ಅಧಿಕಾರವುಳ್ಳವನು.)

ಉಡ್ಪಿ, ತಾ 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗೆಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲೈಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಾ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು.— ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶಾನುಭಾಗನ ರುಜು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು —:

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY.

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ [illegible] 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರೆಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ

Chemists. ಕೆಮಿಸ್ಟ

Peoples Park Fair Reward.

ಸುಂದರವಾದ] 1916 [ಕಾಲೆಂಡರು.

ಕರ್ಣಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಪಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟ.ಗು ಇನಾಮಾಗಿ ಕಳುಹಿಸುವೆವು. ತ್ವರೆಮಾಡಿರಿ

ವಿಳಾಸ.— ರಕ್ಷಂ ಕಂಪೆನಿ,
ಸಾಹುಕಾರ ಪೇಟೆ,
3, ಇರಟಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ಕೃಷ್ಟವಾದದ್ದೆಂದು ಒಪ್ಪಿದಾರೆ ನಿಮಿಷಮಾತ್ರದೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು ಹೇಳಿದ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾದೆ. ಇದು ಹೇಳಿದಂತೆ ಗುಣಕಾರಿಯಲ್ಲವೆಂದ ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಿಲ್ಲದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 1—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0 ಟಪ್ಪಾಲು ಹಾಸಲು ಬೇರೆ ಬೀಳುವದು ವ್ಯಾಪಾರಸ್ಥರಿಗೆ ಅವರ ಹೆಚ್ಚಾಗಿ ತಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದ ಕೊಳ್ಳಿ.

ನಮ್ಮ ವಿಳಾಸ:— ವಿ. ಎ. ಎಸ್. ಷಾಣ್ಯಾ,
3, ಇರಟಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಆದಂದಿನಿಂದು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ದಕ್ಷಿಣದ ಕ್ಷತ್ರಿಯರ ಹೆಸರುಗಳೂ, ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ತರಿಸಿ ಅವರಿಗೆ ನೇಮಿಸಿದ 326 ಬ್ರಾಹ್ಮಣರ ಗ್ರಾಮಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳುಳ್ಳ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ಪ್ರತಿಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು. ಕಲಟಬಳೆ, ವಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯ ಅನುಕೂಲವಾದ 296 ಪುಟಗಳು ಭಾರತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ. ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ.

ಸಮಯಾನುಸಾರ ಕ್ರಯವು 0—4—0 ಏರಿಸಲಾಗುವದು.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು:— ಎನ್. ಎ. ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮ್ಮುಣಂಜೆಗುತ್ತು,
ಪೋಸ್ಟು ಪೊಳಲಿ, ದ. ಕ. ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು.
3. ಒಂಟಿರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5. ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6. ಪ್ರಭಾಕರ ಮುದ್ರಾಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವದು.

ಉಚಿತ! ಉಚಿತ! ಟಪ್ಪಾಲು ಹಾಸಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟ ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವದು ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಕೊಳ್ಳಬೇಕಾಗಿರುವದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದ್ದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು. ಖರ್ಚು ಒಂದಿಷ್ಟಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಮಾಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಥ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದ್ರಾಸು.

ಸಫಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ

ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಘಳಿಸಿಕೊಳ್ಳಬಹುದು. ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿಶ್ಶಕ್ತಿಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದುಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

- ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ ಮದರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 14ನೇ ಜನವರಿ 1916

ಹಿಂದೂ ವಿಶ್ವವಿದ್ಯಾನಿಲಯದ ಬಗ್ಗೆ ವಿಜ್ಞಾಪನೆಯು

ಸರ್ವ ಹಿಂದುಗಳಿಗೆ ಪರಮಪವಿತ್ರವೂ ವಿಶ್ವನಾಥನ ಸನ್ನಿಧಿಯಿಂದ ಪೂಜ್ಯವೂ, ಅನಾದಿಕಾಲದಿಂದ ಸಂಸ್ಕೃತ ವಿದ್ಯೆಯ ಪ್ರಧಾನ ವಿದ್ಯಾಪೀಠವೂ ಆಗಿದ್ದು ಪರಿಶುದ್ಧವಾಗಿರುವ ಗಂಗೆಯ ತೀರದಲ್ಲಿರುವ ಶ್ರೀಕಾಶೀಪುರ ಕ್ಷೇತ್ರದಲ್ಲಿ ಭರತಖಂಡದ ರಾಜವರ್ಗವೂ ಸಂಪನ್ನರೂ ಪ್ರಜಾವರ್ಗವೂ ಸರಕಾರದ ಸಹಾಯದಿಂದ ಹಿಂದೂ ವಿಶ್ವವಿದ್ಯಾನಿಲಯವನ್ನು ಒಂದಾಗಿ ಕೂಡಿಕೊಂಡು ಸ್ಥಾಪಿಸುವರು. ಕಳೆದ ಸಹಸ್ರ ವರುಷಗಳ ಕಾಲದಲ್ಲಿ ಸ್ಥಾಪಿಸಲು ಆಗದ ಈ ಸ್ಥಾಪನೆಯನ್ನು ಸಮಸ್ತ ಹಿಂದುಗಳು ಐಕ್ಯದಿಂದ ಕೂಡಿಕೊಂಡು ಮಾನ್ಯ ಹಾರ್ಡಿಂಗ್ ಪ್ರಭುಗಳ ಸರಕಾರದ ಕಾಲದಲ್ಲಿ ಸ್ಥಾಪಿಸಲು ಸಾಧ್ಯವಾಯಿತು. ಈ ಸಂಸ್ಥೆಯ ಶಂಕುಸ್ಥಾಪನೆಯನ್ನು ಇದೇ ಬರುವ ಫೆಬ್ರುವರಿ ತಿಂಗಳ ತಾ. ೪ನೇಯ ದಿನ ಹಾರ್ಡಿಂಗ್ ಪ್ರಭುಗಳವರು ನೆರವೇರಿಸಿಕೊಡುವರು. ದೇಶದ ಆಶ್ರಿತ ರಾಜರುಗಳಲ್ಲಿ ೧೫ ಜನರೂ, ಗವರ್ನರ, ಲೆಫ್ಟಿನೆಂಟ್ ಗವರ್ನರ ಮೊದಲಾದವರೂ ಇನ್ನು ಅನೇಕ ಮಹನೀಯರುಗಳೂ ಸೇರಿರುವ ಮಹಾ ಸಭೆಯು ಈ ಶಂಕುಸ್ಥಾಪನೆಯ ದಿನ ಗಂಗಾತೀರದಲ್ಲಿ ಕೂಡುವದು. ಹಿಂದೂ ವಿಶ್ವವಿದ್ಯಾನಿಲಯದ ಪರವಾಗಿ ಸಮಸ್ತ ಹಿಂದೂಗಳ ಸಹಾನುಭೂತಿಯು ಇರುವದು, ಹಿಂದೂಗಳು ಈ ಸ್ಥಾಪನೆಯ ಬಗ್ಗೆ ಈ ತನಕ ಬಹಳ ದ್ರವ್ಯಸಹಾಯವನ್ನು ಕೊಟ್ಟಿರುವದು, ಇನ್ನೂ ಧಾರಾಳವಾಗಿ ಬೇಕಾಗಿರುವ ದ್ರವ್ಯಸಹಾಯವು ಹಿಂದೂಗಳಿಂದ ದೊರಕುವದು ಎಂಬೀ ವಚನಗಳನ್ನು ಸಮಸ್ತ ಹಿಂದೂಗಳ ಪರವಾಗಿ ಈ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಮೂಲಪುರುಷರಾದ ಬಹುಮಾನಪಟ್ಟ ಪಂಡಿತ ಮದನಮೋಹನ ಮಾಲವಿಯಾರವರೇ ಮೊದಲಾದವರು ಆ ಮಹಾಸಭೆಯ ಮುಂದೆ ಸುರನದಿಯ ಸನ್ನಿಧಿಯಲ್ಲಿ ಆಧಾರಪೂರ್ವಕವಾಗಿ ವಿಶೇಷ ಭರವಸೆಯಿಂದ ದೃಢೀಪಡಿಸಲು ಸಾಧ್ಯವಾಗುವಂತೆ ಮದನಮೋಹನ ಮಾಲವಿಯಾರವರೇ ಮದ್ರಾಸಿಗೆ ಬಂದು ಇದೇ ತಿಂಗಳ ತಾ ೫ರಲ್ಲಿ ಅಲ್ಲಿ ಕೂಡಿದ ಪ್ರಜಾಜನರ ಮಹಾಸಭೆಯ ಮುಂದೆ ಹಿಂದೂ ವಿಶ್ವವಿದ್ಯಾನಿಲಯದ ಸಹಾಯಾರ್ಥವಾಗಿ ವಿಜ್ಞಾಪನೆಯನ್ನು ಮುಖತಃ ಮಾಡಿರುತ್ತಾರೆ. ಮದ್ರಾಸಿನಲ್ಲಿ ಕೂಡಿದ ಮಹಾಸಭೆಯಲ್ಲಿ ಹಿಂದೂ ಮಹನೀಯರೆಲ್ಲರೂ ಕೂಡಿದ್ದರು. ಸಭಾಸದರ ಸಂಖ್ಯೆಯು ೬,೦೦೦ಕ್ಕೆ ಮಿಕ್ಕಿತ್ತು. ಬಹುಮಾನಪಟ್ಟ ಸರ್ ಪಿ ಎಸ್ ಶಿವಸ್ವಾಮಿ ಅಯ್ಯರವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ರೂ. ೬೧,೯೦೦ಗಳ ದ್ರವ್ಯಸಹಾಯವು ಆ ಸಭೆಯಲ್ಲಿಯೇ ವಾಗ್ದಾನಮಾಡಲಾಯಿತು. ವಿದ್ಯಾನಿಲಯದ ಪರವಾಗಿ ವಿಶೇಷ ಸಹಾನುಭೂತಿಯನ್ನು ಸೂಚಿಸಿ ನಿರ್ಣಯವು ಸಭೆಯಲ್ಲಿ ಮಂಜೂರಾಯಿತು.

ಹಿಂದೂ ವಿಶ್ವವಿದ್ಯಾನಿಲಯವು ಯಾವ ಉದ್ದೇಶಗಳಿಂದ ಸ್ಥಾಪಿಸಲ್ಪಡುವದೆಂಬ ವಿವರವನ್ನು ಹಿಂದೆ ಆಗಿಂದಾಗ್ಯೆ ಪ್ರಸ್ತಾಪಿಸಿರುತ್ತೇವೆ. ಮಾಲವಿಯರವರು ಮೊನ್ನೆ ದಿನ ಮಾಡಿದ ಭಾಷಣದಲ್ಲಿ ಈ ವಿಷಯವಾಗಿ ತಿಳಿಯಬೇಕಾದ ಇನ್ನೂ ಕೆಲವು ಸಂಗತಿಗಳಿರುವವು. ದೇಶದ ಬೇರೆ ಬೇರೆ ಕಡೆಗಳಲ್ಲಿರುವ ಕಾಲೇಜುಗಳನ್ನು ಸೇರಿಸಿಕೊಳ್ಳುವ ಅಧಿಕಾರವು ಹಿಂದೂ ವಿಶ್ವವಿದ್ಯಾನಿಲಯದ ಕಾನೂನು ಮಸೂದೆಯ ಮೇರೆಗೆ ಈ ವಿಶ್ವವಿದ್ಯಾನಿಲಯಕ್ಕೆ ಇದ್ದಿಲ್ಲ. ಹೈಸ್ಕೂಲುಗಳನ್ನು ಅವುಗಳು ದೇಶದ ಯಾವ ಕಡೆಗಳಲ್ಲಿ ಇದ್ದರೂ ಸೇರಿಸಿಕೊಳ್ಳುವ ಅಧಿಕಾರವು ಪ್ರಕೃತ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಇದೆ. ಇದರಿಂದ ಈ ವಿಶ್ವವಿದ್ಯಾನಿಲಯದವರು ರೂಢಿಗೆ ತರುವ ಶಿಕ್ಷಣಪದ್ಧತಿಯನ್ನು ದೇಶದ ಇತರ ಕಡೆಗಳಲ್ಲಿಯೂ ರೂಢಿಗೆ ತರಲು ಸಾಧ್ಯವಾಗುವದರಿಂದ ಈ ಸಂಸ್ಥೆಯ ಪ್ರಯೋಜನವು ಎಲ್ಲಾ ಕಡೆಗಳಲ್ಲಿಯೂ ಇರುವವರಿಗೆ ತಮ್ಮ ಸ್ಥಳಗಳಲ್ಲಿಯೇ ಈ ನವೀನ ವಿದ್ಯಮಾನದಿಂದ ದೊರಕಲು ಸಾಧ್ಯವಾಯಿತು. ರಸಾಯನಶಾಸ್ತ್ರ, ಭೌತಿಕಶಾಸ್ತ್ರ ಮೊದಲಾದವುಗಳ ಶಿಕ್ಷಣವು ಈಗ ಈ ದೇಶದಲ್ಲಿರುವ ಸರ್ವ ವಿದ್ಯಾನಿಲಯಗಳಲ್ಲಿದ್ದರೂ ಇಂಥಾ ಶಿಕ್ಷಣವನ್ನು ಪಡೆದ ಬಳಿಕ ವಿದ್ಯಾರ್ಥಿಗಳಿಗೆ ತಮ್ಮ ಈ ಶಿಕ್ಷಣದ ಬಲದಿಂದ ದೇಶದ ಕಲಾಭಿವೃದ್ಧಿಗೆ ಸಹಾಯರಾಗಲು ಪ್ರಕೃತ ಸಾಧ್ಯವಾಗುವದಿಲ್ಲ. ಇಂಥಾ ಕುಂದಕವು ಈ ವಿಶ್ವವಿದ್ಯಾಲಯ ಶಿಕ್ಷಣಕ್ರಮದಲ್ಲಿರದಂತೆ ಇಲ್ಲಿಯ ಶಿಕ್ಷಣವು ಏರ್ಪಡಿಸಲ್ಪಡುವದೆಂಬುದಾಗಿ ತಿಳಿಯುತ್ತೇವೆ. ಧರ್ಮಶಿಕ್ಷಣವೆಂತೂ ಈ ಸಂಸ್ಥೆಯ ವಿದ್ಯಾಭ್ಯಾಸಕ್ರಮದ ಮುಖ್ಯ ಲಕ್ಷಣವಾಗಿರುವದು. ಸಿವಿಲ್ ಸರ್ವಿಸ್ ಪರೀಕ್ಷೆಯ ಬಗ್ಗೆ ವಿಲಾಯತಿಯಲ್ಲಿ ಒಕ್ಸ್‌ಫರ್ಡ್ ಅಥವಾ ಕೇಂಬ್ರಿಜ್ ಮೊದಲಾದ ವಿಶ್ವವಿದ್ಯಾನಿಲಯಗಳ ಶಿಕ್ಷಣ ತರಬೇತಿಯು ಅಗತ್ಯ. ಹಿಂದೂ ದೇಶದವರಲ್ಲಿ ಬಹಳ ಸ್ವಲ್ಪ ಜನರಿಗೆ ಮಾತ್ರ ತಮ್ಮ ಮಕ್ಕಳನ್ನು ಈ ಪರೀಕ್ಷೆಯ ಬಗ್ಗೆ ವಿಲಾಯತಿಗೆ ಕಳುಹಿಸಿಕೊಡಲು ಸಾಧ್ಯವಾಗುತ್ತದೆ. ಆ ವಿದ್ಯಾನಿಲಯಗಳಲ್ಲಿರುವಷ್ಟೇ ಸಮರ್ಥರಾದ ಪಂಡಿತವರ್ಗವನ್ನು ಹಿಂದೂ ವಿಶ್ವವಿದ್ಯಾನಿಲಯದವರು ನೇಮಿಸಿ ಸಿವಿಲ್ ಸರ್ವಿಸ್ ಪರೀಕ್ಷೆಗೆ ಬೇಕಾದ ಶಿಕ್ಷಣವನ್ನು ಈ ವಿಶ್ವವಿದ್ಯಾನಿಲಯದಲ್ಲಿ ಕೊಡುವ ಏರ್ಪಾಡನ್ನು ಮಾಡುವ ಯೋಚನೆಯು ಈ ವಿದ್ಯಾಸಂಸ್ಥೆಯ ಸಂಸ್ಥಾಪಕರಲ್ಲಿರುವದು. ಸರ್ವರೂ ತಿಳಿಯಬೇಕಾದ ಮತ್ತೊಂದು ವಿಶೇಷ ಸಂಗತಿ ಏನಂದರೆ—ವಿದ್ಯಾನಿಲಯವು ಹಿಂದೂಗಳಿಂದ ಸ್ಥಾಪಿಸಲ್ಪಡುವದಾದರೂ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವು ದೊರಕುವದು.

ಹಿಂದೂಸ್ಥಾನದ ಎಲ್ಲಾ ಕಡೆಗಳಿಂದಲೂ ವಿದ್ಯಾರ್ಥಿಗಳು ಹೋಗಿ ಈ ಸಂಸ್ಥೆಯಿಂದ ಪ್ರಯೋಜನವನ್ನು ಪಡೆಯಬೇಕಾದರೆ ವಿದ್ಯಾರ್ಥಿಗಳನ್ನು ವಿದ್ಯಾಸಂಸ್ಥೆಗೆ ಆಕರ್ಷಿಸುವಷ್ಟು ವಿಶೇಷವಾದ ಯೋಗ್ಯತೆಯು ಇದಕ್ಕೆ ಇರಬೇಕು. ವಿಶೇಷ ಧನಸಹಾಯವಿಲ್ಲದೆ ಇಂಥಾ ಯೋಗ್ಯತೆಯು ಎಂದೂ ಪ್ರಾಪ್ತವಾಗದು. ಆದ್ದರಿಂದ ದೇಶಬಾಂಧವರೆಲ್ಲರೂ ಉದಾರಹಸ್ತದಿಂದ ತಮ್ಮಿಂದಾಗುವ ಸಹಾಯವನ್ನು ಮಾಡಬೇಕೆಂದು ಮಾಲವಿಯರವರು ಈ ಸಂಸ್ಥಾನದವರೆಲ್ಲರನ್ನೂ ವಿಜ್ಞಾಪಿಸಿಕೊಂಡಿರುತ್ತಾರೆ. ಪ್ರತಿ ವರುಷದಲ್ಲಿ ಒಂದು ಲಕ್ಷ ರೂಪಾಯಿಗಳ ದ್ರವ್ಯಸಹಾಯವು ಸರಕಾರದವರಿಂದ ಕೊಡೋಣಾಗುವದು. ಸಂಸ್ಥೆಯ ವರುಷಾವಧಿ ಖರ್ಚಿಗೆ ಕನಿಷ್ಠಪಕ್ಷದಲ್ಲಿ ೩ ಲಕ್ಷ ರೂಪಾಯಿಗಳಾದರೂ ಬೇಕಾಗಿವೆ. ಇಷ್ಟು ಹುಟ್ಟುವಳಿಯನ್ನು ಕೊಡೋಣಾಗುವ ಧನರಾಶಿಯನ್ನು ಹಿಂದೂ ವಿಶ್ವವಿದ್ಯಾನಿಲಯದ ಬಗ್ಗೆ ಸದ್ಯದಲ್ಲಿ ಸಂಗ್ರಹಿಸುವದು ಅಗತ್ಯವಾಗಿರುವದು.

ಪಂಡಿತ ಕರ್ವೆಯವರು ಸೂಚಿಸಿರುವ ಸ್ತ್ರೀಶಿಕ್ಷಣ ಪದ್ಧತಿಯು.

ಸ್ತ್ರೀಸಮಾಜದ ಉದ್ಧರಣೆಯಲ್ಲಿ ಕಳೆದ ೨೦ ವರುಷಗಳಿಂದ ಶ್ರಮಪಡುತ್ತಿರುವ ಪಂಡಿತ ಕರ್ವೆಯವರು ಸೂಚಿಸಿರುವ ಸ್ತ್ರೀಶಿಕ್ಷಣ ಪದ್ಧತಿಯು ಏನೆಂಬುದನ್ನು ತಿಳಿಯುವದು ಈಗಿನ ಕಾಲದಲ್ಲಿ ಅಗತ್ಯವಾಗಿರುವದು. ಈಗಿನ ಕಾಲ, ಅಂದರೆ ಸ್ತ್ರೀಶಿಕ್ಷಣ ಪ್ರಸರಣದಲ್ಲಿ ದೇಶದ ಹಲವು ಕಡೆಗಳಲ್ಲಾದರೂ ವಿಶೇಷ ಆಸಕ್ತಿಯು ತಲದೋರಿ ಬಂದಿರುವ ಸಮಯ, ಈಗಿನ ಶಾಲಾ ಕೋಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದ ವಿದ್ಯಾರ್ಥಿಗಳ ಶಿಕ್ಷಣ ಪರಿಣಾಮವು ಏನೆಂಬುದಾಗಿ ಸ್ಪಷ್ಟವಾಗಿ ವ್ಯಕ್ತಗೊಂಡಿರುವ ಸಂದರ್ಭ, ರೂಢಿಯಲ್ಲಿರುವ ಶಿಕ್ಷಣ ಪದ್ಧತಿಯಲ್ಲಿ ಕಂಡುಬರುವಂಥ ಕುಂದುಕಗಳನ್ನು ಹೋಗಗೊಳಿಸಿ ಸ್ತ್ರೀಯರಿಗೆ ಅನುಕೂಲವಾದ ಶಿಕ್ಷಣ ಪದ್ಧತಿಯು ಯಾವುದೆಂಬುದನ್ನು ನಿರ್ಧರಿಸಿಕೊಂಡು ಕಾರ್ಯಪ್ರಯತ್ನಗಳನ್ನು ಕೂಡಲೆ ಪ್ರಾರಂಭಿಸಬೇಕಾಗಿರುವ ಕಾಲ.—ಇಂಥಾ ವೇಳೆಯಲ್ಲಿ ಪಂಡಿತ ಕರ್ವೆಯವರು ತೋರಿಸುವ ಮಾರ್ಗವೇನೆಂಬುದನ್ನು ತಿಳಕೊಳ್ಳಲು ಸಮಾಜ ಹಿತೇಚ್ಛುಗಳೆಲ್ಲರೂ ಅಪೇಕ್ಷಿಸಬಹುದು.

ಒಂದೇ ಶಿಕ್ಷಣವೃಕ್ಷದ ಎರಡು ಶಾಖೆಗಳಾಗಿ ಸ್ತ್ರೀಪುರುಷರ ಶಿಕ್ಷಣಪದ್ಧತಿಗಳಿರಬೇಕೆಂಬದು ಕರ್ವೆಯವರ ಅಭಿಪ್ರಾಯವಾಗಿದೆ. ಈ ಮಾತುಗಳಿಂದ ಸ್ತ್ರೀಪುರುಷರ ಶಿಕ್ಷಣಗಳೊಳಗೆ ಇರಬೇಕಾದ ಪರಸ್ಪರ ಸಂಬಂಧವೂ ಭೇದವೂ ಏನೆಂತ ಏಕಕಾಲದಲ್ಲಿಯೇ ವ್ಯಕ್ತವಾಗುವದು. ಶಿಕ್ಷಣ ವಿಧಾನಗಳೆರಡರಲ್ಲಿಯೂ ಭೇದಗಳಿರಬೇಕು. ಆದರೆ ಸ್ತ್ರೀಪುರುಷರು ಒಂದೇ ಸಮಾಜದ ಅಂಗಗಳಾಗಿರುವುದರಿಂದ ಇವರ ಶಿಕ್ಷಣಗಳಿಂದ ರೂಪುಗೊಳ್ಳುವ ಗುಣಗಳು ಒಂದಾಗಿ ಕೂಡಿಕೊಂಡು ಸಮಾಜದ ಒಂದೆ ಉದ್ದೇಶವನ್ನು ನೆರವೇರಿಸತಕ್ಕವುಗಳಾಗಿರಬೇಕೆಂಬುದು ಕರ್ವೆಯವರ ಸೂಚನೆಯ ತಾತ್ಪರ್ಯವಾಗಿರುವದು. ಆದ್ದರಿಂದ ಸ್ತ್ರೀಯರಿಗೆ ಪ್ರತ್ಯೇಕವಾಗಿ ಕರ್ವೆಯವರು ಸೂಚಿಸಿರುವ ಶಿಕ್ಷಣ ವಿಧಾನವು ಯಾವುದು? ಜಪಾನಿನಲ್ಲಿ ಸ್ಥಾಪಿಸಲ್ಪಟ್ಟಿರುವ ದೇಶಭಾಷೆಯ ಸ್ತ್ರೀಯರ ವಿಶ್ವವಿದ್ಯಾಲಯದ ಪದ್ಧತಿಯನ್ನು ವಿವರಿಸಿ ಅಲ್ಲಿರುವ ಶಿಕ್ಷಣ ಪದ್ಧತಿಯನ್ನು ಇಲ್ಲಿಯವರು ಅನುಸರಿಸಬಹುದೆಂದು ಹೇಳಿರುವರು. ಸ್ತ್ರೀಯರು ಮನುಷ್ಯರಂತೆಯೇ ಮಾನವವರ್ಗಕ್ಕೆ ಸೇರಿದವರಾದ್ದರಿಂದ ಸಾಮಾನ್ಯ ಶಿಕ್ಷಣಕ್ಕೆ ಪಾತ್ರರಾಗಿರುವರು.—ಬಾಲಿಕೆಯರು ಒಳ್ಳೇ ಸತಿಯರೂ ಮಾತೆಯರೂ ಆಗಬೇಕು.—ಬಾಲಿಕೆಗಳಲ್ಲಿಯ ತಮ್ಮ ಜೀವನಮಾರ್ಗವು ಜನಾಂಗದ ಹಾನಿವೃದ್ಧಿಗೆ ಕಾರಣವಾಗಿದೆ ಎಂಬುವ ಜವಾಬ್ದಾರಿಕೆಯನ್ನು ಸ್ತ್ರೀಯರು ಸದಾ ಸ್ಮರಣೆಗೆ ತಂದುಕೊಳ್ಳಬೇಕು—ಈ ಮೂರು ಸಂಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ತ್ರೀ ಶಿಕ್ಷಣವನ್ನು ಜಪಾನಿನ ವಿಶ್ವವಿದ್ಯಾಲಯ ಶಾಲೆಗಳಲ್ಲಿ ವ್ಯವಸ್ಥೆಗೊಳಿಸಿರುವರು. ಬಾಲಿಕೆಯರಿಗೆ ೩ ವರುಷ ಪ್ರಾಯದಿಂದ ೬ ವರುಷಗಳ ಪ್ರಾಯವಾಗುವ ವರೆಗೆ ಕಿಂಡರ್‌ಗಾರ್ಟನ್ ಅಭ್ಯಾಸ, ನಂತರ ೧೧ ವರುಷಗಳ ಪ್ರಾಯವಾಗುವ ತನಕ ಎಲಿಮೆಂಟರಿ ವಿದ್ಯಾಭ್ಯಾಸ, ೧೭ ವರುಷಗಳ ಪ್ರಾಯವಾಗುವ ತನಕ ಹೈಸ್ಕೂಲು ವಿದ್ಯಾಭ್ಯಾಸ, ನಂತರ ೩ ವರುಷಗಳ ಕಾಲದ ಕೋಲೇಜು ವಿದ್ಯಾಭ್ಯಾಸ—ಇದು ಅಲ್ಲಿಯ ಶಿಕ್ಷಣಕ್ರಮವಾಗಿದೆ. ಇದೇ ಕ್ರಮದಲ್ಲಿ ಒಂದೆರಡು ವರುಷಗಳ ಶಿಕ್ಷಣಕಾಲವನ್ನು ಕಡಮೆ ಮಾಡಿ ಹುಡುಗಿಯರಿಗೆ ೧೫ ಅಥವಾ ೧೭ ವಯಸ್ಸುಗಳಾಗುವಷ್ಟರಲ್ಲಿ ಸೆಕೆಂಡರಿ ವಿದ್ಯಾಭ್ಯಾಸವು ಪೂರ್ಣವಾಗುವ ಹಂಚಿಕೆಯನ್ನು ಈ ದೇಶದಲ್ಲಿ ಕೈಕೊಳ್ಳಬಹುದು. ಬಾಲಿಕೆಯರ ವಿವಾಹಪ್ರಾಯವು ಶಿಕ್ಷಿತ ವರ್ಗಗಳಲ್ಲಿ ಇನ್ನು ಬೇಗನೇ ೧೫ ಯಾ ೧

ವರುಷಗಳಿಗೆ ಏರಬಹುದಾದ್ದರಿಂದ ಬಾಲಿಕೆಯರಿಗೆ ಆಗತ್ಯವಿರುವ ಶಿಕ್ಷಣವನ್ನು ವಿವಾಹದ ಮೊದಲು ಸಂಗ್ರಹಿಸಿಕೊಳ್ಳಲು ಈ ಕ್ರಮದಿಂದ ಸಾಧ್ಯವಾಗುವದು ಮತ್ತು ವಿದ್ಯಾ ಯೋಗ್ಯತೆಯು ೧೫ ಯಾ ೧೬ ವರುಷಗಳಲ್ಲಿ ಪ್ರಾಪ್ತವಾಗುವದೆಂಬ ಕೋರಿಕೆಯಿಂದ ಮಾತೆಯರು ತಮ್ಮ ಬಾಲಿಕೆಯರನ್ನು ೧೫ ಯಾ ೧೬ ವರುಷಗಳ ಪ್ರಾಯವಾಗುವ ತನಕ ಶಾಲೆಗಳಲ್ಲಿ ಇರಗೊಳಿಸಲು ಇಷ್ಟಪಡಬಹುದು. ಶಾಲೆಗಳಲ್ಲಿ ಅಭ್ಯಾಸದ ಬಗ್ಗೆ ಇಟ್ಟಿರುವ ವಿಷಯಗಳು ಸ್ತ್ರೀ ಜೀವಿತಕ್ಕೆ ತುಂಬಾ ಅನುಕೂಲವಾದವುಗಳಾಗಿರುತ್ತವೆ. ಧರ್ಮಾಚಾರಗಳು, ಮಾತೃಭಾಷೆ, ಅಂಗ್ಲಭಾಷೆ, ಇತಿಹಾಸ, ಭೂಗೋಲಶಾಸ್ತ್ರ, ಗಣಿತ, ರಸಾಯನ ಶಾಸ್ತ್ರಗಳು, ಗೃಹಕೃತ್ಯ, ಹೊಲಿಯುವದು, ಗಾಯನ ಇತ್ಯಾದಿಗಳು ಈ ವಿಷಯಗಳಲ್ಲಿ ಮುಖ್ಯವಾಗಿರುವವು ಶಿಕ್ಷಣವೆಲ್ಲವನ್ನು ಅನ್ಯಭಾಷೆಯಲ್ಲಿ ಅಲ್ಲ, ದೇಶಭಾಷೆಯಲ್ಲಿಯೇ ಕಲಿಸುವರು ಕೋಲೇಜು ವರ್ಗಗಳಲ್ಲಿ ಸಹ ಶಿಕ್ಷಣವು ದೇಶಭಾಷೆಯಲ್ಲಿಯೇ ಕೊಡೋಣಾಗುವದು ಈ ವಿಶ್ವವಿದ್ಯಾಲಯವು ಜಪಾನಿನಲ್ಲಿ ಸ್ಥಾಪಿಸಲ್ಪಟ್ಟು ೧೮ ವರುಷಗಳಾದವು ಈ ವಿಶ್ವವಿದ್ಯಾನಿಲಯಕ್ಕೆ ಸೇರಿದ ಸುಮಾರು ೨೦೦ ವಿದ್ಯಾಸಂಸ್ಥೆಗಳು ಪ್ರಕೃತ ಇರುವವು ಸ್ತ್ರೀಯರೇ ಉಪಾಧ್ಯಾಯಿಗಳಾಗಿ ಸಿಕ್ಕಿದನಂತರ ಇಂಥಾ ವಿದ್ಯಾಸಂಸ್ಥೆಯ ಕೆಲಸವನ್ನು ಪ್ರಾರಂಭಿಸುವ ಎಂತ ಜಪಾನಿಯರು ಸುಮ್ಮನಿರಲಿಲ್ಲ ಈಗ ಸಹ ವಿಶ್ವವಿದ್ಯಾನಿಲಯದಲ್ಲಿರುವ ೬೦ ಜನ ಪಂಡಿತರಲ್ಲಿ ೫ ಜನರು ಮಾತ್ರ ಸ್ತ್ರೀಯರಾಗಿರುವರು ಇಂಥಾ ಸಂಸ್ಥೆಯನ್ನನುಸರಿಸಿ ಈ ದೇಶದಲ್ಲಿ ಸರಕಾರದವರೂ, ಆಶ್ರಿತ ಸಂಸ್ಥಾನಾಧಿಪತಿಗಳೂ, ಪ್ರಜಾವರ್ಗಗಳೂ ಇಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಬೇಕೆಂತ ಪಂಡಿತ ಕರ್ವೆಯವರು ವಿಜ್ಞಾಪಿಸಿಕೊಂಡಿರುತ್ತಾರೆ

ಕರ್ವೆಯವರು ತಮ್ಮ ಆಸಕ್ತಿಯನ್ನು ಒರೆ ಮಾತುಗಳಲ್ಲಿ ಮಾತ್ರ ಮುಗಿಸಿ ಬಿಡುವವರಲ್ಲ ಜಪಾನಿನ ವಿಶ್ವವಿದ್ಯಾನಿಲಯದ ಮಾದರಿಯಲ್ಲಿಯೇ ಮಹಾರಾಷ್ಟ್ರ ಮಹಿಳಾ ವಿಶ್ವವಿದ್ಯಾನಿಲಯದ ಸ್ಥಾಪನೆಯ ಕಾರ್ಯವು ಪ್ರಾರಂಭಿಸಲ್ಪಟ್ಟಿರುವುದೆಂತ ಸಾಮಾಜಿಕ ಪರಿಷತ್ತಿನಲ್ಲಿ ಸೂಚಿಸಿರುವರು ಪೂನೆಯ ಹಿಂಗಣೆಯ ವಿತಂತಾಲಯದ ಮಹಿಳಾಶ್ರಮ ಅಥವಾ ಬಾಲಿಕೆಯರ ಹ್ಯಾಸ್ಕೂಲನ್ನು ವಿಶ್ವವಿದ್ಯಾನಿಲಯದ ಪ್ರಥಮ ಕೋಲೇಜನ್ನಾಗಿ ಮಾಡುವರೆ ೧೮,೦೦೦ ರೂಪಾಯಿಗಳ ದ್ರವ್ಯ ಸಹಾಯವು ಈಗಲೇ ಒಂದಿರುವದು ಪಂಡಿತ ಕರ್ವೆಯವರು ಈ ರೀತಿ ಪ್ರಾರಂಭಿಸಿದ ಕಾರ್ಯವನ್ನು ಕೊನೆಗಾಣಿಸದೆ ಇರರು

ಪಂಡಿತ ಕರ್ವೆಯವರಿಂದ ಸೂಚಿಸೋಣಾದ ಸ್ತ್ರೀಶಿಕ್ಷಣದ ಕ್ರಮವು ಈ ರೀತಿ ಕರ್ವೆಯವರು ಅಪ್ಪಣೆಕೊಡಿಸಿದಂತೆ ಎರಡು ಸೂತ್ರಗಳನ್ನಾಧರಿಸಿಕೊಂಡಿರುವದು ಒಂದನೇದು—ಶಿಕ್ಷಣ ಹೊಂದುವವರ ಮಾತೃಭಾಷೆ ಅಥವಾ ದೇಶಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡುವದು ಅನುಕೂಲವೂ ಹಿತಕರವೂ ಉತ್ಕೃಷ್ಟವೂ ಆಗಿದೆ ಎರಡನೇದು—ಸಮಾಜದಲ್ಲಿ ಸ್ತ್ರೀವರ್ಗದವರಿಂದ ನೆರವೇರಬೇಕಾದ ಪುರುಷ ವರ್ಗದಿಂದ ಪ್ರತ್ಯೇಕವಾದ ಕರ್ತವ್ಯಗಳಿರುವವು. ಕರ್ವೆಯವರ ಈ ಸೂಚನೆಗಳನ್ನು ಸರ್ವರೂ ಮುಖ್ಯವಾಗಿ ಸ್ತ್ರೀಶಿಕ್ಷಣ ಚಾಲಕರು ತಮ್ಮ ದೃಷ್ಟಿಪಥದಲ್ಲಿಟ್ಟುಕೊಂಡು ಶಿಕ್ಷಣ ಪ್ರಸರಣೆ ಕಾರ್ಯಸಾಧನಗಳನ್ನು ನಡಿಸುವರಾಗಿ ನಂಬಿದ್ದೇವೆ

ಪರಂಗಿ ಮರ.

ಪಪ್ಪಾಯಿ ಅಥವಾ ಪರಂಗಿಕಾಯಿಯೂ ಹಣ್ಣೂ ಔಷದಕ್ಕೆ ಉಪಯೋಗವಾಗುತ್ತವೆ ತಿಳಿದವರು ಬಹು ಕಾಲದಿಂದಲೂ ಇವುಗಳಿಂದ ಬಗೆ ಬಗೆಯ ಔಷದಗಳನ್ನು ಮಾಡಿ ವಿಕ್ರಯಿಸಿ ಲಾಭ ಹೊಂದುತ್ತಿರುವರು ಪರಂಗಿ ಹಣ್ಣು ಇನ್ನೂ ಬೇರೆ ಬೇರೆ ಕೆಲಸಗಳಿಗೆ ಉಪಯೋಗವಾಗುತ್ತದೆಂದು ಈಚೆಗೆ ಕಂಡು ಹಿಡಿದಿರುವರು ಆದಕಾರಣ ಅದಕ್ಕೆ ಮುಂದೆ ತುಂಬ ಗಿರಾಕಿ ಹೆಚ್ಚಿ, ಆ ವ್ಯಾಪಾರವು ವಿಶೇಷ ಲಾಭಕರವಾಗಬಹುದು ಪರಂಗಿ ಹಣ್ಣು ಹೊಟ್ಟೆಯುಬ್ಬರ, ಅಜೀರ್ಣರೋಗ ಮೊದಲಾದ ವ್ಯಾಧಿಗಳಿಗೆ ಬಹಳವಾಗಿ ಉಪಯೋಗವಾಗುತ್ತದೆ "ಪರಂಗಿ ಕಾಯಿನ ಹಾಲಿನಿಂದ ಹೊಟ್ಟೆಯಲ್ಲಿರುವ ಹುಳಗಳಿಗೂ, ಚರ್ಮದ ಮೇಲೆ ಏಳುವ ಕಜ್ಜಿತುರಿ ಮೊದಲಾದವುಗಳಿಗೂ ಔಷಧ ಮಾಡುತ್ತಾರೆ. ಕಲಿಕತ್ತಾ ಪಟ್ಟಣದ ವೈದ್ಯರೊಬ್ಬರು ಅದರಿಂದ ಒಂದು ಬಗೆಯ ಔಷಧವನ್ನು ಮಾಡಿ, ಅದಕ್ಕೆ ತಮ್ಮ ಹೆಸರಿನಲ್ಲಿ "ಪೇಟೆಂಟ್" ಅಥವಾ 'ಸನ್ನದು' ಪಡೆದಿದ್ದಾರೆ ಹಿಂದುದೇಶದ ವಾಸಿಗಳು ಸಾಮಾನ್ಯವಾಗಿ ಶಾಕಾಹಾರಿಗಳು ಆದಕಾರಣ ಸಸ್ಯ ಪದಾರ್ಥಗಳನ್ನು ಸರಿಯಾಗಿ ಬೇಯಿಸದೆ ತಿಂದರಾಗಲಿ, ಅಥವಾ ಅವುಗಳನ್ನು ಹೆಚ್ಚಾಗಿ ತಿಂದರಾಗಲಿ, ಚೆನ್ನಾಗಿ ಜೀರ್ಣವಾಗದೆ ಕಾಲರ, ಅತಿಸಾರ, ಆಮಶಂಕೆ ಮೊದಲಾದ ವ್ಯಾಧಿಗಳುಂಟಾಗುತ್ತವೆ. ಪರಂಗಿ ಹಣ್ಣನ್ನು ಸದ್ಯಕ್ಕೆ ಸಿಲೋನ್ ಮತ್ತು ಜಮೈಕಾ ದೇಶದವರು ವಿಶೇಷವಾಗಿ ಬೆಳೆದು ಇಂಗ್ಲೆಂಡ್, ಐರ್ಲೆಂಡ್, ಸ್ಕಾಟ್ಲೆಂಡ್, ಬೆಲ್ಜಿಯಂ, ಜರ್ಮನಿ, ಅಮೆರಿಕಾ ಸಂಯುಕ್ತಸಂಸ್ಥಾನ ಮೊದಲಾದ ಹೊರಗಿನ ದೇಶಗಳಿಗೆ ಕಳುಹಿಸುತ್ತಾರೆ. ಅವುಗಳಲ್ಲಿ ಅಮೆರಿಕಾ ಸಂಯುಕ್ತಸಂಸ್ಥಾನಕ್ಕೇ ಹೆಚ್ಚಾಗಿ ಹೋಗುವುದು. ಬೆಳೆಯುವ ಸ್ಥಳದಿಂದ ಅನ್ಯದೇಶಗಳಿಗೆ ಕಳುಹಿಸುವಾಗ ಪರಂಗಿ ಹಣ್ಣಿನ ಹಾಲನ್ನು ಒಣಗಿಸಿ ಪುಡಿಮಾಡಿ ಶುದ್ಧಪಡಿಸಿ ಸಾಗಿಸುತ್ತಾರೆ. ಈ ಸ್ಥಿತಿಯಲ್ಲಿ ಅದಕ್ಕೆ ಒಂದು ಪೌಂಡು (ಅಥವಾ ೪೦ ತೊಲಾ) ತೂಕಕ್ಕೆ (೧೨ ಶಿಲಿಂಗ್ ಎಂದರೆ) ೯ ರೂಪಾಯಿ ಬೆಲೆಯಾಗುತ್ತದೆ. ೧೯೧೩ರಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಇದು ೧೬,೫೮೮ ಪೌಂಡು ತೂಕದಷ್ಟು ವಿಕ್ರಯವಾಯಿತೆಂದೂ, ಅದರಿಂದ ೭೧,೮೪೭ ರೂಪಾಯಿ ಉತ್ಪತ್ತಿಯಾಯಿತೆಂದೂ ಗೊತ್ತಾಗುತ್ತದೆ. ಅದರ ಹಿಂದಿನ ಎರಡು ವರ್ಷಗಳಲ್ಲಿ ಇದಕ್ಕೆ ಎರಡರಷ್ಟು ವಿಕ್ರಯವಾದಂತೆ ತಿಳಿಯಬಂದಿದೆ. ಇದನ್ನು ಯಾವಾಗಲೂ ಪುಡಿಯಾಗಿಯೇ ಮಾಡಿ ಮಾರುವುದರಿಂದ, ಇದಕ್ಕೆ ಹಸಿಹಿಟ್ಟು, ಅಕ್ಕಿಗಂಜಿ ಮೊದಲಾದ ಯಾವುದಾದರೂ ಒಂದು ಪಿಷ್ಟವಸ್ತುವನ್ನು ಬೆರಸಿ ಮಾರುತ್ತಾರೆ

ಪರಂಗಿ ಕಾಯಲ್ಲಿರುವ ಹಾಲನ್ನು ಶುದ್ಧಪಡಿಸಬೇಕಾದರೆ, ಅದನ್ನು ಮೊದಲು ಉಬ್ಬಾದ ಬಟ್ಟೆಗಳಲ್ಲಿ ಸೋಧಿಸಿ ತೆಗೆದು, ಅದರ ಮೂರರಷ್ಟು ಪ್ರಮಾಣದ 'ಆಲ್ಕೊಹಾಲ್' ಎಂಬ ಮದ್ಯವನ್ನು ಅದಕ್ಕೆ ಸೇರಿಸುತ್ತಾರೆ. ಹಾಗೆ ಮಾಡಿದರೆ ಪಪ್ಪಾಯಿ ಚೂರ್ಣವು ಅಡಿಯಲ್ಲಿ ತಂಗುತ್ತದೆ. ಈ ವಿಧಾನವೇ ಒಳ್ಳೆಯದು. ಆದರೆ ಇದಕ್ಕೆ ಖರ್ಚು ಹೆಚ್ಚಾಗುವುದು. ಆದಕಾರಣ ಅದನ್ನು ಬೇರೆ ವಿಧಾನದಿಂದ ಮಾಡುತ್ತಾರೆ. ಹೇಗೆಂದರೆ, ದೋರಗಾಯಾಗಿರುವ ಹಣ್ಣುಗಳನ್ನು ಮರದ ಮೇಲೆಯೇ ಆರಿಸಿ, ಅದು ಅಲ್ಲಿರುವಂತೆಯೇ ಒಂದೊಂದನ್ನೂ ಬಹಳ ಹರಿತವಿಲ್ಲದ ಕೊಂಬಿನ ಚೂರಿಗಳಿಂದ ನೀಟಾಗಿ ಒಂದೊಂದಂಗುಲ ದೂರಕ್ಕೆ, ಉದ್ದಕ್ಕೂ ಎಂದರೆ ಮೇಲಿಂದ ಕೆಳಗಿನ ವರೆಗೆ, ಕಚ್ಚು ಮಾಡುತ್ತಾರೆ ಕಚ್ಚು ಮಾಡುವಾಗ ಚೂರಿಯು ದೋರ ಹಣ್ಣಿನಲ್ಲಿ ¼ ಅಂಗುಲದವರೆಗೆ ಇಳಿಯುತ್ತದೆ ಕಚ್ಚು ಮಾಡಿದ ಸ್ಥಳಗಳಿಂದ ಸುರಿಯುವ ಹಾಲನ್ನು ಗಾಜು ಅಥವಾ ಪಿಂಗಾಣಿ ತಟ್ಟೆಗಳಲ್ಲಿ ಹಿಡಿದು ತೆಗೆಯುತ್ತಾರೆ ಈ ಹಾಲಿಗೆ ಗಾಳಿ ಸೋಕಿದಕೂಡಲೆ ಹೆಪ್ಪುಕಟ್ಟಿಕೊಳ್ಳುತ್ತದೆ ಆ ಮೇಲೆ ಇದನ್ನು ಬಿಸಿಲಲ್ಲಿಟ್ಟು ಬೇಗ ಬೇಗ ಒಣಗಿಸಬೇಕು ಒಣಗಿದ ಮೇಲೆ ಇದು ಸುಲಭವಾಗಿ ಪುಡಿಯಾಗುತ್ತದೆ. ಒಣಗುವುದರಲ್ಲಿ ಹೊತ್ತಾದರೆ, ಹೆಪ್ಪುಕಟ್ಟಿಕೊಂಡು ಹಾಲು ಕೊಳೆತು ಕೆಟ್ಟುಹೋಗುವುದು ಹಾಲು ಚೆನ್ನಾಗಿ ಒಣಗಿದ ಮೇಲೆ, ಅದಕ್ಕೆ "ಫಾರ್ಮಲಿನ್" ಎಂಬ ವಸ್ತುವನ್ನು ತಕ್ಕ ಪ್ರಮಾಣಕ್ಕೆ ಸೇರಿಸಿ ಪುಡಿಮಾಡಿ, ಅನಂತರ ಆ ಪುಡಿಯನ್ನು ಗಾಜಿನ ಸೀಸೆಗಳಲ್ಲಿ ತುಂಬಿ, ಮಾರಾಟಕ್ಕೆ ಇತರ ದೇಶಗಳಿಗೆ ಕಳುಹಿಸುತ್ತಾರೆ ಹಾಲು ತೆಗೆದ ಹಣ್ಣನ್ನು ೩ ೪ ದಿವಸಗಳ ಮೇಲೆ ಮರದ ಮೇಲಿಂದ ಕೊಯ್ದು ಕೆಳಕ್ಕೆ ಇಳಿಸುತ್ತಾರೆ. ದೋರ ಹಣ್ಣುಗಳನ್ನು ಕಚ್ಚು ಮಾಡುವುದಕ್ಕೆ ತಕ್ಕ ಅಗ್ಗವಾದ ಚೂರಿಗಳನ್ನೂ, ಕಾಯಿಂದ ಸುರಿಯುವ ಹಾಲನ್ನು ಹಿಡಿದು ತೆಗೆಯುವುದಕ್ಕೆ ತಕ್ಕ ಅಗ್ಗವಾದ ತಟ್ಟೆಗಳನ್ನೂ ಇದುವರೆಗೆ ಯಾರೂ ಕಂಡುಹಿಡಿದಿಲ್ಲ ಅಲ್ಲದೆ, ತೋಟದಾಳುಗಳು ಎಷ್ಟೇ ಅಗ್ಗವಾದ ಕೂಲಿಗೆ ಸಿಕ್ಕಿದರೂ, ಒಂದೊಂದು ಕಾಯಿಗೆ ಒಬ್ಬೊಬ್ಬನು ನಿಂತು ಹಾಲನ್ನೆತ್ತುವುದೆಂದರೆ ಅಸಾಧ್ಯ ಈ ಕೆಲಸವನ್ನು ಇನ್ನೂ ಸುಲಭವಾಗಿಯೂ ಜಾಗ್ರತೆಯಾಗಿಯೂ ಮಾಡುವುದಕ್ಕೆ ಯಾವುದಾದರೂ ಒಂದು ಉಪಾಯವನ್ನು ಕಂಡು ಹಿಡಿಯಬೇಕು ಹಾಲನ್ನು ಬೇಗಬೇಗ ಒಣಗಿಸುವುದಕ್ಕೆ ಮಾತ್ರ ಒಂದು ಉಪಾಯವನ್ನು ಕಂಡು ಹಿಡಿದಿರುವರು, ಆ ಉಪಾಯವೇನೆಂದರೆ, ಬೆಂಕಿ ಹಾಕಿ "೧೦೦ ಡಿಗ್ರಿ ಸೆಂಟಿಗ್ರೇಡ್" (ಎಂದರೆ ಕುದಿಯುವ ಬಿಸಿಯುಳ್ಳ), ಅಥವಾ ಸ್ವಲ್ಪ ಕಡಿಮೆ ಉಷ್ಣವುಳ್ಳ ಪಾತ್ರೆಗಳಲ್ಲಿ ಹೆಪ್ಪುಗಟ್ಟಿದ ಹಾಲನ್ನು ಒಣಗಿಸುತ್ತಾರೆ ಆ ಮೇಲೆ ಅದನ್ನು ಚೂರು ಚೂರಾಗಿ ಒಡೆದು, ಕಾಫಿ ಪುಡಿಮಾಡುವ ಯಂತ್ರದ ಹಾಗಿರುವ ಅರೆಯುವ ಯಂತ್ರದಲ್ಲಿ ಹಾಕಿ ಪುಡಿಮಾಡಿ, ಅನಂತರ ಅದನ್ನು ಗಾಜಿನ ಜಾಡಿಗಳಲ್ಲಿ ತುಂಬುತ್ತಾರೆ. ಈ ಪುಡಿಯು ಸ್ವಲ್ಪ ಹುಳಿಗೂ ಉಪ್ಪುಪ್ಪಾಗಿಯೂ, ಒಂದು ವಿಚಾರೀಯವಾದ ವಾಸನೆಯಿಂದ ಕೂಡಿಯೂ ಇರುತ್ತದೆ. ಹಸಿಯ ಕಾಯಿನ ಹಾಲು ಮೈಮೇಲೆ ಮೃದುವಾದ ಭಾಗಕ್ಕೆ ಬಿದ್ದರೆ ಗುಳ್ಳೆಯಾಗುತ್ತದೆ ಪಪ್ಪಾಯಿ ಚೂರ್ಣವು ಎಷ್ಟೆಷ್ಟು ಬೆಳ್ಳಗಿದ್ದರೆ ಅಷ್ಟಷ್ಟು ಬೆಲೆ ಹೆಚ್ಚು ಆದರೆ ಅದರ ಬಣ್ಣವನ್ನು ಹೋಗಿಸಿ ಶುಭ್ರವಾಗಿ ಮಾಡುವ ಕಾಲದಲ್ಲಿ ಅದರ ಔಷಧಗುಣವು ಕಡಿಮೆಯಾಗುವುದೆಂದು ಹೇಳುತ್ತಾರೆ

ಪರಂಗಿ ಗಿಡವು ಹಿಂದುದೇಶದಲ್ಲಿ ಅನೇಕ ಕಡೆ ಬೆಳೆಯುತ್ತದೆ. ಆದರೆ ಅದಕ್ಕೆ ಜಿಗಟು ಮಣ್ಣಾಗಲಿ, ಸುಮಾರಾದ ಗರಸು ನೆಲವಾಗಲಿ ಒಳ್ಳೆಯದು. ಪಶ್ಚಿಮ ಸಮುದ್ರ ತೀರದಂತೆ ಶೀತೋಷ್ಣ ಪ್ರದೇಶವಾಗಿರುವ ಕಡೆಗಳಲ್ಲಿ ಅದು ಚೆನ್ನಾಗಿ ಬೆಳೆಯುತ್ತದೆ ಸಾಧಾರಣವಾಗಿ ಅದು ಸಮುದ್ರ ಮಟ್ಟ ಮೊದಲ್ಗೊಂಡು ಆ ಮಟ್ಟಕ್ಕೆ ೩೦೦೦ ಅಡಿ ಎತ್ತರದವರೆಗೂ ಇರುವ ಪ್ರದೇಶಗಳಲ್ಲೆಲ್ಲ ಬೆಳೆಯುತ್ತದೆ ಪಪ್ಪಾಯಿ ಪುಡಿಯನ್ನು ಇಂಡಿಯಾದೇಶದಲ್ಲಿ ಅಷ್ಟಾಗಿ ತಯಾರು ಮಾಡುವುದಿಲ್ಲ ಏಕೆಂದರೆ, ಇಲ್ಲಿಯವರು ಪಪ್ಪಾಯಿ ಗಿಡವನ್ನು ತೋಟದ ಹಣ್ಣು ಮರದ ಹಾಗೆ ಭಾವಿಸುತ್ತಾರೇ ಹೊರತು, ಆದರಿಂದ ವಿಶೇಷ ಲಾಭವಿದೆಯೆಂದು ಪ್ರತ್ಯೇಕವಾಗಿ ಬೆಳೆಯಿಸಿ ಪ್ರಯೋಜನ ಹೊಂದುವ ಆಲೋಚನೆ ಮಾಡುತ್ತಿಲ್ಲ. ಇದರ ಎಲೆಯಲ್ಲಿ ಗಟ್ಟಿ ಮಾಂಸವನ್ನು ಸುತ್ತಿಟ್ಟರೆ ಮೃದುವಾಗುತ್ತದೆ, ಅಥವಾ ಈ ಕಾಯಿನ ಚೂರಿನೊಡನೆ ಅದನ್ನು ಹಾಕಿ ಬೇಯಿಸಿದರೂ ಮೃದುವಾಗುತ್ತದೆ. ಪರಂಗಿ ಕಾಯನ್ನು ಇತರ ಕಾಯಿ ಪಲ್ಯಗಳ ಹಾಗೆ ಉಪಯೋಗಿಸಿ ಅವರಿಂದ ಹುಳಿ, ಕೂಟು, ಪಲ್ಯ ಮೊದಲಾದುವನ್ನು ಮಾಡಬಹುದು. ಇದರಿಂದ ಉಪ್ಪಿನಕಾಯನ್ನೂ ಮಾಡಬಹುದು. ಕಳಿತ ಹಣ್ಣನ್ನು ಹೆಚ್ಚಿ, ಐಸ್ ಅಥವಾ ನೀರ್ಗಲ್ಲಿನಲ್ಲಿಟ್ಟು ತಿನ್ನುತ್ತಾರೆ. ಬೀಜವಿಲ್ಲದೆ ಒಳ್ಳೆಯ ಹಣ್ಣಾದರೆ

ಬಹಳ ರುಚಿ ಮೆತ್ತಗೆ ಕರಿಯ ಮೆಣಸಿನಂತಿರುವ ಅದರ ಬೀಜಗಳನ್ನು ಅಗಿದು ನೋಡಿದರೆ ಕ್ಷಾರವಾಗಿರುತ್ತದೆ ಅವು ಬಿತ್ತುವುದಕ್ಕೆ ಬರುವುದೇ ಹೊರತು ಬೇರೆ ಯಾವುದಕ್ಕೂ ಪ್ರಯೋಜನವಾಗುವಂತೆ ಕಂಡು ಬಂದಿಲ್ಲ ಹೊಸ ಬೀಜಗಳಾದರೆ ೧೫ ದಿವಸಗಳಲ್ಲಿ ಮೊಳಕೆಯೇಳುತ್ತವೆ, ಹಳೆಯದಾದರೆ ಇನ್ನು ಕೆಲವು ಕಾಲ ಹಿಡಿಯುವುದು ಚೆನ್ನಾಗಿ ಬೆಳೆದ ಪರಂಗಿ ಹಣ್ಣಾದರೆ, ಸಿಪ್ಪೆಸುಲಿಯದ ತೆಂಗಿನ ಕಾಯಷ್ಟು ಗಾತ್ರವಿರುತ್ತದೆ ಹಣ್ಣು ಒಳಗಡೆ ಟೊಳ್ಳಾಗಿರುತ್ತದೆ ಹಣ್ಣಿನ ತಿರುಳು ಸಿಪ್ಪೆಗೆ ಅಂಟಿಕೊಂಡು ೨॥—೩ ಅಂಗುಲದಷ್ಟು ಮಂದವಾಗಿರುತ್ತದೆ ಒಳ್ಳೆಯ ಹಣ್ಣಿನ ತಿರುಳು ಬಾಯಿಗೆ ಹಾಕಿಕೊಂಡರೆ ಕರಗಿಹೋಗುತ್ತದೆ ಜಮೈಕಾ ದ್ವೀಪದಲ್ಲಿ ಇದನ್ನು ೬ ೧೦ ಅಡಿ ದೂರಕ್ಕೆ ಒಂದೊಂದರಂತೆ ಹಾಕಿ ಬೆಳೆಯಿಸುತ್ತಾರೆ, ಎಂದರೆ ಒಂದು ಎಕರೆಗೆ ೫೪೦ ಗಿಡಗಳಿರುತ್ತವೆ ಅವು ಮೊದಲನೆಯ ವರ್ಷದಿಂದ ಮುಂದೆ ೫ ವರ್ಷಗಳವರೆಗೆ ಧಾರಾಳವಾಗಿ ಕಾಯಿಬಿಡುತ್ತವೆ ಒಂದೊಂದರಲ್ಲಿಯೂ ವರ್ಷಕ್ಕೆ ಸುಮಾರು ೩೦ ೬೦ ಕಾಯಿಗಳು ಬಿಡಬಹುದು

ಪರಂಗಿ ಗಿಡವು ಆಫ್ರಿಕಾ ಅಥವಾ ಸಿಲೋನ್ ದ್ವೀಪದಲ್ಲಿ ಬೆಳೆಯುತ್ತಿರುವ ಮರವಲ್ಲ ಡಚ್ಚರೊ ಪೋರ್ಚುಗೀಸರೋ ಇಲ್ಲಿಗೆ ಬಂದಾಗ ಅವರಲ್ಲಿ ಯಾರೋ ಒಬ್ಬರು ಮಧ್ಯದ ಅಮೆರಿಕಾದಿಂದಲೋ, ಪಶ್ಚಿಮ ದ್ವೀಪಸ್ತೋಮದಿಂದಲೋ ಇದನ್ನು ತಂದು, ಇಲ್ಲಿ ೧೬೦೦ನೆಯ ಇಸವಿಯಲ್ಲಿ ಮೊದಲು ಮೊದಲು ಬೆಳೆಸಿದ ಹಾಗೆ ತೋರುತ್ತದೆ ಆ ವೇಳೆ ಸಿಲೋನ್ ದ್ವೀಪದಿಂದ ಇದು ನಮ್ಮ ಹಿಂದುದೇಶಕ್ಕೆ ಬಂದಿರಬೇಕು. ಈ ಮರವು, ದೂರಕ್ಕೆ ನೋಡಿದ ಕೂಡಲೆ, ಈಚಲು ಅಥವಾ ತಾಳೆಯ ಮರದ ಹಾಗೆ ಕಾಣುತ್ತದೆ ಬುಡದಲ್ಲಿರುವ ಇದರ ಕಾಂಡವು ಟೊಳ್ಳಾಗಿರುತ್ತದೆ ದಂಟಿನಂತೆ ಉದ್ದುದ್ದವಾದ ಕಾವುಗಳ ಕೊನೆಯಲ್ಲಿ ಅಗಲವಾದ ಇಗರ ಎಲೆಗಳು ತಾಳೆಯ ಗರಿಯೋಪಾದಿಯಲ್ಲಿರುತ್ತವೆ ಇದರ ಹೂಗಳು ಬಿಳಿಯ ಹೊಂಬಣ್ಣದಂತಿರುತ್ತವೆ ಪರಂಗಿ ಗಿಡದಲ್ಲಿ ಗಂಡು ಹೆಣ್ಣು ಎಂಬ ಎರಡು ಜಾತಿಗಳುಂಟು ಗಂಡು ಮರಕ್ಕಿಂತಲೂ ಹೆಣ್ಣು ಮರದಲ್ಲಿಯೇ ಸರ್ವೋತ್ಕೃಷ್ಟವಾದ ಹಣ್ಣು ಬಿಡುವದು

ಪರಂಗಿ ಹಣ್ಣಿನ ಸಿಪ್ಪೆಯು ಬಹಳ ಮಿದುವಾಗಿರುವುದರಿಂದ, ಅಮುಕಿದರೆ ಹಣ್ಣು ಬಲುಬೇಗ ಕೆಟ್ಟುಹೋಗುವುದು ಕಳಿತ ಹಣ್ಣನ್ನು 'ಐಸ್ ಅಥವಾ ನೀರ್ಗಡ್ಡೆ' ಯಲ್ಲಿ ಇಟ್ಟಿಟ್ಟು ಮಾರಬಹುದು ಆದರೆ ಹಣ್ಣನ್ನು ಮಾರುವುದಕ್ಕಿಂತಲೂ ಮೇಲೆ ಹೇಳಿದ ಕ್ರಮದಿಂದ ಪಪ್ಪಾಯಿ ಪುಡಿಯನ್ನು ಮಾಡಿ ಮಾರುವುದು ವಿಶೇಷ ಲಾಭಕರ ಇದು ಇನ್ನೂ ಯಾವ ಯಾವ ಕೆಲಸಕ್ಕೆ ಉಪಯೋಗವಾಗುವುದೆಂಬ ವಿಷಯವು ತಿಳಿದ ಪಕ್ಷದಲ್ಲಿ ಇದರ ವ್ಯವಸಾಯದಿಂದ ಉಂಟಾಗಬಹುದಾದ ಪ್ರಯೋಜನವನ್ನು ಕುರಿತು ಅಷ್ಟಿಷ್ಟೆಂದು ಹೇಳುವುದಕ್ಕಿಲ್ಲ

ಅ ಪ

ಸಾಬೂನು ಕೈಗಾರಿಕೆ.

ಮದ್ರಾಸಿನಲ್ಲಿ ಇತ್ತಲಾಗೆ ಜರುಗಿದ ವಸ್ತುಪ್ರದರ್ಶನದಲ್ಲಿ ಸಾಬೂನು ಕೈಗಾರಿಕೆಯ ವಿಷಯ ಒಂದು ಉಪನ್ಯಾಸವನ್ನು ಸರ್ ಫ್ರೆಡರಿಕ್ ನಿಕೊಲ್ಸನ್‌ರವರು ಕೊಟ್ಟಿದ್ದರು ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರು ಯಾರೆಂಬುದು ವಾಚಕರಿಗೆ ಗೊತ್ತಿರಬಹುದು ಮೀನಿನ ಕೈಗಾರಿಕೆಯನ್ನು ವ್ಯವಸ್ಥೆಗೊಳಿಸಲು ನೇಮಿಸಲ್ಪಟ್ಟ ಆಫೀಸರರು ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರಾಗಿರುತ್ತಾರೆ ಮಲೆಬಾರಿನ ತಾಣೂರು ಎಂಬಲ್ಲಿ ಮೀನಿನ ಕೈಗಾರಿಕೆಯ ಒಂದು ಸರಕಾರದ ಠಾಣ್ಯವು ಇರುವದು ರಾ| ಮೇನನ್ ಎಂಬವರು ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರಿಗೆ ಸಹಾಯಕ ಆಫೀಸರರಾಗಿ ಅಲ್ಲಿ ಕೆಲಸಮಾಡುತ್ತಿದ್ದವರು ನಮ್ಮ ಜಿಲ್ಲೆಯಲ್ಲಿ ಸಹ ಮೀನು ಕೈಗಾರಿಕೆಯ ವೃತ್ತಿಯನ್ನು ನಡಿಸುವಂಥವರಿಗೆ ಈ ಮೇನನ್‌ರವರು ಆಗಿಂದಾಗ್ಯೆ ಒಂದು ಬೇಕಾದ ಮಾಹಿತಿಯನ್ನು ಕೊಡುವಂಥಾದ್ದು ವಾಚಕರು ತಿಳಿದಿರಬಹುದು. ಮೇನನ್‌ರವರು ಸಾಬೂನು ಕೈಗಾರಿಕೆಯ ಮಾಹಿತಿಯುಳ್ಳವರು. ಇವರ ಸಹಾಯದಿಂದ ತಾಣೂರಿನಲ್ಲಿ ಮೀನಿನ ಎಣ್ಣೆಯಿಂದ ಸಾಬೂನುಗಳನ್ನು ಮಾಡುತ್ತಿರುವರು ಇತರ ವಿಧದ ಎಣ್ಣೆಗಳಿಂದ ಸಹ ತಾಣೂರಿನಲ್ಲಿ ನಾನಾ ಬಗೆಯ ಸಾಬೂನುಗಳನ್ನು ಮಾಡಲು ಪ್ರಾರಂಭಿಸಿರುವರು. ಹೀಗೆ ತಯ್ಯಾರಿಸಲ್ಪಟ್ಟ ಸಾಬೂನುಗಳನ್ನು ಮದ್ರಾಸಿನ ವಸ್ತುಪ್ರದರ್ಶನದಲ್ಲಿ ದೇಖಾವೆ ಬಗ್ಗೆ ಇಟ್ಟಿದ್ದರು. ರಾ| ಮೇನನ್‌ರವರಿಂದಲೂ ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರಿಂದಲೂ ನಡಿಸಲ್ಪಟ್ಟ ಪರಿಶೋಧನೆಗಳ ಫಲವನ್ನು ಸಂಗ್ರಹಿಸಿಕೊಂಡು ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರು ಈ ಕೈಗಾರಿಕೆಯವರಿಗೆ ಬಹಳ ಉಪಯೋಗಕರವಾದ ಒಂದು ಉಪನ್ಯಾಸವನ್ನು ಕೊಟ್ಟಿರುತ್ತಾರೆ.

ದೇಶದ ಇತರ ಎಲ್ಲಾ ಪ್ರಾಂತ್ಯಗಳಿಗಿಂತ ಮದ್ರಾಸು ಸಂಸ್ಥಾನವು ಸಾಬೂನು ಕೈಗಾರಿಕೆಯ ಸ್ಥಾಪನೆಗೆ ಬಹಳ ಉಪಯುಕ್ತವಾದ ಸ್ಥಾನವೆಂತ ಇವರ ಉಪನ್ಯಾಸದಿಂದ ತೋರಿಬರುತ್ತದೆ. ಏಕಂದರೆ ಸಾಬೂನು ಕೈಗಾರಿಕೆಗೆ ಬೇಕಾದ ಎಣ್ಣೆಗಳನ್ನು ಈ ಸಂಸ್ಥಾನದಲ್ಲಿ ಸಂಗ್ರಹಿಸಲಾಗುವಷ್ಟು ಬೇರೆ ಯಾವ ಕಡೆಗಳಲ್ಲಿಯೂ ಆಗದು ಎಳ್ಳಿನ ಎಣ್ಣೆ, ತೆಂಗಿನಎಣ್ಣೆ, ನೆಲಕಡಲೆ ಎಣ್ಣೆ, ಇನ್ನೂ ಈ ಸಂಸ್ಥಾನದ ಕಾಡುಗಳಲ್ಲಿ ಬೆಳೆಯುವ ನಾನಾ ಬಗೆಯ ಕಾಯಿಗಳಿಂದ ದೊರಕುವ ಎಣ್ಣೆಗಳು ಈ ಸಂಸ್ಥಾನದಲ್ಲಿ ಸಂಗ್ರಹಿಸಲು ಬಹಳ ಅನುಕೂಲವಾಗಿರುವದು. ಇಂಥಾ ಎಣ್ಣೆಗಳನ್ನು ತಯ್ಯಾರಿಸಲು ಬೇಕಾದ ಎಣ್ಣೆ ಕಾರ್ಖಾನೆಗಳೊಡನೆ ಸಾಬೂನು ಕಾರ್ಖಾನೆಗಳನ್ನು ಸ್ಥಾಪಿಸಿದರೆ ಸಾಬೂನು ಕೈಗಾರಿಕೆಯು ಇತರ ಎಲ್ಲಾ ವಿದೇಶಗಳಿಗಿಂತ ಇಲ್ಲಿ ವಿಶೇಷ ಲಾಭಕರವಾಗಿ ಪರಿಣಮಿಸುವದೆಂತ ಸರ್ ಫ್ರೆಡ್ರಿಕ್‌ರವರು ತಮ್ಮ ಪರಿಶೋಧನೆಗಳ ಆಧಾರದ ಮೇಲೆ ಹೇಳಿರುತ್ತಾರೆ ಮದ್ರಾಸು ಸಂಸ್ಥಾನದ ವಾಯುಗುಣವು ಸಹ ಸಾಬೂನು ಕೈಗಾರಿಕೆಗೆ ಅನುಕೂಲವಾಗಿರುವದು ಇದಕ್ಕೆ ಬೇಕಾದ "ಕಾಸ್ಟಿಕ್ ಆಲ್ಕಲಿ" ಹೊರತು ಇತರ ಎಲ್ಲಾ ಪದಾರ್ಥಗಳು ಈ ಸಂಸ್ಥಾನದಲ್ಲಿಯೇ ದೊರಕುತ್ತವೆ. ಈ "ಆಲ್ಕಲಿ"ಯು ಸಾಬೂನುಗಳ ಬಗ್ಗೆ ಉಪಯೋಗಿಸಲ್ಪಡುವ ಎಣ್ಣೆಗಳ ಸೇಕಡಾ ೧೦ ಪಾಲಿದ್ದರೆ ಸಾಕು ಅಂದರೆ ಸಾಬೂನು ಕೈಗಾರಿಕೆಗೆ ಬೇಕಾದ ಸಾಮಾಗ್ರಿಗಳಲ್ಲಿ ೯೦ ಪಾಲಷ್ಟು ಸಾಮಾಗ್ರಿಗಳು ಈ ಸಂಸ್ಥಾನದಲ್ಲಿ ದೊರಕುವವು ಒರೇ ಹತ್ತು ಪಾಲಷ್ಟು ಸಾಮಾಗ್ರಿಗಳು ಹೊರಗಿನಿಂದ ನಮಗೆ ಒಂದುವೇಳೆ ಬೇಕಾದಾವು. ಆದರೆ ಪ್ರಕೃತ ಸಾಬೂನುಗಳನ್ನು ತಯ್ಯಾರಿಸಿ ಅವುಗಳನ್ನು ಈ ದೇಶಗಳಿಗೆ ಕಳುಹಿಸಿಕೊಡುವ ಇಂಗ್ಲಾಂಡ್, ಫ್ರಾನ್ಸು, ಜಪಾನು ಮೊದಲಾದ ವಿದೇಶಗಳಲ್ಲಿ ಸೇಕಡಾ ೧೦ರಷ್ಟು ಬೇಕಾಗಿರುವ 'ಆಲ್ಕಲಿ' ಮಾತ್ರ ದೊರಿಯುವದು ಬಾಕಿ ೯೦ ಪಾಲಷ್ಟು ಸಾಮಾಗ್ರಿಗಳು ಅಂದರೆ ಎಣ್ಣೆ ಇತ್ಯಾದಿಗಳು ಈ ದೇಶದಿಂದಲೂ ಇತರ ದೂರವಾದ ಪ್ರಾಂತ್ಯಗಳಿಂದಲೂ ವಿದೇಶಗಳಿಗೆ ಹೋಗಬೇಕಾಗಿವೆ ಇದೊಂದೇ ಕಾರಣದಿಂದ ಸಾಬೂನು ಕೈಗಾರಿಕೆಯು ಪಾಶ್ಚಾತ್ಯರ ಎಂಥಾ ಮೇಲಾಟವಿದ್ದರೂ ಇಲ್ಲಿ ಲಾಭಕರವಾಗಿ ಪರಿಣಮಿಸುವದು ಎಂತ ಸರ್ ಫ್ರೆಡ್ರಿಕ್ ನಿಕೊಲ್ಸನ್‌ರವರು ಅಪ್ಪಣೆಕೊಟ್ಟಿರುತ್ತಾರೆ

ನೆಲಕಡಲೆ, ತೆಂಗಿನ ಕೊಬ್ಬರಿ ಅಥವಾ ಎಣ್ಣೆ ಇವು ಯುದ್ಧದ ಮೊದಲು ಧಾರಾಳವಾಗಿ ಜರ್ಮನಿ, ಆಸ್ಟ್ರಿಯಾ ಫ್ರಾನ್ಸು ಮೊದಲಾದ ವಿದೇಶಗಳಿಗೆ ಯಾವ ಬಗ್ಗೆ ರಫ್ತಾಗುತ್ತಿದ್ದವೆಂಬುದನ್ನು ವಾಚಕರು ಈಗ ತಿಳಕೊಳ್ಳಬಹುದು ಯುದ್ಧವು ಪ್ರಾರಂಭವಾದಂದಿನಿಂದ ಇವುಗಳಿಗೆ ವಿದೇಶಗಳ ಗಿರಾಕಿಯು ಕಡಮೆಯಾಗಿ ಧಾರಣೆ ಪಾಸಿ ಬಿದ್ದುಹೋಗಿ ಈ ಸಂಸ್ಥಾನಕ್ಕೆ ವಿಶೇಷ ನಷ್ಟವು ಪ್ರಾಪ್ತವಾಗಿದೆ. ತೆಂಗಿನ ಎಣ್ಣೆಯ ಕಾರ್ಖಾನೆಗಳು ಅಲ್ಲಲ್ಲಿ ಇವೆ ಇದರಂತೆಯೇ ಇತರ ಬೀಜಗಳಿಂದ ಎಣ್ಣೆಯನ್ನು ತಯ್ಯಾರಿಸುವ ಕಾರ್ಖಾನೆಗಳನ್ನು ಇಲ್ಲಿಯೇ ಸ್ಥಾಪಿಸಬಹುದು. ಮತ್ತು ಹೀಗೆ ತಯ್ಯಾರಾಗುವ ಎಣ್ಣೆಯನ್ನು ಇಲ್ಲಿಯೇ ಸಾಬೂನು ಕೈಗಾರಿಕೆಯ ಬಗ್ಗೆ ಉಪಯೋಗಿಸಿದರೆ ಎಣ್ಣೆಗೆ ಸಹ ಗಿರಾಕಿಯು ದೊರಕಿದಂತಾಗುತ್ತದೆ. ಈ ರೀತಿ ಸಾಬೂನು ಕೈಗಾರಿಕೆಯಿಂದ ಎಣ್ಣೆಯ ಕೈಗಾರಿಕೆಗೂ ಎಣ್ಣೆಯ ಕೈಗಾರಿಕೆಯಿಂದ ಸಾಬೂನು ಕೈಗಾರಿಕೆಗೂ ಸಹಾಯ ದೊರಕಿ ಈ ದೇಶದಲ್ಲಿಯೇ ಎರಡು ಕೈಗಾರಿಕೆಗಳ ಸ್ಥಾಪನೆಗೂ ಬೆಳವಣಿಕೆಗೂ ವಿಶೇಷ ಅಸ್ಪದವಿರುವದೆಂತ ಸರ್ ಫ್ರೆಡ್ರಿಕ್ ನಿಕೊಲ್ಸನರವರ ಅನುಭವದಿಂದ ಸ್ಪಷ್ಟವಾಗಿ ತೋರಿಬಂದಿರುವದು

ಈ ಜಿಲ್ಲೆಯಲ್ಲಿ ಸಾಬೂನು ಕೈಗಾರಿಕೆಯ ಬಗ್ಗೆ ಕೆಲವರು ಅಲ್ಪ ಸ್ವಲ್ಪ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ. ಕೆಲವು ಬಗೆಯ ಸಾಬೂನುಗಳನ್ನು ಸಹ ಮಾರಾಟಕ್ಕೆ ತರುತ್ತಿರುವರು ತಾಣೂರು ಈ ಜಿಲ್ಲೆಯಿಂದ ಬಹಳ ದೂರವಿರದು. ಇಂಥವರು ಸರ್ ಫ್ರೆಡ್ರಿಕ್ ನಿಕೊಲ್ಸನ್ ಮತ್ತು ರಾ| ಮೆನನ್‌ರವರು ಇದ್ದಲ್ಲಿಗೆ ಹೋಗಿ ತಾವು ಅನುಸರಿಸುತ್ತಿರುವ ವೃತ್ತಿಯು ಬರೆ ಮಕ್ಕಳ ಆಟವೋ ಅಥವಾ ವ್ಯಾಪಾರದ ಉದ್ದಿಮೆಯೋ ಎಂಬುದನ್ನು ಚನ್ನಾಗಿ ತಿಳಕೊಂಡು ಅಗತ್ಯವಿದ್ದರೆ ಬೇಕಾದ ತರಬೇತಿಯನ್ನು ಪಡಕೊಂಡು ಬರುವದು ಉತ್ತಮವೆಂತ ನಮಗೆ ತೋರುವದು.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ತೆಂಗಿನ ಮರಗಳ ಬೆಳವಣಿಕೆಗೆ ಯಾ ಫಲಸಮೃದ್ಧಿಗೆ ಉಪ್ಪೇ ಆಧಾರಭೂತವಾದುದರಿಂದ ಸಮುದ್ರತೀರ ಮತ್ತು ಉಪ್ಪುನೀರಿನ ನದಿಗಳ ದಡಗಳಲ್ಲಿ ತೆಂಗಿನ ಫಸಲು ಹೆಚ್ಚು ಇದ್ದು ಸಮುದ್ರತೀರದಿಂದ ದೂರ ದೂರ ಹೋದಹಾಗೆಲ್ಲ ತೆಂಗಿನ ಫಲ ಕಡಿಮೆಯಾಗುವ ಸಂಗತಿಯು ಸರ್ವಸಾಧಾರಣ ಸರ್ವರಿಗೂ ತಿಳಿದಿರುವ ಸಂಗತಿಯು. ಹೀಗಿರುವಲ್ಲಿ ಮರಕ್ಕೆ ಬೇಕಾದಷ್ಟು ಉಪ್ಪಿನ ಅಂಶ ಭೂಮಿಯಿಂದ ವ ಸಮುದ್ರದ ಹವೆಯಿಂದ ಹೀರಿಕೊಳ್ಳಲಿಕ್ಕೆ ಅಡಚಣೆ ಇದ್ದಲ್ಲಿ ಮರದ ಬೆಳವಣಿಕೆ ಯಾ ಫಲ ಸಮೃದ್ಧಿ ಆಗುವದು ಹೇಗೆ ಇಂಥಾ ಅಡಚಣೆ ಇದ್ದಲ್ಲಿ ಮರಕ್ಕೆ ಉಪ್ಪು ಹಾಕಲೇ

ಬೇಕು. ಇಂಥಾ ಉಪ್ಪನ್ನು ರೈತರು ಅಂಗಡಿಯಿಂದ ಹೆಚ್ಚಿನ ಕ್ರಯಕ್ಕೆ ತೆಗೆದುಕೊಂಡು ಮರಕ್ಕೆ ಹಾಕುತ್ತಿರುವರು. ಹಣವಿಲ್ಲದ ರೈತರು ಉಪ್ಪನ್ನು ಹಾಕದೆ ತೆಂಗಿನ ಮರದ ಫಸಲನ್ನು ಕೆಡಿಸುವರು. ರೈತರ ಈ ಸಂಕಷ್ಟವನ್ನು ಉತ್ತರ ಕನ್ನಡಾ ಜಿಲ್ಲೆಯ ಹೊನ್ನಾವರದ ಶೇತಕೀ ಸಂಘ (ವ್ಯವಸಾಯ ಸಂಘ)ದವರು ಗಣನೆಗೆ ತಂದು ಸರಕಾರ ಡ್ಯೂಟಿ ಮಾಫಿಯಿಂದ ತೆಂಗಿನ ಹಾಗೂ ಮಾವಿನ ಮರಗಳ ಉಪಯೋಗಕ್ಕೆ ಉಪ್ಪು ಕೊಡಿಸಲಿಕ್ಕೆ ಸರಕಾರದವರೊಡನೆ ಹೋರಾಡಿ ಜಯಶೀಲರಾದರು. ಇಂಥಾ ಉಪ್ಪಿಗೆ ಸರಕಾರದವರಿಂದ ಮಣ ೧ಕ್ಕೆ ೧೦ ಆಣೆ ಕ್ರಯ ನಿರ್ಧರಿಸಲ್ಪಟ್ಟಿರುವ ಕಾರಣ ರೈತರು ವ ಶೇತಕೀ ಸಂಘದ ಮೆಂಬರರು ಈ ಉಪ್ಪನ್ನು ಕೊಂಡುಕೊಂಡು ತೆಂಗಿನ ವ ಮಾವಿನ ಮರಗಳಿಗೆ ಹಾಕುತ್ತಿರುವರು.

ಸ್ವಾಮಿಾ, ನಮ್ಮ ಜಿಲ್ಲೆಯ ರೈತರಿಗೆ ಇಂಥಾ ಉಪ್ಪು ದೊರಕುವರೆ ವ್ಯವಸಾಯ ಸಂಘ ವ ಇಲಾಖೆಯಿಂದ ಏನಾದರೂ ಚಳವಳವು ನಡೆದಿರುವದೋ ಏನೆಂಬದು ತಿಳಿಯುವದಿಲ್ಲ. ನಮ್ಮ ಜಿಲ್ಲೆಯ ರೈತರಿಗೆ ಡ್ಯೂಟಿ ಮಾಫಿಯಿಂದ ಮರಗಳಿಗೆ ಹಾಕುವರೆ ಉಪ್ಪು ಸಿಕ್ಕುತ್ತದೆಂಬ ವರ್ತಮಾನವೂ ನನಗಿಲ್ಲ. ತೆಂಗಿನ ಮರಗಳಿಗೆ ಉಪ್ಪು ಅಗತ್ಯವಿದೆ. ಆದರೆ ಅಂಗಡಿಯಿಂದ ದುಬಾರಿ ಕ್ರಯಕ್ಕೆ ಉಪ್ಪು ಕೊಂಡುಕೊಂಡು ಮರಗಳಿಗೆ ಹಾಕುವಷ್ಟು ಸಾಮರ್ಥ್ಯದ ರೈತರು ನಮ್ಮ ಜಿಲ್ಲೆಯಲ್ಲಿ ಅತಿವಿರಳ. ಆದುದರಿಂದ ವ್ಯವಸಾಯ ಸಂಘಗಳವರು ವ ಇಲಾಖೆಯವರು ಡ್ಯೂಟಿ ಇಲ್ಲದೆ ಉಪ್ಪು ದೊರಕುವ ಚಳವಳವನ್ನು ಯಾಕೆ ಮಾಡಬಾರದು? ಒಂದುವೇಳೆ ಈ ಚಳವಳವನ್ನು ಮಾಡಿದ್ದರೆ ವ ಮರಗಳಿಗೆ ಹಾಕುವ ಉಪ್ಪು ಡ್ಯೂಟಿ ಮಾಫಿಯಿಂದ ಸಿಕ್ಕುವದಾದರೆ ಯಾಕೆ ರೈತರನ್ನು ಈ ಕೆಲಸದಲ್ಲಿ ಉತ್ತೇಜನಗೊಳಿಸಬಾರದು? ಸ್ವಾಮಿಾ, ಪತ್ರಕರ್ತರೇ, ತಮ್ಮ ವಾಚಕರಲ್ಲಾದರೂ ಈ ವಿಷಯದಲ್ಲಿ ರೈತರಿಗಿರುವ ಅಭಾವವನ್ನು ಹೋಗಲಾಡಿಸಿ ತೆಂಗಿನಮರಗಳಿಗೆ ಹಾಕುವ ಉಪ್ಪು ನಮ್ಮ ಜಿಲ್ಲೆಯ ವ್ಯವಸಾಯ ಸಂಘಗಳಲ್ಲಿಯಾದರೂ ಸಿಕ್ಕುತ್ತದೋ ಏನೆಂಬದನ್ನು ತಮ್ಮ ಪತ್ರ ಮೂಲಕ ತಿಳಿಸುತ್ತಿದ್ದರೆ ಕೃತಜ್ಞನಾಗುತ್ತಿದ್ದೆನು.

ಬಡ ರೈತ

ಮದ್ರಾಸು ಗವರ್ನರರವರ ಸಭೆಗೆ ನಮ್ಮ ಜಿಲ್ಲೆಯ ಮೆಂಬರರು.

ಅಯ್ಯಾ,

ದಕ್ಷಿಣಕನ್ನಡ ಮತ್ತು ಮಲಬಾರು ಜಿಲ್ಲೆಗಳ ಬೋರ್ಡುಗಳ ಮತ್ತು ಮುನಿಸಿಪಾಲಿಟಿಗಳ ತರಫಿನಿಂದ ಗವರ್ನರರವರ ಸಭೆಗೆ ಮೆಂಬರರಾಗಿ ನಮ್ಮ ಜಿಲ್ಲೆಯಿಂದ ಮ. ರಾ. ರಾ. ಕಾರ್ಕಳ ಸದಾಶಿವ ಬಟ್ಟರಿಗೆ ನಿಲ್ಲುವ ಆಲೋಚನೆ ಉಂಟೆಂದು ಕೇಳಿ ಸಂತೋಷವಾಗಿದೆ. ಇಂತಹ ಸ್ವಾರ್ಥತ್ಯಾಗ ಪೂರಿತವಾದ ಕಾರ್ಯದಿಂದ, ತನ್ನ ಸಂಪಾದನೆಯಲ್ಲಿ ಉಂಟಾಗುತ್ತದಾದ ನಷ್ಟವನ್ನು ಲಕ್ಷ್ಯ ಮಾಡದೆ, ಈ ರೀತಿ ಲೋಕಹಿತಾರ್ಥವಾಗಿ ನಮ್ಮ ಜಿಲ್ಲೆಯಿಂದ ಒಬ್ಬ ಗೃಹಸ್ಥರಾದರೂ ಮುಂದಾಳಾಗಿ ನಿಂತದ್ದನ್ನು ನೋಡಿ ಇನ್ನೂ ಆನಂದ ಪಡಬೇಕಾಗಿದೆ. ಆದರೆ ಈ ಸಮಯದಲ್ಲಿ ಉಡಿಪಿ ಪ್ರಾಂತ್ಯದ ಕೆಲವರು ಭಿನ್ನಾಭಿಪ್ರಾಯಗಳನ್ನೂ ಸಂಶಯ ಭಾವವನ್ನೂ ಪಡುತ್ತಾರೆಂಬುದು ಮಾತ್ರ ವಿಷಾದಕರವಾಗಿದೆ.

ಮ. ರಾ. ರಾ. ಸದಾಶಿವ ಬಟ್ಟರಿಗೆ ಪರಿಸ್ಥಳ ಸಂಚಾರದಿಂದುಂಟಾದ ಅನುಭವಜ್ಞಾನವೂ ಮಾಹಿತಿಯೂ ಇರುವುದಲ್ಲದೆ, ಸಭಾ ಪಾಂಡಿತ್ಯದಲ್ಲಿಯೂ ವಾಕ್ಚಾತುರ್ಯದಲ್ಲಿಯೂ ಅವರೇನೂ ಕಡಿಮೆಯಿಲ್ಲ. ಯಾವ ತರದ ಕಷ್ಟ ಸಂಗತಿಗಳನ್ನಾದರೂ ಚೆನ್ನಾಗಿ ಅಭ್ಯಾಸ ಮಾಡಿ ಅದನ್ನು ಚರ್ಚಿಸಲಿಕ್ಕೆ ಶಕ್ತಿವುಳ್ಳವರಾಗಿರುವರು. ಹೀಗಾಗಿ, ಇವರ ಯೋಗ್ಯತೆಯ ವಿಷಯವಾಗಿ ಯಾರಿಗೂ ಭಿನ್ನಾಭಿಪ್ರಾಯವಿರಲಿಕ್ಕೆ ಕಾರಣವಿಲ್ಲ.

ಪ್ರಾರಂಭದಿಂದಲೂ ನಮ್ಮ ಜಿಲ್ಲೆಯ ಪ್ರತಿನಿಧಿಯಾಗಿ ಮಲಬಾರಿನವರನ್ನೇ ಚುನಾಯಿಸುತ್ತ ಬರುವ ಅಭ್ಯಾಸವು ನಮಗೆ ಹತ್ತಿದೆಯೆಂಬ ಮಾತ್ರದಿಂದಲೇ ನಾವು ಇನ್ನು ಮೇಲಾದರೂ ಕಣ್ಣು ತೆರೆಯದೆ ಇರುವುದು ಯೋಗ್ಯವಲ್ಲ. ನಮ್ಮಲ್ಲಿ ಯೋಗ್ಯರಾರೂ ಇಲ್ಲ, ನಮಗೆ ಈ ಕಾರ್ಯವು ಸಲ್ಲದು ಎಂಬ ಮಾನಸಿಕ ನಿದ್ರೆಯಿಂದಲೂ ಅಮಲಿನಿಂದಲೂ ಎಚ್ಚತ್ತು ಎದ್ದೇಳಬೇಕು. ನಮಗೆ ಜಯ ಸಿಕ್ಕುವ ಸಂಭವವಿಲ್ಲವೆಂಬ ಭ್ರಮೆಯಿಂದ ಆಶೆಬಿಟ್ಟು ಮಾಮೂಲು ಪ್ರಕಾರ ಇನ್ನು ಮುಂದೆಯೂ ಮಲಬಾರಿನವರನ್ನೇ ಚುನಾಯಿಸಲಿಕ್ಕೆ ಮನಸ್ಸು ಕೊಟ್ಟರೆ ನಮ್ಮ ಜಿಲ್ಲೆಗೆ ಎಂದೆಂದಿಗೂ ಏಳಿಗೆಯೇ ಇಲ್ಲದಂತಾಗುವದು. ನಮ್ಮ ಜಿಲ್ಲೆಯಲ್ಲಿನ ವಿದ್ವಾಂಸರಿಗೂ ವಾಗ್ಮಿಗಳಿಗೂ ಮುಂದರಿಸಲಿಕ್ಕೆ ಸಮಯಾನುಕೂಲತೆಯಿಲ್ಲದೆ, ತಮ್ಮಲ್ಲಿ ಅಡಗಿರುವ ಕೌಶಲವನ್ನು ತೋರಿಸಲಿಕ್ಕೆ ಆಸ್ಪದವಾಗಲಿಲ್ಲ. ಹೊರತು ಮಲಬಾರಿನವರು ನಮಗಿಂತ ವಿದ್ವಾಂಸರೂ, ಸಭಾಪಾಂಡಿತ್ಯ ಮತ್ತು ಯೋಗ್ಯತೆವುಳ್ಳವರೂ ಎಂದು ಹೇಳಲಿಕ್ಕೆ ವಿಶೇಷವಾದ ಕಾರಣಗಳಿಲ್ಲ. ನಮ್ಮ ಜಿಲ್ಲೆಯ ಪಾಳ್ಯದಲ್ಲಿ ಕಚ್ಚಾಟವೂ ನಿರಾಶೆಯೂ ಇದ್ದುದರಿಂದಲೇ ಮಲಬಾರಿನವರು ಇದುವರೆಗೆ ಜಯಪ್ರದರಾದರು. ಮಲಬಾರಿನವರು ತಮಗೆ ಕನ್ನಡಾ ಜಿಲ್ಲೆಯ ವಿಷಯವಾಗಿ ಪುಸ್ತಕ ಜ್ಞಾನವುಂಟೆಂದು ಎಷ್ಟು ತೋರಿಸಿಕೊಂಡರೂ, ನಮ್ಮ ಜಿಲ್ಲೆಯ ರೈತರ ನಿಜವಾದ ಸಂಕಷ್ಟಗಳು, ಸ್ಥಿತಿಗಳು, ಅವಶ್ಯಕತೆಗಳು ಇತ್ಯಾದಿಗಳ ವಿಷಯವಾಗಿ ನಮ್ಮ ಜಿಲ್ಲೆಯ ಮೆಂಬರನಿಗೆ ಇರುವಷ್ಟು ಜ್ಞಾನವು ಮಲಬಾರಿಗಳಿಗೆ ಸರ್ವಥಾ ಇರಲಾರದೆಂಬುದನ್ನು ಎಲ್ಲರೂ ಒಪ್ಪತಕ್ಕದ್ದು. ಅದಲ್ಲದೆ, ನಮ್ಮ ಹಾಲಹವಾಲುಗಳನ್ನು ಕೂಲಂಕುಶವಾಗಿ ಹೇಳಿ ಅವುಗಳನ್ನು ನಿವಾರಣೆ ಮಾಡುವ ಬಗೆಯನ್ನು ಮಲಬಾರಿನ ಮೆಂಬರರಿಗೆ ಸೂಚಿಸಲಿಕ್ಕೂ ನಮಗೆ ಸಾಧ್ಯವಿಲ್ಲ. ಹೀಗಾಗಿ ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಜಿಲ್ಲೆಯವರೇ ನಮ್ಮ ಪ್ರತಿನಿಧಿಗಳಾಗಿ ಇರುವುದು ಎಲ್ಲಾ ವಿಧದಿಂದಲೂ ಯೋಗ್ಯವು.

ನಮ್ಮ ಜಿಲ್ಲೆಯೂ ಮತ್ತು ಮಲಬಾರು ಒಗ್ಗಟ್ಟಾಗಿರುವವೆಂಬ ಕಾರಣ ಮಾತ್ರದಿಂದಲೇ ಈ ಎರಡು ಜಿಲ್ಲೆಗಳ ಬೋರ್ಡು ಮುನಿಸಿಪಾಲಿಟಿಗಳು ಒಟ್ಟುಗೂಡಿ ಒಬ್ಬ ಮೆಂಬರನನ್ನು ಚುನಾಯಿಸಬೇಕೆಂದು ನಿರ್ಣಯಿಸಿತೆಂದು ತೋರುತ್ತದೆ. ಆದರೆ ಈ ಜೋಡಣೆಯಿಂದ ನಮಗೆ ಕ್ಷೇಮವಿಲ್ಲ. ನಮ್ಮ ಜಿಲ್ಲೆಗೆ ಒಬ್ಬ ಪ್ರತ್ಯೇಕ ಮೆಂಬರನನ್ನು ಚುನಾಯಿಸುವ ಅಧಿಕಾರವು ನಮಗೆ ಕೊಡಬೇಕೆಂದು ನಾವು ಸರಕಾರದವರೊಡನೆ ಪ್ರಾರ್ಥಿಸುವ ಸಮಯವು ಒಂದೊದಗಿದೆ. ಈ ಕಾರ್ಯದಲ್ಲಿ ನಾವು ಇನ್ನಾದರೂ ಸೊಂಟಕಟ್ಟಬೇಕು. ಆದರೆ, ನಮ್ಮ ಪ್ರಾರ್ಥನೆಗಳನ್ನು ಸರಕಾರದವರು ಅಂಗೀಕರಿಸದೆ ಬೇಕಾದರೆ, ನಾವು ಹತಾಶರಾಗಿ ಸುಮ್ಮನೆ ಇರಬಾರದು. ಈ ಪವಿತ್ರ ಕಾರ್ಯದಲ್ಲಿ ಸೋತುಹೋದರೂ ಚಿಂತೆಯಿಲ್ಲ, ಕಾಲಕಾಲಕ್ಕೂ ಐಕ್ಯಮತದಿಂದಲೂ ದೃಢಮನಸ್ಸಿನಿಂದಲೂ ನಮ್ಮ ಜಿಲ್ಲೆಯ ಮೆಂಬರನನ್ನೇ ಚುನಾಯಿಸಿ ಕಳುಹಿಸುವರೆ ಮನಃಪೂರ್ವಕವಾದ ಪ್ರಯತ್ನಮಾಡಬೇಕು. ಮಲಬಾರು ದೊಡ್ಡದಾಗಿದೆಯೆಂದೂ, ಅಲ್ಲಿ ಇಬ್ಬರು ಯಾ ಮೂವರು ರಂಗಸ್ಥಳಕ್ಕಿಳಿದಿದ್ದಾರೆಂದೂ, ಅಲ್ಲಿ ವೋಟು ಮಾಡುವವರ ಸಂಖ್ಯೆಯು ಅತಿ ಹೆಚ್ಚೆಂದೂ, ಆ ಮಹಾಸೇನೆಯ ಮುಂದೆ ನಾವು ಆರಿಸುವ ಮೆಂಬರನಿಗೆ ಜಯ ಸಿಕ್ಕುವ ಸಂದರ್ಭವಿಲ್ಲವೆಂದೂ ಎಣಿಸಿ ಹಿಂಜರಿಯಬಾರದು. ನಾವೆಲ್ಲರೂ ಈ ಸಮಯದಲ್ಲಿ ಸಂಶಯಕ್ಕೂ ಅಧೈರ್ಯಕ್ಕೂ ಈಡಾಗಿ ಹಿಂಜರಿದರೆ, ನಾವು ಯಾವ ಕಾರ್ಯಕ್ಕೂ ಯೋಗ್ಯರಲ್ಲವೆಂಬ ಭಾವನೆಯು ಸರಕಾರದವರಿಗೆ ಕೂಡ ಆದೀತು. ನಾವು ಎಡೆಬಿಡದೆ ಪ್ರಯತ್ನ ಮಾಡಿದರೂ ಒಂದು ವೇಳೆ ಜಯ ಸಿಕ್ಕದೆ ಹೋದರೆ, ಸರಕಾರದವರು ನಮ್ಮ ಪ್ರಯತ್ನಗಳಿಗೆ ಮೆಚ್ಚಿ ಆಖೈರಿಗೆ ಈ ಮಲಬಾರು ಪ್ರಳಯದ ಮುಂದೆ ನಮಗೆ ಆಶೆಯೇ ಇಲ್ಲವೆಂದು ಸಮಾಧಾನಪಟ್ಟು, ನಮ್ಮ ಜಿಲ್ಲೆಗೆ ಪ್ರತ್ಯೇಕ ಚುನಾವಣೆಯ ಅಧಿಕಾರವನ್ನು ಅಷ್ಟೆ ಶಿವಾಯಿ ಕೊಟ್ಟಾರು! ರೊಬರ್ಟ ಬ್ರೂಸ ಎಂಬ ವೀರನು ಏಳು ಸಾರಿ ಪ್ರಯತ್ನಮಾಡಿ ಆಖೈರಿಗೆ ಜಯಪ್ರದವಾದುದನ್ನೂ, ಬಂಗಾಳದವರು ಅವರ ಶೀಮೆಗೊದಗಿದ್ದ ವಿಭಾಗದೋಷವನ್ನು ನಿವಾರಣೆ ಮಾಡುವುದಕ್ಕೆ ವಿಶ್ವ ಪ್ರಯತ್ನಗಳನ್ನು ಮಾಡಿ ಅಂತ್ಯದಲ್ಲಿ ಜಯ ಹೊಂದಿದನ್ನೂ ನಾವು ಅರಿತೇ ಇರುವೆವು. ತಮಗೂ ವೋಟು ಸಿಕ್ಕಬೇಕು, ರಾಜಸಭೆಯಲ್ಲಿ ತಮ್ಮ ಪ್ರತಿನಿಧಿಗಳೂ ಇರಬೇಕು ಎಂದು ಇಂಗ್ಲಾಂಡಿನಲ್ಲಿ ಸ್ತ್ರೀಯರು ಕೂಡ ಇತ್ತಿತ್ತ ಸತ್ಪ್ರಯತ್ನಗಳನ್ನು ಮಾಡುತ್ತಿರುವರು. ಆ ಸ್ತ್ರೀಯರಿಗೆ ಇರುವ ಮನೋದಾರ್ಢ್ಯವು ನಮಗಿದ್ದರೆ ಸಾಕು!

ಮಲಬಾರಿನಲ್ಲಿ ಇಬ್ಬರು ಯಾ ಮೂವರು ಚುನಾವಣೆಗೆ ನಿಂತಿರುವುದರಿಂದ ಒಟ್ಟಾರೆಯ ಮೇಲೆ ಅವರಿಗೆ ಒಬ್ಬೊಬ್ಬರಿಗೆ ಸಿಕ್ಕುವ ವೋಟುಗಳಿಂತಲೂ ನಮ್ಮ ಜಿಲ್ಲೆಯ ಮೆಂಬರನಿಗೆ ಹೆಚ್ಚಿಗೆ ವೋಟುಗಳು ಸಿಕ್ಕದೆ ಇರಲಾರವು. ಅದಲ್ಲದೆ, ಮಲಬಾರಿನವರಲ್ಲಿಯೂ ಕೂಡ ಅನೇಕರು ಯಥಾರ್ಥವಾದ ನಮ್ಮ ಈ ಕಾದಾಟದಲ್ಲಿ ಈ ವರ್ಷ ಬೋರ್ಡು ಮತ್ತು ಮುನಿಸಿಪಾಲಿಟಿಗಳ ತರಫಿನಿಂದ ನಮ್ಮ ಜಿಲ್ಲೆಯ ಮೆಂಬರನಿಗೆ ವೋಟು ಮಾಡ್ಯಾರೆಂದು ನಾನು ನಂಬುತ್ತೇನೆ. ಆದುದರಿಂದ ನಮಗೆ ಜಯ ಸಿಕ್ಕುವ ಸಂಭವವೂ ಉಂಟು.

ಈ ಎಲ್ಲಾ ಕಾರಣಗಳಿಂದ, ಈ ವರ್ಷದ ಚುನಾವಣೆಯ ಕಾರ್ಯದಲ್ಲಿ ಭಿನ್ನಾಭಿಪ್ರಾಯಗಳನ್ನು ಪಡದೆ ನಮ್ಮ ಜಿಲ್ಲೆಯವನನ್ನೇ ಆರಿಸುವುದಕ್ಕೆ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡುವುದು ನಮ್ಮ ಜಿಲ್ಲೆಯ ಬೋರ್ಡುಗಳ ಮತ್ತು ಮುನಿಸಿಪಾಲಿಟಿಯ ಮೆಂಬರುಗಳ ಕರ್ತವ್ಯವಾಗಿದೆ.

ಹೆಮ್ಮಾರಾಜು

ಯುದ್ಧ ಸಮಾಚಾರ.

———o———

ತಾ. ೫ನೇ ಜನವರಿ.

“ಪರ್ಶಿಯಾ” ಹಡಗದಲ್ಲಿ ಈಜಿಪ್ತ್, ಸೈಪ್ರಸ್, ಪಾರ್ಶಿ ಕೊಲ್ಲಿ, ಹಿಂದೂಸ್ಥಾನ, ಸಿಲೋನು ಮಲಯಾಸಿಯ, ಡಚ್ಚ್ ಇಂಡೀಸ್, ಬೋರ್ನಿಯೊ, ಸರವಕ್, ಮನಿಲ ಮತ್ತು ಹೊಂಗ್ ಕೊಂಗ್‌ಗೆ ಹೋಗುವ ಟಪಾಲುಗಳೂ ಪಾರ್ಸೆಲ್ ಪೋಸ್ಟುಗಳೂ ಇದ್ದವು. ಇವುಗಳಲ್ಲಿ ಯಾವದೂ ಉಳಿಯಲಿಲ್ಲ. ಹಿಂದೂಸ್ಥಾನಕ್ಕೆ ಬರುತ್ತಿದ್ದ ಸುಮಾರು ೩೦ ೪೦ ಸಾವಿರ ಚೀಲ ಟಪಾಲು ಮುಳುಗಿ ಹೋಗಿರುತ್ತದೆ.

ಜರ್ಮನರ ಜಲಾಂತರ್ಗಾಮಿ ನಾವೆಯು ಸ್ಯಾಂಟ್ ಓಸ್ವಾಲ್ಡ್ ಎಂಬ ಹಡಗವನ್ನು ಮುಳುಗಿಸಿರುತ್ತದೆ.

ಅಲ್ಬಾನಿಯದಲ್ಲಿ ಎಸದ್‌ಪಾಶರು ಜರ್ಮನ ಮತ್ತು ಆಸ್ಟ್ರಿಯಾನರ ಮೇಲೆ ಯುದ್ಧ ಸಾರಿರುವರೆಂದೂ ಅವರೊಡನೆ ೩೦,೦೦೦ ಸೈನಿಕರಿರುವರೆಂದೂ ವಾರ್ತೆ ಇದೆ.

ಪರ್ಶಿಯದಲ್ಲಿರುವ ರುಶ್ಯನರ ಸೇನೆಯು ಬಗ್ದಾದ್ ಕಡೆಗೆ ಮುಂದರಿಯುತ್ತಲಿರುವ ಬ್ರಿಟಿಷ ಸೇನೆಗೆ ಹೋಗಿ ಕೂಡುವದು ಎಂಬ ವಾರ್ತೆ ಇದೆ.

ತಾ. ೬ನೇ ಜನವರಿ.

ಈ ದಿನ ಯಾವ ರಣರಂಗದಲ್ಲಿಯೂ ವಿಶೇಷ ಕದನಗಳು ನಡೆಯಲಿಲ್ಲ ಎಂಬದಾಗಿ ಫ್ರಾನ್ಸ್ ಮತ್ತು ಜರ್ಮನ್ ಸರಕಾರದ ಕಡೆಯಿಂದ ಪ್ರಕಟವಾಗಿರುವದು.

ಲೂಸ್ ಎಂಬಲ್ಲಿ ನಡೆದ ಕದನದಲ್ಲಿ ಬ್ರಿಟಿಷ ಸೇನೆಯು ೨೫೭೮ ಆಫಿಸರರೂ, ೫೭,೩೮೮ ಸೈನಿಕರೂ ಪ್ರಾಣಾಪಾಯ ಹೊಂದಿರುವರು. ಈ ಪೈಕಿ ೭೭೩ ಆಫೀಸರರೂ, ೧೦,೪೯೫ ಸೈನಿಕರೂ ಮಡಿದಿರುವರು. ೧೨೮೮ ಆಫೀಸರರೂ ೪೮,೦೯೫ ಸೈನಿಕರೂ ಗಾಯ ಒಡೆದಿರುವರು.

ಫ್ರಾನ್ಸ್ ರಣರಂಗದಲ್ಲೆಲ್ಲಾ ತೋಪು ಕಾಳಗಗಳು ನಡೆಯುತ್ತಲಿವೆ. ಮಿತ್ರ ಸೈನಿಕರು ಅಟ್ರೋಸ್‌ನಲ್ಲಿ ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಅಲ್ಬ್ರೆಕ್ಟ್ ಎಂಬಲ್ಲಿಯ ಶತ್ರುಗಳ ಮದ್ದು ಗುಂಡುಗಳ ಕೊಠಡಿಯನ್ನು ಸುಟ್ಟುಬಿಟ್ಟಿರುತ್ತಾರೆ.

ಜೆರ್ನೋವಿಟ್ಜ್ ಪಟ್ಟಣವನ್ನು ಆಸ್ಟ್ರಿಯನರು ಬಿಟ್ಟುಹೋಗಿರುತ್ತಾರೆ. ಪಟ್ಟಣವನ್ನು ಬಲಕಾಯುತ್ತಿರುವ ಗುಡ್ಡಗಳೆಲ್ಲಾ ರುಶ್ಯನರ ವಶವಾಗಿರುವವು. ಎಲಿಸೆನೋಫ್ ಎಂಬಲ್ಲಿ ಡ್ವಿನಾ ನದಿಯನ್ನು ದಾಟಲು ಪ್ರಯತ್ನಿಸಿದ ಜರ್ಮನರು ರುಶ್ಯನರ ತೋಪುಗಳ ಹೊಡತಕ್ಕೆ ನಿಲ್ಲಲಾರದೆ ಹಿಂದೆ ಹೋಗಿರುವರು. ಸ್ಟ್ರೀಪ ಪ್ರಾಂತ್ಯದಲ್ಲಿ ರುಶ್ಯನರು ಕದನ ಮಾಡಿ ಕೆಲವು ಕಂದಕಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಜೆರ್ನೋವಿಟ್ಜಿನ ಉತ್ತರ ಕಡೆಯಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಜರ್ಮನರು ಕಳಕೊಂಡ ಪ್ರಾಂತ್ಯಗಳ ಕಂದಕಗಳನ್ನು ಪಡೆಯಲು ಯತ್ನಿಸಿ ವಿಶೇಷ ನಷ್ಟಪಟ್ಟು ಹಿಂದಕ್ಕೆ ಹೋಗಿರುವರು.

ರುಶ್ಯನರು ತಮ್ಮ ದೇಶದಲ್ಲಿ ಒಡ್ಕಾ ಎಂಬ ಮದ್ಯವನ್ನು ಯುದ್ಧ ಕಾಲ ಮಾರಕೂಡದೆಂಬ ಕಟ್ಟಾಜ್ಞೆಯನ್ನು ಯುದ್ಧ ಪ್ರಾರಂಭವಾದಾಗ ಜಾರಿಗೆ ತಂದಿದ್ದರಷ್ಟೆ. ಯುದ್ಧ ನಿಂತನಂತರವೂ ಈ ಪಾನವನ್ನು ತಮ್ಮ ದೇಶದಲ್ಲಿ ತಯಾರಿಸಲೂ ಮಾರಲೂ ಕೂಡದೆಂಬ ಆಜ್ಞೆಯನ್ನು ರುಶ್ಯ ಸರಕಾರದವರು ಜಾರಿಗೆ ತಂದಿರುವರು. ಈ ಮದ್ಯಪಾನವನ್ನು ಮಾರದ ಹಾಗೆ ಆಜ್ಞೆ ಮಾಡಿದ್ದರಿಂದ ರುಶ್ಯಾ ಸರಕಾರದವರಿಗೆ ವರ್ಷ ೧ಕ್ಕೆ ೧೦೦,೦೦೦,೦೦೦ ಪವನುಗಳ ನಷ್ಟವಾಗುವದು. ಒಡ್ಕಾ ಮಾತ್ರವಲ್ಲ, ವೈನ್, ಬೀರ್ ಸಹಾ ರುಶ್ಯ ದೇಶದಲ್ಲಿ ಮಾರಕೂಡದೆಂಬ ಆಜ್ಞೆ ಆಗಿದೆ. ಒಟ್ಟಾರೆ ಈಗ ರುಶ್ಯಾ ದೇಶದಲ್ಲಿ ಸೇಕಡಾ ೪೦ಕ್ಕಿಂತ ಹೆಚ್ಚಿಗೆ ಅಲ್ಕಹೋಲಿರುವ ಮದ್ಯ ಸಿಕ್ಕುವದು ಕಷ್ಟಸಾಧ್ಯವಾಗಿದೆ.

ಗ್ರೀಕ ಸರಹದ್ದಿನಲ್ಲಿರುವ ಕೆಲವು ಗ್ರಾಮಗಳನ್ನು ಬಲ್ಗೇರಿಯನರು ದಾಳಿ ಹೊಡೆದಿರುವರು. ಫ್ರೆಂಚ ವಾಯುನಾವಿಕರು ಬಲ್ಗೇರಿಯನರ ಪೆಟ್ರಿಕ್, ಸ್ಟ್ರುಮಿನ್ನನ ಮತ್ತು ಇತರ ಪಟ್ಟಣಗಳ ಮೇಲೆ ಬಾಂಬುಗಳನ್ನು ಹಾಕಿರುವರು. ಪೆಟ್ರಿಕ್‌ನಲ್ಲಿ ಇದರಿಂದ ಹಾನಿಯಾಗಿರುವದು. ಮಾಂಟೆನಿಗ್ರೊಯನರು ಬಿಲಾಸಿಕಾ ಎಂಬಲ್ಲಿ ಆಸ್ಟ್ರಿಯನರನ್ನು ಸೋಲಿಸಿ ವಿಶೇಷ ನಷ್ಟಪಡಿಸಿರುವರು.

ತಾ. ೭ನೇ ಜನವರಿ.

ರುಶ್ಯನರ ಟೊರ್ಪೆಡೋ ದೋಣಿಯು ಜನವರಿ ತಾ. ೪ರಲ್ಲಿ ಕಪ್ಪು ಸಮುದ್ರದಲ್ಲಿ ತುರ್ಕರ ೧೧ ವ್ಯಾಪಾರ ಹಡಗಗಳನ್ನು ಹಿಡಿದಿರುತ್ತದೆ.

ಸ್ಕೋಕನ್ಸ್, ಚೆಂಪನೆ, ರೈಮ್ಸ್ ಪ್ರಾಂತ್ಯದಲ್ಲಿ ಶತ್ರುಗಳ ಕಂದಕ ಇತ್ಯಾದಿಗಳನ್ನು ಮಿತ್ರರ ತೋಪುಗಳು ಹಾಳುಮಾಡಿರುತ್ತವೆ.

ವಿವಾಹವಾಗದ ಯುವಕರನ್ನು ಕಡ್ಡಾಯದಿಂದ ಸೇನೆಗೆ ಸೇರಿಸಿಕೊಳ್ಳುವ ಬಗ್ಗೆ ಇಂಗ್ಲಾಂಡಿನಲ್ಲಿ ಜಾರಿಗೆ ಬರಲಿಕ್ಕಿರುವ ಕ್ರಮವು ಐರ್ಲಾಂಡಿಗೆ ಲಗಾವಾಗುವದಿಲ್ಲ.

ಜೆರ್ನೋವಿಟ್ಜದಲ್ಲಿ ರುಶ್ಯನರು ಮುಂದರಿಯುತ್ತಲಿರುವರು. ರುಶ್ಯನರ ಮೇಲೆ ಹಲ್ಲಾ ಮಾಡಿದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು.

ಪೂರ್ವ ಆಫ್ರಿಕದ ಟಂಗಾನಿಕ ಸರೋವರದಲ್ಲಿದ್ದ ಜರ್ಮನರ ಯುದ್ಧ ಹಡಗವನ್ನು ಬ್ರಿಟಿಷರ ನೌಕಾವಳಿಯು ಮುಳುಗಿಸಿರುತ್ತದೆ. ಅದರಲ್ಲಿದ್ದ ಎಲ್ಲಾ ಜರ್ಮನ ಆಫೀಸರರು ಮಡಿದು ಹೋದರು.

ತಾ. ೮ನೇ ಜನವರಿ.

ಬ್ರಿಟಿಷರ ಒಂದು ಜಲಾಂತರ್ಗಾಮಿ ನಾವೆಯು ಉತ್ತರ ಕಡಲಲ್ಲಿ ಮುಳುಗಿರುವದು. ಅದರಲ್ಲಿದ್ದ ೩೩ ನಾವಿಕರೂ ರಕ್ಷಣೆ ಹೊಂದಿರುವರು.

ಪಿ. ಓ. ಕಂಪನಿಯ “ಪರ್ಶಿಯಾ” ಹಡಗದಲ್ಲಿದ್ದ ೩೩೫ ಮಂದಿ ಮುಳುಗಿ ಸತ್ತಿರುವರು, ೧೬೬ ಮಂದಿ ಬದುಕಿಕೊಂಡಿರುವರು ಎಂತ ಪ್ರಕಟವಾಗಿದೆ.

ಇಂಗ್ಲಾಂಡಿನಲ್ಲಿ ಅವಿವಾಹಿತರಾಗಿರುವ ಯುವಕ ಪುರುಷರನ್ನು ನಿರ್ಬಂಧದಿಂದ ಸೇನೆಗೆ ಸೇರಿಸಿಕೊಳ್ಳುವ ವಿಧಿಯು ಬ್ರಿಟಿಷ ಕಾಮನ್ಸ ಸಭೆಯಲ್ಲಿ ಮೊದಲನೇ ಸಾರಿ ಓದಲ್ಪಟ್ಟು ಬಹುಮತದಿಂದ ಸಮ್ಮತಿಯನ್ನು ಪಡೆದಿರುತ್ತದೆ.

ಜರ್ಮನರ ಜನರಲ್ ಮೆಕೆನ್‌ಸನರು ಸೀಸ್ಟರ್ ಮತ್ತು ಪ್ರುತ್ ನದಿಯ ಮಧ್ಯೆ ಇರುವ ಜರ್ಮನ ಸೇನೆಯನ್ನು ನಡಿಸುತ್ತಲಿರುವರು. ಕೊವೆಲ್ ಸಾರ್ನಿ ರೈಲ್ವೆ ಮತ್ತು ಜೆರ್ನೋವಿಟ್ಜಿನ ಮಧ್ಯೆ ಶತ್ರುಗಳ ೧೦,೦೦,೦೦೦—೧೫,೦೦,೦೦೦ ಸೈನಿಕರಿರುವರೆಂತಲೂ ಶತ್ರುಗಳ ಕೆಲವು ಸೇನೆಯು ಸರ್ವಿಯಾ ರಣರಂಗದಿಂದ ಇತರ ರಣರಂಗಕ್ಕೆ ಹೋಗಿರುವದೆಂದೂ ವಾರ್ತೆ ಇದೆ.

ಅಲ್ಬಾನಿಯದಲ್ಲಿ ಎಸದ್‌ಪಾಶರವರು ಆಸ್ಟ್ರಿಯದ ಮೇಲೆ ಯುದ್ಧ ಸಾರಿರುವರು. ದಕ್ಷಿಣ ರಣರಂಗದಲ್ಲಿ ಇಟಲಿಯನರಿಗೆ ಅಲ್ಲಲ್ಲಿ ಜಯವಾಗುತ್ತಲಿರುವದು.

ತಾ. ೧೦ನೇ ಜನವರಿ.

‘ಕಿಂಗ್ ಎಡ್ವರ್ಡ್ ದಿ ಸೆವೆಂತ್’ ಎಂಬ ಹೆಸರಿನ ಬ್ರಿಟಿಷರ ಯುದ್ಧ ನಾವೆಯು ಸಿಡಿಮದ್ದಿನ ಗಣಿಗೆ ತಾಗಿ ಮುಳುಗಿಹೋಗಿರುವದು. ನಾವಿಕರೆಲ್ಲರೂ ರಕ್ಷಿಸಲ್ಪಟ್ಟಿರುವರು. ಎರಡು ಮಂದಿಗೆ ಮಾತ್ರ ಗಾಯವಾಗಿದೆ.

ಬೋಸ್ಫರಸಿನಲ್ಲಿ ರುಶ್ಯನರ ಟೊರ್ಪೆಡೋ ದೋಣಿಗೂ ತುರ್ಕರ ‘ಗಿಯೋಬೆನ್’ ಯುದ್ಧ ನಾವೆಗೂ ದೂರದಿಂದ ಕದನ ನಡೆದು ತುರ್ಕರ ನಾವೆಯು ಓಡಿಹೋಗಿರುತ್ತದೆ.

ಫ್ರಾನ್ಸ್ ರಣರಂಗದಲ್ಲಿ ನಡೆಯುತ್ತಿರುವ ತೋಪುಕಾಳಗಗಳಲ್ಲಿ ನಮ್ಮವರಿಗೆ ಜಯವಾಗುತ್ತಲಿದೆ. ಫ್ರಾನ್ಸ್ ದೇಶದಲ್ಲಿ ಈ ವರೆಗೆ ಒಟ್ಟಿಗೆ ೭ ಮಿಲಿಯ ಸೈನಿಕರು ಸೇನೆಗೆ ಕೂಡಿರುವರು.

ರುಶ್ಯನರು ಜಾರ್ಟೋರಿಸ್ಕ್ ಪಟ್ಟಣವನ್ನೂ ಅದರ ಪಶ್ಚಿಮದಲ್ಲಿರುವ ಪರ್ವತಗಳನ್ನೂ ಹಿಡಿದಿರುತ್ತಾರೆ. ಅದನ್ನು ಹಿಂದಕ್ಕೆ ಪಡೆಯುವರೆ ಹಲ್ಲಾ ಮಾಡಿದ ಶತ್ರುಗಳು ಹಿಮ್ಮೆಟ್ಟಿರುವರು. ಜನವರಿ ತಾ. ೭ರಲ್ಲಿ ೧೧೯೫ ಶತ್ರುಗಳು ಅಲ್ಲಿ ಸೆರೆಬಿದ್ದಿರುತ್ತಾರೆ.

ರುಶ್ಯನರು ಸ್ಟೈರ್ ನದಿಯ ಬಳಿಯಲ್ಲಿರುವ ಕುಕೋಟಿಡ್ಸ್‌ಪೋಲ ಎಂಬ ಪಟ್ಟಣಕ್ಕೆ ಮುಂದರಿಸಿರುತ್ತಾರೆ. ಈ ಸ್ಥಳವು ರುಶ್ಯನರ ಯುದ್ಧಸಾಧನೆಗೆ ಮುಖ್ಯ ಸ್ಥಳವಾಗಿರುವದು. ರುಶ್ಯದ ಜ್ಸಾರರವರು ಜೆರ್ನೋವಿಟ್ಜ್ ರಣರಂಗದಲ್ಲಿರುವರೆಂಬ ವಾರ್ತೆ ಇದೆ. ರುಶ್ಯನರು ಜೆರ್ನೋವಿಟ್ಜ್‌ನಲ್ಲಿ ೪೦ ಫಿರಂಗಿಗಳನ್ನು ಇಟ್ಟು ೫೦ ತಾಸುಗಳ ವರೆಗೆ ಗುಂಡುಹಾರಿಸುವ ಸನ್ನಾಹ ಮಾಡಿರುವರು.

ಸೆಲೋನಿಕದಲ್ಲಿ ನಮ್ಮವರ ನೆಲೆಗಳ ಮೇಲೆ ಚಲಿಸುತ್ತಿದ್ದ ಎರಡು ಜರ್ಮನ ವಾಯುನಾವೆಗಳನ್ನು ನಮ್ಮವರು ಕೆಳಗಿಳಿಸಿ ಹಿಡಿದಿರುತ್ತಾರೆ.

ಮಾಂಟೆನಿಗ್ರೋದ ಉತ್ತರ ಸರಹದ್ದಿನಲ್ಲಿ ಕಠಿಣ ಕಾಳಗವು ನಡಿಯುತ್ತಿದೆ. ಆಸ್ಟ್ರಿಯಾನರು ಒಂದು ಸ್ಥಳದಲ್ಲಿ ೩೦ ಸೇನಾಂಗಗಳನ್ನು ಒಟ್ಟಿ ಕದನಕ್ಕೆ ನಿಂತರು. ಮಾಂಟೆನಿಗ್ರೊಯನರ ಧೈರ್ಯಗೆಡದೆ ತಮ್ಮ ಹೆಚ್ಚಿನ ನೆಲೆಗಳನ್ನು ಬಿಟ್ಟುಕೊಡಲಿಲ್ಲ. ಉಭಯ ಕಡೆಯಲ್ಲಿಯೂ ವಿಶೇಷ ನಷ್ಟ ಉಂಟಾಗಿರುತ್ತದೆ.

ಬ್ರಿಂಡಿಸಿಯಿಂದ ಬರುತ್ತಿದ್ದ ಇಟಲಿಯನರ ಒಂದು ಹಡಗವು ಸಾನ್‌ಗಿಯೋವಾನಿ ಮೆಡೂವ ಎಂಬಲ್ಲಿ ಸಿಡಿಮದ್ದಿನ ಗಣಿಗೆ ತಗಲಿ ಮುಳುಗಿರುವದು. ಹಡಗವು ಕೂಡಲೇ ಮುಳುಗಿದ್ದರಿಂದ ೨೦೦ ಮಂದಿ ಸತ್ತುಹೋದರು.

ಸಲೋನಿಕದಲ್ಲಿ ನಮ್ಮವರು ಸೆರೆಹಿಡಿದ ಶತ್ರುಗಳ ಕೌನ್ಸಲರನ್ನು ಬಿಟ್ಟುಬಿಟ್ಟಿರುವರು. ಇದರಿಂದ ಗ್ರೀಕ ಸರಕಾರದವರು ತೃಪ್ತಿಹೊಂದಿರುವರು. ಸಲೋನಿಕದ ಆಸ್ಟ್ರಿಯ ಕೌನ್ಸಲರಲ್ಲಿ ೧೮೩ ರೈಫಲ್, ೧೫೦ ರಿವಾಲ್ವರ್ ಮತ್ತು ತೋಟೆಗಳೂ ಸಿಡಿವ ವಸ್ತುಗಳೂ ಸಿಕ್ಕಿರುವವು.

ಇಟಲಿಯನರು ಸಾನ್‌ಗಿಯೋವಾನಿಯಲ್ಲಿ ಶತ್ರುಗಳ ನೆಲೆಗಳನ್ನು ಹಿಡಿದಿರುತ್ತಾರೆ. ಶತ್ರುಗಳು ಕೆಲವು ಕಡೆಯಲ್ಲಿ ಹಲ್ಲಾ ಮಾಡಿ ಹಿಮ್ಮೆಟ್ಟಿರುವರು.

ಬ್ರಿಟಿಷರ ಜಲಾಂತರ್ಗಾಮಿ ನಾವೆಯು ಮರ್ಮೋರ ಸಮುದ್ರದಿಂದ ಡರ್ಡನೆಲ್ಸಿನ ಗೊಲ್ಡನ್‌ಹೋರ್ನಿನ ಕಡೆ ಹೋಗಿ ಪಿರ ಎಂಬಲ್ಲಿದ್ದ ತುರ್ಕರ ಆಯುಧ ಶಾಲೆಗೆ ಗುಂಡುಹಾರಿಸಿ ಬಹಳ ಹಾನಿಮಾಡಿರುತ್ತದೆ. ಡರ್ಡನೆಲ್ಸಿನ ಏಷ್ಯಾ ದಡದ ಮೇಲೆ ನಮ್ಮವರ ತೋಪುಗಳು ಗುಂಡು ಹಾರಿಸುತ್ತಲಿರುವವು.

ಮೆಸೊಪೊಟಾಮಿಯದಲ್ಲಿ ಟೈಗ್ರಿಸ್ ನದಿಯ ದಡಗಳಲ್ಲಿ ತುರ್ಕರ ಸೇನೆಯು ಇದೆ ಎಂಬದು ವಾಯುನಾವಿಕರಿಂದ ತಿಳಿದುಬಂದದ್ದರಿಂದ ಬ್ರಿಟಿಷರ ಸೇನೆಯು ಅಲ್ಲಿಗೆ ಮುಂದರಿದು ತುರ್ಕರೊಡನೆ ಯುದ್ಧಮಾಡಿ ತುರ್ಕರನ್ನು ಅವರ ನೆಲೆಗಳಿಂದ ಓಡಿಸಿ ೭೦೦ ಸೈನಿಕರನ್ನೂ ಫಿರಂಗಿಗಳನ್ನೂ ಸೆರೆಹಿಡಿದಿರುವರು. ೪ ದಿನಗಳು ನಡೆದ ಯುದ್ಧದಲ್ಲಿ ನಮ್ಮವರ ಸೇನೆಯಲ್ಲಿ ೪೨೦೦ ಮಂದಿ ಮಾತ್ರ ನಷ್ಟವಾಗಿರುವರು.

ತಾ. ೧೧ನೇ ಜನವರಿ

ಪರ್ಶಿಯದ ಆಶಾದಬಾದ ಎಂಬಲ್ಲಿ ರುಶ್ಯನರು ದಂಗೆಗಾರರ ಒಂದು ದೊಡ್ಡ ಸೇನೆಯನ್ನು ಓಡಿಸಿರುವರು. ಸೆರೆಬಿದ್ದ ದಂಗೆಗಾರರಲ್ಲಿ ೩ ಜರ್ಮನ ಆಫೀಸರರಿದ್ದರು.

ಬ್ರಿಟಿಷರ ಸೇನೆಯು ಶೇಖ್ ಸಾದ್ ಎಂಬಲ್ಲಿಯ ತುರ್ಕರ ನೆಲೆಯನ್ನು ಸ್ವಾಧೀನಮಾಡಿಕೊಂಡು ತಮ್ಮ ಸೇನೆಯನ್ನು ಅಲ್ಲಿ ಒಟ್ಟು ಹಾಕುತ್ತಿರುವದು. ತುರ್ಕರು ಉತ್ತರಕ್ಕೆ ಸರಿಯುತ್ತಲಿರುವರು.

~~~~~~

ಉತ್ತರ ಹಿಂದೂಸ್ಥಾನ.

~~~~~~

ದಶಂಬರ ತಾ ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೭೭೮೭ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೫೮೦೦ ಮಂದಿ ಮೃತರಾದರು. ಈ ಪೈಕಿ ಮುಂಬಾಯಿಯಲ್ಲಿ ಮತ್ತು ಸಿಂಧಿನಲ್ಲಿ ೧೫೪೨; ಮದ್ರಾಸ ೩೭೩, ಸಂಯುಕ್ತ ಸಂಸ್ಥಾನ ೫೪೩, ಪಂಜಾಬು ೧೦ ಬರ್ಮ ೯೭; ಮಧ್ಯ ಸಂಸ್ಥಾನ ೬೩೨, ಮೈಸೂರು ಸಂಸ್ಥಾನ ೧೬೨; ಹೈದರಾಬಾದ್ ೧೦೩೫; ಮಧ್ಯಹಿಂದುಸ್ಥಾನ ೧೨೮; ಕಾಶ್ಮೀರ ೧೧ ಮರಣಗಳಾದವು.

~~~~~~

ತಾ. ೭ರಲ್ಲಿ ಕಲ್ಕತ್ತೆಯ ಡಿಕ್ಸನ್ ಲೇನ್ ಎಂಬ ರಸ್ತೆಯಲ್ಲಿ ಒಂದು ಸಿಡಿತ ಉಂಟಾಗಿರುವದು. ಸಿಡಿತ ಆದ ಕೂಡಲೆ ಕೆಲವರು ಸಿಡಿತ ಉಂಟಾದ ಮನೆಯೊಳಗೆ ನುಗ್ಗಿ ನೋಡಲು ೧೭ ವರ್ಷದ ಒಬ್ಬ ಯುವಕನು ಗಾಯಪಟ್ಟು ಬಿದ್ದಿದ್ದನು. ಅಲ್ಲಿಗೆ ಬಂದಿದ್ದವರು ಅವನ ಗಾಯಗಳನ್ನು ಕಟ್ಟಿ, ಆಸ್ಪತ್ರೆಗೆ ಕಳುಹಿಸಿ
~~~~~~

ವಿಷಯವನ್ನು ಪೋಲಿಸಿಗೆ ತಿಳಿಸಿದರು. ಪೋಲಿಸಿನವರು ಬಂದು ಜಪ್ತಿಮಾಡಿದಲ್ಲಿ ಸಿಡಿದ ಬೊಂಬಿನೊಳಗಿನ ಕುಪ್ಪಿ ಚೂರು ಇತ್ಯಾದಿಗಳು ಸಿಕ್ಕಿದವು. ಆದರೆ ಪಿಕ್ರಿಕ್ ಎಸಿಡ್ ಎಂಬ ದ್ರಾವಕದ ಕುರುಹುಗಳೇನೂ ಕಾಣಿಸಲಿಲ್ಲ. ನಂತರ ಬೀಗ ಹಾಕಿದ್ದ ಯುವಕನ ಪೆಟ್ಟಿಗೆಯನ್ನು ತೆರೆದು ನೋಡಿದಲ್ಲಿ ಸಿಡಿಯುವ ಕೆಲವು ಪದಾರ್ಥಗಳು ಸಿಕ್ಕಿರುವವು. ಪೋಲೀಸಿನವರು ಗಾಯಹೊಂದಿದ ಯುವಕನನ್ನು ಕೇಳಿದ್ದಲ್ಲಿ ತಾನೇನೂ ಅರಿಯೆನೆಂದು ಉತ್ತರ ಕೊಟ್ಟಿರುವನು. ಈ ಯುವಕನ ಬಲಗಣ್ಣು ಹೋಗಿರುವದು ಮೈಮೇಲೆ ತುಂಬಾ ಗಾಯಗಳಾಗಿರುವವು ಆದರೆ ಜೀವಕ್ಕೆ ಹಾನಿ ಉಂಟಾಗದೆಂದು ದಾಕ್ತಾರರು ಅಭಿಪ್ರಾಯಪಟ್ಟಿರುತ್ತಾರೆ

ಚಿನ್ಸೂರು ಎಂಬಲ್ಲಿ ಓಡುತ್ತಿದ್ದ ಟ್ರೇನ್ ಬಂಡಿಯಿಂದ ಜೀವಾಂತ ಶಿಕ್ಷೆ ಹೊಂದಿದ ಒಬ್ಬ ಬಂದಿವಾನನು ತಪ್ಪಿಸಿಕೊಂಡು ಹೋಗಿರುವನೆಂಬ ವಾರ್ತೆ ಬಂದಿರುವದು ಪೋಲೀಸಿನವರು ಶಿಕ್ಷೆ ಹೊಂದಿದ ೩ ಬಂದಿವಾನರನ್ನು ಆಲಿಪುರದಿಂದ ಟ್ರೇನ್ ಬಂಡಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದರು ಬಂದಿವಾನರ ಕೈಕಾಲುಗಳಿಗೆ ಬೇಡಿ ಹಾಕಲ್ಪಟ್ಟಿತ್ತು ಒಬ್ಬ ಹೆಡ್‌ಕನ್‌ಸ್ಟೇಬಲನು ಬಂದಿಗಳಿದ್ದ ಆಚೆ ಮಗ್ಗುಲಿನ ಗಾಡಿಯಲ್ಲಿದ್ದನು ಇಬ್ಬರು ಕನ್‌ಸ್ಟೇಬಲರು ಖಾಲಿಯಿದ್ದ ಮತ್ತೊಂದು ಗಾಡಿಯಲ್ಲಿದ್ದರು. ಆಗ್ಗಾಡಿಯು ಚಿನ್ಸೂರ ಸ್ಟೇಶನಿನಿಂದ ಹೊರಡುತ್ತಲೇ ಬಂದಿಗಳಿದ್ದ ಗಾಡಿಗೆ ಬೀಗ ಹಾಕಲ್ಪಟ್ಟಿತು ಆಗ್ಗಾಡಿಯು ಓಡುತ್ತಿರುವಾಗ ಬಂದಿವಾನರು ತಮ್ಮ ಬೇಡಿಗಳನ್ನು ಕಳಚಿಕೊಂಡು ತಪ್ಪಿಸಿಕೊಳ್ಳಲು ಮೇಲ ಹತ್ತುವದನ್ನು ಕನ್‌ಸ್ಟೇಬಲರು ಕಂಡು ಅವರನ್ನು ಹಿಡಿಯಲು ಪ್ರಯತ್ನಿಸಿ ಇಬ್ಬರನ್ನು ಹಿಡಿದರು. ಆದರೆ ಒಬ್ಬ ಬಂದಿವಾನನು ಖಾಲಿ ಇದ್ದ ಬಂಡಿಗೆ ಹೋಗಿ ತಪ್ಪಿಸಿಕೊಂಡನು. ಆಚೆ ಗಾಡಿಯಲ್ಲಿದ್ದ ಹೆಡ್‌ಕನ್‌ಸ್ಟೇಬಲನು ಅವನನ್ನು ಹಿಡಿಯ ಪ್ರಯತ್ನಿಸುವಷ್ಟರಲ್ಲಿ ಬಂದಿವಾನನು ಬಂಡಿಯಿಂದ ಕೆಳಗೆ ಹಾರಿ ತಪ್ಪಿಸಿಕೊಂಡನು. ಹೆಡ್ ಕನ್‌ಸ್ಟೇಬಲನು ಅವನನ್ನು ಹಿಡಿಯುವ ಬಗ್ಗೆ ಕೆಳಹಾರಿದ್ದರಿಂದ ಕಠಿಣ ಗಾಯಹೊಂದಿದನು ಅಷ್ಟರಲ್ಲಿ ಆಗ್ಗಾಡಿಯು ನಿಲ್ಲಿಸಲ್ಪಟ್ಟಿತು. ಆದರೆ ಕಾಲಿನಲ್ಲಿ ಬೇಡಿ ಇದ್ದು ತಪ್ಪಿಸಿಕೊಂಡ ಬಂದಿವಾನನ ಪತ್ತೆಯಾಗಲಿಲ್ಲ

ಮುಂಬಯಿ ಜನರಲ್ ಪೋಸ್ಟು ಆಫೀಸಿನ ಅಸಿಸ್ಟಾಂಟ ಟ್ರೆಜರರನಾಗಿದ್ದ ಕವಾಸಿ ನಾರೋಜಿ ಎಂಬವನು ಜನರಲ್ ಪೋಸ್ಟಾಪಿಸಿನ ಖಜಾನೆ ಪೆಟ್ಟಿಗೆಯಿಂದ ೩೯,೦೦೦ ರೂಪಾಯಿಗಳನ್ನು ಕದ್ದುಕೊಂಡಿದ್ದನೆಂದು ಆಪಾದಿಸಲ್ಪಟ್ಟಿದ್ದನು. ಆಪಾದಿತನು ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಿದನು. ಆಪಾದಿತನು ಚಿಕ್ಕ ವಯಸ್ಸಿನವನಾಗಿದ್ದು ಈಚೆಗೆ ಮಾತ್ರ ವಿವಾಹವಾದವನಾದ್ದರಿಂದಲೂ ಈ ಕಳವು ಮಾಡುವ ತನಕ ಒಳ್ಳೇ ನಡತೆಯುಳ್ಳವನಾಗಿದ್ದುದರಿಂದಲೂ ಮೆಜಿಸ್ಟ್ರೇಟರು ರಿಯಾಯತಿ ತೋರಿಸಿ ೯ ತಿಂಗಳ ಕಠಿಣ ಸಜಾ ಮತ್ತು ೧೦೦೦ ರೂಪಾಯಿ ಜುಲಮಾನೆ ವಿಧಿಸಿದರು.

ಯುದ್ಧದ ಖರ್ಚಿನ ಬಗ್ಗೆ ನೇಪಾಲ ಸರಕಾರದವರು ೩ ಲಕ್ಷ ರೂಪಾಯಿಯನ್ನೂ ಅಲ್ಲಿಯ ಪ್ರಧಾನ ಮಂತ್ರಿಯವರು ೧ ಲಕ್ಷ ರೂಪಾಯಿಯನ್ನೂ ದಾನಮಾಡಿರು

ಜಯಪುರದ ಮಹಾರಾಜರವರು ಹಿಂದೂಸ್ಥಾನದ ಸೇನಿಕರ ಬಗ್ಗೆ ಮೆಶಿನ್ ಗನ್‌ಗಳೆಂಬ ಫಿರಂಗಿಗಳನ್ನು ಕೊಂಡುಕೊಳ್ಳುವರೆ ೨೦೦೦ ಪವನುಗಳನ್ನು ಕೊಟ್ಟಿರುತ್ತಾರೆ.

ಮೆ| ದಾದಾಬಾಯಿ ನೌರೋಜಿಯವರಿಗೆ ಒನರರಿ ಎಲ್. ಎಲ್ ಡಿ. ಡಿಗ್ರಿಯನ್ನು ಕೊಡುವ ಬಗ್ಗೆ ತಾ. ೧೮ ರಲ್ಲು ಮುಂಬಾಯಲ್ಲಿ ಸ್ಪೆಶ್ಯಲ್ ಕನ್ವೊಕೇಶನ್ ನಡಿಸಲ್ಪಡುವದು. ಮುಂಬಾಯಿ ಯೂನಿವರ್ಸಿಟಿ ಚೇನ್ಸಲ್ಲರಾದ ಮುಂಬಾಯಿ ಗವರ್ನರ ಪ್ರಭುಗಳು ಈ ಡಿಗ್ರಿಯನ್ನು ದಾದಾಬಾಯಿ ನೌರೋಜಿಯವರಿಗೆ ಕೊಡುವ ಸಮಾರಂಭವನ್ನು ನಡಿಸುವರು ದಾದಾಬಾಯಿಯವರು ಕಳೆದ ೧೦ ವರ್ಷಗಳಿಂದ ವಾರ್ಸೋವದಲ್ಲಿಯೇ ಇರುವದರಿಂದ ಮುಂಬಾಯಿ ಜನರಿಗೆ ಇವರನ್ನು ನೋಡುವ ಸಂದರ್ಭವು ಇದ್ದಿಲ್ಲ. ಆದ್ದರೆ ಈ ಸಂದರ್ಬದಲ್ಲಿ ಅವರು ಮುಂಬಾಯಿಗೆ ಬರುವವರಾಗಿರುವದರಿಂದ ಮುಂಬಾಯಿ ಪಟ್ಟಣ ಮುಂದಾಳುಗಳು ಅವರನ್ನು ವಿಜೃಂಬಣೆಯಿಂದ ಸ್ವಾಗತಮಾಡಿಕೊಳ್ಳಬೇಕೆಂದಿರುವರು.

ಪಂಜಾಬು ವಾಯುನಾವೆಗಳ ಫಂಡಿಗೆ ೬ ಲಕ್ಷದ ೪೬ ಸಾವಿರ ರೂಪಾಯಿ ಕೂಡಿರುವದು

ಸೆರಂಪುರ ಸಬ್ ಡಿವಿಜನಿಗೆ ಸೇರಿದ ಪೊಲ್ನಪುರ ಎಂಬಲ್ಲಿ ತಾ ೧೦ರಲ್ಲು ಒಂದು ದಕಾಯತಿಯು ನಡೆದಿರುವದು ಪೇಶಾವರದ ಸುಮಾರು ೧೨ ದಕಾಯತರು ಪನ್ನಾಲಾಲ ದತ್ತರವರ ಮನೆಗೆ ಮಧ್ಯರಾತ್ರಿ ನುಗ್ಗಿ ಮನೆಯವರನ್ನು ಹಿಂಸಿಸಿ ಸುಮಾರು ೨೫೦೦ ರೂಪಾಯಿಗಳನ್ನು ಲೂಟಿಗೆ ಮಾಡಿಕೊಂಡು ಹೋಗಿರುವರು. ಹುಗ್ಲಿ ಪೋಲೀಸ್ ಸುಪರಿಂಟೆಂಡೆಂಟರಾದ ಮೆ| ವಾಡ್ಸ್ವರವರು ಈ ವಾರ್ತೆಯನ್ನು ಕೇಳಿ ಆ ಗ್ರಾಮಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ದಕಾಯಿತರನ್ನು ಎದುರ್ಗೊಂಡರು. ದಕಾಯಿತರು ಮೆ| ವಾಡ್ಸ್ವರವರಿಗೆ ದೊಣ್ಣೆಗಳಿಂದ ಹೊಡೆದು ತಪ್ಪಿಸಿಕೊಂಡರು ಆದರೆ ೯ ಪೇಶ್ವಾರಿಗಳನ್ನು ಪೋಲೀಸಿನವರು ಕೈದು ಮಾಡಿರುವರು.

ಸಂಸರಪುರದಲ್ಲಿಯೂ ರಾ| ಬೂತನಾಥ ಗೋಸರವರ ಮನೆಯಲ್ಲಿ ದಕಾಯತಿಯು ನಡೆದಿರುವದು. ಇಲ್ಲಿ ರಾ| ಗೋಸರವರು ದಕಾಯಿತರಿಂದ ಪಡೆದ ಹೊಡತದ ಗಾಯಗಳಿಂದ ಮೃತರಾದರು

ಮುಂಬಾಯಿ ಸಂಸ್ಥಾನದ ಯುದ್ಧ ಫಂಡಿಗೆ ಈ ವರೆಗೆ ೪೦ ಲಕ್ಷದ ೪೦ ಸಾವಿರ ರೂಪಾಯಿ ಕೂಡಿರುವದು

ಮೆಸೊಪಟೇಮಿಯದ ಯುದ್ಧ ಆಸ್ಪತ್ರಿಗೆ ಮುಂಬ್ಯಾ ಹೈಕೋರ್ಟಿನ ಜಸ್ಟಿಸ್ ಮೆಕ್‌ಲಿಯೋಡರವರು ೩೦೦೦ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು

ಸಿಮ್ಲದ ಎಲಾಯನ್ಸ್ ಬೇಂಕಿನ ಏಜಂಟರಾದ ಮೆ| ಪ್ರಿಸ್ಟ್ಲೀಯವರನ್ನು ಕೊಂದ ಘಾತುಕರನ್ನು ಪತ್ತೆಮಾಡಿ ಕೊಟ್ಟವರಿಗೆ ೧೦೦೦ ರೂಪಾಯಿಗಳ ಬಹುಮಾನ ಕೊಡಲಾಗುವದೆಂತ ಪ್ರಕಟವಾಗಿದೆ.

ಇಂಗ್ಲಾಂಡಿನಲ್ಲಿ ಎಮ್. ಡಿ. ಡಿಗ್ರಿಯನ್ನು ಪಡೆದು ಮುಂಬಾಯಿಗೆ ಬಂದ ಡಾಕ್ಟರ್ ಜಿವರಾಜ ಮೇಥಾರವರಿಗೆ ಸ್ವಾಗತವೀಯುವ ಬಗ್ಗೆ ಮುಂಬಾಯಿಯಲ್ಲಿ ಒಂದು ಮಹಾ ಸಭೆಯು ಜರಗಿರುತ್ತದೆ. ಈ ಸಭೆಗೆ ಸರ್. ನಾರಾಯಣ ಚಂದಾವರಕಾರರವರು ಅಧ್ಯಕ್ಷರಾಗಿದ್ದು ಡಾಕ್ಟರ್ ಮೇಥಾರವರ ವಿದ್ಯಾಪಾಂಡಿತ್ಯವನ್ನು ಕೂಡಿದ ಸಭಿಕರಿಗೆ ತಿಳಿಯಪಡಿಸಿದರು. ಲಂಡನ್ ಯುನಿವರ್ಸಿಟಿಯ ಎಮ್ ಡಿ. ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದ ಭಾರತೀಯರಲ್ಲಿ ಡಾಕ್ಟರ್ ಮೇಥಾರವರೇ ಮೊದಲನೆಯವರು.

ದಶಂಬರ ತಾ ೧೩ರಲ್ಲು ಮುಂಬಾಯಿಂದ ಹೊರಟ ಪಿ ಎಂಡ್ ಒ. ಕಂಪೆನಿಯ "ಖಿವ" ಎಂಬ ಹಡಗವು ಇದೇ ಜನವರಿ ತಾ ೮ರಲ್ಲು ಲಂಡನಿಗೆ ಸುರಕ್ಷಿತವಾಗಿ ತಲಪಿರುತ್ತದೆ.

ದಕ್ಷಿಣ ಹಿಂದೂಸ್ಥಾನ.

ತಾ ೭ನೇ ಬೆಳಿಗ್ಗೆ ಪುದುಕೋಟೆಯಲ್ಲಿ ಭೂಕಂಪ ಉಂಟಾಗಿ ಸುಮಾರು ೨೫ ಸೆಕುಂದಗಳ ವರೆಗೆ ಭೂಮಿ ಕಂಪಿಸಿರುವುದು ಉದಕ ಮಂಡಲದಲ್ಲಿಯೂ ಭೂಕಂಪ ಉಂಟಾಗಿ ೧೦ ಸೆಕುಂದಗಳ ವರೆಗೆ ಭೂಕಂಪಿಸಿರುವದೆಂಬ ವಾರ್ತೆ ಬಂದಿರುವದು

ವೆಲ್ಲೂರಿನ ಪೋಸ್ಟಾಫೀಸಿನಲ್ಲಿ ರೂಪಾಯಿ ೨೨,೨೭೭—೧೫—೭ ಕಾಣೆಯಾಗಿರುವದು. ಪೋಸ್ಟಾಫೀಸಿನಲ್ಲಿದ್ದ ಕಬ್ಬಿಣದ ಖಜಾನೆ ಪೆಟ್ಟಿಗೆಯ ಬೀಗವು ಇದ್ದಕ್ಕಿದ್ದ ಹಾಗೆ ಇದ್ದು ಹಣವೂ ಇನ್ಶೂರು ಮಾಡಿದ ಸಾಮಾನುಗಳೂ ಕಳವು ಆಗಿತ್ತು ಪೋಲಿಸಿನವರು ಈ ವಿಷಯ ತನಕಿ ನಡಿಸಿದ್ದಲ್ಲಿ ಪೋಸ್ಟಾಫೀಸಿನ ವರಾಂಡದಲ್ಲಿ ಹುಗಿದಿಟ್ಟ ಹಣವು ಸಿಕ್ಕಿರುವದು. ಪೋಲಿಸಿನವರು ಸ್ಥಳಿಕ ಪೋಸ್ಟು ಮಾಸ್ತರನನ್ನೂ ಅವರ ಒಬ್ಬ ಮಗನನ್ನೂ ಪೋಸ್ಟಾಫೀಸಿನ ೩ ಕೆಲಸದವರನ್ನೂ ಕೈದುಮಾಡಿರುತ್ತಾರೆ

ಮದ್ರಾಸಿನ ಎಡ್ವೊಕೇಟ್ ಜನರಲರಾಗಿದ್ದ ಬಹುಮಾನಪಟ್ಟ ಮಿ. ಕೊರ್ಬೆಟ್ಟರವರು ೯ ತಿಂಗಳ ರಜೆ ತಕ್ಕೊಂಡಿರುವದರಿಂದ ಮದ್ರಾಸ ಹೈಕೋರ್ಟ ವಕೀಲರಾದ ಮ ರಾ ಶ್ರೀನಿವಾಸ ಅಯ್ಯಂಗಾರರವರು ಎಡ್ವೊಕೇಟ್ ಜನರಲರಾಗಿ ನೇಮಿಸಲ್ಪಟ್ಟಿರುವರು.

ಮೈಸೂರು ಸಂಸ್ಥಾನದ ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ತಾಲೂಕು ಹೆಡ್ ಕ್ವಾರ್ಟರಿನಲ್ಲಿ ಇಲ್ಲಿಯ ಉಪಾಧ್ಯಾಯ ಸಂಘದವರಿಗೆ ಸಹಾಯಮಾಡುವದರ ಮೂಲಕ "ವಿದ್ಯಾಭ್ಯಾಸದ ಪ್ರದರ್ಶನ" ಎಂತ ಒಂದು ಪ್ರದರ್ಶನವನ್ನು ತಾರೀಕು ೨೧—೧—೧೯೧೬ರ ಲಾಗಾಯಿತು ಮೂರು ದಿನಗಳು ನಡೆಸತಕ್ಕದ್ದೆಂದೂ ಈ ಪ್ರದರ್ಶನಕ್ಕೆ ಎಲ್ಲಾ ಕಡೆಗಳಿಂದಲೂ ಪ್ರದರ್ಶನಕ್ಕೆ ವಸ್ತುಗಳು ಬರಬಹುದೆಂದೂ ಉತ್ತಮವಾದವುಗಳಿಗೆ ಬಹುಮಾನ ಕೊಡಲ್ಪಡುತ್ತದೆಂದೂ ಕಮಿಟಿಯವರು ಇತ್ಯರ್ಥಪಡಿಸಿರುತ್ತಾರೆ

ದಕ್ಷಿಣ ಕನ್ನಡ.

ಪುತ್ತೂರು:—ನಮ್ಮ ಪಟ್ಟಣದ ರಸ್ತೆಗಳು ಕೆಲವು ಕಡೆಯಲ್ಲಿ ಬಹು ಸಪೂರವಾಗಿಯೂ ಡೊಂಕಾಗಿಯೂ ಇರುವದು. ಸುಮಾರು ೩೦ನೇ ಮೈಲು ಕಲ್ಲಿನಿಂ

ಮುಂದರಿಸುವ ರಸ್ತೆಗಳು ಅತಿ ಸಪೂರವಾಗಿರುತ್ತದೆ. ಅದಾದರೂ ಪ್ರಯಾಣಿಕರಿಗೆ ದೊಡ್ಡದಲ್ಲ. ಆದರೆ ಮೋಟರ್, ಜಡ್ಕಾ ಬಂಡಿಗಳ ವ್ಯಹಾರ ನಡಿಯುವ ಈ ಕಾಲದಲ್ಲಿ ಅಂಥಾ ಸಪೂರವಾದ ರಸ್ತೆಗಳ ಮೇಲೆ ಎತ್ತಿನ ಬಂಡಿಗಳನ್ನು ನಿಲ್ಲಿಸುವದೂ ದನ ಮೇಯಿಸುವವರು ದನ ಕರುಗಳನ್ನು ಕೂಡಹಾಕುವದೂ ಅವಗಡ ಸಂಭವಿಸಲಿಕ್ಕೆ ಅನುಕೂಲವನ್ನು ಮಾಡಿಕೊಟ್ಟಂಥಾಗುವದು. ಕಲ್ಲಡ್ಕ ಗೇಟಿನ ವರೇಗಿನ ರಸ್ತೆಯೂ ಸಪೂರ ಮತ್ತು ಡೊಂಕಾಗಿದ್ದು ನೂರಾರು ಬಂಡಿಗಳನ್ನೂ ದನಕರುಗಳನ್ನೂ ನಿಲ್ಲಿಸುವದರಿಂದ ಮೋಟರ್ ಬಂಡಿಗಳ, ಜಡ್ಕಾಬಂಡಿಗಳ ವ್ಯವಹಾರಕ್ಕೆ ವಿಶೇಷ ಅಡಚಣೆಯಾಗಿರುವದು. ಇಂಥಾ ಸಪೂರವಾದ ರಸ್ತೆಗಳ ಮೇಲೆ ಎತ್ತಿನ ಬಂಡಿಗಳನ್ನೂ ದನಕರುಗಳನ್ನೂ ಕೂಡಹಾಕದ ಹಾಗೆ ಯಾಕೆ ಪೋಲೀಸಿನವರು ಬಂದೋಬಸ್ತಿ ಮಾಡಬಾರದು?

ಶಾರದಾ ವಾಚಕ ಮಂದಿರದವರು ತಮಗಾಗಿ ಒಂದು ಸ್ವತಂತ್ರ ಮಂದಿರವನ್ನು ಕಟ್ಟಿಸುವುದಕ್ಕೋಸ್ಕರ ಧಾವತಿ ಪಡುತ್ತಿದ್ದಾರೆ. ಈಗತಾನೆ ಸ್ಥಾಪಿಸಲಿಕ್ಕಿರುವ ಸೆಕೆಂಡರಿ ಶಾಲಾ ಕಟ್ಟಡದ ಬಗ್ಗೆ ರೂ ೫೦,೦೦೦ವನ್ನು ಕೂಡಿಸುವಾಗ ಪರಿಶ್ರಮ ತೆಗೆದುಕೊಳ್ಳುವ ಸದ್ಗುಣಿಗಳೂ ಗೃಹಸ್ಥರೂ ಈ ಮಂದಿರದ ಬೆಂಬಲಕ್ಕೆ ನಿಂತು ಇದನ್ನೂ ಶಾಶ್ವತಗೊಳಿಸುವಂತೆ ಏರ್ಪಡಿಸುವುದಾದರೆ ವಿದ್ಯಾಭಿವೃದ್ಧಿಗೆ ಯಥಾರ್ಥವಾಗುವ ಸಹಾಯವನ್ನು ಮಾಡಿದಂತಾಗುವುದೆಂದು ಖಂಡಿತ ನಂಬಿರುವೆನು. ವಿದ್ಯಾಭ್ಯಾಸಕ್ಕೆ ಶಾಲೆಯೂ ವಿದ್ಯಾಪ್ರಚಾರಕ್ಕೆ ಶಾರದಾ ಮಂದಿರವೂ ಇರುವಲ್ಲಿ ಇವೆರಡರ ಅಭ್ಯುದಯವನ್ನು ಬಯಸುವುದು, (ಎರಡೂ ಕಣ್ಣುಗಳ ಆರೋಗ್ಯವನ್ನು ಸಮನಾಗಿ ಬಯಸುವ ಗೃಹಸ್ಥನಂತೆ) ಉಚಿತವಾಗಿದೆ ಈ ವಿಷಯದಲ್ಲಿ ಜನಗಳ ಉದಾರ ಬುದ್ಧಿಯು ಸರಿಯಾಗಿ ಪ್ರಕಟಗೊಳುವುದಾಗಿ ನಂಬಿರುತ್ತೇನೆ

~~~~

ಬಂಟ್ವಾಳ:— ಇದೇ ತಾ. ೬ರಲ್ಲು ಬಂಟ್ವಾಳದಲ್ಲಿ ಸಾವುಕಾರರಾಗಿದ್ದ ರಾ| ಕೊಂಬ್ರಬೈಲ ನಾರಾಯಣರಾಯರವರು ಹೃದ್ರೋಗದಿಂದ ಕ್ಷಣದೊಳಗೆ ದೈವಾಧೀನರಾದರು ಇದು ಅತ್ಯಂತ ವಿಷಾದಕರವಾಗಿದೆ ಅಂದೇ,— ಒಬ್ಬ ಮಾಪಿಳ್ಳೆಯು ಮಂಗಳೂರಿಂದ ಬಂಟವಾಳಕ್ಕೆ ಹೋಗುತ್ತಿರುವ ಗಾಡಿಯಲ್ಲಿದ್ದಾಗ್ಗೆ, ಅಲ್ಲೇ ಹೃದ್ರೋಗದಿಂದ ಮರಣಹೊಂದಿರುವನು

ಉಚ್ಚಿ ಮುಂತಾದ ಆಜುಬಾಜಿನ ಹಳ್ಳಿಗಳಲ್ಲಿ ಜಾನುವಾರುಗಳಿಗೆ ರೋಗವು ಪ್ರಬಲವಾಗಿದೆ ಇನ್ನೂ ತಮ್ಮಿಷೆಯಾಗಿಲ್ಲ ಜಂತು ರೋಗಗಳಿಗೆ ಚಿಕಿತ್ಸೆ ಬಲ್ಲವರಾರೂ ಇದ್ದರೆ ತಮ್ಮ ಪತ್ರದ್ವಾರಾ ಈ ರೋಗಗಳಿಗೆ ಔಷಧಿಗಳನ್ನು ತಿಳಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

~~~~

ಕಾಸರಗೋಡು:— ಕಾಸರಗೋಡು ಪಟ್ಟಣವು ಎಲ್ಲಾ ವಿಧಗಳಲ್ಲಿಯೂ ಮುಂದಕ್ಕೆ ಬರಲು ಪ್ರಾರಂಭಿಸಿಯದೆ ಪ್ರಜಾಮುಖಂಡರು ಜನರ ದೀನ ಸ್ಥಿತಿಯನ್ನು ಹೋಗಲಾಡಿಸಲು, ಉದ್ಯುಕ್ತರಾಗಿರುವ ಸಂಗತಿಯು ಸಂತೋಷಕರವೇ. ಬಡಜನರ ಪ್ರಯೋಜನಾರ್ಥವಾಗಿ ಸ್ಥಾಪಿಸಲ್ಪಟ್ಟ "ಪರಸ್ಪರ ಸಹಾಯಕ ಸಂಘವು" ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆ. ಆಡಳಿತೆ ಮಂಡಳಿಯ ಮೆಂಬರರಾದ ಮ| ರಾ| ಕೆ. ಪಿ. ಅಚ್ಯುತ್ತಯ್ಯನವರು, ಮ| ರಾ| ಕೆ. ನರಶಿಂಗ ನಾಯಕರು, ಮ| ರಾ| ಎಚ್. ಎಸ್. ರಾಮರಾಯರು, ಮ| ರಾ| ಎಚ್. ಶ್ರೀನಿವಾಸ ಕಮ್ತಿರು, ಮ| ರಾ| ಕೆ. ಎಸ್. ದೇವಪ್ಪ ಕಮ್ತಿರು, ಮ| ರಾ| ಚಂದಾವರ ಶ್ರೀನಿವಾಸ ರಾಯರು ಮತ್ತು ಮ| ರಾ| ಮಮ್ಮುಂಞಿ ಇವರುಗಳ ಚಟುವಟಿಕೆಯ ಕೆಲಸದಿಂದಲೂ, ನಿಷ್ಪಕ್ಷಪಾತವಾದ ವರ್ತನೆಯಿಂದಲೂ ವೃದ್ಧಿ ಹೊಂದುತ್ತಲಿದೆ ಈ ಮಹಾನುಭಾವರ ಉಪಕಾರವನ್ನು ನಾವು ಎಂದೆಂದಿಗೂ ಮರೆಯಲಾರೆವು.

ಕಾಸರಗೋಡು ಪಟ್ಟಣಕ್ಕೆ "ಯೂನಿಯನ್" (ಅಂದರೆ ಸಣ್ಣ ಮುನ್ಸಿಪಾಲಿಟಿ ಅಂತೆ) ಜಾರಿಗೆ ತರುವ ವಿಷಯದಲ್ಲಿ ಜನರ ಅಭಿಪ್ರಾಯವನ್ನು ಪಡಿಯುವರೆ ನಿನ್ನೆ ತಾ ೫ಕ್ಕೆ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಸಭೆ ಕೂಡಿ ಬಂತು ದೊಡ್ಡದಾದ ಶಾಲಾ ಕಟ್ಟೋಣವು ಜನಸಂದಣಿಯಿಂದ ತುಂಬಿ ತುಳುಕುತ್ತಿತ್ತು ಜನ ಸಾಮಾನ್ಯರ ಮುಂದಾಳುಗಳಾಗಿ ಜನರ ಹಿತವನ್ನೇ ಬಯಸುವ ವಕೀಲ ಮಹಾಶಯರುಗಳೂ ಊರ ಇತರ ಪ್ರಾಮುಖ್ಯ ಮನುಷ್ಯರೂ ಸಭೆಯಲ್ಲಿ ಮಂಡಿಸಿದ್ದರು ಎಲ್ಲೆಡೆಯಲ್ಲಿಯೂ ಉಲ್ಲಾಸವು ವ್ಯಕ್ತವಾಗುತ್ತಿದ್ದಿತು. ಮ| ರಾ| ವಕೀಲ ಎಚ್ ಶ್ರೀನಿವಾಸ ಕಮ್ತಿರು ಅಧ್ಯಕ್ಷರಾಗಿ ಆರಿಸಲ್ಪಟ್ಟ ತರುವಾಯ, ಸಭೆ ಕೂಡಿದ ಉದ್ದೇಶವನ್ನು ವಿವರಿಸಲಾಯಿತು "ಯೂನಿಯನ್" ಮಾಡುವದರಿಂದ ಉಂಟಾಗುವ ಪ್ರಯೋಜನವನ್ನು ಸುರಸವಾದ ಭಾಷಣದಿಂದ ಮ| ರಾ| ಬಂಗ್ಲೆ ನಾರಾಯಣ ಕಮ್ತಿರು, ವಕೀಲ ಮ| ರಾ| ನಾರಾಯಣ ಮೇನನ್‌ರವರು ಮತ್ತು ಕೆಲವರು ಸಭಿಕರಿಗೆ ಮನದಟ್ಟಾಗುವಂತೆ ವ್ಯಕ್ತಗೊಳಿಸಿದರು "ಯೂನಿಯನ್" ಸದ್ಯಕ್ಕೆ ಅವಶ್ಯವಿಲ್ಲವೆಂಬದಾಗಿಯೂ, ಜೀವನ ಮಾಡುವಂಥಾದ್ದೇ ಕಷ್ಟವಾಗಿ ಒಂದೊದಗಿರುವ ಈ ಕಾಲದಲ್ಲಿ "ಯೂನಿಯನ್" ವಗೈರೆ ಸಂಕೋಲೆಯನ್ನು ಬಡವರಿಗ ಕೊಡಿಸುವಂಥಾದ್ದು ನ್ಯಾಯವಲ್ಲವೆಂಬದಾಗಿಯೂ ಜನರ ಪರವಾಗಿ ವಕೀಲ ಮ| ರಾ| ಅವ್ಯಕರಾಯರು, ಮ| ರಾ| ಮಮ್ಮುಞಿ ವಗೈರೆರು ವಹಿಸಿಕೊಂಡು ಮಾತನ್ನಾಡಿದರು ಒಟ್ಟಾರೆ ಬಹುಪಕ್ಷದವರಿಗೆ "ಯೂನಿಯನ್" ಬೇಡವೆಂತ ಅಭಿಪ್ರಾಯ ವ್ಯಕ್ತವಾಯಿತು ಇನ್ನೊವ್ಮೆ ಸಭೆ ಕೂಡಿ ಎಲ್ಲವರ ಅಭಿಪ್ರಾಯವನ್ನು ಓಟುಗಳ ಮುಖಾಂತರ ಪಡಿಯುವದು ಯುಕ್ತವೆಂದ ನಿಶ್ಚೈಸಿ ಸಭೆಯು ಮುಕ್ತಾಯವಾಯಿತು

ಸ್ವಲ್ಪ ಸಮಯದಿಂದೀಚೆಗೆ ಅಡ್ಕತ್ತಬೈಲ್ ಮಿಶ್ಯನ್ ಶಾಲಾ ಕಟ್ಟೋಣದಲ್ಲಿ ನಡಿಯುತ್ತಿದ್ದ "ನ್ಯಾಟಿ ಸ್ಕೂಲ" ಯಾನೆ ರಾತ್ರಿ ಶಾಲೆಯು (ಮಿಶನ್ ಅಧಿಕಾರಿಗಳು ಈಗ ತಮ್ಮ ಶಾಲೆಯಲ್ಲಿ ರಾತ್ರಿ ಶಾಲೆಯನ್ನು ನಡಿಸಲಿಕ್ಕೆ ಕೂಡದೆಂಬದಾಗಿ ಹುಕುಂ ಕೊಟ್ಟದ್ದರಿಂದ) ಹಂಗಾಮಿಯಾಗಿ ಮುಚ್ಚಲ್ಪಟ್ಟಿದೆ ರಾತ್ರಿ ಶಾಲೆಯ ಪ್ರಯೋಜನವನ್ನು ಇಲ್ಲಿ ಪ್ರತ್ಯೇಕ ಹೇಳಬೇಕೇಂತಿಲ್ಲ ವಿದ್ಯಾವಿಹೀನರಾದ ಅನೇಕರಿಗೆ ಧರ್ಮಾರ್ಥವಾಗಿ ವಿದ್ಯೆಯು ಕೊಡಲ್ಪಡುತ್ತಿತ್ತು. ಕಟ್ಟೋಣದ ಅಡಚಣೆಯಿಂದ ರಾತ್ರಿ ಶಾಲೆಗೆ ಬಂದೊದಗಿದ ಕಷ್ಟವು ಅತೀ ದುಃಖಕರ. ರಾತ್ರಿ ಶಾಲೆಯನ್ನು ನಡಿಸುತ್ತಿದ್ದ ಉಪಾಧ್ಯಾಯರು ಬಂದು ಹೊಸ ಕಟ್ಟೋಣವನ್ನು ಕಟ್ಟಿಸುವರೆ ಪ್ರಾರಂಭಿಸಿರುವರು. ಈ ಕಾರ್ಯಕ್ಕೆ ಮುಂದಾಳುಗಳೂ, ಪುರನಿವಾಸಿಗಳೂ ಏಕೀಭವಿಸಿ ಸಹಾಯವನ್ನು ಮಾಡದೆ ಇರಲಾರರು. ವಿದ್ಯಾಭಿವೃದ್ಧಿ ಸಂಗತಿಯಲ್ಲಿ ಯಾರು ತಾನೇ ಸಹಾಯವನ್ನು ಮಾಡರು.?

ಕಾಪು:— ಈ ಹೊಸ ವರ್ಷದ ಆದಿಯಲ್ಲಿ ಇಲ್ಲಿಂ ಬೋರ್ಡು ಕನ್ನಡ ಶಾಲೆಯಲ್ಲಿ ಮ. ರಾ. ಬಿ. ಬಾಳಿಗರವರು ಬಿ. ಎ. ಇವರುಗಳ ಅಧ್ಯಕ್ಷತೆಯಲ್ಲಿ ಊರ ಜನರ ಒಂದು ಸಭೆ ಸೇರಿ "ಶ್ರೀ ಶಾರದಾ ರೀಡಿಂಗ್ ಕ್ಲಬ್" ಎಂಬ ನಾಮಾಂಕಿತದಿಂದ ಒಂದು ಕ್ಲಬ್ ತೆರೆಯಲ್ಪಟ್ಟಿತು. ಸದರಿ ಕ್ಲಬ್ಬಿಗೆ ಆ ದಿನವೇ ೧೪ ಜನ ಮೆಂಬರರು ಸೇರಿರುವರು. ಸದ್ಯಾ ಸ್ವದೇಶಾಭಿಮಾನಿ, ಒಕ್ಕಲಿಗರ ಪತ್ರಿಕೆ, ನ್ಯೂ ಇಂಡಿಯಾ ಪತ್ರಿಕೆಗಳನ್ನು ತರಿಸುವ ಏರ್ಪಾಡು ಮಾಡಿರುವರು.

ಪಡುಬಿದ್ರೆಯಲ್ಲಿರುವ ಶಿವಳ್ಳಿ ಬ್ರಾಹ್ಮಣರ ೧೭ ವರ್ಷ ಪ್ರಾಯದ ಒಬ್ಬ ಯುವತಿಯ ಗಂಡನು ಮೃತವಾಗಿ ೧| ವರ್ಷವಾಗಿತ್ತು ಕಳೆದ ವಾರ ಅವಳು ಒಂದು ಮಗುವನ್ನು ಹೆತ್ತು ಆತ್ಮಹತ್ಯೆಮಾಡಿಕೊಂಡಿರುವಳು ಸದರಿ ಶವವನ್ನು ಉಡ್ಪಿ ಆಸ್ಪತ್ರೆಗೆ ಪರೀಕ್ಷೆಗೋಸ್ಕರ ವೈದಿದ್ದರು. ಒಟ್ಟಾರೆ ಪುನರ್ವಿವಾಹದ ಪದ್ಧತಿಯು ಬ್ರಾಹ್ಮಣರಲ್ಲಿ ಇಲ್ಲದೆ ಇದ್ದದ್ದೇ ಇಂಥಾ ಆತ್ಮಹತ್ಯಗಳಿಗೆ ಕಾರಣವೆಂದು ತಿಳಿಯಬೇಕಾಗಿದೆ

ಈ ಜಿಲ್ಲೆಯ ಪರಸ್ಪರ ಸಹಾಯಕ ಸಂಘದ ಇನ್ಸ್‌ಪೆಕ್ಟರವರು ಈ ಊರಿಗೆ ಚಿತ್ತೈಸಿ, ಊರ ಜನರ ಒಂದು ಸಭೆಯನ್ನು ಗ್ರಾಮ ಪಟೇಲರ ಮನೆಯಲ್ಲಿ ನಡಿಸಿ ಒಂದು ಸಂಘ ಸ್ಥಾಪನೆ ಮಾಡಿ ತೆರಳಿರುವರು

~~~~

ಬಂಗ್ರಮಂಜೇಶ್ವರ:— ಇದೇ ತಾರೀಕು ೧೩ಲ್ಲು ಇಲ್ಲಿಯ ಜೈನ ಮತಸ್ಥರು ಭಜಿಸಿ ಬರುವ ಶ್ರೀ ಚತುರ್ಮುಖ ಚಂದ್ರನಾಥ ದೇವರ ಚಲೋ ಪುರಾತನ ಬಸ್ತಿ ಕಟ್ಟೋಣಕ್ಕೆ ಈ ದಿನ ಬೆಳಿಗ್ಯೆ ೧ಂಟೆ ೧೧ಕ್ಕೆ ಆಕಸ್ಮಿತ ಬೆಂಕಿ ತಗಲಿ ಇಡೀ ಕಟ್ಟೋಣವು ಸುಟ್ಟು ಹೋಗಿರುತ್ತದೆ. ಈ ಬಸ್ತಿಯು ಬಂಗ್ರಮಂಜೇಶ್ವರ ಗ್ರಾಮದ ನಡುವಿನಲ್ಲಿ ಎತ್ತರವಾದ ಗುಡ್ಡೆಯಲ್ಲಿ ಇದ್ದು, ಪೇಟೆಯು ಸುತ್ತಲೂ ಆವರಿಸಿದ್ದದರಿಂದ ಇಡೀ ಬಂಗ್ರಮಂಜೇಶ್ವರ ಪೇಟೆಯು ಬೆಂಕಿಯ ಅನಾಹುತಕ್ಕೆ ಗುರಿಯಾಗುತ್ತಿತ್ತು, ಆದರೆ ಬಲವಾಗಿ ಬೀಸುವ ಘಾಳಿಯ ಎದುರಿಗೆ ಇಲ್ಲಿಯ ಸಾಹುಕಾರ ರಾ| ವೈಕುಂಟ ಬಕ್ಕರ ಹಿತ್ತಲಿನಲ್ಲಿರುವ ದೊಡ್ಡ ದೊಡ್ಡ ಮರಗಳು ಗಾಳಿಗೆ ಅಡ್ಡವಾಗಿ ಇದ್ದುದರಿಂದ ಪೇಟೆಯು ಸುರಕ್ಷಿತವಾಗಿ ಉಳಿಯಲು ಕಾರಣವಾಯಿತು ಈ ಗುಡ್ಡೆಯಲ್ಲಿ ನೀರು ಇಲ್ಲದ್ದರಿಂದ ಬೆಂಕಿ ನೊಂದಿಸಲು ಅಸಾಧ್ಯವಾಯಿತು ಆದರೂ ಕೂಡಿದ ಸುಮಾರು ೩೦೦ಕ್ಕೆ ಮಿಾರಿರುವ ಜನಗಳ ಪೈಕಿ ಇಲ್ಲಿಯ ಶ್ರೀನಿವಾಸ ಭಟ್ಟ, ಇಸ್ಮಾಲಿಬ್ಯಾರಿ, ಮಮ್ಮದೆಬ್ಯಾರಿ, ಕುಂಞಪ್ಪ ಬೆಳ್ಚಂಪಾಡ, ಹೊಲೆಯ ಚೌಕರು ವಗೈರೆರು ಸುತ್ತಲು ಇರುವ ಮುಳಿಗೆ ಮತ್ತು ದೊಡ್ಡ ದೊಡ್ಡ ಮರಗಳ ತುದಿಗೆ ತಗಲಿದ ಬೆಂಕಿಯನ್ನು ಭಾರಿ ಶ್ರಮಪಟ್ಟು ಅದನ್ನು ಬೇಗನೆ ನೊಂದಿಸಲು ಪ್ರಯತ್ನಪಟ್ಟದ್ದು ಅತಿ ಶ್ಲಾಘನೀಯವಾಗಿದೆ

ಮಂಗಳೂರು.

ಕುಂದಾಪುರ ಡಿವಿಜನಲ್ ಆಫೀಸರರು ಇದೇ ಜನವರಿ ತಾ. ೧೪-೧೭ ಉಡ್ಪಿ, ತಾ. ೧೮ ಕುಂದಾಪುರ, ತಾ. ೧೯-೨೨ ಮಂಡ್ಸೆ, ತಾ. ೨೩-೨೪ ಬೈಂದೂರು, ತಾ. ೨೮-೩೦ ಕಿರಿಮಂಜೇಶ್ವರ, ಈ ರೀತಿ ಸರ್ಕೀಟು ಬೀಸಿ ತಾ. ೩೧ರಲ್ಲು ಕುಂದಾಪುರಕ್ಕೆ ಹಿಂತಿರುಗುವರು.
~~~~

ಇಲ್ಲಿ ಸ್ಪೆಶ್ಯಲ್ ಡ್ಯೂಟಿಯ ಮೇಲಿರುವ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮ| ರಾ| ಬಿ. ರಾಮರಾಯರಿಗೆ ಕೊಲ್ಲೂರಿಗೆ ವರ್ಗವಾಗಿರುವದು ಎಂದು ತಿಳಿಯುತ್ತೇವೆ.

ಹರೇಕಳ ಗ್ರಾಮದಲ್ಲಿ ಪ್ರತಿ ವರುಷವೂ ಭಾರಿ ಕೋಳಿ ಜೂಜು ನಡೆಯುವದುಂಟು. (ಸುಮಾರು ೨೦-೨೪ ಸಾವಿರ ಕೋಳಿಗಳು ಅಲ್ಲಿಗೆ ತರಲ್ಪಡುವವಂತೆ) ಹೀಗೆ ಈ ಕೋಳಿ ಕಟ್ಟದಿಂದ ಸಾವಿರಾರು ಪ್ರಾಣಿಗಳ ರಕ್ತಪಾತವಾಗುವದೆಂಬ ಕಾರಣದಿಂದ ಈ ವರ್ಷ ಅಲ್ಲಿ ನಡೆಯುವ ಕೋಳಿ ಜೂಜನ್ನು ಮನ್ನಾಮಾಡಬೇಕೆಂದು ಬಂಟರ ಜಾತಿಯ ಕೆಲವರು ಇಲ್ಲಿಯ ಡ್ಯೆಪ್ಯುಟಿ ಕಲೆಕ್ಟರರವರಿಗೆ ಮನವಿ ಮಾಡಿಕೊಂಡದ್ದರಿಂದ ಡ್ಯೆಪ್ಯುಟಿ ಕಲೆಕ್ಟರರವರು ಆ ಮನವಿಯನ್ನು ಪರಾಂಬರಿಸಿ ಅಲ್ಲಿ ಈ ವರ್ಷ ಕೋಳಿ ಜೂಜು ನಡೆಯಿಸಕೂಡದೆಂಬ ಆಜ್ಞೆ ಮಾಡಿದರು. ಈ ಆಜ್ಞೆಯನ್ನು ಜಾರಿಗೆ ತರುವಾಗ ಒಂದು ವೇಳೆ ಅಲ್ಲಿ ದೊಂಬಿ ಆದೀತೆಂಬ ಕಾರಣದಿಂದ ಇಲ್ಲಿಂದ ಕೆಲವು ರಿಜರ್ವ್ ಪೋಲೀಸಿನವರೂ ಇನ್ಸ್‌ಪೆಕ್ಟರರವರೂ ಅಲ್ಲಿಗೆ ತಾ ೧೧ರಲ್ಲಿ ಹೋಗಿದ್ದರು. ಆದರೆ ಅಲ್ಲಿ ಕೋಳಿ ಜೂಜು ನಡಿಸಲಿಕ್ಕೆ ಬೇಕೆಂದಿದ್ದವರು ಡ್ಯೆಪ್ಯುಟಿ ಕಲೆಕ್ಟರರವರ ಆಜ್ಞೆಯನ್ನು ರದ್ದುಮಾಡಬೇಕೆಂದು ತಾ ೧೧ರಲ್ಲಿ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಮನವಿಮಾಡಿಕೊಂಡರು. ಜಿಲ್ಲಾ ಕಲೆಕ್ಟರರವರು ಈ ಮನವಿಯನ್ನು ಪರಿಶೀಲಿಸಿ, ಆ ಸ್ಥಳದಲ್ಲಿ ವಹಿವಾಟಿನ ಪ್ರಕಾರ ನಡೆದುಬಂದಿರುವ ಈ ಕೋಳಿಜೂಜನ್ನು ತಡೆಯುವದು ನ್ಯಾಯವಲ್ಲವೆಂಬ ಅಭಿಪ್ರಾಯಪಟ್ಟು ಮೊದಲಿನ ತೀರ್ಮಾನವನ್ನು ರದ್ದುಮಾಡಿರುವದರಿಂದ ತಾ ೧೦ರಿಂದ ಅಲ್ಲಿಯ ಧಾಪ್ರಕಾರ ಕೋಳಿ ಜೂಜು ನಡಿಯುತ್ತಿದೆ ಎಂತಲೂ ಹೊಸ ತೀರ್ಮಾನವಾದುದರಿಂದ ಬಂದೋಬಸ್ತಿ ಬಗ್ಗೆ ಹರೇಕಳಕ್ಕೆ ಹೋಗಿದ್ದ ಪೋಲೀಸ್ ಫೌಜಿನವರು ಹಿಂದೆರಳಿರುವರೆಂತಲೂ ತಿಳಿಯುತ್ತೇವೆ.

ಇಲ್ಲಿಂದ ಉರ್ವದತ್ತ ಕಡೆ ಒಂದು ಗಂಟುಮೂಟೆ ಹಿಡಿದುಕೊಂಡು ಹೋಗುತ್ತಿದ್ದ ಒಬ್ಬ ಒಡ ಬ್ರಾಹ್ಮಣನನ್ನು ಕೆ. ಏ ನಾರ್ಣಪ್ಪ ಮತ್ತು ಅವನ ಸಂಗಾತಿಗಳು ತಡದು ನಿಲ್ಲಿಸಿ ಗಂಟುಮೂಟೆಯನ್ನು ಸುಲಿಗೆಮಾಡಿದ್ದರಿಂದ ಪೋಲೀಸಿನವರು ಅಪರಾಧಿತರನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ

ಲಕ್ಷ್ಮಣ ಕುಡ್ವರೆಂಬವರು ಬನಾವಣೆ ಮಿಸ್ತ್ರಿಗಳನ್ನು ರಾ ಹುಂಡೀ ಲಕ್ಷ್ಮಣ ಕಾಮತರಲ್ಲಿ ಅಡವಿಟ್ಟಿದ್ದಾರೆಂಬದಾಗಿ ಪೋಲೀಸಿನವರಿಗೆ ವರದಿ ಆದ್ದರಿಂದ ಸಬ್ ಇನ್ಸ್‌ಪೆಕ್ಟರ್ ರಾ| ಎಸ್. ಅಮೃತರಾಯರು ಸದರಿ ಕುಡ್ವರ ಮನೆ ಜಪ್ತಿಮಾಡಿದ್ದಲ್ಲಿ ಸುಮಾರು ೩೦೧ ಬನಾವಣೆ ಮಿಸ್ತ್ರಿಗಳು ದೊರಕಿರುವದೆಂದು ತಿಳಿಯುತ್ತೇವೆ.

ಬೊಕ್ಕಪಟ್ಣದ ಅಂಡ್ರು ಡೋಮೇಲರೆಂಬವರ ಮನೆಯಲ್ಲಿ ಕಳೆದ ವಾರ ಸುಮಾರು ೧೫೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳು ಕಳವಾಗಿದ್ದವು. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಲೋಬೋರವರು ಈ ವಿಷಯ ತನಿಕೆ ನಡಿಸಿ ಸಲ್ದಾಧಿಯೇಲ್, ಪೌಲುಕೋರ್ಯ್ನ್, ಸಲಮೋನ್ ಕರ್ಕಡ ಮೊದಲಾದವರನ್ನು ಕಳವು ಮ್ಹಾಲುಗಳ ಸಹಿತ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಬಸವನಗುಡಿ ಮೈರೆಹೆಂಗಸನ್ನು ಚಾಯಬ್ಯಾರಿ ಎಂಬವನು ಖೂನಿ ಮಾಡಿದ್ದನೆಂದು ಪೋಲೀಸಿನವರಿಗೆ ವರದಿ ಆಗಿ ಅವರು ಅವನನ್ನು ಕೈದುಮಾಡಿದ್ದರೆಂದೂ ನಂತರ ಡಿಸ್ಟ್ರಿಕ್ಟ್ ಸರ್ಜನರು ಶವ ಪರೀಕ್ಷೆಮಾಡಿ ಮೈರೆಹೆಂಗಸು ಸ್ವಾಭಾವಿಕ ರೋಗದಿಂದ ಮೃತಪಟ್ಟಳೆಂಬ ಅಭಿಪ್ರಾಯಪಟ್ಟದ್ದರಿಂದ ಪೋಲೀಸಿನವರು ಚಾಯಬ್ಯಾರಿಯನ್ನು ಬಿಟ್ಟುಬಿಟ್ಟರೆಂದೂ ತಿಳಿಸಿತ್ತಷ್ಟೆ. ಆದರೆ ಚಾಯಬ್ಯಾರಿಯು ಮೃತಪಟ್ಟ ಮೈರೆ ಹೆಂಗಸಿಗೆ ಹೊಡದಿದ್ದನೆಂಬ ತಕ್ಸೀರಿನ ಮೇಲೆ ಪೋಲೀಸಿನವರು ಪುನಃ ಅವನನ್ನು ಕೈದುಮಾಡಿರುವರೆಂತ ತಿಳಿಯುತ್ತೇವೆ

ಉಳ್ಳಾಲದ ತೋಯಿ ಹೆಂಗಸಿನ ಮಗಳು ತಂಕೌ ಎಂಬ ಸುಮಾರು ೧೪ ವರ್ಷ ವಯಸ್ಸಿನ ಹುಡುಗಿಯನ್ನು ಮಂಜಪ್ಪ ಮತ್ತು ಸಂಕಪ್ಪಸೆಟ್ಟಿ ಎಂಬ ಇಬ್ಬರು ಜಪ್ಪಿಗೆ ಹೈದಿದ್ದರೆಂಬ ಅನುಮಾನದ ಮೇಲೆ ಪೋಲೀಸಿನವರು ಅವರಿಬ್ಬರನ್ನೂ ಕೈದುಮಾಡಿದ್ದರೆಂದು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಡ್ಯೆಪ್ಯುಟಿ ಕಲೆಕ್ಟರರವರು ಒಬ್ಬೊಬ್ಬನಿಂದ ಸಾವಿರ ರೂಪಾಯಿಗಳ ಜಾಮೀನು ತಕ್ಕೊಂಡು ಮುದ್ದೆಯಾಲೆಯರನ್ನು ಬಿಟ್ಟಿರುತ್ತಾರೆ ಮೊಕದ್ದಮೆ ತನಿಕೆಯು ಇದೇ ತಾ ೧೫ರಲ್ಲಿ ಪ್ರಾರಂಭವಾಗುವದು

ಇದೇ ತಾ ೧೧ರಲ್ಲಿ ಬೆಪ್ಸಿನ ಮಿಶ್ಯನ್ ಕಂಪೌಂಡಿನಲ್ಲಿ ಚಿನ್ನಪ್ಪ ಎಂಬವನ ೯ ತಿಂಗಳ ಒಂದು ಮಗುವಿನ ಮೇಲೆ ತೋಟದಲ್ಲಿದ್ದ ತೆಂಗಿನ ಮರದಿಂದ ಒಂದು ಸೀಯಾಳ ಬಿದ್ದು ಆ ಮಗು ಕೂಡಲೇ ಸತ್ತುಹೋಗಿರುವದು.

ಇಲ್ಲಿಯ ರೈಲ್ವೆ ಸ್ಟೇಶನಿನಲ್ಲಿ ಮೂವರು ಪಾಸ್‌ಪೋರ್ಟ್ ಕ್ಲಾರ್ಕರಿದ್ದರೂ ಒಡ ಪ್ರಯಾಣಿಕರಿಗೆ ತಕ್ಕ ಹೊತ್ತಿಗೆ ಪ್ಲೇಗುನೋಟೀಸು ಸಿಕ್ಕುವದಿಲ್ಲವಾದುದರಿಂದ ಪ್ರಯಾಣಿಕರು ಅನೇಕಾವರ್ತಿ ಬಹಳ ಕಷ್ಟನಷ್ಟಕ್ಕೊಳಗಾಗುವರೆಂದೂ ಕಳೆದ ವಾರ ಬೈಂದೂರಿನಿಂದ ಆಗತ್ಯಬಂದರ ಮೇಲೆ ಒಂದರೆ ಸ್ಥಳಕ್ಕೆ ಅಗ್ಗಾಡಿಯಲ್ಲಿ ಹೋಗಲಿಕ್ಕಿದ್ದ ಕೆಲವು ಪ್ರಯಾಣಿಕರು ಇಲ್ಲಿಯ ಸ್ಟೇಶನಿನಲ್ಲಿ ಒಂದು ದಿನ ಕಾದರೂ ನೋಟೀಸು ಸಿಕ್ಕಲಿಲ್ಲವಾದುದರಿಂದ ಕಡೆಗೆ ಇತರರೊಬ್ಬರ ಸಹಾಯದಿಂದ ನೋಟೀಸು ಪಡಕೊಳ್ಳಬೇಕಾಯಿತೆಂತಲೂ ಇದರಿಂದ ಆ ಪ್ರಯಾಣಿಕರು ಹೆಚ್ಚಿನ ನಷ್ಟಕ್ಕೊಳಗಾದರೆಂತಲೂ ಒಬ್ಬ ಬಾತ್ಮಿದಾರರು ತಿಳಿಸಿರುವರು ಇಂಥಾ ದೂರುಗಳು ಆಗಾಗ್ಗೆ ನಮಗೆ ಕೇಳ ಸಿಕ್ಕುವದರಿಂದ ಸಂಬಂಧಪಟ್ಟ ಅಧಿಕಾರಿಗಳು ಮುಂದಕ್ಕೆ ಒಡ ಪ್ರಯಾಣಿಕರಿಗೆ ಪ್ಲೇಗು ನೋಟೀಸು ಸಂಬಂಧ ಸಂಕಷ್ಟಗಳು ಒದಗದಂತೆ ನಿಗಾ ಇಡಬೇಕಾಗಿ ಪ್ರಾರ್ಥಿಸುವೆವು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಇದೇ ತಾ ೩೧ರಲ್ಲಿ ಕೂಡಿಬರುವದು.

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ತಾ. ೧೦ರಿಂದ ಉಡುಪಿಯತ್ತ ಕಡೆ ಸರ್ಕೀಟು ಮಾಡುವರೆಂದು ಕಳೆದ ಸಂಚಿಕೆಯಲ್ಲಿ ಪ್ರಕಟಿಸೋಣಾಗಿತ್ತಷ್ಟೆ. ಆದರೆ ಮದ್ರಾಸಿಗೆ ಬರಬೇಕೆಂದು ತಂತೀ ಬಂದಿರುವದರಿಂದ ಸರ್ಕೀಟನ್ನು ನಿಲ್ಲಿಸಿ ದೊರೆಗಳವರು ತಾ. ೧೦ರಲ್ಲಿ ಮದ್ರಾಸಿಗೆ ಹೊರಟು ಹೋಗಿರುವರೆಂತ ತಿಳಿಯುತ್ತೇವೆ.

ದಶಂಬರ ತಾ. ೨೭ರಲ್ಲು ಕಾಪಿನ ಸಮೀಪ ಜಟ್ಕಾ ಅವಗಡದಲ್ಲಿ ಗಾಯವೊಡೆದ ಪ್ರಯಾಣಿಕರಲ್ಲಿ ಶಿರಹಟ್ಟಿ ನಾಟಕ ಕಂಪೆನಿಯ ಅಸಿಸ್ಟಾಂಟ್-ಮೆನೇಜರ್ ರಾ| ಬಲವಂತರಾಯರವರು ಕಳೆದ ವಾರ ಉಡುಪಿಯಲ್ಲಿ ಕಾಲವಾದರೆಂದು ತಿಳಿಯುತ್ತೇವೆ.

ಕಾಪಿ ಮೊಕದ್ದಮೆಯಲ್ಲಿ ಮುದ್ದೆಯಾಲೆಯಾಗಿದ್ದ ಬೋಳಂತೂರು ಸರ್ವೋತ್ತಮ ಪ್ರಭುರ ಶಿಕ್ಷೆಯು ದ್ದೂಪ್ಪಿಟ ಮೇಜಿಸ್ಟ್ರೇಟರಲ್ಲಿ ಕಾಯಂ ಆಯಿತೆಂದು ತಿಳಿಸೋಣಾಗಿತ್ತಷ್ಟೆ. ಆದರೆ ಮುದ್ದೆಯಾಲೆಯು ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಳ್ಳಲಿಕ್ಕಿರುವದರಿಂದ ಜಾಮೀನಿನ ಮೇಲೆ ಬಿಡಬಹುದೆಂಬದಾಗಿ ಹೈಕೋರ್ಟಿನವರ ಹುಕುಂ ಬಂದ ಕಾರಣ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ದಿ ಪೊಲನ್ ಮಾರ್ಟ್, ಮಂಗಳೂರು—ಇವರಿಂದ ಕಳುಹಿಸೋಣಾದ ಕಾಮಿನಿಯ ಆಯಿಲ್ ಕಂಪೆನಿಯ ಅತ್ಯಂತ ಸುಂದರವಾದ ಕೆಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಕೆಲೆಂಡರಿನಲ್ಲಿ ಒಬ್ಬ ಸ್ತ್ರೀಯು ಕಾಮಿನಿಯಾ ತೈಲದ ಶೀಸೆಯನ್ನು ಕೈಯಲ್ಲಿ ಎತ್ತಿಕೊಂಡು ತೋರಿಸುವ ಚಿತ್ರವು ಅತಿ ಸುಂದರವಾಗಿದೆಯಲ್ಲದೆ ಈ ಸುವಾಸನಾ ತೈಲಕ್ಕೆ ಪ್ರದರ್ಶನಗಳಲ್ಲಿ ಚಿನ್ನದ ಪದಕಗಳು ಬಹುಮಾನವಾಗಿ ದೊರೆದಿರುತ್ತವೆಯೆಂತ ಸೂಚಿಸೋಣಾಗಿದೆ

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ಜನವರಿ ತಾ ೧೮-೨೦ ಬೆಳ್ತಂಗಡಿ, ತಾ. ೨೧-೨೩ ಕಾರ್ಕಳ, ತಾ ೨೪ ೨೫ ಬೈಲೂರು ಅಥವಾ ಹಿರಿಯಡ್ಕ, ತಾ. ೨೬-೨೭ ಹೆಬ್ರಿ, ತಾ. ೨೮-೨೯ ಶಂಕರನಾರಾಯಣ, ತಾ. ೩೦ ೩೧ ಮತ್ತು ಫೆಬ್ರವರಿ ತಾ ೧, ಕುಂದಾಪುರ ತಾ. ೨ ೪ ಉಡುಪಿ, ತಾ. ೫-೬ ಮುಲ್ಕಿ, ಈ ರೀತಿ ಸರ್ಕೀಟು ಬೆಳಸಿ ತಾ. ೭ರಲ್ಲು ಮಂಗಳೂರಿಗೆ ಹಿಂದೆರಳುವರು.

ಕಳೆದ ವಾರ ಇಲ್ಲಿಯ ಮುನಿಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಿತ್ತು.

ಒಬ್ಬ ಬಾತ್ಮೀದಾರರಿಂದ:—ಮುಂಬಾಯಿಗೆ ಇಲ್ಲಿಂದ ಹೋಗುವ ಕೆಲವು ಯುವಕರ ಶ್ರೇಯೋಭಿವೃದ್ಧಿಗೋಸ್ಕರ ಅಲ್ಲಿರುವ ರಾ ಪಿ. ಕೆ ಶ್ರೀನಿವಾಸರಾವ್ ಎಂಬವರು ಪಡುತ್ತಿರುವ ಶ್ರಮೆಯು ಬಹಳ ಶ್ಲಾಘನೀಯವಾಗಿರುವದು. ಇವರು "The South Canara Educational Night School" ಎಂಬದೊಂದು ಇಂಗ್ಲಿಷು, ಟೈಪ್‌ರೈಟಿಂಗ್, ಶೋರ್ಟ್‌ಹೇಂಡ್ ಮುಂತಾದನ್ನು ಕಲಿಸುವ ರಾತ್ರಿ ಶಾಲೆಯನ್ನೂ, ಕಳೆದ ವರ್ಷ "The South Canara Educational Library" ಎಂಬ ಇಂಗ್ಲಿಷು ಮತ್ತು ಕನ್ನಡ ಪುಸ್ತಕಗಳೂ ಇರುವದೊಂದು ಸರಸ್ವತಿ ಭಂಡಾರವನ್ನೂ ತೆರೆದಿರುವರು. ಮೇಲಿನ ಶಾಲೆಯಲ್ಲಿ ಈಗ ಹೆಚ್ಚುಕಡಿಮೆ ೩೦ ಹುಡುಗರು ಶಿಕ್ಷಣ ಹೊಂದುತ್ತಿದ್ದಾರಲ್ಲದೆ, ಲೈಬ್ರೆರಿಯ ಕೆಲಸವು ಉತ್ತಮ ರೀತಿಯಲ್ಲಿ ಮುಂದರಿಯುತ್ತಿದೆ.

ಕರ್ಣಾಟಕ ಸಾಹಿತ್ಯ ಪರಿಷತ್ತು.

ಪರಿಷತ್ತಿಗೆ ಸೇರಿರುವ ಸದಸ್ಯರಿಂದ ಈ ಕೆಳಗೆ ಕಂಡಂತೆ ಚಂದಾ ಹಣವು ವಸೂಲಾಗಿದೆ. ೧೯೧೫ನೇ ಡಿಸೆಂಬರ್ ತಿಂಗಳಲ್ಲಿ ವಸೂಲಾಗಿರುವ ಚಂದಾವಿವರ:—ಮ| ರಾ| ವಿ ಎಸ್. ಕಾಮತ್ ಮಂಗಳೂರು ಇವರಿಂದ ರೂ. ೧೨; ಮ| ರಾ| ಪಿ. ಮಂಗೇಶರಾವ್ ಬಿ ಎ ಎಲ್. ಟಿ. ಮಂಗಳೂರು ರೂ. ೧೨; ಮ| ರಾ| ಬಿ. ಎಸ್ ಬೆಟ್ಟಗೇರಿ, ಬೆಳಗಾಂ (ದಫೆ ೨) ರೂ ೧೦; ಮ| ರಾ| ಆರ್. ತಾತ ಎಂ. ಎ ಎಲ್. ಟಿ. ಸೈದಾಪೇಟೆ (ದಫೆ ೨) ರೂ. ೪, ಮ| ರಾ| ಎಂ ಚಲುವೈಯ್ಯಂಗಾರ್ ಚಿತ್ರದುರ್ಗ ರೂ. ೨; ಮ| ರಾ| ಎಂ. ಎನ್. ಕಾಮತ್, ಉಡುಪಿ ರೂ. ೧೨; ಮ| ರಾ| ಆರ್. ಎ. ಜಹಗೀರ್‌ದಾರ್ ಎಮ್ ಎ ಎಲ್. ಎಲ್. ಬಿ. ಮುಂಬಾಯಿ ರೂ. ೧೨; ಮ| ರಾ| ಎಂ. ಶ್ರೀನಿವಾಸರಾವ್ ಬಿ. ಎ. ಮೈಸೂರು ರೂ. ೫೦; ಮ| ರಾ| ಎಚ್. ಚೆನ್ನಕೇಶವಯ್ಯಂಗಾರ್ ಬೆಂಗಳೂರು (ದಫೆ ೨) ರೂ. ೧೫. ಜುಮುಲಾ ರೂ. ೧೨೯—೦—೦.

ಬಿ. ಕೃಷ್ಣಪ್ಪ,
ಸ್ಥಾ. ಕಾರ್ಯದರ್ಶಿ.

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಆಗತ್ಯವುಳ್ಳ

1916ನೇ ವರುಷದ

ಪ್ರೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಊರ್ಜಿತಗೊಳ್ಳುವ ಪ್ರೋಸೆಸ್ ಫೀಸ, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟ, ವಿಲ್ಲಾಮ ಬಾಡಿಗೆ ಚೀಟು, ರಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಠಕಗಳ ಮೊಕಾಬಿಲೆ ಪಟ್ಟಿ ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬೂಕು

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯು ಪ್ರತ್ಯೇಕ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕುಟುಂಬ ಸಂಜೀವಿನೀ.

ಛಳಿಕಾಲದಲ್ಲಿ ತಲದೋರುವ ಶೀತ, ಕೆಮ್ಮು, ನೆಗಡಿ, ಶೀತಭೇದಿ, ವಾತರೋಗಗಳಿಗೆ ಯುಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ, ಮೈಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆ ನೋವು, ತಲೆಸಿಡಿತ, ದುರ್ವ್ಯಾಪ್ತಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯುಕಲಿಪ್ಟಸ್ ತೈಲವು ಸಿದ್ಧೌಷಧಿ ಎಂದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಬಂದಿರುತ್ತವೆ. ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?



ಔನ್ಸ್ ಸೀಸೆ 1ಕ್ಕೆ 5 ಆಣೆ ವಿ ಪಿ ಚಾರ್ಜು ಬೇರೆ ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ 3—10—0

☞ ಕಮ್ಮಿ ದರದ ಠಕ್ಕು ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ.—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆ ನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಷಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ| ವೈ. ಕೊರಗಪ್ಪ ಮುಂಬಾಯಿ—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೊಳೆ ತಾಗಿ ಕೊಳೆಯುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ. ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ ದಯಮಾಡಿ 3 ಕರಡಿಗೆಗಳನ್ನು ವಿ ಪಿ ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇರೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೆ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ ಖರ್ಚೇನೂ ವಿಶೇಷವಿಲ್ಲ ಹೀಗಿರುವಲ್ಲಿ ನಿಮ್ಮ ಕಾರ್ಯವನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ — ಸೋಮೇಶ್ವರ ನರಶಿಂಗರಾವ್,

ಕೋಮಲ ವಿಲಾಸ,

ರಸಪ್ಪಚೆಟ್ಟಿ ಬೀದಿ, ಮದರಾಸು.

ಶ್ರೀ ಮಾಂಗಿರೀಶ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಶ್ವಾಸ ರೋಗಗಳಿಗೂ ಉಳುಕು ಮುಂತಾದವುಗಳಿಗೆ ತಿಕ್ಕುವದರಿಂದ ಶೀಘ್ರವಾಗಿ ಗುಣವಾಗುವದು. ಸ್ಕ್ರೂ ಬಾಯಿಯ ಸಣಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ಸಣಿಗೆಗಳು ಹೆಚ್ಚಿಗೆ ಸೆಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ ಪಿ ಮಾಫ

ವಿಸ್ಫೋಟಕ ಮಾತ್ರೆ—ಈ ಮಾತ್ರೆಯು ಮಲೇರಿಯಾ ಸಿಡುಬ, ಕೋರ, ಕೋಟಿ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದು ಮಕ್ಕಳ ಜೇಷ್ಠೆಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೊಟ್ಟಣ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತ

ಸ್ವರಸ—ಹೊಟ್ಟೆ ಗಂಟ್ಲುನೋವು ದಿನ ಬದಲಾಗುವದ, ಅಗ್ನಿ ಮುಂತಾದವುಗಳಿಗೆ ಗುಣಕಾರಿ ಎಲೆಅಡಿಕೆಯ ಸಂಗಡ ತಿನ್ನುವದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು ದೊಡ್ಡ ಪೊಟ್ಟಣ 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—2—0

ಗಜಕರ್ಣ ಯಾನೆ ಗಿಡ್ಡಿಗೆ—ಈ ಮುಲಾಮನ್ನು ತುರಿಸುವಿಕೆ ಕಡುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ಸ್ವಚ್ಛವಾಗುವದು ಗ್ಲಾಸಿನ ಡಬ್ಬಿ 1ರ ಕ್ರಯ 0—4—0 ಒಂದು ಡಜನ್ ಡಬ್ಬಿಗಳಿಗೆ ರೂ 2—5—0 ವಿ ಪಿ ಬೇರೆ

M D R & Sons

Srimangireesh Aushadalaya,

UDIPI S. C.

ಓದಿನೋಡಿ! ಬೆಲೆ ಸುಲಭ!! ಅಂದವಾದ ಮುದ್ರಣ!

ದಪ್ಪ ಕಾಗದ, ವೇದಮಂತ್ರಗಳಿಗೆ ಸ್ವರಹಾಕಿದ ಕನ್ನಡಾಕ್ಷರ

ಆಹ್ನಿಕಮಂಜರಿ.

ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕವು.

ಇದರಲ್ಲಿ ಮಂಗಲಾಚರಣ, ಗುರುಸ್ತುತಿ, ಪ್ರಾತಸ್ಮರಣ, ಭಸ್ಮಧಾರಣ ವಿಧಿ, ಆಚಮನ ವಿಧಿ, ಪ್ರಾತಸ್ಸಂಧ್ಯಾ, ಅಗ್ನಿಕಾರ್ಯ, ಮಧ್ಯಾಹ್ನ ಸಂಧ್ಯಾ, ಬ್ರಹ್ಮಯಜ್ಞ, ಪಂಚಾಯತನ, (ದೇವ) ಪೂಜಾ ಪಂಚಾಯತನ ದೇವತಾ ಸ್ಥಾಪನಚಕ್ರ, ಪೂಜಾವಿಧಿ, ಅಗ್ನಿಮೀಳೇ ಸೂಕ್ತ, ಪಂಚಾಮೃತ ಸ್ನಾನ, ರುದ್ರ, ಚಮೆ, ಪುರುಷಸೂಕ್ತ, ಶ್ರೀಸೂಕ್ತ, ವಿಷ್ಣುಸೂಕ್ತ, ಅಹಂರುದ್ರಾಸೂಕ್ತ (ದೇವಿಸೂಕ್ತ) ಪವಮಾನ, ದ್ವಾದಶ ನಾಮಗಳು, (೩ ದೇವರದ್ದು), ದ್ವಾದಶನಾಮಸ್ತೋತ್ರ, ಲಘುನ್ಯಾಸ, ೩ ಅಷ್ಟೋತ್ತರಗಳು, ದೇವೇಂದ್ರ ಪಾದಸ್ತವ, ವಿಷ್ಣುವೇದ ಪಾದಸ್ತವ ಇನ್ನೂ ಅನೇಕ ಸ್ತೋತ್ರಗಳೂ ಅಡಗಿವೆ. ಅಲ್ಲಲ್ಲಿ ಟಿಪ್ಪಣಿ ಕೊಟ್ಟು, ಅಂದವಾದ ಮುದ್ರಣದಿಂದ ಸುಂದರವಾದ ಬುಕ್ಕು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಅತ್ಯಗತ್ಯ ಬೇಕಾದುದು.

ಇನ್ನು ಹೆಚ್ಚಿನ ವಿಷಯ ಪತ್ರದ್ವಾರಾ ತಿಳಿಯಬಹುದು. ವ್ಯಾಪಾರಸ್ಥರಿಗೆ ಯೋಗ್ಯವಾದ ಕಮೀಶನ್ ಕೊಡಲಾಗುವುದು.

ಬೆಲೆ: ಪುಸ್ತಕ 1ಕ್ಕೆ 1—0—0, ಪೋಸ್ಟೇಜು ಬೇರೆ.

ವಿಳಾಸ:— ಎಚ್. ವಿ. ಕೃಷ್ಣಭಟ್ಟ,

ವೇದಪಾಠಶಾಲಾ, ತೀರ್ಥಮುತ್ತೂರು,

ಆಗುಂಬೆ ಪೋಸ್ಟು, ತೀರ್ಥಹಳ್ಳಿ ತಾಲೂಕು.

ಕನ್ನಡ ಕಥೆ ಪುಸ್ತಕಗಳು.

ಮುದ್ರಾಮಂಜೂಷ	1	12	0	ನಿರ್ಮಲೆ	0	12	0
ಅರೇಬಿಯನ್ ನ್ಯಾಟ್ಸ್	2	4	0	ಸಚಿತ್ರ ಭಟ್ಟಿ ವಿಕ್ರಮಾದಿತ್ಯ			
ರಮಾಮಾಧವ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂದಿರ.	1	4	0
ಕೃಷ್ಣಾಕುಮಾರಿ	0	10	0	ಪತಿವ್ರತಾ ಮಹಾತ್ಮೆ	0	6	0
ಪರಿಮಳಾ	0	12	0	ಹರಿಶ್ಚಂದ್ರನ ಕಥೆ	0	4	0
ಮಹಾರಾಣಿ ಗ್ರಹಶೀಲೆ	0	3	0	ನಳದಮಯಂತಿಯ ಕಥೆ	0	6	0
ದುರ್ಗಾದಾಸ	0	12	0	ಶ್ರೀ ಕೃಷ್ಣಬೋಧಾಮೃತ.	0	8	0
ಚಂಚಲ ಕುಮಾರಿ	0	6	0	ಹಾಸ್ಯಸುಂದರಿ	0	8	0
ಪ್ರಬಂಧ ಮುಕ್ತಾವಳಿ	0	12	0	ಸೋಮಸುಂದರ	0	10	0
ಚಂದ್ರಮತಿ	0	6	0	ಮೂಷಕಾಸುರ ವಿಜಯ.	0	1	6
ದಯಾಮತಿ	0	2	0	ಹಾಸ್ಯ ಸಂಜೀವಿನಿ	0	4	0
ಕಳಾವತಿ	0	2	0	ನಿರುಪಮಾ	0	12	0
ಸಂಗೀತ ಸಮಯಸಾರ	1	4	0	ಭಾನುಮತಿ	0	2	0
ಬಾಲಕಾಗೀತ ಮುಕ್ತಾವಳಿ	0	10	0	ಸಂತಾಪಕ	0	4	0
ವಿಷವೃಕ್ಷ	1	8	0	ವಸುಮತಿ	0	2	0
ದುರ್ಗೇಶನಂದಿನಿ	1	4	0	ಪದ್ಮಿನಿ	0	2	0
ಸ್ತ್ರೀಮಲೆಯಾಳ	0	8	0	ತಾರಾಸುಂದರಿ	0	8	0
ವೇಂಕಟನಾರಾಯಣರಾವ್	0	2	0	ಅನಂಗಸುಂದರಿ.	0	8	0
ಕುಮುದಿನಿ	0	6	0	ಸತ್ಯಸಂಜೀವಿನಿ	0	6	0
ಸಾಧ್ವಿಗುಣಮಂಜರಿ	0	5	0	ವಸಂತ ಬಧಿರ ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ	0	4	0	ಅನಂಗಮ ದೂರಪ್ರಹಸನ	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	2	0	0	ಚಂದ್ರಕಳಾ	0	9	0
ರೋಹಿಣಿ (ಸಾರಸ್ವತಮಂಡಳ)	1	0	0	ಸತೀಬೋಧಿನಿ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಪಿತ್ಥ, ದಶಾಂಗ, ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವದು. ಅರ್ಧಾಣೆ ಸ್ಟ್ಯಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ ಮಂಗಳೂರು.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರಗಳ ಘಾತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಿಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಬ್ಬಿಗೆ ಕ್ರಯ: 2—0—0.

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚವಿಂದು ಗುಣ.

ಕ್ರಯ: ರೂ. 0—12—0.

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ: 0—8—0;

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೊಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೆಂಗಬೀದಿ ಮನೆ ನಂಬ್ರ 268ನೇ, ಮಂಗಳೂರು

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಚರ್ಮರೋಗಕ್ಕೆ ಔಷಧಿ:—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಪಾಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ ಹೊರಗೆ ಹಚ್ಚುವದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಸೀಸೆವರೆಗೂ 5 ಆಣೆ.

ರಕ್ತಾಮೃತ!—ಕಾಫಿ, ಟೀ ಇವುಗಳಿಗೆ ಬದಲಾಗಿ ಉಪಯೋಗಿಸುವ ಚೂರ್ಣವು ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ. ಕಾಫಿ, ಟೀ ಇವುಗಳಿಂದುಂಟಾಗುವ ಕೇಡುಗಳೊಂದೂ ಇಲ್ಲದೆ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯರೋಗ, ತಲೆನೋವು ಮುಂತಾದ್ದನ್ನು ಹೋಗಲಾಡಿಸುವದು. ರಕ್ತಶುದ್ಧಿಯನ್ನು ಮಾಡಿ ನರಸಂಬಂಧವನ್ನು ಬಲಪಡಿಸುತ್ತದೆ. ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ, ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣಹೊಂದುವರು. ಜ್ವರದವರಿಗೂ, ಬಸಿರು ಬಾಣಂತಿಯವರಿಗೂ, ವಾಂತಿಭೇದಿ ಮುಂತಾದ ರೋಗಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು. ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಅನಿಷ್ಟವಾದ ಕಾಫಿ, ಟೀ ಮುಂತಾದವುಗಳಿಗೆ ಬದಲಾಗಿ ಮಕ್ಕಳೂ ದೊಡ್ಡವರೆಲ್ಲರೂ ಉಪಯೋಗಿಸಬಹುದು. ಅರ್ಧ ತೊಲೆ ಚೂರ್ಣವು ಒಂದು ಬಟ್ಟಲು ಕಷಾಯಕ್ಕೆ ಸಾಕು. 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ 1ಕ್ಕೆ 6 ಆಣೆ. ವಿ. ಪಿ. ಚಾರ್ಜು 3 ಆಣೆ. 8 ಆಣೆ ಟಪ್ಪಾಲು ಸ್ಟ್ಯಾಂಪುಗಳನ್ನು ನಮಗೆ ಕಳುಹಿಸುವವರಿಗೆ 1 ಟಿನ್ ಮುಂದಾಗಿ ಹಾಸಲು ಕೊಟ್ಟು ಕಳುಹಿಸಲ್ಪಡುವದು.

ಸರಬತ್ತುಗಳು:—ದ್ರಾಕ್ಷೆ, ಸುಗಂಧಪಾಲಿ, ಗುಲಾಬಿ, ಬಾಳೆ, ನಿಂಬೆ, ಕಿತ್ತಲೆ, ಬಾದಾಮಿ, ಸೇಬು, ದಾಳಿಂಬೆ, ಸೊಂಟಿ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 6 ತೊಟ್ಟನ್ನು ಸೇರಿಸಿದರೆ 1 ಬಟ್ಟಲು ನೀರಿಗಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು. ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ. ಪಿ. ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟಿದೆ. ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು. ಸೀಸೆ 1ಕ್ಕೆ ಆಣೆ 8. ವಿ. ಪಿ. ಚಾರ್ಜು 3 ಸೀಸೆವರೆಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರೆಯಬೇಕು.

MY ADDRESS,
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತಿ ವಿಳಾಸ — "ಪಂಡಿಟ್" ಮದರಾಸ್

ಪಿಜ್ಜಾಬಿ ಮಶ್ಶಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನಯವಾಗುವವು

ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುದು ಬಣ್ಣಕ್ಕೆ ಮಾರ್ಪಡದು ಒಂದು ಸಲ ಪರೀಕ್ಷಿಸಿ ನೋಡಿರಿ

ಪೆಟ್ಟಿಗೆ ಒಂದರ ಕ್ರಯ ರೂ 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ 9—0—0 ವಿ ಪಿ ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಸ ಬೇಕು

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay

ಪ್ರೈಮಸ್ ಎಂಬುವ ಸ್ಟವಿನ (ಒಲೆಯ) ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ	7	8	0
ಬರೀ ಒಲೆಗೆ ಮಾತ್ರ ಕ್ರಯ ರೂ	5	12	0
೫ನೇ ಮತ್ತು ೧೦೦ನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ ರಿಪೇರಿಂಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟವ್ ಡಿಪೊ,
೭೩೭ ಗಿರಗಾಂ ಬೊಂಬಾಯಿ.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಒಣ್ಣ ಬಹಳ. ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.



B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಪಂಡಿತ್ ಟಿ ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು ಖಜ್ಜಿ, ಸುಟ್ಟ ಘಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0 ವಿ ಪಿ ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
ಕದ್ರಿ, ಮಂಗಳೂರು.

ಕೊಡ್‌ಲಿವರ್. ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವೆಷ್ಟು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಖಾಸ, ಕ್ಷಯ ಮೊದಲಾದ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

Perpetual Calendar.

ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಮುಫತ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದರ ಬೆಲೆ 10 ಆಣೆ ಪ್ಯಾಕಿಂಗ್ ಪೋಸ್ಟೇಜು ಅಲಾಯಿದ

ವಾಲ್ಮೀಕಿಯ ಜಯ ಆಣೆ 6; ಮೈತ್ರೇಯಿ ಆಣೆ 5; ಸುಧರ್ಮ ಪ್ರಥಮ ನಾಟಕ ಆಣೆ 8, ಸೂಕ್ತಿಮಾಲೆ, 1—2 ಭಾಗಗಳು ಆಣೆ 6; ಭಕ್ತಿಯೋಗ ಆಣೆ 3, ಆರ್ಯ ಮತಸಾರ ಆಣೆ 3; ಭರತ ಭೂಮಿಯ ಮಹರ್ಷಿಗಳು ಆಣೆ 2; ರಾಜಭಕ್ತಿ ಆಣೆ 6; ದೇಶಭಕ್ತಿ ಆಣೆ 10

[ಈ ಪೈಕಿ ರೂ. 2—8—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ]

ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1— 4	ಪ್ರಬಂಧ ಮುಕ್ತಾವಳಿ	0—12
ಹಾರ್ಮೋನಿಯಂ ಸ್ವಯಂ ಬೋಧಿನಿ	0— 4	ಕನ್ನಡ ಅರೇಬಿಯನ್ ನೈಟ್ಸ್	2— 2
ಬಾಲಿಕಾಗೀತ ಮುಕ್ತಾಕಲಾಪ ಸ್ವರಯುಕ್ತ	0— 9	ಮುದ್ರಾಮಂಜೂಷ	1—10
ಕಲ್ಯಾಣ ಗೀತಾವಳಿ	0— 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3— 2
ಅಭಿನವ ಸಂಗೀತ ಪಾರಿಜಾತ	0— 4	ಅಧ್ಯಾತ್ಮವಿಚಾರ	2— 0
ರಸಿಕ ಜನಹಾರಸಂಗ್ರಹ ಭರತ ಶಾಸ್ತ್ರ	1— 8	ಪ್ರಿಂ ರೋಜವಿಜಯಂ	1— 9
ಸ್ತ್ರೀಧರ್ಮನೀತಿ	0— 9		

ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್)		0—12	ಮಾಧವೀ ಕಂಕಣ (ಬಂಗಾಳಿ ನಾವೆಲ್)		1— 0
ಪ್ರಫುಲ್ಲೆ	,,	0—12	ಶಕ್ತಿ	,,	0—12
ಉನ್ಮತ್ತೆ	,,	0— 3	ಶೋಭನೆ	,,	0—12
ವಿಷ್ಣು ವಿವಾಹ	,,	0— 4	ಚಂದ್ರಪ್ರಭಾ ಕಾದಂಬರಿ		0—14
ಸೌದಾಮಿನಿ	,,	0— 8	ಸುಭದ್ರೆ	,,	0— 5
ಸರಳಾ	,,	0— 2	ಕಲಿಯುಗ	,,	0— 5
ಸುಷಮಾ	,,	0— 2	ಕಲಾನಾಥ	,,	0— 8
ಅನಾಥ ಪ್ರೀತ	,,	0— 1	ನನ್ನ ಆಚಾರ್ಯ (My Master)		0— 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳನ್ನು ಒಂದಾವರ್ತಿ ತರಿಸುವವರಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ.

ಕಾದಂಬರಿಗಳು.

ಸುಶೀಲೆ ಶ್ರೀ ತಿರುಮಲಮ್ಮನವರಿಂದ	0— 6	ದೇವಿ ಚೌಧುರಾಣಿ ಬಿ. ವೆಂಕಟಾಚಾರ್		1— 4
ಸತೀತ್ವ ರಕ್ಷಣೆ (ನಥಾ ಭಾಗ 1) ,,	0— 8	ಮನೋರಮ	,,	1— 0
ವಿರಾಗಿಣಿ (ಡಿಟೊ 2) ,,	1— 0	ಪರಿಮಳ	,,	0—10
ವಿದ್ಯುಲ್ಲತಾ (ಹರಿದ) ,,	0—14	ಕೊಹಿನೂರು	,,	0—12
ವಕ್ಷ ಕನ್ಯಾ ,,	1— 8	ಸಾಧನೆ		

(ಇತ್ಯಾದಿ ಇವರ ಎಲ್ಲಾ ಕಾದಂಬರಿಗಳು.

ಕಲ್ಯಾಣ! ಕಲ್ಯಾಣ!! ಕಲ್ಯಾಣ!!!

ಬಂಧುಗಳೇ! ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:*—

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ. ಕ. POST POLALY, S. C.

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ.

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. 16 ಮಾತ್ರೆ ರೂ 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ 1

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾಡ್ಯ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷದವಾಗಿರುತ್ತದೆ ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭. ದರ್ಬಾರ್ ಬ್ಯೂಟಿ ಪೆಸ್ಟಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0.

೮. ಅಮೃತಸಾರ್. ಇದು ವಾಯು ದುರ್ಮಾನ್ ಎಲುಬು ಹಿಡಿ ಶೂಲಕ್ಕೆ ಸಿದ್ಧೌಷದವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1.

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಔಷಧಗಳು ದೊರೆಯುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬೆಳ್ಳಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ನೊಳಕೆಯ ಮೂಲವ್ಯಾಧಿಯಲ್ಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible] ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—**ಬಿ ಎಮ್. ನಾಥ್ ಮತ್ತು ಕಂಪೆನಿ,**

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, [illegible], ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, [illegible], ವಾತ ಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ದಿವಸದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. [illegible] ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು **ಬೆಳೆಯಿಸುವದು.** ನಾಲಿಗೆಗೆ ಪಟುತ್ವ [illegible] **ಮಧುರವಾಗಿರಿಸುವದು.** ವಿದ್ಯಾರ್ಥಿಗಳಿಗೆ ಅತ್ಯುತ್ತಮವು. [illegible] ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು [illegible]. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ [illegible]. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಸಬಹುದು.

B. M. Nath & Co., *Ayurvedic Chemists,*

Vepery Post, **MADRAS.**

ಮಂಗಳೂರು

ಬಾಸೆಲ್ ಮಿಶ್ಯನ್ ಪುಸ್ತಕಖಾನೆಯವರು

ಪ್ರಚುರಪಡಿಸಿರುವ ಪುಸ್ತಕಗಳ ಪಟ್ಟಿ.

(ಮುಂಬಯಿ ಇಲಾಖೆಯೊಳಗಿನ ಸರಕಾರಿ ಪುಸ್ತಕಗಳು.)

ಕನ್ನಡ.	ರೂ.	ಆ.	ಪೈ.		ರೂ.	ಆ.	ಪೈ.
ಛಂದಸ್ಸಾರ	0	4	0	ಪ್ರಾಕೃತಿಕ ಭೂಗೋಲಶಾಸ್ತ್ರ	0	8	0
ಸಂಸ್ಕೃತ ಕನ್ನಡ ಶಬ್ದವ್ಯುತ್ಪತ್ತಿ	0	4	0	ವಸ್ತುಪಾಠಗಳು	0	3	0
ಕರ್ಣಾಟಕದ ಚರಿತ್ರೆ	0	5	0	ಬೀಜಗಣಿತ	1	6	0
ಭೂಗೋಲ, 2ನೇ ಭಾಗ	0	1	6	ಪದಾರ್ಥವಿಜ್ಞಾನಶಾಸ್ತ್ರದ ಮೂಲತತ್ವಗಳು	0	9	0
ಕೊಲೆನ್ಸೊಯವರ ಲೆಕ್ಕಪುಸ್ತಕ, 1ನೇ ಭಾಗ	0	10	0	ಪದಾರ್ಥವಿಜ್ಞಾನಶಾಸ್ತ್ರ	0	12	6
2ನೇ ,,	0	9	6	ಶಿಕ್ಷಾಪದ್ಧತಿ	0	11	0
ರೇಖಾಗಣಿತ, 1ನೇ ಪುಸ್ತಕ	0	4	0	ಬಾಯಿಲೆಕ್ಕದ ಪುಸ್ತಕ	0	2	0
,, 1ರಿಂದ 6 ಪುಸ್ತಕಗಳು	1	12	0	ಸಂಸ್ಕೃತ ಕನ್ನಡ.			
ಕ್ಷೇತ್ರಫಳಫಲ	0	3	0	ಮೊದಲನೇ ಪುಸ್ತಕ	0	8	6
ಆರೋಗ್ಯವಿದ್ಯೆ	0	2	9	ಎರಡನೇ ,,	1	2	0

25 ರೂಪಾಯಿ ಅಥವಾ ಹೆಚ್ಚಿನ ಮೌಲ್ಯದ ಪುಸ್ತಕಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಶೇಕಡ 15ರ ಪ್ರಕಾರ ಡಿಸ್ಕೌಂಟು ಬಿಟ್ಟುಕೊಡುತ್ತೇವೆ. ಕಳುಹಿಸಿಕೊಡುವ ಖರ್ಚನ್ನು ತರಿಸಿಕೊಳ್ಳುವವರು ಕೊಡಬೇಕು. 5 ರೂಪಾಯಿ ಅಥವಾ 5 ರೂಪಾಯಿಗಳಿಗಿಂತ ಹೆಚ್ಚಿಗೆ ಮೌಲ್ಯದ ಪುಸ್ತಕಗಳನ್ನು ತರಿಸಿಕೊಳ್ಳುವವರು ಅರೆವಾಸಿ ಮೌಲ್ಯವನ್ನು ಮುಂಗಡ ಪಾವತಿಮಾಡಬೇಕು.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಡೋಂಗರೆ

[illegible] ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕದಿಂದ ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕಂ.

Girgaum, Bombay. ಗಿರಗಾಂ [illegible]

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯವಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದ ಈ ಪುಸ್ತಕವು ಇನಾಮವಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ಶೀಘ್ರವಾಗಿಯೆ ಬರಿಯಬೇಕು (8)

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ,
157 ಬ್ರಾಡ್ವೆ ಮದ್ರಾಸ್.

S. U. N. & CO,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು
ಅಸಲ್ ಕ್ರಯಕ್ಕೆ ಕೊಡುತ್ತೇವೆ
ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೇಟ ದುಪಟ, ರುಮಾಲ, ಕಣಗಳ, ಕೋಟು ಸಿಲ್ಕುಥಾನುಗಳು ಪಮೋನಿ ಚಿವರ್, ಶಾತ್ಕಿಂಗ್ ಸಾದಾ ಜರಿ ಶಾಲು ಗಳು, ಕೊರ್ತಾದ ಶೀರೆ, ರದ್ದಾಸ್ತ್ರಿ ಮೊದಲಾದ ಎಲ್ಲಾ ತರದ ಸುಮಾರು ೨೫೦೦೦ ರೂಪಾಯಿನ ಮಾಲಗಳ ಉಳಿದಿರುವುದರಿಂದ ನಾವು ಅವನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವದಿಲ್ಲ. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ— ಯಸ್.ಯು.ಯನ್. ಮತ್ತು ಕಂಪನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ ಕಿಮ್ಮತ್ತು ರೂ ೧—೮—೦ ವಿದ್ಯಾರ್ಥಿಯರಿಗೆ ರೂ ೧—೪—೦. ಟಪ್ಪಾಲು ಖರ್ಚು ಬೇರೆ. ಪುಟ 560

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬ ಪಾನು ಡೆಮ್ಮಿ ಆಠ ಪತ್ರದ ಪುಟ ೧೬೦, ಟಪ್ಪಾಲು ಖರ್ಚು ಬೇರೆ

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ. ಎಲ್ ಎಲ್ ಬಿ, ಹೈಕೋರ್ಟು ವಕೀಲ್, ರಂಗೂನ್, ಇವರು ಮಾಡಿರ ತಾರೆ ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ
ಪೋಸ್ಟು ಶಿರ್ಸಿ, ಜಿಲ್ಲಾ ಉತ್ತರ ಕನ್ನಡ.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦—೩೦ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾ.

ಇದರಲ್ಲಿ ಪಾರದವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಮೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷದಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕರ್ನಾಟಕ ವೃತ್ತ ಮತ್ತು ಧನಂಜಯ

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ. ಧಾರವಾಡ

ಕ್ಯಾಲೆಂಡರ್!

ನಮ್ಮಲ್ಲಿ ತಯಾರಾಗತಕ್ಕ ಸುಗಂಧ ದ್ರವ್ಯಗಳನ್ನು ಎರಡು ರೂಪಾಯಿಗೆ ಕಡಿಮೆ ಇಲ್ಲದೆ ಆರ್ಡರ್ ಕೊಡತಕ್ಕವರಿಗೆ ೧೯೧೬ನೇ ವರ್ಷದ ಸುಂದರವಾದ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುವೆವು.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನರಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಸೇರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರಲ್ಲೊಬ್ಬನಾದ ಕೋಳೂರು ಶಂಕರಕವಿಯಿಂದ ೧೯ನೆಯ ಶತಮಾನದ ಆದಿಯಲ್ಲಿ ಭಾಮಿನಿಷಟ್ಪದಿರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಲಾಪವು, ಪಾರ್ವತೀಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚುಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧—೦—೦.

ವಿಳಾಸ— ಟಿ. ಎ. ವರ್ಣಾಕ್ಷರಂ ಶೆಟ್ಟಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಮೇಲೆ ತೋರಿಸಿರುವ ದೇಶೀಯ ಜನರ ಪರಸ್ಪರ ಪರಿಚಯ, ವಿಚಾರ ವಿನಿಮಯ, ಮಿತ್ರತ್ವೋದಯ ಈ ಲಾಭಗಳು ಪರಿಷತ್ತುಗಳಿಂದಾದರೂ ಇವು ಅವುಗಳ ಮುಖ್ಯ ಪ್ರಯೋಜನಗಳಲ್ಲ. ದೇಶ, ಸಮಾಜ, ಧರ್ಮ ಇವುಗಳ ವಸ್ತುಸ್ಥಿತಿಯ ಸಮಯೋಚಿತವಾದ ಉನ್ನತಿಯುಂಟಾಗುತ್ತದೋ ಎಂಬುದನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಈ ಪರಿಷತ್ತುಗಳ ಗೊಂದಲದಿಂದ ಶಾಶ್ವತ ಲಾಭವೇನಾದರೂ ಉಂಟಾದುದು ಕಾಣುವುದಿಲ್ಲ. ಇದು ಹೀಗೇಕಾಗುವುದು? ಪರಿಷತ್ತು ಒಂದಲ್ಲ, ಎರಡಲ್ಲ, ಮೂರಲ್ಲ, ಎಷ್ಟೋ ಜನ್ಮಕ್ಕೆ ಬಂದಿರುವವು; ಆದರೂ ಉದ್ದಿಷ್ಟ ಹೇತುವು ಕೈಗೂಡದೆ ಅದು ಇನ್ನು ಸ್ವಲ್ಪ ಸ್ವಲ್ಪ ದೂರದಲ್ಲಿಯೇ ಹೋಗುತ್ತಿದೆ. ಇದು ಹೀಗೇಕೆ? ಇದೇ ತರದ ಪ್ರಶ್ನೆಗಳು ವಿಚಾರವಂತರಾದ ಹಲಕೆಲವು ದೇಶಭಕ್ತರ ಅಂತಃಕರಣದಲ್ಲಿ ಹುಟ್ಟಿ ಅವರು ಇದರ ಕಾರಣ ಮೀಮಾಂಸೆಯನ್ನು ಕೂಡ ಮಾಡಿರುವರು. ಅವರು ಮಾಡಿರುವ ಮೀಮಾಂಸೆಯಲ್ಲಿ ಎಷ್ಟೋ ತಥ್ಯಾಂಶವಿದೆ. ಕಾರಣ ಮೀಮಾಂಸಕರು ಹೇಳುವುದೇನೆಂದರೆ:—ಬರೇ ಪರಿಷತ್ತುಗಳನ್ನು ಸೇರಿಸುವುದರಿಂದಲೇ ದೇಶಕ್ಕಾಗಲಿ, ಸಮಾಜಕ್ಕಾಗಲಿ ಲಾಭವೇನೂ ಇಲ್ಲ. ಇಡೀ ವರ್ಷವನ್ನು ನಿದ್ರೆಯಲ್ಲಿ ಕಳೆದು ವರ್ಷದ ೮-೭ ದಿವಸಗಳಲ್ಲಿ ಪರಿಷತ್ತುಗಳ ಮಹೋದಯವನ್ನು ಅಥವಾ ಗೊಂದಲವನ್ನು ಹೊರಪಡಿಸುವುದರಿಂದ ಫಲವೇನು? ಉದಾಹರಣಾರ್ಥವಾಗಿ ರಾಷ್ಟ್ರೀಯ ಸಭೆಯ ೩೦ ವರ್ಷಗಳಲ್ಲಿಯ ಜೀವನಚರಿತೆಯನ್ನು ನಿರೀಕ್ಷಿಸಿದರೆ ಅದರಿಂದ ಯಾರಿಗೂ ಸಮಾಧಾನವುಂಟಾಗಲಾರದು. ಪ್ರತಿ ವರ್ಷಕ್ಕೆ ಎಷ್ಟೋ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ದೊಡ್ಡದೊಂದು ಮಂಟಪ ಹಾಕಿ ಅದರಲ್ಲಿ ಪ್ರಸಿದ್ಧ ಪ್ರಸಿದ್ಧ ವಕ್ತರು ಹಲಕೆಲವು ವಿಷಯಗಳನ್ನು ಚರ್ಚಿಸಿ ನಿರ್ಣಯಿಸುವುದರಿಂದ, ಇಷ್ಟರ ವರೆಗೆ ದೇಶದ ಯಾವ ಉದ್ಧಾರವಾಗಿದೆ? ದಾರಿದ್ರ್ಯವು ಹೋಗಿದೆಯೇ, ವಿದ್ಯಾಭಿವೃದ್ಧಿಯು ಆಗಿದೆಯೇ ಅಥವಾ ರಾಜ್ಯಕಾರಭಾರದಲ್ಲಿ ಹಿಂದೀಜನರಿಗೆ ಹೆಚ್ಚಿನ ಅಧಿಕಾರವು ದೊರಕಿದೆಯೇ? ಯಾವ ಸಂಗತಿಯುಂಟಾಗಿದ್ದೆ? ಇಂತಹ ಪ್ರಚಂಡ ಸಭೆಯು ಈಗ ಮೂವತ್ತು ವರುಷಗಳಿಂದ ಏಕಪ್ರಕಾರವಾಗಿ ನೆರವೇರುತ್ತ ಬಂದಾಗ್ಯೂ ಅದರಿಂದ ತಾದೃಶ ಲಾಭವಾಗದಿರುವುದಕ್ಕೆ ಕಾರಣವು ಸಭೆಯ ಅಂತಃರಚನೆಯ ದೋಷವಲ್ಲದೆ ಇನ್ನೊಂದಲ್ಲ. ಒಬ್ಬ ಮನುಷ್ಯನಿಗೆ ಒಂದು ಮಹಾ ರೋಗವಾದರೆ ಅದರ ನಿವಾರಣೆಗಾಗಿ ಔಷಧದ ಯೋಜನೆಯು ದೀರ್ಘಕಾಲದ ವರೆಗೆ ಮಾಡಿದ್ದಲ್ಲಿ ಅದೂ ನಿರ್ಮೂಲವಾಗುವುದು. ಹೊರತು ಸಮಕ್ಕೆ ತಕ್ಕ ಸ್ವಲ್ಪ ಔಷಧ ಕೊಟ್ಟರೆ ಅದರಿಂದ ರೋಗ ಹೋಗಲಾರದು. ಇದೇ ರೀತಿಯಲ್ಲಿ ರಾಷ್ಟ್ರೋಪದ್ರವವನ್ನು ಪರಿಹರಿಸಲು ಸ್ವಾರ್ಥತ್ಯಾಗ ಪೂರ್ವಕವಾಗಿ ಅಹರ್ನಿಶ ಪ್ರಯತ್ನವಾದದ್ದಲ್ಲಿಯೇ ದೇಶಕ್ಕೆ ಉದಯಕಾಲ ಒದಗುವುದು. ಯಾವ ಕ್ರಿಯೆಯನ್ನೂ ನಡಸದೆ ಲೋಕಾಪವಾದಕ್ಕೆ ಮಾತ್ರ ೮-೭ ದಿವಸ ಪರಿಷತ್ತುಗಳನ್ನು ಸೇರಿಸುವುದರಿಂದ ಪ್ರಗತಿಯ ಮಾರ್ಗದಲ್ಲಿ ದೇಶದ ಹೆಜ್ಜೆಯು ಮುಂದರಿಸುವುದೇ? ಇಂತಹ ಒಂದಲ್ಲ, ಎರಡಲ್ಲ, ಹತ್ತಲ್ಲ, ಎಷ್ಟೋ ಪರಿಷತ್ತುಗಳು ಬಹು ವಿಜೃಂಭಣೆಯಿಂದ ಆಗುತ್ತಿದ್ದರೂ ಅವುಗಳಿಂದ ದೇಶದ ಮುಖಂಡರಿಗೆ ಒಂದು ನಮೂನೆಯ ಗೌರವ ಮಾತ್ರ ದೊರಕೀತಲ್ಲದೆ ಇನ್ನೇನು ಪ್ರಯೋಜನವಿಲ್ಲ. ಕಾರಣವೇನೆಂದರೆ ನಿಷ್ಕ್ರಿಯ ಅಥವಾ ನಿರ್ಜೀವವಾದ ಒಂದು ಸಂಸ್ಥೆಯ ಅಟ್ಟಹಾಸವು ಏಕಾಗುವುದು? ಜೀವಚೈತನ್ಯವು ನಷ್ಟವಾಗಿರುವಾಗ ಒಬ್ಬ ವಿದ್ಯುಚ್ಛಾಸ್ತ್ರಜ್ಞನು ಆ ಶರೀರದಲ್ಲಿ ವಿದ್ಯುತ್ಪ್ರಯೋಗದಿಂದ ಕ್ಷಣಿಕ ಒಂದು ಬಗೆಯ ಚಲನೆಯನ್ನುಂಟುಮಾಡಿದ್ದಾದರೆ ಆ ಶರೀರವು ಜೀವಚ್ಛರೀರವೆನಿಸಲ್ಪಡುವುದೇ? ಇಲ್ಲ. ಹಾಗೆಯೇ ವರ್ಷವೆಲ್ಲ ಜೀವವಿಲ್ಲದೆ ನಿಷ್ಕ್ರಿಯವಾಗಿರುವ ಪರಿಷತ್ತುಗಳು ಡಿಸೆಂಬರ ತಿಂಗಳಿನ ರಜೆಯಲ್ಲಿ ಎರಡು ದಿವಸ ಕೊಂಚ ಒದ್ದಾಟ ಮಾಡಿದ್ದಲ್ಲಿ ಆ ಗೊಂದಲದಿಂದ ಲಾಭಕರವಾದ ಯಾವ ಕಾರ್ಯವೂ ಆಗದು. ಪರಿಷತ್ತುಗಳನ್ನು ಸೇರಿಸಿರಿ; ಆದರೆ ಅವುಗಳಲ್ಲಿ ಜೀವಕಳೆಯನ್ನು ತುಂಬಿರಿ. ದೇಶದ ಅಭ್ಯುದಯಕ್ಕೆ ಪರಿಷತ್ತುಗಳು ಅವಶ್ಯ; ಆದರೆ ನಿಷ್ಕ್ರಿಯವಾದ ಪರಿಷತ್ತುಗಳು ಬೇಡ. ದೊಡ್ಡ ದೊಡ್ಡ ಸಭೆಯ ಹೆಸರಿನಿಂದ ಅಜ್ಞ ದೇಶಬಾಂಧವರ ಅಥವಾ ಸುಶಿಕ್ಷಿತರ ಅಲ್ಪಸ್ವಲ್ಪ ಹಣವನ್ನು ವೃಥಾ ಖರ್ಚಿಗೆ ಹಾಕಿ ಇಂತಹ ನಿಷ್ಕ್ರಿಯ ಮತ್ತು ನಿರ್ಜೀವವಾದ ಸಭೆಯನ್ನು ಸೇರಿಸುವ ಸಾಹಸವು ಈಗ ಏಕೆ? "ಅಕರಣಾನ್ಮಂದಕರಣಂ ಶ್ರೇಯಃ"(Something is better than nothing) ಎಂಬ ಮಾತಿನಂತೆ ಸಭೆ ಮುಂತಾದ ಚಳವಳಿಯಿಲ್ಲದೆ ಇರುವುದಕ್ಕಿಂತ ಇಂತಹ ಸಭೆಗಳು ಕೆಲವಂಶದಲ್ಲಿ ನಿಷ್ಕ್ರಿಯವಾದರೂ ಇದ್ದಿರುವುದು ಒಳ್ಳೇದೆಂದು ಕೆಲವರು ತಿಳಿಯುವರು. ಮತ್ತು ಅದು ಒಂದು ದೃಷ್ಟಿಯಿಂದ ನಿಜವೇ. ಆದರೆ ಈಗ ಈ "ಮಂದಕರಣ"ದ ಸಮಯವು ಹೋಗಿ "ಬಹುಕರಣದ" ಸಮಯವು ಒದಗಿದೆಂಬುದನ್ನು ನಮ್ಮ ಪ್ರಾಜ್ಞರಾದ ಮುಖಂಡರು ತಿಳಿಯತಕ್ಕದ್ದು. ಅನ್ಯಥಾ ಬ್ರಾಹ್ಮಣರ ಸಂಧ್ಯಾವಂದನೆಯಂತೆ ಅಥವಾ ಕ್ರೈಸ್ತರ ಪ್ರಾರ್ಥನೆಯಂತೆ ಸಭೆಗಳನ್ನು ನೆರವೇರಿಸುವುದು ಒಂದು ಪರಿಪಾಟಿ ಮಾತ್ರವಾದೀತು!

ಜ್ಞಾನದ ಮಿಠಾಯಿ.

(೨ನೇ ಪೊಟ್ಟಣ.)

ನರಸಪ್ಪನವರ ಆತ್ಮಗತ!

ನಿನ್ನೆ ಹುಣ್ಣಿಮೆಯ ರಾತ್ರೆ. ಹುಣ್ಣಿಮೆಯ ರಾತ್ರಿಯೆಂದರೆ ಬೆಳದಿಂಗಳಿನ ಸಾಮ್ರಾಜ್ಯವೇ ಸರಿ! ಎಷ್ಟೋ ಕವಿಗಳು ಈ ಬೆಳದಿಂಗಳನ್ನು ಹಂಸವನ್ನಾಗಿ ಬಣ್ಣಿಸಿರುವರು. ಕವಿಗಳ ಕಾವ್ಯಮಯ ಕಲ್ಪನಾ ಸಮುದ್ರವು ಚಂದ್ರಿಕಾವಲೋಕನದಿಂದ ಉಕ್ಕುತ್ತಿರುವುದು! ಸುತ್ತಮುತ್ತಲು ಪಸರಿಸಿರುವ ಈ ಚಂದ್ರಿಕೆಯನ್ನು ನೋಡಿದರೆ ಅನುರಕ್ತನಾದ ಚಂದ್ರನು ನಿಶಾದೇವಿಗೆ ಬಿಳಿದಾದ ಪಟ್ಟೆ ಸೀರೆಯನ್ನೇ ಉಡಿಸಿರುವನೇ ಅಥವಾ ಪ್ರಕೃತ ಕಾಲದಲ್ಲಿ ವಿಶೇಷವಾಗಿ ನಡೆಯುತ್ತಿರುವ ಗೋವಧದಿಂದ ಬಡಗಿರುವ ಹಾಲಿನ ಬರಗಾಲವನ್ನು ಬಗೆಹರಿಸಲು ಸೃಷ್ಟಿಕರ್ತನು ಭೂತಲದ ಮೇಲೆಲ್ಲ ಹಾಲನ್ನೇ ಚೆಲ್ಲಿರುವನೇ ಎಂದು ತೋರುವುದು. ಇಷ್ಟು ಸ್ವಚ್ಛವಾದ ಬೆಳದಿಂಗಳಿಂದ ಭೂಲೋಕವು ಸಂತೋಷಪಡುತ್ತಿರುವಾಗ ನಮ್ಮ ನರಸಪ್ಪನವರು ಕಳೆದ ರಾತ್ರಿ

ಸುಮಾರು ಹತ್ತು ಘಂಟೆಯ ಸಮಯದಲ್ಲಿ ಯಾವುದೋ ಒಂದು ಕೆಲಸಕ್ಕಾಗಿ ಕಡ್ರಿ ಕಡೆಗೆ ಹೋಗಿದ್ದರು. ಕಡ್ರಿ ಕಡೆಗಳಲ್ಲಿ ವನದೇವಿಯು ನಿಸರ್ಗತಃವೇ ಲಲಿತವಿರುವಳು; ಅದರಲ್ಲಿಯೂ ಪೂರ್ಣಚಂದ್ರನ ಪ್ರಸನ್ನವಾದ ಪ್ರಭೆಯಿಂದ "ಅಧಿಕಸ್ಯಾಧಿಕಂ ಫಲಮ್" ಎಂಬಂತೆ ಅದರ ರಾಮಣೀಯಕವು ದ್ವಿಗುಣಿತವಾದಲ್ಲಿ ಆಶ್ಚರ್ಯವಿಲ್ಲ ವನದೇವಿಯ ಪ್ರಸನ್ನ ಮತ್ತು ಆನಂದಕರವಾದ ನೋಟದಿಂದ ಸಾಧಾರಣವಾಗಿ ಯಾರಾದರೂ ಕೆಲ ಸಮಯ ತನ್ನ ಆಧಿವ್ಯಾಧಿಗಳನ್ನು ಮರೆತು ಆ ದೇವಿಯ ಪ್ರಿಯ ಅತಿಥಿಯಾಗಿರುತ್ತಾನೆ ಇದು ಲೋಕದ ಸಾಮಾನ್ಯ ವಾಡಿಕೆಯೇ ಆದರೆ ನರಸಪ್ಪನವರು ಈ ಸಂತೋಷಕ್ಕೆ ಭಾಗಿಗಳಾದುದು ಕಂಡುಬರಲಿಲ್ಲ ಅವರ ಮನಸ್ಸು ಸ್ವಾಭಾವಿಕವಾಗಿಯೇ ಅರಸಿಕ ವಿರುವದೇ ಅಥವಾ ಎದುರಿನಲ್ಲಿ ಪ್ರತ್ಯಕ್ಷವಾದ ಈ ಸೃಷ್ಟಿದೇವಿಯ ಲಾವಣ್ಯವು ಕಣ್ಣಿಗ ಗೋಚರವಾಗದಷ್ಟು ವಿಷಯಾಂತರದಲ್ಲಿ ಅವರು ಮಗ್ನರಾಗಿರುವರೇ ಇದನ್ನು ನಿರ್ಧರಿಸಲಾಗದು. ಎಂದರೂ ಹತ್ತು ಹೆಜ್ಜೆಗಳನ್ನು ಮುಂದೆ ಹೋಗುವಷ್ಟರಲ್ಲಿ ಬಾಯಿಂದ ಥಕ್ಕನೆ ಬಂದ ಅವರ ಮಾತುಗಳನ್ನು ಕೇಳಿದರೆ ಅವರು ಆನಂದಭಾಗಿಗಳಾಗದೆ ಇರ ಲಿಕ್ಕೆ ಎರಡನೆದೇ ಬಹುಶಃ ಕಾರಣವಾಗಿತ್ತೆಂದು ಊಹಿಸಬಹುದಾಗಿದೆ ಅವರು ತಮ್ಮ ಮನಸ್ಸಿನ ವಿಷಯದಲ್ಲಿ ತನ್ಮಯರಾಗಿ ಹೋದ ಕಾರಣ ಹಿಂದಿನಿಂದ ಯಾರು ಬರುತ್ತಾರೆ, ಇದರ ಭಾನ ಕೂಡ ಅವರಿಗಿದ್ದಿಲ್ಲ ಅವರು ಆತ್ಮಗತವಾಗಿ ಮಾಡಿದ ಭಾಷಣದಲ್ಲಿ ಎಷ್ಟೋ ಸಂಗತಿಗಳು ನಮ್ಮ ವಾಚಕರು ತಿಳಿದುಕೊಳ್ಳುವಂತಹಗಳಿವೆ. ನರಸಪ್ಪನವರು ಉದ್ಗರಿಸಿದರು,

ನವೀನ ವಿದ್ಯಾವಿಭೂಷಿತರಾದ ನಾವೀಗ ದೇಶೋನ್ನತಿ ಮಾಡುವವರು! ಭಾಷಾ ವಧುವಿಗೆ ಸೌಭಾಗ್ಯತಿಲಕವನ್ನು ಪದವೀಧರರಾದ ನಾವಲ್ಲವೇ ಹಚ್ಚುವವರು? ದೇಶ ಭಾಷೆಯ ಉದ್ಧಾರಕ್ಕಾಗಿ ನಾವು ಎಷ್ಟು ಪರಿಶ್ರಮ ತಕ್ಕೊಳ್ಳುತ್ತೇವೆ, ಎಷ್ಟು ಲೇಖ ಗಳನ್ನು ಬರೆಯುತ್ತೇವೆ; ಏನೆಲ್ಲ ಸಾಹಸ ಮಾಡುತ್ತೇವೆ! ಇದು ಅಜ್ಞಸಮಾಜಕ್ಕೆ ಗೊತ್ತುಂಟೇ? ಈ ಪ್ರಕಾರ ಅಧುನಿಕರಾದ ನಾವು ನಮ್ಮ ಪೌರುಷವನ್ನು ಕೊಚ್ಚು ಕೊಳ್ಳುವೆವು. ಆದರೆ ನಿಜವಾದ ನಮ್ಮ ಸ್ಥಿತಿಯನ್ನು ಆಲೋಚಿಸಿದರೆ ನಮಗೆ ಇಂತಹ ಪೌರುಷ ಕೊಚ್ಚಲು ಎಡೆಯುಂಟೇ? ದೇಶಭಾಷೆಯನ್ನುದ್ಧರಿಸ ಮರ್ದಾಗ ನಾವು ದೇಶ ಭಾಷೆಯಿಂದ ಹತ್ತು ಶಬ್ದಗಳ ಒಂದು ವಾಕ್ಯವನ್ನು ಉಚ್ಚರಿಸುವಾಗ ಎಂಟು ಇಂಗ್ಲಿಷ್ ಶಬ್ದಗಳನ್ನು ಪ್ರಯೋಗಿಸುವೆವು! ಇದಲ್ಲವೇ ನಮ್ಮ ದೇಶಭಾಷಾ ನೈಪುಣ್ಯ? ನಮ್ಮ ದೋಷಗಳನ್ನು ಯಾರಾದರೂ ತೋರಿಸಿದರೆ ಅದು ನಮಗೆ ಸೇರುವುದೇ? ಏಕೆ ಸೇರು ವುದು? ನಾವು ವಿದ್ಯಾವಂತರು, ಸರ್ವಗುಣಸಂಪನ್ನರು, ನಮ್ಮಲ್ಲಿ ಯಾವ ಕೊರ ತೆಯೂ ಇಲ್ಲ, ಹೀಗಿರಲು ನಮ್ಮ ದೋಷಗಳನ್ನು ತೋರಿಸುವದೆಂದರೇನು, ತಮಾ ಷೆಯೇ? ಈ ತರದ ಅಭಿಪ್ರಾಯವು ನಮ್ಮಲ್ಲಿರುವುದು ಸಹಜವೇ. ಆದರೆ ದೀಪದಡಿಯಲ್ಲಿ ಕತ್ತಲೆಯೆಂಬ ಮಾತನ್ನು ಮಾತ್ರ ನಾವು ಮರೆತಿರುವೆವು ದೇಶಕ್ಕಾ ಗಲಿ, ದೇಶಭಾಷೆಗಾಗಲಿ, ಉನ್ನತಾವಸ್ಥೆಯು ಬರಬೇಕೆಂದು ಅನ್ಯಪ್ರಾಂತದವರು ಹೃತ್ಪೂರ್ವಕವಾಗಿಯೂ, ತತ್ಪರರಾಗಿಯೂ ಎಷ್ಟು ಕಷ್ಟಗಳನ್ನು ತಕ್ಕೊಳ್ಳುತ್ತಿರುವರು, ಎಷ್ಟು ವಿಷಯಗಳನ್ನು ಸ್ವಂತ ಭಾಷೆಯಲ್ಲಿ ತಂದಿರುವರು ಎಷ್ಟು ಗ್ರಂಥಗಳನ್ನೂ ಮಾಸಿಕ ಪುಸ್ತಕಗಳನ್ನೂ, ವೃತ್ತಪತ್ರಿಕೆಗಳನ್ನೂ ಪ್ರಕಟಿಸುವರು! ನಾವು? ಏನಾದರೂ ಒಂದು ಪುಸ್ತಕವನ್ನು ಬರೆದು ವರ್ಷ ಸಂಖ್ಯೆಯಲ್ಲ, ಅಲ್ಪ ಸ್ವಲ್ಪ ದಿವಸಗಳಾಗುವಷ್ಟರೊಳಗೆ ಭಾಷಾಸೇವಕರೆಂಬ ದೊಡ್ಡ ಗೌರವವನ್ನು ಪಡೆಯಲು ಉದ್ಯುಕ್ತರಾಗುತ್ತೇವೆ ಭೇಷ! ಭೇಷ! ಹೀಗಲ್ಲ ಗೌರವ ಸಂಪಾದನೆಗಾಗಿಯೇ ಪುಸ್ತಕವನ್ನು ಬರೆಯುವದಲ್ಲದೆ ಬರೆಯುವದರಿಂದ ಗೌರವ ಸಂಪಾದಿಸುವುದಲ್ಲ! ಪ್ರತಿಷ್ಠಾ ಶಾಪಿಗಳಾದ ನಾವು ಲೋಕ ಪೂಜ್ಯತೆಗಾಗಿ ಹೇಗೆ ಹೇಗೆ ಬಲೆಗಳನ್ನು ಬೀಸುತ್ತೇವೆಂಬುದು ನಮಗೇ ತಿಳಿಯು ವುದು! ನಿಜವಾದ ನಮ್ಮ ಬುದ್ಧಿ ಸಾಮರ್ಥ್ಯವು ವೃಥಾಡಂಬರದಲ್ಲಿಯೂ ದಾಂಭಿಕತ್ವ ದಲ್ಲಿಯೂ, ಲೋಕವಂಚನೆಯಲ್ಲಿಯೂ ಖರ್ಚಾಗುತ್ತದೆ ಇದು ನಮ್ಮ ಪ್ರಗತಿಯೇ? ದೇಶೋದ್ಧಾರವನ್ನಾಗಲಿ, ಭಾಷಾಸೇವೆಯನ್ನಾಗಲಿ ಮಾಡುವವರು ದೂರದಿಂದಲೇ ಕೆಲವು ಉಪಾಯಗಳನ್ನು ಹೇಳುವದೆಂದರೆ ಒಂಟೆಯನ್ನೇರಿ ಕುರಿಗಳನ್ನು ಮೇಯಿಸುವಂತಲ್ಲವೇ? ಇದು ಜಾಣತನವೂ ಆಗಿರಬಹುದು, ಅಥವಾ ಧೂರ್ತತ್ವವೂ ಆಗಿರಬಹುದು. ಆದರೆ ಈ ನಡತೆಯಿಂದ ಯಾವ ಕೆಲಸವೂ ಸಾಧ್ಯವಾಗಲಾರದು ಮೊನ್ನೆ ಬಲ ವಂತರಾಯರು ಆಡಿದ ಮಾತುಗಳು ಇನ್ನೂ ನನ್ನ ಕಿವಿಯಲ್ಲಿ ಗುಣಗುಟ್ಟುತ್ತಿವೆ "ದೇಶ, ಭಾಷೆ, ಧರ್ಮ ಇವು ರಾಷ್ಟ್ರದ ಮರ್ಮಸ್ಥಾನಗಳು. ಅವುಗಳನ್ನು ಆತ್ಮ ಸಮರ್ಪಣೆಯಿಂದಾದರೂ ಕಾಪಾಡಿರಿ" ಬಲವಂತರಾಯರ ಈ ಮಾತು ಅಹಹಾ! ಎಷ್ಟು ಬೆಲೆಯುಳ್ಳದ್ದು.

ನರಸಪ್ಪನವರ ಈ ಆತ್ಮಗತವು ಅಲ್ಲಿಯೇ ಗತಿಸಿತು. ಅವರ ಮನೆಯ ಆಳು ಐತ್ತಪ್ಪನು ಬಂದು ಅವರನ್ನು ಕರಕೊಂಡು ಹೋದನು.

ಯಂತ್ರಗಳ ಮೂಲಕ ನೀರು ಹಾಯಿಸುವದು

ಯಂತ್ರಗಳ ಮೂಲಕ ನೀರು ಹಾಯಿಸಿ ಪೈರು ಬೆಳೆಸುವದು ನಮ್ಮ ಊರಲ್ಲಿ ಸಾಧ್ಯವೆಂದೂ ಅದು ನಮ್ಮ ಊರ ಧನಧಾನ್ಯಾಭಿವೃದ್ಧಿಗೆ ಅಗತ್ಯವೆಂದೂ ಹಿಂದೆ ಬರೆದಿದ್ದೆನು ಈ ರೀತಿಯಿಂದ ಕೃಷಿ ಮಾಡುವದು ನಮ್ಮ ಊರಿನಲ್ಲಿ ಇಷ್ಟರ ವರೆಗೆ ವಾಡಿಕೆಯಿಲ್ಲದಿದ್ದರೂ ಹಿಂದುಸ್ಥಾನದ ಬೇರೆ ಅನೇಕ ಕಡೆಗಳಲ್ಲಿ ಧಾರಾಳವಾಗಿ ಉಂಟು

ಇಂಡಸ್ಟ್ರಿಯಲ್ ಡಿಪಾರ್ಟಮೆಂಟಿನವರು ಊರಲ್ಲಿರುವ ಹಲವು ಪಂಪಿಂಗ್ ಸ್ಟೇಶನುಗಳ ಲೆಖ್ಖಪತ್ರಗಳನ್ನು ಸಂಗ್ರಹಿಸಿ ಛಾಪಿಸಿರುತ್ತಾರೆ ಈ ಕೆಳಗಿನ ಪಟ್ಟಿಯಲ್ಲಿ ಒಂದೊಂದು ಪಂಪಿಂಗ್ ಸ್ಟೇಶನಿನ ಹೆಸರು, ಅದರಲ್ಲಿ ಉಪಯೋಗಿಸುವ ಇಂಜಿನುಗಳು, ಪಂಪುಗಳು, ನೀರು ತಕ್ಕೊಂಡು ಹೋಗಬೇಕಾದ ಎತ್ತರ, ಒಟ್ಟಾರೆ ಆದ ಖರ್ಚು, ಹಾಗೆ ಖರ್ಚುಮಾಡಿ ಎಷ್ಟು ವಿಸ್ತೀರ್ಣಕ್ಕೆ ನೀರು ಹಾಯಿಸಿಯದೆ ಮತ್ತು ನೀರು ಎಲ್ಲಿಂದ ಎಂಬದೆಲ್ಲಾ ಸ್ಪಷ್ಟವಾಗಿ ಕಾಣುತ್ತದೆ

ಪಂಪಿಂಗ್ ಸ್ಟೇಶನಿನ ಹೆಸರು	ಇಂಜನ್ ಕುದುರೆ ಬಲ	ಪಂಪಿನ ಪ್ಯಾಪ್ ನಳಿಗೆ ಇಂಚು	ಎತ್ತರ ಫೀಟ	ಜುಮ್ಲಾ ಖರ್ಚು	ವಿಸ್ತೀರ್ಣ ಎಕ್ರೆ	ನೀರು ಎಲ್ಲಿಂದ
ಅಲಿಂಜಿವಕ್ಕಂ	೫	೩	೨೦	೨೦೦೦	೭	ಬಾವಿ
ಕುಮಾರವರಂ	೫	೩	೧೯	೨೩೧೦	೧೫	ಡಿ.
ಬರಕಾಡು	೬	೪	೧೯	೨೨೪೦	೧೪	ಡಿ.
ಅಣಿಚ್ಚಾಂಬಲಯಂ	೬	೪	೧೬	೨೦೫೫	೨೦	ಡಿ.
ಪಿರುವನೂರು	೬½	೪	೨೧	೨೬೧೫	೪೦	ಡಿ.
ಮಾಂಗುಡಿಚೇರಿ	೭½	೪	೨೧	೨೭೭೬	೭	ಡಿ
ತಿರುಕರುಗಾವೂರ್	೭½	೪	೧೪	೩೯೦೦	೨೮	ಕೆರೆ
ಮೆಲ್ರಾಜನ್‌ಕುಪ್ಪಂ	೭½	೫	೧೮	೨೫೧೬	೫೦	ಬಾವಿ
ಕಡಲೂರು	೯	೪	೩೦	೭೦೦೦	೪೭	ಡಿ.
ಡಿ	೯½	೪	೩೦	೭೦೦೦	೪೮	ಬಾವಿ
ಸುರಪೇಟೆ	೧೨	೬	೧೮	೩೮೦೦	೨೯	ಡಿ.
ಆತ್ಮಕೂರು	೧೭	೧೨	೮	೧೪೫೦೦೦	೫೦೦	ಡಿ.
ಡಿ	೧೨	೧೦	೮	೧೪೫೦೦೦	೫೦೦	ಕೃಷ್ಣಾನದಿ
ಮಾನೂರುಲಂಕ	೧೬	೧೦	೭	೬೦೦೦	೨೦೦	ಸರೋವರ
ಕಟ್ಟಳೆ	೨೫	೧೨	೧೬	೧೫೦೦೦	೩೦೦	ಕಾವೇರಿ ನದಿ

ಓಯಿಲಿಂಜಿನ್ ಪಂಪಿನಿಂದ ನೀರು ಹಾಯಿಸಲಿಕ್ಕೆ ಸುಮಾರು ಕುದುರೆ ಬಲ ೧ಕ್ಕೆ ಘಂಟೆಗೆ ½ ಆಣೆಯಿಂದ ೧ ಆಣೆ ವರೆಗೆ ಖರ್ಚಾಗುವದು ಖರ್ಚಿನ ಅಂದಾಜಿನ ಬಗ್ಗೆ ಒಂದೆರಡು ಉದಾಹರಣೆಗಳನ್ನು ನೋಡುವ:—೭½ ಕುದುರೆ ಬಲದ ಓಯಿಲಿಂಜಿನ್, ೪ ಇಂಚು ನಳಿಗೆಯ ಪಂಪಿನಲ್ಲಿ ೨೫ ಫೀಟು ಎತ್ತರಕ್ಕೆ ಘಂಟೆ ೧ಕ್ಕೆ ೧೮೦೦೦ ಗೆಲನ್ ನೀರು ಹಾಯಿಸುವಂತೆ, ೧೨ ಘಂಟೆ ದಿನಂಪ್ರತಿ ಕೆಲಸಮಾಡಬೇಕಾದರೆ ದಿನ ೧ಕ್ಕೆ ಬೇಕಾದ ಸರಾಸರಿ ಖರ್ಚು—ಚಿಮಣಿಎಣ್ಣೆ ೯ ಗೆಲನ್ ರೂ. ೧-೧೧-೦ ಡ್ರಾಯವರನ ಸಂಬಳ ತಿಂಗಳಿಗೆ ೧೫ ರೂ ಪ್ರಕಾರ ೦ ೮-೦; (lamp) ಲೇಂಪ್ ವಗೈರೆ ಇತರ ಸಾಮಾನುಗಳು ೦ ೮-೦, ಅಸಲು ಹಣದ ಬಡ್ಡಿ, ದುರುಸ್ತು ಮಾಡುವ ಖರ್ಚು ವಗೈರೆ ೧-೪-೦, ಜುಮಲಾ ದಿನ ೧ಕ್ಕೆ ಖರ್ಚು ರೂ. ೩-೧೫-೦.

ದಕ್ಷಿಣ ಆರ್ಕಾಡು ಜಿಲ್ಲೆಯ ಕವಿಂಜಿಕುಪ್ಪಂ ಎಂಬಲ್ಲಿ ಒಬ್ಬ ವಕೀಲರು ೭½ ಕುದುರೆ ಬಲದ ಇಂಜನನ್ನೂ ೪ ಇಂಚಿನ ಪಂಪನ್ನೂ ಒಂದು ಕೆರೆಯ ಮೇಲೆ ಸ್ಥಾಪಿಸಿ ೧೮ ಎಕ್ರೆ ಸ್ಥಳದಲ್ಲಿ ಪೈರು ಬೆಳೆಸಿದರು. ೧೯೦೮ನೇ ಅಕ್ಟೋಬರ ತಿಂಗಳಿಂದ ಮರು ವರ್ಷ ಮಾರ್ಚ ವರೆಗೆ ೮ ಎಕ್ರೆ ಸ್ಥಳದಲ್ಲಿ ಭತ್ತ ಬೆಳೆಸಿ ೨೭೦ ರೂಪಾಯಿ ಸಿಕ್ಕಿತು. ಅದೇ ಸ್ಥಳದಿಂದ ಸುಗ್ಗಿ ಬೆಳೆಯಲ್ಲಿ ೪೮೦ ರೂ. ಸಿಕ್ಕಿತು. ೧೦ ಎಕ್ರೆ ಸ್ಥಳದಲ್ಲಿ ರಾಗಿ ಮತ್ತು ನೆಲಕಡಲೆ ಬೆಳೆಸಿ ರೂ. ೧೫೦೦ ಸಿಕ್ಕಿತು. ಒಟ್ಟಾರೆ ಆ ವರ್ಷ ಅವರಿಗೆ ೨೨೫೦ ರೂ. ಸಿಕ್ಕಿತು. ಖರ್ಚು ರೂ. ೫೩೨-೮-೦ ಕಳೆದು ಅವರಿಗೆ ಆ ವರ್ಷ ರೂ. ೭೨೭-೮-೦ ಲಾಭ ಸಿಕ್ಕಿತು. ಇಂಜನ್ ಸ್ಥಾಪನೆಗೆ ರೂ. ೩೦೬೫ ಖರ್ಚಾಗಿದ್ದಿತು.

ಪನಂಕುಪ್ಪಂ ಎಂಬಲ್ಲಿ ಶ್ರೀನಿವಾಸಗೌಡನೆಂಬ ಒಬ್ಬನು ೫ ಕುದುರೆ ಬಲದ ಇಂಜನನ್ನೂ ೩ ಇಂಚು ಪಂಪನ್ನೂ ೨೦ ಫೀಟು ಆಳ, ೯ ಫೀಟು ಅಗಲವುಳ್ಳ ಬಾವಿಗೆ ಸ್ಥಾಪಿಸಿ ೨೦ ಎಕ್ರೆ ಸ್ಥಳಕ್ಕೆ ನೀರು ಹಾಯಿಸಿದನು. ಇದು ಮೊದಲು ಬೋಳು ಬಿಟ್ಟು

ಸ್ಥಳವಾಗಿತ್ತು. ಪೂರಾ ಸ್ಥಳವನ್ನು ಎಕ್ರೆ ೧ಕ್ಕೆ ೭೫ ರೂಪಾಯಿಯಂತೆ ಗೇಣಿ ನಿಶ್ಚಯಿಸಿ ಕೊಟ್ಟು ರೂ. ೧೫೦೦-೦-೦ ಸಿಕ್ಕಿತು. ಆ ವರ್ಷದಲ್ಲಿ ಒಟ್ಟಿಗೆ ೨೫೦ ರೂ. ಖರ್ಚಾಗಿಯದೆ. ಅವನ ಮಗನು ಇಂಜನಿನ ಪಾರುಪತ್ಯ ವಹಿಸಿದ್ದನು. ತಿಂಗಳಿಗೆ ೧೦ ರೂ ಪ್ರಕಾರ ಅವನಿಗೆ ಸಂಬಳ ಕಳೆದು ಆತನಿಗೆ ಒಟ್ಟಾರೆ ಆ ವರ್ಷ ೧೧೫೦ ರೂಪಾಯಿ ಲಾಭಸಿಕ್ಕಿತು. ಇಂಜನು ಪಂಪಿನ ಸ್ಥಾಪನೆಗೆ ಆತನಿಗೆ ಒಟ್ಟಾರೆ ರೂ ೧೨೦೭-೦-೦ ಖರ್ಚಾಗಿಯದೆ. ಒಂದೇ ವರ್ಷದಲ್ಲಿ ಎಷ್ಟು ಲಾಭ ಸಿಕ್ಕಿತು ಎಂತ ನೊಡಿರಿ!

ಗ್ಯಾಸಿಂಜಿನಿಗೆ ಚಿಮಣಿ ಎಣ್ಣೆಯು ಆವಶ್ಯವಿಲ್ಲ. ಇದ್ದಲಿಯಿಂದ ಅಥವಾ ಮರದ ಕರಿಯಿಂದ ಗ್ಯಾಸ್ ತಯಾರಿಸಿ ಅದರ ಶಕ್ತಿಯಿಂದ ನಡಿಯುವದಾಗಿರುತ್ತದೆ. ಓಯಿಲೆಂಜಿನಿಗಿಂತ ಗ್ಯಾಸಿಂಜಿನಿಗೆ ಸುಮಾರು ಮುಕ್ಕಾಲು ಸಾವಿರ ರೂಪಾಯಿ ಖರ್ಚು ಹೆಚ್ಚುಂಟು. ಆದರೆ ಅದನ್ನು ನಡಿಸುವ ಖರ್ಚು ಕಡಿಮೆ. ದಿನ ೧ಕ್ಕೆ ಮೂರು ನಾಲ್ಕು ಮುಡಿ ಇದ್ದಲಿ ಸಾಕು. ಗ್ಯಾಸಿಂಜನು ಬಹು ತೃಪ್ತಿಕರವಾಗಿ ಕೆಲಸಮಾಡುತ್ತದೆ. ಬಾಳಿಕೆಯೂ ಹೆಚ್ಚು ಬರುತ್ತದೆ. ಒಟ್ಟಾರೆ ಗ್ಯಾಸಿಂಜನೇ ಒಳ್ಳೇದು.

ಈ ಮೇಲೆ ಹೇಳಿದ ಸ್ಥಳಗಳೆಲ್ಲಾ ಈ ರೀತಿ ಕೃಷಿ ಒಗ್ಗ ಸೌಕರ್ಯವಾದ ಸ್ಥಳಗಳೆಂತ ಹೇಳಕೂಡದು. ಆ ಊರ ಜನರಂತೆ ನಮ್ಮ ಊರ ಜನರು ಈ ವಿಷಯದಲ್ಲಿ ಉತ್ತೇಜನ ತಕೊಳ್ಳುವ ಪಕ್ಷಕ್ಕೆ ನಮ್ಮ ಊರಿನಲ್ಲಿ ಖಾಲಿ ಸ್ಥಳ ಉಳಿಯುವದು ದುರ್ಲಭವೆಂತ ನಂಬುತ್ತೇನೆ.

N K Bhatt

ಪತ್ರವ್ಯವಹಾರ

ಒಂದು ದೊಡ್ಡ ಚರ್ಚೆ

ಮಾನ್ಯ ಪತ್ರಾಧಿಪರೇ,

ದರ್ಭಂಗದ ಮಹಾರಾಜರವರು ದಕ್ಷಿಣ ಹಿಂದೂಸ್ಥಾನದಲ್ಲಿ ತೀರ್ಥಯಾತ್ರೆಗಳನ್ನು ಈ ತಿಂಗಳ ಪ್ರಾರಂಭದಲ್ಲಿ ಮಾಡುತ್ತಿದ್ದರು. ಮುಂಬಯಿಯಿಂದ ತೆರಳಿದವರು ಕಂಚಿ ತಂಜಾವೂರು, ಮದ್ರಾಸು ಮೊದಲಾದ ಊರುಗಳನ್ನು ಸಂದರ್ಶಿಸುತ್ತ ಹೋಗಿರುವರು. ಹೋದ ಹೋದ ಕಡೆಗಳಲ್ಲಿ ಇವರಿಗೆ ಮಾನ ಪತ್ರಗಳನ್ನು ಜನರು ಸಮರ್ಪಿಸಿರುವರು. ಈ ಮಾನಪತ್ರಗಳಿಗೆ ಉತ್ತರವಾಗಿ ಜನರಿಗೆ ಮಹಾರಾಜರವರು ಧರ್ಮಬುದ್ಧಿಯನ್ನು ಹೇಳಿರುತ್ತಾರೆ. ಹಿಂದುಗಳು ನಾಶವಾಗಿ ಹೋಗಲಿಕ್ಕೆ ಬಿಡದೆ ಇಷ್ಟು ಸಹಸ್ರ ವರುಷಗಳಿಂದ ಕಾಪಾಡಿಕೊಂಡು ಬಂದಂಥಾ ವರ್ಣಾಶ್ರಮ ಧರ್ಮವನ್ನು ಬಿಡಬೇಡಿರಿ. ಜಾತಿಭೇದದಿಂದ ಈ ಧರ್ಮವನ್ನು ಆಚರಿಸುತ್ತ ಬನ್ನಿರಿ. ಈ ರೀತಿ ಮಹಾರಾಜರವರು ಮುಂಬಯಿಯಿಂದ ಮದ್ರಾಸಿನ ವರೆಗೆ ತಾನು ಸಂದರ್ಶಿಸಿದ ಊರುಗಳಲ್ಲಿ ಜನರಿಗೆ ಹೇಳುತ್ತಾ ಬಂದಿರುವರು. ಜಾತಿಭೇದಗಳನ್ನು ನಿರ್ಮೂಲಗೊಳಿಸಲಿಕ್ಕೆ ಸರ್ ನಾರಾಯಣ ಚಂದಾವರಕಾರ್‌ರವರು ಮುಂಬಯಿಯಲ್ಲಿ ಸಕಲ ಜಾತಿಯವರು ಕೂಡಿಕೊಂಡು ಸಹಪಂಕ್ತಿ ಭೋಜನವನ್ನು ನಡಿಸಿದ ಕಾಲದಲ್ಲಿಯೇ ದರ್ಭಂಗದ ಮಹಾರಾಜರವರು ಮುಂಬಯಿಯಲ್ಲಿ ಕೂಡಿದ ಹಿಂದೂ ಮಹಾ ಮಂಡಲದ ಸಭೆಗೆ ಜಾತಿ ಧರ್ಮವನ್ನು ರಕ್ಷಿಸಿರಿ ಎಂತ ತನ ಅಧ್ಯಕ್ಷಸ್ಥಾನದಿಂದ ಹೇಳಿರುತ್ತಾರೆ. ಇನ್ನೊಂದು ಕಡೆಯಲ್ಲಿ ಸುಧಾರಕರ ಬೋಧನೆಗಳನ್ನು ನಂಬಬೇಡಿರಿ ಎಂತ ಮೊನೆತಾನೇ ಈ ಮಹಾರಾಜರವರು ಅಪ್ಪಣೆ ಕೊಟ್ಟಿರುತ್ತಾರೆ. ಮಹಾರಾಜರು ಇವರು ದೊಡ್ಡ ಪದವೀಧರರಾಗಿರುತ್ತಾರೆ. ಅವರು ಸಾಂಖ್ಯ ... ಕಾರ್ಯ ನಿರ್ವಾಹಕ ಸಭೆಯು ಬಹುಮಾನಕೊಟ್ಟ ವೆಂಬರಾಗಿರುವರು. ವಿದ್ಯಾ ಪ್ರವೀಣರು.

ಮುಂಬಯಿಯಲ್ಲಿಯ ವೃತ್ತಪತ್ರಿಕೆಕಾರರು ಜಾತಿಯ ಈ ಪ್ರಶ್ನೆಯನ್ನು ಎತ್ತಿಕೊಂಡು ದೊಡ್ಡ ಚರ್ಚೆಯನ್ನು ಎಬ್ಬಿಸಿರುವರು. ವರ್ಣಾಶ್ರಮ ಧರ್ಮ ಮತ್ತು ಜಾತಿಧರ್ಮ ಇವೆರಡನ್ನು ಒಂದೇ ಎಂತ ಗ್ರಹಿಸಿದ ಮಹಾರಾಜರವರ ವಿಚಿತ್ರಿಕೆಯನ್ನು ನೋಡಿಕೊಂಡು ಆಶ್ಚರ್ಯಪಡುತ್ತಿದ್ದಾರೆ. ಹ್ಯಾಗೂ ದೊಡ್ಡ ಚರ್ಚೆಯು ಎದ್ದಿದೆ.

ಸ್ವಾಮಿ, ಜಾತಿರಕ್ಷಕರಾದ ಮಠಾಧಿಪತಿಗಳು, ಕಾವಿ ವಸ್ತ್ರಗಳನ್ನು ಬಿಟ್ಟು ಪಟ್ಟೆ ಪೀತಾಂಬರಗಳನ್ನು ಧರಿಸಿಕೊಂಡಿರುವರು, ಜಾತಿಗಳ ದೇವಸ್ಥಾನಗಳಲ್ಲಿ ಪೂಜೆ ವಿನಿಯೋಗಗಳು ಸರಿಯಾಗಿ ನಡಿಯುವ ಗೃಹಗಳಲ್ಲಿ ಶಿಷ್ಟಾಚಾರಗಳಿಗೆ ಲೋಪ ಬಂದಿದೆ. ಆಪದ್ವೃತ್ತಿಗಳನ್ನು ಅನುಸರಿಸುತ್ತಿದ್ದೇವೆಂತ ... ಕೊಂಡು ಉಚ್ಚ ಬ್ರಾಹ್ಮಣರೆಂತ ಅನ್ನಿಸಿಕೊಳ್ಳುವವರು ಸ್ವಾರ್ಥಪರರಾಗಿ ... ಶೂದ್ರರು ಸಹ ಮಾಡಲು ಹೇಸುವ ವಿಧಾನಗಳಿಂದ ಹಣಸಂಗ್ರಹವನ್ನು ಮಾತ್ರವೇ ಇಹ ಜೀವನದ ಮುಖ್ಯ ತತ್ವವೆಂತ ತಿಳಕೊಂಡಿರುತ್ತಾರೆ. ಇಂಥಾ ವಿಷ್ಯಮನಗಳಲ್ಲಿ ಜಾತಿರಕ್ಷೆಯ ಕಾರ್ಯವನ್ನು ಹ್ಯಾಗೆ ಕಾರ್ಯತಃ ಕೈಕೊಳ್ಳಬೇಕೆಂಬುದನ್ನು ತಮ್ಮ ವಾಚಕರ ಪೈಕಿ ಯಾರಾದರೂ ತಿಳಿಸಿದರೆ ಪ್ರಕೃತ ಎದ್ದಿರುವ ದೊಡ್ಡ ಚರ್ಚೆಯಿಂದ ಪ್ರಯೋಜನ ಪಡೆಯಬಹುದಿತ್ತು. ದರ್ಭಂಗದ ಮಹಾರಾಜರವರ ಭಾಷಣದಲ್ಲಿ ಕಾರ್ಯಸಾಧನೆಯ ಸೂಚನೆಗಳು ಇರುವದರಿಂದ ಈ ಪತ್ರವನ್ನು ಕೇಳಿಕೊಂಡಿರುತ್ತೇನೆ.

ಅಯ್ಯಾ ಪತ್ರಿಕಾಕರ್ತರೇ,

ದಿ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿಯವರ ಮೊಟರ್ ಬಸ್ಸ್‌ಗಳ ವ್ಯಾಪಾರವು ಉಡುಪಿ ಕಡೆ ಸದ್ಯದಲ್ಲಿಯೇ ನಡಿಸಲ್ಪಡುವದೆಂಬ ವದಂತಿಯನ್ನು ಕೇಳಿ ನನ್ನ ಒಂದು ಸೂಚನೆಯನ್ನು ತಮ್ಮ ಅಮೂಲ್ಯ ಪತ್ರಮೂಲಕ ಬರಕೊಳ್ಳಬೇಕೆಂದಿರುವೆನು.

ಸದರಿ ಕಂಪೆನಿಯ ಮೊಟರ್ ಬಸ್ಸ್‌ಗಳು ಬಂಟ್ವಾಳ, ಪುತ್ತೂರಿಗೆ ಓಡ್ಯಾಡಲು ಪ್ರಾರಂಭವಾದಂದಿನಿಂದ ಪ್ರಯಾಣಿಕರಿಗೆ ಬಹಳ ಸೌಕರ್ಯಗಳು ಉಂಟಾಗಿರುವವು. ಈ ಕಡೆಗೆ ಹೊಳೆನದಿಗಳ ಉಪದ್ರವೇನೂ ಇಲ್ಲದಿರುವದರಿಂದ ಕಂಪೆನಿಯವರಿಗೂ ವಿಶೇಷ ಲಾಭ ಉಂಟಾಗಲು ಸಾಕು. ಆದರೆ ಉಡುಪಿಯ ಕಡೆ ಕಂಪೆನಿಯವರು ಮೋಟರ್ ಲೈನನ್ನು ತೆರೆಯಬೇಕಾದರೆ ೪-೫ ಬಸ್ಸ್‌ಗಳು ಬೇಕಾಗುವವು. ಇದಕ್ಕೆ ಹೆಚ್ಚಿನ ಹಣವೂ ಬೇಕಾಗಿದೆ. ಒಂದು ವೇಳೆ ಹಣವಿದ್ದರೂ ಬಸ್ಸ್‌ಗಳು ಈಗ ಸದ್ಯಾ ಸಿಕ್ಕುತ್ತದೋ ಏನೋ? ಆದುದರಿಂದ ಮೋಟರ್ ಲೈನನ್ನು ಕಂಪೆನಿಯವರು ಉಡುಪಿ ಕಡೆ ತೆರೆಯುವ ಬದಲಿಗೆ ಯಾಕೆ ಬೆಳ್ತಂಗಡಿ ಕಡೆ ತೆರೆಯಬಾರದು? ಬೆಳ್ತಂಗಡಿ ಕಡೆ ಮೊಟರ್ ವ್ಯವಹಾರವನ್ನು ನಡಿಸುವದರಿಂದ ಕಂಪೆನಿಯವರಿಗೆ ಹೆಚ್ಚಿನ ಮುನಾಫೆಯಾಗುವದರಲ್ಲಿ ಏನೊಂದೂ ಸಂದೇಹವಿಲ್ಲ. ಯಾಕಂದರೆ ಬೆಳ್ತಂಗಡಿ ಸಹಾ ಮುಖ್ಯ ರಸ್ತೆಯಾಗಿದ್ದು ಕಡೂರು, ಚಿಕ್ಕಮಂಗಳೂರು ಮೊದಲಾದ ಮೈಸೂರು ಪ್ರಾಂತ್ಯಗಳಿಗೆ ಹೋಗುವ ಪ್ರಯಾಣಿಕರು ಈ ರಸ್ತೆಯಲ್ಲಿಯೇ ಹೋಗಬೇಕಾಗಿರುತ್ತದೆ. ಕಾಫಿ ತೋಟಗಳು ಕೂಡಾ ಕಡೂರು ಚಿಕ್ಕಮಂಗಳೂರು ಕಡೆ ಬಹಳವಾಗಿರುವದರಿಂದ ಈ ರಸ್ತೆಯಲ್ಲಿ ಕಾಫಿಪ್ಲಾಂಟರುಗಳೂ ರೈಟರುಗಳೂ ಆಗಾಗ್ಗೆ ಹೋಗುತ್ತ ಬರುತ್ತಲಿರುವರು. ಮೈಸೂರು ಪ್ರಾಂತ್ಯಗಳ ಜನರು ಕೂಡಾ ಆಗ್ಗಾಗ್ಗೆ ಈ ಕಡೆ ಹೋಗುತ್ತ ಬರುತ್ತಲಿರುವರು. ಅದಲ್ಲದೆ ಧರ್ಮಸ್ಥಳವು ಈ ಪ್ರಾಂತ್ಯದಲ್ಲಿಯ ಮಹಾ ಯಾತ್ರಾಸ್ಥಳವಾಗಿರುವದರಿಂದ ಈ ಕಡೆ ಬರುವ ಪ್ರಯಾಣಿಕರ ಸಂಖ್ಯೆಯು ಕಮ್ಮಿ ಎಂದು ಭಾವಿಸಲು ಏನೊಂದೂ ಕಾರಣವಿರುವದಿಲ್ಲ. ಈ ಮೊದಲಾದ ವಿಚಾರಗಳನ್ನು ಸದರಿ ಮೋಟರ್ ಕಂಪೆನಿಯವರು ಗಮನಕ್ಕೆ ತಂದುಕೊಂಡು ಬಂಟ್ವಾಳದಿಂದ ಬೆಳ್ತಂಗಡಿ ವರೆಗೆ ಮೋಟರ್ ಲೈನನ್ನು ಮುಂದರಿಸಿ ಕ್ರಮೇಣ ಮೈಸೂರು ಕಡೆಗೂ ಕೊಂಡು ಹೋದರೆ ಈ ಕಂಪೆನಿಯವರಿಗುಂಟಾಗುವ ಲಾಭವನ್ನು ವಿವರಿಸಲಸಾಧ್ಯವು. ಆದುದರಿಂದ ಬೆಳ್ತಂಗಡಿ ವರೆಗೆ ಮೊಟರ್ ವ್ಯವಹಾರವನ್ನು ನಡಿಸಲಿಕ್ಕೆ ಸದರಿ ಕಂಪೆನಿ ಡೈರೆಕ್ಟರರು ಗಮನ ಕೊಡಬೇಕಾಗಿ ವಿಜ್ಞಾಪಿಸುವ

ತಾ 12-1-16

ಬೆಳ್ತಂಗಡಿ ನಿವಾಸಿಕ

ರೈತರು ಗಮನಕೊಡತಕ್ಕದ್ದು.

ಉತ್ತಮವಾದ ಮತ್ತು ಶುಲಭವಾದ ಗೊಬ್ಬರವು ಡೈಂಚದಿಂದ ದೊರೆಯುವದು. ಬೇರೆ ಜಿಲ್ಲೆಗಳಲ್ಲಿ ಸಾವಿರಾರು ಎಕ್ರೆಗಳಲ್ಲಿ ಇದನ್ನು ಬೆಳೆಯಿಸಿ ರೈತರು ಪ್ರಯೋಜನ ಪಡುತ್ತಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೂಡಾ ರೈತರು ಇದನ್ನು ಬೆಳೆಯಿಸಿ ಹೆಚ್ಚಿನ ಪ್ರಯೋಜನ ಹೊಂದುತ್ತಿದ್ದಾರೆ. ಸುಗ್ಗಿ ಕಟಾವು ಆದೊಡನೆ ಗದ್ದೆಯನ್ನು ಉತ್ತು ಇದನ್ನು ಬಿತ್ತಬೇಕು. ಧಾನ್ಯವಾಗುವ ಗದ್ದೆಗಳಲ್ಲಿ ಧಾನ್ಯದ ಬೀಜದೊಡನೆ ಬೆರಸಿ ಬಿತ್ತಬಹುದು. ಒಂದು ಮುಡಿ ಗದ್ದೆಗೆ ನಾಲ್ಕು ಶೇರು ಸಾಕಾಗುವದು. ಶೇರಿಗೆ ನಾಲ್ಕಾಣೆ ಕ್ರಯ. ಒಂದು ರೂಪಾಯಿ ಖರ್ಚುಮಾಡಿ ಹತ್ತಿಪ್ಪತ್ತು ರೂಪಾಯಿ ಬೆಲೆಯ ಗೊಬ್ಬರ ಪಡೆಯಬಹುದು. ಗೊಬ್ಬರದ ಸಸಿಯ ಬೀಜವನ್ನು ರೈತರ ಪ್ರಯೋಜನಕ್ಕಾಗಿ ಮಂಗಳೂರಲ್ಲಿ ತರಿಸಿ ಇಡೋಣಾಗುವದು. ಮ॥ ರಾ॥ ರಾ॥ ಸ ಬೇರ್ ರಘುನಾಥಯ್ಯನವರಲ್ಲಿಯೂ, ಬೇಕೂರು, ಕೊಡಿಯಾಲಬೈಲು ಪಠೇಲರಲ್ಲಿಯೂ ದೊರೆಯುವದು. ಈ ಸಂದರ್ಭವನ್ನು ಬಿಡದೆ ಎಲ್ಲವರೂ ಈ ಬೀಜವನ್ನು ಕೊಂಡುಕೊಂಡು ಪರೀಕ್ಷಿಸಿ ಪ್ರಯೋಜನ ಹೊಂದಬೇಕಾಗಿ ಅಪೇಕ್ಷಿಸುವ.

K. T. Alva.
Asst Manager, Taliparam.
- N MALABR.

ಉಪ್ಪನ್ನು ಗೊಬ್ಬರಕ್ಕೆ ಉಪಯೋಗಿಸುವದು.

ಈ ಸಂಸ್ಥಾನದಲ್ಲಿ ಉಪ್ಪನ್ನು ಗೊಬ್ಬರಕ್ಕೆ ಧರ್ಮಾರ್ಥವಾಗಿ ಕೊಡುವ ಪದ್ಧತಿ ಇಲ್ಲ. ರೈತರಿಗೆ ಇದರಿಂದ ಪ್ರಯೋಜನ ಉಂಟೆಂದು ಸರಕಾರಕ್ಕೆ ಕಾಣುವಂತೆ ಮಾಡುವದು ರೈತರ ಕೆಲಸವಾಗಿರುತ್ತದೆ. ಮುಂಬಾಯಿ ಸಂಸ್ಥಾನದ ರೈತರು ಪ್ರಯಾಸಪಟ್ಟರು. ಅವರಿಗೆ ದೊರೆಯಿತು. ಈ ಸಂಸ್ಥಾನದ ರೈತರು ಕೂಡಾ ಕೃಷಿ ಇಲಾಖೆಯವರ ಮುಖಾಂತರ ಶ್ರಮಪಟ್ಟರೆ ಒಮ್ಮೆಗೆ ದೊರೆಯಲಿಕ್ಕೆ ಸಾಕು.

ಕೃಷಿ ಪ್ರಿಯ.

ಯುದ್ಧ ಸಮಾಚಾರ.

ತಾ. ೧೦ನೇ ಜನವರಿ.

ರಣರಂಗದಲ್ಲೆಲ್ಲಾ ತೋಫು ಕಾಳಗಗಳು ನಡಿಯುತ್ತಿವೆ. ಫ್ರೆಂಚರು ವ್ಹಿಕ್ಸ್ ಶಿಖರಗಳ ಮೇಲೆ ಸಿಡಿಮದ್ದುಗಳನ್ನು ಹಾರಿಸಿ, ಶತ್ರುಗಳ ಕಂದಕಗಳನ್ನು ಒಡೆದು ಹಾಕಿರುವರು.

ಶೆಂಪೇನೆಯಲ್ಲಿ ಫ್ರೆಂಚರು ಜೀವದ ಹಂಗಿಲ್ಲದೆ ಕಾದಾಡಿ ಕಳಕೊಂಡಿದ್ದ ನೆಲೆಗಳನ್ನು ಪುನಃ ಸ್ವಾಧೀನಮಾಡಿಕೊಂಡಿರುವರ ಜರ್ಮನರು ಇಲ್ಲಿ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗಿ ವಿಶೇಷ ನಷ್ಟ ಪಟ್ಟಿರುವರು

ಜರ್ಮನರು ಶೆಂಪೇನೆಯಲ್ಲಿ ವಿಷ ಗ್ಯಾಸಿನ ಸಿಡಿಮದ್ದುಗಳನ್ನು ಹಾರಿಸಿ ಫ್ರೆಂಚರ ಮೇಲೆ ಹಲ್ಲಾ ಮಾಡಲು ಯತ್ನಿಸಿದರು ಆದರೆ ಫ್ರೆಂಚರ ತೋಫುಗಳ ಗುಂಡುಗಳ ಹೊಡತಕ್ಕೆ ಜರ್ಮನರು ನಿಲ್ಲಲಾರದೆ ಪ್ರತಿ ಕಡೆಯಲ್ಲಿ ಸೋತುಹೋಗಿ ಹಿಂದೆರಳಿದರು ಫ್ರೆಂಚರ ತೋಫುಗಳಿಂದ ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟವಾಗಿದೆ

ಮಿ। ಸಾಮುವೇಲ್ ಹರ್ಬರ್ಟರವರು ಹೋಮ್ ಸೆಕ್ರಟರಿಯರಾಗಿ ನೇಮಿಸಲ್ಪಟ್ಟಿರುವರು.

ಗೆಲೀಸಿಯ ಮತ್ತು ಚರ್ನೋವಿಟ್ಸನಲ್ಲಿ ರುಶ್ಯನರು ನುಗ್ಗಿಹೋಗಿ ಕಾಳಗ ಮಾಡುತ್ತಿರುವದರಿಂದ ಶತ್ರುಗಳಲ್ಲಿ ವಿಶೇಷ ನಷ್ಟ ಉಂಟಾಗಿರುವದು.

ಸರ್ವಿಯನರು ಎಲ್‌ಬಾಸಾನಿನಲ್ಲಿ ಬಲ್ಗೇರಿಯನರನ್ನು ಸೋಲಿಸಿ, ಸ್ವಾಧೀನಮಾಡಿಕೊಂಡ ಸ್ಥಳದಲ್ಲಿ ಕಂದಕಗಳನ್ನು ತೋಡಿರುವರು.

ಅಲ್ಬಾನಿಯದಲ್ಲಿ ಎಸದ್ ಪಾಶರವರ ಅಧೀನದಲ್ಲಿರುವ ಪ್ರಾಂತ್ಯದ ಅಲ್ಬಾನಿಯರು ಸರ್ವಿಯನರ ಕಡೆಗೆ ಭ್ರಾತೃಭಾವದಿಂದಿರುವರೆಂದೂ ಎಸದ್ ಪಾಶರು ಸರ್ವಿಯನರಿಗೆ ಬಹಳ ಸಹಾಯ ಮಾಡುತ್ತಿರುವರೆಂದೂ ಪ್ರಕಟವಾಗಿದೆ

ಮೊಂಟನಿಗ್ರೊಯನರಿಗೂ ಆಸ್ಟ್ರಿಯನರಿಗೂ ಲೆಪಂಟಾಜ್ ಎಂಬಲ್ಲಿ ಕಠಿಣ ಕಾಳಗವು ನಡೆದು ಮೊಂಟನಿಗ್ರೊಯನರು ಜಯಪ್ರದರಾಗಿರುವರು ಎಪೆಕ್ಸ್ರಗೋಫೊ ಎಂಬಲ್ಲಿ ಆಸ್ಟ್ರಿಯನರು ಹಲ್ಲಾ ಮಾಡಿ ಪ್ರತಿಕಡೆಯಲ್ಲಿಯೂ ಹಿಮ್ಮೆಟ್ಟಿರುವರು. ಕಠಿಣ ಕಾಳಗ ನಡೆದ ನಂತರ ಆಸ್ಟ್ರಿಯಾನರು ಟುಸ್ಕಾಕ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡರು ಮೊಂಟಿನಿಗ್ರೊಯಾನರು ತಮ್ಮ ಸೇನೆಯನ್ನು ಲೆಸಿಂಟಿಜದ ಎಡಪಾರ್ಶ್ವಕ್ಕೆ ಒಯ್ದಿರುವರು ಎಂತ ಪ್ರಕಟವಾಗಿದೆ

ಇಪೆಕ್ ರಣರಂಗದಲ್ಲಿ ಮೊಂಟನಿಗ್ರೊಯನರಿಗೂ ಆಸ್ಟ್ರಿಯನರಿಗೂ ಕಠಿಣ ಕಾಳಗ ನಡೆದು ಅನೇಕಾವರ್ತಿ ಶತ್ರುಗಳಲ್ಲಿ ವಿಶೇಷ ನಷ್ಟವಾಗಿ ಹಿಮ್ಮೆಟ್ಟಿದರೂ ಮೊಂಟನಿಗ್ರೊಯನರ ನಿರ್ವಾಹವಿಲ್ಲದೆ ಬೆರಾನೆ ಎಂಬ ಸ್ಥಳವನ್ನು ಬಿಟ್ಟು ಹೋಗಬೇಕಾಯಿತು ರೊಗೊರೋ ಮತ್ತು ಮ್ಯೊಕಾವಾಟ್ಸನ ಮೇಲೆ ನುಗ್ಗಿಬಂದ ಶತ್ರುಗಳ ಸೋಲಿಸಲ್ಪಟ್ಟರು. ಆದರೆ ಟಸ್ಕಾಕನ್ನು ಶತ್ರುಗಳು ಸ್ವಾಧೀನಮಾಡಿಕೊಂಡದ್ದರಿಂದ ಮೊಂಟನಿಗ್ರೊಯಾನರು ಲಿಮ್ ನದಿಯ ಎಡಕಡೆಗೆ ತಮ್ಮ ಸೇನೆಯನ್ನು ಕೊಂಡುಹೋದರು ಆಸ್ಟ್ರಿಯಾನರು ಲೊವಸೆನ್ ಪರ್ವತದ ಮೇಲೆ ಹಲ್ಲಾಮಾಡಿ ವಿಷ ಗ್ಯಾಸನ್ನು ಪ್ರಯೋಗಿಸಿ, ಕುಕ್ ಮತ್ತು ರೆಸ್ಟಾಟ್ ಎಂಬ ಸ್ಥಳವನ್ನು ವಶಕೊಂಡಿರುವರು ಕದನವು ನಡಿಯುತ್ತಿದೆ

ತಾ. ೧೪ನೇ ಜನವರಿ.

ರುಶ್ಯನರು ಪ್ರಿಪೆಟ್ ನದಿಯಿಂದ ರುಮೇನಿಯ ಸರಹದ್ದಿನ ಆಜುಬಾಜುವರೆಗೆ ನುಗ್ಗಿ ಹೋಗಿರುವರು ರುಶ್ಯನರು ಈ ಸ್ಟ್ರಿಪ ನದಿಯ ಪೂರ್ವ ದಡದಲ್ಲಿ ೩೦ ಮೈಲುಗಳನ್ನು ಸ್ವಾಧೀನಮಾಡಿಕೊಂಡಿರುವರೆಂತ ವಾರ್ತೆ ಇದೆ.

ಮೊಂಟನಿಗ್ರೊ ರಣರಂಗದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಉತ್ತರ ಮತ್ತು ಪೂರ್ವದಲ್ಲಿ ಶತ್ರುಗಳು ಪ್ರತಿಕಡೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಿರುವರು ಕದನವು ಹರ್ಜಗೊವಿನಾ ಸರಹದ್ದಿನ ಕಡೆಗೆ ಮುಂದರಿಯುತ್ತಿದೆ. ಆಸ್ಟ್ರಿಯನರು ಮಹಾಸೇನೆಯನ್ನು ಕೂಡಿಸಿ ಹಲ್ಲಾ ಮಾಡಿದರೂ ಪ್ರತಿಸಾರಿ ಸೋತುಹೋಗಿರುವರು.

ದಕ್ಷಿಣ ರಣರಂಗದಲ್ಲಿ ಇಟಲಿಯನರು ಲಗಾಜೋಯಿ ಕಣಿವೆಯಲ್ಲಿ ಮುಂದರಿದು ಆಸ್ಟ್ರಿಯನರ ಕಂದಕಗಳನ್ನು ಒಡೆದುಹಾಕಿರುವರು ಇಸನ್ಜೊದಲ್ಲಿ ಆಸ್ಟ್ರಿಯಾನರು ದೂರದಲ್ಲಿ ತೋಫುಗಳನ್ನು ಇಟ್ಟು ಹಾರಿಸಿದ ಗುಂಡುಗಳು ಗಾಯಪೊಂದಿದ ಸೇನಿಕರ ಆಸ್ಪತ್ರೆಗೆ ತಗಲಿ ೪ ಮಂದಿ ಸತ್ತುಹೋದರು. ಎಂಟು ಮಂದಿ ಗಾಯ ಒಡೆದಿರುವರು

ಮೆಸೊಪಟಾಮಿಯದಲ್ಲಿ ನಡೆದ ಕಾಳಗವನ್ನು ಕಣ್ಣಾರೆ ಕಂಡ ಬಾತ್ಮೀದಾರರು ಈ ರೀತಿ ವಾರ್ತೆ ಕೊಟ್ಟಿರುವರು. —ಕುಟ್ ಅಲ್ ಅಮಾರದಲ್ಲಿದ್ದ ಜನರಲ್ ಟೌನ್‌ಸೆಡರ ಸೇನೆಗೆ ಕೂಡಿಕೊಳ್ಳಲು ಮುಂದರಿದ ಜನರಲ್ ಏಲ್‌ಮರ್ಸ್ರಸೇನೆಗೂ ಶತ್ರುಗಳ ಸೇನೆಗೂ ಸೆಕ್ ಸಾದ್ ಎಂಬಲ್ಲಿ ತಾ ೭ರಲ್ಲಿ ಕಠಿಣ ಕಾಳಗವು ನಡೆಯಿತು ಜನರಲ್ ಏಲ್‌ಮರ್ಸ್ರ ಸೇನೆಯು ಜನರಲ್ ಯಂಗ್‌ಹಸ್‌ಬೆಂಡರ ಒಡನೆ ತಾ ೪ರಲ್ಲಿ ಅಲಿ ಅಲ್ ಗಾಭಿಯಿಂದ ತೀಗ್ರಿಸ್ ನದಿಯ ಉಭಯ ದಡಗಳಲ್ಲಿಯೂ ಮುಂದರಿಯಿತು ತಾ ೮ರಲ್ಲಿ ತೀಗ್ರಿಸಿನ ಬಲದಡದಲ್ಲಿ ಶತ್ರುಗಳ ಸೇನೆಯನ್ನು ನಮ್ಮ ಅಶ್ವಪಡೆಯು ಕಲೆತುಕೊಂಡಿತು ತಾ ೭ಲ್ಲಿ ನಮ್ಮ ಕಾಲಾಳು ಸೇನಿಕರು ತುರ್ಕರ ಮೇಲೆ ಹಲ್ಲಾಮಾಡಿ, ತೀಗ್ರಿಸ್ ನದಿಯ ಬಲದಡದಲ್ಲಿ ಕಂದಕಗಳನ್ನು ಸೇರಿದರು ಮರುದಿನ ಬೆಳಗ್ಗೆ ನಮ್ಮ ಅಶ್ವಪಡೆಯು ಶತ್ರುಗಳ ಬಲದಡದಲ್ಲಿರುವ ಕಂದಕಗಳ ಹಿಂದಿನಿಂದ ಹಲ್ಲಾಮಾಡಿ ಶತ್ರುಗಳನ್ನು ಸೋಲಿಸಿ ಶತ್ರುಗಳ ೬೦೦ ಸೇನಿಕರನ್ನು ಸೆರೆಹಿಡಿದರು. ನಮ್ಮ ಸೇನೆಯ ಕಾಲಾಳು ಪಡೆಯಲ್ಲಿಯೂ ವಿಶೇಷ ನಷ್ಟವಾಗಿರುವದು ಏಲ್‌ಮರ್ಸ್ರ ಉಳಿದ ಸೇನೆಯು ತಾ ೬ರಲ್ಲಿ ಹೊರಟು ಎಡದಡದಲ್ಲಿ ತುರ್ಕರೊಡನೆ ಕಾದಾಡಿತು. ಮಧ್ಯಾಹ್ನ ೧೨ ಘಂಟೆಗೆ ೧೨೦೦ ಗಜ ದೂರದಿಂದ ತುರ್ಕರ ತೋಫುಗಳಿಂದ ಅಪರಿಮಿತವಾದ ಗುಂಡುಗಳು ಹಾರತೊಡಗಿದವು ಸಾಯಂಕಾಲ ತುರ್ಕರ ಅಶ್ವಪಡೆಯು ಮುಂದರಿಯ ಪ್ರಾರಂಭಿಸಿತು ಆದರೆ ನಮ್ಮವರ ತೋಫುಗಳು ಅವನ್ನು ಹಿಂದಕ್ಕೆ ಅಟ್ಟಿದವು

ಶತ್ರುಗಳ ಕಾಲಾಳು ಸೇನೆಯೂ ಬಲವಾಗಿತ್ತು ನಮ್ಮ ಸೇನೆಯು ರಾತ್ರಿಕಾಲ ಕಂದಕಗಳನ್ನು ಸೇರಿಕೊಂಡಿತು ಮರುದಿನ ಬೆಳಗ್ಗೆ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ತುರ್ಕರನ್ನು ತಿಗ್ರಿಸ್ ನದಿಯ ಎರಡದಡಗಳಿಂದಲೂ ಓಡಿಸಲು ಸಾಧ್ಯವಾಯಿತು

ತಾ. ೧೫ನೇ ಜನವರಿ.

ಜರ್ಮನರ ಜಲಂತರ್ಗಾಮಿ ನಾವೆಯು "ಟ್ರಾಕ್ಯುಲರ್" ಎಂಬ ಒಂದು ಹಡಗವನ್ನು ಮುಣುಗಿಸಿರುತ್ತದೆ

ಹಿಂದೂಸ್ಥಾನದಿಂದ ಜರ್ಮನರನ್ನು ಕೊಂಡುಹೋದ "ಗೋಲ್ಕೊಂಡ" ಹಡಗವು ಟಿಲರಿ ಎಂಬಲ್ಲಿ ತಲಪಿರುತ್ತದೆ ೪೮ ಜರ್ಮನ ಪ್ರಯಾಣಿಕರನ್ನು ಬಂದರದಲ್ಲಿ ಇಳಿಯ ಬಿಡದೆ ಫ್ಲಸಿಂಗಿನ ದೋಣಿಗಳಲ್ಲಿ ಹಾಕಿ ಫ್ಲಸಿಂಗಿಗೆ ಕಳುಹಿಸಿ ಕೊಟ್ಟಿರುತ್ತಾರೆ.

ಅರ್ಗೋನೆಯಲ್ಲಿ ಯುದ್ಧ ಸನ್ನಾಹಗಳನ್ನು ಮಾಡುತ್ತಿದ್ದ ಜರ್ಮನರ ಒಂದು ಪಂಗಡವನ್ನು ಫ್ರೆಂಚರ ಬತ್ತೇರಿಗಳು ಚದರಿಸಿರುತ್ತವೆ

ಡನ್‌ಕರ್ಕಿನ ಮೇಲೆ ವಾಯುನಾವೆಗಳು ೮ ಬೊಂಬುಗಳನ್ನು ಹಾಕಿದ್ದರಿಂದ ವಿಶೇಷ ಹಾನಿಯಾಗಿದೆ ಫ್ರೆಂಚರ ತೋಫುಗಳು ಐಸೆ ಮತ್ತು ಶೆಂಪೆನೆಯಲ್ಲಿ ಜರ್ಮನರ ಕಂದಕಗಳನ್ನು ಒಡೆದಿರುವವು ಜರ್ಮನರು ಅರ್ಗೋನ್ನೆಯಲ್ಲಿ ೨೮೫ನೇ ಗುಡ್ಡದ ಬಳಿ ಒಂದು ಸಿಡಿವ ದ್ವಿನ ಗಣಿಯನ್ನು ಹಾರಿಸಿದರು ಅಲ್ಲಿ ದಿನವೆಲ್ಲಾ ಯುದ್ಧ ನಡೆಯಿತು ಫ್ರೆಂಚರು ಗುಡ್ಡದ ದಕ್ಷಿಣ ಪಾರ್ಶ್ವವನ್ನು ಬಲಕಾಯಿಸಿಕೊಂಡರು ಜರ್ಮನರು ಅರ್ಗೋನ್ನೆ ಮತ್ತು ಮ್ಯೂಸಿನಲ್ಲಿ ವಿಷಗ್ಯಾಸನ್ನು ಬಿಟ್ಟರು. ಆದರೆ ಫ್ರೆಂಚರ ಕಂದಕಗಳಿಂದ ಹೊರಟ ಫಿರಂಗಿಗಳ ಬೆಂಕಿಯು ಅವನ್ನು ತಡೆಯಿತು. ಫ್ರೆಂಚರ ಬೆಂಕಿಯು ಪೊಸೆಜೆಸ್ ಮತ್ತು ಮ್ಯೂಸ್ ಗುಡ್ಡ ಶಿಖರಗಳಲ್ಲಿಯ ಜರ್ಮನರ ನೆಲೆಗಳನ್ನು ಹಾವಳಿ ಮಾಡಿರುತ್ತದೆ ಎಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು.

ಸೊಮ್ಮೆ ಮತ್ತು ಶೆಂಪೇನೆಯಲ್ಲಿ ಜರ್ಮನರಿಗೆ ಎರಡು ಕಡೆ ಅಪಜಯವಾಗಿರುವದು. ಪೊಜೆರ್ನಿಸಿನಲ್ಲಿ ಗಾಳಿಯು ತಿರುಗಿದ್ದರಿಂದ ಜರ್ಮನರ ವಿಷಗ್ಯಾಸ್ ಹಿಂದೆ ಜರ್ಮನರ ಕಂದಕಗಳೊಳಗೆನೇ ಹೋಗಿರುವದು ಎಂದೂ ಆ ಸಮಯದಲ್ಲಿಯೇ ಫ್ರೆಂಚರ ಬತ್ತೇರಿಗಳು ಜರ್ಮನರ ಕಂದಕಗಳ ಕಡೆಗೆ ಗುಂಡಿನ ಮಳೆ ಕರೆಂತಲೂ ಪ್ರಕಟವಾಗಿದೆ.

ಇಂಗ್ಲಾಂಡಿನಲ್ಲಿ ಅವಿವಾಹಿತರಾದ ಯುವಕ ಪುರುಷರನ್ನು ನಿರ್ಬಂಧದಿಂದ ಸೇನೆಗೆ ಸೇರಿಸಿಕೊಳ್ಳುವ ವಿಧಿಯು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಎರಡನೇ ಸಾರಿ ಓದಲ್ಪಟ್ಟು ಬಹುಮತಿಯಿಂ ಸಮ್ಮತಿಯನ್ನು ಹೊಂದಿರುತ್ತದೆ.

ಜರ್ಮನಿಯಲ್ಲಿ ಆಹಾರದ ಕೊರತೆಯು ಹೆಚ್ಚುತ್ತಿರುವದು. ತಲೆ ಒಂದಕ್ಕೆ ದಿವಸಕ್ಕೆ ಅರ್ಧ ರಾತ್ಲಿಗಿಂತ ಹೆಚ್ಚು ರೊಟ್ಟಿ ಕೊಡಕೂಡದೆಂಬ ಆಜ್ಞೆಯಾಗಿದೆ. ಆಸ್ಟ್ರಿಯದ ರೊಥರ್‌ತ್ರಮ್ ಸ್ಟ್ರಾನೆ ಎಂಬಲ್ಲಿ ನಾಲ್ಕು ಮಾಂಸಗಳನ್ನು ಮಾರುವ ಅಂಗಡಿಗಳು ತೆರೆಯೋಣಾಗಿವೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ಜರ್ಮನ್ ಕೈಸರರು ಅಸ್ವಸ್ಥದಲ್ಲಿರುವದರಿಂದ ಗ್ರೀಸ್ ದೇಶದ ರಾಣಿಯವರನ್ನು ಅಲ್ಲಿಗೆ ಕರೆಸಿರುವರೆಂದೂ ಗ್ರೀಸ್ ಅರಸರ ಇಡೀ ಕುಟುಂಬವೇ ಬರ್ಲಿನಿಗೆ ಹೋಗಲಿಕ್ಕಿದ್ದಾರೆಂದೂ ವಾರ್ತೆ ಇದೆ. ಕೈಸರರ ಅಸ್ವಸ್ಥದ ಸಂಬಂಧ ನಿಜವಾದ ವಾರ್ತೆ ಸಿಕ್ಕುವದಿಲ್ಲ ಈ ವಾರ್ತೆಯನ್ನು ಪ್ರಕಟಿಸಕೂಡದೆಂದು ಬರ್ಲಿನ್ ನಗರದ ವರ್ತಮಾನ ಪತ್ರಿಕೆಗಳಿಗೆ ಆಜ್ಞೆ ಆಗಿದೆ. ಇದರಿಂದ ಕೈಸರರ ವ್ಯಾಧಿಯು ಅತಿ ಕಠಿಣವಾಗಿರಬಹುದೆಂತ ಬರ್ಲಿನಿನ ಜನರು ಊಹಿಸಿರುವರು. ಎಂತ ವಾರ್ತೆ ಇದೆ

ಜಪಾನಿನ ಪ್ರಧಾನ ಮಂತ್ರಿಯರಾದ ಕೌಂಟ್ ಒಕೂಮರವರ ಮೋಟರ್ ಬಂಡಿಯಲ್ಲಿ ಹೋಗುತ್ತಿರುವಾಗ ಯಾರೋ ಗಾತುಕರು ಬೊಂಬನ್ನು ಅವರ ಮೇಲೆ ಬಿಸಾಡಿರುವರು. ಆದರೆ ಒಂದು ಬೊಂಬ ಸಿಡಿಯಲಿಲ್ಲ ಮತ್ತೊಂದು ಬೊಂಬು ಸಿಡಿಯುವದರೊಳಗೆ ಮೋಟರ್ ಡ್ರೈವರನು ಬಂಡಿಯನ್ನು ವೇಗವಾಗಿ ನಡಿಸಿದ್ದರಿಂದ ಸಿಡಿದ ಬೊಂಬಿನಿಂದ ಕೌಂಟ್ ಒಕೂಮರವರಿಗೆ ಅಪಾಯವಾಗಲಿಲ್ಲ ಬೊಂಬ ಬಿಸಾಡಿದ ಮನುಷ್ಯನು ತಪ್ಪಿಸಿಕೊಂಡಿರುವನು

ಚೀನದ ಕೆಂಟೊನಿನಲ್ಲಿ ದಂಗೆಗಾರರ ಪಕ್ಷದವರಿಗೂ ಸರಕಾರದ ಪಕ್ಷದ ಸೇನಿಕರಿಗೂ ೩ ದಿನಗಳ ವರೆಗೆ ಕದನ ನಡೆದಿರುವದು ದಂಗೆಗಾರರು ತಮ್ಮ ಮದ್ದುಗುಂಡುಗಳು ಮುಗಿದು ಹೋಗುವ ವರೆಗೆ ಕಾದಾಡಿ, ನಂತರ ಬೊಂಬುಗಳನ್ನು ಪ್ರಯೋಗಿಸಿದರು. ಕಡೆಗೆ ದಂಗೆಗಾರರ ಮುಂದಾಳುಗಳೂ ಇತರರನೇಕರೂ ಹತರಾದರು ಸರಕಾರ ಸೇನಿಕರು ದಂಗೆಗಾರರನ್ನು ಅಟ್ಟುತ್ತಿರುವರು ಎಂಬ ವಾರ್ತೆ ಬಂದದೆ

ಅನಟೋಲಿಯನ್ ಕರಾವಳಿಯಲ್ಲಿದ್ದ ಶತ್ರುಗಳ ಜಲಂತರ್ಗಾಮಿ ನಾವೆಗಳನ್ನೂ ಇತರ ಎರಡು ನಾವೆಗಳನ್ನೂ ರುಶ್ಯನರ ಟೊರ್ಪೆಡೋ ದೋಣಿಗಳು ನಾಶಮಾಡಿರುತ್ತವೆ

ಚೆರ್ನೊವಿಟ್ಸಿನ ಪೂರ್ವದಲ್ಲಿ ಶತ್ರುಗಳು ಎರಡಾವರ್ತಿ ಕದನ ಮಾಡಲು ಯತ್ನಿಸಿ ಸೋತುಹೋದರು. ರುಶ್ಯನರು ಶತ್ರುಗಳನ್ನು ಕಂದಕಗಳಿಂದ ಓಡಿಸಿ ಕಂದಕಗಳನ್ನು ತಮ್ಮ ಸ್ವಾಧೀನಮಾಡಿಕೊಂಡಿರುತ್ತಾರೆ

ಫ್ರೆಂಚರು ತಮ್ಮ ಸೇನೆಯನ್ನು ಗ್ರೀಕರಿಗೆ ಸೇರಿದ ಕೊರ್ಫು ದ್ವೀಪದಲ್ಲಿ ಇಳಿಸಿರುವರು ೧೪ ಯುದ್ಧನಾವೆಗಳು ಈ ದ್ವೀಪದ ಸುತ್ತಲೂ ರೋಂದು ಮಾಡುತ್ತಿರುವವು. ಅಲ್ಬಾನಿಯದ ಸರ್ವಿಯನರ ಸೇನೆಯನ್ನು ಅಲ್ಲಿಗೆ ತಂದು ಅದನ್ನು ಸರಿಗೊಳಿಸುವದೇ ಫ್ರೆಂಚರು ಆ ದ್ವೀಪವನ್ನು ಸೇರಿದ ದರ ಉದ್ದೇಶವಾಗಿರುವದರಿಂದ ಫ್ರೆಂಚರು ಬರೇ ಸ್ವಲ್ಪ ಕಾಲ ಮಾತ್ರ ಆ ದ್ವೀಪದಲ್ಲಿ ಉಳಕೊಂಡು ನಂತರ ದ್ವೀಪವನ್ನು ಬಿಟ್ಟುಹೋಗುವರೆಂತ ಮಿತ್ರರಾಜ್ಯಗಳ ಮಂತ್ರಿಗಳು ಗ್ರೀಕ ಸರಕಾರದವರಿಗೆ ತಿಳಿಸಿರುತ್ತಾರೆ.

ಇಟಲಿ ರಣರಂಗದಲ್ಲಿ ತೋಫು ಕಾಳಗವೂ ವಾಯುನಾವೆಗಳ ಕದನಗಳೂ ನಡೆಯುತ್ತಿವೆ ಇಟಲಿ ವಾಯುನಾವಿಕರು ಗ್ರೇಂಡೊ ಮೋಟ್ರೆಂಟ್ ಮೊದಲಾದ ಪಟ್ಟಣಗಳ ಮೇಲೆ ಸಿಡಿಮದ್ದುಗಳನ್ನು ಹಾಕಿರುತ್ತಾರೆ.

ತಾ. ೧೬ನೇ ಜನವರಿ.

ಮೆಡಿಟರೇನಿಯನ್ ಸಮುದ್ರದಲ್ಲಿರುವ ಆಸ್ಟ್ರಿಯಾನರ ಜಲಂತರ್ಗಾಮಿ ನಾವೆಗಳಿಂದ "ಪರ್ಷಿಯಾ" ಹಡಗವು ಮುಣುಗಿಸಲ್ಪಡಲಿಲ್ಲವೆಂದೂ "ಪರ್ಷಿಯಾ" ಹಡಗವು ಸಿಡಿಮದ್ದಿನ ಗಣಿಗಳಿಂದ ಯಾ ಹಡಗದೊಳಗೆನೇ ಆದ ಸಿಡಿತದಿಂದ ಮುಣುಗಿಹೋಗಿರಬೇಕೆಂದೂ ಆಸ್ಟ್ರಿಯಾ ಸರಕಾರದವರು ಅಮೇರಿಕ ಸರಕಾರದವರಿಗೆ ತಿಳಿಸಿರುತ್ತಾರೆಂಬ ವಾರ್ತೆ ಬಂದದೆ.

ಫ್ರಾನ್ಸ್ ರಣರಂಗದಲ್ಲಿಯೂ ಬೆಲ್ಜಿಯಮ್ ರಣರಂಗದಲ್ಲಿಯೂ ಅಲ್ಲಲ್ಲಿ ತೋಫು ಕಾಳಗಗಳು ನಡಿಯುತ್ತಿವೆ. ವಿಶೇಷ ಬದಲಾವಣೆಗಳು ನಡದಂತೆ ತೋರುವದಿಲ್ಲ

ಕೈಸರರಿಗೆ ಅಪಾಯಕರವಾದ ಕುರು ಆಗಿರಲಿಲ್ಲವೆಂತಲೂ ಅವರು ನಡಿಯ ಶಕ್ತರಾಗಿದ್ದಾರೆಂತಲೂ "ಸಿವಿಲ್ ಮಿಲಿಟರಿ ಗಜೆಟ್"ನಲ್ಲಿ ಪ್ರಕಟವಾಗಿದೆ.

ಕೈಸರರು ಪೂರ್ಣವಾಗಿ ಗುಣಹೊಂದಿರುತ್ತಾರೆಂತ ಬರ್ಲಿನಿನಿಂದ ಅಮ್ಸ್ಟರ್‌ಡಮಿಗೆ ವಾರ್ತೆ ಬಂದಿರುತ್ತದೆ

ರುಶ್ಯನರು ಬಸ್ಸಾರಬಿಯದ ಕಡೆ ನುಗ್ಗಿ ಕದನ ಮಾಡುತ್ತಿರುವರು ಎಂತ ಆಸ್ಟ್ರಿಯನರು ಪ್ರಕಟಿಸಿರುವರು

ಶತ್ರುಗಳು ಸಲೋನಿಕದ ಕಡೆ ನುಗ್ಗಿ ಬರಲು ಸನ್ನಾಹ ಮಾಡುತ್ತಿದ್ದಾರೆಂತ ವಾರ್ತೆ ಬಂದದೆ ಫ್ರೆಂಚರು ಸ್ಟ್ರುಮ ನದಿಯ ಸೇತುವೆಯನ್ನು ಹಾರಿಸಿ ಬಿಟ್ಟಿರುತ್ತಾರೆ ಶತ್ರುಗಳ ವಾಯುನಾವೆಗಳು ಜೇನ್ಸ್, ಕುಕಸ್ ಮತ್ತು ಡೊಗಾನ್ಸಿ ಎಂಬ ಸ್ಥಳಗಳ ಮೇಲೆ ಬೊಂಬುಗಳನ್ನು ಬಿಸಾಡಿರುತ್ತವೆ

ಆಸ್ಟ್ರಿಯನರ "ನೋವಾರ" ಎಂಬ ಕ್ರೂಜರ್ ನಾವೆಯನ್ನು ಫ್ರೆಂಚರ ಜಲಂತರ್ಗಾಮಿ ನಾವೆಯು ಕೆಟ್ಟಾರೋದ ಆಜುಬಾಜಿನಲ್ಲಿ ಮುಳುಗಿಸಿರುತ್ತದೆ

ರುಶ್ಯನರು ಪರ್ಶಿಯಾದಲ್ಲಿ ಕವನಗರ್ ಎಂಬ ಸ್ಥಳವನ್ನು ವಶ ಮಾಡಿಕೊಂಡಿರುವರು

ಕೌಕಾಸಸಿನಲ್ಲಿ ರುಶ್ಯನರು ತುರ್ಕರ ಒಂದು ದೊಡ್ಡ ಸೇನೆಯನ್ನು ಸೋಲಿಸಿರುತ್ತಾರೆ

ಮೆಸೊಪೊಟೋಮಿಯ ಪಲ ಜನರಲ್ ಏಲ್ಮರ ದ್ವಾರವರ ಸೇನೆಯು ತಾ ೧೩ರಲ್ಲಿ ವಡ ತುರ್ಕ ಸೈನಿಕರ ಮೇಲೆ ಬಿದ್ದು ತುರ್ಕರನ್ನು ಸೋಲಿಸಿರುವರು ತುರ್ಕರು ತಾ. ೧೩ ೧೪ರಲ್ಲಿ ಹಿಂದೆ ಸರಿದಿರುತ್ತಾರೆ ಶೇಖ್ ಸಾದಿನಲ್ಲಿ ೬೦೦ ತುರ್ಕ ಸೈನಿಕರು ಸೆರೆ ಬಿದ್ದಿರುವರು.

~~~~~~

ಉತ್ತರ ಹಿಂದೂಸ್ಥಾನ

~~~ ~~

ಹಿಂದೂ ಯೂನಿವರ್ಸಿಟಿಯ ಶಂಕುಸ್ಥಾಪನೆಯ ಸಂದರ್ಭದಲ್ಲಿ ಬೆನಾರಿಸಿನಲ್ಲಿ ಕೂಡಿ ಬರುವ ಸಂದರ್ಶಕರ ಬಗ್ಗೆ ಸುಮಾರು ೬೦೦೦ ಮಂದಿ ಕೂಡಬಹುದಾದ ದೊಡ್ಡ ಹಂದರವು ನಿರ್ಮಿಸಲ್ಪಡುತ್ತಿರುವದು ವೈಸರಾಯ ಪ್ರಭುಗಳವರ ಆಸನದ ಎರಡು ಪಾರ್ಶ್ವಗಳಲ್ಲಿಯೂ ಗವರ್ನರರ, ಲೆಪ್ಟನೆಂಟ ಗವರ್ನರರ, ದೇಶೀಯ ರಾಜರ ಬಗ್ಗೆ ಹದಿನೈದದಿನೈದು ಆಸನಗಳನ್ನು ಇಟ್ಟಿರುತ್ತಾರೆ

~~~~~

೧೯೧೫ನೇ ಇಸವಿ ಎಪ್ರೀಲ್ ತಿಂಗಳಿಂದ ದಶಂಬರ ತಿಂಗಳ ವರೆಗೆ ಭರತ ಖಂಡದ ಎಲ್ಲಾ ಲೋಹ ಮಾರ್ಗಗಳಿಂದ ಆಗಿರುವ ಉತ್ಪತ್ತಿಯು ೧೯೧೪ನೇ ವರ್ಷದ ಅಷ್ಟೇ ಕಾಲದಲ್ಲಿ ಆಗಿದ್ದ ಉತ್ಪತ್ತಿಗಿಂತಲೂ ೧೫೪೬೨ ರೂಪಾಯಿಗಳಿಗೆ ಹೆಚ್ಚಾಗಿವೆ

~~~~~~

ದಶಂಬರ ತಾ ೨೬ರಲ್ಲಿ ಮುಂಬಾಯಿಂದ ಹೊರಟ ಪಿ ಎಂಡ್ ಓ ಕಂಪೆನಿಯ "ಕಾಶಗರ" ಹಡಗವು ಇದೇ ಜನವರಿ ತಾ ೧೧ರಲ್ಲಿ ಮಾರ್ಸೆಲಿಸಿಗೆ ಸುರಕ್ಷಿತವಾಗಿ ತಲುಪಿರುತ್ತದೆ.

~~~~~~

ಇದೇ ತಾ ೧೩ರಲ್ಲಿ "ಇಂಡಿಯನ್ ಸಯನ್ಸ್ ಕಾಂಗ್ರೆಸ್" ಎಂಬ ಹಿಂದೂಸ್ಥಾನದ ವೈಜ್ಞಾನಿಕ ವಿದ್ಯಾ ವಿಷಯಕವಾದ ಮಹಾ ಸಭೆಯು ೩ನೇ ಅಧಿವೇಶನವು ಲಕ್ನೋ ಮೆಡಿಕಲ್ ಕಾಲೇಜಿನ ಸೆನೇಟ್ ಹೋಲಿನಲ್ಲಿ ಕೂಡಿತ್ತು. ಹಿಂದೂಸ್ಥಾನದ ಎಲ್ಲಾ ಪ್ರದೇಶಗಳ ವೈಜ್ಞಾನಿಕರು ಈ ಸಭೆಯಲ್ಲಿ ಹಾಜರಿದ್ದರು. ಯುನೈಟೆಡ್ ಪ್ರೊವಿನ್ಸಿನ ಲೆಪ್ಟನೆಂಟ ಗವರ್ನರರು ಈ ಅಧಿವೇಶನಕ್ಕೆ ಹಾಜರಿದ್ದು ಪ್ರಥಮತಃ ಭಾಷಣವನ್ನು ಮಾಡಿದರು. ಅನಂತರ ಸಭಾಧ್ಯಕ್ಷರಾಗಿ ಆರಿಸಲ್ಪಟ್ಟ ಸರ್. ಸಿಡ್ನಿ ಬರ್ರ್ಯಾರ್ಡರವರು ಕಾಲೋಚಿತ ಭಾಷಣವನ್ನು ಕೊಟ್ಟರು. ಕಡೆಗೆ ಡಾಕ್ಟರ್ ಬೋಸ್ ಮೊದಲಾದ ವೈಜ್ಞಾನಿಕರು ಆಯಾ ಪ್ರಸ್ತಾವಗಳ ಮೇಲೆ ಪ್ರಬಂಧಗಳನ್ನು ಓದಿದರು

~~~~~~

ಬೆನಾರಸಿನಲ್ಲಿ ಸ್ಥಾಪಿಸಲ್ಪಡುವ ಹಿಂದೂ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆ ಸಂದರ್ಭದಲ್ಲಿ ಬೆನಾರಿಸಿಗೆ ಬಂಗಾಳ ಗವರ್ನರರೂ, ಪಂಜಾಬು, ಬಿಹಾರ್ ಮತ್ತು ಒರಿಸ್ಸ ಮತ್ತು ಸಂಯುಕ್ತ ಸಂಸ್ಥಾನದ ಲೆಪ್ಟನೆಂಟ ಗವರ್ನರರೂ, ಕಾಶ್ಮೀರ, ಗ್ವಾಲಿಯೋರ್, ಇಂದೋರ, ಬಿಕಾನಿರ ಕಿಶನ್‌ಗರ, ಕೋಟೆ, ಅಲ್ವಾರ್, ರೀವಾ ಡಾಟಿಯ ಮತ್ತು ಪನ್ನಾದ ಮಹಾರಾಜರುಗಳೂ, ಇತರ ಕೆಲವು ದೇಶೀಯ ರಾಜ ಕುಮಾರರೂ, ಹಿಂದೂಸ್ಥಾನದ ಹಲವು ವೈಜ್ಞಾನಿಕರೂ ಚಿತ್ತೈಸುವರು ಫೆಬ್ರವರಿ ತಾ ೫ರಿಂದ ತಾ ೮ರ ವರೆಗೆ ಪೂನೆಯ ಡಾಕ್ಟರ್ ಹರೋಲ್ಡ ಮಾನ್ಸ್, ಪ್ರೊಫೆಸರ್ ಟಿ ಕೆ ಗಜ್ಜರ್ ಮುಂಬಾಯಿಯ ಲೆಪ್ಟನೆಂಟ ಕರ್ನಲ್ ಕೀರ್ತಿಕಾರ, ಪ್ರೊಫೆಸರ್ ಗೆಡ್ಡಿಸ್ ಮೊದಲಾದ ವೈಜ್ಞಾನಿಕರಿಂದ ಹಲವು ಪ್ರಸ್ತಾಪಗಳ ಮೇಲೆ ಭಾಷಣಗಳು ಕೊಡೋಣಾಗುವವು ಶಂಕುಸ್ಥಾಪನೆಯ ೧೫ ದಿವಸದ ಮೊದಲಿಂದ ಫೆಬ್ರವರಿ ತಾ ೩ರ ವರೆಗೆ ಅಲ್ಲಿ ಮಹಾ ಯಾಗವು ನಡಿಸಲ್ಪಡುವದು

~~~~~~

ಜನವರಿ ತಾ ೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೭೨೪ ಮಂದಿಗೆ ಪ್ಲೇಗಬೇನೆಯು ಸೋಂಕಿ ೫೭೭೭ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂಧಿನಲ್ಲಿ ೨೦೨೨, ಬಂಗಾಳ ೭ ಬಿಹಾರ್ ಮತ್ತು ಒರಿಸ್ಸ ೩೬೯ ಸಂಯುಕ್ತ ಸಂಸ್ಥಾನ ೧೫೫೦, ಪಂಜಾಬು ೪೮, ಬರ್ಮ ೨೨೨, ಮಧ್ಯಸಂಸ್ಥಾನ ೬೮೬, ಮೈಸೂರು ೨೪೧ ಹೈದರಾಬಾದ್ ೫೭೧, ಮಧ್ಯ ಹಿಂದೂಸ್ಥಾನ ೬೭, ಕಾಶ್ಮೀರ ೧೫ ಮರಣಗಳಾದವು

~~~ ~~

೧೯೧೫ನೇ ಇಸವಿ ಎಪ್ರೀಲ್ ತಿಂಗಳಿಂದ ನವಂಬರ ತಿಂಗಳಿನ ವರೆಗಿನ ಎಂಟು ತಿಂಗಳಲ್ಲಿ ಹಿಂದೂಸ್ಥಾನಕ್ಕೆ ಪರದೇಶಗಳಿಂದ ಬಂದ ಮೋಟರ್ ಬಂಡಿಗಳ ಸಂಖ್ಯೆಯನ್ನೂ ಅವುಗಳ ಮೌಲ್ಯವನ್ನೂ ತೀಕೊಂಡರೆ ಆಶ್ಚರ್ಯವಾಗದಿರದು ಎಪ್ರೀಲ್ ತಿಂಗಳಿಂದ ನವಂಬರ ತಿಂಗಳ ವರೆಗ ಯುನೈಟೆಡ್ ಸ್ಟೇಟಿನಿಂದ ೨೭ ಲಕ್ಷ ರೂಪಾಯಿಗಳ ಕ್ರಯಬಾಳುವ ೧೧೧೭ ಮೋಟರುಗಳೂ ಬ್ರಿಟಿಷ ಸಾಮ್ರಾಜ್ಯದಿಂದ ೨೨ ಲಕ್ಷ ಕ್ರಯ ಬಾಳುವ ೫೭೫ ಮೋಟರುಗಳೂ ಹಿಂದೂಸ್ಥಾನಕ್ಕೆ ಬಂದಿರುತ್ತವೆ ೧೯೧೪ನೇ ಇಸವಿಯ ಅದೇ ಕಾಲ ಬ್ರಿಟಿಷ ಸಾಮ್ರಾಜ್ಯದಿಂದ ೩೨ ಲಕ್ಷ ರೂಪಾಯಿಗಳ ಕ್ರಯ ಬಾಳುವ ೭೮೦ ಮೋಟರುಗಳೂ, ಯುನೈಟೆಡ್ ಸ್ಟೇಟಿನಿಂದ ೭ ಲಕ್ಷ ರೂಪಾಯಿ ಕ್ರಯ ಬಾಳುವ ೩೭೯ ಮೋಟರುಗಳೂ ಬಂದಿದ್ದವು ಈ ಸಂಖ್ಯೆಗಳನ್ನು ಪರಿಶೀಲಿಸಿದಲ್ಲಿ ಹಿಂದೂಸ್ಥಾನದಲ್ಲಿ ಈಗೀಗ ಮೋಟರ್ ಬಂಡಿಗಳನ್ನು ಪ್ರಯೋಗಿಸುವವರ ಸಂಖ್ಯೆಯು ಹೆಚ್ಚಾಗುತ್ತಿದೆಂತ ತೋರಿಬರುವದು

~~~~~~

ಅಹಮ್ಮದ್ ನಗರದಲ್ಲಿ I ಕ್ಲಾಸ್ ಸಬ್ ಜಡ್ಜರಾಗಿದ್ದ ಗೋವಿಂದ ಬಲವಂತ ಲಾಗೇಟ್ ಎಂಬವರು ಲಂಚ ತಕ್ಕೊಂಡಿದ್ದರೆಂದು ಆಪಾದಿಸಲ್ಪಟ್ಟಿದ್ದರಿಂದ ಸ್ಪೆಶಲ್ ಮೇಜಿಸ್ಟ್ರೇಟ್ ಮಿ| ಗಾರಟರವರು ಈ ಮೊಕದ್ದಮೆಯನ್ನು ತನಿಕಿ ನಡಿಸಿ ಆಪಾದಿತನಿಗೆ ೩ ವರ್ಷಗಳ ಕಠಿಣ ಸಜೆ ಮತ್ತು ೩೦೦೦ ರೂಪಾಯಿಗಳ ಜುಲುಮಾನೆಯನ್ನು ವಿಧಿಸಿದರು ಈ ಶಿಕ್ಷೆಯನ್ನು ವಜಾ ಮಾಡಬೇಕೆಂದು ಆಪಾದಿತನು ಮುಂಬಾಯಿ ಹೈಕೋರ್ಟಿಗೆ ಮಾಡಿಕೊಂಡ ಮನವಿಯನ್ನು ಜಸ್ಟಿಸ್ ಸ್ಟೇನ್ಲಿ ಮತ್ತು ಶಾಹರವರು ಪರಿಶೀಲಿಸಿ ಆಪಾದಿತನ ಪದವಿ, ಆಪಾದಿತನು ಮಾಡಿದ ತಕ್ಸೀರಿನ ಮಹತ್ವ, ಇಂಥಾ ತಕ್ಸೀರನ್ನು ಕಂಡುಹಿಡಿಯಲು ಪಡಬೇಕಾದ ಕಷ್ಟವನ್ನು ಆಲೋಚಿಸುವದಾದರೆ ಆಪಾದಿತನಿಗೆ ವಿಧಿಸಿದ ಶಿಕ್ಷೆಯು ಹೆಚ್ಚಲ್ಲ ಎಂಬ ಅಭಿಪ್ರಾಯಪಟ್ಟು ಮನವಿಯನ್ನು ತಳ್ಳಿ ಹಾಕಿದರು

~~~~~~

ರಣರಂಗಕ್ಕೆ ಕಳುಹಿಸುವ ಬಗ್ಗೆ ಬೊನಸ್ ಐರಸ್ ದ್ವೀಪದಿಂದ ಒಂದು ಜಹಜಿನಲ್ಲಿ ೧೦೫೦ ಹೇಸರ ಕತ್ತೆಗಳು ಕರಾಚಿ ಪಟ್ಟಣಕ್ಕೆ ಬಂದಿವೆ ಈ ಹಡಗ ೩೯ ದಿನ ಪ್ರಯಾಣ ಮಾಡಿತು ದಾರಿಯಲ್ಲಿ ೧೫ ಹೇಸರಕತ್ತೆಗಳು ಸತ್ತು ಹೋದವು

~~~~

ಗುರದಾಸಪುರ ಡಿಸ್ಟ್ರಿಕ್ಟಿನ ಶ್ರೀ ಗೋವಿಂದಪುರ ಎಂಬಲ್ಲಿ ಬೀದಿ ಗುಡಿಸುವವನು ಕಳವು ಮಾಡಿದ್ದನೆಂದು ಪೋಲಿಸಿನವರು ಹಿಡಿದು ಬಂಧನದಲ್ಲಿಟ್ಟು ಹಿಂಸೆಪಡಿಸಿದ್ದರಿಂದ ಅವನು ಸತ್ತು ಹೋದನು ಶವವನ್ನು ಮೊದಲು ನದಿಯಲ್ಲಿ ತೇಲಿಬಿಟ್ಟರು ಬಳಿಕ ಅದನ್ನು ಗುಣಿಯಲ್ಲಿ ಹಾಕಿದರು ಆದರೆ ಅಬ್ದುಲ್ಲಾ ಎಂಬೊಬ್ಬ ಪೋಲಿಸ್ ಕನ್‌ಸ್ಟೇಬಲನು ಎಪ್ರೂವರಾಗಿ ಕೃತ್ಯ ನಡೆದ ವೃತ್ತಾಂತವನ್ನು ಹೇಳಿದನು ಮಿಯಾನ್ ಬಕ್ಸ್ ಎಂಬ ಹೆಡ್ ಕನ್‌ಸ್ಟೇಬಲನೂ ಅಹಮದ್ ಎಂಬ ಕನ್‌ಸ್ಟೇಬಲನೂ ಈ ಹಿಂಸೆ ನಡಿಸಿದ್ದಾಗಿ ವಿಚಾರಣೆ ನಡಿಯುತ್ತಿದೆ

~~~~~~

ಕಳೆದ ವಾರ ಸಾಯಂಕಾಲ ಕಲ್ಕತ್ತಾ ಪಟ್ಟಣದಲ್ಲಿ ಯಾರೋ ಇಬ್ಬರು ಗುಂಡು ಹೊಡೆದು ಕಲಾಪ ಪಥಕ್ ನೆಂಬ ಪೋಲಿಸಿನವನನ್ನು ಕೊಂದು ಹಾಕಿದರು

~~~~~~

ಮುಂಬಯಿಯಲ್ಲಿ ಹತ್ತೀ ವ್ಯಾಪಾರಗಾರರ ಕಂಪೆನಿಯವರು ಯುದ್ಧದ ಖರ್ಚಿಗೆ ೨೨೫೦೦ ರೂಪಾಯಿ ಚಂದಾ ಕೊಟ್ಟಿರುತ್ತಾರೆ

~~~~~~

ಫ್ರೆಡ್ರಿಕ್ ಜೊನ್ ನೇಪಿಯರ್ ಟೆಸಿಗರ್, ಬೆರನ್ ಚೆಮ್ಸ್‌ಫರ್ಡ ಸಿ ಸಿ ಎಮ್ ಎ ರವರು ಹಿಂದೂಸ್ಥಾನದ ವೈಸರಾಯರಾಗಿ ನೇಮಿಸಲ್ಪಟ್ಟಿರುತ್ತಾರೆ ಇವರ ನೇಮಕವು ಸರ್ವಸಮ್ಮತವಾಗಿರುವದೆಂತ ಶೀಮೆಯ ಮತ್ತು ಹಿಂದೂಸ್ಥಾನದ ಆಯಾ ಪತ್ರಿಕೆಗಳ ಅಭಿಪ್ರಾಯದಿಂದ ತಿಳಿದುಬರುತ್ತದೆ ಚೆಮ್ಸ್‌ಫರ್ಡ ಪ್ರಭುಗಳವರು ಹಿಂದೂಸ್ಥಾನದ ವೈಸರಾಯರಾಗಿ ನೇಮಿಸಲ್ಪಟ್ಟ ದ್ದಾರೆಂಬ ವಾರ್ತೆಯು ತಾ ೧೭ರಲ್ಲಿ ಪ್ರಕಟವಾಗುತ್ತಲೇ ಮುಂಬಾಯಲ್ಲಿ ಆಶ್ಚರ್ಯಕ್ಕೆ ಕಾರಣವಾಯಿತು ಯಾಕಂದರೆ ತಾ. ೧೭ರ ವರೆಗೆ ಚೆಮ್ಸ್‌ಫರ್ಡ ಪ್ರಭುಗಳವರು ಮುಂಬಾಯಲ್ಲಿ ಮುಂಬಾಯಿ ಗವರ್ನರರ ಅತಿಥಿಯಾಗಿದ್ದು ಅಂದೇ ಶೀಮೆಗೆ ಹೊರಟು ಹೋಗಿದ್ದರು, ಅವರು ಹಡಗ ಹತ್ತಿ ಶೀಮೆಗೆ ಹೊರಡುತ್ತಲೇ ಈ ವರ್ತಮಾನವು ಪ್ರಕಟವಾಯಿತು. ೧೯೧೪ನೇ ನವಂಬರ ತಿಂಗಳಲ್ಲಿ ಚೆಮ್ಸ್‌ಫರ್ಡ ಪ್ರಭುಗಳವರು ಹಿಂದುಸ್ಥಾನಕ್ಕೆ ಶೀಮೆಯ ಟೆರಿಟೋರಿಯಲ್ ಸೈನಿಕರೊಡನೆ ಬಂದಿದ್ದ

ರೆಜಿಮೆಂಟಿನ ಕೆಪ್ಟನರಾಗಿದ್ದರು. ಆದರೆ ಯಾರಲ್ಲಿಯೂ ಚೇಮ್ಸ್‌ಫರ್ಡ ಪ್ರಭುಗಳವರು ವೈಸರಾಯರಾಗಿ ನೇಮಿಸಲ್ಪಡುವ ಸಂಭವವಿದೆಂಬ ಊಹೆಯಾದರೂ ಹುಟ್ಟಲಿಲ್ಲ ಚೇಮ್ಸ್‌ಫರ್ಡ ಪ್ರಭುಗಳವರು ಕ್ವೀನ್ಸ್‌ಲೇಂಡಿನ ಮತ್ತು ನ್ಯೂಸೌತ್‌ವೇಲ್ಸಿನ ಗವರ್ನರಾಗಿ ಕೆಲಸ ನೋಡಿದ್ದರು ಆ ಕಾಲದಲ್ಲಿ ಪ್ರಭುಗಳವರು ಆ ದೇಶದವರ ಪ್ರೀತಿ ಗೌರವಕ್ಕೆ ಪಾತ್ರರಾಗಿಯೇ ಇದ್ದರು ಎಂತ ತಿಳಿದುಬರುತ್ತದೆ

ಪೂನೆಯಲ್ಲಿ ಜರಗಿದ ಮದ್ಯಪಾನ ನಿವಾರಣಾ ಸಂಘದ ಸಭೆಯಲ್ಲಿ ಮ ರಾ ತಿಲಕರವರು ಅಧ್ಯಕ್ಷರಾಗಿದ್ದು ಕೊಟ್ಟ ಭಾಷಣದಲ್ಲಿ ಕುಡಿಯುವ ಅಭ್ಯಾಸವು ದುರ್ಗುಣವಾಗಿದೆಂದು ಭಾವಿಸದಿರುವ ಯೂರೋಪ್ ದೇಶಗಳಲ್ಲಿ ಈಗ ಈ ಅಭ್ಯಾಸವನ್ನು ನಿಲ್ಲಿಸಿಬಿಡುವರೆ ಬೇಕಾದ ಪ್ರಯತ್ನಗಳು ನಡಿಯುತ್ತಿರುವಲ್ಲಿ ಈ ಅಭ್ಯಾಸವನ್ನು ಪೂರ್ಣವಾಗಿ ವಿರೋಧಿಸುವ ಶಾಸ್ತ್ರಗಳಿರುವ ನಮ್ಮ ದೇಶದಲ್ಲಿ ಈ ಅಭ್ಯಾಸವನ್ನು ನಿಲ್ಲಿಸಿಬಿಡುವರೆ ಮತ್ತಷ್ಟು ಆಸಕ್ತಿಯಿಂದ ಪ್ರಯತ್ನಪಡಬೇಕಾಗಿದೆ, ಸರಕಾರದವರು ಮದ್ಯ ಸಂಬಂಧವಾದ ಸುಂಕವನ್ನು ಪೂರ್ಣವಾಗಿ ನಿಲ್ಲಿಸುವ ಮನಸ್ಸು ಮಾಡುವ ವರೆಗೆ ಈ ವಿಷಯದಲ್ಲಿ ತಿದ್ದುಪಡಿ ಆದೀತೆಂಬದಾಗಿ ಭಾವಿಸುವದು ವ್ಯರ್ಥವಾಗಿದೆಂದು ತನ್ನ ಅಭಿಪ್ರಾಯವೆಂತ ಹೇಳಿರುವರು

ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳಲ್ಲಿ ಕೆಲವು ಈಗಲೀಗ ತಮ್ಮ ಸಂಸ್ಥಾನಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿಯೂ, ಉಚಿತವಾಗಿಯೂ ಕೊಡ ಪ್ರಾರಂಭಿಸಿರುವದು ನಮ್ಮ ದೇಶದ ಶುಭಸೂಚಕವಾಗಿದೆ ಬರೋಡ ಸಂಸ್ಥಾನವು ಹಾಕಿ ಕೊಟ್ಟ ಈ ಮೇಲ್ಪಂಕ್ತಿಯನ್ನು ಮೈಸೂರು ಸಂಸ್ಥಾನವು ತ್ವರ್ಯದಲ್ಲಿ ಹಿಂಬಾಲಿಸಿದ್ದು ಅತಿ ಶ್ಲಾಘನೀಯವಾಗಿರುವದು ಈಗ ಇಂದೋರು ಸರಕಾರವು ಕೂಡಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡುವರೆ ನಿರ್ಣಯಿಸಿರುವದು. ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಜಾರಿಗೆ ತರುವಾಗ ಅವಶ್ಯವಾಗಿ ಬೇಕಾದ ಶಾಲೆಗಳನ್ನು ಕಟ್ಟಿಸುವರೆಯೂ ಅವನ್ನು ನಡಿಸಿಕೊಂಡು ಬರುವರೆಯೂ ಬೇಕಾದ ಏರ್ಪಾಡುಗಳನ್ನು ಹೊಲ್ಕರ್ ಮಹಾರಾಜರವರ ಸರಕಾರವು ಮಾಡಿರುವದೂ ಮಹಾರಾಜ ಹೋಲ್ಕರವರು ತನ್ನ ರಾಜ್ಯದ ಎಲ್ಲಾ ಜನರಿಗೆ ಮೇಲ್ಜಾತಿಯವರಿಗೆ ಮಾತ್ರವಲ್ಲ, ಕೀಳ್ಜಾತಿಯವರಿಗೂ, ಐಶ್ವರ್ಯವಂತರಿಗೆ ಮಾತ್ರವಲ್ಲ, ಬಡವರಿಗೂ ವಿದ್ಯೆಯು ಅವಶ್ಯ ಎಂಬದನ್ನು ತಿಳಿದು ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡುವರೆ ಯತ್ನಿಸಿದ್ದು ಸ್ತೋತ್ರಾರ್ಹವಾಗಿದೆ. ಈಗ ತಿರುವಂಕೋಡಿನಲ್ಲಿ ಪ್ರಜಾ ಜನರಿಗೆ ಅಪರಿಚಿತರಲ್ಲದ, ಪ್ರಜಾಜನರ ಪ್ರೀತಿಗೆ ಪಾತ್ರರಾದ ದಿವಾನರಿರುವದರಿಂದ ಅಲ್ಲಿಯೂ ಬೇಗನೇ ಕಡ್ಡಾಯ ಮತ್ತು ಉಚಿತ ವಿದ್ಯಾಭ್ಯಾಸ ಕ್ರಮವು ಜಾರಿಗೆ ಬರುವದರಲ್ಲಿ ಅನುಮಾನವಿಲ್ಲ. ಹೈದರಾಬಾದ್ ಸಂಸ್ಥಾನವು ದೊಡ್ಡದಾಗಿದ್ದು ಪ್ರಜಾಜನರ ಸಂಖ್ಯೆಯು ಹೆಚ್ಚಿರುವದರಿಂದ ಆ ಸರಕಾರದವರೂ ಬರೋಡ ಮತ್ತು ಮೈಸೂರು ಸಂಸ್ಥಾನಗಳ ಸರಕಾರಗಳಂತೆಯೇ ಕಡ್ಡಾಯ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದರೆ ಉಳಿದ ಸಣ್ಣ ಸಣ್ಣ ಸಂಸ್ಥಾನಗಳು ಅದೇ ಕ್ರಮವನ್ನು ಹಿಂಬಾಲಿಸುವದರಲ್ಲಿ ಸಂದೇಹವಿಲ್ಲ. ಹೀಗೆ ಕ್ರಮೇಣ ಹಿಂದೂಸ್ಥಾನವೆಲ್ಲಾ ಕಡ್ಡಾಯ ವಿದ್ಯಾಭ್ಯಾಸ ವಿಧಿಯು ಜಾರಿಗೆ ಬಂದು ದೇಶವು ಏಳಿಯನ್ನು ಹೊಂದುವಂತೆ ಆಗುವದು.

ದಕ್ಷಿಣ ಹಿಂದೂಸ್ಥಾನ.

ದರ್ಭಂಗ ಮಹಾರಾಜರವರು ಮದ್ರಾಸಿಗೆ ಚಿತ್ತೈಸಿದ ಸಂದರ್ಭದಲ್ಲಿ ಮದ್ರಾಸಿನ ಹಿಂದೂ ಪಟ್ಟಣಿಗರ ಸಭೆಯು ಕಳೆದ ಬ್ರಹಸ್ಪತಿವಾರ ಕೂಡಿ ಬಂದು ದರ್ಭಂಗ ಮಹಾರಾಜರವರಿಗೆ ಬಹುಮಾನ ಪತ್ರವನ್ನು ಅರ್ಪಿಸಿದರು ಮಹಾರಾಜರವರು ಅದಕ್ಕೆ ಕಾಲೋಚಿತ ಉತ್ತರವನ್ನು ಕೊಟ್ಟರು ತರುವಾಯ ದರ್ಭಂಗ ಮಹಾರಾಜರವರು ಭಕ್ತಿಸಂಪನ್ನರಾದ ಹಿಂದೂ ಮತ್ತು ಉತ್ಸುಕರಾದ ದೇಶಪಕ್ಷಲರು, ಬಹಳ ಐಶ್ವರ್ಯವಂತರಾದ ವರ್ಗದಾರರು ಮತ್ತು ಬಿಹಾರ್ ಮತ್ತು ಒರಿಸ್ಸ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರ ತಾರೆ ದರ್ಭಂಗ ಮಹಾರಾಜರವರು ಮದ್ರಾಸಿನ ಆಯುರ್ವೇದಿಕ್ ಕಾಲೇಜು, ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ಅಸೋಸಿಯೇಶನ್ ಮೊದಲಾದವನ್ನು ಸಂದರ್ಶಿಸಿ ಅಲ್ಲಲ್ಲಿ ಭಾಷಣಗಳನ್ನು ಕೊಟ್ಟು ಬಜವಾಡಕ್ಕೆ ಹೋಗಿರುವರು

ದಕ್ಷಿಣ ಕನ್ನಡ.

ಫರಂಗಿಪೇಟೆ. — ಕಳೆದ ೧೯೧೫ನೇ ಇಸವಿ ಸಪ್ಟಂಬರ ತಿಂಗಳಲ್ಲಿ ಆಗಿನ ಸುಪರ್‌ವ್ಯಾಜರಾಗಿದ್ದು ಈಗ ಉಡುಪಿ ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರಾಗಿರುವ ಮ. ರಾ| ರಾ| ಉ ಮಂಗೇಶರಾಯರವರಿಂದ ಸ್ಥಾಪಿಸಲ್ಪಟ್ಟ ಇಲ್ಲಿಯ ಉಪಾಧ್ಯಾಯರ ಸಂಘದ ತೃತೀಯ ವರ್ಷೋತ್ಸವವು (ಕೂಪೆಂತ್) ಇಗರ್ಜಿಯ ವಠಾರದಲ್ಲಿ ಕಟ್ಟಿದ ಅಂದವಾದ ಚಪ್ಪರದಲ್ಲಿ ಕಳೆದ ತಾ ೯ರಲ್ಲು ನಡಿಸಲ್ಪಟ್ಟಿತು ಸಂಘದ ಸ್ಥಾಪಕರೇ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದಲ್ಲದೆ ಈ ರೇಂಜಿನ ಸಬ್ ಅ ಇನ್ಸ್‌ಪೆಕ್ಟರ ರಾ| ಪಿ ಮಂಗೇಶರಾಯರವರೂ, ಕೊ-ಆಪರೇಟಿವ್ ಸೊಸ್ಯಾಟಿಯ ಪಂಚಾಯಿತ ಮೆಂಬರರು ಮುಂತಾದ ಹಲವು ಗೃಹಸ್ಥರೂ ದಯ ಮಾಡಿದ್ದರು

ವಿದ್ಯಾರ್ಥಿಗಳಿಂದ ದೇವರಾರಾಧನೆ ನಡೆದ ಬಳಿಕ ಸೆಕ್ರೆಟರಿಯವರು ಕಳೆದ ೩ ವರ್ಷಗಳಲ್ಲಿ ಸಂಘವು ನಡಿಸಿದ ಸಭೆಗಳ ವೃತ್ತಾಂತವನ್ನು ಓದಿ ತಿಳಿಸಿದರು ಈ ಸಂಘಕ್ಕೆ ೧೯ ಶಾಲೆಗಳು ಸೇರಿರುತ್ತವೆ ಒಟ್ಟಿಗೆ ೧೯ ಸಭೆಗಳು ನಡದವು ಹೆಚ್ಚಿನ ಸಭೆಗಳಲ್ಲಿ ಉಪಾಧ್ಯಾಯರಲ್ಲದ ಇತರರ ಭಾಷಣಗಳು ನಡೆದಿದ್ದವು ಸಭೆಗಳು ಸಂದರ್ಭಾನುಸಾರ ಬೇರೆ ಬೇರೆ ಶಾಲೆಗಳಲ್ಲಿ ನಡಿಸಲ್ಪಟ್ಟವು ಇವೇ ಮುಂತಾದ ವೃತ್ತಾಂತಗಳು ರಿಪ್ರೋರ್ಟಿನಿಂದ ತೋರಿ ಬಂದವು ರಾ| ಪಿ ಮಂಗೇಶರಾಯರವರು 'ಸಂಘಗಳ ಪ್ರಯೋಜನ ಮತ್ತು ಗ್ರಾಮಗಳಲ್ಲಿ ವಿದ್ಯಾಭಿವೃದ್ಧಿಯ ಉಪಾಯಗಳು ಯಾವವು' ಎಂಬದರ ಕುರಿತಾಗಿಯೂ ಇನ್ನು ಕೆಲವು ಗೃಹಸ್ಥರು 'ಮಿತವ್ಯಯ ಮತ್ತು ಪರಸ್ಪರ ಸಹಾಯ' ಇವುಗಳ ಕುರಿತಾಗಿಯೂ ಭಾಷಣ ಮಾಡಿದ ನಂತರ ಅಧ್ಯಕ್ಷರು ಉಪಾಧ್ಯಾಯರಿಗೆ ತಕ್ಕ ಬುದ್ಧಿವಾದದಿಂದೊಡಗೂಡಿದ ಸುರಸವಾದ ಭಾಷಣ ಕೊಟ್ಟರು. ಚಿಕ್ಕದೆಂಬ ಭಾವನೆಯಿಂದ ಯಾವದೊಂದು ವಸ್ತುವನ್ನು ಮೂಲೆಗೊತ್ತದೆ ಅದನ್ನು ಅಲಂಕರಿಸಿ ವೃದ್ಧಿಗೆ ತರುವಂತೆ ಪ್ರಯತ್ನಿಸುವದೇ ನಿಜವಾದ ಪೌರುಷ ಎಂಬುದೇ ಭಾಷಣದ ಮುಖ್ಯಾಂಶವಾಗಿತ್ತು. ಕಡೆಗೆ ರಾಷ್ಟ್ರಗೀತದೊಂದಿಗೆ ಉತ್ಸವವು ಕೊನೆಗೊಂಡಿತು.

ಮಂಜೇಶ್ವರ: — ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಗೆ ಮೊದಲಿಗಿಂತಲೂ, ಹೆಚ್ಚಿನ ಮಕ್ಕಳಿಗೆ ಕಲಿಸಲು ಅವರ ಮಾತೃಭಾಷೆಯನ್ನರಿತಿರುವ ಮುಖ್ಯ ಉಪಾಧ್ಯಾಯಿನಿಯನ್ನು ಊರವರು ಅಪೇಕ್ಷಿಸಿಕೊಂಡಿದ್ದರೂ, ಇದು ವರೇಗೆ ಆಕಾಂಕ್ಷೆಯು ಈಡೇರಲಿಲ್ಲ. ಈಗ ಇಲ್ಲಿ ಇಷ್ಟು ಕಾಲ ಕೆಲಸ ಮಾಡುತ್ತಿದ್ದ ಮಿಸೆಸ್. ಬಿ ಪಿಲಿಪ್ಸ ಎಂಬ ಉಪಾಧ್ಯಾಯಿನಿಯು ರಜೆಯನ್ನು ಅಪೇಕ್ಷಿಸಿಕೊಂಡಿರುವುದರಿಂದ ಬೋರ್ಡಿನವರು ಮಕ್ಕಳ ಹಿತ ಚಿಂತನೆಯುಳ್ಳ ಸದಸ್ಯರುಗಳು ಇಲ್ಲಿಗೆ ಮುಖ್ಯೋಪಾಧ್ಯಾಯಿನಿಯಾಗಿ ಕೊಂಕಣಿ ಭಾಷೆಯನ್ನರಿಯುವ ಉಪಾಧ್ಯಾಯಿನಿಯನ್ನು ಕಳುಹಿಸಿಕೊಟ್ಟು ನಮ್ಮ ಅಪೇಕ್ಷೆಯನ್ನು ಈಡೇರಿಸಬೇಕಾಗಿ ಸೂಚಿಸುತ್ತೇವೆ.

ಬಂಗ್ರಮಂಜೇಶ್ವರ: — ಈ ಬಂಗ್ರಮಂಜೇಶ್ವರದಲ್ಲಿ ಸ್ಟಾಂಪು ಅಗತ್ಯವುಳ್ಳ ಅಸಾಮಿಗಳಿಗೆ ಇಲ್ಲಿಯ ಸ್ಟಾಂಪು ವೆಂಡರುಗಳ ಕೈಯಲ್ಲಿ ಸ್ಟಾಂಪುಗಳು ಸಿಕ್ಕದೆ ಇರುವದರಿಂದ ಅಗತ್ಯವಾದ ಸ್ಟಾಂಪುಗಳು ಸುಲಭವಾಗಿ ಸಿಕ್ಕುವಂತೆ ಇನ್ನಾದರೂ ಮೇಲುದ್ಯೋಗಸ್ಥರು ತಕ್ಕ ನಿಗಾ ಕೊಡುವರಾಗಿ ನಂಬುತ್ತೇವೆ

ಇಲ್ಲಿ ೫ ಮಾರು ೬೪ ವರ್ಷಗಳಿಂದೀಚೆಗೆ ಇಲ್ಲಿಯ ಸಾಹುಕಾರರೊಬ್ಬರು ಬೇರೆಯವರಿಂದ ಸ್ಥಳವನ್ನು ಧರ್ಮಾರ್ಥವಾಗಿ ಪಡೆದು ಕಟ್ಟಿಸಿದ ಧರ್ಮಶಾಲೆ ಮತ್ತು ನೀರಾಶ್ರಯಗಳ ಬಗ್ಗೆ ಕೆರೆಗಳು ಕೂಡಾ ಕ್ರಮವಾಗಿ ಕೆಲವು ೪-೫ ವರುಷಗಳ ವರೇಗೆ ಧರ್ಮಕ್ಕಾಗಿ ಉಪಯೋಗಿಸಿ ಕಡೆಗೆ ಈ ವರೇಗೂ ಸದರಿ ಸಾಧನೆಗಳು ನಾದುರುಸ್ತಿಯಲ್ಲಿ ಬಿದ್ದಿರುವ ಸಂಗತಿ ಶೋಚನೀಯವಾಗಿರುತ್ತದೆ ಅನೇಕ ಪರ ಊರ ಪ್ರಯಾಣಸ್ಥರು ಈ ಊರಲ್ಲಿ ಬೇರೆ ಯೋಗ್ಯ ಬಿಡಾರ ವಗೈರೆ ಇಲ್ಲದೆ ಪಡುವ ಸಂಕಷ್ಟಕ್ಕೆ ಇದು ಒಳ್ಳೇ ಆಶ್ರಯಸ್ಥಾನವಾಗಿತ್ತು ಆದರೆ ಈಗ ಪಕ್ಕಾಕ್ಕೆ ಸದರಿ ಕಪ್ಪೋಣ ಸಮೇತ ಇಡೀ ಸ್ಥಳವನ್ನು ೨ ವರ್ಷಗಳಿಂದೀಚೆಗೆ ಬಾಡಿಗೆಗೆ ಕೊಟ್ಟಿರುತ್ತಾರಾಗಿ ತಿಳಿಯುತ್ತೇವೆ ಅದಲ್ಲದೆ ಧರ್ಮಾರ್ಥ ಉಪಯೋಗದ ನೀರು ಬಹಳ ಕೊಳಕಾಗಿ ಉಪಯೋಗಕ್ಕೆ ಅನಾರೋಗ್ಯಕರವಾದ್ದರಿಂದ ಇನ್ನಾದರೂ ಈ ಧರ್ಮಸಾಧನಗಳನ್ನು ಧನಿಗಳಾಗಲಿ, ಚಾಲಗೇಣಿ ಮಕ್ಕಳುಗಳಾಗಲಿ ಸ್ವಚ್ಛಗೊಳಿಸಿ ದುರುಸ್ತಿಯಲ್ಲಿಟ್ಟರೆ ಈ ಬೇಸಿಗೆ ಕಾಲದಲ್ಲಿ ಇಲ್ಲಿಯ ಜನಜಾನುವಾರುಗಳಿಗೂ ಅಮದುರಫ್ತಾಗುವ ಪರ ಊರ ಪ್ರಯಾಣಸ್ಥರಿಗೂ ಸಹ ಬಹಳ ದೊಡ್ಡ ಉಪಕಾರವಾಗುತ್ತಿತ್ತು ಅಲ್ಲದೆ ಊರಿನ ಆರೋಗ್ಯಕ್ಕೆ ಕೂಡಾ ಸಹಕಾರಿಯಾಗುವದರಲ್ಲಿ ಸಂದೇಹವೇನೂ ಇರುವುದಿಲ್ಲ

ಮಂಗಳೂರು.

ಮದ್ರಾಸಿಗೆ ಹೋಗಿದ್ದ ಜಿಲ್ಲಾ ಕಲೆಕ್ಟರ ದೊರೆಗಳವರು ಹಿಂತಿರುಗಿ ಒಂದು ತಾ. ೧೮ರಲ್ಲು ಬೆಳ್ತಂಗಡಿ ಕಡೆ ಸರ್ಕೀಟಿಗೆ ಹೋಗಿರುವರು.

ಪಟ್ಟಣದ ಕೆಲವು ಪ್ರಾಂತ್ಯಗಳಲ್ಲಿರುವ ಆವರಣ ಇಲ್ಲದ ಬಾವಿಗಳು ಜನಜಾನುವಾರುಗಳ ಪ್ರಾಣ ನಷ್ಟಕ್ಕೆ ಹೇತುವಾಗಿರುವದರಿಂದ ಸಂಬಂಧಪಟ್ಟ ಅಧಿಕಾರಿಗಳು ಆವರಣ ಇಲ್ಲದ ಬಾವಿಗಳಿಗೆ ಆವರಣ ಹಾಕಿಸುವಂತೆ ಪ್ರಯತ್ನಿಸಬೇಕೆಂಬದಾಗಿ ಅಗ್ಗಾಗ್ಗೆ ವಿಜ್ಞಾಪಿಸಿಕೊಂಡಿರುವೆವು

ವರೂ ಪಟ್ಟಣದಲ್ಲಿ ಇನ್ನೂ ಆವರಣ ಇಲ್ಲದ ಬಾವಿಗಳು ಉಳಿದಿರುವವೆಂದು ತಾ. ೧೭ನೇರಾತ್ರೆ ಅತ್ತಾವರದಲ್ಲಿ ಅಂಬು ಏಂಟ ಹೆಸರಿನ ಒಬ್ಬ ಮಲೆಯಾಳಿಯು ಮೃತಪಟ್ಟ ವಾರ್ತೆಯಿಂದ ಗೊತ್ತಾಗದಿರದು. ಅತ್ತಾವರದಲ್ಲಿರುವ ಮೂಗ ಮತ್ತು ಕುರುಡನಾದ ಈ ಮಲೆಯಾಳಿಯು ರಾತ್ರಿಕಾಲ ಮನೆಯಿಂದ ಮೂತ್ರಶಂಕೆಗೆಂದು ಹೊರಬಂದವನು ಕಾಲುಜಾರಿ ಆವರಣವಿಲ್ಲದ ನೀರಿದ್ದ ಬಾವಿಯಲ್ಲಿ ಬಿದ್ದು ಮೃತಪಟ್ಟಿರುವನೆಂತ ಕೇಳುತ್ತೇವೆ ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಪಟ್ಟಣದಲ್ಲಿರುವ ಆವರಣ ಇಲ್ಲದ ಬಾವಿಗಳಿಗೆ ಆವರಣ ಹಾಕಿಸುವ ಏರ್ಪಾಡನ್ನು ಕೈಕೊಳ್ಳುವರೆಂದು ನಂಬಿರುವೆವು

ತಾ. ೧೬ನೇ ರಾತ್ರಿ ಗಣಪತಿ ದೇವಸ್ಥಾನ ರಸ್ತೆಯಲ್ಲಿ ವಾಸಿಸುವ ಗೌರೀ ಹೆಂಗಸಿನ ಮನೆಯ ಮಾಡಿನ ಹಂಚನ್ನು ಯಾರೋ ಕಳ್ಳರು ತೆಗೆದು ಒಳನುಗ್ಗಿ ಟ್ರಂಕ್ ಎಂಬ ಪೆಟ್ಟಿಗೆಯನ್ನು ಹೊರಗೆ ತಂದು ಅದರಲ್ಲಿದ್ದ ನಗದಿ ರೂ ೩೦೦ನ್ನೂ ಚಿನ್ನದ ಒಂದು ಸರಪಣಿಯನ್ನೂ ತೆಗೆದು, ಪೆಟ್ಟಿಗೆಯನ್ನು ಅದೇ ರಸ್ತೆಯ ಒದಿಯಲ್ಲಿ ಹಾಕಿ ಪರಾರಿಯಾಗಿರುವರು ಪೆಟ್ಟಿಗೆಯು ದೊರಕಿರುತ್ತದೆ ಕಳ್ಳರೂ ಕಳವಾದ ಮಾಲುಗಳೂ ಪತ್ತೆಯಾಗಲಿಲ್ಲ

ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾ। ಬಿ ರಾಮರಾಯರಿಗೆ ಕೊಲ್ಲೂರಿಗೆ ಆದ ವರ್ಗವನ್ನು ರದ್ದುಮಾಡಿ ಅವರನ್ನು ಅಡೂರಿಗೆ ವರ್ಗಮಾಡಿರುತ್ತಾರೆಂತ ತಿಳಿಯುತ್ತೇವೆ

ಬಹುಮಾನಪಟ್ಟ ಮದ್ರಾಸ ಗವರ್ನರ್ ಪೆಂಟಲೆಂಡ್ ಪ್ರಭುಗಳವರು ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘದ ಒಗ್ಗೆ ಅದರ ಸೆಕ್ರೆಟರಿ ರಾ ಕುದ್ಮೂಲ ರಂಗರಾಯರಿಗೆ ರೂ ೧೦೦ ದಾನವಾಗಿ ಕಳುಹಿಸಿದ್ದಾರೆ

ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘದ ಕೋರ್ಟುಗುಡ್ಡೆ ಪಂಚಮ ಶಾಲೆಯಲ್ಲಿ ಚಲೋದಾದ ಟೆನ್ನಿಸು ಮತ್ತು ಬೇಡಮಿಂಟನ್ ನೆಟ್ಸು (ಬಲೆಗಳು) ಕಡಿಮೆ ಕ್ರಯದಲ್ಲಿ ಪಂಚಮ ಹುಡುಗರಿಂದ ಮಾಡಿಸಿ ಕೊಡುತ್ತಾರೆ ಶಾಲಾ ಇನ್ಸ್‌ಪೆಕ್ಟರ್ ಜಿ ಪಿ ಯೇಟ್ಸ್ ದೊರೆಗಳು ಒಂದು ಬೆಡ್ಮಿಂಟನ್ ನೆಟ್ಟು ಮತ್ತು ಒಂದು ಟೆನ್ನಿಸು ನೆಟ್ಟು ಬೆಂಗಳೂರಿನಲ್ಲಿ ಉಪಯೋಗಿಸುವುದಕ್ಕೆ ಕ್ರಯಕ್ಕೆ ಪಡಕೊಂಡಿರುವರು.

ಡಾಕ್ಟರ್ ಕೆ ವಿಟ್ಟಲರಾಯರವರು ಜೆಪ್ಪು ಮೋರ್ಗನ್ ದೊರೆಗಳವರ ಒಂಗ್ಲೆಯ ಸಮೀಪ ಒಡವರ ಒಗ್ಗೆ ಒಂದು ಧರ್ಮ ಚಿಕಿತ್ಸಾಲಯವನ್ನು ತೆರೆದಿರುವರು ಮುನ್ಸಿಪಾಲ್ ಆಸ್ಪತ್ರೆಯು ದೂರವಾಗಿರುವ ಆ ಪ್ರಾಂತ್ಯದ ಒಡವರ ಒಗ್ಗೆ ಡಾಕ್ಟರ್ ಕೆ ವಿಟ್ಟಲರಾಯರವರು ಕೈಕೊಂಡ ಈ ಧರ್ಮಕಾರ್ಯವು ಸ್ತುತ್ಯವಾಗಿರುವದು

ಇಲ್ಲಿಯ ಬಾಸೆಲ್ ಮಿಶ್ಯನ್ ನೇಯುವ ಕಾರ್ಖಾನೆಯಲ್ಲಿ ಹೆಡ್‌ಕ್ಲಾರ್ಕನಾಗಿದ್ದ ಜೋರ್ಜ್ ಹೆರ್ಬರ್ಟನ ಸದರಿ ಕಾರ್ಖಾನೆಯ ಹಣವನ್ನು ದುರುಪಯೋಗ ಮಾಡಿದ್ದನೆಂದು ಆಪಾದಿಸಲ್ಪಟ್ಟದ್ದರಿಂದ ಡ್ಯೂಪಿಟಿ ಕಲೆಕ್ಟರವರು ಆಪಾದಿತನಿಗೆ ೬ ತಿಂಗಳ ಸಜಾ ಮತ್ತು ರೂ ೧೦೦೦ ಜುಲುಮಾನೆ ವಿಧಿಸಿದರೆಂದೂ ಆಪಾದಿತನು ಅಪೀಲು ಮಾಡಿಕೊಳ್ಳಲಿಕ್ಕಿರುವದರಿಂದ ಜಾಮೀನಿನ ಮೇಲೆ ಬಿಟ್ಟಿರುತ್ತಾರೆಂದೂ ತಿಳಿಸಿತ್ತಷ್ಟೆ. ತಾ ೧೭ರಲ್ಲು ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಕೋರ್ಟಿನಲ್ಲಿ ಅಪೀಲು ತನಿಕೆ ನಡೆದು ೧೯ರಲ್ಲು ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರವರು ಕೆಳ ಕೋರ್ಟಿನ ತೀರ್ಮಾನವನ್ನೇ ಕಾಯಂ ಮಾಡಿರುತ್ತಾರೆ.

ಇಲ್ಲಿಯ I ಗ್ರೇಡ್ ಪ್ಲೀಡರರಾಗಿದ್ದ ಮ॥ ರಾ॥ ಹಳಿಗೇರಿ ಕೃಷ್ಣರಾಯರವರು ಇದೇ ತಿಂಗಳ ೧೮ನೇ ಬೆಳಿಗ್ಗೆ ಗಂಟೆ ೫॥ಕ್ಕೆ ತನ್ನ ೭೮ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈಚೆಗೆ ಎರಡು ಮೂರು ತಿಂಗಳುಗಳಿಂದ ಇವರು ಅಸ್ವಸ್ಥದಲ್ಲಿದ್ದರೂ ಉತ್ತರಾಯಣದಲ್ಲಿಯೇ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಬೇಕೆಂಬ ಕಾಂಕ್ಷೆಯು ಕೃಷ್ಣರಾಯರಲ್ಲಿ ವಿಶೇಷವಾಗಿತ್ತು ಹಿಂದೆ ಮಹಾಪುರುಷರು ಇಂಥಾ ಕಾಂಕ್ಷೆಗಳನ್ನು ಪೂರೈಸಿದಂತೆಯೇ ಕೃಷ್ಣರಾಯರು ಸಹ ಪೂರೈಸಲು ಸಾಧ್ಯವಾಯಿತು ಗತಿಸಿದ ಹಳಿಗೇರಿ ಕೃಷ್ಣರಾಯರು ಅದ್ವೈತರು. ಅಧ್ಯಾತ್ಮ ವಿಚಾರ ಎಂಬ ಗ್ರಂಥದ ಕರ್ತರು ಕಂಡದನ್ನು ಕಂಡ ಹಾಗೆಯೇ ಹೇಳುವ ಗುಣವು ಇವರಲ್ಲಿ ತುಂಬಿ ತುಳುಕಾಡುತ್ತಿತ್ತೆಂತ ಧಾರಾಳವಾಗಿ ಹೇಳಬಹುದು. ಉಡುಪಿ ಅಷ್ಟಮಠಗಳ ಮತ್ತು ಸುಬ್ರಮಣ್ಯ ದೇವಸ್ಥಾನದ ಹಲವು ವ್ಯಾಜ್ಯಗಳನ್ನು ಇವರು ವ್ಯವಹರಿಸಿ ಮಠ ದೇವಸ್ಥಾನಗಳ ಗುಣಕ್ಕಾಗಿಯೇ ತೀರಿಸಿ ಕೊಟ್ಟ ಖ್ಯಾತಿಯನ್ನು ಪಡೆದಿದ್ದರು. I ಗ್ರೇಡ್ ಪ್ಲೀಡರ್‌ರಾಗಿದ್ದರೂ ಉಡುಪಿ ಅಷ್ಟಮಠಗಳ ಒಂದು ದಾವೆಯನ್ನು ಹೈಕೋರ್ಟಿನಲ್ಲಿ ಕೂಡಾ ವ್ಯವಹರಿಸುವ ಸಂದರ್ಭವು ಅವರಿಗೆ ಸಿಕ್ಕಿದ್ದು ದಾವೆಗಳನ್ನು ವ್ಯವಹರಿಸುವದರಲ್ಲಿ ಅವರಿಗಿದ್ದ ಸಾಮರ್ಥ್ಯವನ್ನೂ ವಾಕ್ಪಟುತ್ವವನ್ನೂ ವ್ಯಕ್ತಗೊಳಿಸುತ್ತದೆಂಬುದರಲ್ಲಿ ಸಂದೇಹವಿಲ್ಲ ಮೃತರ ಒಬ್ಬನೇ ಮಗನಾಗಿರುವ ರಾ ಎಚ್ ವ್ಯಾಸರಾಯರು ಬೆಂಗಳೂರ ಸರ್ವೆ ಡಿಪಾರ್ಟಮೆಂಟಿನಲ್ಲಿ ಅಸಿಸ್ಟಾಂಟ ಕಮಿಷನರಾಗಿರುವರು. ತಂದೆಯ ಮರಣಕ್ಕಾಗಿ ದುಃಖಿಸುವ ಅವರೊಡನೆ ನಾವೂ ಸಹಸಂತಾಪಪಡುವೆವು

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು

ಸೇಂದಿ ತೆಗೆಯುವ ತೆಂಗಿನ ಮರಗಳಿಗೆ ಮೊಹರು ಹಾಕುವ ಒಗ್ಗೆ ಫೀಸು ತಕ್ಕೊಳ್ಳುವ ಕ್ರಮವು ಇಲ್ಲಿಯ ಅಬ್ಕಾರಿ ಇಲಾಖೆಯಲ್ಲಿ ಜಾರಿಯಲ್ಲಿದೆಯಷ್ಟೆ ಆದರೆ ಈ ಕ್ರಮವು ಮುಂಬಾಯಿ ಸಂಸ್ಥಾನದಲ್ಲಿ ಜಾರಿಯಲ್ಲಿರುವದಿಲ್ಲ ಈ ಕ್ರಮವನ್ನು ಮುಂಬಾಯಿ ಸಂಸ್ಥಾನದಲ್ಲಿಯೂ ಜಾರಿಗೆ ತರಬೇಕೆಂಬ ಉದ್ದೇಶದಿಂದ ಇಲ್ಲಿಯ ಮಾಹಿತಿಯನ್ನು ಪಡೆಯುವದಕ್ಕೆ ಗೋವಾ ಸರಹದ್ದಿನ ಅಸಿಸ್ಟಾಂಟ ಕಲೆಕ್ಟರ ಮಿ। ಆರ್ ಎಲ್ ಸಿಂಕ್ಲರ ದೊರೆಗಳವರು ಕಳೆದವಾರ ಇಲ್ಲಿಗೆ ಬಂದಿದ್ದು ತಕ್ಕ ಮಾಹಿತಿಯನ್ನು ಪಡೆದು ಮಲಬಾರಿನ ಕಡೆ ಹೋಗಿರುವರು ಎಂತ ತಿಳಿಯುತ್ತೇವೆ

ಶಾಲಾ ಇನ್ಸ್‌ಪೆಕ್ಟರ್ ಮಿ। ಯೇಟ್ಸ್ ದೊರೆಗಳವರು ಕಳೆದ ವಾರದಿಂದ ಇಲ್ಲಿಯ ಆಯಾ ಶಾಲೆಗಳನ್ನು ಸಂದರ್ಶಿಸುತ್ತಿರುವರಲ್ಲದೆ ದಕ್ಷಿಣಕನ್ನಡಾ ಜಿಲ್ಲೆಯ ಪ್ರಾಥಮಿಕ ಶಾಲೆಗಳಿಗೆ ಗ್ರಾಂಟು ಕೊಡುವ ಸಂಬಂಧವಾದ ಕಷ್ಟಗಳನ್ನು ಜಿಲ್ಲೆಯ ಶಾಲಾ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರೊಂದಿಗೆ ನಡೆಸಿರುವರು.

ಸ್ಟೂಡೆಂಟ್ಸ್ ಬ್ರದರ್ ಹೂಡ್ ಎಂಬ ವಿದ್ಯಾರ್ಥಿ ಭ್ರಾತೃ ಸಂಘದ ತೃತೀಯ ವರ್ಷೋತ್ಸವವು ಗವರ್ನಮೆಂಟ್ ಕಾಲೇಜು ಪ್ರಿನ್ಸಿಪಾಲರಾದ ಮಿ। ಮೆಲಿಮ್ ಎಮ್ ಎ ದೊರೆಗಳವರ ಅಧ್ಯಕ್ಷತೆಯಲ್ಲಿ ತಾ. ೧೫ನೇ ಶನಿವಾರ ಸಾಂಗವಾಗಿ ನೆರವೇರಿತು. ಬೆಳಿಗ್ಗೆ ಈ ಸಂಘದ ಮೆಂಬರರ ಸೋಶ್ಯಲ್ ಗ್ಯಾದರಿಂಗ್ ಕೂಡಿತ್ತು. ಮಧ್ಯಾನ್ಹ ಕಾರ್ಯನಿರ್ವಾಹಕ ಸಭೆಯು ಕೂಡಿ ಮುಂದಿನ ವರ್ಷಕ್ಕೆ ಬೇಕಾದ ಹೊಸ ಕಾರ್ಯನಿರ್ವಾಹಕ ಮೆಂಬರರನ್ನು ಆರಿಸುವ ಕೆಲಸವು ನಡೆಯಿತು. ಸಾಯಂಕಾಲ ಕೂಡಿದ ಸಭೆಯಲ್ಲಿ ಸೆಕ್ರಟರಿಯವರು ಓದಿದ ವರದಿಯಿಂದ ಕಳೆದ ವರ್ಷ ಸಂಘದ ಕೆಲಸವು ಅತಿ ಜಾಗರೂಕತೆಯಿಂದಲೂ, ಸೊಗಸಾಗಿಯೂ ನಡೆದಿರುವದೆಂತ ತಿಳಿದುಬರುತ್ತದೆ. ಅಧ್ಯಕ್ಷರವರ ಭಾಷಣವಾದ ನಂತರ ಸಂಘದ ಮೆಂಬರರಲ್ಲೊಬ್ಬರಾದ ರಾ. ಬಿ. ಎನ್. ಸಲೆತೂರರವರಿಂದಲೇ ತಯಾರಿಸಲ್ಪಟ್ಟ ಸಂಜೋಗತ ಎಂಬ ನಾಟಕವನ್ನು ಸಂಘದ ಮೆಂಬರರು ನಟಿಸಿ ಕೂಡಿದ ಸಭ್ಯ ಗೃಹಸ್ಥರನ್ನೂ, ಕುಲಸ್ತ್ರೀಯರನ್ನೂ ಸಂತೋಷಗೊಳಿಸಿದರು.

ರಾ. ಟಿ. ನರಸಿಂಗರಮಣ ಐಯ್ಯಂಗಾರ್, ಜನರಲ್ ಮರ್ಚೆಂಟ್, ಬೆಂಗಳೂರು ಸಿಟಿ—ಇವರಿಂದ ಕಳುಹಿಸಲ್ಪಟ್ಟ ೧೯೧೬ನೇ ಇಸವಿಯ ಅಂದವಾದ ಕೆಲಂಡರನ್ನು ಆತ್ಯಾದರದಿಂದ ಸ್ವೀಕರಿಸಿರುವೆವು.

ಕಾಸರಗೋಡ ತಾಲೂಕಿನ ೧೩೨೫ನೇ ಫಸ್ಲಿಯ ವರುಷಾವಧಿ ಜಮಾಬಂದಿಯು ಇದೇ ೧೯೧೬ನೇ ಇಸವಿಯ ಫೆಬ್ರುವರಿ ತಾ. ೧೫ರಿಂದ ೧೯ ಮಂಜೇಶ್ವರ, ತಾ. ೨೦ರಿಂದ ೨೭ ಕಾಸರಗೋಡು; ತಾ. ೨೯ರಿಂದ ಮಾರ್ಚಿ ೮ರ ವರೆಗ ಹೊಸದುರ್ಗ ಮಾರ್ಚಿ ತಾ ೧೦ ರಿಂದ ೧೫ ಚರ್ವತ್ತೂರು ಮೊಕ್ಕಾಂಗಳಲ್ಲಿ ಪುತ್ತೂರು ಡಿವಿಜನಲ ಆಫೀಸರವರಿಂದಲೂ ಕುಂದಾಪುರ ತಾಲೂಕು ಬಾಬತು ಜನವರಿ ೧೧ರಿಂದ ೧೩ ಶಂಕರನಾರಾಯಣ; ತಾ ೨೦ರಿಂದ ೨೨ ವಂಡ್ಸೆ, ೨೫ರಿಂದ ೨೭ ಬೈಂದೂರು, ತಾ ೩೧ರಿಂದ ಫೆಬ್ರುವರಿ ೨ರ ವರೆಗೆ ಕುಂದಾಪುರದಲ್ಲಿಯೂ, ಕಾರ್ಕಳ ತಾಲೂಕು ಬಾಬತು ಫೆಬ್ರುವರಿ ತಾ. ೧೧ರಿಂದ ೧೪ ಕಾರ್ಕಳ, ತಾ ೧೭ರಿಂದ ೧೯ ಮೂಡಬಿದ್ರಿ; ತಾ ೨೨ರಿಂದ ೨೪ ವೇಣೂರು; ತಾ ೨೮ರಿಂದ ಮಾರ್ಚ ೩ರ ವರೆಗೆ ಕುಂದಾಪುರ ಡಿವಿಜನಲ ಆಫೀಸರರಿಂದಲೂ ಮಂಗಳೂರು ತಾಲೂಕು ಬಾಬತು ಜನವರಿ ತಾ ೨೪ರಿಂದ ೩೧ ಬಂಟ್ವಾಳ, ಫೆಬ್ರುವರಿ ತಾ. ೧೦ರಿಂದ, ೧೫ ಮುಲ್ಕಿ; ತಾ ೧೮ರಿಂದ ೨೨ ಬಜಪ್ಪೆ, ತಾ. ೨೬ರಿಂದ ಮಾರ್ಚಿ ೨ರ ವರೆಗೆ ಮಂಗಳೂರಲ್ಲಿ ಮಂಗಳೂರು ಡಿವಿಜನಲ ಆಫೀಸರವರಿಂದಲೂ ನಡಿಸಲ್ಪಡುವದೆಂತ ಪ್ರಕಟವಾಗಿದೆ

ಜೀನಸು ಧಾರಣೆ.

ಮುಸ್ಕಿ ಹೊಸ ಅಕ್ಕಿ .	5—4—0	5—12—0
ಗಾಡಿ ರಾಶಿ ಹೊಸ ,, .	4—9—0	4—11—0
ಗುಡ್ಡು ,, ,,	5—0—0	5—5—0
ಅವ್ವಲ್ ಬೆಳ್ತಿಗೆ ,, .	6—0—0	6—4—0
ಗುಡ್ಡು ಬೆಳ್ತಿಗೆ ,, .	5—8—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	10—4—0	10—0—0
ಗೋದಿ ಗೋಣಿ ೧ರ .	13—8—0	14—0—0
ಹುರುಳಿ ಗೋಣಿ ೧ರ	6—0—0	7—0—0
ಕಡಲೆ ಗೋಣಿ ೧ರ ಬೊಂಬ್ಯ	9—8—0	10—0—0
ತೊಗರಿ ಗೋಣಿ ೧ರ ...	12—0—0	13—0—0
ತೊಗರಿ ಬೇಳೆ ಗೋಣಿ ೧ರ.	12—8—0	16—8—0
ಉದ್ದು ಗೋಣಿ ೧ರ	11—0—0	10—12—0
ಊರುಬೆಲ ಖಂಡಿ ೧ರ ...	... ...	49—8—0
ಉಪ್ಪು ಗೋಣಿ ೧ರ . .	3—4—0	3—6—0
ಕೊಬ್ರಿ ಖಂಡಿ ೧ರ .	95—0—0	105—8—0
ಬೆಲ್ಲಕಿಂಡಿ ಖಂಡಿ ೧ರ .	24—8—0	25—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	30—0—0	35—0—0
ಕೊಬ್ರಿ ಎಣ್ಣೆ ಮುಡಿ ೧ರ. .	6—10—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ) . .		5—0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—9—0	5—0—6
ಮೋರಿಸ್ ಸಕ್ಕರೆ ಮುಡಿ ೧ರ	4—12—0	4—13—0
ಕಾಫಿ ಖಂಡಿ ೧ರ . .	240—0—0	252—0—0
ಹೊಸಬೀಗೋಟು ಖಂಡಿ೧ರ.	94—0—0	98—0—0
ಹೊಸ ಸೇರುಬೀಜ ಮುಡಿ ೧ರ. . . .		2—15—0
ಕಬ್ಬಿಣ ಖಂಡಿ ೧ರ .	60—0—0	70—0—0
ತಾಂಬ್ರ ತಗಡು ಮುಡಿ ೧ರ.	20—0—0	22—8—0
ತಾಂಬ್ರ ಪಾತ್ರೆಗಳು ಮುಡಿ ೧ರ.	22—0—0	24—0—0
ಚೀನಾ ಬೆಳ್ಳಿ ಸೇರು ೧ರ.		18—12—0
ಪಚ್ಚೆ ಹೆಸರು ಮುಡಿ ೧ರ.	5—14—0	6—0—0

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಆಗತ್ಯವುಳ್ಳ

1916ನೇ ವರುಷದ

ಪ್ರೋಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸಲ್ಪಡುವ ಪ್ರೋಸೆಸ್-ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡಲ್ಪಡುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾಮು, ಬಾಡಿಗೆ ಚೀಟು, ರಿಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ಮೋಟಬಲಿ ಪಟ್ಟಿ, ಟಪ್ಪಾಲುಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು—ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೋಕೇಟು ಬೂಕು.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8.

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ಖಂಡಿತ ತಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕುಟುಂಬ ಸಂಜೀವಿನೀ.

ಛಳಿಕಾಲದಲ್ಲಿ ತಲೆದೋರುವ ಶೀತ, ಕೆಮ್ಮು, ನೆಗಡಿ, ಶೀತಭೇದಿ, ವಾತರೋಗಗಳಿಗೆ ಯುಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ, ಮೈಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆ ನೋವು, ತಲೆಸಿಡಿತ, ದುರ್ವ್ಯಾಧಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯುಕಲಿಪ್ಟಸ್ ತೈಲವು ಸಿದ್ಧೌಷಧಿ ಎಂಬದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಒದಿರುತ್ತವೆ. ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?

ಔನ್ಸು ಸೀಸೆ 1ಕ್ಕೆ 5 ಆಣೆ. ವಿ. ಪಿ. ಚಾರ್ಜು ಬೇರೆ. ಡಜನ್ ಸೀಸೆಗಳಿಗೆ ವಿ. ಪಿ ಸಹಿತ ರೂ. 3—10—0.

☞ ಕಮ್ಮಿ ದರದ ಕಳ್ಳ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ। **ವೆಂಕಟಕೃಷ್ಣ ಆಚಾರಿ,** ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ। ವೈ. ಕೊರಗಪ್ಪ ಮುಂಬಾಯಿ—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೋಳೆ ತಾಗಿಕೊಳ್ಳುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ. ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ. ದಯಮಾಡಿ 3 ಕರಡಿಗೆಗಳನ್ನು ವಿ. ಪಿ. ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ. ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇರೆ

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲು ಬೇಡ. ಯಾಕೆಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಶ್ರೀ ಮಾಂಗಿರೀಶ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳೂ, ಉಳುಕು ಮುಂತಾದವುಗಳಿಗೆ ತಿಕ್ಕುವದರಿಂದ ಶೀಘ್ರವಾಗಿ ಗುಣವಾಗುವದು. ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ನಳಿಗೆಗಳು ಬಕ್ಷೀಸು. ಸೆಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0. ವಿ. ಪಿ. ಮಾಫಿ.

ವಿಸ್ಫೋಟಿಕ ಮಾತ್ರೆ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟ್ಲೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಬೇನೆಗೆ ಸಂಜೀವನದಂತಿರುವದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು.

ಸ್ವರಸುಖ—ಕೆಮ್ಮು, ಗಂಟಲನೋವು, ಧ್ವನಿ ಬದಲಾಗುವದು, ಅಸ್ತ್ರ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಲ 1ಕ್ಕೆ ಕ್ರಯ 0—1—6 ಸೆಂಪಲ್ 6ಕ್ಕೆ.

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ. 0—2—0.

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ನಿಶ್ಶೇಷವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ 0—4—0. ಒಂದು ಡಜನ್ ಡಬ್ಬಿಗಳಿಗೆ ರೂ. 2—8—0 ವಿ. ಪಿ. ಬೇರೆ.

M. D. R. & Sons.
Srimangireesh Aushadalaya,
UDIPI S. C.

ಓದಿನೋಡಿ! ಬೆಲೆ ಸುಲಭ!! ಅಂದವಾದ ಮುದ್ರಣ!

ದಪ್ಪ ಕಾಗದ, ವೇದಮಂತ್ರಗಳಿಗೆ ಸ್ವರಹಾಕಿದ ಕನ್ನಡಾಕ್ಷರ.

ಆಹ್ನಿಕಮಂಜರಿ.

ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕವು.

ಇದರಲ್ಲಿ ಮಂಗಲಾಚರಣ, ಗುರುಸ್ತುತಿ, ಪ್ರಾತಸ್ಮರಣ, ಭಸ್ಮಧಾರಣ ವಿಧಿ, ಆಚಮನ ವಿಧಿ, ಪ್ರಾತಸ್ಸಂಧ್ಯಾ, ಅಗ್ನಿಕಾರ್ಯ, ಮಧ್ಯಾಹ್ನ ಸಂಧ್ಯಾ, ಬ್ರಹ್ಮಯಜ್ಞ, ಪಂಚಾಯತನ, (ದೇವ) ಪೂಜಾ ಪಂಚಾಯತನ ದೇವತಾ ಸ್ಥಾಪನಚಕ್ರ, ಪೂಜಾವಿಧಿ, ಅಗ್ನಿಮೀಳೇ ಸೂಕ್ತ, ಪಂಚಾಮೃತ ಸ್ನಾನ, ರುದ್ರ, ಚಮೆ, ಪುರುಷಸೂಕ್ತ, ಶ್ರೀಸೂಕ್ತ, ವಿಷ್ಣುಸೂಕ್ತ, ಅಹಂರುದ್ರಾಸೂಕ್ತ (ದೇವಿಸೂಕ್ತ) ಪವಮಾನ, ದ್ವಾದಶ ನಾಮಗಳು, (೫ ದೇವರದ್ದು), ದ್ವಾದಶನಾಮಸ್ತೋತ್ರ, ಲಘುನ್ಯಾಸ, ೫ ಅಷ್ಟೋತ್ತರಗಳು, ದೇವೀವೇದ ಪಾದಸ್ತವ, ವಿಷ್ಣುವೇದ ಪಾದಸ್ತವ ಇನ್ನೂ ಅನೇಕ ಸ್ತೋತ್ರಗಳೂ ಅಡಗಿವೆ. ಅಲ್ಲಲ್ಲಿ ಟಿಪ್ಪಣಿ ಕೊಟ್ಟು, ಅಂದವಾದ ಮುದ್ರಣದಿಂದ ಸುಂದರವಾದ ಬುಕ್ಕು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಅತ್ಯಗತ್ಯ ಬೇಕಾದುದು.

ಇನ್ನು ಹೆಚ್ಚಿನ ವಿಷಯ ಪತ್ರದ್ವಾರಾ ತಿಳಿಯಬಹುದು. ವ್ಯಾಪಾರಸ್ಥರಿಗೆ ಯೋಗ್ಯವಾದ ಕಮಿಶನ್ ಕೊಡಲಾಗುವುದು.

ಬೆಲೆ: ಪುಸ್ತಕ 1ಕ್ಕೆ 1—0—0, ಪೋಸ್ಟೇಜು ಬೇರೆ.

ವಿಳಾಸ:— ಎಚ್. ವಿ. ಕೃಷ್ಣಭಟ್ಟ,
ವೇದಪಾಠಶಾಲಾ, ತೀರ್ಥಮುಕ್ತಾಪುರೀ,
ಆಗುಂಬೆ ಪೋಸ್ಟು, ತೀರ್ಥಹಳ್ಳಿ ತಾಲೂಕು.

ಕನ್ನಡ ಕಥೆ ಪುಸ್ತಕಗಳು.

[illegible]	1	12	0	ನಿರ್ಮಲೆ	0	12	0
ಅರೇಬ್ಬಿಯನ್ ನ್ಯಾಟ್ಸ್	2	4	0	ಸಚಿತ್ರ ಭಟ್ಟಿ ವಿಕ್ರಮಾದಿತ್ಯ			
ಶವಹಮಾರಧನ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂಜರಿ.	1	4	0
ಕೃಷ್ಣಾ ಕುಮಾರಿ	0	10	0	ಪತಿವ್ರತಾ ಮಹಾತ್ಮೆ	0	6	0
ಪರಿಮಳಾ	0	12	0	ಹರಿಶ್ಚಂದ್ರನ ಕಥೆ.	0	4	0
ಮಹಾರಾಣಿ ಗೃಹಶೀಲೆ	0	3	0	ನಳದಮಯಂತಿಯ ಕಥೆ	0	6	0
ದುರ್ಗಾದಾಸ	0	12	0	ಶ್ರೀ ಕೃಷ್ಣಬೋಧಾಮೃತ.	0	8	0
ಚಂಚಲ ಕುಮಾರಿ	0	6	0	ಹಾಸ್ಯಸುಂದರಿ	0	8	0
ಪ್ರಬಂಧ ಮುಕ್ತಾವಳಿ	0	12	0	ಸೋಮಸುಂದರ	0	10	0
ಚಂದ್ರಮತಿ	0	6	0	ಮೂಷಕಾಸುರ ವಿಜಯ	0	1	6
ದಯಾಮತಿ	0	2	0	ಹಾಸ್ಯ ಸಂಜೀವಿನಿ.	0	4	0
ಕಳಾವತಿ	0	2	0	ನಿರುಪಮಾ.	0	12	0
ಸಂಗೀತ ಸಮಯಸಾರ	1	4	0	ಭಾನುಮತಿ.	0	2	0
ಬಾಲಕಾಗೀತ ಮುಕ್ತಾಕಲಾಪ	0	10	0	ಸಂತಾಪಕ.	0	4	0
ವಿಷವೃಕ್ಷ	1	8	0	ವಸಮತಿ	0	2	0
ದುರ್ಗೇಶನಂದಿನಿ	1	4	0	ಪದ್ಮಿನಿ	0	2	0
ಶ್ರೀಮಲೆಯಾಳ	0	8	0	ತಾರಾಸುಂದರಿ	0	8	0
ಶೇಷ್ಠಿನಾರಾಯಣರಾವ್	0	2	0	ಅನಂಗಸುಂದರಿ	0	8	0
ಕುಮುದಿನಿ	0	6	0	ಸತ್ಯಸಂಜೀವಿನಿ	0	6	0
ಸಾಧ್ವಿಗುಣಮಂಜರಿ	0	5	0	ಮಹಾಬಧಿರ ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ	0	4	0	ಅಸಹಾಯ ಶೂರಪ್ರಹಸನ	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	2	0	0	ಚಂದ್ರಕಳಾ	0	9	0
ರೋಹಿಣಿ (ಸಾರಸ್ವತಮಂಡಳ)	1	0	0	ಸತಾಪಮೋಹಿನಿ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿತ್ನಿ, ದಶಾಂಗ, ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಬಹುದು

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ, ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಯಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಬ್ಬಿಗೆ ಕ್ರಯ: 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರುಳುಕಣ್ಣು, ತಾಚಮಿಂದು ಗುಣ.

ಕ್ರಯ: ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0

ಕೊಳೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ಕೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸುಗಂಧನಾಸಿಕಾ ಚೂರ್ಣ:—ಈ ನಾಸಿಕಾ ಚೂರ್ಣವು ಅತ್ಯುತ್ತಮವಾದ ಸುಗಂಧಿ ವಸ್ತುಗಳಿಂದ ತಯಾರಿಸಿದ್ದು. ಇದನ್ನು ಸಾಧಾರಣ ನಸ್ಯದೊಡನೇ ಕೊಂಚ ಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮೂಲಕವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು. ಇದು ತಲೆನೋವು, ಪಿತ್ತದಿಂದ ತಲೆ ತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವೃತ್ತಿ ಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವದು. ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1ಕ್ಕೆ 4 ಆಣೆ ತಪಾಲ್ ಚಾರ್ಜು 1 ಸೀಸೆಯಿಂದ 3 ಸೀಸೆ ವರಿಗೆ 3 ಆಣೆ, 4 ಸೀಸೆಯಿಂದ 6 ಸೀಸೆವರಿಗೆ 5 ಆಣೆ, 7 ಸೀಸೆಯಿಂದ 12 ಸೀಸೆ ವರಿಗೆ 7 ಆಣೆ

ಅಶೋಕ ಘೃತ:—ಸ್ತ್ರೀಗಳು ಕ್ರಮತಪ್ಪಿ ಬಹಿಷ್ಟೆಯಾಗೋಣ, ಮುಟ್ಟಾದ ಕಾಲದಲ್ಲಿ ಬಹು ನೋವುಂಟಾಗುವಿಕೆ, ಮುಟ್ಟು ಕಳೆಯುವ ವರೆಗೂ ತೊಡೆಯ ಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವುದು, ಹೊತ್ತು ಗೊತ್ತಿಲ್ಲದೆ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು, ಮಕ್ಕಳಿಲ್ಲದೆ ಬಹುಕಾಲ ಬಂಜೆಯಾಗಿರುವುದು, ವಾಡಿಕೆಯಾಗಿ ಗರ್ಭಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾ ತರದ ವ್ಯಾಧಿಗಳಿಗೂ ಅತ್ಯುತ್ತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕ ಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು. ಸೀಸೆ 1ಕ್ಕೆ ರೂ 1, 2 ಸೀಸೆವರಿಗೆ ವಿ. ಪಿ. ಚಾರ್ಜು 5 ಆಣೆ.

ಬೃಹತ್ ಚಂದ್ರೋದಯ ಮಕರಧ್ವಜ:—ನರಗಳ ದುರ್ಬಲತೆಗೂ, ಸತ್ವಗುಂದಿರುವುದಕ್ಕೂ, ಪುರುಷೇಂದ್ರಿಯವು ಕ್ಷೀಣಿಸಿರುವುದಕ್ಕೂ, ಜ್ಞಾಪಕ ಶಕ್ತಿಯು ಕುಂದಿ ಹೋಗಿರುವುದಕ್ಕೂ ಮತ್ತು ಸ್ವಪ್ನಸ್ಖಲನಗಳಿಗೂ ಇದು ಅಮೂಲ್ಯವಾದ ಸಂಜೀವನವು. "ಮರಿಸ್ತು ಕುಡಿಯುತ್ತಲೆ ಎದ್ದು ಕುಳಿತುಕೊಂಡರು" ಎಂಬುದು ಮತ್ತಾವ ಔಷಧಿಗೆ ಸಲ್ಲುವದಾದರೂ ನಮ್ಮ ಬೃಹತ್ ಚಂದ್ರೋದಯ ಮಕರಧ್ವಜಕ್ಕೆ ಮಾತ್ರ ಸಲ್ಲದು. ಇಂದ್ರಜಾಲ ವಿದ್ಯೆಯೋ ಎಂಬಂತೆ ಇವನ್ನು ಸೇವನೆಮಾಡುತ್ತ ಬಂದಹಾಗೆಲ್ಲ ದಿನದಿನಕ್ಕೂ ವ್ಯಾಧಿಯ ನಿಗ್ರಹ ಪಟುತ್ವವನ್ನು ಕೊಡುವ ವಿಷಯವು ಬಹು ಸ್ಪಷ್ಟವಾಗಿ ತಿಳಿಯುವುದರಿಂದ ನಾವೇ ವಿಶೇಷವಾಗಿ ಹೇಳಿ ಪ್ರಯೋಜನವಿಲ್ಲವು. ಚಿಕ್ಕಂದಿನಲ್ಲಿ ದುರ್ವ್ಯಾಪಾರಕ್ಕೆ ಬಿದ್ದು ಪುರುಷ ಶಕ್ತಿಯನ್ನೇ ಕೆಡಿಸಿಕೊಂಡಿರುವವರು ಇದನ್ನು ಉಪಯೋಗ ಮಾಡಿದರಲ್ಲವೆ ಇದರ ಸರ್ವೋತ್ಕೃಷ್ಟತೆಯು ತಿಳಿಯುವುದು! ಬಹು ಸ್ವಲ್ಪ ಕಾಲದಲ್ಲಿಯೆ ಇಂದ್ರಿಯ ಪಟುತ್ವದವರನ್ನಾಗಿ ಮಾಡಿ ಸಂಪೂರ್ಣ ಪುರುಷ ಶಕ್ತಿಯನ್ನು ಕೊಡುವುದೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಒಂದು ವಾರದ ಮಟ್ಟಿಗೆ ಉಪಯೋಗವಾಗುವ ಔಷಧಕ್ಕೆ ರೂ. 5, ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನದಿ, ತಂಜಾವೂರು.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಬು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದು.

ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ವಾಬು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತೀ ವಿಳಾಸ — "ಪಂಡಿಟ್" ಮದರಾಸ್

ಖಿಜಾಬೆ ಮಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ಸರಿತ ಬಿಳೀ ಕೂದಲಿಗೆ ಲೇಪಿಸುವದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತ ನುಣುಪಾಗುವವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ.



ಮ। ರಾ। ರಾ। ಕೊಲ್ನಾಡುಗುತ್ತು ನೀಲಯ್ಯಶೆಟ್ರು ಆರು ರೂಪಾಯಿ ಕ್ರಯಬಾಳುವ ಮುಖ ದರ್ಪಣ ೧; ಪುಸ್ತಕಗಳ ವಿವರ:—ಮ। ರಾ। ರಾ। ಸುರತ್ಕಲ್ ಸೋಮಪ್ಪನವರು ೧೭; ಮ। ರಾ। ರಾ। ಪಿಟರ್ ಟಿ. ನೊರೊಞಾರವರು ೧೦; ಮ। ರಾ। ರಾ। ಹೆಬ್ಬಾಗೆ ಸೋಮಯ್ಯ ಮಂದಣ್ಣಾಯರು ೯; ಮ। ರಾ। ರಾ। ಬಿ. ವಾಮನ ರಾವ್ ೭; ಮ। ರಾ। ರಾ। ಕಣ್ಣಂಗಾರ ಚಂದು ಪುತ್ರಣ್ಣಾಯರು ೬ ಮ। ರಾ। ರಾ। ಮುಲ್ಕಿ ಶ್ರೀನಿವಾಸರಾವ್ ೫, ಮ। ರಾ। ರಾ। ಮುಕ್ಕ ದುಗ್ಗಣ್ಣನವರು ೪; ಮ। ರಾ। ರಾ। ಮುಲ್ಕಿ ಸುಬ್ಬಣ್ಣನವರು ೪, ಮ। ರಾ। ರಾ। ಕದ್ಕೆ ವೆಂಕಪ್ಪ ಪುತ್ರಣ್ಣಾಯರು ೪; ಮ। ರಾ। ರಾ। ಚರಂತಿಪೇಟೆ ಶಂಕರ ಮಂಜ್ಯಣ್ಣನವರು ೩; ಮ। ರಾ। ರಾ। ಬೋಳ ಅಚ್ಚಣ್ಣಶೆಟ್ರು ೨; ಮ। ರಾ। ರಾ। ಮಟ್ಟು ನಾರಾಯಣನವರು ೨; ಮ। ರಾ। ರಾ। ತಣ್ಣೀರುಬಾವಿ ಉಗ್ಗನವರು ೧, ಮ। ರಾ। ರಾ। ಅಂಬ್ಲಮಾಡಿ ಏಳ್ಳಪ್ಪಶೆಟ್ರು ೧; ಮ। ರಾ। ರಾ। ಬೆಳ್ಳಿ ರಾಮಣ್ಣಶೆಟ್ರು ೧, ಮ। ರಾ। ರಾ। ಕಣ್ಣಂಗಾರ ವೆಂಕಟು ಸಾಲ್ಯಣ್ಣಾಯರು ೧,

ಇದೇ ರೀತಿಯಲ್ಲಿ ಕನ್ನಡ ಭಾಷಾಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟು ಇನ್ನೂ ಬಾಲ್ಯಾವಸ್ಥೆಯಲ್ಲಿ ಉಳ್ಳ ಈ ಸಂಘಕ್ಕೆ ಪ್ರೋತ್ಸಾಹ ದೊರಲಿಚ್ಛಿಸುವವರು ತಮ್ಮಿಂದ ಅನುಕೂಲವಾದ ಕನ್ನಡ ಗ್ರಂಥಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಿದ್ದಲ್ಲಿ, ಅವು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲ್ಪಡುವವು.

ವಿಳಾಸ:—

Chandoo J. Puthrannair,
K. Neelaya Shetty,
Joint Hony Secretaries,
The Bombay Canarese Literature Society,
Asraf Subban Khan House,
PITHA STREET, FORT BOMBAY.

THE PUTTUR EDUCATION SOCIETY.

(Registered under Act XXI of 1860.)

WANTED

For the Incomplete Secondary School (III Standard to III Form) to be opened on 1st June next at Puttur the following Staff. Applications are invited from qualified candidates whose vernacular is Canarese. Applications should reach the undersigned not later than 1st of March next

1. One B. A., L. T., (Science or Mathematics graduate preferred) as Head Master on Rs. 60-3-75 *per mensem.*

2. Six Assistants—

if trained F. A. S or Intermediate men, Rs. 30—3—45 *per mensem.*

or if trained Matriculates or School Final men Rs. 25—2—35 *per mensem.*

one Drawing master and Drill Instructor Rs. 15—1—20 *per mensem.*

Office of the Puttur Education Society, Puttur, 17th Jan. 1916.

Shiva Rau,
Secretary.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 28ನೇ ಜನವರಿ 191೬

ಮದ್ರಾಸು ಸಂಸ್ಥಾನದ ವಿದ್ಯಾ ಇಲಾಖೆಯ ವರದಿಯು.

೧೯೧೪-೧೫ನೇ ವರುಷದ ವಿದ್ಯಾ ಇಲಾಖೆಯ ವರದಿಯನ್ನು ಪರಿಶೀಲಿಸಿ ಈ ಇಲಾಖೆಯವರ ಮೂಲಕ ಈ ಸಂಸ್ಥಾನದಲ್ಲಾದ ವಿದ್ಯಾಭಿವೃದ್ಧಿಯನ್ನೂ ಈ ಬಗ್ಗೆ ಕಳೆದ ವರುಷದಲ್ಲಾದ ಖರ್ಚಿನ ವಿವರವನ್ನೂ ಸರಕಾರದವರು ಸೂಚಿಸಿರುತ್ತಾರೆ. ಪ್ರಜೆಗಳ ವಿದ್ಯಾಭ್ಯಾಸದ ಬಗ್ಗೆ ಸಾಮಾನ್ಯವಾಗಿ ಕೊಡುವ ದ್ರವ್ಯಸಹಾಯವನ್ನು ಇಂಡಿಯಾ ಸರಕಾರದವರು ಮದ್ರಾಸು ಸರಕಾರದವರಿಗೆ ಕೊಟ್ಟಿದ್ದಲ್ಲದೆ ರೂ. ೧೬ ಲಕ್ಷಗಳ ಪ್ರತಿ ವರುಷದಲ್ಲಿಯೂ ಸಿಕ್ಕುವ ೩ ಗ್ರೇಂಟುಗಳೂ ಮಹಮ್ಮದೀಯರ ವಿದ್ಯಾಭಿವೃದ್ಧಿ ಬಗ್ಗೆ ರೂ. ೩೦ ಲಕ್ಷದ ಗ್ರೇಂಟೂ ದೊರಕಿರುವವು. ಸಂಸ್ಥಾನದಲ್ಲಿ ಗತ ವರುಷದಲ್ಲಿ ವಿದ್ಯಾಭ್ಯಾಸದ ಬಗ್ಗೆ ಖರ್ಚಾದ ಮೊಬಲಗು ಒಟ್ಟಿಗೆ ರೂ. ೧೯೬॥ ಲಕ್ಷವಾಗಿರುವದು. ೧೯೧೩-೧೪ನೇ ವರುಷದಲ್ಲಿ ಈ ಮೊಬಲಗು ೧೮೦ ಲಕ್ಷ ರೂಪಾಯಿಗಳಾಗಿತ್ತು. ಈ ಪೈಕಿ ಲೋಕಲ್ ಬೋರ್ಡು ಮತ್ತು ಮುನ್ಸಿಪಲ್ ಫಂಡುಗಳಿಂದ ಸುಮಾರು ೨೨ ಲಕ್ಷ ರೂಪಾಯಿಗಳು, ಸಂಸ್ಥಾನದ ಸರಕಾರದ ಖಜಾನೆಯಿಂದ ೬೩ ಲಕ್ಷ, ಶಾಲಾಫೀಸುಗಳು ಇತ್ಯಾದಿಗಳ ಮೂಲಕ ಪ್ರಜಾವರ್ಗದಿಂದ ೮೧ ಲಕ್ಷ ರೂಪಾಯಿಗಳು ೧೯೧೪-೧೫ ವರುಷದಲ್ಲಿ ಖರ್ಚಾಗಿರುವವು. ಸೆಕಂಡರಿ ಮತ್ತು ಎಲಿಮೆಂಟರಿ ವಿದ್ಯಾಶಾಲೆಗಳ ಬಗ್ಗೆ ಕೊಡೋಣಾದ 53½ ಲಕ್ಷ ರೂಪಾಯಿಗಳಲ್ಲಿ ೪೫ ಲಕ್ಷ ರೂಪಾಯಿಗಳು ಎಲಿಮೆಂಟರಿ ವಿದ್ಯಾಶಾಲೆಗಳ ಬಗ್ಗೆ ವಿನಿಯೋಗಿಸಲ್ಪಟ್ಟಿರುವವು. ಖಾಸಗಿ ಶಾಲೆಗಳಿಗೆ ಸರಕಾರದವರ ಖಜಾನೆಯಿಂದ ಕೊಡೋಣಾದ ಗ್ರೇಂಟು ಒಟ್ಟಿಗೆ ಸುಮಾರು ೩೨ ಲಕ್ಷ ರೂಪಾಯಿಗಳಾಗಿರುವದು. ೧೯೧೩-೧೪ರಲ್ಲಿ ಕೊಡೋಣಾದ ಗ್ರೇಂಟುಗಳ ಈ ಮೊಬಲಗು ಸಾಧಾರಣ ೩೭ ಲಕ್ಷಗಳಾಗಿತ್ತು. ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಈ ಬಗ್ಗೆ ವಿನಿಯೋಗಿಸಲ್ಪಟ್ಟ ಮೊಬಲಗು ಕಡಿಮೆಯಾಗದೆ ಇದ್ದರೂ ಮುನ್ಸಿಪಾಲಿಟಿಗಳಿಂದ ಖಾಸಗಿ ಶಾಲೆಗಳಿಗೆ ದೊರಕಿದ ಈ ದ್ರವ್ಯಸಹಾಯವು ಕಡಿಮೆಯಾಗಿ ದೆಂದು ತೋರಿಬರುತ್ತದೆ. ಜನಸಂಖ್ಯೆಯ ಸರಾಸರಿ ಪ್ರಕಾರ ಪ್ರತಿಯೊಬ್ಬ ನಿವಾಸಿಕನ ಲೆಕ್ಕದಲ್ಲಿ ೭-೭ ಆಣೆ ವಿದ್ಯೆಯ ಬಗ್ಗೆ ಖರ್ಚುಮಾಡೋಣಾಗಿರುವದು. ಈ ಸರಾಸರಿಯು ಈ ವರುಷದ ಮೊದಲಿನ ವರುಷದಲ್ಲಿ ಆಣೆ ೭ ಆಗಿತ್ತು.

ಶಾಲಾ ಕೋಲೇಜುಗಳು ಮತ್ತು ಇತರ ವಿದ್ಯಾವಿಷಯಗಳಿಗೆ ಸಂಬಂಧಪಟ್ಟ ವಿದ್ಯಾಸಂಸ್ಥೆಗಳ ಬಗ್ಗೆ ಖರ್ಚಾದ ಮೊಬಲಗುಗಳ ವಿವರದ ವಿನಹ ವರದಿಯಲ್ಲಿ ತೋರಿ ಬರುವ ಇತರ ಕೆಲವು ವಿವರಗಳೂ ಸರಕಾರದವರಿಂದ ಪರಿಶೀಲಿಸಲ್ಪಟ್ಟಿವೆ. ದೇಶ ಭಾಷೆಗಳ ಅಭ್ಯಾಸವನ್ನು ಇಂಟರ್‌ಮಿಡಿಯೇಟ್ ವರ್ಗಗಳ ಹಾಗೆ ಅಭಿವೃದ್ಧಿಸುವದೆಂಬುವ ವಿಷಯವು ವಿಶ್ವವಿದ್ಯಾನಿಲಯದವರಿಂದ ಪರ್ಯಾಲೋಚಿಸಲ್ಪಟ್ಟಿರುವದೆಂಬುದಾಗಿ ತಿಳಿಯುತ್ತೇವೆ. ಕೋಲೇಜು ಕ್ಲಾಸುಗಳಲ್ಲಿ ಸೆಕೆಂಡರಿ ಸ್ಕೂಲ್ ಲಿವಿಂಗ್ ಸರ್ಟಿಫಿಕೇಟು ಪಡೆದಿರುವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ಬೇಕಾದ ನಿಯಮಗಳನ್ನು ಸರಿಪಡಿಸುವ ವಿಷಯವನ್ನು ಯೂನಿವರ್ಸಿಟಿಯವರು ಪರ್ಯಾಲೋಚಿಸುತ್ತಿದ್ದರೆಂತಲೂ ಇವರ ಈ ಪರ್ಯಾಲೋಚನೆಯು ಇನ್ನೂ ಮುಗಿದಿರದೆಂತಲೂ ತಿಳಿಯಬರುತ್ತದೆ. ಗತವರುಷದಲ್ಲಿ ಸ್ತ್ರೀಯರ ಬಗ್ಗೆ ಒಂದು ಸೆಕೆಂಡ್ ಗ್ರೇಡ್ ಕೋಲೇಜು ಸ್ಥಾಪಿಸಲ್ಪಟ್ಟಿರುವದು. 'ಲಾ' ಮತ್ತು ಉಪಾಧ್ಯಾಯರುಗಳ ತರಬೇತಿಯ ಕೋಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗದೆ ಇದ್ದರೂ ಇತರ ಎಲ್ಲಾ ಕೋಲೇಜುಗಳಲ್ಲಿ ಈ ಸಂಖ್ಯೆಯು ಅಧಿಕವಾಗಿರುವದು. ಸೆಕೆಂಡರಿ ವಿದ್ಯಾಭ್ಯಾಸವನ್ನು ಸೆಕೆಂಡರಿ ಶಾಲೆಗಳಲ್ಲಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ಸೇಕಡಾ ೬-೭ರಂತೆ ಹೆಚ್ಚಿದೆ. ಎಲಿಮೆಂಟರಿ ವಿದ್ಯಾಪ್ರಸರಣೆಯು ಇತರ ವರುಷಗಳಲ್ಲಿ ನಡೆದಂತೆಯೇ ಸಾಗುತ್ತಿರುವದು, ಎಲಿಮೆಂಟರಿ ಶಾಲೆಗಳ ಸಂಖ್ಯೆಯು ೨೬,೦೦೫ರಿಂದ ೨೭,೯೦೫ಕ್ಕೆ ಹೆಚ್ಚಿರುವದು. ಇದೇ ರೀತಿ ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು ಸಹ ೧,೦೮೮,೭೮೭ರಿಂದ ೧,೩೪೩,೯೯೫ಕ್ಕೆ ಹೆಚ್ಚಿದೆ. ಸೆಕೆಂಡರಿ ಮತ್ತು ಎಲಿಮೆಂಟರಿ ವಿದ್ಯಾಪ್ರಸರಣೆಯ ಹಲವು ಪ್ರಸ್ತಾಪಗಳು ಡಿರೆಕ್ಟರರಿಂದ ಆಮಂತ್ರಿಸಲ್ಪಟ್ಟ ಕಳೆದ ೧೯೧೫ನೇ ಜೂನ್ ತಿಂಗಳಲ್ಲಿ ಕೂಡಿದ ಇನ್ಸ್‌ಪೆಕ್ಟರರುಗಳ ಸಭೆಯಲ್ಲಿ ಮಾಡಿಸಲ್ಪಟ್ಟಿದ್ದವೆಂತ ತಿಳಿಯುತ್ತೇವೆ. ವಿದ್ಯಾ ಇಲಾಖೆಯ ಉದ್ಯೋಗಸ್ಥರ ಮತ್ತು ಉದ್ಯೋಗಸ್ಥರಲ್ಲದ ಇತರರ ಸಭೆಯು ಇನ್ನು ಸದ್ಯದಲ್ಲಿ ಆಮಂತ್ರಿಸಲ್ಪಡುವದು ಮತ್ತು ಈ ಸಭೆಯಲ್ಲಿ ಸಹ ಇನ್ಸ್‌ಪೆಕ್ಟರರುಗಳ ಸಭೆಯಲ್ಲಿ ಚರ್ಚಿಸಲ್ಪಟ್ಟ ಹಲವು ವಿಷಯಗಳು ಚರ್ಚಿಸಲ್ಪಡುವವೆಂಬುದಾಗಿ ತಿಳಿಯುತ್ತೇವೆ.

ಸ್ತ್ರೀಶಿಕ್ಷಣವು ಸಹ ಗತವರುಷದಲ್ಲಿ ಅಭಿವೃದ್ಧಿಗೊಂಡಿರುವದು. ಹುಡುಗಿಯರ ಬಗ್ಗೆ ೭೨ ಹೊಸ ಹೊಸ ಶಾಲೆಗಳು ಸಂಸ್ಥಾನದಲ್ಲಿ ಕಳೆದ ವರುಷದಲ್ಲಿ ಸ್ಥಾಪಿಸೋಣಾಗಿರುವವು. ೧೮,೫೦೦ ಸ್ತ್ರೀವಿದ್ಯಾರ್ಥಿಗಳು ಹೆಚ್ಚಿರುವರು. ಮದ್ರಾಸಿನಲ್ಲಿ ೬೧, ವಿಶಾಖಪಟ್ಟಣದಲ್ಲಿ ೩೮, ವಿಧವೆಯರು ಶಿಕ್ಷಣವನ್ನು ಪಡೆಯುತ್ತಿರುವರು. ಪಂಚಮರ ವಿದ್ಯಾರ್ಥಿಗಳ ಸಂಖ್ಯೆಯೂ ವಿದ್ಯಾಶಾಲೆಗಳೂ ಹೆಚ್ಚಿರುವವು. ಲೋಕಲ್ ಬೋರ್ಡುಗಳೇ ಮಾತ್ರ ಈ ವರ್ಗದವರಿಗೋಸ್ಕರ ೮೪ ಹೊಸ ಶಾಲೆಗಳನ್ನು ಸ್ಥಾಪಿಸಿರುವರು. ಸೆಕೆಂಡರಿ ವಿದ್ಯಾಭ್ಯಾಸವನ್ನು ಪಡೆಯಬೇಕೆಂಬುವ ಉತ್ಸಾಹವು ಪಂಚಮರಲ್ಲಿ ಸಹ ಉಂಟಾಗಿದೆ. ಸೆಕೆಂಡರಿ ಶಾಲೆಗಳಲ್ಲಿ ಈ ಜಾತಿಯವರ ಸಂಖ್ಯೆಯು ಸೇಕಡಾ ೬೩ರಂತೆ ಹೆಚ್ಚಿರುವದು. ಮಹಮ್ಮದೀಯರ ಬಗ್ಗೆ ಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟ ಶಾಲೆಗಳ ಸಂಖ್ಯೆಯು ೮೩೯ ಇದ್ದದ್ದು ೮೮೭ ಆಗಿದೆ. ವಿದ್ಯಾರ್ಥಿಗಳ ಸಂಖ್ಯೆಯು ೫೧,೩೧೮ರಿಂದ ೫೫,೫೫೪ಕ್ಕೆ ಹೆಚ್ಚಿದೆ.

ಈ ರೀತಿ ಮದ್ರಾಸು ಸಂಸ್ಥಾನದಲ್ಲಿ ವಿದ್ಯಾ ಇಲಾಖೆಯ ವರದಿಯು ಅಭಿವೃದ್ಧಿಯನ್ನೇ ಸೂಚಿಸುತ್ತಿರುವದು.

ಹಿಂದೂದೇಶವೂ ಸ್ವರಾಜ್ಯವೂ

ಈಗಿನ ಹಿಂದೀ ಜನರ ರಾಜಕೀಯ ಧ್ಯೇಯವು ಸ್ವರಾಜ್ಯವಾಗಿರುವುದೆಂದು ರಾಜ್ಯಕರ್ತರಿಗೆ ಮಾತ್ರವಲ್ಲ ಸಧಾರಿಸಿದ ಬೇರೆ ಬೇರೆ ರಾಷ್ಟ್ರಗಳೊಳಗಿನ ಸುಶಿಕ್ಷಿತರಿಗೂ ಗೊತ್ತಿದೆ. ನಮ್ಮ ಜನರ ಧ್ಯೇಯವು ಗೊತ್ತಾದ ಮಾತ್ರದಿಂದಲೇ ಬ್ರಿಟಿಷರು ಸ್ವರಾಜ್ಯದಾನವನ್ನು ಸಂಕಲ್ಪಿಸಿ ದಾನಪಾತ್ರರಾದ ಹಿಂದೀ ಜನರ ಕೈ ಮೇಲೆ "ಪ್ರತಿಗೃಹ್ಣಂತು ಭವಂತಃ" ಎಂಬ ಮಂತ್ರವಿರುವ ಶಾಂತ್ಯುದಕವನ್ನು ಬಿಡಲು ನಮ್ಮನ್ನು ನಿರೀಕ್ಷಿಸುತ್ತಿದ್ದಾರೆಂದು ತಿಳಿದು ಹಿಂದೀ ಜನರು ಬೇಗ ಸ್ನಾನ ಸಂಧ್ಯೆಗಳನ್ನೆಲ್ಲ ಮುಗಿಸಿ ದಾನ ಸ್ವೀಕರಿಸಲು ಉದ್ಯುಕ್ತರಾಗಬಹುದು. ಆದರೆ ಅಷ್ಟು ಇಷ್ಟು ಬೇಗನೆ ಅಧೀರರಾಗುವುದು ಅವಶ್ಯವಿಲ್ಲ. ಹಿಂದೀ ಜನರ ರಾಜಕೀಯ ಧ್ಯೇಯವು ರಾಜ್ಯಕರ್ತರಿಗೆ ಗೊತ್ತಾಗಿದೆಂಬ ಮಾತಿನ ಅರ್ಥವು—ಸರಕಾರದವರು ನಮ್ಮ ದೇಶದ ರಾಜ್ಯ ಸೂತ್ರಗಳನ್ನು ಒಮ್ಮೆಗೇ ನಮ್ಮ ಕೈವಶಮಾಡುವವರಿದ್ದಾರೆ, ಇಲ್ಲವೆ ಈ ಕೆಲಸವು ಅಷ್ಟು ಬೇಗನೆ ಅವರಿಗೆ ಮಾಡಬೇಕಾಗಿ ಬಂದಿದೆ, ಹೀಗಲ್ಲ. ಇಷ್ಟರವರೆಗೆ ಪಾರತಂತ್ರ್ಯದಲ್ಲಿದ್ದ ಹಿಂದೀ ಜನರು ಅಚಂದ್ರಾರ್ಕ ಇದನ್ನೇ ಶಿರಸಾವಹಿಸಿಕೊಂಡು ಇರಲು ಅರ್ಹರಲ್ಲ. ಎಂದರೆ ಭೂಪೃಷ್ಠದ ಮೇಲಿನ ಸುಸಂಸ್ಕೃತ ಜನಾಂಗಗಳಂತೆ ಇವರು ಸ್ವಾತಂತ್ರ್ಯದ ಉಪಭೋಗಪಡೆಯಲು ತಕ್ಕವರಿದ್ದಾರೆಂದು ಉದಾರಮತದವರಾದ ಇಂಗ್ಲಿಷ್ ಮುತ್ಸದಿಗಳು ತಿಳಿದು ತಮ್ಮ ವಿಚಾರಗಳನ್ನು ಅಲ್ಲಲ್ಲಿ ಪ್ರಕಟಿಸುತ್ತಿದ್ದಾರೆ. ಇದು ನಮ್ಮ ಉದ್ದಿಷ್ಟ ಸ್ಥಾನಕ್ಕೆ ಹೋಗುವ ಮಾರ್ಗದ ಮೇಲೆ ಒಂದು ಪ್ರಕಾಶಮಾನವಾದ ಪ್ರದೀಪಸ್ತಂಭವೇ ಸರಿ. ನಾವು ಹಿಂದೀ ಜನರು, ಸ್ವರಾಜ್ಯಕ್ಕೆ ಪಾತ್ರರು, ಅದು ನಮಗೆ ದೊರಕಬೇಕಾದದ್ದು. ಇದೇ ನಮ್ಮ ಆಶೆ. ಈ ನಮ್ಮ ಆಶಾರಥವು ಅಚಲವಾದ ರಾಜಭಕ್ತಿ, ಸಾಮ್ರಾಜ್ಯದ ಮೇಲೆ ಸಂಕಟವು ಒದಗಿರುವ ಸಮಯದಲ್ಲಿ ಆ ಸಾಮ್ರಾಜ್ಯದ ರಕ್ಷಣೆಗಾಗಿ ಏಕನಿಷ್ಠತೆಯಿಂದ ಮಾಡುವ ಸಹಾಯ, ಸುಶಿಕ್ಷಣ, ಆತ್ಮಸಂಯಮನ ಎಂಬ ನಾಲ್ಕು ಕುದುರೆಗಳ ಸಹಾಯದಿಂದ ಉದ್ದಿಷ್ಟ ಧ್ಯೇಯವನ್ನು ಹೊಂದಲು ಮಾರ್ಗವನ್ನಾಕ್ರಮಿಸುವಾಗ ಆ ಮಾರ್ಗದಲ್ಲಿ ಕೆಲವು ಸ್ವಾರ್ಥಸಾಧುಗಳಾದ ಎಂಗ್ಲೋಇಂಡಿಯನ್ನರು ಹಿಂದೀ ಜನರ ಅಪಾತ್ರತೆಯ ಮುಳ್ಳುಗಳನ್ನು ಪಸರಿಸುವರು. ಇದೇ ಮಾತನ್ನು ಈ ರೂಪಕದ ವೇಷವನ್ನು ಬಿಚ್ಚಿ ಹೇಳುವದಾದರೆ ಹಿಂದೀ ಜನರು ದಯಾಳುಗಳಾದ ರಾಜ್ಯಕರ್ತರಿಂದ ಸ್ವರಾಜ್ಯ ಪ್ರಾಪ್ತಿಗಾಗಿ ಪ್ರಾಮಾಣಿಕವಾದ ಉದ್ಯೋಗ ಮಾಡುತ್ತಿರುವಲ್ಲಿ ಕೆಲವು ಎಂಗ್ಲೋಇಂಡಿಯನ್ನರು—ಹಿಂದೂದೇಶಕ್ಕೆ ಎಂದೂ ಸ್ವಾತಂತ್ರ್ಯವು ಸಲ್ಲದು, ಜಾತಿಭೇದದ ಪ್ರಾಬಲ್ಯವು ಹಿಂದೂದೇಶದಲ್ಲಿದ್ದ ಕಾರಣ ಸ್ವರಾಜ್ಯದಾನದಿಂದ ಇನ್ನಷ್ಟು ಗೊಂದಲವೇ ಉಂಟಾದೀತು; ಆದುದರಿಂದ ಅವರು ಸ್ವರಾಜ್ಯಕ್ಕೆ ಕೇವಲ ಅಪಾತ್ರರು—ಎಂದು ಪ್ರತಿಪಾದಿಸಿ ನಮ್ಮ ಆಶೆಯನ್ನು ತಡೆದು ಹಾಕುತ್ತಿದ್ದಾರೆ. ಬೆಕ್ಕು ಅಡ್ಡ ಹೋದರೂ ಹಕ್ಕಿಗೆ ಹಾರಲು ಅಡ್ಡಿಯುಂಟೇ? ಇಲ್ಲವೆ ಸಂಕಣ್ಣನ ಶಾಪದಿಂದ ಇಂದ್ರಲೋಕವು ಹಾಳಾಗುವುದೇ? ಇಲ್ಲ. ಹೀಗಿದ್ದರೂ ವಿಘ್ನಸಂತೋಷಿಗಳಾದ ಎಂಗ್ಲೋ ಇಂಡಿಯನ್ನರ ಈ ಅಪಾತ್ರತೆಯ ಶಬ್ದವು ನಮ್ಮ ಧ್ಯೇಯಪ್ರಾಪ್ತಿಯ ವಿಷಯದಲ್ಲಿ ಆದಷ್ಟು ಕಾಲವಿಲಂಬಕ್ಕೆ ಉತ್ತಮ ಸಹಾಯವಾಗುವುದು! ಇಂತಹ ಪ್ರಸಂಗದಲ್ಲಿಯೂ ಸಮಾಧಾನಕ್ಕೆ ನಮಗೊಂದು ಆಸ್ಪದವಿದೆ. ಅದೇನೆಂದರೆ, ಜಗತ್ತೆಲ್ಲ ಎಂಗ್ಲೋ ಇಂಡಿಯನ್‌ಮಯವಾಗಿಲ್ಲ. ಏಕೇ? ಸ್ವಾತಂತ್ರ್ಯ ಪ್ರಿಯವಾದ ಇಂಗ್ಲಿಷ್ ಜನಾಂಗದಲ್ಲಿ ಮೇಲೆ ಹೇಳಿದ್ದಂತೆ ಎಂಗ್ಲೋ ಇಂಡಿಯನ್ನರ ಈ ಸ್ವಾರ್ಥಪರವಾದ ಹೇತುವು ಪೂರ್ಣವಾಗಿ ಗೊತ್ತಾಗಿಲ್ಲವೇ? ಅವರು ಹಿಂದೀ ಜನರ ಯೋಗ್ಯತೆಯನ್ನೂ ಸಂಸ್ಕೃತಿಗಳನ್ನೂ ಸ್ವಾಮಿನಿಷ್ಠೆಯನ್ನೂ ಕೂಡ ಬಲ್ಲರು. ಸ್ವರಾಜ್ಯ ಸಂಪಾದನೆಗಾಗಿ ಹಿಂದೀ ಜನರ ಪಾತ್ರಾಪಾತ್ರತೆಯ ವಿಷಯದಲ್ಲಿ ಎಂಗ್ಲೋ ಇಂಡಿಯನ್ನರ ಸಾಕ್ಷಿಯು ಅವಶ್ಯವಿಲ್ಲ. ಈ

ವಿಷಯದಲ್ಲಿ ಒಬ್ಬ ಪರಕೀಯ ಸದ್ಗೃಹಸ್ಥರ ಮತವನ್ನೇ ಕೊಡುವೆವು. ಆದರಿಂದ ನಮ್ಮ ಪಾತ್ರಾಪಾತ್ರತೆಯ ಸಂಗತಿಯು ಸ್ವಯಮೇವ ಸ್ಪಷ್ಟವಾಗುವುದು.

ಆ ಸದ್ಗೃಹಸ್ಥರು ಯಾರೆಂದರೆ, ಅಮೇರಿಕಾದೊಳಗಿನ ಸುಪ್ರಸಿದ್ಧರಾದ ಮಿ. ಎಂಡ್ರೂ ಕಾರ್ನೆಗೀಜಿ ಎಂಬೀ ಕೋಟ್ಯಧೀಶರಾಗಿರುವರು. ಇವರು ಕಳೆದ ನವಂಬರಿನಲ್ಲಿ ಆದ ಅವರ ಹುಟ್ಟು ದಿವಸದ ಉತ್ಸವದಲ್ಲಿ ಹಿಂದೀ ಜನರ ಕುರಿತು ಪ್ರಸ್ತಾಪಿಸಿದ್ದೇನೆಂದರೆ,—ಹಿಂದೂಸ್ಥಾನದೊಳಗಿನ ಸುಶಿಕ್ಷಿತರ ಮನಸ್ಸಿನಲ್ಲಿ ತಮ್ಮ ದೇಶದ ಆಡಳಿತೆಯನ್ನು ತಾವೇ ನಡಿಸಬೇಕೆಂಬ ಆಕಾಂಕ್ಷೆಯು ಹುಟ್ಟಿದೆ, ಮತ್ತು ದಿನೇ ದಿನೇ ಈ ಆಕಾಂಕ್ಷೆಯು ಅವರಲ್ಲಿ ವೃದ್ಧಿಂಗತವಾಗುತ್ತಿದೆ. ಇಂತಹ ಆಕಾಂಕ್ಷೆಯು ಅವರಲ್ಲಿ ಜನಿಸದೆ ಇದ್ದುದಾದರೆ ನಾನು ಅವರಿಗೆ ಸುಶಿಕ್ಷಿತರೆಂಬ ಹೆಸರನ್ನೇ ಕೊಡಲಿಕ್ಕಿಲ್ಲ. ಕಳೆದು ಹೋದ ತಮ್ಮ ಹಕ್ಕುಗಳನ್ನೂ, ಅಧಿಕಾರಗಳನ್ನೂ ಜೇತೃವರ್ಗದಿಂದ ಪುನಃ ಸಂಪಾದಿಸಲು ಯತ್ನಮಾಡುವುದೇ ನಿಜವಾದ ಶಿಕ್ಷಣದ ಸ್ವಾಭಾವಿಕವಾದ ಪರಿಣಾಮವಾಗಿರುತ್ತದೆ. ಶಿಕ್ಷಣದ ಮೂಲಕ ಉಂಟಾದ ಜ್ಞಾನದಿಂದ ರಾಷ್ಟ್ರೀಯ ಸ್ವಾತಂತ್ರ್ಯದ ಯಾವ ಹಸಿವೆಯು ಪ್ರಜ್ವಲಿತವಾಗುವದೋ ಅದು ವ್ಯಾಪಾರ, ಉದ್ಯೋಗ, ಶಿಕ್ಷಣ ಮುಂತಾದವುಗಳ ಅಭಿವೃದ್ಧಿ ಹಾಗೂ ಪ್ರಸಾರಕ್ಕಾಗಿ ಎಷ್ಟೋ ದಾನಗಳನ್ನು ಕೊಟ್ಟರೂ ಶಾಂತವಾಗಲಾರದು. ಸ್ವರಾಜ್ಯದ ಭಾವನೆಯು ದೇಶತುಂಬಾ ಹಬ್ಬುವುದನ್ನು ಕಂಡು ಬ್ರಿಟಿಷರು ಅಲ್ಲದಸಲ್ಲದ ಕಲ್ಪನೆಗಳನ್ನು ಯೋಜಿಸಿ ಭ್ರಾಂತಿಪಡುವುದು ಅಗತ್ಯವಿಲ್ಲ. ಹಿಂದೀ ಸ್ವರಾಜ್ಯದ ಕಲ್ಪನೆಯಲ್ಲಿ ಗಾಬರಿಪಡತಕ್ಕ ಅಥವಾ ಸಂಶಯಪಡತಕ್ಕ ಯಾವ ಅಂಶವೂ ಇಲ್ಲ. ಈ ಸಮಯದಲ್ಲಿ ಹಿಂದೂಸ್ಥಾನದ ರಾಜ್ಯಶಕಟವನ್ನು ಬಹು ದೂರದರ್ಶಿತ್ವದಿಂದಲೂ, ಉದಾರವಾದ ಧೋರಣದಿಂದಲೂ ನಡಿಸಿದರೆ ಹಿಂದೂಸ್ಥಾನದಲ್ಲಿ ಯಾವ ಗಲಿಬಿಲಿಯೂ ಉಂಟಾಗುವ ಸಂಭವವಿಲ್ಲ. ಹಿಂದೀ ಸ್ವಾತಂತ್ರ್ಯದ ಈ ಜಾಗೃತಿಯು ಅಪರಿಹಾರ್ಯವಿದ್ದರೂ ಅದು ನಿರ್ಬಂಧನೆಯಿಂದ ರಾಜಶಾಸನಗಳನ್ನು ಮೀರದೆ ನಡೆಯುತ್ತಿದೆ. ಕೆನಡಾ ಅಥವಾ ಆಸ್ಟ್ರೇಲಿಯಾ ಇವುಗಳಿಗೆ ಕೊಟ್ಟಂತೆ ಹಿಂದೂ ದೇಶಕ್ಕೂ ಕೂಡ ಎಂದಾದರೂ ಸ್ವಾತಂತ್ರ್ಯ ಕೊಡುವುದರಲ್ಲಿಯೇ ಬ್ರಿಟಿಷ್ ರಾಜ್ಯಕರ್ತರ ಉದಾರವಾದ ಧೋರಣದ ಪ್ರತ್ಯಯವುಂಟಾಗುವುದು. ಸ್ವರಾಜ್ಯದ ಅಧಿಕಾರ ಪ್ರಾಪ್ತವಾದ ಕಾರಣವೇ ಇಷ್ಟರವರೆಗೆ ವಸಾಹತಿಗಳು ರಾಜನಿಷ್ಠೆಯಿಂದಿದ್ದಾವೆ. ಈ ವಸಾಹತಿಗಳಂತೆ ಹಿಂದೂ ದೇಶವು ಸಾಮ್ರಾಜ್ಯದ ಒಂದು ಘಟಕವಾಗಬೇಕಾದರೆ ಅದಕ್ಕೆ ಸ್ವರಾಜ್ಯದ ಹಕ್ಕುಗಳನ್ನು ಕೊಡಬೇಕು. ಅನ್ಯಥಾ ಉಪಾಯವಿಲ್ಲ".

ಈ ಸದ್ಗೃಹಸ್ಥರು ಮೇಲಿನ ಸಂದರ್ಭದಲ್ಲಿ ಮಾತ್ರ ಈ ತರದ ಆಲೋಚನೆಗಳನ್ನು ಹೇಳಿದ್ದಾರೆಂತಲ್ಲ. ಒಂಬತ್ತು ವರ್ಷಗಳ ಹಿಂದೆ ಇಂಗ್ಲಂಡದೊಳಗಿನ "ನ್ಯಾಂಟೀಂತ ಸೆಂಚುರಿ" ಎಂಬ ಸುಪ್ರಸಿದ್ಧವಾದ ಮಾಸಿಕ ಪುಸ್ತಕದಲ್ಲಿ ಹಿಂದೀ ರಾಜಕಾರಣದ ಕುರಿತು ಬರೆಯುವಾಗ ಇಂತಹ ವಿಚಾರಗಳನ್ನೇ ಗ್ರಥಿಸಿ ಇವರು ಬ್ರಿಟಿಷ್ ರಾಜ್ಯಕರ್ತರಿಗೆ ಹಿಂದೀ ಜನರನ್ನು ನಂಬಿ ರಾಜ್ಯಸೂತ್ರಗಳನ್ನು ನಡಿಸಬೇಕೆಂದುಪದೇಶಿಸಿರುವರು. ಅಷ್ಟು ಸ್ವರಾಜ್ಯಕ್ಕೆ ಹಿಂದೀ ಜನರು ಪಾತ್ರರೇ ಅಲ್ಲವೇ, ಈ ವಿಷಯದಲ್ಲಿ ಸ್ವತಃ ರಾಜ್ಯಕರ್ತರಿಗೆ ಸಂಶಯ ಹುಟ್ಟಿರುವಾಗ ಮಧ್ಯದಲ್ಲಿ ಈ ಎಂಗ್ಲೊ ಇಂಡಿಯನರ ಅಭಿಪ್ರಾಯದ ಕಡೆಗೆ ನಾವು ಅಷ್ಟೊಂದು ಗಮನಕೊಡಬೇಕಾಗುದಿಲ್ಲ. ರಾಜ್ಯಕರ್ತರ ಅಭಿಪ್ರಾಯವು ಈ ವಿಷಯದಲ್ಲಿ ಹೇಗಿದೆಂಬುದನ್ನು ತಿಳಿದುಕೊಳ್ಳಬೇಕಾದರೆ ಈಗಿನ ದಯಾಳುಗಳಾದ ನಮ್ಮ ವ್ಯಾಸರಾಯ ಪ್ರಭುಗಳು ಕೆಲವು ದಿವಸ ಮುಂಚೆ ಒಂದು ಸಂದರ್ಭದಲ್ಲಿ ಬ್ಯೂರೋಕ್ರಸಿಗೆ ಉದ್ದೇಶಿಸಿ ಮಾಡಿದ ಭಾಷಣವನ್ನು ನಾವು ಮೊದಲು ವಾಚಕರಿಗೆ ತಿಳಿಸಿದ್ದೇವೆ, ಅದನ್ನು ನೋಡಿದರೆ ಗೊತ್ತಾಗುವುದು. ಎಂಗ್ಲೋ ಇಂಡಿಯನರ ಆಕ್ಷೇಪಗಳಿಗೆ ಉತ್ತರ ಪ್ರತ್ಯುತ್ತರ ಕೊಡುವುದೆಂದರೆ ಗಾಳಿಯೊಡನೆ ಜಗಳಾಡುವುದೇ ಸರಿ. ಎಂಗ್ಲೋ ಇಂಡಿಯನರ ಮತವು ಹೇಗಿದ್ದರೂ ಹಿಂದೀ ದೇಶಕ್ಕೆ ಈ ಸ್ವರಾಜ್ಯವು ಬೇಕಾಗಿದೆ ಮತ್ತು ಇಂಗ್ಲಿಷರು ಅದನ್ನು ಒಂದು ತರದಿಂದ ಸಮ್ಮತಿಸುತ್ತಾರೆಂಬುದಕ್ಕೇನೂ ಸಂದೇಹವಿಲ್ಲ. ಹಿಂದೀ ಜನರ ಈ ಆಕಾಂಕ್ಷೆಯು ನ್ಯಾಯಪ್ರಾಪ್ತವಾದುದು. ಸಾಮಾನ್ಯವಾಗಿ ಒಂದು ಶತಕದಿಂದಿನಿಂದ ಬ್ರಿಟಿಷರ ಪ್ರಭುತ್ವದ ಛಾಯೆಯಲ್ಲಿ ಸುಖವಾಗಿ ನಿಂತು, ಸರಕಾರದವರೇ ಹೇಳುವಂತೆ ಪಾಶ್ಚಾತ್ಯ ಶಿಕ್ಷಣ, ಸಂಸ್ಕೃತಿ, ನವನಾಗರಿಕತೆ ಮುಂತಾದವುಗಳನ್ನು ಪಡೆದರೂ ಸ್ವರಾಜ್ಯೋಪಭೋಗದ ಪಾತ್ರತೆಯು ಹಿಂದೀ ಜನರಲ್ಲಿ ಉಂಟಾಗಲಿಲ್ಲೆಂತ ಹೇಳಿದರೆ ಆ ದೋಷವು ನಿಜವಾಗಿ ಯಾರ ಕಡೆಗೆ ಹೋಗುತ್ತದೆಂಬುದನ್ನು ದೋಷಾಪಾದಕರೇ ಶಾಂತಮನಸ್ಸಿನಿಂದ ಆಲೋಚಿಸಬೇಕು. ಒಂದು ಕ್ಲಾಸಿನಲ್ಲಿ ಯಾವತ್ತು ವಿದ್ಯಾರ್ಥಿಗಳ ಪರೀಕ್ಷೆಯು ಕೆಟ್ಟುಹೋದರೆ ಆ ದೋಷವು ವಿದ್ಯಾರ್ಥಿಗಳದೋ ಉಪಾಧ್ಯಾಯನದೋ? ಇದೇ ನ್ಯಾಯವು ಪ್ರಕೃತ ವಿಷಯದಲ್ಲಿ ಕೂಡ ಸರಿಯಾಗಿ ಅನ್ವಿತವಾಗುತ್ತದೆ. ಹೇಗೂ ಇರಲಿ; ಪ್ರಕೃತ ಮಹಾಯುದ್ಧವು ಮುಗಿದನಂತರ ಆದರಲ್ಲಿ ಹಿಂದೀ ಜನರು ಮನೋವಾಕ್ಕಾಯ ದ್ರವ್ಯಗಳ ಮೂಲಕ ಸಹಾಯ ಮಾಡಿದ್ದರ ಪ್ರತಿಫಲವೆಂತಲ್ಲಾದರೂ ಅವರಿಗೆ ರಾಜ್ಯಕರ್ತರು ತಮ್ಮ ನ್ಯಾಯಪ್ರಿಯತೆಗಾಗಿಯೂ ಸ್ವಾತಂತ್ರ್ಯಾಭಿಮಾನಕ್ಕಾಗಿಯೂ ಸ್ವರಾಜ್ಯ ಕೊಡುವುದು ಉಚಿತವಾಗಿದೆಂದು ಯಾರೂ ಹೇಳಬಹುದು. ಆದರೆ ನಮ್ಮೊಳಗಿನವರೇ ಕೆಲವರು "ಅವರೆಲ್ಲಿ ನಮಗೆ ಸ್ವರಾಜ್ಯ ಕೊಡುತ್ತಾರೆ? ನಮ್ಮ ಈ ಆಶೆ ವ್ಯರ್ಥವಲ್ಲವೇ?" ಎಂದು ವಾದಿಸುವವರಿದ್ದಾರೆ. ಕೊಡುವವರು ದೊಡ್ಡ ದಾನವನ್ನು ಕೊಡದಿದ್ದರೂ ಕೇಳುವವನು ಅದನ್ನು ಕೇಳಕೂಡದೆಂದು ಹೇಳುವುದು ಅಷ್ಟೊಂದು ಯುಕ್ತವಲ್ಲ. ಕೇಳುವಾಗಲೇ ಒಂದು ಪೈಯನ್ನು ಕೇಳಿದರೆ ಕೊಡುವವನ ಮನಸ್ಸಿನಲ್ಲಿ ಹೆಚ್ಚು ಕೊಡುವುದಿದ್ದರೂ ಅವನು ಕೊಟ್ಟಾನೇ? ಇಲ್ಲ. ಆದುದರಿಂದ ನಾವು ಪ್ರಜೆಗಳೆಲ್ಲರೂ ಸ್ವರಾಜ್ಯವನ್ನೇ ಕೇಳುವ. ಹೀಗೆ ಕೇಳಿದ್ದಲ್ಲಿ ಸ್ವರಾಜ್ಯವಲ್ಲದಿದ್ದರೂ ಅಷ್ಟೇ ಮಹತ್ವದ ಅಧಿಕಾರಗಳನ್ನಾದರೂ ಪ್ರಭುಗಳು ನಮಗೆ ದಯಪಾಲಿಸದೆ ಇರರು.

ಮೇಲಿನ ಈ ಎಲ್ಲ ಉಪಪಾದನೆಯಿಂದ ಸ್ವರಾಜ್ಯವು ನಮಗೀಗ ಅಗತ್ಯ, ಅದನ್ನು ರಾಜ್ಯಕರ್ತರು ತಾವಾಗಿಯೇ ಈಗ ಅಲ್ಲದಿದ್ದರೂ ಕೆಲವು ಸಮಯದ ನಂತರ ಕೊಡುವರು ಎಂಬ ಸಂಗತಿಗಳು ವಾಚಕರಿಗೆ ತಿಳಿದುಬಂದಾವು. ಆದರೆ ಸ್ವರಾಜ್ಯವೆಂದರೇನು, ಅದರಲ್ಲಿ ಎಷ್ಟು ಪ್ರಕಾರಗಳಿವೆ, ಆ ಪ್ರಕಾರಗಳಲ್ಲಿ ಹಿಂದೀ ಜನರ ಪ್ರಕೃತ ಪರಿಸ್ಥಿತಿಗೆ ಹಿತಕರವಾದುದು ಯಾವುದು,—ಈ ಮಹತ್ವದ ಪ್ರಶ್ನೆಗಳನ್ನು ಕುರಿತು ಕೆಲವು ಮಾತು ಬರೆಯಬೇಕೆಂತಿದ್ದೇವೆ. ಪರಂತು, ಇದೇ ಲೇಖವು ಸ್ವಲ್ಪ ಉದ್ದವಾದ ಕಾರಣ ಉಪಯುಕ್ತ ವಿಷಯಗಳನ್ನು ಬೇರೊಂದು ಸ್ವತಂತ್ರ ಲೇಖದಲ್ಲಿ ಯಥಾವಕಾಶ ನಿರೂಪಿಸುವೆವೆಂದು ಹೇಳಿ ಈ ಲೇಖವನ್ನು ಇಲ್ಲಿಯೇ ಮುಗಿಸುತ್ತೇವೆ.

ಲೋಕಲ್ ಬೋರ್ಡು ಆಕ್ಟಿನಲ್ಲಿ ಬದಲಾವಣೆ.

(ಕುಂದಾಪುರ ತಾಲೂಕು ಬೋರ್ಡಿನವರ ಠರಾವು).

ಲೋಕಲ್ ಬೋರ್ಡ ಆಕ್ಟಿನಲ್ಲಿ ಬದಲಾವಣೆಗಳು ಅವಶ್ಯವಿದ್ದರೆ ಸೂಚಿಸಬೇಕೆಂತಲೂ ಲೋಕಲ್ ಫಂಡುಗಳ ದ್ರವ್ಯಾನುಕೂಲವನ್ನು ಹೆಚ್ಚಿಸುವುದಕ್ಕೆ ಏರ್ಪಾಡುಗಳನ್ನು ಸೂಚಿಸಬೇಕೆಂತಲೂ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ತಾಲೂಕ ಬೋರ್ಡುಗಳಿಗೂ ಅಭಿಪ್ರಾಯ ಕೇಳಿದ್ದಲ್ಲಿ ಕುಂದಾಪುರ ತಾಲೂಕು ಬೋರ್ಡಿನವರ ಇದೇ ತಿಂಗಳ ೧೭ನೇ-೧೮ನೆ ತಾರೀಕಿನ ಸಭೆಯಲ್ಲಿ ಈ ರೀತಿಯಾಗಿ ಠರಾವು ಮಾಡಿದರು. "ಸಮಯ ಸಾಕಾಗದ್ದರಿಂದ ಆಕ್ಟನ್ನು ಕುರಿತು ಕೂಲಂಕುಶ ತನಕಿ ನಡಿಸಲಾಗಲಿಲ್ಲ. ಲೋಕಲ್ ಸೆಲ್ಫ್ ಗವರ್ನಮೆಂಟ್ ಸ್ಥಳೀಯ ಮತ್ತು ಸ್ವಕೀಯ ರಾಜ್ಯಭಾರವೆಂಬುದು ಬರೆ 'ಕನಸಿನ ಗಂಟು' ಆಗಿರದಂತೆ ಅಗತ್ಯವಾಗುವ ಬದಲಾವಣೆಗಳನ್ನು ಮಾಡಬೇಕು. ಮೊಟ್ಟಮೊದಲು ಈ ಆಕ್ಟನ್ನು ಒಳ್ಳೆ ಕ್ರಮದಲ್ಲಿ ತಯಾರಿಸಿದ್ದರು ಅದರಲ್ಲಿ ಸರಕಾರದ ಎಕ್ಸಿಕ್ಯೂಟಿವ್ ಅಧಿಕಾರಿಗಳಿಗೆ (ರಾಜಕಾರ್ಯ ನಿರ್ವಾಹಕರಿಗೆ) ತಮ್ಮ ಉದಾರಬುದ್ಧಿಯನ್ನು ತೋರ್ಪಡಿಸುವುದಕ್ಕೆ ಸಾಕಷ್ಟು ಅವಕಾಶ ಕೊಟ್ಟರು. ಅವರು ಅಂಥಾ ಅಧಿಕಾರವನ್ನು ಮುಷ್ಟಿಬಿಗಿದರಲ್ಲದೆ ರವಷ್ಟಾದರೂ ಸಡಿಲಿಸಲಾರರು. ಇಲ್ಲ. ಆದ್ದರಿಂದ ಅವರು ಹಾಗೆ ಮುಷ್ಟಿಬಿಗಿಯದಂತೆ ಆಕ್ಟಿನ ವಾಕ್ಯರಚನೆಯಲ್ಲಿಯೆ ಸ್ಪಷ್ಟತೆ ಇರಬೇಕು. ಇಂದಿಗೆ ೩೦ ವರ್ಷಗಳ ಹಿಂದೆಯೇ ಡಿಸ್ಟ್ರಿಕ್ಟ್ ಬೋರ್ಡುಗಳ ಪ್ರೆಸಿಡೆಂಟರನ್ನು ಮೆಂಬರರು ಚುನಾಯಿಸಬಹುದಾಗಿ ಅಧಿಕಾರವನ್ನು ಕೊಟ್ಟದ್ದರೂ ಕಾರ್ಯನಿರ್ವಾಹಕರು ಈ ವರೆಗೆ ಆ ಅಧಿಕಾರವನ್ನು ಮೆಂಬರುಗಳಿಗೆ ಕೊಡದಿರುವುದೇ ಇದಕ್ಕೆ ದೃಷ್ಟಾಂತವಾಗಿದೆ. ಇದೇ ರೀತಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ವೈಸ್ ಪ್ರೆಸಿಡೆಂಟರನ್ನೂ ತಾಲೂಕು ಬೋರ್ಡುಗಳಲ್ಲಿ ಪ್ರೆಸಿಡೆಂಟರನ್ನೂ ಚುನಾವಣೆಯಿಂದಲೇ ನೇಮಿಸಬೇಕೆಂದೂ ಇಂತಿಂಥ ಅಧಿಕಾರಗಳನ್ನು ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ವೈಸಪ್ರೆಸಿಡೆಂಟರುಗಳಿಗೆ ಕ್ರಮಾಂಕಿತವಾಗಿ ಸ್ಪಷ್ಟೀಕರಿಸಿ ಒಪ್ಪಿಸಬೇಕೆಂತಲೂ, ಸಂಕ್ಷೇಪವಾಗಿ ಹೇಳುವುದಾದರೆ—ಡಿಸೆಂಟ್ರಲಾಯ್ಜೇಶನ್ ಕಮಿಶನಿನವರು ಈ ಮೊದಲು ಕೊಟ್ಟ ಸೂಚನೆಗಳನ್ನೆಲ್ಲ ಮನ್ನಿಸಿ ಜಾರಿಗೆ ತರಬೇಕೆಂತಲೂ ನಮ್ಮ ಅಭಿಪ್ರಾಯ. ಈ ಸಂದರ್ಭದಲ್ಲಿ ಪ್ರತಿಯೊಂದು ತಾಲೂಕಿಗೆ ಒಂದು ತಾಲೂಕು ಬೋರ್ಡು ಇರಬೇಕು ಎಂದು ನಮ್ಮ ಸೂಚನೆ. ಈಗಿನ ಸ್ಥಿತಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಗಳನ್ನು ತಾಲೂಕು ಬೋರ್ಡಿನವರಿಗೆ ವಹಿಸಬೇಕೆಂತಲೂ ಡಿಸ್ಟ್ರಿಕ್ಟ್ ಬೋರ್ಡು ಎಂಬ ಬೇರೆ ಸಂಸ್ಥೆಯಿರುವುದು ತೀರಾ ಅನಾವಶ್ಯಕವೆಂತಲೂ, ಅದರ ಬದ್ಲಾಗಿ ಡಿಸ್ಟ್ರಿಕ್ಟಿನ ಎಲ್ಲಾ ತಾಲೂಕು ಬೋರ್ಡು ಮೆಂಬರುಗಳ ಸಭೆಯನ್ನು ವರ್ಷದಲ್ಲಿ ಒಂದೆರಡು ಸ

ಕೂಡಿಸಿ ಈ ತಾಲೂಕು ಬೋರ್ಡುಗಳಿಗೆ ಪರಸ್ಪರ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಬಹುದೆಂತಲೂ ನಾವು ಸೂಚಿಸುತ್ತೇವೆ. ಡಿಸೆಂಟ್ರಲಾಯ್ಜೇಶನ್ ಕಮಿಶನಿನವರ ಸೂಚನೆ ಮೇರೆಗೆ ಜನರಲ್ ಪಂಚಾಯತುಗಳನ್ನು ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸಿ ಅವುಗಳ ಅಧಿಕಾರವನ್ನು ಹೆಚ್ಚಿಸುವುದಕ್ಕೆ ಬೇಕಾದ ಕಾಯಿದೆಯನ್ನು ಮಾಡುವುದು ಅಗತ್ಯ

ಒಂದೊಂದು ತಾಲೂಕಿಗೆ ಒಂದೊಂದು ತಾಲೂಕು ಬೋರ್ಡನ್ನು ಏರ್ಪಡಿಸಿ ಡಿಸ್ಟ್ರಿಕ್ಟ್ ಬೋರ್ಡಿನ ಅಧಿಕಾರಗಳನ್ನು ಅದಕ್ಕೆ ವಹಿಸಿಕೊಟ್ಟರೆ ಬೋರ್ಡಿನ ಖರ್ಚು ಬಹಳ ತಗ್ಗುವದು. ಈ ಜಿಲ್ಲೆಯಲ್ಲಿ ಈಗಲೇ ಭೂಕಂದಾಯದ ಮೇಲೆ ರೂಪಾಯಿಗೆ ೧|| ಆಣೆ ಮೇರೆಗೆ ಸೆಸ್ಸು ವಸೂಲಾಗುತ್ತಲಿರುವುದರಿಂದ ಇನ್ನು ಅದನ್ನು ಹೆಚ್ಚಿಸಲಿಕ್ಕೆ ಸಾಧ್ಯವಿಲ್ಲ. ಹಣದ ತಗಾದೆ ಹೆಚ್ಚಿದ್ದಲ್ಲಿ ದೊಡ್ಡ ದೊಡ್ಡ ಗ್ರಾಮಗಳಲ್ಲಿನ ಪಂಚಾಯತುಗಳಿಗೆ ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿಗಳಲ್ಲಿರುವಂತೆ ಹೆಚ್ಚಿನ ಕಂದಾಯವನ್ನು ಹೇರಿಸುವ ಅಧಿಕಾರವನ್ನು ಕೊಡಬಹುದು; ಮತ್ತು ಕಾಪಿ ಮತ್ತು ಊಟದ ಹೊಟೇಲುಗಳು ಆರೋಗ್ಯಹಾನಿಗೆ ಕಾರಣವಾಗದಂತೆ ಅವುಗಳ ಮೇಲೆ ಬೋರ್ಡಿನವರಿಗೆ ಅಧಿಕಾರ ಕೊಡುವಂತೆಯೂ ಅವುಗಳು ತಮ್ಮ ಕೆಲಸ ಸಾಗಿಸುವುದಕ್ಕೆ ಲೈಸನ್ಸ್ ಪಡಕೊಳ್ಳುವಂತೆ ಮಾಡಬೇಕಾಗಿಯೂ ನಾವು ಸೂಚಿಸುತ್ತೇವೆ. ಇದರ ಅಭಿಪ್ರಾಯವು ಗೊತ್ತಾಗಬೇಕಾದರೆ ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳ ಆಡಳಿತೆಯ ಕ್ರಮವನ್ನು ತಿಳಿದುಕೊಳ್ಳುವುದು ಅವಶ್ಯಕ.

ಭೂಕಂದಾಯದೊಂದಿಗೆ ರೂಪಾಯಿಗೆ ೧ ಆಣೆ ಕಡಿಮೆಯಾಗದೆ ಲೋಕಲ್‌ಸೆಸ್ಸ ಎಂಬ ಉಪಕಂದಾಯವು ವಸೂಲಾಗುತ್ತದೆ ದಕ್ಷಿಣ ಕನ್ನಡ ಮತ್ತು ಮಲೆಬಾರಿನಲ್ಲಿ ೧ ರೂಪಾಯಿಗೆ ೨ ಆಣೆವರೆಗೆ ಕಂದಾಯ ವಸೂಲು ಮಾಡುವ ಅಧಿಕಾರವು ಬೋರ್ಡುಗಳಿಗೆ ಉಂಟು ಆಯಾ ತಾಲೂಕು ಬೋರ್ಡಿನ ವಿಸ್ತೀರ್ಣದೊಳಗೆ ವಸೂಲಾದ ಈ ಹಣದಲ್ಲಿ ಸೇಕಡಾ ೫೦ಕ್ಕೆ ಕಡಿಮೆಯಾಗದಷ್ಟು ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಆಯಾ ತಾಲೂಕು ಬೋರ್ಡಿಗೆ ಕೊಟ್ಟು ಉಳಿದುದನ್ನು ತಮ್ಮ ಕೈವಶ ಇಟ್ಟುಕೊಳ್ಳುವರು. ಈ ಹಣದಿಂದ ಇವರು ದೊಡ್ಡ ರಾಜರಸ್ತೆಗಳು, ಸಂಕ ಸೇತುವೆಗಳು ಮುಂತಾದ್ದನ್ನು ಕಟ್ಟಿಸುವುದಕ್ಕೆ ಉಪಕ್ರಮಿಸುತ್ತಾರೆ. ಗೇಟುಗಳ 'ಪರಿ' ಕಡವುಗಳ ಹಣ, ರಾಜರಸ್ತೆಗಳ ಬದಿಯಲ್ಲಿರುವ ಸಾಲುಮರಗಳ ಉತ್ಪತ್ತಿ, ಇವೆಲ್ಲ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಹೋಗುವುದು. ಮರಮ್ಮತ್ ಇಲಾಖೆಯ ಕೆಲಸವೇ ಇವರಿಗೆ ಹೆಚ್ಚಾಗಿರುವುದರಿಂದ ಇಂಜಿನಿಯರ್ ಇಲಾಖೆಯು ಇವರ ಅಧಿಕಾರದಲ್ಲಿದೆ

ಡಿಸ್ಟ್ರಿಕ್ಟ್ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟು ತಾಲೂಕು ಬೋರ್ಡುಗಳು ತಮಗೆ ಒಪ್ಪಿಸಿದ ಹಣದಿಂದ ಶಾಲೆ, ಆಸ್ಪತ್ರೆ, ಆರೋಗ್ಯ ಸಿಬ್ಬಂದಿ, ಮಾರ್ಕೆಟು, ರಸ್ತೆ ದೀಪಗಳು, ಹಳ್ಳಿ ರಸ್ತೆ, ಮುಸಾಫರಿ ಬಂಗ್ಲೆ ಇವುಗಳ ಖರ್ಚನ್ನು ನೋಡಿಕೊಳ್ಳುತ್ತವೆ. ಹಣವು ಸಾಕಾಗದಿದ್ದರೆ ಡಿಸ್ಟ್ರಿಕ್ಟ್ ಬೋರ್ಡಿನವರಿಂದಲೂ ಸರಕಾರದವರಿಂದಲೂ ಸಹಾಯದ್ರವ್ಯವು ದೊರಕುವುದರಿಂದ ತಾಲೂಕು ಬೋರ್ಡುಗಳ ಆದಾಯ ವ್ಯಯದ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಸರಕಾರದ ಮೇಲ್ವಿಚಾರವಿದೆ

ಡಿಸ್ಟ್ರಿಕ್ಟ್ ಬೋರ್ಡಿಗೆ ಕಲ್ಲೆಕ್ಟರರೂ, ತಾಲೂಕು ಬೋರ್ಡಿಗೆ ಆಯಾ ರೆವಿನ್ಯೂ ಡಿವಿಜನ್ ಆಫೀಸರರೂ ಅಧ್ಯಕ್ಷರು. ಆದರೆ ಆಲೋಚನೆ ಸಭೆಯೊಳಗಣ ಗವರ್ನರರವರ ಮಂಜೂರಾತಿಗೆ ಒಳಪಟ್ಟು ಮೆಂಬರರು ತಮ್ಮೊಳಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಬಹುದೆಂದು ಆಕ್ಟಿನಲ್ಲಿ ನಿಯಮವಿದೆ. ಆದರೆ ಇಷ್ಟರ ವರೆಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ಕಲ್ಲೆಕ್ಟರರ ವಿನಹಾ ಇತರರನ್ನು ಅಧ್ಯಕ್ಷರಾಗಿ ಆರಿಸಲಿಕ್ಕೆ ಸರಕಾರದವರು ಒಪ್ಪಲಿಲ್ಲ. ಈಚೆಗೆ ಒಂದೆರಡು ವರ್ಷಗಳಿಂದ ಕೆಲವು ತಾಲೂಕು ಬೋರ್ಡುಗಳಲ್ಲಿ ಮಾತ್ರ ಕಲೆಕ್ಟರರ ಶಿಫಾರಸಿನ ಮೇಲೆ ಪರೀಕ್ಷಾರ್ಥವಾಗಿ ಸರಕಾರಿ ಹುದ್ದೆದಾರರಲ್ಲದ ಗೃಹಸ್ಥರನ್ನು ಸರಕಾರದವರು ಪ್ರೆಸಿಡೆಂಟರಾಗಿ ನೇಮಿಸಿರುವರು.

ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳಲ್ಲಿ ಆರಿಸಲ್ಪಟ್ಟ ಅಥವಾ ಗವರ್ನಮೆಂಟಿನವರಿಂದ ನೇಮಿಸಲ್ಪಟ್ಟ (ಹುದ್ದೆದಾರರಲ್ಲದ) ವೈಸಪ್ರೆಸಿಡೆಂಟರಿದ್ದರೂ ಈ ವರೆಗೆ ಪ್ರೆಸಿಡೆಂಟರ ಹುಕುಮಿನ ತಾಜಾ ನಕಲುಗಳಿಗೂ ಕೆಲವು ಬಿಲ್ಲುಗಳಿಗೂ ದಸ್ಕತು ಮಾಡುವುದಲ್ಲದೆ ಹೆಚ್ಚಿನ ಅಧಿಕಾರಗಳು ಸಿಕ್ಕಲಿಲ್ಲ.

ಹೀಗಾದ ಕಾರಣ ಆಕ್ಟಿನಲ್ಲಿ ವಿಲೆವಾರಿಯಿದ್ದರೂ ಸರಕಾರದವರಾಗಲಿ ಅವರ ಕೈಕೆಳಗಣ ನವುಕರರಾಗಲಿ ತಮ್ಮ ಅಧಿಕಾರದಲ್ಲಿ ರವಷ್ಟಾದರೂ ಜನರಿಗೆ ಒಪ್ಪಿಸಿ ಕೊಡಲಿಕ್ಕೂ ಸ್ವಕೀಯ ರಾಜ್ಯಾಧಿಕಾರ ಕ್ರಮದಲ್ಲಿ ಪ್ರಜಾ ಜನರನ್ನು ಸೇರಿಸಿಕೊಂಡು ಅವರ ಸಹಾಯದಿಂದ ಕಾರ್ಯಭಾರವನ್ನು ನಿರ್ವಹಿಸಲು ಉದ್ಯುಕ್ತರಾಗಿಲ್ಲವೆಂಬುದು ಸ್ಪಷ್ಟವಾಗುವುದು.

ಪ್ಲೇಗು ನಿವಾರಣೆಯ ಉಪಾಯವು.

ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಗಳೊಂದರಲ್ಲಿ "Tincture of Iodine' ಟಿಂಕ್ಚರ್ ಆಫ್ ಅಯೋಡಿನ್ ಈ ಔಷಧಿಯಿಂದ ಪ್ಲೇಗು ರೋಗದ ಚಿಕಿತ್ಸೆ ನಡಿಸಿದ್ದಲ್ಲಿ ಹಲವರು ಗುಣ ಹೊಂದಿರುವರೆಂಬ ವೃತ್ತಾಂತವನ್ನು ಪ್ರಕಟಿಸಿದ್ದೆವು. ದೇಶದ ಹಲವು ಕಡೆಗಳಲ್ಲಿಯೂ ನಮ್ಮ ಈ ಪಟ್ಟಣದಲ್ಲಿ ಸಹ ಪ್ಲೇಗು ಈ ವರುಷದಲ್ಲಿ ವಿಶೇಷವಾಗಿ ಉಲ್ಬಣವಾಗಿದೆ. 'ಸಾಲ್ವೇಶನ್ ಆರ್ಮಿ' ಸಂಕಷ್ಟದಲ್ಲಿರುವವರಿಗೆ ವಿಶೇಷವಾಗಿ ಸಹಾಯಮಾಡುವ ಉದ್ದೇಶವುಳ್ಳ ಸಾಮಾನ್ಯವಾಗಿ ಮುಕ್ತಿ ಫೌಜು ಎಂತ ಹೆಸರುಗೊಂಡ ಈ ಸಂಘದ ಕಮಿಷನರ್ ಎಫ್. ಬಿ. ಬೂತ್ ಟಕರ್ ಎಂಬವರು ಟಿಂಚರ್ ಅಯೋಡಿನಿನ ಉಪಯೋಗದಿಂದ ಪ್ಲೇಗು ಬೇನೆಯು ವಾಸಿಯಾದ ಹಲವು ದೃಷ್ಟಾಂತಗಳನ್ನು ಜನರ ಲಕ್ಷ್ಯಕ್ಕೆ ತಂದಿರುತ್ತಾರೆ

ಕಳೆದ ವರುಷದ ಫೆಬ್ರವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ಮುಂಬಾಯಿಯಲ್ಲಿರುವ ಪ್ಲೇಗು ಪರಿಶೋಧನಾಲಯದಲ್ಲಿ ಮೇಜೊರ್ ಲಿಸ್ಟನ್‌ರವರು ಟಿಂಚರ್ ಅಯೋಡಿನಿನ ಔಷಧಿಯ ಚಿಕಿತ್ಸೆಯನ್ನು ಶೋಧಿಸಿ ನೋಡಿದ್ದಲ್ಲಿ ಪ್ಲೇಗು ಚಿಕಿತ್ಸೆಗೆ ಈ ಔಷಧಿಯಷ್ಟು ಉಪಯೋಗಕರವಾದದ್ದು ಮತ್ತೊಂದು ಔಷಧಿಯು ಇರದೆಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ ಮುಕ್ತಿ ಫೌಜಿನವರು ಈ ಔಷಧಿಯನ್ನು ಉಪಯೋಗಿಸುವ ವಿಧಾನದಲ್ಲಿಯೇ ಇದನ್ನು ಉಪಯೋಗಿಸಬೇಕೆಂತ ಈ ಡಾಕ್ಟರರು ಸಹ ಸೂಚಿಸಿರುತ್ತಾರೆ ಪಂಜಾಬು ಸರಕಾರದವರು ಟಿಂಕ್ಚರ್ ಅಯೋಡಿನಿನ ವಿಶೇಷತ್ವವನ್ನು ತಿಳಕೊಂಡು ಪಂಜಾಬು ಪ್ರಾಂತ್ಯಗಳಲ್ಲಿ ಕಳೆದ ವರುಷ ಪ್ಲೇಗು ಉಲ್ಬಣವಾದ ಕಾಲದಲ್ಲಿ ಈ ಔಷಧಿಯ ಪ್ರಯೋಗವನ್ನು ಜನರೆಲ್ಲರು ತಿಳಕೊಳ್ಳುವಂತೆ ದೇಶಭಾಷೆಗಳಲ್ಲಿ ಚಿಕ್ಕ ಪಹಿಗಳನ್ನು ಛಾಪಿಸಿ ಹಂಚಿದ್ದಾರೆ ಮುಕ್ತಿಫೌಜಿನವರ ಟಿಂಕ್ಚರ್ ಅಯೋಡಿನಿನ ಚಿಕಿತ್ಸೆಯಿಂದ ಪ್ಲೇಗು ರೋಗ ತಗಲಿದ ೭೦೩ ರೋಗಿಗಳಲ್ಲಿ ೫೭೩ ಜನರು ಗುಣ ಹೊಂದಿದರು ಹೀಗೆ ಈ ಚಿಕಿತ್ಸೆಯಿಂದ ಸೇಕಡಾ ೮೦ರಷ್ಟು ಜನರು ರೋಗ ತಗಲಿದರೂ ಬದುಕಬಹುದೆಂತ ತಿಳಿದುಬರುವದು

'ಟಿಂಕ್ಚರ್ ಅಯೋಡಿನ್' ಔಷಧಿಯನ್ನು ಉಪಯೋಗಿಸುವ ವಿಧಾನವಾದರೋ ಬಹಳ ಸಾಮಾನ್ಯವಾಗಿರುವದು ರೋಗ ತಗಲಿದವರಿಗೆ ಅರ್ಧ ಔನ್ಸ್ (ಸಾಧಾರಣ ಒಂದು ತೊಲೆ) ನೀರಿನಲ್ಲಿ ಒಂದು ತಟಕು ಟಿಂಕ್ಚರ್ ಅಯೋಡಿನನ್ನು ಪ್ರತಿ ಎರಡು ಘಂಟೆಗಳಿಗೆ ಒಂದು ಸಾರಿ ಕೊಡುವದು. ರೋಗಿಯು ಹಾಸಿಗೆಯಲ್ಲಿ ಅತ್ತಿತ್ತ ಹೊರಳಕೂಡದು. ಎದ್ದುಕೊಂಡು ಅತ್ತಿತ್ತ ತಿರುಗಾಡಲೂ ಕೂಡದು. ಮಲಗಿದಲ್ಲಿಯೇ ಇರಬೇಕು. ಹಾಲು ಇತ್ಯಾದಿ ತೆಳುಪದಾರ್ಥಗಳನ್ನು ಆಹಾರವಾಗಿ ಉಪಯೋಗಿಸಬೇಕು. ರೋಗಿಗೆ ದಾಹವಾದಾಗ ಕುದಿಸಿ ಆರಿಸಿಟ್ಟ ನೀರನ್ನು ಧಾರಾಳವಾಗಿ ಕುಡಿಯಲು ಕೊಡಬಹುದು ಬ್ಯೂಬೋಸ್‌ಗಳಿಗೆ ಟಿಂಕ್ಚರ್ ಅಯೋಡಿನನ್ನು ದಿನಕ್ಕೆ ಎರಡು ಎರಡು ಸಾರಿ ಹಚ್ಚುವದು ಟಿಂಕ್ಚರ್ ಅಯೋಡಿನನ್ನು ಔಷಧಿಯಾಗಿ ತಕೊಳ್ಳುವಾಗ ಇತರ ಯಾವ ಔಷಧಿಯನ್ನಾದರೂ ಸೇವಿಸಕೂಡದು. ಪ್ಲೇಗಿನ ಸೋಂಕು ಇರುವ ಪ್ರಾಂತ್ಯಗಳಲ್ಲಿರುವ ಜನರು ಪ್ರತಿನಿತ್ಯದಲ್ಲಿಯೂ ಟಿಂಕ್ಚರ್ ಅಯೋಡಿನಿನ ಒಂದು ಯಾ ಎರಡು ತಟಕುಗಳನ್ನು ಸ್ವಲ್ಪ ತಣ್ಣೀರಿನಲ್ಲಿ ಬೆರಸಿ ತಕ್ಕೊಂಡರೆ ರೋಗವು ತಗಲುವದು ಸಹ ಇಲ್ಲ. ಹಾಗೆ ಒಂದುವೇಳೆ ತಗಲಿದರೂ ಬೇನೆಯು ಬಹಳ ಕಠಿಣವಾಗದು

ಮುಕ್ತಿ ಫೌಜಿನವರು ಮಾತ್ರವಲ್ಲ, ಮುಂಬಾಯಿಯ ಮೆಜೊರ್ ಲಿಸ್ಟನ್‌ರವರೂ ಪಂಜಾಬಿನ ಸರಕಾರದವರು ಸಹ ವಿಶೇಷ ಗುಣಕಾರಿಯೆಂತ ಹೇಳುವ ಈ ಔಷಧಿಯನ್ನು ಇಲ್ಲಿ ನಮ್ಮ ಪಟ್ಟಣದಲ್ಲಿ ಸಹ ಡಾಕ್ಟರರುಗಳೂ ಇತರರೂ ಉಪಯೋಗಿಸಿ ನೋಡಬಹುದೆಂತ ತೋರುತ್ತದೆ.

ಮಲೆಜ್ವರ ನಿವಾರಣೆಯು ಕ್ವಿನೀನ್ ಯಾ "ಕೊಯಿನಾನ್".

ದುಡ್ಡು ಯಾ ದುಗ್ಗಾಣಿ ಪೊಟ್ಟಣಗಳಲ್ಲಿ ಟಪ್ಪಾಲುಕಟ್ಟೆಗಳಲ್ಲಿ ಕ್ರಯಕ್ಕೆ ದೊರಕುವ ಸಾಧಾರಣ ಗುಲಾಬಿ ಛಾಯೆಯ ಹುಡಿಯು ಕ್ವಿನೀನ್ ಯಾ 'ಕೊಯಿನಾನ್' ಆಗಿರುವದೆಂತ ಸರ್ವರೂ ತಿಳಿದಿರುವರು. ಪ್ರಕೃತ ಯುದ್ಧದಲ್ಲಿ ಕಾದಾಡುವ ಭಟರಿಗೆ ಜ್ವರ ಇತ್ಯಾದಿ ಬಾಧೆಗಳ ನಿವಾರಣೆ ಬಗ್ಗೆ ಈ ಕ್ವಿನೀನ್ ಉಪಯೋಗಿಸಲ್ಪಡುವದರಿಂದ ಇದರ ಕ್ರಯವು ವಿಪರೀತ ಏರಿರುವದು. ಟಪ್ಪಾಲುಕಟ್ಟೆಗಳಲ್ಲಿ ಒಂದು ವೇಳೆ [illegible]

ವರ್ಗಕ್ಕೆ ಗೊತ್ತಾದ ರೋಗವಾಗಿದ್ದರೂ ಇದರ ನಿವಾರಣೆಗೆ ಕ್ವಿನೀನ್ ಸೇವನೆಯಲ್ಲದೆ ಇತರ ಯಾವ ಉಪಾಯವೂ ಇರದೆಂಬುದು ಇತ್ತೀಚೆಗೆ ಚೆನ್ನಾಗಿ ತಿಳಿದುಬಂದಿದೆ. ಮಲೇರಿಯಾ ಜ್ವರವು ವಿಶೇಷವಾಗಿರುವ ಪ್ರಾಂತ್ಯಗಳಲ್ಲಿ ಕ್ವಿನೀನನ್ನು ಅಲ್ಪಸ್ವಲ್ಪ ತಕ್ಕೊಳ್ಳುತ್ತ ಬಂದರೆ ಈ ಜ್ವರವು ತಗಲದು. ಮಲೇರಿಯಾ ಜ್ವರವು ವಿಶೇಷವಾಗಿರುವ ಪ್ರಾಂತ್ಯಗಳು ನಮ್ಮಲ್ಲಿ ಹಲವಿವೆ. ಈ ಪ್ರಾಂತ್ಯಗಳಲ್ಲಿ ಜ್ವರಬಾಧೆಯಿಂದ ಜನರಿಗೆ ಉಳಿಕೊಳ್ಳುವುದು ಅಸಾಧ್ಯವಾಗಿ ಅನೇಕ ಬಯಲುಗಳು ಕೃಷಿ ಇಲ್ಲದೆ ಬಂಜರು ಬಿದ್ದಿರುವವು. ಇಂಥಾ ಕಡೆಗಳಲ್ಲಿರುವ ಕೆಲವು ಜನ ಕೃಷಿಕರಿಗೂ ಇತರ ನಿವಾಸಿಕರಿಗೂ ಈ ಜ್ವರದ ನಿವಾರಣೆಯೇ ತಿಳಿಯದು. ಕ್ವಿನೀನ್ ಸೇವನೆ ಮೊದಲಾದ ಮಲೇರಿಯಾ ಜ್ವರ ನಿವಾರಣೆಯ ಉಪಾಯಗಳ ಕುರಿತು ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಗಳಲ್ಲಿ ಆಗಿಂದಾಗ್ಗೆ ಪ್ರಸ್ತಾಪ ಬಂದಿದೆ. ಆದರೆ ಕ್ವಿನೀನಿನ ಚರಿತ್ರೆಯನ್ನು ತಿಳಿದವರು ಬಹಳ ಮಂದಿ ಇರರು. "ಸಿಂಕೊನಾ" ಶಿಪ್ಪೆಯಿಂದ ಕ್ವಿನೀನನ್ನು ತಯಾರಿಸುವರು. ೧೬೩೮ರಲ್ಲಿ ಅಮೇರಿಕದ ಪೇರು ಎಂಬಲ್ಲಿ ಸ್ಪೈನ್ ದೇಶದ ವ್ಯಾಪಸರಾಯರುಗಳ ಪತ್ನಿ ಕೌಂಟೆಸ್ ಡೆಲ್ ಸಿಂಕೊನ್ ಎಂಬವರಿಗೆ ಮಲೇರಿಯಾ ಜ್ವರವು ಹಿಡಿಯಿತು. ಎಂಥಾ ಔಷಧಿಗಳನ್ನು ಉಪಯೋಗಿಸಿದರೂ ಜ್ವರವು ವಾಸಿಯಾಗದೆ ವ್ಯಾಪಸರಾಯರು ಪ್ರಭುಗಳು ಪತ್ನಿಯ ಜೀವದಾಶೆಯನ್ನು ಬಿಟ್ಟಿದ್ದರು. ಇಷ್ಟರಲ್ಲಿ ಆ ಸಂಸ್ಥಾನದ ಜಿಲ್ಲಾಧಿಕಾರಿಗಳಲ್ಲೊಬ್ಬರು ಜ್ವರಕ್ಕೆ ಅಲ್ಲಿಯ ಮೂಲ ನಿವಾಸಿಗಳಾದ ಇಂಡಿಯನ್ಸ್ ಎಂಬವರು ಉಪಯೋಗಿಸುತ್ತಿದ್ದ ಒಂದು ಮರದ ಕೆತ್ತೆಯ ಹುಡಿಯನ್ನು ಕಳುಹಿಸಿಕೊಟ್ಟರು. ಈ ಹುಡಿಯನ್ನು ಸೇವಿಸುತ್ತ ಪ್ರಭು ಪತ್ನಿಗಳಿಗೆ ರೋಗವು ವಾಸಿಯಾಯಿತು. ಪೇರು ಸಂಸ್ಥಾನದಿಂದ ಪ್ರಭು ಪತ್ನಿಯರು ಯುರೋಪಿಗೆ ಬರುವಾಗ ತಮ್ಮೊಡನೆ ಈ ಮರದ ಶಿಪ್ಪೆಯನ್ನು ತಕ್ಕೊಂಡು ಬಂದರು. ೧೬೪೦ರಲ್ಲಿ ಈ ಮರದ ಕೆತ್ತೆಯ ಹುಡಿಯು ರೋಮ ಪಟ್ಟಣದಲ್ಲಿ "ಕೌಂಟೆಸ್ ಪೌಡರ್" ಅಂದರೆ ಪ್ರಭುಪತ್ನಿಯರ ಹುಡಿಯೆಂತ ಜ್ವರದ ಚಿಕಿತ್ಸೆಯಲ್ಲಿ ಉಪಯೋಗಿಸಲ್ಪಟ್ಟಿತು. ೧೬೫೮ರಲ್ಲಿ ಕಲ್ಕತ್ತೆಯಲ್ಲಿ ಡಾಕ್ಟರ್ ಬೋಗ್ ಎಂಬವರು ಇದನ್ನು ಉಪಯೋಗಿಸಿದರು. ೧೬೭೦ರಲ್ಲಿ ಮಲೇರಿಯಾ ಜ್ವರವು ಇಂಗ್ಲಾಂಡದಲ್ಲಿ ವಿಶೇಷವಾಗಿದ್ದಾಗ ಈ ಮರದ ಕೆತ್ತೆಯ ಹುಡಿಯನ್ನು ಔಷಧಿಯಾಗಿ ಉಪಯೋಗಿಸಿಕೊಂಡು ಹಲವರು ಜ್ವರ ಬಾಧೆಯಿಂದ ರಕ್ಷಿಸಲ್ಪಟ್ಟರು. ಇಂಗ್ಲಾಂಡದಲ್ಲಿ ಈ ಹುಡಿಯು ಯಾವದರಿಂದ ತಯಾರಿಸಲ್ಪಟ್ಟಿದೆಂಬುದನ್ನು ಹೇಳದೆ ಆ ಕಾಲದ ಪ್ರಸಿದ್ಧ ಡಾಕ್ಟರರಾಗಿದ್ದ ಸರ್ ರೋಬರ್ಟ್ ಟಿಲ್‌ಬೋಟ್ ಎಂಬವರು ಈ ಔಷಧಿಯನ್ನು ಸೇರಿಗೆ ರೂ. ೧೫,೦೦೦ ಪ್ರಕಾರ ಮಾರಿ ವಿಶೇಷ ದ್ರವ್ಯ ಸಂಪಾದನೆಯನ್ನು ಮಾಡಿದ್ದರು. ಫ್ರಾನ್ಸ್‌ದೇಶದ ಅರಸರಾಗಿದ್ದ ೧೪ನೇ ಲೂಯಿಸ್ ಎಂಬವರಿಗೆ ಈ ರೋಗಬಾಧೆಯು ತಗಲಿದಾಗ ಇಂಗ್ಲಾಂಡದ ಈ ವೈದ್ಯ ಟಿಲ್‌ಬೋಟ್‌ರವರು ಫ್ರಾನ್ಸಿಗೆ ಹೋಗಿ ಅರಸರನ್ನು ಈ ಹುಡಿಯ ಚಿಕಿತ್ಸೆಯಿಂದ ಗುಣಪಡಿಸಿದ್ದಕ್ಕೆ ರೂ ೭ಲಕ್ಷವನ್ನು ಇನಾಮಾಗಿ ಪಡೆದರು. ನಂತರ ಈ ಡಾಕ್ಟರರ ಉಪಕಾರ ಸ್ಮರಣೆಗಾಗಿ ರೂ ೩೦,೦೦೦ದ ವರುಷಾಸನವನ್ನು ಇದೇ ಅರಸರು ಡಾಕ್ಟರ್ ಟಿಲ್‌ಬೋಟ್‌ರವರಿಗೆ ಕೊಟ್ಟಿದ್ದರು. ಈ ಕಾಲದ ನಂತರ ಈ ಹುಡಿಯು ಪ್ರಭುಪತ್ನಿಯರ ಹೆಸರಲ್ಲಿ ಸಿಂಕೊನಾ ಹುಡಿಯೆಂತ ಸರ್ವರಿಗೂ ಗೊತ್ತಾಯಿತು. ಸಿಂಕೊನಾದಿಂದ ಈಗ ಕ್ವಿನೀನನ್ನು ತಯಾರಿಸುತ್ತಾರೆ. ಕ್ವಿನೀನಿನ ಉಪಯೋಗದಿಂದ ಯುರೋಪ ಖಂಡದಲ್ಲಿ ಮಲೇರಿಯಾದ ಹಾವಳಿಯು ಬಹಳ ಕಡಮೆಯಾಗಿರುವದು. ಹಿಂದೂಸ್ಥಾನದಲ್ಲಿ ಇದರ ಉಪಯೋಗವನ್ನು ವಿಶೇಷವಾಗಿ ರೂಢಿಗೆ ತಂದರೆ ಪ್ರಜಾಜನರಿಗೆ ಮಹದುಪಕಾರವಾಗುವದು.

ಪತ್ರವ್ಯವಹಾರ.

ಒಂದು ದುಃಖಕರ ನೋಟವು.

ಪತ್ರಾಧಿಪರೇ,

"ನಡೆಯಲಾರೆ ಸಮೀಪ ಇರುವ ಈ ಮಗುವನ್ನು ನೋಡಿಕೊಂಡು ದುಡ್ಡು ದುಗ್ಗಾಣಿ ಕೊಟ್ಟರೆ ಉಪಕಾರವಾದೀತು"—ಕದ್ರಿಗೆ ಹೋಗುವಾಗ ರಾಜಶ್ರೀ ವಕೀಲ ಮಿಜಾರ ಗಣೇಶ ಪೈಗಳವರ ಮನೆಯ ದಾರಿಯ ಸಮೀಪ ಇರುವ ಆಲದ ಮರದ ಬುಡದಿಂದ ಈ ಸ್ವರವು ಕೇಳಿಸಿತು, ಒಂದೆರಡು ಹೆಜ್ಜೆಗಳು ಮುಂದರಿಸಿ ಹೋಗಿದ್ದೆನು. ಈ ಸ್ವರವು ಎಲ್ಲಿಂದ ಹೊರಟಿತು ಎಂತ ಹಿಂದಿರುಗಿ ನೋಡಿದೆನು. ನಡೆಯಲಾರದ ಸುಮಾರು ೩೫ ವರುಷ ಪ್ರಾಯದ ಸ್ತ್ರೀ. ಹತ್ತಿರ ಎರಡು ಮೂರು ವರ್ಷ ಪ್ರಾಯದ ಗಂಡು ಮಗು. ಇವರಿಬ್ಬರ ಸಮೀಪ ಒಬ್ಬ ರೋಮನ್ ಕೆಥೋಲಿಕ ಸ್ತ್ರೀಯು ಏನೋ ಮಾಡುತ್ತ ನಿಂತಿದ್ದಳು. ನಡೆಯಲಾರದ ಸ್ತ್ರೀಯು ಕೊಂಕಣಿ ಭಾಷೆಯಲ್ಲಿ ಮಾತಾಡುತ್ತಿದ್ದಳು. ಇವಳು ಜಾತಿಯಲ್ಲಿ ಗೌಡಸಾರಸ್ವತಳು. ಕೆಟ್ಟ ಶೀಲದಿಂದ ಈ ಗತಿಯು ಆಕೆಗೆ ಪ್ರಾಪ್ತಿಸಿತೆಂದು ತಿಳಕೊಂಡೆನು. ಈ ಸ್ತ್ರೀಯ ಹತ್ತಿರವಿದ್ದ ರೋಮನ್ ಕೆಥೋಲಿಕ ಸ್ತ್ರೀಯು ಇವಳನ್ನು ಮಗುವಿನೊಂದಿಗೆ ಕ್ರೈಸ್ತರ ಅನಾಥ ಗೃಹಕ್ಕೆ ಕರಕೊಂಡು ಹೋಗಲು ಬಂದಿರುವಳೋ ಎಂಬುದಾಗಿ ಸಂಶಯ ಪಟ್ಟೆನು. ಮರದ ಬುಡದಲ್ಲಿ ಈ ಉಪವಾಸ ಬೀಳುವ ತಾಯಿಗೂ ಮಗುವಿಗೂ ಕ್ರೈಸ್ತರು ಆಶ್ರಯ ಕೊಟ್ಟರೆ ಅದು ಉಪಕಾರವೇ ಸರಿ ಎಂತ ಭಾವಿಸಿದೆನು.

ಗೌಡಸಾರಸ್ವತರು—ಈ ಜಿಲ್ಲೆಯಲ್ಲಿ ಪ್ರಮುಖ ಜಾತಿಯವರು. ಹಲವು ವಿದ್ಯಾವಂತರು ಈ ಜಾತಿಯಲ್ಲಿರುತ್ತಾರೆ. ಜಾತಿಯನ್ನು ಉದ್ಧರಿಸಬೇಕೆಂಬುವ ಉದ್ದೇಶದಿಂದ ವಿದ್ಯಾಶಾಲೆಗಳನ್ನೂ ಬೇಂಕು ಇತ್ಯಾದಿಗಳನ್ನೂ ಸ್ಥಾಪಿಸಿರುತ್ತಾರೆ. ಹಲವು ಜನ ಸಂಪನ್ನ ವರ್ತಕರೂ, ವಕೀಲರೂ, ವರ್ಗದಾರರೂ ಮೊದಲಾದವರು ಈ ಜಾತಿಯಲ್ಲಿ ಜಿಲ್ಲೆಯ ಬೇರೆ ಬೇರೆ ಪ್ರಾಂತ್ಯಗಳಲ್ಲಿರುವರು. ಇವರಲ್ಲಿ ನಿರ್ಗತಿಕರಾಗಿರುವವರ ಸ್ಥಿತಿಯನ್ನು ತಮ್ಮ ಪತ್ರದ ಮೂಲಕ ಈ ಜಾತಿಯವರ ಲಕ್ಷ್ಯಕ್ಕೆ ತಂದರೆ ಇಂಥಾ ನಿರ್ಗತಿಕತನವನ್ನು ಸಾಧ್ಯವಾದಷ್ಟು ಮಟ್ಟಿಗೆ ಹೋಗಗೊಳಿಸುವರು. ಮತ್ತು ಈ ಜಾತಿಯವರು ಮಾಡಿದ ಇಂಥಾ ಸಾಧನೆಯನ್ನು ನೋಡಿ ಈ ಜಿಲ್ಲೆಯ ಇತರ ಜಾತಿಯವರೂ ಸಹ ಇವರನ್ನು ಅನುಸರಿಸುವರು ಅಥವಾ ಇವರೊಡನೆ ಕೂಡಿಕೊಂಡು ಸಮಾಜದಲ್ಲಿ ಇತ್ತೀಚೆಗೆ ವಿಶೇಷವಾಗಿ ಕಂಡುಬರುವ ಇಂಥಾ ದುಃಖ ದಾರಿದ್ರ್ಯಗಳ ನಿವಾರಣೆಯು ಆಗಬಹುದೆಂಬ ಕೋರಿಕೆಯಿಂದ ಈ ವಿಜ್ಞಾಪನೆಯನ್ನು ಬರಕೊಂಡಿರುತ್ತೇನೆ.

ಸ್ವಾಮಿ, ಕೆಟ್ಟ ಶೀಲದವರನ್ನು, ಜಾರಿತಪ್ಪಿ ನಡದಂಥವರನ್ನು ದೂರ ತಳ್ಳಿಕೊಂಡು ನಡಿಯುವದು ಸಮಾಜದಲ್ಲಿ ವಾಡಿಕೆಯಾಗಿದೆ. ಇಂಥವರನ್ನು ಕೂಡಿ ನಡಿಯುವದು ಜಾತಿಮರ್ಯಾದೆಗಳಿಗೆ ಉಚಿತವಲ್ಲ. ಇಷ್ಟೇ ಮಾತುಗಳನ್ನು ಹೇಳಿದರೆ ಸಮಾಜದ ವಾಡಿಕೆಯ ವಿಷಯ ಇದ್ದದ್ದನ್ನು ಇದ್ದಹಾಗೆಯೇ ಹೇಳಿದಂತಾಗಲಿಲ್ಲ. ತತ್ಕಾಲ ಘಾತ್ರಕ್ಕೆ ಸಮಾಜವನ್ನು ಗೌರವದ ದೃಷ್ಟಿಯಿಂದ ನೋಡಿದರೆ ಕೆಟ್ಟ ಶೀಲದವರು ದಾರಿ ತಪ್ಪಿ ಹೋದವರು ಸಮಾಜದಲ್ಲಿ ಹಲವರಿರುತ್ತಾರೆ. ಅಧಿಕಾರ ಬಲ, ದ್ರವ್ಯದ ಬಲ,—ಇವುಗಳ ಬಲದಿಂದ ಸಮಾಜ ದೃಷ್ಟಿಯನ್ನು ಕಟ್ಟಿ ಎಷ್ಟೋ ಜನರು ಸುಶೀಲವಂತರು ಮರ್ಯಾದಸ್ಥರು ಎಂತ ಎನ್ನಿಸಿಕೊಳ್ಳುವರು. ಅಂದರೆ ಒಂದು ಸಲ ತಪ್ಪಿಬಿದ್ದವರಿಗೆ ತಮ್ಮ ತಪ್ಪನ್ನು ಅಡಗಿಸಿಕೊಂಡು ಮುಂದಕ್ಕಾದರೂ ಸುಶೀಲವಂತರಾಗಿ ನಡಿಯುವ ಸಂದರ್ಭಗಳು ಅಧಿಕಾರ ಮತ್ತು ದ್ರವ್ಯ ಸಂಪನ್ನತೆಗಳಿದ್ದರೆ ದೊರಕುತ್ತವೆ. ಇಂಥಾ ಸಂದರ್ಭಗಳಿಂದ ಪ್ರಯೋಜನ ಪಡಿಯುವವರು ಅಥವಾ ಜೀವಾಂತ್ಯದವರೆಗೂ ತಮ್ಮ ಅಧಿಕಾರ ಬಲದಿಂದ ಪಾಪಕರ್ಮಗಳಲ್ಲಿಯೇ ನಿರತರಾಗಿದ್ದು ಇವುಗಳನ್ನು ಅಡಗಿಸುವಂಥವರು ಇರಬಹುದು. ಇವರ ಮಾತು ಹಾಗಿರಲಿ. ಮರದ ಬುಡದಲ್ಲಿದ್ದ ಆ ಹೆಂಗಸಿಗೂ ದುರಾಚಾರರಾಗಿದ್ದರೂ ಸಂಪನ್ನರಾದ್ದರಿಂದ ಸಮಾಜದ ಮನ್ನಣೆಗೆ ಪಾತ್ರರಾಗಿದ್ದವರಿಗೂ ವ್ಯತ್ಯಾಸವೇನು? ಅಧಿಕಾರ ಅಥವಾ ದ್ರವ್ಯಬಲ ಅವುಗಳಿಲ್ಲದ ಪಾಪಿಷ್ಟರು ಒಂದೇ ಒಂದು ಸಲ ತಪ್ಪಿಬಿದ್ದೊಡನೆ ಕೂಡಲೆ ಇವರು ಜಾತಿಯಿಂದ ಹೊರಬೀಳುವರು. ಎಷ್ಟು ಪಶ್ಚಾತ್ತಾಪ ಪಟ್ಟರೂ ಇನ್ನು ತಪ್ಪಿಬೀಳೆನೆಂದು ಮನೋವಾಕ್ಕಾಯಗಳಿಂದ ದೃಢ ಪ್ರತಿಜ್ಞೆಗಳನ್ನು ಮಾಡಿಕೊಂಡರೂ ಜಾತಿಯಲ್ಲಿ ಇಂಥವರಿಗೆ ಸ್ಥಳವಿಲ್ಲ. ಇಂಥವರಿಗೇನು ಗತಿ? ಸಮಾಜದಲ್ಲಿ ಇಂಥವರಿಗೆ ಸ್ಥಾನವೆಲ್ಲಿ? ಸಮಾಜ ರಚನೆಯು ಪ್ರಕೃತ ಕುಸಿದು ಬಿದ್ದಿದೆ. ಜಾತಿ ಬಹಿಷ್ಕೃತರಾದರೆಂದ ಕೂಡಲೆ ಇಂಥವರು ಲೋಕದಿಂದ ಅದೃಶ್ಯರಾಗಿ ಹೋಗರು. ಆದ್ದರಿಂದ ಇಂಥವರನ್ನು ಇಚ್ಛಾನುಸಾರ ಪಾಪಿಷ್ಠರಾಗಿ ವರ್ತಿಸಲು ಬಿಟ್ಟು ಸಮಾಜದಲ್ಲಿ ಪತಿತರ ಸಂಖ್ಯೆಯು ಹೆಚ್ಚುವದೋ ಅಥವಾ ಇಂಥವರ ಆರೈಕೆ ಬಗ್ಗೆ ಸಕಲ ವ್ಯವಸ್ಥೆಗಳನ್ನು ಮಾಡಿದ ಕ್ರೈಸ್ತರ ಕೈವಶ ಇವರನ್ನು ಬಿಟ್ಟುಕೊಡುವದೋ? ಈ ಎರಡು ವಿಧಾನಗಳೂ ತೃಪ್ತಿಕರವಲ್ಲದಿದ್ದರೆ ಇಂಥವರ ಬಗ್ಗೆ ಸಮಾಜದಲ್ಲಿ ಯಾವ ಏರ್ಪಾಡನ್ನು ವ್ಯವಸ್ಥೆಗೊಳಿಸಬಹುದು?

ಆಲದ ಮರದ ಕೆಳಗಿನ ಗೌಡಸಾರಸ್ವತ ಆ ಪತಿತ ಸ್ತ್ರೀ ಮತ್ತು ಆಕೆಯ ಮಗು—ಈ ದುಃಖಕರವಾದ ನೋಟದಿಂದ ಮೇಲಿನ ವಿಚಾರಗಳು ನನ್ನಲ್ಲಿ ಹುಟ್ಟಿದವು. ಗೌಡಸಾರಸ್ವತರ ಮತ್ತು ಇತರ ಜಾತಿಯವರ ಲಕ್ಷ್ಯಕ್ಕೆ ನನ್ನ ಅಲ್ಪ ಮತಿಗೆ ತೋರಿರುವ ಯೋಚನೆಗಳನ್ನು ತಂದಿರುವೆನು.

ಯುದ್ಧ ಸಮಾಚಾರ.

ತಾ. ೧೮ನೇ ಜನವರಿ.

ಜರ್ಮನ್ ಕೈಸರರು ರಣರಂಗಕ್ಕೆ ಹೋಗಿರುತ್ತಾರೆಂತ ಪ್ರಕಟವಾಗಿದೆ ಎಂತ ಅಮ್‌ಸ್ಟರ್‌ಡಮಿನಿಂದ ವಾರ್ತೆ ಬಂದದೆ

ಪೂರ್ವ ಗೆಲೀಸಿಯದಲ್ಲಿ ಮತ್ತು ಬಸ್ಸರೆಬಿಯದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಹಲವು ಪ್ರಾಂತ್ಯಗಳಲ್ಲಿ ಘೋರವಾದ ಕೈದುಡುಕಿನ ಕಾಳಗ ನಡೆದಿರುವದು. ರುಶ್ಯನರು ಬಹಳ ಶೂರತನದಿಂದ ಕಾದಾಡಿರುವರು ಎಂತ ಆಸ್ಟ್ರಿಯನರು ಪ್ರಕಟಿಸಿರುವರು

ಸ್ಟೈರ ನದಿಯನ್ನು ದಾಟಿ ಹಿಂದೆ ಸರಿಯುವದು ಆಸ್ಟ್ರಿಯ ಜರ್ಮನ ಸೇನಿಕರಿಗೆ ಬಹು ಪ್ರಯಾಸಕರವಾದ ಕೆಲಸವಾಗಿತ್ತು ರುಶ್ಯನರು ಬಹಳ ಜೋರಾವರಿಯಿಂದ ಶತ್ರುಗಳ ಮೇಲೆ ಅಭಿಯೋಗ ಮಾಡಿದರು. ಶತ್ರುಗಳ ಒಂದು ಸೇನಾಪಾಳಯದಲ್ಲಿ ಸುಮಾರು ಅರ್ಧಾಂಶ ನಷ್ಟವಾಗಿರುವದು

ಸಿಟಿಂಜಯಲ್ಲಿ ಮೊಂಟಿನಿಗ್ರೋದ ಅರಸರ ಅರಮನೆ ಮತ್ತು ಪಟ್ಟಣ ಈ ವರೆಗೆ ಹಾಳಾಗಲಿಲ್ಲವೆಂತ ಆಸ್ಟ್ರಿಯಾನರು ಪ್ರಕಟಿಸಿರುವರು

ಯುದ್ಧವನ್ನು ತತ್ಕಾಲಿಕ ನಿಲ್ಲಿಸಿ ಸಂಧಾನ ಮಾಡಬೇಕೆಂದು ವಿಹಿತವೆಂತ ಆಸ್ಟ್ರಿಯಾನರು ಮೊಂಟಿನಿಗ್ರೋಯನರನ್ನು ಕೇಳಿಕೊಂಡರೆಂತಲೂ ಲೊವಹನನ್ನು ಆಸ್ಟ್ರಿಯಾನರಿಗೆ ಬಿಟ್ಟುಕೊಟ್ಟರೆ ಸ್ವಕಾರಿಯಲ್ಲಿ ಮೊಂಟಿನಿಗ್ರೋಯನರಿಗೆ ಸ್ವಾತಂತ್ರ್ಯವನ್ನು ಕೊಡುವೆವೆಂದು ಆಸ್ಟ್ರಿಯಾನರು ಹೇಳಿದರೆಂತಲೂ ಅಥೆನ್ಸ್ ಬಾತ್ಮೀದಾರರು ತಿಳಿಸಿರುವರು ಮೊಂಟಿನಿಗ್ರೋಯನರು ಪ್ರತ್ಯೇಕ ಸಂಧಾನಮಾಡಿಕೊಳ್ಳಲು ಒಪ್ಪಲಿಲ್ಲವೆಂತ "ಟ್ರಿಬ್ಯೂನ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಿಟಿಂಜಯಲ್ಲಿ ಒಬ್ಬ ಮೊಂಟಿನಿಗ್ರೋಯನಾದರೂ ಶತ್ರುಗಳ ಕರೆ ಕೇಳಲಿಲ್ಲವೆಂತ "ಬೆರ್ಲಿನರ್ ಟೆಗ್‌ಬ್ಲಟ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ

ಆಸ್ಟ್ರಿಯ ಮತ್ತು ಜರ್ಮನ ಸೇನಿಕರನ್ನು ಸಲೋನಿಕ ಮತ್ತು ಬಕೋವಿನಕ್ಕೆ ಕಳುಹಿಸಿಕೊಡಬೇಕಾದ್ದರಿಂದ ಇಟಲಿ ಮತ್ತು ಮೊಂಟಿನಿಗ್ರೊ ಪ್ರಾಂತ್ಯಕ್ಕೆ ಟರ್ಕಿ ಮತ್ತು ಬಲ್ಗೇರಿಯಾನರ ಸೇನಿಕರು ಹೋಗಿರುವರೆಂತ ವಾರ್ತೆ ಬಂದದೆ

ಸರ್ವಿಯಾ ಸರಕಾರದ ಮೆಂಬರರು ಬ್ರಿಂಡೀಸಿಗೆ ಬಂದು ತಲಪಿರುವರು ಬ್ರಿಟಿಷರ ಫಿರಂಗಿಗಳು ಜರ್ಮನರ ಒಂದು ವಾಯುನಾವೆಯನ್ನು ಕೆಳಬೀಳಿಸಿರುವದು ವಾಯುನಾವಿಕರಲ್ಲಿ ಇಬ್ಬರು ಮಡಿದಿರುವರು

ಇಟಲಿ ರಣರಂಗದಲ್ಲಿ ಗೊರಿಡ್ಜದ ಬಳಿ ಕಾಳಗ ನಡಿಯುತ್ತಿರುವದು, ಶತ್ರುಗಳು ರಾತ್ರಿಕಾಲ ದೊಡ್ಡ ಸೇನೆಯೊಡನೆ ಹಲ್ಲಾ ಮಾಡಿದರು. ಇಟಲಿಯಾನರು ಅವರನ್ನು ಓಡಿಸಿದರು ಆದರೆ ಶತ್ರುಗಳಿಗೆ ಪುನಃ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಒಸ್ಲಾವ್ಯದ ಬಳಿ ಶತ್ರುಗಳು ಕಂದಕಗಳನ್ನು ಸ್ವಾಧೀನಮಾಡಿಕೊಂಡರು ಇಟಲಿಯಾನರು ಬಲೋದ್ಧಂದಿಯಿಂದ ಶತ್ರುಗಳನ್ನು ಒಸ್ಲಾವ್ಯದಿಂದ ಹಿಂದಕ್ಕೆ ಓಡಿಸಿ, ಬಹಳ ಕೊಳ್ಳೆಯನ್ನು ಹಿಡಿದರು

ಈಜಿಪ್ಟ್ ಸರಹದ್ದಿನ ಎಲ್ಲಾಧ್ರ ಎಂಬಲ್ಲಿ ೪೦೦ ಅರಬಿಯನರನ್ನು ನಮ್ಮವರು ಚೆದರಿಸಿ ಬಿಟ್ಟಿರುತ್ತಾರೆ. ಅರಬಿಯರು ಕುರಿ ಆಡುಗಳನ್ನೂ ಢೇರೆಗಳನ್ನೂ ಬಿಟ್ಟು ಓಡಿರುವರು. ಬ್ರಿಟಿಷ ಸೇನೆಯಲ್ಲಿ ಪ್ರಾಣಾಪಾಯವಾಗಲಿಲ್ಲ

ಕಾಕಾಸಸಿನಲ್ಲಿ ರುಶ್ಯನರಿಗೆ ಒಂದು ದೊಡ್ಡ ಜಯವಾಗಿದೆ ರುಶ್ಯನರು ೩೦ ಟರ್ಕಿ ಆಫೀಸರರನ್ನೂ ೪೦೦ಕ್ಕಿಂತ ಹೆಚ್ಚಿಗೆ ಸೇನಿಕರನ್ನೂ ೬ ಫಿರಂಗಿಗಳನ್ನೂ ೮ ಯಂತ್ರಚಾಲಕ ಫಿರಂಗಿಗಳನ್ನೂ ಬಹಳ ಮದ್ದುಗುಂಡುಗಳನ್ನೂ ಹಿಡಿದಿರುತ್ತಾರೆ

ಅಬಿಸೀನಿಯದಲ್ಲಿ ತುರ್ಕರು ಪುನಃ ೧೫೦೦ ಅಬಿಸೀನಿಯರನ್ನು ಕೊಲೆಮಾಡಿದರೆಂಬ ವಾರ್ತೆ ಬಂದದೆ.

ತಾ. ೧೯ನೇ ಜನವರಿ.

ಫ್ರಾನ್ಸ್ ಬೆಲ್ಜಿಯಮ್ ರಣರಂಗಗಳಲ್ಲಿ ಅಲ್ಲಲ್ಲಿ ತೋಪು ಕಾಳಗಗಳು ನಡೆಯುತ್ತಿವೆ.

ಟ್ರೆಂಟಿನೋ ಸರಹದ್ದಿನಲ್ಲಿರುವ ರಯಟಿಲ್ ಕೋಟೆಗೆ ಇಟಲಿಯನರು ತೋಪುಗಳನ್ನು ಹಾರಿಸಿರುವರು, ಒಸ್ಲಾವ್ಯದಲ್ಲಿ ಇಟಲಿಯಾನರು ಕಠಿಣ ಕಾಳಗ ಮಾಡುತ್ತಿರುವರು.

ಶತ್ರುಗಳ ೫ ವಾಯುನಾವೆಗಳು ಅಂಕೋನದ ಮೇಲೆ ಸಿಡಿಮದ್ದುಗಳನ್ನು ಎಸೆದಿರುತ್ತವೆ. ಒಬ್ಬನು ಮೃತಪಟ್ಟಿರುವನು, ಹೆಚ್ಚಿನ ನಷ್ಟವಾಗಲಿಲ್ಲ.

ಕಾಕಾಸಸಿನಲ್ಲಿ ತುರ್ಕರು ಅರ್ಕೀವ್ ನದಿಯನ್ನು ದಾಟಲು ಎರಡಾವರ್ತಿ ಪ್ರಯತ್ನಿಸಿ ಹಿಮ್ಮೆಟ್ಟಿದರು. ತುರ್ಕರ ಆಯುಧ ಸಾಮಾಗ್ರಿಗಳ ಕೊಠಡಿಯನ್ನು ರುಶ್ಯನರು ಹಿಡಿದಿರುವರು ಶತ್ರುಗಳ ಸಾವಿರಾರು ತೋಟೆಗಳೂ ಸಿಡಿಮದ್ದುಗಳೂ ರುಶ್ಯನರಿಗೆ ಸಿಕ್ಕಿರುತ್ತವೆ

ಪರ್ಶಿಯಾದ ಕಂಗಾವಾರಿನಲ್ಲಿ ರುಶ್ಯನರಿಗೂ ದಂಗೆಗಾರರಿಗೂ ನಡೆದ ಕದನದಲ್ಲಿ ರುಶ್ಯನರು ಶತ್ರುಗಳಲ್ಲಿ ಕೆಲವರನ್ನು ಸೆರೆ ಹಿಡಿದರು ಶತ್ರುಗಳಲ್ಲಿ ಹೆಚ್ಚಿನವರು ಮಡಿದರು ರುಶ್ಯನರ ಸೇನೆಯಲ್ಲಿ ಬರೇ ಅಲ್ಪ ನಷ್ಟವಾಗಿರುವದು.

ತಾ. ೨೦ನೇ ಜನವರಿ.

ಫ್ರಿಕೋರ್ಟಿನಲ್ಲಿ ನಮ್ಮವರ ಸೇನಿಕರು ಶತ್ರುಗಳ ಒಂದು ಸಿಡಿವ ದಿನ ಗಣಿಯನ್ನು ನಾಶಮಾಡಿರುತ್ತಾರೆ ಶತ್ರುಗಳು ಸಿಡಿಮದ್ದಿನ ಗಣಿಯ ಸಿಡಿತದಿಂದಲೂ ನಮ್ಮವರ ತೋಪುಗಳಿಂದಲೂ ವಿಶೇಷ ನಷ್ಟಕ್ಕೆ ಗುರಿಯಾಗಿರುತ್ತಾರೆ ಬ್ರಿಟಿಷರ ಲೆನ್ಸಿಗೆ ಗುಂಡು ಹಾರಿಸುತ್ತಿದ್ದಾರೆಂತ ಬೆರ್ಲಿನ್ ವಾರ್ತೆಯಿಂದ ತಿಳಿದು ಬಂದದೆ

ಇಂಗ್ಲಾಂಡಿನಲ್ಲಿ ಜಾರಿಗೆ ಬರಲಿಕ್ಕಿರುವ ಸೇನೆಗೆ ಸೇರಿಕೊಳ್ಳುವ ನಿರ್ಬಂಧ ವಿಧಿಗೆ ೧೯೧೫ನೇ ನವಂಬರ ತಾ ೨ರ ನಂತರ ಮದವೆಯಾದವರನ್ನೂ ಸೇರಿಸಬೇಕೆಂತ ನಿರ್ಣಯವಾಗಿದೆ

ಪ್ರಿನ್ಸ್ ಆಫ್ ವೇಲ್ಸರವರು ರಣರಂಗಕ್ಕೆ ಹೋಗಿರುವರು

ರುಶ್ಯನರ ಸಿವಿಲ್ ಅಧಿಕಾರಿಗಳು ಪುನಃ ನಿಶ್ ಪಟ್ಟಣಕ್ಕೆ ಹೋಗಿರುವರು ರಿಗ್ಗದ ದಕ್ಷಿಣದಲ್ಲಿ ರುಶ್ಯನರ ಶತ್ರುಗಳ ಮೇಲಿನ ಗ್ಗಿಹೋಗಿ ಜಯಪ್ರದರಾಗಿರುವರೆಂತ ಶತ್ರುಗಳು ಪ್ರಕಟಿಸಿರುವರು

ಮೊಂಟಿನಿಗ್ರೋಯನರ ರಾಜಧಾನಿಯಾದ ಸಿಟಿಂಜ ಪಟ್ಟಣವು ಶತ್ರುಗಳ ವಶವಾದ್ದರಿಂದ ಸರ್ವಿಯಾವನ್ನು ವಶಮಾಡಿದಂತೆ ಮೊಂಟಿನಿಗ್ರೊವನ್ನೂ ಪೂರ್ಣವಾಗಿ ಜಯಿಸಬೇಕೇ ಅಥವಾ ಸಿಟಿಂಜ ಮತ್ತು ಲೋಹನ್‌ಗಳನ್ನು ವಶಮಾಡಿಕೊಂಡು ಯುದ್ಧವನ್ನು ಮುಗಿಸಿಬಿಡಬೇಕೆ ಎಂಬ ಯೋಚನೆಯು ಆಸ್ಟ್ರಿಯಾನರಲ್ಲಿ ಹುಟ್ಟಿದ್ದಿತು. ಇಟಲಿಗೆ ಇದುರಾಗಿ ಕೆಟೋರದಲ್ಲಿ ತಮ್ಮ ನೌಕಾವಳಿಯನ್ನು ನಿಲ್ಲಿಸಬೇಕೆಂದೂ ಆಸ್ಟ್ರಿಯಾನರ ಊಹೆ ಈಗಲೇ ಅವರು ತಮ್ಮ ಅನೇಕ ಯುದ್ಧನಾವೆಗಳನ್ನೂ ಸಬ್‌ಮೆರೀನುಗಳನ್ನೂ ತಂದಿರುತ್ತಾರೆ ಮೊಂಟಿನಿಗ್ರೋಯನರನ್ನು ರಕ್ಷಿಸುವದು ಮಿತ್ರಪಕ್ಷದವರಿಗೆ ಅಸಾಧ್ಯವಾಗಿದೆ ಇಟಲಿಯಾನರು ಕೂಡಾ ಮೊಂಟಿನಿಗ್ರೋಯನರ ರಕ್ಷಣೆಯನ್ನು ವಹಿಸಲಾರರು ಏಕೆಂದರೆ ಆ ದೇಶವೆಲ್ಲಾ ಪರ್ವತಮಯವು ಸೈನ್ಯಗಳೂ ಸಾಮಗ್ರಿಗಳೂ ಸಾಗಿಹೋಗುವಂತೆ ಅನುಕೂಲವಾದ ಮಾರ್ಗಗಳು ಇಲ್ಲ, ಮೊಂಟಿನಿಗ್ರೊವನ್ನು ಕಾಪಾಡಬೇಕಾದರೆ ೩ ಲಕ್ಷ ಸೇನಿಕರು ಆ ದೇಶದಲ್ಲಿ ಇರಬೇಕು ಹೊರಗಣ ಸೇನೆಗಳು ಹೋಗಿ ಆ ಕೆಲಸವನ್ನು ಮಾಡಬೇಕಾದರೆ ಅದಕ್ಕೆ ಬಹಳ ಸೈನ್ಯಗಳಾಗಬೇಕು ಕೆಟ್ಟರೋ ಸ್ವಭಾವಿಕವಾಗಿ ಉತ್ತಮ ನೌಕಾಶ್ರಯವಾಗಿದೆ ಆದರೂ ಅದನ್ನು ಬೇರೊಂದು ಕಡೆಯ ಅಘಾತದಿಂದ ವಿನಾಶಗೊಳಿಸಬಹುದಾಗಿದೆ ಶತ್ರುಗಳು ಬೇಗನೇ ಮೊಂಟಿನಿಗ್ರೋಯನರೊಡನೆ ಸಂಧಿಮಾಡಿಕೊಳ್ಳಬೇಕೆಂದು ಪ್ರಯತ್ನಿಸಿರುವರು ಆದರೆ ಇದರಿಂದ ಮಿತ್ರರಾಜ್ಯಗಳವರಿಗೆ ಬಾಧಕವಿಲ್ಲ ಮಿತ್ರಮಂಡಲಿಗೆನೇ ಜಯವಾಗುವದು. ಆಗ ಮೊಂಟಿನಿಗ್ರೋಯಾನರ ತೊಂದರೆಗಳು ಹೋಗುವವು ಎಂತ ಇಟಲಿ ಮಂತ್ರಿಯವರು ಒಂದುಕಡೆ ಉಪನ್ಯಾಸಮಾಡಿದ್ದಾರೆ. ಮೊಂಟಿನಿಗ್ರೋಯಾನರ ಕೂಡೆ ಆಸ್ಟ್ರಿಯಾನರು ಕೇಳಿಕೊಂಡ ಶರ್ತಗಳಿಗೆ ಮೊಂಟಿನಿಗ್ರೋಯನರು ಒಪ್ಪದ್ದರಿಂದ ಸಂಧಾನ ಪ್ರಸ್ತಾಪವು ಬಿದ್ದುಹೋಯಿತೆಂತ ಈಗ ತಾನೇ ಪ್ರಕಟವಾಗಿದೆ.

ಗೊರಿಟ್ಜದ ಉತ್ತರದಲ್ಲಿರುವ ಕಂದಕಗಳನ್ನು ಇಟಲಿಯಾನರು ಘೋರ ಕಾಳಗ ಮಾಡಿ ಪುನಃ ಪಡಕೊಂಡಿರುತ್ತಾರೆ,

ತಾ ೨೧ನೇ ಜನವರಿ.

ಬ್ರಿಟಿಷರ "ಮರೇರ್" ಎಂಬ ಹಡಗವನ್ನು ಶತ್ರುಗಳ ಜಲಾಂತರ್ಗಾಮಿ ನಾವೆಯು ಮುಣುಗಿಸಿರುತ್ತದೆ.

ಮಿತ್ರರ ವಾಯುನಾವಿಕರು ಮೆಟ್ಸ್ ಪಟ್ಟಣದ ಮೇಲೆ ಸಿಡಿಮದ್ದುಗಳನ್ನು ಹಾಕಿರುವರೆಂತ ಜರ್ಮನ ವಾರ್ತೆಯಿಂದ ತಿಳಿದು ಬರುತದೆ.

ಮೊಂಟಿನಿಗ್ರೊ ಅರಸರು ಕುಟುಂಬ ಸಹಿತ ಇಟಲಿಗೆ ಹೋಗಲು ಹಡಗ ಹತ್ತಿರುವರೆಂತ ಪಾರೀಸಿಗೆ ತಂತೀ ಬಂದಿರುವದು. ಮೊಂಟಿನಿಗ್ರೊಯನರ ಎರಡು ಸೇನಾಧಿಪತಿಗಳು ತಪ್ಪಿಸಿಕೊಂಡು ಸರ್ವಿಯನರಿಗೆ ಸೇರಿರುವರು.

ಕೈಸರರು ನಿಸ್ ಪಟ್ಟಣಕ್ಕೆ ಹೋಗಿರುವರು ಎಂಬ ವಾರ್ತೆ ಬಂದದೆ

ಮಿತ್ರರ ವಾಯುನಾವೆಗಳು ಡೆಡಗಾಚಿನ ಮೇಲೆ ಗುಂಡು ಹಾರಿಸಿ ವಿಶೇಷ ನಷ್ಟಪಡಿಸಿರುವದು. ಅನೇಕ ಭಂಡಸಾಲೆಗಳು ಸುಟ್ಟುಹೋದವು ಮಿತ್ರರ ಸೇನೆಯು ಮಿಥಲೀನದಲ್ಲಿ ಇಳಿದಿರುವದು

ದಕ್ಷಿಣ ಆಫ್ರಿಕದ ಒಂದು ಕಾಲಾಳು ಸೇನೆಯು ಈಜಿಪ್ಟಿಗೆ ಬಂದಿರುವದು

ತಾ ೨೨ನೇ ಜನವರಿ

ತಾ ೧೭ರಲ್ಲಿ ರುಶ್ಯನರ ಟೊರ್ಪೆಡೋಗಳು ಸಣ್ಣಾಸ್ಯದ ಕರಾವಳಿಯಲ್ಲಿ ೧೬೩ ವ್ಯಾಪಾರದ ಹಡಗಗಳನ್ನು ಮುಣುಗಿಸಿರುವವು ಈ ಪೈಕಿ ೭೩ ಹಡಗಗಳಲ್ಲಿ ಆಹಾರ ಸಾಮಾಗ್ರಿಗಳು ತುಂಬಿತ್ತು

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ "ಸದರ್ ಲೇಂಡ್" ಎಂಬ ಹಡಗವನ್ನು ಮುಣುಗಿಸಿರುವದು ಈ ಹಡಗವು ದಕಂಬರ ತಾ ೧೩ರಲ್ಲಿ ಮುಂಬಾಯಿಯಿಂದ ಹೊರಟಿತ್ತು ಜನವರಿ ತಾ ೧೭ರಲ್ಲಿ ಮುಣುಗಿಸಲ್ಪಟ್ಟಿತು ತಾ ೧೯ರಲ್ಲಿ ಅದರಲ್ಲಿದ್ದ ನಾವಿಕರನ್ನು ಹಡಗಿನಿಂದ ತೆಗೆದು ಮಾಲ್ಟದಲ್ಲಿ ಇಳಿಸಿದರು ಒಬ್ಬ ಖಲಾಸಿಯು ಸತ್ತಿರುವನು

ನಿನ್ನೆಯ ದಿನ ಫ್ರಾನ್ಸ್ ರಣರಂಗದಲ್ಲಿ ವಾಯುನಾವೆಗಳ ೧೪ ಕದನಗಳು ನಡೆದ ಶತ್ರುಗಳ ೨ ವಾಯುನಾವೆಗಳು ಹಿಮ್ಮೆಟ್ಟಿದವು ನಮ್ಮವರು ಒಂದು ವಾಯುನಾವೆಯನ್ನು ಕಳಕೊಂಡಿರುವರು

ಕಳೆದ ವರ್ಷಾಂತ್ಯದ ವರೆಗೆ ಜರ್ಮನ ಸೇನೆಯಲ್ಲಿ ೫೮೪೯೮೬ ಮಂದಿ ಹತರಾದರು ೨೪,೮೮೦ ಮಂದಿ ಸತ್ತರು, ೧,೫೬೬,೫೪೯ ಮಂದಿ ಗಾಯಪಡೆದರು, ೩೫೬,೧೫೩ ಮಂದಿ ಕಾಣೆಯಾಗಿರುವರೆಂತ ತಿಳಿದು ಬಂದದೆ

ಬಸ್ಸರೆಬಿಯ ಸರಹದ್ದಿನಲ್ಲಿ ರುಶ್ಯನರು ಬಹಳ ದೊಡ್ಡ ಸೇನೆಯನ್ನು ತಂದೊತ್ತಿ ಶತ್ರುಗಳ ಮೇಲೆ ಅಭಿಯೋಗ ಮಾಡುತ್ತಿದ್ದಾರೆ ಚೆರ್ನೊವಿಜ್ಜಿನ ಬಳಿ ರುಶ್ಯನರು ಶತ್ರುಗಳ ನೆಲೆಗಳ ಒಂದಂಶವನ್ನು ಸ್ವಾಧೀನಮಾಡಿಕೊಂಡಿರುವರು ನಿಸಿಕ್ ಪ್ರಾಂತ್ಯದಲ್ಲಿ ಸ್ಟೋಲಿಸ್‌ಬರ್ಗನ ಕಡೆ ಮುಂದರಿಯುತ್ತಿದ್ದ ಶತ್ರುಗಳ ಸೇನೆಗೆ ರುಶ್ಯನರು ಗುಂಡು ಹಾರಿಸಿ ಅದನ್ನು ಹಿಂದಕ್ಕಟ್ಟಿರುವರು

ಮೊಂಟಿನಿಗ್ರೊ ದೇಶದ ಪ್ರಧಾನ ಮಂತ್ರಿಯವರು ಬ್ರಿಂಡೀಸಿಗೆ ಬಂದಿರುವರು ಮೊಂಟಿನಿಗ್ರೊ ಅರಸರು ಮತ್ತು ಸರಕಾರವು ಆಸ್ಟ್ರಿಯನರ ಸಂಧಾನ ಶರ್ತಗಳೆಲ್ಲವನ್ನು ಧಿಕ್ಕರಿಸಿರುವ ಕಾರಣ ಮೊಂಟಿನಿಗ್ರೋದ ಎಲ್ಲಾ ರಣರಂಗಗಳಲ್ಲಿಯೂ ಯುದ್ಧ ನಡೆಯುತ್ತಿದೆ ಅರಸರೂ ಅವರ ಮಗನೂ ಇನ್ನೂ ಮೊಂಟಿನಿಗ್ರೊದಲ್ಲಿರುವ ಸೇನೆಯೊಂದಿಗೆ ಇರುವರು ಎಂತ ಮೊಂಟಿನಿಗ್ರೋಯನರ ಪ್ರಧಾನ ಮಂತ್ರಿಯವರು ಹೇಳಿರುತ್ತಾರೆ

ದೇಶವನ್ನು ಬಿಟ್ಟು ಹೋಗುವ ಸಂದರ್ಭ ಬಂದರೆ ದೇಶವನ್ನು ಬಿಟ್ಟು ಹೋಗುವ ಅನುಕೂಲವನ್ನು ಮಿತ್ರರಾಜ್ಯಗಳವರು ಮಾಡಿಕೊಡುವರೆಂತ ಮೊಂಟಿನಿಗ್ರೊದ ಅರಸರು ಹೇಳಿರುತ್ತಾರೆ. ಮೊಂಟಿನಿಗ್ರೋದ ರಾಣಿ ಮತ್ತು ಕುಮಾರ್ತೆಯರು ಲೊಯನ್ಸ್‌ಗೆ ಹೋಗಿರುತ್ತಾರೆ ಅರಸರು ಸ್ವಕಾರಿಯಲ್ಲಿರುವರು. ಸರ್ವಿಯಾ ಸರಕಾರವು ಕೊರ್ಫ್ ದ್ವೀಪಕ್ಕೆ ಬಂದು ತಲ್ಪಿರುತ್ತದೆ.

೨೪ ಯುದ್ಧ ಹಡಗಗಳು ೪ ತಾಸುಗಳ ವರೆಗೆ ಡೆಡ್‌ಗಾಚಿನ ಮೇಲೆ ಗುಂಡುಗಳನ್ನು ಹಾರಿಸಿದವು. ೪ ಕುದುರೆಗಳು ಸತ್ತವು. ಅದೇ ರೀತಿ ಪೋರ್ಟೊಲೊಗಸ್ ಅಖಾತದಲ್ಲಿ ೧೬ ಯುದ್ಧ ಹಡಗಗಳು ಗುಂಡು ಹಾರಿಸಿದವು. ಪ್ರಾಣಾಪಾಯವಾಗಲಿಲ್ಲವೆಂತ ಬಲ್ಗೇರಿಯನರು ಪ್ರಕಟಿಸಿರುತ್ತಾರೆ.

ತಾ ೨೪ನೇ ಜನವರಿ.

ಬ್ರಿಟಿಷರ ಜಲಾಂತರ್ಗಾಮಿ ನಾವೆಯು ಅಡ್ರಿಯಾಟಿಕ್ ಕರಾವಳಿಯಲ್ಲಿ ಆಸ್ಟ್ರಿಯಾನರ ಒಂದು ವಾಯುನಾವೆಯನ್ನೂ ಒಂದು ಟೊರ್ಪೆಡೋವನ್ನೂ ಮುಣುಗಿಸಿರುತ್ತದೆ.

ಅನಟೋಲಿಯಾನ್ ಕರಾವಳಿಯಲ್ಲಿ ರುಶ್ಯರ ... ಯುದ್ಧ ನಾವೆಗಳು ... ಹಡಗಗಳನ್ನು ಮುಣುಗಿಸಿರುತ್ತವೆ

ಜರ್ಮನರ ಜಲಾಂತರ್ಗಾಮಿ ನಾವೆಯು ಡಚ್ಚರ "ಅಪಲ್ಲೊ" ಎಂಬ ಹಡಗವನ್ನು ಮುಳುಗಿಸಿರುತ್ತದೆ. ೩ ಮಂದಿ ಹತರಾದರು. ಅನೇಕರು ಗಾಯಪಡೆದಿರುವರು

ಬ್ರಿಟಿಷರ "ಟ್ರಿಮಾಟನ್" ಎಂಬ ನಾವೆಯು ಮುಳುಗಿಸಲ್ಪಟ್ಟಿರುತ್ತದೆ

ಫ್ರಾನ್ಸ್ ಮತ್ತು ಬೆಲ್ಜಿಯಂ ರಣರಂಗಗಳಲ್ಲಿ ನಮ್ಮವರು ತೋಪುಕಾಳಗಗಳಲ್ಲಿಯೂ ಶತ್ರುಗಳ ಸಿಡಿಮದ್ದುಗಳ ಗಣಿಗಳನ್ನು ಕಂಡು ಹಿಡಿದು ಅವನ್ನು ಹಾರಿಸಿಬಿಡುವ ಕೆಲಸದಲ್ಲಿಯೂ ನಿರತರಾಗಿರುವರು.

ಶತ್ರುಗಳ ವಾಯುನಾವೆಗಳು ಬೆಳದಿಂಗಳಿನ ಸಮಯ ನೋಡಿಕೊಂಡು ಕೆಂಟ್ ಕರಾವಳಿಗೆ ಬಂದು ರಾತ್ರಿ ೧ ಘಂಟೆಗೆ ೯ ಬೊಂಬುಗಳನ್ನು ಹಾಕಿ ಸಮುದ್ರದ ಕಡೆಗೆ ಓಡಿಹೋಗಿರುತ್ತದೆ ನೌಕಾವಳಿ ವ ಸೈನ್ಯಸಂಬಂಧವಾದ ನಷ್ಟವಾಗಲಿಲ್ಲ ಆದರೆ ಖಾಸಗಿ ಆಸ್ತಿಗಳಿಗೆ ಸ್ವಲ್ಪ ನಷ್ಟವಾಗಿದೆ ಒಬ್ಬ ಮನುಷ್ಯನು ಸತ್ತುಹೋಗಿರುವನು ಇಬ್ಬರು ಗಂಡಸರು, ಒಬ್ಬ ಹೆಂಗಸು ಮೂರು ಮಕ್ಕಳು ಈ ಸ ಗಾಯ ಪಡೆದಿರುವರು ಮಧ್ಯಾಹ್ನದ ನಂತರ ಪುನಃ ಶತ್ರುಗಳ ೩ ವಾಯು ನಾವೆಗಳು ಕೆಂಟ್ ಕರಾವಳಿಯ ಮೇಲೆ ಕಾಣಿಸಿಕೊಂಡವು ಬ್ರಿಟಿಷರ ವಾಯುನಾವೆಗಳು ಅವನ್ನು ಅಟ್ಟಿಬಿಟ್ಟಿರುತ್ತವೆ

ರುಷ್ಯನರು ಜರ್ಮನರ ಒಂದು ವಾಯುನಾವೆಯನ್ನು ವಿಲಿಯಾಕ ಎಂಬಲ್ಲಿ ಹಿಡಿದಿರುತ್ತಾರೆ ಶತ್ರುಗಳ ಒಂದು ವಿಮಾನವು ಜಬ್ರಾತ್ ಎಂಬಲ್ಲಿ ಸಿಡಿದು ಹೋಗಿರುತ್ತದೆ ಜಾರ್ಟೊರಿಸ್ಕನ ಉತ್ತರದಲ್ಲಿದ್ದ ಗಡ್ಡೆಗಳನ್ನು ಸ್ವಾಧೀನಮಾಡಿಕೊಳ್ಳಲು ಪ್ರಯತ್ನಿಸಿದ ಶತ್ರುಗಳು ಹಿಮ್ಮೆಟ್ಟಿರುವರು ಬೆಸರೇಬಿಯನ್ ಸರಹದ್ದಿನಲ್ಲಿ ರುಷ್ಯನರು ಅಭಿಯೋಗ ಮಾಡುತ್ತಿದ್ದಾರೆ

ಮೊಂಟೆನಿಗ್ರೊಯನರು ಬೆರಾನ್ನದಲ್ಲಿ ಆಸ್ಟ್ರಿಯನರನ್ನು ಹಿಂದಕ್ಕಟ್ಟಿರುವರು.

"ಆಸ್ಟ್ರಿಯನರೊಡನೆ ಸಂಧಾನ ಮಾಡುವದಕ್ಕಿಂತ ಸಾಯುವದು ಲೇಸು" ಎಂತ ಮೊಂಟೆನಿಗ್ರೊ ಅರಸನು ರಾಜಶಾಸನವನ್ನು ಹೊರಡಿಸಿರುತ್ತಾನೆ

ಮೊಂಟೆನಿಗ್ರೊಯನರ ರಾಜಧಾನಿಯಾದ ಸಿಟಿಂಜಿಯದಲ್ಲಿ ಬಲ್ಗೇರಿಯ ಗವರ್ನರರು ನೇಮಿಸಲ್ಪಟ್ಟಿರುತ್ತಾರೆ

ಮೊಂಟೆನಿಗ್ರೊ ಅರಸರೂ ಪ್ರಿನ್ಸ್ ಪೀಟರರೂ ಬ್ರಿಂಡಿಸಿಗೆ ಬಂದಿರುತ್ತಾರೆ. ಪ್ರಿನ್ಸ್ ಮಿರ್ಕೋ ಮತ್ತು ೩ ಮಂತ್ರಿಯರು ಇನ್ನೂ ಮೊಂಟೆನಿಗ್ರೊದಲ್ಲಿರುವರು ಕದನವು ನಡೆಯುತ್ತಿದೆ

ರುಷ್ಯನರು ಕೌಕಾಸಸಿನ ಸುಲ್ತಾನಾಬಾದ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವರು ತುರ್ಕರು ಬಹಳ ನಷ್ಟಪಟ್ಟು ಓಡಿಹೋಗಿರುವರು ರುಷ್ಯನರು ಹಿಂದಟ್ಟಿಕೊಂಡು ಹೋಗಿ ಹಸಾನ್‌ಕಾಲ ಎಂಬ ಪಟ್ಟಣವನ್ನು ಹಿಡಕೊಂಡರು ೧೫೦೦ ತುರ್ಕ ಸೈನಿಕರೂ ಬಹಳ ಯುದ್ಧ ಸಾಮಗ್ರಿಗಳೂ ರುಷ್ಯನರಿಗೆ ದೊರಕಿರುತ್ತದೆ

ತಾ. ೨೫ನೇ ಜನವರಿ.

'ಪರ್ಶಿಯ' ಹಡಗವನ್ನು ತುರ್ಕಿಯರ ಜಲಾಂತರ್ಗಾಮಿ ನಾವೆಯು ಮುಳುಗಿಸಿದ್ದೆಂತ ಬರ್ಲಿನ್ ನಗರದಲ್ಲಿ ಪ್ರಕಟವಾಗಿದೆ

ಎರ್ಜರಮ್ ಪ್ರಾಂತ್ಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ ರುಷ್ಯನರು ಬಹಳ ಯುದ್ಧ ಸಾಮಗ್ರಿಗಳನ್ನು ಹಿಡಿದಿರುವರು ಪರ್ಶಿಯದಲ್ಲಿ ರುಷ್ಯನರು ಸುಲ್ತಾನಬಾದವನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ

ಜನರಲ್ ಎಲ್ಮರ್‌ರ ಸೇನೆಯು ತಾ. ೨೦-೨೧ರಲ್ಲು ಟೈಗ್ರಿಸ್ ನದಿಯ ಎಡದಡದಲ್ಲಿ ಶತ್ರುಗಳ ಮೇಲೆ ಅಭಿಯೋಗ ಮಾಡಿರುವದು ಶತ್ರುಗಳಿಗೆ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಕಠಿಣ ಕಾಳಗ ನಡೆದು ಉಭಯ ಕಡೆಯಲ್ಲಿಯೂ ಹೇರಳ ನಷ್ಟವಾಗಿರುವದು.

ಉತ್ತರ ಹಿಂದೂಸ್ಥಾನ.

ಇದೇ ಜನವರಿ ತಾ. ೧೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೮೭೭೨ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೬೭೧೦ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಮತ್ತು ಸಿಂಧಿನಲ್ಲಿ ೧೮೮೪; ಮದ್ರಾಸ್ ೮೦೫; ಬಂಗಾಳ ೩; ಬಿಹಾರ್ ಮತ್ತು ಒರಿಸ್ಸ ೪೬೬; ಸಂಯುಕ್ತಸಂಸ್ಥಾನ ೧೭೬೩; ಪಂಜಾಬು ೪೫, ಬರ್ಮ ೩೪೯, ಮಧ್ಯಸಂಸ್ಥಾನ ೯೦೪; ಮೈಸೂರು ೧೪೯; ಹೈದರಾಬಾದ್ ೬೫೦, ಮಧ್ಯಹಿಂದೂಸ್ಥಾನ ೭೭ ಮತ್ತು ಕಾಶ್ಮೀರ ೧೭ ಮರಣಗಳಾದವು

ಕಳೆದ ಭಾನುವಾರ ಹಗಲು ೧೦ ಘಂಟೆಯ ಸಮಯ ಕಲ್ಕತ್ತ ಪಟ್ಟಣದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಧುಸೂದನ ಭಟ್ಟಾಚಾರ್ಯ ಎಂಬವರು ಕಲ್ಕತ್ತಾ ಪಟ್ಟಣದ ಶ್ಯಾಂಬಜಾರಿನಿಂದ ಹೋಗುತ್ತಿದ್ದ ಟ್ರಾಂ ಬಂಡಿಯಲ್ಲಿ ಕುಳಿತು ಮೆಡಿಕಲ್ ಕಾಲೇಜು ವೈದ್ಯಶಾಲೆಯ ಹತ್ತಿರ ಇಳಿದು ಮುಂದಕ್ಕೆ ಹೋಗುತ್ತಿರಲು ಕೂಡಲೇ ಇಬ್ಬರು ಯುವಕರು ತುಪಾಕಿಯಿಂದ ೩-೪ ಗುಂಡುಗಳನ್ನು ಅವರ ಮೇಲೆ ಬಿಸಾಡಿದರು ಒಂದೇ ಗುಂಡು ಅವರಿಗೆ ತಗಲಿತು ಮತ್ತೊಂದು ಪಕ್ಕದಲ್ಲಿದ್ದ ಅಂಗಡಿಯ ಕದಕ್ಕೆ ಬಡಿಯಿತು ಘಾತುಕರು ಸಮೀಪದಲ್ಲಿದ್ದ ಒಂದು ಸಂದಿಗೆ ತೂರಿದರು ತಮ್ಮನ್ನು ಹಿಡಿಯುವದಕ್ಕೆ ಜನರು ಬರುತ್ತಾರೆಂದು ಕಂಡು ಪದೇ ಪದೇ ಗುಂಡುಗಳನ್ನು ಹಾರಿಸುತ್ತಾ ತಲೆತಪ್ಪಿಸಿಕೊಂಡರು. ಪೋಲೀಸಿನವರು ಅನುಮಾನದ ಮೇಲೆ ಇಬ್ಬರು ಬಂಗಾಳಿ ಯುವಕರನ್ನು ಕೈದುಮಾಡಿರುತ್ತಾರೆ.

ಹಿಂದೂಸ್ಥಾನದ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಯಾವ ಸಾಧನೆಯನ್ನು ಕೈಕೊಳ್ಳಬಹುದೆಂಬದನ್ನು ಪರಿಶೋಧಿಸಿ ತಿಳಕೊಂಡು ವರದಿ ಮಾಡುವ ಬಗ್ಗೆ ಆಫೀಶಿಯಲ್ ಮತ್ತು ನೊನ್ ಆಫೀಶಿಯಲ್‌ಗಳಿರುವ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ಸೂಚನೆಯನ್ನು ಬರುವ ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮುಂದಿಡುವರೆ ಬಹುಮಾನಪಟ್ಟ ಸರ್ ಇಬ್ರಾಹಿಮ್ ರಹಿಮ್ ಟುಲರವರಿಗೆ ಅಪ್ಪಣೆ ದೊರಕಿರುತ್ತದೆ.

ತಾ ೧೬ನೇ ರಾತ್ರಿ ಮೆಮನ್‌ಸಿಂಗ್‌ನಲ್ಲಿ ಇನ್ನೊಂದು ಭಯಂಕರವಾದ ಕೊಲೆಯು ನಡೆದಿರುವದು. ಶಶಿ ಚಕ್ರವರ್ತಿ ಎಂಬ ಬಂಗಾಳಿಯನ್ನು ಯಾರೋ ಗುಂಡು ಹೊಡೆದು ಕೊಂದಿರುವರು

ವಸಾಹತಿಗಳಿಗೆ ಹೋಗುವ ಭಾರತೀಯ ಕೂಲಿಯಾಳುಗಳ ಕಷ್ಟ ನಿವಾರಣೆಯನ್ನು ನೀಗಿಸಬೇಕೆಂಬ ಹಟ ಹಿಡಿದು ಈ ಬಗ್ಗೆ ಪ್ರಯತ್ನಗಳನ್ನು ಮಾಡುತ್ತಿರುವವರಲ್ಲಿ ಪ್ರಖ್ಯಾತರಾದ ಮೆ| ಅಂಡ್ರೂಸರವರೂ ಅವರ ಸಂಗಾತಿಯಾಗಿರುವ ಮೆ. ಪಿಯರ್ಸನರವರೂ ಆಸ್ಟ್ರೇಲಿಯ ನ್ಯೂಜಿಲೇಂಡ್, ಪಿಜಿ ದ್ವೀಪಗಳಿಗೆ ಹೋಗಿ ಅಲ್ಲಿರುವ ಭಾರತೀಯರ ಸ್ಥಿತಿಗತಿಗಳನ್ನು ಸ್ವತಃ ತಿಳಕೊಂಡು ಹಿಂದೂಸ್ಥಾನಕ್ಕೆ ಹಿಂದಿರಳಿ ಬಂದಿರುವರು. ತಾ. ೨೦ರಲ್ಲು ಮೆ| ಅಂಡ್ರೂಸರವರು ಪೂನೆಗೆ ಚಿತ್ತೈಸಿದ್ದರು. ಭಾರತ ಸೇವಾ ಸದನದ ಸೆಕ್ರಟರಿಯವರೂ ಕೆಲವು ಸ್ನೇಹಿತರೂ ಮೆ| ಅಂಡ್ರೂಸರವರನ್ನು ಸ್ಟೇಶನಿನಲ್ಲಿ ಸ್ವಾಗತಮಾಡಿಕೊಂಡರು. ಮೆ| ಅಂಡ್ರೂಸರವರು ಪೂನೆಯಲ್ಲಿ ಆಯಾ ಸಂಸ್ಥೆಗಳನ್ನು ತಿರುಗಾಡಿ ನೋಡಿದರು. ಡಾಕ್ಟರ್ ಸರ್. ರಾಮಕೃಷ್ಣ ಭಂಡಾರಕಾರ್, ಬಹುಮಾನಪಟ್ಟ ಪ್ರಿನ್ಸಿಪಾಲ್ ಪರಾಂಜಪೆ, ಮತ್ತು ಮೆ| ತಿಲಕರವರಿಗೆ ಮೆ| ಅಂಡ್ರೂಸರವರು ಭೇಟಿ ಕೊಟ್ಟು ಅವರೊಡನೆ ಪರದೇಶಗಳಿಗೆ ಹೋಗುವ ಹಿಂದೂಸ್ಥಾನದ ಕೂಲಿಯಾಳುಗಳ ಸಂಬಂಧವಾಗಿರುವ ಕ್ರಮದ ಕುರಿತು ಮಾತನ್ನಾಡಿದರು. ಮಧ್ಯಾಹ್ನದ ನಂತರ ಪ್ರೊಫೆಸರ್ ಕಾರ್ವೆಯವರ ಮಹಿಳಾಶ್ರಮವನ್ನು ಸಂದರ್ಶಿಸಿದರು. ಸಾಯಂಕಾಲ ಪರದೇಶಗಳಿಗೆ ಹೋಗುವ ಭಾರತೀಯ ಕೆಲಸಗಾರರ ಸಂಕಷ್ಟಗಳ ಕುರಿತಾದ ಚಲೋ ಭಾಷಣವನ್ನು ಮಾಡಿದರು. ಮರುದಿನ ಪೂನೆಯಿಂದ ಮುಂಬಾಯಿಗೆ ಹೋದರು. ಮುಂಬಾಯಲ್ಲಿಯೂ ಮೆ| ಅಂಡ್ರೂಸರವರು ವಸಾಹತಿಗಳಲ್ಲಿರುವ ಭಾರತೀಯ ಕೂಲಿಯಾಳುಗಳ ಸ್ಥಿತಿಗತಿಗಳನ್ನು ವರ್ಣಿಸುವ ಭಾಷಣಗಳನ್ನು ಮಾಡಿ ಈ ಸಂಬಂಧವಾಗಿರುವ ಕ್ರಮದಲ್ಲಿ ತಿದ್ದುಪಡಿಯಾಗುವದು ಅವಶ್ಯವೆಂಬದನ್ನು ಹಲವು ಉದಾಹರಣೆಗಳಿಂದ ತೋರಿಸಿ ಕೊಟ್ಟಿರುವರು.

ಕೃಷಿ ವಿದ್ಯಾಭ್ಯಾಸ ಸಂಬಂಧವಾದ ವಿಚಾರವು ಕೆಲವು ಸಮಯದಿಂದ ಇಂಡಿಯಾ ಸರಕಾರದವರ ಆಲೋಚನೆಯಲ್ಲಿತ್ತು ಈ ಬಗ್ಗೆ ಆಯಾ ಇಲಾಖೆಯ ಅನುಭವಶಾಲಿಗಳಾದ ಆಫೀಸರರಿಂದಲೂ ಈ ವಿಷಯದಲ್ಲಿ ಆಸಕ್ತರಾಗಿರುವ ಆಫೀಸರರಲ್ಲದ ಗೃಹಸ್ಥರಿಂದಲೂ ತಕ್ಕ ಆಲೋಚನೆಯನ್ನು ಪಡೆಯುವರೆ ಬರುವ ಫೆಬ್ರವರಿ ತಾ. ೪ರಲ್ಲು ಪೂಸದಲ್ಲಿ ಒಂದು ಕನ್ಫರೆನ್ಸ್ ಕೂಡಿಸಬೇಕೆಂಬದಾಗಿ ಸರಕಾರದವರು ನಿರ್ಣಯಿಸಿರುವರು ಈ ಸಭೆಗೆ ಬಹುಮಾನಪಟ್ಟ ಮಿ. ಸಿ. ಎಚ್ ಎ ಹಿಲ್ಲರವರು ಅಧ್ಯಕ್ಷರಾಗಿರುವರು

ಬರೋಡೆಯ ಮಹಾರಾಜ ಗಾಯಕವಾಡರು ಹಿಂದೂ ಯೂನಿವರ್ಸಿಟಿ ಫಂಡಿಗೆ ೨೫,೦೦೦ ರೂಪಾಯಿ ಕೊಟ್ಟಿರುತ್ತಾರೆ.

ಪಾಣಿಪತ್ ಎಂಬಲ್ಲಿ ಒಬ್ಬ ಬ್ರಾಹ್ಮಣ ಹುಡುಗಿಯು ತನ್ನ ಗಂಡನು ಅತ್ಯವಸ್ಥೆಯಲ್ಲಿರುವದನ್ನು ಕಂಡು ಬಾವಿ ಹಾರಿ ಸ್ವಘಾತ ಮಾಡಿಕೊಂಡಿರುವಳು ಎಂಬ ವಾರ್ತೆ ಬಂದಿರುತ್ತದೆ.

ಈಚೆಗೆ ಹೌರದಲ್ಲಿ ಮೆ| ಪೈನೆರವರ ಮನೆಯಲ್ಲಿ ಒಂದು ದರೋಡೆಯು ನಡೆದು ದರೋಡೆಕಾರರು ೬೦೦೦ ರೂಪಾಯಿಗಳನ್ನೂ ಮತ್ತು ಅಮೂಲ್ಯವಾದ ಕೆಲವು ಕಾಗದಪತ್ರಾದಿಗಳನ್ನೂ ಕೊಂಡುಹೋಗಿದ್ದರು. ದರೋಡೆಕಾರರು ಮನೆಯನ್ನು ಬಿಟ್ಟುಹೋಗುವಾಗ ಕಾಗದಪತ್ರಾದಿಗಳನ್ನು ಪರಿಶೋಧಿಸಿದನಂತರ ಹಿಂದೆ ಕಳುಹಿಸಿಕೊಡುವೆವೆಂದು ಮನೆ ಯಜಮಾನನಿಗೆ ಹೇಳಿ ಹೋಗಿದ್ದರು. ಕಳೆದ ಬ್ರಹಸ್ಪತಿವಾರ ಒಬ್ಬ ಕೂಲಿಯು ಮಿಠಾಯಿಗಳಿದ್ದ ಒಂದು ಕುಕ್ಕೆಯನ್ನು ಸದರಿ ಮನೆಯ ಯಜಮಾನನಿಗೆ ತಂದು ಕೊಟ್ಟನು. ಯಜಮಾನನು ಅದು ತನ್ನ ಸ್ನೇಹಿತರಿಂದ ಕಳುಹಿಸಿದ್ದಾಗಿರಬೇಕೆಂದು ಭಾವಿಸಿದನು. ಆದರೆ ಮಿಠಾಯಿ ತೆಗೆದು ನೋಡುವಾಗ ಅಡಿಯಲ್ಲಿ ಸುಲಿಗೆಯಾದ ಕಾಗದ ಪತ್ರಾದಿಗಳೆಲ್ಲಾ ಇದ್ದುವು. ಕುಕ್ಕೆಯನ್ನು ಕೊಟ್ಟು ಕಳುಹಿಸಿದವರ ಹೆಸರನ್ನು ಕೂಲಿಯು ಹೇಳಲಿಲ್ಲ

ಕಳೆದ ವಾರ ಬಂಗಾಳದ ಪಾಬ್ನ ಡಿಸ್ಟ್ರಿಕ್ಟಿನಲ್ಲಿ ಕೆಲವು ದರೋಡೆಕಾರರು ಜೊಸಿಮುದ್ದೀನ್ ಎಂಬವರ ಮನೆ ನುಗ್ಗಲು ಬಂದರು. ಮನೇ ಯಜಮಾನನು ಕೂಡಲೆ ಎಚ್ಚತ್ತು ಬಾಗಿಲು ತೆರೆದು ಬಾಗಿಲಿನ ಎದುರು ನಿಂತಿರೆ ೩ ಮಂದಿ ದರೋಡೆಕಾರರಲ್ಲಿ ಒಬ್ಬನಿಗೆ ಕೈಯಲ್ಲಿದ್ದ ಘೇ

ಯಿಂದ ತಿವಿದನು. ಇತರ ಇಬ್ಬರು ದಕಾಯಿತರು ಜೋಸಿ ಮುದ್ದೀನರನ್ನು ಮನೆಯಿಂದ ಹೊರಗೆ ಎಳೆದು ಅವನನ್ನು ಹಿಡಿದರು. ಅಷ್ಟರಲ್ಲಿ ಜೋಸಿಮುದ್ದಿನರ ತಾಯಿಯು ಹೊರಗಿನಿಂದ ಬಂದು ದೊಣ್ಣೆಯಿಂದ ಆ ಇಬ್ಬರು ದಕಾಯಿತರಿಗೆ ಹೊಡೆದಳು. ಇದರಿಂದ ಜೋಸಿಮುದ್ದೀನರಿಗೆ ದಕಾಯಿತರೊಡನೆ ಕಾದಾಡಲು ಸಾಧ್ಯವಾಯಿತು. ದಕಾಯಿತರು ಗಾಯ ಒಡೆದ ತಮ್ಮ ಜತೆಯವನನ್ನು ಕೊಂಡು ಹೋಗಲು ಪ್ರಯತ್ನಿಸಿದರು ಆದರೆ ಸಾಧ್ಯವಾಗಲಿಲ್ಲ. ಗಾಯ ಒಡೆದವನು ೨ ತಾಸಿನ ನಂತರ ಸತ್ತುಹೋದನು. ಮಧ್ಯೆ ಅಸಿಸ್ಟಾಂಟ ಪೋಲಿಸ ಸುಪರಿಂಟೆಂಡೆಂಟರು ಒಂದು ದಕಾಯಿತರಲ್ಲಿ ೫ ಮಂದಿಯನ್ನು ಕೈದುಮಾಡಿರುವರು.

~~~~

ಆರ್ಯ ಭಾರತೀಯರ ಪರಿಷತ್ತು (ಆರ್ಯನ್ ಬ್ರದರ ಹುಡ್ ಕೊನ್ಫರೆನ್ಸು) ಎಂಬ ಮಹಾ ಸಭೆಯಲ್ಲಿ ವಿದ್ಯಾ ಪ್ರವೀಣರಾದ ಸರ್. ರಾಮಕೃಷ್ಣ ಗೋಪಾಲ ಬಂಡಾರಕರರು ಭಾಷಣ ಮಾಡುವಾಗ ಉದ್ಯೋಗದಲ್ಲಿ ಉನ್ನತಿ ಹೊಂದಿದ ಹುದ್ದೇದಾರರು ತಮ್ಮ ತಮ್ಮ ಸ್ವಜಾತಿಯವರಿಗೆ ಗುಣವಾಗಿ ನಡಿಸುವ ಲಕ್ಷಣವು ಬಹು ಪೂರ್ವದಿಂದ ನಮ್ಮ ದೇಶದ ಜನರಲ್ಲಿ ಬೆಳೆದು ಬಂದದೆ. ಇಂಗ್ಲಿಷ ವಿದ್ಯೆಯಿಂದ ಈ ವ್ಯಾಧಿಯು ನಿವಾರಣೆಯಾಗುವುದೆಂಬ ಕೋರಿಕೆ ಇತ್ತು. ಪರಂತು, ಹಾಗೆಯಾದದ್ದು ತೋರುವುದಿಲ್ಲ ಆದುದರಿಂದಲೆ ನಮ್ಮ ದೇಶವು ಸ್ವರಾಜ ಹೊಂದಲಿಕ್ಕೆ ಪಾತ್ರವಲ್ಲ' ಎಂತ ಹೇಳಿದರು.

~~~~

ಇಂಗ್ಲಿಷ ಉದ್ಯೋಗಸ್ಥರು ಹೆಚ್ಚಾಗಿ ನಿಷ್ಪಕ್ಷಪಾತಿಗಳು. ಸಮುದಾಯದ ಮೇಲೆ ಬಡ ಜನರ ಕಷ್ಟಗಳ ಕಡೆಗೆ ದೇಶೀಯ ಉದ್ಯೋಗಸ್ಥರಿಗಿಂತಲೂ ಇಂಗ್ಲಿಷ ಉದ್ಯೋಗಸ್ಥರು ಹೆಚ್ಚಿಗೆ ದಯಾಭಾವ ಇರುವಂಥವರು. ಆದುದರಿಂದಲೇ ಉನ್ನತ ಉದ್ಯೋಗಗಳಲ್ಲಿ ದೇಶೀಯ ಜನರಿಗಿಂತಲೂ ಇಂಗ್ಲಿಷ ಜನರೇ ಇರಬೇಕೆಂತ ಹಿಂದುಸ್ಥಾನದಲ್ಲಿ ಬಹು ಜನವು ಆಶಿಸುವುದಾಗಿರುತ್ತದೆಂತ ಕಳೆದ ದಿಶಂಬರ ತಿಂಗಳ ನ್ಯೂರಿಫೋರ್ಮರ್ ಎಂಬ ಮಾಸಿಕ ಗ್ರಂಥದಲ್ಲಿ ಗ್ರಂಥ ಕರ್ತರು ಹೇಳುತ್ತಾರೆ

~~~~

ಹಿಂದೂಸ್ಥಾನಕ್ಕಿಂತಲೂ ಇಂಗ್ಲಾಂಡಿನಲ್ಲಿ ೨೪ ಪಾಲಿನಲ್ಲಿ ತೆರಿಗೆ ಹೆಚ್ಚುಂಟು. ಹಿಂದೂಸ್ಥಾನಕ್ಕಿಂತಲೂ ಅಮೇರಿಕದಲ್ಲಿ ಮತ್ತು ಫ್ರೆಂಚರ ದೇಶದಲ್ಲಿ ೧೩ ಪಾಲಿನಲ್ಲಿ ಹೆಚ್ಚಿಗೆ ತೆರಿಗೆಯುಂಟು ನಾಗರೀಕತೆ ಹೊಂದಿದ ದೇಶಗಳಲ್ಲಿ ಹಿಂದೂಸ್ಥಾನದಲ್ಲಿದ್ದಷ್ಟು ಕಡಿಮೆ ತೆರಿಗೆ ಯಾವ ದೇಶದಲ್ಲಿಯೂ ಇಲ್ಲವೆಂತ ಒಬ್ಬ ಪತ್ರ ಸಂಪಾದಕರು ಹೇಳುತ್ತಾರೆ. ಇದರಿಂದ ಹಿಂದೂಸ್ಥಾನವು ನಾಗರೀಕತೆ ಹೊಂದಿದ ದೇಶವೆಂತಲೂ ಹಿಂದೂಸ್ಥಾನದ ಜನರು ಇಂಗ್ಲಾಂಡು, ಅಮೇರಿಕಾ, ಮತ್ತು ಫ್ರಾನ್ಸ ಯಾನೆ ಫ್ರಂಚ ರಾಜ್ಯ ಮೊದಲಾದ ದೇಶಗಳ ಜನರಂತೆ ಸಂಪನ್ನರೂ, ಸುಖಿಗಳೂ ಎಂತಲೂ ನಿರ್ಧಾರವಾಗದು.

~~~~

ಮುಂಬಾಯಿಯ ಎಬ್ನಿಯಾಲಿ 'ಸಿ. ಎಮ್, ಅತ್ತರವಾಲ ಎಂಬವರು ಮುಂಬಾಯಿಯ ಕೆ. ಟಿ. ಡೋಂಗರೇ ಮತ್ತು ಕಂಪೆನಿಯಲ್ಲಿ ದೊರೆಯುವ ಡೋಂಗರೇಯವರ ಬಾಲಮೃತದ ಹೊರ ಮುಚ್ಚಳದಂತೆಯೇ ಇರುವ ಒಂದು ಬಾಟ್ಲಿಗೆಯಲ್ಲಿ ತಾನು ಮಾಡಿದ ಒಂದು ಔಷಧಿಯನ್ನು ತುಂಬಿಸಿ, ಹಾಗೂ ತನ್ನ ಔಷಧಿಗೆ ಡೋಂಗರೇಯವರ ಬಾಲಮೃತದ ಬಾಹ್ಯರೂಪವನ್ನು ಕೊಟ್ಟು ಅದು ಡೋಂಗರೆಯವರ ಬಾಲಾಮೃತವೆಂಬ ನಂಬಿಕೆಯನ್ನು ಜನರಲ್ಲಿ ಉಂಟುಮಾಡಿದ್ದರಿಂದ ಡೋಗರೇ ಕಂಪೆನಿಯವರು ಸದರಿ ಅತ್ತರ್‌ವಾಲರ ಮೇಲೆ ಮುಂಬಾಯಿ ಹೈಕೋರ್ಟಿನಲ್ಲಿ ದಾವೆ ತಂದಿದ್ದರು. ಜಸ್ಟಿಸ್ ಮೆಕ್‌ಲಿಯೋಡರು ಅತ್ತರ್‌ವಾಲರ ಔಷಧಿಯ ಹೊರ ಮುಚ್ಚಳವನ್ನು ನೋಡಿ ಅದರ ಬಾಹ್ಯ ಸ್ವರೂಪವು "ಡೋಂಗರೆ"ಯರ ಬಾಲಾಮೃತದಂತೆ ಕಾಣುತ್ತದಾದ್ದರಿಂದ ಜನರು ಮೋಸಹೋಗುವದರಲ್ಲಿ ಅನುಮಾನವಿಲ್ಲವೆಂಬ ಅಭಿಪ್ರಾಯಪಟ್ಟು ದಾವೆಯು ಪೂರಾ ತನಿಖೆ ಆಗುವವರೆಗೆ ಅತ್ತರವಾಲರ ಔಷದಿಗಳಿಗೆ ಇಂಜಕ್ಷನ್ ಕೊಟ್ಟಿರುತ್ತಾರೆ

~~~~

ದಕ್ಷಿಣ ಹಿಂದೂಸ್ಥಾನ.

"ಹಿಂದೂಸ್ಥಾನದಲ್ಲಿ ಜಾತಿಭೇದವು ಪರಿಪೂರ್ಣವಾಗಿ ಹೋದ ವಿನಹ ಮತ್ತು ಹೆಂಗಸರಿಗೂ, ಗಂಡಸರಿಗೂ, ಸರ್ವರಿಗೂ ವಿದ್ಯೆ ಲಭಿಸಿದ ವಿನಹ ಹಿಂದೂಸ್ಥಾನಕ್ಕೆ ಸ್ವರಾಜ್ಯ ಸರ್ವಥಾ ಬಾರದು. ಸ್ವರಾಜ್ಯ ಹೊಂದಲಿಕ್ಕೆ ಹಿಂದೂಸ್ಥಾನವು ಯೋಗ್ಯವಾಗದು." ಎಂತ ಟಿ ಪೊನ್ನಂಬಲಂ ಪಿಳ್ಳೆ ಎಂಬ ಪಂಡಿತನು ತನ್ನ ಅಭಿಪ್ರಾಯ ಪ್ರಕಟಿಸಿದ್ದಾನೆ

~~~~

ಮದ್ರಾಸ ಯುನಿವರ್ಸಿಟಿಯಲ್ಲಿ ಡಿಗ್ರಿಗಳನ್ನು ಹೊಂದಲಿಕ್ಕೆ ಪರೀಕ್ಷೆಗಳಲ್ಲಿ ತೇರ್ಗಡೆ ಪಟ್ಟ ವಿದ್ಯಾರ್ಥಿಗಳ ಸಂಬಂಧ ಕಳೆದ ಸರ್ತಿ ನೆರೆದ ಕೊನ್‌ವೋಕೇಶನ್ ಎಂಬ ಮಹಾ ಸಭೆ ಮುಂದೆ ಭಾಷಣ ಮಾಡುವಾಗ "ಭಗವಂತನ ಸೇವೆ ಎಂಬ ಭಾವದಿಂದ ಮಾಡುವ ಕಾರ್ಯವೇ ಸತ್ಕಾರ್ಯವು ಇಂತಹ ಸತ್ಕಾರ್ಯಗಳನ್ನು ಮಾಡುವುದಕ್ಕೆ ಜ್ಞಾನದ ಬಲಕ್ಕಿಂತಲೂ ಸುಬುದ್ಧಿಯ ಬಲ ಹೆಚ್ಚಿಗೆ ಬೇಕು' ಎಂತ ಬಹುಮಾನಪಟ್ಟ ಸರ್ ಹೆರೋಲ್ಡ ಸ್ಟುವಾರ್ಟ ದೊರೆಗಳವರು ಹೇಳಿದರು

~~~~

ಮದ್ರಾಸ ಸಂಸ್ಥಾನದಲ್ಲಿ ಶೇಕಡ ೩೦ ಪ್ರಕಾರ ಬ್ರಾಹ್ಮಣರಾಗಿರುತ್ತಾರೆ ಆದರೆ ಮದ್ರಾಸ ಯೂನಿವರ್ಸಿಟಿ ಆದಂದಿನಿಂದ ಈ ವರೇಗೆ ಡಿಗ್ರಿಗಳನ್ನು ಹೊಂದಿದ ಲಕ್ಷ ಜನರಲ್ಲಿ ಶೇಕಡ ೭೨ ಬ್ರಾಹ್ಮಣರಾಗಿರುತ್ತಾರೆ .

~~~~

ಬೆನಾರಿಸಿನಲ್ಲಿ ಸ್ಥಾಪಿಸಲಿಕ್ಕಿರುವ ವಿಶ್ವವಿದ್ಯಾನಿಲಯ ಫಂಡಿಗೆ ಮೈಸೂರು ಮಹಾರಾಜರವರು ೨ ಲಕ್ಷ ರೂಪಾಯಿ ವಂತಿಗೆ ಕೊಟ್ಟಿರುವರಲ್ಲದೆ ೧೦ ವರ್ಷಗಳ ವರೆಗೆ ಪ್ರತಿ ವರ್ಷ ೧೨,೦೦೦ ರೂಪಾಯಿ ಕೊಡುತ್ತೇನೆಂಬ ವಾಗ್ದಾನ ಮಾಡಿರುವರು.

~~~~

ಮೈಸೂರು ಮಹಾರಾಜರವರು ಪರಿವಾರ ಸಹಿತ ಮುಂಬಾಯಿಗೆ ಹೋಗಿರುವರು ಫೆಬ್ರವರಿ ತಿಂಗಳಾಂತ್ಯದ ವರೆಗೆ ಮುಂಬಾಯಲ್ಲಿರುವರೆಂತಲೂ ಬಹುಶಃ ಅಲ್ಲಿಂದ ಉತ್ತರ ಹಿಂದೂಸ್ಥಾನವನ್ನು ಸಂದರ್ಶಿಸಬಹುದೆಂದೂ ವಾರ್ತೆ ಇದೆ.

~~~~

ದಕ್ಷಿಣ ಕನ್ನಡ.

~~~~

ಮಂಜೇಶ್ವರ: — ಇಲ್ಲಿ 'ಚಿಕ್ಕಮ್ಮ ಎಂಬ ಸಾಂಕ್ರಾಮಿಕ ರೋಗವು ಊರಲ್ಲಿ ಎಲ್ಲಾ ಕಡೆಯಲ್ಲಿಯೂ ಹರಡಿಕೊಂಡಿರುತ್ತದೆ. ಈ ರೋಗವು ಬೇಗನೇ ಸಮಾಧಾನವಾಗಬೇ[illegible]ಗ ಇಲ್ಲಿಯ ಊರ ನಿವಾಸಿಕರು ವಂತಿಗೆ ಕೂಡಿಸಿ ಇಲ್ಲಿಯ ಶ್ರೀದೇವಸ್ಥಾನದಲ್ಲಿ ದೇವರ ಸಾನ್ನಿಧ್ಯದಲ್ಲಿ ಪಂಚಾಮೃತ ಅಭಿಷೇಕ, ಅಮೃತಪಡಿ ಇತ್ಯಾದಿ ಆರಾಧನೆಗಳನ್ನು ನಡಿಸುತ್ತಾ ಇರುವುದರಿಂದ ಇನ್ನು ಈ ರೋಗವು ಬೇಗನೇ ಶಮನವಾಗದೆ ಇರದೆಂದು ನಂಬುತ್ತೇವೆ

ಈ ಊರಲ್ಲಿ ಅಲ್ಲಲ್ಲಿ ಆಗಾಗ್ಯೆ ಸಣ್ಣ ಸಣ್ಣ ಕಳವುಗಳು ಆಗುತ್ತಲೇ ಇರುತ್ತವೆ ಯಾವ ಕಳವಾದರೂ ಈ ವರೆಗೂ ತಿಳಿದುಬರಲಿಲ್ಲ. ಆದರೆ ಈ ಕಳವುಗಳ ಪತ್ತೇ ವಿಷಯ ಇಲ್ಲಿಯ ಪೋಲಿಸ ಇಲಾಖೆಯವರು ಪಡುವ ಶ್ರಮೆ ವ ಪ್ರಯತ್ನಗಳಿಂದ ಇನ್ನು ಸದರಿ ಕಳವುಗಳು ಆದಷ್ಟು ಬೇಗನೆ ಪತ್ತೆಯಾಗದೆ ಇರದೆಂದು ತೋರುತ್ತದೆ

ಇಲ್ಲಿಯ ಗ್ರಾಮನಿವಾಸಿಕರ ಅರ್ಜಿ ಮೇರೆಗೆ ಈ ಉಗ್ರಮಂಜೇಶ್ವರ ಕಡವನ್ನು ನಮ್ಮ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರು ಸಂದರ್ಶಿಸಿ ಅರ್ಜಿ ಪ್ರಕಾರ ಗ್ರಾಮಸ್ಥರಿಗೆ ಸಂಕವು ಅಗತ್ಯವೆಂಬದಾಗಿ ದಿವ್ಯ ಚಿತ್ತದಲ್ಲಿ ಸಮಾಧಾನಪಟ್ಟಿರುವರು. ಸಂಬಂಧಪಟ್ಟ ಇಲಾಖೆಯವರು ಇಷ್ಟಿಗೆ ಬಂದು ಕಡವಿನ ಅಗ್ತ್ಯತೆಯನ್ನು ಅಳೆಯುವ ಮುಂತಾದ ಕಾಮಗಾರಿ ಕೆಲಸಗಳಿಂದ ಇಲ್ಲಿ ಒಂದು ಸಂಕವು ಬೇಗನೇ ಆಗದೆ ಇರಲಾರದೆಂದು ತಿಳಿಸುವರೆ ಬಹಳ ಸಂತೋಷಪಡುತ್ತೇವೆ

~~~~

ಮೂಡ್ನೂರು: — ನಮ್ಮ ಈ ಗ್ರಾಮದಲ್ಲಿ ಅಲ್ಲಲ್ಲಿ ದನಕರುಗಳಿಗೆ ಅಮ್ಮಶಂಕೆ ರೋಗಾದಿಗಳು ತಲೆದೋರಿ ಅನೇಕ ಜಾನುವಾರುಗಳು ಆ ರೋಗಕ್ಕೆ ತುತ್ತಾದವು. ಈ ಕುರಿತು ಮಾನ್ಯ ಗೋವೈದ್ಯ ಡಾಕ್ಟರರು ಇಲ್ಲಿಗೆ ಚಿತ್ತೈಸಿ ಸದರಿ ಗೋವುಗಳಿಗೆ ತಕ್ಕ ಔಷಧಿ ದಯಪಾಲಿಸುತ್ತಿದ್ದರೆ ಬಡ ಗರೀಬರಾದ ನಮ್ಮ ಈ ಗ್ರಾಮಸ್ಥರಿಗೆ ಹೆಚ್ಚಿನ ಉಪಕಾರವಾಗುತ್ತಿತ್ತು

~~~~

ಮಂಗಳೂರು.

~~~~

ಕಳೆದ ೧೯೧೫ನೇ ಇಸವಿಯ ಜನವರಿ ತಾ. ೧ರಿಂದ ದಶಂಬರ ತಿಂಗಳ ತಾ ೩೧ಕ್ಕೆ ಅಂತ್ಯವಾಗುವ ದಿನದ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೦,೯೦೮ ಜನನಗಳಾಗಿರುವವು. ಈ ಪೈಕಿ ೨೦,೯೬೭ ಗಂಡು; ೧೯,೯೭೧ ಹೆಣ್ಣು ಅದೇ ವರ್ಷ ಇಡೀ ಜಿಲ್ಲೆಯಲ್ಲಿ ೩೫೧೮೫ ಮರಣಗಳಾಗಿರುವವು. ಈ ಪೈಕಿ ೧೭,೭೩೮ ಗಂಡು, ೧೭,೪೪೭ ಹೆಣ್ಣು ಹಾಗೂ ಇಡೀ ಜಿಲ್ಲೆಯಲ್ಲಿ ಜನಿಸಿದವರ ಸಂಖ್ಯೆಯಿಂದ ಸತ್ತವರ ಸಂಖ್ಯೆ ಕಳೆದರೆ ಒಂದು ವರ್ಷ ಕಾಲ ೧೫,೭೩೨ ಮಂದಿ ಜಿಲ್ಲೆಯಲ್ಲಿ ಹೆಚ್ಚಾದಂತಾಯಿತು

ಕಲೆಕ್ಟರ ದೊರೆಗಳ ಬಂಗ್ಲೆಯ ಸಮೀಪದ ಮುನ್ಸಿಪಾಲ್ ರಸ್ತೆಯ ಬದಿಯಲ್ಲಿ ಒಂದು ಮರವು ಒಣಗಿ ಕುಂಬಾಗಿ ಬಿರುಸಾದ ಗಾಳಿಯನ್ನು ತಡೆಯಲಾರದ ಸ್ಥಿತಿಯಲ್ಲಿದೆ. ಸಂಬಂಧ ಪಟ್ಟ ಅಧಿಕಾರಿಗಳು ಕುಂಬಾದ ಈ ಮರವನ್ನೂ ಇತರ ಕೆಲವು ಮರಗಳನ್ನೂ ತನ್ನಷ್ಟಕ್ಕೆ ಕೆಳಬೀಳುವ ಮೊದಲೇ ಕಡಿಸುವದಾದರೆ ಆ ದಾರಿಯಲ್ಲಿ ಹೋಗುವ ಹೇರಳ ಶಾಲಾ ಮಕ್ಕಳೂ ಜನಜಾನುವಾರುಗಳೂ ನಿರ್ಭಯದಿಂದ ದಾರಿ ನಡೆಯುವಂಥಾಗುವದು.

ಜಟ್ಕಾ ಬಂಡಿಗಳನ್ನು ಹೊಡೆಯುವ [illegible] ಕನ್ನು ತಕೊಳ್ಳುವದಿಲ್ಲವೆಂಬ ಹಟದಿಂದ ಜಟ್ಕಾಗಳನ್ನು

ಹೊಡೆದ ಜಡ್ಕಾಡ್ರೈವರ ಜುವಾಂಲುಪ್ಪಿ, ಇಂದು, ಹವ್ಯದ ರಾಮನ್, ನಾರಾಯಣ, ಕಾದ್ರಿಬ್ಯಾರಿ, ಮತ್ತು ಕುಂಞಪ್ಪ ಇವರಿಗೆಲ್ಲಾ II ಕ್ಲಾಸ್ ಬೆಂಚ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಜುಲುಮಾನೆ ವಿಧಿಸೋಣಾಗಿರುತ್ತದೆ.

ಶಾಲೆಗಳ ಇನ್ಸ್‌ಪೆಕ್ಟರರಾದ ಮೆ| ಯೇಟ್ಸ್ ದೊರೆಗಳವರು ಕಳೆದ ವಾರ ಇಲ್ಲಿಯ ಟ್ರೈನಿಂಗ್ ಶಾಲೆಯಲ್ಲಿ ಸುಮಾರು ೭೫ ಉಪಾಧ್ಯಾಯರ ಪ್ರೆಕ್ಟಿಕಲ್ ಪರೀಕ್ಷೆಯನ್ನು ಮಾಡಿರುತ್ತಾರೆ. ಅನಂತರ ಟ್ರೈನಿಂಗ್ ಶಾಲೆಯ ಉಮೇದ್ವಾರರ ಪರೀಕ್ಷೆಯನ್ನು ಎರಡು ದಿವಸಗಳ ವರೆಗೆ ಮಾಡಿರುವರು.

ರಜೆಯ ಮೇಲಿರುವ ಮೆ| ಆರ್. ಎಫ್. ಬಿ ಎಲ್. ಗಪ್ಪಿ ಐ. ಸಿ. ಎಸ್. ದೊರೆಗಳವರು ರಜೆ ತೀರಿದ ನಂತರ ಕುಂದಾಪುರ ಡಿವಿಜನಲ್ ಆಫೀಸರರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಡ್ಯೂಟಿ ಕಲೆಕ್ಟರರಾಗಿರುವ ರಾಯಬಹದ್ದೂರ್ ಸಿ ಗೋಪಾಲನ್ ನಾಯರರವರಿಗೆ ಬರುವ ಏಪ್ರೀಲ್ ತಿಂಗಳಿಂದ ಎರಡು ತಿಂಗಳ ರಜೆ ಕೊಡೋಣಾಗಿರುವದಲ್ಲದೆ ಕೆಲಸದವಧಿಯು ಬರುವ ಸಪ್ಟಂಬರ ತಿಂಗಳದ ವರೆಗೆ ಹೆಚ್ಚಿಸೋಣಾಗಿರುವದು.

ಬನಾವಣಿ ಮಿಸ್ರಿಗಳನ್ನು ಕೊಂಡುಕೊಂಡು ಇಲ್ಲಿಯ ಕೆಲವರು ಮೋಸಹೋದರೆಂಬ ವರ್ತಮಾನವು ಪಟ್ಟಣದಲ್ಲಿ ಹಬ್ಬಿರುವದು. ಕೆಲವರು ತಾಜಾ ಮಿಸ್ರಿಗಳೆಂತ ಭಾವಿಸಿ ಬನಾವಣಿ ಮಿಸ್ರಿಗಳನ್ನು ಕ್ರಯಕ್ಕೆ ಪಡಕೊಂಡರಂತೆ, ಕೆಲವರು ಈಡನ್ನಾಗಿ ತೆಗೆದುಕೊಂಡು ಮೋಸಹೋದರಂತೆ, ಇನ್ನು ಕೆಲವರು ದುರ್ವ್ಯಾಪ್ತಿಗಳ ಬಗ್ಗೆ ಈ ಮಿಸ್ರಿಗಳನ್ನು ಪ್ರಯೋಗಿಸಿದರಂತೆ,—ಎಂಬೀ ಮೊದಲಾದ ವರ್ತಮಾನಗಳು ತುಂಬಾ ಇವೆ. ಬನಾವಣಿ ಮಿಸ್ರಿಗಳೆಂದು ತೆಗೆದುಕೊಂಡು ಮೋಸಹೋದೆವೆಂದು ಅಲ್ಲಲ್ಲಿ ಈ ವರ್ತಮಾನಗಳನ್ನು ಹೇಳುತ್ತಿರುವ ಗೃಹಸ್ಥರೊಡನೆ ಇರುವ ಈ ಬನಾವಣಿ ಮಿಸ್ರಿಗಳ ಒಂದು ಕಡೆಯಲ್ಲಿ Jaya-Laxmi Mt Madras ಎಂತಲೂ ಮತ್ತೊಂದು ಕಡೆಯಲ್ಲಿ Metal made, Copper ornaments ಎಂತಲೂ ಇಂಗ್ಲಿಷ್ ಅಕ್ಷರಗಳಿಂದ ಮುದ್ರಿಸಿರುತ್ತದೆ. ಹೀಗೆ ಈ ಮಿಸ್ರಿಗಳು ತಾಮ್ರದ ನಾಣ್ಯಗಳಾಗಿವೆಂತ ಅದರ ಮೇಲೆ ಮುದ್ರಿಸಿರುವ ಅಕ್ಷರಗಳಿಂದಲೇ ಸ್ಪಷ್ಟವಾಗುತ್ತದೆ. ಆದ್ದರಿಂದ ಇವನ್ನು ಕೊಂಡುಕೊಳ್ಳುವವರು ಚನ್ನಾಗಿ ನೋಡಿಕೊಂಡು ನಂತರ ಕೊಂಡುಕೊಂಡರೆ "ಮೋಸಹೋದೆವು" ಎಂಬ ವರ್ತಮಾನಗಳು ಹುಟ್ಟಲು ಆಸ್ಪದವಿಲ್ಲದಂತಾಗುವದು.

ಪುತ್ತೂರು ತಾಲೂಕು ಬೋರ್ಡಿನವರು ಮ| ರಾ| ಕೆ. ನರಸಿಂಗನ್ನಾಕರವರನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ಆರಿಸಿರುತ್ತಾರೆ.

ಬಾಸೆಲ್ ಮಿಶ್ಯನ್ ನೇಯುವ ಕಾರ್ಖಾನೆಯ ಮೇನೇಜರರ ಜಡ್ಕಾಡ್ರೈವರ್ ಕೊರಗನೆಂಬವನು ಸದರಿ ಕಾರ್ಖಾನೆಯ ಬನಿಯನುಗಳನ್ನು ಕದ್ದುಕೊಂಡನೆಂಬದಾಗಿ ಆಪಾದಿಸಲ್ಪಟ್ಟದ್ದರಿಂದ ಟೌನ್ ಮೇಜಿಸ್ಟ್ರೇಟರು ಆಪಾದಿತನಿಗೆ ೨ ತಿಂಗಳ ಸಜಾ ವಿಧಿಸಿದರು. ಆಪಾದಿತನು ಅಪೀಲುಮಾಡಿಕೊಂಡಲ್ಲಿ ಅಪೀಲಿನಲ್ಲಿಯೂ ಮೂಲ ತೀರ್ಮಾನವೇ ಕಾಯಂ ಆಗಿರುತ್ತದೆ.

ಮಂಗಳೂರು ಮುನಿಸಿಪಾಲಿಟಿಗೆ ಸೇರಿದ ಗಡಿಯೊಳಗೆ ರಾತ್ರಿ ಹತ್ತು ಗಂಟೆಯ ನಂತರ ಆಟ ಇತ್ಯಾದಿಗಳನ್ನು ಮಾಡಿ ಗದ್ದಲವೆಬ್ಬಿಸಕೂಡದೆಂಬ ಕಾನೂನು ಜಾರಿಯಲ್ಲಿದೆಯಷ್ಟೆ. ಈ ಕ್ರಮವನ್ನು ಅಲಕ್ಷಿಸಿ ಮೊಹರಮ್ ಸಮಯ ರಾತ್ರಿ ೧೦ ಗಂಟೆಯ ನಂತರವೂ ವೇಷಹಾಕಿ ನಟಿಸಿ, ಗದ್ದಲವೆಬ್ಬಿಸಿದರೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟ ಜಪ್ಪಿನ ಐತಪ್ಪ, ಕೊರಗ್ಗು, ವೀರಪ್ಪ ಬೆಳ್ಳದ ಬಾಬು, ಜಾರು, ಪರಮೇಶ್ವರ, ಗುರುವಪ್ಪ ಇವರಿಗೆ II ಕ್ಲಾಸ್ ಬೆಂಚ್‌ಮೇಜಿಸ್ಟ್ರೇಟ ಕೋರ್ಟಿನಲ್ಲಿ ಜುಲುಮಾನೆ ವಿಧಿಸೋಣಾಗಿರುತ್ತದೆ.

ಬೋಳಾರದ ರಾ| ಅಬ್ದುಲ್ಲಖಾದರ್ ಸಾಹೇಬರ ಮೊಮ್ಮಗ ನಾಲ್ಕು ವರ್ಷ ವಯಸ್ಸಿನ ಬಾಬಾ ಎಂಬ ಹುಡುಗನು ಆಡುತ್ತಿರುವಾಗ ಒಬ್ಬ ಮಾಪಿಳ್ಳೆಯು ಅಲ್ಲಿಗೆ ಬಂದು ಬಾಲಕನಿಗೆ ಬಿಸ್ಕುಟುಗಳನ್ನು ಕೊಟ್ಟು ಪುಸಲಾಯಿಸಿ ಅವನ ಕುತ್ತಿಗೆಯಲ್ಲಿದ್ದ ಸುಮಾರು ರೂ. ೧೦೫ ಕ್ರಯ ಬಾಳುವ ಚಿನ್ನದ ಇಸ್ತಾಂಬೂಲದ ಸರವನ್ನು ಜಾರಿಸಿ ಪರಾರಿಯಾಗಿರುವನೆಂಬದಾಗಿಯೂ ದೈವವಶಾತ್ ಬಾಲಕನಿಗೆ ಹಾನಿಮಾಡಲಿಲ್ಲವೆಂದೂ ತಿಳಿಯುತ್ತೇವೆ. ಆದರೆ ಮಕ್ಕಳ ಮೈಮೇಲಿರುವ ಚಿನ್ನಾಭರಣಗಳನ್ನು ಜಾರಿಸುವ ಘಾತುಕರು ಅನೇಕಾವರ್ತಿ ಮಕ್ಕಳನ್ನು ಕೊಂದುಬಿಡುವ ಭಯಂಕರ ಕೃತ್ಯಗಳನ್ನು ನಡಿಸಿರುವ ದೃಷ್ಟಾಂತಗಳೂ ಹೊಸದಲ್ಲವಾದ್ದರಿಂದ ಚಿನ್ನಾಭರಣಗಳನ್ನು ತೊಡಿಸಿ ಮಕ್ಕಳನ್ನು ಅಲೆಯ ಬಿಡುವ ಹೆತ್ತವರು ಮೇಲಿನ ವಾರ್ತೆಯಿಂದ ಎಚ್ಚರಗೊಳ್ಳಬೇಕಾಗಿ ಹಾರೈಸುವೆವು.

ಹಜೂರು ಕಚೇರಿ ಕ್ಲಾರ್ಕರಾಗಿರುವ ರಾ| ಎ ಸುಬ್ರಾಯ ಹೆಗ್ಗಡೆಯವರ ಒಂದು ಬೆಲೆಯುಳ್ಳ ವಾಚು ಕಳೆದ ದಸಂಬರ ತಾ. ೨೭ರಲ್ಲಿ ಅವರ ಸಡ್ಕಗರ ಮನೆಯಲ್ಲಿ ಗೋಡೆಯ ಮೇಲೆ ನೇತಾಡಿಸಿದ್ದ ಅಂಗಿಯಿಂದ ಕಳವಾಗಿ ಹೋಗಿತ್ತು. ಇದೇ ಜನವರಿ ತಾ. ೨೪ರಲ್ಲಿ ಸದರಿ ವಾಚು ಹಜೂರು ಕಚೇರಿ ಕ್ಲಾರ್ಕರಾದ ಪಟ್ಟಾಭಿರಾಮರಾಯರ ಕೈಯಲ್ಲಿದ್ದದನ್ನು ಕಂಡು ವಿಚಾರಿಸಿದಲ್ಲಿ ಬೀಬಿಅಲಾಬಿ ಬಳಿಯಲ್ಲಿರುವ ಸೋಮಯ್ಯಗಟ್ಟಿ ಎಂಬವನಿಂದ ತಾನು ಆ ವಾಚನ್ನು ರೂ. ೩ಕ್ಕೆ ಪಡಕೊಂಡನೆಂದು ಹೇಳಿದರು. ಸೋಮಯ್ಯಗಟ್ಟಿಯನ್ನು ವಿಚಾರಿಸಿದ್ದಲ್ಲಿ ತನ್ನ ಹೊಟೇಲಿನಲ್ಲಿ ತಿಂದ ಮಾಂಸ ಇತ್ಯಾದಿ ಮೇಲೋಗರದ ಬಾಬ್ತು ರಂಗಪ್ಪನೆಂಬವನು ಸುಮಾರು ೨೦ ದಿವಸಗಳ ಹಿಂದೆ ಅಡವಿಟ್ಟು ಹೋಗಿದ್ದನು ಎಂಬದಾಗಿ ಹೇಳಿದ್ದರಿಂದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಅಮೃತರಾಯರು ಸದರಿ ರಂಗಪ್ಪನನ್ನು ಕೈದು ಮಾಡಿರುತ್ತಾರೆ.

ಇದೇ ಬರುವ ಫೆಬ್ರವರಿ ತಾ. ೬ರಲ್ಲಿ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಸಭೆಯ ವರ್ಷೋತ್ಸವವು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ರಾ| ಎಸ್. ಟಿ. ಜಗನ್ನಾಥರಾವ್ ಬಿ. ಎ. ಬಿ. ಎಲ್ ರವರ ಅಧ್ಯಕ್ಷತೆಯಲ್ಲಿ ಕೋಡಿಯಾಲ್ಬೈಲ ಬಳಿ ಇರುವ ವಿದ್ಯಾರ್ಥಿ ಭವನದಲ್ಲಿ ಜರಗುವದು.

ಪುತ್ತೂರು ಎಡ್ಯುಕೇಶನ್ ಸೊಸೈಟಿಯವರು ಪುತ್ತೂರಲ್ಲಿ ಕಟ್ಟಿಸಲಿಕ್ಕಿರುವ ಸೆಕಂಡರಿ ಶಾಲಾ ಕಟ್ಟೋಣದ ಬಗ್ಗೆ ಟೆಂಡರುಗಳು ಕಳೆದ ಸಂಚಿಕೆಯ ನೋಟೀಸಿನಲ್ಲಿ ಪ್ರಕಟಿಸಿದಂತೆ ಫೆಬ್ರವರಿ ತಾ ೨೫ರಲ್ಲಿ ಅಲ್ಲ; ಫೆಬ್ರವರಿ ತಾ. ೧೮ರಲ್ಲಿ ಸ್ವೀಕರಿಸೋಣಾಗುವವು ಎಂತ ಸದರಿ ಸೊಸೈಟಿಯ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಸೆಕೆಂಡರಿ ಗ್ರೇಡಿನ ಮ. ರಾ. ರಾ. ನೀರೋಡಿ ಸುಂದರರಾಯರು ಭೋಜ ಪ್ರಬಂಧವೆಂಬ ಪುಸ್ತಕವನ್ನೂ, ಹ್ಯಾಯರ್ ಗ್ರೇಡಿನ ಮ. ರಾ. ರಾ ಮರೋಳಿ ವೆಂಕಟರಾಯರು ಕಾದಂಬರಿ ಸಂಗ್ರಹವೆಂಬ ಮಾಸಪತ್ರಿಕೆಗಳನ್ನೂ ಮಂಗಳೂರ ನಿರಾಶ್ರಿತ ಜನಸಹಾಯಕ ಸಂಘದ ಮಿತ್ರಮಂಡಳಿಯವರಿಗೆ ದಾನವಾಗಿ ಕೊಟ್ಟಿದ್ದಾರೆ.

ರಾಮುಭಂಡಾರಿಗಳನ್ನು ಕೊಂದರೆಂಬದಾಗಿ ಆಪಾದಿಸಲ್ಪಟ್ಟ ಸಾಯಿರಿಬ್ಯಾರಿ ಮೊದಲಾದವರ ವಿಚಾರಣೆಯು ಜನವರಿ ತಾ. ೪ರಿಂದ ಪ್ರಾರಂಭವಾಗಿ ಪ್ರೊಸಿಕ್ಯೂಶನ್ ಕಡೆಯಿಂದ ೩೦ ಮಂದಿಯ ಸಾಕ್ಷಿ ವಿಚಾರಣೆಯು ತಾ. ೨೬ಕ್ಕೆ ಮುಗಿದಿರುವದು. ಆಪಾದಿತರ ಕಡೆಯಿಂದ ಡಿಫೆನ್ಸ್ ಬಗ್ಗೆ ೩೧ ಸಾಕ್ಷಿಗಳು ಇರುವದರಿಂದ ಕೆಳಕೋರ್ಟಿನಲ್ಲೇ ಇವರ ವಿಚಾರಣೆ ನಡೆಯಿಸಬೇಕೆಂಬದಾಗಿ ಆಪಾದಿತರ ಕಡೆ ವಕೀಲರು ಕೇಳಿಕೊಂಡದ್ದರಿಂದ ಡಿಫೆನ್ಸ್ ಸಾಕ್ಷಿಗಾರರ ವಿಚಾರಣೆಯು ಇದೇ ಬರುವ ಫೆಬ್ರವರಿ ತಾ. ೮ಕ್ಕೆ ಪ್ರಾರಂಭಿಸಲ್ಪಡುವದು ಎಂತ ತಿಳಿಯುತ್ತೇವೆ.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು.

ಕಳೆದ ಮಂಗಳವಾರ ತಾ. ೧೮ರಲ್ಲಿ ಫಾದರ್ ಮುಲ್ಲರರ ಕಂಕನಾಡಿ ಕುಷ್ಠ ರೋಗಿಗಳ ಭಿತ್ತಿಯಲ್ಲಿರುವ ಕುಷ್ಠರೋಗಿಗಳಲ್ಲಿ ೨೦ ಮಂದಿ ಮುಷ್ಕರ ಹಾಕಿ, ಇದಕ್ಕೆ ಒಂದು ತಿಂಗಳ ಹಿಂದೆಯೇ ಭಿತ್ತಿಯಿಂದ ಹೊರಹೋಗಿದ್ದ ೯ ಮಂದಿ ಕುಷ್ಠ ರೋಗಿಗಳನ್ನು ಸೇರಿಕೊಂಡರು. ಹೊರಗೆ ಬಿಡಲ್ಪಟ್ಟ ನಿರ್ಗತಿಕರಾದ ಈ ಕುಷ್ಠರೋಗಿಗಳು ಗುಂಪು ಕೂಡಿ ಬೀದಿ ಬೀದಿ ಅಲೆಯುತ್ತಲಿರುವದನ್ನೂ ರಾತ್ರಿಕಾಲ ಹೊರಗಿನ ಬಯಲಲ್ಲಿ ಬಿದ್ದಿರುವದನ್ನೂ ನೋಡಿದ ಕಂಪ್ರೆಸ್ಟ್ ಕ್ಲಾಸ್ ಮಿಶನಿನ ಮೆಂಬರರು ತಾ. ೧೯ನೇ ಬ್ರಹಸ್ಪತಿವಾರ ಮುಷ್ಕರ ಹಿಡಿದ ಕುಷ್ಠರೋಗಿಗಳನ್ನು ಬರಮಾಡಿಕೊಂಡು ಕುಷ್ಠರೋಗಿಗಳ ಪ್ರತ್ಯೇಕ ಒಂದು ಬಿತ್ತಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದಲೂ ಕುಷ್ಠರೋಗಿಗಳ ಕಷ್ಟ ನಿವಾರಣೆಗಾಗಿ ವಂತಿಗೆ ಕೂಡಿಸುವರೆ ಸಹಾಯವಾಗುವಂತೆಯೂ ಮುಷ್ಕರ ಹಿಡಿದ ಕುಷ್ಠರೋಗಿಗಳ ಫೊಟೋ ತೆಗೆಸಿದರು. ಕೆಥೋಲಿಕ್ ಮಿಶನರಿಗಳ ಕಡೆಯಿಂದ ಕೆಲವರು ಮುಷ್ಕರ ಹಿಡಿದ ಕುಷ್ಠರೋಗಿಗಳ ಬಳಿಗೆ ಹೋಗಿ ಅವರನ್ನು ಹಿಂದೆ ಬರಬೇಕೆಂದು ಹೇಳಿದರೂ ಕುಷ್ಠರೋಗಿಗಳು ಹಿಂದೆ ಹೋಗಲು ಒಪ್ಪಲಿಲ್ಲವಂತೆ. ಕಡೆಗೆ ಈ ಮಿಶನರಿಗಳು ಭಿತ್ತಿಯಲ್ಲಿ ಮಾನ್ಯ ಫಾದರ್‌ಮುಲ್ಲರವರ ಕಾಲದ ಕ್ರಮ ಆರೈಕೆ ಇತ್ಯಾದಿಗಳನ್ನೇ ಪುನಃ ಪ್ರಾರಂಭಿಸುವೆವೆಂದು ಅಭಯವಿತ್ತದ್ದರಿಂದ ಶನಿವಾರ ದಿನ ಮುಷ್ಕರಗಾರರು ಪುನಃ ಭಿತ್ತಿಗೆ ಹಿಂದೆಹೋದರು ಎಂತ ಕೇಳುತ್ತೇವೆ.

ಶ್ರೀರಾಮ ಸೋಪು ಫೇಕ್ಟರಿ, ಮಂಗಳೂರು—ಇವರಿಂದ ಕಳುಹಿಸೋಣಾದ ಒಂದು ಬಾರ್‌ಸೋಪನ್ನು ಆತ್ಯಾದರದಿಂದ ಸ್ವೀಕರಿಸಿರುವೆವು, ಬಾರುಸೋಪು ಒಳ್ಳೇದಿದೆ.

ನೋಟೀಸು.

ಮಂಗಳೂರು ತ್ಯಾಹಾರಿನಲ್ಲಿರುವ ಸಾ| ಕಟಾವು ರತಂಜಿ ಕಾನ್‌ಂಜಿ ಸೇಟರು ತನ್ನ ಬಾಬತು ಪೂರಾ ಆಸ್ತಿಯು ಮತ್ತು ವೈವಾಟಿನ ಅಧಿಕಾರವನ್ನು ಅವರ ಬಾವನೆಂಟರಾದ ರಾ| ಪುರುಶೊತ್ತಮ ಸೇಟರ ವ ರಾ. ಮುಲ್ಜೀ ಲಕ್ಷೀದಾಸ ಸೇಟ್ ಇವರ ಅಭಿಪ್ರಾಯ ಮತ್ತು ಅನುಮತಿ ಪ್ರಕಾರ ನಡಿಸಿಕೊಂಡು ಬರಲಿಕ್ಕೆ ಅವರ ಹೆಂಡತಿ ಬಾಯಿ ಸುಂದರಿಬಾಯಿಗೆ ತಾರೀಕು 12—1—1916ರ ರಿಜಿಸ್ಟರ್ಡ ಪತ್ರದ ಮೂಲಕ ಸ್ವತಂತ್ರ ಕೊಟ್ಟಿರುತ್ತಾರೆ. ಇನ್ನು ಮೇಲ್ಕಂಡ ಎಲ್ಲಾ ವೈವಾಟಿನಲ್ಲಿ ಸದರಿ ಕಟಾವು ರತಂಜಿ ಕಾನ್‌ಂಜಿ ಸೇಟ್ರಿಗೆ ಏನೊಂದೂ ಹಕ್ಕು ಸಂಬಂಧವಿದ್ದದಿಲ್ಲ.

ಮಂಗಳೂರು. 13—1—16.

N. Subba Rao.
Vak l for
BAI SUNDARI BAI.

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪ್ರೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರೆಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾಮು, ಬಾಡಿಗೆ ಚೀಟು, ರೆಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ಹೊಂದಿಕೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬುಕು.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8.

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಷಿತ್ನ, ದಶಾಂಗ, ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ ಮಂಗಳೂರು.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:— ಹೆಚ್ಚು ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಸತತ ಇಂದ್ರಿಯ ದೌರ್ಬಲ್ಯ ... ಎಲ್ಲರೂ, ಶರೀರಗಳ ಪಾಕಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿ ... ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ... ಕಾಂತಿ ... ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ... ಅಭ್ಯಾಸಿಸುವವರು 2 ಆಣೆ ತೂಕ ರಾತ್ರಿ ಊಟದ ಮೇಲೆ ಸೇವಿಸ ... ತಕ್ಕದ್ದು

1 ಶೇರಿನ ಡಪ್ಪಿಗೆ ಕ್ರಯ 2—0—0

ಚಂದ್ರೋದಯಾವರ್ತಿ:— ಕಸ್ತೂರಿ ... ವಾಯಿಪ್ಪಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ... ತಾತ್ಕಾಲಿಕ ಗುಣ

ಕ್ರಯ ರೂ 0—1—0

ಮಹಾಜ್ವರಾಂಕುಶ:— ದಿನಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0,

ಮೇಹಮುದ್ಗರವಟಿ:— 20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 10 ಕ್ರಯ: 1—2—0.

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:— ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ 0—12—0.

ಚಂದನಾಸವ:— ಮೇಹ, ಶುಕ್ಲಧಾತು ನಷ್ಟತ್ವ ಗುಣ. ಭಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೇಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಸಂತ ಕುಸುಮಾಕರ:— ನಮ್ಮ ವಸಂತ ಕುಸುಮಾಕರವು ಉರಿಮೂತ್ರ, ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲದಿರುವದು, ಕೈಕಾಲುಗಳ ಉರಿಯೋಣ, ಆಯಾಸ, ಮೂರ್ಛೆ ಬೀಳುವಿಕೆ, ಬಿಳುಪು ಮೊದಲಾದ ಮೇಹ ಜಾಡ್ಯಗಳು, ಮೂತ್ರ ವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯ ಸ್ಖಲನ, ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸೆ ಕೊಡುವೆವು. ಒಂದು ವಾರದವರೆಟ್ಟಿಗೆ ಸಾಕಾಗುವಷ್ಟು ಔಷಧ ಕ್ರಯ 5 ರೂಪಾಯಿ. ವಿ. ಪಿ. ಚಾರ್ಜ 5 ಆಣೆ,

ರಕ್ತಶುದ್ಧಿ:— ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರಭೂತವೆಂದು ಎಲ್ಲರೂ ಬಲ್ಲರು. ರಕ್ತವು ಕೆಟ್ಟುಹೋದಪಕ್ಷದಲ್ಲಿ ಬಾಯಿಯಲ್ಲಿ ಹುಣ್ಣು, ಹಣ್ಣುಗಳಲ್ಲಿ ಹುಣ್ಣು, ಕಣ್ಣುನೋವು, ಮೂಗಿನಲ್ಲಿ ಕ್ರಿಮಿ ಸೇರುವಿಕೆ, ಹಲ್ಲಿನಲ್ಲಿ ರಕ್ತ, ಕೀವು ಸೋರುವುದು, ತುಟಿಗಳ ಹುಣ್ಣಾಗೋಣ, ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ, ತುರಿ ಮುಂತಾದವು, ವ್ರಣಗಳು, ಚರ್ಮದ ಬಣ್ಣ ಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಮೈಯೆಲ್ಲಾ ವಿಕಾರವಾಗಿ ಕಪ್ಪು ಚುಕ್ಕೆಗಳುಂಟಾಗುವಿಕೆ, ಚರ್ಮದ ಕಿವಿಗಳು, ಮೂಗು ಒಡೆಯುವಿಕೆ, ಮೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮಹೋದರರೋಗ, ತೊನ್ನು ಪರೆಯೆದ್ದಿರುವುದು, ಕುಷ್ಠರೋಗ, ಪಡ, ಕಂಕಳು ವಿತ್ತು ಮೈಯೆಲ್ಲಾ ದುರ್ವಾಸನೆಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ, ಹಗಲು ರಾತ್ರಿ ತೆರೆದುಕೊಳ್ಳುವಂತೆ ನವೆಯಾಗುತ್ತಿರೋಣ ಇತ್ಯಾದಿ ನಾನಾ ವಿಧ ವ್ಯಾಧಿಗಳು ... ಇಂಥಾ ಕೆಟ್ಟ ವಿಷವನ್ನು ರಕ್ತದೊಳಗಿನಿಂದ ನಿವಾರಿಸುವದಕ್ಕೆ ಬಲವತ್ತರವಾದ ಅಮೃತಸಂಜೀವಿಯು ನಮ್ಮ ರಕ್ತಶುದ್ಧಿಯೆ ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. 20 ದಿವಸಗಳ ಉಪಯೋಗಕ್ಕೆ ಸಾಕಾಗುವಂತಹ ಪೆಟ್ಟಿಗೆ 1ಕ್ಕೆ 2 ರೂಪಾಯಿ 1ರಿಂದ 2 ಪೆಟ್ಟಿಗೆಗಳವರೆಗೂ ವಿ. ಪಿ. ಚಾರ್ಜ 5 ಆಣೆ.

ಸಿದ್ಧಮಕರಧ್ವಜ:— ಇದು ಹಿಂದು ವೈದ್ಯಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರ ಪಾದಾರ್ಥ. ನಮ್ಮ ಸಿದ್ಧಮಕರಧ್ವಜವು ಎಲ್ಲಾ ವಿಧ ಜ್ವರಗಳನ್ನು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಹರಿವಾತಗಳನ್ನು ಗುಣಪಡಿಸುತ್ತದೆ. ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವರ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿ ಪ್ರಯೋಜನವೇನು? ಒಟ್ಟಕ್ಕೆ ನಮ್ಮ ಮಕರಧ್ವಜನೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ. ನೋಡಿ, ಎಣೆಯಿಲ್ಲದ ಈ ಸಿದ್ಧಮಕರಧ್ವಜವನ್ನು ಉಪಯೋಗಿಸಿದರೆ ಆದರೆ ನಿಮ್ಮ ಶತಮಾನ ಪೂರ್ತಿ ಶಾಂತಿಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ ಪ್ರಾಯದ ಉನ್ಮರವೂ ಕೆಡುವುದಿಲ್ಲ. ಇದರ ಬೆಲೆ ತೊಲೆ 1ಕ್ಕೆ 80 ರೂಪಾಯಿ. ಒಂದು ವಾರಕ್ಕೆ ಸಾಕಾಗುವ ಔಷಧಕ್ಕೆ 3 ರೂಪಾಯಿ. ವಿ. ಪಿ. ಚಾರ್ಜ ಪ್ರತ್ಯೇಕವು

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ಪಿ. ಸುಬ್ಬರಾಯಿ
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ದಿನವಹಿ ಲೆಖ್ಖಾಚಾರೆ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪ್ರೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯೋಜನ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಜಿಸ್ತ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾಮ, ಬಾಡಿಗೆ ಚೀಟು, ರಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಕಾಗದ ಮೊಹಬಿಲಿ ಪಟ್ಟಿ ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ,ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೋಕೇಟು ಬುಕು.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕುಟುಂಬ ಸಂಜೀವಿನೀ.

ಛಳಿಕಾಲದಲ್ಲಿ ತಲೆದೋರುವ ಶೀತ, ಕೆಮ್ಮು, ನೆಗಡಿ, ಶೀತಭೇದಿ, ವಾತರೋಗಗಳಿಗೆ ಯುಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ, ಪ್ಪೆಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆನೋವು, ತಲೆಸಿಡಿತ, ದುರ್ವ್ಯಾಪ್ತಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯುಕಲಿಪ್ಟಸ್ ತೈಲವು ಸಿದ್ಧೌಷಧಿ ಎಂಬದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಒಂದಿರುತ್ತವೆ. ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?

ಔನ್ಸ್ ಸೀಸೆ 1ಕ್ಕೆ 5 ಆಣೆ. ವಿ ಪಿ ಚಾರ್ಜು ಬೇರೆ ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—10—0.

ಕಮ್ಮಿ ದರದ ಕಳಕ್ಕು ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ॥ **ವೆಂಕಟಕೃಷ್ಣ ಆಚಾರಿ,** ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ॥ **ವೈ. ಕೊರಗಪ್ಪ** ಮುಂಬಾಯಿ—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೊಳೆ ತಾಗಿ ಕೊಳೆಯುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ. ದಯಮಾಡಿ 3 ಕರಡಿಗೆಗಳನ್ನು ವಿ ಪಿ. ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ. ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇರೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಕೋಮಲ ವಿಲಾಸವು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಲ್ಲಿ ಇಳುಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನವದುವದೇಕೆ?

ವಿಳಾಸ.— ಸೋಮೇಶ್ವರ ನರಶಿಂಗರಾವ್,

ಕೋಮಲ ವಿಲಾಸ,

ರಸಪ್ಪಚೆಟ್ಟಿ ಬೀದಿ, ಮದರಾಸು.

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ವಾತದ ರೋಗಗಳೂ, ಉಳುಕು ಮುಂತಾದವುಗಳಿಗೆ ತಿಕ್ಕುವದರಿಂದ ಶೀಘ್ರವಾಗಿ ಗುಣವಾಗುವದು ಸಣ್ಣ ಬಾಯಿಯ ಸೀಸೆ 1ರ ಕ್ರಯ 0—8—0 ಒಂದ ಡಜನ್ ತರಿಸಿಕೊಳ್ಳುವವರಿಗೆ 2 ಸೀಸೆಗಳು ಹೆಚ್ಚಿಗೆ. ಸ್ಯಾಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ. ಪಿ. ಮಾಫಿ

ವಿಸ್ಫೋಟಕ ಮಾತ್ರೆ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೊಂಡ, ಕೋಟ್ಲೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದು ಮಕ್ಕಳ ಜೀವಕ್ಕೆ ಸಂಜೀವನದಂತಿರುವದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು

ಸ್ವರಸುಧಿ—ಕೆಮ್ಮು, ಗಂಟಲುನೋವು, ಧ್ವನಿ ಒಡೆದಿರುವದು, ಅಗ್ರ ಮುಂತಾದವುಗಳಿಗೆ ಗುಣಕಾರಿ ಎಲೆಅಡಿಕೆಯ ಸಂಗಡ ತಿನ್ನುವದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಟ 1ಕ್ಕೆ ಕ್ರಯ 0—1—6 ಸ್ಯಾಂಪಲ್ 6ಪೈ

ಕಾರ್ಬೋಲಿಕ್ ಟೂತ್ ಪೌಡರ್—ಈ ಪುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕು, ವಸಡಿನ ರಕ್ತ, ಮುಂತಾದವುಗಳು ಗುಣವಾಗಿ ಹಲ್ಲುಗಳ ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—3—0.

ಗಜಕರ್ಣ ಯಾನೆ ಇಡ್ಡಿಗೆ—ಈ ಮುಲಾಮನ್ನು ತುರಿಸುವಿಕೆ ಇರುವಾಗ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ನಿಸ್ಸಂದೇಹವಾಗಿ ಸ್ವಚ್ಛವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ 0—4—0. ಒಂದು ಡಜನ್ ಡಬ್ಬಿಗಳಿಗೆ ರೂ 2—[illegible]—0 ವಿ. ಪಿ. ಬೇರೆ.

M. D. R & Sons.

Srimangureesh Aushadalaya,

UDIPI S. C.

ಓದಿನೋಡಿ! ಬೆಲೆ ಸುಲಭ!! ಅಂದವಾದ ಮುದ್ರಣ!

ದಪ್ಪ ಕಾಗದ, ವೇದಮಂತ್ರಗಳಿಗೆ ಸ್ವರಹಾಕಿದ ಕನ್ನಡಾಕ್ಷರ.

ಆಹ್ನಿಕಮಂಜರಿ.

ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕವು.

ಇದರಲ್ಲಿ ಮಂಗಲಾಚರಣ, ಗುರುಸ್ತುತಿ, ಪ್ರಾತಸ್ಮರಣ, ಭಸ್ಮಧಾರಣ ವಿಧಿ, ಆಚಮನ ವಿಧಿ, ಪ್ರಾತಸ್ಸಂಧ್ಯಾ, ಅಗ್ನಿಕಾರ್ಯ, ಮಧ್ಯಾಹ್ನ ಸಂಧ್ಯಾ, ಬ್ರಹ್ಮಯಜ್ಞ ಪಂಚಾಯತನ, (ದೇವ) ಪೂಜಾ ಪಂಚಾಯತನ ದೇವತಾ ಸ್ಥಾಪನಚಕ್ರ, ಪೂಜಾವಿಧಿ, ಅಗ್ನಿಮೀಳೇ ಸೂಕ್ತ, ಪಂಚಾಮೃತ ಸ್ನಾನ, ರುದ್ರ, ಚಮ್ಮ, ಪುರುಷಸೂಕ್ತ, ಶ್ರೀಸೂಕ್ತ ವಿಷ್ಣುಸೂಕ್ತ, ಅಹಂರುದ್ರಾಸೂಕ್ತ (ದೇವಿಸೂಕ್ತ) ಪವಮಾನ, ದ್ವಾದಶ ನಾಮಗಳು, (ಈ ದೇವರದ್ದು), ದ್ವಾದಶನಾಮಸ್ತೋತ್ರ, ಲಘುನ್ಯಾಸ, ಈ ಅಷ್ಟೋತ್ತರಗಳು, ದೇವೀ ವೇದ ಪಾದಸ್ತವ, ವಿಷ್ಣುವೇದ ಪಾದಸ್ತವ ಇನ್ನೂ ಅನೇಕ ಸ್ತೋತ್ರಗಳೂ ಇರುಗಿವೆ. ಅಲ್ಲಲ್ಲಿ ಟಿಪ್ಪಣಿ ಕೊಟ್ಟು, ಅಂದವಾದ ಮುದ್ರಣದಿಂದ ಸುಂದರವಾದ ಬುಕ್ಕು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಅತ್ಯಗತ್ಯ ಬೇಕಾದುದು.

ಇನ್ನು ಹೆಚ್ಚಿನ ವಿಷಯ ಪತ್ರದ್ವಾರಾ ತಿಳಿಯಬಹುದು. ವ್ಯಾಪಾರಸ್ಥರಿಗೆ ಯೋಗ್ಯವಾದ ಕಮಿಶನ್ ಕೊಡಲಾಗುವುದು.

ಬೆಲೆ: ಪುಸ್ತಕ 1ಕ್ಕೆ 1—0—0, ಪೋಸ್ಟೇಜು ಬೇರೆ.

ವಿಳಾಸ:— ಎಚ್. ವಿ. ಕೃಷ್ಣಭಟ್ಟ,

ವೇದಪಾಠಶಾಲಾ, ತೀರ್ಥಮುತ್ತೂರು,

ಆಗುಂಬೆ ಪೋಸ್ಟು, ತೀರ್ಥಹಳ್ಳಿ, ತಾಲೂಕು.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	... .. .	300,000—0—0
Issued Capital	.. ...	225,000—0—0
Subscribed Capital	..	219,100—0—0
Paid up Capital	.. ..	194,100—0—0
Deposits	.. ...	371,976—4—4
Reserve Fund	.	33,500—0—0

Besides the uncalled capital of Rs 25,000/ 25% of the net profits are added annually to the Reserve Fund Rs 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½ %

Loans granted on proper securities and pledges

Sealed Parcels for safe custody received on a moderate charge

ನಿಯಮಿತ ಮೂಲ ಧನವು ರೂಪಾಯಿ	... ...	300,000—0—0
ಹುಟ್ಟಿಬಂದ ಮೂಲ ಧನವು	„	225,000—0—0
ಪ್ರತಿಜ್ಞಾತ ಮೂಲ ಧನವು	„	219,100—0—0
ಆಗತ ಮೂಲ ಧನವು	„	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	371,976—4—4
ರಕ್ಷಿತ ಧನವು	... .	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಫಾಯದೆಯು ಶೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳ ಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಶೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮ ವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬ ಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾ ದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂ ಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳ ಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂ ಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋ ಣಾದೀತು ಈ ಠೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st December 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯ ವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸ ರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳ ವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹು ಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.,
177 ಚೀನಾ ಬಜಾರ ರಸ್ತೆ, ಮದ್ರಾಸು.

Peoples Park Fair Reward.

ಸುಂದರವಾದ] 1916 [ಕಾಲೆಂಡರು.



ಕರ್ಣಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಪಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾಮಾಗಿ ಕಳುಹಿಸುವೆವು ತ್ವರೆಮಾಡಿರಿ

ವಿಳಾಸ— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದ್ದಾರೆ ನಿಮಿಷಮಾತ್ರವೇ ಹಾಕಿದರೂ ಸಾಕ ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದ ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0 ಟಪ್ಪಾಲ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ನಮ್ಮ ವಿಳಾಸ:— ವಿ. ಎ. ಎಸ್. ಪಾಣ್ಣಿ,
3, ಇರುಳಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿಯರ ಹೆಸರುಗಳೂ, ಕಾಲಗಳೂ ಸಂಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರಸಿ ಅವರಿಗೆ ನೇಮಿಸಿದ 326 ಬಹುಮಾನದ ಗ್ರಾಮಗಳೂ, ಅರ್ಚಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತದ್ಪ್ರತಿಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ, ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು. ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲಿಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದ ಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ
ಸಮಯಾನುಸಾರ ಕ್ರಯವು 0—4—0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು.

ಪ್ರಾಮುಖ್ಯ ಏಜಂಟರು— ಎಸ್. ಪಿ. ರಾಜ ಎಂಡ್ ಕೊ
ಪೋಸ್ಟು ಪೊಳಲಿ, ದ. ಕ

ಎಸ್. ಎ. ಶೀನಪ್ಪ ಹೆಗ್ಗಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1 ಶಾರದಾ ಪ್ರೆಸ್, ಮಂಗಳೂರು.
2 ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು.
3 ಒಂಟೆರ ವಿದ್ಯಾರ್ಥಿಭವನ, ಮಂಗಳೂರು.
4 ಊಲನ್ ಮಾರ್ಟ್, ಮಂಗಳೂರು.
5 ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6 ಪ್ರಭಾಕರ ಮುದ್ರಾಯಂತ್ರ, ಉಡುಪಿ
7 ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿ ಕೊಡಲ್ಪಡುವುದು.

ಉಚಿತ! ಉಚಿತ! ಟಪ್ಪಾಲು ಹಾಸಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟ ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವುದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದ್ದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು. ಖರ್ಚು ಒಂದಿಷ್ಟಾದರೂ ಕೊಡಬೇಕೆಂಇಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಮಾಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಠ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದರಾಸು.

ಸಫಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ
ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಹೊಳಸಿಕೊಳ್ಳಬಹುದು. ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿತ್ರಾಣಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದು ಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಠ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ ಮದರಾಸು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ದಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆತಿರುಗ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೮—೦

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ. ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಿರಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ಶಾಶ್ವತವಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತೀರಿಹೋಗುವಂತೆ ಮಾಡುತ್ತವೆ.

೭೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು, ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. Kately & Co
ನಂಬ್ರ ಡಿ ಫ್ರೆಯರ್ ರೋಡ್, No D Frere Road,
ಮುಂಬಯಿ. Near Bright's C. Fort Bombay

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ



ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮಿತ ದಿವಸ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನ್ ಸೇಷನ್ ಬಲಿಷ್ಠವಾದ ಸಾಮಾನುಗಳಿಂದಲೂ ಸ್ವಾಚ್ಛವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರ, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ಬೀದಿ, ಮದರಾಸು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬುದು ಬ್ರಾಹ್ಮಣರ ಮುಖ್ಯ ಧನವೂ, ಇದೇ ಶುದ್ಧ ತತ್ವಾರ್ಥವು ಮಾತ್ರವಲ್ಲ, ಇದರ ವಿಶೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಅಮೌಲ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ವ ವಿಷಯಗಳುಳ್ಳ ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನಿಸುವಂಥವರಿಗೆ ಏನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಧನ ಶ್ರೇಯಸ್ಸು ವ ಗೌರವಃ ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯವರಿಸಿದ ದಾಸೋಹಂಭಾವದ ಈ ಗ್ರಂಥಃ ಸರ್ವ ಪ್ರಿಯವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು.

ಕ್ರಯ ೧೧ ಆಣೆ.

ಪುಸ್ತಕಗಳ ಮಾರಾಟದ ಸ್ಥಳ:—
ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ.
ಮು ಮು. ಶ್ರೀನಿವಾಸ ಹರಿದಾಸ್, ಫೀಲ್ಡ್ ಸ್ಟ್ರೀಟ್.
ಉಡುಪಿ, ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು, ಎಲ್ಲರ ನೇತ್ರದೃಷ್ಟಿಯನ್ನು ಚೆನ್ನಾಗಿ ಪರೀಕ್ಷಿಸಿ, ಉತ್ತಮ ತರಹೇ ಸುಲೋಚನಗಳನ್ನು ಕೊಡಲಾಗುವದು. ಬೆಲೆ ಸುಲಭ.

ಜಂತುಹರ್. (Insect Powder.)

ಈ ಹುಡಿಯು ಉಪಯೋಗಿಸಿದ್ದಲ್ಲಿ ಮಕ್ಕುಣ (ತಗಣೆ) ಜರಳೆ (Cockroches) ವಗೈರೆ ಅನೇಕ ತರದ ಕ್ರಿಮಿಕೀಟಗಳ ಮೇಲೆ ಮಹೌಷಧಿ. ಡಬ್ಬಿ ೧೧ ಕ್ರಯ ಆ 6.

ಸ್ಮೋಕ್.

ಈ ಕಡ್ಡಿಗಳಿಂದ ನುಸಿ ವಗೈರೆ ಜಂತುಗಳ ಬಾಧೆಗಳನ್ನು ಪರಿಹರಿಸಬಹುದು. 124 ಕಡ್ಡಿಗಳಿರುವ ಪೆಟ್ಟಿಗೆ ೧೧ ಕ್ರಯ 0—14—0.

ಇದೂ ಅಲ್ಲದೆ ನಮ್ಮಲ್ಲಿ ಅನೇಕ ತರದ ಕೊಡ್ಲೀವರ್ ಓಯಿಲ್‌ಗಳೂ, ಸಾರ್ಸ ಪರಿಲ್ಲಾ ಎಂಬ ರಕ್ತಶುದ್ಧಿಯ ಔಷಧಿ, ಕಫ್ ಎಲಿಗ್ಸಿರ್ ಎಂಬುವ ಅಸ್ತಮದ ಔಷಧಿ, ಇನ್ನು ಅನೇಕ ತರದ ಪೇಟೆಂಟ್ ಔಷಧಿಗಳೂ, ಜೆರಿಬ್ಲೋಸಮ್ ಪೌಡರುಗಳೂ, ಕಟ್ಲೇರಿ ಸಾಹಿತ್ಯಗಳೂ, ಅನೇಕ ತರದ ರಿಸ್ಟ್ ವಾಚುಗಳೂ, ಇಂಗ್ಲಿಷ್ ಸೆಂಟ್ಸ್‌ಗಳೂ, ರೋಮನಾಶಕವಾದ ಬಾದಶಾಯಿ ಸಾಬೂನುಗಳೂ, ಮಕ್ಕಳಿಗೆ ಹಾಲುಕೊಡುವ ಬಾಟ್ಲಿಗಳೂ, ಅಲ್‌ಮಿನಿಯಮ್ ಟಂಬ್ಲರುಗಳೂ, ಚಿತ್ರದ ಪೋಸ್ಟು ಕಾರ್ಡುಗಳೂ, ಇದೂ ಅಲ್ಲದೆ ಅನೇಕ ತರದ ಫೇನ್ಸಿ ಸಾಹಿತ್ಯಗಳೂ ಅತೀ ಸುಲಭ ಖರೀದಿಯಿಂದ ಮಾರಾಟವಾಗುವದು. ಒಮ್ಮೆಗೆ ಒಂದು ಊಲನ್ ಮಾರ್ಟನ್ನು ಸಂದರ್ಶಿಸಿರಿ.

ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟಾ, ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ ಒಂದರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲುಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು. ದ. ಕ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು. ಮುಂಬಯಿ

ಅಧ್ಯಕ್ಷರು:— ಬಹುಮಾನಪಟ್ಟ ಮಾ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:— ಮಾ| ಜೋರ್ಜ್‌ಕಿಂಗ್ ಎಫ್. ಎಫ್ ಎ. ಎಫ್ ಐ ಎ

ಮೆಡಿಕಲ್ ರಿಫರಿಗಳು:— ಡಾಕ್ಟರ್ ಆರ್ ರಾವ್, ಎಮ್ ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:— ರಾ| ಕೆ ಸುಬ್ರಮಣ್ಯಯ್ಯರ್, ಬಿ ಎ ಜೆ. ಪಿ. ಎಫ್ ಎಸ್ ಎ. ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಒಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ —

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೇ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಬೆವಜನ್ನು ತಮ್ಮ ಕಂಪೆನಿಯ ಡೈರೆಕ್ಟರಯಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯಿಯಿಟ್ಟು ತಿಳಿಸಿ ಈ ತೆರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) **ಹಾರಾಡಿ ಆನಂದರಾಯ ಘಡಿಯಾರನ ರುಜು.**

(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡುಪಿ, ತಾ 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಪಿತೃ ಪಿತ್ರಾರ್ಜಿತವಾದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No 1738.

ಸಾಕ್ಷಿ— ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು — ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಆಗೋಳಿ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ಪಾಲಿಸಿ ಹಕ್ಕಿನ ಆಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ** ಪ್ರಖ್ಯಾತವಾದ ಮತ್ತು ಈಗಿನ **ಕಾಲ**ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ	ಆ	ಪೈ.
ಕ್ರಯ ¼ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಶೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶೂಲೆ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ,
Chemists, ಕೆಮಿಸ್ಟ್ಸ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಮೋಸಹೋಗಬೇಡಿ! ಮೋಸಹೋಗಬೇಡಿ!!

ನಮ್ಮ ಕಂಪೆನಿಯು ಕಳೆದ 4 ವರುಷಗಳಿಂದಲೂ ಹೆಸರುವಾಸಿಯನ್ನು ಪಡೆದಿರುವುದು. ಮತ್ತು ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ಹೈದರಾಬಾದ್, ರಂಗೂನ್, ಲಾಹೋರ್, ಸಿಲೋನ್, ಪೆನ್ನಾಂಗ್, ಮುಂತಾದ ದೇಶಗಳಿಂದ ಪ್ರತಿದಿನವೂ ಆರ್ಡರು ಬರುತ್ತಿರುವವು. ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನರಿಗೆ ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು, 5, ಅವೆನ್ಯೂರೋಡ್, ಬೆಂಗಳೂರು ಸಿಟಿ, ಎಂಬೂ ಮತ್ತು ನಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್-ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸಹೋಗುವಿರಿ!!!

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ಈ ಸಾಲಾಮಿಸ್ರಿ ಮುರಬ್ಬಾವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷವಿದ್ದರೂ, ಇಂದ್ರಿಯ ಶಕ್ತಿಯಿಲ್ಲದವರಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು

ಕ್ರಯ ಡಪ್ಪಿ ಒಂದಕ್ಕೆ ರೂ 2—0—0 ಟಪ್ಪಾಲು ಖರ್ಚಿಗೆ ಡಬ್ಬಾದಿಂದ 6 ಡಪ್ಪಿಗಳ ವರೆಗೆ 0-6-0 ಉಪಯೋಗಿಸುವ ವಿಧ ಡಪ್ಪಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ

FOR SALE.

The Kulsapore Coffee Estate, Koppa, Kadur

ALSO

Areca-nut Garden in splendid cultivation with Paddi fields.

Full particulars given to intending purchasers—

Apply — **E N Leslie,**
Kulsapore Estate,
KOPPA, KADUR DT.

ಮರಗಳ ವ್ಯಾಪಾರ.

ಡಿಪೋ, ಉಪ್ಪಿನಂಗಡಿ.

ಬಣ್ಪು, ತಿರ್ವ, ಮರ್ವ, ನಂದಿ, ಬೇಂಗ, ಹೆಬ್ಬಲಸು ಈ ಜಾತಿ ಮರಗಳನ್ನು ಬೇಕಾದ ರೀತಿಯಿಂದ ತಯಾರಿಸಿ ಡಿಪೋದಲ್ಲಿಯೂ ಉಪ್ಪಿನಂಗಡಿಯಿಂದ ಮಂಗಳೂರಿಗೆ ಹರದು ಬರುವ ಹೊಳೆ ಕಿನಾರೆಯಲ್ಲಿ ಯಾ ಮಂಗಳೂರು ಬಂದರದಲ್ಲಿ ಕೊಡಬಹುದು. ಮರದ ಜಾತಿ ವ ಸ್ಥಳದ ಕುರಿತು ಮರದ ಅಳತೆ ಸಮೇತ ಈ ಕೆಳಗಣ ವಿಳಾಸಕ್ಕೆ ತಿಳಿಸಿದ್ದಲ್ಲಿ ಉತ್ತರಕೊಡಬಹುದು.

ವಿಳಾಸ:— **ಪಿ. ಎಮ್. ನಂದ್ಯಪ್ಪ ಶೆಟ್ಟಿ,**
ಪೋಸ್ಟು ಉಪ್ಪಿನಂಗಡಿ.

S. NAGAPPA NAIK,
K. Appaya Shenoy & Co.

Cloth Merchants, Car Street, Mangalore.

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c. &c. of guaranteed colours and best patterns. Price very moderate.

ಸುಜೀರ ನಾಗಪ್ಪ ನಾಯ್ಕ,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನಾರ್ಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

THE PUTTUR EDUCATION SOCIETY.

(Registered under Act XXI of 1860.)

WANTED

For the Incomplete Secondary School (III Standard to III Form) to be opened on 1st June next at Puttur the following Staff. Applications are invited from qualified candidates whose vernacular is Canarese. Applications should reach the undersigned not later than 1st of March next.

1. One B. A., L. T., (Science or Mathematics graduate preferred) as Head Master on Rs. 60-3-75 *per mensem.*

2. Six Assistants—

if trained F. A.s or Intermediate men, Rs. 30—3—45 *per mensem.*

or if trained Matriculates or School Final men Rs. 25—2—35 *per mensem.*

one Drawing master and Drill Instructor Rs. 15—1—20 *per mensem.*

Office of the Puttur Education Society, Puttur, 17th Jan. 1916.

S. Shiva Rau,
Secretary.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 4ನೇ ಫೆಬ್ರುವರಿ 1916

ವರ್ಗದಾರರ ಸಂಘ.

ಈಗಿನ ಕಾಲದಲ್ಲಿ ಒಂದು ಕಾರ್ಯವು ಸಂಘದ ಮೂಲಕವಾಗಿ ಸಾಧ್ಯವಾಗುವಷ್ಟು ಒಂದು ವ್ಯಕ್ತಿಯ ಪ್ರಯತ್ನದಿಂದ ಸಾಧ್ಯವಾಗುವದಿಲ್ಲೆಂಬುದನ್ನು ಹೇಳಬೇಕಾದ್ದಿಲ್ಲ. ಒಂದು ವ್ಯಕ್ತಿಯ ಪ್ರಯತ್ನವು ಬಹು ದೀರ್ಘವಿದ್ದರೂ ಅದು ಹಲವು ವ್ಯಕ್ತಿಗಳಿಂದುಂಟಾದ ಸಂಘದ ಪ್ರಯತ್ನದಷ್ಟು ಯಶಸ್ವಿಯು ಆಗುವುದಿಲ್ಲ. ಇದಕ್ಕಾಗಿಯೇ "ಸಂಘೇ ಶಕ್ತಿಃ ಕಲೌಯುಗೇ" ಎಂಬ ಅನುಭವದ ಮಾತು ಬಂದಿದೆ. ಪಾಶ್ಚಾತ್ಯದೇಶಗಳ ಆಯುರ್ಮಾನವು ಸಂಘಗಳಿಂದ ಆಹಾರದಿಂದಲೇ ಸಂರಕ್ಷಿತವಾಗಿ ನಡೆದಿದೆ. ಅಲ್ಲಿ ಯಾವದೊಂದು ವೃತ್ತಿಯು, ಉದ್ಯೋಗವು, ಶೋಧನೆಯು ಸಂಘದ ಸಹಾಯವಿಲ್ಲದೆ ನಡೆಯುದಂಥಾದ್ದಾಗಿದೆ? ವ್ಯಾಪಾರಿ ಸಂಘ, ಔದ್ಯೋಗಿಕ ಸಂಘ, ಕೃಷಿ ಜೀವಿಗಳ ಸಂಘ, ವಾಙ್ಮಯ ಭಕ್ತರ ಸಂಘ, ಇತಿಹಾಸ ಶೋಧಕರ ಸಂಘ, ಮುಂತಾದ ಅನೇಕ ಸಂಘಗಳನ್ನು ಏರ್ಪಡಿಸಿಕೊಂಡು ಪಾಶ್ಚಾತ್ಯರು ತಮ್ಮ ದೇಶದ ಸುಧಾರಣೆಗಳನ್ನು ಮಾಡುತ್ತಿದ್ದಾರೆ. ಸಂಘಶಕ್ತಿಯ ಮಹತ್ವವೆಷ್ಟೆಂಬುದು ಸಾಂಘಿಕರಿಗೇ ತಿಳಿಯಬೇಕಲ್ಲದೆ ಅನ್ಯರಿಗೆ ಗೊತ್ತಾಗಲಾರದು.

ಈಹೊತ್ತು ಈ ಆಲೋಚನೆಗಳು ಹುಟ್ಟುವ ಕಾರಣವೇನೆಂದರೆ, ನಮ್ಮ ಸಂಸ್ಥಾನಾಧಿಪತಿಗಳಾದ ಲೋರ್ಡ ಪೆಂಟಲೆಂಡ ದೊರೆಗಳವರು ಜಮೀನ್‌ದಾರರ ವಿಷಯದಲ್ಲಿ ಕಳೆದ ತಿಂಗಳ 31ನೇ ತಾರೀಕಿನಲ್ಲಿ ಮಹತ್ವವಾದ ಒಂದು ಭಾಷಣವನ್ನು ಮಾಡಿದರು. ಸಂಸ್ಥಾನಾಧಿಪತಿಗಳು ಆ ಭಾಷಣದಲ್ಲಿ ಈ ಸಂಸ್ಥಾನದ ಜಮೀನುದಾರರು ತಮ್ಮ ಕೈಯಲ್ಲಿರುವ ಮಹತ್ವದ ಲೋಕಹಿತವನ್ನು ಹೇಗೆ ಹೇಗೆ ಮಾಡಬಹುದು, ಅವರ ತರಗತಿಗೆ ಅನುಸಾರವಾಗಿ ಯಾವಯಾವ ಜವಾಬ್ದಾರಿಗಳು ಅವರಲ್ಲಿರುತ್ತವೆ, ಉಪಯುಕ್ತವಾದ ಲೋಕಸೇವೆಯನ್ನು ಮಾಡುವುದು ಅವರಿಗೆ ಹೇಗೆ ಸಾಧ್ಯವಿದೆ ಮುಂತಾದ ಅನೇಕ ಸಂಗತಿಗಳನ್ನು ಹೇಳಿದ್ದಲ್ಲದೆ ಈ ಜಮೀನುದಾರರು ತಮ್ಮ ಮಾತೃಭೂಮಿಯ ಅಭ್ಯುದಯಕ್ಕಾಗಿಯೂ, ಪ್ರಗತಿಗಾಗಿಯೂ ಮಾಡುವ ಕರ್ತವ್ಯಗಳಲ್ಲಿ ಅಗ್ರೇಸರತ್ವವನ್ನು ತಕ್ಕೊಳ್ಳಬೇಕೆಂದು ಕೂಡ ಉಪದೇಶಿಸಿದರು. ಇದಲ್ಲದೆ ಸ್ವಲ್ಪ ದಿವಸಗಳ ಮುಂಚೆ ನೆರೆದ ಜಮೀನುದಾರರ ವಾರ್ಷಿಕ ಸಮ್ಮೇಳನದಲ್ಲಿ ವೆಂಕಟಗಿರಿಯ ಮಹಾರಾಜರು ಜಮೀನುದಾರರ ತಾತ್ಕಾಲಿಕ ಹಕ್ಕುಗಳನ್ನೂ, ವೈಶಿಷ್ಟ್ಯಗಳನ್ನೂ ಕುರಿತು ತಮ್ಮ ವಿಚಾರಗಳನ್ನು ಪ್ರದರ್ಶಿಸಿದರು. ಆಸ್ತಿಗಳನ್ನು ಅವಿಭಕ್ತವಾಗಿಡುವ ವಿಷಯದಲ್ಲಿ ಮಾಡಿದ ಕಾನೂನ, ಮತ್ತು ಕೋರ್ಟ ಓಫ್ ವೋರ್ಡ್ಸ್ ಎಂಬ ಕಾನೂನು; ಈ ಎರಡು ಸಂರಕ್ಷಕ ಸಾಧನಗಳು ಇಲ್ಲದೆ ಹೋಗಿದ್ದರೆ ಇಷ್ಟರೊಳಗೆ ಜಮೀನುದಾರರ ಆಸ್ತಿಗಳನ್ನು ದೇಶೀಯ ಮತ್ತು ವಿದೇಶೀಯ ಸಾವುಕಾರರು ಸಂಪೂರ್ಣವಾಗಿ ನುಂಗುತ್ತಿದ್ದರು ಎಂಬ ಸಂಗತಿಯನ್ನು ಅವರು ಸೂಚಿಸಿದರು. ಸರಕಾರದವರು ಆಸ್ತಿಗಳು ಪಾಲುಪಾಲಾಗಿ ಹೋಗುವುದನ್ನೂ, ನಾಶಹೊಂದುವುದನ್ನೂ ತಮ್ಮ ಕಾಯಿದೆ ಕಾನೂನುಗಳ ಸಹಾಯದಿಂದ ನಿಲ್ಲಿಸಿದಾಗ್ಯೂ ಇತ್ತಿತ್ತಲಾಗಿನ ವಿದ್ಯಮಾನಗಳನ್ನು ನೋಡಿದ್ದಲ್ಲಿ ಜಮೀನುದಾರರ ಆಡಳಿತೆಯ ದೋಷದಿಂದಲೂ ಅನಾವಶ್ಯಕವಾದ ಖರ್ಚಿನಿಂದಲೂ ಅವರ ಕೈಯಿಂದ ಜಮೀನುಗಳು ತಪ್ಪಿಹೋಗುವ ಸಂದರ್ಭವು ಒದಗಿದ್ದನ್ನು ನೋಡಿ ಮಹಾರಾಜರು ವ್ಯಸನಪಟ್ಟರು. ಮತ್ತು ಈ ಜಮೀನುಗಳ ಇನ್ನು ಮುಂದಿನ ಸಂರಕ್ಷಣೆಗಾಗಿ ಕಾಯಿದೆಯ ಸಹಾಯವನ್ನು ಪಡಕೊಳ್ಳಲು, ವಾರ್ಷಿಕ ಸಮ್ಮೇಳನದಲ್ಲಿ ವಿನಂತಿಮಾಡಿದರು.

ಈ ಜಮೀನುದಾರರ ಸಂಘದ ವೃತ್ತಾಂತವನ್ನು ನಿರೀಕ್ಷಿಸಿದ್ದಲ್ಲಿ ದಕ್ಷಿಣಕನ್ನಡ ಜಿಲ್ಲೆಯೊಳಗೆ ಇದರಂತೆಯೇ ವರ್ಗದಾರರ ಒಂದು ಸಂಘವು ಏಕೆ ಇರಕೂಡದೆಂಬ ಪ್ರಶ್ನೆಯು ವಿಚಾರವಂತರ ಮನಸ್ಸಿನಲ್ಲಿ ಬಾರದೆ ಇರಲಿಕ್ಕಿಲ್ಲ. ನಮ್ಮ ಜಿಲ್ಲೆಯೊಳಗೆ ಬಂಗಾಳಾ ಪ್ರಾಂತ್ಯದಲ್ಲಿದ್ದಂತೆ ಕಾಯಮ್ ಕಂದಾಯ ಪದ್ಧತಿಯು ಇಲ್ಲದ್ದರಿಂದ ಜಮೀನುದಾರ ಎಂಬ ಹೆಸರು ಇಲ್ಲಿಯವರಿಗೆ ಬರುವುದಿಲ್ಲ. ಮೂವತ್ತು ವರ್ಷಗಳಿಗೊಮ್ಮೆ ಕಂದಾಯ ಪದ್ಧತಿಯು ಅಮಲ್ಬಂದುವುದರಿಂದ ವರ್ಗದಾರರಿಗೆ—ಇವರಿಗೆ ರೈತರೆಂತ ಹೇಳುವುದೇ ಅನ್ವರ್ಥವಾಗಿದೆ. ಅಷ್ಟೊಂದು ಉತ್ಪನ್ನವಿಲ್ಲದ ಜಮೀನುಗಳ ವರ್ಗದಾರತನವನ್ನು ಇಟ್ಟುಕೊಳ್ಳವುದೆಂದರೆ ಬತ್ತಿದ ಎಮ್ಮೆಯನ್ನು ಪಟ್ಟಣದಲ್ಲಿ ಸಾಕುವಂತೆಯೇ ಆಗಿದೆ! ಅಥವಾ ಇದಕ್ಕೆ ಇನ್ನೊಂದು ಸಮರ್ಪಕವಾದ ದೃಷ್ಟಾಂತವನ್ನು ಕೊಡುವುದಾದರೆ ಹರಕು ಓಲಿಯ ಕೊಡೆಯನ್ನು ಮಳೆಯಲ್ಲಿ ಹಿಡಿದುಕೊಂಡು ಹೋಗುವುದು ಕೈದಣುವಲ್ಲದೆ ಅದರಿಂದ ಪ್ರಯೋಜನವೇನೂ ಹೇಗಾಗಲಾರದೋ ಹಾಗೆಯೇ ಇಂತಿಷ್ಟು ಎಕರೆ ಜಮೀನಿನ ವರ್ಗದಾರರು ಎಂಬ ಒಣಮಾತಿನಿಂದ ವರ್ಗದಾರರಿಗೆ ಫಲವೇನೂ ಆಗಲಾರದು. ಅದಲ್ಲದೆ ಈ ಜಮೀನುದಾರರು ಕೋರ್ಟು ಕಚೇರಿಗಳಲ್ಲಿಯ ತೆಂತಮ್ಮೊಳಗಿನ ವಿಪರೀತವಾದ ವ್ಯಾಜಸಾಜ್ಯಗಳ ಮೂಲಕವಾಗಿಯೂ, ಅನ್ಯಮರಾಚಾರಗಳ ಮೂಲಕವಾಗಿಯೂ ತಮ್ಮ ಆಸ್ತಿಗಳನ್ನು ಪರಾಧೀನ (ಸಾವುಕಾರರ ಕೈವಶ) ಮಾಡುವಷ್ಟು ದುರ್ಬಲರಾಗಿದ್ದಾರೆ. ಹಿಂದೂದೇಶದ ಮುಖ್ಯ ಜೀವನವು ಜಮೀನುಗಳ ಮೇಲೆಯೇ ಅವಲಂಭಿಸಿರುತ್ತದೆ. ಉದ್ಯೋಗ, ಕೈಗಾರಿಕೆ, ಕಲಾಕೌಶಲ್ಯ, ವ್ಯಾಪಾರ ಮುಂತಾದ ಅರ್ಥೋತ್ಪಾದಕ ಸಾಧನಗಳಂತೂ ಅಂಕುರಾವಸ್ಥೆಯಲ್ಲಿರುವಾಗ ಮುಖ್ಯ ಸಾಧನಗಳಾದ ಜಮೀನುಗಳು ಮತ್ತು ವರ್ಗದಾರರು ಹೀನದೀನರಾಗೋಣ ದೇಶದ ಪಾಡೇನು? ಆದುದರಿಂದ ಆತ್ಮಸಂರಕ್ಷಣೆಗಾಗಿ ವರ್ಗದಾರರು ಒಂದು ಜಬ್ರವಾದ ಸಂಘವನ್ನು ಏರ್ಪಡಿಸಿಕೊಳ್ಳುವುದು ಉತ್ತಮವೆಂದು ಯಾರೂ ಹೇಳದೆ ಇರರು.

ನಮ್ಮ ಮಂಗಳೂರ ಪಟ್ಟಣದಲ್ಲಿ ಕೆಲವು ವರುಷಗಳ ಹಿಂದೆ ಇದೇ ನಮೂನೆಯ ಒಂದು ವರ್ಗದಾರರ ಸಂಘವು ಅಸ್ತಿತ್ವದಲ್ಲಿತ್ತು. ಆದರೆ ಯಾವ ಕಾರಣದಿಂದಲೋ ಅದು ಅಸ್ತವಾಯಿತು. ಸದರಿ ಸಂಘವು ಸಜೀವಾವಸ್ಥೆಯಲ್ಲಿರುವಾಗ ಮಾಡಿದ ಕಾರ್ಯಗಳೇನು ಎಂಬುವದು ಕಂಡು ಬರುವದಿಲ್ಲ. ಹಾಗೆಯೇ ಪುತ್ತೂರ ತಾಲೂಕಿನಲ್ಲಿ ಕೂಡ ಒಂದು ವರ್ಗದಾರರ ಸಂಘವಿತ್ತು. ಈಗ ಅದರ ಧ್ವನಿ ಕೂಡ ಕೇಳಿಸುವುದಿಲ್ಲ. ಒಂದುವೇಳೆ ಅದು ರೂಪಾಂತರವನ್ನು ಹೊಂದಿದೆಯೋ ಏನೋ. ಹೇಗೂ ಇರಲಿ. ಸಂಸ್ಥೆಗಳನ್ನು ಒರೆ ಅಸ್ತಿತ್ವದಲ್ಲಿ ತಂದರೆ ಸಾಲದು. ಅವು ಕಾರ್ಯಕಾರಿಯಾದಲ್ಲಿಯೇ ದೇಶಹಿತವುಂಟಾಗುತ್ತದೆ. ಈ ಮಾತನ್ನು ನಾವು ಪದೇಪದೇ ಹೇಳುವ ಕಾರಣವೇನೆಂದರೆ ಕೆಲವರು ಹೆಸರಿಗೆ ತಕ್ಕ ಸಂಸ್ಥೆಗಳನ್ನು ಹೂರಡಿಸುತ್ತಾರೆ. ಮತ್ತು ಸ್ವಲ್ಪದಲ್ಲಿಯೇ ಹತಪ್ರಯತ್ನರಾಗಿ ಆ ಸಂಸ್ಥೆಗಳನ್ನು ಬಿಟ್ಟುಬಿಡುತ್ತಾರೆ. ಈ ಔದಾಸೀನ್ಯವನ್ನು ಕೆಂಬಹುನಾ ಆಲಸ್ಯವನ್ನು ಬಿಟ್ಟು ನಮ್ಮ ಜನರು ದೃಢಪ್ರಯತ್ನಮಾಡಬೇಕೆಂಬುವುದೇ ನಮ್ಮ ಉದ್ದೇಶವು.

ಸ್ವರಾಜ್ಯ.

ಗತಸಂಚಿಕೆಯಲ್ಲಿ ಸೂಚಿಸಿರುವಂತೆ ಈಗ ಸ್ವರಾಜ್ಯವೆಂದರೇನು, ಅದರಲ್ಲಿ ಭೇದಗಳೆಷ್ಟು, ಹಿಂದೂದೇಶಕ್ಕೆ ಯಾವ ಮಾದರಿಯ ಸ್ವರಾಜ್ಯವು ಬೇಕಾಗಿರುವುದು, ಈ ಸಂಗತಿಗಳನ್ನು ವಿವರಿಸಲಿದ್ದೇವೆ. ಸ್ವರಾಜ್ಯವೆಂದರೆ ತಮ್ಮ ದೇಶವನ್ನು ತಾವೇ ಆಳುವುದು. ಈ ಶಬ್ದಾರ್ಥದಿಂದ 'ಸ್ವರಾಜ್ಯ'ದ ಅರ್ಥವು ಗೊತ್ತಾದರೂ ಸರಿಯಾದ ಕಲ್ಪನೆಯು ಬರಲಾರದು. ಕಾರಣವೇನೆಂದರೆ ಫ್ರಾನ್ಸದೇಶದಲ್ಲಿ ಇತಿಹಾಸ ಪ್ರಸಿದ್ಧವಾದ ಕ್ರಾಂತಿಯಾದಂದಿನಿಂದ 'ಸ್ವರಾಜ್ಯ'ದ ಕಲ್ಪನೆಯು ವ್ಯಾಪಕವೂ ಪರಿಣತವೂ ಆಗಿದೆ. ಈ ಸ್ವರಾಜ್ಯ ಶಬ್ದಕ್ಕೆ ಇಂಗ್ಲಿಷ್ ಭಾಷೆಯೊಳಗೆ 'Self Government' ಮತ್ತು 'Home-Rule' ಎಂಬ ಎರಡು ಶಬ್ದಗಳನ್ನು ಪ್ರಯೋಗಿಸುವುದುಂಟು. ಈ ಎರಡು ಶಬ್ದಗಳ ರೂಢಿಯನ್ನು ನೋಡಿದರೆ, ಒಂದು ವಿವಕ್ಷಿತ ಅಂದರೆ ಫಲಾನೆ ಒಂದು ದೇಶದಲ್ಲಿ ಆ ದೇಶವನ್ನು ಅಲ್ಲಿಯ ರಾಜವಂಶವು ಪರಂಪರಾಗತ ಕ್ರಮದಿಂದ ಆಳುತ್ತ ಬಂದಲ್ಲಿ ಆ ಆಳಿಕೆಯ ಕ್ರಮಕ್ಕೆ ಈಗ ರೂಢವಾಗಿರುವ ಸ್ವರಾಜ್ಯ ಶಬ್ದವನ್ನು ಪ್ರಯೋಗಿಸುವುದು—ಅವಯವಾರ್ಥದ ದೃಷ್ಟಿಯಿಂದ ಯುಕ್ತವಾಗಿ ತೋರಿದರೂ—ರೂಢಿ ದೃಷ್ಟಿಯಿಂದ ಸಮರ್ಪಕವಾಗಿ ಕಂಡು ಬರುವದಿಲ್ಲ. ಸ್ವರಾಜ್ಯ ಶಬ್ದದ ಯೌಗಿಕಾರ್ಥವನ್ನು (ವ್ಯುತ್ಪತ್ತಿಯನ್ನು, ಅವಯವಾರ್ಥವನ್ನು) ಆಲೋಚಿಸಿದರೆ ಒಂದು ದೇಶದ ರಾಜವಂಶವು ಅದನ್ನಾಳುತ್ತ ಬಂದರೆ ಅದು ಸ್ವರಾಜ್ಯ=ತಮ್ಮ ಸ್ವಂತ ರಾಜ್ಯ, ಈ ಅರ್ಥ ವ್ಯಕ್ತಿಯನ್ನು ಕೊಡುತ್ತದೆ. ಇದು ನಿಜವೇ. ಆದರೆ ಭಾಷೆಯ ಪ್ರಯೋಗದಲ್ಲಿ ಬಂದಿರುವ ಶಬ್ದಗಳೆಲ್ಲವು ಕೇವಲ ಯೌಗಿಕಾರ್ಥವನ್ನೇ ಅವಲಂಬಿಸಿಕೊಂಡಿರುವುದಿಲ್ಲ. ಕೆಂಬಹುನಾ ಅವಯವಾರ್ಥಗಳಿದ್ದಲ್ಲೆಲ್ಲ ಆ ಶಬ್ದಗಳನ್ನು ಪ್ರಯೋಗಿಸುವುದಿಲ್ಲ. ಉದಾಹರಣಾರ್ಥವಾಗಿ ಪಂಕಜ ಶಬ್ದದ ವ್ಯುತ್ಪತ್ತಿಯನ್ನು ನೋಡುವ. ಕೆಸರೊಳಗೆ ಹುಟ್ಟಿದ ಯಾವ ಪದಾರ್ಥಕ್ಕೂ ಪಂಕಜವೆಂಬ ಹೆಸರನ್ನು ಕೊಡಬಹುದು. ಈ ರೀತಿಯುಕ್ತ ಯೌಗಿಕ ಪಕ್ಷಕದಲ್ಲಿ ಪಂಕಜ ಶಬ್ದವು ಕೆಸರಲ್ಲಿ ಹುಟ್ಟುವ ಒಂದು ಹುಲ್ಲಿಗೆ ವಾಚಕವಾದರೂ ಕಮಲ=ತಾವರೆ ಎಂಬ ಅರ್ಥದಲ್ಲಿಯೇ ಅದನ್ನು ಪ್ರಯೋಗಿಸುವ ರೂಢಿಯುಂಟು. ಇಂತಹ ಶಬ್ದಗಳನ್ನು ಶಬ್ದಶಾಸ್ತ್ರಕಾರರು "ಯೋಗರೂಢ" ಎಂದು ಅವಯವಾರ್ಥ ಮತ್ತು ರೂಢಿ ಈ ಎರಡನ್ನು ಆದರಿಸಿಕೊಂಡಿರುವ ಶಬ್ದಗಳೆಂದು

ಸಂಜ್ಞೆಸ್ಸಿರುತ್ತಾರೆ. ಈ ಪಂಕಜ ಶಬ್ದದಂತೆಯೇ ಸ್ವರಾಜ್ಯ ಶಬ್ದವಾದರೂ ಯೋಗರೂಢವೇ ಆಗಿರುವುದು. ದೇಶದೊಳಗಿನ ಪ್ರಜೆಗಳೆಲ್ಲರೂ ತಮ್ಮ ಅನುಮತಿಯಿಂದ ಒಂದು ಸಂಘವನ್ನು ಏರ್ಪಡಿಸಿ, ಇಲ್ಲವೆ ಒಂದು ವ್ಯಕ್ತಿಯನ್ನು ಆರಿಸಿ, ತನ್ಮುಖಾಂತರ ರಾಜ್ಯಭಾರವನ್ನು ನಡಿಸುವುದು ಸ್ವರಾಜ್ಯವೆನಿಸಲ್ಪಡುವುದು. ಇದರ ತಾತ್ಪರ್ಯವೇನೆಂದರೆ, ಒಂದು ರಾಜ್ಯವನ್ನು ಒಬ್ಬನೇ ಅರಸನು ತನ್ನ ಇಚ್ಛೆಯ ಮೇರೆಗೆ ನಡಿಸುವುದರಲ್ಲಿ ಪ್ರಜೆಗಳ ಸ್ವಾತಂತ್ರ್ಯ, ಸಂತೋಷ, ಉನ್ನತಿ ಮೊದಲಾದವುಗಳಿಗೆ ತೊಡಕು ಬರಬಹುದಾದ್ದರಿಂದ ರಾಜ್ಯಕಾರಭಾರವು ಸಂಪೂರ್ಣ ಪ್ರಜೆಗಳ ಅನುಮತಿಯಂತೆ ನಡೆದಲ್ಲಿಯೇ ಹಿತಾವಹವಾಗುವುದು; ಮತ್ತು ಇಂತಹ ಹಿತಾವಹವಾದ ಸ್ವಕೀಯರ ಸ್ವರಾಜ್ಯವೇ ಸ್ವರಾಜ್ಯ ಸಂಜ್ಞೆಗೆ ಪಾತ್ರವಾಗಬಹುದು.

ಸದ್ಯಃ ಲೋಕದಲ್ಲಿ ನಾಲ್ಕು ಬಗೆಯ ರಾಜ್ಯ ಪದ್ಧತಿಗಳು ಪ್ರಚಾರದಲ್ಲಿವೆ ಎಂತ ಹೇಳಬಹುದು. ೧ ವಂಶ ಪರಂಪರಾಗತನಾದ ಅರಸನು ತಾನೇ ತನ್ನ ತಂತ್ರಕ್ಕನುಸಾರವಾಗಿ ರಾಜ್ಯವನ್ನು ನಡಿಸುವ ಕ್ರಮವು. ಇದು ಅಫಗಾನಿಸ್ಥಾನ ಮೊದಲಾದ ಕಡೆಯಲ್ಲಿದೆ. ೨ ಪ್ರಜೆಗಳೇ ಒಬ್ಬ ಅಧ್ಯಕ್ಷನನ್ನು ಆರಿಸಿ ಅವನ ಮುಖಾಂತರ ತಮಗೆ ಇಷ್ಟವಾದ ರೀತಿಯಿಂದ ಕಾರಭಾರವನ್ನು ವರ್ತಿಸುವುದು ಈ ಎರಡನೇ ಪದ್ಧತಿಯು ಫ್ರಾನ್ಸ ಮೊದಲಾದ ಕಡೆಯಲ್ಲಿ ಕಂಡುಬರುತ್ತದೆ ೩ ಪರಂಪರಾಗತನಾದ ಅರಸನನ್ನು ಕೂಡ ಸಂಗ್ರಹಿಸಿಕೊಂಡು ಪ್ರಜೆಗಳು ತಮ್ಮ ಮತದ ಸಂಘವನ್ನು ಏರ್ಪಡಿಸಿ ಅವರಿಬ್ಬರ ಏಕವಾಕ್ಯತೆಯಿಂದ ರಾಜ್ಯಶಕಟವನ್ನು ಮುಂದರಿಸುವುದು. ಇಂಗ್ಲಂಡ ಮೊದಲಾದ ದೇಶಗಳಲ್ಲಿ ಈ ಪ್ರಕಾರವು ಪ್ರಚಾರದಲ್ಲಿದೆ. ೪. ಒಂದು ಜನಾಂಗವನ್ನು ಪರಕೀಯರು ಆಳುವುದು. ಈ ನಾಲ್ಕನೇ ಭೇದವು ಬೊರ್ನಿಯೊ ಸುಮಾತ್ರ ದ್ವೀಪಗಳಲ್ಲಿ ಕಂಡುಬರುತ್ತದೆ ಇವಲ್ಲದೆ ರಾಜ್ಯಕಾರಭಾರದ ಇನ್ನೊಂದು ತರವಿದೆ. ಪ್ರಜೆಗಳು ನೇಮಿಸಿರುವ ಸಂಘದ ಮೂಲಕ ರಾಜ್ಯದ ಯಾವತ್ತು ಅಂತರ್ಗತ ಕಾರಭಾರಗಳನ್ನು ಸಾಗಿಸಿಕೊಂಡು ಹೆಸರಿಗೆ ತಕ್ಕ ಪರಕೀಯ ಅಧಿರಾಜನ ಸ್ವಾಮಿತ್ವನನ್ನು ಮನ್ನಿಸುವುದು. ಇದು ಕೆನಡಾ ಮುಂತಾದ ಕಡೆಯಲ್ಲಿ ಉಂಟು. ಈ ಪದ್ಧತಿಗೆ 'ವಸಾಹತಿ ಸ್ವರಾಜ್ಯ'ವೆಂತ ಹೆಸರಿದೆ. ಇದು ಒಂದು ಸ್ವತಂತ್ರವಾದ ಭೇದವೆಂದು ತಿಳಿಯುವುದಕ್ಕಿಂತ ಮೇಲೆ ತೋರಿಸಿದ ಎರಡನೇ ಭೇದದಲ್ಲಿಯೇ ಇದನ್ನು ಒಂದು ಒಳಭೇದವಾಗಿ ಸೇರಿಸುವುದು ಯುಕ್ತವೆಂದು ಕಾಣುತ್ತದೆ

ಸ್ವರಾಜ್ಯವೆಂದರೇನು, ಅದರ ಭೇದಗಳೆಷ್ಟು, ಈ ಸಂಗತಿಗಳನ್ನು ಮೇಲೆ ತಕ್ಕ ಮಟ್ಟಿಗೆ ಪ್ರದರ್ಶಿಸಿದ್ದೇವೆ ಈಗ ನಮ್ಮ ಹಿಂದೀ ಜನರಿಗೆ ಯಾವ ತರದ ಸ್ವರಾಜ್ಯವು ಅಪೇಕ್ಷಿತವಾಗಿದೆ? ಈ ಪ್ರಶ್ನೆಯನ್ನು ಕುರಿತು ಪ್ರಪಂಚಿಸಬೇಕಾದುದು. ಆದರೆ ಇದು ಎಷ್ಟು ಮಹತ್ವವುಳ್ಳದ್ದಾಗಿರುವುದೋ ಅಷ್ಟೇ ಗಲಿಬಿಲಿಯನ್ನುಂಟುಮಾಡುತ್ತದೆ, ಎಂದರೆ ಈ ವಿಷಯದಲ್ಲಿ ಲೋಕಮತದಲ್ಲಿ ಭಿನ್ನಭಿನ್ನಾಭಿಪ್ರಾಯವಿದ್ದುದು ಕಂಡುಬರುವುದರಿಂದ ಸ್ವರಾಜ್ಯವು ಇದೇ ತರದ್ದು ಎಂಬದಾಗಿ ನಿರ್ದೇಶಪೂರ್ವಕ ನಿರ್ಣಯಿಸುವುದು ಕೊಂಚ ಅಸಾಧ್ಯವಾಗಿದೆ ಆದರೂ ಒಂದು ಸಂಗತಿಯನ್ನು ಸಾಧಿಮಾನವಾಗಿ ಹೇಳಬಹುದಾಗಿದೆ, ಅದೇನೆಂದರೆ, ರಾಜ್ಯಕರ್ತರಿಗೆ ಅಪ್ರಿಯವಾದ ಅಥವಾ ಆವಭಿಮತವಾದ ನಮೂನೆಯ ಸ್ವರಾಜ್ಯವನ್ನು ಹಿಂದೀ ಸ್ವರಾಜ್ಯ ವಾದಿಗಳಲ್ಲಿ ಯಾರೂ ಕೇಳಿರುವುದಿಲ್ಲ ಈ ಒಂದೇ ಸಂಗತಿಯಿಂದ ನಮ್ಮ ಜನರಿಗೆ ಯಾವ ನಮೂನೆಯ ಸ್ವರಾಜ್ಯವು ಬೇಕಾಗಿದೆಂದು ಸ್ಪಷ್ಟವಾಗುತ್ತದೆ ಎಂದರೂ, ಆ ಅಪೇಕ್ಷಿತ ಸ್ವರಾಜ್ಯದ ಸ್ವರೂಪವನ್ನು ಈ ರೀತಿಯಿಂದ ಮುಗ್ಧವಾಗಿಡದೆ ನಮ್ಮ ವಾಚಕರಿಗಾಗಿ ಸ್ಪಷ್ಟವಾದ ಶಬ್ದಗಳಿಂದ ಹೇಳುವ. ಸ್ವರಾಜ್ಯವೆಂಬೀ ಶಬ್ದವು 'Self-Government' ಮತ್ತು 'Home Rule' ಈ ಎರಡು ಇಂಗ್ಲಿಷ್ ಶಬ್ದಗಳ ಸಮಾನಾರ್ಥಕವಾಗಿ ಉಪಯೋಗಿಸಲ್ಪಡುತ್ತದೆಂದು ಮೇಲೆ ಹೇಳಿದ್ದೇವಷ್ಟೆ. ಹಿಂದೀ ದೇಶವು ಈಗ ಕೇಳುವ ಸ್ವರಾಜ್ಯವು ಪೂರ್ಣ ಸ್ವಾತಂತ್ರ್ಯವಲ್ಲ. ರಾಜ್ಯದ ಅಂತರ್ಗತ ಕಾರಭಾರಗಳನ್ನು ಪರಕೀಯರಾದ ರಾಜ್ಯಕರ್ತರು ನಡಿಸುವುದಕ್ಕಿಂತ ಬಹಳಮಟ್ಟಿಗೆ ನಾವೇ ನಡಿಸುವುದು ಲೇಸು, ನಮ್ಮ ಮನೆಯ ಸ್ಥಿತಿಗತಿಗಳು ನಮಗೆ ತಿಳಿಯುವಂತೆ ಅನ್ಯರಿಗೆ ತಿಳಿಯಲಾರವು; ಅಪ್ರಾಯಸ್ಥನ ಆಸ್ತಿಯನ್ನು ಅವನು ಜ್ಞಾನವಂತನಾಗಿ ಪ್ರಾಯಕ್ಕೆ ಬರುತ್ತಲೇ ಸರಕಾರವು ಅವನ ವಶದಲ್ಲಿ ಕೊಡುತ್ತದೆ; ಹಿಂದೀ ದೇಶಕ್ಕೆ ಮಾತ್ರ ಆವಧಿ ಇಲ್ಲವೋ? ಅದು ಯಾವಾಗಲೂ ಅಪ್ರಾಯಸ್ಥವೋ? ಅಲ್ಲ, ಅದು ಈಗ ಪ್ರಾಯಸ್ಥವಾಗಿದೆ; ತನ್ನ ಅಂತರ್ಗತ ಕಾರಭಾರಗಳನ್ನು ನಡಿಸುವ ಸಾಮರ್ಥ್ಯವು ಅದರಲ್ಲಿ ಉಂಟಾಗಿದೆ. ಅದರ ಕ್ರಮವೂ ಗೊತ್ತಾಗಿದೆ. ಹೀಗಿರುವಾಗ ಆ ಆಡಳಿತೆಯನ್ನು ಅದರ ಮೇಲೆಯೇ ಒಪ್ಪಿಸುವುದು ಇಂಗ್ಲಿಷರಿಗೂ ಒಳ್ಳೇದಲ್ಲವೋ? ಒಂದು ಕೆಲಸವು ಪರಸ್ಪರವೇ ಆಗುವಾಗ ವೃಥಾ ಅದರ ಬಣತ್ರಾಸವನ್ನು ತಾವೇನು ಏಕೆ ಹಚ್ಚಿಕೊಳ್ಳಬೇಕು? ಹಿಂದೀ ದೇಶವು ತನ್ನ ಆಡಳಿತೆಯನ್ನು ತಾನೇ ನಡಿಸಿದಾಗ್ಯೂ ಇಂಗ್ಲಂಡದ ಸ್ವಾಮಿತ್ವವನ್ನು ರಾಜಭಕ್ತಿಯಿಂದ ಶಿರಸಾವಹಿಸಲು ಬದ್ಧವೇ ಹೌದು ಎಂಬ ಈ ಸಂಗತಿಯನ್ನು ಒಪ್ಪಿಯೇಕೊಳ್ಳುತ್ತದೆ. ಹೀಗಿರಲು ಕೇವಲ ಅಂತರ್ಗತ ಕಾರ್ಯಭಾರದ ಮಟ್ಟಿಗೆ ಹಿಂದೀ ದೇಶಕ್ಕೆ ಸ್ವಾತಂತ್ರ್ಯ ಕೊಡುವುದರಲ್ಲಿ ಇಂಗ್ಲಂಡಕೆ ಯಾವ ತೊಂದರೆಯೂ ಬಹುಶಃ ಇಲ್ಲ. ಸಂಕ್ಷೇಪವಾಗಿ ಹೇಳುವುದಾದರೆ, ಪ್ರಕೃತದ ಸ್ವರಾಜ್ಯವು 'Home Rule' ಎಂದರೆ ವಸಾಹತಿನ ಸ್ವರಾಜ್ಯದ ನಮೂನೆಯಂತೆಯೇ ಸರಿ, ಬ್ರಿಟಿಷರು ಮಾಡಿರುವ ಪಾಶ್ಚಾತ್ಯ ವಿದ್ಯಾದಾನ ಮುಂತಾದ ಮಹದುಪಕಾರಕ್ಕಾಗಿ ಒಂದು ಶತಮಾನದ ವರೆಗೆ ಏಕನಿಷ್ಠೆಯಿಂದ ಆ ಸಾಮ್ರಾಜ್ಯದ ಸೇವೆ ಮಾಡಿ ಹಿಂದೀ ದೇಶವು ಈಗ ತನ್ನ ಅಂತರ್ಗತ ಕಾರ್ಯಭಾರವನ್ನು ತಾನೇ ಮಾಡಲು ಒಂದು ವೇಳೆ ಆಶಿಸಿದರೆ ಅದು ತಪ್ಪಾದೀತೋ ಅಥವಾ ಲೋಕ ಸ್ವಭಾವಕ್ಕೆ ವಿರುದ್ಧವಾದೀತೋ? ಇಲ್ಲ ಆದುದರಿಂದಲೇ ಕಳೆದ ಸಂಚಿಕೆಯಲ್ಲಿ ಈಗ ಹಿಂದೀ ಜನರು ಸ್ವರಾಜ್ಯವನ್ನು ಬೇಡಿಕೊಳ್ಳುವುದು ನ್ಯಾಯಪ್ರಾಪ್ತವಾಗಿದೆಂದು ನಾವು ಹೇಳಿದ್ದೇವೆ.

ನಾವು ಈಗ ರಾಜ್ಯಕರ್ತರ ಹತ್ತರ ಸ್ವರಾಜ್ಯವನ್ನು ಕೇಳುವುದಾಗಲಿ, ಅವರು ಅದನ್ನು ಕೊಡುವುದಾಗಲಿ, ಈ ಎರಡು ಸಂಗತಿಗಳು ನ್ಯಾಯವೇ ಮತ್ತು ಸಹಜವೇ, ಆದರೆ ಇದರಲ್ಲಿ ಬಹು ಆಶ್ಚರ್ಯದ ಇನ್ನೊಂದು ಸಂಗತಿಯಿದೆ. ಅದೇನೆಂದರೆ ಸರಕಾರದವರು ದಯಾಶಾಲಿಗಳಾಗಿ ಹಿಂದೀದೇಶಕ್ಕೆ, ಮುಂದೆ ಸ್ವರಾಜ್ಯವನ್ನು ಕೊಟ್ಟರೂ (ಇನ್ನೂ ಕೊಡಲಿಲ್ಲ) 'ನಮಗೆ ಸ್ವರಾಜ್ಯವು ಬೇಡ; ನಾವು ಅದಕ್ಕೆ ತಕ್ಕವರಲ್ಲ.' ಎಂದು ಅದನ್ನು ನಿರಾಕರಿಸುವ ಮಹನೀಯರೂ ನಮ್ಮಲ್ಲಿ ಕೆಲವರಿದ್ದಾರೆ!! ಇವರ ವಿಷಯದಲ್ಲಿ ಒಂದೆರಡು ಮಾತುಗಳನ್ನು ಬರುವ ಸಂಚಿಕೆಯಲ್ಲಿ ಬರಿಯಬೇಕೆಂತಿದ್ದೇವೆ

ಕರ್ನಲ್ ಜೇಕ್ಸನ್ ಮತ್ತು ಆಯುರ್ವೇದ.

[ಕಲ್ಕತ್ತೆಯ 'ಅಮೃತ ಬಜಾರ ಪತ್ರಿಕೆ'ಯೊಳಗೆ ಈ ವಿಷಯವನ್ನು ಕುರಿತು ಕವಿರಾಜ ಶಚೀಂದ್ರನಾಥ ವಿದ್ಯಾಭೂಷಣ ಎಂಬುವವರು ಒಂದು ಪತ್ರವನ್ನು ಪ್ರಸಿದ್ಧ ಮಾಡಿರುವರು ಅದರ ಮುಖ್ಯ ಸಾರಾಂಶವನ್ನು ನಮ್ಮ ವಾಚಕರಿಗಾಗಿ ಕೆಳಗೆ ಕೊಡುತ್ತೇವೆ]

"ಸ್ಟೇಟ್ಸಮನ್ ಎಂಬ ವೃತ್ತ ಪತ್ರದಲ್ಲಿ ಸ್ಕ್ರುಟೇಟರ ಈ ಹೆಸರಿನಿಂದ ಪ್ರಸಿದ್ಧವಾದ ಒಂದು ಪತ್ರವನ್ನು ನೋಡಿ ಆಶ್ಚರ್ಯವಾಗುತ್ತದೆ ದೇಶೀಯ ವೈದ್ಯರನ್ನು ಸರಕಾರಿ ಅಥವಾ ಮುನ್ಸಿಪಾಲಿಟಿ ಮುಂತಾದ್ದರ ಆಸ್ಪತ್ರಿಗಳಲ್ಲಿ ನೇಮಿಸಲು ಮುಂಬಯಿಯ ನ್ಯಾಯವಿಧಾಯಕ ಸಭೆಯು ಮಾಡಿದ ನಿರ್ಣಯವನ್ನು ನೋಡಿ ಪತ್ರಲೇಖಕನು ವಿಷಾದಪಡುತ್ತಿದ್ದಾನೆ ಪ್ರಜೆಗಳ ಕಲ್ಯಾಣ ಮಾಡುವದರಲ್ಲಿ ತತ್ಪರರಾದ ಬ್ರಿಟಿಷರ ಆಳಿಕೆಯಲ್ಲಿ ಸ್ವಲ್ಪ ಖರ್ಚಿನಿಂದಲೇ ರೋಗವನ್ನು ನಿವಾರಿಸುವ ಪ್ರಾಚೀನ ಆಯುರ್ವೇದಿಕ ಪದ್ಧತಿಯ ಪುನರುಜ್ಜೀವನವೂ, ಪೋಷಣೆಯೂ ಆಗುವದು ಅಭಿಮಾನಾಸ್ಪದವಾದ ಮತ್ತು ಸಂತೋಷಕರವಾದ ಸಂಗತಿಯು. ಇಂತಹ ಸಂಗತಿಗೂ ಒಬ್ಬನು ವಿರೋಧಿಯಾಗಿ ನಿಲ್ಲುವದೆಂದರೆ ಅದು ತೀರ ಗರ್ಹಣೀಯವೇ ಸರಿ.

"ಕೌನ್ಸಿಲಿನಲ್ಲಿ ಕರ್ನಲ್ ಜೇಕ್ಸನ್ ದೊರೆಗಳು ಮಾಡಿದ ತೀವ್ರವಾದ ಪ್ರತಿರೋಧವನ್ನು ಕೂಡ ಲೆಕ್ಕಿಸದೆ ಸದರಿ ನಿರ್ಣಯವು ಯಶಸ್ವಿಯಾಯಿತು. ಇದೊಂದೇ ಸಂಗತಿಯಿಂದ ಬಹುಮಾನಪಟ್ಟ ಜೆ. ದೊರೆಗಳ ನಿರೋಧದಲ್ಲಿ ಸಾರವಿದ್ದಿಲ್ಲ ಎಂಬ ಸಂಗತಿಯು ಸ್ಪಷ್ಟವಾಗುತ್ತದೆ ಸುಶ್ರುತನೆಂಬವನು ಆಯುರ್ವೇದದ ಜನಕನಿದ್ದನು ಎಂದು ಹೇಳುವ ಸ್ಕ್ರುಟೇಟರನ ಮಾತಿಗೆ ಏನೊಂದೂ ಆಧಾರವಿಲ್ಲ. ಜಗತ್ತಿನೊಳಗಿನ ಪ್ರಾಚೀನ ತಮ ವಾಙ್ಮಯವಾದ ಋಗ್ವೇದದಲ್ಲಿ ಆಯುರ್ವೇದ ಪದ್ಧತಿಯ ಉಲ್ಲೇಖವು ಕಂಡು ಬರುತ್ತದೆ ವೇದಗಳನ್ನು ಒಂದು ಬಗೆಯ ವ್ಯವಸ್ಥೆಯಲ್ಲಿ ತಂದಂಥ ಮತ್ತು ಚರಣವ್ಯೂಹವೆಂಬ ಗ್ರಂಥದ ರಚಕರಾದ ವ್ಯಾಸಮಹರ್ಷಿಗಳು ಆಯುರ್ವೇದವು ಋಗ್ವೇದದ ಒಂದು ಸಸಿಯಾಗಿದೆಂದು ಸ್ಪಷ್ಟವಾಗಿ ಹೇಳುತ್ತಾರೆ. ಅಥರ್ವ ವೇದದಲ್ಲಂತೂ ಈ ವಿಷಯದಲ್ಲಿ ಅನೇಕ ಆಧಾರಗಳು ದೊರಕುತ್ತವೆ. ಆಯುರ್ವೇದ ಪದ್ಧತಿಯ ಪುರಸ್ಕರ್ತರು ಅಥರ್ವ ವೇದವೇ ಆಯುರ್ವೇದಕ್ಕೆ ಮೂಲವೆಂದು ಹೇಳುತ್ತಾರೆ. ಸುಶ್ರುತ ಸಂಹಿತೆ ಎಂಬ ಗ್ರಂಥವು ದೇವದಾಸನೆಂಬ ಕಾಶಿಯ ಅರಸನದ್ದಾಗಿರುತ್ತದೆ ಇವನನ್ನು ಧನ್ವಂತರಿಯ ಅವತಾರವೆಂದು ನೆನಸುತ್ತಾರೆ.

"ಸ್ಕ್ರುಟೇಟರನು ಸುಶ್ರುತನನ್ನು ಒಬ್ಬ ಪ್ರಸಿದ್ಧನಾದ ಶಸ್ತ್ರವೈದ್ಯನೆಂದು ಹೇಳುತ್ತಾನೆ. ಆದರೆ ಸುಶ್ರುತನು ಬರೇ ಶಸ್ತ್ರವೈದ್ಯನು ಮಾತ್ರವಲ್ಲ, ವೈದ್ಯವಿದ್ಯೆಯ ಬೇರೆ ಬೇರೆ ಶಾಖೆಗಳಾದ ರಸಾಯನಶಾಸ್ತ್ರ, ಸೂತಿಕಾಶಾಸ್ತ್ರ, ಜಂತುಶಾಸ್ತ್ರ ಇವುಗಳಲ್ಲಿಯೂ ಬಹು ಪ್ರವೀಣನಿದ್ದನು. ಒಬ್ಬ ವಿಖ್ಯಾತ ವೈದ್ಯನಿಗೆ ಆವಶ್ಯಕವಾದ ಎಲ್ಲ ಶಾಸ್ತ್ರಗಳಲ್ಲಿ ಇವನ ಕೈಹಿಡಿಯುವವರು ಕ್ವಚಿತ್ತೇ ಇರುವರು! ಸುಶ್ರುತನ ನಂತರ ಆದ ವೈದ್ಯರು ವಿಷಯದಲ್ಲಿ ಈ ಸ್ಕ್ರುಟೇಟರನು ಅತಿ ನಿರ್ಭರ್ತ್ಸನಾಪರವಾದ ಉದ್ಗಾರಗಳನ್ನು ಹೊರಡಿಸಿರುವನು. ಆದರೆ ಇದರಿಂದ ಈ ಲೇಖಕನ ಶೋಚನೀಯವಾದ ಅಜ್ಞಾನ ಮಾತ್ರ ವ್ಯಕ್ತವಾಗುತ್ತದೆ. [illegible]

ಆಯುರ್ವೇದ ಪಂಡಿತರು ಅನೇಕಾನೇಕರಾಗಿ ಹೋಗಿದ್ದಾರೆ. ನಾಗಾರ್ಜುನನು ರಸ ರತ್ನಾಕರವೆಂಬ ಗ್ರಂಥದಲ್ಲಿ ತನ್ನ ವಿಸ್ತೃತವಾದ ಜ್ಞಾನವನ್ನೂ, ಅನುಭವವನ್ನೂ ತೋರಿಸಿರುವನು.

"ಆಯುರ್ವೇದದಲ್ಲಿ ಸುಶ್ರುತನ ಹೊರತು ಆತ್ರೇಯವೆಂಬ ಹೆಸರಿನ ಪ್ರತ್ಯೇಕವಾದ ಒಂದು ಪಂಥವು ಪ್ರಚಾರದಲ್ಲಿತ್ತು. ಶಸ್ತ್ರವಿದ್ಯೆಯಲ್ಲದೆ ಬೇರೆ ಅನೇಕ ಸಂಗತಿಗಳಲ್ಲಿ ಈ ಪಂಥವು ಪ್ರಗತಿಯನ್ನು ಹೊಂದಿದೆ. ಧಾತುಗಳ ಶೋಧ ಮತ್ತು ಔಷಧಗಳ ಸಲುವಾಗಿ ಅವುಗಳ ಉಪಯೋಗ, ಇವೆರಡರ ಒಂದು ಶಾಸ್ತ್ರವನ್ನೇ ಆಯುರ್ವೇದವು ತಯಾರಿಸಿದೆ. ಆಯುರ್ವೇದದ ಇತಿಹಾಸವನ್ನೂ, ಇತರ ಗ್ರಂಥಗಳನ್ನೂ ಏನೂ ಪರಿಶೀಲಿಸದವರಿಗೆ ಈ ವಿಷಯದಲ್ಲಿ ವಿರುದ್ಧಮತ ಕೊಡುವುದು ಸಾಧ್ಯವಿಲ್ಲ ಮತ್ತು ಕೊಡಲು ಅಧಿಕಾರವೂ ಇಲ್ಲ."

"ಬಹುಮಾನಪಟ್ಟ ಜೇಕ್ಸನ ದೊರೆಗಳ ಮಾತುಗಳನ್ನಾಲೋಚಿಸಿದರೆ ಕಂಡು ಬರುವುದೇನೆಂದರೆ, ಅವರು ಯಾರಿಂದಲೋ ತಯಾರಿಸಲ್ಪಟ್ಟ ಸುಶ್ರುತದ ಭಾಷಾಂತರದಿಂದ ಆ ಗ್ರಂಥದ ಜ್ಞಾನವನ್ನು ಪಡೆದಿರುವರು. ಆದರೆ ಭಾಷಾಂತರವು ಎಷ್ಟೋ ಸಮರ್ಪಕವಿದ್ದರೂ ಅದರಲ್ಲಿ ಪಾರಿಭಾಷಿಕ ಶಬ್ದಗಳನ್ನು ಸರಿಯಾಗಿ ಭಾಷಾಂತರಿಸುವುದು ಅಸಾಧ್ಯವೇ ಸರಿ. ಈ ಪ್ರಕಾರ ಅವರು ಸಂಪಾದಿಸಿದ ಜ್ಞಾನದ ಎರತೆಯೇ ಕಲಕಿದ್ದಿರುವಾಗ ಅವರ ಆಯುರ್ವೇದ ಜ್ಞಾನದ ಬೆಲೆಯೆಷ್ಟೆಂದು ಇನ್ನು ಹೇಳಬೇಕೋ? ವಾತ, ಪಿತ್ತ, ಕಫಗಳ ವಿಷಯದಲ್ಲಿ ಇವರ ಕಲ್ಪನೆಗಳನ್ನು ನೋಡಿದರೆ ನಗುವೇ ಬರುವುದು. ಶರೀರದಲ್ಲಿ ನಡೆಯುವ ಕೆಲವು ವಿವಕ್ಷಿತ ಕ್ರಿಯೆಗಳು ವಾತ ಪಿತ್ತ ಕಫಗಳ ಮೇಲೆ ಹೊಂದಿಕೊಂಡಿರುವವು. ಈ ಪಾರಿಭಾಷಿಕ ಶಬ್ದಗಳ ಭಾಷಾಂತರವು Wind, Bile & Phlegm ಈ ಶಬ್ದಗಳಿಂದ ಎಂದೂ ಮಾಡಲು ಸಾಧ್ಯವಿಲ್ಲ. ವಾತ ಪಿತ್ತಾದಿಗಳು ಜಡ ದ್ರವ್ಯಗಳಲ್ಲ, ಆದರೆ ಅವುಗಳಲ್ಲಿರುವ ಮುಖ್ಯ ರಸ ತತ್ವಗಳಾಗಿರುವವು. ಒಮ್ಮೊಮ್ಮೆ ಅವುಗಳ ಜಡಸ್ವರೂಪಕ್ಕೂ ಕೂಡ ಈ ಶಬ್ದಗಳನ್ನು ಪ್ರಯೋಗಿಸುವರು. ತ್ರಿದೋಷಾದಿಗಳ ಸಂಗತಿಯು ಶಾಸ್ತ್ರಾಭ್ಯಾಸದಿಂದಲೂ, ತಜ್ಞರಾದ ಗುರುಗಳಿಂದಲೂ ತಿಳಿದುಕೊಳ್ಳಬೇಕಾದದ್ದು. ಬರೇ ಭಾಷಾಂತರದ ಶಬ್ದಾಡಂಬರದಿಂದ ಅವುಗಳ ಜ್ಞಾನವಾಗದು. ಸುಶ್ರುತದಲ್ಲಿ ನಾಭಿಪ್ರದೇಶದಿಂದ ರಕ್ತಾಭಿಸರಣವುಂಟಾಗುತ್ತದೆಂದು ಹೇಳಿದೆ. ಆದರೆ ಇದು ಪೂರ್ಣ ಅವಾಸ್ತವವೆಂದು ಹೇಳಕೂಡದು. ಗರ್ಭಸ್ಥ ಬಾಲಕರ ರಕ್ತಾಭಿಸರಣವು ನಾಭಿಸ್ಥಾನದಿಂದಲೇ ಉಂಟಾಗುತ್ತದೆಂದು ಅರ್ವಾಚೀನ ಶಾಸ್ತ್ರಜ್ಞರಿಗೂ ಗೊತ್ತಾಗಿದೆ."

"ಸಾರ್ವಜನಿಕ ಆರೋಗ್ಯಕ್ಕಾಗಿರುವ ಸ್ವಚ್ಛತೆಯ ವಿಷಯದಲ್ಲಿಯೂ, ಯಾವ ಯಾವ ಋತುಗಳಲ್ಲಿ ಯಾವ ಯಾವ ತರದ ಬಟ್ಟೆಗಳನ್ನು ಉಪಯೋಗಿಸಬೇಕೆಂಬೀ ವಿಷಯದಲ್ಲಿಯೂ ಸುಶ್ರುತನು ಅನೇಕ ಸೂಚನೆಗಳನ್ನು ಮಾಡಿದ್ದಾನೆ. ಕ್ಷಯರೋಗವು ಆಡಿನ ನಿಃಶ್ವಾಸದಿಂದ ಸುಧಾರಿಸುತ್ತದೆಂಬೀ ವಿಧಾನಕ್ಕೆ ಜೇಕ್ಸನರು ಬಹಳೇ ಉಪಹಾಸಮಾಡಿರುವರು. ಆದರೆ ಆಡುಗಳಿಗೆ ಕ್ಷಯರೋಗವಾಗುವದಿಲ್ಲ ಎಂಬೀ ಅರ್ವಾಚೀನ ಶೋಧದ ಮೇಲಿಂದ ಆಡುಗಳ ಶರೀರದಲ್ಲಿ ಕ್ಷಯವಿನಾಶಕವಾದ ಯಾವುದಾದರೂ ಒಂದು ದ್ರವ್ಯವಿರಬೇಕೆಂದು ಸಿದ್ಧವಾಗುತ್ತದೆ. ಅರ್ಥಾತ್ ಅವುಗಳ ನಿಃಶ್ವಸಿತದಿಂದ ಕ್ಷಯರೋಗಿಗೆ ಕ್ಷಯವಿನಾಶಕ ದ್ರವ್ಯದ ಲಾಭವಾಗುವ ಸಂಭವವಿರುತ್ತದೆಂಬುವುದು ಸಹಜವೇ."

"ಕ್ಷಯರೋಗಾವಸ್ಥೆಯಲ್ಲಿ ರೋಗಿಗೆ ಮಾಂಸಾಹಾರಿ ಪ್ರಾಣಿಗಳ ಮಾಂಸವು ಹಿತಾವಹವಲ್ಲ. ಇದನ್ನು ರುಜುಪಡಿಸಲು ಕ ಜೆ ದೊರೆಗಳಿಗೆ ನಾವು ಆವಾಹಿಸುತ್ತೇವೆ. ಅನೇಕ ಚತುಷ್ಪಾದಗಳ ಮತ್ತು ಪಕ್ಷಿಗಳ ಮಾಂಸವನ್ನು ರೋಗಗಳಲ್ಲಿ ವಿನಿಯೋಗಿಸುವದು ಒಂದು ಚಮತ್ಕಾರಿಕವಾದ ಸಂಗತಿಯೇ ಅಲ್ಲ. ವೈದ್ಯಶಾಸ್ತ್ರವು ಸಾರ್ವಜನಿಕ ಉಪಯೋಗಾರ್ಥವಾಗಿರುವದರಿಂದ ಧಾರ್ಮಿಕ ಮೊದಲಾದ ಕಲ್ಪನೆಗಳಿಗೆ ಅದು ಅಷ್ಟೊಂದು ಮಹತ್ವ ಕೊಡುವದಿಲ್ಲ. ಸುಶ್ರುತನು ತ್ಯಾಜ್ಯವಾದ ಅನೇಕ ಪದಾರ್ಥಗಳನ್ನು ಔಷಧಗಳಲ್ಲಿ ಸೇರಿಸಿದ್ದು ನೋಡಿ ನಮ್ಮ ಜೇಕ್ಸನ್ ದೊರೆಗಳಿಗೆ ಬಹು ಆಶ್ಚರ್ಯವಾಗುತ್ತದೆ! ಆದರೆ ಯಾವ ವಸ್ತುವೇ ಆಗಲಿ ಅದು ಶರೀರದಲ್ಲಿ ಹೋದಲ್ಲಿ ಆ ಶರೀರದ ಮೇಲೆ ಅದರಿಂದ ಒಳ್ಳೇದಾಗಲಿ ಕೆಟ್ಟದ್ದಾಗಲಿ ಒಂದು ನಮೂನೆಯ ಪರಿಣಾಮವು ಆಗಲೇ ಬೇಕಾದದ್ದು! ಹೀಗಿರಲು ಆ ಪದಾರ್ಥಗಳ ಮಹತ್ವದ ಕಡೆಗೆ ದುರ್ಲಕ್ಷ ಮಾಡಕೂಡದು. ಎಲೋಪೆಥಿಯೊಳಗೂ ಕೂಡ ಒಂದು ನಮೂನೆಯ ಮೀನುಗಳು, ಕೊಡ್ ಎಂಬ ಮೀನಿನ ಯಕೃತದ ಎಣ್ಣೆ, ಪಚನಕ್ರಿಯೋತ್ತೇಜಕವಾದ ಪೆಪ್ಸಿನ, ಎತ್ತಿನ ಪಿತ್ತ ಮುಂತಾದ ಪ್ರಾಣಿಜನ್ಯ ಪದಾರ್ಥಗಳನ್ನು ತುಂಬಾ ಉಪಯೋಗಿಸುವುದುಂಟು. ಹೀಗಿರಲು ಅದೇ ತರದ ಪದಾರ್ಥಗಳನ್ನು ಆಯುರ್ವೇದದಲ್ಲಿ ಉಪಯೋಗಿಸಿದರೆ ಮಾತ್ರ ಅದು ಆಕ್ಷೇಪಕ್ಕೆ ಕಾರಣವಾಗುವದೋ?"

"ಓಜ" ಈ ಶಬ್ದದ ಕುರಿತು ಅವರು (ಜೆ.) ಗಲಿಬಿಲಿಯಲ್ಲಿ ಬಿದ್ದಿರುವರು. ಅವರು ಮಾಡಿರುವ ಈ ಶಬ್ದದ ವ್ಯಾಖ್ಯೆಯನ್ನು ಸುಶ್ರುತದಲ್ಲಿ ಹುಡುಕಿಕೊಡುವರೋ?

"ಸ್ವಪ್ನ ಮತ್ತು ಭೂತಪಿಶಾಚಾದಿಗಳ ವಿಷಯದಲ್ಲಿ, ಪ್ರಕೃತ ಅದೊಂದು ಸ್ವತಂತ್ರವಾದ ಶಾಸ್ತ್ರವೇ (Spiritualism) ಆಗುತ್ತಿದೆ, ಇಷ್ಟೇ ಹೇಳಿದರೆ ಸಾಕಾಗಿದೆ. ಈ ವಿಲಕ್ಷಣವಾದ ಶಾಸ್ತ್ರದ ರಹಸ್ಯವನ್ನು ತಿಳಿದುಕೊಳ್ಳುವ ಪಾತ್ರತೆಯು ಭೌತಿಕ ಶಾಸ್ತ್ರಗಳಲ್ಲಿ ಸದ್ಯದಲ್ಲಂತೂ ಇಲ್ಲ.

"ಕರ್ನಲ್ ಜೇಕ್ಸನರವರ ಮತವನ್ನು ಈ ಪ್ರಕಾರ ಖಂಡಿಸಿದೆ. ಈಗ ಆಯುರ್ವೇದದ ಕುರಿತು ಕೆಲವು ಸಾಮಾನ್ಯವಿಚಾರಗಳನ್ನು ಹೇಳುವ. ಪೋಟ್ಯಾಶ-ಬಾಯ್ ಕಾರ್ಬ ಮತ್ತು ಸೋಡಾ ಬಾಯ್ ಕಾರ್ಬ ಇವುಗಳಲ್ಲಿಯ ಭೇದವು ಎಲೋಪೆಥಿಗೆ ಈಗಲೇ ಗೊತ್ತಾದದ್ದು. ಆರ್ಯವೈದ್ಯಕಕ್ಕೆ ಇದು ಮೊದಲೇ ಗೊತ್ತಿತ್ತು. ೧೭ನೇ ಇಸವಿಯಲ್ಲಿ ಹಾರ್ವೇ ಎಂಬುವವನು ರಕ್ತಾಭಿಸರಣದ ಶೋಧ ಮಾಡಿದನು; ಆದರೆ ಇದು ಕೂಡ ನಮ್ಮಲ್ಲಿ ಪ್ರಾಚೀನಕಾಲದಿಂದಲೇ ಇದೆ. ಜಲೋದರದಲ್ಲಿ ಉಪ್ಪಿನ ವಿಷಯವು ಪಾಶ್ಚಾತ್ಯರಿಗೆ ಈಗ ತಾನೆ ಗೊತ್ತಾಗುತ್ತ ಬಂದಿದೆ, ಆಯುರ್ವೇದಕ್ಕೆ ಇದರ ಜ್ಞಾನವು ಮೊದಲೇ ಇತ್ತು. ತಾಮ್ರದ ಪಾತ್ರಗಳಲ್ಲಿ ಕಾಲರಾ ಜಂತುಗಳು ಸಾಯುತ್ತವೆಂದು ೧೯೦೪ನೇ ಇಸವಿಯಲ್ಲಿ ಡಾಕ್ಟರ ಮೂರ ಎಂಬವರು ಶೋಧಿಸಿದರು, ಆದರೆ ಈ ಜ್ಞಾನವು ಆಯುರ್ವೇದದ ಉಚ್ಛಿಷ್ಟವೇ ಸರಿ. ತಾಮ್ರಪಾತ್ರೆಗಳಿಗೆ ನಮ್ಮಲ್ಲಿ ಒಂದು ತರದ ಮಹತ್ವವು ಏನು ಕೊಟ್ಟಿದೆಯೋ ಅದರ ರಹಸ್ಯವು ಇದೇ. ಎಷ್ಟೋ ಸಂಗತಿಗಳಲ್ಲಿ ಪಾಶ್ಚಾತ್ಯ ವೈದ್ಯಕವು ಆಯುರ್ವೇದದ ಕಲ್ಪನೆಗಳನ್ನೇ ಕಲಿತಿದೆ. ಇದನ್ನು ಅನೇಕ ಪಾಶ್ಚಾತ್ಯರು ಮರೆತಿರುವರು. ಅಂಥವರು ಡಾ ಹರ್ಶಬರ್ಗ (ಬರ್ಲಿನ) ಇವರ ಮತವನ್ನು ಅವಶ್ಯ ಓದಬೇಕು. 'ಯುರೋಪದೊಳಗಿನ ಸಂಪೂರ್ಣವಾದ ಶಸ್ತ್ರಕ್ರಿಯೆಯು' ಹಿಂದೂಸ್ಥಾನದೊಳಗಿನ ಜನರ ಕುಶಲವಾದ ಕೃತಿಗಳ ಮಾಹಿತಿಯಿಂದ ಉಚ್ಚತೆಯನ್ನು ಹೊಂದಿದೆ. ಸಜೀವವಾದ ತ್ವಕ್ಕಿನ ತುಂಡುಗಳನ್ನು ಒಂದು ಕಡೆಯಿಂದ ತೆಗೆದು ಇನ್ನೊಂದು ಕಡೆಯ ಗಾಯವಾದ ಸ್ಥಾನದಲ್ಲಿ ಹೊಲಿದು ಸರಿ ಮಾಡುವ ಪದ್ಧತಿಯು ಹಿಂದೂದೇಶದೊಳಗಿನದೇ ಸರಿ.

"ಇರಲಿ, ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಹೊತ್ತು ಪಾಶ್ಚಾತ್ಯರಿಗೆ ಅಶಾಸ್ತ್ರೀಯವಾಗಿ ತೋರುವುದು ನಾಳೆಯೇ ಶಾಸ್ತ್ರೀಯವಾಗಿ ತೋರಬಹುದು. ಆಂಗ್ಲ ವೈದ್ಯಕದಿಂದ ಎಂದೂ ಗುಣವಾಗದ ಸಾವಿರಾರು ರೋಗಿಗಳಿಗೆ ಆರ್ಯವೈದ್ಯಕವು ಗುಣಕೊಡುವದಾದರೆ ಆ ಉತ್ತಮ ಮತ್ತು ಲೋಕೋಪಕಾರಕವಾದ ಪದ್ಧತಿಯನ್ನು ದೂಷಿಸುವದರಲ್ಲಿ ಪ್ರಯೋಜನವೇನು, ಜಾಣತನವೇನು ಇಲ್ಲವೆ ಪ್ರಾಮಾಣಿಕತನವೇನು?"

ಅಳಿಯ ಕಟ್ಟಿನ ಆಚರಣೆ ಮೇರೆಗೆ ಹಿರಿಯರ ಮುಂದೆ ಕಿರಿಯರ ಹಕ್ಕು

ಅಳಿಯ ಕಟ್ಟಿನ ಮೇರೆಗೆ ಒಂದು ಮನೆಯಲ್ಲಿ ಆಸ್ತಿಗೆ ಸ್ತ್ರೀಯರೇ ಹಕ್ಕುದಾರರಾಗಿದ್ದರೂ ಅದರ ಆಡಳಿತೆಯು ಸೋದರಮಾವನಿಂದ ಸೋದರಳಿಯನಿಗೆ ಪರಂಪರೆಯಿಂದ ಬರುತ್ತದೆ. ಸೋದರಮಾವನೇ ಮನೆಯ ಹಿರಿಯನು. ಅವನಿಗೆನೇ ಮನೆತನದ ಮಾನಮರ್ಯಾದೆ ಸಲ್ಲುವುದು. ಎಲ್ಲವೂ ಅವನ ಅಪ್ಪಣೆಯ ಮೇರೆಗೆ ನಡಿಯಬೇಕು. ಅವನ ಊಟವಾದ ಮೇಲೆ ಇತರರಿಗೆ ಊಟ. ಅವನ ಎದುರಿನಲ್ಲಿ ಅವನ ತಮ್ಮಂದಿರಾಗಲಿ ಅಳಿಯಂದಿರಾಗಲಿ ಒರಗಿ ಕುಳಿತುಕೊಳ್ಳಲಾರರು. ಭೂತಸ್ಥಾನ ಅಥವಾ ದೇವಸ್ಥಾನದಲ್ಲಿ ಗುತ್ತಿನ ಅಥವಾ ಮೊಕ್ತೇಸರನ ಮರ್ಯಾದೆ ಅವನಿಗೆ ಸೇರಬೇಕು. ಈ ಭಾವನೆಯು ಈ ಪರಶುರಾಮ ಸೃಷ್ಟಿಯಲ್ಲಿ ಅಳಿಯ ಕಟ್ಟು ಅಥವಾ ಮರುಮಕ್ಕತ್ತಾಯಮ್ ಸಂಪ್ರದಾಯವು ಪ್ರಚಾರದಲ್ಲಿದ್ದ ಕಡೆಗಳಲ್ಲೆಲ್ಲ ಜನರ ರಕ್ತನಾಡಿಗಳಲ್ಲಿಯೂ ನರಮೇದಸ್ಸುಗಳಲ್ಲಿಯೂ ತುಂಬಿಕೊಂಡಿರುವುದು. ಹಲವು ಸಲ ಹಿರಿಯನಾದವನು ಸಾಕಷ್ಟು ಬುದ್ಧಿಚಾತುರ್ಯವಿಲ್ಲದವನಾಗಿರಲೂ ಬಹುದು; ಸ್ವಾರ್ಥಪರನಾಗಿ ಕುಟುಂಬದ ಆಸ್ತಿಯನ್ನು ದುರ್ವ್ಯಯಮಾಡಲೂ ಬಹುದು; ಅಥವಾ ಕುಟುಂಬ ಆಸ್ತಿಯ ಆಡಳಿತೆಯನ್ನು ನೋಡುವಾಗ ಉಳಿಸಿದ ಮುನಾಫೆಯಿಂದ ತನ್ನ ಹೆಂಡತಿ ಮಕ್ಕಳಿಗೆ ಆಸ್ತಿ ಮಾಡಿಕೊಟ್ಟಿರಲೂ ಬಹುದು. ಹಿರಿಯನಾದವನು ತನ್ನ ಕುಟುಂಬದಲ್ಲಿ ಕಿರಿಯರಿಗೆ ಅವರ ಗೌರವಕ್ಕೂ ಸ್ಥಿತಿಗೂ ಅಗತ್ಯವಿರುವ ಉಡುಪು ತೊಡುವುಗಳನ್ನು ಕೊಡದೆಯೂ ಅವರ ಊಟಉಪಚಾರಗಳನ್ನು ನೋಡದೆಯೂ ಇರಬಹುದು. ಆದರೆ ಈ ಕಾರಣದಿಂದ ಹಲವು ಕಿರಿಯರಿಗೆ ಹಿರಿಯರ ಮೇಲೆ ಅವಿಶ್ವಾಸ ಉಂಟಾಗಿದ್ದರೂ ಕುಟುಂಬದ ಮಾನ ಕಾಪಾಡಬೇಕೆಂಬ ಲವಲವಿಕೆಯಿಂದ ಆಗಲಿ ಅಥವಾ ಕಾಲಾನುಗತಿಯಿಂದ ನಡೆದು ಬಂದ ಈ ಆಚರಣೆಯು ಸಹಜ ಸ್ವಭಾವ ಅಥವಾ ಲೋಕರೂಢಿಯೆಂಬುದರಿಂದ ಆಗಲಿ ಕಿರಿಯರಾದವರು ಹಲವು ಸಲ ಸುಮ್ಮ

ಸುವರು. ಹೀಗಿರುವುದರಿಂದ ಅವರ ಪೈಕಿ ಕೆಲವರಲ್ಲಾದರೂ ತಮ್ಮ ದುಸ್ಥಿತಿಯನ್ನು ಕುರಿತು ಚಿಂತೆ ಹುಟ್ಟಲಿಲ್ಲವೆಂದು ಹೇಳಬರುವುದಿಲ್ಲ.

ಸಾಂಪ್ರತ ಲೆಜಿಸ್ಲೆಟಿವ್ ಕೌನ್ಸಿಲಿಗೆ ಮೆಂಬರರನ್ನು ಚುನಾಯಿಸುವ ಹಕ್ಕು ...ಎಂಬುದು ಒಂದು ಆಸ್ತಿಯೆಂದು ತಿಳಿದುಕೊಳ್ಳಬೇಕು. ಈ ಆಸ್ತಿಯ ಬೆಲೆಯನ್ನು ಇನ್ನೂ ಜನರು ಕಂಡುಕೊಂಡಿಲ್ಲ. ಇಷ್ಟು ಸಾವಿರ ರೂಪಾಯಿ ನಗದು, ಅಥವಾ ಇಂತಿಷ್ಟು ಕೋರ್ಟ್ ಆಕ್ಟಿಯ ಮುನಾಫೆ ತೀರ್ವೆ ಕಳೆದು ಉಳಿಯುತ್ತದೆಂದರೆ ಅಂಥಾ ಆಸ್ತಿಯ ಬೆಲೆಯನ್ನು ನಾವು ಶೀಘ್ರವಾಗಿ ಕಂಡು ಹಿಡಿಯುತ್ತೇವೆ. ಇಂತಿಷ್ಟು ತೀರ್ವೆ ಕೊಡುವರೆಂಬ ಆಧಾರದ ಮೇಲೆ ಸರಕಾರದವರಿಂದ ಕೊಡಲ್ಪಟ್ಟ ಈ ಚುನಾವಣೆಯ ಹಕ್ಕಿನ ಬೆಲೆ ತಿಳಿಯಬೇಕಾದರೆ ಈ ಮೆಂಬರರು ನ್ಯಾಯವಿಧಾಯಕ ಸಭೆಯಲ್ಲಿ ಮಾಡುವ ಕರ್ತವ್ಯಗಳೇನು ಎಂದು ಚೆನ್ನಾಗಿ ತಿಳಿಯಬೇಕಾಗುತ್ತದೆ. ಹಲವು ಸಲ ಲೋಕಲ್ ಬೋರ್ಡ್ಸ್ ಆಕ್ಟ್ ಎಂದರೇನು, ಬೋರ್ಡ್ಸ್ ಮೆಂಬರರ ಹಕ್ಕು ಜವಾಬ್ದಾರಿಯೆಂದರೇನು ಎಂದು ತಿಳಿಯದೆ ಬೋರ್ಡ್ಸ್ ಮೀಟಿಂಗಿನಲ್ಲಿ ಚರ್ಚಿಸುವ ವಿಷಯಗಳ ವಾಸನೆಯೂ ಹತ್ತದೆ ಇದ್ದ ಮೆಂಬರುಗಳು ಬೋರ್ಡಿನಗಿಂತಲೂ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿರುವ ನ್ಯಾಯವಿಧಾಯಕ ಸಭೆಗೆ ಕಳುಹಿಸುವ ಮೆಂಬರನಲ್ಲಿ ಯಾವ ತರದ ಯೋಗ್ಯತೆಯಿರಬೇಕು ಎಂಬುದನ್ನು ತಿಳಿಯಲಾರರು. ಇದು ವಿನಹಾ ಒಬ್ಬೇ ವರ್ಗದಾರರ ಕಡೆಯಿಂದಲೇ ಮೆಂಬರುಗಳನ್ನು ಆರಿಸುವ ಸಂದರ್ಭಗಳಲ್ಲಿ ಇಂಥ ವರ್ಗದಾರರಲ್ಲಿ ಅನೇಕ ಮೆಂಬರರು ತಮ್ಮ ಹಳ್ಳಿಗಳನ್ನು ಬಿಟ್ಟಿರದೆಯೂ ರಾಜ್ಯಭಾರ ಕ್ರಮದಲ್ಲಿ ಸ್ವಲ್ಪ ಚಿಂತನೆಯಿಲ್ಲದವರಾಗಿದ್ದರೆ ಅಂಥವರು ಮೆಂಬರುಗಳನ್ನು ನ್ಯಾಯವಿಧಾಯಕ ಸಭೆಗೆ ಆರಿಸುವುದಕ್ಕೆ ಬೇಕಾದ ಅನುಭವವುಳ್ಳವರಾಗಿಲ್ಲ. ಹೀಗ ಲೋಕಲ್ ಬೋರ್ಡ ಮತ್ತು ವರ್ಗದಾರರ ಕಡೆಯಿಂದ ಆರಿಸುವಾಗ ಹಲವು ಯೋಗ್ಯತಾಯೋಗ್ಯತೆಯನ್ನು ಅರಿಯದೆ ತಪ್ಪಿ ಬೀಳುವುದುಂಟು. ಇದರಿಂದ ಈ ಮೆಂಬರರನ್ನು ನಾವು ದೂರುವುದಿಲ್ಲ. ಒಬ್ಬನಲ್ಲಿ ಅಗತ್ಯವಿರುವ ಜ್ಞಾನವಿಲ್ಲವೆಂದು ದೂಷಿಸುವುದು ತಪ್ಪು, ಅದಕ್ಕೆ ಬದಲಾಗಿ ಸಾಧ್ಯವಿದ್ದಾಗ ಅಂಥವರಿಗೆ ಬೇಕಾದ ಅನುಭವ ಹೇಳಿಕೊಡುವುದು ನಮ್ಮ ಕರ್ತವ್ಯ.

ದುರ್ದೈವವು ಸೃಷ್ಟಿಯಲ್ಲಿ ಮದ್ರಾಸ್ ಸಂಸ್ಥಾನಕ್ಕೆ ಸೇರಿದ ಅಂಶ ಎಂಬುದರಿಂದಲೋ ಏನೋ ದಕ್ಷಿಣಕನ್ನಡ ಮತ್ತು ಮಲಬಾರ ಜಿಲ್ಲೆಗಳನ್ನು ಮೆಂಬರುಗಳ ಚುನಾವಣೆಗೆ ಒಂದು ತುಕಡಿಯಾಗಿಟ್ಟಿದ್ದಾರೆ. ಇದೊಂದು ಮಲಬಾರಿಗೂ ದಕ್ಷಿಣಕನ್ನಡಕ್ಕೂ ಇರುವ ಸಂಬಂಧ, ಇನ್ನೂ ಮಲಬಾರಿನಲ್ಲಿಯೂ ದಕ್ಷಿಣಕನ್ನಡದಲ್ಲಿ ಒಹಳ ಸಂಖ್ಯೆ ಅಳಿಯ ಕಟ್ಟನ್ನು ಆಚರಿಸುತ್ತಿದೆ ಎಂಬುದು ಇನ್ನೊಂದು ಸಂಬಂಧ. ಆದರೆ ಇವೆರಡು ಜಿಲ್ಲೆಗಳ ವಿಭಾಗಗಳು ಯಥೇಷ್ಟವಾಗಿ ಈ ಮೇಲೆ ಹೇಳಿದ ಸಾಮ್ಯತೆಯನ್ನು ಮೀರಿಸಿ ಬಿಡುತ್ತವೆ. ಅವು ಯಾವುವೆಂದು ಮುಂದೆ ಹೇಳಲಾಗುವುದು. ಹೀಗಿದ್ದರೂ ಇವನ್ನು ಒಂದು ತುಕಡಿಯಾಗಿರಿಸಿ ಲೋಕಲ್ ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಕಡೆಯಿಂದ ಒಬ್ಬರನ್ನೂ ವರ್ಗದಾರರ ಕಡೆಯಿಂದ ಒಬ್ಬರನ್ನೂ ಚುನಾಯಿಸುವಂತೆ ಸರಕಾರದವರ ನಿರ್ಮಾಡು ಮಾಡಿರುವರು.

ಇದರಲ್ಲಿ ಅಳಿಯ ಕಟ್ಟಿನ ಆಚರಣೆ ಮೇರೆಗೆ ಮಲಬಾರು ಹಿರಿಯಣ್ಣ, ದಕ್ಷಿಣಕನ್ನಡ ಕಿರಿಯವ. ಮಲಬಾರಿನಲ್ಲಿ ತಾಲೂಕು ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಸಂಖ್ಯೆ ಹೆಚ್ಚು. ಮೆಂಬರರುಗಳ ಸಂಖ್ಯೆಯು ದಕ್ಷಿಣಕನ್ನಡದ ಮೂರು ಪಾಲಷ್ಟು ಇದೆ. ವರ್ಗದಾರರ ಸಂಖ್ಯೆಯೂ ಅಲ್ಲಿ ಸಮಾರು ಇಮ್ಮಡಿಯಿದೆ. ಹೀಗೆ ಇರುವುದರಿಂದ ಮೆಂಬರುಗಳನ್ನು ಆರಿಸುವ ಹೊಸ ಕಾಯಿದೆ ಜಾರಿಗೆ ಬಂದಂದಿನಿಂದ ಮಲಬಾರಿನವರೆ ಮೆಂಬರರಾಗಿ ಆರಿಸಲ್ಪಟ್ಟರು. ಒಂದು ಸಲ ಮಾತ್ರ ನಮ್ಮ ಜಿಲ್ಲೆಯ ಮೆಂಬರರು ಸ್ವಲ್ಪಕಾಲಕ್ಕೆ ಇದ್ದರು. ಈಗ ಹಿರಿಯನ ಅಧಿಕಾರವನ್ನು ಸಂಪೂರ್ಣವಾಗಿ ಅಳಿಯ ಕಟ್ಟಿನ ಆಧಾರದ ಮೇಲೆ ನಡಿಸುತ್ತಿದ್ದಾನೆ. ಈ ಪೈಕಿ ಎಷ್ಟು ಮೆಂಬರರು ನಮ್ಮ ಜಿಲ್ಲೆಯ ಪರವಾಗಿ ಕೌನ್ಸಿಲಿನಲ್ಲಿ (ನ್ಯಾಯವಿಧಾಯಕ ಸಭೆಯಲ್ಲಿ) ಪ್ರಯತ್ನಪಟ್ಟರೆಂದು ನೋಡಿದಿರಿ. ಏನೂ ಇಲ್ಲವೆಂದು ಉತ್ತರ ಬರುವುದು. ಕಾರಣವೇನು? ಮೆಂಬರರಾಗಿ ಆರಿಸಲ್ಪಟ್ಟ ಮೇಲಾದರೂ ಅದಕ್ಕೆ ಮುಂಚಿತವಾಗಿ ಆಗಲಿ ನಮ್ಮ ಜಿಲ್ಲೆಗೆ ಅವರು ಕಾಲಿಟ್ಟರೆ ನಮ್ಮ ಜಿಲ್ಲೆಯ ಸ್ಥಿತಿಗತಿಯನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಿತ್ತು. ಇದಕ್ಕೆ ಅವರಿಗೆ ಅವಕಾಶ ದೊರೆಯದೆ 'ವೋಟ್ಸ್'ಗಳನ್ನು ಸಂಗ್ರಹಿಸುವಾಗಲೂ ತಮ್ಮ ಏಜಂಟರ ಮೂಲಕ ಮತ್ತು ಪತ್ರದ್ವಾರಾ ಕಾರ್ಯನಿರ್ವಾಹ ಮಾಡಿದರಲ್ಲದೆ ಮತ್ತೆ ಬೇರೆ ಇಲ್ಲ. ಆಗ ಅವರು ನಮ್ಮ ಜಿಲ್ಲೆಯ ವಿಷಯವಾಗಿ ಕೌನ್ಸಿಲಿನಲ್ಲಿ ಯಾವ ಚರ್ಚೆ ಎತ್ತಲು ಸಾಧ್ಯವಿದೆ? ಬಹುಮಾನಕ್ಕಾಗಿ ತಾಲೂಕು ಬೋರ್ಡ ಮೆಂಬರರಾಗಿ ಬಂದವರಂತೆ ಇವರು ಬಹುಮಾನಕ್ಕಾಗಿ ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರರಾಗಿ ಕುಳಿತರು. ಕಿರಿಯ ಮೆಂಬರರಲ್ಲಿ ಯೋಗ್ಯತೆ ಉಂಟೋ ಎಂಬುದನ್ನು ಈ ವರೆಗೆ ಪರೀಕ್ಷಿಸಲಿಲ್ಲ. ಆದರೂ ಕಿರಿಯ ಮೆಂಬರರಾದ ದಕ್ಷಿಣ ಕನ್ನಡದವರು ಮೊದಲಿನಿಂದಲೂ ಮಲಬಾರಿನ ಉಮೇದ್ವಾರರಿಗೆ (ಹಿರಿಯರಿಗೆ) ಪಕ್ಷಪಾತವೆಣಿಸದೆಯೂ ಭೇದ ಬುದ್ಧಿ ತೋರಿಸದೆಯೂ ಸಹಕಾರಿಯಾದರು. ಈಗ ಕಿರಿಯ ಮೆಂಬರನಾದ ದಕ್ಷಿಣಕನ್ನಡ ಜಿಲ್ಲೆಯು ಯೋಗ್ಯವಾದ ಉಮೇದ್ವಾರರನ್ನು ಮುಂದಿರಿಸಿದಾಗ ಹಿರಿಯರ ಎದುರಿನಲ್ಲಿ ಕಿರಿಯರು ಕೈಕಟ್ಟಿ ನಿಲ್ಲಬೇಕಲ್ಲದೆ ತಮ್ಮ ಸ್ವತಂತ್ರ ಬುದ್ಧಿಯನ್ನು ತೋರ್ಪಡಿಸಬಾರದು ಎಂದು ಹೇಳುವರೊ ಎಂದು ನೋಡಲಿಕ್ಕಿದೆ.

ಪತ್ರವ್ಯವಹಾರ.

ಅನಾಥಾಲಯದ ಅವಶ್ಯಕತೆ.

ಸ್ವಾಮಿಾ ಪತ್ರಕರ್ತರೇ,

ತಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ಅತ್ರಿಗೋತ್ರಜರು' ಸ್ವತಃ ಕಣ್ಣಾರೆ ನೋಡಿ ಬರೆದ "ದುಃಖಕರ ನೋಟ"ದ ಸಂಗತಿಯನ್ನು ಓದಿ ನೋಡಿದೆ. ಅದನ್ನು ಓದಿ ನನಗೂ ತುಂಬಾ ವಿಷಾದವಾಗಿದೆ. ಆದರೆ ಮಾಡುವದೇನು? ಸಂಸ್ಕೃತ ಪಂಡಿತರು ಹೇಳುವಂತೆ "ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ" ಅಂದರೆ ಬಡವನ ಮನೋರಥಗಳು ಹೇಗೆ ಹುಟ್ಟುತ್ತವೋ ಹಾಗೆಯೇ ಮಾಯವಾಗುತ್ತವೆ. ಇದೇ ಅವಸ್ಥೆ ನನ್ನದು!

ಅನಾಥರಾದ ಬಾಲ-ಬಾಲಿಕೆಯರಿಗಾಗಲಿ, ಸ್ತ್ರೀಪುರುಷರಿಗಾಗಲಿ ಒಂದು ಆಲಯ ಬೇಕೆಂಬುದು ಖಂಡಿತ. ಇಂಥ ಆಲಯಗಳಿಲ್ಲದೆ ಇರುವದರಿಂದ, ಯಾರೋ ಒಲ್ಲವರು ಹೇಳುತ್ತಾರೆ, ಸಮಾಜದಲ್ಲಿ ಅನೇಕ ಅನರ್ಥಗಳು ಉಂಟಾಗುತ್ತವೆ. ದುರಾಚಾರವನ್ನು ಮಾಡಬಾರದು, ಸ್ವಪ್ನೇಪಿ ಕೂಡದು. ಪರಂತು, ಪೂರ್ವಕರ್ಮದ ಫಲವೋ, ಶಿಕ್ಷಣದ ಅಭಾವವೋ, ಸಹವಾಸದ ದೋಷವೋ ಯಾವುದೇ ಕಾರಣವಾಗಲಿ ತಿಳಿಯದೆ—ತಿಳಿದು—ದುರಾಚಾರದಲ್ಲಿ ಒಮ್ಮೆ ಸಿಕ್ಕಿ ಬಿದ್ದು ಏನಾದರೂ ಅನರ್ಥ ಸಂಭವಿಸಿದ ನಂತರ ಕಣ್ಣು ತೆರೆದು, ಸ್ವಲ್ಪ ಬುದ್ಧಿ ಬಂದು, ಇನ್ನು ಮುಂದೆ ಸರ್ವಥಾ ಈ ಹಾದಿ—ಈ ಸಂಘ—ಬೇಡ ಎಂದು ನಿಜವಾಗಿ ಪಶ್ಚಾತ್ತಾಪಪಟ್ಟವರಿಗೆ ಜ್ಞಾತಿಯ ಮತ್ತು ಜ್ಞಾತಿ ಗುರುಗಳ ಬಹಿಷ್ಕಾರಾಸ್ತ್ರದಿಂದ ಹೊರಗೆ ಹೋಗಬೇಕಾದದ್ದು ಅವಶ್ಯವಿದ್ದ ಕಾರಣ ಅವರ ಮುಂದಿನ ಜೀವನ ಕ್ರಮವು ಬಹು ಕಷ್ಟಮಯವಾಗುತ್ತದೆ. ಆ ಕಷ್ಟವನ್ನು ತಾಳಲಾರದೆ ಅವರು ಕೊನೆಯಲ್ಲಿ ಪತಿತಪಾವನರಾದ ಮಹಮ್ಮದಿ ಮೊದಲಾದ ಅನ್ಯಮತದವರ ಬಲೆಯಲ್ಲಿ ಸಿಕ್ಕಿ ಬಿದ್ದು ಮತದ ವೈರಿಗಳಾಗುತ್ತಾರೆ. ಇದು ದೇಶಕ್ಕೆ ಒಳ್ಳೆದೋ? ಸಮಾಜಕ್ಕೆ ಹಿತಕರವೋ? ದುರಾಚಾರಿಗಳನ್ನು ಸಮಾಜವಾಗಲಿ, ಧರ್ಮಗುರುಗಳಾಗಲಿ ಅವರ ದುರಾಚಾರದ ಸಲುವಾಗಿ ದಂಡಿಸದೆ ಸಂಗ್ರಹಿಸಬೇಕೆಂತ ನನ್ನ ತಾತ್ಪರ್ಯವಲ್ಲ. ಅವರವರ ಪಾಪಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸುವದು ಪ್ರತಿ ಒಂದು ಜನಾಂಗದಲ್ಲಿ, ಮತದಲ್ಲಿ, ಸಮಾಜದಲ್ಲಿ ಕಂಡುಬರುತ್ತದೆ. ಮತ್ತು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ (ದಂಡನೆ) ಸಿಗಬೇಕೆಂಬುದು ಕೂಡ ನ್ಯಾಯವೇ. ಆದರೆ ಅದೃಷ್ಟವಶಾತ್ ಏನೋ ಒಂದು ಸಾರಿ ಕೈಯಿಂದ ಪಾಪವಾಗಿ ಹೋಯಿತು, ಕೂಡಲೇ ಪಶ್ಚಾತ್ತಾಪಪಟ್ಟ, "ಪಶ್ಚಾತ್ತಾಪೇನ ಶುದ್ಧ್ಯತಿ" ಎಂಬ ಋಷಿ ವಾಕ್ಯದಂತೆ ಶುದ್ಧನಾದಲ್ಲಿಯೂ ಅವನು ಆ ಜನ್ಮ ಬಹಿಷ್ಕೃತನಾಗಿಯೇ ಇರಬೇಕು, ಯಾವ ತರದ ದಯೆಗೂ ಪಾತ್ರನಲ್ಲ, ಈ ವಿಧವಾಗಿ ಘೋರ ಶಿಕ್ಷೆಯನ್ನು ವಿಧಿಸುವದು ನ್ಯಾಯವೋ? ಇಂಥವರನ್ನು ಸಮಾಜದಲ್ಲಿ ನಿಜವಾಗಿ ತೆಕ್ಕೊಳ್ಳಬೇಡಿರಿ. ಇಂಥ ದೂಷಿತರಿಂದ ಸಮಾಜವು ದೋಷಿಯಾಗುವ ಸಂಭವವಿದೆ. ಅವರು ದೂರದಲ್ಲಿರುವದೇ ಯೋಗ್ಯ, ಸರಿ. ಪರಂತು ಅವರಿಗಾಗಿ ಏನಾದರೂ ಒಂದು ಆಶ್ರಯವು ಬೇಕೊ ಬೇಡವೋ? ಇದನ್ನು ಆಲೋಚಿಸಿದರೆ ನಿಷ್ಪಕ್ಷಪಾತಿಗಳಿಂದ ಅಸ್ತಿಪಕ್ಷದ ಉತ್ತರವೇ ಹೊರಟೀತು.

ಇಂಥದೊಂದು ಆಶ್ರಯವಿಲ್ಲದಿರುವದರಿಂದ ಎಷ್ಟು ಭ್ರೂಣಹತ್ಯೆಗಳು ಮತ್ತು ಬಾಲಹತ್ಯೆಗಳು ಸಂಭವಿಸುತ್ತವೆ? ಇದೂ ಅಲ್ಲದೆ ನಿರಾಧಾರರಾಗಿ ಅನ್ಯಮತಗಳನ್ನು ಎಷ್ಟು ಜನರು ಅವಲಂಬಿಸುವವರಿಲ್ಲ? ಇದೆಲ್ಲ ಸುಚಿಹ್ನವೋ? ದುಶ್ಚಿಹ್ನವಾದರೆ ನಮ್ಮಲ್ಲಿ ಇವುಗಳಿಗೇನಾದರೂ ಪ್ರತಿಕಾರ ಮಾಡಿದ್ದು—ಮಾಡುವದು ಉಂಟೋ?

ಒಂದು ಆಕ್ಷೇಪ ಬರಬಹುದು, ಇಂಥ ದುರಾಚಾರಿಗಳಿಗಾಗಿ ಒಂದು ಆಶ್ರಮವನ್ನು ತಯಾರಿಸಿದ್ದಲ್ಲಿ ಸಮಾಜದೊಳಗೆ ಒಂದು ಸಮೂನೆಯಿಂದ ದುರಾಚಾರಗಳಿಗೆ ಉತ್ತೇಜನ ಕೊಟ್ಟಂತೆ ಆಗುವದು. ಈ ಆಕ್ಷೇಪವು ಸರಿಯೇ, ಆದರೆ ನಿರುತ್ತರವಿಲ್ಲ. ಇಂಥ ಆಲಯಗಳಿಂದ ದುರಾಚಾರಗಳಿಗೆ ಉತ್ತೇಜನಕೊಟ್ಟಂತೆ ಆಗುವದಿಲ್ಲ. ಇಂಥ ಆಲಯಗಳೆಂದರೆ ಪುಣ್ಯಧಾಮಗಳಲ್ಲ, ಅಥವಾ ದೇವತಾ ಮಂದಿರಗಳಲ್ಲ. ಈ ಆಲಯಗಳನ್ನು ನೋಡಿ "ಅಹಹಾ! ಪುಣ್ಯಧಾಮವಿದು? ಇಲ್ಲಿ ನಾನು ಹ್ಯಾಗಾದರೂ ಪ್ರವೇಶಿಸಬೇಕು" ಈ ತರದ ಬಯಕೆಯು ಯಾವ ನರಪ್ರಾಣಿಯಲ್ಲಿ ಹುಟ್ಟೀತು? ಸ್ಪರ್ಧೆ, ಅನುಕರಣೆಯ ಇಚ್ಛೆ, ತನಗೂ ಬೇಕೆಂಬ ಕಾಂಕ್ಷೆ, ಇವು ಒಳ್ಳೇ ವಸ್ತುವಿನ ವಿಷಯದಲ್ಲಿಯೇ ಸಂಭವಿಸುತ್ತವೆ. ದುರಾಚಾರಿಗಳ ಆಲಯವನ್ನು ನೋಡಿ ತಾನೂ ದುರಾಚಾರಿಯಾಗಬೇಕೆಂತ ಯಾರಾದರೂ ಬಯಸುವರೋ? ಇಂಥ ಆಲಯಗಳು ಈ ರೀತಿಯಿಂದ ಸಮಾಜದಲ್ಲಿ ಎಂದೂ ಆದರ್ಶವಾಗಲಾರವು. ಇವು ಆದರ್ಶವಾಗುವದೇ ಆದರೆ, ತಿರುಪತಿಯ ಹರಿಕೆಗಾಗಿ ಇಟ್ಟುಕೊಂಡ ಕಾಲಿನ ಸರಿಗೆಯು ಅವನ ಪೂರ್ವದ ಕಠಿಣವಾದ ಆಪತ್ತನ್ನು ತೋರಿಸುವಂತೆ ಅಲ್ಲಿಯ ವ್ಯಕ್ತಿಗಳ ಮೂಲಕ ಇವು ಮೂರ್ತಿಮಂತವಾದ ದುರಾಚಾರದ ಸಜೀವಸ್ಮಾರಕಗಳೇ ಆದಾವು! ಅಂಥವರನ್ನು ಯಾರೂ ಅನುಸರಿಸಲಿಕ್ಕಿಲ್ಲ.

ಇರಲಿ. ಪತ್ರಕರ್ತರೇ, ಈ ವಿಷಯದಲ್ಲಿ ನನಗೆ ಇನ್ನೂ ಹಲವು ಸಂಗತಿಗಳನ್ನು ಬರೆಯಬೇಕೆಂತಿತ್ತು. ಆದರೆ ಈ ಪತ್ರವು ಸ್ವಲ್ಪ ಉದ್ದವಾದದರಿಂದ ಈ ವಿಷಯವನ್ನು ಇಲ್ಲಿಯೇ ನಿಲ್ಲಿಸಿದ್ದೇನೆ.

ಮಾಧವಾನುಜ.

ಯುದ್ಧ ಸಮಾಚಾರ.

ತಾ. ೨೬ನೇ ಜನವರಿ.

ನ್ಯೂಪೋರ್ಟು ಪ್ರಾಂತ್ಯದಲ್ಲಿ ಯ್ಸರ್ ನದಿಯ ಬಳಿ ಕಠಿಣ ತೋಪುಕಾಳಗವು ನಡೆಯಿತು. ಜರ್ಮನರು ೩೦,೫೦೦ ಗುಂಡುಗಳನ್ನು ಹಾರಿಸಿದರು. ಅವರ ಕಾಲಾಳು ಪಡೆಯು ನುಗ್ಗಿ ಬರಲು ಪ್ರಯತ್ನಿಸಿತು. ಆದರೆ ನಮ್ಮವರ ಬೆಂಕಿಯ ಹೊಡತಕ್ಕೆ ಅವರಿಗೆ ಕಂದಕಗಳನ್ನು ಬಿಟ್ಟು ಬರಲು ಅಸಾಧ್ಯವಾಯಿತು. ಹೆಟ್ಸಾಸ್ ಮೊದಲಾದ ಪ್ರಾಂತ್ಯಗಳಲ್ಲಿಯೂ ಕಠಿಣ ತೋಪು ಕಾಳಗಗಳು ನಡೆಯುತ್ತಿವೆ. ಶತ್ರುಗಳು ಹೆಟ್ಸಾಸ್ ಕಾಲುವೆಯನ್ನು ದಾಟಿ ಬರಲು ಯತ್ನಿಸಿದರೂ ನಮ್ಮವರ ಕಾಲಾಳು ಸೇನಿಕರು ಅವರನ್ನು ಹಿಂದಕ್ಕಟ್ಟಿದರು.

ಶತ್ರುಗಳು ಅರ್ಟ್ವಾಯಿಸಿನಲ್ಲಿ ಒಂದು ಸಿಡಿಮದ್ದಿನ ಗಣಿಯನ್ನು ಹಾರಿಸಿ ಪುನಃ ಅಭಿಯೋಗ ಮಾಡಲು ಪ್ರಯತ್ನಿಸಿದರು. ಆದರೆ ನಮ್ಮ ರೈಫಲ್ ತೋಪಿಗಳ ಹೊಡತವನ್ನು ಅವರು ತಡೆಯಲಾರದೆ ಹಿಮ್ಮೆಟ್ಟಿದರು. ಎರಡನೇ ಸಾರಿ ಶತ್ರುಗಳು ಮೇಲ್ಬಾಯಿದು ಬಂದು ಪುನಃ ಹಿಮ್ಮೆಟ್ಟಿದರು. ನಮ್ಮವರ ಬತ್ತೇರಿಗಳು ಸ್ಕೊಸನ್ನಿನ ಉತ್ತರದಲ್ಲಿ ಜರ್ಮನರ ಕಂದಕಗಳನ್ನು ಒಡೆದು ಬಿಟ್ಟಿರುತ್ತವೆ. ಅರ್ಟ್ವಾಯಿಸಿನಲ್ಲಿ ವಾಯುನಾವೆಗಳ ಕದನವೂ ನಡೆಯುತ್ತಿದೆ. ಹತ್ತು ಬೊಂಬುಗಳು ನಾನ್ಸಿಯ ಮೇಲೆ ಹಾಕಲ್ಪಟ್ಟಿರುತ್ತವೆ. ಫ್ರೆಂಚರ ವಾಯುನಾವೆಗಳು ರೆಂವ್ಸ್ ಪ್ರಾಂತ್ಯದಲ್ಲಿ ಜರ್ಮನ ಕೋಟೆಗಳ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ.

ಕಳೆದ ರಾತ್ರಿ ನಮ್ಮವರು ಶತ್ರುಗಳ ಒಂದು ಸಿಡಿಮದ್ದಿನ ಗಣಿಯನ್ನು ಹಾರಿಸಿದ್ದರಿಂದ ಶತ್ರುಗಳ ಕಂದಕಗಳಲ್ಲಿ ಬಹಳ ನಷ್ಟವಾಗಿರುವದು.

ಕಳೆದ ೪ ವಾರಗಳ ಕಾಲ ಫ್ಲೇಂಡರಿನಲ್ಲಿ ಬ್ರಿಟಿಷರ ೧೪ ವಾಯುನಾವೆಗಳು ೯ಯೂ ೧೧ ಜರ್ಮನರ ವಾಯುನಾವೆಗಳು ನಷ್ಟವಾಗಿರುತ್ತವೆ. ಬ್ರಿಟಿಷರು ೬ ಸಾರಿ ಹಲ್ಲಾ ಮಾಡಿದರು, ಜರ್ಮನರು ೧೪ ಸಾರಿ ಹಲ್ಲಾ ಮಾಡಿದರು, ಬ್ರಿಟಿಷರು ೧೪೮ ವಾಯುನಾವೆಗಳನ್ನೂ ಜರ್ಮನರು ೩೦ ವಾಯುನಾವೆಗಳನ್ನೂ ಪ್ರಯೋಗಿಸಿದರು ಎಂತ ಪ್ರಕಟವಾಗಿದೆ.

ಶತ್ರುಗಳ ಎರಡು ವಾಯುನಾವೆಗಳು ಡನ್‌ಕರ್ಕಿನ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ.

ಇಂಗ್ಲಾಂಡಿನ ಯುವಕರನ್ನು ಸೇನೆಗೆ ಸೇರಿಸಿಕೊಳ್ಳುವ ನಿರ್ಬಂಧ ವಿಧಿಯು ಬ್ರಿಟಿಷ ಕಾಮನ್ಸ್ ಸಭೆಯಲ್ಲಿ ೩ನೇ ಸಲ ಓದಲ್ಪಟ್ಟು ಬಹುಮತಿಯಿಂದ ಮಂಜೂರಾತಿಯನ್ನು ಪಡೆದಿರುತ್ತದೆ.

ಸಲೋನಿಕದಲ್ಲಿರುವ ಮಿತ್ರರ ವಾಯುನಾವೆಗಳು ಮೊನಸ್ಟಿರಿನ ಮತ್ತು ಇತರ ಶತ್ರುನೆಲೆಗಳ ಮೇಲೆ ೩೦ಕ್ಕಿಂತಲೂ ಹೆಚ್ಚಿಗೆ ಬೊಂಬುಗಳನ್ನು ಹಾಕಿರುವದು, ಗೆವ್‌ಗೇಲಿಯದ ಮೇಲೆ ಸುಮಾರು ೧೦೦ ಬೊಂಬುಗಳನ್ನು ಹಾಕಿರುತ್ತವೆ.

ರಾತ್ರಿಕಾಲವೆಲ್ಲಾ ಬೆಲ್ಜಿಯಮಿನಲ್ಲಿ ತೋಪುಕಾಳಗ ನಡೆದಿರುವದು. ಯ್ಸರ್ ನದಿಯ ಬಳಿ ಮುಂದರಿಯಲು ಪ್ರಯತ್ನಿಸಿದ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಜರ್ಮನರು ನ್ಯೂವಿಲ್ಲೆಯ ಪ್ರಾಂತ್ಯದಲ್ಲಿ ಪುನಃ ನುಗ್ಗಿಬಂದರು, ಆದರೆ ಫ್ರೆಂಚರು ಅವರನ್ನು ಓಡಿಸಿರುತ್ತಾರೆ. ಜರ್ಮನರ ಎರಡು ವಾಯುನಾವೆಗಳು ಡನ್‌ಕರ್ಕಿನ ಮೇಲೆ ೧೮ ಬೊಂಬುಗಳನ್ನು ಹಾಕಿರುವದು. ಇದರಿಂದ ೫ ಮಂದಿ ಹತರಾಗಿರುವರು. ಮೂರು ಮಂದಿ ಗಾಯಒಡೆದಿರುವರು. ಇತರ ಪ್ರಾಂತ್ಯಗಳಲ್ಲಿಯೂ ಕೆಲವು ಕದನಗಳಾಗಿ ನಮ್ಮವರು ಜಯಪ್ರದರಾಗಿರುತ್ತಾರೆ.

ತಾ. ೨೫ನೇ ಸಾಯಂಕಾಲ ಜರ್ಮನರ ವಾಯುನಾವೆಯು ಡೋವರ್ ಪಟ್ಟಣದ ಮೇಲೆ ಕಾಣಿಸಿಕೊಂಡಿತು. ಬ್ರಿಟಿಷರ ವಾಯುನಾವೆಗಳು ಅದನ್ನು ಅಟ್ಟಿಬಿಟ್ಟಿರುತ್ತವೆ.

ಬಲತ್ಕಾರ ಸೇನಾ ವಿಧಿಯು ಬ್ರಿಟಿಷ ಪಾರ್ಲಿಮೆಂಟಿನ ಪ್ರಭು ಮಂದಿರದಲ್ಲಿ ೨ನೇ ಸಾರಿ ಓದಲ್ಪಟ್ಟು ಬಹುಮತಿಯಿಂದ ಸಮ್ಮತಿಯನ್ನು ಹೊಂದಿರುತ್ತದೆ.

ರುಶ್ಯನರು ಪಿನ್ಸ್‌ಕ್‌ಗೆ ೩ ಮೈಲು ದೂರ ಮಾತ್ರವಿರುವರು.

ಆಸ್ಟ್ರಿಯಾ ಚಕ್ರವರ್ತಿಯವರು ಕಠಿಣ ಅಸ್ವಸ್ಥದಲ್ಲಿರುವರೆಂಬ ವಾರ್ತೆಯು ರೋಮನ್ ನಗರದಲ್ಲಿ ಪ್ರಕಟವಾಗಿದೆ.

ಆಸ್ಟ್ರಿಯನರು ಮೊಂಟೆನಿಗ್ರೋಯಾನರ ಸ್ಕುಟಾರಿ ಪಟ್ಟಣವನ್ನು ವಶಮಾಡಿಕೊಂಡರು. ನಿಕ್‌ಸಿಟ್ಸ್ ಡಾ ನಾವೋಗ್ರಾಡ್ ಪೋಡ್‌ಗೊರಿಡ್ಜ ಎಂಬ ಮೊಂಟೆನಿಗ್ರೋಯನರ ಪಟ್ಟಣಗಳು ಆಸ್ಟ್ರಿಯಾನರ ವಶವಾಗಿರುವವು.

ಕೌಕಾಸಸಿನಲ್ಲಿ ರುಶ್ಯನರು ತುರ್ಕರನ್ನು ಎಜಿರಮ್ ಕಡೆಗೆ ಅಟ್ಟುತ್ತಿರುವಾಗ ಅನೇಕ ತೋಪುಗಳನ್ನೂ ೭೦೦ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ಎಜಿರಮಿನಲ್ಲಿ ೧೩೦,೦೦೦ ತುರ್ಕೀ ಸೇನಿಕರಿದ್ದರು. ಈ ಪೈಕಿ ೫೦ ಆಫೀಸರರೂ ೪೦೦೦ ಸೇನಿಕರೂ ಬಹಳ ಗುಂಡು ಮದ್ದುಗಳೂ ರುಶ್ಯನರಿಗೆ ದೊರಕಿರುತ್ತವೆ.

ತಾ. ೨೮ನೇ ಜನವರಿ.

ಅರ್ಟ್ವಾಸ್, ನ್ಯೂವಿಲ್ಲೆ ಮೊದಲಾದ ಪ್ರಾಂತ್ಯಗಳಲ್ಲಿ ನಮ್ಮವರು ಶತ್ರುಗಳ ಕಂದಕಗಳನ್ನು ಹಾಳು ಮಾಡುವ ಕೆಲಸದಲ್ಲಿ ಉದ್ಯುಕ್ತರಾಗಿರುವರು.

ಜರ್ಮನರ ವಾಯುನಾವೆಗಳು ರಿಗಾ ಮತ್ತು ನಿಸಿಕಿನಲ್ಲಿ ಕಾಣಿಸಿಕೊಂಡಿರುವವು.

ಪೂರ್ವ ಆಫ್ರೀಕದಲ್ಲಿ ನಮ್ಮವರು ಸೆರಂಗೆಟಿ ಎಂಬಲ್ಲಿದ್ದ ಶತ್ರುಗಳ ಪಾಳೆಯವನ್ನು ಹಿಡಿದಿರುತ್ತಾರೆ.

ತಾ. ೨೯ನೇ ಜನವರಿ.

ಜನವರಿ ತಾ. ೮ರಲ್ಲಿ ತುರ್ಕರ ಗಿಯೋಟಿನ್ ಮತ್ತು ರುಶ್ಯನರ ಯುದ್ಧನಾವೆಗಳಿಗೆ ಕದನವಾಗಿ ಗಿಯೋಟಿನ್ ನಾವೆಯು ಜಖಮಾಗಿ ಕನ್‌ಸ್ಟಾಂಟಿನೋಪಲಿಗೆ ಹಿಂದೆರಳಿರುವದು. ಗಿಯೋಟಿನ್ ನಾವೆಯ ೩೩ ಮಂದಿ ಹತರಾಗಿರುವರು, ೮೦ ಮಂದಿ ಗಾಯ ಒಡೆದಿರುವರು ಎಂತ ಪ್ರಕಟವಾಗಿದೆ.

ಪಶ್ಚಿಮ ಆಫ್ರೀಕದ "ಅಪ್ಪಾಮ್" ಎಂಬ ಟಪ್ಪಾಲು ಕೊಂಡುಹೋಗುತ್ತಿದ್ದ ನಾವೆಯು ೧೦ ದಿವಸಗಳಿಂದ ಕಾಣದೆ ಹೋಗಿರುವದು. ಈ ಹಡಗದಲ್ಲಿ ೧೩೪ ನಾವಿಕರೂ, ೧೬೬ ಪ್ರಯಾಣಿಕರೂ ಇದ್ದರು. ಈ ಹಡಗವು ಬಿಸ್ಕೆ ಅಖಾತದ ಸಮೀಪ ಇದ್ದದ್ದು ವಾರ್ತೆ ಬಂದಿತ್ತು. ಅನಂತರ ಈ ಹಡಗದ ವಾರ್ತೆಯೇ ಇಲ್ಲ. "ಅಪ್ಪಾಮ್" ಎಂಬ ಹೆಸರಿದ್ದ ಆ ಹಡಗದ ಒಂದು ಲೈಫ್ ಬೋಟು ಮಡಿಕೆ ಮತ್ತು ಮೊರೊಕ್ಕೊದ ಮಧ್ಯೆ ಸಿಕ್ಕಿರುವದು ಎಂತ ವಾರ್ತೆ ಬಂದಿರುವದು.

ಫ್ರಾನ್ಸ್ ರಣರಂಗದ ಅಟ್ರೋರ್ಸ್ ಎಂಬಲ್ಲಿ ತೋಪು ಕಾಳಗವು ಬಹು ಆಸಕ್ತಿಯಿಂದ ನಡೆಯುತ್ತಿರುವದು. ಬೆಲ್ಜಿಯಮಿನಲ್ಲಿರುವ ಜರ್ಮನ ಕಂದಕಗಳನ್ನು ನಮ್ಮವರ ತೋಪುಗಳು ಹಾಳು ಪಡಿಸಿರುತ್ತವೆ.

ಸರ್ವಿಯಾದ ಪ್ರಧಾನ ಮಂತ್ರಿಯವರು ಬೇಗನೇ ಪಾರಿಸ್ ಮತ್ತು ಲಂಡನ್ ನಗರವನ್ನು ಸಂದರ್ಶಿಸುವವರಲ್ಲಿದ್ದಾರೆಂತ ತಿಳಿದು ಬಂದದೆ.

ವಲೋನವನ್ನು ಶತ್ರುಗಳಿಂದ ಕಾಪಾಡಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಬೇಕೆಂದು ಇಟಲಿ ಮಂತ್ರಿಸಭೆಯಲ್ಲಿ ನಿರ್ಣಯವಾಗಿದೆ.

ಸ್ಕುಟಾರಿಯನ್ನು ಶತ್ರುಗಳ ಕೈಯಿಂದ ಕಾಪಾಡಲು ಮಾಡಿದ ಪ್ರಯತ್ನದಲ್ಲಿ ಮೊಂಟೆನಿಗ್ರೊ ಪ್ರಿನ್ಸ್ ಮಿರ್ಕೋರವರು ಹತರಾದರೋ ಇಲ್ಲವೆ ಶತ್ರುಗಳ ಕೈಗೆ ಸೆರೆಬಿದ್ದರೋ ಏನೆಂಬ ಅನುಮಾನವದೆ. ಸಾವಿರಾರು ಸರ್ವಿಯಾನರು ಅಲೆಸ್ಸಿಯೋದಲ್ಲಿ ಅಲೆದಾಡುತ್ತಿರುವರು. ಪ್ರಿನ್ಸ್ ಮಿರ್ಕೋರವರು ಸ್ಕುಟಾರಿಯಲ್ಲಿ ನಡಿಸಿದ ಅತ್ಯದ್ಭುತವಾದ ಸಾಧನೆಯಿಂದ ಸರ್ವಿಯನರು ತಪ್ಪಿಸಿಕೊಳ್ಳುವದಕ್ಕೆ ಮಾರ್ಗವಾಯಿತು.

ಗೊರಿಜ್ಜ ಪ್ರಾಂತ್ಯದಲ್ಲಿ ನುಗ್ಗಿ ಬಂದ ಶತ್ರುಗಳನ್ನು ಇಟಲಿಯನರು ತಡದು ತಮ್ಮ ನೆಲೆಗಳನ್ನು ಬಲಕಾಯಿಸಿಕೊಂಡಿರುವರಲ್ಲದೆ ಇಸನ್ಜೊ ಸೇತುವೆಯ ಕಡೆಗೆ ಮುಂದರಿಯುತ್ತಿದ್ದ ಶತ್ರುಗಳ ಸೇನೆಯ ಮೇಲೆ ಗುಂಡುಹಾರಿಸಿ ಶತ್ರುಗಳಲ್ಲಿ ವಿಶೇಷ ನಷ್ಟಪಡಿಸಿರುವರು. ಇಟಲಿಯಾನರ ಒಂದು ಸೇನಾ ಪಡೆಯು ಫಕ್ಕನೇ ಮುಂದರಿದು ಸಾನ್‌ಮಾರ್ಟಿನೋ ಎಂಬಲ್ಲಿ ಶತ್ರುಗಳು ಬಲಕಾಯಿಸಿಕೊಂಡಿದ್ದ ಒಂದು ದೇವಾಲಯವನ್ನು ಹಿಡಿದಿರುತ್ತದೆ.

ಜನವರಿ ತಾ. ೨೩ರಲ್ಲು ನಮ್ಮವರ ಎರಡು ಸೇನಾಂಗಗಳು ಈಜಿಪ್ತ ಸರಹದ್ದಿನಲ್ಲಿ ಮುಂದರಿದವು. ಶತ್ರುಗಳು ತಮ್ಮ ಪಾಳೆಯಗಳನ್ನು ಬಿಟ್ಟು ಮುಂದೆ ಬಂದು ನಮ್ಮವರ ಸೇನೆಯನ್ನು ಮುತ್ತಲು ಪ್ರಯತ್ನಿಸಿದರು. ಆದರೆ ನಮ್ಮವರು ಅವರನ್ನು ಹಿಂದಟ್ಟಿ ಅವರವರ ಪಾಳೆಯಗಳನ್ನು ಹಿಡಕೊಂಡು ಸುಮಾರು ೮೦ ಡೇರೆಗಳನ್ನೂ ಅನೇಕ ಆಹಾರ ಸಾಮಾಗ್ರಿಗಳನ್ನೂ ಸುಟ್ಟು ಹಾಕಿದರು. ೪೫೦೦ ಅರಬಿಯಾನರು ಇಲ್ಲಿ ನಮ್ಮವರೊಡನೆ ಯುದ್ಧಕ್ಕೆ ನಿಂತರು. ಆದರೆ ನಮ್ಮವರು ಅವರನ್ನು ೩ ಮೈಲು ದೂರಕ್ಕೆ ಓಡಿಸಿದರು. ನಮ್ಮವರ ಸೇನೆಯಲ್ಲಿ ೨೬ ಮಂದಿ ಹತರಾದರು. ೨೯೪ ಮಂದಿ ಗಾಯಒಡೆದರು. ಶತ್ರುಗಳಲ್ಲಿ ೧೫೦ ಮಂದಿ ಹತರಾದರು. ೫೦೦ ಮಂದಿ ಗಾಯಒಡೆದರು.

ತಾ. ೩೧ನೇ ಜನವರಿ.

ಪಶ್ಚಿಮ ಆಫ್ರೀಕದ "ಅಪ್ಪಾಮ್" ಎಂಬ ಟಪ್ಪಾಲು ಹಡಗದಲ್ಲಿ ೮೭ ಮೊದಲನೇ ತರಗತಿಯ ಪ್ರಯಾಣಿಕರೂ ೧೩೩ ನಾವಿಕರೂ ಇದ್ದರು. ಸಿರಿಯಲಿಯೋನ್ ಲಾಗೋಸ್ ಮೊದಲಾದ ಪ್ರದೇಶಗಳ ಗವರ್ನರರೇ ಮೊದಲಾದ ದೊಡ್ಡ ಮನುಷ್ಯರು ಈ ಹಡಗದಲ್ಲಿದ್ದರು. ಹಡಗದ ವಿಷಯ ಇನ್ನೂ ಹೆಚ್ಚಿನ ವರ್ತಮಾನ ದೊರಕಿರುವದಿಲ್ಲ. ಕೆಮರೂನಿನಿಂದ ಬಂದ ಜರ್ಮನ ಬಂದಿಗಳೂ ಹಡಗದಲ್ಲಿದ್ದರು ಎಂತ ವಾರ್ತೆ ಬಂದಿದೆ.

ಪ್ರೈಸಲೀಸ್ ಎಂಬಲ್ಲಿ ಫ್ರೆಂಚರ ಫಿರಂಗಿಗಳು ಜರ್ಮನರ ಮದ್ದುಗುಂಡುಗಳ ಕೊಠಡಿಯೊಂದನ್ನು ಸುಟ್ಟುಹಾಕಿರುವದು.

ಅರ್ಟ್ವಾಯಿಸಿನಲ್ಲಿ ಕಠಿಣ ಕಾಳಗವು ನಡೆಯುತ್ತಿರುವದು. ೪ ಕಡೆಗಳಲ್ಲಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು. ಗಿವೆಂಚಿಯಲ್ಲಿ ಮಾತ್ರ ಶತ್ರುಗಳು ಕೆಲವು ಸಿಡಿಮದ್ದಿನ ಗಣಿಗಳನ್ನು ಹಾರಿಸಿ ಸ್ವಲ್ಪ ಮುಂದರಿದಿರುವರು. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು. ಅರ್ರಾಸಿನ ಮೇಲೆ ಶತ್ರುಗಳು ಗುಂಡುಹಾರಿಸಲು ಪ್ರಾರಂಭಿಸಿರುವರು.

ಅರ್ಟ್ವಾಯಿಸಿನಲ್ಲಿ ಶತ್ರುಗಳು ಪಡಕೊಂಡಿದ್ದ ಕಂದಕಗಳನ್ನು ಫ್ರೆಂಚರು ಕಠಿಣ ಕಾಳಗಮಾಡಿ ಹಿಂದಕ್ಕೆ ಪಡೆದಿರುವರು. ಸೊಮ್ಮೆಯ ಬಳಿ ಶತ್ರುಗಳು ಫಿರಂಗಿಗಳನ್ನು ಹಾರಿಸಿ ಒಂದು ಕಡೆ ಜಯಪ್ರದರಾಗಿರುವರು. ಫ್ರೆಂಚರು ಪುನಃ ನುಗ್ಗಿಹೋಗಿ ಕಂದಕಗಳ ಕೆಲವಂಶವನ್ನು ಹಿಡಿದಿರುವರು. ಫ್ರೆಂಚರ ಫಿರಂಗಿಗಳು ಮನ್‌ಸ್ಟರಿನ ದಕ್ಷಿಣದಲ್ಲಿದ್ದ ಶತ್ರುಗಳ ಮದ್ದುಗುಂಡಿನ ಸಾಲೆಯನ್ನು ಸುಟ್ಟು ಹಾಕಿರುವರು.

ಸೊಮ್ಮೆ ಪ್ರಾಂತ್ಯದಲ್ಲಿ ಶತ್ರುಗಳು ಪುನಃ ದೊಡ್ಡ ಸೇನೆಯೊಡನೆ ಹಲ್ಲಾ ಮಾಡಿದರು. ಆದರೆ ಎರಡಾವರ್ತಿ ಶತ್ರುಗಳು ಹಿಂದಕ್ಕೆ ಅಟ್ಟಲ್ಪಟ್ಟಿರುವರು.

ಲೂಸಿನ ಉತ್ತರ ಪೂರ್ವದಲ್ಲಿ ಶತ್ರುಗಳು ದೊಡ್ಡ ದೊಡ್ಡ ಫಿರಂಗಿಗಳನ್ನು ತಂದೊಡ್ಡಿ ಕಾಲಾಳು ಸೇನೆಯ ಕಾಳಗವನ್ನು ಮಾಡಲೆತ್ನಿಸಿರುವರು. ಆದರೆ ಬ್ರಿಟಿಷರ ಫಿರಂಗಿಗಳು ಶತ್ರುಗಳ ಈ ಕಾಲಾಳು ಸೇನೆಯನ್ನು ಅಟ್ಟಿರುತ್ತದೆ. ಅರ್ಮೆಂಟಿಯರ್‌ನಲ್ಲಿ ಶತ್ರುಗಳು ರೈಫಲ್ ಮತ್ತು ಫಿರಂಗಿಗಳನ್ನು ಹಾರಿಸಿರುವರು. ಇತರ ಕೆಲವು ಸ್ಥಳಗಳಲ್ಲಿ ಶತ್ರುಗಳು ಸಿಡಿಮದ್ದಿನ ಗಣಿಗಳನ್ನು ಹಾರಿಸಿರುವರು. ಆದರೆ ಹಾನಿಯಾಗಲಿಲ್ಲ. ಮಾರಿಕೋರ್ಟ್‌ಲಾಸ್ ಮತ್ತು ಲಾಬಾಸ್ಸೆಯ ಮಧ್ಯೆ ಅರ್ಮೆಂಟಿಯರಿನ ಪಶ್ಚಿಮದಲ್ಲಿ ಶತ್ರುಗಳ ತೋಪುಗಳು ಬಹಳ ಜೋರಾವರಿಯಿಂದ ಹಾರಿಸಲ್ಪಡುತ್ತಿವೆ. ಬ್ರಿಟಿಷರು ಅದಕ್ಕೆ ಪ್ರತಿಯಾಗಿ ಗುಂಡುಹಾರಿಸಿ ಶತ್ರುಗಳ ಕೆಲವು ಕಂದಕಗಳನ್ನು ನಾಶಮಾಡಿರುವರು.

ಜನವರಿ ತಾ. ೯ರ ವರೆಗೆ ಬ್ರಿಟಿಷ ಸೇನಿಕರಲ್ಲಿ ಪ್ರಾಣಹಾನಿಹೊಂದಿದವರ ಸಂಖ್ಯೆ ಪ್ರಕಟವಾಗಿರುತ್ತದೆ. ಫ್ರಾನ್ಸಿನಲ್ಲಿ ೮೭,೩೬೮ ಮಂದಿ ಹತರಾದರು, ೨,೫೯೯,೧೦೭ ಮಂದಿ ಗಾಯ ಒಡೆದಿರುವರು, ೫೪,೦೩೫ ಮಂದಿ ಕಾಣೆಯಾಗಿರುವರು. ಡಾರ್ಡನೆಲ್ಲಿನಲ್ಲಿ ೨೮,೨೦೦ ಮಂದಿ ಹತರಾಗಿರುವರು, ೭೮,೦೯೫ ಮಂದಿ ಗಾಯಒಡೆದಿರುವರು, ೧೧,೨೫೪ ಮಂದಿ ಕಾಣೆಯಾಗಿರುವರು. ಇತರ ರಣರಂಗಗಳಲ್ಲಿ ೧೩,೬೯೦ ಮಂದಿ ಹತರಾಗಿರುವರು, ೧೫,೯೮೧ ಮಂದಿ ಗಾಯಒಡೆದಿರುವರು, ೨೭೫೬ ಮಂದಿ ಕಾಣೆಯಾಗಿರುವರು.

ಮಿತ್ರರ ವಾಯುನಾವಿಕರು ಫ್ರೈಬರ್ಗಿನ ಮೇಲೆ ೩೮ ಬೊಂಬುಗಳನ್ನು ಎಸೆದಿರುವರು. ಫ್ರೈಬರ್ಗ ಪಟ್ಟಣವು ಕೀಲ್ ಕಾಲುವೆಯ ಒಂದು ಬಂದರವಾಗಿರಬಹುದು. ಫ್ರೈಬರ್ಗಿನ ಮಿಲಿಟರಿ ಸ್ಟೇಶನುಗಳಿಗೆ ಇದರಿಂದ ಬಹಳ ನಷ್ಟವಾಗಿರುವದು.

ಕಳೆದ ಸಾಯಂಕಾಲ ೧೦ ಘಂಟೆಗೆ ಜರ್ಮನರ ಜೆಪ್ಪಲಿನ್ ವಾಯುನಾವೆಯು ಪಾರಿಸ್ ನಗರದ ಮೇಲೆ ಬೊಂಬುಗಳನ್ನು ಹಾಕಿರುತ್ತದೆ. ೯ ಘಂಟೆ ಹೊಡೆದು ೨೦ ನಿಮಿಷವಾಗುತ್ತಲೇ ಜೆಪ್ಪಲಿನ್ ವಾಯು ನಾವೆಯು ಕಾಣಿಸಿಕೊಂಡದ್ದರಿಂದ ಕೂಡಲೇ ಪಟ್ಟಣದ ದೀಪಗಳನ್ನು ನಂದಿಸಿ, ಬೀದಿಯಲ್ಲಿ ಕೊಳಲು ಊದಿ

ಜನರಿಗೆ ಸಲಹೆ ಕೊಡಲಾಯಿತು. ರಾತ್ರಿ ೩೦ ಗಂಟೆಗೆ ಮೊದಲನೆಯ ಸಾರಿ ಬೊಂಬು ಸಿಡಿಯಿತು. ಜೆಫಲಿನ್ ನಾವೆಯು ಕೆಲವು ಬೊಂಬುಗಳನ್ನು ಹಾಕಿತು ಅನೇಕ ಕಡೆ ನಷ್ಟವಾಗಿರುವದು. ಒಂದು ಸ್ಥಳದಲ್ಲಿ ೧೫ ಮಂದಿ ಹತರಾದರು. ಮತ್ತೊಂದು ಕಡೆಯಲ್ಲಿ ಒಬ್ಬ ಗಂಡಸು, ಮೂರು ಹೆಂಗಸರು, ಇಬ್ಬರು ಮಕ್ಕಳು ಹತರಾದರು. ಕೆಲವು ಫ್ರೆಂಚರ ವಾಯುನಾವೆಗಳು ಜೆಫಲಿನ್ ನಾವೆಯನ್ನು ಅಟ್ಟಿಕೊಂಡು ಹೋದವು ಆದರೆ ಅದು ಬಹಳ ಎತ್ತರದಲ್ಲಿದ್ದು ತಪ್ಪಿಸಿಕೊಂಡು ಹೋಯಿತು ಒಟ್ಟಿಗೆ ಜೆಫಲಿನ್ ನಾವೆಯು ೧೩ ಬೊಂಬುಗಳನ್ನು ಹಾಕಿರುವದು ೯ ಮನೆಗಳು ಬಿದ್ದಿರುವವು, ೨೪ ಮಂದಿ ಮೃತರಾದರು, ೨೮ ಮಂದಿ ಗಾಯ ಒಡೆದರು

ಚೀನಾ ದೇಶದಲ್ಲಿ ದಂಗೆಗಾರರ ಚಳವಳವು ನಿಂತಿಲ್ಲ. ದಂಗೆಗಾರರು ಮುಂದರಿದು ತಾ ೨ನೇ ತಾರೀಖಿನಲ್ಲಿ ಸುಫು ಎಂಬ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿರುವರು ಸರಕಾರದ ಸೇನೆಯು ಚೆಂಗ್‌ಟಿಂಗಿಗೆ ತಲಪಿರುವದು

ರಶ್ಯಾ ರಣರಂಗದಲ್ಲಿ ರಿಗಾ ಪ್ರಾಂತ್ಯದಲ್ಲಿ ತೋಫು ಕಾಳಗವು ನಡೆಯುತ್ತದೆ ಶತ್ರುಗಳ ವಾಯು ನಾವೆಗಳು ಕೆಲವು ಸ್ಥಳಗಳ ಮೇಲೆ ಬೊಂಬುಗಳನ್ನು ಹಾಕಿರುತ್ತವೆ ನಿಸಿಕಿನ ಮೇಲೆ ಬೊಂಬುಗಳನ್ನು ಹಾಕಿದವು ಸರಂಟಿನ್ ಸರೋವರದ ಬಳಿ ರುಶ್ಯನರ ತೋಫು ಸೇನೆಯು ಜರ್ಮನರ ದೊಡ್ಡ ಸೇನೆಯನ್ನು ಅಟ್ಟಿರುತ್ತದೆ

ತಾ ೨ನೇ ತಾರೀಖಿನಲ್ಲಿ ಫ್ರೆಂಚರ ವಾಯುನಾವೆಗಳು ಬಜ್ಯಾಲಿಯಲ್ಲಿರುವ ಜರ್ಮನ ಮತ್ತು ಬಲ್ಗೇರಿಯನರ ಸೇನಾಪಾಳೆಯಗಳ ಮೇಲೆ ಬೊಂಬುಗಳನ್ನು ಬಿಸಾಡಿರುತ್ತವೆ ಶತ್ರುಗಳಿಗೆ ಬಹಳ ನಷ್ಟವಾಗಿರುವದು

ಅಲ್ಬೇನಿಯದಿಂದ ಸರ್ವಿಯ ಸೇನೆಯು ಹಿಂದೆ ಕರೆಯಲ್ಪಟ್ಟಿರುವದು

ಇಟಲಿಯನರು ಡುರಾಜ್ಜೊ ಪಟ್ಟಣವನ್ನು ಕಾಪಾಡುವ ಬದಲಿಗೆ ವಲೋನವನ್ನು ಕಡೆಯ ವರೆಗೆ ಕಾಪಾಡಬೇಕೆಂಬ ನಿರ್ಣಯ ಮಾಡಿರುವರು

ಫ್ರೆಂಚರು ಸಲೋನಿಕದ ಆನೋವೆಲ್ ಎಂಬಲ್ಲಿ ಸೇನೆಯನ್ನು ಇಳಿಸಿರುವರು

ಬ್ರಿಟಿಷ, ಫ್ರೆಂಚ, ರಶ್ಯ, ಇಟಲಿ ಯುದ್ಧ ಹಡಗಗಳಲ್ಲಿದ್ದ ಸೈನಿಕರು ಜನವರಿ ತಾ ೨೮ರಲ್ಲಿ ಕರಬರ್ನ ಅರ್ಧ ದ್ವೀಪದಲ್ಲಿ ಇಳಿದು ಅಲ್ಲಿದ್ದ ಗ್ರೀಕರ ಕೋಟೆಗಳನ್ನು ಹಿಡಿದಿರುವರು ಗ್ರೀಕ ಸೇನಾಧಿಪತಿಯು ಇದಕ್ಕೆ ಸಮ್ಮತಿ ಕೊಡಲಿಲ್ಲ ಆದರೆ ಫ್ರೆಂಚ ಸೇನಿಕರ ದಳಕ್ಕೆ ಇಳಿದು ಕೋಟೆಯನ್ನು ಮುತ್ತಿ ಶಸ್ತ್ರದಿನ ಕಟ್ಟಡ ಇತ್ಯಾದಿಗಳನ್ನು ಜಪ್ತಿ ಮಾಡಿ, ನಿವಾಸಿಕರು ಆ ಸ್ಥಳವನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆ ಮಾಡಿದರು ಈ ಕರಾವಳಿಯಿಂದ ಜರ್ಮನ್ ಜಲಂತರ್ಗಾಮಿ ನಾವೆಗಳಿಗೆ ಆಶ್ರಯ ದೊರಕುತ್ತದೆಂಬ ಅನುಮಾನದಿಂದ ಮಿತ್ರರು ಈ ಕಾರ್ಯವನ್ನು ಮಾಡಿದ್ದಾಗಿರುತ್ತದೆ

ಇಸೊನ್ಜೊದಲ್ಲಿ ಆಸ್ಟ್ರಿಯನರು ಮೂರಾವರ್ತಿ ಇಟಲಿಯನರ ಮೇಲೆ ಹಲ್ಲಾ ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು ಕಡೆಗೆ ಆಸ್ಟ್ರಿಯಾನರು ಓಡಿ ಹೋದರು ಅವರು ಬಿಟ್ಟು ಹೋದ ಸ್ಥಳವನ್ನು ಇಟಲಿಯಾನರು ಪುನಃ ಸ್ವಾಧೀನ ಮಾಡಿಕೊಂಡಿರುವರು.

ಇಟಲಿಯಾನರು ಟ್ರೆಂಟೀನೋ ಪ್ರಾಂತ್ಯದಲ್ಲಿ ಬಹಳ ನಿವಾಸಿಕರಿರುವ ಸ್ಥಳವನ್ನು ಸ್ವಾಧೀನ ಮಾಡಿಕೊಂಡು ಆಸ್ಟ್ರಿಯಾನರು ವನೀಸಿಯದ ಮೇಲೆ ನುಗ್ಗಿ ಬರಲಿಕ್ಕಿದ್ದ ದಾರಿಗಳನ್ನು ಹಿಡಿದಿರುತ್ತಾರೆ. ಇಸನ್ಜೋ ಪ್ರಾಂತ್ಯದಲ್ಲಿ ಆಸ್ಟ್ರಿಯಾನರ ಅನೇಕ ಫಿರಂಗಿಗಳೂ ೩೦ ಸಾವಿರ ಸೇನಿಕರೂ ಸೆರೆಬಿದ್ದಿರುವರು.

ಎರ್ಜೆರಮಿನಲ್ಲಿ ತುರ್ಕರ ಎರಡು ಸೇನಾಂಗಗಳು ಇವೆ ಎಂತಲೂ ಇದಕ್ಕೆ ಬೆಂಬಲ ಸೇನೆಯು ಹೋಗಿ ಕೂಡುವ ಉಪಾಯವಿಲ್ಲವೆಂದೂ ಪ್ರಕಟವಾಗಿದೆ

ತಾ. ೧ನೇ ಫೆಬ್ರುವರಿ.

ಉತ್ತರ ಕಡಲಲ್ಲಿ ಬ್ರಿಟಿಷ ಮತ್ತು ಜರ್ಮನ ಯುದ್ಧನಾವೆಗಳು ಕಾಣಿಸಿಕೊಂಡಿರುವವು.

ಪಾರಿಸ್ ನಗರದ ಮೇಲೆ ಜರ್ಮನರ ಇನ್ನೊಂದು ಜೆಫಲಿನ್ ನಾವೆಯು ಹಾರಿ ಕೆಲವು ಬೊಂಬುಗಳನ್ನು ಹಾಕಿ ಒಂದೇ ನಿಮಿಷದೊಳಗೆ ಹಿಂದಕ್ಕೆ ಹೋಗಿರುವದು. ಇದರಿಂದ ಪಾರಿಸಿನಲ್ಲಿ ಪ್ರಾಣಾಪಾಯ ಸಂಭವಿಸಲಿಲ್ಲ.

ಉತ್ತರ ಹಿಂದೂಸ್ಥಾನ.

ಭರತಖಂಡದ ವೃದ್ಧ ಪಿತಾಮಹರೆಂದು ಕರೆಯಲ್ಪಡುವ ದಾದಾಭಾಯಿ ನೌರೋಜಿಯವರಿಗೆ ಮುಂಬಾಯಿ ಯುನಿವರ್ಸಿಟಿಯವರು ಡಾಕ್ಟರ್ ಆಫ್ ಲೋ ಎಂಬ ಬಿರುದನ್ನು ದಯಪಾಲಿಸುವ ಸಮಾರಂಭವು ಇದೇ ಕಳೆದ ಜನವರಿ ತಾ ೨೨ರಲ್ಲಿ ಮುಂಬಾಯಿ ಯುನಿವರ್ಸಿಟಿಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಯುನಿವರ್ಸಿಟಿ ಸಭಾಸದನದಲ್ಲಿ ಹಿಂದೆ ಅನೇಕ ಇಂಥಾ ಸಮಾರಂಭಗಳು ನಡೆದಿರುವದಾದರೂ ಈ ದಿನದಷ್ಟು ಜನರನ್ನು ಆಕರ್ಷಿಸುವ ಸಮಾರಂಭವು ಹಿಂದೆ ಎಂದೂ ನಡೆದಿಲ್ಲ ಯುನಿವರ್ಸಿಟಿಯ ವಿಶಾಲವಾದ ಸಭಾಸದನದಲ್ಲಿ ಇದೊಂದಾಗಿದ್ದ ಒಂದೇ ಒಂದು ಆಸನವಾದರೂ ಖಾಲಿ ಇರಲಿಲ್ಲ ವೃದ್ಧ ಪಿತಾಮಹರು ತನ್ನ ಮಗಳು ಮತ್ತು ಮಾನ್ಯ ವಾಚಾರವರ ಸಹಾಯದಿಂದ ಒಳಗೆ ಒಂದು ಆಸೀನರಾಗುವವರೆಗೆ ಕೂಡಿದ್ದ ಸಭಾ ಜನರೆಲ್ಲರೂ ನಿಂತುಕೊಂಡು ಧನ್ಯವಾದಗಳನ್ನಿತ್ತರು ೧೦ ವರ್ಷಗಳಿಂದೀಚೆಗೆ ದಾದಾಭಾಯಿ ನೌರೋಜಿಯವರು ಮುಂಬಾಯಿಗೆ ಬರಲಿಲ್ಲವಾದುದರಿಂದ ಸಭಿಕರೆಲ್ಲರೂ ಅತ್ಯಾಶ್ಚರ್ಯದಿಂದ ಇವರನ್ನು ದೃಷ್ಟಿಸಿ ಪ್ರತಿಕ್ಷಣದಲ್ಲೊಂಬಂತೆ ಧನ್ಯವಾದವನ್ನಿತ್ತರು ಯುನಿವರ್ಸಿಟಿ ಚೇನ್ಸಲ್ಲರಾದ ಮುಂಬಾಯಿ ಗವರ್ನರರವರು ಚಿತ್ತೈಸಿ ದಾದಾಭಾಯಿ ನೌರೋಜಿಯವರ ಸಮೀಪದಲ್ಲೇ ಕುಳಿತು ಕುಶಲ ಸಲ್ಲಾಪವನ್ನು ಮಾಡುತ್ತಿದ್ದರು ನಿಯಮಿತ ಸಮಯದಲ್ಲಿ ವೈಸ್ ಚೇನ್ಸಲ್ಲರವರು ಕಾಲೋಚಿತ ಭಾಷಣವನ್ನು ಕೊಟ್ಟು ಕಡೆಗೆ ಮಾನ್ಯ ದಾದಾಭಾಯಿ ನೌರೋಜಿಯವರಿಗೆ ಬಹುಮಾನ ಡಿಗ್ರಿಯನ್ನು ದಯಪಾಲಿಸಬೇಕೆಂದು ಚೇನ್ಸಲ್ಲರನ್ನು ಕೇಳಿಕೊಂಡರು ಚೇನ್ಸಲ್ಲರು ದಾದಾಭಾಯಿ ನೌರೋಜಿಯವರ ಗುಣಕಥನವನ್ನು ಮಾಡುವ ಭಾಷಣದೊಂದಿಗೆ ಬಹುಮಾನ ಡಿಗ್ರಿಯನ್ನು ದಯಪಾಲಿಸಿದರು

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು ಮುಂಬಾಯಿಯ ಪತಿತ ಜನಸಮುದಾಯದವರಾದ ದಾರಿ ಗುಡಿಸುವವರು, ಹಲಾಲು ಖೋರರು ಮೊದಲಾದವರೊಳಗೆ ಪರಸ್ಪರ ಸಹಾಯಕ ಸಂಘಗಳನ್ನೇರ್ಪಡಿಸುವರೆ ಮಾಡಿದ ಪ್ರಯತ್ನವು ಫಲದಾಯಕವಾಗಿರುವದು ಈ ತರಗತಿಯ ಜನರ ಸ್ಥಿತಿಗತಿಗಳನ್ನು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು ಚನ್ನಾಗಿ ಪರಿಶೀಲಿಸಿ ಇವರೊಳಗೆ ಪರಸ್ಪರ ಸಹಾಯ ಸಂಘಗಳನ್ನೇರ್ಪಡಿಸಿದರೆ ಇವರ ಉದ್ಧರಣೆಯಾದೀತು ಎಂಬ ನಿಶ್ಚಯವನ್ನು ಮಾಡಿ ೧೯೧೩ನೇ ಇಸವಿಯಲ್ಲಿ ಇಂಥಾ ಮೂರು ಕೋ ಒಪರೇಟಿವ್ ಕ್ರೆಡಿಟ್ ಸೊಸೈಟಿಗಳನ್ನು ಸ್ಥಾಪಿಸಿದರು ೨ ವರ್ಷಗಳೊಳಗೆ ಇಂಥಾ ೧೪ ಸಂಘಗಳು ಸ್ಥಾಪಿಸಲ್ಪಟ್ಟು ಈ ಸಂಘಗಳಲ್ಲಿ ೪೭೮ ಮೆಂಬರರು ಸೇರಿದರು ಈ ಪೈಕಿ ೩೬೩ ಮೆಂಬರರು ತಮ್ಮ ಸಾಲವನ್ನು ಹಿಂದಕ್ಕೆ ಕೊಡಲು ಪೂರ್ಣ ಅಶಕ್ತರಾಗಿದ್ದರು ಒಬ್ಬೊಬ್ಬನಿಗೆ ರೂ ೩೦೦ ಸಾಲವಿತ್ತು ಒಟ್ಟಿಗೆ ೧,೧೦,೦೦೦ ರೂಪಾಯಿಗಳ ಈ ಸಾಲವನ್ನು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು ಸಾಲಿಗರೊಡನೆ ಮಾತನಾಡಿ ೮೬,೯೪೪ ರೂಪಾಯಿಗಳನ್ನು ತೆರಸಿ ಕೋಓಪರೇಟಿವ್ ಸೊಸೈಟಿಗಳಿಂದ ೮೬,೯೪೪ ರೂಪಾಯಿಗಳನ್ನು ಮೆಂಬರರ ಲೆಕ್ಕದಲ್ಲಿ ಸಾಲಿಗರಿಗೆ ಕೊಡಿಸಿದರು. ಮೆಂಬರರು ೨ ವರ್ಷದೊಳಗೆ ತಮ್ಮ ಸಾಲದಲ್ಲಿ ೪೯,೦೬೩ ರೂಪಾಯಿಗಳನ್ನು ಸೊಸೈಟಿಗೆ ಪಾವತಿ ಮಾಡಿದರು. ಅಂದರೆ ಸುಮಾರು ಅರ್ಧಾಂಶ ಸಾಲ ತೀರಿದಂತಾಯಿತು. ಉಳಿದ ಹಣವನ್ನು ಪಾವತಿ ಮಾಡುತ್ತಿರುವರಲ್ಲದೆ ತಕ್ಕ ಬಡ್ಡಿಯನ್ನು ಕೊಡುತ್ತಲಿದ್ದಾರೆ ಸೊಸೈಟಿಯಿಂದ ಸಾಲ ಪಡಕೊಂಡ ಮೆಂಬರರಲ್ಲಿ ೨೪೭ ಮಂದಿ ರೂ. ೨೫೦ಕ್ಕೆ ಸೊಸೈಟಿಯಲ್ಲಿ ಜೀವವಿಮೆ ಮಾಡಿರುವರು. ಕೋ-ಓಪರೇಟಿವ್ ಚಿಕಿತ್ಸಾಲಯ ಮತ್ತು ರಾತ್ರೆ ಶಾಲೆಗಳು ಈ ಪತಿತರ ಬಗ್ಗೆ ಸ್ಥಾಪಿಸಲ್ಪಟ್ಟಿರುವವು.

ಜನವರಿ ತಾ. ೨೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೮೯೯೫ ಮಂದಿಗೆ ಪ್ಲೇಗಬೇನೆಯು ಸೋಂಕಿ ೬೮೯೦ ಮಂದಿ ಸತ್ತಿರುವರು ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೨೨೬೫, ಮದ್ರಾಸ್ ಸಂಸ್ಥಾನ ೫೦೨, ಬಂಗಾಳ ೪, ಬಿಹಾರ್ ಮತ್ತು ಒರಿಸ್ಸ ೪೭೧, ಸಂಯುಕ್ತ ಸಂಸ್ಥಾನ ೧೧೯೮, ಪಂಜಾಬು ೭೧, ಬರ್ಮ ೨೪೩, ಮಧ್ಯಸಂಸ್ಥಾನ ೯೭೧, ಮೈಸೂರು ೧೪೩ ಹೈದರಾಬಾದ್ ೯೨೬, ಮಧ್ಯಹಿಂದೂಸ್ಥಾನ ೯೬ ಮರಣಗಳಾದವು.

ಬಂಗಾಳದ ಮಲ್ದಾ ಜಿಲ್ಲಾ ಶಾಲೆಯ ಹೆಡ್ ಮಾಸ್ತರರನ್ನು ಕೆಲವು ವಿದ್ಯಾರ್ಥಿಗಳು ಕೂಡಿ ತಿವಿದು ಕೊಂದಿರುವರೆಂಬ ಭಯಂಕರ ವಾರ್ತೆಯು ಬಂದಿರುವದು ಹೆಡ್ ಮಾಸ್ತರರು ಶಾಲೆಯಿಂದ ಮನೆಗೆ ಹಿಂದೆ ಬರುವಾಗ ಆರು ವಿದ್ಯಾರ್ಥಿಗಳು ಅವರ ಮೇಲೆ ಬಿದ್ದು ತಿವಿದು ಗಾಯಪಡಿಸಿ, ಓಡಿಹೋದರು. ಹೆಡ್ ಮಾಸ್ತರರನ್ನು ಚಿಕಿತ್ಸಾ ಬಗ್ಗೆ ಆಸ್ಪತ್ರೆಗೆ ಕೊಂಡುಹೋದಲ್ಲಿ ಕೂಡಲೇ ಸತ್ತು ಹೋದರು ಅನುಮಾನದ ಮೇಲೆ ಪೋಲಿಸಿನವರು ಕಲ್ಕತ್ತಾ ಕಾಲೇಜು ವಿದ್ಯಾರ್ಥಿಗಳಲ್ಲಿ ಒಬ್ಬನನ್ನು ಕೈದುಮಾಡಿದ್ದಲ್ಲಿ ಅವನು ತಪ್ಪಿಸಿಕೊಳ್ಳಲು ಬಹಳ ಪ್ರಯತ್ನ ಮಾಡಿದನು. ಆದರೆ ಸಾಧ್ಯವಾಗಲಿಲ್ಲ. ಅವನ ಒಳ ಅಂಗಿಯ ಜೇಬಿನಲ್ಲಿ ಒಂದು ರಿವಾಲ್ವರ್ ಇತ್ತು ಈ ವಿದ್ಯಾರ್ಥಿಯ ಬಿಡಾರವನ್ನು ಪೋಲಿಸ ಇಲಾಖೆಯವರು ಮುತ್ತಿ ಜಪ್ತಿಮಾಡಿರುವರು.

ವೈಸರಾಯ ಹಾರ್ಡಿಂಜ ಪ್ರಭುಗಳವರ ಶಿಲಾ ಪ್ರತಿಮೆಯೊಂದು ಬಂಕೀಪುರದ ಉದ್ಯಾನವನದಲ್ಲಿ ಜನವರಿ ತಾ ೩೧ರಲ್ಲು ಲೆಫ್ಟನೆಂಟ ಗವರ್ನರರಾದ ಸರ್ ಎಡ್ವರ್ಡ್ ಗೈಟ್‌ರವರಿಂದ ಪ್ರತಿಷ್ಠಿತವಾಗಿರುವದು.

ದಕ್ಷಿಣ ಹಿಂದೂಸ್ಥಾನ.

೫೫ ವರ್ಷ ವಯಸ್ಸಿನ ಮುನಿಸ್ವಾಮಿ ಎಂಬವನು ೪ ವರ್ಷದ ಒಂದು ಮಗುವನ್ನು ಕಳವು ಮಾಡಿ ಅದರ ಮೇಲಿದ್ದ ಬೆಳ್ಳಿಯ ಕೈಕಡಗವನ್ನು ಅಪಹರಿಸಿರುವನೆಂಬದಾಗಿ ಮದ್ರಾಸ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು. ಈ ಅಪಾದಿತನ ವಯಸ್ಸು ೫೫. ಆದರೆ ೫೨ ವರ್ಷ ಬಂದಿಖಾನೆಯಲ್ಲಿದ್ದನೆಂಬದಾಗಿ ತಿಳಿದುಬರುವದು. ಬೇಸಿನ್‌ಬ್ರಿಡ್ಜ ಬಳಿಯಲ್ಲಿ ಅಪಾದಿತನು ಮಗುವಿನ ಕೈಕಡಗವನ್ನು ಎಳೆಯುವಾಗ ಮಗುವು ಕೂಗಿಕೊಂಡದ್ದರಿಂದ ಪೋಲಿಸಿನವರು ಅವನನ್ನು ಕೈದು ಮಾಡಿದರು. ಈ ಮನುಷ್ಯನು ಕೆಲವು ಬಾಷೆಗಳನ್ನಾಡುವನು ತಾನು ಕಲಿತಿರುವನು

...ಕೇಳಿದನು. ಆದರೆ ಅವನಿಗೆ ಕಲ್ಪತ್ತೆಯ ವಿಷಯ ಹೆಚ್ಚಿ ...ನೇನೂ ಗೊತ್ತಿಲ್ಲ. ಹೀಗೆ ಅವನ ಪೂರ್ವ-ಚರಿತ್ರೆಯನ್ನು ...ಹೊತ್ತುಮಾಡಿದ್ದಲ್ಲಿ ೧೮೭೫ನೇ ಇಸವಿಯಲ್ಲಿ ಈತನು ...ಕ್ಷೀರು ನಡೆಸ ಪ್ರಾರಂಭಿಸಿದನು. ಮೊದಲನೇ ತಕ್ಸೀ ...ಗೆ ೧೦ ಕೊರಡೆ ಪೆಟ್ಟುಗಳು ಸಿಕ್ಕಿದವು. ಮರುವರುಷ ...ತಿಂಗಳ ಸಜೆಗೆ ಗುರಿಯಾದನು. ಅನಂತರದ ೧೮ ...ವರ್ಷಗಳಲ್ಲಿ ೩ ಸಾರಿ ಶಿಕ್ಷೆಗೆ ಗುರಿಯಾಗಿ ೧೭॥ ವರ್ಷ ...ಸಜಾ ಅನುಭವಿಸಿದನು. ಬಳಿಕ ೧೮೯೯ರಲ್ಲಿ ಒಂಕೋಲೆ ...ಕ್ಷೆ ವಿಧಿಸೋಣಾಯಿತು. ಅಂದಮಾನದಿಂದ ಒಂದ ...೧೯೧೫ರಲ್ಲಿ ೪ ವರ್ಷ ಸಜಾ ವಿಧಿಸೋಣಾಗಿ ...ಳೆದ ದಶಂಬ್ರ ತಾ ೭ರಲ್ಲು ಬಿಡುಗಡೆ ಹೊಂದಿ ಪುನಃ ...ದೇ ತಿಂಗಳ ತಾ. ೧೫ರಲ್ಲು ಮಗುವಿನ ಆಭರಣ ಕಳವು ಮಾಡಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು.

ಮದ್ರಾಸಿನ 'ಡಾಕ್ಟರ್ ಕೃಷ್ಣಸ್ವಾಮಿಯವರು ...ಆಯುರ್ವೇದ ಚಿಕಿತ್ಸಾಲಯದ ಪಾರುಪತ್ಯವನ್ನು ನಡಿಸು ...ತ್ತಿದ್ದಾರೆಂಬ ಆಪೋಪಣೆಯ ಮೇಲೆ ಮದ್ರಾಸ್ ಮೆಡಿಕಲ್ ಕೌನ್ಸಿಲಿನವರು ಅವರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಿದರೆಂದು ತಿಳಿಸೋಣಾಗಿತ್ತಷ್ಟೆ. ಮೆಡಿಕಲ್ ಕೌನ್ಸಿಲಿನವರ ಈ ತೀರ್ಮಾನವನ್ನು ಆಯಾ ಪತ್ರಿಕೆಗಳೂ, ಪ್ರಜಾ ಮುಂದಾಳುಗಳೂ ಖಂಡಿಸಿದ ನಂತರ ಡಾಕ್ಟರ್ ಕೃಷ್ಣಸ್ವಾಮಿಯವರು ಮದ್ರಾಸ್ ಸರಕಾರಕ್ಕೆ ಈ ವಿಷಯ ಮನವಿಮಾಡಿಕೊಂಡರು. ಮದ್ರಾಸ್ ಸರಕಾರದವರು ಈಗ ತಾನೇ ಮೆಡಿಕಲ್ ಕೌನ್ಸಿಲಿನವರ ತೀರ್ಮಾನವನ್ನು ತೆಗೆದು ಹಾಕಿರುತ್ತಾರೆ

ಕುನ್ನೂರಿನ ಒಂದರೆ ಸ್ತ್ರೀಸಂಗ ಮೊಕದಮೆಯು ಕೊಯಮುತ್ತೂರು ಸೆಶ್ಶನ್ಸ್ ಕೋರ್ಟಿನಲ್ಲಿ ತನಕಿಯಾಗುವಾಗ ಅಪಾದಿತರ ಕಡೆಯಿಂದ ಬೆರಿಷ್ಟರ್ ನೋರ್ಟನ್ ರವರು ವ್ಯವಹರಿಸಲು ಬಂದಿದ್ದರೆಂದು ಹಿಂದೆ ತಿಳಿಸೋಣಾಯಿತ್ತಷ್ಟೆ. ಸೆಶ್ಶನ್ಸ್ ಜಡ್ಜರು ತಾ. ೩೧ರಲ್ಲು ಇಬ್ಬರು ಅಪಾದಿತರನ್ನೂ ಖುಲಾಸುಪಡಿಸಿದರು.

ಮದ್ರಾಸ್ ನ್ಯಾಯವಿಧಾಯಕ ಸಭೆಯು ಇದೇ ತಾ ೧೯ರಲ್ಲು ಮದ್ರಾಸ್ ಗವರ್ನರರಾದ ಪೆಂಟಲೆಂಡ್ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಕೂಡಿಬಂದಿರುವದು.

ದಕ್ಷಿಣ ಕನ್ನಡ.

ಪುತ್ತೂರು:— ಇತ್ತಕಡೆ ಕೆಲವು ಕಾಲದಿಂದೀಚೆಗೆ ಊರೂರು ಸಂಚಾರವಮಾಡಿ ಮನೆ ಮನೆಗೆ ಬಂದು ಹಂದಿ ನಾಯಿ ಆಡು ಮುಂತಾದ್ದನ್ನು ಎತ್ತಿಕೊಂಡು ಹೋಗಿ ಜಾನುವಾರುಗಳನ್ನು ಹಿಡಿದು ಭಕ್ಷಿಸುತ್ತಾ ಊರ ಜನರಿಗೆ ಭಯಾಸ್ಪದವನ್ನು ಉಂಟುಮಾಡುತ್ತಿದ್ದ ಹಿಂದು ಹುಲಿಯು ಕೆಲವು ದಿವಸಗಳ ಹಿಂದೆ ಬಣ್ಣೂರು ಗ್ರಾಮದ ಬಂಟ್ರಕಲ್ಲ ಮೊಟ್ಟು ಐತಪ್ಪರೈ ಎಂಬವರು ಹೊಡೆದ ಗುಂಡಿನ ಏಟು ಗಣ್ಯಮಾಡದೆ ಪಲಾಯನ ಮಾಡಿ ಪುತ್ತೂರು ಕಸಬಾ ಗ್ರಾಮದ ಕುಡಮರ ಎಂಬಲ್ಲಿಯ ದಿಯೋಗ ಸೋಜ ಎಂಬವರ ಮೈಮೇಲೆ ಬಿದ್ದು ಘಾಯ ಮಾಡಿತು. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುತ್ತಾರೆ. ಅನಂತರ ಕೆಮ್ಮಿಂಜೆ ಗ್ರಾಮದ ಕರಿಯಾಲ ಎಂಬಲ್ಲಿ ತನ್ನ ಮನೆ ಹಿಂದೆ ಗುಡ್ಡೆಯಲ್ಲಿ ಬೆರಣೆ ಹೆಕ್ಕಿಕೊಂಡಿರುತ್ತಿದ್ದ ದ್ರಾವಿದ ಕಿಟ್ಟಂವರ ೭ ವರ್ಷ ಪ್ರಾಯದ ಹುಡುಗನನ್ನು ಘಾಯಪಡಿಸಿತು. ಅವನನ್ನು ಆಸ್ಪತ್ರೆಗೆ ವೈದ್ಯಾಗ್ಯೂ ಮರುದಿನ ಮೃತಪಟ್ಟನು. ಇದೇ ತಾ. ೨೯ರಲ್ಲು ಸಂಪ್ಯ ಬಡ್ಡ ಬ್ಯಾರಿ ಮಗ ಮೈದಿನಕುಟ್ಟಿ ಬ್ಯಾರಿಗಳವರು ಹುಲಿಯನ್ನು ಹುಡುಕಾಡಿ ಕೆಮ್ಮಿಂಜೆ ಜಮೀನುದಾರ ಮ॥ ರಾ॥ ರಾ॥ ಗೋಪಾಲ ತಂತ್ರಿಯವರ ಆಸ್ತಿ ಒಳಿಯಲ್ಲಿ ಗುಂಡು ಹೊಡೆದು ಕೊಂದರು.

ಇದೇ ೧೯೧೬-೧೭ನೇ ವರುಷದ ಬಗ್ಗೆ ಉಪ್ಪಿನಂಗಡಿ ತಾಲೂಕಿಗೆ ಸೇರಿದ ಟೋಲಗೇಟ ರಸುಂ ಗುತ್ತೆಗಳು ಫೆಬ್ರುವರಿ ತಾ ೫ರಲ್ಲು ಪುತ್ತೂರಲ್ಲಿ ರೆವಿನ್ಯು ಡಿವಿಜನಲ್ ಆಫೀಸರರಿಂದ ಏಲಂ ಮಾಡೋಣಾಗುವದ.

ಉಪ್ಪಿನಂಗಡಿ:— ದುಷ್ಕೃತ್ಯಗಳನ್ನು ನಡಿಸಿ ಈ ಕೆಲಸಗಳನ್ನು ಅಡಗಿಸುವ ಬಗ್ಗೆ ಅದ್ಭುತ ಸ್ಥಳಗಳಲ್ಲಿ ಪ್ರಮಾಣ ಮಾಡಿ ವ್ಯತ್ಯುವಿಗೆ ತುತ್ತಾಗುವದು ಎಷ್ಟು ಬುದ್ಧಿಹೀನವೆಂಬುದನ್ನು ಈಚೆಗೆ ನಡೆದ ಒಂದು ವೃತ್ತಾಂತದಿಂದ ವಾಚಕರು ತಿಳಕೊಳ್ಳುವದು ಅವಶ್ಯವಾಗಿದೆ. ಉಪ್ಪಿನಂಗಡಿ ತಾಲೂಕು ಪಂಬೆತ್ತಾಡಿ ಸುಬ್ರಾಯ ಎಂಬವರ ಹೆಂಡತಿ ಸುಮಾರು ೨೦ ವರ್ಷ ಪ್ರಾಯದ ಮುಕಾಂಬಿಕೆ ಎಂಬ ಹೆಂಗಸು ಈಗ ಸುಮಾರು ೩ ವರ್ಷಗಳಿಂದ ತನ್ನ ಗಂಡನ ಮನೆಗೆ ಹೋಗದೆ ತಂದೆಯ ಮನೆಯಲ್ಲೇ ಇದ್ದಳು ಈಚೆಗೆ ಇವಳು ಒಂದು ಗಂಡು ಮಗುವನ್ನು ಹಡದು ಸದರಿ ಮಗು ತನ್ನ ಗಂಡನಿಗೆ ಹುಟ್ಟಿದೆಂದು ಆಸ್ತಿಯ ಹಿಸೆಗೆ ಪುತ್ತೂರು ಮುನ್ಸೀಫ್ ಕೋರ್ಟಿನಲ್ಲಿ ಕೈಪೇತು ದಾಕಲು ಮಾಡಿದ್ದಕ್ಕೆ ಸದರಿ ಸುಬ್ರಾಯರು ಪ್ರಮಾಣಕ್ಕೆ ಬಿಟ್ಟ ಮೇಲೆ ಇವಳು ಪ್ರಮಾಣಕ್ಕೆ ಸಮ್ಮತಿಸಲು ಇದೇ ಕಳದ ಸನ್ ೧೯೧೫ನೇ ಇಸವಿ ಅಕ್ಟೋಬರ ತಾರೀಕು ೧೬ಕ್ಕೆ ಧರ್ಮಸ್ಥಳ ಶ್ರೀ ಮಂಜುನಾಥ ದೇವರ ಸನ್ನಿಧಿಯಲ್ಲಿ ಪ್ರಮಾಣ ನಡೆಯಿತು. ಪ್ರಮಾಣದ ದಿವಸವೇ ವಾದಿಯ ಮನೆಯಲ್ಲಿ ಒಂದು ಒಳ್ಳೇ ಹಸು ಮತ್ತು ಅದರ ಕರುವನ್ನು ಸಹ ಒಂದೇ ದಿವಸ ಹುಲಿ ಹಿಡಿಯಿತು. ಅದೂ ಅಲ್ಲದೆ ವಾದಿಗೆ ಸಹ ಅದೇ ದಿವಸ ಕಾಯಿಲೆ ಸುರುವಾಗಿ ಗಾಡಿಯಲ್ಲಿ ಮನೆಗೆ ಬಂದು ಇದೇ ಜನವರಿ ತಿಂಗಳಲ್ಲಿ ಮೃತಪಟ್ಟಳು.

ಚೊಕ್ಕಾಡಿ:— ಮೂಡ್ನೂರು ಗ್ರಾಮದಲ್ಲಿ ಜಾನುವಾರುಗಳಿಗೆ ಒಂದು ತರದ ಅಂಟುರೋಗ ತಗಲಿ ೧೫ ದಿವಸ ಕಳೆಯುತ್ತಾ ಬಂತು. ಇನ್ನೂ ವೃದ್ಧಿಯಾಗಿ ಎಲ್ಲಾ ಕಡೆ ಹರಡುತ್ತಾ ಬರುತ್ತದೆ. ಪ್ರಥಮತಾ ಮೋವು ಬಿಟ್ಟು, ಕಣ್ಣಿನಲ್ಲಿ ಬಿಳೇ ಕೀವು ಹೊರಟು, ನಂತರ ಗಂಟಲಿನ ಒಳಗೆ ಬೀಗು ಶುರುವಾಗಿ ಜ್ವರ ಬರುತ್ತಾ ಇರುತ್ತದೆ ನಂತರ ನಾಲ್ಕು ದಿವಸಕ್ಕೆ ಬೀಗು ದೊಡ್ಡದಾಗಿ ಶ್ವಾಸೋಚ್ಛ್ವಾಸ ಮಾಡಲಿಕ್ಕೆ ಸಾಧ್ಯವಾಗದೆ ಹೊಟ್ಟೆ ಉಬ್ಬರಿಸಿಕೊಂಡು ನೀರುಸೆಗಣಿ ಹಾಕುತ್ತಾ ಇದ್ದು ಸಾಯುತ್ತವೆ. ೫೦ ಜಾನುವಾರುಗಳು ಸತ್ತವು. ಈ ಕುರಿತು ಮೇಲಾಫಿಸರರು ನಿಗಾ ಕೊಡಲಿಲ್ಲವಾದರೆ ಬಡ ಗೇಣೀ ಒಕ್ಕಲುಗಳ ಪಾಡು ಏನಾದೀತೋ!

ಮಂಗಳೂರು.

ಕಳೆದ ಸಂತೆಕಟ್ಟೆಯ ಪುರವಣೆಯ ಏಲಂ ನೋಟೀಸಿನಲ್ಲಿ ಪ್ರಕಟಿಸಿದ್ದಂತೆ ಕಾಟನ್ ರತನ್ಸಿ ಸೇಟರವರ ಸಾಮಾನುಗಳು ಫೆಬ್ರುವರಿ ತಾ. ೬ಕ್ಕೆ ಅಲ್ಲ; ಕೆಲವರ ಅಪೇಕ್ಷೆ ಮೇರೆಗೆ ಫೆಬ್ರುವರಿ ತಾ. ೭ ಕ್ಕೆ ಏಲಂ ಮಾಡೋಣಾಗುವದು ಎಂತ ರಾವ್‌ಬಹದ್ದೂರ ಎನ್. ಸುಬ್ಬರಾವ್ ಮತ್ತು ರಾ। ಪುರುಷೋತ್ತಮ ನಾನ್ಜಿ ಸೇಟರವರು ತಿಳಿಸಿರುತ್ತಾರೆ.

ಕಂಕನಾಡಿ ಫಾದರ್ ಮುಲ್ಲರರ ಆಸ್ಪತ್ರೆಯ ಡಾಕ್ಟರ್ ಎಲ್. ಪಿ. ಫೆರ್ನಾಂದಿಸರವರು ಸದರಿ ಆಸ್ಪತ್ರೆಯ ಕೆಲಸಕ್ಕೆ ರಾಜಿನಾಮೆ ಕೊಡುತ್ತಾರೆಂಬ ವಾರ್ತೆ ಇದೆ.

ಯುದ್ಧದ ಸಹಾಯಾರ್ಥವಾಗಿ ಏರ್ಪಡಿಸಿರುವ ಮದ್ರಾಸ್ ಯುದ್ಧ ಫಂಡಿನ "ಲೇಡಿಸ್ ಡಿಪೋ" ಇದರ ಮಂಗಳೂರು ಶಾಖೆಯ ಸಭೆಯು ಈ ದಿನ ಸಾಯಂಕಾಲ ೫ ಗಂಟೆಗೆ ಕಲೆಕ್ಟರ ದೊರೆಗಳ ಬಂಗ್ಲೆಯಲ್ಲಿ ನಡಿಯುವದು.

ಕರಂಗಲಪಾಡಿಯ ಕೂರ್ಗ್ ಸ್ಟೂಡೆಂಟ್ಸ್ ಲೊಜ್ ಯಾನೆ ಕೊಡಗು ವಿದ್ಯಾರ್ಥಿ ಭವನದ ಮೆಂಬರರು ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘಕ್ಕೆ ತಿಂಗಳಿಗೆ ೮ ಆಣೆ ವಂತಿಗೆ ಕೊಡುವ ಸಹಾಯಕರಾಗಿದ್ದಾರೆ. ಸ್ವದೇಶವಾತ್ಸಲ್ಯದಿಂದ ಕೊಡಗು ವಿದ್ಯಾರ್ಥಿಗಳು ಮಾಡಿದ ಈ ಕೃತ್ಯವು ಇತರ ವಿದ್ಯಾರ್ಥಿಗಳ ಅನುಸರಣೆಗೆ ಯೋಗ್ಯವಾದ ಮೇಲ್‌ಪಂಕ್ತಿಯಾಗಿರುತ್ತದೆ.

I ಗ್ರೇಡ್ ಡಿಸ್ಟ್ರಿಕ್ಟ್ ಮುನ್ಸೀಫರಾಗಿದ್ದ ಮ. ರಾ. ವೆಂಕಟಸುಬ್ಬರಾವರವರು ಟೆಂಪರರಿ ಸಬ್ ಜಡ್ಜರಾಗಿ ನೇಮಿಸಲ್ಪಟ್ಟು ಗುಂಟೂರ್ ಎಡಿಶನಲ್ ಟೆಂಪರರಿ ಸಬ್ ಕೋರ್ಟಿಗೆ ವರ್ಗಾಯಿಸಲ್ಪಟ್ಟಿರುವರು

ದಕ್ಷಿಣಕನ್ನಡಾ ಜಿಲ್ಲೆಯ ದ್ರಾವಿಡ ಬ್ರಾಹ್ಮಣರ ಅಭಿವೃದ್ಧಿ ಸಾಧನೆಯನ್ನು ಮಾಡಲೆತ್ನಿಸುವ ಉದ್ದೇಶದಿಂದ ಈಚೆಗೆ ಇಲ್ಲಿ ಏರ್ಪಡಿಸೋಣಾಗಿರುವ ದ್ರಾವಿಡ ಬ್ರಾಹ್ಮಣರ ಸಂಘದ ಮೆನೇಜಿಂಗ್ ಬೋರ್ಡಿನವರು ಕೊಡಿಯಾಲಬೈಲಿನಲ್ಲಿ ಸುಮಾರು ೧॥ ಎಕ್ರೆ ವಿಸ್ತೀರ್ಣದ ಒಂದು ಸ್ಥಳವನ್ನು ರೂ ೭೫೦ಕ್ಕೆ ಖಂಡಿತ ಕ್ರಯಕ್ಕೆ ಪಡದಿರುವರು. ಈ ಸ್ಥಳದಲ್ಲಿ ವಿದ್ಯಾರ್ಥಿ ಭವನವನ್ನು ಕಟ್ಟಿಸುವ ಬಗ್ಗೆ ಇನ್ನು ಸುಮಾರು ಎಂಟ್ಹತ್ತು ಸಾವಿರ ರೂಪಾಯಿ ಬೇಕಾಗಿರುವದು ಆದರೆ ಈ ವರೆಗೆ ಸದರಿ ಸಂಘಕ್ಕೆ ೧೩ ಸಾವಿರ ರೂಪಾಯಿ ವಾಗ್ದಾನವಾಗಿದ್ದರೂ ೪ ಸಾವಿರ ರೂಪಾಯಿ ಮಾತ್ರ ವಸೂಲಾಗಿರುವದು ವಾಗ್ದಾನವಾದ ಹಣವು ಸದ್ಯದಲ್ಲೆ ವಸೂಲಾಗದಿದ್ದರೆ ಸಂಘದ ಉದ್ದೇಶವನ್ನು ನೆರವೇರಿಸುವರೆ ಆಡಳಿತಾ ಸಭೆಯವರಿಗೆ ಅನಾನುಕೂಲವಾಗುವ ಸಂಭವವಿದೆಎಂತ ತಿಳಿಯುತ್ತೇನೆ. ಈ ಜಿಲ್ಲೆಯಲ್ಲಿ ದ್ರಾವಿಡ ಬ್ರಾಹ್ಮಣರ ಸಂಖ್ಯೆಯು ಕಡಿಮೆ ಇಲ್ಲ ದ್ರವ್ಯಾನುಕೂಲತೆ ಇದ್ದವರ ಸಂಖ್ಯೆ ಎಂತೂ ಬಹಳವಿದೆ. ಆದ್ದರಿಂದ ಈ ಸಂಘದವರು ಸ್ವಜಾತಿ ಏಳಿಗೆಯ ಬಗ್ಗೆ ಕೈಕೊಂಡ ಈ ಕಾರ್ಯದಲ್ಲಿ ದ್ರಾವಿಡ ಬ್ರಾಹ್ಮಣರೆಲ್ಲರೂ ಯಥಾನುಶಕ್ತಿ ತನುಮನಧನವನ್ನರ್ಪಿಸಬೇಕೆಂದು ಹಾರೈಸುವೆವು.

ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ೮ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಯಾರಾದರೂ ಶೇಂದಿ ಶರಾಬು ಕುಡಿಯಬಾರದೆಂಬುದಾಗಿ ಸದರಿ ಸಂಘದ ಅಧಿಕಾರಿಗಳು ಕಟ್ಟಾಜ್ಞೆ ಮಾಡಿದ್ದಾರೆ. ಇದಲ್ಲದೆ ಸುಮಾರು ೫೦ ತರುಣರು ಪ್ರತಿ ದಿನವೂ ಸ್ನಾನಮಾಡಿಕೊಳ್ಳುವೆವೆಂದೂ ಸೇಂದಿ ಶರಾಬು ಎಂದೂ ಕುಡಿಯಲಾರೆವೆಂದೂ ಪ್ರತಿಜ್ಞೆ ಮಾಡಿಕೊಂಡಿರುವರೆಂತ ತಿಳಿಯುತ್ತೇವೆ

ಕುಂದಾಪುರ ಡಿವಿಜನಿನ ಹೆಡ್ ಅಸಿಸ್ಟಾಂಟ ಕಲೆಕ್ಟರರಾಗಿ ನೇಮಿಸಲ್ಪಟ್ಟ ಮೆ। ಗುಪ್ತಿ. ಐ. ಸಿ ಎಸ್. ದೊರೆಗಳವರು ತಾ. ೩೧ರಲ್ಲು ಬಂದಿರುತ್ತಾರೆ. ಇವರಿಗೆ ಚಾರ್ಜು ಕೊಟ್ಟ ನಂತರ ಕುಂದಾಪುರ ಡಿವಿಜನಲ್ ಚಾರ್ಜಿನಲ್ಲಿರುವ ಆಕ್ಟಿಂಗ್ ಡ್ಯೂಪುಟಿ ಕಲೆಕ್ಟರರಾದ ಮ ರಾ. ಡಿ ಆನಂದರಾಯರು ೩ ತಿಂಗಳ ಪ್ರಿಜರಿ ಟ್ರೈನಿಂಗ್ ಪಡೆಯಬೇಕಾಗಿರುವದು ಎಂತ ತಿಳಿಯುತ್ತೇವೆ.

ನಾಲ್ಕು ಜನರು ಕೂಡಿ ಬೆಂದೂರಲ್ಲಿರುವ ಪೋಸ್ಟ ಮೇನ್ ಮಾರ್ಕ ಮಸ್ಕರೇಂಜ್ಞಸನಿಗೆ ಹೊಡದು ಸ್ಟಾಂಪು ಇತ್ಯಾದಿಗಳನ್ನು ಸುಲಿಗೆ ಮಾಡಿದರೆಂತ ಸದರಿ ಮಾರ್ಕ ಮಸ್ಕರೆಞ್ಞಸನು ಪಿರ್ಯಾದಿ ಕೊಟ್ಟಿರುವನು.

ಪೋಸ್ಟಮೇನ್ ಮಾರ್ಕ ಮಸ್ಕರೆಞ್ಞಸನು ಜಟ್ಕಾ ಡ್ರೈವರ್ ರಸ್ಕಿಂಜನಿಗೆ ಚೂರಿ ಹಾಕಿದನೆಂಬದಾಗಿ ಪಿರ್ಯಾದಿ ಆಗಿದೆ ಸದರಿ ರಸ್ಕಿಂಜನು ಆಸ್ಪತ್ರೆಯಲ್ಲಿ ಶೈತೋಪಚಾರ ಹೊಂದುತ್ತಲಿರುವನು.

ಗೇರ್ನನೇ ಪ ದಾ ಸ್ ಟೌನ್ ನ್ಯೂಸೆನ್ಸ್ ಆಕ್ಟಿನ ಸಾರವಾಗಿ ದಕ್ಷಿಣಕನ್ನಡಾ ಜಿಲ್ಲಾ ಉಪ್ಪಿನಂಗಡಿ ಪಟ್ಟಣದ ಗಡಿಯೊಳಗೆ ನಡೆಯುವ ನ್ಯೂಸೆನ್ಸ್ ಮೊಕದ್ದಮೆಗಳನ್ನು ತನಕಿಮಾಡ ವರೆ ಮ. ರಾ ಬಳ್ಳುಂಜೆ ಮೂಡ್ಲಗಿರಿ ಶ್ಯಾನಭೋಗರು, ಮ. ರಾ ಉಪ್ಪಿನಂಗಡಿ ಪುರುಷೋತ್ತಮ ಭಟ್ಟರು, ಮ. ರಾ ಇಳಂತಿಲ ಸುಬ್ಬನ್ನಾಕರು, ಮ. ರಾ. ಉಳ್ಳಾಲ ಹಸನ್‌ಬ್ಯಾರಿ ಸಾಹೇಬ್ ಬಹದ್ದೂರ್, ಮ. ರಾ. ಎ ರಾಮಣ್ಣರೈ, ಇವರು ೩ನೇ ಕ್ಲಾಸ್ ಸ್ಪೆಶ್ಯಲ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು. ಮ। ರಾ' ಮೂಡ್ಲಗಿರಿ ಶ್ಯಾನಭೋಗರ ಬೆಂಚ್ ಚೆಯರ್‌ಮೇನರಾಗಿರುವರು.

ಹಿಂದಿನ ಸಂಚಿಕೆಯೊಂದರಲ್ಲಿ ತಿಳಿಸಿದಂತೆ ಇದೇ ಕಳೆದ ಜನವರಿ ತಾ ೭ರಲ್ಲು ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗ್ ಜರಗಿತು ಸಭೆಯ ಮುಂದೆ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರಿಂದ ಕಳುಹಿಸೋಣಾದ ಅಯಾ ಅಂದಾಜು ಪಟ್ಟಿಗಳು ಇಡೋಣಾಯಿತಲ್ಲದೆ ಹಂಗಾರಕಟ್ಟೆಯ ಬೋರ್ಡು ಶಾಲೆಯ ಕಟ್ಟೋಣದ ಬಗ್ಗೆ ರೂ ೨೪೫೦, ಕಾಸರಗೋಡಿನಲ್ಲಿ ಶಿರೆ ನದಿಯ ಸಂಕವ ದುರುಸ್ತಿ ಬಗ್ಗೆ ರೂ ೫೧೨೦, ಪಾಣೆಮಂಗಳೂರು ಸಂಕದಿಂದ ಕಂಚಿಗಾರ ಕಟ್ಟೆ ವರೆಗೆ ರಸ್ತೆಯನ್ನು ಮಾಡುವದೆ ರೂ ೨೪೫೦; ಬಸರೂರಿಗೆ ಹೋಗುವಾಗ ಸಿಕ್ಕುವ ಕೋಣಿ ನದಿಗೆ ಸಂಕ ಕಟ್ಟುವದೆ ರೂ ೨೩೦ ಸೆಂಕ್ಷನ್ ಆಗಿರುವದು.

ಮ। ರಾ। ವೈ. ಶ್ಯಾಮ ಹೆಗ್ಗಡೆಯವರು ಬಂಟ್ವಾಳದಿಂದ ಬೆಳ್ತಂಗಡಿ ವರೆಗೆ ಟ್ರಾನ್ಸಿಟು ಲೈನು ತೆರೆಯುವರೆ ನಿಶ್ಚಯಿಸಿರುವರು ಎಂತ ತಿಳಿಯುತ್ತೇವೆ

ದಿ ಯಂಗ್ ಮೆನ್ಸ್ ಯೂನಿಯನ್. ಮಂಗಳೂರು,— ಈ ಸಂಘದ ವಾರ್ಷಿಕೋತ್ಸವವು ಇದೇ ತಾ. ೬ನೇ ಆದಿತ್ಯವಾರ ಸಾಯಂಕಾಲ ೬ ಗಂಟೆಗೆ ನೀರೇಶ್ವಾಲ್ಯ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಕೂಡುವದು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧೩ ಪ್ಲೇಗು ಮರಣಗಳಿದ್ದವು. ಕುದ್ರೋಳಿ, ಬೊಕ್ಕಪಟ್ಣ ಪ್ರಾಂತ್ಯದಲ್ಲಿ ಈ ಬೇನೆಯು ಹೆಚ್ಚಾಗಿರುವದು. ಬಾಶೆಲ್ ಮಿಶ್ಶನ್ ಬ್ರಾಹ್ಮಣಿ ಹುಡುಗಿಯರ ಶಾಲೆಯ ಸಮಿಪದ ಮನೆಯಲ್ಲಿ ಪ್ಲೇಗು ಮರಣವಾದುದರಿಂದ ಸದರಿ ಶಾಲೆಗೆ ೮ ದಿವಸ ರಜೆ ಕೊಟ್ಟಿರುತ್ತಾರೆ.

ಟ್ರೈನಿಂಗ್ ಶಾಲಾ ಉಮೇದ್ವಾರರ ಮುಷ್ಕರ.

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಸುಮಾರು ೧೦೦ ಉಮೇದ್ವಾರರಲ್ಲಿ ಕ್ರೈಸ್ತ, ಮುಸಲ್ಮಾನ, ಪಂಚಮ ಉಮೇದ್ವಾರರ ವಿನಹಾ ಉಳಿದ ಸುಮಾರು ೬೫ ಉಮೇದ್ವಾರರು ಮುಷ್ಕರ ಹಾಕಿ ಶಾಲೆಗೆ ಹೋಗದೆ ನಿಂತಿರುವರೆಂಬ ವಾರ್ತೆ ಪಟ್ಟಣವೆಲ್ಲಾ ಹಬ್ಬಿರುವದು. ಎರಡು ವಾರಗಳ ಹಿಂದೆ ಶಾಲೆಗಳ ಇನ್ಸ್‌ಪೆಕ್ಟರರಾದ ಮೆ। ಯೇಟ್ಸ ದೊರೆಗಳವರು ಟ್ರೈನಿಂಗ್ ಶಾಲೆಗೆ ಚಿತ್ತೈಸಿದಾಗ ಪಂಚಮರನ್ನು ಇತರ ಉಮೇದ್ವಾರರ ಹಿಂದೆ ದೂರವಾಗಿ ಮುರುಕು ಬೆಂಚಿನ ಮೇಲೆ ಕುಳ್ಳಿರಿಸಿರುವದನ್ನು ಕಂಡು, ಅವರನ್ನು ಕಪ್ಪು ಹಲಿಗೆಯಿಂದ ದೂರವಾಗಿ ಕುಂಡ್ರಿಸಿದ್ದು ನ್ಯಾಯವಲ್ಲವೆಂಬ ಅಭಿಪ್ರಾಯಪಟ್ಟು ಅವರನ್ನು ಹಿಂದೂ ಉಮೇದ್ವಾರರ ಮುಂದೆ ಬೋರ್ಡಿನ ಹತ್ತಿರ ಒಳ್ಳೆ ಬೆಂಚಿನ ಮೇಲೆ ಕುಳ್ಳಿರಿಸಬೇಕೆಂದು ಹೆಡ್ ಮಾಸ್ತರರೊಡನೆ ವಿಚಾರಿಸಿ, ಅಪ್ಪಣೆವಿತ್ತರು. ಇದೇ ತಾ ೧೮ರಲ್ಲು ಪುನಃ ದೊರೆಗಳವರು ಶಾಲೆಗೆ ಚಿತ್ತೈಸಿದಾಗ ಪಂಚಮ ಉಮೇದ್ವಾರರು ಮುಂಚಿನಂತೆಯೇ ಹಿಂದುಗಡೆ ಪ್ರತ್ಯೇಕ ಕೂತಿರುವದನ್ನು ಕಂಡು ಅವರನ್ನು ಮುಂದೆ ಕುಳ್ಳಿರಿಸಬೇಕೆಂದು ಹೇಳಿದರು ಆಗ ಶಾಲಾ ಹೆಡ್ ಮಾಸ್ತರರು ಅವರನ್ನು ಮುಕ್ಕಿ ಮುಂದಕ್ಕೆ ಹೋಗಬೇಕಾಗಿ ಹೇಳಿದ ಪ್ರಕಾರ ಅವರು ಮೊದಲಿನ ಸ್ಥಳವನ್ನು ಬಿಟ್ಟು ಬೆಂಚುಗಳ ನಡುವಣ ಓಣಿಯಿಂದ ಒಬ್ಬೊಬ್ಬರಾಗಿ ಮುಂದೆ ಹೋದರು. ಹೀಗೆ ಮುಂದೆಹೋದವರಲ್ಲಿ ಇಬ್ಬರು ಇನ್ಸ್‌ಪೆಕ್ಟರರ ಹಿಂದೆ, ಇನ್ನೊಬ್ಬರು ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರ ಹಿಂದೆ, ಇನ್ನೊಬ್ಬರು ಮುಂದುಗಡೆಯ ಪ್ರತ್ಯೇಕ ಬೆಂಚುಗಳಲ್ಲಿ ಕೂತುಕೊಂಡರು. ಹೀಗೆ ಇನ್ಸ್‌ಪೆಕ್ಟರರೂ ಸಬ್ ಅಸಿಸ್ಟಾಂಟರೂ ಕೂತುಕೊಂಡ ಬೆಂಚಿನ ಹಿಂದೆ ಇರುವ ಡೆಸ್ಕಿನ ಹಿಂದೂಗಡೆ ಇರುವ ಎರಡು ಮಂದಿ ಜನರು ಕೂತುಕೊಳ್ಳುವ ಬೆಂಚಿನಲ್ಲಿ ಇಬ್ಬರು ಪಂಚಮರೂ ಮೂರನೇದವನು ಪ್ರತ್ಯೇಕ ಬೆಂಚಿನಲ್ಲಿಯೂ ಹಿಂದೂ ಉಮೇದ್ವಾರರಿಂದ ಪ್ರತ್ಯೇಕವಾಗಿ ಕೂತುಕೊಂಡರು ಇಷ್ಟರಿಂದ ಹಿಂದೂ ಉಮೇದ್ವಾರರೂ (ಬ್ರಾಹ್ಮಣರೂ ಬ್ರಾಹ್ಮಣರಲ್ಲದ ಇತರ ಹಿಂದೂಗಳೂ) ಒಗ್ಗಟ್ಟಾಗಿ ಸೇರಿಕೊಂಡು ಅವರ ಪಕ್ಷವಾಗಿ ಆ ಕ್ಲಾಸಿನವರಲ್ಲದ ಹ್ಯಾಯರ್ ಗ್ರೇಡಿನವರೂ ದೊರೆಗಳು ಶಾಲೆಯಿಂದ ಹೊರಟುಹೋಗುವಾಗ ಮೋಟಾರ್ ಬಂಡಿಯನ್ನು ಸುತ್ತುಹಾಕಿ ಹೀಗೆ ಪಂಚಮರನ್ನು ಕುಂಡ್ರಿಸಿದ್ದು ತಮ್ಮ ಜಾತಿಕಟ್ಟಳೆಗೆ ವಿರುದ್ಧವೆಂದು ಗಲಿಭೆ ಮಾಡಿದರು ಪಂಚಮರನ್ನು ಇತರ ಹಿಂದೂಗಳು ಮುಟ್ಟಬೇಕೆಂದು ತನ್ನ ಅಭಿಪ್ರಾಯವಲ್ಲವೆಂದೂ ಅವರನ್ನು ಮುಂದುಗಡೆ ಹಿಂದೂಗಳಿಂದ ದೂರಕ್ಕೆ ಪ್ರತ್ಯೇಕವಾಗಿ ಕುಳ್ಳಿರಿಸುವದರಿಂದ ಬಾಧಕವಿಲ್ಲವೆಂದೂ ಮುಂಚೆಯೂ ಕೂಡಾ ಒಂದೊಂದು ವಾರಕ್ಕೆ ಪಂಚಮರನ್ನು ಮುಂದುಗಡೆ ಪ್ರತ್ಯೇಕವಾಗಿ ಕೂತುಕೊಳ್ಳಿಸಿದ್ದಾರಾಗಿ ಹೆಡ್ ಮಾಸ್ತರರು ಹೇಳುವದರಿಂದ ಅದಕ್ಕಾಗಿ ಯಾರೂ ಅವಮಾನಗೊಳ್ಳಲು ಕಾರಣವಿಲ್ಲವೆಂದೂ ಹೇಳಿ ದೊರೆಗಳು ಹೊರಟುಹೋದರು. ಆದೇ ಸಾಯಂಕಾಲ ಈ ಹಿಂದೂ ಉಮೇದ್ವಾರರು ಒಟ್ಟುಕೂಡಿ ಆಲೋಚನೆ ನಡಿಸಿ ಮರುದಿನ ಬೆಳಿಗ್ಗೆ ಶಾಲೆಗೆ ಬಾರದೆ ಹೊಸ್ಟೆಲಲ್ಲೇ ನಿಂತುಬಿಟ್ಟರು ಆ ದಿನ ಸಾಯಂಕಾಲ ಹೆಡ್ ಮಾಸ್ತರರೂ, ಸಬ್ ಅಸಿಸ್ಟಾಂಟರೂ, ಹೊಸ್ಟೆಲ್ ವಾರ್ಡನರೂ ಮತ್ತು ತಾ. ೩ರ ಬೆಳಿಗ್ಗೆ ಅಸಿಸ್ಟಾಂಟ ಇನ್ಸ್‌ಪೆಕ್ಟರರೂ, ಸಬ್ ಅಸಿಸ್ಟಾಂಟರೂ, ಸುಮಾರು ೯॥ ಘಂಟೆಗೆ ಶಾಲೆಯ ಇತರ ಉಪಾಧ್ಯಾಯರೂ ಬಗೆ ಬಗೆಯಲ್ಲಿ ಸಮಜಾಯಿಸಿದರೂ ಪ್ರಯೋಜನವಾಗದೆ ಹೋಯಿತು. ಕೊನೆಗೆ ದೊರೆಗಳು ೧೦ ಗಂಟೆಗೆ ಶಾಲೆಯ ಹೊಸ್ಟೆಲಿಗೆ ಹೋಗಿ ವಾರ್ಡನರ ಸಹಾಯದಿಂದ ನಾನಾ ಪ್ರಕಾರವಾಗಿ ಸಮಾಧಾನವನ್ನು ಹೇಳಿದರು. ಪಂಚಮರನ್ನು ಮುಂಚಿನಂತೆಯೇ ತಮ್ಮ ಹಿಂದುಗಡೆಯಲ್ಲಿ ಬೋರ್ಡಿನಿಂದ ಬಹಳ ದೂರಕ್ಕೆ ಕೂತುಕೊಳ್ಳಿಸಲೇ ಬೇಕೆಂತಲೂ ಇನ್ನು ಮುಂದೆ ಈ ಪಂಚಮರನ್ನು ಮುಂದಿನ ಸ್ಥಾನದಲ್ಲಿ ಇಡಲಿಕ್ಕಿಲ್ಲವೆಂಬದಾಗಿ ಬರಹ ಮೂಲಕ ನಿರೂಪವನ್ನು ಕೊಡಬೇಕೆಂತಲೂ ಹೇಳಿದ್ದರಿಂದ ದೊರೆಗಳು ಮುಷ್ಕರ ಹಿಡಿದವರಿಗೆ ನಾನಾ ರೀತಿಯಲ್ಲಿ ಸಮಾಧಾನ ಹೇಳಿದರೂ ಪ್ರಯೋಜನವಾಗಲಿಲ್ಲ ಮುಷ್ಕರ ಹಿಡಿದವರು ಈ ವಿಷಯದಲ್ಲಿ "ನಾವು ಡೈರೆಕ್ಟರಿಗೆ ಈ ಮೊದಲೇ ತಂತೀ ಮೂಲಕ ಬಿಟ್ಟಿದ್ದ ವಿಜ್ಞಾಪನೆಗೆ ಹುಕುಂ ಬಂದ ವಿನಹಾ ನೀವು ಯಾವದನ್ನು ಹೇಳಿದರೂ ನಾವು ಸಮ್ಮತಿಸಲೊಲ್ಲೆವು" ಎಂಬದಾಗಿ ಹಟ ಹಿಡಿದು, ಶಾಲೆಯಿಂದ ಅಪ್ಪಣೆ ಇಲ್ಲದೆ ಗೈರಹಾಜರು ಆದ ಕಾರಣ ಇನ್ಸ್‌ಪೆಕ್ಟರರು ಏನೊಂದೂ ಶಿಕ್ಷೆಯನ್ನು ವಿಧಿಸದ ಹಾಗೆ ಮೂರು ದಿವಸದ ಕೇಜುವಲ್ ರಜೆ ತಮಗೆ ಕೊಡಿಸಬೇಕಾಗಿ ಎಲ್ಲರೂ ದಸ್ಕತು ಹಾಕಿ ಶಾಲೆಯ ಹೆಡ್ ಮಾಸ್ತರರಿಗೆ ರಜೆ ಬೇಡಿರುತ್ತಾರೆಂತ ತಿಳಿಯುತ್ತೇವೆ.

ಸ್ವೀಕಾರ:— ಮೆ। ಎಮ್. ಎಸ್. ರಾವ್ ಎಂಡ್‌ಕೊ, ಬೆಂಗಳೂರು ಸಿಟಿ—ಇವರಿಂದ ಕಳುಹಿಸೋಣಾದ ಪ್ರತಿವರುಷವೂ ಉಪಯೋಗಿಸಬಹುದಾದ ಸೊಗಸಾದ ಪರ್ಪೆಚ್ಯುವಲ್ ಕೆಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ವಾಚಕರು ಸ್ವದೇಶಾಭಿಮಾನಿಯ ೧೬ನೇ ಪುಟವನ್ನು ನೋಡಿದ್ದಲ್ಲಿ ಈ ಕೆಲೆಂಡರು ಎಂಥಾದ್ದೆಂಬದೂ ಹೇಗೆ ಇದನ್ನು ಪುಕಸಾಟೆಯಾಗಿ ಪಡೆಯಬಹುದೆಂಬದೂ ತಿಳಿದು ಬರುವದು.

ಜೀನಸು ಧಾರಣೆ.

ಮಸೂರಿ ಹೊಸ ಅಕ್ಕಿ .	5— 4—0	5—12—0
ಗಾಡಿ ರಾಶಿ ಹೊಸ ,, .	4— 9—0	4—11—0
ಗುಡ್ಡು ,, ,, .	5— 0—0	5— 5—0
ಅವ್ವಲ್ ಬೆಳ್ತಿಗೆ ,, .	6— 0—0	6— 4—0
ಗುಡ್ಡು ಬೆಳ್ತಿಗೆ ,, .	5— 8—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	10— 4—0	10—0—0
ಗೋದಿ ಗೋಣಿ ೧ರ .	13— 8—0	14— 0—0
ಹುರುಳಿ ಗೋಣಿ ೧ರ ...	6— 0—0	7— 0—0
ಕಡಲೆ ಗೋಣಿ ೧ರ ಬೊಂಬಾಯಿ	9— 8—0	10—0—0
ತೊಗರಿ ಗೋಣಿ ೧ರ ...	12— 0—0	13— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 8—0
ಉದ್ದು ಗೋಣಿ ೧ರ . .	11— 0—0	10—12—0
ಊರುಬೆಲ ಖಂಡಿ ೧ರ ...	... ...	49— 8—0
ಉಪ್ಪು ಗೋಣಿ ೧ರ . .	3— 4—0	3— 6—0
ಕೊಬ್ಬರಿ ಖಂಡಿ ೧ರ . .	95— 0—0	105— 8—0
ಕೊಬ್ಬರಿಹಿಂಡಿ ಖಂಡಿ ೧ರ .	24—8—0	25— 0—0
ಎಳ್ಳಿಂಡಿ ಖಂಡಿ ೧ರ ಬೊಂಬಾಯಿ	30— 0—0	35—0 —0
ಕೊಬ್ಬರಿ ಎಣ್ಣೆ ಮುಡಿ ೧ರ. .	6—10—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		5— 0—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	4— 9—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ.	4—12—0	4—13—0
ಕಾಫಿ ಖಂಡಿ ೧ರ.. .	240— 0—0	252— 0—0
ಹೊಸಬೀಗೋಟು ಖಂಡಿ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ. . .		2—15—0
ಕಬ್ಬಿಣ ಖಂಡಿ ೧ರ .	50—0—0	70— 0—0
ತಾಂಬ್ರ ತಗಡು ಮುಡಿ ೧ರ.	20—0—0	22— 8—0
ತಾಂಬ್ರ ಪಾತ್ರಗಳು ಮುಡಿ ೧ರ.	22—0—0	24—0—0
ಜೀರಿ ಬೆಲ್ಲ ಕೇರು ೧ರ. . . .		18—12—0
ಬೆಲ್ಲ ಹೆಸರು ಮುಡಿ ೧ರ .	5—14—0	6—0—0

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯೂ ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇರ್ದೆಲ್ಲ ಹ್ಯೂಟ್ ಒಯಿಲ್ ಇಲ್ಲ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸ್‌ವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೇಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಸ್ಲ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿಸ್ಟ್ರೀಟ್,
ಜೋರ್ಜ್ ಟೌನ್. ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ. ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು, ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದುಳನ್ನು ಸರಿಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳ 6, ಸ್ಕೈಫರ್ 1, ತಾಂಬೂಲ ಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊನೇಷನ್ ಪಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಒಟ್ಟು 60. ನಮ್ಮ ಕಂಪನಿ ಪ್ರಖ್ಯಾತಿ ಹೊಂದುವ್ಪದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,

3 ಇರುಳಪ್ಪನ್ ಬೀದಿ, ಮದರಾಸು.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಬಹದ್ದೂರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು, ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು, ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:— ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. O. Amin**
C/o E. A. Goll Esq.
Sirdar Palace, Apollo Street, BOMBAY.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡ್

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ. ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ. ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯಲ್ಲಿ ಉಪಯೋಗಕ್ಕಾಗಿ ಕಳುಹಿಸಿಕೊಡಿ."

ಮ॥ ರಾ॥ ಬಿ ರಾಮರಾವ್ ಎಂ. ಎ., ಬಿ. ಎಲ್. ಎಲ್. ಬಿ., ಗವರ್ನಮೆಂಟ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. • • • • ಇದರಂತೆಯೇ ನಮ್ಮ ಸಮಾಜದಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಟೀ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಹಾತ ಮಿಶ್ಶನ್ ಚೇಕುಗಳೂ; ಬೇರೆ ಅನೇಕತರದ ಸ್ವದೇಶಿ ಜೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನ್ನನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಪೆಗಡಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಕಂಪನ್‌ಲೈನ್ಸ್, ಬೆಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಬೊರೆಯಿಡುವುದು ನಿಜವಾಗಿಯೂ ತಪ್ಪುವದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮಾ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ 2, ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮಾ। ರಾ। ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ, ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪಾಲು ಹಾಸಲು ಸೇರಿ ರೂ. ೩—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಕ್ಯಾಲೆಂಡರ್!

ನಮ್ಮಲ್ಲಿ ತಯಾರಾಗತಕ್ಕ ಸುಗಂಧ ದ್ರವ್ಯಗಳನ್ನು ಎರಡು ರೂಪಾಯಿಗೆ ಕಡಿಮೆ ಇಲ್ಲದೆ ಆರ್ಡರ್ ಕೊಡತಕ್ಕವರಿಗೆ ೧೯೧೬ನೇ ವರ್ಷದ ಸುಂದರವಾದ ಕ್ಯಾಲೆಂಡರನ್ನು ಬಹುಮಾನವಾಗಿ ಕೊಡುವೆವು.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನರಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಲೂ ಇಂಗ್ಲಿಷ್ ಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರೊಳೊಬ್ಬನಾದ ಕೋಳೂರು ಶಂಕರ ಕವಿಯಿಂದ ೧೯ನೆಯ ಶತಮಾನದ ಆದಿಯಲ್ಲಿ ಭಾಮಿನಿಷಟ್ಪದಿರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಳಾಪವು, ಪಾರ್ವತೀ ಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚು ಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧—೦—೦.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ, ಬಳ್ಳಾರಿ

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವಿತ ಸುಖವನ್ನು ಹೊಂದುವದು. ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ಶೀಘ್ರವಾಗಿಯೆ ಬರಿಯಬೇಕು. (8).

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ,

157 ಬ್ರಾಡ್ವೆ ಮದ್ರಾಸ್.

S. U. N. & CO.,

BENARES CITY, U.P.

ಯೋಗ್ಯವಾದ ಕ್ರಯ!

ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ನೆಯುದು ತಯಾರಿಸಿದ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ ಶಾಲ, ದುಪ್ಪಟ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊನಾರ್ಡ, ಅರಳಿಪೇಟಿ, ಧರ್ಮವಸ್ತ್ರ, ಈ ಮುಂತಾದ ಅನೇಕ ಹೊಸ ನಮೂನೆಯ ಸಾಮಾನುಗಳನ್ನು ಕಾಶಿಯಲ್ಲಿಯೆ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋಹನತ್ತಿನಿಂದ ತಯಾರಿಸಿರುವದು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವರಿಗೆ 100 ಪುಟವುಳ್ಳ 1 ಕೆಟಲಾಗು, 1 ಕಾಶಿ ಕಾಳಭೈರವ ದಾರವನ್ನು ಇನಾಮಾಗಿ ಕಳುಹಿಸಲಾಗಿದೆ.

ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತ್ತು ರೂ. ೧—೮—೦. ವಿದ್ಯಾರ್ಥಿಯರಿಗೆ ರೂ. ೧—೪—೦. ಟಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣ ಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬ ಪಾನು ಡೆಮಿ ಅಷ್ಟಪತ್ರದ ಪುಟ ೧೯೦, ಟಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ., ಎಲ್. ಎಲ್. ಬಿ, ಹೈಕೋರ್ಟ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಶಮ್ಯವಾಗುತ್ತವೆ. ೨೦—೨೫ ವರ್ಷಗಳ ಹಳತ, ಪ್ಯಾಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯುವೇ. ಬೆಲೆ ಬಾಟ್ಲಿಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲಯು. ಕ್ರಯ ಬಾಟ್ಲಿಗಿಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ, ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯು ನ್ನೂ ಕೀವನ್ನೂ ಕೂಡಲೇ ನಿಲಿಸಿ ಪಥ್ಯವಿಲ್ಲದೆ ಖ ಚಿತವಾಗಿ ಗುಣ ಕೊಡುವದು ಬಾಟಿಗೆ ೨ ೮ ೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು ತಿಂಗಳ ಔಷಧಕ್ಕೆ ಬಟ್ಟು ೩ ರೂ ೮ ಆಣೆ

೬ ಅಗಸ್ತ್ಯೋಹವ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ ಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನವನ್ನು ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ

೭ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸೆ — ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರಜಲಿ, ಧಾತುಪತನ, ಹ ಸ್ತಮೈಥುನಗಳ ಮೂಲಕವಾಗಿ ಪ್ರಾಪ್ತವಾದ ಶಿಥಿಲತೆ ಮುಂತಾದವುಗಳನ್ನು ಹೋಗ ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೧. ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂ ತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯಾ ವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ

೧೩ ನವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನು ಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಿ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾ ತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವ ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೧ ರೂ ೮ ಆಣೆ

☞ ನೇಮಿತ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯ ವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಪತ್ರಿಕ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದ ಲೂ ಇಂಗ್ಲಿಷಿನಿಂದ ಊ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists,*

Vepery Post MADRAS.

ಮಂಗಳೂರು

ಬಾಸೆಲ್ ಮಿಶ್ಯನ್ ಪುಸ್ತಕಖಾನೆಯವರು

ಪ್ರಚುರಪಡಿಸಿರುವ ಪುಸ್ತಕಗಳ ಪಟ್ಟಿ

(ಮುಂಬಯಿ ಇಲಾಖೆಯೊಳಗಿನ ಸರಕಾರಿ ಪುಸ್ತಕಗಳು.)

ಕನ್ನಡ	ರೂ	ಆ.	ಪೈ		ರೂ	ಆ	ಪೈ
ಛಂದಸ್ಸಾರ	0	4	0	ಪ್ರಾಕೃತಿಕ ಭೂಗೋಲಶಾಸ್ತ್ರ	1	9	0
ಸಂಸ್ಕೃತ ಕನ್ನಡ ಶಬ್ದವ್ಯುತ್ಪತ್ತಿ	0	4	0	ವಸ್ತುಪಾಠಗಳು	0	3	0
ಕರ್ನಾಟಕದ ಚರಿತ್ರೆ	0	5	0	ಬೀಜಗಣಿತ	1	6	0
ಭೂಗೋಲ, 2ನೇ ಭಾಗ	0	1	6	ಪದಾರ್ಥವಿಜ್ಞಾನಶಾಸ್ತ್ರದ ಮೂಲ ತತ್ವಗಳು	0	9	0
ಕೋಲೆ ಸ್ಸಾಯವರ ಲೆಕ್ಕಪುಸ್ತಕ, 1ನೇ ಭಾಗ	0	10	0	ಪದಾರ್ಥವಿಜ್ಞಾನಶಾಸ್ತ್ರ	0	12	6
2ನೇ ,,	0	9	6	ಶಿಕ್ಷಾಪದ್ಧತಿ	0	11	0
ರೇಖಾಗಣಿತ, 1ನೇ ಪುಸ್ತಕ	0	4	0	ಬಾಯಿ ಲೆಕ್ಕದ ಪುಸ್ತಕ	0	2	0
,, 1ರಿಂದ 6 ಪುಸ್ತಕಗಳು	1	12	0	ಸಂಸ್ಕೃತ ಕನ್ನಡ			
ಕ್ಷೇತ್ರಫಳಫಲ	0	3	0	ಮೊದಲನೇ ಪುಸ್ತಕ	0	8	6
ಆರೋಗ್ಯವಿದ್ಯೆ	0	2	9	ಎರಡನೇ ,,	1	2	0

25 ರೂಪಾಯಿ ಅಥವಾ ಹೆಚ್ಚಿನ ಮೌಲ್ಯದ ಪುಸ್ತಕಗಳನ್ನು ಒಂದೇ ಸಾರಿ ತರಿಸಿಕೊಳ್ಳುವವರಿಗೆ ಶೇಕಡ 15ರ ಪ್ರಕಾರ ಡಿಸ್ಕೌಂಟು ಬಿಟ್ಟುಕೊಡುತ್ತೇವೆ. ಕಳು ಹಿಸಿಕೊಡುವ ಖರ್ಚನ್ನು ತರಿಸಿಕೊಳ್ಳುವವರು ಕೊಡಬೇಕು. 5 ರೂಪಾಯಿ ಅಥವಾ 5 ರೂಪಾಯಿಗಳಿಗಿಂತ ಹೆಚ್ಚಿಗೆ ಮೌಲ್ಯದ ಪುಸ್ತಕಗಳನ್ನು ತರಿಸಿಕೊಳ್ಳುವವರು ಅರೆ ವಾಸಿ ಮೌಲ್ಯವನ್ನು ಮುಂಗಡ ಪಾವತಿಮಾಡಬೇಕು.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಡೋಂಗರೆ
ಜ್ವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಬಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸು ಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ.
Girgaum, Bombay. ಗಿರಗಾಂ ಬೊಂಬಾಯಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಪಡಿಸಿದುದು. ಇದರಿಂದ ದೊರೆಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ ಅಲ್ಲ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕಳಂಕಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ ಆದರೆ ಅಂತಹ ಅಪಾಯಗಳೊಂದೂ ಹೇಗಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸ ಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದ. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಾಟ್ಲಿ 1ಕ್ಕೆ 3—4—0 ಅರ್ಧ ಬಾಟ್ಲಿಗೆ 1—12—0

ದಿ ಬ್ಲೂಲನ್ ಮಾರ್ಟ್,
ಮಂಗಳೂರು, ದ. ಕ

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಮುಫತ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದರ ಬೆಲೆ 10 ಆಣೆ ಪ್ಯಾಕಿಂಗ್ ಪೋಸ್ಟೇಜು ಅಲಾಯಿದ

ವಾಲ್ಮೀಕಿಯ ಜನು ಆಣೆ 6, ಮೈತ್ರೇಯಿ ಆಣೆ 5, ಸುಧರ್ಮ ಪ್ರಭಾವ ನಾಟಕ ಆಣೆ 8 ಸಂಕ್ಷಿಪ್ತ ಮಾಲೆ, 1—2 ಭಾಗಗಳು ಆಣೆ 6 ಭಕ್ತಿ ರಾಗ ಆಣೆ 8 ಆರ್ಯ ಮತಸಾರ ಆಣೆ 3, ಭರತ ಧರ್ಮದ ಮಹರ್ಷಿಗಳು ಆಣೆ 2, ರಾಜಭಕ್ತಿ ಆಣೆ 6, ದೇಶ ಭಕ್ತಿ ಆಣೆ 10

[ಈ ಪೈಕಿ ರೂ 2—8—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ]

ಕನ್ನಡ ಹೊಸ ಪುಸ್ತಕಗಳು

ಸಂಗೀತ ಸಮುದಾಯ	1— 4	ಪ್ರಬಂಧ ಮುಕ್ತಾವಳಿ	0—12
ಹಾರ್ಮೋನಿಯಂ ಸ್ವಯಂ ಶಿಕ್ಷಕ	0— 4	ಕನ್ನಡ ಅರೇಬಿಯನ್ ನೈಟ್ಸ್	2— 2
ಬಾಲಿಕಾಗೀತ ಮುಕ್ತಾವಳಿ	0— 9	ಮುದ್ರಾಮಂಜೂಷ	1—10
ಕಲ್ಯಾಣ ಗೀತಾವಳಿ	0— 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3— 2
ಅಭಿನವ ಸಂಗೀತ ಪಂಜರ	0— 4	ಅಧ್ಯಾತ್ಮರಾಮಾಯಣ	2— 0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1— 8	ಹರಿವಿಜಯ	1— 9
ಸ್ತ್ರೀಧರ್ಮನೀತಿ	0— 9		

ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್	0—12	ಮಾಧವೀಕಂಕಣ ಬಂಗಾಳಿ ನಾವೆಲ್		1— 0
ಪ್ರಫುಲ್ಲೆ	”	0—12	ಶಕ್ತಿ	”	0—12
ಉಸ್ಮತ್ತೆ	”	0— 3	ಶೋಧನೆ	”	0—12
ವಿಷ್ಣು ವಿವಾಹ	”	0 4	ಚಂದ್ರಪ್ರಭಾ ಕಾದಂಬರಿ		0 14
ಸೌದಾಮಿನಿ	”	0— 8	ಸಭದ್ರೆ	”	0— 5
ಸರಲಾ	”	0— 2	ಕಲಿಯುಗ	”	0— 5
ಸುಷಮಾ	”	0— 2	ಕಲಾನಾಥ	”	0— 8
ಅನಾಥ ಪ್ರೇತ	”	0 1	ನನ್ನ ಆಚಾರ್ಯ (My Master)		0— 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳನ್ನು ಒಂದು ಸರ್ತಿ ತರಿಸುವವರಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ

ಕಾದಂಬರಿಗಳು.

ಸುಶೀಲೆ ಶ್ರೀ ತಿರುಮಲವ್ಯಾಸವರಿಂದ	0— 6	ದೇವಿ ಚೌಧುರಾಣಿ ಬಿ ವೆಂಕಟಾಚಾರ್		1— 4
ಸತೀತ್ವರಕ್ಷಣೆ (ಪ್ರಥಮ ಭಾಗ 1)	” 0— 8	ಮನೋರಮ	”	1— 0
ವಿರಾಗಿಣಿ (ಡಿಟೊ 2)	” 1— 0	ಪರಿಮಳ	”	0—10
ವಿದ್ಯುಲ್ಲತಾ (ಹರಿದೆ)	” 0—14	ಕೊಹಿನೂರು	”	0—12
ಲಕ್ಷ್ಮೀ ಕನ್ಯಾ	” 1— 8	ಸಾಧನೆ	”	0— 8

(ಇತ್ಯಾದಿ ಇವರ ಎಲ್ಲಾ ಕಾದಂಬರಿಗಳು.)

ಕಲ್ಯಾಣ! ಕಲ್ಯಾಣ!! ಕಲ್ಯಾಣ!!!

ಬಂಧುಗಳೇ! ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ — *Address:*—

ಎಸ್. ಪಿ ರಾಜಾ ಮತ್ತು ಕಂಪೆನಿ, **S. P. RAJA & Co,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ. ಕ. POST POLALY, S. C.

ಹೊಸ ಪುಸ್ತಕಗಳು

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು

ವಿಳಾಸ — ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ಸ್ಯಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತಪ್ಪಲು ಮರೆಯಬೇಡಿರಿ.

೧ ಕಂಠೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ಸ್ವಲ್ಪ ಸಮಯದಲ್ಲಿ ಗುಣವಾಗುತ್ತವೆ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ ತೊಲೆ 1ಕ್ಕೆ ರೂ 1

೩ ಅಶೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ ಬಾಟ್ಲಿ 1ಕ್ಕೆ ರೂ. 1—4—0

೪ ಗರ್ಭ ಪುಷ್ಟಿಕರಣ ಇದು ಸ್ತ್ರೀಯರ ಎಲ್ಲಾ ಗರ್ಭ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ. 1.

೫ ಮದನಮೋದಕ ಪಿಲ್ಸ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷದವಾಗಿರುತ್ತದೆ " ಮಾತ್ರೆ 60ಕ್ಕೆ ರೂ 2

೬ ಬಾಲಶಂಕರಿ ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೃಮಿ ವ್ಯಾಧಿ, ಜ್ವರಗತ್ತೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭ ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳು ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ ಬಾಟ್ಲಿ 1ಕ್ಕೆ 0—8—0

೮ ಅಮೃತಸಾರ್. ಇದು ವಾಯು ದುರ್ಬಲ್ಯ ಎಲ್ಲಾ ಶುದ್ಧಿ ಹೊಲಕ್ಕೆ ಸಿದ್ಧೌಷದವಾಗಿರುತ್ತದೆ 1 ಕೊಳೆ ದ್ರಾವಕಕ್ಕೆ ರೂ 1.

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗೂ ನೂರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್ ಉಗ್ರಾಣಕಾರ್, ಮೆನೇಜರ್.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಕ್ರಿಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೫೫ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ವಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ., ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಕುಲಸ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA.)

AGENT FOR

Malabar and South Canara.

ಮಿಜಾಜೆ ಮಶ್ಹೂ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವುವು.



ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ನೈಸರ್ಗಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುಡು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address:—
Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ (ಒಲೆಯ)

ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು. ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ. 7 8 0
ಬರ್ನರ್ ಒಲೆಗೆ ಮಾತ್ರ . . ಕ್ರಯ ರೂ. 5 12 0
೫ನೇ ಮತ್ತು ೧ನೇ ನಂಬರ್ ಒಲೆಗಳ ಬರ್ನರ್
ಕ್ರಯ ೧ಕ್ಕೆ 2 4 0

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟ್ರಾವ್ ಡಿಪೊ,
೭೩೭ ಗಿರಗಾಂ ಬೊಂಬಾಯಿ.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಗನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು, ಖಜ್ಜಿ, ಸುಟ್ಟ ಘಾಯ್ಗಳು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ ತಯಾರು ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
ಕೊಡಿಯಾಲ, ಮಂಗಳೂರು.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಪುಷ್ಟಿನೋತ್ಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧಾಂತವು. ಕ್ಷಯರೋಗ, ಎಳಪು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈಯೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಬಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0.
,, ,, 3ಕ್ಕೆ ,, 2-10—0
ವಿ ಪಿ ಚಾರ್ಜು ಅಲಾಯಿದ.

N B — ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ

ಯಾವಾಗಲೂ ಕುಟುಂಬದಲ್ಲಿ ಆವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪ್ರಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ಸಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ. 1—0—0. ಟಪ್ಪಾಲು ಖರ್ಚು 4 ಆಣೆ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಅಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಅಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.
,, ಮಿಡಿಯಂ ,, ,, 0-12—0.
,, ಕ್ವ ಔನ್ಸಿನ ,, ,, 2—0—0.
ಅಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.
ಪೋಸ್ಟೇಜು ಅಲಾಯಿದ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

Printed & Published by V. S. Kamath at the ...

Registered No. M. 409

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಕ್ಕೆ ರೂ 1—4—0 ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ X ಮಂಗಳೂರು ತಾ॥ 11ನೇ ಫೆಬ್ರುವರಿ ಶುಕ್ರವಾರ 1916. ಸಂಚಿಕೆ 6

ಅತ್ಯಾವಶ್ಯಕವಾಗಿ ಜೀವನದಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

(ರಜಿಸ್ಟರ್ಡ್)

1. ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದರೆ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯೂ ಕ್ರಮವಾಗಿ ಆಗುತ್ತದೆ ಯಾವರೋಗಳೂ ಅಸ್ಪದವುಂಟಾಗುವುದಿಲ್ಲವು.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಳ್ಳೆ ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

40 ಮಾತ್ರೆಗಳ ಪೊಟ್ಟ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟ 1ಕ್ಕೆ	[illegible]	80 ಮಾತ್ರೆಗಳ ಟಿನ್ 1ಕ್ಕೆ	0—4—0
96 „ „ „	0—4—0	200 „ ಟಿನ್ „	0—9—0	100 „ [illegible] „	0—4—6

550 ಮಾತ್ರೆಗಳ ಸ ರದವೆಟ್ಟಿಗೆ 1ಕ್ಕೆ	1—0—0
1200 „ „	2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್ — ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟ್ಯಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,

TYPE-WRITING.

ಮುದ್ರಣ ಅನುಕೂಲಗಳು.

ಅರ್ಜಿ, ದಾವೆಗಳ ಪ್ರತಿ, ಇತರ ದಸ್ತಾವೇಜುಗಳ ನಕಲುಗಳು ಇತ್ಯಾದಿ ಇಂಗ್ಲಿಷ ಭಾಷೆಯ ಬರವಣಿಗೆಗಳನ್ನು ಕೋರ್ಟು ಕಚೇರಿಗಳಲ್ಲಿ ದಾಖಲುಮಾಡುವ ಸಂದರ್ಭಗಳು ಬಹಳವಾಗಿ ಬಂದೊದಗುತ್ತವೆ. ಇಂಥವುಗಳು ಕೈಬರಹದಲ್ಲಿದ್ದರೆ ಓದಲು ಬಹಳ ಸಮಯವೂ ತೊಂದರೆಗಳೂ ಇರುವವು. ಆದ್ದರಿಂದ ಇವುಗಳನ್ನು ಛಾಪಾ ಹಾಕಿಸುತ್ತಾರೆ ಹೆಚ್ಚು ಪ್ರತಿಗಳನ್ನು ಛಾಪೆ ಮಾಡಿಸಿದರೆ ಖರ್ಚು ಕಡಿಮೆ ಬೀಳುವದು. ಅರ್ಜಿ ಇತ್ಯಾದಿಗಳ ಹೆಚ್ಚು ಪ್ರತಿಗಳನ್ನು ಮಾಡಿಸುವದು ಹಲವು ಸರ್ತಿ ಅಗತ್ಯವಿರದು. ಇಂಥಾ ಸಂದರ್ಭಗಳಲ್ಲಿ "Type-writing Machine" ಎಂಬುವದರ ಮೂಲಕ ಅಚ್ಚು ಹಾಕಿಸುವದುಂಟು. ಇಂಥಾ ಯಂತ್ರವನ್ನು ಶಾರದಾ ಛಾಪಖಾನೆಯಲ್ಲಿ ತಂದು ಇಟ್ಟಿರುತ್ತೇವೆ. ಗಿರಾಕಿಗಳ ಅನುಕೂಲತೆ ಬಗ್ಗೆ ಅಚ್ಚು ಹಾಕಿಸುವ ಕೆಲಸ ವಿನಹ ಟ್ಯಾಪ್ [illegible] ಮೂಲಕ ಅರ್ಜಿ ಇತ್ಯಾದಿಗಳನ್ನು ಬಹಳ ಸುಲಭ ದರದಲ್ಲಿ ಮುದ್ರಿಸಿಕೊಡುತ್ತೇವೆ.

ದರ ಇತ್ಯಾದಿಗಳನ್ನು ಮ್ಯಾನೇಜರ್, ಶಾರದಾ ಛಾಪಖಾನೆ, [illegible]

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲ ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರ ವವರು ಬಜಾರಿನಲ್ಲಿ ದೊರಿಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸ್ವಲ್ಪವೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೆ, ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ ಬರೇ ಪತ್ರಿಕೆಗಳಲ್ಲಿ ವರ್ಣಿಸುವದರಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಣೆ 6, ನೈಫರ್ 1 ತಾಂಬೂಲ ಮಾತ್ರೆ 40, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕುಸಿಕಿಸಂಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1 ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ.— ವಿ. ಎ. ಎಸ್. ಪಾಣಿ ಕಂಪೆನಿ,

3. ಇರುಳಪ್ಪನ್ ಬೀದಿ, ಮದರಾಸು

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಲುರಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕತ್ತಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ದೇಹವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಪತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತ್ಯಾಭಿಮಾನದಿಂದಲೂ ವಿಜಾತಿ ಮಹನೀಯರು ವಿಶ್ವಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. C. Amin**
C/o E. A. Goll Esq.
Sirdar Palace, Apollo Street, BOMBAY.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೭೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಹೈಕೋರ್ಟುಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ. ಇದರಿಂದ ಪ್ರಪಂಚದ ಜನರಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯು ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ.—

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ."

ಮ।। ರಾ।। ಬಿ ರಾಮರಾವ್ ಎಂ. ಎ., ಬಿ. ಎಲ್. ಎಲ್. ಬಿ., ಗವರ್ನಮೆಂಟ್ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. * * * ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ.— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಹಾತ ಮಿಶ್ಯನ್ ಚೇಕುಗಳೂ: ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿ... ಮಿಶ್ಯನ್ ಟೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ...ಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರ... ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ...ಸೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ



ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಸರಕು...

ವಿಳಾಸ:— ...

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ — ವಾತ, ಸಂಧಿವಾತ, ತಲೆನೋವು, ಶಿರೋಧಾ ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0 ವಿ. ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲು ನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—9—0 ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಕೊಪ್ಪೋಟ್ ಒಯಿಲ್ ಇಲ್ಲ ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲು ಗಟ್ಟಿ ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫೋರ್ಮರ್:—ಅಮೃತಾಂಜನ ಎಲ್ಲಾ ಔಷದಗಳಿಗಿಂತಲೂ ಒಳ್ಳೆ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸ್‌ವೆಲ್, ಮೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ಡಾಂಡೆಕರ್, ಎಲ್. ಎಮ್ ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ಧಿ ಊಲನ್ ಮಾರ್ಟ್, ಕೊಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೋ,

6, 7, ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು

109 ಫ್ರೇಯರ್ ರೋಡ್, ಮುಂಬಯಿ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	371,976—4—4
Reserve Fund	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

Canara Bank Ltd.,
Mangalore, 1st December 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	371,976—4—4
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮಾಲ್ಕರಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಧರ್ಮ್ರಪತ್ರಗಳಲ್ಲಿ ಠೇವಣಾತಿಯಾಗಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೋ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢನೂಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೋ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, **BOMBAY.**
Agents:—**Bhagavandas Choonilal & Co.**
177 China Bazar Road, MADRAS

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕಂ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ;
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.,
[illegible]

Peoples Park Fair Reward.

ಸುಂದರವಾದ] 1916 [ಕಾಲೆಂಡರು.

ಕರ್ನಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾಮಾಗಿ ಕಳುಹಿಸುವೆವು ತ್ವರೆಮಾಡಿರಿ

ವಿಳಾಸ:— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾಗದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0 ಟಪ್ಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3, ಇರುಳಪ್ಪನ ಬೀದಿ,
ಮದ್ರಾಸು.

ಮಹಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಆಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿಯರ ಹೆಸರುಗಳೂ, ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ಪ್ರತಿಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಜೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುತ್ತಿನಾರರು, ಪಂಚಾಯಿತಿದಾರರು, ನ್ಯಾಯವಾದಿಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದ ಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿ ಇರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ
ಸಮಯಾನುಸಾರ ಕ್ರಯವು 1—4—0 ಏರಿಸಲಾಗಿದೆ.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು.— ಎನ್. ಎ ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮ್ಮುಂಜೆಗುತ್ತು,
ಪೋಸ್ಟ್ ಪೋ., ದ. ಕ ಉದ್ಯಾವರ ಪೋಸ್ಟ್, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ್, ಮಂಗಳೂರು.
3. ಒಂಟರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5. ಕಾಮಧೇನು ಸಂಗ್ರಹ ಆಪೀಸು, ಚಾಮರಾಜನಗರ ಮೈಸೂರು
6. ಪ್ರಭಾಕರ ಮುದ್ರಾಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವದು.

ಉಚಿತ! ಉಚಿತ! ಟಪ್ಪಾಲು ಹಾಸಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟು ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವುದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದ್ದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು. ಖರ್ಚು ಒಂದಿಷ್ಟಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ.
ಮಾಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಥ್ಯಾವರ್).
ಶಾಖೆ:— ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದರಾಸು.

ಸಫಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ
ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಪಡೆಸಿಕೊಳ್ಳಬಹುದು. ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿಶ್ಶಕ್ತಿಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದು ಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ).
ಶಾಖೆ:— ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ, ಮದರಾಸು.

ಆರ್. ಮಾರ್ಟಿನ್ಸನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್ ಮಾರ್ಟಿನ್ಸನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೨೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ, **R. D. Kately & Co**

ನಂಬ್ರ ಡಿ. ಫ್ರೆಯರ್ ರೋಡ್, - *No. D. Frere Road,*

ಮುಂಬಯಿ. *Near Wright & Co. Fort Bombay.*

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.



ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕರೆಪೆನ್ ಸೇಷನ್ ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,

3, ಇರುಳಪ್ಪನ ಬೀದಿ, ಮದರಾಸು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

'ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬದು ಬ್ರಾಹ್ಮಣರ ಮುಖ್ಯ ಧನವೂ, ಇದೇ ಶುದ್ಧ ತತ್ವಾರ್ಥವು ಮಾತ್ರವಲ್ಲ, ಇದರ ವಿಶೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಅಮೌಲ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ವ ವಿಷಯಗಳುಳ್ಳ ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನಿಸುವಂಥವರಿಗೆ ಏನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಘನ ಶ್ರೇಯಸ್ಸು ವ ಗೌರವವು ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯವರಿಸಿದ ದಾಸೊಹಂಭಾವದ ಈ ಗ್ರಂಥವು ಸರ್ವ ಪ್ರಿಯವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು.

ಕ್ರಯ ೧೦ ಆಣೆ.

ಪುಸ್ತಕಗಳ ಮಾರಾಟದ ಸ್ಥಳ:—

ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ.

ಮು ಮು. ಶ್ರೀನಿವಾಸ ಹರಿದಾಸ್, ಪೀಲ್ಡ್ ಸ್ಟ್ರೀಟ್.

ಉಡ್ಪಿ, ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು, ಎಲ್ಲರ 'ನೇತ್ರದೃಷ್ಟಿಯನ್ನು ಚೆನ್ನಾಗಿ ಪರೀಕ್ಷಿಸಿ, ಉತ್ತಮ ತರಹೇ ಸುಲೋಚನಗಳನ್ನು ಕೊಡಲಾಗುವದು. ಬೆಲೆ ಸುಲಭ.

ಜಂತೂಹರ್. (Insect Powder.)

ಈ ಹುಡಿಯು ಉಪಯೋಗಿಸಿದ್ದಲ್ಲಿ ಮತ್ಕುಣ (ತಗಣೆ) ಜರಳೆ (Cockroches) ವಗೈರೆ ಅನೇಕ ತರದ ಕ್ರಿಮಿಕೀಟಗಳ ಮೇಲೆ ಮಹೌಷಧಿ. ಡಬ್ಬಿ ೧ರ ಕ್ರಯ ಅ. 6.

ಸ್ಮೋಜ್.

ಈ ಕಡ್ಡಿಗಳಿಂದ ನುಸಿ ವಗೈರೆ ಜಂತುಗಳ ಬಾಧೆಗಳನ್ನು ಪರಿಹರಿಸಬಹುದು. 424 ಕಡ್ಡಿಗಳಿರುವ ಪೆಟ್ಟಿಗೆ ೧ರ ಕ್ರಯ 0—14—0.

ಇದೂ ಅಲ್ಲದೆ ನಮ್ಮಲ್ಲಿ ಅನೇಕ ತರದ ಕೊಡ್ಲೀವರ್ ಒಯಿಲ್‌ಗಳೂ, ಸಾರ್ಸಪರಿಲ್ಲಾ ಎಂಬ ರಕ್ತಶುದ್ಧಿಯ ಔಷಧಿ, ಕಫ್ ಎಲಿಕ್ಸಿರ್ ಎಂಬುವ ಅಸ್ತಮದ ಔಷಧಿ, ಇನ್ನು ಅನೇಕ ತರದ ಪೇಟೆಂಟ್ ಔಷಧಿಗಳೂ, ಚೆರಿಬ್ಲೋಸಮ್ ಪೌಡರುಗಳೂ, ಕಟ್ಲೇರಿ ಸಾಹಿತ್ಯಗಳೂ, ಅನೇಕ ತರದ ರಿಸ್ಟ್ ವಾಚುಗಳೂ, ಇಂಗ್ಲಿಷ್ ಸೆಂಟ್ಸ್‌ಗಳೂ, ರೋಮನಾಶಕವಾದ ಬಾದಶಾಯಿ ಸಾಬೂನುಗಳೂ, ಮಕ್ಕಳಿಗೆ ಹಾಲುಕೊಡುವ ಬಾಟ್ಲಿಗಳೂ, ಅಲ್‌ಮೊನಿಯಮ್ ಟೇಬ್ಲರುಗಳೂ, ಚಿತ್ರದ ಪೋಸ್ಟು ಕಾರ್ಡುಗಳೂ, ಇದೂ ಅಲ್ಲದೆ ಅನೇಕ ತರದ ಫೇನ್ಸಿ ಸಾಹಿತ್ಯಗಳೂ ಅತೀ ಸುಲಭ ಖರೀದಿಯಿಂದ ಮಾರಾಟವಾಗುವದು. ಒಮ್ಮೆಗೆ ಒಂದು ಊಲನ್ ಮಾರ್ಟನ್ನು ಸಂದರ್ಶಿಸಿರಿ.

ದಿ ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು:

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ ಒಂದರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊ... ನಮಗೆ ತಲಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್

ಸ್ವದೇಶಾಭಿಮಾನಿ ಆಫೀಸು,

ಮಂಗಳೂರು. ಜ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯೂರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಿಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚ್ಯುವರಿ:—ಮಿ| ಜೋರ್ಜ್‌ಕಿಂಗ್ ಎಫ್. ಎಫ್ ಎ. ಎಫ್ ಐ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ ಸುಬ್ರಮಣ್ಯಾಯ್ಯರ್, ಬಿ ಎ ಜೆ. ಪಿ. ಎಫ್. ಎಸ್. ಎ. ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ಪಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲ ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲೈಫ್ ಎಸ್ಯೂರೆನ್ಸ್ ಕಂಪೆನಿ ಎಂಬುವ ಜೀವವಿಮೇ ಉತ್ತರಾಯಿಕ ವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯಮಾಡಿ ತಿಳಿಸಿ. ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡುಪಿ, ತಾ 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನ ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲೈಫ್ ಎಸ್ಯೂರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವ ಕಾರಣದಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ಬಾಂಡಿ ಹಕ್ಕುದಾರನು.)

[illegible]

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ**ಪ್ರಖ್ಯಾತವಾದ ಮತ್ತು ಈಗಿನ **ಕಾಲ**ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು **ಕೈ**ವಸ್ತ್ರದಲ್ಲಿ ಹಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್ .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—.

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,
10 Princes Street, BOMBAY.

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಶೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಶೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ,
Chemists, ಕೆಮಿಸ್ಟ್ಸ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿನಕಪಾ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ ಎಸ್ ಎ ಎಸ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಒಣ್ಣ ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಖಿಜಾಬೆ ಮಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂ

ದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ "ಬಣ್ಣವು ನೈಸರ್ಗಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುದು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ ಒಲೆಯು



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ	7	8	0
ಬರೀ ಒಲೆಗೆ ಮಾತ್ರ . . ಕ್ರಯ ರೂ.	5	12	0
೫ನೇ ಮತ್ತು ೧೦೦ನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟವ್ ಡಿಪೋ, ೭೩೭। ಗಿರಗಾಂ ಬೊಂಬಾಯಿ.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಚಹುಮ್, ಉಳುಕು, ಪಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು, ಚಿಜ್ಜ, ಸುಟ್ಟ ಘಾಯ, ಕೈಕಾಲು ವೆ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು ಚಿಕ್ಕ ಕೂಸುಗಳ ದೇಹಕ್ಕೆ ದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ. ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೋ,
ಕದ್ರಿ, ಮಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 11ನೇ ಫೆಬ್ರವರಿ 1916

ಹಿಂದೂ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆಯು.

ಕಳೆದ ಶುಕ್ರವಾರ ತಾ. 4ನೇ ದಿನ ಶ್ರೀ ಕಾಶೀಕ್ಷೇತ್ರದಲ್ಲಿ ಹಿಂದೂ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆಯನ್ನು ರಾಜ ಪ್ರತಿನಿಧಿಗಳಾದ ಹಾರ್ಡಿಂಗ್ ಪ್ರಭುಗಳವರು ನೆರವೇರಿಸಿಕೊಟ್ಟರು. ಹಲವು ಹಿಂದೂ ಆಶ್ರಿತ ರಾಜರುಗಳು, ಸಂಸ್ಥಾನಗಳ ಗವರ್ನರರು, ಲೆಫ್ಟಿನೆಂಟ್ ಗವರ್ನರರುಗಳು, ಸರಕಾರದ ಉದ್ಯೋಗಸ್ಥರು, ಪ್ರಜಾ ಮುಖಂಡರು, ಇತರರೂ ಈ ಮಹೋತ್ಸವದ ಬಗ್ಗೆ ದೇಶದ ಬೇರೆ ಬೇರೆ ಕಡೆಗಳಿಂದ ದಯೆ ಮಾಡಿ ಬಂದಿದ್ದರು. ವಿಶ್ವವಿದ್ಯಾನಿಲಯ ಸಂಘದ ಅಧ್ಯಕ್ಷರಾದ ಬಹುಮಾನಪಟ್ಟ ದರ್ಭಂಗದ ಮಹಾರಾಜರವರು ವ್ಯಾಸರಾಯ ಪ್ರಭುಗಳ ಮುಂದೆ ಸ್ವಾಗತ ಪತ್ರವನ್ನು ಓದಿದ ಬಳಿಕ ಪ್ರಭುಗಳವರು ಯಥೋಚಿತ ವಚನಗಳಲ್ಲಿ ಉತ್ತರವನ್ನು ದಯೆಪಾಲಿಸಿ ಸುಮುಹೂರ್ತದಲ್ಲಿ ಶಂಕುಸ್ಥಾಪನೆಯನ್ನು ಮಾಡಿದರು.

ಅನೇಕ ಶತಮಾನಗಳಿಂದ ಬೆಳೆದು ಬಂದ ಸಂಸ್ಕೃತಿಯು ಹಿಂದೂ ಜನಾಂಗದವರಲ್ಲಿರುವದು. ಇದನ್ನು ಪೂರ್ಣವಾಗಿ ಬಿಡುವದೆಂಬುದನ್ನು ಯೋಚಿಸುವದು ಸಹ ಅಸಾಧ್ಯವಾಗಿದೆ. ಒಂದು ವೇಳೆ ಇಂಥಾ ಅಸಾಧ್ಯಕಾರ್ಯವನ್ನು ಸಾಧಿಸಲು ಪ್ರಯತ್ನಿಸಿದರೂ ಇದು ಸರ್ವನಾಶಕ್ಕೆ ಕಾರಣವಾಗುವದು. ಈಗಿನ ವಿದ್ಯಾನಿಲಯಗಳ ಶಾಲಾ ಕೊಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನವನಾಗರೀಕತೆಗೆ ಅನುಕೂಲವಾದ ವಿದ್ಯಾಭ್ಯಾಸವನ್ನು ಪಡಿಯುವ ಕಾಲದಲ್ಲಿ ತಮ್ಮ ರಕ್ತವಾಹಿನಿಗಳಲ್ಲಿ ಬೆಳೆದು ಬಂದಿರುವ ಪ್ರಾಚೀನ ಸಂಸ್ಕೃತಿಯ ಫಲಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಲು ಈಗಿನ ವಿದ್ಯಾಸ್ಥಾನಗಳಲ್ಲಿ ತಕ್ಕುದಾದ ಆಸ್ಪದವಿರದು. ಇಂಥಾ ಸಂದರ್ಭಗಳಲ್ಲಿ ಪುರಾತನ ಮತ್ತು ನವೀನ ಸಂಸ್ಕೃತಿಗಳ ಸಂಯೋಗವನ್ನು ಮಾಡಲಾರದೆ ಈಗಿನ ವಿದ್ಯಾನಿಲಯಗಳ ಫಲಪ್ರಾಪ್ತಿಯು ಹಿಂದೂ ಜನಾಂಗದ ಬೆಳವಣಿಕೆಗೆ ಅನುಕೂಲವಾಗಿರದು. ಆದ್ದರಿಂದ ನಮ್ಮ ಪ್ರಾಚೀನ ಸಂಸ್ಕೃತಿಯ ಜ್ಞಾನದೃಷ್ಟಿಯಿಂದ ಈಗಿನ ನಾಗರೀಕತೆಯನ್ನು ತಿಳಕೊಂಡು ಹಿಂದೂ ಸಮಾಜರಚನೆಗೂ, ಹಿಂದೂ ಧರ್ಮಪರಿಪಾಲನೆಗೂ ಅನುಕೂಲವಾದ ಅಂಶಗಳನ್ನು ಅನ್ಯ ನಾಗರೀಕತೆಯಿಂದ ಆರಿಸಿ ಹಿಂದೂ ಜನಾಂಗದ ಅಭಿವೃದ್ಧಿಗೆ ಹಿತಕರವಾದ ಶಿಕ್ಷಣವನ್ನು ಹಿಂದೂ ಬಾಲಕರಿಗೆ ಕೊಡುವದು ಅಗತ್ಯವಾಗಿದೆ. ಪ್ರಜಾವರ್ಗದ ಸರ್ವ ಮತಗಳನ್ನು ಸಮಾನ ದೃಷ್ಟಿಯಿಂದ ನೋಡುವ ನಮ್ಮ ಸರಕಾರದವರಿಗೆ ಈ ರೀತಿ ಬೇರೆ ಬೇರೆ ಮತದ ಪ್ರಜಾವರ್ಗಗಳಿಗೆ ಶಿಕ್ಷಣವನ್ನು ಅನುಕೂಲಿಸಿ ಕೊಡುವದು ಸಾಧ್ಯವಲ್ಲ. ಆದ್ದರಿಂದ ಹಿಂದೂ ವಿಶ್ವವಿದ್ಯಾನಿಲಯದಂಥಾ ಸಂಸ್ಥೆಗಳ ಸ್ಥಾಪನೆಯು ಈ ದೇಶಗಳಲ್ಲಿ ಅಗತ್ಯವೆಂತ ಕಂಡುಬಂದು ಇದರ ಶಂಕು ಸ್ಥಾಪನೆಯು ನೆರವೇರಿತು. ಈ ವಿಶ್ವವಿದ್ಯಾನಿಲಯದ ಉದ್ದೇಶಗಳೇನು, ಅದರ ರಚನಾ ಕ್ರಮವೇನು ಮೊದಲಾದ ಇತರ ವಿವರಗಳನ್ನು ಆಗಿಂದಾಗ್ಯೆ ಪ್ರಸ್ತಾಪಿಸಿರುವೆವಾದ್ದರಿಂದ ದರ್ಭಂಗದ ಮಹಾರಾಜರವರ ಸ್ವಾಗತಪತ್ರದಲ್ಲಿಯೂ ಹಾರ್ಡಿಂಗ್ ಪ್ರಭುಗಳ ಭಾಷಣದಲ್ಲಿಯೂ ತೋರಿಬರುವ ಈ ವಿಷಯಗಳನ್ನು ತಿರಿಗೊಮ್ಮೆ ಪ್ರಸ್ತಾಪಿಸುವದು ಅಗತ್ಯ ತೋರದು. 1,200 ಎಕರೆಗಳ ವಿಸ್ತೀರ್ಣವುಳ್ಳ ಸ್ಥಳವನ್ನು ಈ ವಿಶ್ವವಿದ್ಯಾನಿಲಯದ ಬಗ್ಗೆ ಆರಿಸಿರುತ್ತಾರೆ. ಸುಮಾರು ಒಂದು ಕೋಟಿ ರೂಪಾಯಿಗಳ ಚಂದಾದ್ರವ್ಯವು ಈ ತನಕ ಕೂಡಿರುವದು. ಇನ್ನೂ ದ್ರವ್ಯಸಹಾಯವು ಬಹಳವಾಗಿ ಬೇಕಾಗಿರುವದು. ಸರಕಾರದವರು ಈ ವಿದ್ಯಾನಿಲಯಕ್ಕೆ ಒಂದು ಲಕ್ಷ ರೂಪಾಯಿಗಳನ್ನು ದ್ರವ್ಯಸಹಾಯವಾಗಿ ಪ್ರತಿ ವರುಷದಲ್ಲಿಯೂ ಕೊಡುವರು. ಹಿಂದೂ ಧರ್ಮರಕ್ಷಣೆಯ ದೇವಸ್ಥಾನಗಳು, ಗುರುಮಠಗಳು ಜೀರ್ಣಾವಸ್ಥೆಯಲ್ಲಿರುವ ಇಂಥಾ ಕಾಲದಲ್ಲಿ ಇತರ ಶಿಕ್ಷಣದೊಂದಿಗೆ ಮತಬೋಧೆಯನ್ನೂ ಕೊಟ್ಟು ಈ ಮೂಲಕ ಹಿಂದೂಗಳ ಧರ್ಮಸಂಸ್ಥಾಪನೆಯನ್ನು ಕೈಕೊಂಡಿರುವ ಈ ವಿದ್ಯಾನಿಲಯದಿಂದ ಹಿಂದೂ ಧರ್ಮೋದ್ಧರಣೆ ಸಾಧ್ಯವಾಗಿ ಹಿಂದೂ ಜನಾಂಗದ ಐಕ್ಯವೂ ಅಭಿವೃದ್ಧಿಯೂ, ಉಂಟಾಗಲೆಂದು ಪ್ರಾರ್ಥಿಸುತ್ತೇವೆ.

ಟ್ರೈನಿಂಗ್ ಶಾಲೆಯ ಮುಷ್ಕರ.

ಮಂಗಳೂರು ಗವರ್ನಮೆಂಟ ಟ್ರೈನಿಂಗ್ ಶಾಲೆಯಲ್ಲಿ ತರಬೇತಾಗುತ್ತಿದ್ದ ಹಿಂದೂ ಉಮೇದ್ವಾರರು ಇನ್ಸ್‌ಪೆಕ್ಟರರ ಹುಕುಮಿಗೆ ವಿರೋಧವಾಗಿ ಕಳೆದ ೨, ೩, ೪ನೇ ತಾರೀಕುಗಳಲ್ಲಿ ಶಾಲೆಗೆ ಬಾರದೆ ಮುಷ್ಕರ ಹಾಕಿ ನಿಂತುಬಿಟ್ಟಿದ್ದರೆಂಬದಾಗಿ ಕಳೆದ ಸಂಚಿಕೆಯಿಂದ ವಾಚಕರು ತಿಳಿದಿರಬಹುದು. ತಾ. ೫ನೇ ಶನಿವಾರ ಮತ್ತು ತಾ. ೬ನೇ ಆದಿತ್ಯವಾರ ಟ್ರೈನಿಂಗ್ ಶಾಲೆಗೆ ರಜಾ ಇತ್ತು. ಆದಿತ್ಯವಾರ ಸಾಯಂಕಾಲ ಉಮೇದ್ವಾರರಲ್ಲಿ ಹಲವರೂ, ಟ್ರೈನಿಂಗ್ ಶಾಲೆಯ ಉಪಾಧ್ಯಾಯರಲ್ಲಿ ಕೆಲವರೂ, ಇನ್ಸ್‌ಪೆಕ್ಟರರೂ, ಕಲೆಕ್ಟರರೂ ಡಿರೆಕ್ಟರರನ್ನು ನೋಡುವದಕ್ಕಾಗಿ ೬ ಗಂಟೆಗೆ ರೈಲ್ವೆ ಪ್ಲೇಟ್ ಫೋರ್ಮಿಗೆ ಹೋದರು. ಡಿರೆಕ್ಟರರು ಕಲೆಕ್ಟರರ ಮತ್ತು ಇನ್ಸ್‌ಪೆಕ್ಟರರ ಸಂಗಡ ಒಂದೆರಡು ಮಾತುಗಳನ್ನು ಆಡಿ ಕಲೆಕ್ಟರರ ಬಂಗ್ಲೆಗೆ ಹೋದರು. ಇನ್ಸ್‌ಪೆಕ್ಟರರು ತಮ್ಮ ಬಂಗ್ಲೆಗೆ ತೆರಳಿದರು. ತಾ. ೭ನೇ ಸೋಮವಾರ ೧೦ ಗಂಟೆಗೆ ಇನ್ಸ್‌ಪೆಕ್ಟರರು ಟ್ರೈನಿಂಗ್ ಶಾಲೆಗೆ ನೆಟ್ಟಗೆ ಹೋಗಿ "ಉಮೇದ್ವಾರರು ಇನ್ನು ಕೆಲಸಕ್ಕೆ ಬಾರದಿದ್ದರೆ ....ಇಂತಿಂಥವರನ್ನು ಡಿಸ್‌ಮಿಸ್ ಮಾಡಬೇಕಾಗಿಯೂ ಉಳಿದವರನ್ನು ಎರಡನೆ ಹುಕುಮು ಕೊಡುವವರೆಗೆ ಅಮಾನತು ಮಾಡಬೇಕೆಂಬದಾಗಿಯೂ ಹೆಡ್ ಮಾಸ್ಟರಿಗೆ ಅಪ್ಪಣೆ ಕೊಡಿಸಿದರು. ಅದಕ್ಕೆ ಹೆಡ್ ಮಾಸ್ಟರರು—ಉಮೇದ್ವಾರರು ಕೆಲಸಕ್ಕೆ ಹಾಜರಾಗುವ ಸಂಭವವಿದೆ. ಹುಕುಮನ್ನು ಜಾರಿ ಮಾಡಲಿಕ್ಕೆ ನನಗೆ ೩ ಗಂಟೆಯಾದರೂ ಸಮಯ ಬೇಕು—ಎಂದು ಕೇಳಿದಕ್ಕೆ ಸಮ್ಮತಿಸಿ ಇನ್ಸ್‌ಪೆಕ್ಟರರು ಕಲೆಕ್ಟರ ಬಂಗ್ಲೆಗೆ ಹೋಗಿ ಅಲ್ಲಿಂದ ಡಿರೆಕ್ಟರರನ್ನು ಸೆಂಟ್ ಎನ್ಸ್ ಕೊನ್ವೆಂಟ್ ಶಾಲೆಗೆ ಕೊಂಡುಹೋಗುವದಕ್ಕಾಗಿ ತೆರಳಿ ಇಬ್ಬರೂ ಮೋಟರ್ ಗಾಡಿ ಹತ್ತಿ ಬರುವಷ್ಟರಲ್ಲಿ ಮುಷ್ಕರ ಹಿಡಿದ ಉಮೇದ್ವಾರರೆಲ್ಲರೂ ಆ ಮೋಟರ್‌ಕಾರನ್ನು ದಾರಿಯಲ್ಲಿ ಅಡ್ಡಾಯಿಸಲು ಡಿರೆಕ್ಟರರು—ನಿಮ್ಮಲ್ಲಿ ಇಂಗ್ಲಿಷು ತಿಳಿಯುವವರು ಯಾರಾದರೂ ಇದ್ದರೆ ಅವರು ಮುಂದೆ ಬಂದು ನಿಲ್ಲಲಿ, ಎಂದು ಹೇಳಿದಕ್ಕೆ ಉಮೇದ್ವಾರರಲೊಬ್ಬನು ಎದುರು ಹೋಗಿ ನಿಂತನು. ಡಿರೆಕ್ಟರರು ನಾನು ಈ ಮುಷ್ಕರಕ್ಕಾಗಿ ಇಲ್ಲಿ ಬಂದವನಲ್ಲ. ಮುಷ್ಕರದ ಸಂಗತಿಯು ನಿಮಗೂ ಮತ್ತು ಇನ್ಸ್‌ಪೆಕ್ಟರಿಗೂ ಸೇರಿದೆ. ಯಾಕಂದರೆ, ಅವರೇ ನಿಮ್ಮ ಮೇಲಣ ಅಧಿಕಾರಿಗಳು. ನೀವು ಅವರು ಹೇಳಿದ ಹಾಗೆ ನಡಕೊಳ್ಳದಿದ್ದರೆ ನಿಮಗೆ ಇನ್ನೂ ಬಹಳ ತೊಂದರೆಗೆ ಕಾರಣವಾದೀತು. ಅವರು ನಿಮ್ಮನ್ನು ದಯೆಯಿಂದ ನಡಿಸುವರೆಂಬದು ನನಗೆ ಗೊತ್ತಿದೆ ಎಂದು ಹೇಳಿದರು. ಈ ಹುಕುಮನ್ನು ಕೇಳಿ ಉಮೇದ್ವಾರರು ಮುಷ್ಕರವನ್ನು ಕೂಡಲೇ ಬಿಟ್ಟು ಶಾಲೆಗೆ ಹಾಜರಾದರು. ಸಾಯಂಕಾಲ ಈ ಉಮೇದ್ವಾರರು ಇನ್ಸ್‌ಪೆಕ್ಟರರ ಬಂಗ್ಲೆಗೆ ಹೋಗಿ ಕ್ಷಮಾಪಣಾ ಪತ್ರವನ್ನು ಬರೆದು ಎಲ್ಲರೂ ದಸ್ಕತು ಹಾಕಿ ಕೊಟ್ಟುಬಿಟ್ಟರು. ಇನ್ಸ್‌ಪೆಕ್ಟರು ಹೇಳಿದ ಹಾಗೆ ಉಮೇದ್ವಾರರು ತಾವು ಕೇಳುತ್ತೇವೆಂಬದಾಗಿಯೂ, ಈ ಮುಷ್ಕರಕ್ಕಾಗಿ ತಮ್ಮನ್ನು ಶಿಕ್ಷಿಸದೆ ಎಲ್ಲರನ್ನು ಖುಲಾಸು ಮಾಡಬೇಕೆಂಬದಾಗಿಯೂ, ಈ ಮುಷ್ಕರದ ಸಂಗತಿಯನ್ನು ಇನ್ಸ್‌ಪೆಕ್ಟರರು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಮುಂಚಿನಂತೆಯೇ ದಯೆಯಿಂದ ನಡಿಸಬೇಕಾಗಿಯೂ ಮಾಫಿ ಬೇಡಿಕೊಂಡರು. ಇನ್ಸ್‌ಪೆಕ್ಟರರು ಅದನ್ನು ಸ್ವೀಕರಿಸಿ ಎಲ್ಲರನ್ನೂ ಕ್ಷಮಿಸಿ ಖುಲಾಸು ಪಡಿಸಿದರು. ಈಗ ಟ್ರೈನಿಂಗ್ ಶಾಲೆಯಲ್ಲಿ ಪಂಚಮ ಉಮೇದ್ವಾರರನ್ನು ಮುಂಚಿನ ಸ್ಥಳದಲ್ಲಿ ಕೂತುಕೊಳ್ಳಿಸುವುದಿಲ್ಲ. ಇತರ ಜಾತಿಗಳ ಉಮೇದ್ವಾರರಿಗೆ ಪಾಠಗಳನ್ನು ಕೇಳಲು ಇರುವ ಅನುಕೂಲತೆಗಳು ಪಂಚಮರಿಗೂ ಸಿಕ್ಕಿದಂತಾಯಿತು. ಈ ಪ್ರಕಾರ ಪಂಚಮರನ್ನು ಅವರು ಮೊದಲಿದ್ದ ಸ್ಥಳದಿಂದ ಬೇರೊಂದು ಸ್ಥಳಕ್ಕೆ ತಂದದ್ದರಿಂದ ಯಾವ ಜಾತಿಯ ಕಟ್ಟುಕಟ್ಟಳೆಗಳನ್ನಾರೂ ಉಲ್ಲಂಘಿಸಿದ್ದಿಲ್ಲ.

ಹಿಂದೀ ಸ್ವರಾಜ್ಯದ ವಿರೋಧಿಗಳು.

ಉತ್ತಮವಾದ ಪಾಶ್ಚಾತ್ಯ ಶಿಕ್ಷಣ, ಗ್ರಾಹ್ಯವಾದ ನವೀನ ಸಂಸ್ಕೃತಿ, ಅಚಲವಾದ ರಾಜಭಕ್ತಿ ಮತ್ತು ನಿಷ್ಕಪಟವಾದ ಸಾಮ್ರಾಜ್ಯಸೇವೆ ಮತ್ತು ಶುದ್ಧವಾದ ದೇಶಭಕ್ತಿ,-ಇವೇ ಈಗಿನ ಹಿಂದೀಜನರಿಗೋಸ್ಕರ ಸ್ವರಾಜ್ಯದ ಪರೀಕ್ಷೆಯಲ್ಲಿ ಇಟ್ಟ ಬೇರೆ ಬೇರೆ ವಿಷಯಗಳು. ಈ ಎಲ್ಲ ವಿಷಯಗಳ ಪರೀಕ್ಷೆಯಲ್ಲಿ ನಮ್ಮ ಹಿಂದೀ ದೇಶವು ಸರಿಯಾಗಿ ಉತ್ತೀರ್ಣವಾದರೆ, ಆಯಾ ವಿವಕ್ಷಿತ ವಿಷಯಗಳಲ್ಲಿ ಪಾಸಾಗುವ ವಿದ್ಯಾರ್ಥಿಗಳಿಗೆ ಬಿ. ಎ. ಎಮ್. ಎ. ಮುಂತಾದ ಪದವಿಗಳು ಸಿಗುವಂತೆ ನಮ್ಮ ಹಿಂದೀ ದೇಶಕ್ಕೂ ಸ್ವರಾಜ್ಯ ಪದವಿಯು ಲಭಿಸದೆ ಇರಲಾರದು ಎಂದು ವೃದ್ಧ ಪಿತಾಮಹರಾದ ಡಾಕ್ಟರ ದಾದಾಭಾಯಿಯವರ ಆಶೆ ಮಾತ್ರವಲ್ಲ; ನಂಬಿಕೆ ಕೂಡ ಉಂಟು. ರಾಷ್ಟ್ರೀಯ ಸಭೆಯ ಕಳೆದ ಅಧಿವೇಶನದಲ್ಲಿ ಅಧ್ಯಕ್ಷರಾದ ಸರ್ ಸತ್ಯೇಂದ್ರ ಪ್ರಸನ್ನರು ಕೂಡ "ಸ್ವರಾಜ್ಯವು ಹಿಂದೀ ಜನರ ಧ್ಯೇಯವು; ಅದಕ್ಕಾಗಿ ಅವರು ತಮ್ಮ ಧರ್ಮ, ಸಮಾಜ, ಉದ್ಯೋಗ, ನೀತಿ ಮುಂತಾದ ವಿವಿಧ ಸಾಧನಗಳ ಮೂಲಕವಾಗಿ ಅದಷ್ಟು ಪ್ರಗತಿಯನ್ನು ಹೊಂದಿ ಪಾತ್ರರಾಗಬೇಕು" ಎಂದು ಮೊದಲಿನ ದಿವಸದ ಭಾಷಣದಲ್ಲಿ ಉಲ್ಲೇಖಿಸಿ ಮರುದಿನ "ಸ್ವರಾಜ್ಯ"ದ ನಿರ್ಣಯವನ್ನು ಇಡೀ ಹಿಂದೀ ರಾಷ್ಟ್ರದ ಆಕಾಂಕ್ಷೆಯಿಂದ ಪಾಸುಮಾಡಿರುವರು. ಈ ಎಲ್ಲ ಸಂಗತಿಗಳನ್ನು ಪರ್ಯಾಲೋಚಿಸಿದ್ದಲ್ಲಿ ನಾವು ಕಳೆದ ಎರಡು ಸಂಚಿಕೆಗಳಲ್ಲಿ ಸೂಚಿಸಿದ್ದಂತೆ ಹಿಂದೀಜನರಲ್ಲಿ ಈಗ ಸ್ವರಾಜ್ಯದ ಕೋರಿಕೆಯು ಪೂರ್ಣವಾಗಿ ಆವಿರ್ಭವಿಸಿದೆಂಬುವುದು ಸ್ಪಷ್ಟವಾಗುತ್ತದೆ. ಆದರೆ ಸ್ವರಾಜ್ಯವೆಂಬ ಹೆಸರನ್ನು ಕೇಳಿದ ಕೂಡಲೆ ಕೆಲವರಿಗೆ ಹೆದರಿಕೆಯಾಗುವದುಂಟು. ಈ ಕೆಲವರಲ್ಲಿ ಎಂಗ್ಲೊ ಇಂಡಿಯನ್ನರು ಅನೇಕರಿದ್ದಾರೆ. ಅವರ ವಿಷಯದಲ್ಲಿ ಹೇಳಬೇಕಾದ್ದನ್ನು ನಾವು ಹಿಂದೆಯೇ ಹೇಳಿದ್ದೇವೆ. ನಮ್ಮಲ್ಲಿಯೇ ಹಲವರು ಈ ಕೆಲವರಲ್ಲಿ ಸೇರಿದವರಿದ್ದಾರೆ. ಅವರನ್ನು ಕುರಿತು ಒಂದೆರಡು ಮಾತುಗಳನ್ನು ಬರೆದು ಈ ಸ್ವರಾಜ್ಯದ ವಿಷಯವನ್ನು ನಾವು ಈ ಹೊತ್ತು ಮುಗಿಸುವವರಿದ್ದೇವೆ.

ಹಿಂದೀ ಸ್ವರಾಜ್ಯದ ವಿರೋಧಿಗಳಿಗೆ—ಅವರು ಎಂಗ್ಲೋ ಇಂಡಿಯನ್ನರಿರಲಿ, ಸ್ವದೇಶೀಯರಿರಲಿ, ಆ ಸ್ವದೇಶೀಯರಲ್ಲಿಯೂ ಯಾವ ಪಕ್ಷದವರೇ ಆಗಿರಲಿ—ನಾವು ಸ್ಪಷ್ಟವಾಗಿ ಹೇಳುವುದೇನೆಂದರೆ ಸರಕಾರಕ್ಕೆ ಮಾನ್ಯವಾದ ರೀತಿಯಿಂದಲೇ ಸ್ವರಾಜ್ಯವನ್ನು ಬೇಡಿಕೊಳ್ಳುವವರು ಆ ಸ್ವರಾಜ್ಯ ಪ್ರಾಪ್ತಿಗಾಗಿ ನಿಂದ್ಯ, ಘಾತುಕ ಮತ್ತು ನೀತಿಬಾಹ್ಯವಾದ ಹಾಗೂ ಕಾನೂನುಗಳನ್ನು ಮೀರಿರುವ ಯಾವ ಉಪಾಯವನ್ನೂ ಈ ಮೊದಲು ಅನುಸರಿಸಲಿಲ್ಲ; ಈಗ ಅನುಸರಿಸುವುದಿಲ್ಲ; ಮುಂದೆ ಅನುಸರಿಸಲಿಕ್ಕೂ ಇಲ್ಲ. 'ಯಜ್ಞದಲ್ಲಿ ದೇವತೆಗಳು ಹವಿಸ್ಸಿಗೆ ಭಾಗಿಗಳಾಗುವಂತೆ ನಮ್ಮ ಈ ಸ್ವರಾಜ್ಯ ಯಜ್ಞದಲ್ಲಿ ರಾಜ್ಯಕರ್ತರು ನಮ್ಮ ಹೃದಯದಲ್ಲಿರುವ ರಾಜಭಕ್ತಿಗೆ ಪೂರ್ಣವಾಗಿ ಭಾಗಿಗಳೇ ಆಗುದು. ವೈದಿಕ ಯಜ್ಞದಲ್ಲಿ ಪಶುವನ್ನು ಕೊಲ್ಲುವಂತೆ ನಾವು ಈ ಸ್ವರಾಜ್ಯ ಯಜ್ಞದಲ್ಲಿ ನಮ್ಮ ಬಾಹ್ಯ ಭೇದಗಳನ್ನೂ, ಅಜ್ಞಾನವನ್ನೂ, ನಿರುದ್ಯೋಗಿತ್ವವನ್ನೂ ನಾಶಿಸಬೇಕಾದುದು. ಯಜ್ಞದ ಕ್ರಿಯೆಗಳು ಮಂತ್ರೋಕ್ತ ವಿಧಾನಗಳನ್ನು ಅನುಸರಿಸುವಂತೆ ನಮಗೆ ಈ ಯಜ್ಞದಲ್ಲಿ ಬ್ರಿಟಿಷರ ನ್ಯಾಯಪ್ರಿಯತೆ ಮತ್ತು ದಯೆ ಇವುಗಳನ್ನೇ ಹಿಂಬಾಲಿಸಿಕೊಂಡು ಹೋಗಬೇಕಾಗಿದೆ. ಈ ರೀತಿಯಿಂದ ನಾವು ಸ್ವರಾಜ್ಯ ಸಂಪಾದನೆಯ ಕಾರ್ಯ ಕ್ರಮಗಳನ್ನು ನಿಶ್ಚಯಿಸಿಕೊಂಡು ನಡೆಯುವಾಗ ಅಲ್ಲದ ಸಲ್ಲದ ಅರ್ಥಗಳನ್ನು ನಾವೇ ಕಲ್ಪಿಸಿಕೊಳ್ಳುವುದು ಶುದ್ಧ ಅಜ್ಞಾನವಲ್ಲವೇ? ನಾವು ಸ್ವರಾಜ್ಯ ಸಂಪಾದನೆಯೇ ನಮ್ಮ ಗುರಿಯಾಗಿರಬೇಕೆಂದು ಯಾವ ಯಾವಾಗ ಹೇಳುವೆವೋ ಆಗಾಗ ಒಂದು ತೊಟ್ಟಿಗೆ ಎರಡು ಹಣ್ಣುಗಳಂತೆ ನಮ್ಮಲ್ಲಿ ರಾಜಭಕ್ತಿ ಮತ್ತು ದೇಶಪ್ರೀತಿ ಎಂಬೀ ಎರಡು ಮನೋವೃತ್ತಿಗಳಾದ ಸಹೋದರಿಯರು ಏಕಪ್ರಕಾರವಾಗಿ ನಮ್ಮನ್ನು ಸ್ವಕರ್ತವ್ಯದಲ್ಲಿ ಯಾರಿಗೂ ವಿರೋಧಾಸ್ಪದವಲ್ಲದ ಮತ್ತು ನ್ಯಾಯವಾದ ಮಾರ್ಗದಿಂದ ಮುಂದರಿಸಲು ಪ್ರೇರಿಸುತ್ತವೆಂದು ಈ ವಿರೋಧಿ ವಾದಿಗಳು ತಿಳಿಯಬೇಕಾದುದು. ನಮ್ಮಲ್ಲಿ ನಿಷ್ಕಲಂಕವಾದ ರಾಜಭಕ್ತಿ, ನಿಶ್ಚಲವಾದ ದೇಶಭಕ್ತಿ,-ಈ ಎರಡು ಸಾಧನಗಳಿದ್ದರೆ ನಮ್ಮ ಕಾರ್ಯವು ಎಡರಿಲ್ಲದೆ ಸಾಧ್ಯವಾಗುವುದು. ಇದೇ ನಮ್ಮ ಪತ್ರಿಕೆಯ ಮುಖ್ಯವಾದ ಅಭಿಪ್ರಾಯವು. ದೇಶವನ್ನು ಉದ್ಧರಿಸಬೇಕೆಂದು ರಾಜ್ಯಕರ್ತರೊಡನೆ ವಿರೋಧ ಮಾಡಿಕೊಳ್ಳುವುದು ಒಳ್ಳೇದಲ್ಲ; ಅವಶ್ಯವೂ ಇಲ್ಲ. ಹಾಗೆಯೇ ರಾಜಭಕ್ತಿಗಾಗಿ ದೇಶವನ್ನು ಮರೆತುಬಿಡುವುದು ನ್ಯಾಯವಲ್ಲ. ಅಸ್ತು, ಸ್ವರಾಜ್ಯದ ವಿರೋಧಿಗಳೆಂದರೆ ಸ್ವರಾಜ್ಯದ ಘಾತಕರು—ಹಗೆಗಳು ಹೀಗರ್ಥವಲ್ಲ. ಯಾವುದಾದರೂ ಒಂದು ಕಾರಣವನ್ನು ತೋರಿಸಿ ಸ್ವರಾಜ್ಯವು ನಮಗೀಗ ಆಗತಕ್ಕದ್ದಿಲ್ಲ. ಅದಕ್ಕೆ ನಾವು ಅನರ್ಹರು ಎಂದು ವಾದಿಸುವವರನ್ನು ನಾವು 'ವಿರೋಧಿಗಳೆಂಬ ಹೆಸರನ್ನು ಕೊಟ್ಟಿದ್ದೇವೆ. ಈ ವಿರೋಧವಾದಿಗಳಲ್ಲಿ ಬೇರೆ ಬೇರೆ ಕಾರಣಗಳನ್ನು ತೋರಿಸುವವರಿದ್ದಾರೆ. ನಮ್ಮ ಪತ್ರಿಕೆಯ ಈ ವರ್ಷದ ಜನವರಿಯ ೨೮ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಿದ ವರ್ತಮಾನಗಳ ಸಂಗ್ರಹದಲ್ಲಿ ಡಾಕ್ಟರ ಭಾಂಡಾರಕರರ ಮತ್ತು ಟಿ. ಪೊನ್ನಂಬುಲಂ ಪಿಳ್ಳೆ ಎಂಬ ಪಂಡಿತರ ಮತವನ್ನು ಕೊಟ್ಟಿದ್ದು ವಾಚಕರಿಗೆ ನೆನಪಿನಲ್ಲಿರಬಹುದು. ಆರ್ಯ ಭಾರತೀಯರ ಪರಿಷತ್ತಿನಲ್ಲಿ ಮಾತಾಡುವಾಗ ಡಾಕ್ಟರ ಭಾಂಡಾರಕರರು 'ನಮ್ಮ ದೇಶವು ಸ್ವರಾಜ್ಯ ಹೊಂದಲಿಕ್ಕೆ ಪಾತ್ರವಲ್ಲ' ಎಂದು ಹೇಳಿ ಅದಕ್ಕೆ ಕಾರಣಗಳನ್ನು ಕೊಟ್ಟಿರುವರೇನೆಂದರೆ:-ಉದ್ಯೋಗದಲ್ಲಿ ಉನ್ನತಿಯನ್ನು ಹೊಂದಿದ ಹುದ್ದೇದಾರರು ತಮ್ಮ ತಮ್ಮ ಸ್ವಜಾತಿಯವರಿಗೆ ಗುಣವಾಗಿ ನಡಿಸುವ ಲಕ್ಷಣವು ಬಹು ಪೂರ್ವದಿಂದ ನಮ್ಮ ದೇಶದ ಜನರಲ್ಲಿ ಬೆಳೆದು ಬಂದಿದೆ. ಇಂಗ್ಲಿಷ ವಿದ್ಯೆಯಿಂದ ಈ ವ್ಯಾಧಿಯ ನಿವಾರಣೆಯಾಗುವದೆಂಬ ಕೋರಿಕೆ ಇತ್ತು. ಪರಂತು ಹಾಗೆ ಆದದ್ದು ಕಂಡುಬರುವದಿಲ್ಲ. ಭಾಂಡಾರಕರರ ಈ ಕಾರಣದಲ್ಲಿ ಎಷ್ಟೋ ಸತ್ಯವಿದೆ. ಇದು ನಿರ್ವಿವಾದ ಸಂಗತಿಯು. ಆದರೆ ಡಾಕ್ಟರರ ಈ ವಿಧಾನವು ಕೊಂಚ ಚಮತ್ಕಾರಿಕವಾಗಿದೆ. ಕಾರಣವೇನಂದರೆ ಸ್ವಜಾತಿಯವರಿಗೆ ಗುಣವಾಗಿ ನಡಿಸುವುದು ವಿದ್ಯಾಹೀನರಿಗಾಗಲಿ, ವಿದ್ಯಾವಂತರಿಗೇ ಆಗಲಿ ಹೇಗೆ ದೋಷಾಸ್ಪದವಾಗುವುದೋ ನಮಗೆ ತಿಳಿಯದು. ಸ್ವಜಾತಿಯ ಹಿತವನ್ನು ಮಾಡುವುದು ರಾಷ್ಟ್ರೀಯ ಐಕ್ಯಕ್ಕೆ ವಿರೋಧವೋ? ತನ್ನ ಜಾತಿಯವರಿಗೆ ಗುಣವಾಗಿ ನಡೆಯುವಾಗ ಪರದ್ವೇಷವನ್ನು ಮಾಡಬೇಕಾಗುವುದೋ? ಯಾವ ಸಂಗತಿಯನ್ನಾಲೋಚಿಸಿ ಭಾಂಡಾರಕರರು—ಜಾತಿ ಹಿತವು ಎಲ್ಲಿ ಉಂಟೋ ಅದು ಸ್ವರಾಜ್ಯಕ್ಕೆ ಮಡಿಯಾದ ಸ್ಥಾನವಲ್ಲ; ವೈಲಿಗೆಯ ಜಾಗೆಯು ಎಂತ ವಿಧಿಸಿರುವರು? ಇನ್ನೂ ಕೆಲವು ಜಿಜ್ಞಾಸೆಗಳು ಇಲ್ಲಿ ಬರುವವು: ಈಗ ಎಲ್ಲೆಲ್ಲಿ ಸ್ವರಾಜ್ಯವುಂಟೋ ಅಲ್ಲಲ್ಲಿ ಆಯಾ ಜಾತಿಯ—ಆಯಾ ಮತದ, ಆಯಾ ಪಕ್ಷದ ಹಿತವನ್ನು ಮಾಡುವವರಿಲ್ಲವೋ? ಸ್ವರಾಜ್ಯವನ್ನುಪಭೋಗಿಸುವ ದೇಶಗಳಲ್ಲಿ ನಮ್ಮಲ್ಲಿಯಂತೆ ಜಾತಿಯೆಂಬ ಹೆಸರಿನಿಂದ ಭೇದಗಳಿಲ್ಲದಿದ್ದರೂ ಬೇರೆ ಅನೇಕ ಪಕ್ಷಗಳೂ, ಮತಗಳೂ (ಅಭಿಪ್ರಾಯಗಳೂ) ಧಾರಾಳವಾಗಿವೆ. ಮತ್ತು ಈ ವಿದ್ಯಮಾನಗಳು ನಮ್ಮ ಜಾತಿ ಸಂಸ್ಥೆಗಳಿಗಿಂತ ಅನೇಕ ಪಕ್ಷದ್ವೇಷಗಳನ್ನು ತಂದುಕೊಡುತ್ತವೆ. ಇದು ಡಾಕ್ಟರರಿಗೆ ಅವೇದ್ಯವಲ್ಲ. ಹೀಗಿರಲು ಇವರು ಸ್ವಜಾತಿ ಹಿತದ ಬೆಕ್ಕನ್ನು ಸ್ವರಾಜ್ಯದ ಮಾರ್ಗದಲ್ಲಿ ಅಪಶಕುನಾರ್ಥವಾಗಿ ಅಡ್ಡ ತಂದದ್ದನ್ನು ನೋಡಿ ಆಶ್ಚರ್ಯವಾಗುತ್ತದೆ! ಸ್ವಜಾತಿಯ ಹಿತಕ್ಕಾಗಿ ಯತ್ನ ಮಾಡುವಾಗ ಪರಜ್ಞಾತಿಯ ಹಿತವನ್ನು ನಾಶಿಸಬೇಕೆಂದು ಹಿಂದೂ ದೇಶದ ಯಾವದೂ ಜಾತಿಯ ಸೂತ್ರವಿಲ್ಲ. ಡಾಕ್ಟರ ಭಾಂಡಾರಕರರು ಸ್ವರಾಜ್ಯಕ್ಕಾಗಿ ನಮ್ಮ ಅಪಾತ್ರತೆಯ ಮೀಮಾಂಸೆಯನ್ನು ಈ ಪ್ರಕಾರವಾಗಿ ಮಾಡುವಾಗ ಪಿಳ್ಳೆ ಪಂಡಿತನಂತು ಹಿಂದೂಸ್ಥಾನದಿಂದ ಜಾತಿಭೇದವು ಪರಿಪೂರ್ಣವಾಗಿ ಹೋದವಿನಹ ಈ ದೇಶವು ಸ್ವರಾಜ್ಯ ಹೊಂದಲಿಕ್ಕೆ ಯೋಗ್ಯವಾಗಲಾರದೆಂದು ಆಣೆ ಕೊಟ್ಟು ಹೇಳುತ್ತಿದ್ದಾನೆ. ಭಾಂಡಾರಕರರು ಮತ್ತು ಟಿ. ಪೊನ್ನಂಬುಲಂ ಪಿಳ್ಳೆ ಇವರಿಬ್ಬರು ದೇಶದ ಮಟ್ಟಿಗೆ ಸ್ವಲ್ಪ ದೂರದವರಾದರೂ ಸ್ವರಾಜ್ಯದ ನಿರಾಕರಣೆ ಮಟ್ಟಿಗೆ ಬಹಳೇ ಹತ್ತಿರದಲ್ಲಿದ್ದಾರೆ. ಆದರೆ ಇದು ಕೇವಲ ಭ್ರಮಾತ್ಮಕ ಮಾತ್ರವಲ್ಲ, ಉಪಹಾಸಾಸ್ಪದವಾದುದೂ ಕೂಡ ಇರುವುದು. ಜಾತಿಭೇದಕ್ಕೂ, ಸ್ವರಾಜ್ಯಕ್ಕೂ ಯಾವ ಕಾರ್ಯ ಕಾರಣ ಭಾವವಿದೆ? ಬ್ರಹ್ಮದೇಶದಲ್ಲಿ ಜಾತಿ ಭೇದಗಳಿರಲಿಲ್ಲ; ಈಗಲೂ ಇಲ್ಲ. ಒಂದೇ ಬೌದ್ಧಮತವಿರುವುದು. ಹೀಗಿರಲು ಯಾಕೆ ಅವರ ರಾಜ್ಯವು ನಷ್ಟವಾಯಿತು? ಆಯರ್ಲಂಡದಲ್ಲಿ ಜಾತಿಭೇದಗಳಿಲ್ಲ. ಯಾಕೆ ಅವರಿಗಿನ್ನೂ ಹೋಮ್ ರೂಲ್ ದೊರೆಯುವುದಿಲ್ಲ? ಸ್ವರಾಜ್ಯ ಪ್ರಾಪ್ತಿಗೆ ಜಾತಿಗಳ ಏಕತ್ವ ಮೊದಲಾದ ಸಾಮಾಜಿಕ ಸಂಗತಿಗಳು ಮುಖ್ಯ ಕಾರಣಗಳಲ್ಲ. ಅದರ ನಿಜವಾದ ಕಾರಣಗಳೂ ಬೇರೆಯೇ ಸರಿ. ಹೀಗಿರುವಾಗ ವಿದ್ಯಾ ಪ್ರವೀಣರಾದ ಭಾಂಡಾರಕರ ಪ್ರಭೃತಿಯರು ಇವುಗಳಿಗೆ ಮುಖ್ಯತ್ವವನ್ನು ಕೊಡುವ ಕಾರಣವೇನೆಂಬ ಪ್ರಶ್ನೆಯು ಬರುತ್ತದೆ. ಇದಕ್ಕೆ ಒಂದು ದೃಷ್ಟಾಂತಪೂರ್ವಕವಾಗಿ ಉತ್ತರ ಕೊಟ್ಟ ಹೊರತು ವಾಚಕರಿಗೆ ಸರಿಯಾಗಿ ಸಮಾಧಾನವಾಗಲಾರದು. ಶ್ರೀ ಕಾಶಿಯಂತಹ ಕ್ಷೇತ್ರದಲ್ಲಿ ಒಬ್ಬ ಯಾತ್ರಿಕನು ಹೋದರೆ ಅಲ್ಲಿಯ ಬೇರೆ ಬೇರೆ ವ್ಯಾಪಾರಿಗಳು ಹೇಳುವುದುಂಟು: ಈ ಹೂವು, ಬಿಲ್ವಪತ್ರಿ, ತುಲಸಿ ಮುಂತಾದ್ದನ್ನು ದೇವರಿಗೆ ಸಮರ್ಪಿಸದಿದ್ದರೆ ಇಗೋ, ನೋಡಿರಿ, ನಿಮ್ಮ ಯಾತ್ರೆಯು ಸಫಲವಾಗಲಾರದು.' ಎಂತ ಹೂ ಮಾರಾಟದವನು ಭ್ರಷ್ಟಾಂಜಲಿ ಹಾಕುವನು! ಗಂಗೆಯಲ್ಲಿ ಕಾಣಿಕೆಗಾಗಿ ಕಾಸು ದುಡ್ಡು ಹಾಕದಿದ್ದರೆ ಬೇರೆ ಎಲ್ಲ ವ್ಯರ್ಥವೆಂತ ಅಂಬಿಗನು ಹೇಳುವನು. 'ಧನಿಗಳಿರೇ, ಇಷ್ಟು ಪುಣ್ಯಮಯ ಕ್ಷೇತ್ರದಲ್ಲಿ ಬಂದಿರುವಿರಿ; ಔಷಧದ ಒಂದೆರಡು ಕುಪ್ಪಿಗಳನ್ನು ತಕ್ಕೊಳ್ಳದಿದ್ದರೆ ಹಾಗಾದರೆ ನೀವು ಯಾಕೆ ಬಂದದ್ದು!' ಎಂದು ಮದ್ದು ಮಾರಾಟದವನು ಆರೋಗ್ಯವೊದಗಿಸ

...ಸುವನು! ಅಷ್ಟರೊಳಗೆ 'ಸ್ವಾಮಿ, ಈ ರೂಪಾಯಿಯ ಚುಂಗುಡಿ, ಚಿಲ್ಲರೆಗಳು ಬೇಡವೇ? ಸ್ವಲ್ಪ ತಕ್ಕೊಳ್ಳಬಾರದೇ? ರೂಪಾಯಿಗೆ ಒಂದು ಆಣೆ (ಚುಂಗುಡಿ ಬಗ್ಗೆ) ಕಮಿಶನ್ ಹೋದರೆ ನಿಮಗೆ ಮಹಾ ಹಾನಿಯಾದುದೇನು' ಎಂದು ಕೇಳುವನು ಆಶ್ಚರ್ಯವೇನೆಂದರೆ ಆವರವರು ತಂತಮ್ಮ ಕುದುರೆಗಳನ್ನು ಯಾತ್ರಿಕನ ಮೈಮೇಲೆ ನಡಿಸುವರು. ಹಾಗೆಯೇ ಸದ್ಯಃ ನಮ್ಮ ರಾಷ್ಟ್ರದ ಸ್ಥಿತಿಯಾಗಿದೆ ಕಾಶಿ ಯಾತ್ರೆಯು ಅಲ್ಲಿಯ ಮಾರಾಟದ ಒಡವೆಗಳನ್ನು ಕೊಂಡ ಹೊರತು ಸಫಲವಾಗಲಾರದೆಂದು ಆ ಮಾರಾಟದವರು ಶಪಿಸುವಂತೆ ಸ್ವರಾಜ್ಯದ ವಿಷಯದಲ್ಲಿ ಈ ಸುಧಾರಣಾ ವಾದಿಗಳು ಶಪಿಸುತ್ತಿರುವರು. ಕೆಲವರು ಜಾತಿಭೇದಗಳನ್ನು ಮುರಿಯಬೇಕೆಂದೆನ್ನುವರು. ಕೆಲವರು ವಿಧವಾ ಪುನರ್ವಿವಾಹವು ಅಗತ್ಯವೆಂದೆನ್ನುವರು ಇನ್ನು ಬೇರೆಯವರು ಅಸ್ಪೃಶ್ಯೋದ್ಧಾರದಲ್ಲಿ ದೀಕ್ಷಿತರಾಗಿರುವರು. ಇನ್ನು ಕೆಲವು ಬುದ್ಧಿವಂತರು ಹಿಂದೂ ಧರ್ಮದ ರೂಪಾಂತರವಾದ ಹೊರತು ಈ ದೇಶಕ್ಕೆ ಸ್ವರಾಜ್ಯವು ವ್ಯರ್ಥವೆಂತ ಸಾರಿ ಹೇಳುವರು. ಆದರೆ ಸ್ವರಾಜ್ಯಕ್ಕೂ ಮತ್ತು ಈ ಎಲ್ಲ ಸಾಮಾಜಿಕ ಧಾರ್ಮಿಕ ಸುಧಾರಣೆಗಳಿಗೂ ಮೇಲಿನ ಕಾಶಿ ಯಾತ್ರೆಯ ಉದಾಹರಣೆಯಲ್ಲಿ ಯಾತ್ರಾ ಸಾಫಲ್ಯಕ್ಕೂ ಅಲ್ಲಿಯ ಕ್ರೇಯವಸ್ತುಗಳನ್ನು ಕೊಂಡುಕೊಳ್ಳುವುದಕ್ಕೂ ಇದ್ದಷ್ಟೇ ಕಾರ್ಯಕಾರಣಭಾವವಿದೆ. ಸಾಮಾಜಿಕ ಸುಧಾರಣೆಯನ್ನು ಇದರ ಮೂಲಕ ನಾವು ದೂಷಿಸುತ್ತೇವೆಂದು ಯಾರೂ ತಿಳಿಯಬಾರದು. ಹಿತಾವಹವಾದ ಸಾಮಾಜಿಕ ಸುಧಾರಣೆಗಳನ್ನು ಅವಶ್ಯವಾಗಿ ಮಾಡಿರಿ ಆದರೆ ಸ್ವರಾಜ್ಯಕ್ಕೂ ಅವುಗಳಿಗೂ ಏನು ಸಂಬಂಧವಿದೆ? ಈ ಮೊದಲು ಯಾವ ಯಾವ ದೇಶಗಳಲ್ಲಿ ಜನರು ಸ್ವರಾಜ್ಯವನ್ನು ಹೊಂದಿರುವರೋ, ಈಗ ಎಲ್ಲೆಲ್ಲಿ ಅದನ್ನು ಅನುಭವಿಸುತ್ತಿರುವರೋ ಆ ಎಲ್ಲ ಕಡೆಗಳಲ್ಲಿ ಸಮಾಜದ ಅಥವಾ ಧರ್ಮದ ಪೂರ್ಣಾವಸ್ಥೆಯು ಉಂಟೋ? ಇಲ್ಲ ಎಷ್ಟೋ ಕೊರತೆಗಳಿದ್ದಾವೆ. ಆದರೂ ಅವರವರ ಸ್ವರಾಜ್ಯೋಪಭೋಗಕ್ಕೇನೂ ಕೊರತೆಯಿಲ್ಲ. ಹೀಗಿರಲು ಕೆಲವರು ಬರೇ ಭ್ರಾಂತಿಯಿಂದ ಇವೆರಡರಲ್ಲಿ ಸಂಬಂಧವನ್ನು ಕಲ್ಪಿಸಿರುತ್ತಾರೆ. ಇದೇ ಮೂಢತನವೆಂದು ನಮ್ಮ ತಾತ್ಪರ್ಯವು ಸಾಮಾಜಿಕ ಸುಧಾರಣೆಗಳನ್ನು ನಡಿಸಿರಿ; ಧಾರ್ಮಿಕ ಉನ್ನತಿಯನ್ನು ಪಡಕೊಳ್ಳಿರಿ, ಔದ್ಯೋಗಿಕ ಪ್ರಗತಿಯನ್ನು ಹೊಂದಿರಿ; ವಿದ್ಯೆಯಿಂದ ಬೌದ್ಧಿಕ ಉತ್ಕರ್ಷವನ್ನೂ ಕೂಡ ಸಾಧಿಸಿರಿ, ಈ ಎಲ್ಲ ಸಾಧನೆಗಳು ತಕ್ಕ ಮಟ್ಟಿಗೆ ಅವಶ್ಯವೇ ಸರಿ ಹಿಂದೊಮ್ಮೆ ನಾವು ಹೇಳಿದ "ಸರ್ವೈರುಪಾಯೈಃ ಫಲಮೇವ ಸಾಧ್ಯಮ್" ಎಂದರೆ ಎಲ್ಲ ಉಪಾಯಗಳಿಂದ ಫಲವನ್ನೇ ಸಾಧಿಸಬೇಕು. ಈ ಮ್ಯಾತಿನಂತೆ ಸ್ವರಾಜ್ಯದ ಧ್ಯೇಯದ ಕಡೆಗೆ ನಮ್ಮ ಎಲ್ಲ ವಿಧದ ಪ್ರಾಮಾಣಿಕ ಪ್ರಯತ್ನಗಳ ಪ್ರವೃತ್ತಿಯು ಇರಬೇಕು.

ಕುಲೋದ್ಧಾರಕನಾದ ಬೂಕರ್ ಟಿ. ವಾಷಿಂಗ್ಟನ್.

ಬೂಕರ್ ಟಾಲಿಯಫೆರೊ ವಾಷಿಂಗ್ಟನ್ ಎಂಬಾತನು ಗುಲಾಮರ ಸಂತತಿಯಲ್ಲಿ ಹುಟ್ಟಿದವನು. ಈತನು ವರ್ಜಿನಿಯಾ ದೇಶದ ಹಾಲ್ಸ್‌ಫರ್ಡ್‌ನಲ್ಲಿ ಸುಮಾರು ೫೭ ವರ್ಷಗಳ ಹಿಂದೆ ಜನ್ಮವೆತ್ತಿದನು. ಈತನ ತಾಯಿಯು ನೀಗ್ರೊ (ಕಪ್ಪು ಜನರ) ಸಂತತಿಗೆ ಸೇರಿದ ಒಬ್ಬ ಅಡಿಗೆಯವಳು ತಂದೆತಾಯಿಗಳು ದರಿದ್ರರಾಗಿಯೂ, ಜೀತಗಾರರಾಗಿಯೂ ಇದ್ದುದರಿಂದ ವಾಷಿಂಗ್ಟನ್ನನು ಅನೇಕ ಕಷ್ಟಗಳನ್ನು ಅನುಭವಿಸಿದನು. ಈತನು ನಾಲ್ಕು ವರ್ಷದ ಹುಡುಗನಾದ ಕೂಡಲೆ ಬಿಳಿಯ ಜನರು ಭೋಜನ ಮಾಡುವ ಮೇಜುಗಳ ಸುತ್ತಲೂ ನೊಣಗಳು ಸೇರದಂತೆ ಪಂಕಾ ಎಳೆಯುವ ಕೆಲಸಕ್ಕೆ ಸೇರಿದನು. ಮುಂದೆ ಎರಡು ವರ್ಷಗಳೊಳಗಾಗಿ ಗುಲಾಮರಿಗೆಲ್ಲ ಬಿಡುಗಡೆಯಾಗಿ ಸ್ವಾತಂತ್ರ್ಯವು ದೊರೆತುದರಿಂದ ೧೮೬೫ರಲ್ಲಿ ಈತನ ತಾಯಿಯು ತನ್ನ ಮೂವರು ಮಕ್ಕಳೊಡನೆ ಗುಲಾಮಗಿರಿಯ ಬಂಧನಕ್ಕೆ ಒಳಪಡದೆ ಸ್ವತಂತ್ರ ಸಂಸ್ಥಾನವಾಗಿ ಏರ್ಪಡುತ್ತಿದ್ದ ಪಶ್ಚಿಮ ವರ್ಜಿನಿಯಾ ದೇಶಕ್ಕೆ ಹೊರಟು ಹೋದಳು. ಇದು ಮೊದಲು ವಾಷಿಂಗ್ಟನ್ನನು ಉಪ್ಪಿನ ಕಾರ್ಖಾನೆಗಳಲ್ಲಿಯೂ, ಕಲ್ಲಿದ್ದಲು ಗಣಿಗಳಲ್ಲಿಯೂ ಕೆಲಸಮಾಡುತ್ತಾ, ವಿರಾಮ ದೊರೆತಾಗಲೆಲ್ಲ ರಾತ್ರಿಯೂ ಹಗಲೂ ವಿದ್ಯಾಭ್ಯಾಸ ಮಾಡುತ್ತಿದ್ದನು. ಕಡೆಗೆ ವಾಷಿಂಗ್ಟನ್ನನು ೧೮೭೨ರಲ್ಲಿ ಪ್ರಸಿದ್ಧವಾದ "ಹ್ಯಾಮ್‌ಟನ್ ಇನ್‌ಸ್ಟಿಟ್ಯೂಟ್" ಎಂಬ ಪಾಠಶಾಲೆಗೆ ಸೇರಿದನು. ಈ ಪಾಠಶಾಲೆಯ ಅಧ್ಯಕ್ಷರಾದ ಜನರಲ್ ಆರ್ಮ್‌ಸ್ಟ್ರಾಂಗ್‌ರವರು ಈತನ ಶಕ್ತಿಸಾಮರ್ಥ್ಯಗಳನ್ನು ನೋಡಿ ಇವನಲ್ಲಿ ಬಹು ವಿಶ್ವಾಸವಿಟ್ಟು ಈತನನ್ನು ಮುಂದಕ್ಕೆ ತಂದರು. ವಾಷಿಂಗ್ಟನ್ನನು ಅನೇಕ ಕಷ್ಟಗಳನ್ನೂ, ತೊಂದರೆಗಳನ್ನೂ ಅನುಭವಿಸುತ್ತಿದ್ದರೂ ತಾನಿದ್ದ ಪಶ್ಚಿಮ ವರ್ಜಿನಿಯಾದಿಂದ ವಿದ್ಯಾಭ್ಯಾಸಕ್ಕಾಗಿ ೫೦೦ ಮೈಲಿಗಳ ದೂರಕ್ಕೆ ಬಂದುಬಿಟ್ಟಿದ್ದನು. ವಾಷಿಂಗ್ಟನ್ನನು ವಿದ್ಯಾರ್ಥಿಯಾಗಿದ್ದುದಲ್ಲದೆ ಸ್ವಲ್ಪಕಾಲದ ಮೇಲೆ ಕೆಲವು ತರಗತಿಗಳಿಗೆ ಪಾಠಹೇಳಲು ಉಪಕ್ರಮಿಸಿದನು. ವಿದ್ಯಾರ್ಥಿಗಳನ್ನು ತರಬೇತುಮಾಡುವುದರಲ್ಲಿ ಈತನಿಗಿರುವ ಶಕ್ತಿಯೂ, ಅವರನ್ನು ಸ್ವಾಧೀನದಲ್ಲಿರಿಸಿಕೊಳ್ಳುವ ಸಾಮರ್ಥ್ಯವೂ ಅದ್ಭುತವಾಗಿದ್ದುವೆಂಬುದು ಗೊತ್ತಾಯಿತು. ೧೮೮೧-ರಲ್ಲಿ ಟಸ್ಕಿಜಿ ಎಂಬ ಸ್ಥಳದಲ್ಲಿ ನೀಗ್ರೊ (ಕಪ್ಪು) ಜನರಿಗೆ ಒಂದು ಕೈಗಾರಿಕೆಯ ಪಾಠಶಾಲೆಯನ್ನು ಸ್ಥಾಪಿಸಿದಾಗ ಅದಕ್ಕೆ ಕಪ್ಪು ಜನರಲ್ಲಿ ತಕ್ಕ ಉಪಾಧ್ಯಾಯನೊಬ್ಬನನ್ನು ನಿಯಮಿಸಬೇಕೆಂದು ಜನರಲ್ ಆರ್ಮ್‌ಸ್ಟ್ರಾಂಗ್‌ರವರನ್ನು ಪ್ರಾರ್ಥಿಸಿದರು ಅವರು ಕೂಡಲೆ ಬೂಕರ್ ಟಿ. ವಾಷಿಂಗ್ಟನ್ನನ್ನು ಈ ಕೆಲಸಕ್ಕೆ ನಿಯೋಗಿಸಿದರು. ಈತನು ೧೮೮೧ರಲ್ಲಿ "ಟಸ್ಕಿಜಿ ಇನ್‌ಸ್ಟಿಟ್ಯೂಟ್" ಎಂಬ ಕಲಾಶಾಲೆಯನ್ನು ಸ್ಥಾಪಿಸಿದನು. ಇದರಲ್ಲಿ ಮೊದಲು ೩೦ ವಿದ್ಯಾರ್ಥಿಗಳಿದ್ದರು. ಪಾಠಶಾಲೆಯ ಕಟ್ಟಡವಾದರೋ, ಸ್ವಲ್ಪ ಮಳೆ ಬಂದರೆ, ಕೂಡಲೆ ವಿದ್ಯಾರ್ಥಿಗಳು ಉಪಾಧ್ಯಾಯರ ತಲೆಯ ಮೇಲೆ ಕೊಡೆಯನ್ನು ಹಿಡಿಯಬೇಕಾಗುವಷ್ಟು ಶಿಥಿಲವಾದ ಸ್ಥಿತಿಯಲ್ಲಿತ್ತು. ಅದೇ ಪಾಠಶಾಲೆಯಲ್ಲಿ ಈಗ ಸಾವಿರಾರು ಕಪ್ಪು ಜನರು ವಿದ್ಯೆಯನ್ನು ಕಲಿಯುತ್ತಿರುವರು. ಯಾವ ಮನುಷ್ಯನೇ ಆಗಲಿ, ವರ್ಣಭೇದವಿಲ್ಲದೆ, ಒಂದು ಕೆಲಸವನ್ನು ಎಷ್ಟು ಸಣ್ಣದಾದರೂ ಚನ್ನಾಗಿ ಮಾಡುವುದಕ್ಕೆ ಕಲಿತರೆ ಅದು ಜನರ ಶ್ಲಾಘನೆಗೆ ಒಳಗಾಗುವುದೇ ಹೊರತು ನಿಷ್ಫಲವಾಗುವುದಿಲ್ಲವೆಂದು ಈತನು ಹೇಳುತ್ತಲೇ ಇದ್ದನು. ಈ ಅಭಿಪ್ರಾಯದಿಂದಲೇ ವಾಷಿಂಗ್ಟನ್ನನು ಬರಿಯ ಓದುಬರಹದಿಂದ ವಿಶೇಷ ಪ್ರಯೋಜನವಿಲ್ಲವೆಂದು ನಂಬಿ, ಮೊದಲಿನಿಂದಲೂ ಕಸಬುಗಳನ್ನು ತನ್ನ ಪಾಠಶಾಲೆಯ ಹುಡುಗರಿಗೆ ಕಲಿಸುತ್ತಿದ್ದನು. ಪ್ರಾರಂಭದಲ್ಲಿ ಈ ಪಾಠಶಾಲೆಗೆ ಸಂಸ್ಥಾನದಿಂದ ವರ್ಷಕ್ಕೆ ೩,೦೦೦ ಡಾಲರುಗಳು (ಎಂದರೆ ಸುಮಾರು ೯ ಸಾವಿರ ರೂ) ಸಹಾಯ ದ್ರವ್ಯವು ದೊರೆಯುತ್ತಿತ್ತು. ಬಾಲಿಕೆಯರನ್ನು ತರಬೇತು ಮಾಡುವುದಕ್ಕೆ ಮಿಸ್ ಓಲಿವಿಯಾ ಡೇವಿಡಸನ್ ಎಂಬಾಕೆಯು ಈತನ ಸಹೋಪಾಧ್ಯಾಯಿನಿಯಾಗಿದ್ದಳು. ಈ ಕಲಾಶಾಲೆಯು ಕೈಗಾರಿಕೆಯ ವಿದ್ಯೆಗೂ, ಇತರ ಪಾಂಡಿತ್ಯಕ್ಕೂ ಬಹಳ ಹೆಸರು ಹೊಂದಿ ಇದರ ಹಿತಚಿಂತಕರಾಗಿ ಅನೇಕ ಮಂದಿ ಬಿಳಿಯ ಜನರೂ, ಕಪ್ಪು ಜನರಲ್ಲಿ ಸ್ತ್ರೀಪುರುಷರೂ ಏಕ ಸಮಾನವಾಗಿ ತಮ್ಮ ಆಸ್ತಿಯನ್ನೆಲ್ಲಾ ಕೊಟ್ಟುಬಿಟ್ಟರು. ಇಂತಹ ಪೋಷಕರಲ್ಲಿ ಆಂಡ್ರ್ಯುಕಾರ್ನಿಜಿಯ ಸಹಾಯವು ಅದ್ಭುತವಾದುದು. ಈತನು ಅಗಾಧವಾದ ಒಂದು ಪುಸ್ತಕ ಭಂಡಾರವನ್ನು ಸಂಪೂರ್ಣವಾಗಿ ಸ್ಥಾಪಿಸಿಕೊಟ್ಟುದಲ್ಲದೆ, ಬೇಕಾದ ಕೆಲಸವನ್ನು ಮಾಡುವುದಕ್ಕೆ ದ್ರವ್ಯಸಹಾಯ ಸಾಲದೆಂದು ಎಂದಿಗೂ ಹೇಳುವುದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಒಂದುವಾಳವನ್ನು ಹಾಕಿರುವನು. ಇಷ್ಟೇ ಅಲ್ಲದೆ ವಾಷಿಂಗ್ಟನ್ನನು ಬೇಕಾದ ಹಾಗೆ ದೇಶ ಸಂಚಾರ ಮಾಡುವುದಕ್ಕೂ, ಪಾಠಶಾಲೆಯ ಸಮೀಪದಲ್ಲಿಯೇ ಒಳ್ಳೆಯ ಮನೆಯಲ್ಲಿ ವಾಸಿಸುವುದಕ್ಕೂ, ವಿರಾಮ ದೊರೆತಾಗಲೆಲ್ಲಾ ಪ್ರಯೋಗಗಳನ್ನೂ, ಪರಿಶೋಧನೆಗಳನ್ನೂ ಮಾಡುವುದಕ್ಕೂ ಸಹಾಯವನ್ನು ಕಲಿಸಿಕೊಟ್ಟನು.

ಈ ಒಂದು ಕಲಾಶಾಲೆಯಿಂದ ಸಂಯುಕ್ತ ಸಂಸ್ಥಾನಗಳಲ್ಲ ಈಗ ಲೆಕ್ಕವಿಲ್ಲದಷ್ಟು ಪಾಠಶಾಲೆಗಳು ಏರ್ಪಟ್ಟಿವೆ ವಾಷಿಂಗ್ಟನ್ನನು ತನ್ನ ಜೀವಮಾನವೆಲ್ಲಾ ಮಾಡಿದ ಸಾಹಸದಿಂದ ಈ ಪಾಠಶಾಲೆಗಳಲ್ಲೆಲ್ಲಾ ಕಪ್ಪು ಜನರ ಬಾಲಕ ಬಾಲಿಕೆಯರಿಗೆ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೆ ಕೂಡಲೆ ಸಾಧ್ಯವಾಗುವಂತೆ ಮಾಡುವ ಕಲ್ಲುಕಟ್ಟುವುದು, ಒಡಗಿ, ದರ್ಜಿ, ಜೋಡುಹೊಲಿಯುವುದು, ಉಳುವುದು, ತೋಟ ಮಾಡುವುದು, ಹೊಗೆಯ ಸೊಪ್ಪನ್ನು ಬೆಳೆಯುವುದು, ಗಾಡಿಗಳನ್ನು ಮಾಡುವುದು, ಅಚ್ಚು ಹಾಕುವುದು, ಅಗಸರ ಕೆಲಸ, ಚಾಪೆ ಹೆಣೆಯುವುದು, ಸಾಬೂನು ಮಾಡುವುದು—ಇನೇ ಮೊದಲಾದ ಕಸಬುಗಳಲ್ಲಿ ವಿದ್ಯಾಭ್ಯಾಸ ದೊರೆಯುತ್ತಲಿದೆ.

ವಾಷಿಂಗ್ಟನ್ನನು ಮೂರು ಸಲ ವಿವಾಹಮಾಡಿಕೊಂಡನು. ಮೂರು ಜನವೂ ಇವನ ಕೆಲಸದಲ್ಲಿ ಬಲು ಮಟ್ಟಿಗೆ ಸಹಾಯ ಮಾಡಿದರು. ಈತನ ಮೂರನೆಯ ಹೆಂಡತಿಯು ಇದೇ ಕಲಾಶಾಲೆಯ ಸ್ತ್ರೀಶಾಖೆಗೆ ಅಧ್ಯಕ್ಷಳಾಗಿದ್ದಳು.

ವಾಷಿಂಗ್ಟನ್ನನು ತಾನು ಜೀವಿಸಿರುವವರೆಗೂ ತನ್ನ ಜಾತಿಯ ಜನರನ್ನು ಉಚ್ಚಾಯ ಸ್ಥಿತಿಗೆ ತರುವುದರಲ್ಲಿಯೇ ಬದ್ಧಕಂಕಣನಾಗಿದ್ದನು. ನಾಗರಿಕತೆಯು ಅಭಿವೃದ್ಧಿಯಾಗುವುದಕ್ಕೆ ಸಹಾಯಮಾಡಿರುವವರಲ್ಲಿ ಈತನೂ ಒಬ್ಬನೆಂದು ಹೇಳುವುದರಲ್ಲಿ ಸಂದೇಹವಿಲ್ಲ ಗುಲಾಮಸಂತತಿಯಲ್ಲಿ ಜನಿಸಿದರೂ ತನ್ನ ಜನಸಮೂಹಕ್ಕೆಲ್ಲಾ ಮುಖಂಡನಾದುದಲ್ಲದೆ, ಇವನ ಸರಸವಾದ ವಾಣಿಯೂ, ಇವನ ದೃಢ ಸಂಕಲ್ಪವೂ ಎಲ್ಲರಲ್ಲಿಯೂ ನಂಬಿಕೆಯನ್ನು ಉಂಟುಮಾಡುತ್ತಿತ್ತು. ಪ್ರೆಸಿಡೆಂಟ್ ರೂಸ್‌ವೆಲ್ಟ್ ಎಂಬ ಮಹನೀಯನ ಮನೆಯಲ್ಲಿ ಸಹ ಈತನಿಗೆ ಸನ್ಮಾನವಾದುದಲ್ಲದೆ ಅಮೆರಿಕಾದೇಶದ ಮಹನೀಯರುಗಳಲ್ಲಿ ತಾನೂ ಒಬ್ಬನೆಂದು ಭಾವಿಸಲ್ಪಟ್ಟಿದ್ದುದನ್ನು ನೋಡಿ ತನ್ನ ಸಂಕಲ್ಪವು ಸಮರ್ಪಕವಾಗಿ ನೆರವೇರಿದುದನ್ನು ಕಂಡು ವಾಷಿಂಗ್ಟನ್ನನು

ಶಾಂತಚಿತ್ತನಾಗಿ ಈಗ ಎರಡು ತಿಂಗಳ ಹಿಂದೆ ಲೋಕಾಂತರವನ್ನೈದಿದನು. ಈತನು ಆಫ್ರಿಕಾದ ನೀಗ್ರೋ ಜನರಿಗೆ ಗ್ರಾಂಥರಲ್ಲಿ ಕಳುಹಿಸಿದ ಹಿತೋಕ್ತಿಗಳಲ್ಲಿ ಒಂದು ಭಾಗವನ್ನು ಇಲ್ಲಿ ಕೊಟ್ಟಿದೆ.—

"ಈಗಿನ ಕಾಲಕ್ಕೆ ತಕ್ಕಂತೆ ನಡೆಯಿರಿ; ಉಪಯೋಗವಾಗುವ ಕೆಲಸದಲ್ಲಿ ಪ್ರವರ್ತಿಸಿರಿ; ಕೈಗಾರಿಕೆಗಳಲ್ಲಿ ನಿಮ್ಮ ಮಕ್ಕಳು ಚತುರತೆಯನ್ನು ಪಡೆಯುವಂತೆ ಮಾಡಿರಿ. ಸಾಪಕಾಶದಿಂದಲೂ, ಸೋಮಾರಿತನದಿಂದಲೂ, ಸಂತತಿಯೇ ಶಿಥಿಲವಾಗಿ ಕಡೆಗೆ ಹಾಳಾಗಿ ಹೋಗುವುದು ಇದನ್ನು ಚೆನ್ನಾಗಿ ಮನಸ್ಸಿನಲ್ಲಿ ಯಾವಜ್ಜೀವವೂ ನೆನಪಿನಲ್ಲಿಡಿ ನಿಮ್ಮ ನಿಮ್ಮ ಕೈಯಿಂದಲ್ಲಾದ ಮಟ್ಟಿಗೂ ಶ್ರೇಷ್ಠವಾದ ಗುಣಗಳನ್ನು ಕಲಿಯಿರಿ ಏನೋ ಒಂದು ಸ್ವಲ್ಪ ಆಸೆಗೆ ನ್ಯಾಯಮಾರ್ಗದಿಂದ ತಪ್ಪಿಹೋಗಬೇಡಿ ದುಷ್ಕೃತ್ಯಗಳೂ ದುರಾಚಾರಗಳೂ ಹೆಚ್ಚುತ್ತ ಹೋದರೆ ನೀಗ್ರೋ ಸಂತತಿಯು ಉಳಿಯುವುದಿಲ್ಲ ಶುದ್ಧಹಸ್ತರಾಗಿಯೂ, ನಿರ್ಮಲಹೃದಯರಾಗಿಯೂ ಇರುವ ಸ್ತ್ರೀಪುರುಷರುಗಳಾಗಿ ಬಾಳಿರಿ ಇತರರಿಗಾಗಿ ಕೆಲಸಮಾಡಬೇಕೆಂಬುದನ್ನು ಗ್ರಹಿಸಿರಿ, ನೆರೆ ಹೊರೆಯವರನು ಸಂತೋಷಗೊಳಿಸುವುದಕ್ಕೆ ಸಿಕ್ಕುವ ಸಮಯಗಳೆಲ್ಲವನ್ನೂ ಕಳೆದುಕೊಳ್ಳದಂತೆ ಕೆಲಸಮಾಡಿರಿ. ಸ್ವಾರ್ಥತೆಯು ಹೆಚ್ಚುವ ಪಕ್ಷಕ್ಕೆ ನೀಗ್ರೋ ಸಂತತಿಯವರು ಕಠಿಣ ಹೃದಯರಾಗಿಯೂ, ನಿರ್ಲಕ್ಷ್ಯರಾಗಿಯೂ ಆಗುವರು ಪರೋಪಕಾರಕವಾದ ಕಾರ್ಯಗಳಲ್ಲಿ ನೀವೂ ನಿಮ್ಮ ಮಕ್ಕಳೂ ಅನುವರ್ತಿಸಿರಿ ನೀವು ಈ ಕೆಲಸಗಳನ್ನು ಮಾಡುವಿರೆಂಬ ಸ್ಮರಣೆಯಿಂದಲೇ ನನಗೆ ಎಷ್ಟೋ ಸಂಭ್ರಮವೂ ಸಂತೋಷವೂ ಆಗುತ್ತಲಿದೆ"

ಪತ್ರವ್ಯವಹಾರ.

ವಕೀಲರ ಬಾಗಿಲು ಕಾಯುವದು.

ಅಯ್ಯಾ,

ಈ ಶತಮಾನದಲ್ಲಿ ಭೂಲೋಕದ ಎಲ್ಲಾ ಕಡೆಗಳಲ್ಲಿ ಸರಿಯಾಗಿ ಸರ್ವರ ದೃಷ್ಟಿಗೂ ಬಿದ್ದು ಶ್ರೇಷ್ಠನೆನ್ನಿಸಿಕೊಂಡಿರುವ ವರ್ಗವು ಮಾನವ ವರ್ಗದಲ್ಲಿ ವಕೀಲರ ವರ್ಗವೇ ಆಗಿರುತ್ತದೆ ಲೋಕದ ಸರಕಾರಗಳಲ್ಲಿ ಅತಿ ಶ್ರೇಷ್ಠವಾದ ಬ್ರಿಟಿಷ ಸರಕಾರದ ಪ್ರಧಾನ ಮಂತ್ರಿಗಳು ಈ ವರ್ಗದವರಾಗಿರುತ್ತಾರೆ ಅಂದ ಮೇಲೆ ಈಗಿನ ಕಾಲವು ವಕೀಲ ರಾಜ್ಯವೆಂತ ಹೇಳಬಹುದು. ಇನ್ನು ಮುಂದಕ್ಕೆ ಸಹ ಜಗತ್ತಿನ ಉದ್ಧರಣೆ ಒಗ್ಯೆ ಅವತಾರ ತಾಳಿಕೊಂಡು ಬರುವ ಮಹಾ ಪುರುಷರ ಆಗಮನವನ್ನು ಈ ವರ್ಗದವರಲ್ಲಿಯೇ ಎದುರು ನೋಡುತ್ತಿರಬೇಕೆಂದರೆ ಅತಿಶಯೋಕ್ತಿಯಾಗಲಾರದೆಂದು ಭಾವಿಸುತ್ತೇನೆ ಈ ರೀತಿ ವಕೀಲರ ಮಹಾತ್ಮೆಯನ್ನು ವರ್ಣಿಸಿದನಂತರ ಈ ವರ್ಗಕ್ಕೆ ಸಂಬಂಧಪಟ್ಟ ಕೆಲವರ ಕಕ್ಷಿಗಾರನಾದಂಥ ನಾನು ನನ್ನ ಅನುಭವದ ಒಂದೆರಡು ಮಾತುಗಳನ್ನು ಹೇಳಿಕೊಳ್ಳಲು ಪತ್ರಕರ್ತರ ಮತ್ತು ವಕೀಲ ವರ್ಗದವರ ಕ್ಷಮಾಪಣೆಯನ್ನು ಬೇಡಿಕೊಳ್ಳುತ್ತೇನೆ.

ಕೋರ್ಟು ವ್ಯವಹಾರಗಳಲ್ಲಿ ಸಿಕ್ಕಿಬೀಳುವದೆಂದರೆ ದೊಡ್ಡದೊಂದು ಶಿಕ್ಷೆಯೇ ಸರಿ. ಒಂದು ಸರ್ತಿ ಇದರಲ್ಲಿ ಸಿಕ್ಕೊಂಡನಂತರ ಮಾನಾಪಮಾನಗಳ ಮಾತಿಲ್ಲ ಇಂಥಾ ಸ್ಥಿತಿಯನ್ನು ತಮ್ಮ ಬುದ್ಧಿಯಿಂದ ಕಕ್ಷಿಗಾರರು ತಮ್ಮ ಮೇಲೆ ಬರಮಾಡಿಕೊಂಡಿರುವರೆಂಬದರಲ್ಲಿ ವಾದವಿರದು ಹೀಗೆಂದ ಮೇಲೆ ವಕೀಲರ ಕಕ್ಷಿಗಾರರಾಗುವ ಅದೃಷ್ಟವಿದ್ದವರು ವ್ಯವಹಾರದ ಇತರ ಸಂಕಷ್ಟಗಳೊಡನೆ ವಕೀಲರ ಬಾಗಿಲು ಕಾಯುವ ಸಂಕಷ್ಟವನ್ನು ಅದರ ಭೀಕರ ಅವಸ್ಥೆಯಲ್ಲಿ ಅನುಭವಿಸಲೇಬೇಕೋ? ಕಕ್ಷಿಗಾರರು ಬಹುಪಕ್ಷ ಅಶಿಕ್ಷಿತರು. ಸಮಯದ ಬೆಲೆಯನ್ನು ತಿಳಿಯದೆ ಇದ್ದವರು. ವ್ಯವಸ್ಥೆ ಕ್ರಮ ಇತ್ಯಾದಿಗಳನ್ನು ತಿಳಿಯಲಾರದಂಥವರು ನಯನುಡಿಗಳೇನೆಂಬುದು ಗೊತ್ತಿಲ್ಲದಂಥವರು. ಇಂಥವರಲ್ಲಿ ಇರುವ ಗುಣಗಳಿಗೆ ಅನುಸಾರವಾಗಿ ನಡದು ಇಂಥಾ ದುರ್ಗುಣಗಳು ಸಾಮಾನ್ಯರಲ್ಲಿ ಇನ್ನಷ್ಟು ಅಧಿಕವಾಗಿ ಬೆಳೆಯುವಂತೆ ಆಸ್ಪದ ಕೊಟ್ಟು ನಡಿಯುವದೋ ಅಥವಾ ಬಾಲಕರಿಗೆ, ಹುಡುಗರಿಗೆ, ವಿದ್ಯಾರ್ಥಿಗಳಿಗೆ ವಿದ್ಯಾ ಶಾಲೆಗಳು ಶಿಕ್ಷಣ ಸಂಸ್ಥೆಗಳಾಗಿರುವ ಒಪಾದಿಯಲ್ಲಿ ವಕೀಲ ಚಾವಡಿಗಳು ಸಹ ಸಾಧ್ಯವಿದ್ದಷ್ಟು ಮಕ್ಕಿಗೆ ಸಾಮಾನ್ಯರಿಗೆ ಶಿಕ್ಷಣ ದೊರಕುವ ಸ್ಥಳಗಳಾಗಿರಗೊಡಿಸ ಕೂಡದೋ, ಇಂಥಾ ಭಾವನೆಗಳನ್ನು ಮನಸ್ಸಿಗೆ ತರುತ್ತ ವಕೀಲರ ಬಾಗಿಲು ಕಾಯುತ್ತಿರುವಾಗ ನನ್ನಲ್ಲಿ ಉದ್ಭವಿಸಿ ಬಂದಂಥಾ ಮನೋಸ್ಥಿತಿಯನ್ನು ಈ ಮೂಲಕ ವ್ಯಕ್ತಗೊಳಿಸಿ ಬರಕೊಂಡಿರುತ್ತೇನೆ.

ಸ್ವಾಮಿಾ, ನಾನು ಇತ್ತಲಾಗೆ ಕೆಲವು ವರುಷಗಳಿಂದ ನಾಲ್ಕಾರು ವಕೀಲರ ಭಜಕನಾಗಿರುವೆನು. ಸಾಯಂಕಾಲ ೭ ಗಂಟೆಗೆ ಬಾ ಎಂತ ಯಾವಾಗಲೂ ಇವರಲ್ಲೊಬ್ಬರ ಅಪ್ಪಣೆ. ೭ ಗಂಟೆಗೆ ಬಂದೆ. ಚಾವಡಿಯಲ್ಲಿ ಈ ಅಪ್ಪಣೆಯೊಡನೆ ಹಸ್ತದ್ವಯಗಳನ್ನು ವಹಿಸಿಕೊಂಡು ನನ್ನಂತೆಯೆ ಹಲವು ಭಾಗ್ಯವಂತರು ಕೂತುಕೊಂಡಿರುತ್ತಾರೆ. ಚಾವಡಿ ಗುಡಿಸುವ ಚಾರಪ್ಪನು ಕತ್ತಲೆಯಾದೊಡನೆ ಸರಿಯಾದ ಸಮಯಕ್ಕೆ ಬಂದು ದೀಪಗಳನ್ನು ಉರಿಸಿಟ್ಟು ಹೋಗಿ ಬಿಡುವನು. ಕೋರ್ಟುಗುಡ್ಡೆಯಲ್ಲಿರುವ ಕಾಫಿ ಹೊಟೇಲಿನಲ್ಲಿ ನನ್ನೊಡನೆ ಸಾಧಾರಣ ಸಾಯಂಕಾಲ ೫ ಗಂಟೆಗೆ ಕಾಫಿ ತಿಂಡಿಗಳನ್ನು ತಿಂದ ವಕೀಲ ಗುಮಾಸ್ತರು ವಕೀಲರ ಮನೆಯ ಹತ್ತರವಿದ್ದ ಇನ್ನೊಂದು ಕಾಫಿ ಹೊಟೇಲಿನಿಂದ ಹೊರಟು ತನ್ನ ವಕೀಲರ ಭಜಕರ ವೃಂದದಿಂದೊಡಗೂಡಿ ಸುಮಾರು ಏಳುವರೆ ಗಂಟೆಗೆ ಚಾವಡಿಯ ಮೆಟ್ಟುಗಳನ್ನು ಹತ್ತುತ್ತ ಬರುತ್ತಿರುವರು. ಕಾಫಿಯ ಸವಿಯು ಬಾಯಿಯಲ್ಲಿರುವ ಗುಮಾಸ್ತರು ನನ್ನನ್ನು ನೋಡುತ್ತ ಮಂದಸ್ಮಿತರಾಗಿ— ಏನು, ರಾಯರೇ ಸರಿಯಾಗಿ ೭ ಗಂಟೆಗೇ ಬಂದುಬಿಟ್ಟಿರೋ, ವಕೀಲರು ಸ್ವಲ್ಪ ಗಾಳಿ ಒಗ್ಯೆ ಹೊರಗೆ ಹೋಗಿರುವರು. ಈಗಲೆ ಬರುವರು. ಇಲ್ಲಿಗೆ ಬಂದು ನಮ್ಮ ಗೋವಿಂದನಾಯ್ಕರೊಂದಿಗೆ ಸ್ವಲ್ಪ ಕಾಫಿ ಕುಡಿಯಲು ಹೋಗಿದ್ದೆ. ಇನ್ನು ಕೆಲಸ ಪ್ರಾರಂಭವಾದರೆ ಊಟಕ್ಕೆ ಹೋಗುವಾಗ ನಡು ರಾತ್ರೆ ಆಗುವದು. ಆದ್ದರಿಂದ ಸ್ವಲ್ಪ ತಡವಾಯಿತು ಗುಮಾಸ್ತರು ರಿಕಾರ್ಡನ್ನು ತೆಗೆದು ಕೂತುಕೊಳ್ಳುವಷ್ಟರಲ್ಲಿ ಗಂಟೆ ೮ ಹೊಡೆಯಿತು. ಇನ್ನೂ ರಾಯರ ಬರೋಣ ತೋರದು. ಚಾವಡಿಯಲ್ಲಿ ಹಾಜರಿದ್ದವರಲ್ಲಿ ಹಲವರು ಗುಮಾಸ್ತರ ಕೂಡೆ ಮಾತಾಡಿಕೊಂಡು ತೆರಳಿದರು. ಗಡಿಯಾರವು ಟನ್ ಎಂತ ಅರ್ಧ ತಾಸನ್ನು ಹೊಡೆಯಿತು. ರಾಯರ ಪಾದಗಳ ಸಪ್ಪಳವೇ ಕೇಳಿಸದು. ನನಗೆ ವಕೀಲರ ಕೂಡೆ ರಿಕಾರ್ಡನ್ನು ತೋರಿಸದೆ ಹೋಗಲು ಉಪಾಯವಿದ್ದಿಲ್ಲ. ಕಾದು ಕೂತುಕೊಳ್ಳಲೇಬೇಕಾಯಿತು. ಮರುದಿನ ಸೂರ್ಯೋದಯವಾಗುವ ಮೊದಲು ನನ್ನ ಗ್ರಾಮಕ್ಕೆ ಹೋಗಬೇಕು. ಸ್ವರ್ಗಸ್ಥ ತೀರ್ಥರೂಪನವರ ತಿಥಿ. ಸರ್ವ ಸನ್ನಾಹಗಳನ್ನು ಮಾಡಲು ಹೇಳಿ ಬಂದಿರುವೆನು. ವಕೀಲರ ಕೂಡೆ ಕೆಲಸವು ಈ ರಾತ್ರೆ ತೀರದೆ ಇದ್ದರೆ ಮಾಡುವದೇನೆಂತ ಯೋಚಿಸುತ್ತಿದ್ದೆ. ಗಂಟೆ ಸರಿಯಾಗಿ ೯ ಹೊಡೆಯಿತು. ಚಳಿಕಾಲ. ರಾತ್ರೆ ಸಮಯ. ಹೊಟ್ಟೆಹಸುವಿನ ಉರಿಯು ಪ್ರಾರಂಭವಾಯಿತು. ಇನ್ನೂ ಇಲ್ಲ. ರಾಯರ ಬರೋಣವೇ ಇಲ್ಲ. ಕೂತಲ್ಲಿಯೇ ತೂಕಡಿಕೆಯಲ್ಲಿದ್ದೆನು. ಇನ್ನೂ ಕೆಲವು ಸಮಯವು ಕಳೆಯಿತು. ತೂಕಡಿಕೆಯ ಸ್ವಪ್ನಾವಸ್ಥೆಯಲ್ಲಿದ್ದೆ. ಚಟ್‌ಪಟ್ ಎಂಬ ಶಬ್ದ. ಕಣ್ಣುಬಿಟ್ಟು ನೋಡಲು ಗಾಳಿ ಸೇವನೆ ಮಾಡಿ ಬಂದಿದ್ದ ವಕೀಲರು ಚಾವಡಿಯಲ್ಲಿ ನಿಂತಿದ್ದರು. ನನ್ನನ್ನು ಕರದು ನೋಡಿ, ರಾತ್ರೆ ಹೆಚ್ಚಾಯಿತು, ಎಲ್ಲಾ ಕೆಲಸ ನಾಳೆ, ಬೆಳಗ್ಗೆ ಬನ್ನಿ, ನಾಳೆ ಮೊದಲು ನಿಮ್ಮ ಕೆಲಸವನ್ನು ತೀರಿಸಿಬಿಡುವೆನು. ಹೀಗೆಂದು ನಾನು ಸರಿಯಾಗಿ ಎಚ್ಚರವಾಗುವಷ್ಟರಲ್ಲಿ ವಕೀಲರು ಊಟಕ್ಕೆ ತೆರಳಿಬಿಟ್ಟರು. ನಾನು ಇನ್ನು ಉಪಾಯವಿಲ್ಲ, ನಾಳೆ ಶ್ರಾದ್ಧ, ನಿಲ್ಲಲು ಉಪಾಯವಿಲ್ಲ, ಇನ್ನೊಮ್ಮೆ ಬರುವುದೆಂದರೆ ಅತಿರೇಕ ತೊಂದರೆ, ಮಾಡುವದೇನು ಎಂದು ಯೋಚಿಸುತ್ತ ಬಿಡಾರದ ಮಾರ್ಗವಾಗಿ ಹೋಗಿಬಿಟ್ಟೆನು. ಇಲ್ಲಿಗೆ ಸಾಕು. ಕ್ಷಮಿಸಿರಿ. **ಕಕ್ಷಿಗಾರ ರಾಮಾನುಜ**

ಸ್ವಾಮಿಾ ಪತ್ರಾಧಿಪರೇ,

ನಮ್ಮ ಜಿಲ್ಲೆಯಲ್ಲಿ ಪರಸ್ಪರ ಸಹಾಯಕ ಸಂಘದ ರೂಲ್‌ಗಳಿಗೆ ಅನುಸಾರವಾಗಿ ಪಶುಪಾಲನ ಶಾಲೆ ಒಂದನ್ನು ಈ ಕಳನಾಡು ಗ್ರಾಮದಲ್ಲಿ ಸ್ಥಾಪಿಸಬೇಕೆಂಬದಾಗಿ ಆಲೋಚಿಸಿದ್ದೇನೆ

ಆ ಒಗ್ಯೆ ಬೇಕಾದ ಕ್ರಮಗಳು ಈ ಜಿಲ್ಲೆಯಲ್ಲಿ ರೂಢಿಯಲ್ಲಿರುವದಿಲ್ಲ. ಒದಗಬಹುದಾದ ಹಾಲು ತುಪ್ಪ ವಗೈರೆಯನ್ನು ರಖಂ ಆಗಿ ಪಡಕೊಳ್ಳತಕ್ಕ ಗಿರ್ಯಾಕಿಗಳು ಮಂಗಳೂರು ವಗೈರೆ ಪಟ್ಟಣ ಸ್ಥಳಗಳಲ್ಲಿ ಬೇಕಾಗಿದೆ.

ಹೈನಾ ಶಾಲೆಯನ್ನು ಸ್ಥಾಪಿಸಿ ನಡಿಸಿಕೊಂಡು ಬಂದಿರುವ ಸಂಘಗಳಲ್ಲಿ ಇಡಬೇಕಾದ ಲೆಕ್ಕಪತ್ರಗಳ ನಮೂನೆ ಮತ್ತು ಅದರ ಕ್ರಮ ವಗೈರೆ ಎಲ್ಲಾ ವಿವರವನ್ನು ವಿಸ್ತಾರವಾಗಿ ತಮ್ಮ ಪತ್ರದಲ್ಲಿ ವಾಚಕರಾಗಲೀ ತಾವಾಗಲೀ ಬರದು ಪ್ರಕಟಿಸಿದರೆ ನಮ್ಮ ಇಡೀ ಜಿಲ್ಲೆಯ ನಿವಾಸಿಕರಿಗೆ ಮತ್ತು ಪಶುಪ್ರಾಣಿಗಳಿಗೆ ಮಹಾ ಉಪಕಾರ ಮಾಡಿದಂತಾಗುತ್ತಿತ್ತು

ಇಂತಿ ತಮ್ಮ ವಿಧೇಯ ಸೇವಕ,

ಚಂದ್ರಗಿರಿ ರಾಮಯ್ಯ.
ಕಾರ್ಯದರ್ಶಿ, ಕಳನಾಡು.

ಪಂಡಿತ ಮಂಗಳೂರು ನಾರಾಯಣಚಾರ್ಯರಿಂದ ಗುಣಿಸಲ್ಪಟ್ಟ

ನಳಸಂವತ್ಸರದ ಪಂಚಾಂಗ.

ವಿಕರಿಗೆ ಸಿದ್ಧವಾಗಿದೆ. ಕ್ರಯ 0—3—0.
ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ಧಾರಾಳವಾದ ಕಮಿಶನ್ ದೊರಕುವದು.

ಮ್ಯಾನೆಜರ್, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಯುದ್ಧ ಸಮಾಚಾರ.

ತಾ. ೨ನೇ ಫೆಬ್ರುವರಿ.

ಸೆನೆಯಲ್ಲಿ ಫ್ರೆಂಚರು ಜರ್ಮನರ ಕಂದಕಗಳ ಮೇಲೆ ಫಿರಂಗಿ ಗುಂಡುಗಳಿಂದ ಜರ್ಮನ ಕಂದಕಗಳಲ್ಲಿ ೪ ಸ್ಫೋಟಗಳಾಗಿರುವವು. ಅರ್ಗೋನ್ನೆಯಲ್ಲಿ ಸಿಡಿಮದ್ದು ಗಣಿಗಳನ್ನು ಹಾರಿಸುವ ಕೆಲಸವು ನಡಿಯುತ್ತಿದೆ.

೫೬ ಜೆಫಲಿನ್ ನಾವೆಗಳು ಬ್ರಿಟಿಷ ಕರಾವಳಿಯ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಇದರಿಂದ ವಿಶೇಷ ನಷ್ಟ ಸಂಭವಿಸಿದ ವಾರ್ತೆಯು ಈ ವರೆಗೆ ಬರಲಿಲ್ಲ ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು

ಪಾರಿಸಿನ ಮೇಲೆ ಎರಡನೇ ಸಾರಿ ಜೆಫಲಿನ್ ನಾವೆಯು ಹಲ್ಲಾ ಮಾಡಿದ್ದಾಗ ವಿಶೇಷ ನಷ್ಟ ಸಂಭವಿಸಲಿಲ್ಲ 'ಪಾರಿಸ್ ನಗರದಲ್ಲಿ ಜೆಫಲಿನ್ ನಾವೆಯನ್ನು ಎದುರಿಸುವ ಸನ್ನಾಹಗಳು ಮಾಡಲ್ಪಟ್ಟಿರುವದನ್ನು ಈ ಜೆಫಲಿನ್ ನಾವೆಯು ಕಂಡು ಒಂದೆರಡು ಬೊಂಬುಗಳನ್ನು ಹಾಕಿ ಹಿಂದಕ್ಕೆ ಹೋಯಿತು ಮರುದಿನ ಪುನಃ ಜೆಫಲಿನ್ ನಾವೆಯು ಪಾರಿಸ್ ನಗರದ ಮೇಲೆ ಕಾಣಿಸಿಕೊಂಡಿತು ಆದರೆ ಇದನ್ನು ಕಂಡುಹಿಡಿಯುವರೆ ಸರ್ಚ್ ಲೈಟ್ ಎಂಬ ಬೆಳಕನ್ನು ಹಚ್ಚಿದ್ದರಿಂದ ಈ ಜೆಫಲಿನ್ ನಾವೆಯು ಓಡಿ ಹೋಯಿತು. ಪಾರಿಸಿಗೆ ಹೋಗಿದ್ದ ಬ್ರಿಟಿಷ ಮಂತ್ರಿಗಳಾದ ಮಿ। ಲಾಯ್ಡ್ ಜೋರ್ಜ್ ಮತ್ತು ಮಿ। ಬೊನರ್ ಲಾರವರು ಜೆಫಲಿನ್ ನಾವೆಯು ಪಾರಿಸ್ ನಗರದ ಮೇಲ್ಹಾಯುವ ಅರ್ಧ ತಾಸಿಗೆ ಮೊದಲು ಪಾರಿಸ್ ನಗರದಿಂದ ಇಂಗ್ಲಾಂಡಿಗೆ ಹೊರಟು ಹೋಗಿದ್ದರು.

ಪ್ರಿನ್ಸ್‌ಆಫ್‌ವೇಲ್ಸರವರು ಕೆಲವು ದಿವಸಗಳ ರಜೆ ತಕ್ಕೊಂಡು ರಣರಂಗದಿಂದ ಇಂಗ್ಲಾಂಡಿಗೆ ಹೋಗಿರುವರು

ಕೌಕಾಸಸಿನಲ್ಲಿ ರುಶ್ಯನರು ತುರ್ಕರನ್ನು ಅಲ್ಲಲ್ಲಿ ಸೋಲಿಸುತ್ತಲಿದ್ದಾರೆ.

ತಾ. ೩ನೇ ಫೆಬ್ರುವರಿ.

ಕಾಣೆಯಾಗಿ ಹೋಗಿದ್ದ "ಅಪ್ಪಾಮ್" ಎಂಬ ಟಪ್ಪಾಲ್ ಹಡಗವು ಅಮೇರಿಕಕ್ಕೆ ಸುರಕ್ಷಿತವಾಗಿ ಬಂದು ತಲಪಿರುವದೆಂಬ ವಾರ್ತೆ ಬಂದದೆ. ಹಡಗದಲ್ಲಿದ್ದ, ಪ್ರಯಾಣಿಕರೂ, ನಾವಿಕರೂ ಸುರಕ್ಷಿತವಾಗಿದ್ದರು. "ಅಪ್ಪಾಮ್" ಹಡಗವನ್ನು ಹಿಡಿದು ತಂದ ಶತ್ರುಗಳ ಹಡಗದ ಹೆಸರು "ಮೊವೆ" ಎಂಬದಾಗಿರುವದು. ಶತ್ರುಗಳ ಈ ಹಡಗವು "ಅರಿಯಡೇನ್" "ಡ್ರೊಮೊನ್ಬಿ" "ಕ್ಲಾನ್‌ಮಕ್‌ಪಿಸ್" "ಕೊರ್‌ಬ್ರಿಡ್ಜ್" "ಪೆರಿಂಗ್ಟನ್ ಫೋರ್ಡ್" "ಆರ್ಥರ್" ಮತ್ತು "ಟ್ರೇಡರ್" ಎಂಬ ನಾವೆಗಳನ್ನು ಹಿಂದೆಯೇ ಮುಣುಗಿಸಿತ್ತು. "ಅಪ್ಪಾಮ್" ಹಡಗವು ಬೆಳಗ್ಗಿನ ಸಮಯ ಪ್ರಯಾಣ ಮಾಡುತ್ತಿರುವಾಗ ದೋಣಿಯಂತಿದ್ದ ಒಂದು ಟ್ರಾಂಪ್ "ಅಪ್ಪಾಮ್" ಹಡಗದ ಸಮೀಪ ಬರುತ್ತಿರುವದನ್ನು ಕಂಡು ಅಪ್ಪಾಮ್ ಹಡಗದ ಕೆಪ್ಟನ್ ಹೆರಿಸ್ಸನರು ಅದು ಚಿಕ್ಕ ದೋಣಿ ಎಂದು ಭಾವಿಸಿ ಸುಮ್ಮನಿದ್ದರು ಆದರೆ ಥಕ್ಕನೇ ಆ ದೋಣಿಯಂತೆ ಇದ್ದ ಟ್ರಾಂಪ್ ತೋಫು ಹಾರಿಸ ಪ್ರಾರಂಭಿಸಿತು. "ಅಪ್ಪಾಮ್" ಹಡಗವು ಕೂಡಲೆ ಶರಣಾಗತವಾಯಿತು. ಆ ಶತ್ರು ಹಡಗದಲ್ಲಿದ್ದ ನಾವಿಕರು "ಅಪ್ಪಾಮ್" ಹಡಗಕ್ಕೆ ಬಂದು ಹಡಗದ ನಾವಿಕರ ಆಯುಧಗಳನ್ನು ತೆಗೆಯಿಸಿ, "ಅಪ್ಪಾಮ್" ಹಡಗದಲ್ಲಿದ್ದ ಜರ್ಮನ ಸೆರೆಯಾಳುಗಳಲ್ಲಿ ೨೦೦ ಮಂದಿಯನ್ನು ಬಿಡುಗಡೆ ಮಾಡಿ "ಅಪ್ಪಾಮ್" ನಾವೆಯನ್ನು ಅಮೇರಿಕದ ಕಡೆ ನಡಿಸಿದರು. ನ್ಯೂಯೋರ್ಕಿಗೆ ಈ ಹಡಗವನ್ನು ಕೊಂಡು ಹೋದರೆ ಒಂದುವೇಳೆ ದಾರಿಯಲ್ಲಿ ಬ್ರಿಟಿಷರ ಕ್ರೂಜರ್ ನಾವೆಗಳು ಸಿಕ್ಕಬಹುದೆಂಬ ಹೆದರಿಕೆಯಿಂದ ಜರ್ಮನ ಕೆಪ್ಟನ್ ಬರ್ಗನೆಂಬವನು ಹಡಗವನ್ನು ನೊರ್ಫೊಕ್ ಕಡೆ ಕೊಂಡು ಹೋದನು. "ಅಪ್ಪಾಮ್" ಹಡಗದಲ್ಲಿ ಮೊದಲೇ ಇದ್ದ ಪ್ರಯಾಣಿಕರ ಹೊರತು ಜರ್ಮನರ ನಾವೆಯು ಮುಣುಗಿಸಿದ್ದ ಇತರ ಹಡಗಗಳ ೧೩೮ ಪ್ರಯಾಣಿಕರು ಅಪ್ಪಾಮ್ ಹಡಗವನ್ನು ಸೇರಿದ್ದರಿಂದ ಒಟ್ಟಿಗೆ ೪೨೫ ಪ್ರಯಾಣಿಕರು (ನಾವಿಕರು ಕೂಡಿ) ನೋರ್ಫೊಕ್‌ಗೆ ಮುಟ್ಟಿದರು.

ಬ್ರಿಟಿಷ ಕರಾವಳಿಯಲ್ಲಿ ಕಾಣಿಸಿಕೊಂಡ ಜೆಫಲಿನ್ ನಾವೆಯು ಕೆಲವು ಪಟ್ಟಣಗಳ ಮತ್ತು ಡರ್ಬಿಶಯರ್, ಲಿಂಕೆಶಯರ್, ಲಿಂಕೆಸ್ಟರ್‌ಶಯರ್, ಸ್ಟೆಫೊರ್ಡ್‌ಶಯರ್ ಎಂಬ ಜಿಲ್ಲೆಗಳ ಮೇಲೆ ಬೊಂಬುಗಳನ್ನು ಹಾಕಿರುತ್ತದೆ. ಇದರಿಂದ ಆ ಪ್ರಾಂತ್ಯಗಳ ಆಸ್ತಿನಷ್ಟವಾಗಿರುವದು. ೫೪ ಮಂದಿ ಹತರಾಗಿರುವರು, ೬೭ ಮಂದಿಗೆ ಜಖಂ ಆಗಿರುವದು. ಒಟ್ಟಿಗೆ ಜೆಫಲಿನ್ ನಾವೆಯು ೨೨೦ ಬೊಂಬುಗಳನ್ನು ಎಸೆದಿರುತ್ತದೆಂತ ಅಂದಾಜಾಗಿದೆ. ಆದರೆ ಸ್ಟೆಫೊರ್ಡ್‌ಶಯರಿನಲ್ಲಿ ಅಲ್ಲದೆ ಇತರ ಕಡೆಯಲ್ಲಿ ಹೆಚ್ಚಿನ ನಷ್ಟವಾಗಲಿಲ್ಲ.

ಆಫ್ರೀಕದ ಕೆಮರೂನಿನ ಕರಾವಳಿಯನ್ನು ಜರ್ಮನ ಸೇನೆಯು ಬಿಟ್ಟು ಹೋಗಿರುತ್ತದೆ. ಸುಮಾರು ೭೦೦ ಜರ್ಮನರು ಅಲ್ಲಿ ಸ್ಪೇನ್‌ದೇಶದವರಿಗೆ ಸೇರಿರುವ ಸರಹದ್ದಿಗೆ ಹೋಗಿರುವರು ಉಳಿದವರು ಬ್ರಿಟಿಷರಿಗೆ ಶರಣಾಗತರಾಗುತ್ತಿದ್ದಾರೆ

ಚೀನಾದೇಶದಲ್ಲಿ ದಂಗೆಗಾರರ ಮೊಂಗೊಲಿಯನರ ಸೇನೆಯು ಪೆಕಿಂಗ್ ಕಡೆಗೆ ಮುಂದರಿಯುತ್ತಿದೆ ಇವರು ಈಚೆಗೆ ಶಾನ್ಸಿ ಸಂಸ್ಥಾನದ ಚ್ಯುಟಿಂಗ್ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುವರು ಟಾಟನ್ ಎಂಬ ಪಟ್ಟಣವನ್ನು ದಂಗೆಗಾರರ ಸೇನೆಯು ಮುತ್ತಿರುವದು

ಜರ್ಮನರ ಜೆಫಲಿನ್ ನಾವೆಯು ಸಲೋನಿಕದ ಮೇಲೆ ೧೬ ಬೊಂಬುಗಳನ್ನು ಹಾಕಿರುತ್ತದೆ ಇದರಿಂದ ೩ ಗ್ರೀಕರು, ಒಬ್ಬ ಫ್ರೆಂಚನು, ಮತ್ತು ೨ ಬ್ರಿಟಿಷ ಸೈನಿಕರು ಹತರಾಗಿರುವರು ಪ್ರಜಾಜನರಲ್ಲಿ ಕೆಲವರು ಗಾಯಹೊಂದಿರುವರು ಕೆಲವು ಮನೆಗಳಿಗೂ, ಅಂಗಡಿಗಳಿಗೂ ಹಾನಿಯಾಗಿದೆ

ತಾ. ೪ನೇ ಫೆಬ್ರುವರಿ

ಜರ್ಮನರ ಯುದ್ಧನಾವೆಗಳು ರಿಗ್ಗಾ ಪಟ್ಟಣದ ಮೇಲೆ ಬೇಗನೇ ಅಭಿಯೋಗ ಮಾಡಲಿಕ್ಕಿದೆಂತ ಹೊಲೆಂಡಿನಿಂದ ವಾರ್ತೆ ಬಂದಿರುವದು

"ಅಪ್ಪಾಮ್" ಹಡಗವನ್ನು ಜರ್ಮನರು ತಾ ೧೬ರಲ್ಲಿ ಮೆಡೀರಿಯಕ್ಕೆ ೬೦ ಮೈಲು ಉತ್ತರದಲ್ಲಿ ಜರ್ಮನರ ನಾವೆಯು ಹಿಡಿಯಿತು ಜರ್ಮನರ ಈ ನಾವೆಯು ತಾ. ೧೬ರಲ್ಲಿ "ಕ್ಲಾನ್ ಮಕ್‌ಪಿಸ್" ಎಂಬ ಹಡಗವನ್ನು ಕಂಡು ಅದರೊಡನೆ ಕದನಮಾಡಿತು "ಕ್ಲಾನ್ ಮಕ್‌ಪಿಸ್" ನಾವೆಯ ೧೮ ನಾವಿಕರು ಹತರಾದರು ತಾ ೧೮ರಲ್ಲಿ ಜರ್ಮನರ ಹಡಗವು "ಪೆರಿಂಗ್‌ಫೋರ್ಡ್" ಹಡಗವನ್ನು ಮುಣುಗಿಸಿ ನಾವಿಕರನ್ನು "ಕೊರ್‌ಬ್ರಿಡ್ಜ್" ನಾವೆಯಲ್ಲಿ ಹಾಕಿತು ತಾ ೧೩ರಲ್ಲಿ "ಡೊಮೊಂಟ್" "ಆರ್ಥರ್" ಮತ್ತು "ಟ್ರೇಡರ್" ನಾವೆಗಳನ್ನೂ ತಾ ೧೫ರಲ್ಲಿ "ಎರಿಯಡೇನ್" ನಾವೆಯನ್ನೂ ಜರ್ಮನರ "ಮೊವೆ" ಎಂಬ ಜರ್ಮನ ನಾವೆಯು ಮುಣುಗಿಸಿರುತ್ತದೆ.

ಅಟ್ರೋಸ್, ಲೆನ್ಸ್‌, ಫೌಕ್ರೆ, ಮತ್ತು ಲೊರೈಸ್ ಎಂಬ ಸ್ಥಳಗಳಲ್ಲಿ ಫ್ರೆಂಚರ ಹಾರಿಸಿದ ತೋಫುಗಳಿಂದ ಜರ್ಮನರಿಗೆ ಹೆಚ್ಚಿನ ಹಾನಿಯಾಗಿರುವದು

ಬ್ರಿಟಿಷ ಕರಾವಳಿಯ ಮೇಲೆ ಜರ್ಮನರ ಜೆಫಲಿನ್ ನಾವೆಯು ಮಾಡಿದ ದಾಳಿಯಿಂದ ಒಟ್ಟಿಗೆ ೫೯ ಮಂದಿ ಹತರಾದರು ೧೦೧ ಮಂದಿಗೆ ಜಖಂ ಆಗಿರುವದು ಒಂದೆರಡು ಕಾರ್ಖಾನೆಗಳಿಗೆ ಹಾನಿಯಾಗಿರುವದ, ೧೪ ಮನೆಗಳು ಬಿದ್ದುಹೋಗಿರುವವು, ಇತರ ಅನೇಕ ಮನೆಗಳಿಗೆ ಹಾನಿಯಾಗಿರುವದು

ಬ್ರಿಟಿಷರು ಕೆಮರೂನಿನಲ್ಲಿ ಲೊಲೊಡ್ರೊಫ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವರು

ಮೊರಿ ಎಂಬಲ್ಲಿ ಆಸ್ಟ್ರಿಯನರು ಇಟಲಿಯನರ ನೆಲೆಗಳನ್ನು ಸ್ವಾಧೀನಮಾಡಿಕೊಳ್ಳಲು ಪ್ರಯತ್ನಿಸಿ ಹಿಮ್ಮೆಟ್ಟಿರುವರು

ಕೌಕಾಸಸಿನಲ್ಲಿ ರುಶ್ಯನರು ಚಿಕರೊಕ್ ಎಂಬಲ್ಲಿಗೆ ಮುಂದರಿದು ರುಶ್ಯನರನ್ನು ಓಡಿಸಿ ವಾನ್‌ಸರೋವರದ ದಕ್ಷಿಣಕಡೆಯ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುವರು

ತಾ. ೫ನೇ ಫೆಬ್ರುವರಿ.

"ಫ್ರಾನ್ಸ್ ಫಿಕ್ಸರ್" ಎಂಬ ನಾವೆಯನ್ನು ಜರ್ಮನರ ಜೆಫಲಿನ್ ನಾವೆಯು ಮುಣುಗಿಸಿರುತ್ತದೆ ೧೩ ಮಂದಿ ಮುಣುಗಿ ಸತ್ತರು

ಫ್ರೆಂಚರ ವಾಯುನಾವೆಗಳು ಬಾಲ್ಕಾನ್ ಪ್ರದೇಶದ ಪೆಟ್ರಿಟ್ಜ್ ಎಂಬ ಪಟ್ಟಣದ ಮೇಲೆ ೧೫೨ ಬೊಂಬುಗಳನ್ನು ಬಿಸಾಡಿರುವವು.

ರುಶ್ಯನರು ಕೌಕಾಸಸಿನಲ್ಲಿ ಮುಂದರಿಯುತ್ತಲಿರುವರು, ಪರ್ಶಿಯಾದಲ್ಲಿಯೂ ರುಶ್ಯನರಿಗೆ ಜಯವಾಗಿರುವದು.

ರುಮೇನಿಯಾದವರು ಬರುವ ತಿಂಗಳಲ್ಲಿ ಮಿತ್ರರಾಜ್ಯಗಳ ಪಕ್ಷ ಸೇರಿಕೊಳ್ಳುವರೆಂಬ ವಾರ್ತೆ ಇದೆ.

ತಾ. ೬ನೇ ಫೆಬ್ರುವರಿ.

ಬ್ರಿಟಿಷರ "ಬೆಲ್ಲೆ ಆಫ್ ಫ್ರಾನ್ಸ್" ಎಂಬ ಹಡಗವನ್ನು ಜರ್ಮನರ ಜಲಾಂತರ್ಗಾಮಿ ನಾವೆಯು ಮುಣುಗಿಸಿರುವದು.

ಅಮೇರಿಕಕ್ಕೆ ಹೋಗಿ ತಲಪಿದ "ಅಪ್ಪಾಮ್" ಹಡಗದ ಪ್ರಯಾಣಿಕರು ನ್ಯೂಯೊರ್ಕಿಗೆ ಹೋಗಿ ತಲಪಿರುತ್ತಾರೆ.

ಶಂಪಾನೆ, ಅರ್ಗೋನ್ನೆ ಮತ್ತು ಲೊರೈನ್ ಎಂಬೀ ಸ್ಥಳಗಳಲ್ಲಿ ಮಿತ್ರ ಫಿರಂಗಿಗಳ ಜರ್ಮನರ ಕಂದಕಗಳ ಮೇಲೆ ಗುಂಡುಗಳನ್ನು ಹಾರಿಸುತ್ತಲಿವೆ ಲಾಬಾಸ್ಸಿಯ ಸಮೀಪ ಶತ್ರುಗಳ ಫಿರಂಗಿಗಳು ಬಹು ಚಟುವಟಿಕೆಯಿಂದ ಇರುವವು

ಅರ್ಮೆಂಟಿಯರಿನಲ್ಲಿ ಆದ ಕದನದಲ್ಲಿ ಜರ್ಮನ ಸೇನೆಯ ೨ ಸಾವಿರಕ್ಕಿಂತಲೂ ಹೆಚ್ಚಿನ ಜನರು ಕೊಲ್ಲಲ್ಪಟ್ಟರೆಂತಲೂ ಮೈಸ್ರಿಸಿನಲ್ಲಿ ಬ್ರಿಟಿಷರ ಫಿರಂಗಿಗಳು ಬಹಳ ಹಾನಿಯನ್ನುಂಟುಮಾಡಿದವು ಎಂತಲೂ ಸೆರೆಬಿದ್ದ ಜರ್ಮನ ಸೈನಿಕರು ಹೇಳುವರು

ಬ್ರಿಟಿಷ ಕರಾವಳಿಯ ಮೇಲೆ ಜೆಫಲಿನ್ ನಾವೆಯು ಮಾಡಿದ ದಾಳಿಯಲ್ಲಿ ೨೬ ಗಂಡಸರು, ೨೮ ಹೆಂಗಸರು ೭ ಮಕ್ಕಳು ಜಖಂ ಹೊಂದಿದರು ಎಂತ ಲಂಡನ್ ಯುದ್ಧ ಆಫೀಸಿನಲ್ಲಿ ಪ್ರಕಟವಾಗಿದೆ ಯುದ್ಧ ಪ್ರಾರಂಭವಾದಂದಿನಿಂದ ಗ್ರೇಟ್ ಬ್ರಿಟಾನಿನಲ್ಲಿ ಶತ್ರುಗಳ ವಾಯುನಾವೆಗಳು ಮಾಡಿದ ೨೯ ದಾಳಿಯಲ್ಲಿ ೧೩೩ ಮಂದಿ ಹತರಾದರು ಈ ಪೈಕಿ ೧೭ ಮಂದಿ ಸೈನಿಕರು, ೯೦ ಹೆಂಗಸರು, ೪೩ ಮಕ್ಕಳು ಹತರಾದರು ಕಡೆಯ ಸಾರಿ ಮಾಡಿದ ಜೆಫಲಿನ್ ನಾವೆಯ ದಾಳಿಯಲ್ಲಿ ಪ್ರಾಣ ನಷ್ಟವಲ್ಲದೆ ಹೆಚ್ಚಿನ ಆಸ್ತಿನಷ್ಟವಾಗಿರುವದು ಮೂರು ಪ್ರೈಸ್ತ ಕಟ್ಟಡಗಳು, ಒಂದು ಇಂಜಿನ್ ಶೆಡ್ಡು, ಒಂದು ಬ್ರೂಯಿಟ್ ಕಾರ್ಖಾನೆ ಒಂದು ದೀಪದ ಕಾರ್ಖಾನೆ, ಒಂದು ಕಟ್ಟಿಗೆ ಕೆಲಸದ ಕಾರ್ಖಾನೆಗೆ ವಿಶೇಷ ಹಾನಿ ಸಂಭವಿಸಿರುವದು ಇನ್ನು ಇತರ ಕೆಲವು ಕಾರ್ಖಾನೆಗಳಿಗೆ ಸಾಧಾರಣ ತರದ ಹಾನಿಯಾಗಿದೆ

ಕೆಮರೂನಿನಲ್ಲಿ ಜರ್ಮನ ಸೈನಿಕರು ಬ್ರಿಟಿಷರಿಗೆ ಶರಣಾಗತರಾಗುತ್ತಿದ್ದಾರೆ ಫ್ರೆಂಚರ ಒಂದು ದೊಡ್ಡ ಸೇನೆಯು ಸ್ಪೇನ್ನರ ಸರಹದ್ದಿಗೆ ಹೋದ ಜರ್ಮನರೊಡನೆ ಕಾದಾಡುವರೆ ಮುಂದರಿಯುತ್ತಿದೆ

ಫ್ರೆಂಚರು ಪೆಟ್ರಿಕ್ ಪಟ್ಟಣದ ಮೇಲೆ ಮಾಡಿದ ವಾಯುನಾವೆಗಳ ದಾಳಿಯಿಂದ ಬಲ್ಗೇರಿಯನರ ಸುಮಾರು ೧೦೦೦ ಸೈನಿಕರು ಪ್ರಾಣಾಪಾಯ ಹೊಂದಿದರೆಂದೂ, ೪೭೦ ಸೈನಿಕರು ಹತರಾದರೆಂದೂ ಬಲ್ಗೇರಿಯನರ ವಾರ್ತೆಯಿಂದ ತಿಳಿದುಬರುತ್ತದೆ

ಕೊಲ್ ಡಿ ಲಾನದಲ್ಲಿಯ ಇಟಲಿಯನರ ನೆಲೆಯನ್ನು ಶತ್ರುಗಳ ಹಾಳು ಮಾಡಿದ ನಂತರ ಮುಂದರಿದು ಇಟಲಿಯನರ ಮೇಲೆ ಹಲ್ಲೆ ಮಾಡಲಿಕ್ಕಿದ್ದರು ಆದರೆ ಇಟಲಿಯನರು ಶತ್ರುಗಳನ್ನು ಪೂರ್ಣವಾಗಿ ಅಟ್ಟಿಬಿಟ್ಟರು, ಪೊಡ್ಗೊರದಲ್ಲಿ ಶತ್ರುಗಳು ಇಟಲಿಯನರ ಮೇಲೆ ಬೀಳಲೆತ್ನಿಸಿ ಹಿಮ್ಮೆಟ್ಟಿದರು

ತುರ್ಕರು ಎರ್ಜರಮನ್ನು ಬಿಟ್ಟು ಹೋಗಿರುವರೆಂಬ ವಾರ್ತೆ ಬಂದದೆ

ಉತ್ತರ ಹಿಂದೂಸ್ಥಾನ.

ಇದೇ ತಿಂಗಳ ತಾ ೪ರಲ್ಲು ಬೆನಾರಸಿನಲ್ಲಿ ಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆಯು ವೈಸರಾಯ ಹಾರ್ಡಿಂಜ ಪ್ರಭುಗಳವರಿಂದ ಕೂಡಿದ ಮಹಾಜನ ಸಂದಣಿಯ ಮಧ್ಯೆ ಅತಿ ಸಂಭ್ರಮದಿಂದ ನಡಿಸೋಣಾಯಿತು. ೧೨ ಗಂಟೆ ಆಗುವ ಮೊದಲೇ ಸಾವಿರಾರು ಮಂದಿ ಈ ಸಂದರ್ಭಕ್ಕಾಗಿಯೇ ಕಟ್ಟಿಸೋಣಾದ ದೊಡ್ಡ ಚಪ್ಪರದಲ್ಲಿ ಬಂದು ಕೂಡಿದರು ೧೨ ಗಂಟೆಗೆ ಸರಿಯಾಗಿ ವೈಸರಾಯ ಪ್ರಭುಗಳವರು ಚಿತ್ತೈಸಿದರು. ಅಷ್ಟ ದಿಕ್ಕುಗಳಿಂದಲೂ ಜಯ ಧ್ವನಿಗಳಾಗಿ ರಾಜಗೀತವನ್ನಾಡುತ್ತಲೇ ಪ್ರಭುಗಳವರು ಆಸೀನರಾದರು. ಪ್ರಭುಗಳವರ ಬಲಕಡೆಯಲ್ಲಿ ಕಾಶ್ಮೀರ, ಯೋಧಾಪುರ, ಕಿಶನ್‌ಗಢ, ಅಲ್ವರ್, ದುಂಗರಪುರ, ಡಾಟಿಯ, ಬೆನಾರಿಸ್, ಬಹಾವಲ್ಪುರ ಮಹಾರಾಜರುಗಳೂ ನಾಭದ ರಾಜರೂ ಆಸೀನರಾದರು. ಎಡಕಡೆಯಲ್ಲಿ ಬಂಗಾಳದ ಗವರ್ನರರಾದ ಕಾರ್ಮೈಕಲ

ಯೇಲ್ ಪ್ರಭುಗಳವರು, ಲೆಪ್ಟನೆಂಟ ಗವರ್ನರರೂ, ಸರ್. ಶಂಕರನ್ನಾಯರರು, ದರ್ಭಂಗ ಮಹಾರಾಜರು, ಡಾಕ್ಟರ್ ಸುಂದರ್‌ಲಾಲ್, ಡಾಕ್ಟರ್ ದೇವಪ್ರಸಾದ ಸರ್ವಾಧಿಕಾರಿ, ಸರ್. ಗುರುದಾಸ ಬೆನರ್ಜಿ, ಸರ್. ರಾಷ್ ಬಿಹಾರಿ ಗೋಸ್, ಪಂಡಿತ ಮದನ ಮೋಹನ್ ಮಲವಿಯಾ ಮೊದ ಲಾದವರೇ ಆಸೀನರಾದರು. ರಾಜಗೀತವಾದ ಬಳಿಕ ಸೆಂಟ್ರಲ್ ಹಿಂದೂ ಕಾಲೇಜ್ ಹುಡುಗಿಯರ ಶಾಲೆಯ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಮೇಲೆ ದೇವ ದೇವತೆಗಳು ತಮ್ಮ ಆಶೀರ್ವಾದವನ್ನು ನೀಡಬೇಕೆಂಬ ದಾಗಿ ಸೂಚಿಸುವ ಒಂದು ಪದವನ್ನು ಹಾಡಿದರು. ಅನಂತರ ದರ್ಭಂಗ ಮಹಾರಾಜರವರು ಸ್ವಾಗತ ಭಾಷಣ ವನ್ನು ಮಾಡಿದರು. ಮಹಾರಾಜರವರು ಈ ಭಾಷಣ ದಲ್ಲಿ ಹಿಂದೂ ಯುನಿವರ್ಸಿಟಿ ಚಳವಳದ ಪ್ರಾರಂಭದಿಂದ ಈ ವರೆಗೆ ನಡೆದ ವೃತ್ತಾಂತವನ್ನು ಹೇಳಿದರಲ್ಲದೆ ವೈಸ ರಾಯ ಪ್ರಭುಗಳವರು ಈ ಬಗೆ ತೋರಿಸಿದ ಪ್ರೋತ್ಸಾಹ, ಪ್ರಯತ್ನಗಳಿಲ್ಲದಿದ್ದರೆ ಹಿಂದೂ ಯುನಿವರ್ಸಿಟಿ ಸ್ಥಾಪಿಸ ಲ್ಪಡುವ ಸಂಭವವೇ ಇದ್ದಿಲ್ಲವೆಂಬುದನ್ನು ಕೂಡಿದ ಜನ ಸಂದಣಿಯಲ್ಲಿ ಶ್ರುತಪಡಿಸಿದರು. ಬಳಿಕ ವೈಸರಾಯ ಪ್ರಭುಗಳವರು ಅರ್ಥಗರ್ಭಿತವಾದ ಭಾಷಣ ಕೊಟ್ಟು ಹಿಂದೂಸ್ಥಾನದಲ್ಲಿ ಇನ್ನೂ ಕೆಲವು ವಿಶ್ವವಿದ್ಯಾನಿಲಯ ಗಳನ್ನು ಸ್ಥಾಪಿಸುವದರಿಂದ ಈಗ ಯುನಿವರ್ಸಿಟಿಯನ್ನು ಸ್ಥಾಪಿಸುವಾಗ ಉಂಟಾದ ಕಷ್ಟವು ಮುಂದಕ್ಕೆ ಕಡಿಮೆಯಾ ದೀತೆಂದೂ ಪ್ರೌಢ ವಿದ್ಯಾಭ್ಯಾಸದ ಕಡೆಗೆ ಹಿಂದೂಸ್ಥಾನದ ಜನರಿಗೆ ಇರುವ ಆಶೆಯು ಸ್ವಲ್ಪವಾದರೂ ಪರಿ ಪೂರ್ಣವಾಗುವ ಹಾಗಾದೀತೆಂದೂ ಹೇಳಿ, ಹಿಂದೂ ವಿಶ್ವವಿದ್ಯಾ[illegible]ದ ಕಡೆಗಿರುವ ತನ್ನ ಸಹಾನುಭೂತಿ ಯನ್ನು ತೋರ್ಪಡಿಸಿ ಶಂಕುಸ್ಥಾಪನೆಯನ್ನು ಮಾಡಿದರು.

~~~~~

ವೈಸರಾಯ ಪ್ರಭುಗಳವರು ತಾ ೩ರಲ್ಲು ಪಾಟ್ನ ಹೈಕೋರ್ಟನ್ನು ತೆರೆದಿರುತ್ತಾರೆ.

~~~~~

ಜನವರಿ ತಾ ೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಬಾಹ್ಯ ಮಂದಿಗೆ ಪ್ಲೇಗಬೇನೆಯು ಸೋಂಕಿ ೬೬೨ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂದಿನಲ್ಲಿ ೧೬೭೨, ಮದ್ರಾಸ್ ೩೬೬, ಬಿಹಾರ್ ಮತ್ತು ಒರಿಸ್ಸ ೫೮೫, ಸಂಯುಕ್ತ ಸಂಸ್ಥಾನ ೧೨೩೯, ಪಂಜಾಬು ೪೦, ಬರ್ಮ ೩೩೭, ಮಧ್ಯಸಂಸ್ಥಾನ ೭೭೭, ಮೈಸೂರು ಸಂಸ್ಥಾನ ೧೭೦, ಹೈದರಾಬಾದ್ ೧೨೭೧, ಮಧ್ಯಹಿಂದೂಸ್ಥಾನ ೪೦, ಕಾಶ್ಮೀರ ೧೧ ಮರಣಗಳಾ ದವು.

~~~~~

ಬಾಳೆಯ ಗಿಡದ ರಸವು ನಾಗರ ಹಾವಿನ ವಿಷನಿವಾರ ಣೆಗೆ ದಿವ್ಯೌಷಧವೆಂಬುದನ್ನು ಮೆ| ಡೊನಾಲ್ಡ್ ಒಬೇಸ್ಕರ್ ರವರು ಪರೀಕ್ಷೆಯ ಮೂಲಕ ಅನೇಕ ಜನ ಡಾಕ್ಟರುಗಳ ಸಮೂಹದಲ್ಲಿ ತೋರಿಸಿದರೆಂದು 'ಸಿಲೋನ್ ಟೈಂಸ್' ಪತ್ರಿಕೆಯು ತಿಳಿಸುತ್ತದೆ. ಮೆ| ಒಬೇಸ್ಕರ್‌ರವರು ಒಂದು ಹಾವನ್ನು ತಂದು ಅದರ ಬಳಿಯಲ್ಲಿ ಒಂದು ಬೇಟೆ ನಾಯಿ ಯನ್ನು ಬಿಟ್ಟರು. ಆ ನಾಯಿಯು ಹಾವಿನ ಬಾಲವನ್ನು ಕಡಿದಿತ್ತು. ಆಗ ಹಾವು ಉದ್ರೇಕಿತವಾಗಿ ಆ ನಾಯಿ ಯನ್ನು ಒಂದೆರಡು ವೇಳೆ ಕಡಿದಿತು. ಅನಂತರ ಮೆ| ಒಬೇಸ್ಕರ್‌ರವರು ಆ ನಾಯಿಗೆ ಬಾಳೆಯ ಗಿಡದ ರಸ ವನ್ನು ಕುಡಿಸಿದರು. ಅದರಿಂದ ನಾಯಿಗೆ ನಾಗರ ಹಾವಿನ ವಿಷದ ದುಷ್ಪರಿಣಾಮವು ಕಿಂಚಿತ್ತಾದರೂ ಇಲ್ಲ. ತರುವಾಯ ಮತ್ತೊಂದು ನಾಯಿಯನ್ನು ತಂದುಬಿಟ್ಟು ಅದೇ ಹಾವಿ ನಿಂದ ಕಡಿಸಿದರು. ಅದು ಸ್ವಲ್ಪ ಕಾಲದ ಮೇಲೆ ವಿಷದ ಜ್ವಾಲೆಯಿಂದ ಒದ್ದಾಡುತ್ತ ಬಿದ್ದುಬಿಟ್ಟಿತು. ಅದಕ್ಕೂ ಬಾಳೆಯ ಗಿಡದ ರಸವನ್ನು ಕುಡಿಸಿ ಬದುಕಿಸಿದರು.

~~~~~

ಬೈಬಲ್ ಸೊಸೈಟಿಯ ಮುಂಬಾಯಿ ಶಾಖೆಯವರು ಕಳೆದ ವರ್ಷ ೧೫೦,೦೦೦ ಬೈಬಲುಗಳನ್ನು ಮಾರಿದರು. ಅಂದರೆ ಹಿಂದಿನ ವರ್ಷಕ್ಕಿಂತಲೂ ೩೫೦೦ ಪ್ರತಿಗಳು ಹೆಚ್ಚಿಗೆ ಮಾರಿ ಹೋದವು.

~~~~~

ಬಂಗಾಳ ದೇಶದ ಢಕ್ಕಾ ಡಿಸ್ಟ್ರಿಕ್ಟಿನಲ್ಲಿರುವ ಬಾಬು ರಾಜೇಂದ್ರನಾಥ ಸೇನ್ ಗುಪ್ತರವರು ತಮ್ಮ ೫೦ನೇ ವಯಸ್ಸಿನಲ್ಲಿ ಕಾಲಾಧೀನರಾದರು. ಅವರು ಮೃತವಾ ಗುವದಕ್ಕೆ ಮುಂಚೆಯೇ ಅವರಿಗೆ ನಾಲಿಗೆಯ ಸ್ವಾಧೀನ ತಪ್ಪಿ ಹೋಯಿತು. ಆಗ ಅವರ ಪತ್ನಿಯು ಹತಾಶಳಾಗಿ ಪತಿವಿಯೋಗವು ಸಂಭವಿಸುತ್ತದೆಂದು ತಿಳಿದು ಅಡಿಗೆಯ ಮನೆಗೆ ಹೋಗಿ ತನ್ನ ಚಿಕ್ಕ ಮಗುವನ್ನು ಎತ್ತಿಕೊಂಡು ಅದನ್ನು ನೋಡುತ್ತಾ ಇದ್ದ ಹಾಗೆಯೇ ಅವರಿಗೆ ಸ್ಮೃತಿ ತಪ್ಪಿ ಹೋಯಿತು. ಅಷ್ಟರಲ್ಲಿ ಸೇನರಿಗೆ ಮರಣ ಸಂಭ ವಿಸಿತು. ಒಳಗಿನವರು ಒಂದು ನೋಡುವಲ್ಲಿ ಸೇನರವರ ಪತ್ನಿಯು ತನ್ನ ಭೌತಿಕ ಶರೀರವನ್ನು ಬಿಟ್ಟು ಹೋದದ್ದು ಕಂಡುಬಂತು. ಹೀಗೆ ದಂಪತಿಗಳ ಮೃತ ಶರೀರಗಳೆರಡನ್ನೂ ಏಕ ಕಾಲದಲ್ಲಿ ಬೇರೆ ಬೇರೆ ಚಿತೆಗಳ ಮೇಲೆ ಅಗ್ನಿಸಂಸ್ಕಾರ ಮಾಡಿದರು.

~~~~~

ಸರಕಾರದವರು ಮುಂದಣ ವರ್ಷದಲ್ಲಿ ಉಪ್ಪಿನ ಮೇಲಿನ ಸುಂಕವನ್ನು ಹೆಚ್ಚಿಸುವರೆಂಬ ಭಾವನೆಯಿಂದ ಅನೇಕ ವರ್ತಕರು ಲಾಭ ಸಂಪಾದಿಸಬೇಕೆಂಬ ಆಶೆಯಿಂದ ಉಪ್ಪನ್ನು ವಿಶೇಷವಾಗಿ ಶೇಖರಿಸಲುದ್ಯುಕ್ತರಾದರು. ಅದನ್ನು ಇಂಡಿಯಾ ಸರಕಾರದವರು ತಿಳಿದು ಇಂಥಾ ವರ್ತಕರಿಗೆ ಹೆಚ್ಚಾಗಿ ಉಪ್ಪನ್ನು ಕೊಡಕೂಡದೆಂಬ ಹಂಗಾಮಿ ಹುಕುಂ ಮಾಡಿರುತ್ತಾರೆ.

~~~~~

ಮೈಸೂರು ಮಹಾರಾಜರವರು ಕಳೆದ ವಾರ ಮುಂಬಾ ಯಲ್ಲಿರುವ ನಿರಾಶ್ರಿತ ಜನಸಹಾಯಕ ಸಂಘದವರಿಂದ ಸ್ಥಾಪಿತವಾಗಿರುವ ಅಂತ್ಯಜರ ಪಾಠಶಾಲೆಗೆ ದಯಮಾಡಿ ಸಿದ್ದರು. ಇದಕ್ಕಾಗಿ ಮಂದಿರವು ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದಿತು. ಸಂಘಾಧ್ಯಕ್ಷರಾದ ಸರ್ ನಾರಾ ಯಣ ಚಂದಾವರಕಾರರವರು ಮಹಾರಾಜರವರನ್ನು ಸ್ವಾ ಗತಮಾಡಿಕೊಂಡು ಶಾಲೆಯೊಳಗೆ ಕರಕೊಂಡು ಹೋಗಿ ವಿದ್ಯಾಭ್ಯಾಸಂಗ ಮತ್ತು ಮರಕೆಲಸ ಮೊದಲಾದ ಕೈಗಾರಿ ಕೆಯ ತರಗತಿಗಳನ್ನೂ ಅಶನವಸನದೇರ್ಪಾಡನ್ನೂ ತೋ ರಿಸಿದರು. ಮಹಾರಾಜರವರು ಪಾಠಶಾಲೆಯ ನಡವಳಿ ಕೆಯು ಸುಸೂತ್ರವಾಗಿ ನಡೆಯುತ್ತಿರುವದನ್ನು ಕಂಡು ಹರ್ಷಚಿತ್ತರಾಗಿ ಉತ್ತಮ ವರ್ಣದ ಹುಡುಗರು ಈ ಪತಿತ ಹುಡುಗರ ಕೂಡೆ ಅಭ್ಯಂತರವಿಲ್ಲದೆ ಮಿಳಿತರಾಗುವರೇ, ಅವರ ಪೋಷಕರು ಆಕ್ಷೇಪಿಸುವದಿಲ್ಲವೇ ಎಂದು ಪ್ರಶ್ನಿಸಿ ಅಂಥಾ ಆಕ್ಷೇಪವೇನೂ ಇಲ್ಲವೆಂದು 'ಸರ್ ಚಂದಾವರ ಕಾರರವರು ಉತ್ತರಕೊಟ್ಟ ಮೇಲೆ ಮಹಾರಾಜರು ತನಗ ದರಿಂದುಂಟಾದ ಆನಂದವನ್ನು ಪ್ರದರ್ಶಿಸಿದರು. ಅನಂತರ ಸರ್ ಚಂದಾವರ್‌ಕಾರರವರು ಮಹಾರಾಜರವರಿಗೆ ಪುಷ್ಪ ಹಾರ ಗುಚ್ಛವನ್ನರ್ಪಿಸಿ, ಮಹಾರಾಜರು ಈ ದೀನಜನೋ ದ್ಧಾರಣಕ್ಕಾಗಿ ತಮ್ಮ ಸಂಸ್ಥಾನದಲ್ಲೂ ಹೊರಗಡೆಯೂ ಮಾಡುತ್ತಿರುವ ಸಹಾಯಗಳು ಈ ಪ್ರಯತ್ನಕ್ಕೆ ಮಹಾ ಉತ್ತೇಜನಕರವಾಗಿದ್ದೆಂಬುದನ್ನು ತಿಳಿಯಪಡಿಸಿದರು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಇದೇ ತಾ. ೧೮ರಲ್ಲಿ ಕೂಡಿದ ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಮಾನ್ಯ ಕೆ. ಕೆ. ಆರ್. ಕವಲಪ್ಪರ ಮೂಪ್ಪಿಲ್ ನಾಯರರು ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪರೀಕ್ಷಾರ್ಥವಾಗಿ ೧೯೧೪ನೇ ಇಸ ವಿಯಿಂದ ಈವರೆಗೆ ಎಷ್ಟು ಬ್ರೇಂಚ್ ಪೋಸ್ಟಾಫೀಸುಗಳು ತೆರೆಯಲ್ಪಟ್ಟಿರುತ್ತವೆಂದು ಕೇಳಿದ ಪ್ರಶ್ನೆಗೆ ಪರೀಕ್ಷಾರ್ಥ ವಾಗಿ ೧೯ ಬ್ರೇಂಚ್ ಪೋಸ್ಟಾಫೀಸುಗಳು ಮಲಬಾರಿನ ಲ್ಲಿಯೂ ಇಂಥಾ ೭ ಬ್ರೇಂಚ್ ಪೋಸ್ಟಾಫೀಸುಗಳು ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿಯೂ ತೆರೆಯಲ್ಪಟ್ಟಿರುವದು. ಈ ಪೈಕಿ ಮಲಬಾರಿನ ೧೧, ದಕ್ಷಿಣಕನ್ನಡಾ ಜಿಲ್ಲೆಯ ೫ ಬ್ರೇಂಚ್ ಪೋಸ್ಟಾಫೀಸುಗಳು ಖಾಯಂ ಪೋಸ್ಟಾಫೀಸು ಗಳಾಗಿ ಮಾಡಲ್ಪಟ್ಟಿರುವವು ಎಂಬ ಉತ್ತರವು ಸರಕಾರ ದಿಂದ ದೊರಕಿರುತ್ತದೆ.

ಬಹುಮಾನಪಟ್ಟ ಮೆ| ಕೆ ಪಿ. ರಾಮನ್ ಮೆನೋನ ರವರಿಂದ ೧೯೧೩ನೇ ಇಸವಿಯಲ್ಲಿ ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಮುಂದಿಡೋಣಾದ ಮಲಬಾರ ವಿವಾಹ ಮತ್ತು ಈ ವಿವಾಹ ಮೂಲಕ ಉಂಟಾಗುವ ಸಂತತಿಯವರಿಗಿರುವ ಆಸ್ತಿ ಬಾಧ್ಯತೆಗಳ ಕುರಿತಾದ ಕಾನೂನು ಮಸೂದೆಯನ್ನೂ "ಪಾರ್ಟಿಷನ್ ಮತ್ತು ಸಕ್ಸೆ ಷನ್ ಬಿಲ್" ಎಂಬ ಅಳಿಯ ಸಂತಾನ ಮತ್ತು ಮರು ಮಕ್ಕತ್ತಾಯ ಕುಟುಂಬಗಳ ಆಸ್ತಿಗಳ ವಿಭಾಗ ಮತ್ತು ವಾರಿಸುದಾರರ ಕುರಿತಾದ ಕಾನೂನು ಮಸೂದೆಯನ್ನೂ ಇದೇ ತಾ. ೧೮ರಲ್ಲಿ ಕೂಡಿದ ನ್ಯಾಯ ವಿಧಾಯಕ ಸಭೆ ಯಲ್ಲಿ ಬಹುಮಾನಪಟ್ಟ ಮೆನೋನರವರು ಹಿಂತೆಗೆದು ಮದ್ರಾಸ್ ಸಂಸ್ಥಾನದಲ್ಲಿ ಬಳಕೆಯಲ್ಲಿರುವ ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯ ಕುಟುಂಬದಲ್ಲಿ ನಡೆ ಯುವ ವಿವಾಹ, ಕುಟುಂಬದ ಆಡಳಿತೆ, ವಿಭಾಗ ಮತ್ತು ಬಾಧ್ಯತೆ ಸಂಬಂಧವಾದ ಒಂದು ಕಾನೂನು ಮಸೂದೆ ಯನ್ನು ಸಭೆಯ ಮುಂದೆ ತರಲು ಅಪ್ಪಣೆಯನ್ನು ಕೇಳಿ ಕೊಂಡರು. ಇದಕ್ಕೆ ಸರಕಾರದ ಅಪ್ಪಣೆ ದೊರಕಿರು ತ್ತದೆ.

೧೯೧೮ನೇ ಇಸವಿಯ ಮಲಬಾರ ವಿಲ್ಸ್ ಆಕ್ಟಿನಲ್ಲಿ ತಿದ್ದುಪಡಿ ಮಾಡಬೇಕೆಂಬದಾಗಿ ಸೂಚಿಸುವ ಕಾನೂನು ಮಸೂದೆಯನ್ನು ನ್ಯಾಯವಿಧಾಯಕ ಸಭೆಯ ಮುಂದೆ ತರುವರೆ ಬಹುಮಾನಪಟ್ಟ ಅಹಮ್ಮದ್ ತಂಬಿ ಮರಕ್ಕಾ ಯರರು ಅಪ್ಪಣೆ ಕೇಳಿದರು. ಇದಕ್ಕೆ ಅಪ್ಪಣೆ ದೊರ ಕಿರುತ್ತದೆ.

ಮದ್ರಾಸ್ ಸಂಸ್ಥಾನದ ಡಿಸ್ಟ್ರಿಕ್ಟ್‌ಬೋರ್ಡು ಮತ್ತು ತಾಲೂಕು ಬೋರ್ಡುಗಳಲ್ಲಿ ಯಾವ ಸುಧಾರಣೆಯನ್ನು ಮಾಡಬಹುದೆಂಬ ವಿಷಯದಲ್ಲಿ ತನಿಕೆ ನಡಿಸಿ ವರದಿ ಮಾಡುವ ಬಗ್ಗೆ ಅಫೀಸರರು ಮತ್ತು ಅಫೀಸರರಲ್ಲದ ವರು ಕೂಡಿರುವ ಒಂದು ಕಮಿಟಿಯನ್ನು ನೇಮಿಸಬೇ ಕೆಂಬ ಸೂಚನೆಯನ್ನು ಬಹುಮಾನಪಟ್ಟ ಎ. ಎಸ್. [illegible] ರಾವರವರು ನ್ಯಾಯವಿಧಾಯಕ ಸಭೆಯ ಮುಂದೆ
~~~~~

ತಂದರು. ಈ ವಿಷಯ ಸರಕಾರದವರು ಈ ಮೊದಲೇ ಡಿಸ್ಟ್ರಿಕ್ಟ್ ಬೋರ್ಡುಗಳ ಆಲೋಚನೆಯನ್ನು ಕೇಳಿರುವದರಿಂದ ಕಮಿಟಿಯನ್ನು ನೇಮಿಸುವ ಅವಶ್ಯಕತೆ ಉಂಟೋ ಇಲ್ಲವೊ ಏನೆಂಬದನ್ನು ಈಗ ಹೇಳಲು ಸಾಧ್ಯವಿಲ್ಲ ಎಂಬದಾಗಿ ಬಹುಮಾನಪಟ್ಟ ಸರ್. ಪಿ. ಎಸ್. ಶಿವಸ್ವಾಮಿ ಐಯ್ಯರರು ಹೇಳಿದ್ದರಿಂದ ಬಹುಮಾನಪಟ್ಟ ಕೃಷ್ಣರಾವ್ ರವರು ಈ ಸೂಚನೆಯನ್ನು ಹಿಂತೆಗೆದರು.

ಸಂಸ್ಥಾನದಲ್ಲೆಲ್ಲಾ ಗ್ರಾಮ ಪಂಚಾಯತಗಳ ವ್ಯವಸ್ಥಾಪನೆ ಬಗ್ಗೆ ಒಬ್ಬ ಸ್ಪೆಶ್ಯಲ್ ಆಫೀಸರರನ್ನು ನೇಮಿಸಬೇಕೆಂಬ ಸೂಚನೆಯನ್ನು ಮಾನ್ಯ ಎ. ಎಸ್. ಕೃಷ್ಣರಾವರು ಕೌನ್ಸಿಲಿನ ಮುಂದೆ ತಂದರು. ಈ ವಿಷಯ ಚರ್ಚೆ ನಡೆದು ಕಡೆಗೆ ಮಾನ್ಯ ಕೃಷ್ಣರಾಯರು ತನ್ನ ಸೂಚನೆಯನ್ನು ಹಿಂತೆಗೆದರು. ಮಾನ್ಯ ಮೆಂಬರರಿಂದ ಸಭೆಯ ಮುಂದೆ ತರಲ್ಪಟ್ಟ ಇನ್ನು ಕೆಲವು ಸೂಚನೆಗಳು ಬಿದ್ದುಹೋಗಿರುವವು. ಬರುವ ಮದ್ರಾಸ್ ನ್ಯಾಯವಿಧಾಯಕ ಸಭೆಯು ಮಾರ್ಚ ತಾ. ೧೩ರಲ್ಲು ಕೂಡಿ ಬರುವದು.

ದಕ್ಷಿಣ ಕನ್ನಡ.

ಪುತ್ತೂರು:— ಧರ್ಮಸ್ಥಳದ ಮ. ರಾ. ರಾ. ಚಂದಯ್ಯ ಹೆಗ್ಗಡೆಯವರಿಗೆ ಇದೇ ತಿಂಗಳ ಕಳೆದ ೭ನೇ ತಾರೀಕಿನ ರಾತ್ರೆ ವಿವಾಹವಾದ ಸಂಗತಿಯು ವಾಚಕರಿಗೆಲ್ಲಾ ಗೊತ್ತೇ ಇರುವುದು. ಯಾವ ವಿಷಯದಲ್ಲಾದರೂ ಸ್ಥಳಲಕ್ಷಣವಾದ ಧರ್ಮವನ್ನು ಮರೆಯದ ಸದರಿ ಹೆಗ್ಗಡೆಯವರು ವಿವಾಹ ಲಗ್ನವು ಜರುಗಿದ ಕೂಡಲೇ ಸಹ ಸಂಸಾರದ ಆನಂದದಲ್ಲಿಯೂ ಪರಾರ್ಥವನ್ನು ಬಯಸಿ ಪೂಣೆಯಲ್ಲಿರುವ "ಭಾರತ ಸೇವಾಸಮಾಜ" (Servants of India Society) ಎಂಬ ದಿವಂಗತರಾದ ಮಾನ್ಯ ಗೋಖಲೆಯವರಿಂದ ಸ್ಥಾಪಿತವಾದ ರಾಜಕೀಯ ಕಾರ್ಯಧುರಂಧರರ ಸಂಘಕ್ಕೆ ವಿವಾಹ ಸ್ಮರಣಾರ್ಥವಾಗಿ ಇನ್ನೂರು ರೂಪಾಯಿಗಳನ್ನು ಉಚಿತವಾಗಿ ಕೊಟ್ಟರು ಹಾಗೆಯೇ ಪುತ್ತೂರು ವಕೀಲ ಕೀರ್ತಿವಂತರಾದ ಮ. ರಾ. ರಾ. ಬೈಂದೂರು ರಾಮರಾಯರ ಮಗಳನ್ನು ಸವೂರು ನಾರಾಯಣರಾಯರ ತಮ್ಮನ ಮಗನಿಗೆ ಕೊಟ್ಟು ನಡೆದ ತಾ. ೭ನೇ ರಾತ್ರೆಯ ಲಗ್ನ ಸಮಾರಂಭದಲ್ಲಿಯೂ ವಧೂವರರ ಎರಡು ಕಡೆಯವರೂ ಒಟ್ಟಿಗೆ ಮೂವತ್ತು ರೂಪಾಯಿಗಳನ್ನು ಸದರೀ ಸಮಾಜಕ್ಕೆ ದಾನ ಮಾಡಿದರು. ಊರಲ್ಲಿ ಜರುಗುವ ಎಲ್ಲಾ ಶುಭಕಾರ್ಯಗಳಲ್ಲಿಯೂ ಹೀಗಾದರೆ ಅತ್ಯುತ್ತಮ.

ಈ ತಿಂಗಳು ೯ನೇ ತಾರೀಕು ಪ್ರಾತಃಕಾಲ ಥಿಯೊಸಾಫಿಕಲ್ ಸೊಸೈಟಿಗಳ ಇನ್ಸ್‌ಪೆಕ್ಟರರಾದ ಮ. ರಾ. ನರಹರಿ ಶಾಸ್ತ್ರಿಗಳು, ಮ. ವಕೀಲ್ ನರಸಿಂಗರಾಯರು ಇನ್ನು ಕೆಲವರು ದೊಡ್ಡ ಮನುಷ್ಯರೊಡನೆ ಪುತ್ತೂರಿನ ಹೊಲಗೇರಿಗೆ ಹೋಗಿ ಅಲ್ಲಿನ ಗಂಡಸರು, ಹೆಂಗಸರು, ಮಕ್ಕಳಿಗೆ ದೇವತಾಪ್ರಾರ್ಥನೆ, ನೈರ್ಮಲ್ಯ, ಮದ್ಯಪಾನ ಫಲ, ಮಕ್ಕಳ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಕುರಿತು ಬಹು ಸುಲಭವಾಗಿ ಮನಸ್ಸಿಗೆ ಹೋಗುವಂತೆ ಕನ್ನಡದಲ್ಲಿ ಬುದ್ಧಿವಾದಗಳನ್ನು ಹೇಳಿದರು. ಮ. ರಾ. ನರಸಿಂಗರಾಯರು ಅದನ್ನು ತುಳುಭಾಷೆಯಲ್ಲಿ ಬಹು ಪ್ರೇಮದಿಂದ ತರ್ಜುಮೆ ಮಾಡಿದರು. ಕೆಲವು ಹೊಲೆಯರ ಮಕ್ಕಳು ಕೆಲವರು ಸ್ತೋತ್ರಗಳನ್ನು ಭಕ್ತಿಯಿಂದ ಹೇಳಿದರು. ಕೊನೆಯಲ್ಲಿ ಮಕ್ಕಳಿಗೆ ಮಿಠಾಯಿ ಹಂಚಲ್ಪಟ್ಟಿತು.

ಕಾಸರಗೋಡು:— ಕಳೆದ ವರ್ಷ ದಕ್ಷಿಣಕನ್ನಡ ಜಿಲ್ಲೆಯ ಥಿಯೋಸಾಫಿಕಲ್ ಕನ್‌ಫರೆನ್ಸ್ ಎಂಬ ಕೂಟವು ಮಂಗಳೂರಿನಲ್ಲಿ ಕೂಡಿತ್ತು. ಈ ವರ್ಷ ಈ ಫೆಬ್ರುವರಿ ೨೦ನೇ ತಾರೀಕು ಭಾನುವಾರದ ದಿನ ಈ ಕೂಟವು ಕಾಸರಗೋಡಲ್ಲಿ ನಡೆಯುವಂತೆ ಮ| ರಾ| ಕೆ. ನರಹರಿ ಶಾಸ್ತ್ರಿಗಳ ಪ್ರೋತ್ಸಾಹದಿಂದಲೂ, ಕಾಸರಗೋಡಲ್ಲಿರುವ ಥಿಯೋಸಾಫಿಕಲ್ ಸೊಸೈಟಿಯ ಮೆಂಬರುಗಳ ಅನುಮತಿ ಮತ್ತು ಉತ್ಸಾಹಗಳಿಂದಲೂ ಏರ್ಪಡಿಸಲ್ಪಟ್ಟಿದೆ. ಈ ಸಂದರ್ಭದಲ್ಲಿ ಕಲ್ಲಿಕೋಟೆಯಲ್ಲಿರುವ ಹ್ಯಾಕೋರ್ಟ್ ವಕೀಲ್ ಮ| ಮಂಜೇರಿ ಎಸ್ ರಾಮೈಯ್ಯರ್ ಬಿ ಎ, ಬಿ. ಎಲ್ ರವರು ಉಪನ್ಯಾಸವನ್ನು ವಹಿಸಿರುವರು. ಮ. ಕಲ್ಲಿಕೋಟೆಯ ಕರುಣಾಕರ ನಾಯರವರು ಮಳೆಯಾಳ ಭಾಷೆಯಲ್ಲಿ ಮ| ಕಲ್ಲಿಕೋಟೆ ರಾಮಕೃಷ್ಣಯ್ಯರ್ ಬಿ. ಎ. ಯವರು ಇಂಗ್ಲಿಷಿನಲ್ಲಿ ಥಿಯೊಸಾಫಿಕಲ್ ಸೊಸೈಟಿಗಳ ಇನ್ಸ್‌ಪೆಕ್ಟರ್ ಮ. ಕೆ. ನರಹರಿ ಶಾಸ್ತ್ರಿಗಳವರು ಕನ್ನಡದಲ್ಲಿಯೂ ಬೇರೆ ಬೇರೆ ವಿಷಯಗಳಲ್ಲಿ ಉಪನ್ಯಾಸಗಳನ್ನು ಮಾಡುವರು.

ಮಂಗಳೂರು.

ಯಂಗ್‌ಮೆನ್ಸ್ ಯೂನಿಯನ್, ಮಂಗಳೂರು— ಈ ಯುವಜನ ಸಮಾಜದ ವಾರ್ಷಿಕೋತ್ಸವವು ಇದೇ ತಿಂಗಳ ತಾ ೬ನೇ ಆದಿತ್ಯವಾರ ಬೇರಿಸ್ಟರ್ ರೋಯಸ್‌ರವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಈ ಉತ್ಸವ ಸಮಾರಂಭಕ್ಕೆ ಶಾಲಾ ಇನ್ಸ್‌ಪೆಕ್ಟರರಾದ ಮಿ| ಏಟ್ಸ್ ದೊರೆಗಳು, ಮ| ರಾ| ರಾವ್ ಬಹದ್ದೂರ್ ಎಸ್. ಸುಬ್ಬರಾವ್‌ರವರು, ಡಾಕ್ಟರ್ ಎಲ್ ಪಿ. ಫೆರ್ನಾಂಡಿಸರು, ಮ| ರಾ| ಹೈಕೋರ್ಟ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈಗಳವರು, ಕೆನರಾ ಹೈಸ್ಕೂಲಿನ ಹೆಡ್ ಮಾಸ್ತರರಾದ ರಾ| ಪದ್ಮನಾಭಯ್ಯನವರು, ಶಾಲಾ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮ| ರಾ| ಸವೂರ ರಾಮರಾಯರೇ ಮೊದಲಾದ ಮಹನೀಯರು ಚಿತ್ತೈಸಿ ಸಭೆಯನ್ನು ಅಲಂಕರಿಸಿದ್ದರು. ಸಂಘದ ಕಾರ್ಯದರ್ಶಿಗಳಾದ ಮ| ರಾ| ಯನ್ ಯನ್. ಸುವರ್ಣ ಬಿ ಎ. ಬಿ. ಎಲ್‌ರವರು ಸಂಘದ ಗತ ವರ್ಷದ ವರದಿಯನ್ನು ಓದಿ ಹೇಳಿದರು. ಈ ಸಂಘದ ಯುವಕರನ್ನು ಗರಡೀಸಾಧಕದಲ್ಲಿ ಮ| ರಾ| ಎನ್. ಶೇಷಪ್ಪನವರು ತರಬೇತು ಮಾಡುತ್ತಿದ್ದಾರೆಂತ ಕಾರ್ಯದರ್ಶಿಯರು ಓದಿದ ವರದಿಯಿಂದ ತಿಳಿಯಬಂತು. ವರದಿಯನ್ನೋದಿದನಂತರ ಮ| ರಾ| ಎನ್. ಶೇಷಪ್ಪನವರೂ ಇವರಿಂದ ತರಬೇತು ಪಡೆದ ಇತರ ಯುವಕರೂ ಗರಡೀ ಸಾಧಕವನ್ನು ಮಾಡಿ ತೋರಿಸಿ, ಕೂಡಿದ ಸಭಿಕರಲ್ಲಿ ಆಶ್ಚರ್ಯವನ್ನುಂಟ ಮಾಡಿದರು. ಈ ಪೈಕಿ ಬಿ. ಎ. ಪರೀಕ್ಷೆಗೆ ಓದುತ್ತಿರುವ ರಾ| ಕುಞ್ಞಿಕಣ್ಣನವರು ಒಂದು ಕೈಯಲ್ಲಿ ೫ ಮಣ ಭಾರವಿರುವ "ಬಾರ್‌ಬೆಲ್"ನ್ನೂ ಇನ್ನೊಂದು ಕೈಯಿಂದ ಪ್ರಾಯಭರಿತನಾದ ಒಬ್ಬ ಯುವಕನನ್ನೂ ಎತ್ತಿ ಹಿಡಿದು ಸಭಿಕರಲ್ಲಿ ಆಶ್ಚರ್ಯವನ್ನುಂಟುಮಾಡಿದರು. ಅನಂತರ ರಾ| ಶೇಷಪ್ಪನವರು ಎರಡು ಕೈಯಲ್ಲಿ ಎರಡು ಮುಡಿ ಅಕ್ಕಿಯನ್ನೂ ಹಲ್ಲಿನಿಂದ ಒಂದು ಮುಡಿಯನ್ನೂ ಪ್ರತಿ ಒಂದು ಮುಡಿಯ ಮೇಲೆ ಒಬ್ಬೊಬ್ಬ ಹುಡುಗನನ್ನೂ ಕುತ್ತಿಗೆಯ ಮೇಲೆ ಒಬ್ಬ ಯುವಕನನ್ನೂ ಎತ್ತಿ ಸಭಿಕರಲ್ಲಿ ವಿಸ್ಮಯವನ್ನುಂಟುಮಾಡಿದರಲ್ಲದೆ ಹಿಂದೆ ಬಗ್ಗಿಕೊಂಡು ಎದೆಯ ಮೇಲೆ ಒಂದು ಹಲಿಗೆಯನ್ನಿಟ್ಟು ಅದರ ಮೇಲೆ ಎಂಟು ಅಕ್ಕಿಮುಡಿಗಳನ್ನು ಸಾಲುಗಳಾಗಿ ಒಂದರಮೇಲೊಂದು ಇರಿಸಿದರು. ಸಭಿಕರೆಲ್ಲರೂ ಕೈಚಪ್ಪಾಳೆಯನ್ನು ಮಾಡಿದರು. ಕಡೆಗೆ ಮ| ರಾ| ಶೇಷಪ್ಪನವರು ಎರಡು ಖಂಡಿ ಭಾರವಾದ ಒಂದು ಒಂಡೆಕಲ್ಲನ್ನು ತನ್ನ ಎದೆಯ ಮೇಲೆ ಇಟ್ಟರು. ಇದರ ಮೇಲೆ ಇಬ್ಬರು ಯುವಕರು ಕಬ್ಬಿಣದ ಸುತ್ತಿಗೆಯಿಂದ ಬಲವಾದ ಪೆಟ್ಟುಗಳನ್ನು ಹೊಡದನಂತರ ಶೇಷಪ್ಪನವರು ಕಲ್ಲನ್ನು ತಾನಾಗಿ ಕೆಳಗೆ ಉರುಳಿಸಿದರು. ಬಳಿಕ ಅಧ್ಯಕ್ಷರವರು ಕಾಲೋಚಿತ ಭಾಷಣಕೊಟ್ಟು ಮ| ರಾ| ಶೇಷಪ್ಪನವರನ್ನು "ಮಂಗಳೂರಿನ ರಾಮಮೂರ್ತಿ" ಎಂದು ಕರೆದರೆ ಅವರು ತೋರಿಸಿದ ಸಾಧಕಗಳನ್ನು ನೋಡಿದವರ್‍ಯಾರೂ ಅಲ್ಲಗಳೆಯರು ಎಂಬಿತ್ಯಾದಿ ಮಾತುಗಳಿಂದ ಸಂಘದ ಕೆಲಸವನ್ನು ಶ್ಲಾಘಿಸಿ ಬುದ್ಧಿವಾದವನ್ನಿತ್ತರು.

ವಿದ್ಯಾಖಾತೆಯ ಡೈರೆಕ್ಟರರಾದ ಬಹುಮಾನಪಟ್ಟ ಜೆ ಸ್ಟೋನ್ ದೊರೆಗಳವರು ಇದೇ ತಾ. ೭ರಲ್ಲು ಇಲ್ಲಿಗೆ ಚಿತ್ತೈಸಿ. ಜಿಲ್ಲಾ ಕಲೆಕ್ಟರ ದೊರೆಗಳ ಅತಿಥಿಯಾಗಿದ್ದು ಸೋಮವಾರ ಮತ್ತು ಮಂಗಳವಾರ ಇಲ್ಲಿಯ ಸೆಕೆಂಡರಿ ಶಾಲೆಗಳನ್ನೂ ಕಾಲೇಜುಗಳನ್ನೂ ಸಂದರ್ಶಿಸಿ ತಾ. ೯ರಲ್ಲು ಕಣ್ಣಾನೂರಿಗೆ ಹೊರಟುಹೋದರು.

ಇಲ್ಲಿಯ ವಿದ್ಯಾರ್ಥಿ ಭ್ರಾತೃಸಂಘದ ಪರವಾಗಿ ಮ| ರಾ| ಕಾರ್ನಾಡ ಸದಾಶಿವರಾಯರು ಗಣಪತಿ ಸೆಕಂಡರಿ ಶಾಲೆಯ ಸಭಾಸದನದಲ್ಲಿ ತಾ ೧೨ನೇ ಶನಿವಾರ ೫|| ಗಂಟೆಗೆ "ಈಚೆಗೆ ಮುಂಬಾಯಿಯಲ್ಲಿ ಜರಗಿದ ರಾಷ್ಟ್ರೀಯ ಚಟುವಟಿಕೆಗಳಿಂದ ನನ್ನಲ್ಲಿ ಆದ ಅನುಭವ" ಎಂಬ ವಿಷಯವನ್ನು ಕುರಿತಾದ ಭಾಷಣವನ್ನು ಕೊಡುವರು ಎಂಬದಾಗಿ ನೋಟೀಸುಗಳು ಸದರಿ ಸಂಘದವರಿಂದ ಹಂಚಿಸಲ್ಪಟ್ಟಿತ್ತಷ್ಟೆ. ಆದರೆ ಕೆಲವು ಕಾರಣಗಳಿಂದ ಈ ಭಾಷಣವನ್ನು ೧೯ನೇ ಶನಿವಾರಕ್ಕೆ ಮುಂದರಿಸಿದೋಣಾಗಿದೆಂಬದಾಗಿ ವಿದ್ಯಾರ್ಥಿ ಭ್ರಾತೃಸಂಘದ ಸೆಕ್ರೆಟರಿಯವರು ತಿಳಿಸಿರುವರು.

ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರವರು ತಾ. ೭-೮ ಉಡ್ಪಿ, ತಾ. ೯-೧೦ ಕಾರ್ಕಳ, ತಾ. ೧೫-೨೯ ಅಜಕಾರ, ತಾ ೨೨-೨೫ ಮೂಡಬಿದ್ರೆ, ತಾ. ೨೬-೨೮ ಸೋಮೇಶ್ವರ, ಈ ರೀತಿ ಸರ್ಕಿಟು ಬೆಳಸುವರು.

ತಾಲೂಕು ಪೋಲಿಸ್ ಸ್ಟೇಶನ್ ಸಬ್ ಇನ್ಸ್‌ಪೆಕ್ಟರರಾಗಿದ್ದ ರಾ| ಕಳಂಬಿ ರಾಮಚಂದ್ರರಾಯರಿಗೆ ಪುತ್ತೂರಿಗೆ ವರ್ಗವಾಗಿದೆ.

ಹಜೂರು ಕಚೇರಿ ಕ್ಲಾರ್ಕರಾಗಿರುವ ರಾ| ಎ ಸುಬ್ರಾಯ ಹೆಗ್ಗಡೆಯವರ ವಾಚು ಕಳವು ಮಾಡಿದ ರಂಗಪ್ಪನಿಗೆ ೩ ತಿಂಗಳ ಸಜಾ ವಿಧಿಸೋಣಾಯಿತು.

ಬೊಕ್ಕಪಟ್ಣಣದ ಅಂಡ್ರೂ ಡೊಮಿಲರ ಮನೆಯಲ್ಲಿ ಆಭರಣ ಇತ್ಯಾದಿಗಳನ್ನು ಕಳವು ಮಾಡಿದ ಸಿಕ್ಕು ಸೋಜನಿಗೆ ೩ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಪ್ರೋಸೆಸ್ ಸರ್ವರ ವೆಂಕ್ಟಪ್ಪಬಿನ ಹತ್ತಿಪ್ಪತ್ತ ರೂಪಾಯಿ ಕ್ರಯ ಬಾಳುವ ಒಂದು ಆಡು ಈಚೆಗೆ ಕಳ್ಳರಿಂದ ಕಳವು ಆಗಿತ್ತು. ಈ ಆಡು ಕಾವೂರಿನಲ್ಲಿದೆಂದ ವಾರ್ತೆ ಸಿಕ್ಕಿದ್ದರಿಂದ ಸಬ್ ಇನ್ಸ್‌ಪೆಕ್ಟರ್ ಅಮ್ಮುಣ್ಣಿಯವರು ಕಾವೂರಿಗೆ ಹೋಗಿ ದೇರೆಬೈಲು ಸಿಂದ ಅಂಗಡಿ

ಕ್ಯಾಂಪಣ್ಣ ಪೂಜಾರಿಯ ಮನೆಯಲ್ಲಿ ಈ ಆಡನ್ನು ಕಂಡು ವಿಚಾರಿಸಿದಲ್ಲಿ ತನಿಯನೆಂಬ ಹೊಲೆಯನಿಂದ ಆಡನ್ನು ಕ್ರಯಕ್ಕೆ ಕೊಂಡುಕೊಂಡದೆಂಬದಾಗಿ ಸದರಿ ಮನೆಯವರು ಹೇಳಿದ್ದರಿಂದ ಸಬ್ ಇನ್ಸ್‌ಪೆಕ್ಟರರು ತನಿಯನನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ

ಅವ್ವಾಡಿ ಗ್ರಾಮದ ಪಟೇಲರ ಉಗ್ರಾಣಿ ತುಕ್ರನೆಂಬವನ ಕೂಡೆ ತಾಲೂಕಿನಲ್ಲಿ ಕಟ್ಟಲು ೧೦೦ ರೂಪಾಯಿಯ ನೋಟು ೧ ಮತ್ತು ನಗದಿ ರೂ ೧೭ ಕಳುಹಿಸಿದ್ದರಂತೆ ಉಗ್ರಾಣಿ ತುಕ್ರನು ತಾ ೯ರಲ್ಲು ಇಲ್ಲಿಯ ವೆಂಕಟ್ರಮಣ ದೇವಸ್ಥಾನದ ಒಳಿಯ ಕಾಫಿ ಹೋಟೇಲಿನೊಂದರಲ್ಲಿ ಕುಳಿತುಕೊಂಡಿರುವಾಗ ಯಾರೋ ಕಳ್ಳರು ತುಕ್ರನ ಕಿಸೆಯಿಂದ ರೂ. ೧೦೦ರ ನೋಟು ಒಂದು ಮತ್ತು ೧೭ ರೂಪಾಯಿಗಳಿದ್ದ ಗಂಟನ್ನು ಚಾರಿಸಿ ಪರಾರಿಯಾಗಿರುವರು ಎಂಬದಾಗಿ ಕೇಳುತ್ತೇವೆ

ಇದೇ ಜನವರಿ ತಾ ೭ರಲ್ಲು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಸಭೆಯ ಮೂರನೆ ವಾರ್ಷಿಕ ವರ್ಧಂತಿಯು ನೆರವೇರಿತು ಆ ದಿನ ಬೆಳಗ್ಗೆ ಮಂಗಳೂರು ಮುನ್ಸಿಫರಾದ ಮ।ರಾ। ಎಸ್ ಕೆ ಜಗನ್ನಾಥರಾವ್ ಬಿ ಎ ಬಿ ಎಲ್. ಇವರು ದಯಮಾಡಿ ವಿದ್ಯಾರ್ಥಿಗಳಿಗೆ ಬುದ್ಧಿವಾದವನ್ನು ಹೇಳಿ ಇಂಗ್ಲಿಷು, ಸಂಸ್ಕೃತ, ಕನ್ನಡ, ಈ ಭಾಷೆ ಪುಸ್ತಕಗಳಿಂದ ಅಲಂಕೃತವಾದ ಹೊಸತಾದ ಪುಸ್ತಕ ಭಂಡಾರವನ್ನು ತೆರೆದಿದ್ದರು ಪುನಃ ಮಧ್ಯಾಹ್ನದ ಮೇಲೆ ಘಂಟೆ ೪ ೩೦ಕ್ಕೆ ಜರಗಿದ ವರ್ಧಂತಿಯ ಸಭೆಯಲ್ಲಿಯೂ ಇವರೇ ಅಧ್ಯಕ್ಷರಾಗಿದ್ದರು ದಯಮಾಡಿಸಿದ ಮಹನೀಯರಲ್ಲಿ ಕೆಲವರು ವಿದ್ಯಾರ್ಥಿಗಳು ಅನುಸರಿಸಲಿಕ್ಕೆ ತಕ್ಕುದಾದ ಮಾರ್ಗಗಳನ್ನು ತೋರಿಸಿಕೊಟ್ಟು ಕಾಲೋಚಿತ ಉಪನ್ಯಾಸಗಳನ್ನು ಮಾಡಿದರು ಅಧ್ಯಕ್ಷರ ಭಾಷಣವೂ ಹೃದಯಂಗಮವಾಗಿ ಸರ್ವ ಶ್ಲಾಘ್ಯವಾಗಿತ್ತು

ವಾಙ್ಮಯ, ದರ್ಶನ, ಸಮಾಜ, ಶಾಸ್ತ್ರವಿಷಯಗಳನ್ನೊಳಕೊಂಡಿರುವ "ಕನ್ನಡ ಕೋಗಿಲೆ" ಎಂಬ ಹೆಸರಿನಿಂದ ಒಂದು ಮಾಸಪತ್ರಿಕೆಯು ಇದೇ ಬರುವ ವಸಂತದ ಆದಿಯಿಂದ ಮಂಗಳೂರಲ್ಲಿ ಹೊರಡುವದೆಂತ ತಿಳಿಯುತ್ತೇವೆ

ಇದೇ ತಾ ೧೬ನೇ ಶನಿವಾರ ಸೈಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಇನಾಂ ಹಂಚುವ ಸಮಾರಂಭವು ಜಿಲ್ಲಾ ಕಲೆಕ್ಟರ ದೊರೆಗಳಾದ ಮಿ ಇ ಎಸ್ ಲೋಯಿಡ್ ಐ ಸಿ ಎಸ್ ದೊರೆಗಳವರ ಅಧ್ಯಕ್ಷತೆಯಿಂದ ಜರಗುವದು

ಡಿರೆಕ್ಟರ ದೊರೆಗಳು ತಾ ೮ರಲ್ಲು ಇನ್ಸ್‌ಪೆಕ್ಟರರಾದ ಮಿ। ಪರ್ಲ್ ದೊರೆಗಳವರೊಡನೆ ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದವರ ಶಾಲೆಯನ್ನು ಚಿತ್ತೈಸಿ ಸದರಿ ಶಾಲೆಯ ನೇಯಿಗೆ ಮತ್ತು ಮರ ಕೆಲಸಗಳನ್ನೂ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ರಮಗಳನ್ನೂ ಕೋಲಾಟಗಳನ್ನೂ ನೋಡಿಕೊಂಡು ಸಂತೋಷಪಟ್ಟರೆಂತ ತಿಳಿಯುತ್ತೇವೆ

ಟ್ರೈನಿಂಗ್ ಶಾಲೆಯ ಹಿಂದು ಉಮೇದ್ವಾರರ ಮುಷ್ಕರದ ವೃತ್ತಾಂತವನ್ನು ವರ್ತಮಾನ ಸಂಗ್ರಹದಲ್ಲಿ ಸ್ಥಳವಿಲ್ಲದ್ದರಿಂದ ಅಗ್ರ ಲೇಖನವಿರುವ ಮೊದಲನೆಯ ಪಾನಿನಲ್ಲಿ ಅದನ್ನು ಪ್ರಕಟಿಸಿರುತ್ತೇವೆ

ಇಲ್ಲಿಯ ಗೌಡಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಈಗಿನ ಹೊಸ ಆಡಳಿತೆದಾರರು ಹೆಚ್ಚಿನ ಉತ್ಸಾಹಭಕ್ತಿ ಶ್ರದ್ಧೆಗಳಿಂದ ವಿಧಿಪ್ರಕಾರ ಸಾಂಗವಾಗಿ ನೆರವೇರಿಸಿರುವರು. ರಥೋತ್ಸವಕಾಲದ ಸಮಾರಾಧನೆಗಳು ತೃಪ್ತಿಕರವಾದ ರೀತಿಯಲ್ಲಿ ನಡೆಸಲ್ಪಟ್ಟವೆ. ಗೌಡಸಾರಸ್ವತರಲ್ಲಿ ಅಂಗಡಿಕಾರರೂ ಸಾವಕಾರರೂ ರಥೋತ್ಸವದ ಬಗ್ಯೆ ತಮ್ಮ ಅಂಗಡಿ ಭಂಡಸಾಲೆಗಳನ್ನು ಮುಚ್ಚಿಕೊಂಡು ಉತ್ಸವ ಸಂಭ್ರಮಗಳಲ್ಲಿ ಭಾಗಿಗಳಾಗಲು ಬಂದದ್ದು ಈ ವರುಷದ ಉತ್ಸವದ ವಿಶೇಷ ಲಕ್ಷಣಗಳಲ್ಲಿ ಒಂದಾಗಿದೆ ಶಿಕ್ಷಣ ಹೊಂದಿದವರು ಅಂದರೆ ಇಂಗ್ಲಿಷು ವಿದ್ಯಾಭ್ಯಾಸವನ್ನು ಪಡೆದ ಈ ಜಾತಿಯ ವಕೀಲರೂ ಇತರರೂ ಉತ್ಸವಕಾಲದಲ್ಲಿ ಹಾಜರಿದ್ದದ್ದು ಮತ್ತೊಂದು ಲಕ್ಷಣವಾಗಿದೆ ಇತರ ಜಾತಿಯ ಸರಕಾರದ ಉದ್ಯೋಗಸ್ಥರು ಮೊದಲಾದವರು ಈ ಉತ್ಸವದ ಬಗ್ಯೆ ಬಂದಿದ್ದರು ಕೆನರಾ ಹೈಸ್ಕೂಲಿನ ವಿದ್ಯಾರ್ಥಿಭವನ ಅಥವಾ ಊಟದ ಮನೆಯ ವಿದ್ಯಾರ್ಥಿಗಳು ಸಮಾರಾಧನೆಗಳ ಅಡಿಗೆ ಕೆಲಸದಲ್ಲಿಯೂ ದೇವಸ್ಥಾನದ ಉತ್ಸವಕಾಲದ ಇತರ ವೃತ್ತಿಗಳಲ್ಲಿಯೂ ಸಹಾಯಕರಾಗಿ ಆಗಿಂದಾಗ್ಯೆ ಬಂದಿದ್ದರು ಇದು ಸಹ ಒಂದು ಶುಭಸೂಚಕ ಚಿನ್ಹೆಯೆ ಸರಿ

ಬ್ರಹ್ಮಜ್ಞಾನ ಸಂಘದ ಬ್ರಹ್ಮ ಶ್ರೀ ನರಹರಿ ಶಾಸ್ತ್ರಿಗಳು ಮೈಸೂರಿನಿಂದ ಇಲ್ಲಿಗೆ ಬಂದಿರುತ್ತಾರೆ ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ತಾ ೧೩ನೇ ಆದಿತ್ಯವಾರ ಸಾಯಂಕಾಲ ಘಂಟೆ ೩ ೩೦ರಿಂದ ೬ ೩೦ ಪ್ರಹ್ಲಾದ ಚರಿತ್ರೆ—ಹರಿಕೀರ್ತನೆ, ತಾ ೧೪ನೇ ಸೋಮವಾರ ಸಾಯಂಕಾಲ ೬ ೩೦ ಹಿಂದೂದೇಶದ ಅಭಿವೃದ್ಧಿ—ಉಪನ್ಯಾಸ, ತಾ ೧೫ನೇ ಮಂಗಳವಾರ ಸಾಯಂಕಾಲ ಗಂಟೆ ೬ ೩೦—ಬ್ರಹ್ಮಜ್ಞಾನ ಮತ್ತು ನಮ್ಮ ದಿನಚರ್ಯೆ ತಾ ೧೬ನೇ ಬುಧವಾರ ಸಾಯಂಕಾಲ ಗಂಟೆ ೬ ೩೦—ಮರಣ ಮತ್ತು ಮರಣದ ನಂತರದ ಜೀವನ—ಈ ಕಾರ್ಯಕ್ರಮಗಳ ಪ್ರಕಾರ ನರಹರಿ ಶಾಸ್ತ್ರಿಗಳವರ ಉಪನ್ಯಾಸ ಇತ್ಯಾದಿಗಳಿರುವವು

ಇಲ್ಲಿಯ ಕಲೆಕ್ಟರ ದೊರೆಗಳಾದ ಮಿ। ಲ್ಯೂಯಿಡ್‌ರವರಿಗೆ ತಿರುಚಿನಾಪಳ್ಳಿಗೂ ತಿರುಚಿನಾಪಳ್ಳಿಯ ಕಲೆಕ್ಟರ ದೊರೆಗಳವರಿಗೆ ಇಲ್ಲಿಗೂ ವರ್ಗವಾಗಿದೆ ಎಂಬದಾಗಿ ತಿಳಿಯುತ್ತೇವೆ

~~~~~~

ಸಹಕಾರ.

ಸರ್ಕ್ಯೂಲಾರು ನಂಬ್ರ ೧೭.

ನಿರಖು ಠೇವಣಾತಿಗಳು.

ನಿರಖು ಠೇವಣಾತಿಗಳನ್ನು ಸಂಗ್ರಹಿಸುವುದರಲ್ಲಿ ನಮ್ಮ ಜಿಲ್ಲೆಯ ಕೆಲವು ಸಂಘಗಳು ವಿಶೇಷ ಪ್ರಯತ್ನಗಳನ್ನು ನಡೆಯಿಸಿ ಹೆಚ್ಚು ಹಣವನ್ನು ಶೇಖರಿಸಿದ್ದಾರೆ ಅವುಗಳ ಪೈಕಿ ಒಂದೆರಡು ಸಂಘಗಳಲ್ಲಿ ಯಾವ ಕಾಲದಲ್ಲಾದರೂ ಸಿಕ್ಕಿದಷ್ಟು ಹಣವನ್ನು ಸ್ವೀಕರಿಸಿ, ಸಂಘದ ವ್ಯವಹಾರಗಳಿಗೆ ವಿನಿಯೋಗಿಸಿ ಉಳಿದ ಹಣವನ್ನು ಈ ಬೇಂಕಿನಲ್ಲಿ ಠೇವಣಾತಿಯಾಗಿ ಇರಗೊಡಿಸಿದ್ದಾರೆ ಈ ಬೇಂಕಿನಲ್ಲಿ ಆ ರೀತಿ ಸಂಘಗಳಿಂದಲೂ ಇತರರಿಂದಲೂ ಬಂದ ಠೇವಣಾತಿಗಳ ಹಣವು ಅತೀ ಹೆಚ್ಚಾಗಿ, ಇಲ್ಲಿಯೇ ವಿನಿಯೋಗಿಸಲಿಕ್ಕಾಗದೆ ಬೇರೆ ಜಿಲ್ಲೆಗಳಲ್ಲಿನ ಸೆಂಟ್ರಲ್ ಬೇಂಕುಗಳಿಗೆ ಕೂಡಾ ಕೊಡಬೇಕಾಗಿದೆ ಹೀಗಾಗಿ ಪ್ರಕೃತದಲ್ಲಿ ಈ ಬೇಂಕಿನಲ್ಲಿ ದೀರ್ಘಕಾಲದ ಅಂದರೆ ಸಾಧಾರಣವಾಗಿ ಮೂರು ವರ್ಷಗಳಿಗಿಂತಲೂ ಕಡಿಮೆಯಾಗದಷ್ಟು—ವಾಯಿದೆಯ ಹೊರತು ಠೇವಣಾತಿಗಳನ್ನು ಅಂಗೀಕರಿಸಿಕೊಳ್ಳಲು ಅನುಕೂಲವಿಲ್ಲದಂತಾಗಿಯದೆ ಆದಪರಿಂದ ಸಂಘಗಳ ಠೇವಣಾತಿಗಳನ್ನು ಪಡಕೊಳ್ಳುವುದರಲ್ಲಿ ಆಚರಿಸಬೇಕಾದ ಕೆಲವು ಸೂಚನೆಗಳನ್ನು ವಿವರಿಸುವುದು ಅಗತ್ಯವಾಗಿಯದೆ

ಇಂಡಿಯಾ ದೇಶದ ಸಹಕಾರದ ಬೆಳವಣಿಗೆಯನ್ನು ಪರಿಶೀಲಿಸಿ, ಮುಂದಿನ ಪರಿಣಾಮಕ್ಕೆ ಅಗತ್ಯವಿರುವ ಸೂಚನೆಗಳನ್ನು ಕೊಡುವುದಕ್ಕೆ ೧೯೧೫ನೇ ಇಸವಿಯಲ್ಲಿ ಇಂಡಿಯಾ ಸರಕಾರದವರು ನೇಮಿಸಿದ ಕಮಿಟಿಯವರು ಇಂಡಿಯಾದೇಶದ ಮುಖ್ಯ ನಗರಗಳಲ್ಲೆಲ್ಲಾ ಸಂಚರಿಸಿ, ಪ್ರಮುಖ ಸಹಕಾರಿಗಳನ್ನು ವಿಚಾರಿಸಿ, ಅವರೆಲ್ಲರ ಅಭಿಪ್ರಾಯಗಳನ್ನು ಮಥಿಸಿ, ಬರೆದ ರಿಪೋರ್ಟಿನಲ್ಲಿ ಠೇವಣಾತಿಗಳ ಕುರಿತು ಕೆಲವು ಮಾತುಗಳು ಹೇಳಲ್ಪಟ್ಟಿವೆ. ಆ ಮಾತುಗಳ ಸಾರಾಂಶವೇನೆಂದರೆ:—

"ಒಂದು ಸಂಘವು ಭದ್ರವಾಗಿ ಸ್ಥಾಪಿತವಾದ ಮೇಲೆ (ಮೆಂಬರರಲ್ಲದವರಿಂದ ಪಡಕೊಳ್ಳಬಹುದಾದ ಮಿತಿಯನ್ನು ಮೀರದಮಟ್ಟಿಗೆ) ಸಿಕ್ಕಿದಷ್ಟು ಸ್ಥಳೀಯ ಠೇವಣಾತಿಗಳನ್ನು ಶೇಖರಿಸತಕ್ಕವರೆ ಅದನ್ನು ಪ್ರಯತ್ನಿಸಬೇಕು. ಆದರೆ ಇತರ ಸಂಘಗಳ ಪ್ರದೇಶಗಳಿಂದಾಗಲಿ, ಸಹಜವಾಗಿ ಸೆಂಟ್ರಲ್ ಬೇಂಕುಗಳಿಗೇನೇ ಕಳುಹಿಸಿಕೊಡುವಂತಹ ಜನರಿಂದಾಗಲಿ ಠೇವಣಾತಿಗಳನ್ನು ಆಕರ್ಷಿಸಿಕೊಳ್ಳಲು ಸಾಧಿಸಕೂಡದು. ಠೇವಣಾತಿಗಳು ಯಾವಾಗಲೂ ಸ್ಥಳೀಯ ಗೃಹಸ್ಥರದ್ದೇ ಆಗಿರಬೇಕು ಮತ್ತು ಅಂತಹ ಠೇವಣಾತಿಗಳು ಬೇಕಾದುದಕ್ಕಿಂತ ಹೆಚ್ಚಿಗೆ ಬಂದರೆ, ಹೆಚ್ಚಿನ ಹಣವನ್ನು ಸೆಂಟ್ರಲ್ ಬೇಂಕಿಗೆ (ಠೇವಣಾತಿಯಾಗಿ) ಕಳುಹಿಸಬಹುದು. ಸೆಂಟ್ರಲ್ ಬೇಂಕಿನವರು ಠೇವಣಾತಿಗಳನ್ನು ಸ್ವೀಕರಿಸಿಕೊಳ್ಳಲಿಕ್ಕಿಲ್ಲವೆಂದು ತಿಳಿಸಿದ ಸಂಗತಿಯಲ್ಲಿ, ಸಂಘಗಳು ತಮಗೆ ಬೇಕಾದುದಕ್ಕಿಂತ ಹೆಚ್ಚಿಗೆ ಹಣವನ್ನು ಸ್ಥಳೀಯ ಹಣವಾಗಿದ್ದಾಗ್ಯೂ ಸರ್ವಥಾ ಅಂಗೀಕರಿಸಕೂಡದು ಅದರ ಬದಲಾಗಿ ಠೇವಣಾತಿದಾರರಿಗೆ ಹಣವನ್ನಿರಿಸುವುದಕ್ಕೆ ಬೇರೆ ಸಂಘಗಳನ್ನು ತೋರಿಸಬಹುದು"

ಠೇವಣಾತಿಗಳನ್ನು ಸಂಗ್ರಹಿಸಲು ಶಕ್ತರಾಗಿರುವ ನಮ್ಮ ಜಿಲ್ಲೆಯ ಎಲ್ಲಾ ಸಂಘದವರು ಮೇಲಿನ ಸೂಚನೆಗಳನ್ನು ಮನಸ್ಸಿನಲ್ಲಿಡಬೇಕು ಸ್ಥಳೀಯವಲ್ಲದ ಹಣವನ್ನು ಅಗತ್ಯವಾದಾಗ ಮಾತ್ರ ಸ್ವೀಕರಿಸಬೇಕು ಸ್ಥಳೀಯ ಠೇವಣಾತಿಗಳನ್ನು ತಮಗೆ ಬೇಕಾದ ಮಟ್ಟಿಗೆ ಮಾತ್ರ ಅಂಗೀಕರಿಸಬೇಕು ಅವುಗಳನ್ನು ಅಂಗೀಕರಿಸಿದರೆ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡು ಹೆಚ್ಚು ಉಳಿಯುವ ಸಂಭವವು ಕಂಡುಬಂದರೆ, ಸೆಂಟ್ರಲ್ ಬೇಂಕಿಗೆ ಮುಂದಾಗಿ ತಿಳಿಸಿ, ಸೆಂಟ್ರಲ್ ಬೇಂಕಿನವರು ಉಳಿಕೆಯ ಹಣವನ್ನು ತೆಗೆದುಕೊಳ್ಳಲು ಒಪ್ಪುವಂಥಾದರೆ ಮಾತ್ರ ಬೇಕಾದುದಕ್ಕಿಂತ ಹೆಚ್ಚು ಹಣವನ್ನು ಪಡಕೊಳ್ಳಬಹುದು, ಸೆಂಟ್ರಲ್ ಬೇಂಕಿನವರು ಒಪ್ಪದ ಸಂಗತಿಗಳಲ್ಲಿ ಬೇಕಾದುದಕ್ಕಿಂತ ಹೆಚ್ಚಿಗೆ ಹಣವನ್ನು ಎಂದಿಗೂ ಸ್ವೀಕರಿಸಕೂಡದು

ದಕ್ಷಿಣ ಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕ್, ಲಿಮಿಟೆಡ್
ಪುತ್ತೂರು ತಾ 6—2—16

ಯಂ. ಅನಂತರಾವ್,
ಕಾರ್ಯದರ್ಶಿ.

~~~~~~

ಕರ್ನಾಟಕ ಸಾಹಿತ್ಯ ಪರಿಷತ್ತು.

೧ ಘನ ಹೊಂದಿದ ಮೈಸೂರು ಸರಕಾರದವರು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ತಿಂಗಳೊಂದಕ್ಕೆ ೧೫೦ ರೂಪಾಯಿಗಳ ಮೇರೆಗೆ ಎರಡು ವರುಷಗಳ ವರೆಗೆ ಗ್ರಾಂಟನ್ನೂ, ಪರಿಷತ್ತಿಗೆ ಬೇಕಾಗಿರುವ ಕುರ್ಚಿ, ಮೇಜು, ಟೈಪ್‌ರೈಟರ್, ಪುಸ್ತಕಗಳು ಇವೇ ಮೊದಲಾದವುಗಳಿಗಾಗಿ ೧೦೦೦ ರೂಪಾಯಿಗಳ ಒಟ್ಟು ಸಹಾಯ ಧನವನ್ನೂ ದಯೆಪಾಲಿಸಿರುವರು.

೨ ಕ. ಸಾ ಪರಿಷತ್ತಿನ ಸದಸ್ಯರಿಂದ ಕಳೆದ ಜನವರಿ ತಿಂಗಳಲ್ಲಿ ಈ ಕೆಳಗೆ ಕಂಡಂತೆ ಚಂದಾ ವಸೂಲಾಗಿದೆ

ಮ। ಎಚ್ ಕೆ. ವೀರಬಸವಯ್ಯ ಬಿ. ಎ. ಬಿ. ಎಲ್. ಹೊಳೇ ನರಸೀಪುರ ಇವರಿಂದ ರೂ. ೫೦-೦-೦, ಮ। ಸಿ. ಕಪ್ಪಣ್ಣನವರು ಮಂಡ್ಯ ಇವರಿಂದ ರೂ. ೪; ಮ। ಕೆ. ಆರ್ ನರಶಿಂಹಯ್ಯನವರು ಚಿಕ್ಕಬಳ್ಳಾಪುರ ರೂ. ೩; ಮ। ಎಚ್ ಚನ್ನಕೇಶವಯ್ಯಂಗಾರ್ಯರು, ಬೆಂಗಳೂರು ರೂ. ೧೦ ಮ। ಬಿ. ಕೃಷ್ಣಪ್ಪನವರು ಬೆಂಗಳೂರು ರೂ. ೪. ಒಟ್ಟು ರೂ ೭೧.

ಪರಿಷತ್ತಿಗೆ ಇದುವರೆವಿಗೂ ವಸೂಲಾಗಿರುವ ಒಟ್ಟು ಚಂದಾ ಹಣ ರೂ. ೬೩೫—೯—೫.

೩ ಕರ್ನಾಟಕ ಭಾಷಾಭಿಮಾನಿಗಳಾದವರು ಈ ಸಂಘಕ್ಕೆ ಸೇರಬೇಕೆಂದು ಕೋರಿದೆ. ಈ ಪರಿಷತ್ತಿನ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದಿರುವವರು ಈ ಕೆಳಗೆ ರುಜು ಹಾಕಿರುವವರಿಗೆ ಬರೆದು ತಿಳಿದುಕೊಳ್ಳಬಹುದು.

ಬೆಂಗಳೂರು,
ತಾ. 4—2—16.

ಕೃಷ್ಣಪ್ಪ,
ಸ. ಕಾರ್ಯದರ್ಶಿ.

S. NAGAPPA NAYAK,
K. Appaya Shenoy & Co.
Cloth Merchants, Car Street Mangalore

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c. &c. of guaranteed colours and best patterns Price very moderate

ಸುಜೀರ ನಾಗಪ್ಪ ನ್ಯಾಕ,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜೀಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಪಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು

ನೋಟೀಸು.

ಪುತ್ತೂರು ಶ್ರೀ ಶಾಂತಿನಾಥ ಬಸ್ತಿಯ ಯಾವತ್ತು ಭಜಕರಿಗೆ ತಿಳಿಸುವದೇನಂದರೆ:—ಸದರಿ ಬಸ್ತಿಯ ಆಡಳತೆ ವಗೈರೆ ವಹಿವಾಟುಗಳ ಕುರಿತು ಕ್ರಮಗಳು ನಿರ್ಣಯಿಸುವ ಅಗತ್ಯ ಕಾಣುವದರಿಂದ ಇದೇ ಬರುವ ತಾರೀಕು 13—2—1916ನೇ ಆದಿತ್ಯವಾರ ಮಧ್ಯಾಹ್ನ 2 ಘಂಟೆಗೆ ಸದರಿ ಬಸ್ತಿಯಲ್ಲಿ ಒಂದು ಸಭೆ ಸೇರಬೇಕೆಂತ ನಿರ್ಣಯಿಸಲ್ಪಡುವದರಿಂದ ಕಾಲಕ್ಕೆ ಸರಿಯಾಗಿ ಭಜಕರೆಲ್ಲರು ಬರಬೇಕಾಗಿ ಅಪೇಕ್ಷಿಸುತ್ತೇನೆ.

ಪುತ್ತೂರು ಬ್ರಹ್ಮಯ್ಯಸೆಟ್ಟಿ,
ಮೊಕ್ತೇಸರ

WRITER-WANTED.

For a Coffee Estate in Hassan District, Mysore, good prospects, must have had previous experience.

Apply with certificates to.
LABOUR DEPARTMENT,
U P A S I. Mangalore

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ... ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

THE PUTTUR EDUCATION SOCIETY.
(Registered under Act XXI of 1860.)

WANTED

For the Incomplete Secondary School (III Standard to III Form) to be opened on 1st June next at Puttur the following Staff Applications are invited from qualified candidates whose vernacular is Canarese Applications should reach the undersigned not later than 1st of March next

1 One B A, L T, (Science or Mathematics graduate preferred) as Head Master on Rs 60-3-75 *per mensem.*

2 Six Assistants—

if trained F A S or Intermediate men, Rs 30—3—45 *per mensem*

or if trained Matriculates or School Final men Rs 25—1—30 *per mensem*

one Drawing master and Drill Instructor Rs 15—1—20 *per mensem*

Office of the Puttur Education Society, Puttur, 17th Jan 1916.

S Shiva Rau,
Secretary.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಒ. ಪಿ. ನಂಬ್ರ 4/1916

ಮಾವಡ ಉಮ್ಮರ ಸಾಹೇಬ—ಕಾದಿರ ಸಾಹೇಬನ ಮಗ, ಕುಂದಾಪುರ ತಾಲೂಕು ನಂಬ್ರ 2ನೆ ಯಡ್ತರೆ ಗ್ರಾಮ — ಅರ್ಜಿದಾರ

ಮತ್ತು

1 ಮಾಯಬಿಬಿ, ಕಾದಿರ ಸಾಹೇಬನ ವಿದವೆ.
2 ಹಸನ ಸಾಹೇಬ, ಮಾವಡ ಹುಸೇನ ಸಾಹೇಬನ ಸಾಕಮಗನ ಕಾದಿರ ಸಾಹೇಬನ ಜನಕ ಮಗ
3 ಖೈರೋನಿಸ್ಸಾಬಿ, ಗಂಗವಳ್ಳಿ ಮೊಗದುಮ ಸಾಹೇಬನ ವಿದವೆ ವ ಕಾದಿರ ಸಾಹೇಬನ ಮಗಳು.
4 ಮೈದಿನ್ ಸಾಹೇಬ
5 ಮಹಮ್ಮದ ಸಾಹೇಬ
6 ಅಲ್ಲಿ ಸಾಹೇಬ.
7 ಉಸ್ಮಾನ ಸಾಹೇಬ
8 ಅಬುಬಕರ್ ಸಾಹೇಬ

(4–8: ಕಾದಿರ ಸಾಹೇಬನ ಮಕ್ಕಳು)

(1–8: ಕುಂದಾಪುರ ತಾಲೂಕು ನಂಬ್ರ 2 ನೇ ಯಡ್ತರೆ ಗ್ರಾಮಸ್ಥರು. ಎದ್ರಿರು.)

ಇವರೊಳಗೆ

ಇದರಿಂದ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:—ಅರ್ಜಿದಾರ ಮಾವಡ ಉಮ್ಮರ ಸಾಹೇಬನು ತನ್ನ ತಂದೆ ಮೃತ ಕಾದಿರ ಸಾಹೇಬಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಬಗ್ಗೆ ತನ್ನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಕೊಟ್ಟ ಸದರಿ ಅರ್ಜಿಯು ಬರುವ ಮಾರ್ಚಿ ತಿಂಗಳ ತಾರೀಕು 6ಕ್ಕೆ ತನಕಿಗೆ ನಿಶ್ಚಯಿಸಿರುತ್ತದೆ. ಈ ಬಾಬಿನಲ್ಲಿ ಯಾರದಾದರೂ ಆಕ್ಷೇಪಗಳಿದ್ದರೆ ಸದರಿ ತನಕಿ ತಾ. 6-3-1916ನೇ ದಿವಸ ಹಗಲು 10 ಘಂಟೆಯವಳಗೆ ಸದರಿ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬೇಕೆಂತ ಈ ಮೂಲಕ ತಿಳಿಸಲಾಗುತ್ತದೆ.

ಕುಂದಾಪುರ, ತಾ. 7ನೇ ಫೆಬ್ರುವರಿ 1916.

T. Ganesha Rao,
ಅರ್ಜಿದಾರರ ವಕೀಲರು

ಕನ್ನಡ ಗ್ರಂಥಗಳು.

	ರೂ.	ಅ.		ರೂ.	ಅ.
ದ್ವಾದಶಸ್ಕಂಧ ಭಾಗವತ	4	0	ತೊರವೆರಾಮಾಯಣ ಅವ್ವೆಲ್	1	8
ದಶಮಸ್ಕಂಧ ಭಾಗವತ	1	8	ದುಯ್ಯಂ	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ದಶಪರ್ವ ಭಾರತ	2	0	ಜೈಮುನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮುನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳ, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಿಗಳು ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ದಿ ಜನರಲ್ ಟ್ರೇಡಿಂಗ್ ಕಂಪನಿ,
ವಿಟ್ಲ, ದಕ್ಷಿಣ ಕನ್ನಡ

ವೇದಮಂತ್ರಗಳಿಗೆ ಸ್ವರ ಹಾಕಿ, ದಪ್ಪ ಕಾಗದದಲ್ಲಿ ಕನ್ನಡ ಅಕ್ಷರದಿಂದ ಅಂದವಾಗಿ ಮುದ್ರಿಸಿದ

ಆಹ್ನಿಕಮಂಜರೀ

ಎಂಬ ಋಗ್ವೇದಿಯ ನಿತ್ಯಕರ್ಮ ಪದ್ಧತಿ ಪುಸ್ತಕ ೧ಕ್ಕೆ ರೂ. 1. ಈ ಪತ್ರಿಕೆಯ ಗ್ರಾಹಕರಿಗೆ ಮಾತ್ರ ಆಣೆ 12. ಪೋಸ್ಟು ಖರ್ಚು ಬೇರೆ.

ಸ್ವಲ್ಪವೇ ಇದೆ! ಬೇಗ ಬರೆಯಿರಿ!!

ವಿಳಾಸ:— ಎಚ್. ವಿ. ಕೃಷ್ಣಭಟ್ಟ,
ವೇದಪಾಠಶಾಲಾ, ತೀರ್ಥಮುತ್ತೂರು, ತೀರ್ಥಹಳ್ಳಿ ತಾಲೂಕು.

ಕುಟುಂಬ ಸಂಜೀವಿನೀ.



ಛಳಿಕಾಲದಲ್ಲಿ ತಲೆದೋರುವ ಶೀತ, ಕೆಮ್ಮು, ನೆಗಡಿ, ಶೀತಭೇದಿ, ವಾತರೋಗಗಳಿಗೆ ಯುಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ, ಮೈಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆನೋವು, ತಲೆಸಿಡಿತ, ದುರ್ವ್ಯಾಪ್ತಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯುಕಲಿಪ್ಟಸ್ ತೈಲವು ಸಿದ್ಧೌಷಧಿ ಎಂದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಒಂದಿರುತ್ತವೆ. ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?



ಔನ್ಸ್ ಸೀಸೆ 1ಕ್ಕೆ 5 ಆಣೆ ವಿ ಪಿ ಚಾರ್ಜ ಬೇರೆ ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ 3—10—0.

☞ ಕಮ್ಮಿ ದರದ ಠಕ್ಕು ಯುಕಲಿಪ್ಟಸ್ ತೈಲವನ್ನು ಕೊಂಡು-ಕೊಂಡು **ಮೋಸಹೋಗಬೇಡಿರಿ.**

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| **ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ**—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ **ಭಾರಿ** ಖುಸಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ| **ವೈ. ಕೊರಗಪ್ಪ** ಮುಂಬಾಯಿ—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೊಳೆ ತಾಗಿ ಕೊಳೆಯುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ. ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ. ದಯಮಾಡಿ 3 ಕರಡಿಗೆಗಳನ್ನು ವಿ ಪಿ ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ. ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇ॰

ವಿಳಾಸ:— **ಇಕ್ಲಿಪ್ಸ್ ಏಜನ್ಸಿ, ಮಂಗಳೂರು**

ಏಜಂಟರು:— **ಶ್ರೀ ಗಂಧವಿಲಾಸ, ರಥಬೀದಿ, ಮಂಗಳೂರು**

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಶ್ವಾಸ ರೋಗಗಳಿಗೂ, ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣಕಾಣುವುದು. ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ನಳಿಗೆಗಳು ಹೆಚ್ಚಿಗೆ. ಸೆಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ. ಪಿ., ಮಾಫಿ.

ವಿಸ್ಫೋಟಕ ಮುಕ್ತಿ—ಈ ಮಾತ್ರೆಯು ಮಲೇರಿಯಾ, ಸಿಡುಬು, **ಕೋರ, ಕೋಟ್ಲೆ** ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಬೇನೆಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ 2—8—0 **ಒಮ್ಮೆ** ಪರೀಕ್ಷಿಸಿ ನೋಡಿದ್ದರೆ ತಿಳದೀತು

ಸ್ವರಸುಖಿ—ಕೆಮ್ಮು, ಗಂಟ್ಲುನೋವು, ಧ್ವನಿ ಬದಲಾಗುವದು, ಅಗ್ರಿ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಟ 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ

ಕಾರ್ಬೊಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳ, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ. 0—2—0

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ಸ್ವಚ್ಛವಾಗುವದು. ಗಾಜಿನ ಡಬ್ಬಿ 1ರ ಕ್ರಯ. 0—4—0. ಒಂದು ಡಜನ್ ಡಬ್ಬಿಗಳಿಗೆ ರೂ 2—8—0 ವಿ ಪಿ ಬೇರೆ

M. D. R. & Sons.
Srimargireesh Aushadalaya,
UDIPI S. C.

ಮೋಸಹೋಗಬೇಡಿ! ಮೋಸಹೋಗಬೇಡಿ!!

ನಮ್ಮ ಕಂಪೆನಿಯು ಕಳೆದ 4 ವರುಷಗಳಿಂದಲೂ ಹೆಸರುವಾಸಿಯನ್ನು ಪಡೆದಿರುವುದು ಮತ್ತು ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ಹೈದರಾಬಾದ್, ರಂಗೂನ್, ಬರ್ಮಾ, ಸಿಲೋನ್, ಪೆನ್ಯಾಂಗ್, ಮುಂತಾದ ದೇಶಗಳಿಂದ ಪ್ರತಿದಿನವೂ ಆರ್ಡರು ಒರುತ್ತಿರುವವು. ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನರಿಗೆ **ಮೋಸಪಡಿ**ಸುತ್ತಿರುವರು. ಆದ್ದರಿಂದ ನಮ್ಮ ಬಾಂಗಿಯನ್ನು ತೆಗೆದುಕೊಳ್ಳುವಾಗ **ಡಿ ಮನ್ನಾಲಾಲ್**, ಡಿಲ್ಲಿ ವೈದ್ಯರು, 5, ಅವೆನ್ಯೂರೋಡ್, ಬೆಂಗಳೂರು ಸಿಟಿ, ಎಂದೂ **ಮತ್ತು** ನಿಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್-ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸಹೋಗುವಿರಿ!!!

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ಈ ಸಾಲಾಮಿಸ್ರಿ ಮುರಬ್ಬಾದ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲಿ ಉರಿಯುತ್ತಿದ್ದರೂ, **ಮೂ**ತ್ರರೋಗದಿಂದ ವೀರ್ಯವು ಹೋಗುತ್ತಿದ್ದರೂ, **ಕೈಕಾಲು ಮತ್ತು** ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡವುದು. ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ ೧ಕ್ಕೆ ರೂ. **2—0—0** ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ **0-6-0** ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್. ಡಿಲ್ಲಿ ವೈದ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಕನ್ನಡ ಕಥೆ ಪುಸ್ತಕಗಳು.

ಮುದ್ರಾಮಂಜೂಷ	1	12	0	ನಿರ್ಮಲಿ	0	12	0
ಅರೇಬಿಯನ್ ನ್ಯಾಟ್ಸ್	2	4	0	ಸಚಿತ್ರ ಭಟ್ಟಿ ವಿಕ್ರಮಾದಿತ್ಯ			
ರಮಾಮಾಧವ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂಜರಿ	1	4	0
ಕೃಷ್ಣಾಕುಮಾರಿ	0	10	0	ಪತಿವ್ರತಾ ವ ಹಾತ್ಮ್ಯ	0	6	0
ಪರಿಮಳಾ	0	12	0	ಹರಿಶ್ಚಂದ್ರನ ಕಥೆ	0	4	0
ಮಹಾರಾಣಿ ಗ್ರಹಶೀಲೆ	0	3	0	ನಳದವ ಯ ಂತಿಯ ಕಥೆ	0	6	0
ದುರ್ಗಾದಾಸ	0	12	0	ಶ್ರೀ ಕೃಷ್ಣಬೋಧಾಮೃತ	0	8	0
ಚಂಚಲ ಕುಮಾರಿ	0	6	0	ಹಾಸ್ಯಸುಂದರಿ	0	8	0
ಪ್ರಬಂಧ ಮುಕ್ತಾವಳಿ	0	12	0	ಸೋಮಸ ಂದರ	0	10	0
ಚಂದ್ರಮತಿ	0	6	0	ಮೂಷಕಾಸುರ ವಿಜಯ	0	1	6
ದಯಾಮತಿ	0	2	0	ಹಾಸ್ಯ ಸಂಜೀವಿನಿ	0	4	0
ಕಳಾವತಿ	0	2	0	ನಿರುಪಮಾ	0	12	0
ಸಂಗೀತ ಸಮಯಸಾರ	1	4	0	ಭಾನ ಮತಿ	0	2	0
ಬಾಲಕಾಗೀತ ಮುಕ್ತಾಕಲಾಪ	0	10	0	ಸಂತಾಪಕ	0	4	0
ವಿಷವೃಕ್ಷ	1	8	0	ವಸ ವ ತಿ	0	2	0
ದುರ್ಗೇಶನಂದಿನಿ	1	4	0	ಪದ್ಮಿನಿ	0	2	0
ಸ್ತ್ರೀಮಲೆಯಾಳ	0	8	0	ಕಾರಾಸ ಂದರಿ	0	8	0
ಕೇಶ್ವಿನಾರಾಯ ಣರಾವ್	0	2	0	ಅನಂಗಸ ಂದರಿ		8	0
ಕುಮುದಿನಿ	0	6	0	ಸತ್ಯಸ ಜೀವಿನಿ	0	6	0
ಸಾಧ್ವಿಗುಣಮಂಜರಿ	0	5	0	ಮುಕಾಬಧಿರ ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ	0	4	0	ಅಸಹಾಯ ಶೂರಪ್ರಹಸನ	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	2	0	0	ಚಂದ್ರಕಳಾ	0	9	0
ರೋಹಿಣಿ (ಸಾರಸ್ವತಮಂಡಳ)	1	0	0	ಸತೀರೋಹಿಣಿ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಪಿತ್ನ, ದಶಾಂಗ, ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ: ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ .ಗೋಲಗಾತ್ರ ಅಭ್ಯಾಸಿಸುವವರು 2 ಅಣೆ ತೂಕ ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ.—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಪವಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0,

ಮೋಹಮುದ್ಗರವಟಿ.—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 1ರ ಕ್ರಯ 1—2—0

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ. 0—12—0

ಚಂದನಾಸವ:—ಮೇಹ, ಶುಕ್ಲಧಾತು, ನಷ್ಟತ್ವ ಗುಣ, ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೇಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಾಯುಸಂಹಾರಿ.— ಈ ಔಷಧದಿಂದ ದೇಹದಲ್ಲಿ ಉಂಟಾಗತಕ್ಕ ಕಾಲು, ಕೈ, ಕೀಲ ಹಿಡಿತ ಪಕ್ಷವಾತ, ಶೂಲ, ತಿಮಿರ್‌ವಾತ, ತಲೆನೋವು, ಪಾರ್ಶ್ವಪಾತವು, ಸಕಲ ವಿಧವಾತಗಳು ಮಲಬದ್ಧತೆ ವಿಕೆ ಗುಣವಾಗುವದು. ಡಬ್ಬಿ 1ಕ್ಕೆ 1 ರೂಪಾಯಿ 1ರಿಂದ 3 ಡಬ್ಬಿಗಳವರೆಗೂ ವಿ ಪಿ ಚಾರ್ಜು 5 ಆಣೆ.

ಕಲರಾವಿಧ್ವಂಸಿನಿ.— ಈ ಭಯಂಕರವಾದ ಕಾಲರಾ ರೋಗವನ್ನು ಖಂಡಿತವಾಗಿಯೂ ಸಂಪೂರ್ಣಗುಣಪಡಿಸುವ ಖಾತ್ರಿಯಾದ ಮದ್ದು ಡಬ್ಬಿ 1ಕ್ಕೆ 1, ರೂಪಾಯಿ ವಿ ಪಿ ಚಾರ್ಜು 1ರಿಂದ 6 ಡಬ್ಬಿಗಳವರೆಗೂ 5 ಆಣೆ

ಮಲಬಂಧ ಬಂಜನಿ.— ಆಗಿದಾಗ್ಯೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ನಾಡಿಕೆಯಲ್ಲಿರುವ ಮಲಬದ್ಧತೆಯನ್ನು ಸಂಪೂರ್ಣ ಗುಣಪಡಿಸುವುದರಲ್ಲಿ ಇದು ಸರ್ವೋತ್ಕೃಷ್ಟವಾದ ಔಷಧವು ಅಚೇತನದ ಕಾಳಜಿವನ್ನು (ಲಿವರ್) ಬಲಪಡಿಸಿ, ಸ್ವಭಾವವಾಗಿ ಎಷ್ಟಾಗಬೇಕೋ ಅಷ್ಟು ಸ್ವಚ್ಛ ಪಿತ್ತನೀರನ್ನು ವಿಸರ್ಜನೆ ಮಾಡಿಸಿ, ಹೊಟ್ಟೆಯ ಭಾರವನ್ನು ನೀಗಿ ಹಗುರು ಮಾಡುತ್ತದೆ. ಮತ್ತು ಅಗ್ನಿಮಂದ್ಯದಿಂದುಂಟಾಗತಕ್ಕ ಎಲ್ಲಾ ರೋಗಗಳನ್ನು ನಾಶಮಾಡಿ ಕರುಳುಗಳನ್ನು ಸಹಜಸ್ಥಿತಿಗೆ ತಂದು, ದೇಹವು ಬಹು ಆರೋಗ್ಯಸ್ಥಿತಿಯಲ್ಲಿರುವಂತೆ ಮಾಡುತ್ತದೆ ಕ್ರಯ ಡಬ್ಬಿ 1ಕ್ಕೆ 10 ಆಣೆ ವಿ ಪಿ ಚಾರ್ಜು 1ರಿಂದ 2 ಡಬ್ಬಿಗಳವರೆಗೂ 5 ಆಣೆ.

ಚಂದ್ರಾಮೃತ ರಸ— ಎಷ್ಟೇ ಕಠಿಣತರವಾದ ನೆಗಡಿ, ಕೆಮ್ಮು, ಶ್ಲೇಷ್ಮಕ್ಷಯವಾದರೂ ಸರಿ ಈ ನಮ್ಮ ಚಂದ್ರಾಮೃತ ರಸವು ಬಹು ತೀವ್ರದಲ್ಲಿ ಗುಣಪಡಿಸುತ್ತದೆ ಸಾಧಾರಣವಾದ ಕೆಮ್ಮು, ನೆಗಡಿ, ಒಂದೇ ಹೊತ್ತಿಗೆ ಗುಣ ಕಂಡುಬರುವುದು ಅದು ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಶಕ್ತಿ ವರ್ಧಕವಾದ ಸೊಗಸಾದ ಟಾನಿಕ್ ಆಗಿರುತ್ತದೆ ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 3 ಡಬ್ಬಿಗಳವರೆಗೂ 5 ಆಣೆ

ಶೀತಭೇಧಿ ಆಮಶಂಕೆನಿವಾರಣಿ:— ಎಂಥ ಘೋರವಾದ ಶೀತಭೇದಿಯಾದರೂ ಸರ್ವೋತ್ಕೃಷ್ಟವಾದ ಈ ಶೀತಭೇದಿ ನಿವಾರಣೆಯಿಂದ ಗುಣವಾಗುವುದು ಇದು ಆಮಶಂಕೆಗೆ ಸೊಗಸಾದ ಮದ್ದು ರಕ್ತಾತಿಸಾರದವರಿಗೆ ಸಮಯದಲ್ಲಿ ಬಹು ಸಹಕಾರಿ ಇದ ಕ ಜ್ವಾಲೆಪ್ಪಿ ಹೊಟ್ಟೆ ಚಾಡಿಸುವುದು, ಮಲಕೋಶದಿಂದ ರಕ್ತ ಸೋರುವುದು, ಇವುಗಳೆಲ್ಲವನ್ನು ಖಂಡಿತವಾಗಿ ಗುಣಪಡಿಸಿ ಆರೋಗ್ಯ ಸ್ಥಿತಿಗೆ ತರುವದರಲ್ಲಿ ಸಂಶಯವೇ ಇಲ್ಲ ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ. ಚಾರ್ಜು 1ರಿಂದ 2 ಡಬ್ಬಿಗಳವರೆಗ 5 ಆಣೆ

ವಿಷ್ಣು ತೈಲ— ತಲೆನೋವನ್ನು ಕ್ಷಣದಲ್ಲಿ ಗುಣಮಾಡುವ ತೈಲವು. ದೇಹದ ಯಾವ ಭಾಗದಲ್ಲಿಯಾದರೂ ತಲೆದೋರುವ ವಾತದ ನೋವುಗಳಿಗೆ ರಾಜ ಔಷಧ ಈ ತೈಲವು ಎರಡು ತೊಟ್ಟುಗಳನ್ನು ಕಣತಿಗಳಲ್ಲಿ ಉಜ್ಜಿದರೆ ತಕ್ಷಣ ಗುಣವಾಗುವದು ಸೀಸೆ 1ಕ್ಕೆ 8 ಆಣೆ 1ರಿಂದ 6 ಸೀಸೆಗಳವರೆಗೆ ವಿ ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ್,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾಲಂಕಾರ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೪ ಸಾಲ್ಬು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯು ಮ್ಮ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖ ಡಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಪಂಚಕೇಶರಕ್ಷ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ ಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಖಾತ್ರಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ ಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಪ್ಪು ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಗಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದು ರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗ ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟ ನೋವು, ಉಳುಕು, ಬೀಗು, ವಾತಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂ ತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾ ತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಈ ಸಾಸಾರ್ಪರಿಲ್ಲಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗ್ಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂಧು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕಷ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾಸಾರ್ಪರಿಲ್ಲಯು. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕೆಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 18ನೇ ಫೆಬ್ರವರಿ 1916

ಮದ್ರಾಸು ನಿಯಮನಿರ್ಮಾಣಕ ಸಭೆ.

ಈ ಸಭೆಯಲ್ಲಿ ಕಳೆದ ಸಾರಿ ನಡದ ಪ್ರೊಸೀಡಿಂಗ್ಸಿನ ಪೈಕಿ ನಮ್ಮ ವಾಚಕರು ತಾತ್ಪರ್ಯ ಕೊಡತಕ್ಕ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುವೆವು ಮಾನ್ಯ ಸಭಾಸದ ಬಿ. ವಿ. ನರಸಿಂಹ ಅಯ್ಯರ ಗವರ್ನಮೆಂಟಿಗೆ ಮತಸ್ಥಾಪನೆಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರವಾಗಿ ತಿಳಿದು ಬಂದದ್ದೇನಂದರೆ—1915ನೇ ಫಸಲಿಯಲ್ಲಿ ಮತಸ್ಥಾಪನೆಗಳಿಗೆ ಸಂದ ಜುಮ್ಲಾ ತಸ್ತೀಕು ರೂ 24,1,303 ಆಗಿದೆ ಇದರ ಪೈಕಿ ಹಿಂದೂ ಮುಸಲ್ಮಾನ ಕ್ರೈಸ್ತ ಮೊದಲಾದ ವಿವಿದ ಮತಸಂಸ್ಥೆಗಳಿಗೆ ಸಂದ ಐವಜು ಎಷ್ಟು ಎಂದು ತಿಳಿಯಬರುವದಿಲ್ಲ ಇನಾಮು ಸೆಟ್ಲಮೆಂಟ್ ಸಮಯದಲ್ಲಿ ಆದರೆ ಹಿಂದೂ ಸಂಸ್ಥೆಗಳಿಗೆ 21,67,480, ಮುಸಲ್ಮಾನರಿಗ 2 48262, ಕ್ರೈಸ್ತರಿಗ 4981 ರೂಪಾಯಿ ಪ್ರಕಾರ ಸಲ್ಲುತ್ತಿತ್ತ

ಮದ್ರಾಸು ಔಟ್‌ಪೋರ್ಟ್ಸ್ ಲೇಂಡಿಂಗ್ ವ ಶಿಪ್ಪಿಂಗ್ (ದಕ್ಕೆ ಫೀಸು) ಆಕ್ಟು ತಿದ್ದುಪಡಿ ಬಗ್ಗೆ ಕಳೆದ ನವಂಬರ 23ಕ್ಕೆ ಮಂಜೂರಾದ ಆಕ್ಟನ್ನು ಗವರ್ನರರವರು ಜನವರಿ 25ಕ್ಕೆ ಒಪ್ಪಿಕೊಂಡ ಸಂಗತಿಯನ್ನು ಗವರ್ನಮೆಂಟ ಸೆಕ್ರಿಟರಿಗಳು ಸಭೆಗೆ ತಿಳಿಸಿದರು ಮಾ| ಕೆ. ಪಿ ರಾಮನ್‌ಮೇನನರು ತಾವು 1913ನೇ ಇಸವಿಯಲ್ಲಿ ಮಾಡಿದ ಮಲಬಾರ ಮದುವೆ ವ ವಾರಸಿ ಕುರಿತಾದ ಬಿಲು ವ ತ್ತು ಮಲಬಾರು (ಮರುಮಕ್ಕತ್ತಾಯ) ವಿಭಾಗ ವ ವಾರಸಿ ಕುರಿತಾದ ಬಿಲು ಎಂಬ ಈ ಎರಡು ಮಸವಿದಾ ಆಕ್ಟುಗಳನ್ನು ಹಿಂತೆಗದರು. ಅವುಗಳ ಬದಲಿಗೆ ಮರುಮಕ್ಕತ್ತಾಯ ವ ಅಳಿಯಸಂತಾನದ ಕುಟುಂಬಗಳೊಳಗೆ ಆಡಳ್ತೆ ವಿಭಾಗ ವಾರಸಿ ಕುರಿತಾದ ಒಂದೇ ಮಸವಿದಾ ಆಕ್ಟನ್ನು ಸಭೆಯ ಮುಂದಿಡಲಿಕ್ಕೆ ಅಪ್ಪಣೆ ಕೇಳಿದರು 1913ನೆ ಇಸವಿಯ ಮಸವಿದಾ ಆಕ್ಟಿನಲ್ಲಿ ಜನರು ಆಕ್ಷೇಪಿಸಿದ ಅಂಶಗಳನ್ನು ವಜಾ ಮಾಡಿ ಅಥವಾ ತಿದ್ದುಪಡಿ ಮಾಡಿ ಈ ಆಕ್ಟು ತಯ್ಯಾರಿಸಲ್ಪಟ್ಟಂತೆ ತೋರುತ್ತದೆ ಮಾ| ಡಾಕ್ಟರ್ ನಾಯರ್‌ರವರು ಮಾ| ಮೇನನರನ್ನು ಅನುಮೋದಿಸಿದರು ಪರಂತು ಮಾ| ಮೆ ಕಾವಲಪರ ವ ಊಪಿಲ್ ನಾಯರರು ಇದನ್ನು ಆಕ್ಷೇಪಿಸಿದರು ಈ ಆಕ್ಟು ಹೆಚ್ಚಿನ ಉದ್ಗಾರ ವಿವಾದಗಳಿಗೆ ಆಸ್ಪದ ಕೊಡುವಂಥಾದ್ದಾಗಿದೆ. ಯಾಕಂದರೆ ಅನಾದಿಯಿಂದ ನಡೆದು ಬಂದ ಕಟ್ಟಳೆಗಳನ್ನು ತಿದ್ದುಪಡಿ ಮಾಡುವದೇ ಇದರ ಉದ್ದಿಶ್ಯವಾಗಿದೆ ಆದ್ದರಿಂದ ಇದನ್ನು ಈ ಸಂದರ್ಭದಲ್ಲಿ ಪ್ರಯತ್ನಿಸುವದು ಯುಕ್ತವಲ್ಲ! ಇದಲ್ಲದೆ ಈ ಸಭೆಯು ಕೆಲವು ಸಮಯದಲ್ಲಿ ತೀರುವದು ಆದಕಾರಣ ಇಷ್ಟು ವಿಶೇಷವಾದ ಕಾನೂನನ್ನು ಸ್ವಲ್ಪ ಸಮಯದಲ್ಲೆ ಏರ್ಪಡಿಸುವದು ಸರಿ ತೋರುವದಿಲ್ಲವೆಂಬದೇ ಇವರ ವಾದವಾಗಿತ್ತು ಉದ್ದಿಷ್ಟ ಕಾನೂನು ಮಸೂದೆಯನ್ನು ಸಭೆಯ ಮುಂದಿಡಲಿಕ್ಕೆ ಸರಕಾರದ ಕಡೆಯಿಂದ ಮೆ| ಕಾಡ್ಯೂರರವರು ಅಪ್ಪಣೆಕೊಟ್ಟರು ನಂತರ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿ ಆಕ್ಟನ್ನು ತಿದ್ದುಪಡಿ ಮಾಡುವ ಉದ್ದಿಶ್ಯ ಒಂದು ಮಸವಿದಾ ಆಕ್ಟು ಚರ್ಚೆಗೆ ಬಂತು ಈ ಮಸವಿದಾ ಆಕ್ಟು ಪ್ರಕಾರ ಒಂದು ಮುನಿಸಿಪಾಲಿಟಿಯೊಳಗೆ ಇರುವ ಕಾರಖಾನೆಯಲ್ಲಿ ಆಗುವ ಶಬ್ದದಿಂದ ಕಿರ್ಕಿರಿ ಉಂಟಾಗುತ್ತದೆಂತಾದರೆ ಆದನ್ನು ನಿಲ್ಲಿಸಬೇಕೆಂತಾಗಲೀ ಅಥವಾ ತಗ್ಗಿಸಬೇಕೆಂತಾಗಲೀ ಹುಕುಂ ಕೊಡುವರೆ ಮುನಿಸಿಪಲ್ ಕೌನ್ಸಿಲಿಗೆ ಅಧಿಕಾರ ಕೊಟ್ಟದೆ ಒಂದು ಕಾರಖಾನೆ ತೆರೆಯಲಿಕ್ಕಿರುವವರು ಮುನಿಸಿಪಾಲಿಟಿಗೆ ಮೊದಲು ಅರ್ಜಿ ಮಾಡಿಕೊಳ್ಳಬೇಕು. ಆ ಅರ್ಜಿಗೆ ಮೂರು ತಿಂಗಳೊಳಗೆ ಹುಕುಂ ಸಿಕ್ಕದಿದ್ದರೆ ಅರ್ಜಿದಾರನು ಅಪ್ಪಣೆ ದೊರಕಿದೆಂತ ತಿಳದು ಕಾರಖಾನೆ ತೆರೆಯಬಹುದು. ಮತ್ತು ಮುನಿಸಿಪಾಲಿಟಿಯವರು ಮೇಲಿನ ಸಂಗತಿಗಳಲ್ಲಿ ಕೊಡುವ ಹುಕುಂಗಳಿಂದ ಅನ್ಯಾಯ ಹೊಂದಿದವರು ಗವರ್ನಮೆಂಟಿನವರಿಗೆ ಅಪೀಲು ಮಾಡಬಹುದು. ಇವೇ ಈ ಕಾನೂನಿನ ಮುಖ್ಯ ನಿಬಂಧನೆಗಳಾಗಿವೆ. ಈ ಕಾನೂನು ಅಂದು ಸಭೆಯಲ್ಲಿ ಮಂಜೂರಾಯಿತು.

ನಂತರ ಸರ್ ಹೆರೋಲ್ಡ್ ಸ್ಟುವರ್ಟರವರು ಮದ್ರಾಸ್ ಸಿವಿಲ್ ಕೋರ್ಟು ಆಕ್ಟನ್ನು ತಿದ್ದುಪಡಿ ಮಾಡುವ ಉದ್ದಿಶ್ಯ ಒಂದು ಮಸವಿದಾ ಆಕ್ಟನ್ನು ಸಭೆಯ ಮುಂದಿಡಲಿಕ್ಕೆ ಅಪ್ಪಣೆ ಕೇಳಿದರು. ಡಿಸ್ಟ್ರಿಕ್ಟ್ ಮುನ್ಸೀಫರು ರೂ. 3000 ಮೊಬಲಗಿನ ವ್ಯಾಜ್ಯಗಳನ್ನು ತನಖಿ ಮಾಡುವಂತೆ ಅವರಿಗೆ ಅಧಿಕಾರು ಕೊಡುವದೇ ಈ ಆಕ್ಟಿನ ಮುಖ್ಯ ಉದ್ದಿಶ್ಯವಾಗಿದೆ ಮುನ್ಸೀಫರಿಗಿರುವ ಸ್ಮಾಲ್‌ಕಾಜ್ ಅಧಿಕಾರಗಳನ್ನು ಹೈಕೋರ್ಟಿನವರು ಈ ಮೊದಲೇ ಹೆಚ್ಚಿಸಿದ್ದಾರೆ ಈಗಿನ ಆಕ್ಟು ಜ್ಯಾರಿಗೆ ಬಂದರೆ ಸಬ್ ಕೋರ್ಟಿನಲ್ಲಿ ತನಖಿಯಾಗುವ ಕೆಲವು ವ್ಯಾಜ್ಯಗಳು ಮುನ್ಸೀಫರಲ್ಲಿಯೇ ಫಡ್ಚಾ ಆಗಬಹುದಾದ್ದರಿಂದ ಕಕ್ಷಿಗಾರರಿಗೆ ಖರ್ಚು ತೊಂದರೆಗಳು ಕಡಿಮೆ ಯಾಗುವವು.

ಪ್ರಕೃತ ಜ್ಯಾರಿಯಲ್ಲಿರುವ ಲೋಕಲ್‌ಬೋರ್ಡ್ ಆಕ್ಟನ್ನು ತಿದ್ದುಪಡಿ ಮಾಡುವ ಸಂಗತಿಯಲ್ಲಿ ಅಫಿಶಿಯಲ್ ವ ನಾನ್ ಅಫಿಶಿಯಲ್ ಮೆಂಬರರ ಒಂದು ಕಮ್ಮಿಟಿಯನ್ನು ಏರ್ಪಡಿಸಬೇಕಾಗಿ ಮಾ ಮೆ ಎ ಎಸ್ ಕೃಷ್ಣರಾಯರು ಸಭೆಯ ಮುಂದೆ ಒಂದು ನಿರ್ಣಯವನ್ನು ತಂದರು ಸದರಿ ಆಕ್ಟನ್ನು ತಿದ್ದುಪಡಿ ಮಾಡುವರೆ ಸರಕಾರದವರು ಈಗ ಉದ್ಯುಕ್ತರಾಗಿರುವದು ಡಿಸ್ಟ್ರಿಕ್ಟ್ ತಾಲೂಕು ಬೋರ್ಡುಗಳ ಅಧಿಕಾರಗಳನ್ನು ಹೆಚ್ಚಿಸುವದು, ಡಿಸ್ಟ್ರಿಕ್ಟ್ ಬೋರ್ಡಿಗೆ ನಾನ್ ಅಫಿಶಿಯಲ್ ಪ್ರೆಸಿಡೆಂಟರನ್ನು ನೇಮಿಸುವದು ಈ ಮುಂತಾದ ವಿಷಯಗಳನ್ನು ಚರ್ಚಿಸುವ ಬಗ್ಗೆ ಒಂದು ಕಮ್ಮಿಟಿಯು ಅಗತ್ಯ. ಬೊಂಬಾಯಿ ಗವರ್ನಮೆಂಟಿನವರು ಈ ಉದ್ದಿಶ್ಯ ಒಂದು ಕಮ್ಮಿಟಿಯನ್ನು ನೇಮಿಸಿದ್ದಾರೆ ಎಂದು ಮಸ್ಸೂರೆ ಮೆ| ಕೃಷ್ಣರಾಯರು ಹೇಳಿದರು ಸದರಿ ಮಸವಿದಾ ಆಕ್ಟಿನ ಕುರಿತು ಡಿಸ್ಟ್ರಿಕ್ಟ್ ಬೋರ್ಡುಗಳ ಅಭಿಪ್ರಾಯಗಳನ್ನು ಕೇಳಿದ್ದೇವೆ ಅವರ ಅಭಿಪ್ರಾಯಗಳು ದೊರಕಿದನಂತರ ಕಮ್ಮಿಟಿಯು ಅವಶ್ಯವಿದೆಯೋ ಎಂತ ನಿಶ್ಚಯಿಸತಕ್ಕದ್ದಾಗಿದೆ ಆದ್ದರಿಂದ ಈ ನಿರ್ಣಯವನ್ನು ಈಗ ತಕ್ಕೊಡದಾಗಿ ಸರಕಾರದ ಕಡೆಯಿಂದ ಮಾ| ಮೆ| ಶಿವಸ್ವಾಮಿ ಅಯ್ಯರರು ವಾದಿಸಿದರು ನಿರ್ಣಯವು ಹಿಂತೆಗಯಲಾಯಿತು

ಜೂವಿ ಸಾಗುವಳಿ ಮಾಡುವ ರೈತರ ಸೊತ್ತನ್ನು ಸಾಲದ ಬಗ್ಗ ಜಪ್ತಿಮಾಡುವಾಗ್ಯೆ ಮುಂದಿನ ಬೆಳೆಗಾಗ ಮತ್ತು ಕ ಲಕ್ಷನ ಕುಟುಂಬ ಸಹಿತ ಉಂಡುಕೊಂಡಿರಲಿಕ್ಕೆ ಬೇಕಾಗುವಷ್ಟು ಉತ್ಪತ್ತಿಯನ್ನು ಜಪ್ತಿಯಿಂದ ವಿರಹಿತಪಡಿಸುವಂತೆ ನಿಬಂಧನೆಗಳನ್ನು ಮಾಡಬೇಕಾಗಿ ಮಾ ಮೆ ಕೇಶವಪಿಳ್ಳೆಯವರು ಒಂದು ನಿರ್ಣಯವನ್ನು ಸಭೆಯ ಮುಂದಿಟ್ಟರು ಆದರೆ ಈ ನಿಬಂಧನೆಗಳನ್ನು ಕಾರ್ಯತಃ ಜಾರಿಗೆ ತರುವದು ಅಸಾಧ್ಯ ಆದರೂ ಈ ವಿಷಯದಲ್ಲಿ ರೆವಿನ್ಯೂ ಬೋರ್ಡ್ ವ ಹ್ಯಾಕೋರ್ಟುಗಳ ಅಭಿಪ್ರಾಯ ಪಡಕೊಳ್ಳುವೆವು ಎಂದು ಸರಕಾರದ ಕಡೆಯಿಂದ ಮೆ| ಕಾಡ್ಯೂರರವರು ಮಾತುಕೊಟ್ಟರು ಆಗ್ಯೆ ಮಾ ಪಿಳ್ಳೆಯವರು ನಿರ್ಣಯವನ್ನು ಹಿಂತೆಗೆದರು.

ಹುಡುಗಿಯರ ಶಾಲೆಯಲ್ಲಿ ಮೆಟ್ರಿಕ್ಯೂಲೇಶನಿಗಿಂತ ಕೆಳ ಕೆಳ ದರ್ಜೆಗಳಲ್ಲಿ ಚರಿತ್ರ ಭೂಗೋಳ ಮೊದಲಾದ ವಿಷಯಗಳನ್ನು ದೇಶಭಾಷೆಯಲ್ಲಿ ಕಲ್ಪಿಸುವ ಕುರಿತು ಒಂದು ನಿರ್ಣಯವನ್ನು ಮಾ| ಮೆ| ವಿ ಯಸ್ ಶ್ರೀನಿವಾಸ ಶಾಸ್ತ್ರಿಗಳು ಸಭೆಯ ಮುಂದಿಟ್ಟರು ಈಗಿನ ಪದ್ಧತಿ ಪ್ರಕಾರ ಎಲ್ಲಾ ವಿಷಯಗಳನ್ನೂ ಹುಡುಗಿಯರಿಗೆ ಕೆಳಗಣ ದರ್ಜೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕಲಿಸುವದರಿಂದ ಅವರ ಇಂಗ್ಲಿಷ್ ಭಾಷಾ ಪರಿಚಿತಿ ಹೆಚ್ಚುವದಾದರೂ ವಿಷಯಜ್ಞಾನ ವೃದ್ಧಿಯಾಗದು ಎಂದು ಮಸ್ಸೂರೆ ಮಾ| ಶಾಸ್ತ್ರಿಗಳು ವಾದಿಸಿದರು ಆದರೆ ಈ ಸಂಗತಿಯನ್ನು ತಾನು ಸ್ವತಹಾ ಪರೀಕ್ಷಿಸಿ ನೋಡಿದ್ದಲ್ಲಿ ಈ ಪದ್ಧತಿ ಜ್ಯಾರಿಯಲ್ಲಿರುವ ತಿರುವಲ್ಲಿಕೇಣಿ ಶಾಲೆಯ ವಿದ್ಯಾರ್ಥಿನಿಗಳು ವಿದ್ಯೆಯಲ್ಲಿ ಇತರರಿಗಿಂತ ಹಿಂದಿಲ್ಲವೆಂದೂ ಆದರೂ ಮ| ಶಾಸ್ತ್ರಿಗಳ ಸೂಚನೆಯನ್ನು ಕುರಿತು ಆಲೋಚಿಸುವೆವೆಂದೂ ಸರಕಾರದ ಕಡೆಯಿಂದ ಡಿರೆಕ್ಟರರಾದ ಮೆ| ಸ್ಟೋನರವರು ಉತ್ತರ ಕೊಟ್ಟರು

ಪೋಲೀಸು ಇಲಾಖೆಯ ಕುರಿತು ಮಾ| ಮೆ| ರಾಮ ಅಯ್ಯಂಗಾರರು ಒಂದು ನಿರ್ಣಯವನ್ನು ಸಭೆಯ ಮುಂದೆ ತಂದರು. ಹೆಡ್ ಕನಿಸ್ಟೇಬಲ್, ಸರ್ಕಲ್ ಇನ್ಸ್‌ಪೆಕ್ಟರ ಇಸಮುಗಳನ್ನು ವಜಾಮಾಡಿ ಕನಿಸ್ಟೇಬಲ್ ವ ಸಬ್ ಇನ್ಸ್‌ಪೆಕ್ಟರರೊಳಗೆ ಸೇರಿಸಬೇಕೆಂಬದು ಇದರ ಮುಖ್ಯ ತಾತ್ಪರ್ಯವಾಗಿತ್ತು. ಹೆಡ್ ಕನಿಸ್ಟೇಬಲ್ ಇಸಮನ್ನು ವಜಾಮಾಡಲಾಗುವದಿಲ್ಲವಾಗಿಯೂ ಸರ್ಕಲ್ ಇನ್ಸ್‌ಪೆಕ್ಟರರನ್ನು ಸಬ್ ಇನ್ಸ್‌ಪೆಕ್ಟರ ತರಗತಿಗಳೊಳಗೆ ಸೇರಿಸುವ ಕುರಿತು ಆಲೋಚಿಸುತ್ತೇವೆಂದೂ ಸರಕಾರದ ಕಡೆ ಉತ್ತರ ದೊರಕಿತು.

ಕೆಲವು ಸಣ್ಣ ಕಾರ್ಖಾನೆಗಳಲ್ಲಿ ಯಾ ಬೇರೆ ವಿಧದಿಂದ ಈ ಸಂಸ್ಥಾ... ಕೂಲನಾದ ಕೈಗಾರಿಕೆಗಳಿಗೆ ಪರೋಪಕಾರಗಳನು ...

ನ್ನ ಭಾರತೀಯ ಯುವಕರನ್ನು ಕೈಗಾರಿಕೆಗಳಲ್ಲಿ ತರಭೇತು ಮಾಡುವ ಬಗ್ಗೆ ಸಹಾ ಪರದೇಶದಿಂದ ವಿಚಕ್ಷಣರನ್ನು ತರಬೇಕೆಂಬದಾಗಿಯೂ ಒಂದು ನಿರ್ಣಯವನ್ನು ಮಾ| ಮೆ| ಬಿ. ಎನ್. ಶರ್ಮರವರು ಸಭೆಯ ಮುಂದಿಟ್ಟರು. ಈ ನಿರ್ಣಯವನ್ನು ಸರಕಾರ ದವರು ಒಪ್ಪಿಕೊಂಡರು.

ಹಿಂದೂದೇಶದ ಭಾಗ್ಯೋದಯವು.

ಒಂದು ವ್ಯಕ್ತಿಗಾಗಲಿ, ಒಂದು ರಾಷ್ಟ್ರಕ್ಕಾಗಲಿ ಯಾವಾಗಲೂ ಒಂದೇ ಅವಸ್ಥೆಯು ಇರುವುದಿಲ್ಲ ಒಬ್ಬನು ಸುಖದಲ್ಲಿ ಹುಟ್ಟಿ, ಸುಖದಲ್ಲಿಯೇ ಬೆಳೆದು, ಸುಖದಲ್ಲಿಯೇ ಐಹಿಕ ಯಾತ್ರೆಯನ್ನು ಮುಗಿಸಿದ ಉದಾಹರಣೆಯು ಇಲ್ಲೆಂತಲೇ ಅನ್ನಬಹುದು. ಹಾಗೆಯೇ ಒಬ್ಬನು ದುಃಖದಲ್ಲಿ ಜನ್ಮಕ್ಕೆ ಬಂದು, ದುಃಖದಲ್ಲಿಯೇ ಉಳಿದು, ಆ ದುಃಖದಲ್ಲಿಯೇ ಅಂತ್ಯಾವಸ್ಥೆಯನ್ನು ಹೊಂದುವದು ಅಪರೂಪವೇ ಸರಿ ಇದು ಸಾಮಾನ್ಯ ನಿಯಮವು ಇದಕ್ಕೆ ಅಪವಾದವಿಲ್ಲೆಂತ ನಾವು ಹೇಳಲಾರೆವು ಆದರೆ ನಾವು ಮೇಲೆ ಹೇಳಿರುವ ಸಾಮಾನ್ಯ ನಿಯಮಕ್ಕೆ ಒಳಪಟ್ಟ ಸಂಗತಿಗಳ ಪ್ರಮಾಣವೇ ಹೆಚ್ಚುಂಟೆಂಬುದಕ್ಕೆ ಮಾತ್ರ ಸಂದೇಹವಿಲ್ಲ ವ್ಯಕ್ತಿಯ ಜೀವನಕಾಲವು ಅಲ್ಪವಾಗಿದ್ದರೂ ರಾಷ್ಟ್ರದ ಆಯುರ್ಮಾನವು ಆ ರಾಷ್ಟ್ರದ ಮಾನದಿಂದ ಅಷ್ಟೇ ದೊಡ್ಡದಾಗಿರುವುದು. ಈ ಒಂದು ವ್ಯತ್ಯಾಸವನ್ನು ಬಿಟ್ಟರೆ ಬೇರೆ ಅನೇಕ ಸಂಗತಿಗಳಲ್ಲಿ ವ್ಯಕ್ತಿಗೂ ರಾಷ್ಟ್ರಕ್ಕೂ ಸಾಮ್ಯವುಂಟೆಂಬುದು ನಿರ್ವಿವಾದವು. ಆದುದರಿಂದಲೇ ವ್ಯಕ್ತಿಗಾಗಲಿ ರಾಷ್ಟ್ರಕ್ಕಾಗಲಿ ಯಾವಾಗಲು ಒಂದೇ ಅವಸ್ಥೆಯು ಇರುವುದಿಲ್ಲೆಂದು ಪ್ರಾರಂಭದಲ್ಲಿಯೇ ಹೇಳಿದ್ದೇವೆ. ಒಂದು ರಾಷ್ಟ್ರವು ಏಳಿಗೆಯನ್ನು ಹೊಂದುತ್ತ ಹೊಂದುತ್ತ ಶಿಖರಕ್ಕೆ ಹೋದ ತರುವಾಯ ಅಲ್ಲಿಂದ ಅದರ ಇಳಿತವು ಪ್ರಾರಂಭವಾಗುವುದು ಈ ವಿಷಯದಲ್ಲಿ ಪ್ರಾಚೀನಕಾಲದ ರೋಮ ಸಾಮ್ರಾಜ್ಯದ ಒಂದೇ ದೃಷ್ಟಾಂತವು ಸಾಕಾಗಿದೆ ಹಾಗೆಯೇ ದೈವವಶಾತ್ ಇಳಿಯುತ್ತಿಳಿಯುತ್ತ ಒಂದು ಅತ್ಯಂತ ಹೀನಸ್ಥಿತಿಯನ್ನು ಎಂದರೆ ಆ ಇಳಿತದ ಪರಮಾವಧಿಯನ್ನು ಹೊಂದಿದ ರಾಷ್ಟ್ರವು ಪುನಃ ಉನ್ನತಾವಸ್ಥೆಯ ಮಾರ್ಗವನ್ನು ಅವಲಂಬಿಸುವುದು ಆಶ್ಚರ್ಯವಲ್ಲ ದುಃಖದ ಪರಮಾವಧಿಯಾಗುತ್ತಲೇ ಸುಖವೂ, ಸುಖದ ಅಸ್ತಮಾನವಾಗುತ್ತಲೇ ದುಃಖವೂ ನಿಯತವಾಗಿವೆ ಮಹಾಕವಿ ಕಾಳಿದಾಸನ ಮೇಘದೂತವೆಂಬ ಖಂಡಕಾವ್ಯದಲ್ಲಿ ಹೇಳುವುದೇನೆಂದರೆ. "ನೀಚೈರ್ಗಚ್ಛತ್ಯುಪರಿಚ ದಶಾ ಚಕ್ರನೇಮಿಕ್ರಮೇಣ' ಎಂದರೆ ಚಕ್ರದ ಸುತ್ತಲಿನ ಪಟ್ಟಿಯಂತೆ ಒಬ್ಬನ ಅವಸ್ಥೆಯು ಕೆಳಗೂ ಮೇಲೂ ಹೋಗುತ್ತಿರುತ್ತದೆ

ಈ ಸಂಗತಿಗಳನ್ನು ಈ ಹೊತ್ತು ಪ್ರಸ್ತಾಪಿಸುವ ಕಾರಣವೇನೆಂದರೆ, ಹಿಂದೂದೇಶದ ಕೆಲವು ವಿದ್ಯಮಾನಗಳನ್ನು ಸ್ಥೂಲದೃಷ್ಟಿಯಿಂದ ನೋಡಿದ್ದಲ್ಲಿ ಅದಕ್ಕೆ ಈಗ ಏಳಿಗೆಯ ಸಮಯವು ಬರುವಂತೆ ಕಾಣುತ್ತದೆ. ಹಿಂದೂ ದೇಶವು ಅನುಭವಿಸಬೇಕಾದ ಎಲ್ಲ ಕಷ್ಟಗಳನ್ನು ಈ ಮೊದಲ ಅನುಭವಿಸಿತು; ದೇಶದ ಮೇಲೆ ಆಗಾಗ್ಗೆ ಬರುವ ಬರಗಾಲಗಳು, ಪ್ಲೇಗ, ಕಾಲರಾ, ಮುಂತಾದ ಸಾಂಕ್ರಾಮಿಕ ಮಹಾರೋಗಗಳು, ಕೆಲಕೆಲವು ಕಡೆಯಲ್ಲಿ ಅನಾವೃಷ್ಟಿಯಾದರೆ ಇನ್ನು ಕೆಲವು ಕಡೆಯಲ್ಲಿ ಅತಿವೃಷ್ಟಿ, ಇವೇ ಮೊದಲಾದ ಅನೇಕಾನೇಕ ದೈವಿಕ ಆಪತ್ತುಗಳನ್ನು ಈ ದೇಶವು ಈ ಮೊದಲೇ ಸಹಿಸಿತು ಇದುಹೊರತು ಈ ದೇಶದವರೇ ತಂತಮ್ಮ ಉಚ್ಚತ್ವಗಳ ವೃಥಾ ಅಭಿಮಾನದಿಂದ ಜಗಳಾಡಿ ತಮ್ಮೊಳಗಿನ ಐಕ್ಯವನ್ನು ಮುರಿದುಕೊಂಡರು ಜನರು ಈ ವಿಧದಿಂದ ಬಲಹೀನರಾಗಿದ್ದಲ್ಲಿ ದೇಶದೊಳಗಣ ವ್ಯಾಪಾರ, ಉದ್ಯೋಗ, ಕೈಗಾರಿಕೆ ಮೊದಲಾದ ಅರ್ಥೋತ್ಪಾದಕ ಸಾಧನಗಳು ದೇಶೀಯರ ಕೈಯಿಂದ ತಪ್ಪಿಹೋದವು ಸಾರಾಂಶವೇನೆಂದರೆ, ಕಾಳಿದಾಸನ ಶಬ್ದದಿಂದ ಹಿಂದೂದೇಶದ ಚಕ್ರನೇಮಿಯು ಹೋಗಬೇಕಾದುದಷ್ಟು ಕೆಳಗೆ ಹೋಗುವಾಗಲೆ ದೈವವಶಾತ್ ಹಿಂದೀ ದೇಶದ ರಾಜ್ಯಸೂತ್ರವು ಆಂಗ್ಲೇಯರ ಕೈಸೇರಿತ. ಇದರ ಇನ್ನು ಮುಂದಿನ ಅವಸ್ಥೆಯು ಪೂರ್ವಸ್ಥಾನವನ್ನು ಹೊಂದುವುದು; ಎಂದರೆ ಮೇಲಕ್ಕೆ ಬರುವುದು. ಈ ಕ್ರಮವು ನಾವು ನೆನಸುವಂತೆ ನಿಸರ್ಗಸಿದ್ಧವಾದುದು. ಮೊದಲೊಮ್ಮೆ ಉಚ್ಚಸ್ಥಾನದಲ್ಲಿದ್ದ ದೇಶವು ಕಾಲಕ್ರಮೇಣ ಅಧಃಪತನವನ್ನು ಹೊಂದುವುದು ಆಶ್ಚರ್ಯವಲ್ಲ ಉಚ್ಚಸ್ಥಾನದಲ್ಲಿದ್ದ ದೇಶವು ಪ್ರಳಯಕಾಲದತನಕ ಆ ಸ್ಥಾನವನ್ನೇ ಘಟ್ಟಿಯಾಗಿ ಹಿಡಿದಿರಬೇಕೆಂಬ ಕ್ಷೋರಿಕೆಯು, ತಾತ್ವಿಕ ದೃಷ್ಟಿಯಿಂದ ಯುಕ್ತವಿದ್ದರೂ ವ್ಯವಹಾರದಮಟ್ಟಿಗೆ ಅದು ನಿಷ್ಫಲವೇ ಸರಿ. ಆದುದರಿಂದ ಯಾವುದೇ ಕಾರಣದಿಂದಾಗಲಿ ಹಿಂದೀ ದೇಶವು ಭೂಖಂಡದೊಳಗಣ ರಾಷ್ಟ್ರಮಾಲಿಕೆಗಳಲ್ಲಿ ಒಮ್ಮೆ ದೇದೀಪ್ಯಮಾನವಾದ ಪದವಿಯನ್ನು ಪಡೆದಾಗ್ಯೂ ಕ್ರಮೇಣ ಅಧಃಪತನವನ್ನು ಹೊಂದಿ ಆ ಅಧಃಪತನದ ಎಲ್ಲ ಕಷ್ಟಗಳನ್ನು ಅನುಭವಿಸಿ ತೀರಿಸಿತು. ಇನ್ನು ಮುಂದೆಯೂ ಇದೇ ರೀತಿಯಲ್ಲಿ ಈ ದೇಶವು ನಿಲಬೇಕೆಂದು ಹೇಳುವುದು, ಮೇಲೆಹೇಳಿದ್ದಂತೆ ಅಸ್ವಾಭಾವಿಕವಾದುದು. ಆದುದರಿಂದ ಈ ಪರಿವರ್ತನೆಗೆ ಅನುಸಾರವಾಗಿಯೇ ಹಿಂದೂ ದೇಶವು ಈ ಉತ್ಕರ್ಷವನ್ನು ಹೊಂದಲ ಸಿದ್ಧವಾಗಿ ನಿಂತಿದೆ, ಅದರ ಭಾಗ್ಯೋದಯವು ಸನ್ನಿಹಿತವಾಗಿದೆ.

ಈ ಭಾಗ್ಯಸೂರ್ಯನಿಗಿಂತಲೂ ಮೊದಲು ತೋರಬೇಕಾದ ಅರುಣೋದಯದ ಆರಕ್ತವಾದ ಪ್ರಭೆಯು ದೇಶತುಂಬಾ ಕಂಗೊಳಿಸುತ್ತಿದೆ. ದಯಾಶಾಲಿಗಳಾದ ನಮ್ಮ ಪ್ರಭುಗಳಿಗೆ ತಮ್ಮ ದೀನಪ್ರಜೆಗಳ ದಾರಿದ್ರ್ಯವೂ, ಭಕ್ತಿಯೂ, ಯೋಗ್ಯತೆಯೂ 'ಏಕಸಮಯಾವಚ್ಛೇದೇನ' ಗೊತ್ತಾಗುತ್ತ ಬಂದಿವೆ ಸಾಮ್ರಾಜ್ಯದ ರಕ್ಷಣೆಗೂ ಭದ್ರತೆಗೂ ಹೇಗೆ ಹಿಂದೂದೇಶವು ಬೇಕೋ ಹಾಗೆಯೇ ಹಿಂದೂದೇಶದ ಸುಸ್ಥಿತಿಗೆ ಪಾಶ್ಚಾತ್ಯ ರಾಜ್ಯಶಾಸನದ ಸಹಾಯವು ಬೇಕೆಂಬ ತಿಳಿವು ಈಗ ರಾಜ್ಯಕರ್ತರಲ್ಲಿ ನೆಲೆಗೊಳ್ಳುತ್ತ ಬಂದಿದೆ ಮತ್ತು ಈ ಸಂಗತಿಗೆ ಸಾಕ್ಷಿಯಾಗಿ ಅವರು ಹಿಂದೀ ಜನರ ಆಕಾಂಕ್ಷೆಗಳನ್ನು ಆದಷ್ಟು ಪೂರೈಸುವುದರಲ್ಲಿ ತಮ್ಮ ಮನಸ್ಸನ್ನು ಉದಾರಮಾಡುತ್ತಿದ್ದಾರೆ ದೇಶದೊಳಗಣ ರಾಜ್ಯಸೂತ್ರಗಳನ್ನು ಅಧಿಕಾರಿಗಳು ಕೂಡಿದಷ್ಟು ಲೋಕಮತವನ್ನು ಅವಲಂಬಿಸಿಕೊಂಡು ನಡಿಸಬೇಕೆಂತಲೂ, ಹಿಂದೀ ಜನರ ಸ್ವರಾಜ್ಯದ ಧ್ಯೇಯವು ಅಸಾಧ್ಯಕೋಟಿಗೆ ಸೇರಿದ್ದಲ್ಲವೆಂತಲೂ, ಪರದೇಶಗಳಲ್ಲಿ ಇವರಿಗೆ ಸಾಂಪ್ರತ ಸಮಯದಲ್ಲಿ ಒದಗುವ ಕಷ್ಟಸಂಕಷ್ಟಗಳನ್ನು ನಿವಾರಿಸಲು ಯತ್ನಿಸುವುದು ತಮ್ಮ ಕರ್ತವ್ಯವೆಂತಲೂ ರಾಜ್ಯಕರ್ತರಾದ ಮಹನೀಯರು ಒಪ್ಪಿಕೊಳ್ಳುತ್ತಿದ್ದಾರೆ ದೇಶದ ಸುಶಿಕ್ಷಿತರಾದ ಜನರೂ ಕೂಡ ಸಾತ್ವಿಕ ಪ್ರಯತ್ನಗಳ ಮುಖಾಂತರ ತಮ್ಮ ಕಷ್ಟನಷ್ಟಗಳನ್ನು ರಾಜ್ಯಕರ್ತರ ಗೋಚರಕ್ಕೆ ತಂದುಕೊಡುತ್ತಿದ್ದಾರೆ ರಾಷ್ಟ್ರೀಯ ಸಭೆ, ಸ್ವರಾಜ್ಯ ಸಂಘ, ಹಿಂದೂ ವಿಶ್ವವಿದ್ಯಾಲಯ, ಔದ್ಯೋಗಿಕ ಪ್ರದರ್ಶನ, ಅಲ್ಲಲ್ಲಿ ಯಾಂತ್ರಿಕ ಕಾರ್ಖಾನೆಗಳ ಸಂಸ್ಥಾಪನೆ ಮೊದಲಾದ ಅನೇಕ ಉಪಾಯಗಳಿಂದ ಜನರು ದೇಶೋನ್ನತಿಯ ಮಾರ್ಗದಲ್ಲಿ ಒಂದೊಂದೇ ಹೆಜ್ಜೆಯನ್ನು ಮುಂದೆ ಇಡುತ್ತಿದ್ದಾರೆ. ಶ್ರೀ ಕಾಶೀಕ್ಷೇತ್ರದಲ್ಲಿ ಈ ತಿಂಗಳಿನ 4ನೇ ತಾರೀಕಿನ ದಿವಸ ಆದ ಹಿಂದೂ ವಿಶ್ವವಿದ್ಯಾಲಯದ ಶಂಕುಸ್ಥಾಪನೆಯ ಸಮಾರಂಭದಲ್ಲಿ ಲೋರ್ಡ್ ಹಾರ್ಡಿಂಜ ದೊರೆಗಳು ಮಾಡಿರುವ ಭಾಷಣವನ್ನು ಪರ್ಯಾಲೋಚಿಸಿದ್ದಲ್ಲಿಯೂ ಹಿಂದೂ ಜನರ ಉನ್ನತಿಯ ರಥವು ಒಂದೊಂದು ಹೆಜ್ಜೆ ಮುಂದರಿಸುತ್ತಿದೆ ಎಂತಲೇ ಕಂಡುಬರುವುದು ಲೋರ್ಡ್ ಹಾರ್ಡಿಂಜ ದೊರೆಗಳು ಹೇಳಿದ್ದೇನೆಂದರೆ, "ಶಿಕ್ಷಣ ವಿಷಯದಲ್ಲಿ ಉಚ್ಚವಾದ ಯಾವ ಧ್ಯೇಯಗಳನ್ನು ಸಾಧ್ಯಮಾಡಲು ಹಿಂದೂ ಜನರು ಈಗ ಎಷ್ಟೋ ಸಮಯದಿಂದ ಪ್ರಯತ್ನಮಾಡುತ್ತಲಿದ್ದಾರೋ ಆ ಧ್ಯೇಯಸಿದ್ಧಿಯ ಮಾರ್ಗದಲ್ಲಿ ಅವರು ಒಂದು ಹೆಜ್ಜೆಯನ್ನು ಮುಂದರಿಸಿರುವರೆಂಬ ಸಂಗತಿಯನ್ನು ಈ ಶಿಲೆಯೇ ತೋರಿಸುತ್ತಿದೆ ಅಸ್ತು. ಈ ಎಲ್ಲಾ ಚಿನ್ಹೆಗಳು ಹಿಂದೂದೇಶದ ಸನ್ನಿಹಿತವಾದ ಈ ಭಾಗ್ಯೋದಯವನ್ನು ತೋರಿಸುತ್ತವೆಂಬುದಕ್ಕೆ ಏನೂ ಸಂದೇಹವಿಲ್ಲ

ಇಷ್ಟರಿಂದಲೇ ಹಿಂದೂ ದೇಶವು ಕೃತಾರ್ಥವಾಯಿತು, ಇನ್ನು ಅದಕ್ಕೆ ಯಾವ ಕರ್ತವ್ಯವೂ ಇರುವುದಿಲ್ಲ, ಯಾವ ಕೊರತೆಯೂ ಇರುವುದಿಲ್ಲ, ಎಂದು ಒಂದುವೇಳೆ ಸಾಮಾನ್ಯ ಜನರ ಅಭಿಪ್ರಾಯವಾಗಬಹುದು ಆದರೆ ಅವರು ಈ ಸಂದರ್ಭದಲ್ಲಿ ಆಗತ್ಯವಾಗಿ ತಿಳಿಯಬೇಕಾದ ಸಂಗತಿ ಏನೆಂದರೆ: ರಾಷ್ಟ್ರೋನ್ನತಿಗೆ ಬೇಕಾದ ಪ್ರಯತ್ನಗಳಲ್ಲಿ ಇಷ್ಟರವರೆಗಿನ ಯತ್ನಗಳನ್ನೂ ಮುಂದೆ ಆಕ್ರಮಿಸಲಿದ್ದ ಮಾರ್ಗವನ್ನೂ ನೋಡಿದರೆ, ಆ ಯತ್ನಗಳು ಬಹು ಅಲ್ಪವೇ ಎಂತ ಹೇಳಬೇಕಾಗುತ್ತದೆ ಹಿಂದೂ ದೇಶದ ವಿರಾಟ್ ಸ್ವರೂಪಿಯಾದ ಶರೀರದ ಎಲ್ಲ ಅವಯವಗಳಲ್ಲಿ ಚೆನ್ನಾಗಿ ಬಲಿತು ಪೂರ್ಣವಾಗಿ ಚೇತರಿಸಿಕೊಂಡು ತನ್ನ ಇಷ್ಟಸ್ಥಾನವನ್ನು ಪಡೆಯುವದಕ್ಕೆ ಇನ್ನು ಎಷ್ಟೋ ದೀರ್ಘಪ್ರಯತ್ನಗಳು ಬೇಕು ಪ್ರಕೃತ ಸಮಯದಲ್ಲಿ ಸುಶಿಕ್ಷಿತರು ಪ್ರಾರಂಭಿಸಿರುವ ಅಲ್ಪಸ್ವಲ್ಪ ಪ್ರಯತ್ನಗಳಿಗೆ ದೇಶದೊಳಗಣ ಸಾಮಾನ್ಯ ಜನರು ಒಕ್ಕಟ್ಟಾಗಿ ಬಲಕೊಟ್ಟರೆ ಆ ಸುಶಿಕ್ಷಿತರ ಈಗ ಅಲ್ಪವಾಗಿರುವ ಪ್ರಯತ್ನಗಳೇ ಶೀಘ್ರವಾಗಿ ಸಫಲವಾದಾವೆಂದು ನಾವು ನಂಬುತ್ತೇವೆ.

ಎಂತಹ ಹೊಲು!

ಪೇಟೆಗೆ ಅಥವಾ ಮಾರ್ಕೆಟಿಗೆ ಹೋಗಿ ನಿಮ್ಮ ಸುತ್ತಲೂ ನೋಡಿರಿ, ಏನಿದೆ? ಒಂದು ಕಡೆಯಲ್ಲಿ ಕಾಯಿಪಲ್ಯ, ಹಣ್ಣು, ಮೀನು ಇತ್ಯಾದಿಗಳು; ಮತ್ತೊಂದು ಕಡೆಯಲ್ಲಿ ಮಿಠಾಯಿ ಮೊದಲಾದ ಭಕ್ಷ್ಯಗಳು; ಒಂದರ ಮೇಲೆ ಮತ್ತೊಂದು ಬಿದ್ದಿವೆ. ಅವನ್ನು ಯಾವದರಿಂದಲೂ ಮುಚ್ಚಿಲ್ಲ. ನೊಣ, ನುಸಿಗಳು ಆಹಾರಪದಾರ್ಥಗಳನ್ನು ತಮ್ಮ ಹಾಸಿಗೆಯನ್ನಾಗಿ ಮಾಡಿಕೊಂಡು ಹೊಟ್ಟೆತುಂಬಾ ತಿಂದು ಬಿದ್ದುಕೊಂಡಿವೆ. ಅಗೋ ನೋಡು! ಮೀನಿನ ಮೇಲೆ [illegible] ಆ ನೊಣಗಳು [illegible] ಬರುತ್ತಲಿವೆ. ನೋಡು! ಎಲಿ ಕುಳಿತವ? [illegible] ಮಾರಾಟ [illegible]

ಖರ್ಜೂರ ಹಣ್ಣಿನ ತೊಟ್ಟಿಯ ಮೇಲೆ ಕುಳಿತವು. ತೊಟ್ಟಿಗೆ ಮುಚ್ಚಳವಿಲ್ಲವೇ ಇಲ್ಲ. ಎಂತಹ ಹೊಲಸು!

ಅದೋ ನೋಡು! ಆ ಹೆಂಗಸು ತಲೆಯ ಮೇಲೆ ಒಂದು ಪಾತ್ರೆಯನ್ನು ಹೊತ್ತುಕೊಂಡು ಹೋಗುತ್ತಿರುವಳು. ನೊಣಗಳೆಲ್ಲಾ ಸುತ್ತಲೂ ಹಾರುತ್ತಲಿವೆ. ಹತ್ತಿರ ಹೋಗು! ಅಹಾ! ಎಂತಹ ದುರ್ವಾಸನೆ! ನೋಡು! ಕೆಲವು ನೊಣಗಳು ನಮ್ಮ ಕಡೆಗೆ ಹಾರಿಬರುತ್ತಲಿವೆ. ಎಲ್ಲಿ ನುಗ್ಗಿದವು? ಆ ಹೊಟೇಲಿನೊಳಗಲ್ಲವೇ? ಎಂತಹ ಹೊಲಸು!

ಅಹಾ! ಅತ್ತ ನೋಡು, ಬೀದಿಬದಿಯ ತೋಡು ತುಂಬಾ ಕೊಳಕು ನೀರು ಹರಿಯುತ್ತಲಿದೆ. ದುರ್ವಾಸನೆ! ಈ ಕೊಳಕು ನೀರಿನ ಮೇಲೆ ತುಂಬಾ ನುಸಿ ನೊಣಗಳು ಹಾರುತ್ತಿವೆ. ಅಗೋ ನೋಡು! ಕೆಲವು ನೊಣಗಳು ಕೊಳಕು ನೀರಿನಿಂದ ಮೇಲೆ ಹಾರಿ ಮಿಠಾಯಿ ಹರಿವಾಣದ ಮೇಲೆ ಕುಳಿತವು. ಎಂತಹ ಹೊಲಸು!

ಅಗೋ! ಅಲ್ಲಿ ಒಬ್ಬ ಕುಷ್ಠರೋಗಿಯು ಬರುತ್ತಿದ್ದಾನೆ. ಇಲ್ಲಿ ಒಬ್ಬ ಕಾಲು ತುಂಬಾ ಹುಣ್ಣೆದ್ದ ಮನುಷ್ಯನು ನಿಂತಿರುತ್ತಾನೆ. ನೊಣಗಳು ಹಾರುತ್ತಿವೆ. ಕೆಲವು ಅವರಿಬ್ಬರ ಮೈಮೇಲೆಯೂ ಕುಳಿತಿವೆ. ಅವರು ಏನು ಮಾಡುತ್ತಿದ್ದಾರೆ ನೋಡು! ಇಬ್ಬರೂ ಕಂಡಕಡೆ ಉಗುಳುತ್ತಿದ್ದಾರೆ. ತಕ್ಷಣ ನೊಣಗಳು ಈ ಉಗುಳಿನ ಮೇಲೆ ಹಾರಿ ಕುಳಿತವು. ನೋಡು! ಅತ್ತ ಕಡೆಯಿಂದ "ಬಿಸಿಬಿಸಿ ಅಂಬಡೆ! ಅಂಬಡೆ!" ಯವನು ಬರುತ್ತಿದ್ದಾನೆ. ಈ ನೊಣಗಳು ಉಗುಳಿನಿಂದ ಹಾರಿ "ಅಂಬಡೆಯ" ಮೇಲೆ ಕುಳಿತವು. ಅಹಾ! ಎಂತಹ ಹೊಲಸು!

ಅಹಾ! ನೋಡು. ಗಿರಾಕಿಗಳು ಒಬ್ಬರ ಹಿಂದೆ ಒಬ್ಬರು ಬರುತ್ತಿದ್ದಾರೆ. ಹಣ್ಣನ್ನೋ, ಕಾಯಿಪಲ್ಯವನ್ನೋ ಮುಟ್ಟಿ ಹೆಕ್ಕಿತೆಗೆದು ಅಚೆ ಈಚೆ ಇಡುತ್ತಿದ್ದಾರೆ. ಕೆಲವರ ಕೈತುಂಬಾ ಕಜ್ಜಿ, ಕೆಲವರ ಕೈತುಂಬಾ ಹೊಲಸು!

ಹೀಗೆ ಮಾರಲ್ಪಡುತ್ತಿರುವ ಆಹಾರ ಪದಾರ್ಥಗಳ ಹೊಲಸು ಮಾತ್ರವಲ್ಲ. ಬಗೆಬಗೆಯ ರೋಗವನ್ನೂ ಹುಟ್ಟಿಸುವಂಥಾದ್ದಾಗಿದೆ. ನುಸಿ, ನೊಣಗಳು ಹೊಲಸು ಮಾತ್ರವಲ್ಲ; ರೋಗಿಗಳ ಎಂಜಲು, ಮಲಮೂತ್ರಾದಿಗಳ ಮೇಲೆ ಕುಳಿತು ಬರುವವುಗಳಾಗಿರುವದರಿಂದ ಅಂಟುರೋಗಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಒಯ್ಯುವಂಥಾದ್ದೂ ಆಗಿದೆ. ಆದುದರಿಂದ ಇಂಥಾ ನೊಣಗಳು ಕುಳಿತ ಹಣ್ಣು, ಮಿಠಾಯಿ ಮೊದಲಾದ ತಿಂಡಿಗಳನ್ನು ತೊಳೆಯದೆ ತಿನ್ನುವದು ಎಂಥಾ ಹೊಲಸು! ಎಂಥಾ ಅಪಾಯ! ಈ ರೀತಿ ನಮ್ಮ ಮಕ್ಕಳು ದಿನಂಪ್ರತಿ ವಿಚಾರವಿಲ್ಲದೆ ಹೊಲಸಾದ ತಿಂಡಿ ಪದಾರ್ಥಗಳನ್ನು ತಿನ್ನುತ್ತಿರುವದರಿಂದ ವಿವಿಧ ಸೋಂಕುರೋಗಗಳಿಗೆ ಆಹುತಿಯಾಗುತ್ತಿದ್ದಾರೆ.

ಹೋರಿಗಳ ಬೀಜಹರಣ.

ಹೋರಿಗಳ ಬೀಜ ತೆಗೆಯುವದು ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ವಾಡಿಕೆಯಲ್ಲಿರುವುದು. ಹೀಗೆ ಬೀಜ ತೆಗೆಯುವದರಿಂದ ವ್ಯವಸಾಯಕ್ಕುಂಟಾಗುವ ಪ್ರಯೋಜನಗಳನ್ನು ಜನರು ಚೆನ್ನಾಗಿ ತಿಳಿದಿದ್ದಿರುವರು. ಆದರೆ ಬೀಜ ತೆಗೆಯುವ ಪ್ರಾಯವು ವಿವಿಧ ದೇಶಗಳಲ್ಲಿ ಬೇರೆ ಬೇರೆಯಾಗಿರುವುದು. ನಮ್ಮ ಈ ಆಧಿಪತ್ಯದಲ್ಲಿ ಸಣ್ಣ ಪ್ರಾಯದ ಹೋರಿಗಳಿಗೆ ಪೂರ್ಣ ಹಲ್ಲು ಬಂದ ನಂತರ ಅಂದರೆ ಶುಮಾರು ೫ ವರ್ಷ ವಯಸ್ಸಾದ ಕೂಡಲೇ ಅವುಗಳ ಬೀಜ ತೆಗೆಯುತ್ತಾರೆ. ಗುಜರಾತಿನಲ್ಲಿ ಎಳೇ ಹೋರಿಗಳಿಗೆ ಒಂದು ವರ್ಷ ಪ್ರಾಯವಾಗುತ್ತಲೇ ಬೀಜ ತೆಗೆಯುವುದುಂಟು. ಉಳುವ ಹೋರಿಗಳ ಸಾಮರ್ಥ್ಯವು ಅವುಗಳ ಪೂರ್ಣ ಶಕ್ತಿಯ ಮೇಲೆ ಹೊಂದಿಕೊಂಡಿರುವದಿಲ್ಲ. ಆದರೆ ಆ ಶಕ್ತಿಯನ್ನು ಯಾವ ಪ್ರಯೋಜನಕರವಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದೆಂಬದರ ಮೇಲೆ ಆಧರಿಸಿಕೊಂಡಿರುವುದು.

ಪೂನೆಯ ವ್ಯವಸಾಯದ ಪಂಡಿತರಾದ ಜಿ. ಬಿ. ನ್ಯಾಟ್ ಎಂಬವರು ಗುಜರಾತಿನ ಹೋರಿಗಳು ಬಲಿಷ್ಠವಾಗಿಯೂ, ಚುರುಕಾಗಿಯೂ, ಬಹಳ ಸಾಧುವಾಗಿಯೂ ಇದ್ದು ಹೂಡುವವನ ಅತ್ಯಲ್ಪವಾದ ಸಂಜ್ಞೆಗಳಿಗನುಸಾರವಾಗಿ ನಡೆದುಕೊಳ್ಳುತ್ತವೆಂಬುದನ್ನು ಗುಜರಾತಿನ ಹತ್ತಿಯ ಗದ್ದೆಯಲ್ಲಿ ಮಾಡಲ್ಪಟ್ಟ ಸಾಲುಗಳಿಂದಲೂ ಗುಜರಾತಿನ ಬೇರೆ ಪೈರುಗಳಿಂದಲೂ ತಿಳಕೊಳ್ಳಬಹುದು. ಇದು ಬಹಳ ಅತ್ಯಲ್ಪವಾದ ಪ್ರಯೋಜನವೆಂಬದಾಗಿ ಹೇಳುವರು. ಅಯೋಗ್ಯವಾದ ಮತ್ತು ದುರ್ಬಲವಾದ ಹೋರಿಗಳು ತಮ್ಮಂಥಹ ಬಲಹೀನವಾದ ಪ್ರಾಣಿಗಳನ್ನು ಪುನರುದ್ಭವಿಸದಂತೆ ಅಡ್ಡಿ ಮಾಡುವದೇ ಬೀಜ ತೆಗೆಯುವುದರ ಪ್ರಾಮುಖ್ಯವಾದ ಲಕ್ಷಣ. ಹಿಂದೂಸ್ಥಾನದ ಹೋರಿಗಳು ತಮ್ಮ ಹದಿನೆಂಟನೆಯ ತಿಂಗಳು ಪೂರ್ಣವಾದ ಮೇಲೆ ದನಗಳ ಹಿಂಡುಗಳಲ್ಲಿ ತಮ್ಮ ಶಕ್ತಿ ತೋರಿಸಲಿಕ್ಕೆ ಹೋಗುತ್ತವೆ. ಮತ್ತು ಅವನ್ನು ಹಿಂಡಿನಲ್ಲಿ ಬಿಟ್ಟರೆ ಕೆಟ್ಟು ಹೋಗುತ್ತವೆ. ಒಳ್ಳೆಯ ಆಕಾರವೂ ಶಕ್ತಿಯೂ ಉಳ್ಳ ಒಳ್ಳೆಯ ಜಾತಿಯ ಹೋರಿಗಳನ್ನೇ ದನಗಳ ಹಿಂಡಿನಲ್ಲಿ ಬಿಡುವುದಕ್ಕೆ ಆರಿಸಬೇಕು. ಬಹಳ ತಡಮಾಡಿ ಬೀಜ ತೆಗೆದರೆ ತತ್ಕಾಲಕ್ಕೆ ಅವುಗಳು ದನಗಳ ಹಿಂಡಿನಲ್ಲಿ ಬಹಳ ಬೇಗನೇ ಓಡುತ್ತವೆ!

ಒಂದು ಪ್ರಾಯದ ಹೋರಿಗೆ ಸಾಕಷ್ಟು ಬಲವೂ, ಶಕ್ತಿಯೂ, ಸಾಮರ್ಥ್ಯವೂ, ಪ್ರಾಯವೂ ಬಂದೊಡನೆ ಅಂಥಾ ಹೋರಿಯನ್ನು ಇತರ ಹೋರಿಗಳು ತಮ್ಮ ಹಿಂಡಿಗೆ ಸೇರಿಸಿಕೊಳ್ಳುವುವು. ಜಾನುವಾರವನ್ನು ಸಾಕುವದರಲ್ಲಿ ಅವುಗಳ ಕಾಡುಸ್ಥಿತಿಯಿಂದ ಅಥವಾ ಸ್ವಭಾವಿಕ ಸ್ಥಿತಿಯಿಂದ ನಾವು ಅನೇಕ ಸಂಗತಿಗಳನ್ನು ಕಲಿಯತಕ್ಕದ್ದು. ಮಿಸ್ಟರ್ ನ್ಯಾಟ್ ಎಂಬವರು ಎಳೇ ಮತ್ತು ಪ್ರಾಯಹೋದ ಹೋರಿಗಳ ಬೀಜ ತೆಗೆಯುವುದರಿಂದುಂಟಾಗುವ ಶುಭಾಶುಭ ಫಲಗಳ ಕುರಿತು ಅನೇಕ ಶೋಧನೆಗಳನ್ನು ನಡೆಸಿರುವರು. ಅವರು ಗೊತ್ತುಹಚ್ಚಿದ ಮುಖ್ಯ ಸಂಗತಿಗಳು ಯಾವವೆಂದರೆ:— (೧) ಎಳೇಪ್ರಾಯದಲ್ಲಿ ಅಥವಾ ಪ್ರಾಯ ಹೋಗಿ ಬೀಜ ತೆಗೆಯುವದರಿಂದ ವಿಶೇಷವಾಗಿ ಹೋರಿಗಳ ಧಾರಕ್ಕೆ ಹಾನಿಬರುವದಿಲ್ಲ. (೨) ಎಳೇ ಪ್ರಾಯದಲ್ಲಿ ಬೀಜ ತೆಗೆದ ಪ್ರಾಣಿಗಳ ಹಿಂಬಾಗದ ಅಂಗಗಳು ಚೆನ್ನಾಗಿ ಬೆಳೆಯುವವು. (೩) ಎಳೇ ಪ್ರಾಯದಲ್ಲಿ ಬೀಜ ತೆಗೆಯುವದರಿಂದ ಒಲವು ಕಡಿಮೆಯಾಗುವದಿಲ್ಲ. (೪) ಎಳೇ ಪ್ರಾಯದಲ್ಲಿ ಹೋರಿಗಳಿಗೆ ಬೀಜ ತೆಗೆಯುವದರಿಂದ ಅವುಗಳು ಸಾಧುವಾಗುತ್ತವೆ. (೫) ಎಳೇ ಹೋರಿಗಳ ಬೀಜ ತೆಗೆಯುವದರಿಂದ ಚುರುಕುತನ ಹೆಚ್ಚುವುದು. (೬) ಪ್ರಾಯ ಹೋಗಿ ಬೀಜ ತೆಗೆಯುವದರಿಂದ ಬಹುಶಃ ಕೆಲವು ನೋಟಕರ ಕಣ್ಣಿಗೆ ಒಂದು ವೇಳೆ ಚೆಲುವಾಗಿ ಕಾಣಬಹುದು. (೭) ಪ್ರಾಯಹೋಗಿ ಬೀಜ ತೆಗೆಯುವದರಿಂದ ಸಹನಾಶಕ್ತಿ ಹೆಚ್ಚು ಬರುವುದೆಂದು ನಿರ್ಧರಿಸಲಿಕ್ಕಾಗುವದಿಲ್ಲ. ಮಿ॥ ನ್ಯಾಟ್ ಎಂಬವರ ಆಲೋಚನೆ ಪ್ರಕಾರ ಬೀಜ ತೆಗೆಯದ ಎತ್ತುಗಳನ್ನು ಸಾಕುವಾಗ್ಗೆ ಅವರು ಸೂಚಿಸುವ ಕ್ರಮಗಳನ್ನು ಅನುಸರಿಸಿ ಒಳ್ಳೇ ಎತ್ತುಗಳನ್ನು ಹಿಂಡಿಗೆ ಬಿಡುವುದರಿಂದ ನಮ್ಮ ದೇಶದಲ್ಲಿ ಒಳ್ಳೇ ದನಕರುಗಳು ಸಿಕ್ಕುವುವು.

ಪತ್ರವ್ಯವಹಾರ.

ಹಿಂದೀ ಸ್ವರಾಜ್ಯವು.

ಸ್ವಾಮಿ,

ತಮ್ಮ ಇದೇ ತಿಂಗಳ ೧೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸೋಣಾದ "ಹಿಂದೀ ಸ್ವರಾಜ್ಯದ ವಿರೋಧಿಗಳು" ಎಂಬ ಶಿರನಾಮೆ ಸಮರ್ಥ ಲೇಖನವನ್ನು ನೋಡಿದೆನು. ಇದನ್ನು ಬರೆದವರು ವಿಶೇಷ ವಿಚಾರ ಶಕ್ತಿ ಇರುವವರೂ, ದೇಶಭಕ್ತಿಶೀಲರೂ ಎಂದು ತೋರುವುದರಿಂದ ಅವರು ಕೆಳಗೆ ಬರೆದ ಪ್ರಶ್ನೆಗಳನ್ನು ಚೆನ್ನಾಗಿ ವಿವೇಚಿಸಿ ನೋಡಬೇಕಾಗಿ ನಾನು ಅಪೇಕ್ಷಿಸುತ್ತೇನೆ.

1. ಇಂಡಿಯದ ಹೊರಗಿನ ದೇಶಗಳಲ್ಲಿರುವ ಮತಭೇದಗಳೂ, ಇಂಡಿಯದಲ್ಲಿರುವ ಜಾತಿಭೇದಗಳೂ, ಸ್ವರಾಜ್ಯದ ಪ್ರಾಪ್ತಿಮಟ್ಟಿಗೆ ಅಥವಾ ಜನಾಂಗದ ಏಕಮತದ ಮಟ್ಟಿಗೆ ಏಕ ಪ್ರಕಾರವೂ? ಮತಭೇದಕ್ಕೂ ಜಾತಿಭೇದಕ್ಕೂ ಅಂತರವಿಲ್ಲವೊ ಕೆಲವು ಪ್ರಾಜ್ಞರು ಮತಭೇದವು ಅಭಿಪ್ರಾಯ ಭೇದವೆಂತಲೂ ಜಾತಿಭೇದವು ಅಜ್ಞಾನಜನ್ಯವಾದ ಭ್ರಾಂತಿಯೆಂತಲೂ ತಿಳಕೊಳ್ಳುವದು ತಪ್ಪು ಗ್ರಹಿಕೆಯೋ?

2. ಸರ್ವಜನರೂ ಸಾಯುತ್ತಾರಾದರೂ ಮರಣಕ್ಕೆ ಕಾರಣಗಳು ಹೇಗೆ ವಿವಿಧವಿರುತ್ತವೋ ಹಾಗೆಯೇ ಬ್ರಹ್ಮದೇಶದಲ್ಲಿಯೂ ಆಯರ್‌ಲೇಂಡ್ ಮೊದಲಾದ ದೇಶಗಳಲ್ಲಿಯೂ, ಜಾತಿಭೇದವಿಲ್ಲದಿದ್ದರೂ, ಆ ದೇಶಗಳಲ್ಲಿ ಸ್ವರಾಜ್ಯ ನಷ್ಟವಾಗಲಿಕ್ಕೆ ಬೇರೆ ಕಾರಣಗಳು ಏಕೆ ಇರಕೂಡದು?

3. ವೇದವೇದಾಂತ, ಉಪನಿಷದ್‌ಗಳನ್ನೂ ಷೋಡಶ ಶಾಸ್ತ್ರಗಳನ್ನೂ ನಮಗೆ ಕೊಟ್ಟ ಮಹನೀಯರಾದ ನಮ್ಮ ಪೂರ್ವಜರ ಕಾಲದಲ್ಲಿ ಹೇಗೆ ಜಾತಿಭೇದವಿತ್ತೋ ಅದೇ ರೀತಿ ಈಗಲೂ ನಮ್ಮ ಜನರ ಮಧ್ಯ ಜಾತಿಭೇದಗಳು ಇರುವಂಥಾದ್ದೋ? ದೃಷ್ಟಾಂತಕ್ಕೆ ಆಗಿನ ಕಾಲದಲ್ಲಿ ಬ್ರಾಹ್ಮಣತೆಯು ಯೋಗ್ಯತೆಯಿಂದ ಸಂಪಾದಿಸುವ ಪದವಿಯಾಗಿತ್ತೆಂತಲೂ, ಈಗಿನ ಕಾಲದಲ್ಲಿ ಜನನದಿಂದ ಲಭಿಸುವ ಹಕ್ಕು ಎಂತಲೂ ಡಾಕ್ಟರ್ ಭಂಡಾರಕಾರರು ಮೊದಲಾದ ಪ್ರಾಜ್ಞರು ತಿಳಕೊಳ್ಳುವುದು ತಪ್ಪೋ?

4. ಆಗಿನ ಕಾಲದಲ್ಲಿ ಇರುವ ಜಾತಿಭೇದಗಳು ಈಗಿನ ಕಾಲದಲ್ಲಿ ಇರಲಿಲ್ಲವಾದರೆ, ಈಗ ಇರುವ ಜಾತಿಭೇದಗಳು ಉಂಟಾದಂದಿನಿಂದ ನಮ್ಮ ದೇಶವು ಉನ್ನತಿ ಹೊಂದುತ್ತಲೇ ಬಂದದೊ ಅಥವಾ ಅಧೋಗತಿಗೆ ಇಳಿಯುತ್ತಲೇ ಬಂದದೊ?

5. "ಹಿಂದಿ ಸ್ವರಾಜ್ಯದ ವಿರೋಧಿಗಳು" ಎಂಬ ಲೇಖವನ್ನು ಬರೆದವರು ಬ್ರಾಹ್ಮಣ ಕುಲದ್ಭವರಾದರೆ, ಅವರ ಜಾತಿಯಲ್ಲಿರುವ ಗೋತ್ರಗಳ ಮೂಲ ಪುರುಷರಾದ ಋಷಿಗಳು ಯಾವ ಯಾವ ಜಾತಿಯವರಾಗಿದ್ದರು?

15—2—1916. ಭಾರತೀಯನು.

* ಸ್ಥಳ ಸಂಕೋಚವಾದುದರಿಂದ ಬರುವ ಸಂಚಿಕೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನು ಪ್ರಕಟಿಸುವೆವು. ಸಂಪಾದಕ

ಪಚ್ಚೆವರ್ಣದ ಹೂವು.

ಇಂಗ್ಲೀಷಿನಿಂದ (Water Hyacinth) ಎಂತ ಕರೆಯಲ್ಪಡುವ ಅತಿ ಚಲೋದಾದ ಪಚ್ಚೆವರ್ಣದ ಒಂದು ಹೂವು ಸಾಧಾರಣವಾಗಿ ನಮ್ಮ ಜಿಲ್ಲೆಯಲ್ಲಿ ಕಾಣ ಸಿಕ್ಕುವದು. ಇದಕ್ಕೆ ಮಲೆನಾಡಿನಲ್ಲಿ (ಕೊಳಬಾಯು) ಎಂತಲೂ ಕರಿಯುತ್ತಾರೆ. ಇದರ ಮೂಲಸ್ಥಾನವು ದಕ್ಷಿಣ ಅಮೇರಿಕಾಖಂಡವಾಗಿದ್ದು ಅಲ್ಲಿಂದ ಸಂಯುಕ್ತ ಸಾಮ್ರಾಜ್ಯಕ್ಕೂ ಆಸ್ಟ್ರೇಲಿಯ ರಾಜ್ಯಗಳಿಗೂ ತೆರಳಿ ಈಗ ನಮ್ಮ ಮದ್ರಾಸ್ ಸಂಸ್ಥಾನದ ಎಲ್ಲಾ ದಿಕ್ಕಿನಲ್ಲಿ ನಿಂತಿರಿವ ಬಾವಿಗಳಲ್ಲಿ, ಹೊಂಡಗಳಲ್ಲಿ, ನದಿಗಳಲ್ಲಿ ಕಾಲಿಟ್ಟು ವಸ್ತಿಯನ್ನು ಮಾಡಿಕೊಂಡು ಇರುವದನ್ನು ನೋಡುತ್ತೇವೆ. ಅದರ ದಂಟುಗಳು ನಳಿಗೆಯೋಪಾದಿಯಲ್ಲಿ ಇದ್ದು ಹೆಚ್ಚಿನ ಆಳ ಕಮ್ಮಿ ಇರುವ ನೀರಿನಲ್ಲಿ ಸುಲಭವಾಗಿ ತೇಲುವದು. ಅದು ದಟ್ಟವಾಗಿ ಹಗೂರವಾಗಿ ಇರುವದರಿಂದ ಗಾಳಿಯಲ್ಲಿ ಹಾರಿ ದಿಕ್ಕು ದಿಕ್ಕಿನಲ್ಲಿ ಹಬ್ಬಿ ಸೊಕ್ಕಿಯುತ್ತದೆ. ಅದರ ಎಲೆಗಳು ಬಹಳ ಅಗಲವಾಗಿ ಬೆಳೆದಿರುವ ಕಾರಣ ಪ್ರಕೃತಿಯಲ್ಲಿರುವ ಅವರ ಬುಡಗಳು ನೀರಿನ ಪ್ರವಾಹವನ್ನು ಒಮ್ಮೆ ತಡೆಯುವದು ಸಹಾ ಉಂಟು. ಈ ಹೂವಿನ ನಾಶವಾಗದ್ದು ಮನುಷ್ಯರ ಆರೋಗ್ಯವನ್ನು ಕೆಡಿಸುವದು. ಇಂಥಾ ಹೂವುಗಳು ಹೆಚ್ಚಾಗಿ ಮಹಸ್ಸೂರಿನ ರಮಣೀಯ ಗಳ ಕೆರೆಗಳಲ್ಲಿ ಕಾಣುವವು. ಅವುಗಳು ಮೊಳಕೆ ಒಡೆದು ನೀರಿನ ಮೇಲೆ ತೇಲುವ ಸಮಯದಲ್ಲಿಯೇ ಕಿತ್ತು ನಾಶಗೊಳಿಸುವದು ಒಳ್ಳೇದು. ಬೆಳೆದ ನಂತರ ಪ್ರಯಾಸವಾಗಿ ಕಾಣುವದು. ಅದನ್ನು ಕಿತ್ತು ಮೇಲೆ ಹಾಕಿ ಕೊಳತು ಹೋಗುವ ರೀತಿಯಲ್ಲಿ ಬಿಡಬಾರದು. ಯಾಕಂದರೆ ಅದರ ಬೀಜವು ಗಾಳಿಯಲ್ಲಿ ಕೂಡಲೆ ಸೇರಿ ಬಾವಿಯ ತಂಪು ಮಣ್ಣಿನಲ್ಲಿ ಕೂಡಿ ನಿಮಿಷ ಮಾತ್ರದಲ್ಲಿ ಬೆಳೆಯುವದು. ಅದ್ದರಿಂದ ನೋಡಲಿಕ್ಕೆ ಎದುರು ಸಿಕ್ಕುವ ಹೂವನ್ನು ಪ್ರತಿ ಒಬ್ಬರು ಕಿತ್ತು ಸುಟ್ಟು ನಾಶವಾಗುವವರೆ ಪ್ರಯತ್ನವಿಡಬೇಕು. ಯಾಕಂದರೆ ಅಮೇರಿಕಖಂಡದ ಪ್ರಾಂತ್ಯಗಳಲ್ಲಿ ಈ ಹೂವು ಬಹಳ ಗಂಡಾಂತರದ ನಮೂನೆಯಲ್ಲಿ ತಪ್ಪಿ ಹೆಚ್ಚಿನ ಹಾವಳಿಯನ್ನುಂಟು ಮಾಡುವ ಅನುಭವ ಕಂಡುಬಂದದರಿಂದ ಇಂಥಾ ಹಾವಳಿಯು ನಮ್ಮ ಮದ್ರಾಸ್ ಸಂಸ್ಥಾನದಲ್ಲಿ ಬಾರದ ಹಾಗೆ ಮುಂಜಾಗ್ರತೆಯಲ್ಲಿರಬೇಕೆಂಬ ವ್ಯವಸಾಯ ಸಂಘದ ಡೈರೆಕ್ಟರವರ ಸೂಚನೆಯನ್ನು ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಇರುವ ಜನರ ತಿಳುವಳಿಕೆ ಬಗ್ಗೆ ಬರಕೊಂಡಿದ್ದೇನೆ.

ಖಾತ್ಮಿದಾರ.

ಇನ್ನೊಮ್ಮೆ!

ಸ್ವಾಮಿ ಪತ್ರಕರ್ತರೇ,

ಅನಾಥಾಲಯದ ಅವಶ್ಯಕತೆಯ ಕುರಿತು ನಾನು ಹಿಂದೊಮ್ಮೆ ಕೆಲವು ಕಾರಣಗಳನ್ನು ತೋರಿಸಿದ್ದೆನಷ್ಟೆ. ಆದರೆ ಅನಂತರದ ಸಂಚಿಕೆಯಲ್ಲಿ ಈ ವಿಷಯವಾಗಿ ತಾವಾಗಲಿ, ಬೇರೆಯವರಾಗಲಿ ಯಾವದೂ ಒಂದು ವಿಧದ ಚರ್ಚೆ ನಡಿಸಿದ್ದು ಕಂಡು ಬರುವುದಿಲ್ಲ. ಮಧ್ಯದಲ್ಲಿಯೇ ಉದ್ಭವಿಸಿದ ಟ್ರೇನಿಂಗ್ ಶಾಲೆಯ ಪಂಚಮರ ಪ್ರಕರಣದ ಪಂಚಮ ಸ್ವರದಿಂದ ಇದು ಹಿಂದುಳಿದಿರಬಹುದೋ ಇಲ್ಲವೆ ಇದಕ್ಕೆ ಬೇರೆ ಏನಾದರೂ ಕಾರಣವಿರಬಹುದೋ? ನನ್ನಂಥವನಿಗೆ ಅದರ ನಿಜವಾದ ಕಾರಣವನ್ನು ಊಹಿಸುವುದು ಸಾಧ್ಯವಿಲ್ಲ. ಅನಾಥಾಲಯದ ಪ್ರಶ್ನೆಯ ವಿಷಯದಲ್ಲಿ ನಮ್ಮ ಸಮಾಜವು ಯಾವ ಕಾರಣದಿಂದ ಉದಾಸೀನ ಭಾವವನ್ನು ಧರಿಸಿರಲಿ, ಈ ಉದಾಸೀನಭಾವವು ನಮ್ಮ ಕನ್ನಡ ಸೀಮೆಯ ಕುಲ ಪರಂಪರಾಗತವಾದ ಒಂದು ನಿದ್ರಾರೋಗವೇ ಎಂದರೆ ಅದು ಅತಿಶಯೋಕ್ತಿಯ ಮಾತಾಗಲಿಕ್ಕಿಲ್ಲ. ಪುರಾಣದಲ್ಲಿ ಕುಂಭಕರ್ಣನ ನಿದ್ರೆಯು ಅತಿ ದೀರ್ಘವಾದದ್ದೆಂದು ವರ್ಣಿತವಾಗಿದೆ. ಆದರೆ ನಮ್ಮ ಈ ಸೀಮೆಯ ನಿದ್ರೆಯ ಅನುಭವವು ಪೌರಾಣಿಕರಿಗೆ ಇದ್ದದಾದ್ದರೆ "ಭವಿಷ್ಯ" ಕಥನದ ರೂಪದಿಂದ ಅವರು ಇದನ್ನೇ ಆದರ್ಶವಾಗಿ ಇಟ್ಟುಕೊಳ್ಳುತ್ತಿದ್ದರೆಂಬುವುದು ನಿಜ. ಎಂತು ಹ್ಯಾಗೂ ಇರಲಿ. ಸಮಾಜವು ನಿದ್ರೆಯಲ್ಲಿರಲಿ, ಅಥವಾ ಈ ಪ್ರಶ್ನೆಯು ಅದಕ್ಕನ್ನೊಂದು ಮಹತ್ವದ್ದಾಗಿ ತೋರದೆ ಇರಲಿ, ನಾವು ನಮ್ಮ ಭೇರಿಯನ್ನು ಆಗಾಗ್ಗೆ ಹೊಡೆಯುತ್ತಿರುವದೇ ಉತ್ತಮ. ಆದದರಿಂದ ಅನಾಥಾಲಯದ ಕುರಿತು ಇನ್ನೊಮ್ಮೆ ಒಂದೆರಡು ಮಾತುಗಳನ್ನು ಪ್ರಸ್ತಾಪಿಸುತ್ತೇನೆ.

ಹಿಂದುದೇಶದಲ್ಲಿ ಜಾತಿಗಳು ಬಹಳ. ದೇವಾಲಯಗಳು ತುಂಬಾ. ಬ್ರಾಹ್ಮಣರಂಥ ಮೇಲ್‍ಜಾತಿಯ ಬೇರೆ ಬೇರೆ ಒಳ ಜಾತಿಗಳಲ್ಲಿ ಒಂದೊಂದು ಗುರುಮಠವಿದೆ. ಸರಿ. ಆಯಾ ಮಠದ ಗುರುಗಳು ತಂತಮ್ಮ ಜಾತಿಯೊಳಗಿನ ಅನಾಥರನ್ನು ಗತಿ ತೋರಿಸುವದು ನ್ಯಾಯ ಮತ್ತು ಉಚಿತ. ದುರಾಚಾರಿಗಳನ್ನು ದಂಡಿಸಿ, ಅಸಹಾಯರನ್ನು ಕೈಹಿಡಿದು, ಅವರೆಲ್ಲರನ್ನು ಆಶ್ರಯ ಕೊಟ್ಟು ಕಾಪಾಡುವದು ಧರ್ಮಗುರುಗಳ—ಅಲ್ಲ ಜಾತಿಗುರುಗಳ ಕರ್ತವ್ಯವಲ್ಲವೋ? ಇಂಥಾ ಲೋಕೋಪಕಾರದ—ಜಾತ್ಯುದ್ಧಾರದ ಕರ್ತವ್ಯ ಮಾಡದಿದ್ದರೆ ಆ ಗುರುಗಳು ಇನ್ನೇನು ಮಾಡಬೇಕು? ಇದೊಂದು ಸಂಗತಿ. ಇನ್ನೊಂದು ಯಾವದೆಂದರೆ—ದೇವಸ್ಥಾನದ ಅಧಿಕಾರಿಗಳು ದೇವರ ವಿನಿಯೋಗಕ್ಕೆ ಸಾಕಾಗಿ ಮಿಕ್ಕಿರುವ ದೇವರ ಆಸ್ತಿಯನ್ನು ಇಂಥಾ ಅನಾಥರ ಉದ್ಧಾರಣೆಯಲ್ಲಿ ವೆಚ್ಚಮಾಡಿದರೆ ಅದರಿಂದ ದೇವರ ಅವತಾರದ್ದೇ ಒಂದು ಕೆಲಸ ಮಾಡಿದಂತಾಗುವದಿಲ್ಲವೋ? ರಾಮ ಕೃಷ್ಣ ಮುಂತಾದ ಅವತಾರಗಳನ್ನು ಧರಿಸಿ ದೇವರು ಮಾಡಿದ ಅವತಾರ ಕೃತ್ಯವೆಂದರೆ ಅನಾಥರ ಸಂರಕ್ಷಣೆಯೋ ಅಲ್ಲವೋ? ಹೀಗಿರುವಾಗ ಪ್ರತ್ಯೇಕವಾಗಿ ಒಂದು ಅನಾಥಾಲಯವು ಯಾಕೆ? ಹೀಗೊಂದು ಪ್ರಶ್ನೆಯು ಬರುತ್ತದೆ. ಈ ಪ್ರಶ್ನೆಯು ಒಂದು ತರದಿಂದ ಮಹತ್ವವುಳ್ಳದ್ದು. ಆದದರಿಂದ ಈ ವಿಷಯದಲ್ಲಿ ತಮ್ಮ ಪತ್ರಿಕೆಯಲ್ಲಿ ನಾಲ್ಕು ಪಂಕ್ತಿಗಳನ್ನು ಬರಿಯಬೇಕೆಂದು ಯೋಚಿಸಿದ್ದೇನೆ.

ಮಠದ ಧರ್ಮಗುರುಗಳು ಅಥವಾ ದೇವಾಲಯದ ಅಧಿಕಾರಿಗಳು ಈ ವಿಷಯವನ್ನು ಕೈಕೊಂಡು ಅನಾಥೋದ್ಧಾರಣೆ ಮಾಡುವದಾದರೆ ಅದು ನಿಜವಾಗಿ ಪ್ರಶಂಸನೀಯವೇ ಆದೀತು. ಆದರೆ ಅವರು ಈಗ ಯಾವ ದೃಷ್ಟಿಯಿಂದ ಸಮಾಜವನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ಸಮಾಜವು ಅವರನ್ನು ಯಾವ ಭಾವದಿಂದ ಮನ್ನಿಸುತ್ತಿದೆ ಈ ಸಂಗತಿಗಳನ್ನು ಸರಿಯಾಗಿ ಆಲೋಚಿಸಿದರೆ ಮೇಲಿನ ಪ್ರಶ್ನೆಗೆ ಜಾಗೆಯೇ ಇರುವದಿಲ್ಲ. ಗುರುಗಳಿಗಾಗಲಿ, ದೇವಾಲಯದ ಅಧಿಕಾರಿಗಳಿಗಾಗಲಿ ದೇಶದ ಆಧುನಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಯೋಗ್ಯತೆಯಿದ್ದರೂ ಇಚ್ಛೆಯಿಲ್ಲ! ಮಲಗಿದವರನ್ನು ಎಬ್ಬಿಸಬಹುದು. ಎಚ್ಚತ್ತವರನ್ನು ಎಬ್ಬಿಸುವದು ಹ್ಯಾಗೆ? ಆದದರಿಂದ ಇಂಥಾ ಕಾರ್ಯಗಳು ಆ ವರ್ಗದಿಂದ ಆದಾವು ಎಂದು ಭಾವಿಸುವದು ಸುಮ್ಮನೆ. ಇದಕ್ಕಾಗಿ ಜನರ ಮುಖ್ಯಸ್ಥರೇ ಕಾರ್ಯೋದ್ಯುಕ್ತರಾಗಬೇಕಲ್ಲದೆ ಬೇರೆ ಉಪಾಯವಿಲ್ಲ. ಇದಲ್ಲದೆ ಈ ಪ್ರಶ್ನೆಯು ಜಾತಿಗೆ ಸಂಬಂಧಪಟ್ಟದ್ದಲ್ಲ. ಇಲ್ಲವೆ ಆಧುನಿಕ ಸುಧಾರಕರ ಸಮಾಜಕ್ಕೆ ಸಂಬಂಧಪಟ್ಟದ್ದೂ ಅಲ್ಲ. ಈ ಎರಡ್ಡು ವಿಧಾನಗಳಲ್ಲಿ ಹಿಂದು ಮೇಳ ಮೊದಲನೇದು ಆಕ್ಷೇಪಕ್ಕೆ ಕಾರಣವಾಗದಿದ್ದರೂ ಎರಡನೇದು ಆಕ್ಷೇಪಾರ್ಹವಾದೀತು ಇದು ನನಗೆ ಗೊತ್ತುಂಟು. ಆದರೂ ಈ ಪ್ರಶ್ನೆಯು ಜಾತಿ, ಸಮಾಜ ಇಂಥ ಸಣ್ಣ ಸಂಗತಿಗಳಿಗೆ ಸೇರಿಸಿಕೊಳ್ಳುವುದಕ್ಕಿಂತ ಇದರ ವ್ಯಾಪ್ತಿಯು ಇನ್ನೂ ದೊಡ್ಡದಾದಷ್ಟು ಹಿತಕರವೆಂದು ನಾನು ನೆನೆಸುತ್ತೇನೆ. ಹಿಂದುಗಳು ಅನಾಥರಾಗುವದೂ, ಮತ್ತು ಆ ಕಾರಣದಿಂದ ಧರ್ಮಾಂತರ ಮಾಡುವದೂ ಈ ಸಂಗತಿಗಳು ಬರೇ ಜಾತಿ ಸಮಾಜಗಳಿಗೆ ಲಜ್ಜಾಸ್ಪದವಲ್ಲ; ಇಡೀ ಧರ್ಮಕ್ಕೇ ಲಜ್ಜಾಸ್ಪದವಾದದ್ದು. ಆದದರಿಂದ ಜಾತಿ, ಸಮಾಜ ಮುಂತಾದ ಸಂಗತಿಗಳನ್ನು ಮನಸ್ಸಿಗೆ ತಾರದೆ ಇಡೀ ಹಿಂದುಜನರು ಈ ಪ್ರಶ್ನೆಯ ಕುರಿತು ಉದ್ಯೋಗ ಮಾಡಬೇಕಾಗಿದೆ. ಈಗ ಜಾತಿಗುರುಗಳು ಸುಧಾರಕರು ಇಲ್ಲವೇ ದೇವಾಲಯಾಧ್ಯಕ್ಷರು ಇಂಥ ಕಾರ್ಯಗಳನ್ನು ಪ್ರಾರಂಭಿಸಿದ್ದಾದರೆ ಅದು ದೇಶಕ್ಕೆ ಅವಶ್ಯವೇ. ಅದು ಬೇಡ ಎಂತ ಯಾರ ತಾತ್ಪರ್ಯವಲ್ಲ. ಇದು ಇಡೀ ಧರ್ಮಬಾಂಧವರ ಕರ್ತವ್ಯವೆಂದು ನನ್ನ ನಮ್ರ ಅಭಿಪ್ರಾಯ. ಆದುದರಿಂದ ಹಿಂದು ಧರ್ಮಬಾಂಧವರೆಲ್ಲರು ಏಕಭಾವನೆಯಿಂದ ತಮ್ಮೊಳಗಿನ ಅನಾಥೋದ್ಧಾರದ ಪವಿತ್ರ ಕರ್ತವ್ಯವನ್ನು ಮಾಡಲು ಉದ್ಯುಕ್ತರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಮಾಧವಾತ್ಮಜ.

ಯುದ್ಧ ಸಮಾಚಾರ.

ತಾ. ೯ನೇ ಫೆಬ್ರುವರಿ.

[illegible]೨೦೦ ಟನ್ ಭರಾವಣಿಯ ಬ್ರಿಟಿಷರ "ಪೀಲ್ ಕೆಸ್ಲ್" [illegible]ಬ ಹಡಗಕ್ಕೆ ಡೋವರ್ ಜಲಸಂಧಿನಲ್ಲಿ ಬೆಂಕಿ ಹಾಗಿರುವದು. [illegible]ಣ ನಷ್ಟವಾಗಲಿಲ್ಲ.

ಜರ್ಮನರಿಂದ ಮುಳುಗಿಸಲ್ಪಟ್ಟ "ಲುಸಿಟಾನಿಯ" ಹಡಗದ [illegible]ಷಯದಲ್ಲಿ ಅಮೇರಿಕಾದವರಿಗೂ ಜರ್ಮನರಿಗೂ ಇದ್ದ ವಾಗ್ವಾ[illegible]ವು ತಕ್ಕ ರೀತಿಯಿಂದ ಮುಗಿದಿರುವದೆಂಬ ವಾರ್ತೆ ಬಂದದೆ.

ಫ್ರಾನ್ಸ್ ರಣರಂಗದಲ್ಲಿ ನಮ್ಮವರ ಫಿರಂಗಿಗಳು ಶತ್ರುಗಳ [illegible]ಂದಕಗಳ ಮೇಲೆ ಗುಂಡು ಹಾರಿಸಿ ವಿಶೇಷ ಹಾನಿ ಮಾಡಿರುವದು. [illegible]ರ್ರಾಸಿನ ಬಳಿಯ ಜರ್ಮನರ ನೆಲೆಯಲ್ಲಿ ನಮ್ಮವರ ಫಿರಂಗಿ [illegible]ಂಡುಗಳು ಹೋಗಿ ಬಿದ್ದುದರಿಂದ ಒಂದು ದೊಡ್ಡ ಸಿಡಿತ ಉಂಟಾ[illegible]ರುವದು.

"ಕೆರೋಲಿನ್" ಎಂಬ ಬ್ರಿಟಿಷರ ಯುದ್ಧನಾವೆಯನ್ನು ಜರ್ಮ[illegible]ರ ಜೆಪಲಿನ್ ನಾವೆಯು ಮುಳುಗಿಸಿರುವದೆಂಬದಾಗಿ ಜರ್ಮನರು [illegible]ಟ್ಟಿಸಿದ ವಾರ್ತೆಯು ಸುಳ್ಳೆಂಬದಾಗಿ ಬ್ರಿಟಿಷ ಸರಕಾರದವರು [illegible]ಕಟಿಸಿರುತ್ತಾರೆ.

ಬೆಲ್ಜಿಯಮ್ ರಾಜ್ಯವನ್ನು ಯಥಾಸ್ಥಾಪನೆ ಮಾಡುವ [illegible]ದ್ದೇಶದಿಂದ ಸಂಧಾನ ಪ್ರಸ್ತಾಪಗಳನ್ನು ಮಾಡುವದು ಹಿತವೆಂಬ [illegible]ಾತನ್ನು ಪೋಪ ಜಗದ್ಗುರುಗಳು ಮಿತ್ರ ರಾಜ್ಯಗಳ ಕೂಡ ಎತ್ತಿ[illegible]ರು. ಜರ್ಮನರು ಪೂರ್ಣವಾಗಿ ಸೋತುಹೋಗುವ ವರೆಗೆ [illegible]ಂಧಾನ ಪ್ರಸ್ತಾಪ ಮಾಡಲಾರೆವೆಂಬದಾಗಿ ಮಿತ್ರ ರಾಜ್ಯಗಳವರು [illegible]ೋಪರಿಗೆ ತಿಳಿಸಿರುತ್ತಾರೆ.

ರಿಗ್ಗಾ ರಣರಂಗದಲ್ಲಿ ಕಠಿಣ ತೋಪು ಕಾಳಗವು ನಡೆಯು[illegible]ದೆ. ರುಶ್ಯನರು ಶತ್ರುಗಳ ಕೆಲವು ಸೇನಾಂಗಗಳನ್ನು ಹಿಂದ[illegible]ಟ್ಟಿರುವರು. ಬೊಯಾನ್ನದ ಉತ್ತರದಲ್ಲಿ ರುಶ್ಯನರು ಒಂದು [illegible]ಡಿಮದ್ದಿನ ಗಣಿಯನ್ನು ಹಾರಿಸಿದುದರಿಂದ ಶತ್ರುಗಳ ಕಂದಕಗಳು [illegible]ಡೆದು ಹೋಗಿರುವವು. ಶತ್ರುಗಳ ಕಂದಕಗಳಲ್ಲಿ ಶತ್ರು ಸೇನ[illegible] ನೂರಾರು ಹೆಣಗಳು ಬಿದ್ದಿದ್ದವು.

ಜರ್ಮನ ಕೈಸರರ ಕುಮಾರರಾದ ಪ್ರಿನ್ಸ್ ಒಸ್ಕರಿಗೆ ತಲೆ [illegible]ತ್ತು ತೊಡೆಯಲ್ಲಿ ಗುಂಡುಗಳು ತಾಗಿ ಗಾಯವಾಗಿರುವದೆಂದು [illegible]ರ್ಲಿನಿನಲ್ಲಿ ಪ್ರಕಟವಾಗಿದೆ.

ಡುರಾಜ್ಜೊದಲ್ಲಿ ಸರ್ವಿಯಾನರು ಆಸ್ಟ್ರಿಯನರನ್ನು ಹಿಂದ[illegible]ಟ್ಟಿರುವರು.

ತಾ. ೧೦ನೇ ಫೆಬ್ರುವರಿ.

ಕಪ್ಪು ಸಮುದ್ರದಲ್ಲಿದ್ದ ರುಶ್ಯನರ ಯುದ್ಧ ಹಡಗಗಳು ಅನ ಟೋಲಿಯನ್ ಕರಾವಳಿಯ ತುರ್ಕೀ ನೆಲೆಗಳ ಮೇಲೆ ತೋಪು ಹಾರಿಸಿರುತ್ತವೆ. ತುರ್ಕರ ಜಲಾಂತರ್ಗಾಮಿ ನಾವೆಗಳು ರುಶ್ಯನರ ಈ ಯುದ್ಧನಾವೆಗಳ ಮೇಲ್ಬಾಯಿದರೂ ಏನೊಂದು ಪ್ರಯೋಜನ ವಾಗಲಿಲ್ಲ.

ಫ್ರಾನ್ಸ್ ರಣರಂಗದ ಸೊಮ್ಮೆಯ ದಕ್ಷಿಣದಲ್ಲಿದ್ದ ಶತ್ರುಗಳ ಒಂದು ಅಗ್ಗಾಡಿಯ ಮೇಲೆ ನಮ್ಮವರು ತೋಪು ಹಾರಿಸಿರುವರು. ಅರ್ಗೊನ್ನೆಯಲ್ಲಿ ನಮ್ಮವರು ೪ ಸಿಡಿಮದ್ದಿನ ಗಣಿಗಳನ್ನು ಹಾರಿಸಿ ರುತ್ತಾರೆ.

ಪ್ಯಾರಿಸ್ ನಗರದ ಮೇಲೆ ದಾಳಿಮಾಡಿದ ಜೆಪಲಿನ್ ನಾವೆಯು ಮರ ಮತ್ತು ಮನೆಗಳಿಗೆ ತಾಗಿ ನಾಶವಾಗಿರುವದು. ಅದರ ನಾವಿಕರು ಹತರಾಗಿರಬೇಕೆಂಬದಾಗಿ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜೋರ್ಜ ಸಾರ್ವಭೌಮರವರಿಗೆ ಬ್ರಿಟಿಷ ಪಾರ್ಲಿಮೆಂಟ ಸಭೆಗೆ ಚಿತ್ತೈಸುವ ಅಪೇಕ್ಷೆ ಇದೆ. ಆದರೆ ಗುಣಹೊಂದುತ್ತಿರುವ ಈ ಕಾಲದಲ್ಲಿ ಚಕ್ರವರ್ತಿಯವರು ಪಾರ್ಲಿಮೆಂಟ ಸಭೆಗೆ ಚಿತ್ತೈಸುವದು ಹಿತವಲ್ಲವೆಂಬದಾಗಿ ವೈದ್ಯರು ಹೇಳಿರುವದರಿಂದ ಸಾರ್ವಭೌಮರು ಪಾರ್ಲಿಮೆಂಟ ಸಭೆಗೆ ಚಿತ್ತೈಸುವದಿಲ್ಲ.

ರಿಗ್ಗಾ ದಿಸ್ತ್ರಿಕ್ಟಿನಲ್ಲಿ ಕಠಿಣ ತೋಪುಕಾಳಗವು ನಡೆಯುತ್ತಿರುವದು. ಟಾರ್ನೊಪೋಲಿನ ವಾಯುವ್ಯ ದಿಕ್ಕಿನಲ್ಲಿ ರುಶ್ಯನರಿಗೆ ಜಯವಾಗಿರುವದೆಂಬ [illegible] ಆಸ್ಟ್ರಿಯಾನರು ಒಪ್ಪಿರುವರು.

ಆಸ್ಟ್ರಿಯಾನರು ಅಲ್ಬೇನಿಯದ ಡುರಾಜ್ಜೊ [illegible] ಕಡೆಗೆ ಮುಂದರಿಯುತ್ತಿದ್ದ[illegible] ಫೆಬ್ರುವರಿ [illegible] ಸರ್ವಿಯನರು ಆಸ್ಟ್ರಿಯನರನ್ನು ಹಿಂದಟ್ಟಿ ಅನೇಕರನ್ನು ಹತಮಾಡಿ ನೂರಾರು ಮಂದಿಯನ್ನು ಸೆರೆಹಿಡಿದಿರುವರೆಂಬದಾಗಿ ಸರ್ವಿಯಾ ಸರಕಾರದವರು ಪ್ರಕಟಿಸಿರುತ್ತಾರೆ.

ಫ್ರೆಂಚರ ಬೆಂಬಲಸೇನೆಯೂ ತೋಪುಗಳೂ ಸಲೋನಿಕಕ್ಕೆ ಬಂದಿಳಿದಿರುವವು.

ಬಲ್ಗೇರಿಯನರ ಅರಸರಾದ ಫರ್ಡಿನಾಂಡರು ಕೈಸರರೊಡನೆ ಮಾತಾಡುವರೆ ಜರ್ಮನರ ಮುಖ್ಯ ಠಾಣ್ಯಕ್ಕೆ ಹೋಗಿರುವರು.

ತಾ. ೧೧ನೇ ಫೆಬ್ರುವರಿ.

ಫ್ರಾನ್ಸ್ ರಣರಂಗದಲ್ಲೆಲ್ಲಾ ತೋಪುಕಾಳಗವು ನಡೆಯುತ್ತಿದೆ.

ಜರ್ಮನರ ಪ್ರಶ್ಯನ್ ಸೇನೆಯಲ್ಲಿ ಈ ವರೆಗೆ ೨,೩೭೭,೩೭೮ ಸೈನಿಕರು ನಷ್ಟವಾಗಿರುವರೆಂತ ಅಮ್‌ಸ್ಟರ್‌ಡಮಿನಿಂದ ವಾರ್ತೆ ಬಂದದೆ.

ತಾ. ೯ನೇ ಸಾಯಂಕಾಲ ಜರ್ಮನರ ವಾಯುನಾವೆಗಳು ಬ್ರಿಟಿಷ ಕರಾವಳಿಯ ರಾಮ್ಸ್‌ಗೇಟ್ ಎಂಬಲ್ಲಿ ಕಾಣಿಸಿಕೊಂಡು ರಾಮ್ಸ್‌ಗೇಟಿನ ಸಮೀಪ ೩ ಬೊಂಬುಗಳನ್ನೂ ಬ್ರೋಡ್‌ಸ್ಟೈರ್ಸ್‌ನ ಶಾಲೆಯ ಬಳಿ ನಾಲ್ಕು ಬೊಂಬುಗಳನ್ನೂ ಹಾಕಿರುತ್ತವೆ. ಇದರಿಂದ ೨ ಹೆಂಗಸರಿಗೂ ಒಂದು ಮಗುವಿಗೂ ಜಖಂ ಆಗಿದೆ. ಬ್ರಿಟಿಷರ ವಾಯುನಾವೆಗಳು ಕೂಡಲೆ ಮೇಲೆ ಹಾರಿದ್ದನ್ನು ಶತ್ರುಗಳ ನಾವೆಗಳು ನೋಡಿ ಓಡಿಹೋಗಿರುವವು.

ಬೆಲ್ಜಿಯಮ್ ಅರಸರಾದ ಅಲ್ಬರ್ಟರವರಿಗೆ ಬೆಲ್ಜಿಯಮ್ ದೇಶವನ್ನು ಬಿಟ್ಟುಕೊಡುವೆವೆಂದೂ ಬೆಲ್ಜಿಯಮ್ ದೇಶದ ಪ್ರಾಮುಖ್ಯ ಬಂದರಗಳನ್ನು ಮುಖ್ಯವಾಗಿ ಎಂಟವರ್ಪನ್ನು ಜರ್ಮನರಿಗೆ ಕೊಡಬೇಕೆಂದೂ ಈ ಬಂದರಗಳ ಬದಲಿಗೆ ಪರಿಹಾರದ್ರವ್ಯವನ್ನು ಕೊಡುವೆವೆಂದೂ ಜರ್ಮನರು ಬೆಲ್ಜಿಯಮ್ ಅರಸರನ್ನು ಕೇಳಿಕೊಂಡಿದ್ದರೆಂತಲೂ ಬೆಲ್ಜಿಯಮ್ ಅರಸರು ಈ ಸಂಧಾನ ಪ್ರಸ್ತಾಪವನ್ನು ತಿರಸ್ಕರಿಸಿ ಬಿಟ್ಟಿರುವರೆಂತಲೂ ರೋಮನಗರದಲ್ಲಿ ವಾರ್ತೆ ಇದೆ.

ರುಶ್ಯನರು ಅಸ್ ಸ್ಕೊಯ್ಕ್ ಎಂಬಲ್ಲಿ ನೀಸ್ಟರ್ ನದಿಯನ್ನು ದಾಟಿರುವರು.

ಫ್ರೆಂಚರ ವಾಯುನಾವೆಗಳು ಸ್ಮಿನಾದ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ.

ಕೊರ್ಫೂ ದ್ವೀಪದ ಉತ್ತರದಲ್ಲಿದ್ದ ಫಾನೊ ದ್ವೀಪವನ್ನು ಫ್ರೆಂಚರು ಸ್ವಾಧೀನಮಾಡಿಕೊಂಡಿರುವರು.

ದಕ್ಷಿಣ ರಣರಂಗದ ಇಸನ್ಜೊದಲ್ಲಿ ತೋಪು ಕಾಳಗವು ಅತಿ ಚಟುವಟಿಕೆಯಿಂದ ನಡೆಯುತ್ತಿದೆ.

ತಾ. ೧೨ನೇ ಫೆಬ್ರುವರಿ.

ಆಯುಧಧಾರಣೆಯಾದ ವ್ಯಾಪಾರದ ಹಡಗಗಳನ್ನು ಇದೇ ಬರುವ ಮಾರ್ಚ ತಾ. ೧ರಿಂದ ಯುದ್ಧದ ಹಡಗಗಳೆಂದೇ ಭಾವಿಸಲಾಗುವದೆಂತ ಜರ್ಮನ ಮತ್ತು ಆಸ್ಟ್ರಿಯನರ ಸರಕಾರದವರು ತಟಸ್ಥ ರಾಜ್ಯಗಳಿಗೆ ತಿಳಿಸಿರುವರು.

ನ್ಯೂವಿಲ್ಲೆ-ಲಾವೊಲ್ಲ ರಸ್ತೆಯಲ್ಲಿ ಜರ್ಮನರು ಅಭಿಯೋಗ ಮಾಡಿ ಹಿಮ್ಮೆಟ್ಟಿದರು. ಸೊಮ್ಮೆ ಪ್ರಾಂತ್ಯದಲ್ಲಿ ನಮ್ಮವರು ಜರ್ಮನರ ಸೇನಿಕರಲ್ಲಿ ಕೆಲವರನ್ನು ಸೆರೆಹಿಡಿದಿರುವರು.

ಟೆಹ್‌ಡ್ ಎಂಬಲ್ಲಿದ್ದ ಶತ್ರುಗಳ ಗುಡಿಸಲುಗಳ ಮೇಲೆ ಬ್ರಿಟಿಷರ ವಾಯುನಾವೆಗಳು ಬೊಂಬುಗಳನ್ನು ಬಿಸಾಡಿದ್ದರಿಂದ ಹೆಚ್ಚಿನ ನಷ್ಟವಾಗಿರುವದು.

ತಾ. ೯ರಲ್ಲಿ ಜರ್ಮನರ ವಾಯುನಾವೆಗಳು ಮೊದಲಾಗಿ ಹೆಂಗಸು ಮಕ್ಕಳು ತುಂಬಿದ್ದ ಒಂದು ಟ್ರಾಮ್ ಬಂಡಿಯ ಮೇಲೆ ಬೊಂಬುಗಳನ್ನು ಬಿಸಾಡಿದವು. ಆದರೆ ನಷ್ಟವಾಗಲೀ ಗಾಭರಿಯಾಗಲೀ ಉಂಟಾಗಲಿಲ್ಲ. ೨ನೇ ಸಾರಿ ಈ ವಾಯುನಾವೆಗಳು ದೊಡ್ಡದೊಂದು ಹುಡುಗಿಯರ ಶಾಲೆಯ ಮೇಲೆ ಬೊಂಬುಗಳನ್ನು ಬಿಸಾಡಿದವು. ಶಾಲೆಯ ಕಟ್ಟಡದ ಒಂದಂಶದ ಸೀಲಿಂಗು ಸಣ್ಣ ಮಕ್ಕಳ ತರಗತಿಗೆ ಬಿದ್ದವು. ಒಬ್ಬ ಹುಡುಗಿಗೆ ಕಾಲಿಗೆ ಜಖಂ ಆಯಿತು. ಮೂರು ಬೊಂಬುಗಳು ಶಾಲೆಯ ನೆಲದ ಮೇಲೆ ಬಿದ್ದವು. ಆದರೆ ಹಾನಿಯಾಗಲಿಲ್ಲ. ಈ ವಾಯುನಾವೆಗಳು ಬಿಸಾಡಿದ ಇತರ ಎರಡು ಬೊಂಬುಗಳಿಂದ ಸ್ವಲ್ಪ ಹಾನಿಯಾಗಿರುವದಲ್ಲದೆ ಒಬ್ಬ ಹೆಂಗಸಿಗೆ ಗಾಯವಾಗಿರುವದು.

ರುಶ್ಯನರು ನೀಸ್ಟರ್ ನದಿಯನ್ನು ದಾಟಿರುವದರಿಂದ [illegible] ವಿಷ್ಣನಲ್ಲಿರುವ ಶತ್ರುಗಳ ನೆಲೆಗಳಲ್ಲಿರುವ ಶತ್ರುಗಳ ಸೇನೆಗೆ ಭಯಾಸ್ಪದಕ್ಕೆ ಕಾರಣವಾಗಿದೆ.

ಚೆರ್ನೊವಿಟ್ಸ್ ರುಶ್ಯನರಿಗೆ ವಶವಾದರೆ ರುಮೇನಿಯದವರು ರುಶ್ಯನರ ಪಕ್ಷ ಸೇರುವ ಸಂಭವವಿದೆಂತ ಭಾವಿಸಿ ಜರ್ಮನ ಮತ್ತು ಆಸ್ಟ್ರಿಯನರು ಚೆರ್ನೊವಿಟ್ಸದಲ್ಲಿ ಬಹಳ ನಷ್ಟವಾದರೂ ಆ ಪಟ್ಟಣವನ್ನು ಕಾಪಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿರುವರು ಎಂತ ಸೆರೆಬಿದ್ದ ಜರ್ಮನರು ಹೇಳುವರು.

ರುಶ್ಯಾದ ಜಾರರವರು ರಣರಂಗಕ್ಕೆ ಹೋಗಿರುತ್ತಾರೆ.

ತಾ. ೧೩ನೇ ಫೆಬ್ರುವರಿ.

ಹಿಂದೂಸ್ಥಾನಕ್ಕೆ ಬರುತ್ತಿದ್ದ ಬ್ರಿಟಿಷರ "[illegible] ಎಂಬ ಹಡಗವನ್ನು ಶತ್ರುಗಳ ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು. ಹಡಗದಲ್ಲಿದ್ದ ೭೩ ಆಫೀಸರರೂ ನಾವಿಕರೂ ರಕ್ಷಿಸಲ್ಪಟ್ಟು ಮಾಲ್ಟದಲ್ಲಿ ಇಳಿದಿರುವರು.

ಬೆಲ್ಜಿಯಮಿನ ವೈಪ್ರೆಸ್ ಮೊದಲಾದ ಸ್ಥಳಗಳಲ್ಲಿ ನಮ್ಮವರು ಶತ್ರುಗಳ ಸಿಡಿಮದ್ದಿನ ಗಣೆಗಳನ್ನು ಕಂಡುಹಿಡಿದು ಅವನ್ನು ಹಾರಿಸಿಬಿಡುವ ಕೆಲಸದಲ್ಲಿ ನಿರತರಾಗಿರುವರು. ಸೊಮ್ಮೆಯಲ್ಲಿ ಫ್ರೆಂಚರು ಶತ್ರುಗಳ ಅನೇಕ ಕಂದಕಗಳನ್ನು ಹಿಡಿದಿರುವರು. ಶಾಂಪಾನೆ ಮೊದಲಾದ ಸ್ಥಳಗಳಲ್ಲಿ ಶತ್ರುಗಳು ಮೇಲ್ಬಾಯಿದು ಸೋತುಹೋಗಿರುವರು.

ರಿಗ್ಗಾದಲ್ಲಿ ರುಶ್ಯನರು ಜರ್ಮನರನ್ನು ಅಲ್ಲಲ್ಲಿ ಸೋಲಿಸುತ್ತಲಿದ್ದಾರೆ. ರುಶ್ಯನರ ಟಾರ್ಪೆಡೋ ದೋಣಿಗಳು ತುರ್ಕರ ಕರಾವಳಿಗೆ ತೋಪು ಹಾರಿಸುತ್ತಲಿವೆ.

ಗೆಲೀಸಿಯದಲ್ಲಿ ಘೋರ ಕಾಳಗ ನಡೆಯುತ್ತಿದೆ. ಶತ್ರುಗಳು ಜೀವದ ಮಮತೆ ಇಲ್ಲದೆ ಕಾದಾಡಿ ವಿಶೇಷ ನಷ್ಟಪಟ್ಟು ಕಡೆಗೆ ಟೊಬೊಲ್ ಪ್ರಾಂತದ ಒಂದು ಗುಡ್ಡ ಸ್ಥಳವನ್ನು ಹಿಡಕೊಂಡರು. ಆದರೆ ರುಶ್ಯನರ ಒಂದು ಸೇನಾಂಗವು ಶತ್ರುಗಳ ಮೇಲೆ ಬಿದ್ದು ಅಲ್ಲಿಂದ ಅವರನ್ನು ಹಿಂದಕ್ಕಟ್ಟಿದರು. ಈ ಗುಡ್ಡವನ್ನು ಸ್ವಾಧೀನಮಾಡಿಕೊಳ್ಳಲು ಶತ್ರುಗಳು ಮೂರಾವರ್ತಿ ಪ್ರಯತ್ನಿಸಿ ಹಿಮ್ಮೆಟ್ಟಿದರು.

ಜರ್ಮನರು ರಿಗ್ಗಾಪ್ರಾಂತ್ಯದಲ್ಲಿ ಜಕೋಬಸ್ಟಟ್ ಎಂಬ ಪಟ್ಟಣದ ಮೇಲೆ ಅಭಿಯೋಗಮಾಡಲೆತ್ನಿಸಿದರು. ಆದರೆ ರುಶ್ಯನರು ತಮ್ಮ ಕಂದಕಗಳಿಂದ ಹೊರಬಂದು ಶತ್ರುಗಳನ್ನು ಓಡಿಸಿದರು. ರುಶ್ಯನರು ಗಾಜೊರ್ನೊವ್ಸ ಎಂಬ ಗ್ರಾಮವನ್ನು ಹಿಡಕೊಂಡರು.

ಸಲೋನಿಕದ ಮೇಲೆ ಶತ್ರುಗಳು ನುಗ್ಗಿಬರುವ ಚಿಹ್ನೆಗಳೇನೂ ಈ ವರೆಗೆ ಕಂಡುಬರಲಿಲ್ಲ. ಆದರೆ ಫ್ರೆಂಚರು ವಾರ್ಡರ್ ನದಿಯನ್ನು ದಾಟಿ ನದಿಯ ಬಲದಡವನ್ನು ಬಲಕಾಯಿಸಿಕೊಳ್ಳುತ್ತಲಿರುವರು. ಹೀಗೆ ಫ್ರೆಂಚರು ಸ್ವಭಾವಿಕವಾದ ಭದ್ರಸ್ಥಾನದಲ್ಲಿ ಸೇರಿದಹಾಗೆ ಆಯಿತು ಎಂತ ಫ್ರೆಂಚ ಯುದ್ಧಬಾತ್ಮೀದಾರರು ತಿಳಿಸಿರುವರು.

ಜರ್ಮನರ ಜೆಪಲಿನ್ ಮತ್ತು ೨೦ ವಾಯುನಾವೆಗಳು ಸಲೋನಿಕದ ಮೇಲೆ ಅಭಿಯೋಗ ಮಾಡುವದರಲ್ಲಿದೆಂತ ವಾರ್ತೆ ಇದೆ.

ಅಲ್ಬಾನಿಯದಲ್ಲಿ ಇನ್ನು ೨೪,೦೦೦ ಸರ್ವಿಯ ಸೇನಿಕರಿರುವರೆಂತಲೂ ಇವರು ಬೇಗನೇ ಕೋರ್ಫ್ಯೂ ದ್ವೀಪಕ್ಕೆ ಕಳುಹಿಸಲ್ಪಡುವರೆಂತಲೂ ವಾರ್ತೆ ಇದೆ.

ಪರ್ಶಿಯಾದ ಹೆಮಡಾನಿನಲ್ಲಿ ರುಶ್ಯನರು ಶತ್ರುಗಳ ಒಂದು ದೊಡ್ಡ ಸೇನೆಯನ್ನು ಸೋಲಿಸಿರುವರು.

ತಾ. ೧೪ನೇ ಫೆಬ್ರುವರಿ.

ಬ್ರಿಟಿಷರ "ಎರ್ರಿಸ" ಎಂಬ ಕ್ರೂಜರ್ ನಾವೆಯು ಉತ್ತರ ಸಮುದ್ರದಲ್ಲಿ ಸಿಡಿಮದ್ದಿನ ಗಣಿಗೆ ತಾಗಿ ಒಡೆದು ಹೋಗಿರುವದು. ಸುಮಾರು ೧೮ ಮಂದಿಯು ಹತರಾಗಿರುತ್ತಾರೆ.

ಮೆಡಿಟರೇನಿಯನ್ ಸಮುದ್ರದಲ್ಲಿ "ಎಮಿರಲ್ ಚಾರ್ನರ್" ಎಂಬ ಕ್ರೂಜರ್ ನಾವೆಯನ್ನು ಫೆಬ್ರುವರಿ ತಾ. ೮ರಲ್ಲಿ ಶತ್ರುಗಳ ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು. ಈ ನಾವೆಯ [illegible] ನಾವಿಕರು ಸಿರಿಯದ ಕರಾವಳಿಯಲ್ಲಿ ಒಂದು ದೋಣಿಯಲ್ಲಿ ಕಾಣಿಸಿಕೊಂಡರು. ಆದರೆ ಒಬ್ಬ ಮಾತ್ರ ಜೀವದಲ್ಲಿದ್ದನು.

ಸೊಮ್ಮೆಯ ದಕ್ಷಿಣದಲ್ಲಿ ಫ್ರೆಂಚರು ಜರ್ಮನರ [illegible] ಕಂದಕಗಳನ್ನು ಹಿಡಿದಿರುತ್ತಾರೆ. [illegible] ಫ್ರೆಂಚರ ಫಿರಂಗಿಗಳ [illegible]

ಫ್ರೆಂಚರು ಜರ್ಮನರ ಒಂದು ಸೇನಾಂಗವನ್ನು ಮುತ್ತಿ ಅದನ್ನು ನಿರ್ನಾಮ ಮಾಡಿದರು. ಒಬ್ಬ ಕೆಪ್ಟನನೂ ೭೦ ಸೇನಿಕರೂ ಫ್ರೆಂಚರ ಸೆರೆಬಿದ್ದಿರುವರು ಶತ್ರುಗಳ ಅನೇಕ ಫಿರಂಗಿಗಳು ಫ್ರೆಂಚರ ಕೈಸೇರಿರುತ್ತವೆ. ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುವದು ಅಲ್ಸೇಸಿನಲ್ಲಿ ಕಠಿಣ ತೋಪುಕಾಳಗ ನಡೆಯುತ್ತಿದೆ. ಜರ್ಮನರ ಕಾಲಾಳು ಸೇನಿಕರು ೨೦೦ ಗಜ ಉದ್ದದ ವರೇಗಿನ ಕಂದಕಗಳನ್ನು ಸ್ವಾಧೀನಮಾಡಿಕೊಂಡರು. ಆದರೆ ಫ್ರೆಂಚರು ನುಗ್ಗಿ ಹೋಗಿ ಪುನಃ ಈ ಕಂದಕಗಳನ್ನು ಹಿಂದಕ್ಕೆ ಪಡಕೊಂಡರು

ಸಲೋನಿಕಕ್ಕೆ ಬ್ರಿಟಿಷರ ಬೆಂಬಲ ಸೇನೆಯು ಹೋಗಿ ತಲಪಿರುವದು ಫ್ರೆಂಚರು ಉತ್ತರ ಕಡೆಯಲ್ಲಿ ಮುಂದೆ ಹೋಗಿರುವರು

ಶತ್ರುಗಳ ವಾಯುನಾವೆಗಳು ಮಿಲಾನಿನಲ್ಲಿ ಕಾಣಿಸಿಕೊಂಡವು ಆದರೆ ಇಟಲಿಯನರ ವಾಯುನಾವೆಗಳು ಮೇಲಕ್ಕೆ ಹತ್ತಿದ್ದರಿಂದ ಶತ್ರುಗಳ ವಾಯುನಾವೆಗಳು ಕೆಲವು ಬೊಂಬುಗಳನ್ನು ಹಾಕಿ ಹಿಂದೆ ಹೋದವು ೮ ಮಂದಿ ಹತರಾಗಿರುವರು, ೬೦ ಮಂದಿ ಗಾಯ ಒಡೆದಿರುವರು

ಕೌಕಾಸೆಸ್‌ನಲ್ಲಿ ಹಿಮವು ವಿಸ್ತಾರವಾಗಿ ಬಿದ್ದಿದೆ ಆದರೆ ರುಶ್ಯನರು ಈ ಹಿಮದ ಗಾಳಿಯನ್ನು ಲಕ್ಷ್ಯವಿಡದೆ ಮುಂದರಿದು ಎರ್ಜರಮಿನ ಸಮೀಪದ ಶತ್ರುಗಳ ೮೦೦ ಸೇನಿಕರನ್ನೂ ೭ ಫಿರಂಗಿಗಳನ್ನೂ ಇತರ ಕೊಳ್ಳೆಯನ್ನೂ ಹಿಡಿದಿರುತ್ತಾರೆ ಎರ್ಜರಮಿಗೆ ರುಶ್ಯನರು ಗುಂಡು ಹಾರಿಸುತ್ತಲಿರುವರು ಒಂದು ಕೋಟೆಯಲ್ಲಿ ದೊಡ್ಡ ಸಿಡಿತ ಉಂಟಾಗಿರುವದು ಸಿಡಿತ ಉಂಟಾದ ಎರ್ಜರಮಿನ ಕೋಟೆಯನ್ನು ರುಶ್ಯನರು ಸ್ವಾಧೀನಮಾಡಿಕೊಂಡಿರುವರು ಅನೇಕ ಸೇನಿಕರೂ, ಫಿರಂಗಿಗಳೂ ಮದ್ದುಗುಂಡುಗಳೂ, ರಶ್ಯನರಿಗೆ ಸಿಕ್ಕಿರುತ್ತವೆ

ಉತ್ತರ ಹಿಂದೂಸ್ಥಾನ.

ಬರೋಡೆಯ ಗಾಯಕವಾಡ ಮಹಾರಾಜರವರು ಯುದ್ಧ ಫಂಡಿಗೆ ಯುದ್ಧ ತೀರುವ ವರೆಗೆ ತಿಂಗಳಿಗೆ ೧೫,೦೦೦ ರೂಪಾಯಿಗಳನ್ನು ಕೊಡುತ್ತೇನೆಂಬ ವಾಗ್ದಾನ ಮಾಡಿರುವರು.

ವೈಸರಾಯ ಹಾರ್ಡಿಂಜ ಪ್ರಭುಗಳವರು ಹಿಂದೂಸ್ಥಾನದ ವಿದ್ಯಾಭ್ಯಾಸಾಭಿವೃದ್ಧಿ ಮತ್ತು ಆಡಳಿತೆ ಸಂಬಂಧದಲ್ಲಿ ಕೈಕೊಂಡ ಕಾರ್ಯಗಳನ್ನು ಮಾನ್ಯ ಮಾಡಿ ಪ್ರಭುಗಳವರಿಗೆ ಎಲ್. ಎಲ್ ಡಿ ಡಿಗ್ರಿಯನ್ನು ಕೊಡಿಸಬೇಕೆಂಬ ಸೂಚನೆಯನ್ನು ಸರ್ ಚಂದಾವರಕರರು ಮುಂಬಾಯಿ ಯೂನಿವರ್ಸಿಟಿಯ ಬರುವ ಸೆನೆಟ್ ಸಭೆಯ ಮುಂದೆ ತರಲಿಕ್ಕಿರುವರು

ವೈಸರಾಯ ಹಾರ್ಡಿಂಜ ಪ್ರಭುಗಳವರು ಮಾರ್ಚ ತಾ. ೩೦ರಲ್ಲಿ ದಿಲ್ಲಿಯಿಂದ ಹೊರಟು ತಾ ೧ನೇ ಎಪ್ರಿಲ್ ಶನಿವಾರ ದಿನ ಮುಂಬಾಯಿಗೆ ತಲಪುವರು ಎಪ್ರಿಲ್ ತಾ ೩ನೇ ಸೋಮವಾರ ಬೆಳಿಗ್ಗೆ ಹಿಂದೂಸ್ಥಾನದ ವೈಸರಾಯರಾಗಿ ನೇಮಿಸಲ್ಪಟ್ಟ ಚೆಮ್ಸ್‌ಫರ್ಡ್ ಪ್ರಭುಗಳವರು ಮುಂಬಾಯಿಗೆ ತಲಪುವರು ಅದೇ ಮಧ್ಯಾಹ್ನದ ನಂತರ ಹಾರ್ಡಿಂಜ ಪ್ರಭುಗಳವರು ಹಡಗ ಹತ್ತಿ ಸೀಮೆಗೆ ಹೊರಟು ಹೋಗುವರು ಚೆಮ್ಸ್‌ಫರ್ಡ ಪ್ರಭುಗಳವರು ಒಂದೆರಡು ದಿನ ಮುಂಬಾಯಲ್ಲಿದ್ದು ಡೇರಡೂನಿಗೆ ಹೋಗಿ ಅಲ್ಲಿಂದ ಎಪ್ರಿಲ್ ತಿಂಗಳ ಮಧ್ಯಕಾಲದಲ್ಲಿ ಸಿಮ್ಲಕ್ಕೆ ಹೋಗುವರು

ಮದ್ರಾಸ್ ಹೈಕೋರ್ಟಿನ ಎಡಿಶನಲ್ ಜಡ್ಜರಾಗಿರುವ ಬಹುಮಾನಪಟ್ಟ ಮೆ|| ಜಸ್ಟಿಸ್ ಜೆ. ಬೇಕ್‌ವೆಲ್, ಬಹುಮಾನಪಟ್ಟ ಮೆ|| ಜಸ್ಟಿಸ್ ಸಿ. ಎಫ್. ನೇಪಿಯರ್, ಬಹುಮಾನಪಟ್ಟ ಮೆ|| ಜಸ್ಟಿಸ್ ಸಿ. ವಿ. ಕುಮಾರಸ್ವಾಮಿ ಶಾಸ್ತ್ರಿ, ಮತ್ತು ಬಹುಮಾನಪಟ್ಟ ಮೆ|| ಜಸ್ಟಿಸ್ ಕೆ. ಶ್ರೀನಿವಾಸ ಐಯಂಗಾರರವರ ಕೆಲಸದವಧಿಯು ಇದೇ ೧೯೧೬ನೇ ಇಸವಿ ದಶಂಬರ ತಿಂಗಳ ತಾ. ೩೧ ವರೆಗೆ ಹೆಚ್ಚಿಸೋಣಾಗಿರುವದೆಂತ ಇಂಡಿಯಾ ಸರಕಾರದವರು ಪ್ರಕಟಿಸಿರುತ್ತಾರೆ.

ಪಂಜಾಬು (ಎರೋಪ್ಲೆನ್) ವಾಯುನಾವೆಗಳ ಬಗ್ಯೆ ತೆರೆಯೋಣಾದ ಫಂಡಿನವರು ಪುನಃ ೪೫೦ ಪವನುಗಳನ್ನು ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಿ ಕೊಟ್ಟಿರುವರು ಒಟ್ಟಿಗೆ ಈ ಫಂಡಿನವರು ಈ ವರೆಗೆ ೭೩,೦೦೦ ಪವನುಗಳನ್ನು ಕಳುಹಿಸಿಕೊಟ್ಟರು ಈ ಹಣದಿಂದ ೩೨ ವಾಯುನಾವೆಗಳನ್ನು ಕ್ರಯಕ್ಕೆ ಪಡೆಯಬಹುದು

ಕಚ್ ಮಹಾರಾಜರವರು ರಣರಂಗದಲ್ಲಿರುವ ಭಾರತೀಯ ಕಾಲಾಳು ಸೇನಿಕರ ಖರ್ಚಿನ ಬಗ್ಗೆ ಇನ್ನೊಂದು ವರ್ಷದ ವರೆಗೆ ಅಥವಾ ಯುದ್ಧ ನಿಲ್ಲುವ ವರೆಗೆ ತಿಂಗಳು ಒಂದಕ್ಕೆ ೪೫,೦೦೦ ರೂಪಾಯಿಗಳನ್ನು ಕೊಡುತ್ತೇನೆಂತ ವಾಗ್ದಾನ ಮಾಡಿರುತ್ತಾರೆ

ಸರ್ ಆಲಿ ಇಮಾಮರವರು ಲಂಡನಿನಲ್ಲಿ ಮಿಸ್ ಮೇರಿ ಸೊಪಿಯುನ್ ಎಂಬವರನ್ನು ವಿವಾಹ ಮಾಡಿಕೊಂಡರು

ಹಿಂದಿನ ಸಂಚಿಕೆಯೊಂದರಲ್ಲಿ ತಿಳಿಸಿದಂತೆ ಇದೇ ತಿಂಗಳ ತಾ ೧೦ರಲ್ಲು ಪೂಸದಲ್ಲಿ ವ್ಯವಸಾಯ ಸಂಬಂಧವಾದ ಕನ್ಫರೆನ್ಸ್ ಕೂಡಿ ಬಂದಿರುತ್ತದೆ ಈ ಸಭೆಯಲ್ಲಿ ಪಶು ವೈದ್ಯ ಇಲಾಖೆಯಲ್ಲಿ ಮಾಡಬೇಕಾದ ತಿದ್ದುಪಡಿ ಮೊದಲಾದ ಪ್ರಸ್ತಾಪಗಳು ಚರ್ಚಿಸಲ್ಪಟ್ಟಿರುವವು.

ಮರಾಕ್ಕೋರು ಪೋಲೀಸ್ ಇನ್ಸ್‌ಪೆಕ್ಟರರು ಲಾಹೋರು ಪೋಲಿಸರ ಸಹಾಯವನ್ನು ತೆಗೆದುಕೊಂಡು ಒಂದು ಕಳ್ಳರ ಗುಂಪು ಇರುವ ರಹಸ್ಯ ಸ್ಥಳವನ್ನು ಮುತ್ತಿ ಶೋಧಿಸಿದಲ್ಲಿ ೫೦ ಕಳ್ಳರು ಸಿಕ್ಕಿಬಿದ್ದರು ಅವರಲ್ಲಿ ಚಾಕುಗಳೂ ಕಬ್ಬಿಣದ ಪೆಟ್ಟಿಗೆಗಳನ್ನು ಒಡೆಯುವ ಸಾಹಿತ್ಯಗಳೂ ೭೫೦ ರೂಪಾಯಿಯ ನೋಟುಗಳೂ ಸಿಕ್ಕಿದವು ಅವರ ಬಟ್ಟೆಗಳ ಮೇಲೆ ರಕ್ತದ ಕಲೆಗಳಿದ್ದವು

ಅಲ್ಲಹಾಬಾದಿಗೆ ಸೇರಿದ ಗೋರಕಪುರದಲ್ಲಿ ವ್ಯವಹರಿಸುತ್ತಿದ್ದ ಹೈಕೋರ್ಟು ವಕೀಲ ರಾಯಿಜ್ಯೈವ ಪ್ರಸಾದ ಎಂಬವರು ತನ್ನ ಒಬ್ಬ ಕಕ್ಷಿಗಾರಳ ಪರವಾಗಿ ಕೋರ್ಟಿನಿಂದ ತೆಗೆದುಕೊಂಡ ೭೦೦ ರೂಪಾಯಿಯನ್ನು ಕಕ್ಷಿಗಾರಳಿಗೆ ಕೊಡಲಿಲ್ಲವೆಂಬ ಮೊಕದಮೆ ತನಕಿಯಾಗಿ ಸದರಿ ವಕೀಲನು ಮುಂದಕ್ಕೆ ವ್ಯವಹರಿಸಕೂಡದೆಂಬದಾಗಿ ಅಲ್ಲಹಾಬಾದ್ ಹೈಕೋರ್ಟಿನವರು ಹುಕುಂ ಮಾಡಿರುತ್ತಾರೆ

ಅದೇ ಸ್ಥಳದ ಜಗದಮ್ಮ ಶಹಾರ್ ಎಂಬ ವಕೀಲನು ಮತ್ತು ಅವನ ಕ್ಲಾರ್ಕನು ಕೂಡಿ ೮೦೦ ರೂಪಾಯಿಯ ಸಂಬಂಧ ಕಳ್ಳ ದಸ್ತೈತು ಮಾಡಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿದ್ದರು ಈ ಮೊಕದಮೆಯಲ್ಲಿ ವಕೀಲನಿಗೆ ೬ ವರ್ಷಗಳ ಸಜಾ ವಿಧಿಸೋಣಾಗಿರುವದು.

ಪಂಜಾಬಿನ ಲೆಪ್ಟನೆಂಟ ಗವರ್ನರರವರು ಜಿಲ್ಹಾಮ್ ಡಿಸ್ಟ್ರಿಕ್ಟಿನಲ್ಲಿ ದರ್ಬಾರು ನಡಿಸಿ ಕಳೆದ ೩|| ವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ನಡೆದ ತಕ್ಸೀರುಗಳ ಸಂಖ್ಯೆಯು ಸೇಕಡಾ ೫೦ರಂತೆ ಕಡಿಮೆಯಾಗಿರುವದು ಸಂತೋಷಕರವೆಂತಲೂ ಸೇನೆಗೆ ಹಿಂದೂಸ್ಥಾನದ ಇತರ ಎಲ್ಲಾ ಪ್ರಾಂತ್ಯಗಳಿಗಿಂತ ಈ ಜಿಲ್ಲೆಯ ಜನರು ಹೆಚ್ಚಾಗಿ ಸೇರಿರುವರೆಂದೂ ಹೇಳಿದರು. ಯುದ್ಧ ಪ್ರಾರಂಭವಾದಂದಿನಿಂದ ಈ ವರೆಗೆ ಈ ಜಿಲ್ಲೆಯಲ್ಲಿ ೬೦೯೦ ಮಂದಿ ಸೇನೆಗೆ ಸೇರಿಕೊಂಡಿರುವರು. ಭಾರತೀಯ ಸೇನಿಕರಲ್ಲಿ ವಿಕ್ಟೋರಿಯ ಕ್ರೋಸ್ ಎಂಬ ಬಿರುದು ಪ್ರಥಮ ಸಾರಿ ಸಿಕ್ಕಿದ್ದು ಈ ಜಿಲ್ಲೆಯವರಿಗೆನೇ ಎಂಬದಾಗಿ ಲೆಪ್ಟನೆಂಟ್ ಗವರ್ನರರು ಹೇಳಿ ಆ ಜಿಲ್ಲೆಯ ಜನರನ್ನು ಪ್ರೋತ್ಸಾಹಗೊಳಿಸಿರುವರು.

ಬೆನಾರಸಿನ ರಾಜದ್ರೋಹ ಪಿತೂರಿ ಮೊಕದಮೆಯು ತನಕಿ ನಡೆದು ಈಗ ತಾನೇ ಸ್ಪೆಶ್ಯಲ್ ಕಮಿಷನರರಿಂದ ತೀರ್ಮಾನವು ಕೊಡೋಣಾಗಿರುವದು. ಈ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ೧೫ ಮಂದಿಯಲ್ಲಿ ೪ ಮಂದಿಗೆ ಬಿಡುಗಡೆ ಆಗಿರುತ್ತದೆ. ಈ ಪಿತೂರಿಯ ಮುಂದಾಳಾದ ಬ್ರಿಜೇಂದ್ರನಾಥನಿಗೆ ಜೀವಾಂತ ಶಿಕ್ಷೆಯೂ ಉಳಿದವರಿಗೆ ೩ ವರ್ಷದಿಂದ ೭ ವರ್ಷಗಳ ಸಜೆಯೂ ವಿಧಿಸೋಣಾಗಿರುವದು

ದಕ್ಷಿಣ ಹಿಂದೂಸ್ಥಾನ.

ಬಾಸೆಲ್ ಮಿಶ್ಯನ್, ಲಿಪ್‌ಜಿಗ್ ಎವಂಜಲಿಕಲ್ ಲುಥರನ್ ಮಿಶ್ಯನ್, ಸೆಲ್ಸ್‌ವಿಗ್–ಹೊಲಿಸ್ಟೆನ್ ಎವಂಜಲಿಕಲ್ ಲುಥರನ್ ಮಿಶ್ಯನ್ ಮತ್ತು ಹೆರ್ಮನ್ಸ್‌ಬರ್ಗ ಎವಂಜಲಿಕಲ್ ಲುಥರನ್ ಮಿಶ್ಯನ್‌ಗಳ ಆಡಳಿತೆಯೊಳಗಿನ ಶಾಲೆಗಳಲ್ಲಿ ಸರಕಾರ ಮತ್ತು ಲೋಕಲ್ ಬೋರ್ಡುಗಳ ಆಡಳಿತೆಗೆ ಸೇರಿಸಲ್ಪಟ್ಟ ಶಾಲೆಗಳ ಹೊರತು ಉಳಿದ ಶಾಲೆಗಳ ರಿಕೊಗ್ನಿಶನ್ ಇದೇ ಬರುವ ಮಾರ್ಚ ತಾ. ೩೧ರಿಂದ ಹಿಂದೆಗೆಯೋಣಾಗುವವು ಎಂತ ಪ್ರಕಟವಾಗಿದೆ.

ಕಥ್ಯಾವಾರ್‌ಗೆ ಸೇರಿದ ಪಾಲಿಟಾನ ಸ್ಟೇಟಿನ ರಕ್ಕರಲ್ಲಿ ಕೆಲವರು ಮದ್ರಾಸಿಗೆ ಬಂದು ಅಲ್ಲಿಯ ಜನರನ್ನು ಮೋಸಗೊಳಿಸಿದ ಬಂದು ಮೊಕದಮೆಯು ಈಗ ತಾನೇ ಮದ್ರಾಸಿನ ಪ್ರೆಸಿಡೆನ್ಸಿ ಕೋರ್ಟಿನಲ್ಲಿ ತನಕಿಯಾಗುತ್ತಿರುವದು ಈ ರಕ್ಕರ ಪಂಗಡದಲ್ಲಿ ಒಟ್ಟಿಗೆ ೭ ಜನರು ಇದ್ದರು,-ಇಬ್ಬರು ಸಹೋದರರು, ಅವರ ಸಹೋದರಿಯರಿಬ್ಬರು, ಆ ಸಹೋದರರ ಪತ್ನಿಯರಿಬ್ಬರು, ಮತ್ತು ಸಹೋದರಿಯ ಗಂಡನೊಬ್ಬನು. ಹೀಗೆ ಏಳು ಜನರು ಇದೇ ಜನವರಿ ತಿಂಗಳಾರಂಭದಲ್ಲಿ ಮದ್ರಾಸಿಗೆ ಬಂದು ತಾವು ರಾಮೇಶ್ವರದಿಂದ ಬಂದ ಯಾತ್ರಿಕರು, ಕಾಶೀ, ಜಗನ್ನಾಥ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಲಿಕ್ಕಿದ್ದೇವೆಂದು ಹೇಳುತ್ತಿದ್ದರು. ಈ ಪೈಕಿ ಹೆಂಗಸರು ಚಿನ್ನದ ಮಣಿಗಳನ್ನು ಮಾರಾಟ ಮಾಡುವರೆ ಮನೆ ಮನೆಗೆ ಕೊಂಡು ಹೋಗಿ ತಮ್ಮ ಪ್ರಯಾಣದ ಖರ್ಚಿನ ಬಗ್ಗೆ ಅವುಗಳನ್ನು ಮಾರುತ್ತೇವೆಂಬದಾಗಿ ಹೇಳಿ ನಿಜವಾದ ಚಿನ್ನದ ಮಣಿಗಳನ್ನು ಗಿರಾಕಿಗಳಿಗೆ ತೋರಿಸಿ, ಅದರ ಪರೀಕ್ಷೆ ಆದನಂತರ ಅವುಗಳೊಡನೆ ಚಿನ್ನದಂತೆಯೇ ತೋರುವ ಇನ್ನು ಕೆಲವು ಮಣಿಗಳನ್ನು ಚೀಲದಿಂದ ತೆಗೆದು ಮಾರುತ್ತಿದ್ದರು. ಪೋಲಿಸಿನವರಿಗೆ ಈ ಪಂಗಡದವರ ವರ್ತಮಾನ ಸಿಗುತ್ತಲೇ ಅನುಮಾನಪಟ್ಟು ಈ ಹೆಂಗಸರ ವರ್ತನವನ್ನು ಗುಟ್ಟಿನಿಂದ ಕಾಯುತ್ತಿದ್ದರು. ಒಂದು ದಿನ ಒಬ್ಬ ಹೆಂಗಸು ಇಂಥಾ ಮಣಿಗಳನ್ನು ಮಾರುತ್ತಿರುವಾಗ ಸಬ್ ಇನ್ಸ್‌ಪೆಕ್ಟರ್ ದೊರೆಸಾಮಿ ನಾಯುಡುರವರು ಅವಳನ್ನು ಹಿಡಿದರು. ಆದರೆ

ಅವಳನ್ನು ಲಾಕಪ್ಪಿನಲ್ಲಿಟ್ಟರೆ ಇತರರನ್ನು ಸದ್ಯದಲ್ಲೇ ಹಿಡಿಯುವದಕ್ಕೆ ಅಸಾಧ್ಯವಾದೀತೆಂಬದಾಗಿ ಭಾವಿಸಿ ಅವಳನ್ನು ಬಿಟ್ಟು ಬಿಟ್ಟರು. ಜನವರಿ ತಾ ೨೧ರಲ್ಲು ಈ ಪಂಗಡದ ೭ ಜ್ಞಂದಿಯನ್ನೂ ಕೈದುಮಾಡಿದ್ದಲ್ಲಿ ಗುಟ್ಟು ಹೊರಬಿತ್ತು. ಒಬ್ಬ ಸಾಹುಕಾರನು ೫೫೦ ರೂಪಾಯಿಯ ಮಣಿಗಳನ್ನೂ, ಇನ್ನೊಬ್ಬನು ೬೫ ರೂಪಾಯಿಯ ಮಣಿಗಳನ್ನೂ, ಒಬ್ಬನು ೪೦೦ ರೂಪಾಯಿಯ ಮಣಿಗಳನ್ನೂ ಕೊಂಡುಕೊಂಡು ಈ ಹೆಂಗಸರಿಂದ ಮೋಸಹೋದ ಫಿರ್ಯಾದಿಗಳು ಪೋಲೀಸಿನವರ ಮುಂದೆ ಬಂದವು. ಪೋಲೀಸಿನವರ ವಿಚಾರಣೆಯಿಂದ ಈ ಪಂಗಡದವರು ಮದ್ರಾಸಿನಿಂದ ೧೫೦೦ ರೂಪಾಯಿಗಳನ್ನು ಪಾಲಿಟಾನಕ್ಕೆ ಮನಿಆರ್ಡರು ಮಾಡಿ ಕಳುಹಿಸಿದ್ದರೆಂಬದಾಗಿ ತಿಳಿಯಬಂತಲ್ಲದೆ ಈ ಪಂಗಡದವರೊಡನೆ ಹಿತ್ತಾಳೆಯ ಮಣಿಗಳೂ ಹಿತ್ತಾಳೆಯ ಆಭರಣಗಳೂ ಸಿಕ್ಕಿದವು. ಈ ಸಂಬಂಧ ಹೆಚ್ಚಿನ ಸಂಗತಿಗಳನ್ನು ತಿಳಕೊಳ್ಳುವ ಉದ್ದೇಶದಿಂದ ಇನ್ಸ್‌ಪೆಕ್ಟರ್ ಕಾಲಿಮುಲ್ಲರವರು ಕಾಥ್ಯಾವಾರಿಗೆ ಹೋದಲ್ಲಿ ಈ ಅಸಾಮಿಗಳಲ್ಲಿ ಕೆಲವರು ಡಿಲ್ಲಿ, ಪಾಟ್ನ, ಕಲ್ಕತ್ತಾ, ರಂಗಪುರ, ಮುಂಬಾಯಿ ಮೊದಲಾದ ಸ್ಥಳಗಳಲ್ಲಿ ಜನರನ್ನು ಹೀಗೆ ಮೋಸಗೊಳಿಸಿದ್ದ ಹಳೆ ಅಪರಾಧಿಗಳೆಂದೂ ಗೊತ್ತಾಯಿತು. ಈ ಪಂಗಡದವರ ನಾಲ್ಕು ಸಹೋದರ ಸಹೋದರಿಯರ ತಂದೆಯ ಮನೆಯನ್ನು ಪಾಲಿಟಾನದಲ್ಲಿ ಜಪ್ತಿಮಾಡಿದ್ದಲ್ಲಿ ಮದ್ರಾಸಿನಿಂದ ಕಳುಹಿಸಿದ ೧೫೦೦ ರೂಪಾಯಿಗಳೂ, ತಂದೆಗೆ ಮದ್ರಾಸಿನಿಂದ ಈ ಸಂಬಂಧ ಬರೆದ ಪತ್ರಗಳೂ ಸಿಕ್ಕಿರುತ್ತವೆ. ಮೊಕದಮೆಯು ತನಕಿಯಾಗುತ್ತಿದೆ.

ಮಾನ್ಯ ಗಂಧಿಯವರು ಇದೇ ೧೪ರಲ್ಲು ಮದ್ರಾಸಿಗೆ ಚಿತ್ತೈಸಿ ಮದ್ರಾಸ್ ಜಿ. ಏ. ನಟೇಸನವರ ಬಂಗ್ಲೆಯಲ್ಲಿ ಉಳಕೊಂಡಿರುವರು. ಮಾನ್ಯ ಗಂಧಿಯವರು ಈ ದಿನ ಮಿಶ್ಶನೆರಿ ಕನ್ಫರೆನ್ಸಿನಲ್ಲಿ "ಸ್ವದೇಶಿ" ಎಂಬ ಪ್ರಸ್ತಾಪದ ಮೇಲೆ ಭಾಷಣಮಾಡಿರುವರು. ಮಾನ್ಯ ಗಂಧಿಯವರು ತಾ ೧೭ರ ವರೆಗೆ ಮದ್ರಾಸಿನಲ್ಲಿದ್ದರು.

ಶಾಲೆಗಳ ರಿಟಾಯರ್ಡ್ ಇನ್ಸ್‌ಪೆಕ್ಟರರಾಗಿದ್ದ ರಾವ್ ಬಹದ್ದೂರ್ ಸಿ ನಾಗೋಜಿರಾಯರು ತಾ ೧೩ರಲ್ಲು ಕೊಯಮುತ್ತೂರಲ್ಲಿ ಕಾಲವಾಧರೆಂತ ತಿಳಿಸಲು ವಿಷಾದಪಡಬೇಕಾಗಿದೆ. ಮೃತರು ವಿದ್ಯಾನಿಪುಣರಾಗಿದ್ದು ಕೆಲವು ಕಾಲ ಕುಂಬಕೋಣದ ಕಾಲೇಜಿಯ ಆಕ್ಟಿಂಗ್ ಪ್ರಿನ್ಸಿಪಾಲರಾಗಿದ್ದರು. ಸರ್ ಆರ್ಥರ್ ಲೋಲೇಯವರು ಮದ್ರಾಸ್ ಗವರ್ನರಾಗಿರುವ ಕಾಲದಲ್ಲಿ ಮದ್ರಾಸ್ ಯುನಿವರ್ಸಿಟಿಯ ಕನ್‌ವೋಕೇಶನ್ ಭಾಷಣವನ್ನು ಸಹಾ ಇವರೇ ಮಾಡಿದ್ದರು. ಮೃತರು ಸರ್ವರ ಪ್ರೀತಿಮನ್ನಣೆಗೆ ಪಾತ್ರರಾಗಿದ್ದರು. ಪ್ರಜಾ ಅಭಿವೃದ್ಧಿಗೆ ಸಹಕಾರಿಗಳಾಗಿರುವ ಸಂಘಗಳಲ್ಲಿ ಇವರು ಕಡೇಕಾಲದ ವರೆಗೆ ಪ್ರಾಮುಖ್ಯ ಪಾಲನ್ನು ತಕ್ಕೊಂಡಿದ್ದರು.

ಮದ್ರಾಸಿನಲ್ಲಿ ಮುನಿಸ್ವಾಮಿ ಎಂಬ ಹಳೇ ಅಪರಾಧಿಯು ಆಭರಣಗಳನ್ನು ಕಳವುಮಾಡುವ ಉದ್ದೇಶದಿಂದ ೧೦ ವರ್ಷದ ಮಗುವನ್ನು ಕೊಲೆಮಾಡಿದನೆಂದು ತಿಳಿಸಿತ್ತಷ್ಟೆ. ಮುನಿಸ್ವಾಮಿಯು ೧೮೭೩ನೇ ಇಸವಿಯಿಂದ ಕಳವಿನ ವೃತ್ತಿಯನ್ನು ಪ್ರಾರಂಭಿಸಿ ಕಡೆಯ ಸಾರಿ ಜೀವಾಂತ ಭಂಕೋಲೆ ಶಿಕ್ಷೆಯನ್ನು ಹೊಂದಿದ್ದನು. ಆದರೆ ಈಚೆಗೆ ಬಿಡುಗಡೆ ಹೊಂದಿ ಪುನಃ ಈ ಕೃತ್ಯವನ್ನು ನಡಿಸಿದ್ದರಿಂದ ಮದ್ರಾಸ್ ಹೈಕೋರ್ಟಿನವರು ಅಪಾದಿತನಿಗೆ ಪುನಃ ಜೀವಾಂತ ಬಂಕೋಲೆ ಶಿಕ್ಷೆಯನ್ನು ವಿಧಿಸಿದರು.

ದಕ್ಷಿಣ ಕನ್ನಡ.

ನೋಟೀಸು.

ನಾನು ಮುಂಬಾಯಿಂದ ಹಡಗದಲ್ಲಿ ಬಂದು 12ನೇ ಶನಿವಾರ ಮಂಗಳೂರ ಬಂದರದಲ್ಲಿ ಇಳಿಯುವಾಗ ಬಂದರದಲ್ಲಿ ನನ್ನ ಬಾಬ್ತು ರಿಕಾರ್ಡ್ ವಗೈರೆ ಇದ್ದ ಕೆಂಪು ವರ್ಣದ ಮೂರು ಯಾರ್ಡ್ ಉದ್ದದ ಒಂದು "ಟ್ರಂಕ್" ಪೆಟ್ಟಿಗೆಯು ಕಾಣೆಯಾಗಿರುವದು. ಈ ಪೆಟ್ಟಿಗೆಯನ್ನು ಸಾಬೀತಿನಿಂದ ತಂದುಕೊಟ್ಟವರಿಗೆ ಯಾ ಪೆಟ್ಟಿಗೆಯು ಇರುವ ಸ್ಥಳವನ್ನು ತೋರಿಸಿ ಕಂಡು ಹಿಡಿದು ಕೊಟ್ಟವರಿಗೆ ರೂ 5—0—0 ಇನಾಂ ಕೊಡೋಣಾಗುವದು.

ವಿಳಾಸ:—ಕೆ. ನೀಲಯ್ಯ ಸೆಟ್ಟಿ
C/o ಸ್ವದೇಶಾಭಿಮಾನಿ ಆಪೀಸು,
ಮಂಗಳೂರು.

ಹೊಸದುರ್ಗ

ಹೊಸದಾಗಿ ಕಟ್ಟಿಸಿದ ಡಿಪ್ಯುಟಿ ತಹಸೀಲದಾರರವರ ಕಚೇರಿಯ ಕೆಲಸ ಅಂತ್ಯವಾಗಿಯದೆ. ಬೇಗನೇ ಅದನ್ನು ಸರಕಾರಕ್ಕೆ ಬಿಟ್ಟುಕೊಡುತ್ತಾರಾಗಿಯೂ ಏಪ್ರಿಲ್ ತಿಂಗಳ ಒಳಗೆ ಅದನ್ನು ಪ್ರವೇಶಿಸ ತ್ತಾರೆಂತಲೂ ತಿಳಿಯುತ್ತೇವೆ.

ಪುತ್ತೂರು:—ಸ್ವಂತ ಉಪಯೋಗದ ವ ಸಾಗುವಳಿ ಬಗ್ಗೆ ರೆವಿನ್ಯು ಕಾಡಿನಿಂದ ಕಟ್ಟಿಗೆ ಕಡದು ತರುವರೆ ಪರ್ಮಿಟು ಅಪೇಕ್ಷಿಸಿ ಇಲ್ಲಿಯ ನಿವಾಸಿಕರು ರೆವಿನ್ಯು ಡಿವಿಜನಲ್ ಆಫೀಸರವರಿಗೂ ತಾಲೂಕು ಖಾವಂದರವರಿಗೂ ಒರಕೊಂಡ ಅರ್ಜಿಗೆ ಸ್ವಂತ ಗೃಹಕೃತ್ಯದ ವ ಸಾಗುವಳಿ ಉಪಯೋಗದ ಬಗ್ಗೆ ರೆವಿನ್ಯ ಕಾಡುಗಳಿಂದ ಒಂದು ಸರ್ತಿಗೆ ಒಂದು ಗಾಡಿ ಕಡಿಯಬಹುದಾಗಿ ಡಿಸ್ಟ್ರಿಕ್ಟ ಫೋರೆಸ್ಟ ಆಫೀಸರವರ ಹುಕುಂ ತಪ್ಪಿರುವದಾಗಿ ತಿಳಿದು ಬಂದದೆ.

ಮಂಗಳೂರು.

ಕುಂದಾಪುರ ಡಿವಿಜನಲ್ ಆಫೀಸಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿರುವ ಮ. ರಾ ಡಿ ವೆಂಕಟರಾಯರು ೬ ತಿಂಗಳ ರಜೆ ತಕ್ಕೊಂಡಿರುವದರಿಂದ ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿರುವ ಮ|| ರಾ|| ಅನಂತಯ್ಯನವರು ಕುಂದಾಪುರಕ್ಕೂ ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕರಾಗಿರುವ ಮ|| ರಾ|| ಪಿ ಆನಂದರಾಯರು ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ನೇಮಿಸಲ್ಪಟ್ಟಿರುವರು.

ಇಲ್ಲಿಯ ಡ್ಯುಪಿಟಿ ಪೋಲಿಸ್ ಸುಪರಿಂಟೆಂಡೆಂಟರಾಗಿರುವ ಮ|| ರಾ|| ಗೋವಿಂದನ್ನಾಯರರಿಗೆ ದಕ್ಷಿಣ ಮಲಬಾರಿಗೆ ವರ್ಗವಾಗಿದೆ.

ಮ|| ರಾ|| ವಿ ರಾಮಚಂದ್ರ ಐಯ್ಯರರು ಇಲ್ಲಿಯ ಡ್ಯುಪಿಟಿ ಪೋಲಿಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು.

ಹಾಕಿ ಚೆಂಡಾಟದ ಪಂದ್ಯದಲ್ಲಿ ಸೈಂಟ್ ಅಲೋಸಿಯಸ್ ಕಾಲೇಜಿನವರು ಗೆದ್ದು ಬಹುಮಾನದ ಕಪ್ಪು ಪಡಕೊಂಡಿರುವರು.

ರಾಮಭಂಡಾರಿಗಳನ್ನು ಕೊಂದರೆಂಬದಾಗಿ ಅಪಾದಿಸಲ್ಪಟ್ಟ ಸಾಯಿರಿಬ್ಯಾರಿ, ಅಹಮ್ಮದ್, ಹುಸೇನಬ್ಬ—ಇವರ ಮೇಲಿನ ಮೊಕದಮೆಯು ಇಲ್ಲಿಯ ಟೌನ್ ಸಬ್‌ಮೇಜಿಸ್ಟ್ರೇಟರ ಕೋರ್ಟಿನಲ್ಲಿ ತನಕಿ ನಡೆದು ತಾ. ೧೪ನೇ ಸೋಮವಾರ ಟೌನ್ ಸಬ್ ಮೇಜಿಸ್ಟ್ರೇಟರು ಅಪಾದಿತರೆಲ್ಲರನ್ನು ಇ ಪಿ ಕೋಡಿನ ೩೦೨ ೩೯೭ನೇ ಪ್ರಕರಣದ ಮೇಲೆ ಸೆಶ್ಶನ್ಸಿಗೆ ಕಮಿಟ್ ಮಾಡಿರುವರು. ಮಾರ್ಚಿ ತಿಂಗಳ ಪ್ರಥಮ ವಾರದಲ್ಲಿ ಸೆಶ್ಶನ್ಸ್ ಕೋರ್ಟಿನಲ್ಲಿ ಈ ಮೊಕದಮೆಯು ವಿಚಾರಣೆಯಾಗುವದೆಂತ ತಿಳಿಯುತ್ತೇವೆ.

ಕೊಯಮುತ್ತೂರ ಸರ್ಕಲಿನ ಕೊಒಪರೇಟಿವ್ ಕನ್‌ಫರೆನ್ಸ್ ಬರುವ ಮಾರ್ಚಿ ತಿಂಗಳ ತಾ ೪ರಲ್ಲು ಈರೋಡಿನಲ್ಲಿ ಜರುಗುವದು.

ಮಂಗಳೂರು ರೇಂಜ್ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಮ|| ರಾ|| ಪಿ ಮಂಗೇಶರಾವ್ ಬಿ ಎ. ಎಲ್ ಟಿ ಯವರು ಒಂದು ತಿಂಗಳ ರಜೆ ತಕ್ಕೊಂಡಿರುವದರಿಂದ ಮ. ರಾ ಎಚ್ ವಸ್ಸಪ್ಪ ಎಮ್ ಎ ಎಲ್ ಟಿ ಯವರು ಮಂಗಳೂರು ರೇಂಜ್ ಆಕ್ಟಿಂಗ್ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬಾಸೆಲ್ ಮಿಶ್ಶನ್ ಶಾಲೆಗಳ ರಿಕೊಗ್ನಿಶನ್ ಬರುವ ಮಾರ್ಚಿ ತಿಂಗಳ ತಾ ೩೧ರಿಂದ ಹಿಂದೆಗೆಯೋಣಾಗುವದೆಂತ ಡಿರೆಕ್ಟರ್ ದೊರೆಗಳವರು ಬಾಸೆಲ್ ಮಿಶ್ಶನ್ ಶಾಲೆಗಳ ಆಡಳಿತೆದಾರರಿಗೆ ತಿಳಿಸುವರಷ್ಟೆ. ಮಿಶ್ಶನಿನವರು ಈ ಶಾಲೆಗಳನ್ನು ಸರಕಾರದವರ ಸಮ್ಮತಿಸುವ ಆಡಳಿತೆಗೆ ಬಿಟ್ಟುಕೊಡ ಬಹುದಾದರೆ ಈ ಶಾಲೆಗಳಿಗೆ ಎಪ್ರಿಲ್ ತಿಂಗಳ ತಾ ೧ರಿಂದ ಪುನಃ ರಿಕೊಗ್ನಿಶನ್ ಕೊಡುವ ಸಂಭವವಿರುವದರಿಂದ ಬಾಸೆಲ್ ಮಿಶ್ಶನಿನವರು ದಕ್ಷಿಣ ಹಿಂದೂಸ್ಥಾನ ಮಿಶ್ಶನೆರಿ ಎಡ್ಯುಕೇಶನಲ್ ಕೌನ್ಸಿಲಿನವರ ಸಹಾಯದಿಂದ ಒಂದು ಬೋರ್ಡನ್ನು ಸ್ಥಾಪಿಸಿ ಶಾಲೆಗಳನ್ನು ಆ ಬೋರ್ಡಿನ ಆಡಳಿತೆಗೆ ಬಿಟ್ಟುಕೊಡುವರೆಂತಲೂ ಈ ಬೋರ್ಡಿಗೆ ಸೇರಿರುವ ಮೆಂಬರರ ಹೆಸರುಗಳನ್ನು ಸರಕಾರದ ಅನುಮತಿ ಬಗ್ಗೆ ಕಳುಹಿಸಿಕೊಟ್ಟಿರುವರೆಂದೂ ತಿಳಿಯುತ್ತೇವೆ.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇಲ್ಲಿಯ ಸೈಂಟ್ ಅಲೋಸಿಯಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚುವ ಸಮಾರಂಭವು ಡಿಸ್ಟ್ರಿಕ್ಟ್ ಕಲೆಕ್ಟರರಾದ ವಿ|| ಲ್ಯೂಡ್ ದೊರೆಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಇನ್ಸ್‌ಪೆಕ್ಟರ್ ದೊರೆಗಳವರು ಗತವರ್ಷದ ಕಾಲೇಜಿನ ಅಭಿವೃದ್ಧಿಯನ್ನ ನೋಡಿ ಅತಿ ಸಂತೋಷಪಟ್ಟಿರುವರೆಂದೂ ಈ ಮಿಶ್ಶನ್‌ನವರಿಂದ ಎಷ್ಟರಮಟ್ಟಿನ ವಿದ್ಯಾಭಿವೃದ್ಧಿಯ ಸಾಧನೆಯನ್ನು ಹಾರೈಸ ಬಹುದೋ ಅಷ್ಟರಮಟ್ಟಿನ ಅಭಿವೃದ್ಧಿಸಾಧನೆಯನ್ನು ಈ ಮಿಶ್ಶನ್ ಸಂಘದವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾಡಿರುವರೆಂಬ ಅಭಿಪ್ರಾಯ ಪಟ್ಟಿರುವರೆಂದೂ ಕಾಲೇಜು ರಿಪೋರ್ಟಿನಲ್ಲಿ ಸೂಚಿಸೋಣಾಗಿತ್ತು. ಅಧ್ಯಕ್ಷರು ಈ ರಿಪೋರ್ಟನ್ನು ಆದರಿಸಿಕೊಂಡು ಕಾಲೋಚಿತ ಭಾಷಣಕೊಟ್ಟು ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದರು.

ಕಂಕನಾಡಿ ಗೇಟಿನ ಬಳಿಯ ಅಕ್ಕಿಅಂಗಡಿಗೆ ಕಳೆದವಾರ ರಾತ್ರಿ ೮ ಗಂಟೆಯ ಸಮಯ ಕಳ್ಳರು ಬಳನುಗ್ಗಿ ಕೆಲವು ರೂಪಾಯಿಗಳನ್ನು ಕಳವು ಮಾಡಿರುವರೆಂದೂ ಈ ಗೇಟನ್ನು ದಾಟಿ ಇರುವ ಸೇಂದಿಅಂಗಡಿಗೆ ಹೋಗಿಬರುವ ಕುಡಿಕರು ಸಾಯಂಕಾಲ ೪ ಗಂಟೆಯಿಂದ ರಾತ್ರಿ [illegible] ಗಂಟೆಯ ವರೆಗೆ ಆ ದಾರಿಯಲ್ಲಿ ಆಗ್ಗಾಗ್ಗೆ [illegible] ಗಳನ್ನು ನಡಿಸುತ್ತಿರುವದರಿಂದ ಆ ದಾರಿಯ [illegible] ದಯಾಕರದಾಗಿದೆಂತಲೂ [illegible]

ರು ತಿಳಿಸುವರು. ಗಸ್ತಿ ಪೋಲಿಸಿನವರು ಈ ವಿಷಯ ಕ್ಕೆ ನಿಗಾ ಕೊಡುವದು ವಿಹಿತವಾಗಿದೆ.

ಬೋಳೂರು ಸೇಂದಿ ಅಂಗಡಿ ಸಮೀಪ ಸಾಯಂಕಾಲ ಮಾನುಗಾರರು ಬೀದಿಯ ಬದಿಯಲ್ಲಿ ಸಾಲುಕಟ್ಟಿ ಮೀನು ಮಾರುತ್ತಿರುವರಲ್ಲದೆ ಹೊಲೆಯರು ಬೀದಿಯ ಬದಿಯಲ್ಲಿ ಕುಳಿತು ಸೇಂದಿ ಕುಡಿದು ಗದ್ದಲ ತಂಟೆತಕರಾರುಗಳನ್ನು ಮಾಡುತ್ತಿರುವರು. ಇನ್ನು ಸದ್ಯದಲ್ಲಿಯೇ ಉರ್ವ ಮಾರಿಗುಡಿಯಲ್ಲಿ ಆಗುವ ಮಾರಿಪೂಜೆ ಸಂಬಂಧ ಹೆಚ್ಚಿನ ಜನಸಮುದಾಯವು ಆ ಪ್ರಾಂತ್ಯದಲ್ಲಿ ಕೂಡುವ ಸಂಭವ ವಿರುವದರಿಂದ ಮೀನು ಮಾರಾಟದವರೂ ಕುಡುಕರೂ ಬೀದಿ ಬದಿಯಲ್ಲಿಯೇ ತಮ್ಮ ವೃತ್ತಿಗಳನ್ನು ನಡಿಸುತ್ತಿದ್ದರೆ ದಾರಿಗರಿಗೆ ಹೆಚ್ಚಿನ ತೊಂದರೆಯಾಗಬಹುದು ಎಂತ ಒಬ್ಬ ಬಾತ್ಮೀದಾರರು ತಿಳಿಸುವರು. ಬೋಳೂರು ಸೇಂದಿ ಅಂಗಡಿಗೆ ಸಮೀಪವಾಗಿಯೇ ಕುದ್ರೋಳಿಯ ಮೀನು ಮಾರ್ಕೇಟು ಇರುವದರಿಂದ ಸದರಿ ಮಾರ್ಕೇಟಿನೊಳಗೆಯೇ ಮೀನುಮಾರುವಂತೆ ಸಂಬಂಧಪಟ್ಟ ಅಧಿಕಾರಿಗಳು ಪ್ರಯತ್ನಿಸಿದರೆ ಇಂಥಾ ನ್ಯೂಸನ್ಸುಗಳು ನಡೆಯುವ ಸಂಭವವಿರದೆಂತ ಈ ಮೂಲಕ ಸೂಚಿಸುವೆವು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟು ರಿಜಿಸ್ಟ್ರಾರರಾದ ಮ. ರಾ. ... ಪಿಳ್ಳೆಯವರು ಕೊಯಮತ್ತೂರು ಡಿಸ್ಟ್ರಿಕ್ಟಿಗೆ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವದರಿಂದ ದಕ್ಷಿಣ ಕನ್ನಡಾ ಜಿಲ್ಲೆಯ ಆಕ್ಟಿಂಗ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿರುವ ಮ। ರಾ। ಎಮ್ ನಾರಾಯಣರಾವ್‌ರವರು ದಕ್ಷಿಣಕನ್ನಡ ಜಿಲ್ಲೆಯ ಖಾಯಂ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವರು.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೯ ಪ್ಲೇಗು ಮರಣಗಳಿದ್ದವು.

ಸಹಕಾರ.

ಸರ್ಕಿಲಾರು ನಂಬ್ರು ೧೪.

ಶಾಲಾ ಉಪಾಧ್ಯಾಯರು ಮತ್ತು

ಸಹಕಾರ ಸಂಘಗಳ ಕಾರ್ಯದರ್ಶಿತ್ವ

ಸಹಕಾರದ ಬೆಳವಣಿಗೆಯನ್ನು ಪರಿಶೀಲಿಸ ವ್ವದ ಕ್ಕೋಸ್ಕರ ಇಂಡಿಯಾ ಸರಕಾರದವರಿಂದ ನೇಮಿಸಲ್ಪಟ್ಟ ಕಮಿಟಿಯವರು ಬರೆದ ರಿಪೋರ್ಟಿನ ಕುರಿತು ೧೩ನೇ ಸರ್ಕಿಲಾರಿನಲ್ಲಿ ಕೆಲವು ಮಾತುಗಳು ಹೇಳಲ್ಪಟ್ಟಿದ್ದವು. ಅದೇ ರಿಪೋರ್ಟಿನಲ್ಲಿ ಸಂಘಗಳ ಕಾರ್ಯದರ್ಶಿತ್ವದ ಕುರಿತು ಹೀಗೆ ಬರೆಯುತ್ತಾರೆ "ಮಾಗಣೆ ಶ್ಯಾನುಭಾಗನಾಗಲಿ ಗ್ರಾಮದ ಶಾಲೆಯ ಉಪಾಧ್ಯಾಯನಾಗಲಿ ಕಾರ್ಯದರ್ಶಿಯ ಕೆಲಸಗಳನ್ನು ನಿರ್ವಹಿಸಲಿಕ್ಕೆ ಯೋಗ್ಯರಾಗಿರುತ್ತಾರೆ, ಆದರೆ ಕಾರ್ಯದರ್ಶಿಯ ಕೆಲಸವು ಸರಿಯಾಗಿ ಜರುಗುವುದಕ್ಕೆ ಶ್ಯಾನುಭೋಗಿಯ ವೃತ್ತಿಗಿಂತಲೂ ಉಪಾಧ್ಯಾಯನ ವೃತ್ತಿಯಲ್ಲಿ ಹೆಚ್ಚು ಆಸ್ಪದ ಉಂಟು. ಆದುದರಿಂದ ವಿದ್ಯೆಯ ಇಲಾಖೆಯವರು ಸಮ್ಮತಿಸುವಲ್ಲಿ ಶಾಲಾ ಉಪಾಧ್ಯಾಯನೇ ಕಾರ್ಯದರ್ಶಿಯಾಗಿರಬಹುದು"

ನಮ್ಮ ಜಿಲ್ಲೆಯ ಹಲವು ಸಂಘಗಳಲ್ಲಿ ಮಾಗಣೆ ಶ್ಯಾನುಭಾಗರೂ ಇನ್ನು ಹಲವು ಸಂಘಗಳಲ್ಲಿ ಶಾಲಾ ಉಪಾಧ್ಯಾಯರೂ ಕಾರ್ಯದರ್ಶಿಗಳಾಗಿದ್ದಾರೆ. ಇದು ಶ್ಲಾಘನೀಯವಾಗಿರುತ್ತದೆ. ಮದರಾಸು ಆಧಿಪತ್ಯದಲ್ಲಿನ ವಿದ್ಯಾ ಇಲಾಖೆಯ ಡೈರೆಕ್ಟರರವರು ಸಹ ಪ್ರತಿಫಲ ವಿಲ್ಲದೆ ಕೆಲಸ ನೋಡುವುದಾದರೆ ಶಾಲಾ ಉಪಾಧ್ಯಾಯರು ಸಂಘಗಳ ಕಾರ್ಯದರ್ಶಿಗಳಾಗುವದಕ್ಕೆ ಆಕ್ಷೇಪ ವಿಲ್ಲವೆಂದು ತಿಳಿಸಿದ್ದಾರೆ. ಆದುದರಿಂದ ಇನ್ನು ಉಪಾಧ್ಯಾಯರು ಈ ವಿಷಯದಲ್ಲಿ ಯಾವ ತರದ ಅಧೈರ್ಯವನ್ನು ಪಡೆಯುವುದು ಬೇಡ. ಆದರೆ ಅವರು ಕಾರ್ಯದರ್ಶಿಗಳಾಗುವ ಸಂಗತಿಗಳಲ್ಲಿ—ಮುಖ್ಯವಾಗಿ ಸರಕಾರಿ ಯಾ ತಾಲೂಕು ಬೋರ್ಡು ವ ಮುನಿಸಿಪಾಲಿಟಿಗಳ ಶಾಲೆಯ ಅಥವಾ ಸರಕಾರಿ ಗ್ರೇಂಟುಗಳನ್ನು ಹೊಂದುವ ಶಾಲೆಗಳ ಉಪಾಧ್ಯಾಯರು—ಸಂಘದ ಕೆಲಸವನ್ನು ನೋಡುವ ಸಂಬಂಧ ಯಾವ ಪ್ರತಿಫಲವನ್ನಾದರೂ ಪಡಕೊಳ್ಳ ಕೂಡದು, ಏಕೆಂದರೆ, ಹೀಗೆ ಮಾಡುವುದು ಕಾನೂನಿಗೆ ವಿರೋಧವಾಗಿರುತ್ತದೆ. ಪರಂತು, ಕಾರ್ಯದರ್ಶಿಯ ಕೆಲಸಕ್ಕೆ ಹೆಚ್ಚು ಸಮಯವು ತಾಗುವ ಸಂಭವವಾಗಲಿ ಕಾರ್ಯದರ್ಶಿಯ ಕೆಲಸದಿಂದ ಶಾಲೆಯ ಕೆಲಸಕ್ಕೆ ಬಾಧಕವಾಗುವ ಸಂಭವವಾಗಲಿ ಇಲ್ಲದಿರುವುದರಿಂದ ಸಂಘದಿಂದ ಪ್ರತಿಫಲ ಪಡಕೊಳ್ಳುವುದು ನ್ಯಾಯವೂ ಅಲ್ಲ, ಪಡಕೊಳ್ಳುವರೆ ಕಾರಣವಾಗಲಿ ಅಗತ್ಯವಾಗಲಿ ಇರುವದೂ ಇಲ್ಲ. ಸಂಘಗಳ ಆಡಳಿತೆಯನ್ನು ನಿರ್ವಹಿಸುತ್ತಿರುವ ಉಪಾಧ್ಯಾಯರೆಲ್ಲರೂ ಈ ಸೂಚನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋ ಆಪರೇಟಿವ್ ಬೇಂಕ್, ಲಿಮಿಟೆಡ್ ಪುತ್ತೂರು ತಾ 6-2-16 | ಯಂ. ಅನಂತರಾವ್, ಕಾರ್ಯದರ್ಶಿ.

ವಿವಿಧ ವಿಷಯಗಳು.

ಹಿಂದೂಸ್ಥಾನದಲ್ಲಿ ದರಿದ್ರಿಗಳ ಸಂಖ್ಯೆ ಬಹಳ ಹೆಚ್ಚು. ವಿವಾಹ ಮತ್ತು ಉಪನಯನಗಳ ಬಗ್ಗೆ ಮಿತತಪ್ಪಿದ ಹಣವನ್ನು ವ್ಯಯಮಾಡುವುದೂ ಕೋರ್ಟು ವ್ಯವಹಾರಗಳನ್ನು ನಡಿಸುತ್ತಲೇ ಇರುವುದೂ ದೇಶದಲ್ಲಿ ದರಿದ್ರವನ್ನು ಹೆಚ್ಚಿಸುತ್ತದೆ. ಸಾಮಾನ್ಯವಾಗಿ ಒಬ್ಬನು ತನ್ನ ಮಗುವಿನ ವಿವಾಹದ ಬಗ್ಗೆ ತನ್ನ ೪ ವರುಷಗಳ ಸಂಪಾದನೆ ಖರ್ಚು ಮಾಡುವ್ವದಲ್ಲದೆ ಶೇಕಡಾ ೧೨ರಿಂದ ೭೫ರ ವರೇಗಿನ ಬಡ್ಡಿಯಲ್ಲಿ ಸಾಲಪಡಕೊಳ್ಳುವುದೂ ಉಂಟು.

ಹಿಂದೂಸ್ಥಾನದಲ್ಲಿ ಜನರು ಸಕ್ಕರೆ ಖರ್ಚು ಮಾಡುವ ಹಾಗೆ ಭೂಲೋಕದ ಯಾವ ದೇಶದಲ್ಲಿಯೂ ಸಕ್ಕರೆ ಖರ್ಚು ಮಾಡುವುದಿಲ್ಲ. ಸರಾಸರಿ ಮೇಲೆ ಹಿಂದೂಸ್ಥಾನದಲ್ಲಿ ಪ್ರತಿ ಒಬ್ಬನು ಬೇರೆ ದೇಶಗಳ ಜನರಿಗಿಂತಲೂ ೩ ಪಾಲು ಹೆಚ್ಚು ಸಕ್ಕರೆ ಖರ್ಚು ಮಾಡುತ್ತಾನೆ. ಹಿಂದೂಸ್ಥಾನದಲ್ಲಿ ಜೂತೆರಿಗೆಯು ದುಬಾರಿ ಐವಜು ಸಕ್ಕರೆ ಬಗ್ಗೆ ಖರ್ಚು ಮಾಡುತ್ತಾರೆ. ದೇಶೀಯ ಸಕ್ಕರೆ ಖರ್ಚು ಮಾಡುವುದರ ವಿನಹ ಇಟಲಿ ಮೊದಲಾದ ವಿದೇಶಿ ರಾಜ್ಯಗಳಿಂದ ಒಂದು ವರುಷಕ್ಕೆ ೮೦೦,೦೦೦ ಟನ್ ಸಕ್ಕರೆ ಇಂಡಿಯಕ್ಕೆ ತರಿಸಿಕೊಳ್ಳುತ್ತಾರೆ. ಇದರ ಕ್ರಯವೇ ೭,೦೦೦,೦೦೦ ಪವನುಗಳಾಗುತ್ತದೆ. ಸ್ವದೇಶವಾತ್ಸಲ್ಯವಿಲ್ಲದೆ ವಿದೇಶಿ ಸಕ್ಕರೆಬಗ್ಗೆ ಇಷ್ಟು ಹೇರಳ ಹಣವನ್ನು ದರಿದ್ರ ಏರುತ್ತಲೇ ಬರುವ ಇಂಡಿಯದಿಂದ ಹೊರಗೆ ಹಾಕುವುದು ದುಃಖಕರವು. ದಿನೆ ದಿನೆ ಪಟ್ಟಣ ಶಹರುಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿಯೂ, ಚಾ, ಕಾಫಿ ಹೊಟೇಲುಗಳ ಸಂಖೆ ಹೆಚ್ಚುತ್ತಲೆ ಬರುವುದು ಇನ್ನಷ್ಟೂ ದುಃಖಕರವಲ್ಲವೇ?

ಶೇಂದಿ ಮತ್ತು ಶರಾಬು ಅಂಗಡಿಗಳ ಸಂಖ್ಯೆಯನ್ನು ಸರಕಾರದವರು ತಗ್ಗಿಸುತ್ತಾ ಬಂದರೂ ಅಬ್ಕಾರಿ ಇಲಾಖೆಯ ಹುಟ್ಟುವಳಿ ಏರುತ್ತಲೇ ಬರುತ್ತದೆ. ಮದ್ರಾಸ್ ಸಂಸ್ಥಾನದಲ್ಲಿ ೧೯೧೦-೧೧ನೆ ಇಸವಿಯಲ್ಲಿ ಅಬ್ಕಾರಿ ಹುಟ್ಟುವಳಿ ರೂ. ೧,[illegible] ಆಗಿತ್ತು. ೧೯೧೧-೧೨ನೆ ಇಸವಿಯಲ್ಲಿ ರೂ. ೧,[illegible] ಆಯಿತು. ತದನಂತರ ಇನ್ನೂ ಏರುತ್ತಲೇ ಬಂದದ್ದೆ. ದಾರಿದ್ರ್ಯ ವಿಶೇಷವಿದ್ದ ಈ ದೇಶದಲ್ಲಿ, ಮದ್ಯಪಾನ ವ್ಯಸನವು ಹೆಚ್ಚುತ್ತಲೇ ಬರುವುದು ಬಹಳ ಶೋಚನೀಯವಾದದ್ದು.

ಹಿಂದೂಸ್ಥಾನದಲ್ಲಿ ೧೯೧೧-೧೨ನೇ ಇಸ್ವಿಯಲ್ಲಿ ೬,೫೦೦,೦೦೦ ಪವನುಗಳು ಕ್ರಯವಾಗುವ ೯೬೫೦೦೦೩ ಗೆಲ್ಲನ್ ಶರಾಬು ಮಾರಾಟವಾಗಿದೆ. ಈ ಪವನುಗಳು ಒಂದಕ್ಕೆ ಒಂದು ತಾಗಿಸಿ ಸಾಲಿನಲ್ಲಿಟ್ಟರೆ ಈ ಪವನುಗಳ ಸಾಲು ೩೭೪ ಮೈಲು ಉದ್ದಕ್ಕೆ ಹೋಗುವುದು ಎಂತ ಲಾಹೋರಿನ ಪ್ರೊಫೆಸ್ಸರ್ ರುಚಿರಾಮ ಸಹನಿ ಎಂಬ ಪಂಡಿತನು ಹೇಳುತ್ತಾನೆ.

ರಕ್ತ ವರ್ಣದ ಕೆಂಪು ಶಾಯಿ ಮಾಡುವ ಕ್ರಮವು:- ನಯವಾಗಿ ಬೀಸಿದ ಬ್ರೆಜಿಲ್‌ವೂಡ್ ಎಂಬ ಮರದ ಹುಡಿ ೧೦ ತೊಲೆ, ಅರ್ಧ ಬಾಟ್ಲಿ ತೆಳ್ಳಗೆ ಮಾಡಿದ ಎಸೆಟಿಕ ಎಸಿಡ್, ೧। ತೊಲೆ, ಪರಿಕಾರ ಇವುಗಳನ್ನು ಗಿಲಾವಿನ ಪಾತ್ರೆಯಲ್ಲಿ ಹಾಕಿ ಒಂದು ಘಂಟೆವರೆಗೆ ಬೆಂಕಿಯ ಮೇಲಿಟ್ಟು ಮೆಲ್ಲಗೆ ಬೇಯಿಸಿ, ವಸ್ತ್ರದಲ್ಲಿ ಸೋಸಿದ ತರುವಾಯ ೨॥ ತೊಲೆ ಗೋಂದನ್ನು ಕೂಡಿಸಬೇಕು. ರಕ್ತ ವರ್ಣದ ಶಾಯಿ ಆಗುತ್ತದೆ.

ಮನೆಯಲ್ಲಿ ಎಕ್ಕಲೆಗಳ ಬಾಧೆ ನಿವಾರಿಸುವುದಕ್ಕೆ ಸೌತೆಕಾಯಿಯ ಶಿಪ್ಪೆಗಳನ್ನು ಸಾಯಂಕಾಲ ಹೊತ್ತಿನಲ್ಲಿ ಕೋಣೆಯ ಮೂಲೆ ಮೂಲೆಗಳಲ್ಲಿ ಬಿರುಕುವುದೇ ಒಳ್ಳೇ ಉಪಾಯವೆಂತಲೂ, ಎಕ್ಕಲೆಗಳು ಸೌತೆಕಾಯಿಯ ಶಿಪ್ಪೆ ತಿಂದು ಸಾಯುವವೆಂತಲೂ ಕಲ್ಕತ್ತೆಯ ಇಂಡಸ್ಟ್ರಿ ಎಂಬ ಮಾಸಿಕ ಪತ್ರದಲ್ಲಿ ತೋರುತ್ತದೆ.

ಹುಲ್ಲಿನ ಚಾಪೆಗಳನ್ನು ಬರೆ ನೀರಿನಿಂದ ತೊಳೆದರೆ ಚಾಪೆಯ ಬಣ್ಣವು ಹಳದಿ ಬಣ್ಣವಾಗಿ ಒಂದು ಚಾಪೆ ಬೇಗನೆ ಹಾಳಾಗುವುದು. ಬಿಸಿ ನೀರಿನಲ್ಲಿ ಸ್ವಲ್ಪ ಉಪ್ಪು ಹಾಕಿ ತೊಳೆಯುವುದು ಒಳ್ಳೇದು.

ಜಿನಸು ಧಾರಣೆ.

ಮುಸ್ಕತಿ ಹೊಸ ಅಕ್ಕಿ	5—4—0	5—12—0
ಗಾಡಿ ರಾಶಿ ಹೊಸ ,,	4—10—0	4—13—0
ಗುಡ್ಡು ,, ,,	4—14—0	5—4—0
ಅವ್ವಲ್ ಬೆಳ್ತಿಗೆ ,,	6—0—0	6—4—0
ಗುಡ್ಡು ಬೆಳ್ತಿಗೆ ,,	5—8—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	10—4—0	9—4—0
ಗೋಧಿ ಗೋಣಿ ೧ರ	13—8—0	14—0—0
ಹುರುಳಿ ಗೋಣಿ ೧ರ	6—2—0	6—10—0
ಕಡಲೆ ಗೋಣಿ ೧ರ ಬೊಂಬ್ಳ	9—8—0	10—0—0
ತೊಗರಿ ಗೋಣಿ ೧ರ	12—0—0	13—0—0
ತೊಗರಿ ಬೇಳೆ ಗೋಣಿ ೧ರ	12—8—0	16—8—0
ಉದ್ದು ಗೋಣಿ ೧ರ	11—0—0	10—12—0
ಊರುಬೆಲ್ಲ ಖಂಡಿ ೧ರ	...	49—8—0
ಉಪ್ಪು ಗೋಣಿ ೧ರ		4—4—0
ಕೊಬ್ರಿ ಖಂಡಿ ೧ರ	95—0—0	105—8—0
ಕೊಬ್ರಿಹಿಂಡಿ ಖಂಡಿ ೧ರ	24—8—0	25—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಳ	27—8—0	32—8—0
ಕೊಬ್ರಿ ಎಣ್ಣೆ ಮುಡಿ ೧ರ	6—10—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸಿನ)		5—4—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—9—0	5—8—0
ಮೋರಿಸ್ ಸಕ್ಕರೆ ಮುಡಿ ೧ರ	4—12—0	4—13—0
ಕಾಫಿ ಖಂಡಿ ೧ರ	218—0—0	225—0—0
ಹೊಸಬೀಗೋಟು ಖಂಡಿ೧ರ	84—0—0	86—0—0
ಹೊಸ ಗೇರುಬೀಜ ಮುಡಿ ೧ರ		2—15—0
ಕಬ್ಬಿಣ ಖಂಡಿ ೧ರ	50—0—0	70—0—0
ಕಾಂಬ್ರ ಕಗಡು ಮುಡಿ ೧ರ	20—0—0	22—8—0
ಕಾಂಬ್ರ ಪಾತ್ರಗಳು ಮುಡಿ ೧ರ	23—0—0	25—0—0
[illegible] ೧ರ		18—12—0
[illegible] ಮುಡಿ ೧ರ	5—14—0	6—0—0

S. NAGAPPA NAYAK, K. Appaya Shenoy & Co.

Cloth Merchants, Car Street, Mangalore.

Beg to inform the public that they keep for sale a large and varied stock of laceborlered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c. &c. of guaranteed colours and best patterns. Price very moderate.

ಸುಜೀರ ನಾಗಪ್ಪ ನ್ಯಾಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರ, ಸೇಲಂ, ಮಧುರಾ, ಕೊನ್ನಾರ್ಗುಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ, ಪೀತಾಂಬರ, ಅಮ್ಮದಾಬಾದ ಧೋತ್ರಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗ್ಯರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

ಮಾರಾಟಕ್ಕಿದೆ!

ಕಳಸಾಪುರ ಕಾಫಿ ತೋಟ

ಕೊಪ್ಪ, ಕಡೂರು

ಮತ್ತು

ಗದ್ದೆಗಳು ಸಹಿತವಾದ ಒಳ್ಳೇ ಅಡಿಕೆ ತೋಟ ಸಹಾ.

ಅಪೇಕ್ಷರಿಗೆ ಪೂರ್ಣ ವಿವರವನ್ನು ತಿಳಿಸಲಾಗುವದು.

Address:— ವಿಳಾಸ:—

E. N. Leslie, ಇ. ಎನ್. ಲೆಸ್ಲಿ,

Kulsapoor Estate, ಕಳಸಾಪುರ ಎಸ್ಟೇಟ್,

KOPPA, KADUR DST. ಕೊಪ್ಪ, ಕಡೂರು ಡಿಸ್ಟ್ರಿಕ್ಟ್.

WRITER-WANTED.

For a Coffee Estate in Hassan District, Mysore, good prospects, must have had previous experience.

Apply with certificates to:

LABOUR DEPARTMENT,

U. P. A. S. I Mangalore.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಂಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಜಿಲ್ಲಾ ಕಚೇರಿನ ಸೋಮೇಶ್ವರ ನರಸಿಂಗರಾಯರು ಮುಂಚಿಗೇತ್ರೈತ್ರಿ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲ ವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸಹಜಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಸಿಂಗರಾವ್,

ಕೋಮಲ ವಿಲಾಸ,

ರಸಪ್ಪಚೆಟ್ಟಿ ಬೀದಿ, ಮದರಾಸು

THE PUTTUR EDUCATION SOCIETY

(Registered under Act XXI of 18

WANTED

For the Incomplete Secondary School (III Standard to III Form) to be opened on 1st June next at Puttur the following Staff. Applications are invited from qualified candidates whose vernacular is Canarese. Applications should reach the undersigned not later than 1st of March next.

1. One B. A., L. T., (Science or Mathematics graduate preferred) as Head Master on Rs. 60-3-75 *per mensem.*
2. Six Assistants—

   if trained F. A. s or Intermediate men, Rs. 30—3—45 *per mensem.*

   or if trained Matriculates or School Final men Rs. 25—2—35 *per mensem.*

   one Drawing master and Drill Instructor Rs. 15—1—20 *per mensem.*

Office of the Puttur Education Society, Puttur, 17th Jan. 1916.

S. Shiva Rau, *Secretary.*

ಪಿ. ಕೆ. ವೈದ್ಯರ್ ಇವರ ಸ್ವಾನುಭವಸಿದ್ಧವಾದ ಔಷಧಗಳು.

ಸುಕುಮಾರ ಘೃತ. ಗರ್ಭ ಪ್ರತಿಬಂಧಕಗಳಾದ ಸ್ತ್ರೀಯರ ಸರ್ವ ರೋಗಗಳನ್ನೂ ಸಮೂಲವಾಗಿ ಛೇದಿಸಿ ಅಕಾಲ ಪ್ರಸವ ಮುಂತಾದ ದೋಷಗಳನ್ನೂ ಖಂಡಿಸಿ ಗರ್ಭಕ್ಕೆ ಪುಷ್ಟಿಯನ್ನೀಯುವದಲ್ಲದೆ, ಪುರುಷರಿಗೆ ವಾಯು, ಅಂದ್ರವಾಯು, ಕ್ಷಯ, ಧಾತುಕ್ಷಯವೇ ಮುಂತಾದವುಗಳನ್ನು ಅಲ್ಪಕಾಲದಲ್ಲಿಯೇ ಪ್ರಶಮಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವುದು. ಕ್ರಯ ೨೦ ತೊಲೆಗೆ ರೂಪಾಯಿ 2—0—0.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಅದಲ್ಲದೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ:—ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೈನಾ ಬಜಾರ್ ರೋಡ್, ಮದ್ರಾಸು.

Peoples Park Fair Reward.

ಸುಂದರವಾದ] 1916 [ಕಾಲೆಂಡರು.

ಕರ್ನಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾಮಾಗಿ ಕಳುಹಿಸುವೆವು ತ್ವರೆನಾಡಿರಿ

ವಿಳಾಸ.— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ಕೃಷ್ಟವಾದದ್ದೆಂದು ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾಗದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0–14–0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1–10–0 ಟಪ್ಪಾಲು ಹಾಸಲು ಬೇರೆ ಬೀಳುವದು ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ.
3, ಇರುಳಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ, ಆಗಿಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತಪ್ಸೀಲುಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು. ಕೋಂಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದು ಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ. ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ.

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1–4–0 ಟಪ್ಪಾಲ್ ಖರ್ಚು ಬೇರೆ
ಸಮಯಾನುಸಾರ ಕ್ರಯವು 0–4–0 ಏರಿಸಲಾಗುವುದು.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು:— ಎಸ್. ಪಿ. ರಾಜ ಎಂಡ್ ಕೊ. ಪೋಸ್ಟು ಪೊಳಲಿ, ದ. ಕ

ಎನ್. ಎ ಶೀನಪ್ಪ ಹೆಗ್ಗಡೆ, ಅಮ್ಮುಂಜೆಗುತ್ತು, ಗುರುಪುರ ಪೋಸ್ಟು, ದ. ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು.
3. ಒಂಟಿರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5. ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು
6. ಪ್ರಭಾಕರ ಮುದ್ರಣಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವುದು.

ಗೃಹಸ್ಥಾಶ್ರಮವು ಸುಖದಾಯಕವಾಗಿ ಪರಿಣಮಿಸಬೇಕೆಂದು ನಿಮಗೆ ನಿಶ್ಚಯವಾಗಿಯೂ ಮನಸ್ಸಿದೆಯೋ?

ಮದನಮಂಜರಿ ಮಾತ್ರೆ

ಗಳನ್ನು ಪ್ರಯೋಗಿಸಿರಿ. ಇವು ಗೃಹಸ್ಥಾಶ್ರಮವು ಸಂತೋಷ ವ ತ್ತು ಸುಖದಾಯಕವಾಗಿ ನಡಿಯುವಂತೆ ಮಾಡುವದು. ಇದು ಯಾವ ಕಾರಣದಿಂದಲಾದರೂ ಉಂಟಾದ ದ ರ್ಬ ಲತ್ವವನ್ನು ಹೋಗಲಾಡಿಸುವ ದು. ಇದು ಮುದುಕರನ್ನು ಯುವಕರಾಗಮಾಡುವದ.

ಕ್ರಯ: 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1–0–0

ಸಂತೋಷದಾಯಕವಾದ ಗೃಹಸ್ಥಾಶ್ರಮವನ್ನು ಪಡೆಯುವಂತೆ ಮಾಡುವ ನಿಜವಾದ ಸಾಧನವು.

"ಪರ್ಪೆಚುವಲ್ ಯೂತ್"

ಎಂಬ ನಮ್ಮ ಪುಸ್ತಕವನ್ನು ಪಠಿಸುವದೇ ಆಗಿದೆ.

ಯೌವನವು ಅಚಂದ್ರಾರ್ಕವಾಗಿ ಉಳಿಯುವಂತೆ ಮತ್ತು ಅದು ಥಕ್ಕನೇ ಅಳಿದುಹೋಗದಂತೆ ಮಾಡುವ ಉಪಾಯವು ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನಿಮ್ಮ ವಿಳಾಸ ಬರೆದು ಕಳುಹಿಸಿದ್ದಲ್ಲಿ ಧರ್ಮಾರ್ಥವಾಗಿ ಈ ಪುಸ್ತಕವು ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ್ (ಕಾಠ್ಯಾವರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR),
Branch:—20 CHINA BAZAAR ROAD, MADRAS.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಪೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷದಿಗಳಿಂದ ತಯಾರಿಸಲ್ಪಟ್ಟಿವೆ ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ ವೆ ದುಃಖ್ಖಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ ಬಾಟ್ಲಿಗೆ ರೂ ೧—೮—೦

ಆರ್ ಮಾರ್ಟಿನ್ಸರ ಕೆಮ್ಮಿನ ಔಷದ.

ಒಂದೇ ಒಂದು ಸೀಸೆ ಔಷದ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು ? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ ಅನಂತರ ಯಾವ ಬೇರೆ ಔಷದಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿದಾರ್ ಕೆನ್ನಿತ್ತೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ಸಿವ ಕಲವಾಗುವುದಲ್ಲದೆ ರೋಗದ ಪಟನ್ನೇ ಅಡಗಿಸಿಬಿಡುತ್ತದೆ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ ನಿರ್ಮಲವಾಗಿಯೂ ಇರುತ್ತೆ ಬೆಲೆ ಸೀಸೆ ಒಂದಕ್ಕೆ ರೂ ೧—೮—೦ ವಿಳಾಸ

ಆರ್. ಡಿ. ಕಟ್ಲೆ ಮತ್ತು ಕಂಪನಿ, R. D. Kately & Co
ನಂ. ಡಿ ಪ್ರಿಯರ್ ರೋಡ್ No D Frere Road,
ಮುಂಬಯಿ Bombay

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬದು ಬ್ರಾಹ್ಮಣರ ಮುಖ್ಯ ಧನವು; ಇದೇ/ಶುದ್ಧ ತತ್ವಾರ್ಥವು ಮಾತ್ರವಲ್ಲ, ಇದರ ವಿಶೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಅಮೌಲ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ವ ವಿಷಯಗಳಿಳ್ಳ ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನ್ನಿಸುವಂಥವರಿಗೆ ಎನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಘನ ಶ್ರೇಯಸ್ಸು ವ ಗೌರವವು ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯವರಿಸಿದ ದಾಸೋಹಂಭಾವದ ಈ ಗ್ರಂಥವು ಸರ್ವ ಪ್ರಿಯ ವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು

ಕ್ರಯ ೧೦ ಆಣೆ.

ಪುಸ್ತಕಗಳ ಮಾರಾಟದ ಸ್ಥಳ —
ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ.
ಮು ಮು. ಶ್ರೀನಿವಾಸ ಹರಿದಾಸ್, ಫೀಲ್ಡ್ ಸ್ಟ್ರೀಟ್.
ಉಡ್ಪಿ. ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಸುಲೋಚನಗಳು.

ಎಲ್ಲರಿಗೂ ಬೇಕಾದದ್ದು, ಎಲ್ಲರ ನೇತ್ರದೃಷ್ಟಿಯನ್ನು ಚೆನ್ನಾಗಿ ಪರೀಕ್ಷಿಸಿ, ಉತ್ತಮ ತರಹೇ ಸುಲೋಚನಗಳನ್ನು ಕೊಡಲಾಗುವದು. ಬೆಲೆ ಸುಲಭ

ಜಂತುಹರ್. (Insect Powder.)

ಈ ಹುಡಿಯನ್ನು ಉಪಯೋಗಿಸಿದ್ದಲ್ಲಿ ಮತ್ಕುಣ (ತಗಣೆ) ಜಿರಳೆ (Cockroches) ವಗೈರೆ ಅನೇಕ ತರದ ಕ್ರಿಮಿಕೀಟಗಳ ಮೇಲೆ ಮಹೌಷಧಿ. ಡಬ್ಬಿ ೧ರ ಕ್ರಯ ಅ 6.

ಸ್ಕೂಟ್.

ಈ ಕಡ್ಡಿಗಳಿಂದ ಸುಸಿ ವಗೈರೆ ಜಂತುಗಳ ಬಾಧೆಗಳನ್ನು ಪರಿಹರಿಸಬಹುದು. 124 ಕಡ್ಡಿಗಳಿರುವ ಪೆಟ್ಟಿಗೆ ೧ರ ಕ್ರಯ 0—14—0

ಇದೂ ಅಲ್ಲದೆ ನಮ್ಮಲ್ಲಿ ಅನೇಕ ತರದ ಕೊಡ್ಲೀವರ್ ಒಯಿಲ್‌ಗಳೂ, ಸಾರ್ಸಪರಿಲ್ಲಾ ಎಂಬ ರಕ್ತಶುದ್ಧಿಯ ಔಷಧಿ, ಕಫ್ ಎಲೆಗ್ಸಿರ್ ಎಂಬುವ ಅಸ್ತಮದ ಔಷಧಿ, ಇನ್ನು ಅನೇಕ ತರದ ಪೇಟೆಂಟ್ ಔಷಧಿಗಳೂ, ಚೆರಿಟ್ಲೋನಮ್ ಪೌಡರುಗಳೂ, ಕಟ್ಲೇರಿ ಸಾಹಿತ್ಯಗಳೂ, ಅನೇಕ ತರದ ರಿಸ್ಟ್ ವಾಚುಗಳೂ, ಇಂಗ್ಲಿಷ್ ಸೆಂಟ್ಸ್‌ಗಳೂ, ರೋಮನಾಶಕವಾದ ಬಾದಶಾಯಿ ಸಾಬೂನುಗಳೂ, ಮಕ್ಕಳಿಗೆ ಹಾಲುಕೊಡುವ ಬಾಟ್ಲಿಗಳೂ, ಅಲ್‌ಮಿನಿಯಮ್ ಟಂಬ್ಲರುಗಳೂ, ಚಿತ್ರದ ಪೋಸ್ಟು ಕಾರ್ಡುಗಳೂ, ಇದೂ ಅಲ್ಲದೆ ಅನೇಕ ತರದ ಫೇನ್ಸಿ ಸಾಹಿತ್ಯಗಳೂ ಅತೀ ಸುಲಭ ಖರೀದಿಯಿಂದ ಮಾರಾಟವಾಗುವದು ಒಮ್ಮೆಗೆ ಒಂದು ಊಲನ್ ಮಾರ್ಟನ್ನು ಸಂದರ್ಶಿಸಿರಿ.

ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟಾ, ಮಂಗಳೂರು.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡತ್ತೆ



ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರಿ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ ಈ ಗಡಿಯಾರ ಕಂಪೆನಿ ಸ್ಪೇಷಲ್ ಬಲಿಷ್ಠವಾದ ಸಾಮಾನಿನಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು ಈ ಗಡಿಯಾರವನ್ನು ಭಾಗ್ಯವಾನರು ಉದ್ಯೋಗಸ್ಥರು, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ ಬಹುಮಾನ ತರಸೀಲು — (1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ಬೀದಿ, ಮದರಾಸು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಡೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೧—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ। ಜೋರ್ಜ್‌ಕಿಂಗ್ ಎಫ್. ಎಫ್ ಎ. ಎಫ್ ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್ ರಾವ್, ಎಮ್ ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ ಸುಬ್ರಮಣ್ಯಾಯ್ಯರ್, ಬಿ. ಎ ಜೆ. ಪಿ. ಎಫ್. ಎಸ್ ಎ ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ.—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ್ದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲಿ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡ್ಪಿ, ತಾ 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊತ್ತರು—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅಳೇಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಿಸ ಹಕ್ಕಿನ ಆಸಾಮಿ)

ಒಂದು ಸಾರಿ ಕೊಂಡು ನೋಡಿರಿ"

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ ಚಾರ್ಜು 0—4—0 ಬೇರೆ.

ಪ್ರಾವಿನ್ಶ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,
10 Princes Street, BOMBAY.

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್)
ಎಂಬ
ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪರ್ಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ.
Chemists, ಕೆಮಿಸ್ಟ್ಸ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ. ...ಲೆ 6 ಔನ್ಸ್ ಸೀಸೆ 1 ಕ್ಕೆ ರೂ. 1. ಚಿಕ್ಕ ಸ್ಯಾಜ. ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ [ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ, ಹುಚ್ಚುನಾಯಿ ಕಡಿತಗಳನ್ನೂ, ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜ. ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್. ಬಿ

ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್

ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜಾರ್ಜ್ ಟೌನ್ ಮದರಾಸ್.

ತಂತಿ ವಿಳಾಸ — "ಪಂಡಿಟ್" ಮದರಾಸ್

ಡಾಕ್ಟರ್ ನವರತ್ನರ

ಪಕ್ವಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎಂದೂ ಇರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ. ಪರಿಮಳ. ಕೆರದ ಒಣ್ಣ ಒಹಳ ...ರ. ಕಪ್ ಮತ್ತು

...ಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons

Kalbadevi Road, BOMBAY

ಏಜಂಟರು:—ದಿ. ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಖಿಜಾಬೆ ಮುಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ಮೃದುವಾಗುವವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ.



ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ಹಳದಿ ಬಣ್ಣಕ್ಕೆ ಮಾರ್ಪಡದು ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,

Doongri Bazar Road,

Opposite Karimbhai Ibhram Orphanage,

Bombay.

ಪ್ರೈಮಸ್ ಎಂಬುವ ಸ್ಟವಿನ ಒಲೆಯು



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಕಾವು ಉಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಕಾವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ.	7	8	0
ಬರೀ ಒಲೆಗೆ ಮಾತ್ರ ಕ್ರಯ ರೂ.	5	12	0
೫ನೇ ಮತ್ತು ೧೦ನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,

ಗಿರಗಾಂ, ಸ್ಟ್ಯಾವ್ ಡಿಪೋ, ೬೩೭ ಗಿರಗಾಂ ಬೊಂಬಾಯಿ.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು, ಜಿಡ್ಡು, ಸುಟ್ಟ ಘಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಚಾರ್ಜು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೋ,

ಕದ್ರಿ, ಮಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 25ನೇ ಫೆಬ್ರವರಿ 1916

ವರಿಷ್ಠ ನ್ಯಾಯನಿರ್ಮಾಣ ಸಭೆಯು

ಇದೇ ತಿಂಗಳ ತಾ. ೧೫ರಲ್ಲಿ ಡಿಲ್ಲಿಯಲ್ಲಿ ಇಂಡಿಯಾ ಸರಕಾರದವರ ನ್ಯಾಯನಿರ್ಮಾಣಸಭೆಯು ಕೂಡಿತು ವ್ಯಾಸರಾಯಿ ಹಾರ್ಡಿಂಗ್ ಪ್ರಭುಗಳವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಇಂಡಿಯನ್ ಟ್ರಸ್ಟ್ ಆಕ್ಟ ಮಸೂದೆಯೂ ಇತರ ಒಂದೆರಡು ಕಾನೂನು ಮಸೂದೆಗಳೂ ಸಭೆಯಲ್ಲಿ ಮಂಜೂರಾದವು "ಬೋಗಸ್ ಮೆಡಿಕಲ್ ಡಿಗ್ರಿಸ್ ಬೀಲ್" ಎಂಬ ಕೃತಕ ವೈದ್ಯ ಯೋಗ್ಯತೆಗಳ ಕಾನೂನು ಮಸೂದೆಯು ಸಭೆಯಲ್ಲಿ ವಾದಿಸಲ್ಪಟ್ಟಿತು ವೈದ್ಯ ಪದವಿಗಳ ಅರ್ಹತೆಯನ್ನು ಹೆಚ್ಚಿಸುವದು ಈ ಕಾನೂನು ಮಸೂದೆಯ ಮುಖ್ಯ ಉದ್ದೇಶವಾಗಿದೆಂದು ಸರಕಾರದವರ ವಾದವಾಗಿತ್ತು. ವೈದ್ಯ ಶಿಕ್ಷಣಕ್ಕೆ ಬೇಕಾದ ಸೌಕರ್ಯಗಳು ತಕ್ಕಷ್ಟು ಇಲ್ಲದ ಈ ಕಾಲದಲ್ಲಿ ಇಂಥಾ ವಿಧಿಯನ್ನು ಜ್ಯಾರಿಗ ತರುವದು ಉಪಯುಕ್ತವಲ್ಲವೆಂತಲೂ ಇದನ್ನು ಜ್ಯಾರಿಗೆ ತಂದರೆ 'ಕ್ವೆಕ್ಸ್' ಎಂಬುವ 'ಕಾಟು'ವೈದ್ಯರ ಹಾವಳಿಗೆ ಮತ್ತಷ್ಟು ಅವಕಾಶ ದೊರೆಯಬಹುದೆಂದೂ ಪ್ರಜಾಕಡೆಯ ಪ್ರತಿನಿಧಿಗಳು ಸೂಚಿಸಿದರು. ಆದರೆ ಸರಕಾರದವರ ಅಭಿಪ್ರಾಯವು ಇದಕ್ಕೆ ಪ್ರತಿಕೂಲವಾಗಿದ್ದದರಿಂದ ಮಸೂದೆಯು ಮುಂದಿನ ಪರ್ಯಾಲೋಚನೆಯು ಅಗತ್ಯವೆಂಬುವ ಅಭಿಪ್ರಾಯವು ಸಭೆಯಲ್ಲಿ ಮಂಜೂರಾಗಿದೆ ಮಲೆಜ್ವರದ ನಿವಾರಣೋಪಾಯಗಳನ್ನು ಮತ್ತಷ್ಟು ಹೆಚ್ಚಿನ ಆಸಕ್ತಿಯಿಂದ ನಡಿಸುವರೆ ಬೇಕಾದ ಅಪ್ಪಣೆಯನ್ನು ಸಂಸ್ಥಾನಿಕ ಸರಕಾರಗಳಿಗೆ ಕೊಡಬೇಕು, ಮತ್ತು ಈ ಪರವಾಗಿ ಸಂಸ್ಥಾನಿಕ ಸರಕಾರದವರು ನಡೆಸುವ ಕಾರ್ಯವೃತ್ತಾಂತವನ್ನು ಪ್ರತಿವರುಷದಲ್ಲಿಯೂ ಪ್ರಕಟಿಸಬೇಕು—ಎಂತ ಬಹುಮಾನಪಟ್ಟ ಸುರೇಂದ್ರನಾಥ ಬೆನರ್ಜಿಯವರು ಸಭೆಯಮುಂದೆ ತಂದ ನಿರ್ಣಯವು ಸಭೆಯಲ್ಲಿ ಮಂಜೂರಾಗಿರುವದು ಮಲೆಜ್ವರ ನಿವಾರಣೆಯ ಸಾಧನೋಪಾಯಗಳಲ್ಲಿ ಸರಕಾರದವರು ವಿಶೇಷ ಹಣ ವೆಚ್ಚಮಾಡುತ್ತಿರುವರಾದರೂ ಈ ಭಾಗದಲ್ಲಿ ಬೇಕಾದ ಕಾರ್ಯ ಪ್ರಯತ್ನಗಳ ಆಸಕ್ತಿಯು ಶ್ರೇಷ್ಠ ಸರಕಾರದವರಿಂದ ಸಂಸ್ಥಾನಿಕ ಸರಕಾರಗಳ ಮೂಲಕ ಮಲೆಜ್ವರ ತುಂಬಿರುವ ಹಳ್ಳಿನಾಡುಗಳಲ್ಲಿ ಸಹ ವ್ಯಕ್ತವಾದಂತೆ ತೋರಿ ಬಂದದ್ದಿಲ್ಲ ಈ ನಿರ್ಣಯದ ಮೂಲಕ ಸಂಸ್ಥಾನಿಕ ಸರಕಾರಗಳೂ ಇವರ ಕೈಕೆಳಗಣ ಅಧಿಕಾರಿಗಳೂ ಮಲೆಜ್ವರ ನಿವಾರಣೆಯನ್ನು ಕಾರ್ಯತಃ ಹಳ್ಳಿಗಳಲ್ಲಿ ಕೈಕೊಳ್ಳಲು ಹೆಚ್ಚಿನ ಆಸ್ಪದವು ದೊರಕುವದು. ಜನನಕ್ಕೆ ಬರಲಿಕ್ಕಿರುವ ಸಂತತಿಗೆ ಆಸ್ತಿಯನ್ನು ವಿಲ್‌ನಾಮೆಗಳ ಮೂಲಕ ಕೊಡಲು ಮಹಮ್ಮದೀಯರಿಗೂ ಹಿಂದುಗಳಿಗೂ ಇರುವ ಅನನುಕೂಲತೆಗಳನ್ನು ನಿವಾರಿಸುವ ಉದ್ದೇಶಗಳುಳ್ಳ ವಿಧಿಯ ಮಸೂದೆಯು ಸಭೆಯ ಮುಂದೆ ಇಡೋಣಾಗಿದೆ ಕೌನ್ಸಿಲಿನ ಸಾಮಾನ್ಯ ಕ್ರಮಗಳ ಪ್ರಕಾರ ಈ ಮಸೂದೆಯು ಸಭೆಯಲ್ಲಿ ಪರ್ಯಾಲೋಚಿಸಲ್ಪಡುವದು. ಸಭೆಯ ಮಿಕ್ಕ ಕಾರ್ಯ ವೃತ್ತಾಂತವು ವಿಶೇಷವಾಗಿದ್ದಿಲ್ಲ

ಮೆ। ಹಾರ್ಡಿಂಗ್ ದೊರೆಗಳವರ ಕೊಲೆಯು.

ಈ ಜಿಲ್ಲೆಯಲ್ಲಿ ಶುಮಾರು ೭ ವರುಷಗಳ ಕಾಲ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿದ್ದು ಪ್ರಕೃತ ಈ ಹುದ್ದೆಯನ್ನೇ ತಿರುಚಿನಾಪಳ್ಳಿಯಲ್ಲಿ ನೋಡುತ್ತಿದ್ದ ಮೆ। ಎಚ್. ಒ. ಡಿ. ಹಾರ್ಡಿಂಗ್ ದೊರೆಗಳನ್ನು ಒಬ್ಬ ಮಹಮ್ಮದೀಯ ಘಾತುಕನು ತಿವಿದುಕೊಂದನೆಂಬ ವೃತ್ತಾಂತವನ್ನು ತಿಳಿಸುವರೆ ವಿಷಾದಪಡುತ್ತೇವೆ ಇಲ್ಲಿ ಇದ್ದಾಗ ಇವರ ಭೂತದಯೆ, ಸಹಾನುಭೂತಿ, ನ್ಯಾಯವಿಚಾರಣೆಯಲ್ಲಿ ಜನರು ಅನ್ಯಾಯಹೊಂದಕೂಡದೆಂಬ ಧರ್ಮಬುದ್ಧಿ—ಈ ಸಲ್ಲಕ್ಷಣಗಳಿಂದ ಹಾರ್ಡಿಂಗ ದೊರೆಗಳವರು ಇಲ್ಲಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ದೇಶೀಯ ಜನರ ಸ್ವಭಾವವನ್ನು ತಿಳಕೊಳ್ಳಬೇಕು, ಅವರ ಕಟ್ಟುಕಟ್ಟಳೆಗಳನ್ನು ಗೊತ್ತುಮಾಡಿಕೊಳ್ಳಬೇಕು, ಅವರ ಸಮಾಜರಚನೆಯನ್ನು ಅರಿತುಕೊಳ್ಳಬೇಕು, ಅವರೊಡನೆ ಸ್ನೇಹಭಾವದಿಂದಿರಬೇಕೆಂಬುವ ಆಸಕ್ತಿಯು ಈ ದೊರೆಗಳವರಲ್ಲಿ ವಿಶೇಷವಾಗಿತ್ತು. ಈ ಬಗ್ಗೆ ಇವರು ದೇವಸ್ಥಾನಗಳ ಜಾತ್ರೆಗಳನ್ನೂ ಜೋಡಿ ಇತ್ಯಾದಿಗಳನ್ನೂ ನೋಡಲು ಸಂದರ್ಭ ಸಿಕ್ಕಿದಂತೆ ಹೋಗುತ್ತಿದರು ಈ ಜಿಲ್ಲೆಯಲ್ಲಿ ವಿಶೇಷವಾಗಿರುವ ಕೋಣಗಳ ಓಟದ ಪಂದ್ಯಾಟಗಳನ್ನು ನೋಡಲು ಹೋಗುತ್ತಿದ್ದ ಈ ದೊರೆಗಳ ಸ್ಮರಣೆಯು ನಿರಕ್ಷರಕುಕ್ಷಿಗಳಾದ ಇಲ್ಲಿಯ ಸಾಮಾನ್ಯರಲ್ಲಿ ಸಹ ಇದೆ. ಕ್ರಿಕೆಟ್ ಆಟದಲ್ಲಿ ವಿಶೇಷವಾದ ಪ್ರೀತಿಯು ಇವರಿಗಿತ್ತು. ಈ ಶಹರಿನ ಶಾಲಾ ಕೊಲೇಜಿನ ವಿದ್ಯಾರ್ಥಿಗಳೂ ಇತರ ತರುಣವರ್ಗದವರೂ ಇತ್ತಲಾಗೆ ಏಳೆಂಟು ಹತ್ತು ವರುಷಗಳ ಕಾಲದಿಂದ ಪ್ರತಿ ವರುಷ ಎಂಬಂತೆ ಕ್ರಿಕೆಟ್ ಚಂಡಾಟದ ಸಮಯದಲ್ಲಿ ಇಲ್ಲಿಯ ಮೈದಾನಿನಲ್ಲಿ ಕಾಣುತ್ತಿದ್ದ ಈ ದೊರೆಗಳ ದರ್ಶನವನ್ನು ಎಂದಿಗೂ ಮರೆಯುವಂತಿಲ್ಲ. ಹಾರ್ಡಿಂಗ್ ದೊರೆಗಳವರ ಕೊಲೆಯಿಂದುಂಟಾದ ದುಃಖಪ್ರದರ್ಶನಾರ್ಥವಾಗಿ ನಿನ್ನೆ ದಿನ ಇಲ್ಲಿಯ ಕೋರ್ಟುಗಳಿಗೆ ರಜೆಯು ಕೊಡೋಣಾಗಿತ್ತು

ಘಾತುಕನು ಹಾರ್ಡಿಂಗರವರನ್ನು ಕೊಂದ ವಿವರವಾದರೋ ಬಹಳ ಭಯಂಕರವಾಗಿದೆ ಕಳೆದ ಮಂಗಳವಾರ ಮಧ್ಯಾಹ್ನ ಸುಮಾರು 12 40 ಘಂಟೆ ಸಮಯಕ್ಕೆ ಗಾಡಿಯಿಂದ ಇಳಕೊಂಡು ಕೋರ್ಟನ್ನು ಪ್ರವೇಶಿಸುವಷ್ಟರಲ್ಲಿ ಮಹಮ್ಮದೀಯನೊಬ್ಬನು ಚೂರಿಯಿಂದ ದೊರೆಗಳವರ ಎದೆಯನ್ನು ತಿವಿದನು ಒಂದು ಸಲ ತಿವಿದು ಇನ್ನೊಂದು ಸಲ ತಿವಿಯುವಷ್ಟರಲ್ಲಿ ಘಾತುಕನನ್ನು ದಫೇದಾರನು ಹಿಡಕೊಂಡರೂ ದಫೇದಾರನನ್ನು ಸಹಾ ಗಾಯಪಡಿಸಿ ಆತನಿಂದ ತಪ್ಪಿಸಿ ದೊರೆಗಳನ್ನು ಎರಡನೇ ಸಲ ತಿವಿದನು. ಚೂರಿಯು ರಕ್ತಕೋಶವನ್ನು ಪ್ರವೇಶಿಸಿ ಅಲ್ಲಿಯೇ ತುಂಡಾಗಿ ಒಂದು ತುಂಡು ಎದೆಯಲ್ಲಿ ಉಳಿದು ಹೋಯಿತು. ಕೋರ್ಟ ವಕೀಲರೂ, ಸಿಬ್ಬಂದಿಯವರೂ, ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರವರೂ, ಕಲೆಕ್ಟರರೂ, ಡಾಕ್ಟರರೂ ಬಂದು ನೋಡುವಷ್ಟರಲ್ಲಿ ಹಾರ್ಡಿಂಗ್ ದೊರೆಗಳವರು ಮೃತಪಟ್ಟರು. ದೊರೆಗಳ ಪತ್ನಿಯೂ ಮಗಳೂ ಸಹ ಹಾಜರಿದ್ದರು. ದೊರೆಗಳವರ ಮರಣಕ್ಕಾಗಿ ಸರ್ವರೂ ವಿಷಾದಪಡುತ್ತಿರುವರು. ಶಾಲಾ ಕೊಲೇಜುಗಳೂ, ಕೋರ್ಟ ಕಚೇರಿಗಳೂ, ತಿರುಚಿನಾಪಳ್ಳಿಯಲ್ಲಿ ಈ ದಿನ ಮುಚ್ಚಲ್ಪಟ್ಟಿದ್ದವು ಹಾರ್ಡಿಂಗ್‌ರವರ ಮರಣದಿಂದ ಇಲ್ಲಿ ಬಹಳ ಸಂತಾಪ ಉಂಟಾಗಿದೆ ಇನ್ನು ಸ್ವಲ್ಪ ಸಮಯದಲ್ಲಿಯೇ ಪೆನ್ಶನ ಪಡೆದು ವಿಶ್ರಾಂತಿಸುಖವನ್ನು ಪಡೆಯಲಿಕ್ಕಿದ್ದ ಈ ದೊರೆಗಳವರ ಮರಣಕ್ಕಾಗಿ ಬಹಳ ವಿಷಾದಪಡುತ್ತೇವೆ

ಘಾತಕನು ಮಹಮ್ಮದೀಯ ಪಠಾಣನಾಗಿರುವನು ಇನ್ನೊಬ್ಬ ಪಠಾಣನೊಡನೆ ಈತನ ಹೆಂಡತಿಯು ಓಡಿಹೋದ್ದರಿಂದ ಈತನು ಪೋಲೀಸಿನವರಿಗೆ ತಿಳಿಸಿದನು ಇದರಿಂದ ತೃಪ್ತನಾಗದೆ ಒಂದು ಅರ್ಜಿಯೊಡನೆ ಕಲೆಕ್ಟರ ದೊರೆಗಳವರನ್ನು ನೋಡಲು ಅಪೇಕ್ಷಿಸಿದನು. ದೊರೆಗಳವರು ಈ ಜಿಲ್ಲೆಗೆ ತೆರಳುವ ತಯ್ಯಾರಿಯಲ್ಲಿದ್ದುದರಿಂದ ಈತನನ್ನು ಕಾಣಲಿಕ್ಕಾಗಲಿಲ್ಲ ಇಲ್ಲಿಂದ ಈತನು ಡಿಸ್ಟ್ರಿಕ್ಟ್ ಜಡ್ಜರಾಗಿರುವ ಹಾರ್ಡಿಂಗ್ ದೊರೆಗಳವರ ಬಂಗ್ಲೆಗೆ ಹೋಗಿ ಅವರನ್ನು ಕಾಣಲು ಅಪೇಕ್ಷಿಸಿದನು. ಆದರೆ ಇಲ್ಲಿ ಈತನಿಗೆ ಪ್ರವೇಶವು ದೊರಕಲಿಲ್ಲ ಪಠಾಣನು ದೊರೆಗಳವರನ್ನು ಕಾಣದೆ ಹೋಗಲಿಕ್ಕಿಲ್ಲವೆಂತ ಹಟ ಹಿಡಿದ್ದರಿಂದ ಈತನನ್ನು ಬಂಗ್ಲೆಯಿಂದ ಹೊರಗೆ ತಳ್ಳಬೇಕಾಯಿತು. ಹೆಂಡತಿಯನ್ನು ಕಳಕೊಂಡು ಮೊದಲೇ ಭ್ರಾಂತನಾದ ಈತನಿಗೆ ಭ್ರಾಂತಿಯು ಹೆಚ್ಚಿ ಕೋರ್ಟ ಜಗಲಿಯಲ್ಲಿ ಅವಿತುಕೊಂಡು ದೊರೆಗಳನ್ನು ಕೊಂದನೆಂಬೀ ವೃತ್ತಾಂತವನ್ನು ಆ ದಿನ ತಿರುಚಿನಾಪಳ್ಳಿಯಿಂದ ಮದ್ರಾಸಿಗೆ ಬಂದ ಪ್ರಯಾಣಿಕರು ಹೇಳುತ್ತಿದ್ದರೆಂಬುದಾಗಿ ತಿಳಿಯುತ್ತೇವೆ

ಜೋರ್ಜ ಸಾರ್ವಭೌಮರ ಸಂದೇಶವು

ಫ್ರಾನ್ಸ್ ರಣರಂಗದಲ್ಲಿ ಗಾಯ ಒಡೆದು ಲಂಡನಿನ ವೈದ್ಯ ಚಿಕಿತ್ಸಾಲಯದಲ್ಲಿ ಆರೋಗ್ಯಪಡೆದ ಸೇನಿಕರು ಹಿಂದೂಸ್ಥಾನಕ್ಕೆ ಹಿಂದೆರಳುವಾಗ ಜೋರ್ಜ ಸಾರ್ವಭೌಮರವರಿಗೆ ಅರ್ಪಿಸಿದ ವಿಜ್ಞಾಪನಾ ಪತ್ರಿಕೆಗೆ ಸಾರ್ವಭೌಮರವರು ಕೊಟ್ಟ ಪ್ರತ್ಯುತ್ತರವನ್ನು ಇದೇ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ಪ್ರಕಟಿಸಿರುವೆವು. ಸಾರ್ವಭೌಮರ ಈ ವಾಕ್ಯಗಳು ಅವರ ಸಹಜವಾದ ಉದಾತ್ತಗುಣಕ್ಕೂ ಭಾರತೀಯರ ಅಭಿಮಾನಕ್ಕೂ ಪೂರ್ಣ ನಿದರ್ಶಕವಾಗಿರುವದಲ್ಲದೆ ಭಾರತೀಯ ಮುಂದಿನ ಆಕಾಂಕ್ಷೆಯನ್ನು ಅವಲಿಸ ವಂಥಾ ಒಂದು ಸಂದೇಶವಾಗಿದೆ ಸಾರ್ವಭೌಮರವರು ಈ ಸಂದೇಶದಲ್ಲಿ ಹಿಂದೂಸ್ಥಾನದವರಿಂದ ಸಾಮ್ರಾಜ್ಯಕ್ಕೆ ಉಂಟಾದ ಮಹಾ ಸಹಾಯವನ್ನು ಮರೆಮಾಚದೆ ಹೇಳಿರುವರಲ್ಲದೆ ಹಿಂದೂಸ್ಥಾನದ ಪ್ರಜೆಗಳು ತಮ್ಮ ಸಾಂಸರ್ಗಿಕ ವ್ಯವಹಾರಗಳಲ್ಲಿಯೂ ರಾಜ್ಯಭಾರ ಕಾರ್ಯಗಳ ಅನುಭವಗಳಲ್ಲಿಯೂ ಅಭಿವೃದ್ಧಿ ಹೊಂದಿದ ಹಾಗೆಲ್ಲಾ ಬ್ರಿಟಿಷ್ ರಾಜ್ಯಭಾರದ ಸ್ವತಂತ್ರಗಳು ಅವರಿಗೂ ಕ್ರಮೇಣಾ ಹೆಚ್ಚಾಗಿ ದೊರಕುತ್ತವೆಂಬದಾಗಿ ಹೇಳಿ ಭಾರತೀಯರಿಗೆ ಇರುವ ಮುಂದಿನ ಆಕಾಂಕ್ಷೆಯನ್ನು ದೃಢಪಡಿಸಿರುವರು ಕಡೆಗೆ ಸಾರ್ವಭೌಮರವರು ಹಿಂದೂಸ್ಥಾನದ ಪ್ರಜಾಜನರಿಗೆ ವಿಕ್ಟೋರಿಯ ಮಹಾರಾಣಿಯವರಿಂದ ಕೊಡೋಣಾದ ಸಂದೇಶವನ್ನು ಯಥಾಪ್ರಕಾರ ಹೇಳಿ ಹಿಂದೂಸ್ಥಾನದ ಪ್ರಜಾ ಜನರ ಆಯಾ ಮತಧರ್ಮದ ಕಡೆಗೆ ಇರುವ ತನ್ನ ಯತಾರ್ಥ ಭಾವವನ್ನು ಸೂಚಿಸಿ ತಮ್ಮ ಈ ವಾಕ್ಯಗಳನ್ನು ತಾವು ತಮ್ಮ ಸಂತತಿಯವರು ಅಕ್ಷರವತ್ತಾಗಿಯೂ ನೆರವೇರಿಸುತ್ತಾ ಬರುವೆವೆಂದು ವಾಗ್ದಾನಮಾಡಿರುವದು ಈ ಸಂದೇಶದಲ್ಲಿ ಮಹತ್ತಾದ ವಿಷಯವಾಗಿರುವದು. ವಾಚಕರು ಜೋರ್ಜ ಸಾರ್ವಭೌಮರವರ ಈ ವಾಕ್ಯಗಳನ್ನು ಓದಿಕೊಳ್ಳಬೇಕಾಗಿ ವಿಜ್ಞಾಪಿಸುವೆವ

ಜಾತಿಭೇದದ ವಿರೋಧಿಗಳು.

ನಮ್ಮ ಪತ್ರಿಕೆಯೊಳಗೆ 'ಸ್ವರಾಜ್ಯ'ದ ಕುರಿತು ಬರೆದ ಲೇಖಮಾಲೆಯೊಳಗಣ ಮುಕ್ತಾಯದ "ಸ್ವರಾಜ್ಯದ ವಿರೋಧಿಗಳು" ಎಂಬ ಲೇಖವು ಜಾತಿಭೇದದ ವಿರೋಧಿಗಳಿಗೆ ವಿರೋಧಾಸ್ಪದವಾಗಿದೆಂದು ಗತಸಂಚಿಕೆಯೊಳಗಿನ ಒಬ್ಬ "ಭಾರತೀಯನ" ಆಕ್ಷೇಪ ಪಂಚಕದಿಂದಲೇ ವಾಚಕರಿಗೆ ತಿಳಿದಿರಬಹುದು. ಹದಿನೈದು ದಿವಸಗಳ ಹಿಂದೆ ಉಪಯೋಗಿಸಿದ "ವಿರೋಧಿ" ಎಂಬ ಶಬ್ದಕ್ಕೂ ಈಹೊತ್ತು ಶಿರೋಲೇಖದಲ್ಲಿ ತೋರುವ "ವಿರೋಧಿ" ಶಬ್ದಕ್ಕೂ ತುಂಬಾ ವೈಲಕ್ಷಣ್ಯವಿದ್ದೆಂಬುದನ್ನು ನಾವು ಮೊದಲೇ ತಿಳಿಸುತ್ತೇವೆ. ಮೊದಲಿನ ಲೇಖದಲ್ಲಿ "ವಿರೋಧಿ" ಶಬ್ದವನ್ನು ಯಾವ ಅರ್ಥದಲ್ಲಿ ಉಪಯೋಗಿಸಿದ್ದೇವೆಂಬದನ್ನು ನಾವು ಅದೇ ಲೇಖದಲ್ಲಿ ಸ್ಪಷ್ಟಪಡಿಸಿರುವುದರಿಂದ ಇಲ್ಲಿ ಅದರ ಪುನರುಕ್ತಿಯು ಅವಶ್ಯವಿಲ್ಲ. ಮಾನವರಲ್ಲಿ ಸದ್ಯಃ ರೂಢವಾಗಿರುವ ಜಾತಿಭೇದಗಳನ್ನು ಪೂರ್ಣವಾಗಿ ಮುರಿಯಬೇಕೆನ್ನುವವರೇ "ಜಾತಿಭೇದದ ವಿರೋಧಿ"ಗಳೆಂಬುದೂ ಕೂಡ "ಭಾರತೀಯನ" ಆಕ್ಷೇಪ ಪಂಚಕದಿಂದ ದ್ವ್ಯರ್ಥವನ್ನಾದರಿಸಿ ಅಲ್ಲ—ವಾಚ್ಯಾರ್ಥದ ಮೂಲಕವಾಗಿಯೇ ವಿಶದವಾಗಿರುವ ಕಾರಣ ನಾವು ತಿರುಗಿ "ವಿರೋಧಿ" ಶಬ್ದದ ವ್ಯಾಖ್ಯಾನವನ್ನಾಗಲಿ, ಸ್ಪಷ್ಟತೆಯನ್ನಾಗಲಿ ಮಾಡಬೇಕಾದ್ದಿಲ್ಲ. ಒಂದು ಸಂಗತಿಯನ್ನು ಇಲ್ಲಿ ಹೇಳುವುದು ನಮಗೆ ಅಪರಿಹಾರ್ಯವಾಗಿದೆ. ಅದೇನೆಂದರೆ—ಈ ಮೊದಲು "ಹಿಂದೂಸ್ಥಾನದ ರಾಜಕೀಯ ಧ್ಯೇಯ" ಮುಂತಾದ ಎಷ್ಟೋ ಲೇಖಗಳಲ್ಲಿ ಜಾತಿಸಂಸ್ಥೆಯ ಕುರಿತು ನಮ್ಮ ವಿಚಾರಗಳನ್ನು ಇದಕ್ಕಿಂತ ಸ್ಪಷ್ಟ ಶಬ್ದಗಳಿಂದ ವಾಚಕರ ಎದುರಿನಲ್ಲಿಟ್ಟಿರುವಾಗ ಇಂತಹ ಆಕ್ಷೇಪಗಳು ಹುಟ್ಟದೆ ಮೊನ್ನೆ ಮಾತ್ರ "ಭಾರತೀಯ" ಪ್ರಭೃತಿ ಸುಧಾರಕ ವರ್ಗಕ್ಕೆ ನಮ್ಮ ಲೇಖವು ಪ್ರಶ್ನಾರ್ಹವಾಗಲು ಕಾರಣವೇನಿರಬಹುದೆಂದಾಲೋಚಿಸಿದರೆ ಸ್ವರಾಜ್ಯ ವಿರೋಧಿಗಳ ಪಂಕ್ತಿಯಲ್ಲಿ ಸೇರಿಸಿದ ಡಾ॥ ಭಾಂಡಾರಕರರ ಹೆಸರೇ ಪ್ರಾಯಶಃ ಕಾರಣವಾಗಿರಬೇಕೆಂತ ಕಾಣುತ್ತದೆ. ಯಾವುದೇ ಕಾರಣದಿಂದಾಗಲಿ ಆಕ್ಷೇಪಕರು ನಮ್ಮನ್ನು ಈ ವಿಷಯದಲ್ಲಿ ಪುನಃ ಒಮ್ಮೆ ಅವಗಾಹಿಸಲು ಪ್ರಸಂಗ ತಂದು ಕೊಟ್ಟದ್ದಕ್ಕಾಗಿ ಮೊದಲು ಅವರ ಆಭಾರ ಪ್ರದರ್ಶನಮಾಡಿ ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಆ ಆಕ್ಷೇಪಗಳ ಸಮಾಧಾನವನ್ನು ತಕ್ಕೊಳ್ಳುವ.

"ಭಾರತೀಯನು" ಎಂಬ ಸಂಕೇತರ ಮುಖ್ಯಪ್ರಶ್ನೆಗಳು ೫, ಆದರೆ ಉಪಪ್ರಶ್ನೆಗಳ ಸಂಖ್ಯೆಯು ಎಂಟು. ಈ ಪ್ರಕಾರ ಐದು ಪ್ರಶ್ನ ಪಂಚಕ ಅಥವಾ ಪ್ರಶ್ನಾಷ್ಟಕವಿದ್ದರೂ ಆ ಎಲ್ಲ ಪ್ರಶ್ನೆಗಳ ಸ್ವರೂಪವನ್ನು ಎರಡೇ ಮಾತುಗಳಿಂದ ಶಾಸ್ತ್ರೀಯವಾಗಿ ಹೇಳಬಹುದು. ಏನೆಂದರೆ ಜಾತಿಗಳು ಉತ್ಪತ್ತಿಸಿದ್ಧಗಳಲ್ಲ, ಗುಣಕರ್ಮಮೂಲಕಗಳಾಗಿದ್ದು ಇವುಗಳಲ್ಲಿ ಭೇದವನ್ನು ಕಲ್ಪಿಸುವುದು ನಿರಾಧಾರವಾದುದು. ಈ ಆಕ್ಷೇಪವು ನವೀನವಲ್ಲ, ಮತ್ತು ನಾವೀಗ ಹೇಳುವ ಅದರ ಸಮಾಧಾನವೂ ಕೂಡ ಅಪೂರ್ವವಲ್ಲ. ಜಾತಿ ಹಾಗೂ ಉತ್ಪತ್ತಿಯ ಪ್ರಶ್ನೆಯು ಬಹು ತೊಂದರೆಯದೆಂಬುದಕ್ಕೇನೂ ಸಂದೇಹವಿಲ್ಲ. ಆದರೆ ವೇದ ಮುಂತಾದ ಪ್ರಾಚೀನ ಸಮಾಜ ಶಾಸ್ತ್ರ ಇತಿಹಾಸ, ನ್ಯಾಯಾನುಮೋದಿತವಾದ ಯುಕ್ತಿ ಈ ಮೂರು ಸಾಧನಗಳಿಂದ ಆ ಜಾತಿಪ್ರಶ್ನೆಯ ಒಗಟನ್ನು ಬಿಚ್ಚಲು ಯತ್ನಿಸಿದರೆ ಹೆಚ್ಚು ಆಯಾಸವಿಲ್ಲದೆ ಅದರ ವಸ್ತುಸ್ಥಿತಿಯು ತಿಳಿದುಬರುವುದು. ವೈದಿಕ ಕಾಲವನ್ನು ಪರೀಕ್ಷಿಸಿದ್ದಲ್ಲಿ "ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ" ಮುಂತಾದ ಅನೇಕ ಮಂತ್ರಗಳ ಆಧಾರದಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳು ಇದ್ದವಲ್ಲದೆ ಅವುಗಳಲ್ಲಿಯೇ ಬೇರೆ ಬೇರೆ ಜಾತಿಗಳಿದ್ದುದು ಕಂಡುಬರುವುದು. ಆ ವೈದಿಕ ಕಾಲವು ಯಜ್ಞಪ್ರಧಾನವಾಗಿದ್ದುದರಿಂದ ಆ ಯಜ್ಞಗಳಿಗೆ ಬೇಕಾದ ಕೆಲವು ಉಪಕರಣಗಳನ್ನು ರಥಕಾರ ಶಿಲ್ಪಕಾರ ಮುಂತಾದವರಿಂದ ತಯಾರಿಸುವ ಏರ್ಪಾಟುಗಳು ಸೂಚಿಸಲ್ಪಟ್ಟಿರುತ್ತವೆ. ಇದು ಹೊರತು ಇನ್ನೂ ಹಲವು ಜಾತಿಬೋಧಕ ಪದಗಳು ಅಲ್ಲಲ್ಲಿ ವೈದಿಕ ವಾಙ್ಮಯದಲ್ಲಿ ಕಂಡುಬರುತ್ತವೆ. ಅಸ್ಪಷ್ಟವಾದ ವೈದಿಕ ಕಾಲವನ್ನು ಬಿಟ್ಟು ಸೌತ್ರ ಹಾಗು ಸ್ಮಾರ್ತ ಕಾಲದಲ್ಲಿ ಒಂದು ನೋಡಿದರೆ ನಾಲ್ಕು ವರ್ಣಗಳ ವೈವಾಹಿಕ ಪದ್ಧತಿಯ ವ್ಯುತ್ಕ್ರಮದಿಂದುಂಟಾದ ಅನುಲೋಮ ಪ್ರತಿಲೋಮ ಜಾತಿಗಳ ವಿವರಣೆಯೂ, ಬೇರೆ ಬೇರೆ ಜಾತಿಗಳ ಸಂಗತಿಯೂ ಸಾಕಷ್ಟು ಸಿಗುವವು. ಜಾತಿವಿವೇಕ, ಶೂದ್ರಕಮಲಾಕರ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯವನ್ನು ಧಾರಾಳವಾಗಿ ಚರ್ಚಿಸಿರುವುದರಿಂದ ಸಂಸ್ಕೃತಜ್ಞರು ಆ ಗ್ರಂಥಗಳಿಂದ ತಮ್ಮ ಸಮಾಧಾನವನ್ನು ಸುಲಭವಾಗಿ ಮಾಡಿಕೊಳ್ಳಬಹುದು.

ಮುಖ್ಯವಾಗಿರುವ ನಾಲ್ಕು ವರ್ಣಗಳಲ್ಲಿ ಅನೇಕ ಜಾತಿಗಳು ಮತ್ತು ಉಪಜಾತಿಗಳು ಹೇಗಾದವು? ಈ ಪ್ರಶ್ನೆಯನ್ನು ಕುರಿತು ಆಲೋಚಿಸಿದರೆ ನಮ್ಮ ಪ್ರಾಚೀನರಾದ ಮತ್ತು ಅರ್ವಾಚೀನರಾದ ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞರು ಸೋಪಪತ್ತಿಕವಾಗಿ ಹೇಳುವ ಅನೇಕ ಕಾರಣಗಳಲ್ಲಿ ಮಹತ್ವದ ಒಂದೆರಡು ಕಾರಣಗಳನ್ನು ಇಲ್ಲಿ ತೋರಿಸಬಹುದು. ಮಾನವ ಸೃಷ್ಟಿಯು ಪ್ರಥಮತಃ ಚತುರ್ವಿಧವಾಗಿ ಸೃಷ್ಟಿಸಲ್ಪಟ್ಟಿದ್ದು ದೇಶಕಾಲ ಪರಿಸ್ಥಿತಿಯ ಮೂಲಕ ಬಹು ವಿಧವಾಯಿತು. (ಇಲ್ಲಿ 'ದೇಶಕಾಲ ಪರಿಸ್ಥಿತಿ' ಎಂಬ ಹೇತುವು ಸಾಭಿಪ್ರಾಯವಾಗಿದೆ) ಉದಾಹರಣಾರ್ಥವಾಗಿ ಒಂದು ಬ್ರಾಹ್ಮಣವರ್ಣವನ್ನೇ ಇಟ್ಟುಕೊಳ್ಳುವ! ಗೌಡ, ದ್ರಾವಿಡ ಈ ದೇಶಗಳ ದೆಸೆಯಿಂದ ಬ್ರಾಹ್ಮಣ ವರ್ಗದಲ್ಲಿ ಎರಡು ಭೇದಗಳಾದವು. ಆ ಎರಡು ವರ್ಗಗಳಲ್ಲಿಯೂ ಪುನಃ ಬೇರೆ ಬೇರೆ ದೇಶಗಳಿಂದಲೂ, ಆಚಾರ ವಿಚಾರಗಳಿಂದಲೂ ಕಾನ್ಯಕುಬ್ಜ, ಸಾರಸ್ವತ, ಮೈಥಿಲ, ಕನೋಜ ಹಾಗೂ ಆಂಧ್ರ, ದ್ರಾವಿಡ, ದೇಶಸ್ಥ, ಗುರ್ಜರ, ಕರ್ನಾಟಕ ಮುಂತಾದ ಭೇದಗಳೂ ಅಸ್ತಿತ್ವದಲ್ಲಿ ಬಂದವು. ಒಂದೇ ಬ್ರಾಹ್ಮಣ ಶಾಖೆಯಲ್ಲಿ ಈ ಪ್ರಕಾರ ಹೇಗೆ ಎಷ್ಟೋ ಭೇದಗಳಾದವೋ ಹಾಗೆಯೆ ಬ್ರಾಹ್ಮಣೇತರರಲ್ಲಿಯೂ ವಿವಿಧ ಭೇದಗಳಾದವು. ಆದರೆ ದ್ವಿಜೇತರರಲ್ಲಿ ಬೇರೆ ಬೇರೆ ಜಾತಿಗಳಾಗಲಿಕ್ಕೆ ದೇಶಕಾಲ ಪರಿಸ್ಥಿತಿಯಂತೆಯೇ ವೃತ್ತಿ-ಉದ್ಯೋಗವೂ ಕೂಡ ಕಾರಣವಾಗಿದೆಂಬದನ್ನು ಮರೆಯಕೂಡದು. ಜಾತಿಗಳ ವೈವಿಧ್ಯಕ್ಕೆ ಕಾರಣಗಳಾದ ಈ ಎರಡೂ ಸಂಗತಿಗಳನ್ನು ಅನುಗಮ ರೂಪದಿಂದ ಎಂದರೆ ಏಕಪ್ರಕಾರವಾಗಿ—ದೇಶಕಾಲ ಪರಿಸ್ಥಿತಿ ವೃತ್ತ್ಯನ್ಯತರವೇ ಕಾರಣವೆಂದು ಶಾಸ್ತ್ರೀಯ ಭಾಷೆಯಲ್ಲಿ ಹೇಳಬಹುದು. ಇದರ ಮೇಲಿಂದ ಜಾತಿಭೇದವು ದೇಶಕಾಲ ಪರಿಸ್ಥಿತಿ ಮತ್ತು ವೃತ್ತಿ ಇವುಗಳಿಂದಾದುದೆಂದು ಸ್ಪಷ್ಟವಾಗುತ್ತದೆ. "ಭಾರತೀಯನು" ಹೇಳುವಂತೆ

ಜಾತಿಭೇದವು ಅಜ್ಞಾನ ಜನ್ಯವಾದ ಭ್ರಾಂತಿಯಲ್ಲ.

ಹಿಂದೂದೇಶದೊಳಗಿನ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ಶಾಖೆಗಳಲ್ಲಿ ಸಮಾಜವೃಕ್ಷಕ್ಕೆ ಹೇಗೆ ೪೦೦೦ಗಿಂತ ಹೆಚ್ಚು ಶಾಖೆಗಳಾದವು ಎಂಬ ಪ್ರಶ್ನೆಯನ್ನೇ ಐತಿಹಾಸಿಕ ದೃಷ್ಟಿಯಿಂದ ವಿಚಾರಿಸಿದರೂ ಅದರಲ್ಲಿ ಆಶ್ಚರ್ಯ ತೋರುವುದಿಲ್ಲ. ಗಂಗಾನದಿಯು ಉದ್ಗಮಸ್ಥಾನದಲ್ಲಿ ಸೂಕ್ಷ್ಮವಾಗಿದ್ದರೂ ಮುಂದೆ ಬರಬರುತ್ತ ಬೇರೆ ಬೇರೆ ಊರುಗಳ ಜಲಪ್ರವಾಹಗಳನ್ನು ಒಳಕೊಂಡು ಹರಿಯುತ್ತಿರುವಾಗ ಅದರ ಪಾತ್ರವು ಮೂಲಕ್ಕಿದ್ದುದಕ್ಕಿಂತ ಹೆಚ್ಚು ವಿಸ್ತೃತವೂ, ರೂಪಾಂತರವುಳ್ಳದ್ದೂ ಆದಲ್ಲಿ ಅದು ಕ್ರಮಪ್ರಾಪ್ತವೆಂತಲೇ ತಿಳಿಯಬೇಕಾಗುತ್ತದೆ. ವೃಕ್ಷದ ದೃಷ್ಟಾಂತವನ್ನಿಟ್ಟುಕೊಂಡರೂ ಬುಡದಲ್ಲಿ ಏಕಸ್ಕಂಧಾತ್ಮಕವಾದ ಮರಕ್ಕೆ ಮೇಲೆ ಮೇಲೆ ಅನೇಕ ಶಾಖೆಗಳುಂಟಾಗುವುದು ಆಶ್ಚರ್ಯವೇ? ಈ ದೃಷ್ಟಾಂತ ಸಂಗತಿಗಳನ್ನು ಬಿಟ್ಟು ಪ್ರತ್ಯಕ್ಷ ದಾರ್ಷ್ಟಾಂತಿಕ ಪ್ರಮೇಯವನ್ನೇ ಆಲೋಚಿಸಿರಿ. ನಮ್ಮ ಈ ಪುರಾಣಸಮಾಜವು ಪುರಾಣ ಕಾಲದಿಂದ ಎಷ್ಟೋ ಆಘಾತಗಳನ್ನು ಸಹಿಸುತ್ತ ಬಂದಿದೆ. ಪ್ರಾಚೀನಕಾಲದಿಂದ ಈ ದೇಶದ ಮೇಲೆ ಸೀರಿಯನ್ನ, ಗ್ರೀಕ, ಮೊಗಲ ಮುಂತಾದ ಅನೇಕರು ಆಗಾಗ್ಗೆ ದಂಡೆತ್ತಿ ಬಂದುದರಿಂದ ಏಕಪ್ರಕಾರವಾಗಿರುವ ಸಮಾಜವು ದೇಶದ ದೂರದೂರದ ಭಾಗಗಳಲ್ಲಿ ಚದರಿಸಲ್ಪಟ್ಟಿತ್ತು. ಇಂತಹ ಸ್ಥಿತ್ಯಂತರದಲ್ಲಿ ಪ್ರಾಚೀನ ಹಿಂದೂಸ್ಥಾನವು ತನ್ನ ಆಯುಃಕಾಲವನ್ನು ಕಳೆಯುವಾಗ ಅದರ ಸಮಾಜಗಳಲ್ಲಿ ಕೆಲವು ರೂಪಾಂತರ ಆಗುವುದು ಉಚಿತವೇ. ಈ ಐತಿಹಾಸಿಕ ವಸ್ತುಸ್ಥಿತಿಯನ್ನು ಆಲೋಚಿಸಿದರೂ ಕೂಡ ಜಾತಿಭೇದವು "ಅಜ್ಞಾನ ಜನ್ಯಭ್ರಾಂತಿ"ಯಲ್ಲೆಂತಲೇ ಹೇಳಬೇಕಾಗುತ್ತದೆ.

ಇಲ್ಲಿ ಒಂದು ಆಕ್ಷೇಪವು ಬರುವುದೇನೆಂದರೆ,—ಬ್ರಾಹ್ಮಣ, ಕ್ಷತ್ರಿಯ ಪ್ರಭೃತಿ ವರ್ಣಗಳು ಗುಣಕರ್ಮ ಮೂಲಕಗಳಲ್ಲದೆ ಉತ್ಪತ್ತಿ ಸಿದ್ಧಗಳಲ್ಲ. ಈ ಆಕ್ಷೇಪಕ್ಕೆ ಅನೇಕ ಸಾಧಕ ಬಾಧಕಗಳಿದ್ದಾವೆ. ಆದರೂ ಆಸ್ತಿಕ್ಯಬುದ್ಧಿಯಿಂದ "ವೇದ ವೇದಾಂತ" ('ಷೋಡಶ'ವಲ್ಲ) ಷಟ್ "ಶಾಸ್ತ್ರ" ಮುಂತಾದ್ದು ಪ್ರಮಾಣವೆಂದು ತಿಳಿದುಕೊಳ್ಳುವ ಶಾಸ್ತ್ರ ಜಿಜ್ಞಾಸುಗಳ ಸಮಾಧಾನಕ್ಕಾಗಿ ಒಂದೇ ವೇದವಚನವನ್ನು ಪ್ರಮಾಣಕ್ಕೇ ಉದಾಹರಿಸುತ್ತೇವೆ. ಅದೇನೆಂದರೆ "ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ" ಇತ್ಯಾದಿ ಈ ಮಂತ್ರವು ಹುಟ್ಟುಬ್ರಾಹ್ಮಣನು ಋಣತ್ರಯವುಳ್ಳವನೆಂತಲೂ ಆ ಋಣಗಳನ್ನು ಯಜ್ಞ, ಪ್ರಜೋತ್ಪತ್ತಿ ಮೊದಲಾದವುಗಳಿಂದ ಬಗೆಹರಿಸಬೇಕೆಂತಲೂ ಹೇಳುತ್ತದೆ. ಈ ಮಂತ್ರವು ಈ ಬಗೆಯಾಗಿ ಅರ್ಥಾಂತರವನ್ನು ಕೊಟ್ಟರೂ 'ಬ್ರಾಹ್ಮಣ' ಪದಕ್ಕೆ ಸಂಬಂಧಿಸಿರುವ 'ಜಾಯಮಾನ'ವೆಂಬ ಅನುವಾದ್ಯ ವಿಶೇಷಣದಿಂದ ವರ್ಣಗಳ ಗುಣಕರ್ಮಸಿದ್ಧಗಳಲ್ಲ, ಉತ್ಪತ್ತಿಸಿದ್ಧಗಳೆಂಬೀ ಅಂಶವನ್ನು ನಿರ್ಭ್ರಾಂತವಾಗಿ ಸ್ಥಾಪಿಸುತ್ತದೆ. ಬ್ರಾಹ್ಮಣತ್ವವು ಗುಣಕರ್ಮಸಿದ್ಧವಿದ್ದುದಾದರೆ ಆ ಮಂತ್ರವು 'ಜಾಯಮಾನೋ ಬ್ರಾಹ್ಮಣಃ' ಎಂದರೆ ಹುಟ್ಟುಬ್ರಾಹ್ಮಣನು ಎಂತ ಏಕೆ ಅನುವಾದಿಸಬೇಕಿತ್ತು? ವರ್ಣಗಳ ಗುಣಕರ್ಮ ಮೂಲಕವೆಂತ ತಿಳಿದುಕೊಳ್ಳುವಪಕ್ಷದಲ್ಲಿ ಉಪರ್ಯುಕ್ತ ಅನುವಾದ್ಯ ವಿಶೇಷಣಕ್ಕೆ ವೈಯರ್ಥ್ಯವು ಪ್ರಾಪ್ತವಾಗುತ್ತದೆ. ಶಾಸ್ತ್ರಜ್ಞನವ [illegible]

ಇದ್ದವರಿಗೆ ನಮ್ಮ ಈ ವಿಧಾನವು ಸಮಾಧಾನಕರವೇ ಆಗುವುದು. ಇದರಂತೆಯೇ ಮನುಸ್ಮೃತಿಯಲ್ಲಿ ಕೂಡ "ಬ್ರಾಹ್ಮಣೋ ಜಾಯಮಾನೋಹಿ" (ಅಧ್ಯಾಯ ೧, ಶ್ಲೋಕ ೯೯)- ಇತ್ಯಾದಿ ಹೇಳಿರುವುದರಿಂದ ವೇದಕಾಲದಾರಭ್ಯ ಸ್ಮೃತಿಕಾಲ ವರೆಗೆ ವರ್ಣೋತ್ಪತ್ತಿ ವಿಷಯದಲ್ಲಿ "ಮಹನೀಯರಾದ ನಮ್ಮ ಪೂರ್ವಜರ" ಮತವು ಹೇಗಿತ್ತೆಂಬುದು ತನ್ನಷ್ಟಕ್ಕೆ ವಿಶದವಾಗುತ್ತದೆ. ಶ್ರೀರಾಮನ ಆಳಿಕೆಯಲ್ಲಿ ವರ್ಣಧರ್ಮಗಳನ್ನು ಅತಿಕ್ರಮಿಸಲು ಉದ್ಯುಕ್ತನಾದ ಶಂಬೂಕನೆಂಬ ಶೂದ್ರನ ವ್ಯವಸ್ಥೆಯು ಏನಾಯಿತೆಂಬುವುದು ಪುರಾಣಶ್ರೋತೃಗಳಿಗೆ ವೇದ್ಯವೇ ಇದ್ದಕಾರಣ ಅದನ್ನು ನಾವು ಇಲ್ಲಿ ಪ್ರಸ್ತಾಪಿಸುವುದಾಗಲಿ "ಕಪಿಲಾಕ್ಷೀರಪಾನೇನ ಬ್ರಾಹ್ಮಣೀ ಗಮನೇನ ಚ । ವೇದಾಕ್ಷರ ವಿಚಾರೇಣ ಶೂದ್ರಶ್ಚಾಂಡಾಲತಾಂ ವ್ರಜೇತ್ ॥" ಎಂಬೀ ಸ್ಮೃತಿವಚನವನ್ನು ಅರ್ಥತಃ ಸ್ಪಷ್ಟಪಡಿಸುವುದಾಗಲಿ ಅಗತ್ಯವಿಲ್ಲ. ಹೀಗಿರಲು ಲಾರ್ಡ್ ಕರ್ಜನ್ ದೊರೆಗಳ ಆಳಿಕೆಯಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ 'ಎಜುಕೇಶನ್ ಬಿಲ್ಲನ್ನು ಹೃತ್ಪೂರ್ವಕವಾಗಿ ಸಮ್ಮತಿಸಿದ ವಿದ್ವಚ್ಛಿಖಾಮಣಿಗಳಾದ ಡಾ ಭಾಂಡಾರಕರರು ತಿಳಿಯುವಂತೆ "ಆಗಿನ ಕಾಲದಲ್ಲಿ ಬ್ರಾಹ್ಮಣಿಕೆಯು ಯೋಗ್ಯತೆಯಿಂದ ಸಂಪಾದಿಸುವ ಪದವಿಯಾಗಿತ್ತೆಂತಲೂ, ಈಗಿನ ಕಾಲದಲ್ಲಿ ಜನನದಿಂದ ಲಭಿಸತಕ್ಕ ಹಕ್ಕಾಗಿದೆ"ಯೆಂತಲೂ ಒಡಂಬಟ್ಟರೆ ಮೇಲಿನ ವಾಕ್ಯಗಳಿಗೂ ಈ ಶಂಬೂಕನ ವೃತ್ತಾಂತಕ್ಕೂ ಯಾವ ಸಮಾಧಾನವೆಂಬುದು ಭಾಂಡಾರಕರರ ಶಿಷ್ಯರಾಗಲಿ ಸ್ವತಃ ಭಾಂಡಾರಕರರಾಗಲಿ ಹೇಳಬಹುದೋ?

(ಮುಂದರಿಯುವುದು)

Progress of Literature, Science and Art.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

ಹಿಂದೂಸ್ಥಾನದಲ್ಲಿ ಈಗ ಇರುವ ಐದು ಯೂನಿವರ್ಸಿಟಿಗಳಲ್ಲದೆ ಇನ್ನು ಪಾಟ್ಣಾದಲ್ಲಿಯೂ ನಾಗಪುರದಲ್ಲಿಯೂ ಒಂದೊಂದು ವಿಶ್ವವಿದ್ಯಾಲಯವನ್ನು ನೂತನವಾಗಿ ಏರ್ಪಡಿಸಬೇಕೆಂದು ದೊರೆತನದವರು ಉದ್ದೇಶಿಸಿರುವರು. ಈ ವಿಷಯವಾಗಿ ಡಾಕ್ಟರ್ ಎಸ್. ವಿ. ಕೇತಕರ್ ಪಿ. ಎಚ್. ಡಿ ಯವರು ಒಂದು ಮನವಿಯನ್ನು ಸಿದ್ಧಪಡಿಸಿರುವರೆಂದೂ, ಅದಕ್ಕೆ ಬಿರಾರಿನ ನಲವತ್ತು ಮಂದಿಗಿಂತ ಹೆಚ್ಚು ಜನ ವಕೀಲರು ಒಪ್ಪಿತವನ್ನು ಹಾಕಿರುವರೆಂದೂ, ಅದು ಕ್ಷಿಪ್ರದಲ್ಲಿಯೆ ದೊರೆತನದವರಿಗೆ ಅರ್ಪಿಸಲಾಗುವುದೆಂದೂ ತಿಳಿಯಬರುತ್ತಿದೆ. ಹೊಸ ಯೂನಿವರ್ಸಿಟಿಯನ್ನು 'ರಾಷ್ಟ್ರೀಯ ಪದ್ಧತಿ' (national lines)ಗೆ ಅನುಗುಣವಾಗಿ ಏರ್ಪಡಿಸಬೇಕೆಂಬುದೇ ಮನವಿಯ ಉದ್ದೇಶವಾಗಿದೆ ಮತ್ತು ಅದಕ್ಕೆ ಸಾಧಕವಾಗಿ (i) ಇಂಗ್ಲಿಷ್, ಪ್ರಾಣಿಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ವಿನಾ ಬೇರೆ ಯಾವತ್ತು ವಿಷಯಗಳಲ್ಲಿ ಶಿಕ್ಷಣವೂ ಪರೀಕ್ಷೆಯೂ ದೇಶಭಾಷೆಗಳ ಮೂಲವಾಗಿ ನಡೆಯಬೇಕೆಂದೂ (ii) ಪ್ರಾಚೀನ (classical) ಭಾಷೆಗಳು ಆವಶ್ಯಕ ವಿಷಯವಾಗಿರಬೇಕೆಂದೂ, (iii) ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಸಿಕ್ಕಬಹುದಾದ ಯಾವತ್ತು ಗ್ರಂಥಗಳನ್ನೂ ಚಾರಿತ್ರಿಕ ಕಾಗದ ಪತ್ರಗಳನ್ನೂ ಸಂಗ್ರಹಿಸಲು ಯೂನಿವರ್ಸಿಟಿಯವರು ಈಗಳಿಂದಲೇ ಪ್ರಯತ್ನಿಸಬೇಕೆಂದೂ (iv) ಸ್ವದೇಶೀಯ ವೈದ್ಯಶಾಸ್ತ್ರದಲ್ಲಿ ಶಿಕ್ಷಣ ಕೊಟ್ಟು ಅದನ್ನು ಉದ್ಧರಿಸಬೇಕೆಂದೂ ಅದರೊಂದಿಗೆ ಶರೀರಶಾಸ್ತ್ರ (anatomy and physiology)ವೇ ಮುಂತಾದ ಅರ್ವಾಚೀನ ಶಾಸ್ತ್ರಗಳನ್ನು ಕಲಿಸಬೇಕೆಂದೂ ಏಕಾನುಮತದಿಂದ ಪ್ರಾರ್ಥಿಸಲಾಗಿದೆ. ಇದಲ್ಲದೆ, ದೇಶಭಾಷಾ ಮೂಲವಾಗಿ ಕಸಬುಗಾರಿಕೆಯ ವಿದ್ಯೆಗಳನ್ನು ಕಲಿಸಬೇಕೆಂದೂ ಭಾರತೀಯ ಜ್ಯೋತಿಷ, ಧರ್ಮಶಾಸ್ತ್ರ, ಸಮಾಜ ಶಾಸ್ತ್ರಗಳ ಪಠನಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸಹ ಮನವಿ ಮಾಡಿದವರೊಳಗೆ ಕೆಲವರು ಸೂಚಿಸಿರುವರು. ಯವತಮಾಳದ ಜಿಲ್ಲಾ ಸಭೆಯವರು ಕೂಡ ಇದೇ ಮೇರೆಗೆ ಪ್ರಾರ್ಥಿಸಿರುವರು.

* * *

ಭಾಸ ಮಹಾಕವಿಯ ಗ್ರಂಥಗಳು ತಿರುವಾಂಕೋಡು ಸಂಸ್ಥಾನದಲ್ಲಿ ಮೊದಲಿಗೆ ಕಂಡುಹಿಡಿದು ಪ್ರಚುರಗೊಳಿಸಲಾದುವಷ್ಟೆ. ಇದರ ಸ್ಮರಣಾರ್ಥವಾಗಿ 'ಶ್ರೀ ಮೂಲ ಭಾಸೋಲ್ಲಾಸಮ್' ಎಂಬ ಒಂದು ಸಭೆಯನ್ನು ತಿರುವನಂತಪುರದಲ್ಲಿ ನೂತನವಾಗಿ ಹೊರಡಿಸುವರೆಂದೂ ಸಾಹಿತ್ಯ ವಿಷಯಕ ಉಚ್ಚ ತರಗತಿಯ ಪರಿಶೋಧನವೇ ಇದರ ಉದ್ದೇಶವೆಂದೂ, ಈ ಸಭೆಯವರು ಮುಖ್ಯವಾಗಿ ಸಾಹಿತ್ಯ, ಪರಿಶೀಲನಾದಿ ಕಾರ್ಯಗಳಿಗೇ ವಿನಿಯೋಗಿಸಲ್ಪಡತಕ್ಕ ಒಂದು ನಿಯತಕಾಲಿಕ (periodical)ವನ್ನು ಮಲಯಾಳ ಭಾಷೆಯಲ್ಲಿ ಹೊರಡಿಸುವರೆಂದೂ ತಿಳಿಯಬರುತ್ತಿದೆ.

* * *

ಮಹಾಪುರುಷರಲ್ಲಿ ಗೋಚರಿಸುವ ಪ್ರತಿಭೆ (Genius) ಎಂಬುದು ಅವರಲ್ಲಿ ಮಾತ್ರ ಕಂಡುಬರುವ ಒಂದು ಗುಣ ವಿಶೇಷವೇ? ಅಥವಾ ಅನುಕೂಲ ಪರಿಸ್ಥಿತ್ಯನುಗುಣವಾಗಿ ಅದು ಸಮಸ್ತರಲ್ಲಿಯೂ ತೋರಿಸಿಕೊಳ್ಳಬಹುದಾದ ವಿಷಯವೇ?— ಎಂಬೀ ಸಂಗತಿಯು ಪಾಶ್ಚಿಮಾತ್ಯ ಪಂಡಿತ ಮಂಡಲಿಯಲ್ಲಿ ಚರ್ಚಾ ವಿಷಯವಾಗಿ ನಿಂತಿದೆ. ಪ್ರೊ ವಿಲ್ಲಿಯಮ್ ಬೇಟ್ಸನ್ (Prof. William Bateson) ಎಂಬ ವೈಜ್ಞಾನಿಕ ಶಿರೋಮಣಿಗಳು ಬ್ರಿಟಿಷ್ ಅಸೋಸಿಯೇಶನ್ (British Association) ಎಂಬ ಸಂಘದ ಪರಿಷತ್ತು ಕೂಡಿದಾಗ ಅಧ್ಯಕ್ಷಸ್ಥಾನದಿಂದ ಮಾಡಿದ ಉಪನ್ಯಾಸದಲ್ಲಿ ಇಂತೆಂದರು 'ಜನರಲ್ಲಿ ಕಂಡುಬರುವ ಪ್ರತಿಭೆಯೆಂಬ ಗುಣವಿಶೇಷವು, ಜನಸಾಮಾನ್ಯರಲ್ಲಿ ಸಹಜವಾಗಿ ಕಂಡುಬರುವ ಲಕ್ಷಣಗಳಿಗೆ ಬೇರೆ ಲಕ್ಷಣಗಳು ಹೆಚ್ಚಾಗಿ ಸೇರಿದುದರಿಂದ ತೋರಿಬರುವ' ವಿಷಯವಲ್ಲವೆಂದೂ, ಇಂಥ ಲಕ್ಷಣಗಳು ಸಾಮಾನ್ಯವಾಗಿ ಸಮಸ್ತರಲ್ಲಿಯೂ ನಿಗೂಢ (latent)ವಾಗಿ ನೆಲಸಿರುವವೆಂದೂ, ಆದರೆ ವರ್ಧಿಸಲು ಅವಕಾಶವಿಲ್ಲದೆ ಅಮುಕಿ ಹಿಡಿದಂತಿರುವುವೆಂದೂ, ಇಂಥ ಪ್ರತಿಕೂಲವಾದ ಪರಿಸ್ಥಿತಿಯ ಅಭಾವ (absence)ವೇ ಪ್ರತಿಭೆಯೆಂದೂ ನಾನು ನಂಬುಗೆಯಾಗಿ ಹೇಳಬಲ್ಲೆನು. ಮನುಷ್ಯರನ್ನು ಒಂದು ವಾದ್ಯಕ್ಕೆ ಹೋಲಿಸಬಹುದು. ಜನಸಾಮಾನ್ಯರು ತೂತು ಮುಚ್ಚಿದ ವಾದ್ಯದಂತಿರುವರು, ಆ ತೂತುಗಳು ತೆರೆಯಲ್ಪಟ್ಟ ಒಡನೆಯೇ ಪ್ರತಿಭೆಯೆಂಬ ದಿವ್ಯ ಸ್ವರವು ಹೊರಡುವುದು'—ಇತ್ಯಾದಿ. ಈ ಮಹನೀಯರು ವಂಶಾಗತ ಸಿದ್ಧಾಂತ (theory of heredity)ವನ್ನು ನಂಬುವುದಿಲ್ಲವೆಂದು ತೋರುತ್ತಿದೆ, ಮತ್ತು ವಿದ್ಯಾಭ್ಯಾಸವೇ ಮುಂತಾದ ಅನುಕೂಲ ಪರಿಸ್ಥಿತಿಯು ಲಭಿಸಿದುದೇ ಆದರೆ ಸಮಸ್ತರೂ ಪ್ರತಿಭಾ ಸಂಪನ್ನರಾಗಬಹುದೆಂಬ ಅರ್ಥವನ್ನು ಸೂಚಿಸುತ್ತಿರುವರು ತಥಾಪಿ ಇವರ ವಾದದ (theory) ದೆಸೆಯನ್ನು ನೋಡಿದರೆ ಪತಂಜಲಿ ಮಹರ್ಷಿಯ ಯೋಗಶಾಸ್ತ್ರದ ತತ್ವಗಳು ಸ್ಮರಣೆಗೆ ಬರುತ್ತಿವೆ

* * *

ಪ್ರೊ ರಾಮಲಿಂಗ ರೆಡ್ಡಿಯವರು 'ಭಾರತವರ್ಷದಲ್ಲಿ ವಿದ್ಯಾಭ್ಯಾಸದ ಆವಶ್ಯಕತೆಗಳು ಎಂಬ ವಿಷಯವಾಗಿ ಕಳೆದ ಅಕ್ಟೋಬರು ೭ನೇ ತಾರೀಕಿನ ದಿನ ಮದರಾಸಿನಲ್ಲಿ ಉಪನ್ಯಸಿಸಿದಾಗ ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದ ಡಾ ಸರ್ ಎಸ್. ಸುಬ್ರಹ್ಮಣ್ಯಯ್ಯರ್‌ರವರು ಉಪಸಂಹಾರ ಕಾಲದಲ್ಲಿ ದೇಶಭಾಷಾ ವಿಷಯವಾಗಿ ಇಂತೆಂದರು "ಇಂಗ್ಲಿಷ್ ಭಾಷಾಭ್ಯಾಸದ ಮುಖ್ಯತೆಯನ್ನು ಎಷ್ಟು ತ್ವರೆಯಾಗಿ ಇಳಿಸಿ ದೇಶಭಾಷೆಗಳಿಗೆ ಪ್ರಾಧಾನ್ಯವನ್ನು ಕೊಡುವರೋ ಅಷ್ಟಕ್ಕೆ ದೇಶವು ಉನ್ನತಿಗೆ ಬರುವುದೆಂಬ ವಿಷಯದಲ್ಲಿ ಉಪನ್ಯಾಸಕರು ಹೇಗೋ ನಾನೂ ಹಾಗೆಯೇ ಏಕಾಭಿಪ್ರಾಯವುಳ್ಳವನಾಗಿರುವೆನು. ಜನರು ತಮ್ಮ ಸ್ವಭಾಷಾ ಜ್ಞಾನವನ್ನು ಚೆನ್ನಾಗಿ ಪಡೆಯುವತನಕ ಈ ದೇಶದಲ್ಲಿ ಯಾವ ಅಂಶದಲ್ಲಿಯೂ ಅಭಿವೃದ್ಧಿಗೆ ಅವಕಾಶವಿರುವುದಿಲ್ಲವೆಂಬ ವಿಷಯವು ವಿಚಾರಶೀಲರಾದ ಸಮಸ್ತರಿಗೂ ಮಂದಟ್ಟಾಗಿದೆ. ಈಗಳಿನ ದಿನಗಳಲ್ಲಿ ವೃತ್ತಪತ್ರಗಳು ವಿದ್ಯೆಯನ್ನು ಹರಡಿಸತಕ್ಕ ಮಾರ್ಗಗಳೊಳಗೆ ಒಂದಾಗಿವೆ. ಉತ್ತಮವಾದ ಒಂದು ದೇಶಭಾಷಾ ಪತ್ರಿಕೆಯಿಂದ ಉಂಟಾಗುವ ಪ್ರಯೋಜನವು ಇಂಡಿಯದಲ್ಲಿಯ ಯಾವತ್ತು ಇಂಗ್ಲಿಷ್ ಪತ್ರಿಕೆಗಳ ಮೂಲವಾಗಿ ಉಂಟಾಗಲಾರದು...... ಮೆಕಾಲೆ (Macaulay)ಯ ಕಾಲದಲ್ಲಿ ಆತನು ವಿದ್ಯಾಭ್ಯಾಸವನ್ನು ಇಂಗ್ಲಿಷ್ ಭಾಷೆಯ ಮೂಲವಾಗಿ ಕೊಡುವ ಏರ್ಪಾಡು ಮಾಡಿದನು. ಆಗ ಅದು ತಪ್ಪಾಗಿರಲಿಲ್ಲ. ಆತನಲ್ಲಿ ತ್ರಿಕಾಲ ಜ್ಞಾನಶಕ್ತಿ ಇರುತ್ತಿದ್ದರೆ, ಆತನು ಭಾರತವರ್ಷದ ಭಾವಿ ಕಾಲವನ್ನು ಆಗಲೇ ನೋಡಬಲ್ಲ ಋಷಿಯಾಗಿದ್ದರೆ, ಬಹುಶಃ ಆತನು ಈ ವಿಷಯದಲ್ಲಿ ಅನ್ಯವಿಧವಾಗಿ ವರ್ತಿಸುತ್ತಿದ್ದನೇನೋ! ಆದರೆ ಆತನಲ್ಲಿ ಅಷ್ಟು ದೂರದ ವರೆಗೂ ನೋಡುವ ಶಕ್ತಿಯಿರಲಿಲ್ಲ, ಆತನಿಗೆ ಭಾರತವರ್ಷದ ಚರಿತ್ರೆಯಾಗಲೀ ಹಿಂದೂಗಳ ದರ್ಶನಶಾಸ್ತ್ರವಾಗಲೀ ತಿಳಿದಿರಲಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯನ್ನೂ ವಿದ್ಯೆಯನ್ನೂ ಭಾರತವರ್ಷದಲ್ಲಿ ವ್ಯಾಪ್ತಗೊಳಿಸುವುದಕ್ಕೆ ಆ ದಿನಗಳಲ್ಲಿ ಇಂಗ್ಲಿಷು ಭಾಷೆಯೇ ತಕ್ಕುದಾಗಿದ್ದಿತು. ಆದರೆ ಆ ಕಾಲವು ಈಗ ದಾಟಿ ಹೋಗಿದೆ. ಮತ್ತು ಮೆಕಾಲೆಯ ಕ್ರಮವನ್ನು ತಳ್ಳಿಬಿಡುವ ಸುಸಮಯವು ಪ್ರಾಪ್ತವಾಗಿದೆ.

ಮದ್ಯಪಾನ ಅಭ್ಯಾಸದ ಹುಟ್ಟಡಗಿಸುವದ ಹಿಂದೂಸ್ಥಾನದಲ್ಲಿ ಕಷ್ಟಸಾಧ್ಯವೋ?

ಮದ್ಯಪಾನವು ಮಾನವ ಜನ್ಮದ ಸರ್ವನಾಶವನ್ನುಂಟುಮಾಡುವ ಮಹಾ ವ್ಯಾಧಿಯಾಗಿದೆಂಬದು ಯೂರೋಪ ಖಂಡದಲ್ಲಿ ಯುದ್ಧ ಪ್ರಾರಂಭವಾದ ಬಳಿಕದು ತಿಂ

ಕೊಳಗಿನೇ ತಿಳಿದು ಬಂದದೆಂಬ ವಿಷಯವು ವಾಚಕರಿಗೆ ಹೊಸದಲ್ಲ; ರುಶ್ಯಾ ದೇಶದ ಜನರನ್ನು ಅಧೋಗತಿಗೆ ಒಟ್ಟುತ್ತಿದ್ದ ಒಡ್ಕೋಕ ಎಂಬ ಪಾನವನ್ನು ಯುದ್ಧ ತೀರುವವರೆಗೆ ರಶ್ಯಾ ದೇಶದಲ್ಲಿ ಮಾರಲೂ, ಮಾಡಲೂ ಕೊಡದೆಂಬ ಕಟ್ಟಾಜ್ಞೆಯು ರುಶ್ಯಾ ಸರಕಾರದವರಿಂದ ಯುದ್ಧ ಪ್ರಾರಂಭವಾಗಿ ೩ ೪ ತಿಂಗಳೊಳಗೆ ಹೊರಟಿತಲ್ಲದೆ ಈಗ ತಾನೇ ಯುದ್ಧ ತೀರಿದನಂತರವೂ ಈ ಮದ್ಯಪಾನವನ್ನು ರುಶ್ಯ ದೇಶದಲ್ಲಿ ಮಾಡಕೊಡದೆಂಬ ಕಟ್ಟಾಜ್ಞೆಯಾಗಿದೆ. ಈ ಪಾನಕವನ್ನು ನಿಲ್ಲಿಸಿದುದರಿಂದ ಸರಕಾರಕ್ಕೆ ವರ್ಷ ಒಂದಕ್ಕೆ ಉಂಟಾಗುವ ಮಿಲಿಯಾನುಮಿಲಿಯ ಪವನುಗಳ ನಷ್ಟವನ್ನು ಕೂಡಾ ರುಶ್ಯಾ ಸರಕಾರದವರ ಲಕ್ಷೀಕರಿಸಲಿಲ್ಲವೆಂಬುದು ಒಂದು ಮಹತ್ತಾದ ವಿಷಯವಾಗಿದೆ. ಇಂಗ್ಲಂಡ್, ಫ್ರಾನ್ಸ್ ಮೊದಲಾದ ಮಿತ್ರರಾಜ್ಯಗಳ ಸರಕಾರದವರೂ ಈ ಮದ್ಯಪಾನದಿಂದ ಉಂಟಾಗುವ ಕೇಡನ್ನು ಈಗತಾನೇ ಚನ್ನಾಗಿ ಅರಿತ ಕೊಂಡವರಾಗಿರುವರು. ನಮ್ಮ ಚಕ್ರವರ್ತಿಯವರ ಭೋಜನ ಕಾಲದಲ್ಲಿ ಅರಮನೆಯಲ್ಲಿ ಮದ್ಯ ಸೇವಿಸುವದನ್ನು ಬಿಟ್ಟುಬಿಟ್ಟದ್ದರಿಂದ ಇಂಗ್ಲಾಂಡಿನ ಪ್ರಜಾ ಮುತಾಸದವರೂ ಇತರರೂ ನಮ್ಮ ಚಕ್ರವರ್ತಿಯವರ ಸತ್ಪಂಕ್ತಿಯನ್ನು ಅನುಸರಿಸಿರುವರಲ್ಲದೆ ಮದ್ಯಪಾನದ ಅಭ್ಯಾಸವನ್ನು ಖಂಡಿಸಿ ಅದರ ಹುಟ್ಟಡಗಿಸುವರೆ ಸಾವಿರಾರು ಸಂಘಗಳಿಂದ ವಿವಿಧ ಪ್ರಯತ್ನಗಳು ನಡೆಯುತ್ತಲಿವೆ. ಮದ್ಯಪಾನದ ಅಭ್ಯಾಸವು ಶಾಸ್ತ್ರವಿರುದ್ಧವಲ್ಲದ ಯೂರೋಪ ಖಂಡದವರು ಕೂಡಾ ಈ ಅಭ್ಯಾಸವನ್ನು ನಿಲ್ಲಿಸುವರೆ ಇಂಥಾ ಪ್ರಯತ್ನ ಮಾಡುತ್ತಿರುವಾಗ ಮದ್ಯಪಾನವು ಶಾಸ್ತ್ರವಿರುದ್ಧವಾಗಿರುವ ನಮ್ಮ ಹಿಂದೂಸ್ಥಾನದಲ್ಲಿ ಈ ಅಭ್ಯಾಸದ ಹುಟ್ಟಡಗಿಸುವದು ಕಷ್ಟಸಾಧ್ಯವೋ?

ಹಿಂದೂಸ್ಥಾನದಲ್ಲಿರುವ ಜನರಲ್ಲಿ ಹಿಂದುಗಳ ಮತ್ತು ಮಹಮದೀಯರ ಸಂಖ್ಯೆ ಅಧಿಕವಾಗಿರುವದು. ಮಹಮ್ಮದೀಯರು ಮದ್ಯಪಾನಿಗಳಲ್ಲ. ಅವರ ಶಾಸ್ತ್ರದಲ್ಲಿ ಮದ್ಯಪಾನವನ್ನು ಮಾಡಲೇ ಬಾರದೆಂಬ ಕಟ್ಟಾಜ್ಞೆ ಇದೆ. ಹೇಗೂ ಈ ಸಮುದಾಯದವರಲ್ಲಿ ಕೆಲವು ಗುಪ್ತರೀತಿಯಿಂದ ಮದ್ಯಪಾನಿಗಳಾಗಿರುವರಾದರೂ ಹಿಂದೂಸ್ಥಾನದಲ್ಲಿ ಮದ್ಯಪಾನದ ಅಭ್ಯಾಸವನ್ನು ನಿಲ್ಲಿಸಿ ಬಿಡಬೇಕೆಂದು ಸರಕಾರದವರು ಆಜ್ಞೆಮಾಡಿದರೆ ಸರಕಾರದವರ ಇಂಥಾ ಆಜ್ಞೆಗೆ ಬಹಿರಂಗವಾಗಿ ಎದುರು ನಿಲ್ಲುವದಕ್ಕೆ ಇಂಥವರನ್ನು ಅವರ ಶಾಸ್ತ್ರವು ಬಿಡದು. ಪ್ರಾಯಶಃ ಸರಕಾರದವರು ಈ ವಿಷಯದಲ್ಲಿ ಮಹಮ್ಮದೀಯರ ಬಹುಮತಿಯನ್ನು ಪಡೆಯಬೇಕೆಂದು ಇಚ್ಛಿಸಿ ಮಹಮ್ಮದೀಯರ ಮತ ಕೇಳಿದರೆ ಒಳ್ಳೆಪಕ್ಷದವರು ಈ ಅಭ್ಯಾಸವನ್ನು ಕಿತ್ತಿ ಬಿಸಾಡಬೇಕೆಂಬ ಮತವನ್ನೇ ಕೊಡುವರು.

ಹಿಂದೂಗಳಲ್ಲಿಯೂ ಮದ್ಯಪಾನವು ಶಾಸ್ತ್ರವಿರುದ್ಧವಾಗಿದೆ. ಮೇಲ್ಜಾತಿಯ ಹಿಂದೂಗಳು ಮದ್ಯಪಾನಿಗಳಲ್ಲ. ಇವರಲ್ಲಿಯೂ ಮಹಮದೀಯರಂತೆಯೇ ಅಲ್ಲಲ್ಲಿ ಒಬ್ಬಿಬ್ಬ ಮದ್ಯಪಾನಿಗಳಿರಬಹುದು. ಆದರೆ ಇಡೀ ಸಮುದಾಯದ ಸಂಖ್ಯೆಯನ್ನು ನೋಡಿದರೆ ಮದ್ಯಪಾನಿಗಳ ಸಂಖ್ಯೆಯು ಮೇಲ್ಜಾತಿಯ ಹಿಂದೂಗಳಲ್ಲಿ ಅತಿ ಅಲ್ಪವಾಗಿದೆ. ಮಧ್ಯಮ ತರಗತಿಯ ಹಿಂದೂಗಳಲ್ಲಿಯೂ ಈ ಮದ್ಯಪಾನವು ನಿಷೇಧಿಸಲ್ಪಟ್ಟಿರುತ್ತದೆ. ಬ್ರಾಹ್ಮಣರು ಮದ್ಯಪಾನವನ್ನು ಹೇಗೆ ನಿಷೇಧಿಸಿರುವರೋ ಅಷ್ಟೇ ಬಲವತ್ತಾಗಿ ಮಧ್ಯಮ ತರಗತಿಯ ಹಿಂದೂಗಳಲ್ಲಿಯೂ ಈ ಅಭ್ಯಾಸವು ನಿಷೇಧಿಸಲ್ಪಟ್ಟಿರುತ್ತದೆ. ಕೆಳ ತರಗತಿಯವರೆಂದು ಕರೆಯಲ್ಪಡುವ ಮೊಗೇರ, ಚಮಗಾರ, ಪಂಚಮ ಮೊದಲಾದ ವರ್ಗದವರಲ್ಲಿ ಹಿಂದೆ ಸೇಂದಿ ಮತ್ತು ಶರಾಬು ಕುಡಿಯುವ ಅಭ್ಯಾಸವು ಮಿತಿಮೀರಿ ಹೋಗಿತ್ತಾದರೂ ಈಗೀಗ ಆ ವರ್ಗದವರು ಕೂಡಾ ಈ ಅಭ್ಯಾಸದಿಂದ ತಂತಮ್ಮ ಸಮಾಜಗಳಿಗೆ ಉಂಟಾಗಿರುವ ಅಧೋಗತಿಯನ್ನು ತಿಳಕೊಂಡು ಅಲ್ಲಲ್ಲಿ ಮದ್ಯಪಾನ ನಿಷೇಧಕ ಸಮಾಜಗಳನ್ನು ಏರ್ಪಡಿಸಿ ಮದ್ಯಪಾನಕ್ಕೆ ಮುಟ್ಟುಗೋಲು ಹಾಕುತ್ತಿದ್ದಾರೆ. ಹೇಗೂ ಹಿಂದೂಸ್ಥಾನದಲ್ಲಿ ಕುಡಿಯುವ ಅಭ್ಯಾಸವನ್ನು ಶಾಸ್ತ್ರವಾಗಲೀ ಜನಸಮುದಾಯವಾಗಲೀ ಪ್ರೋತ್ಸಾಹಿಸುವದಿಲ್ಲವೆಂತ ಖಂಡಿತವಾಗಿ ಹೇಳಬಹುದು. ಹಾಗಾದರೆ ಈ ದೇಶದಲ್ಲಿ ಮದ್ಯಪಾನದ ಅಭ್ಯಾಸವನ್ನು ನಿಲ್ಲಿಸುವದು ಕಷ್ಟಸಾಧ್ಯವೋ? ಮದ್ಯವನ್ನು ಅಂಗಡಿಗಳಲ್ಲಿ ಪಾನವಾಗಿ ಮಾರುವದನ್ನು ನಿಲ್ಲಿಸಬೇಕೋ ಬೇಡವೊ ಎಂದು ಸರಕಾರದವರು ಜನಸಮುದಾಯದವರನ್ನು ಕೇಳಿದ್ದೇ ಆದರೆ ನಿಜವಾಗಿ ಬಹುಪಕ್ಷದವರು ಈ ಮದ್ಯದಂಗಡಿಗಳನ್ನೆಲ್ಲಾ ಮುಚ್ಚಲೇ ಬೇಕೆಂದು ಹೇಳುವದರಲ್ಲಿ ಅಡ್ಡಿ ಉಂಟೋ? ಸರಕಾರದವರ ಈ ಪ್ರಶ್ನೆಗೆ ಬಹುಮತವು ದೊರೆಯುವದರಲ್ಲಿ ಅನುಮಾನವಿಲ್ಲ ಎಂಬ ವಿಷಯವು ಮೇಲೆ ಸೂಚಿಸಿದ ಸಂಗತಿಗಳಿಂದ ರುಜುವಾಗುವದಾದರೆ ಹಿಂದೂಸ್ಥಾನದ ಜನಸಂಖ್ಯೆಯಲ್ಲಿ ಸೇಕಡಾ ೮೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯಾಗಿರುವ ಹಿಂದೂ ಮಹಮ್ಮದೀಯರು ನಿಜವಾಗಿಯೂ ಮದ್ಯಪಾನವನ್ನು ನಿಲ್ಲಿಸಬೇಕೆಂಬ ಮತವನ್ನು ಕೊಡುವರೆಂಬಂತಾಯಿತು. ಹೀಗಿರುವಾಗ ಹಿಂದೂಸ್ಥಾನದಲ್ಲಿ ಮದ್ಯಪಾನದ ಅಭ್ಯಾಸವನ್ನು ನಿಲ್ಲಿಸುವದು ಎಂದೂ ಕಷ್ಟಸಾಧ್ಯವಾಗಿರದು ಎಂದು ಧಾರಾಳವಾಗಿ ಹೇಳಬಹುದು.

ಪತ್ರವ್ಯವಹಾರ.

ಮಾಧವಾನುಜರ ಉತ್ಸಾಹ.

ಅಯ್ಯಾ,

ಅನಾಥಾಲಯವನ್ನು ಸ್ಥಾಪಿಸುವದರ ಕುರಿತು ಮಾಧವಾನುಜರಿಗೆ ಬಹಳ ಉತ್ಸಾಹವಿರುವದೆಂದು ಅವರು ತಮ್ಮ ಪತ್ರಕ್ಕೆ ಬರಕೊಂಡ ಎರಡು ಪತ್ರಗಳಿಂದ ತಿಳಿದುಬರುತ್ತದೆ. ಇಂಥಾ ಉತ್ಸಾಹವು ಬಹಳ ಶ್ಲಾಘನೀಯವಾದದ್ದು. "ಸಮಾಜವು ನಿದ್ರೆಯಲ್ಲಿರಲಿ ಅಥವಾ ಈ ಪ್ರಶ್ನೆಯು ಅದಕ್ಕನಷ್ಟೊಂದು ಮಹತ್ವದ್ದಾಗಿ ತೋರದೆ ಇರಲಿ, ನಾವು ನಮ್ಮ ಭೇರಿಯನ್ನು ಆಗಾಗ್ಯೆ ಹೊಡೆಯುತ್ತಿರುವದೇ ಉತ್ತಮ" ಎಂತ ಮಾಧವಾನುಜರು ಹೇಳುತ್ತಿರುವರು. ಸರಿ! ಬಹುಶಃ ಮಾಧವಾನುಜರು ಎಳೆ ಪ್ರಾಯದವರು ಅಥವಾ ಪೂರ್ಣ ಅನುಭವವಿಲ್ಲದೆ ಇರುವವರು; ಆದ್ದರಿಂದ ಪತ್ರ ಲೇಖಗಳಲ್ಲಿ ಭೇರಿ ಶಬ್ದದಲ್ಲಿ ವಿಶ್ವಾಸವುಳ್ಳವರೆಂತ ಕಾಣುತ್ತದೆ. ಇತರ ಪ್ರಾಂತ್ಯಗಳಲ್ಲಿ ಹ್ಯಾಗೂ ನಮ್ಮ ಪ್ರಾಂತ್ಯಗಳಲ್ಲಿ ಇಷ್ಟನ್ನು ದೃಢವಾಗಿ ಹೇಳಬಹುದು—ಪತ್ರಲೇಖಗಳ ಭೇರಿಯು ಅಲ್ಪಸ್ವಲ್ಪ ಕನ್ನಡ ಬಲ್ಲವರಿಗೆ ಕೇಳಿಬರಬಹುದಾದರೂ ಇವರನ್ನು ಮಿಕ್ಕಿದ ಆಂಗ್ಲ ಭಾಷೆಯನ್ನು ಕಲಿತ ಹಲವರಿಗೆ ಈ ಭೇರಿ ನಿನಾದವು ಕೇಳುವದು ಬಹುತೇಕ ಕಷ್ಟವಾಗಿದೆ. ನಾಟಕಗಳ ಭೇರಿ, ವಿವಾಹಮಂಟಪಗಳ ಭೇರಿ, ಇನ್ನು ಹಲವು ಡಂಭಾಚಾರಗಳ ಭೇರಿ, ಇವುಗಳ ಮುಂದೆ ಲೇಖಗಳ ಭೇರಿ ಎಲ್ಲಿ? ಹಲವರ ಬಗೆ ಹೀಗೆ. ಇನ್ನು ಕೆಲವರ, ಆಂಗ್ಲಭಾಷಾ ಪಾಂಡಿತ್ಯದಿಂದ ಅಭ್ಯಾಸಿಸಿದ ಯೋಗಸಾಧನೆಯಿಂದ ಎಂಥಾ ಭೇರಿಗಳ ನಿನಾದವಿದ್ದರೂ ಇವುಗಳ ಮಧ್ಯ "ರಿಹ್, ರಿಹ್" ಎಂಬ ರೊಕ್ಕದ ಶಬ್ದವನ್ನು ಏಕಾಗ್ರಚಿತ್ತದಿಂದ ಕೇಳಿಕೊಂಡು ಅದು ಯಾವ ಕಡೆಯಿಂದ ಬರುವದೋ ಅಲ್ಲಿ ತಮ್ಮ ಪೂರ್ಣ ಲಕ್ಷ್ಯವನ್ನಿಟ್ಟಿರುತ್ತಾರೆ.

ಈ ಕಾರಣಗಳಿಂದ ನಮ್ಮಲ್ಲಿ ಸತ್ಕಾರ್ಯಗಳಿಗೆ ಮನಮುಟ್ಟುವದೇ ಕಷ್ಟ. ಮನ ಮುಟ್ಟಿದರೂ ಈ ಕಾರ್ಯಗಳನ್ನು ಮುಟ್ಟುವ ಕೈಗಳಿಲ್ಲ. ಅನಾಥಾಶ್ರಮ, ಹೌದು, ಹೌದು, ಅಗತ್ಯ, ಅಗತ್ಯ—ಹೀಗೆಂದೂ ಸರ್ವರೂ ಹೇಳುವರು. ಆದರೆ ಪ್ರಾರಂಭದ ಪ್ರಯತ್ನವನ್ನು ಮಾಡುವವರಾರು? ಈ ಪ್ರಶ್ನೆಯನ್ನು ನನಗೇ ನಾನು ಹಾಕಿಕೊಂಡರೆ ಉತ್ತರವೇನ? ವಿದ್ಯೆ ಗೊತ್ತಿದ್ದವನಲ್ಲ. ಆಂಗ್ಲಭಾಷೆಯನ್ನು ತಿಳಿದವನಲ್ಲ. ಈಗಿನ ಕಾಲದ ವ್ಯವಸ್ಥಾ ಕ್ರಮಗಳನ್ನು ಅರಿತವನಲ್ಲ. ಕಾನೂನು ಗೊತ್ತಿದ್ದವನಲ್ಲ. ಇನ್ನೂ ದೇವಸ್ಥಾನಕ್ಕೆ ಹೋಗಿ ಮೂರ್ತಿಗಳಿಗೆ ಕೈಮುಗಿದು ಜಾತಿಪಾಶಗಳಲ್ಲಿ ಸಿಲುಕಿರುವೆ. ಒಡ್ಡಾ! ಇಂಥವರು ಮಾಡಿದ ಪ್ರಯತ್ನಗಳು ವಕೀಲರುಗಳ ಮನೆಯ ಪರಿಶೋಧನಾಲಯಗಳಲ್ಲಿ ಪುಟಕ್ಕೆ ಇಡೋಣಾಗಿ ಇವುಗಳ ತತ್ವವು ಇವರ ಮೂಲಕ ಕೋರ್ಟು ಮನೆಗಳಿಗೆ ಮಯ್ಯೋಣಾಗಿ ಅಲ್ಲಿ ಅರಿ ಅಥವಾ ಹಾರಿ ಹೋಗುವದು. ಅನಂತರ ಮಾರ್ಜಾಲ ಸನ್ಯಾಸಿಯಿಂದ ಉಪದೇಶ ಪಡೆದ ಮೂಷಿಕಗಳಂತೆ ಮಾಯವಾಗುವ ಸದ್ಗತಿಯು ನನ್ನಂಥವರಿಗೆ ಪ್ರಾಪ್ತವಾಗುವದು. ದೇವಸ್ಥಾನಗಳೇ ನನ್ನ ಈ ಮಾತುಗಳಿಗೆ ಸಾಕ್ಷಿಭೂತಗಳಾಗಿವೆ. ಇಂಗ್ಲಿಷ್ ಗೊತ್ತಿದ್ದವರು ಅಥವಾ ಮತ್ತೊಂದ ರೂಪದಿಂದ ಹೇಳುವದಾದರೆ ಕಾಲಜ್ಞರು ಅನಾಥಾಲಯದ ಸತ್ಕಾರ್ಯ ಪ್ರಾರಂಭವನ್ನು ಮಾಡುವದು ಈಗಿನ ವಿದ್ಯಮಾನಗಳಲ್ಲಿ ಭದ್ರವಾಗಿರುವದು. ಆದರೆ ಮಾಧವಾನುಜರ ಭೇರಿಯು ಇಂಥವರಿಗೆ ಕೇಳಿಸುವದು ಹ್ಯಾಗೆ?

ಒಡ್ಡಾ

ಅಯ್ಯಾ,

ಈ ಕೆಳಗಣ ಪ್ರಶ್ನೆಗಳಿಗೆ ಲೋಕಲ್ ಬೋರ್ಡುಗಳ ಆಡಳಿತೆ ಮಾಹಿತಿಯುಳ್ಳವರ ಪೈಕಿ ಯಾರಾದರೂ ತಮ್ಮ ಪತ್ರಮೂಲಕ ಉತ್ತರಗಳನ್ನು ಕೊಟ್ಟರೆ ಉಪಕಾರವಾಗುತ್ತಿತ್ತು.

1 ರಸ್ತೆಗಳ ಕಿನಾರೆಗಳಲ್ಲಿ ಸಾಲುಮರಗಳುಂಟು. ಇವುಗಳಿಂದ ಒಣ ಬೀಳುವ ಸೊಪ್ಪನ್ನು ಬೋರ್ಡಿನವರು ಏಲಂ ಹಾಕುತ್ತಿದ್ದಾರೆ. ಈ ಕ್ರಮವು ಜಾರಿ ಒಂದು ಎಷ್ಟು ಸಮಯವಾಯಿತು? ಇದರಿಂದ ಬೋರ್ಡಿನವರಿಗೆ ಪ್ರತಿ ವರುಷದಲ್ಲಿಯೂ ದೊರಿಯುವ ಉತ್ಪತ್ತಿಯೆಷ್ಟು?

2 ಗ್ರಾಮಗಳಲ್ಲಿ ಜನರ ಉಪಯೋಗದ ಬಗ್ಗೆ ಬಾವಿಗಳನ್ನು ತೋಡಿಸುವದು ಯಾವ ವಿದ್ಯಮಾನಗಳಲ್ಲಿ, ಅಥವಾ ಎಂಥಾ ಅನುಭವವನ್ನು ಆದರಿಸಿ? ಇವುಗಳು ಜನರಿಂದ ಉಪಯೋಗಿಸಲ್ಪಡುವವೋ ಎಂತ ಬೋರ್ಡಿನವರು ತಿಳಕೊಳ್ಳುವ ವಾಡಿಕೆ ಇರುವದೋ? ಇವುಗಳಲ್ಲಿರುವ ಕೆಲ್ಕಸವನ್ನು ತೆಗಿಸುವದು ಎಷ್ಟು ಸಮಯಕ್ಕೊಮ್ಮೆ?

3. ಬೋರ್ಡು ಶಾಲೆಗಳ ಮಾಸ್ತರರುಗಳನ್ನು ವರ್ಗಾವರ್ಗಿ ಮಾಡುವದು ಯಾವ ಕ್ರಮಗಳನ್ನಾದರಿಸಿ? ಈ ವರ್ಗಾವರ್ಗಿಗಳಿಗೆ [illegible] ಯಾವುವು?

ಯುದ್ಧ ಸಮಾಚಾರ

ತಾ. ೧೬ನೇ ಫೆಬ್ರುವರಿ.

ಫ್ರಾನ್ಸ್ ರಣರಂಗದಲ್ಲಿ ಯುದ್ಧಮಾಡಿ ಗಾಯಹೊಂದು ಲಂಡನಿಗೆ ಹೋಗಿ ವೈದ್ಯಚಿಕಿತ್ಸಾಲಯದಲ್ಲಿ ಆರೋಗ್ಯಪಡೆದ ೩೭ ಮಂದಿ ಭಾರತೀಯರು ಮೊನ್ನೆ ತಾನೇ ಲಂಡನ್ ಪಟ್ಟಣದಲ್ಲಿ ಸಾರ್ವಭೌಮರವರಿಗೆ ಒಂದು ವಿಜ್ಞಾಪನಾ ಪತ್ರವನ್ನು ಅರ್ಪಿಸಿದರು. ಸಾರ್ವಭೌಮರವರು ಅದಕ್ಕೆ ದಯಪಾಲಿಸಿದ ವಾಕ್ಯಗಳೇನಂದರೆ —

ಸರ್ದಾರರುಗಳಿರಾ, — ನಮ್ಮ ಚಕ್ರಾಧಿಪತ್ಯವೂ ಮಿತ್ರಮಂಡಲಿಯವರೂ ಬೆರೆತು ಯುದ್ಧಮಾಡುತ್ತಿರುವ ಈ ಮಹಾ ಯುದ್ಧಕ್ಕೆ ಹಿಂದೂಸ್ಥಾನದ ಪರಾಕ್ರಮಶಾಲಿಗಳಾದ ದೇಶೀಯ ಸೈನಿಕರು ಸಹಾಯಕರಾಗಿ ಇಷ್ಟು ದೂರ ಬಂದಿರುವುದು ನಮಗೆ ಪರಮಾನಂದವನ್ನುಂಟುಮಾಡಿದೆ. ಹಿಂದೂಸ್ಥಾನದ ದೇಶೀಯ ಸೈನಿಕರ ಪರವಾಗಿ ನಿಮಗೆ ಸಾಕ್ಷಾತ್ತಾಗಿ ಭೇಟಿಕೊಡಲು ಸಂತೋಷವಾಗುವುದು. ನೀವುಗಳು ಶತ್ರುವಿನಿಂದ ಗಾಯಪಟ್ಟವರಾಗಿದ್ದೀರಿ. ನಿಮ್ಮ ಪರಾಕ್ರಮವು ಅತಿಶಯವಾದದ್ದೆಂದು ಮೆಚ್ಚಿಕೊಂಡಿದ್ದೇವೆ — ನೀವು ಅರ್ಪಿಸಿನಲ್ಲಿ ಅರಿಕೆಮಾಡಿರುವ ನಿಮ್ಮ ರಾಜಭಕ್ತಿ ಪೂರಿತವಾದ ಮಾತುಗಳು ನಿಮ್ಮ ಸ್ವಕೀಯವಾದ ಭಕ್ತಿಯನ್ನೂ, ಹಿಂದೂಸ್ಥಾನದ ನಮ್ಮ ಸಕಲ ಸೈನಿಕರ ಭಕ್ತಿಯನ್ನೂ ಪ್ರಕಾಶಪಡಿಸಿರುತ್ತವೆ. ನೀವು ಇಲ್ಲಿ ಸಾಕ್ಷಾತ್ತಾಗಿ ಬಂದಿರುವುದು ನಮ್ಮ ಚಕ್ರಾಧಿಪತ್ಯವೆಲ್ಲಾ ಒಂದೇ ಆಗಿದೆ ಎಂಬ ಅರ್ಥವನ್ನು ಸೂಚಿಸುವುದಕ್ಕೆ ಸಂಶಯವಿಲ್ಲ. ಮತ್ತು ನೀವುಗಳು ಪರಾಕ್ರಮದಿಂದ ಕಾದಾಡಿ ನಿಮ್ಮ ಶರೀರವನ್ನೇ ಮಾತೃಭೂಮಿಯ ಸಂರಕ್ಷಣೆಗಾಗಿ ತೆತ್ತುಬಿಟ್ಟಿದ್ದೀರೆಂದೂ ಸೂಚನೆಯಾಗಿದೆ — ನಿಮ್ಮ ರಾಜಭಕ್ತಿಯನ್ನೂ, ಕೃತಜ್ಞತೆಯನ್ನೂ, ಈ ದ್ವೀಪಗಳಲ್ಲಿರುವ ಪ್ರಜೆಗಳಲ್ಲಿ ನಿಮಗಿರುವ ಸಾಮರಸ್ಯವನ್ನೂ ನೋಡಿ ನಮಗೆ ಪರಮಾನಂದ ಉಂಟಾಗಿದೆ. ಅವರೂ ನೀವೂ ಏಕೀಭವಿಸಿ ನಿಮ್ಮಗಳ ಮನೆಮಠಗಳನ್ನೂ, ರಾಜ್ಯವನ್ನೂ ಸಂರಕ್ಷಣೆ ಮಾಡಿಕೊಳ್ಳುವ ಭಾಗದಲ್ಲಿ ನಿಮ್ಮ ಹಿರಿಯರಂತೆ ನೀವೂ ಕೀರ್ತಿಶಾಲಿಗಳಾಗಿರುತ್ತೀರಿ. ಚಕ್ರಾಧಿಪತ್ಯದ ಸೇನಾಬಲವು ಹಿಂದೂಸ್ಥಾನವನ್ನೂ ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದೆ. ಇದರಿಂದ ಈ ಘೋರವಾದ ಯುದ್ಧದ ಸೆಲೆಯು ಅಲ್ಲಿನ ಜನಗಳಿಗೆ ವ್ಯಾಪನೆಯಾಗಿರುವುದಿಲ್ಲ. ದೇವರ ದಯದಿಂದ ಹಿಂದೂಸ್ಥಾನದ ಪ್ರಜೆಗಳು ತಮ್ಮ ಸಂಸರ್ಗಿಕ ವ್ಯವಹಾರಗಳಲ್ಲೂ, ರಾಜ್ಯಭಾರ ಕಾರ್ಯಗಳ ಅನುಭವದಲ್ಲೂ ಅಭಿವೃದ್ಧಿಹೊಂದಿದಹಾಗೆಲ್ಲಾ ಬ್ರಿಟಿಷ್ ರಾಜ್ಯಭಾರದ ಸ್ವಾತಂತ್ರ್ಯಗಳು ಅವರಿಗೂ ಕ್ರಮೇಣ ಹೆಚ್ಚು ಹೆಚ್ಚಾಗಿ ದೊರಕುತ್ತವೆ. ನಮ್ಮ ಹುದ್ದೇದಾರರುಗಳೆಲ್ಲಾ ನಮ್ಮ ಆಜ್ಞಾನುಸಾರ ನಿಮ್ಮಗಳನ್ನು ನಿಮ್ಮ ಮತಭಕ್ತಿಗೆ ವಿರೋಧವೇನೂ ಆಗದಂತೆ ನೋಡಿನಡಿಸಿಕೊಂಡು ಬರುತ್ತಿದ್ದಾರೆಂದು ನೀವು ವಂದನಾಪೂರ್ವಕವಾಗಿ ಹೇಳಿರುವುದನ್ನು ಕೇಳಿದ್ದರಲ್ಲಿ ನಮಗೆ ಸಂತೋಷವಾಗುತ್ತದೆ. ನೀವುಗಳು ಈ ಅನ್ಯದೇಶಗಳಲ್ಲಿ ನಿಮ್ಮ ಮತಭಕ್ತಿ ಕಾರ್ಯಗಳಿಗೂ ಆಚಾರ ವ್ಯವಹಾರಗಳಿಗೂ ಎಲ್ಲಿ ಕುಂದಕಗಳುಂಟಾಗುವವೋ ಎಂದು ಶಂಕೆಪಡುತ್ತಿದ್ದದ್ದೇನೋ ಸಹಜವೇ. ಆದರೆ ನಮ್ಮ ಕೀರ್ತಿಶೇಷರಾದ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರು ಅಪ್ಪಣೆಕೊಡಿಸಿರುವ ವಾಕ್ಯಗಳು ಈ ಸಂದರ್ಭದಲ್ಲಿ ನಮಗೆ ಜ್ಞಾಪಕಕ್ಕೆ ಬರುತ್ತವೆ. ಅಕೆಯವರು ತಮ್ಮ ಹಿಂದೂಸ್ಥಾನದ ಪ್ರಜಾಕೋಟಿಗಳಿಗೆ ಅವರನ್ನು ಸಂರಕ್ಷಣೆಮಾಡುವ ಕಾರ್ಯಭಾರವನ್ನು ವಹಿಸಿಕೊಂಡಾಗ ಹೇಳಿರುವುದೇನೆಂದರೆ — ನಮ್ಮ ಪ್ರಜೆಗಳು ಯಾವ ಜಾತಿಮತದವರೇ ಆಗಿರಲಿ, ಮತಭಕ್ತಿ, ಆಚರಣೆಗಾಗಿ ಯಾರೊಬ್ಬರ ವಿಷಯದಲ್ಲೂ ಪಕ್ಷಪಾತಮಾಡುವುದಿಲ್ಲ; ಯಾರೊಬ್ಬರನ್ನೂ ಹಿಂಸೆಪಡಿಸುವುದಿಲ್ಲ; ಯಾರೊಬ್ಬರಿಗೂ ಮನಸ್ಸಿಗೆ ಅಸಮಾಧಾನವನ್ನುಂಟುಮಾಡುವುದಿಲ್ಲ. ಸಕಲ ಪ್ರಜೆಗಳೂ ಏಕರೀತಿಯಾದ ನಿಷ್ಪಕ್ಷಪಾತವುಳ್ಳ ಕಾನೂನಿನ ಸಂರಕ್ಷಣೆಯನ್ನು ಅನುಭೋಗಿಸುತ್ತಾರೆ. ಯಾವ ಪ್ರಜೆಗಳನ್ನೂ ಅವರ ಮತಭಕ್ತಿ ಆಚಾರ ನಿಮಿತ್ತವಾಗಿ ನಮ್ಮ ಕೈಕೆಳಗಿನ ಅಧಿಕಾರಿಗಳ್ಯಾರೂ ಯಾವ ವಿಧವಾಗಿಯೂ ಕಷ್ಟಸಂಕಟಗಳಿಗೆ ಗುರಿಪಡಿಸಕೂಡದೆಂದೂ, ಇದಕ್ಕೆ ತಪ್ಪಿದರೆ ಅವರು ನಮ್ಮ ವಿಶೇಷವಾದ ಅಪ್ರೀತಿಗೆ ಪಾತ್ರರಾದಾರೆಂದೂ ತಿಳಿದಿರತಕ್ಕದ್ದು. ನಮ್ಮ ಈ ವಾಕ್ಯಗಳನ್ನು ನಾವು ನಮ್ಮ ಸಂತತಿಯವರು ಅಕ್ಷರಶಃವಾಗಿಯೂ ಅರ್ಥವತ್ತಾಗಿಯೂ ನೆರವೇರಿಸುತ್ತಾ ಬರುವವೆಂದು ವಾಗ್ದಾನಮಾಡುತ್ತೇವೆ — ಸರ್ದಾರರುಗಳಿರಾ ನಿಮ್ಮ ರಾಜಭಕ್ತಿ ಪೂರಿತವಾದ ವಿಜ್ಞಾಪನಾ ಪತ್ರಿಕೆಗಾಗಿ ನಿಮ್ಮನ್ನು ವಂದನೆಮಾಡುವೆನು.

ಲಾಬಾಸ್ಸೆಯ ದಕ್ಷಿಣದಲ್ಲಿ ಶತ್ರುಗಳು ಕಂದಕಗಳ ಗಣಿಯನ್ನು ಹಾರಿಸುವ ಕೆಲಸದಲ್ಲಿರುವರು. ಶತ್ರುಗಳು 24 ತಾಸಿನಲಗೆ ಇಂಥಾ 7 ಗಣಿಗಳನ್ನು ಹಾರಿಸಿದರು. ಫೂನ್ಸೆ ಎಂಬ ಸ್ಥಳದ ದಕ್ಷಿಣದಲ್ಲಿ 8 ಗಣಿಗಳು ಸಿಡಿದಿರುವವು. ನಂತರ ಶತ್ರುಗಳು ಗುಂಡು ಹಾರಿಸಿ ಕಾಲಾಳು ಸೇನಿಕರ ಒಂದು ಪಡೆಯನ್ನು ನಮ್ಮವರ ಮೇಲೆ ಅಭಿಯೋಗ ಮಾಡುವರೆ ಕಳುಹಿಸಿದರು. ಶತ್ರುಗಳ ಕೆಲವು ಸೇನಿಕರು ನಮ್ಮವರ ಮುಂಭಾಗದ ಕಂದಕಗಳನ್ನು ಪ್ರವೇಶಿಸಿದರು. ಆದರೆ ನಮ್ಮವರ ಸೇನಿಕರು ಕೈಕಾಳಗ ಮಾಡಿ ಶತ್ರುಗಳನ್ನು ಅಟ್ಟಿಬಿಟ್ಟರು.

ನಿನ್ನೆಯ ದಿನ ವಾಯುನಾವೆಗಳ 17 ಕದನಗಳು ನಡೆದವು. ಶತ್ರುಗಳ ಒಂದ ದೊಡ್ಡ ವಾಯುನಾವೆಯನ್ನು ನಮ್ಮವರು ಶತ್ರುಗಳ ನೆಲೆಯಲ್ಲಿ ಹೋಗಿ ಬೀಳುವಂತೆ ಮಾಡಿರುವರು.

ಪಿಲ್ಕೆನ್ ಎಂಬ ಸ್ಥಳದಲ್ಲಿ ನಡೆದ ಕಾಳಗದಲ್ಲಿ ಶತ್ರುಗಳು ನಮ್ಮವರ ೪೦ ಸೇನಿಕರನ್ನು ಸೆರೆ ಹಿಡಿದಿರ ವರೆಂತ ಜರ್ಮನರ ತಂತೀ ಇಲ್ಲದ ಟೆಲಿಗ್ರಾಮ್ ವಾರ್ತೆಯಿಂದ ತಿಳಿದುಬರುತ್ತದೆ. ಆದರೆ ಈ ಕದನದಲ್ಲಿ ನಮ್ಮವರ ೧೧ ಮಂದಿ ಸೇನಿಕರು ಮಾತ್ರ ಕಾಣೆಯಾಗಿರುವರು. ಈ ಪೈಕಿ ೮ ಮಂದಿ ಹತರಾಗಿರಬಹುದು. ಈ ಸೇನಿಕರು ಜರ್ಮನರನ್ನು ಅವರ ಕಂದಕಗಳ ಒಳಗೆ ಅಟ್ಟಿರುವಾಗ ಈ ಅವಸ್ಥೆಯನ್ನು ಹೊಂದಿದರು.

ಬೆಲ್ಜಿಯಮಿನಲ್ಲಿ ಬೊಸಿನ್ಗೆ ಎಂಬ ಸ್ಥಳದ ಉತ್ತರದಲ್ಲಿ ಫ್ರೆಂಚರ ತೋಪು ಸೇನಿಕರ ಶತ್ರುಗಳ ಒಂದು ಗುಂಡುಮದ್ದಿನ ಕೊಠಡಿಯನ್ನು ಹಾರಿಸಿರುವರು. ಸ್ಯೋಸನ್ನಿನ ಉತ್ತರದಲ್ಲಿ ಶತ್ರುಗಳ ಒಂದು ಸೇನಾಪಡೆಯು ವಿಶೇಷ ಗುಂಡುಗಳನ್ನು ಹಾರಿಸಿ ಫ್ರೆಂಚ ಸೇನೆಯ ಮೇಲೆ ಬೀಳಬೆಕ್ಕಿದ್ದರು. ಆದರೆ ಫ್ರೆಂಚರ ತೋಪು ಸೇನಿಕರು ಶತ್ರುಗಳನ್ನು ಕೂಡಲೇ ಹಿಂದಕ್ಕಟ್ಟಿಬಿಟ್ಟರು. ಶೆಂಪೇನೆಯಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ. ಮೋಸಿನ ಆಲ್ಸಿಸಿನಲ್ಲಿ ಫ್ರೆಂಚರು ಹಿಂದಕ್ಕೆ ಪಡೆಕೊಂಡಿರುವ ಕಂದಕಗಳ ಮೇಲೆ ಶತ್ರುಗಳು ತೋಪು ಹಾರಿಸುತ್ತಿದ್ದಾರೆ. ರಾತ್ರಿಕಾಲ ಫ್ರೆಂಚರು ಈ ನೆಲೆಗಳನ್ನು ತ್ಯಜಿಸಿದರು. ಅದೇ ಪ್ರಾಂತ್ಯದಲ್ಲಿ ಫ್ರೆಂಚರ ತೋಪುಗಳು ಸನ್ನದ್ಧರಾಗಿ ಮುಂದೊತ್ತಿ ಬರಲು ಯತ್ನಿಸುತ್ತಿದ್ದ ಶತ್ರುಗಳ ಬೆಂಬಲ ಸೇನೆಯ ಮೇಲೆ ಗುಂಡು ಹಾರಿಸಿರುತ್ತಾರೆ.

ಕಳೆದ ಜನವರಿ ತಾ ೨೧ರಿಂದ ತಾ ೨೭ರ ವರೆಗೆ ಇಗ್ಲಾಂಡಿನ ೧೧೪,೦೦೦ ಅವಿವಾಹಿತ ಯುವಕರು ಸೇನೆಗೆ ಸೇರಿಕೊಂಡಿರುವರು.

ಬೆಲ್ಜಿಯನರ ಸೇನಿಕರ ಪೂರ್ವ ಆಫ್ರಿಕದ ಜರ್ಮನ ಪ್ರದೇಶದ ಮೇಲೆ ನುಗ್ಗಿ ಕಿವ್ಹಾ ಸರೋವರದ ಬಳಿ ಅಭಿಯೋಗ ಮಾಡಿ ಜರ್ಮನರ ಕಂದಕಗಳನ್ನು ಹಿಡಿದರು. ಅನಂತರ ಈ ಕಂದಕಗಳನ್ನು ಜರ್ಮನರು ಪುನಃ ಹಿಂದಕ್ಕೆ ಪಡೆಕೊಂಡರು. ಉಭಯ ಸೇನೆಯಲ್ಲಿಯೂ ವಿಶೇಷ ನಷ್ಟವಾಗಿರುವದು. ಕದನವು ನಡಿಯುತ್ತಿದೆ.

ಇಟಲಿಗೆ ಸೇರಿದ ಕೆಲವು ಪಟ್ಟಣಗಳ ಮೇಲೆ ಶತ್ರುಗಳು ಬೊಂಬುಗಳನ್ನು ಎಸೆದಿರುವರು. ಒಂದ ಕಡೆಯಲ್ಲಿ ಒಬ್ಬನು ಹತನಾಗಿರುವನು ೫ ಮಂದಿಗೆ ಜಕಂ ಆಗಿದೆ. ಬೆರ್ಸಿಯದಲ್ಲಿ ಶತ್ರುಗಳ ೬ ವಾಯುನಾವೆಗಳು ಕಾಣಿಸಿಕೊಂಡವು. ಆದರೆ ಇಟಲಿಯನರ ವಾಯುನಾವೆಗಳು ಅವನ್ನು ಅಟ್ಟಿದವು.

ತಾ. ೧೭ನೇ ಫೆಬ್ರುವರಿ.

ಶತ್ರುಗಳ ಜಲಂತರ್ಗಾಮಿ ನಾವೆಯು ಪೂರ್ವ ಕರಾವಳಿಯಲ್ಲಿ "ಟರ್ಗೇಶಿಯ" ಎಂಬ ಹಡಗವನ್ನು ಮುಣುಗಿಸಿರುತ್ತದೆ.

ಬೆಲ್ಜಿಯಮ್ ಮತ್ತು ಫ್ರಾನ್ಸ್ ರಣರಂಗದಲ್ಲಿ ಕಂದಕಗಳನ್ನು ಹಿಡಿಯುವ ಪ್ರಯತ್ನವೂ ಗಣಿಗಳನ್ನು ಹಾರಿಸುವ ಕೆಲಸವೂ ದಿನನಿತ್ಯವೆಂಬಂತೆ ನಡಿಯುತ್ತಿದೆ. ಕೆಲವು ಕಡೆಗಳಲ್ಲಿ ನಮ್ಮವರು ಶತ್ರುಗಳ ಕಂದಕಗಳನ್ನು ಸ್ವಾಧೀನಮಾಡಿಕೊಳ್ಳುತ್ತಿರುವರು. ಇನ್ನು ಕೆಲವು ಕಡೆಗಳಲ್ಲಿ ಶತ್ರುಗಳು ಪಡೆಕೊಂಡ ನಮ್ಮವರ ಕಂದಕಗಳನ್ನು ನಮ್ಮವರು ಹಿಂದೆ ತಕ್ಕೊಳ್ಳುತ್ತಿರುವರು.

ಪಾರ್ಲಿಮೆಂಟ್ ಮಹಾ ಸಭೆಯು ಕೆಲವು ಕಾಲದವರೆಗೆ ಮುಚ್ಚಲ್ಪಟ್ಟಿತ್ತು. ಈಗ ಪುನಃ ತೆರೆಯಲ್ಪಟ್ಟಾಗ ಜೋರ್ಜ ಸಾರ್ವಭೌಮರವರು ಮಾಡಿದ ಭಾಷಣದಲ್ಲಿ ಈ ರೀತಿ ಹೇಳಿರುವರು. ಶತ್ರುಗಳು ನಿಷ್ಕಾರಣವಾಗಿ ನಮ್ಮ ದೇಶದ ಮೇಲೆ ದಂಡೆತ್ತಿಬಂದರು; ನಮ್ಮ ಮಿತ್ರರ ಜೊತೆಗೆ ಯೂರೋಪಖಂಡದ ಸ್ವಾತಂತ್ರ್ಯವನ್ನು ಶತ್ರುಗಳ ಬಾಧೆಯಿಂದ [illegible] ನಮ್ಮ ಭೂಬಲ ಮತ್ತು ಜಲಸೈನ್ಯಗಳು ಕಳೆದ ೧೮ ತಿಂಗಳಿಂದ ಜಾಗರೂಕತೆಯಿಂದ ಕಾದಾಡುತ್ತವೆ. ಈ ಮಹಾ ಯುದ್ಧದಲ್ಲಿ ಜಯ ಲಾಭಕ್ಕಾಗಿ ಇಂಗ್ಲಾಂಡ ದೇಶಿಯರೂ ಆಂಗ್ಲ ಸಾಮ್ರಾಜ್ಯ ನಿವಾಸಿಕರೂ ಕೂಡ ದೃಢ ಮನಸ್ಸಿನಿಂದ ಸಹಾಯ ಮಾಡುತ್ತಿದ್ದಾರೆ. ಪಾರ್ಲಿಮೆಂಟ್ ಸಭೆಯವರು ಕೂಡಾ ಉದಾರ ಭಾವದಿಂದ ಧನ ಸಹಾಯ ಮೊದಲಾದ್ದನ್ನು ಮಾಡುತ್ತಾ ಬಂದಿದ್ದಾರೆ. ಅದಕ್ಕಾಗಿ ನಾನು ಮನಃಪೂರ್ವಕವಾಗಿ ವಂದಿಸುತ್ತೇನೆ. ಶತ್ರುಗಳು ಪವಿತ್ರವಾಗಿದ್ದ ಸಂಧಿ ನಿಬಂಧನೆಗಳನ್ನೂ ಸ್ವಾತಂತ್ರ್ಯಗಳನ್ನೂ ನಿರಾಕರಿಸಿ ಬಿಟ್ಟಿರುವರು. ಈಗಿನ ಯುದ್ಧದಲ್ಲಿ ನಾವು ವಿಜಯಗೊಂಡು ನಾಗರಿಕತೆಯ ಗೌರವವನ್ನು ಕಾಪಾಡುವದು ಖಂಡಿತ. ಅದುವರೆಗೂ ನಾವು ಶಸ್ತ್ರಗಳನ್ನು ಕೆಳಕ್ಕಿಡುವದಿಲ್ಲ. ಪ್ರಜೆಗಳೆಲ್ಲರೂ ರಾಜಭಕ್ತಿಯುಳ್ಳರಾಗಿ ಇದುವರೆಗೂ ಸಹಾಯ ಮಾಡುತ್ತಾ ಬಂದಂತೆಯೇ ಮುಂದಕ್ಕೂ ಮಾಡುವರೆಂದು ದೃಢವಾಗಿ ನಂಬಿದ್ದೇನೆ. ನಮ್ಮೆಲ್ಲರನ್ನೂ ಅನುಗ್ರಹಿಸುವಂತೆ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಇಟಲಿಯನರ ಕ್ರೆಮೋನ ಎಂಬ ಪಟ್ಟಣದ ಮೇಲೆ ಜರ್ಮನರ ವಾಯು ನಾವೆಗಳು ಬೊಂಬುಗಳನ್ನು ಹಾಕಿರುತ್ತವೆ. ೬ ಮಂದಿ ಹತರಾಗಿರುವರು; ಕೆಲವರಿಗೆ ಜಕಂ ಆಗಿದೆ. ರಿಮಿನಿ ಎಂಬ ಪಟ್ಟಣದ ಮೇಲೆ ಶತ್ರುಗಳ ವಾಯುನಾವೆಗಳ ಹಾಕಿದ ಸಿಡಿಮದ್ದುಗಳಿಂದ ೩ ಮಂದಿಗೆ ಗಾಯವಾಗಿದೆ.

ಎರ್ಜರಮಿನಲ್ಲಿ ರುಷ್ಯನರ ಮತ್ತೊಂದು ಕೋಟೆಯ ಮೇಲೆ ಗುಂಡು ಹಾರಿಸಿ ೩೦ ಫಿರಂಗಿಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಸೇನಿಕರನ್ನೂ ಸೆರೆ ಹಿಡಿದಿರುವರು. ಪುನಃ ಎರ್ಜರಮಿನ ೭ ಕೋಟೆಗಳು ರುಷ್ಯನರ ವಶವಾದವೆಂತ ವಾರ್ತೆ ಬಂದದೆ. ಎರ್ಜರಮ್ ರುಷ್ಯನರ ಕೈವಶವಾಯಿತೆಂತ ಪೆಟ್ರೋಗ್ರೇಡಿನಿಂದ ವಾರ್ತೆ ಬಂದದೆ.

ತಾ. ೧೮ನೇ ಫೆಬ್ರುವರಿ.

ಫ್ರೆಂಚರ ೧೩ ವಾಯು ನಾವೆಗಳ ಸ್ಕ್ರಿಪ್ಸ ಪಟ್ಟಣ ಮತ್ತು ಅಲ್ಲಿದ್ದ ಶತ್ರುಗಳ ಪಾಳೆಯಗಳ ಮೇಲೆ ೧೫೮ ಬೊಂಬುಗಳನ್ನು ಹಾಕಿ ಸುರಕ್ಷಿತವಾಗಿ ಹಿಂದೆರಳಿ ಬಂದಿರುವದು.

ಡುರಾಜ್ಜೋದ ಬಳಿ ಇಟಲಿಯನರ ಸೇನೆಯು ಬಂದಿರುವದರಿಂದ ಆಸ್ಟ್ರಿಯನರು ಡುರಾಜ್ಜೋದ ಬಳಿ ನುಗ್ಗಿರುವದನ್ನು ನಿಲ್ಲಿಸಿರುವರು. ಸರ್ವಿಯನರ ಜನರಲ್ ಇಸಿನ್ಸ್ಕೊ ಮತ್ತು ಪುಟ್ನಿಕರವರು ಕೊರ್ಫ್ಯುದ್ವೀಪದಲ್ಲಿರುವ ಸರ್ವಿಯನರ ಸೇನೆಗೆ ಹೋಗಿ ಕೂಡಿರುವರು.

ರುಷ್ಯನರ ಗ್ರ್ಯಾಂಡ್‌ಡ್ಯೂಕ್ ನಿಕೊಲಾಸರವರು ರುಶ್ಯಾ ಚಕ್ರವರ್ತಿಯವರಿಗೆ ಈ ರೀತಿ ತಂತಿಕೊಟ್ಟಿರುವರು — ಕಾಕಾಸಸಿನಲ್ಲಿರುವ ನಮ್ಮ ಧೈರ್ಯಶಾಲಿಯಾದ ಸೇನೆಯ ಮೇಲೆ ಭಗವಂತನು ದಯಪಾಲಿಸಿದ ಸಹಾಯದಿಂದ ಐದು ದಿವಸದಲ್ಲಿ ಎರ್ಜರಮ್ ಕೋಟೆಯು ನಮ್ಮ ವಶವಾಯಿತು. ಜಯದ ವಾರ್ತೆಯನ್ನು ಚಕ್ರವರ್ತಿಯವರಿಗೆ ತಿಳಿಸಲು ನಾನು ಬಹಳ ಸಂತೋಷಪಡುತ್ತೇನೆ.

ಎರ್ಜರಮ್ ರುಷ್ಯನರ ವಶವಾದದರಿಂದ ಮಿತ್ರಮಂಡಳಿಯವರೆಲ್ಲಾ ಅತಿ ಸಂತೋಷಕ್ಕೆ ಕಾರಣವಾಯಿತು. ಇದರಿಂದ ಅರ್ಮೀನಿಯದಲ್ಲಿ ತುರ್ಕರ ಬಲವು ಕುಂದಿತಲ್ಲದೆ ಮೆಸಪಟೋಮಿಯ ಮತ್ತು ಪರ್ಶಿಯದ ಮಿತ್ರಮಂಡಳಿಯ ಸೇನೆಗೆ ಮತ್ತಷ್ಟು ಧೈರ್ಯ ಉಂಟಾದ ಹಾಗಾಯಿತು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಎರ್ಜರಮಿನಲ್ಲಿ ರುಷ್ಯನರು ಹಿಡಿದ ಹೊರಗಿನ ೧೫ ಕೋಟೆಗಳು ೪—೧೬ ಮೈಲು ಎತ್ತರದ ಗುಡ್ಡದ ಮೇಲೆ ಕಟ್ಟಲ್ಪಟ್ಟಂಥವುಗಳಾಗಿದ್ದವು.

ಎರ್ಜರಮ್‌ನಲ್ಲಿ ಶತ್ರುಗಳ ನೂರು ಸಾವಿರ ಸೇನಿಕರೂ ೪೬೭ ಫಿರಂಗಿಗಳೂ ಮಧ್ಯದ ಕೋಟೆಯಲ್ಲಿ ೩೦೦ ಫಿರಂಗಿಗಳೂ ಇಡಲ್ಪಟ್ಟಿದ್ದವು ಎಂತ ಅಂದಾಜಾಗಿದೆ.

ತಾ. ೧೯ನೇ ಫೆಬ್ರುವರಿ.

ಕಳೆದ ಮೂರು ದಿವಸಗಳಲ್ಲಿ ಫ್ರೆಂಚರ ಯುದ್ಧಹಡಗಗಳು ಅಡ್ರಿಯಾಟಿಕಿನಲ್ಲಿ ಶತ್ರುಗಳ ೩ ಯಾ ೪ ಜಲಂತರ್ಗಾಮಿ ನಾವೆಗಳನ್ನು ಮುಣುಗಿಸಿರುತ್ತವೆ.

ಜರ್ಮನರಿಂದ ಹಿಡಿಯಲ್ಪಟ್ಟ "ಅಪ್ಪಾಮ್" ಹಡಗದಲ್ಲಿದ್ದ ಪ್ರಯಾಣಿಕರಲ್ಲಿ ೧೧೦ ಮಂದಿ ಅಮೇರಿಕಾದಿಂದ ಇಂಗ್ಲಾಂಡಿಗೆ ಬಂದು ತಲಪಿರುವರು.

[illegible]

ಳನ್ನು ಹಾರಿಸಿ ಕಂದಕಗಳನ್ನು ಸ್ವಾಧೀನಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ನಮ್ಮ ಸೈನಿಕರು ಅವರನ್ನು ಹಿಂದಕ್ಕಟ್ಟಿದರು. ಹೊಹೆನ್ ಜೊಲ್ಲರ್ನ್ ರೆಡೌಟ್ ಎಂಬಲ್ಲಿ ಮತ್ತು ಅರ್ಮೆಂಟಿಯರ್ಸಿನ ಪೂರ್ವದಲ್ಲಿ ನಮ್ಮವರ ತೋಫುಗಳು ಶತ್ರುಗಳ ಕಂದಕಗಳ ಮೇಲೆ ಫಿರಂಗಿಗಳನ್ನು ಹಾರಿಸಿರುವದು. ಯ್ಪ್ರೆಸ್ ಕೊಮಿನೆಸ್ ಕಾಲುವೆಯ ಬಳಿಯ ಸ್ಥಿತಿಯು ಇದ್ದಕ್ಕಿದ್ದ ಹಾಗೆ ಇದೆ ಎಂತ ಬ್ರಿಟಿಷರ ಫೀಲ್ಡ್ ಮಾರ್ಶಲ್ ಸರ್ ಡೊಗ್ಲಾಸ್ ಹೇಗರವರು ಪ್ರಕಟಿಸಿರುವರು.

ಆರ್ಗೋನ್ನೆ ಮತ್ತು ಅಲ್ಸೆಸ್ ಲೊರೈನಿನಲ್ಲಿರುವ ಜರ್ಮನ ಸೇನೆಯ ಸೇನಾಧಿಪತಿತ್ವವನ್ನು ಜರ್ಮನ ಯುವರಾಜರು ವಹಿಸಿಕೊಂಡಿರುವರು ಎಂತ ತಿಳಿದುಬರುತ್ತದೆ.

ಮೆಸಪಟೋಮಿಯದಲ್ಲಿ ನಡೆಯುವ ಕಾಳಗದ ಏರ್ಪಾಡುಗಳೆಲ್ಲಾ ಈ ವರೆಗೆ ಹಿಂದೂಸ್ಥಾನದ ಸರಕಾರದವರಿಂದ ನಡಿಸಲ್ಪಡುತ್ತಿತ್ತು. ಇನ್ನುಮುಂದೆ ಈ ರಣರಂಗದ ಕಾಳಗಕ್ಕೆ ಸಂಬಂಧಪಟ್ಟ ಕೆಲಸಗಳೆಲ್ಲಾ ಇಂಗ್ಲಾಂಡಿನ ಯುದ್ಧಆಫೀಸಿನಿಂದಲೇ ನಡಿಸಲ್ಪಡುವವು. ಮೆಸಪಟೋಮಿಯದಲ್ಲಿ ಬ್ರಿಟಿಷ ಮತ್ತು ಭಾರತೀಯ ಸೈನಿಕರು ತೋರಿಸಿದ ಪ್ರತಾಪವು ಬಹಳ ಹೊಗಳಿಕೆಗೆ ಕಾರಣವಾಗಿದೆ. ಕಾಳಗವು ಹೆಚ್ಚು ಕಾಲ ಕಳೆಯುವದರೊಳಗೆ ಸಮರ್ಪಕವಾಗಿ ಕೊನೆಗಂಡಿತು. ಅಲ್ಲಿಯ ಜನರಲ್ ಟೌನ್‌ಶೆಡ್ಡರವರ ಸೇನೆಗೆ ಕೆಲವು ಕಾಲದ ವರೆಗೆ ಬೇಕಾದ ಯುದ್ಧಸಾಮಾಗ್ರಿಗಳೆಲ್ಲಾ ಇರುವವು ಎಂದ ಕಿಚನರ್ ಪ್ರಭುಗಳ ಹೇಳಿರುವರು.

ಫ್ರಾನ್ಸ್ ರಣರಂಗದಲ್ಲಿ ಗಾಯ ಹೊಂದು ಇಂಗ್ಲಾಂಡಿನ ಆಸ್ಪತ್ರೆಯಲ್ಲಿ ಚಿಕಿತ್ಸೋಪಚಾರ ಹೊಂದುತ್ತಲಿದ್ದ ಭಾರತೀಯ ಸೈನಿಕರು ಹಿಂದೂಸ್ಥಾನಕ್ಕೆ ಬರಲು ಹೊರಟಿರುತ್ತಾರೆ. ಇನ್ನು ಇಂಗ್ಲಾಂಡಿನಲ್ಲಿ ಗಾಯವೊಡೆದ ಹಿಂದೂ ಸೈನಿಕರಿಲ್ಲ.

ಕೆಮರೂನಿನಲ್ಲಿ ನಡಿಯುತ್ತಿದ್ದ ಕದನವು ಅಂತ್ಯವಾಗಿರುತ್ತದೆ. ನಮ್ಮವರು ಜರ್ಮನರನ್ನು ಅಲ್ಲಿ ಸೋಲಿಸಿ ಜರ್ಮನರ ಎಲ್ಲಾ ನೆಲೆಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಅಲ್ಬೇನಿಯದಲ್ಲಿ ಮಿತ್ರಸೈನಿಕರು ದುರಾಜ್ಜೊ ಮತ್ತು ವಲೋನದ ದಕ್ಷಿಣದಲ್ಲಿ ಬಲಕಾಯಿಸಿಕೊಂಡಿರುವರು. ಶತ್ರುಸೇನಿಕರನ್ನು ಎದುರಿಸುವಷ್ಟು ಸೈನಿಕರು ಅಲ್ಲಿರುವರು. ಆಸ್ಟ್ರಿಯನರ ಮತ್ತು ಬಲ್ಗೇರಿಯನರ ಸೇನೆಯು ಎಸದ್ ಪಾಷರ ಸೇನೆಯನ್ನು ಕಳೆತ ಯುದ್ಧ ಮಾಡುತ್ತಿರುವದು. ಕಠಿಣ ಕಾಳಗ ನಡೆಯುತ್ತಿದೆ.

ಎರ್ಜರಮಿನಲ್ಲಿ ರಷ್ಯನರು ಕೋಟೆಗಳನ್ನು ನಾಶಮಾಡಲು ಪ್ರಯತ್ನಿಸುವ ೩ ವಾರಗಳ ಮೊದಲೇ ಎರ್ಜರಮಿನಲ್ಲಿದ್ದ ೨೦೦,೦೦೦ ಸೇನಿಕರ ಪೈಕಿ ೮೦ ಸಾವಿರ ಮಂದಿ ಪ್ರಾಣಾಪಾಯ ಪಟ್ಟಿದ್ದರು. ಎರ್ಜರಮಿನ ಮೊದಲನೇ ಸಾಲಿನ ಕೋಟೆಗಳ ೨೫ ಫಿರಂಗಿಗಳೂ ಉತ್ತರಕೋಟೆಯೊಂದರ ಒಳ ೧೩೫೨ ಶತ್ರುಸೇನಿಕರೂ ರುಷ್ಯನರ ಕೈಬಿದ್ದಿರುವರು. ಪಟ್ಟಣದ ಅನೇಕ ಕಡೆಗಳು ಬೆಂಕಿಯಿಂದ ಉರಿಯುತ್ತಿವೆ.

ಎರ್ಜರಮನ್ನು ಕಾಪಾಡಿಕೊಳ್ಳುವದು ಕಷ್ಟಸಾಧ್ಯವೆಂದು ಭಾವಿಸಿ ತುರ್ಕರು ಬಗ್ದಾದಿನಲ್ಲಿ ತಮ್ಮ ಸೇನೆಯನ್ನು ಬಿಟ್ಟು ಹಾಕಿರುವರೆಂತ ತಿಳಿದು ಬರುತ್ತದೆ.

ರುಷ್ಯನರು ಎರ್ಜರಮಿಗೆ ೭೫ ಮೈಲ ಉತ್ತರದಲ್ಲಿರುವ ಬಾಯಿಬರ್ಟ್ ಎಂಬ ಸ್ಥಳಕ್ಕೆ ಮುಟ್ಟಿರುವರೆಂಬ ವಾರ್ತೆ ಬಂದಿರುವದು.

ಎರ್ಜರಮಿನಲ್ಲಿ ತುರ್ಕರ ಪೂರ್ಣವಾಗಿ ಕೋಟೆಯೊಳಗೆ ಅಟ್ಟಲ್ಪಡುವ ಮೊದಲ ಉಗ್ರವಾದ ಕಾಳಗ ನಡೆಯಿತು. ಜರ್ಮನರು ಒದಗಿಸಿಕೊಟ್ಟ ರಣರಂಗದ ಒಲೆಗಳನ್ನು ಉಳಿಸಬೇಕೆಂಬದಾಗಿ ತುರ್ಕಿ ಸೈನಿಕರು ಪ್ರಯತ್ನಿಸಿದರು. ಆದರೆ ರುಷ್ಯನರ ಫಿರಂಗಿಗಳು ಅವನ್ನು ಪುಡಿಪುಡಿ ಮಾಡಿದ ಕೂಡಲೇ ರುಷ್ಯನರ ಕಾಲಾಳು ಸೇನಿಕರು ಮುಂದೆ ಸಾಗಿ ಹಸಿವೆ ಇದ್ದ ತುರ್ಕಸೈನಿಕರು ಒಲೆಗಳಿಂದ ಚೆದರಿ ಬಿದ್ದ 'ಸೂಪು' ಇತ್ಯಾದಿಗಳನ್ನು ನೆಕ್ಕುತ್ತಿದ್ದದ್ದನ್ನು ಕಂಡರು. ಎರ್ಜರಮಿನ ದಕ್ಷಿಣ ಕೋಟೆಯ ಬಳಿ ಇದ್ದ ತುರ್ಕಿಸೇನಿಕರ ಒಂದು ಪಾಳೆಯದವರು ಬೆಳಿಗ್ಗೆ ಶರಣಾಗತರಾಗುತ್ತೇವೆಂದು ಹೇಳಿದ್ದರು. ಮುಂಜಾನೆ ಅವರು ಹೊರ ಬಾರದ್ದನ್ನು ನೋಡಿ ರುಷ್ಯನರು ಒಳಹೋಗಿ ನೋಡಲು ಅವರು ಛಳಿಯಿಂದ ಸತ್ತು ಹೋಗಿದ್ದರು. ಎರ್ಜರಮಿನ ಸುತ್ತಲಿರುವ ಪರ್ವತಗಳಲ್ಲಿ ಹಿಮದಿಂದ ಅನೇಕ ತುರ್ಕಿಸೇನಿಕರು ಸತ್ತುಬಿದ್ದಿ

ಇಟಲಿಯನರು ಮಾರ್ಚಿ ತಿಂಗಳ ತಾ. ೧೮ರಲ್ಲು ಜರ್ಮನರ ಮೇಲೆ ಯುದ್ಧಸಾರುವರೆಂಬ ವಾರ್ತೆ ಇದೆ.

ತಾ. ೨೧ನೇ ಫೆಬ್ರುವರಿ.

ತಾ. ೨೦ರಲ್ಲು ಜರ್ಮನರ ವಾಯುನಾವೆಗಳು ಬ್ರಿಟಿಷ ಕರಾವಳಿಯಲ್ಲಿ ಕಾಣಿಸಿಕೊಂಡು ಲೊವೆಸ್ಟೊಫ್ಟ್ ಮತ್ತು ವಾಮರ್ ಎಂಬ ಸ್ಥಳಗಳ ಮೇಲೆ ಬೊಂಬುಗಳನ್ನು ಬಿಸಾಡಿರುತ್ತವೆ. ೩ ಮಂದಿ ಹತರಾಗಿರುವರು. ಒಬ್ಬನು ಗಾಯವೊಡೆದಿರುವನು. ಈ ನಾವೆಗಳು ಲೊವೆಸ್ಟೊಫ್ಟಿನ ಮೇಲೆ ಐದು ನಿಮಿಷಗಳೊಳಗೆ ೧೭ ಬೊಂಬುಗಳನ್ನು ಬಿಸಾಡಿ ಬಹಳ ಮೇಲಕ್ಕೆ ಹಾರಿ ಕಾಣದೆಹೋಗಿರುವವು. ಇದರಿಂದ ಪ್ರಾಣಾಪಾಯವಾಗಲಿಲ್ಲ. ಒಂದು ಹೋಟೇಲಿನ ಹೊರಗಣ ಕಟ್ಟಡಗಳಿಗೂ ಮತ್ತು ಎರಡು ಮನೆಗಳಿಗೂ ಹಾನಿಯಾಗಿದೆ. ಅಂದೇ ಬೆಳಿಗ್ಗೆ ಜರ್ಮನರ ವಾಯುನಾವೆಗಳು ೧೧ ಗಂಟೆ ೨೦ ನಿಮಿಷದ ಹೊತ್ತಿಗೆ ಕೆಂಟಿಸ್‌ನೋಕ್ ಪ್ರಾಂತ್ಯದ ಮೇಲೆಯೂ ಮತ್ತೊಂದು ವಾಯುನಾವೆಯು ವಾಲ್ಮರ್ ಎಂಬ ಸ್ಥಳದ ಮೇಲೆಯೂ ಬೊಂಬುಗಳನ್ನು ಎಸೆದಿರುತ್ತವೆ. ೨ ಬೊಂಬುಗಳಿಂದ ಮನೆಗಳ ಮಾಡುಗಳು ಹಾಳಾಗಿರುತ್ತವೆ. ಮತ್ತೊಂದು ಬೊಂಬು ದೇವಾಲಯದ ಸಮೀಪ ಬಿದ್ದು ಬೊಂಬಿನ ಚೂರುಗಳು ಕಿಟಕಿಗಳ ಮೇಲೆ ಬಿದ್ದಿರುವದು. ೪ನೇ ಬೊಂಬು ಸಮುದ್ರದ ದಡದ ಮೇಲೆ ಬಿದ್ದು ಇಬ್ಬರು ಮೃತರಾಗಿರುವರು. ಒಟ್ಟಿಗೆ ಈ ದಾಳಿಯಲ್ಲಿ ಇಬ್ಬರು ಗಂಡಸರೂ ಒಬ್ಬ ಹುಡುಗನೂ ಹತರಾಗಿರುವರು. ಒಬ್ಬ ನಾವಿಕನಿಗೆ ಗಾಯವಾಗಿರುವದು.

ಕೆಮರೂನಿನ ಉತ್ತರದಲ್ಲಿ ಮೋರ ಕೋಟೆಯಲ್ಲಿದ್ದ ಜರ್ಮನ ಸೇನೆಯು ಬ್ರಿಟಿಷರಿಗೆ ಶರಣಾಗತವಾಗಿರುವದು. ಹೀಗೆ ಇಡೀ ಕೆಮರೂನ್ ಬ್ರಿಟಿಷರ ಸ್ವಾಧೀನವಾಯಿತು.

ರಿಗ್ಗಾ ಮತ್ತು ಮಿನಿಸ್ಕ್ ಪ್ರಾಂತ್ಯದಲ್ಲಿ ಶತ್ರುಗಳ ಜೆಪಲಿನ್ ಮತ್ತು ಏರೋಪ್ಲೇನ್ ವಾಯುನಾವೆಗಳು ರುಷ್ಯನರ ನೆಲೆಗಳ ಮೇಲೆ ಬೊಂಬುಗಳನ್ನು ಆಗಾಗ್ಗೆ ಹಾಕುತ್ತಿರುತ್ತವೆ. ರುಷ್ಯನರ ವಾಯುನಾವಿಕರು ಪ್ರತಿಯಾಗಿ ಶತ್ರುಗಳ ನೆಲೆಗಳ ಮೇಲೆ ಸಿಡಿಮದ್ದುಗಳನ್ನು ಹಾಕುತ್ತಿರುವರು.

ಶತ್ರುಗಳು ನಿಸ್ವಿನ ಬಳಿ ಇರುವ ನೆಸಿಯೊಜೋರ್ ಎಂಬಲ್ಲಿ ತೋಫುಕಾಳಗ ಮಾಡಿ ಹಿಮ್ಮೆಟ್ಟಿರುವರು. ರುಷ್ಯನರ ಫಿರಂಗಿಗಳು ಜಿನ್ಸ್ಕವಿಟ್ಜಿನ ಬಳಿ ಶತ್ರುಗಳ ಒಂದು ಬತ್ತೇರಿಯನ್ನು ನಾಶಮಾಡಿರುವವು.

ಸಲೋನಿಕದಲ್ಲಿರುವ ಫ್ರೆಂಚ ಸೇನಿಕರು ವಾರ್ಡರ್ ನದಿಯ ಎಲ್ಲಾ ಸೇತುವೆಗಳನ್ನು ಸ್ವಾಧೀನಮಾಡಿಕೊಂಡಿರುವರು.

ಮಿತ್ರರು ಕೊರ್ಫು ದ್ವೀಪಕ್ಕೆ ಉತ್ತರದಲ್ಲಿರುವ ಒಥೊನಸ್ ದ್ವೀಪವನ್ನು ಸ್ವಾಧೀನಮಾಡಿಕೊಂಡಿರುವರು.

ಎರ್ಜರಮಿನಲ್ಲಿ ರುಷ್ಯನರು ತುರ್ಕರನ್ನು ಪೂರ್ಣವಾಗಿ ಸೋಲಿಸಿರುವರು. ಕೋಟೆಗಳಲ್ಲೆಲ್ಲಾ ತುಂಬಾ ಹೆಣಗಳು ಬಿದ್ದಿರುವವು. ಉಳಿದ ತುರ್ಕಸೇನಿಕರು ದಿಕ್ಕಾಪಾಲಾಗಿ ಓಡುತ್ತಿರುವರು, ಕಠಿಣ ಹಿಮಬಿದ್ದಿದ್ದರೂ ರುಷ್ಯನರು ಮೆಲ್ಲನೆ ಮುಂದರಿದು ಅವರನ್ನು ಕೊಲ್ಲುವ ಮತ್ತು ಹಿಡಿಯುವ ಕೆಲಸದಲ್ಲಿ ನಿರತರಾಗಿರುವರು. ಎಲ್ಲಾ ಕೋಟೆಗಳು ಫಿರಂಗಿ ತೋಫುಗಳ ಸಹಿತ ರುಷ್ಯನರಿಗೆ ದೊರಕಿರುತ್ತವೆ. ಈ ತನಕ ೨೦೦ ಫಿರಂಗಿಗಳು ಸಿಕ್ಕಿರುವವು. ಇನ್ನು ಬಹಳ ಕೊಳ್ಳೆಯೂ, ಮದ್ದುಗುಂಡುಗಳೂ, ರೈಫಲುಗಳೂ, ಮೋಟರ್ ಬಂಡಿಗಳೂ, ತಂತಿ ಇಲ್ಲದ ಟೆಲಿಗ್ರಾಫ್ ಸಾಮಾನುಗಳೂ ಸಿಕ್ಕಿರುವವು. ಸೆರೆಬಿದ್ದ ಸೇನಿಕರ ಲೆಕ್ಕ ಆಗಲಿಲ್ಲ. ರಷ್ಯನರು ಎರ್ಜರಮಿನಿಂದ ತುರ್ಕರನ್ನು ಅಟ್ಟುತ್ತಾ ಹೋಗಿ ಮುಸ್ ಮತ್ತು ಅಹಲತ್ ಎಂಬ ಪಟ್ಟಣಗಳನ್ನು ಹಿಡಿದಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಪಂಜಾಬಿನಲ್ಲಿ ಇಬ್ಬರು ಐ. ಸಿ. ಯಸ್. ಆಫೀಸರರು ತೋರಿಸಿದ ಶೂರಕೃತ್ಯದ ವೃತ್ತಾಂತವು "ಟ್ರಿಬ್ಯೂನ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವದು. ತಾ. ೧೨ರಲ್ಲು ಅಮೃತಸಾರಿನ ಡ್ಯೂಪಿಟಿ ಕಮಿಷನರಾದ ಮೆ| ಕಿಂಗ್ ಎಂಬವರು ಸರ್ಕೀಟಿಗೆ ಹೋಗಿದ್ದಾಗ ಒಂದು ಗ್ರಾಮದಲ್ಲಿ ಅಸಿಸ್ಟಾಂಟ ಕಮಿಶನರಾದ ಮೆ| ವೈಲ್ಲಿಯವರ ಕೂಡೆ ಸಾಯಂಕಾಲ ೫ ಗಂಟೆಗೆ ಚಾ ಕುಡಿಯುತ್ತಿರುವಾಗ ದೊಡ್ಡ ಬೊಬ್ಬೆ ಕೇಳಿಸಿತು. ಮೆ| ಕಿಂಗರವರು ಈ ಬೊಬ್ಬೆ ಏನೆಂಬುದನ್ನು ವಿಚಾರಿಸಿದ್ದಲ್ಲಿ ಗ್ರಾಮಸ್ಥನೊಬ್ಬನು ಹಳೇ ಭಾವಿಯೊಂದನ್ನು ಅಗಿಯುತ್ತಿರುವಾಗ ಮಣ್ಣು ಕುಸಿದು ಬಿದ್ದು ಮಣ್ಣಿನೊಳಗೆ ಹೂತುಹೋಗಿರುವನೆಂಬದಾಗಿ ತಿಳಿದುಬಂದದರಿಂದ ಕೂಡಲೇ ಆ ಸ್ಥಳಕ್ಕೆ ಓಡಿಹೋಗಿ ಆ ಮನುಷ್ಯನನ್ನು ರಕ್ಷಿಸುವ ಹಾಗೆ ಅಲ್ಲಿ ಕೂಡಿದ್ದ ಜನರನ್ನು ಪ್ರೋತ್ಸಾಹಿಸಿದರು. ಆದರೆ ಜೀವದಾಶೆಯಿಂದ ಯಾರೂ ಬಾವಿಗೆ ಹಾರಲು ಒಪ್ಪದ್ದರಿಂದ ಮೆ| ಕಿಂಗರವರು ಒಡನೆ ಬಾವಿಗೆ ಹಾರಿ ಆ ಮನುಷ್ಯನನ್ನು ರಕ್ಷಿಸ ಯತ್ನಿಸಿದರು: ಮೆ| ಕಿಂಗರ ವಸ್ತ್ರಗಳು ಅಡ್ಡ ಕಟ್ಟಿದ್ದರಿಂದ ಅವರು ಮೇಲಕ್ಕೆ ಬಂದು ವಸ್ತ್ರ ಇತ್ಯಾದಿಗಳನ್ನು ತೆಗದಿಟ್ಟು ಪುನಃ ಬಾವಿಗೆ ಹಾರಿದರು. ಮೆ| ವೈಲ್ಲಿರವರು ಕೂಡಾ ಬಾವಿಗೆ ಹಾರಿ ಮಣ್ಣನ್ನು ಅಗಿದು ಆ ಮನುಷ್ಯನನ್ನು ಮೇಲಕ್ಕೆ ತೆಗೆದು ಅವನನ್ನು ಬದುಕಿಸಲಿಕ್ಕೆ ಬಹಳ ಯತ್ನಪಟ್ಟರು. ಆದರೆ ಆ ಮನುಷ್ಯನು ಸತ್ತುಹೋದನು.

ಮಾನ್ಯ ಗೋಖಲೆಯವರ ಶ್ರಾದ್ಧದ ದಿನವಾದ ತಾ. ೧೯ನೇ ಶನಿವಾರ ಮದ್ರಾಸ್, ನಾಗಪಟ್ಣ, ಪೂನೆ, ಮುಂಬಾಯಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಾರ್ವಜನಿಕ ಸಭೆಗಳು ಕೂಡಿದ್ದವು.

ಡಿಲ್ಲಿಯಲ್ಲಿ ಲೇಡಿಹಾರ್ಡಿಂಜರವರ ಹೆಸರಿನಲ್ಲಿ ಹೆಂಗಸರ ಬಗ್ಗೆ ಸ್ಥಾಪಿಸೋಣಾದ ಮೆಡಿಕಲ್ ಕಾಲೇಜು ವೈಸರಾಯ ಹಾರ್ಡಿಂಜ ಪ್ರಭುಗಳವರಿಂದ ತಾ. ೧೭ರಲ್ಲು ಪ್ರತಿಷ್ಠಿಸೋಣಾಯಿತು. ಈ ಕಾಲೇಜಿನಲ್ಲಿ ೧೦೦ ವಿದ್ಯಾರ್ಥಿಗಳು ಕಲಿಯುವಷ್ಟು ಸ್ಥಳವಿದೆ. ೧೫೦ ರೋಗಿಗಳನ್ನು ಇಡಬಹುದಾದ ಒಂದು ಆಸ್ಪತ್ರೆಯೂ ೫೦ ನರ್ಸುಗಳ ಬಗ್ಗೆ ಒಂದು ಟ್ರೈನಿಂಗ್ ಶಾಲೆಯೂ ಇದೆ. ಎರಡು ವರ್ಷಗಳ ಹಿಂದೆ ಈ ಕಾಲೇಜು ಕಟ್ಟೋಣ ಕಟ್ಟಲು ಪ್ರಾರಂಭವಾಗಿ ಈಗ ಕಾಲೇಜು ಮತ್ತು ಹೊಸ್ಟೆಲ್ ಕಟ್ಟೋಣಗಳ ಕೆಲಸವು ಪೂರ್ಣವಾಯಿತು. ಇದಕ್ಕೆ ಒಟ್ಟಿಗೆ ೧೫ ಲಕ್ಷ ರೂಪಾಯಿಗಳ ಖರ್ಚು ತಗಲಬಹುದೆಂದು ಅಂದಾಜಾದುದರಿಂದ ಈ ಹಣವನ್ನು ಹಿಂದೂಸ್ಥಾನದ ಅನೇಕ ರಾಜವಂಶದವರು ವಂತಿಗೆ ಹಾಕಿಕೊಟ್ಟರು. ಈಗ ಪುನಃ ಹೆಚ್ಚಿಗೆ ೧೦ ಲಕ್ಷ ರೂಪಾಯಿಗಳು ಬೇಕಾಗಿರುವದೆಂತ ಅಂದಾಜಾಗಿಯದೆ.

ಫೆಬ್ರವರಿ ತಾ. ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗು ಬೇನೆಯಿಂದ ೭೫೫೫ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂಧಿನಲ್ಲಿ ೧೭೧೫; ಮದ್ರಾಸ್ ೩೪೧; ಬಿಹಾರ್ ಮತ್ತು ಒರಿಸ್ಸ ೯೭೦; ಸಂಯುಕ್ತಸಂಸ್ಥಾನ ೧೭೯೦; ಪಂಜಾಬು ೪೭; ಬರ್ಮ ೪೦೫; ಮಧ್ಯಸಂಸ್ಥಾನ ೯೦೧; ಮೈಸೂರು ಸಂಸ್ಥಾನ ೧೨೧; ಹೈದರಾಬಾದ್ ೧೩೭; ಮಧ್ಯಹಿಂದೂಸ್ಥಾನ ೪೦; ಕಾಶ್ಮೀರ ೭ ಮರಣಗಳಾದವು.

ಯುದ್ಧದ ಬಗ್ಗೆ ಮೋಟರ್ ಇತ್ಯಾದಿಗಳನ್ನು ಕೊಂಡುಕೊಳ್ಳುವರೆ ಚರ್ಕಾರಿ ಮಹಾರಾಜರವರು ೭೫೦೦೦ ರೂಪಾಯಿ ದಾನ ಮಾಡಿರುವರು.

ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನ ಪ್ರೊಫೆಸರ್ ಓಟೆನ್ ರವರಿಗೆ ಹೊಡೆದ ಸಂಬಂಧ ತನಿಖೆ ನಡೆದು ಇಬ್ಬರು ವಿದ್ಯಾರ್ಥಿಗಳನ್ನು ಕಾಲೇಜಿಂದ ತೆಗೆದು ಹಾಕಿದರಲ್ಲದೆ ಇತರೆ

ಅದೇ ಕಾಲೇಜಿನಲ್ಲಿ ನಡೆದ ಮುಷ್ಕರ ಸಂಬಂಧ ಒಬ್ಬ ವಿದ್ಯಾರ್ಥಿಗೆ ಶಿಕ್ಷೆ ವಿಧಿಸಿದರು. ಪ್ರೊಫೆಸರರಿಗೆ ಹೊಡೆದ ತಕ್ಷೀರುಗಾರರನ್ನು ಕಂಡು ಹಿಡಿಯುವ ಬಗ್ಗೆ ಕಾಲೇಜು ವಿದ್ಯಾರ್ಥಿಗಳು ಒಂದು ಕಮಿಟಿಯನ್ನು ಏರ್ಪಡಿಸಿರುವರು. ಬಂಗಾಳ ಸರಕಾರದವರು ಈ ಕಾಲೇಜಿಯಲ್ಲಿ ಈಚೆಗೆ ನಡೆದ ಮುಷ್ಕರ ಮತ್ತು ಪ್ರೊಫೆಸರರಿಗೆ ಹೊಡೆದ ಸಂಬಂಧ ಕಾಲೇಜಿಯು ಕಟ್ಟುಬಿಟ್ಟ ಇತ್ಯಾದಿಗಳನ್ನು ವಿಚಾರಿಸುವರೆ ಜಸ್ಟಿಸ್ ಮುಕರ್ಜಿ, ಮಾನ್ಯ ಮೆ| ಹೊರ್ನೆಲ್, ಮೆ| ಎಚ್. ಆರ್. ಜೇಮ್ಸ್ ಮೊದಲಾದವರೇ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಿರುವರು.

~~~~~~

ಕಲ್ಕತ್ತಾ ಕಾಲೇಜಿಯಲ್ಲಿ ಪ್ರೊಫೆಸರ್ ಮೆ| ಓಟೆನರವರಿಗೆ ವಿದ್ಯಾರ್ಥಿಗಳು ಹೊಡೆದ ವಿಷಯದ ವಾರ್ತೆಯನ್ನು ಸರಕಾರದವರು ಈ ರೀತಿ ಪ್ರಕಟಿಸಿರುವರು:—ಮಧ್ಯಾಹ್ನ ೧ ಗಂಟೆಗೆ ಮೊದಲು ಪ್ರೊಫೆಸರ್ ಓಟೆನರವರು ಕಾಲೇಜಿನ ೧ನೆ ಅಂತಸ್ಥಿನಲ್ಲಿ ೫ನೆ ವರ್ಷದ ವಿದ್ಯಾರ್ಥಿಗಳಿಗೆ ಇತಿಹಾಸ ಭಾಷಣವನ್ನು ಮಾಡುತ್ತಿರುವಾಗ ಹೊರಗಿನ ವರಾಂಡದಲ್ಲಿ ಕೆಲವು ವಿದ್ಯಾರ್ಥಿಗಳು ಗುಂಪು ಕೂಡಿ ಗಟ್ಟಿಯಾಗಿ ಮಾತನ್ನಾಡುತ್ತಾ ಅತ್ತಿತ್ತ ಹೋದರು. ಪಾಠ ನಡೆಯುತ್ತಿರುವಾಗ ವರಾಂಡದಲ್ಲಿ ಗದ್ದಲವೆಬ್ಬಿಸ ಕೂಡದೆಂಬ ಆಜ್ಞೆಯು ಈ ಮೊದಲೇ ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟದ್ದರಿಂದ ಪ್ರೊಫೆಸರ್ ಓಟೆನರು ಹೊರಗೆ ಹೋಗಿ ಗದ್ದಲ ಮಾಡಕೂಡದೆಂದು ಗದ್ದಲವೆಬ್ಬಿಸಿದ ವಿದ್ಯಾರ್ಥಿಗಳಿಗೆ ಹೇಳಿ ಹಿಂತಿರುಗುವಾಗ ವಿದ್ಯಾರ್ಥಿಗಳಲ್ಲಿ ಒಬ್ಬನು ಗಟ್ಟಿ ಸ್ವರದಿಂದ ಏನೋ ಹೇಳಿದನು. ಪ್ರೊಫೆಸರರು ಪುನಃ ಹಿಂತಿರುಗಿ ಹಾಗೆ ಮಾತನ್ನಾಡಿದ ವಿದ್ಯಾರ್ಥಿಯ ಕೈಹಿಡಿದು ಅವನನ್ನು ಕೋಣೆಯೊಳಗೆ ಕರಕೊಂಡುಹೋಗಿ ಒಂದು ರೂಪಾಯಿ ಜುಲುಮಾನೆ ವಿಧಿಸುವ ಬಗ್ಗೆ ಅವನ ಹೆಸರನ್ನು ಬರಕೊಂಡರು. ಇತರ ವಿದ್ಯಾರ್ಥಿಗಳ ಮಧ್ಯದಲ್ಲಿದ್ದ ಈ ಹುಡುಗನ ಮೇಲೆ ಕೈಹಾಕಿ ಒಳಗೆ ಕರಕೊಂಡು ಬರುವಾಗ ಆ ಹುಡುಗನು ಏನೂ ಅಡ್ಡಿಮಾಡಲಿಲ್ಲ. ಆ ಹುಡುಗನು ಹೇಳುವಂತೆ ಪ್ರೊಫೆಸರರು ಅವನಿಗೆ "ರಾಸ್ಕಲ್" ಎಂತ ಬೈದದ್ದೂ ಇಲ್ಲ. ನಂತರ ಮೆ| ಓಟೆನರವರು ತನ್ನ ಕ್ಲಾಸಿನ ಕೋಣೆಗೆ ಹೋಗಿ ಈ ಸಂಗತಿಯನ್ನು ಕಾಲೇಜು ಪ್ರಿನ್ಸಿಪಾಲರಿಗೆ ಬರಹ ಮೂಲಕ ತಿಳಿಸಿದರು. ಜುಲುಮಾನೆ ವಿಧಿಸಿದ ಹುಡುಗನು ಮೆ| ಓಟೆನರ ವಿಷಯ ಪ್ರಿನ್ಸಿಪಾಲರಲ್ಲಿ ದೂರು ಕೊಟ್ಟಿರುವದರಿಂದ ೪ ಗಂಟೆಗೆ ಪ್ರಿನ್ಸಿಪಾಲರ ಕೋಣೆಗೆ ಬರಬೇಕೆಂದು ಪ್ರಿನ್ಸಿಪಾಲರು ಮೆ| ಓಟೆನರಿಗೆ ಬರದು ತಿಳಿಸಿದರು. ೪ ಗಂಟೆಗೆ ಸ್ವಲ್ಪಮೊದಲು ಮೆ|ಓಟೆನರು ತನ್ನ ಕೋಣೆಯಿಂದ ಮೆಟ್ಲು ಹತ್ತಿಕೊಂಡು ಆಟದ ಸಂಬಂಧವಾದ ಒಂದು ನೋಟೀಸು ಹಚ್ಚುವರೆ ಕೆಳಗೆ ಬಂದರು. ಅವರು ಕೆಳಗೆ ಬರುವಾಗ ಮೇಲೆ ಹುಡುಗರ್ಯಾರೂ ಇರಲಿಲ್ಲ. ಆದರೆ ಕೆಳಗೆ ಕೆಲವು ಹುಡುಗರು ನಿಂತಿದ್ದರು. ಪ್ರೊಫೆಸರರು ಕೆಳಗೆ ಮುಟ್ಟುತ್ತಲೇ ಹಿಂದಿನಿಂದ ಯಾರೋ ಅವರನ್ನು ದೂಡಿ ಹೊಡೆದರು. ಕೂಡಲೇ ಸುಮಾರು ೧೫. ಮಂದಿ ಅವರ ಮೇಲೆ ಬಿದ್ದು ತಲೆಯಿಂದ ಕಾಲಿನ ವರೆಗೆ ಒದೆದರು. ೪೦ ಸೆಕುಂದದೊಳಗೆ ಈ ಕೃತ್ಯವನ್ನು ನಡಿಸಿ ಗಾತುಕರು ಓಡಿ ಹೋದರು. ಪ್ರೊಫೆಸರರ ಕ್ಲಾಸಿನ ವಿದ್ಯಾರ್ಥಿಗಳಿಗೂ, ಪ್ರೊಫೆಸರರಿಗೂ ಕೆಲವು ಕಾಲದಿಂದ ಮನಃಕ್ಲೇಶವಿತ್ತೆಂಬದಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯವನ್ನು ಮೆ| ಓಟೆನರವರು ಅಲ್ಲಗಳೆದಿರುವರಲ್ಲದೆ ತನ್ನ ಕ್ಲಾಸಿನ ವಿದ್ಯಾರ್ಥಿಗಳಿಂದ ಈ ಕೃತ್ಯವು ನಡೆದದ್ದಲ್ಲವೆಂತ ಹೇಳುವರು. ಕಾಲೇಜು ಪ್ರಿನ್ಸಿಪಾಲರಾದ ಮೆ| ಜೇಮ್ಸರವರು ಕೂಡಾ ಮೆ| ಓಟೆನರ ತರಗತಿಯ ವಿದ್ಯಾರ್ಥಿಗಳಿಂದ ಈ ಕೃತ್ಯವು ನಡೆದದಲ್ಲವೆಂತ ಹೇಳುವರು. ತಾ. ೧೮ನೇ ಶುಕ್ರವಾರ ಮಧ್ಯಾಹ್ನ ಗಂಟೆ ೧ರಿಂದ ಸರಕಾರದವರ ಇನ್ನೊಂದು ಹುಕುಂ ಆಗುವ ವರೆಗೆ ಈ ಕಾಲೇಜನ್ನು ಮುಚ್ಚಲು ಸರಕಾರದವರ ಅಪ್ಪಣೆ ಆಗಿದೆ.

~~~~~~

ದಕ್ಷಿಣ ಕನ್ನಡ.

~~~~~~

ಕಾಪು:— ಬಹಳ ಕಾಲದಿಂದ ಹಾರೈಸುತ್ತಿದ್ದ ಪಾಂಗಾಳ ಸೇತುವೆಯ ಕೆಲಸವು ಸಂಪೂರ್ಣ ಆಗಿ ತಾ. ೧೬ರಲ್ಲು ಉಡುಪಿಯಿಂದ ರಾ॥ ಅಬ್ದುಲ್ ಹಾಜಿಖಾನ್ ಸಾಹೇಬರವರು, ರಾ. ವಕೀಲ ವಾಸ್ತೇವಪೈಗಳು, ರಾ. ವಕೀಲ ವೆಂಕಟೇಶ ಪ್ರಭುಗಳು, ರಾ. ಉಡುಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾದ ರಾ. ಉಳ್ಳಾಲ ಮಂಗೇಶರಾಯರು, ಲೋಕಲ್ ಫಂಡು ಓವರ್ಸಿಯರು, ಸುಪ್ರವ್ಯಾಜರವರು ಮುಂತಾಗಿ ಇನ್ನೂ ಹಲವು ಗೃಹಸ್ಥರು ಕೂಡಿ ಬಂದರು. ರಾಜೇಶ್ರೀ ಅಬ್ದುಲ್ ಸಾಹೇಬರವರು ಸಂಕದ ದಾರಿಯನ್ನು ತೆರೆದರು. ಪಾಂಗಾಳ ಹಿಂದೂ ಎಲಿಮೆಂಟರಿ ಶಾಲೆಯ ಮಕ್ಕಳಿಗೆ ಪಾಂಗಾಳ ಗ್ರಾಮದ ಪಟೇಲರಾದ ರಾ. ರಂಗರಾಯರು ಬಾಳೆಹಣ್ಣು, ಸಕ್ಕರೆ ಸಂತೋಷಾರ್ಥವಾಗಿ ಹಂಚಿದರು. ಸ. ಅ. ಇನ್ಸ್‌ಪೆಕ್ಟರವರು ಕನ್ನಡದಲ್ಲಿಯೂ, ರಾ. ವೆಂಕಟೇಶ ಪ್ರಭುಗಳವರು ಇಂಗ್ಲಿಷಿನಲ್ಲಿಯೂ ಉಪನ್ಯಾಸಗಳನ್ನು ಕೊಟ್ಟರು. ನಂತರ ನೆರೆದ ಸಭಿಕರ ವ ಸಂಕದ ತಸಬೀರು ತೆಗೆಯಲ್ಪಟ್ಟಿತು. ಕೊನೆಗೆ ನೆರೆದ ಸಭಿಕರು ಲೋಕಲ್ ಫಂಡು ಓವರ್ಸಿಯರವರು ತಯಾರಿಸಿದ ಕಾಫಿ ಫಲಾಹಾರಾದಿಗಳಿಂದ ಸನ್ಮಾನಿತರಾಗಿ ಎಲ್ಲರೂ ತೆರಳಿದರು.

ಇದೇ ತಿಂಗಳ ತಾ. ೫ರಲ್ಲು ಗುಡ್ಡೆ ಬಿ. ಬಿ. ಯಂ. ಶಾಲೆಯಲ್ಲಿ ಉಪಾಧ್ಯಾಯರುಗಳ ಸಭೆಯು ನೆರೆದಿತ್ತು. ಉಡ್ಪಿ ರೇಂಜು ಸ್ಕೂಲುಗಳ ಸ. ಅ. ಇನ್ಸ್‌ಪೆಕ್ಟರವರು ಹಾಜರಿದ್ದರು. ಶಾಲಾ ಬಾಲಕ, ಬಾಲಕಿಯರುಗಳ ರಾಜಗೀತವಾದೊಡನೆ ಅಧ್ಯಕ್ಷರು ಬಾಲಕ ತರಗತಿಯವರಿಗೆ ಅಕ್ಷರ ಅಭ್ಯಾಸ ಗಣಿತ ಕಲಿಸುವ ವಿಷಯವೂ ಮೇಲಿನ ತರಗತಿಗೆ ಭೂಗೋಳ ಕಲಿಸುವದರ ವಿಷಯ ಉಪಾಧ್ಯಾಯರುಗಳಿಗೆ ಸುಭೋಧನೆಯನ್ನಿತ್ತರು.

~~~~~~

ಮಂಜೇಶ್ವರ:— ಗೋಕರ್ಣಮಠದ ಶ್ರೀಮತ್ ಇಂದಿರಾಕಾಂತತೀರ್ಥ ಶ್ರೀಪಾದಂಗಳವರು ತಮ್ಮ ಶಿಷ್ಯರೊಂದಿಗೆ ಇದೇ ಕಳೆದ ತಾ. ೨೩ಲ್ಲು ಇಲ್ಲಿಗೆ ದಯಮಾಡಿರುವರು. ತಾ. ೨೫ನೇ ಶುಕ್ರವಾರ ರಾತ್ರೆ ಇಲ್ಲಿಂದ ಹೊರಟು ವಿಟ್ಲದ ಮಾರ್ಗವಾಗಿ ಉಪ್ಪಿನಂಗಡಿಗೆ ಚಿತ್ತೈಸುವರು.

~~~~~~

ಮಂಗಳೂರು.

~~~~~~

ಇದೇ ಕಳದ ಜನವರಿ ತಿಂಗಳಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಒಟ್ಟಿಗೆ ೪೨೦೧ ಜನನ, ೨೯೦೪ ಮರಣಗಳಾಗಿರುವವು. ಈ ಪೈಕಿ ೨೧೦೩ ಗಂಡು, ೨೦೯೮ ಹೆಣ್ಣು ಮಕ್ಕಳು ಜನಿಸಿರುವರು, ೧೫೩೬ ಗಂಡು, ೧೫೬೮ ಹೆಣ್ಣು—ಮೃತಪಟ್ಟಿರುವರು. ಆಯಾ ತಾಲೂಕುಗಳ ಲೆಕ್ಕವು ಈ ರೀತಿಯಾಗಿರುವದು. ಕುಂದಾಪುರ ತಾಲೂಕು—ಜನನ ೨೪೮ ಗಂಡು, ೨೫೦ ಹೆಣ್ಣು, ಮರಣ—೧೯೮ ಗಂಡು, ೨೧೫ ಹೆಣ್ಣು. ಉಡ್ಪಿತಾಲೂಕು—ಜನನ ೩೫೭ ಗಂಡು, ೩೩೦ ಹೆಣ್ಣು, ಮರಣ—೨೦೮ ಗಂಡು, ೨೨೫ ಹೆಣ್ಣು. ಕಾರ್ಕಳ ತಾಲೂಕು—ಜನನ ೨೬೯ ಗಂಡು, ೨೫೫ ಹೆಣ್ಣು, ಮರಣ—೧೭೫ ಗಂಡು, ೧೪೪ ಹೆಣ್ಣು. ಮಂಗಳೂರು ತಾಲೂಕು—ಜನನ ೪೮೭ ಗಂಡು, ೪೭೩ ಹೆಣ್ಣು ಮರಣ—೩೯೩ ಗಂಡು, ೩೬೧ ಹೆಣ್ಣು. ಉಪ್ಪಿನಂಗಡಿ ತಾಲೂಕು—ಜನನ ೩೩೪ ಗಂಡು, ೩೮೭ ಹೆಣ್ಣು. ಮರಣ ೨೨೫ ಗಂಡು, ೨೪೪ ಹೆಣ್ಣು. ಕಾಸರಗೋಡು ತಾಲೂಕು ಜನನ—೪೦೮ ಗಂಡು, ೪೦೪ ಹೆಣ್ಣು, ಮರಣ—೩೫೭ ಗಂಡು, ೩೪೩ ಹೆಣ್ಣು.

ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳೆದ ತಿಂಗಳಲ್ಲಿ ಒಟ್ಟಿಗೆ ೧೬೧ ಜನನ, ೧೩೯ ಮರಣಗಳಾಗಿರುವವು. ಈ ಪೈಕಿ ಜನನ ೭೦ ಗಂಡು, ೬೦ ಹೆಣ್ಣು. ಮರಣ ೪೦ ಗಂಡು, ೫೨ ಹೆಣ್ಣು.

ಕುಂದಾಪುರ ತಾಲೂಕು ಆಫೀಸಿನ ಹೆಡ್ ಎಕೌಂಟಾಂಟ್ ಮತ್ತು ಟ್ರೆಜರರಾಗಿರುವ ಮ| ರಾ| ಡಿ. ವೆಂಕಪ್ಪಯ್ಯರು ೬ ತಿಂಗಳ ರಜೆ ತಕ್ಕೊಂಡಿರುವದರಿಂದ ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿರುವ ಮ| ರಾ| ಯು. ಅನಂತಯ್ಯನವರು ಕುಂದಾಪುರ ತಾಲೂಕು ಆಫೀಸಿನ ಹೆಡ್ ಎಕೌಂಟಾಂಟರಾಗಿಯೂ ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕ ಮ. ರಾ| ಡಿ. ಆನಂದರಾಯರು ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿಯೂ ಮ| ರಾ| ಬಿ. ಕೆ. ಕೃಷ್ಣರಾಯರು ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಮಂಗಳೂರಲ್ಲಿ ಬೈಸಿಕಲ್ ಸವಾರರ ಸಂಖ್ಯೆಯು ದಿನೇ ದಿನೇ ಹೇಗೆ ಹೆಚ್ಚುತ್ತಿದೆಯೋ ಹಾಗೆಯೇ ಅವಗಡಗಳೂ ಹೆಚ್ಚುತ್ತಿವೆ. ನೂರಾರು ಜನರು ಹೋಗಿ ಬರುತ್ತಿರುವ ಪಟ್ಟಣದ ಮುಖ್ಯ ಮುಖ್ಯ ರಸ್ತೆಗಳಲ್ಲಿ ಕೂಡಾ ಈ ಸವಾರರು ದಾರಿಗರನ್ನೂ, ಶಾಲಾ ಮಕ್ಕಳನ್ನೂ ಲಕ್ಷಿಸದೆ ಅತಿ ವೇಗವಾಗಿ ಸೈಕಲುಗಳನ್ನು ಓಡಿಸುವದರಿಂದ ದಿನನಿತ್ಯವೆಂಬಂತೆ ಅವಗಡಗಳು ಆಗುತ್ತಲಿವೆ. ಇಂಥಾ ಅವಗಡಗಳು ಹೆಚ್ಚುತ್ತದಾದರೂ ಅವಗಡಕ್ಕೆ ತುತ್ತಾದವರು ಮುಂದೆ ಬಂದು ಸಂಬಂಧಪಟ್ಟ ಆಫೀಸರರಿಗೆ ತಿಳಿಸಿ ತಕ್ಕ ನಿವೃತ್ತಿಯನ್ನು ಮಾಡಿಕೊಳ್ಳುವದು ಕಷ್ಟಸಾಧ್ಯವೆಂತ ಭಾವಿಸಿ ಸುಮ್ಮನಿರುವರು. ಕೆಲವು ಬೈಸಿಕಲ್ ಅವಗಡಗಳು ಸಂಭವಿಸುತ್ತಲೇ ಸವಾರರು ಮತ್ತಷ್ಟು ವೇಗದಿಂದ ಸೈಕಲನ್ನು ಓಡಿಸಿ ಪಲಾಯನ ಮಾಡುತ್ತಿರುವದರಿಂದ ಅವಗಡಕ್ಕೆ ತುತ್ತಾದವರು ಈ ಸವಾರರ ಗುರುತು ಪರಿಚಿತಿಯನ್ನರಿಯದೆ ಸುಮ್ಮನಿರುವರು. ಆದರೆ ಕಳದ ವಾರ ಹಂಪನಕಟ್ಟೆಯ ಜಟ್ಕಾ ಬಂಡಿಗಳನ್ನು ಇಡುವ ಸ್ಟೇಂಡಿನ ಎದುರಿಗೆ ನಡೆದ ಎರಡು ಸೈಕಲ್ ಅವಗಡಗಳೂ ದೈವವಶಾತ್ ಪತ್ತೆಯಾಗಿರುವವು.—ಉಳ್ಳಾಲ ಶರಾಬು ಗುತ್ತೆದಾರ ಬಂಟಪ್ಪ ಎಂಬವನು ಹಂಪನಕಟ್ಟೆಯ ಸರಾಯಿ ಡಿಪೋವಿನಿಂದ ೩ ಗೆಲನ್ ಸರಾಯಿ ಕ್ರಯಕ್ಕೆ ಪಡೆದು ತಲೆಯ ಮೇಲೆ ಇಟ್ಟುಕೊಂಡು ಬ್ರಿಟೋ ಬಿಲ್ಡಿಂಗ್ಸಿನ ಎದುರಿನಲ್ಲಿ ಹೋಗುತ್ತಿರುವಾಗ ಒಬ್ಬ ಸೈಕಲ್ ಸವಾರನು ಅತಿ ಜೋರಾಗಿ ಓಡಿಸುತ್ತಿದ್ದ ಸೈಕಲ್ ಸದರಿ ಬಂಟಪ್ಪನ ಮೇಲೆ ತಾಗಿ

ಸರಾಯಿಯ ಮಡಿಕೆಯೊಡನೆ ಬಂಟಪ್ಪನು ನೆಲಕ್ಕೆ ಉರುಳಿ ಬಿದ್ದನು. ಸರಾಯಿಯ ಮಡಿಕೆ ಒಡೆದು ಸರಾಯಿ ನಷ್ಟವಾಯಿತಲ್ಲದೆ ಬಂಟಪ್ಪನಿಗೂ ಜಖಂ ಆಯಿತು. ಅಷ್ಟರಲ್ಲಿ ಪೋಲೀಸಿನವರು ದೂರದಿಂದ ಬರುತ್ತಿರುವದನ್ನು ನೋಡಿ ಸೈಕಲ್ ಸವಾರನು ಸೈಕಲನ್ನೇ ಬಿಟ್ಟು ಓಡಿ ಹೋದನು ಪೋಲೀಸಿನವರು ಸೈಕಲನ್ನು ಟೌನ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರುಪಡಿಸಿ ಈ ಸೈಕಲಿನ ವ್ಯಾಲಿಕರ್‍ಯಾರೆಂಬ ಕುರಿತು ವಿಚಾರ ನಡಿಸುವಾಗ ಹಂಪನಕಟ್ಟೆಯಲ್ಲಿರುವ ಸೈಕಲ್ ಬಾಡಿಗೆಗೆ ಕೊಡುವ ವೃತ್ತಿ ನಡಿಸುವ ಸಾವಿರ ಸೋಜನ ಗೈರಹಾಜರಿ ಕಾಲದಲ್ಲಿ ಬಾಬಿ ಎಂಬವನು ಈ ಸೈಕಲನ್ನು ಕೊಂಡುಹೋಗಿ ಸವಾರಿಮಾಡುತ್ತಿದ್ದನೆಂಬದಾಗಿ ತಿಳಿದು ಬಂದಿರುವುದು ಅಂದೇ ಸಾಯಂಕಾಲ ಬೋಳಾರದ ರಾ॥ ಸಿ ರಘುನಾಥ ಕಾಮತರವರು ಬಟ್ಟಾ ಸ್ಟೇಂಡಿನ ಬಳಿಯಿಂದ ಮನೆಗೆ ಹೋಗುತ್ತಿರಲಾಗ ಒಬ್ಬ ಬೈಸಿಕಲ್ ಸವಾರನು ಜೋರಾಗಿ ಬರುತ್ತಿದ್ದ ಬೈಸಿಕಲ್ ರಾ ಕಾಮತರಿಗೆ ತಗಲಿ ರಾ ಕಾಮತರು ನೆಲಕ್ಕೆ ಅಪ್ಪಳಿಸಿ ಬಿದ್ದು ಕೈಕಾಲುಗಳಲ್ಲಿ ಗಾಯ ಹೊಂದಿರುವರು. ಸೈಕಲ್ ಸವಾರನು ಸೈಕಲನ್ನು ಅಲ್ಲಿಯೇ ಬಿಟ್ಟು ಪಲಾಯನಮಾಡಿದನು ಪೋಲೀಸಿನವರು ಸೈಕಲನ್ನು ಕೋರ್ಟಿಗೆ ಹಾಜರುಪಡಿಸಿ ವಿಚಾರಿಸಿದ್ದಕ್ಕೆ ಸದರಿ ಸೈಕಲ್ ಸವಾರನು ಕ್ಲಾರಿಕ ಪರಮೇಶ್ವರನೆಂಬವನು ಎಂತ ತಿಳಿದುಬಂದಿದೆ ಇದೇ ಕಳೆದ ಸೋಮವಾರ ದಿನ ಹಂಪನಕಟ್ಟೆಯ ಪೋಸ್ಟಾಫೀಸಿನ ಎದುರಿಗೆ ನಡೆದ ಒಂದು ಬೈಸಿಕಲ್ ಅಪಘಡದಲ್ಲಿ ಸವಾರನು ಬೈಸಿಕಲನ್ನು ಅತಿ ವೇಗವಾಗಿ ಓಡಿಸಿ ತಪ್ಪಿಸಿಕೊಂಡಿರುವನು ಇಂಥಾ ಅಪಘಡಗಳಿಗೆ ಮುಖ್ಯ ಕಾರಣಗಳೇನೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಗೊತ್ತುಮಾಡಿ ತಕ್ಕ ನಿವೃತ್ತಿ ಸಾಧನೆಗಳನ್ನು ಮಾಡಬೇಕಾಗಿ ಅಪೇಕ್ಷಿಸುವೆವು

ತಾ ೧೯ನೇ ಸಾಯಂಕಾಲ ಮೈಲ್ ಟ್ರೇನ್ ಬರುವಾಗ ಅತ್ತಾವರದ ರೈಲ್ವೇ ಗೇಟ ಬಳಿ ಸಂಕ ದಾಟಿ ಹೋಗುತ್ತಿದ್ದ ಕೊಂಕಣಿ ಕತ್ತಾರ ಗ್ರಾಮದ ಮಂಜ ನಾಯಕನೆಂಬವನ ಮೇಲೆ ಟ್ರೇನ್ ಗಾಲಿಗಳು ಹಾದುಹೋಗಿ ಸದರಿ ಮಂಜ ನಾಯಕನು ತಕ್ಷಣ ಸತ್ತುಹೋದನು ತಲೆ ಕೈಕಾಲುಗಳೆಲ್ಲಾ ದೇಹದಿಂದ ಪ್ರತ್ಯೇಕವಾಗಿ ಹೋಗಿದ್ದವು

ಬಾಸೆಲ್ ಮಿಶ್ಯನ್ ನೇಯುವ ಕಾರ್ಖಾನೆಯಲ್ಲಿ ಬನಿಯನುಗಳನ್ನು ಕಳವುಮಾಡಿದ ದಾಸ. ಶಾಂತಪ್ಪನಿಗೆ ಟೌನ್ ಮೇಜಿಸ್ಟ್ರೇಟರು ೪ ತಿಂಗಳ ಕಠಿಣ ಸಜಾ ವಿಧಿಸಿದ್ದರು. ಈ ತೀರ್ಮಾನದ ಮೇಲೆ ಆಪಾದಿತನು ಅಪೀಲುಮಾಡಿಕೊಂಡಲ್ಲಿ ತಾ ೧೯ರಲ್ಲು ಕೆಳಗಿನ ತೀರ್ಮಾನವೇ ಅಪೀಲಿನಲ್ಲಿಯೂ ಕಾಯಂ ಆಯಿತು ಹೀಗೆ ಒಂದು ವರ್ಷದಿಂದೀಚೆಗೆ ಈ ನೇಯುವ ಕಾರ್ಖಾನೆಯಲ್ಲಿ ನಡೆದ ಎಲ್ಲಾ ಕಳವು, ದಗೆ ಮೊಕದ್ದಮೆಗಳ ತನಿಕೆಯು ಅಂದಿಗೆ ಅಂತ್ಯವಾದಂತಾಯಿತು

ಆದೂರಿಗೆ ವರ್ಗಾಯಿಸಲ್ಪಟ್ಟ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾ॥ ಬಿ. ರಾಮರಾಯರು ರಜೆಯ ಮೇಲೆ ಇರುವದರಿಂದ ರಾ॥ ವಜೀರ್‌ಖಾನ್‌ರವರಿಗೆ ಆದೂರಿಗೆ ವರ್ಗವಾಗಿಯದೆ.

ಪ್ರೊಸೆಸ್ ಸರ್ವರ ವೆಂಕ್ಟನ ಆಡನ್ನು ಕಳವುಮಾಡಿ ಕಾವೂರಿಗೆ ಕೊಂಡುಹೋಗಿ ಮಾರಿದ ತನಿಯನಿಗೆ ೧॥ ತಿಂಗಳ ಸಜಾ ವಿಧಿಸೋಣಾಗಿರುವದು. ಈ ಕಳವು ಮಾಲನ್ನು ಕೊಂಡುಕೊಂಡವರನ್ನೂ ವಿಚಾರಣೆಗೆ ಗುರಿ ಮಾಡುವದರಲ್ಲಿದ್ದಾರೆಂತ ತಿಳಿಯುತ್ತೇವೆ.

ತಿರುಚಿನಾಪಳ್ಳಿ ಕಲೆಕ್ಟರರಾದ ಮೆ॥ ಎ. ಎಲ್. ಪ್ರೈಟರ್ ಐ. ಸಿ ಎಸ್‌ರವರು ದಕ್ಷಿಣಕನ್ನಡಾ ಜಿಲ್ಲೆಗೂ ದಕ್ಷಿಣಕನ್ನಡಾ ಜಿಲ್ಲೆಯ ಕಲೆಕ್ಟರರಾದ ಮೆ. ಇ ಎಸ್ ಲ್ಯೂಡ್ ಐ ಸಿ. ಎಸ್‌ರವರಿಗೆ ತಿರುಚಿನಾಪಳ್ಳಿಗೂ ವರ್ಗವಾಗಿದೆ

ಪರ ಊರಿನ ನಾಲ್ಕು ಮಂದಿ ಪಟ್ಟಣದಲ್ಲೆಲ್ಲಾ ತಿರುಗಾಡಿ ಭವಿಷ್ಯವನ್ನು ಹೇಳುವೆವೆಂದು ಜನರನ್ನು ಮೋಸಗೊಳಿಸುತ್ತಿರುವರೆಂಬ ವಾರ್ತೆ ಇದೆ ಈ ನಾಲ್ಕು ಮಂದಿಯೂ ಪಂಜಾಬಿಗೆ ಸೇರಿದ ಅಮೃತಸಾರಿನವರಂತೆ ಪಟ್ಟಣಿಗರು ಈ ವಿಷಯ ಜಾಗರೂಕತೆಯಿಂದಿರಬೇಕೆಂದು ಸೂಚಿಸುವೆವು

ತಾ [illegible]ನೇ ದಿನ ಉರ್ವದಲ್ಲಿ ಜರಗಿದ ಮಾರಿಪೂಜೆಗೆ ಹೋಗುವ ಒಬ್ಬ ಉರ್ವದಲ್ಲಿರುವ ಕೃಷ್ಣಿ ಎಂಬ ಹೆಂಗಸು ತನ್ನ ಆರು ವರ್ಷದ ವೆಂಕಟ್ರಾಯ ಎಂಬ ಹುಡುಗನ ಕೊರಳಿಗೆ ಸುಮಾರು ೧೫೦ ರೂಪಾಯಿ ಕ್ರಯ ಬಾಳುವ ಬಂಗಾರ ಚಕ್ರಸರವನ್ನು ಹಾಕಿ ಒಳ ಹೋಗಿ ಹೊರಗೆ ಬರುವಷ್ಟರಲ್ಲಿ ಯಾರೋ ಆ ಹುಡುಗನ ಕೊರಳಿನಿಂದ ಸರವನ್ನು ಜಾರಿಸಿದರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಮೃತರಾಯರು ಅನುಮಾನದ ಮೇಲೆ ಕೊರಗನೆಂಬವನ ಮನೆ ಜಡ್ತಿಮಾಡಿದಲ್ಲಿ ಕಳವಾದ ಸರವು ಸಿಕ್ಕಿದ್ದರಿಂದ ಕೊರಗನನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ

ಕಣ್ಣಾನೂರತ್ತಕರು ಐಸ ಮತ್ತು ಬೀಬಿ ಎಂಬ ಇಬ್ಬರು ವೇಶ್ಯೆಯರು ಮ ರಾ. ಹಂಸಬ್ಯಾರಿ ಎಂಬವರ ನಾದಿನಿಯಾದ ೧೫ ವರ್ಷ ವಯಸ್ಸಿನ ಐಸ ಎಂಬ ಹುಡುಗಿಯನ್ನು ಕದ್ದುಕೊಂಡು ಮಂಗಳೂರಿಗೆ ಬಂದಿರುವರೆಂಬದಾಗಿ ತಿಳಿದುಬಂದದರಿಂದ ಪೋಲೀಸಿನವರು ತಲಾಷಿಯಿಂದ ಹುಡುಗಿಯ ಸಮೇತ ಇದ್ದ ಆ ಇಬ್ಬರು ಸೂಳೆಯರನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುವರು.

ಇದೇ ತಾ. ೧೭ರಲ್ಲು ಡಿಸ್ಟ್ರಿಕ್ಟ್‌ಬೋರ್ಡ್ ಸ್ಪೆಶ್ಯಲ್ ಮೀಟಿಂಗ್ ಕೂಡಿ ಎಂತು ಡಿಸ್ಟ್ರಿಕ್ಟ್‌ಬೋರ್ಡ್ ಇಂಜಿನಿಯರರಿಂದ ಕಳುಹಿಸಲ್ಪಟ್ಟ ಆಯಾ ಕಾಮಗಾರಿಗಳ ಅಂದಾಜು ಪಟ್ಟಿಗಳು ಮೆಂಬರರ ಸಮ್ಮತಿ ಬಗ್ಗೆ ಸಭೆಯ ಮುಂದೆ ಇಡೋಣಾಗಿರುವವು

ತಿರುಚಿನಾಪಳ್ಳಿ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರಾಗಿದ್ದ ಮೆ॥ ಎಚ್ ಒ ಡಿ ಹಾರ್ಡಿಂಜ ದೊರೆಗಳವರನ್ನು ತಿರುಚಿನಾಪಳ್ಳಿಯಲ್ಲಿ ಯಾರೋ ಕೊಲೆ ಮಾಡಿದ್ದರೆಂಬ ವಾರ್ತೆಯು ತಾ ೧೬ರಲ್ಲು ಇಲ್ಲಿಗೆ ಬಂದಿರುವದರಿಂದ ವಿಷಾದಪಡುತ್ತೇವೆ ಮೆ॥ ಹಾರ್ಡಿಂಜ ದೊರೆಗಳವರು ೭ ವರ್ಷಗಳ ಕಾಲ ನಮ್ಮ ಜಿಲ್ಲೆಯ ಸೆಶ್ಯನ್ಸ್ ಜಡ್ಜರಾಗಿದ್ದು ಜನರ ಮತ್ತು ವಕೀಲ ಸಮುದಾಯದ ಪ್ರೀತಿ ಮನ್ನಣೆಗೆ ಪಾತ್ರರಾಗಿದ್ದವರಾದ ಕಾರಣ ಇಲ್ಲಿಯ ವಕೀಲ ವರ್ಗದ ಅಪೇಕ್ಷೆ ಮೇರೆಗೆ ನಿನ್ನೆಯ ದಿನ ಇಲ್ಲಿಯ ಸೆಶ್ಯನ್ಸ್ ಕೋರ್ಟು, ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು ಮತ್ತು ಸಬ್ ಕೋರ್ಟುಗಳು ಇವರ ಮರಣದ ಶೋಕಾರ್ಥವಾಗಿ ಮುಚ್ಚಲ್ಪಟ್ಟವು

ವಿದ್ಯಾರ್ಥಿ ಭ್ರಾತೃಸಂಘದ ಪರವಾಗಿ ಗಣಪತಿ ಸೆಕೆಂಡರಿ ಶಾಲೆಯ ಸಭಾಸದನದಲ್ಲಿ ಇದೇ ತಾ. ೨೭ನೇ ಆದಿತ್ಯವಾರ ೫ ಗಂಟೆಗೆ ಮ॥ ರಾ॥ ಕೆ. ರಂಗರಾಯರವರು "ಪುದುಚೇರಿಯಲ್ಲಿರುವ ಡೂಪ್ಲೆಯವರ ಶಿಲಾ ಪ್ರತಿಮೆ" ಎಂಬ ವಿಷಯವನ್ನು ಕುರಿತು ಭಾಷಣಮಾಡುವರು.

ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳೆದವಾರ ೮ ಪ್ಲೇಗು ಮರಣಗಳಿದ್ದವು.

ಸಹಕಾರ

ಸರ್ಕ್ಯುಲರ್ ನಂಬ್ರ-೧೯.

...ರೀಶಿಯಸ್ ಕಬ್ಬಿನ ಬೀಜಗಳು.

ಈ ಮದರಾಸು ಸಂಸ್ಥಾನದಲ್ಲಿರುವ ಅನೇಕ [illegible]ಗಳಲ್ಲಿ ಮೆಂಬರರಿಗೆ ಬೇಕಾಗುವ ಸಾಗುವಳಿಯ ಬಿತ್ತುಮುಂತಾದುವುಗಳನ್ನು ಮೆಂಬರರು ಸಂಘಗಳ ಸಲುವಾಗಿ ದೊರಕಿಸಿಕೊಳ್ಳುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಪರೀಕ್ಷಾರ್ಥವಾಗಿ ಈ ಕ್ರಮವನ್ನು ಶುರುಮಾಡಬೇಕೆಂದು ಕೋರಿಕೆಯಿದೆ. ಇತ್ತಿತ್ತಲಾಗೆ ನಮ್ಮ ವರ್ಗದಾರರ ಪೈಕಿ ಕೆಲವರು ಮೊರೀಶಿಯಸ್ ಕಬ್ಬಿನ ಸಾಗುವಳಿಯನ್ನು ಶುರುಮಾಡಿದ್ದಾರೆ. ಆದುದರಿಂದ ನಮ್ಮ ಪರೀಕ್ಷಾರ್ಥವಾದ ಪ್ರಥಮ ಪ್ರಯತ್ನವನ್ನು ಕಬ್ಬಿನ ಬೀಜಗಳ ವಿಷಯದಲ್ಲಿ ನಡೆಯಿಸಬೇಕೆಂದಿದ್ದೇವೆ.

ಮೊರೀಶಿಯಸ್ ಕಬ್ಬು ಊರಿನ ಕಬ್ಬಿನಗಿಂತ ಮೇಲೆಂಬ ಬಗ್ಗೆ ಆ ಸಾಗುವಳಿಯನ್ನು ಕೈಕೊಂಡವರೆಲ್ಲರ ಮನಸ್ಸಿಗೆ ಸಮಾಧಾನವಾಗಿಯದೆ ಅದು ಊರಿನ ಕಬ್ಬಿಗಿಂತ ಹೆಚ್ಚು ಉದ್ದಕ್ಕೂ ಬೆಳೆಯುತ್ತದೆ, ಒಳ್ಳೇ ರಸವನ್ನು ಕೊಡುವ ಅಂಶವು ಕೂಡಾ ಆ ಕಬ್ಬಿನಲ್ಲಿ ಊರಿನ ಕಬ್ಬಿನಗಿಂತಲೂ ಹೆಚ್ಚಿದೆ, ರಸವು ಸಹಾ ಅದರಲ್ಲಿ ಊರಿನ ಕಬ್ಬಿನಗಿಂತಲೂ ಹೆಚ್ಚು ಸಿಕ್ಕುತ್ತದೆ ಇದಲ್ಲದೆ, ಆ ಕಬ್ಬಿನ ರಸದ ಸವಿಯು ಊರಿನ ಕಬ್ಬಿನ ರಸದ ಸವಿಗಿಂತಲೂ ಹೆಚ್ಚಾಗಿದ್ದು, ಅದರ ಬೆಲ್ಲವು ಊರಿನ ಬೆಲ್ಲಕ್ಕಿಂತಲೂ ಎಷ್ಟೋ ಪರಿಷ್ಕಾರವಾಗುತ್ತದೆ ಎಲ್ಲಾ ಗುಣಗಳಿಗಿಂತಲೂ ಮುಖ್ಯವಾಗಿರುವ ಇನ್ನೊಂದು ಲಕ್ಷಣವೂ ಅದಕ್ಕಿದೆ, ಊರಿನ ಕಬ್ಬನ್ನು ನರಿ ಮೊದಲಾದವುಗಳು ತಿನ್ನದಂತೆ ಎಷ್ಟು ನೋಡಿಕೊಳ್ಳುತ್ತಿರಬೇಕೋ ಅಷ್ಟು ಆ ಕಬ್ಬನ್ನು ಕಾಯಬೇಕೆಂತಿಲ್ಲ, ಏಕೆಂದರೆ, ಆ ಕಬ್ಬಿನ ಸಿಪ್ಪೆಯು ಊರಿನ ಕಬ್ಬಿಗಿಂತಲೂ ಗಟ್ಟಿಯಾದ ಕಾರಣ, ಅದು ಸ್ವಲ್ಪ ಬೆಳೆದ ಮೇಲೆ ಅದನ್ನು ನರಿಗಳು ಕಚ್ಚಲಾರವು, ಆದುದರಿಂದ ಸ್ವಲ್ಪ ಬೆಳೆಯುವ ವರೆಗೆ ಮಾತ್ರ ಅದನ್ನು ಜಾಗ್ರತೆಯಿಂದ ಕಾಪಾಡಿದರೆ ಮತ್ತೆ ಯಾವ ತರಧ ಜಾಗರೂಕತೆಯನ್ನೂ ಉಪಯೋಗಿಸಬೇಕೆಂಬದಿಲ್ಲ. ಈ ಎಲ್ಲಾ ಕಾರಣಗಳಿಂದ ಕಬ್ಬು ಸಾಗುವಳಿಗೆ ಕೈಹಾಕುವವರೆಲ್ಲರೂ ಕ್ರಮೇಣವಾಗಿ ಊರಿನ ಕಬ್ಬಿನ ಗೊಡವೆಯನ್ನೇ ಬಿಟ್ಟು ಮೊರೀಶಿಯಸ್ ಕಬ್ಬನ್ನೇ ರೂಢಿಗೆ ತರುತ್ತಿದ್ದಾರೆ.

ಈ ವರೇಗೆ ಹೊಸದಾಗಿ ಮೊರೀಶಿಯಸ್ ಕಬ್ಬಿನ ಸಾಗುವಳಿಯನ್ನು ಶುರುಮಾಡಬೇಕೆಂದಿದ್ದವರು ಅದರ ಬೀಜಗಳನ್ನು ತಳಿಪರಂಬಿನಲ್ಲಿರುವ ವ್ಯವಸಾಯಿಕ ಠಾಣೆಗೆ ಬರದು ತರಿಸಿಕೊಳ್ಳಬೇಕಿತ್ತು. ಈ ಕ್ರಮದಲ್ಲಿ ಸ್ವಲ್ಪ ಡೇರಿಯೂ ಆಗುತ್ತಿತ್ತು; ಹೆಚ್ಚಿನ ಖರ್ಚನ್ನೂ ಮಾಡಬೇಕಾಗಿತ್ತು ಈ ಸ್ಥಿತಿಯನ್ನು ಕೊಂಚಮಟ್ಟಿಗಾದರೂ ಪರಿಹರಿಸಬೇಕೆಂದು ಈ ಉಪ್ಪಿನಂಗಡಿ ತಾಲೂಕಿನಲ್ಲಿ ಕಬ್ಬಿನ ಸಾಗುವಳಿಯನ್ನು ಶುರುಮಾಡಿರುವ ಒಬ್ಬ ಗೃಹಸ್ಥರ ಕೂಡೆ ಏಲೇವಾರಿ ಮಾಡಿಯದೆ. ಆದುದರಿಂದ ಇನ್ನು ಈ ಜಿಲ್ಲೆಯಲ್ಲಿ ಯಾರಿಗಾದರೂ ಮೊರೀಶಿಯಸ್ ಕಬ್ಬಿನ ಬೀಜಗಳು ಬೇಕಾದಾಗ ಈ ಬೇಂಕಿಗೆ ಬರಕೊಂಡಲ್ಲಿ ಮೇಲೆ ಸೂಚಿಸಿದ ಗೃಹಸ್ಥರೊಡನೆ ಪತ್ರವ್ಯವಹಾರ ನಡೆಯಿಸಿ ಹೆಚ್ಚಿನ ಡೇರಿಯಿಲ್ಲದೆ ಬೀಜಗಳು ಸಿಕ್ಕುವ ಏರ್ಪಾಡು ಮಾಡಿಸಬಹುದು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್ } ಯಂ. ಅನಂತರಾವ್
ಪುತ್ತೂರು ತಾ.22—2—'16. ಕಾರ್ಯದರ್ಶಿ.

S. NAGAPPA NAYAK,
K. Appaya Shenoy & Co.

Cloth Merchants, Car Street, Mangalore.

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c. &c. of guaranteed colours and best patterns. Price very moderate.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ದಿವ್ಯಾಂಜನ. (Divyanjan).

ಸರ್ವ ತರಹದ ನೋವುಗಳ ಮೇಲೆ ರಾಮಬಾಣ ಔಷಧ.

ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ವಾಯು, ಅರ್ಧಾಂಗವಾಯು, ಗಜ್ಜಿ, ತುರಿಕಜ್ಜಿ, ಘಾಯ, ಸುಟ್ಟಘಾಯ, ಉರಿ, ಉಳುಕು, ಎಲುಬುಗಳ ನೋವು, ಕೈಕಾಲು ಬಾತುಬರುವುದು, ಇವೇ ಮೊದಲಾದವುಗಳ ಮೇಲೆ ದಿವ್ಯಔಷಧವಾಗಿರುತ್ತದೆ.

ಕ್ರಯ ಬಾಟ್ಲಿ 1ಕ್ಕೆ ರೂ. 0—8—0. ಡಜನ್ 1ಕ್ಕೆ ಕಮಿಶನ್ ಕಳೆದು ರೂ. 5—0—0. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ಡಬ್ಬಿ 1ಕ್ಕೆ ರೂ. 0—1—0. ಪೋಸ್ಟೇಜು ಮಾಫಿ.

ನಿಕ್ಕುತ ಸ್ಥಳ:—

ಬಿ. ಎನ್. ಹನುಮಂತಪ್ಪ ಮತ್ತು ಕಂಪೆನಿ, ಚಿಕ್ಕಮಂಗಳೂರು.

ಕೆ. ಬೋಗಯ್ಯ ಶೆಟ್ಟಿ, ದಾವಣಗೆರೆ.

ಅಥವಾ

Someshwar & Sons, ಸೋಮೇಶ್ವರ ಎಂಡ್ ಸನ್ಸ್,

Warden's Building, ವೊರ್ಡನ್ಸ್ ಬಿಲ್ಡಿಂಗ್,

FERGUSSON ROAD, BOMBAY. ಫರ್ಗುಸನ್ ರಸ್ತಾ, ಮುಂಬಯಿ.

ಸೂಚನೆ:—ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು ಇಂಗ್ಲಿಷಿನಿಂದಲೇ ಬರೆಯತಕ್ಕದ್ದು. ಕನ್ನಡದಿಂದ ಬರೆದರೆ ಕಾಗದಗಳು ಸರಿಯಾಗಿ ತಲಪುವದಿಲ್ಲ. ಔಷಧ ಬೇಕಾದವರು ವಿ. ಪಿ. ಮುಖಾಂತರ ಪಡಕೊಳ್ಳಬಹುದು. ಜಾಸ್ತಿಯಾಗಿ ಇದನ್ನು ತೆಗೆದುಕೊಂಡವರಿಗೆ ಅತಿಶಯ ಕಮಿಶನ್ ಕೊಡಲಾದೀತು. ಏಜಂಟರು ಬೇಕಾಗಿವೆ.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚೆಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸ

WANTED

Two competent Salesmen with knowledge of accounts to take charge of new offices shortly to be opened in Mangalore and Calicut. Liberal salary and commission on the turnover. Security in cash or Government paper of Rs. 1,000/— required.

Apply stating terms, and forwarding copies of testimonials and references to:—

K. D. C.,
C/O SWADESHABHIMANI,
Mangalore.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಓ. ಪಿ. ನಂಬ್ರ $\frac{63}{1915}$

ಮೊರಾಸ್ಯಾಬಾ ಕೂಡಾ 8 ಜನರು—ಅರ್ಜಿದಾರರು.

ಕುಂದಾಪುರ ತಾಲೂಕು ಕಾವರಾಡಿ ಗ್ರಾಮದ ಕಂಡ್ಲೂರಲ್ಲಿ ಇರುತ್ತಿದ್ದ ಖಾಜಿ ಬಾಪುಸ್ಯಾಬನು 7—8—1915ಕ್ಕೆ ಮೃತಪಟ್ಟಿರುವದರಿಂದ ಆ ಮೃತನ ವಾರಿಸ್ಸಾರರಾದ ಅರ್ಜಿದಾರ ಮೊರಾಸ್ಯಾಬಾ ವಗೈರೆ 8 ಜನರು ಸದರಿ ಮೃತನಿಗೆ ಹೊರಗಿನಿಂದ ಬರತಕ್ಕ ಸಾಲಗಳು ವಸೂಲುಮಾಡಲಿಕ್ಕೆ ತಮ್ಮ ಪೈಕಿ 1ನೆ ಅರ್ಜಿದಾರನಾದ ಮೃತನ ಮಗ ಮೊರಾಸ್ಯಾಬನ ಹೆಸರಿನಲ್ಲಿ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿ ಮಾಡಿರುವದರಿಂದ ಈ ಕುರಿತು ಯಾರದಾದರೂ ಆಕ್ಷೇಪ ಇದ್ದರೆ ಜಾಹೀರು ಮಾಡಬಹುದೆಂತ ತಿಳಿಸಿರುತ್ತದೆ. ಸದರಿ ಅರ್ಜಿ ತನಿಖೆಯು ಬರುವ ಮಾರ್ಚಿ ತಾರೀಕು 1ಕ್ಕೆ ಇಟ್ಟಿರುತ್ತದೆ.

ತಾ. 15—2—1916.

G. Manjunathaya,
Pleader for Petitioner.

ಪಿ. ಕೆ. ವೈದ್ಯರ್ ಇವರ ಸ್ವಾನುಭವಸಿದ್ಧವಾದ ಔಷಧಗಳು.

ಸುಕುಮಾರ ಘೃತ. ಗರ್ಭ ಪ್ರತಿಬಂಧಕಗಳಾದ ಸ್ತ್ರೀಯರ ಸರ್ವ ರೋಗಗಳನ್ನೂ ಸಮೂಲವಾಗಿ ಛೇದಿಸಿ ಅಕಾಲ ಪ್ರಸವ ಮುಂತಾದ ದೋಷಗಳನ್ನೂ ಖಂಡಿಸಿ ಗರ್ಭಕ್ಕೆ ಪುಷ್ಟಿಯನ್ನೀಯುವದಲ್ಲದೆ, ಪುರುಷರಿಗೆ ವಾಯು, ಅಂಡ್ರವಾಯು, ಕ್ಷಯ, ಧಾತುಕ್ಷಯವೇ ಮುಂತಾದವುಗಳನ್ನು ಅಲ್ಪಕಾಲದಲ್ಲಿಯೇ ಪ್ರಶಮಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವುದು. ಕ್ರಯ ೨೦ ತೊಲೆಗೆ ರೂಪಾಯಿ 2—0—0.

ಸರ್ವಜನ ಹಿತಕಾರಿಣಿ ಲೇಹ್ಯ. ಕ್ಷಯ, ಅಸ್ಥಿಜ್ವರ, ಉರಿಮೂತ್ರ, ಮೂತ್ರರೋಗ, ಪಿತ್ತಮೂಲವಾದ ಸಕಲ ರೋಗಗಳಿಗೆ ಅಮೃತ ಕಲ್ಪವಾಗಿರುವುದು. ಕ್ಷೀಣದೇಹಿಗಳು ಸೇವಿಸಿದ್ದಲ್ಲಿ ತಿಂಗಳು ಒಂದರ ಈ ರಾತ್ರಿನಂತೆ ತೂಕದಲ್ಲಿ ಹೆಚ್ಚಲಿಕ್ಕೆ ಏನೇನೂ ಸಂಶಯವಿಲ್ಲ. ದೇಹದ ತೇಜಾರೋಗ್ಯಗಳನ್ನು ವೃದ್ಧಿಸಿ ರಕ್ತಶುದ್ಧಿಯನ್ನು ಗೈಯುವ ಪರಮೌಷಧ. ತೊಲೆ ೨೪ರ ಸೇರು ೧ಕ್ಕೆ ರೂಪಾಯಿ 1—8—0.

ಅಗಸ್ತ್ಯಕಲ್ಪವೆಂಬ ರಸಾಯನ. ಈ ರಸಾಯನ ಸೇವನೆಯಿಂದ ಧಾತುಬಲ, ಅಗ್ನಿಬಲ ವರ್ಧನೆಯಾಗುವದಲ್ಲದೆ ನಿಸ್ಸತ್ವರನ್ನು ಭೀಮಸತ್ವರನ್ನಾಗಿಯೂ ಅಕಾಲ ವೃದ್ಧರನ್ನು ಶುದ್ಧ ಯುವಕರನ್ನಾಗಿಯೂ ನೇರ್ಪಡಿಸುವ ದಿವ್ಯ ಮೂಲಿಕೆಗಳನ್ನೊಳಕೊಂಡಿರುವುದು. ಅನುಭವವೇ ಪ್ರತ್ಯಕ್ಷ ಪ್ರಮಾಣ. ತೊಲೆ ೨೪ರ ಸೇರು ೧ರ ಕ್ರಯ ರೂ. 1—0—0.

ಕ್ಷಯಸಂಹಾರಿ ತೈಲ. ಉಬ್ಬಸ, ಕೆಮ್ಮು, ಕಿವುಡತನ, ಕರ್ಣಸ್ರಾವ, ಮುಂತಾದದಕ್ಕೆ ಅತ್ಯುತ್ತಮ. ಬಾಟ್ಲಿ ೧ರ ಕ್ರಯ 7 ಆಣೆ.

ರಕ್ತಪಿತ್ತ ಕುಠಾರ. ಬಿಳಿ, ಕೆಂಪು ಅಥವಾ ಮಿಶ್ರ ಇರುವ ಪ್ರದರದ ಮೇಲೆ ಪ್ರಯೋಗಿಸಬಹುದು. ಮೂಗಿನಲ್ಲಿ, ಬಾಯಿಯಲ್ಲಿ, ಕಿವಿಯಲ್ಲಿ ಮಲದಲ್ಲಿ ಸಹಾ ಕಾಣಬಹುದಾದ ರಕ್ತಪಿತ್ತ ದೋಷಗಳನ್ನು ಪರಿಹರಿಸುತ್ತದೆ. ೨೦ ಮಾತ್ರೆಗಳುಳ್ಳ ಬಾಟ್ಲಿ ೧ರ ಕ್ರಯ ರೂ. 2—8—0

ಇವಲ್ಲದೆ ಇನ್ನೂ ಅನೇಕ ಔಷಧಿಗಳು ನಮ್ಮಲ್ಲಿ ತಯ್ಯಾರಿವೆ. ಅನುಪಾನಪತ್ರಗಳೂ ಸೇವನಾಕ್ರಮಗಳೂ ಔಷಧದ ಸಂಗಡಲೇ ಕಳುಹಿಸೋಣಾಗುವುದು.

Address:— ವಿಳಾಸ:—

MANAGER, ಮೆನೇಜರ್,
The Universal Medical Hall, ವಿಶ್ವವೈದ್ಯಾಲಯ,
MANJESHWAR. ಮಂಜೇಶ್ವರ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0 ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ

ಕಲ್ಯಾಣ! ಕಲ್ಯಾಣ!! ಕಲ್ಯಾಣ!!!

ಬಂಧುಗಳೇ! ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವಸಿದ್ಧೌಷಧಗಳು ಈ ಕೆಳಗಿನ ವಿಳಾಸದಾರರಲ್ಲಿ ದೊರೆಯುವವು.
ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು

ವಿಳಾಸ — *Address.* —

ಎಸ್ ಪಿ. ರಾಜಾ ಮತ್ತು ಕಂಪೆನಿ, **S. P RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ ಕ POST POLALY, S C.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಮುಫತ್! ಕ್ಯಾಲೆಂಡರ್. ಮುಫತ್!

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ನ ಫಕ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ — ಇದರ ಬೆಲೆ 10 ಆಣೆ

ವಾಲ್ಮೀಕಿಯ ಜಯ ಆಣೆ 6, ಮೈತ್ರೇಯಿ ಆಣೆ 5, ಸುಧರ್ಮ ಪ್ರಭಾವ ನಾಟಕ ಆಣೆ 8 ಸೂಕ್ತಿಮಾಲೆ, 1 — 2 ಭಾಗಗಳು ಆಣೆ 6 ಭಕ್ತಿಯೋಗ ಆಣೆ 8 ಆರ್ಯ ಮತಸಾರ ಆಣೆ 3, ಭರತ ಭೂಮಿಯ ಮಹಿಳೆಗಳು ಆಣೆ 2, ರಾಜಭಕ್ತಿ ಆಣೆ 6, ದೇಶಭಕ್ತಿ ಆಣೆ 10 ಗುರುಸ್ತುತಿ ಸುಮಾಂಜಲಿ ಆಣೆ 2

[ಈ ಪೈಕಿ ರೂ 2—0—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ]

†ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1 — 4	ಪ್ರಬಂಧ ಮುಕ್ತಾವಳಿ	0 — 12
ಹಾರ್ಮೋನಿಯಂ ಸ್ವಯಂ ಬೋಧಿನಿ	0 — 4	ಕನ್ನಡ ಅರಿಥಮೆಟಿಕ್ ಸ್ಕೇಲ್	2 — 2
ಕಾಳಿದಾಸಗೀತ ಮುಕ್ತಾ ಕಲಾಪ ಸ್ವರಯುಕ್ತ	0 — 9	ಮುದ್ರಾಮಂಜೂಷ	1 — 10
ಕಲ್ಯಾಣ ಗೀತಾವಳಿ	0 — 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3 — 2
ಅಭಿನವ ಸಂಗೀತ ಪಾರಿಜಾತ	0 — 4	ಅಧ್ಯಾತ್ಮವಿಚಾರ (ಉತ್ತರ ಸಹಿತ)	2 — 0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1 — 8	ಪ್ರಿಂರೋಜಾವಿಜಯಂ	1 — 9
ಸ್ತ್ರೀಧರ್ಮನೀತಿ	0 — 9		

†ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್)		0 — 12	ಮಾಧವೀ ಕಂಕಣ (ಬಂಗಾಳಿ ನಾವೆಲ್)		1 — 0
ಪ್ರತಿಜ್ಞೆ	,,	0 — 12	ಶಕ್ತಿ	,,	0 — 12
ಉನ್ನತಿ	,,	0 — 3	ಶೋಭನೆ	,,	0 — 12
ವಿಷ ವಿವಾಹ	,,	0 — 4	ಚಂದ್ರಪ್ರಭಾ ಕಾದಂಬರಿ		0 — 14
ಸೌದಾಮಿನಿ	,,	0 — 8	ಸುಭದ್ರೆ	,,	0 — 5
ಸರಳಾ	,,	0 — 2	ಕಲಿಯುಗ	,,	0 — 5
ಸುಷಮಾ	,,	0 — 2	ಕಲಾನಾಥ	,,	0 — 8
ಅನಾಥ ಪ್ರೇತ	,,	0 — 1	ನನ್ನ ಆಚಾರ್ಯ (My Master)		0 — 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳಿಗೆ ಈ ಕ್ಯಾಲೆಂಡರ್ ಬಹುಮಾನ

ಕಾದಂಬರಿಗಳು.

ನಯನತಾರ-ಶ್ರೀ ತಿರುಮಲಮ್ಮನವರಿಂದ		0 — 6	ದೇವಿ ಚೌಧುರಾಣಿ ಬಿ. ವೆಂಕಟಾಚಾರ್		1 — 4
ಸತೀಹಿತೈಷಿಣಿ (ಸಥಾ ಭಾಗ 1)	,,	0 — 8	ಜರಿಮಳ	,,	0 — 10
ವಿರಾಗಿಣಿ (ಡಿಟೊ 2)	,,	1 — 0	ಸಾಧನೆ	,,	0 — 8
ಪುಷ್ಪಲ್ಲತಾ (ಚರಿತೆ)	,,	0 — 14	ಚಿತ್ರವಿಚಿತ್ರಾವಳಿ ಭಾಗ I, II ಸೇರಿ		1 — 0
ಪತ್ನಿ ಕನ್ಯಾ (ವಿಂಥಾ)	,,	1 — 8	ಸೀಕರಿ		— 0

(ಇನ್ನಾಡಿ ಇತರ ಎಲ್ಲಾ ಕಾದಂಬರಿಗಳು.)

ಚಂದಾ ಕಡಮೆ! ನೋಡಿರಿ!! ಅಂದ ಹೆಚ್ಚು!!!

"ಕನ್ನಡ ಕೋಗಿಲೆ"

ವಾಙ್ಮಯ, ಧರ್ಮ, ಸಮಾಜ, ಶಾಸ್ತ್ರಾದಿ ಸದ್ವಿಷಯಗಳನ್ನೊಳಕೊಳ್ಳುವ ಈ ಮಾಸಪತ್ರಿಕೆಯು ಬರುವ ವಸಂತದ ಆದಿಯಿಂದ ಪ್ರಕಟಿತವಾಗುವುದು. ನಮ್ಮ ಚಾತುರ್ಯವನ್ನು ನಾವೇ ಪ್ರಕಟಿಸಿಕೊಳ್ಳುವುದು ಕರ್ತವ್ಯವಲ್ಲವಾದ ಕಾರಣ ನಿಜಸ್ಥಿತಿ ಮಾತ್ರ ಸೂಚಿಸೋಣಾಗಿದೆ. ಪ್ರಥಮ ಸಂಚಿಕೆಯ ನಮ್ಮ ಕೋಗಿಲೆಯ ಸುಸ್ವರವೇ ವಾಚಕರನ್ನ ನೋಡಿ ಕಿವಿದೆರೆಯುವಂತೆ ಮಾಡದಿರದು. ಬಿಡಿ ಪ್ರತಿ 1ಕ್ಕೆ 0-2-6.

ಚಂದಾ —

ಪೋಷಕರು ರೂ 4—0—0, ಪ್ರೋತ್ಸಾಹಕರು ರೂ. 1—8—0

ಅಂಚೆ ವೆಚ್ಚ ಬೇರೆ.

ವಿಳಾಸ —

ವಿದ್ಯಾರ್ಥಿ ಭವನದಲ್ಲಿರುವ ಪಿ. ಎಮ್ ಭಟ್ಟರು ನೋಡಿ ಕನ್ನಡ ಕೋಗಿಲೆ ಸಂಪಾದಕರಿಗೆ ತಪ್ಪಿಸುವದು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧ ಕಂಠೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ, ಇದು ಸ್ಪರ್ಶೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ತಮಿಸುತ್ತದೆ ತೊಲೆ 1ಕ್ಕೆ ರೂ 1

೩. ಅಶೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಪಡಿಸಿ ಪುತ್ರವತಿಯಾಗಿ ಮಾಡುತ್ತದೆ, ಬಾಟ್ಲಿ 1ಕ್ಕೆ ರೂ. 1—4—0

೪ ಗರ್ಭ ಪುಷ್ಟಿಕರಣ ಇದು ಸ್ತ್ರೀಯರ ಎಲ್ಲಾ ಬಸಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ. 1.

೫ ಮಧುಮಾಧವಿ ಪಿಲ್ಸ್ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2

೬. ಬಾಲಶಂಕರಿ ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರದಗ್ಧ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭ ದರ್ಬಾರ್ ಬ್ಯೂಟಿ ವೆಸ್ಲಿನ್ ಇದರ ಉಪಯೋಗದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಿಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0

೮. ಅಮೃತಸಾರ್. ಇದು ವಾಯು-ದುಮ್ಮಾಸ್ ಎಂಬುವದಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1.

N. B.— ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಔಷಧಗಳು ದೊರೆಯುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮಣಿಪಾಲ್.

ಕನ್ನಡ ಗ್ರಂಥಗಳು.

	ರೂ.	ಆ.		ರೂ.	ಆ.
ದ್ವಾದಶಸ್ಕಂದ ಭಾಗವತ	4	0	ತೊರವೆರಾಮಾಯಣ ಅವ್ವಲ್	1	8
ದಶಮಸ್ಕಂದ ಭಾಗವತ	1	8	ದುಯ್ಯಂ.	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ಪಡ್ಪರ್ವ ಭಾರತ	2	0	ಜೈಮುನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮುನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ, ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಿಗಳು ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ವೇದಮಂತ್ರಗಳಿಗೆ ಸ್ವರ ಹಾಕಿ, ದಪ್ಪ ಕಾಗದದಲ್ಲು ಕನ್ನಡ ಅಕ್ಷರದಿಂದ ಅಂದವಾಗಿ ಮುದ್ರಿಸಿದ

ಆಹ್ನಿಕಮಂಜರೀ

ಎಂಬ ಋಗ್ವೇದಿಯ ನಿತ್ಯಕರ್ಮ ಪದ್ಧತಿ ಪುಸ್ತಕ ೧ಕ್ಕೆ ರೂ. 1. ಈ ಪತ್ರಿಕೆಯ ಗ್ರಾಹಕರಿಗೆ ಮಾತ್ರ ಆಣೆ 12. ಪೋಸ್ಟು ಖರ್ಚು ಬೇರೆ.

ಸ್ವಲ್ಪವೇ ಇದೆ! ಬೇಗ ಬರೆಯಿರಿ!!

ವಿಳಾಸ:— ಎಚ್. ವಿ. ಕೃಷ್ಣಭಟ್ಟ,
ವೇದಪಾಠಶಾಲಾ, ತೀರ್ಥಮುತ್ತೂರು, ತೀರ್ಥಹಳ್ಳಿ ತಾಲೂಕು.

ಕುಟುಂಬ ಸಂಜೀವಿನೀ.

ಛಳಿಕಾಲದಲ್ಲಿ ತಲೆದೋರುವ ಶೀತ, ಕೆಮ್ಮು, ನೆಗಡಿ, ಶೀತಭೇದಿ, ವಾತರೋಗಗಳಿಗೆ ಯೂಕಲಿಪ್ಟಸ್ ತೈಲವನ್ನು ಬಿಟ್ಟರೆ ಬೇರೆ ಚಿಕಿತ್ಸೆ ಇಲ್ಲ. ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ, ಮೈಯಲ್ಲಿ ನೀರು, ಉಷ್ಣಭೇದಿ, ಹೆಂಗಸರ ಕಠಿಣ ಹೊಟ್ಟೆನೋವು, ತಲೆಸಿಡಿತ, ದುರ್ವ್ಯಾಪ್ತಿಯಿಂದ ಉಂಟಾಗುವ ಸಕಲ ರೋಗಗಳಿಗೆ ಯೂಕಲಿಪ್ಟಸ್ ತೈಲವು ಸಿದ್ಧೌಷಧಿ ಎಂಬದಾಗಿ ಸೂಚಿಸುವ ಅನುಭವಸಿದ್ಧವಾದ ಅನೇಕ ಪತ್ರಗಳು ಬಂದಿರುತ್ತವೆ. ಸಂಜೀವನದಂತಿರುವ ಈ ತೈಲವು ಪ್ರತೀ ಮನೆಯಲ್ಲಿಯೂ ಇರುವದು ಅಗತ್ಯವೆಂದು ಬೇರೆ ಹೇಳಬೇಕೇ?

ಔನ್ಸ್ ಸೀಸೆ 1ಕ್ಕೆ 5 ಆಣೆ. ವಿ. ಪಿ. ಚಾರ್ಜು ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—10—0.

☞ ಕಮ್ಮಿ ದರದ ಠಕ್ಕು ಯೂಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯೂಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ದಿ ಇಕ್ಲಿಪ್ಸ್ ಬಾಮ್.

ರಾ| ವೈ. ಕೊರಗಪ್ಪ ಮುಂಬಾಯಿ—ನಾನು ತಮ್ಮಿಂದ ನಮೂನೆಗಾಗಿ ತರಿಸಿದ ಇಕ್ಲಿಪ್ಸ್ ಬಾಮನ್ನು ಮೊಳೆ ತಾಗಿ ಕೊಳೆಯುತ್ತಿದ್ದ ನನ್ನ ಸ್ನೇಹಿತರೊಬ್ಬರ ಕಾಲು ಹುಣ್ಣಿಗೆ ಹಚ್ಚಿದಲ್ಲಿ ಅದು ಮೂರೇ ದಿನಗಳಲ್ಲಿ ಗುಣವಾಗಿರುತ್ತದೆ. ವಾತ, ತಲೆನೋವು, ವಾಯು, ಉಳುಕು, ಸೊಂಟದ ನೋವುಗಳಿಗೂ ಇಕ್ಲಿಪ್ಸ್ ಬಾಮ್ ಅತಿ ಉಪಯೋಗಕರವಾಗಿದೆ. ದಯಮಾಡಿ 3 ಕರಡಿಗೆಗಳನ್ನು ವಿ. ಪಿ. ಮೂಲಕ ಕಳುಹಿಸಿರಿ. ಕರಡಿಗೆ 1ರ ಕ್ರಯ 8 ಆಣೆ. ಡಜನ್ ಕರಡಿಗೆಗಳ ಕ್ರಯ ರೂ. 4—12—0. ವಿ. ಪಿ. ಬೇರೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, [illegible]
ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಶ್ರೀ ಮಾಂಗಿರೀಶ ಬಾಮ್

ತಲೆನೋವು, ಸೊಂಟನೋವು, ಎಲ್ಲಾ ಫುಪ್ಪುಸ ರೋಗಗಳಿಗೂ, ಉಳುಕು ಮುಂತಾದವುಗಳಿಗೂ ತಿಕ್ಕುವುದರಿಂದ ಶೀಘ್ರವಾಗಿ ಗುಣಕಾಣುವುದು. ಸ್ಟ್ರಾಂಗ್ ಬಾಯಿಯ ಸೀಸೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ಸೀಸೆಗಳು ಹೆಚ್ಚಿಗೆ. ಸೆಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—18—0. ವಿ. ಪಿ. ಮಾಫಿ.

ವಿಸ್ಫೋಟಕ ಮುಕ್ತಿ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟ್ಲೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಬೇನೆಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೆಟ್ಟಿ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು.

ಸ್ವರಸುಧಿ—ಕೆಮ್ಮು, ಗಂಟ್ಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೆಟ್ಟಿ 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ.

ಕಾರ್ಬೊಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುತ, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ. 0—2—0.

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ನಿರ್ಮೂಲವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ 0—4—0. ಒಂದು ಡಜನ್ ಡಬ್ಬಿಗಳಿಗೆ ರೂ. 2—8—0 ವಿ. ಪಿ. ಬೇರೆ.

M. D. R. & Sons.
Srimangireesh Aushadalaya,
UDIPI S. C.

ಮೋಸಹೋಗಬೇಡಿ! ಮೋಸಹೋಗಬೇಡಿ!!

ನಮ್ಮ ಕಂಪೆನಿಯು ಕಳೆದ 4 ವರುಷಗಳಿಂದಲೂ ಹೆಸರುವಾಸಿಯನ್ನು ಪಡೆದಿರುವುದು. ಮತ್ತು ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ಹೈದರಾಬಾದ್, ರಂಗೂನ್, ಬರ್ಮಾ, ಸಿಲೋನ್, ಪೆನ್ನಾಂಗ್, ಮುಂತಾದ ದೇಶಗಳಿಂದ ಪ್ರತಿದಿನವೂ ಆರ್ಡರ್ಗಳು ಬರುತ್ತಿರುವವು. ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನರಿಗೆ ಮೋಸಪಡಿಸುತ್ತಿರುವರು. ಆದ್ದರಿಂದ ನಮ್ಮ ಜಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5, ಅವೆನ್ಯೂರೋಡ್, ಬೆಂಗಳೂರು ಸಿಟಿ, ಎಂದೂ ಮತ್ತು ನಿಮ್ಮ ಕಣ್ಣಿನ ಎದುರಿನಲ್ಲಿ ಕಾಣುತ್ತಿರುವ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಆಗಿರುವ ಟ್ರೇಡ್-ಮಾರ್ಕ್ ಇರುವುದನ್ನು ನೋಡಿ ತೆಗೆದುಕೊಳ್ಳಿರಿ. ಹಾಗೆ ನೋಡಿ ತೆಗೆದುಕೊಳ್ಳದೆ ಹೋದರೆ ಮೋಸಹೋಗುವಿರಿ!!!

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ ೧ಕ್ಕೆ ರೂ. 2—0—0 ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0 ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಕನ್ನಡ ಕಥೆ ಪುಸ್ತಕಗಳು.

ಮುದ್ರಾಮಂಜೂಷ	1	12	0	ನಿರ್ಮಲೆ	0	12	0
ಅರೇಬಿಯನ್ ನೈಟ್ಸ್	2	4	0	ಸಚಿತ್ರ ಭಟ್ಟಿ ವಿಕ್ರಮಾದಿತ್ಯ			
ರಮಾಮಾಧವ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂಜರಿ	1	4	0
ಕೃಷ್ಣಾಕುಮಾರಿ	0	10	0	ಪತಿವ್ರತಾ ಮಹಾತ್ಮೆ	0	6	0
ಪರಿಮಳ	0	12	0	ಹರಿಶ್ಚಂದ್ರನ ಕಥೆ.	0	4	0
ಮಹಾರಾಣಿ ಗೃಹಕೇಲಿ	0	3	0	ನಳದಮಯಂತಿಯ ಕಥೆ	0	6	0
ದುರ್ಗಾದಾಸ	0	12	0	ಶ್ರೀ ಕೃಷ್ಣಬೋಧಾಮೃತ.	0	8	0
ಚಂಚಲ ಕುಮಾರಿ	0	6	0	ಹಾಸ್ಯಸುಂದರಿ	0	8	0
ಪ್ರಬಂಧ ಮುಕ್ತಾವಳಿ	0	12	0	ಸೋಮಸುಂದರ	0	10	0
ಚಂದ್ರಮತಿ	0	6	0	ಮೂಷಕಾಸುರ ವಿಜಯ.	0	1	6
ದಯಾಮತಿ	0	2	0	ಹಾಸ್ಯ ಸಂಜೀವಿನಿ.	0	4	0
ಕಳಾವತಿ	0	2	0	ನಿರುಪಮಾ	0	12	0
ಸಂಗೀತ ಸಮಯಸಾರ	1	4	0	ಭಾನುಮತಿ.	0	2	0
ಬಾಲಕಾಗೀತ ವ್ಯಾಕ್ಯಾಕಲಾಪ	0	10	0	ಸಂತಾಪಕ.	0	4	0
ವಿಷವೃಕ್ಷ	1	8	0	ವಸವತಿ	0	2	0
ದುರ್ಗೇಶನಂದಿನಿ	1	4	0	ಪದ್ಮಿನಿ	0	2	0
ಸ್ತ್ರೀಮಲೆಯಾಳ	0	9	0	ತಾರಾಸುಂದರಿ	0	8	0
ಬೇಕ್ಸೈನಾರಾಯಣರಾವ್	0	2	0	ಅನಂಗಸುಂದರಿ.	0	8	0
ಕುಮುದಿನಿ	1	6	0	ಸತ್ಯಸಂಜೀವಿನಿ	0	6	0
ಸಾಧ್ವಿಗುಣಮಂಜರಿ	1	5	0	ವರಾಬಧಿರ ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ	0	4	0	ಅಸಹಾಯ ಶೂರಪ್ರಹಸನ.	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	2	0	0	ಚಂದ್ರಕಳಾ	0	9	0
ರೋಹಿಣಿ (ಸಾರಸ್ವತಮಂಡಳ)	1	0	0	ಸತೀಪ್ರೋತ್ಸಾಹ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿತ್ನ, ದಶಾಂಗ, ಗಂಧದಬಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ, ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ: 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರುಳುಕಣ್ಣು, ತಾಪ ಮುಂತಾದವು ಗುಣ

ಕ್ರಯ: ರೂ. 0—12—0.

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ, ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ: 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 1ಂ ಕ್ರಯ: 1—2—0.

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕಾಗದ ಬರೆದು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ. ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ತಾಂಬೂಲವಿಹಾರವು:—ತಾಂಬೂಲವು ಉಪಯೋಗಿಸುವವರಿಗೆ ಅದು ಮುಖ್ಯವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸುವಾಸನೆ ಅಡಿಕೆ ಹುಡಿ ಡಬ್ಬಾ 1ಕ್ಕೆ 4 ಆಣೆ ವಿ ಪಿ 1ರಿಂದ 12 ಡಬ್ಬಿಗಳವರಿಗು 5 ಆಣೆಗಳು ಪ್ರತ್ಯೇಕವು.

ಸೋಡಾವಾಟರ್ ಪವುಡರ್:—ಈ ಚೂರ್ಣದಲ್ಲಿ ಸ್ವಲ್ಪತೆಗದು ತಣ್ಣೀರಿನಲ್ಲಿ ಮಿಶ್ರಯಮಾಡಿದರೆ ಅದು ಸ್ವಯವಾದ ಸೋಡಾವಾಟರ್ ಆಗುತ್ತದೆ. ಒಂದು ಸೀಸೆ ಚೂರ್ಣವು 8 ಸೀಸೆ ಸೋಡಾವಾಟರ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು ವಿ. ಪಿ. 1ರಿಂದ 4 ಸೀಸೆಗಳವರಿಗೂ 5 ಆಣೆಗಳು ಪ್ರತ್ಯೇಕವು.

ಲಿಮನೇಡ್ ಪವುಡರ್:—ಈ ಚೂರ್ಣದಲ್ಲಿ ಸ್ವಲ್ಪ ತೆಗದು ತಣ್ಣೀರಿನಲ್ಲಿ ಮಿಶ್ರಯ ಮಾಡಿದರೆ ಅದು ರುಚಿಕರವಾದ ಲಿಮನೆಡ್ ಆಗುತ್ತದೆ. ಒಂದು ಸೀಸೆಯಷ್ಟರುವ ಚೂರ್ಣವು ಸುಮಾರು 8 ದೊಡ್ಡ ಸೀಸೆಗಳ ಲಿಮೆನೆಡ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು ವಿ. ಪಿ. 1ರಿಂದ 4 ಸೀಸೆಗಳವರಿಗು 5 ಆಣೆಗಳು ಪ್ರತ್ಯೇಕವು.

ಪನ್ನೀರು ಗುಲಾಬಿ:—ಅರ್ಧ ಔನ್ಸ್ ಚಿಕ್ಕ ಸೀಸೆಯಲ್ಲಿ ಇದೆ. ಅದರಲ್ಲಿರುವ (ಗುಲಾಬು) ಪನ್ನೀರನ್ನು 3 ದೊಡ್ಡ ಸೀಸೆ ನೀರಿನಲ್ಲಿ ಸೇರಿಸಿದರೆ ಅವ್ವಲ್ ದರ್ಜೆ ಗುಲಾಬಿ ಆಗುತ್ತದೆ. ಸೀಸೆ 1ಕ್ಕೆ 8 ಆಣೆ ವಿ. ಪಿ. 1 ಸೀಸೆಯಿಂದ 8 ಸೀಸೆವರಿಗೂ 5 ಆಣೆಗಳು.

ಕಸ್ತೂರಿ ಮಿಸ್ರವಾದ ಲವಂಡರ್ ವಾಟರ್:—ಇದು ನಮ್ಮ ಔಷಧಶಾಲೆಯಲ್ಲಿ ತಯಾರಿಸುವ ಅತಿ ಸುವಾಸನೆಯಾದ ವಸ್ತುವು. ವಿಲಾಯತಿಯಿಂದ ತರಿಸಿ ಮಾರುವದಲ್ಲ. ವಸ್ತ್ರಗಳಿಗೆ ಇದನ್ನು ಉಪಯೋಗಿಸಿದರ ಅತಿ ಸುಖವನ್ನು ಕೊಡುವದು. ಇದನ್ನು 4 ತೊಟ್ಟುಗಳು ಪುಸ್ತಕಗಳಿಗೆ ಹಾಕಿದರೆ ಅಂಗಡಿಗಳಲ್ಲಿ ಮಾರುವ ಲವಂಡರ್ ವಾಟರನ್ನು 20 ತೊಟ್ಟು ಬಿಟ್ಟರೆ ಎಷ್ಟು ವಾಸನೆ ಯಾಗುವದೊ ಅದಕ್ಕಿಂತಲು ಹೆಚ್ಚು ಸುವಾಸನೆಯನ್ನು ನಮ್ಮ ಕಸ್ತೂರಿ ಲವಂಡರ್ ವಾಟರ್ ಮನೋರಮ್ಯವಾದ ವಾಸನೆಯನ್ನು ಕೊಡುವದು. ಉಪಯೋಗಿಸಿದವರ ಸುತ್ತಲು ಬಹಳ ಹೊತ್ತು ರಮ್ಯವಾದ ವಾಸನೆಯನ್ನು ಬೀಸುವಂತೆ ಮಾಡುವದು. ಅರ್ಧ ಔನ್ಸಿನ ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ ಪಿ. ಖರ್ಚು 5 ಆಣೆ ಬೀಳುವದು.

ವಾಸನೆ ಬಿಲ್ಲೆಗಳು:—ಅಸಲಾದ ಗುಲಾಬಿ, ಮೋತಿಯಾ, ಲಾವಂಡರ ಇಂಥಾ ವಾಸನೆ ದ್ರವ್ಯಗಳಿಂದ ಮಾಡಲ್ಪಟ್ಟಿದೆ. ಬಟ್ಟೆಗಳ ಸಂಗಡ ಇಟ್ಟಿದ್ದಾದರೆ ಸುವಾಸನೆಯಾಗಿ ಇರುವುವು ಡಪ್ಪಿ 1ಕ್ಕೆ 8 ಆಣೆಗಳು ವಿ. ಪಿ. 1 ಡಬ್ಬಾ ಮೊದಲು 6 ಡಬ್ಬಾಗಳವರಿಗೆ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲು,
ಶ್ರೀ ಪೆರುಮಾಳ್ ಕೋಯಿಲ್ ದೇವಸ್ಥಾನ,
ಸನ್ನದಿ, ತಂಜಾವೂರು.

ಅನುಭವಸಿದ್ಧವಾದ ವನೌಷಧಗಳು

೧. ಕುಂತಲಾವಂಜ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬೆಳ್ಳಿಯ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ. ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯುವನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮ ೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಾಲ...ವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲಿಗೆ ೨ ರೂ

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪಿಂಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲಿಗೆ ೨ ರೂ.

೯. ವಾಸಾವ ಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಹಸ್ತಮೈಥುನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಾವು, ವಾತ ಬಾಧೆಗಳನ್ನು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ತುರುಕಜ್ಜಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೇ ... ಗೆಲ್ಲುವದು ಉರಿಯೇ ಇಲ್ಲ ಸುವಾಸಿಕವಾಗಿದೆ ... ೬ ಆಣೆ

೧೩ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವ ... ತೊಲಿಗೆ ೧ ರೂ

೧೪ ಬ್ರಹ್ಮೀ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳಯಿಸುವದು. ಬಾಲಿಗೆಗೆ ಪಟುತ್ವ ... ಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ... ತೊಲಿಗೆ ೨ ... ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ... ಎಂದು ಕಳುಹಿಸುವವರ ರೋಗನಿರ್ಣಯ ... ಔಷಧ ... ನಮ್ಮೊಡನೆ ಕನ್ನಡದಿಂದ ... ಪತ್ರ ... ನಡೆಸಿರಿ.

ನಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., Ayurvedic Chemists,

Vepery Post MADRAS.

English self Guide

(IN KANARESE)

ಕನ್ನಡ ಇಂಗ್ಲಿಷು ಭಾಷಾಮಂಜರಿ.

ಅನ್ಯ ಸಹಾಯವಿಲ್ಲದೆ ಇಂಗ್ಲಿಷು ಭಾಷೆ ಓದುವುದಕ್ಕೂ ಬರೆಯುವುದಕ್ಕೂ ಕಲಿತುಕೊಳ್ಳಲಿಕ್ಕೆ ಇದರಷ್ಟು ಚಲೋ ಪುಸ್ತಕ ಬೇರೊಂದಿಲ್ಲ ಪುಸ್ತಕದಲ್ಲಿ ಐದು ಭಾಗಗಳಿವೆ ಮೊದಲನೆಯ ಭಾಗದಲ್ಲಿ ಇಂಗ್ಲಿಷು ಶಬ್ದಗಳನ್ನು ಓದುವ ಕ್ರಮವೂ ವ್ಯಾಕರಣ ಸೂತ್ರಗಳೂ ಬಹು ಸಗಸವಾಗಿ ಕೊಟ್ಟಿವೆ ಎರಡನೆಯ ಭಾಗದಲ್ಲಿ ವಿಚಿತ್ರ ಶಬ್ದಕೋಶವೂ ಆಯಾ ಶಬ್ದಗಳ ಜತೆಯಲ್ಲಿ ಸಂಭಾಷಣೆಗೆ ಅವಶ್ಯವಾದ ಇತರ ಎಲ್ಲಾ ಶಬ್ದಗಳು ಸಿಗುವವು. ಮೂರನೆಯ ಭಾಗದಲ್ಲಿ ಸಂಭಾಷಣ ವಿಧಾನವನ್ನು ಕಲಿಸಿಯದೆ. ಸಂಭಾಷಣ ವಾಕ್ಯಗಳು, ದಾರಿಕೇಳುವುದು. ಬಂಡಿ ಬಾಡಿಗೆಗೆ ಹಿಡಿಯುವುದು ರೈಲುಬಂಡಿಯಲ್ಲಿ, ಹೋಟೇಲಿನಲ್ಲಿ, ಫಲಹಾರ ಮಾಡುವುದು ಎಂಬಿವೇ ಮೊದಲಾದ 26 ತರೋಕ್ತಿಗಳನ್ನಿಟ್ಟುಕೊಂಡು ಕಲ್ಪಿತ ಸಂಭಾಷಣೆಗಳಿವೆ. ನಾಲ್ಕನೆಯ ಭಾಗದಲ್ಲಿ ಕಾಗದ ಪತ್ರಗಳು ಐದನೇ ಭಾಗದಲ್ಲಿ ಆಯಾ ಆವಶ್ಯಕತೆಗೆ ಸರಿಯಾಗಿ ತಾರು ತಂತಿ ಬಿಡತಕ್ಕ ವಾಕ್ಯಗಳಿವೆ 256 ಪುಟಗಳುಳ್ಳ ಈ ಪುಸ್ತಕಕ್ಕೆ ಬೆಲೆ ಒಂದೇ ರೂಪಾಯಿ ಅಂಚೆ ಹಾಸಲು ಬೇರೆ ಒಂದು ಪ್ರತಿಯನ್ನು ತರಿಸಿನೋಡಿ!

PENMAN'S GUIDE.

ಲೋಕವ್ಯವಹಾರ ಬೋಧಿನಿ.

(೪ನೇ ಮುದ್ರಣವು)

ಟಿ. ಜಿ. ಮಾಬೆನರಿಂದ ತಯಾರಾಗಿ ರಚಿಸೋಣಾದ ಈ ಪುಸ್ತಕವು ಸಮಸ್ತ ಜನರಿಗೂ ಬಹು ಉಪಯೋಗಕ್ಕೆ ಬೀಳುತ್ತದೆ ಎಂತ ಪ್ರತ್ಯೇಕ ಹೇಳಬೇಕೆಂತಿಲ್ಲ ಇದರಲ್ಲಿ ನಾನಾತರದ ಅರ್ಜಿ, ದಸ್ತಾವೇಜು, ಕೈಚೀಟು, ಫಿರ್ಯಾದಿ, ಕಾಗದ ಪತ್ರಾದಿಗಳನ್ನು ಬರೆಯುವ ಕ್ರಮವ ನಮೂನೆಗಳು, ರಿಜಿಸ್ಟ್ರಿ ಮಾಡಿಸುವಲ್ಲಿ ಇರತಕ್ಕ ಕ್ರಮಗಳು, ಆಯಾ ದಸ್ತಾವೇಜುಗಳಿಗೆ ಬೇಕಾದ ರಸ್ಟೆವ್ಯಾಲ್ಯು ಮೊದಲಾದ ಅನೇಕ ಸಂಗತಿಗಳನ್ನು ಚಿಕ್ಕ ಮಕ್ಕಳಿಗೆ ಬೋಧಿಸುವ ರೀತಿಯಲ್ಲಿ ಸವಿಸ್ತಾರವಾಗಿ ವಿವರಿಸಿರುತ್ತೆ. ಈ ಹೊಸ ಮುದ್ರಣದಲ್ಲಿ ಇವುಗಳನ್ನೆಲ್ಲಾ ಪರಿಷ್ಕಾರವಾಗಿ ತಿದ್ದಿ ಸರಿಮಾಡಿದುದಲ್ಲದೆ, ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆಯ ಸಾರಾಂಶ, ಪ್ರಾಚೀನಕಾಲದಿಂದ ತೀರ್ವೆ ವಸೂಲಾಗುತ್ತಿದ್ದ ವಿಧಗಳು, ಗ್ರಾಮಕೋರ್ಟುಗಳಲ್ಲಿ ನಡೆಯುವ ವ್ಯವಹರಣೆಯ ಕ್ರಮಗಳು, ಅವಧಿ ನಿಬಂಧನೆಗಳು, ಇಂಡಿಯನ್ ಪಿನಲ್ ಕೋಡಿನ ತಪ್ಪಿತಗಳು, ರಾಜಿಯಾಗಬಹುದಾದ ತಪ್ಪಿತಗಳು, ಜಾಮೀನಿನ ಮೇಲೆ ಬಿಡಬಹುದಾದ ಪ್ರಕರಣಗಳು ಇವೇ ಮೊದಲಾದ ಅನೇಕ ಸಂಗತಿಗಳನ್ನು ಕೂಡಿಸಿ ಪುಸ್ತಕ ದೊಡ್ಡದು ಮಾಡಿಯದೆ. ಕ್ರಯ ಒಂದಕ್ಕೆ ರೂಪಾಯಿ 1. ಮಾತ್ರ. ಅಂಚೆ ಹಾಸಲು ಬೇರೆ

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೋಜಿಟರಿ,

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಡೋಂಗರೆ

ಇಪರ ಬಾಲಾಮೃತ.

ಇದು ಬಹು ಸತ್ವಯುಕ್ತವಾದದರಿಂದ ಮಕ್ಕಳು ತವಕಬಟ್ಟು ತಕ್ಕೊಳ್ಳುವವು ... ದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೋ

Girgaum, Bombay. ಗಿರಗಾಂ ಮುಂಬಯಿ.

ಊಲನ್ ಮಾರ್ಟ, ಮಾಧವ ಬಿಲ್ಡಿಂಗ್ಸ್, ಮಂಗಳೂರು. ಇವರಲ್ಲಿಯೂ ದೊರಕುವದು.

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನು ತಿಳಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದು. ಈ ಪುಸ್ತಕವು ಇನಾಮವಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ಶೀಘ್ರವಾಗಿಯೇ ಬರಿಯಬೇಕು. (8).

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ,
157 ಬ್ರಾಡ್ವೆ ಮದ್ರಾಸ್.

S. U. N. & CO.,
BENARES CITY, U.P.

ಯೋಗ್ಯವಾದ ಕ್ರಯ!
ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯುವ ತಯಾರಿಸಿರುವ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಸೂತಿ, ಶೆಲ್ಲೆ, ಕಾಶ್ಮೀರ್ ಶಾಲು, ದುಪ್ಪಟ್ಟ, ಮಗುಟ, ಜಗನ್ನಾಥ ಜಾನಂಟೆಗಳು, ರುದ್ರಾಕ್ಷಿಗಳು, ಕೊನರ್ಾದ, ಅರಲಿಪೇಟ, ಧರ್ಮಾವರ, ಈ ಮುಂತಾದ ಅನೇಕ ಹೊಸ ನಮೂನೆಯ ಸಾಮಾನುಗಳನ್ನು ಕಾಶಿಯಲ್ಲಿಯ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋಹನತ್ವದಿಂದ ತಯಾರಿಸಿರುವದು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವರಿಗೆ 101 ಪುಟವುಳ್ಳ 1 ಕೆಟಲಾಗು, 1 ಕಾಶೀಕ್ಷೇತ್ರದ ದಾರವನ್ನು ಇನಾಮವಾಗಿ ಕಳುಹಿಸಲಾಗುವದು.

ವಿಳಾಸ.— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತ್ತು ರೂ. ೧—೮—೦. ವಿದ್ಯಾರ್ಥಿಯರಿಗೆ ರೂ. ೧—೪—೦. ಟಪ್ಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣ ಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8. ವಿದ್ಯಾರ್ಥಿಯರಿಗೆ ಆಣೆ ೬. ಪಾನು ಡೆಮ್ಮಿ ಅಷ್ಟಪತ್ರದ ಪುಟ ೧೫೦; ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ., ಎಲ್. ಎಲ್. ಬಿ., ಹೈಕೋರ್ಟ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ:— ಎಸ್. ಎಲ್. ಕಾಮತ್ ಧಾಕಪ್ಪನವರ
ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕ್ಷದ್ರು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾದಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ವೈಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಹಾಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಟೀನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ ೬—0—0

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಳೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ.

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0—1—6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲ್ಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮುಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ ತೂಕದ ಸೇರು 1ಕ್ಕೆ ರೂ. 12—0—0, 5—0—0, 3—0—0 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನರಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಇಂಗ್ಲೀಷು ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದಿದ ಪಕ್ಷದಲ್ಲಿ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರೆಂದೆನ್ನಿಸಿಕೊಂಡಿದ್ದ ಕೋಳೂರು ಶಂಕರಕವಿಯಿಂದ ರಗಳೆಯ ಛತ್ರಪಾನದ ಲಯದಲ್ಲಿ ಭಾಮಿನಿಷಟ್ಪದಿರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಲಾಪವು, ಪಾರ್ವತೀಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚುಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧—೦—೦.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.



ಇದು ಮುಖ್ಯವಾಗಿ, ಹೆಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾಧಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭಸ್ಥವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗೆಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನು ಕೊಡುತ್ತವೆ ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದೆ ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಲಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಷ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0.

,, , 3ಕ್ಕೆ , 2-10—0

ವಿ. ಪಿ. ಚಾರ್ಜು ಅಲಾಯಿದ

N. B.—ಕಾಮಿನಿಯಾ ಎಣ್ಣೆಯನ್ನು ತರಿಸಿ ಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

,, ಮಿಡಿಯಂ ,, ,, 0-12—0.

,, ½ ಔನ್ಸಿನ ,, ,, 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದು.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪ್ರಸ್ ಸಾಲ್ಟ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲಶೂಲಿ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ ಒಂದು ಸಲ ಉಪಯೋಗಿಸಿ ನೋಡಿರಿ ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನು ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭವುಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ.

THE ANGLO-INDIAN DRUG & CHEMICAL COMPANY, 16 MARKET, BOMBAY 2.

ಪ್ರಧಾನ ಏಜಂಟರು: ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ. ಸಗಿಕ್ಕ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ X | ...ರು ತಾ 4ನೇ ಮಾರ್ಚಿ ಶನಿವಾರ 1916. | ಸಂಚಿಕೆ 9

ಅವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನು ಶೀಘ್ರದಲ್ಲಿ ...ಸುವುದು

2. ...ದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೂಡತಕ್ಕವರಿಗೆ ಮಹೋಪ...ಗಿರುವುದು

3. ...ಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದರೆ ತಿಂದನ್ನವು ಜೀರ್ಣವದಲ್ಲದೆ, ಕಾಲಪ್ರವೃತ್ತಿಯೂ ಕ್ರಮವಾಗಿ ...ದ ...ರೋಗಕ್ಕೂ ... ವುದಿಲ್ಲವು.

...ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗ... ಕಂಠಧ್ವನಿಯನ್ನು ಸ್ಪಷ್ಟಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳು, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಆದ ರೋಗವನ್ನೂ ಒಡನೆ ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಯುಕ್ತವಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

4೦ ಮಾತ್ರೆಗಳ ಪೊಟ್ಟ 1ಕ್ಕೆ 0—2—0 ... ಮಾತ್ರೆಗಳ ಪೊಟ್ಟ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 500 ಮಾತ್ರೆಗಳ ಮಂಡಪೆಟ್ಟಿಗೆ 1ಕ್ಕೆ 1—0—0

95 „ „ „ 0—4—0 „ ಟಿನ್ „ 0—9—0 100 „ ಶೀಸೆ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ... ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಇಂಡಿಯ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು ದಿ. ಊಲನ್ ಮಾರ್ಟ್, ಮಂಗಳೂರು.

ಸೋಲ್ ಏಜಂಟ್ಸ್.—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಷಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನವೀನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸುವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೆ ಆರ್ಷಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

TYPE-WRITING.

ಮುದ್ರಣ ಅನುಕೂಲಗಳು.

ಅರ್ಜಿ, ದಾವೆಗಳ ಪ್ರತಿ, ಇತರ ದಸ್ತಾವೇಜುಗಳ ನಕಲುಗಳು ಇತ್ಯಾದಿ ಇಂಗ್ಲಿಷ್ ಭಾಷೆಯ ಬರವಣಿಕೆಗಳನ್ನು ಕೋರ್ಟು ಕಚೇರಿಗಳಲ್ಲಿ ದಾಖಿಲುಮಾಡುವ ಸಂದರ್ಭಗಳು ಬಹಳವಾಗಿ ಬಂದೊದಗುತ್ತವೆ. ಇಂಥವುಗಳು ಕೈಬರಹದಲ್ಲಿದ್ದರೆ ಓದಲು ಬಹಳ ಸಮಯವೂ ತೊಂದರೆಗಳೂ ಇರುವವು. ಆದ್ದರಿಂದ ಇವುಗಳನ್ನು ಛಾಪಾ ಹಾಕಿಸುತ್ತಾರೆ ಹೆಚ್ಚು ಪ್ರತಿಗಳನ್ನು ಛಾಪೆ ಮಾಡಿಸಿದರೆ ಖರ್ಚು ಕಡಿಮೆ ಬೀಳುವದು. ಅರ್ಜಿ ಇತ್ಯಾದಿಗಳ ಹೆಚ್ಚು ಪ್ರತಿಗಳನ್ನು ಮಾಡಿಸುವದು ಹಲವು ಸರ್ತಿ ಅಗತ್ಯವಿರದು. ಇಂಥಾ ಸಂದರ್ಭಗಳಲ್ಲಿ "Type-writing Machine" ಎಂಬುವದರ ಮೂಲಕ ಅಚ್ಚು ಹಾಕಿಸುವದುಂಟು. ಇಂಥಾ ಯಂತ್ರವನ್ನು ಶಾರದಾ ಛಾಪಖಾನೆಯಲ್ಲಿ ತಂದು ಇಟ್ಟಿರುತ್ತೇವೆ. ಗಿರಾಕಿಗಳ ಅನುಕೂಲತೆ ಬಗ್ಗೆ ಅಚ್ಚು ಹಾಕಿಸುವ ಕೆಲಸವಿನಹ ಟೈಪ್‌ರೈಟಿಂಗ್ ಮೂಲಕ ಅರ್ಜಿ ಇತ್ಯಾದಿಗಳನು ಬಹಳ ಸುಲಭ ದರದಲ್ಲಿ ಮುದ್ರಿಸಿಕೊಡುತ್ತೇವೆ.

ದರ ಇತ್ಯಾದಿಗಳನ್ನು ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು ಇವರಿಂದ ತಿಳಿದುಕೊಳ್ಳಬಹುದು.

ಆರ್. ಮಾರ್ಟಿನ್ಸನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶೂಲೆ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೮—೦

ಆರ್. ಮಾರ್ಟಿನ್ಸನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯೆತ್ತದಂತೆ ಮಾಡುತ್ತವೆ.
೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೦—೦.

ಆರ್. ಮಾರ್ಟಿನ್ಸನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರಹ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿ ವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅದವಾ ಹೊಸತಾಗಿದ್ದರೂ ಸರಿ ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೧—೮—೦ ವಿಳಾಸ —

ಆರ್. ಡಿ. ಕಟ್ಲೆ ಮತ್ತು ಕಂಪೆನಿ, ನಂ. ೨, ಫ್ರಿಯರ್ ರೋಡ್, ಮುಂಬಯಿ

R. D. Kately & Co
No. 2 Frere Road,
[illegible]

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ

ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಗಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನ್‌ಸೇಷನ್ ಬಲಿಷ್ಠವಾದ ಸಾಮಾನುಗಳಿಂದಲೂ ಸಾಧ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರ, ಬ್ಯಾಂಕಿನಲ್ಲಿರುವ ದೊರೆಗಳ, ಕೊಂಡುಕೊಳ್ಳಬಹುದು ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು —(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಶ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.



ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ಬೀದಿ, ಮದರಾಸು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬದು ಬ್ರಾಹ್ಮಣರ ಮುಖ್ಯ ಧನವೂ, ಇದೇ ಶುದ್ಧ ತತ್ವಾರ್ಥವು ಮಾತ್ರವಲ್ಲ, ಇದರ ವಿಶ್ಲೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಶ್ರೇಷ್ಠ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ವ ವಿಷಯಗಳುಳ್ಳ, ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನಿಸುವಂಥವರಿಗೆ ಏನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಘನ ಶ್ರೇಯಸ್ಸು ವ ಗೌರವವು ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯವರಿಸಿದ ದಾಸೋಹಂಭಾವದ ಈ ಗ್ರಂಥವು ಸರ್ವ ಪ್ರಿಯವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು.

ಕ್ರಯ ೧೦ ಆಣೆ.

ಪುಸ್ತಕಗಳ ಮಾರಾಟದ ಸ್ಥಳ:—
ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ
ಮು ಮು. ಶ್ರೀನಿವಾಸ ಹರಿದಾಸ್, ಫೀಲ್ಡ್ಸ್ ಸ್ಟ್ರೀಟ್.
ಉಡ್ಪಿ, ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ತರಹದ ರೋಗಗಳಿಗೂ, ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣಕಾಣುವುದು. ಸ್ಕ್ರೂ ಬಾಯಿಯ ಸೀಸೆಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ಸೀಸೆಗಳು ಬಿಟ್ಟಿಗೆ. ಸಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ. ಪಿ. ಮಾಫಿ.

ವಿಸ್ಫೋಟಕ ಮುಷ್ಟಿ:—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಘಟ್ಟಕ ಚೀಷ್ಟೆಗೆ ಸಂಜೀವನದಂತಿರುವುದು. 12 ಮಾತ್ರೆಗಳ ಪೊಟ್ಟ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು.

ಸ್ವರಸುಖ:—ಕೆಮ್ಮು, ಗಂಟ್ಲುನೋವು, ಧ್ವನಿ ಬದಲಾಗುವದು, ಅಗ್ನಿ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಟ 1ಕ್ಕೆ ಕ್ರಯ 0—1—6 ಸಂಪಲ್ 6ಪೈ.

ಕಾರ್ಬೋಲಿಕ್ ಟೂತ್ ಪೌಡರ್:—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ. 0—2—0.

ಗಜಕರ್ಣ ಯಾನೆ ದದ್ದಿಗೆ:—ಈ ಮುಲಾಮನ್ನು ಹುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ಮೈ ಸ್ವಚ್ಛವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ. 0—4—0. ಒಂದು ಡಜನ್ ಡಬ್ಬಿಗಳಿಗೆ ರೂ 2—8—0 ವಿ. ಪಿ. ಬೇರೆ.

M. D. R. & Sons.
Srimangireesh Aushadalaya,
UDIPI S. C.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ, ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೮—೦ ಆಗಿರುತ್ತದೆ. ಚಂದಾದಾರರಾಗಿ ಸೇರಬೇಕೆನ್ನುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್. ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ. ಧಾರವಾಡ.

Peoples Park Fair Reward.

ಸುಂದರವಾದ] 1916 [ಕ್ಯಾಲೆಂಡರು.

ಕರ್ಣಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನಂದರೆ— ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾಮಾಗಿ ಕಳುಹಿಸುವೆವು ತ್ವರೆಮಾಡಿರಿ

ವಿಳಾಸ — ರತ್ನಂ ಕಂಪೆನಿ,
ಸಾಹುಕಾರ ಪೇಟೆ,
ಇರಕಪ್ಪನ ಬೀದಿ,
ಮದ್ರಾಸ

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ಕೃಷ್ಟವಾದದ್ದೆಂದು ಒಪ್ಪಿದ್ದಾರೆ ನಿಮಿಷಮಾತ್ರವೇ ಹಾಕಿದರೂ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0 ಟಪ್ಪಾಲು ಹಾಸಲು ಬೇರೆ ಬೀಳುವದು ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3, ಇರಕಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಆಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿಯರ ಹೆಸರುಗಳೂ ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ವಿಶೇಷ ಪ್ರಭುಗಳ ಚರಿತ್ರೆಗಳೂ, ಅಹಿಚ್ಛೇತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ನೇಮಿಸಿದ 326 ಬಹುಮಾನದ ಗ್ರಾಮಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತದ್ರೂಪಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು ಪಂಚಾಯತಿದಾರರು ನ್ಯಾಯಶಾಲೆಗಳು ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದ ಬರಹ ಬಲ್ಲ ಮಹನೀಯರಿಗೆ ತಿಳಿಯಲುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ.

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚ ಬೇರೆ

ಸಮಯಾನುಸಾರ ಕ್ರಯವು —4—0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು — ಎನ್. ಎ ಶೀನಪ್ಪ ಹೆಗ್ಗಡೆ, ಅಮ್ಮುಣಂಜೆಗುತ್ತು,
ಪೋಸ್ಟು ಪೂಕಳೆ, ದ ಕ
ಎಸ್. ಪಿ. ರಾಜ ಎಂಡ್ ಕೊ. ಗರುಡಪುರ ಪೋಸ್ಟು, ದ ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1 ಶಾರದಾ ಪ್ರೆಸ್, ಮಂಗಳೂರು
2 ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು
3 ಒಂಟಿರ ವಿದ್ಯಾರ್ಥಿಭವನ, ಮಂಗಳೂರು.
4 ಊಲನ್ ಮಾರ್ಟ್, ಮಂಗಳೂರು
5 ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6 ಪ್ರಭಾಕರ ಮುದ್ರಾಯಂತ್ರ, ಉಡುಪಿ
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವದು.

ಗೃಹಸ್ಥಾಶ್ರಮವು ಸುಖದಾಯಕವಾಗಿ ಪರಿಣಮಿಸಬೇಕೆಂದು ನಿಮಗೆ ನಿಶ್ಚಯವಾಗಿಯೂ ಮನಸ್ಸಿದೆಯೋ?

ಮದನಮಂಜರಿ ಮಾತ್ರೆ

ಗಳನ್ನು ಪ್ರಯೋಗಿಸಿರಿ. ಇವು ಗೃಹಸ್ಥಾಶ್ರಮವು ಸಂತೋಷ ಮತ್ತು ಸುಖದಾಯಕವಾಗಿ ನಡೆಯುವಂತೆ ಮಾಡುವದು. ಇದು ಯಾವ ಕಾರಣದಿಂದಲಾದರೂ ಉಂಟಾದ ದೌರ್ಬಲ್ಯವನ್ನು ಹೋಗಲಾಡಿಸುವದು. ಇದು ಮುದುಕರನ್ನು ಯುವಕರಾಗಮಾಡುವದು

ಕ್ರಯ 40 ಮಾತ್ರೆಗಳ ಡಬ್ಬಿ 1ಕ್ಕೆ ರೂ 1—0—0

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:— ಜಾಮನಗರ್ (ಕಾಥ್ಯಾವರ್)

ಶಾಖೆ —
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

ಸಂತೋಷದಾಯಕವಾದ ಗೃಹಸ್ಥಾಶ್ರಮವನ್ನು ಪಡೆಯುವಂತೆ ಮಾಡುವ ನಿಜವಾದ ಸಾಧನವು.

"ಪರ್ಪೆಚ್ಯುವಲ್ ಯೂತ್"

ಎಂಬ ನಮ್ಮ ಪುಸ್ತಕವನ್ನು ಪಠಿಸುವದೇ ಆಗಿದೆ

ಯೌವನವು ಆಚಂದ್ರಾರ್ಕವಾಗಿ ಉಳಿಯುವಂತೆ ಮತ್ತು ಅದು ಥಟ್ಟನೇ ಅಳಿದುಹೋಗದಂತೆ ಮಾಡುವ ಉಪಾಯವು ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನಿಮ್ಮ ವಿಳಾಸ ಬರೆದು ಕಳುಹಿಸಿದ್ದಲ್ಲಿ ಧರ್ಮಾರ್ಥವಾಗಿ ಈ ಪುಸ್ತಕವು ಕಳುಹಿಸಲ್ಪಡುವದು.

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR),
Branch:—20 CHINA BAZAAR ROAD, MADRAS.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	371,976—4—4
Reserve Fund	33,500—0—0

Besides the uncalled capital of Rs 25,000/ 25% of the net profits are added annually to the Reserve Fund Rs 28,485/ have been invested in Government Paper of the face value of Rs 29,300/-

Dividends of not less than 6% paid during the past years and a bonus of % to 2% paid in addition during the last three years

Fixed Deposits of Rs 50/ and above in multiples of Rs 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಸಿದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	371,976—4—4
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ 29,300ರದ ಭದ್ರತಾಪತ್ರಗಳಲ್ಲಿ ರೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ರೇವಣಾತಿಗಳು ರೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ರೇವಣಾತಿ ಇಡೋಣಾದೀತು ಈ ರೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

Canara Bank Ltd.,
Mangalore, 1st December 1915

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಟ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿದಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.

ಅಮೃತಾಂಜನ.

ಜಗತ್ಪ್ರಸಿದ್ಧವಾಗ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ — ವಾತ, ಸಂಧಿವಾತ, ತಲೆನೋವು, ಶಿರೋಭಾ ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾವೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ [illegible] -0. ವಿ. ಪಿ. ಪ್ರತ್ಯೇಕ

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು, ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹೊಪ್ಪಿಟ್ ಒಯಿಲ್ ಇಲಾ ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮೊಡ್ಡಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ಼ೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸ್‌ವೆಲ್, ಮೈಸಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲುತ್ತದೆ

ಆರ್. ಆರ್ ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೇಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಹರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6. 7 ತಂಬುಚೆಟ್ಟಿ ಸ್ಟ್ರೀಟ್,	109 ಫ್ರೇಯರ್ ರೋಡ,
ಜೋರ್ಜ ಟೌನ್, ಮದ್ರಾಸು.	ಮುಂಬಯಿ.

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲ ಉದುರುವದನ್ನು ತಡೆದು ಕೋಮಲವಾಗಿ ಒಳೆಯಬೇಕೆಂಬ ಉದ್ದೇಶವಾಗಿರವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ, ತಲೆಯನ್ನೂ ಹಾಳ ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡ ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳವದಕ್ಕೆ ಬರೆಯುವದಕ್ಕೆ ಆಗುವದಿಲ್ಲ. ಇವಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮದುಳನ್ನು ಶಾಂತಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ. ಬರೇ ಮಾತುಗಳಿಂದ ವರ್ಣಿಸುವದರಲಿ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ. ಇನಾಂ ಸಾಮಾನಗಳ ತಪಶೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಲ್ 1, ವೈಭರಣೆ 1, ತಾಂಬೂಲ ಮಾತೆ 40, ದಂತದ ಬಾಚಣಿಗೆ 1, ಸೊಗಸಾದ ರಾಧಾಗ್ ಕಾರೊನೇಷನ್ ಸೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಒಟ್ಟು 60. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ. ಕೂಡಲೆ ಬರೆದು ತರಿಸಿಕೊಳ್ಳಿ.

ನಮ್ಮ ವಿಳಾಸ — ವಿ. ಎ. ಎಸ್. ಪಾಣಿ ಕಂಪೆನಿ,
3 ಇರೇಪ್ಪನ್ ಬೀದಿ, ಮದರಾಸು

ಜಯವಿಜಯ
ಅಥವಾ
ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ವಿಕ್ರಮಸಿಂಹ ಬಹದ್ದೂರ" ಎಂಬುವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು, ಕಡೆಗೆ ತನ್ನ ಮೂರು ವರ್ಷದ ಪುತ್ರನ್ನು ತನ್ನ ಸಮಕ್ಷಮದಲ್ಲೇ ತಲೆಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ಹೆಣವನ್ನು ನಂತರ ಅಲ್ಲಿಯೇ ಇರಗೆ ಇಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಒರಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನಸ್ಸುರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— V. O. Amin
C/o E. A. Goll Esq.
***Sirdar Palace, Apollo Street*, BOMBAY.**

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೭೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ. ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ —

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ"

ಮ॥ ರಾ॥ ಬಿ ರಾಮರಾವ್ ಎಂ ಎ, ಎಲ್. ಎಲ್. ಬಿ, ಗವರ್ನಮೆಂಟು ಟ್ರಾನ್ಸ್ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ * * * ಇದರಂತೆಯೇ ನಮ್ಮ ಸಮಾಜದಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ — ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಕಾತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು-ರೇಶ್ಮೆಯ ವಸ್ತ್ರಗಳೂ; ಕಂ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಶಗದಿ

ವಿಳಾಸ:— ಜಿ. ಎಸ್. ಸೋಜ ಅಂಡ್ ಕಂಪೆನಿ,
[illegible], ಮಂಗಳೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ



ಇಂಡಿಯಾದವರು ಮಾತ್ರವಲ್ಲ, ಬ್ರರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷದಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವದು ನಿಜವಾಗಿಯೂ ತಪ್ಪುವದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಳಟೀನೆ, ಬಲಹೀನತೆ ಕೆಟ ಹವಾ ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

SREE SITHA RAGHAVA VAIDYA SALA MYSORE

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ ಖರ್ಚು ಸೇರಿ 2—12—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲ ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್ ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ. 2. ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬ ದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪುಸ್ತಕಗಳು.



ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಮೈಸೂರು ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0 **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0 **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0-2-0 ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯುಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೬೯೭ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಇಂಗ್ಲಿಷ್ ಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗವುದು.

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರೊಳೊಬ್ಬನಾದ ಕೋಳೂರು ಶಂಕರ ಕವಿಯಿಂದ ೧೯ನೆಯ ಶತಮಾನದ ಆದಿಯಲ್ಲಿ ಭಾಮಿನಿಷಟ್ಪದಿ ರೂಪಕವಾಗಿ ರಚಿತವಾದದ್ದು ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಳಾಪವು, ಪಾರ್ವತೀ ಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚುಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧—೦—೦.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ, ಅಣ್ಣಾರಿ.

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವದು. ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದು. ಈ ಪುಸ್ತಕವು ಇನಾಮವಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ಶೀಘ್ರವಾಗಿಯೆ ಬರಿಯಬೇಕು. (8).

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ,
157 ಬ್ರಾಡ್ವೆ ಮದ್ರಾಸ್.

ಕಲ್ಯಾಣ! ಕಲ್ಯಾಣ!! ಕಲ್ಯಾಣ

ಬಂಧುಗಳೇ! ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— Address:—

ಎಸ್. ಪಿ. ರಾಜಾ ಮತ್ತು ಕಂಪೆನಿ, S. P. RAJA & Co.,
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*
ಪೋಸ್ಟು ಪೊಳಲಿ, ದ. ಕ. POST POLALY, S. C.

S. U. N. & CO.,
BENARES CITY, U. P.

ಯೋಗ್ಯವಾದ ಕ್ರಯ!
ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊನಾರಡು, ಅರಳೆಪೇಟೆ, ಧರ್ಮಾವರ, ಈ ಮುಂತಾದ ಅನೇಕ ಹೊಸ ನಮೂನೆಯ ಸಾಮಾನುಗಳನ್ನು ಕಾಶಿಯಲ್ಲಿಯೆ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋಹನಪ್ರಿಂದ ತಯಾರಿಸುವದು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವರಿಗೆ 100 ಪುಟವುಳ್ಳ 1 ಕೆಟಲಾಗು, 1 ಕಾಶಿ ಕಾಳಭೈರವ ದಾರವನ್ನು ಇನಾಮಾಗಿ ಕಳುಹಿಸಲಾಗುವದು.

ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ. ಕಾಶಿ

ಚಂದಾ ಕಡಮೆ! ನೋಡಿರಿ!! ಅಂದ ಹೆಚ್ಚು!!!

"ಕನ್ನಡ ಕೋಗಿಲೆ"

ವಾಙ್ಮಯ, ಧರ್ಮ, ಸಮಾಜ, ಶಾಸ್ತ್ರಾದಿ ಸದ್ವಿಷಯಗಳನ್ನೊಳಕೊಳ್ಳುವ ಈ ಮಾಸಪತ್ರಿಕೆಯು ಬರುವ ವಸಂತದ ಆದಿಯಿಂದ ಪ್ರಕಟಿತವಾಗುವುದು. ನಮ್ಮ ಚಾತುರ್ಯವನ್ನು ನಾವೇ ಪ್ರಕಟಿಸಿಕೊಳ್ಳುವುದು ಕರ್ತವ್ಯವಲ್ಲವಾದ ಕಾರಣ ನಿಜ ಸ್ಥಿತಿ ಮಾತ್ರ ಸೂಚಿಸಲಾಗಿದೆ. ಪ್ರಥಮ ಸಂಚಿಕೆಯು ನಮ್ಮ ಕೋಗಿಲೆಯು ಸುಸ್ವರವೇ ವಾಚಕರನ್ನು ನೋಡಿ ಕಿವಿದೆರೆಯುವಂತೆ ಮಾಡದಿರದು. ಬಿಡಿ ಪ್ರತಿ 1ಕ್ಕೆ 0-2-6.

ಚಂದಾ:—
ಪೋಷಕರು ರೂ. 4—0—0; ಪ್ರೋತ್ಸಾಹಕರು ರೂ. 1—8—0
ಅಂಚೆ ವೆಚ್ಚ ಬೇರೆ.

ವಿಳಾಸ:—
ವಿದ್ಯಾರ್ಥಿ ಭವನದಲ್ಲಿರುವ ಪಿ. ಎಮ್. ಭಟ್ಟರು ನೋಡಿ ಕನ್ನಡ ಕೋಗಿಲೆ ಸಂಪಾದಕರಿಗೆ ತಲ್ಪಿಸುವದು.

Estd. 1888 ಸ್ಥಾಪನೆ 1888.

K. B. RELE & Cos.,—BOMBAY
ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಗಜ್ಜು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಸ್ವದೇಶಾಭಿಮಾನಿ

ಮಂಗಳೂರು, ಶನಿವಾರ ತಾರೀಖು 4ನೇ ಮಾರ್ಚ 1916

ವಿದ್ಯಾಪ್ರಚಾರದ ಪರಿಷತ್ತು, ಮದ್ರಾಸು

(1916ನೆ ಮಾರ್ಚ 16ನೆ ತಾರೀಖಿಗೆ ಮದ್ರಾಸಿನಲ್ಲಿ ಜರಗುವುದು)

ಈಗಿನ 'ಗ್ರೆಂಟ್ ಇನ್ ಎಯ್ಡ್ ಕೋಡ' ಮತ್ತು 'ಎಡ್ಯುಕೇಶನಲ್ ರೂಲ್ಸ್' ಇವುಗಳಲ್ಲಿ ಎಲಿಮೆಂಟರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ತೊಡಕಾಗುವ ನಿಬಂಧನೆಗಳು ಇವೆ. ಅವುಗಳನ್ನು ತಪ್ಪಿಸಲು ಮಾಡಬೇಕೆಂದು ನ್ಯಾಯವಿಧಾಯಕ ಸಭೆಯಲ್ಲಿ ಆಗಾಗ ಚರ್ಚೆ ಬರುತ್ತಿರುವುದರಿಂದ ಅಂಥ ಅವಶ್ಯವಾದ ತಪ್ಪಿಗಳನ್ನು ನಿಶ್ಚಯಿಸುವುದಕ್ಕಾಗಿ ಮೇಲೆ ಹೇಳಿದ ಪರಿಷತ್ತು ಮದ್ರಾಸಿನಲ್ಲಿ ಸರಕಾರದವರಿಂದ ಏರ್ಪಟ್ಟಿರುವುದು. ವಿದ್ಯಾ ಇಲಾಖೆಯ ಬಹುಮಾನಪಟ್ಟ ಡಿರೆಕ್ಟರ್ ಸಾಹೇಬರು ಇದಕ್ಕೆ ಅಧ್ಯಕ್ಷರು. ಈ ಮೊದಲು ದಕ್ಷಿಣ ಕನ್ನಡ ಜಿಲ್ಲೆಗೆ ಇನ್ಸ್‌ಪೆಕ್ಟರಾಗಿ ಬಂದಿರುವ ಮೆ| ಆರ್. ಲಿಟ್ಲ್‌ಹೇಲ್ಸ್ ಇವರು ಇದಕ್ಕೆ ಸೆಕ್ರೆಟರಿಗಳಾಗಿ ಇದ್ದು ಹಲವು ಇನ್ಸ್‌ಪೆಕ್ಟರುಗಳೂ ಅಸಿಸ್ಟಾಂಟ್ ಇನ್ಸ್‌ಪೆಕ್ಟರುಗಳೂ ವಿದ್ಯಾ ಪ್ರಸರಣೆಯಲ್ಲಿ ಕುತೂಹಲವುಳ್ಳ ಹಲವು ಸದ್ಗೃಹಸ್ಥರು ಕೂಡಾ ೪೦ ಮಂದಿ ಈ ಸಭೆಯ ಮೆಂಬರುಗಳಾಗಿ ನೇಮಕಪಟ್ಟಿರುವರು. ನಮ್ಮ ಜಿಲ್ಲೆಯಿಂದ ರೆವರೆಂಡ್ ಸಿ ಪೆರಾಜಿ, ಮತ್ತು ರಾವ್ ಬಹದ್ದೂರ್ ನಯಂಪಳ್ಳಿ ಸುಬ್ರಾಯರು ಈ ಸಭೆಗೆ ಮೆಂಬರುಗಳಾಗಿರುವರು. ಈ ಸಭೆಯಲ್ಲಿ ಮಥಿಸಿದ ಠರಾವುಗಳನ್ನು ಡಿರೆಕ್ಟರ್ ಸಾಹೇಬರು ತಮ್ಮ ಸ್ವಂತ ಅಭಿಪ್ರಾಯ ಸಹಿತವಾಗಿ ಸರಕಾರದವರಿಗೆ ಸಮರ್ಪಿಸಬೇಕೆಂದು ನಿರ್ಣಯವಾಗಿದೆ. ಈ ಕಮಿಟಿಯಲ್ಲಿರುವ ಇತರ ಮೆಂಬರುಗಳ ಹೆಸರುಗಳನ್ನು ಓದಿದಾಗಲೇ ಸರಕಾರದವರು ನಿಜವಾಗಿಯೂ ವಿದ್ಯಾಪ್ರಸರಣೆಗೆ ಈಗ ಇರುವ ಅಭ್ಯಂತರಗಳನ್ನು ಕಿತ್ತುಹಾಕುವುದಕ್ಕೆ ಉದ್ಯುಕ್ತರಾಗಿದ್ದಂತೆ ವ್ಯಕ್ತವಾಗುವುದು. ಇವರು ಚರ್ಚೆಗೆ ಇಟ್ಟ ೭ ವಿಷಯಗಳಲ್ಲಿ ನಮಗೆ ಬೋಧೆಯಾಗುವ ಕೆಲವು ಮಾತುಗಳನ್ನು ಇಲ್ಲಿ ಸೂಚಿಸುವೆವು.

(1) **ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿನ ಫೀಸಿನ ದರ** — ಈಗ ೩ನೆ ದರ್ಜೆ ವರೆಗೆ ಇರುವ ಶಾಲೆಗಳಲ್ಲಿ ಬಾಲಕದರ್ಜೆಗೆ ೬ ಪೈ, Iನೆ ದರ್ಜೆಗೆ ೧ ಆಣೆ IIನೆ ದರ್ಜೆಗೆ ೨ ಆಣೆ, IIIನೆ ದರ್ಜೆಗೆ ೨॥ ಆಣೆ ಪ್ರಕಾರ ಫೀಸು ವಸೂಲಾಗುತ್ತದೆ ಇದನ್ನು ಮುಖ್ಯ ಉಪಾಧ್ಯಾಯರು ತಾವೇ ಇಟ್ಟುಕೊಳ್ಳಬಹುದು, ಬೋರ್ಡು ಫಂಡಿಗೆ ಪಾವತಿ ಮಾಡಬೇಕೆಂದಿಲ್ಲ. ಆದರೆ IVನೆ ದರ್ಜೆ ಮತ್ತು ಹೆಚ್ಚಿನ ದರ್ಜೆಗಳಿರುವ ಶಾಲೆಗಳಲ್ಲಿ ಬಾಲಕ ೧ ಆಣೆ, ೧ನೆ ದರ್ಜೆಗೆ ೨ ಆಣೆ, ೨ನೆ ದರ್ಜೆಗೆ ೩ ಆಣೆ, ೩ನೆ ದರ್ಜೆಗೆ ೪ ಆಣೆ, ೪ನೆ ದರ್ಜೆಗೆ ೬ ಆಣೆ, ೫, ೬, ೭ನೆ ದರ್ಜೆಗೆ ೮ ಆಣೆ ಮೇರೆಗೆ ವಸೂಲಾಗಿ ಬೋರ್ಡಿಗೆ ಸಲ್ಲಬೇಕು. ೧೯೧೪ ೧೫ನೆ ವರ್ಷಾವಧಿ ರಿಪೋರ್ಟನ್ನು ಪರಿಶೀಲಿಸಿದರೆ:—

	ಹಾಯರ್ ಎಲಿಮೆಂಟರಿ.	IVನೆ ದರ್ಜೆ	IIIನೆ ದರ್ಜೆ
ಸರಕಾರಿ	೭	೧೨೪	೫೭
ಮ್ಯುನಿಸಿಪಲ್	೮	೧೫೭	೩೦೯
ಬೋರ್ಡ್	೯೦	೧೮೭೯	೪೦೭೩
ಖಾಸಗಿ	೧೨೪	೧೮೭೮	೧೮೩೦೯
ಜುಮಲಾ	೨೨೯	೪೦೨೮	೨೨೭೪೮

ಎಂದು ಕಾಣುವುದು. ಈ ಎಲ್ಲಾ ಶಾಲೆಗಳಲ್ಲಿ ಒಟ್ಟು ಖರ್ಚಿನ ಮೊಬಲಗಿನ ಪೈಕಿ ಸೇಕಡಾ ೧೫ರಷ್ಟು (ರೂ. ೨೭೪,೧೫೭) ಫೀಸಿನಿಂದ ವಸೂಲಾಗುತ್ತದೆ. ಇಷ್ಟು ದೊಡ್ಡ ಮೊಬಲಗನ್ನು ಫಕ್ಕನೆ ಮಾಫಿ ಮಾಡುವುದು ಅಸಾಧ್ಯ ಕೆಲಸ. ಇದಲ್ಲದೆ ಒಂದುವೇಳೆ ಖಾಸಗಿ ಶಾಲೆಗಳಲ್ಲಿ ಫೀಸಿನ ಮೊಬಲಗು ತೀರಾ ವಸೂಲಾಗುವಂಥಾದ್ದಲ್ಲವೆಂದು ಕೆಲವರು ಆಕ್ಷೇಪಿಸಿದರೂ ಬೋರ್ಡು ಶಾಲೆಗಳಿಂದಲೇ ೧,೧೦,೦೦೦ ರೂಪಾಯಿ [illegible] ಇದನ್ನೂ ಕಳೆದುಕೊಳ್ಳುವುದು. ಈಗಿನ ಸಂದರ್ಭದಲ್ಲಿ [illegible] ಬೋರ್ಡಿನವರು [illegible] ಮಾಫಿಯಿಂದ ಕಲಿಸುವುದಾದರೆ ಆ ನಷ್ಟ ಭರ್ತಿಮಾಡಲಿಕ್ಕೆ ಈಗ ಸರಕಾರದಿಂದ ದ್ರವ್ಯಾನುಕೂಲ ಸಿಕ್ಕುವ ಸಂದರ್ಭವಿಲ್ಲ. ಇದಲ್ಲದೆ ಬೋರ್ಡಿನವರಿಗೆ ಈ ರಿಯಾಯಿತಿ ದೊರಕಿದರೆ ಸ್ವಾಭಾವಿಕವಾಗಿಯೇ ಖಾಸಗಿ ಶಾಲೆಗಳಿಗೆ ಹೆಚ್ಚಿನ ಬಾಧಕ ಬರುವುದು. ಅವರಿಗೂ ಸರಕಾರದವರು ಸಹಾಯ ಕೈಚಾಚಬೇಕಾಗುವುದು. ಇದೂ ಮತ್ತಷ್ಟು ಅಪಾರವಾದ ಕೆಲಸ. ಹಾಗಿದ್ದರೆ ಫೀಸು ಮಾಫಿಯ ಮಾತು ಈಗ ಎತ್ತಲು ಸಾಧ್ಯವೇ ಇಲ್ಲ.

ಆದರೆ ಈಗಿನ ಪದ್ಧತಿಗೆ ೪ನೆ ದರ್ಜೆ ಮತ್ತು ಮೇಲಿನ ದರ್ಜೆಗಳಿರುವ ಶಾಲೆಗಳಲ್ಲಿ ಕ್ಲಪ್ತ ತಾರೀಕಿಗೆ ಫೀಸು ವಸೂಲಾಗಿ ಖಜಾನೆಗೆ ಸೇರಬೇಕಾದ್ದರಿಂದ ಅನೇಕ ಸಲ ಉಪಾಧ್ಯಾಯರು ತಮ್ಮ ಕೈಯಿಂದ ಆ ಹಣ ಭರ್ತಿಮಾಡಿ, ಮುಂದೆ ಮಕ್ಕಳ ಹೆತ್ತವರಿಂದ ಅದನ್ನು ಪಡಕೊಳ್ಳುವ ಅಸಾಧ್ಯ ಕೆಲಸ ಮಾಡಬೇಕಾಗುತ್ತದೆ. ಆದ ಕಾರಣ ಅನೇಕ ಕಡೆಗಳಲ್ಲಿ ೪ನೆ ದರ್ಜೆ ಶಾಲೆಗಳಿಗೆ ಉತ್ತೇಜನವೇ ಇಲ್ಲ. ೩ನೆ ದರ್ಜೆ ವರೆಗೆ ಮಾತ್ರ ಇರುವಲ್ಲಿ ಫೀಸಿನ ಗೊಡವೆಗೆ ಹೋಗದೆ ಹಲವು ಸಂಖ್ಯೆಯನ್ನು ಹೆಚ್ಚಿಸಿ ಉಪಾಧ್ಯಾಯರ ಸಂಬಳವನ್ನು ಒಳಪಡಿಸಿ ಆ ರೀತಿಯಾಗಿ ಉಪಾಧ್ಯಾಯರು ಒಪ್ಪಿ ಹೊಂದುತ್ತಾರೆ. ಜಿಲ್ಲೆಗಳ ಒಪ್ಪಿಗೊಸ್ಕರ ತಮ್ಮ ಗ್ರಾಮ ಬಿಡದೆ ಫೀಸಿನ ದಂಡ ತೆರುವ ಬವಾಬ್ದಾರಿಯನ್ನು ಹೊತ್ತು ಸಮಾಧಾನ ಚಿತ್ತರಾಗಿ ಹಲವು ಉಪಾಧ್ಯಾಯರಿಗೆ ಕಾರ್ಯಗೌರವ ಕಡಿಮೆಯಾಗುವುದು. ಮಕ್ಕಳ ಅಭಿವೃದ್ಧಿ ಕೆಡುವುದು. ಮೇಲಿನ ಪಟ್ಟಿಯಲ್ಲಿ ೪ನೆ ದರ್ಜೆ ಮತ್ತು ೩ನೆ ದರ್ಜೆ ವರೆಗಿನ ಶಾಲೆಗಳ ಸಂಖ್ಯೆಯನ್ನು ನೋಡಿದರೆ ಇದು ಸ್ಪಷ್ಟವಾಗುವುದು.

ಇದಲ್ಲದೆ ಮಕ್ಕಳಿಗಾದರೂ ಬರೇ ನಾಲ್ಕು ವರ್ಷ ಶಾಲೆಯಲ್ಲಿರುವುದರಿಂದ ಹೆಚ್ಚಿನ ಪ್ರಯೋಜನವೂ ದೊರಕುವುದಿಲ್ಲ. ಯಾವ ಸಮಯದಲ್ಲಿ ಅವರ ಬುದ್ಧಿಶಕ್ತಿಯು ಅರಳುತ್ತದೋ ಆ ಸಮಯದಲ್ಲಿ ಅವರಿಗೆ ವಿದ್ಯೆ ಹೇಳಿಕೊಡುವ ಕ್ಲಾಸುಗಳು ಆ ಗ್ರಾಮದಲ್ಲಿ ಇಲ್ಲದೆ ಬರೆ ನಾಲ್ಕು ವರ್ಷ ಕಲಿತ ವಿದ್ಯೆಯೆಲ್ಲವೂ ಮಾಯವಾಗಿ ಅವರು ಪೂರ್ವದಂತೆ ನಿರಕ್ಷರ ಕುಕ್ಷಿಗಳಾಗುವರು.

ಇದಲ್ಲದೆ ಹಳ್ಳಿಗಳಲ್ಲಿ ಈಗಿನ ಫೀಸಿನ ದರವೂ ಸ್ವಲ್ಪ ಹೆಚ್ಚಾಗಿ ಕಂಡುಬಂದು ಮಕ್ಕಳು ಒಂದೆರಡು ವರ್ಷಗಳಲ್ಲಿಯೇ ಬಿಟ್ಟುಬಿಡುವುದುಂಟು. ಇದಕ್ಕೆ ಈ ಕೆಳಗಿನ ಪಟ್ಟಿಯೇ ಸಾಕ್ಷಿ. ಇದರಲ್ಲಿ ೧೯೧೪ ೧೫ ಬಾಲಕದಿಂದ IVನೆ ವರೆಗೆ ಎಷ್ಟು ಮಕ್ಕಳಿದ್ದರು ಎಂಬುದು ಕಾಣುವುದು.

	ಗಂಡು	ಹೆಣ್ಣು
ಬಾಲಕ	೫,೨೭,೨೨೨	೬೩,೨೩೨
I	೨,೪೭,೮೨೦	೨೨,೯೧೩
II	೧,೮೩,೨೫೭	೧೫,೪೧೪
III	೧,೪೩,೩೪೦	೧೦,೭೨೪
IV	೩೭,೮೨೯	೫,೧೩೭

ಹೀಗಿರುವುದರಿಂದ ಅನೇಕ ಮಕ್ಕಳು ಮೇಲಿನ ದರ್ಜೆಗಳಿಗೆ ಬರಲಾರದೆ ಅಲ್ಲಲ್ಲೆ ಬಿಟ್ಟುಹೋಗುವುದುಂಟು ಎಂತಲೂ, ಹೀಗೆ ಒಂದೆರಡು ಕ್ಲಾಸುಗಳಲ್ಲಿ ಕಲಿತರೆ ಬರೇ "ದಸ್ಕತಿನ ಬರಹ"ವಲ್ಲದೆ ನಿಜವಾದ ಶಿಕ್ಷಣವು ದೊರಕಲಾರದೆಂದೂ ಬೇರೆ ಹೇಳಬೇಕಾದ್ದಿಲ್ಲ.

ಅನೇಕರಿಗೆ ಹಳ್ಳಿಗಳಲ್ಲಿ ಸ್ಲೇಟು ಪುಸ್ತಕಗಳನ್ನು ಕೊಂಡುಕೊಳ್ಳುವ ಶಕ್ತಿಯೂ ಇರುವುದಿಲ್ಲ. ಈಚೆಗೆ ಸರಕಾರದವರು ಇದರ ಬಗ್ಗೆ ಮಾಡಿದ ಸಹಾಯವು ಚಿರಸ್ಮರಣೀಯವೆಂದೇ ಹೇಳಬೇಕು. ಶಾಲೆಗೆ ಹೋಗುವ ಪ್ರಾಯದ ಮಕ್ಕಳಲ್ಲಿ ಇಷ್ಟರ ವರೆಗೆ ಗಂಡಮಕ್ಕಳು ಸೇಕಡಾ ೪೨ರಷ್ಟು, ಹೆಣ್ಣುಮಕ್ಕಳು ಸೇಕಡಾ ೯ರಷ್ಟು ಮಾತ್ರವೆ ವಿದ್ಯೆಯ ಪ್ರಯೋಜನವನ್ನು ಹೊಂದಲು ಯತ್ನಿಸಿದಂತೆ ಕಾಣುತ್ತದೆ. ಇದಕ್ಕಿಂತಲೂ ಹೀನಸ್ಥಿತಿಯ ಹಲವು ಜಿಲ್ಲೆಗಳೂ ಇವೆ. ಮದ್ರಾಸು ಪಟ್ಟಣ ವಿನಹಾ ಇತರ ಜಿಲ್ಲೆಗಳಲ್ಲಿ ಮಲೆಬಾರಿನಲ್ಲಿ ಮಾತ್ರ ಸೇಕಡಾ ೫೯ರಷ್ಟು ಗಂಡುಮಕ್ಕಳೂ ೧೭ರಷ್ಟು ಹೆಣ್ಣುಮಕ್ಕಳೂ ವಿದ್ಯೆ ಹೊಂದುತ್ತಲಿರುವರು. ಈ ಸ್ಥಿತಿಯಲ್ಲಿ ಹೆಣ್ಣುಮಕ್ಕಳಿಗೆ ಕೆಲವು ವರ್ಷಗಳವರೆಗಾದರೂ ಫೀಸನ್ನು ವಸೂಲು ಮಾಡದೆನೆ ಕಲಿಸುವುದು ಲೇಸೆಂದು ತೋರುತ್ತದೆ. ಗಂಡುಮಕ್ಕಳಿಗೆ ೩ನೆ ದರ್ಜೆವರೆಗಿನ ಶಾಲೆ ೪ನೇ ದರ್ಜೆ ವರೆಗಿನ ಶಾಲೆ ಎಂಬ ಭೇದವಿಡದೆ ಏಕಪ್ರಕಾರವಾಗಿ ಬಾಲಕ ೧ನೆ ೨ನೆ ದರ್ಜೆ ವರೆಗೆ ೧ ಆಣೆ ಮೇರೆಗೆ ೩ನೆ ೪ನೆ ದರ್ಜೆ ವರೆಗೆ ೨ ಆಣೆ ವರೆಗೆ, ೪, ೫, ೬ನೆ ದರ್ಜೆಗಳಲ್ಲಿ ೪ ಆಣೆ ಮೇರೆಗೆ ದರವಿಡುವುದು ಯೋಗ್ಯ. ಇಂಗ್ಲೀಷು ಕಲಿಯುವವರು [illegible] ದರಗಳನ್ನು ತೆರುವಂತೆ ಮಾಡಬಹುದು. ಇದರಿಂದ ಹಳ್ಳಿಗಳಲ್ಲಿ [illegible] ದಾದರೂ ಶ್ರೀಮಂತರು [illegible] ಮಕ್ಕಳನ್ನು [illegible]

ಕಣ್ಣು ಹೆಳ್ಳಿಗೆ ದೂರವಾಗಿರುವ ಪಟ್ಟಣಗಳಲ್ಲಿ ಇರಿಸುತ್ತ ಅವರ ಆರೈಕೆ ನೋಡುವ ಕಷ್ಟಸಹಿಸುವುದು ಕಡಿಮೆಯಾಗುವುದು. ಈ ಇಂಗ್ಲಿಷಿನ ಬಗ್ಗೆ ೩ನೆ ೪ನೆ ದರ್ಜೆಗಳಲ್ಲಿ ೪ ಆಣೆ ಮೇರೆಗೆ ೫, ೬, ೭ನೆ ದರ್ಜೆಗಳಲ್ಲಿ ೮ ಆಣೆ ಮೇರೆಗೆ ಫೀಸಿನ ದರವನ್ನು ಇಡಬಹುದು ಕನ್ನಡಕ್ಕೆ ಬೇರೆ ಫೀಸು, ಇಂಗ್ಲಿಷಿನ ಬಗ್ಗೆ ಬೇರೆ ಫೀಸು ತೆರುವ ವಾಡಿಕೆಯು ಕೊಡಗು ಸೀಮೆಯಲ್ಲಿದೆ ಇಂಗ್ಲಿಷು ಬೇಕಿಲ್ಲದವರು ಕನ್ನಡದಿಂದಲೇ ಅಲ್ಲಿ ತೃಪ್ತಿಹೊಂದುತ್ತಾರೆ

(2) 3ನೆ ದರ್ಜೆ ವರೆಗೆ ಇರುವ ಶಾಲೆಗಳಲ್ಲಿ ಫೀಸನ್ನು ಉಪಾಧ್ಯಾಯರಿಗೇನೆ ಬಿಟ್ಟುಕೊಡುವ ಕ್ರಮವು ಯೋಗ್ಯವೋ — ಈ ಭೇದವನ್ನು ಇಟ್ಟ ಕಾರಣ ಉಪಾಧ್ಯಾಯರಲ್ಲಿ ಬಹಳ ಅಸಮಾಧಾನವಿರುವುದನ್ನು ಮೇಲೆ ವಿವರಿಸಿಯದೆ ಆದಕಾರಣ ಆ ಎಲ್ಲಾ ಫೀಸನ್ನು ಹೊಸ ದರಗಳಲ್ಲಿ ಬೋರ್ಡಿನವರಿಗೇನೇ ಸಿಕ್ಕುವಂತೆ ಏರ್ಪಾಡು ಮಾಡುವುದು ಒಳ್ಳೇದು ಈಗ ಮುಖ್ಯವಾಗಿ ಶಹರುಗಳಲ್ಲಿ ಸೆಕೆಂಡರಿ ಶಾಲೆಗಳ ದರಗಳನ್ನು ತಪ್ಪಿಸುವುದಕ್ಕಾಗಿ ನಿಜವಾಗಿಯೂ ಸೆಕೆಂಡರಿ ಶಾಲೆಗಳ ಶಾಖೆಯಾಗಿರುವ ಹಲವು ಎಲಿಮೆಂಟರಿ ಶಾಲೆಗಳಿವೆ ಇವುಗಳಲ್ಲಿ ೩ನೆ ದರ್ಜೆಯಲ್ಲಿ ಮಕ್ಕಳ ಸಂಖ್ಯೆಯೇ ಇಲ, ಅಥವಾ ಇನ್ಸ್ಪೆಕ್ಟಿಂಗ್ ಆಫೀಸರುಗಳ ಕಣ್ಣು ಮರೆಮಾಡುವುದಕ್ಕಾಗಿ ಹೆಸರಿಗೆ ಮಾತ್ರವೇ ಕೆಲವು ಹುಡುಗರು ಇರುವರು ಅವರಲ್ಲಿಯೂ ಕೂಡಾ ೪ನೇ ದರ್ಜೆ ಇಲ್ಲವೇ ಇಲ್ಲ ಇದಕ್ಕೆ ಪ್ರಯತ್ನಪಟ್ಟರೂ ಮಕ್ಕಳ ಸಂಖ್ಯೆ ಇಂಗ್ಲಿಷಿನ ಪ್ರಯೋಜನ ಹೊಂದುವುದಕ್ಕಾಗಿ ಸೆಕೆಂಡರಿ ಶಾಲೆಗೆ ಹೋಗುವುದರಿಂದಲೂ ಬೋರ್ಡ್ ಶಾಲೆಗಳ ಉಪಾಧ್ಯಾಯರು ತಮ್ಮ ಆದಾಯ ಹೋದೀತೆಂದು ೪ನೆ ದರ್ಜೆಗೆ ಉತ್ತೇಜನ ಕೊಡದೆ ಇರುವುದರಿಂದಲೂ ೪ನೆ ದರ್ಜೆ ಕಾಯಂ ಆಗಿ ಇರುವುದಿಲ್ಲ ೩ನೆ ೪ನೆ ದರ್ಜೆಗಳ ಶಾಲೆಗಳೆಂಬ ಭೇದವು ನಿಜವಾಗಿಯೂ ವಿದ್ಯಾಲಾಲಸೆಯಿಲ್ಲದ ಹಳ್ಳಿಪಳ್ಳಿಗಳಲ್ಲಿ ಪ್ರಯತ್ನಪಡುವ ಉಪಾಧ್ಯಾಯರಿಗೆ ಉತ್ತೇಜನಾರ್ಥವಾಗಿ ಏರ್ಪಡಿಸಿತ್ತು ಎಂದು ನಮ್ಮ ಅಭಿಪ್ರಾಯ, ಹೀಗಿರುವುದರಿಂದಲೇ ೩ನೆ ದರ್ಜೆ ವರೆಗಿನ ಶಾಲೆಗಳಲ್ಲಿ ಫೀಸಿನ ದರವು ಕಡಿಮೆ ಮಾಡಿರುವುದಲ್ಲದೆ ಅದನ್ನು ಉಪಾಧ್ಯಾಯರೇ ವಿನಿಯೋಗಿಸಬಹುದೆಂದು ನಿರ್ಣಯಿಸಲಬೇಕು. ಆದರೆ ಈ ನಿರ್ಣಯದಿಂದ ಬಾಧಕವೇ ಅಲ್ಲದೆ ಪ್ರಯೋಜನ ಹೆಚ್ಚಿಗೆ ಕಂಡುಬರುವುದಿಲ್ಲ

(ಮುಂದರಿಯುವುದು)

ಜಾತಿಭೇದದ ವಿರೋಧಿಗಳು.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಈಗ ವಿಶ್ವಾಮಿತ್ರ, ಕೃಷ್ಣದ್ವೈಪಾಯನ ಮುಂತಾದವರ ಸ್ಥಿತ್ಯಂತರವು ತಮ್ಮ ಮತಕ್ಕೆ ಅನುಕೂಲವೆಂದು ಗುಣಕರ್ಮವಾದಿಗಳಿಗೆ ಒಂದುವೇಳೆ ತೋರಬಹುದು ಆದರೆ ಆಯಾ ಋಷಿಗಳ ಜನ್ಮದ ಕುರಿತು ಯಾವ ಚರಿತ್ರೆಯಲ್ಲಿ ಹೇಳಿರುವುದೋ ಅದೇ ಚರಿತ್ರೆಯಲ್ಲಿ ಅವರ ತಪೋಬಲ, ಜ್ಞಾನಸಾಮರ್ಥ್ಯ, ಅಲೌಕಿಕ ಕೃತ್ಯ ಇವೂ ವರ್ಣಿಸಲ್ಪಟ್ಟಿವೆ ಹೀಗಿರುವಾಗ ಜನ್ಮದ ಸಂಗತಿಯನ್ನು ಪ್ರಮಾಣತ್ವೇನ ಅಂಗೀಕರಿಸಿ ಅಲೌಕಿಕ ಕೃತ್ಯಗಳನ್ನು ಪ್ರಮಾಣೀಕರಿಸದೆ ಇರುವುದು ಅರ್ಧ ಜರತೀಯವಾಗಿರುವುದರಿಂದ ಈ ವಿತಂಡವಾದವು ಅನಾದರಣೀಯವೇ ಸರಿ ತಪೋಬಲ, ತ್ರಿಕಾಲಜ್ಞಾನ ಸಾಮರ್ಥ್ಯ, ಅಲೌಕಿಕ ಕೃತ್ಯ,—ಈ ಸಾಧನ ಸಂಪತ್ತುಗಳಿಂದ ಉಚ್ಚತ್ವ ಪಡೆಯುವ ಅಭಿಲಾಷೆಯು ಈಗ ಎಲ್ಲಿಯೂ ಕಂಡುಬರುವುದಿಲ್ಲ ವಾದವಿವಾದ, ಬಲಾತ್ಕಾರ, ಅಧಿಕಾರ ಇವೇ ತತ್ಸ್ಥಾನೀಯವಾಗಿವೆ. ಆದರೆ ಇವುಗಳಿಂದ ನಿಜವಾದ ಪಾತ್ರತೆಯು ಬಂದೀತೇ ಎಂಬೀ ಪ್ರಶ್ನೆಗೆ ಭವಿಷ್ಯತ್ಕಾಲವೇ ಉತ್ತರಿಸಿದರೆ ಅದು ಯಥಾರ್ಥವಾದೀತಲ್ಲದೆ ನಮ್ಮಂತಹರ ಅನುಮಿತಿಯು ಈ ವಿಷಯದಲ್ಲಿ ಪಂಗುವಾಗಿರುವುದು! ಅಸ್ತು ಈ ಎಲ್ಲ ಉಪಪಾದನೆಯಿಂದ ಆಕ್ಷೇಪಕರ ೩ನೇ ಪ್ರಶ್ನೆಯು ದತ್ತೋತ್ತರವಾಗಿದೆಂದು ತಿಳಿಯಬಹುದು. ಆಕ್ಷೇಪಕರ ಮೂರನೇ ಪ್ರಶ್ನೆಗೂ ಐದನೇ ಪ್ರಶ್ನೆಗೂ ಪ್ರಮೇಯದೃಷ್ಟಿಯಿಂದ ವಿಶೇಷವೇನೂ ಹೆಚ್ಚುಕಡಿಮೆಯಿಲ್ಲ ಎಂದರೆ ೩ನೇದರಲ್ಲಿದ್ದ ಸಂಗತಿಯೇ ೫ನೇದರಲ್ಲಿಯೂ ಇದೆ. ಹೀಗಿರಲು ೫ನೇ ಪ್ರಶ್ನೆಯನ್ನು ಉತ್ಥಾಪಿಸುವುದು ಲೇಖಕರಿಗೆ ಅಗತ್ಯವೇನಿತ್ತೆಂದು ಗೊತ್ತಾಗದು! "ಸ್ವರಾಜ್ಯದ ವಿರೋಧಿಗಳು" ಎಂಬ ಲೇಖವನ್ನು ಬರೆದವರ ಅಥವಾ ಅವರು ಜಾತಿಯ ಗೋತ್ರಗಳ ಮೂಲಪುರುಷರೆಂಥದ ಋಷಿಗಳು ಅತಿ ನೀಚ ಎಂದರೆ ಅತಿ ಪಂಚಮರಿದ್ದರೆಂದು "ಭಾರತೀಯನ" ಈ ೫ನೇ ಪ್ರಶ್ನೆಗೆ ಉತ್ತರ ಕೊಟ್ಟಲ್ಲಿ ಒಂದುವೇಳೆ ಆ "ಭಾರತೀಯನಿಗೆ" ಮನಸ್ಸಿನಲ್ಲಿ ತೃಪ್ತಿ ಅಥವಾ ಆತ್ಮಾನಂದವುಂಟಾಗುತ್ತಿತ್ತೋ ಏನೋ. ಆದರೆ ಈ [illegible] ತನ್ನ [illegible] ಮೂಲಪುರುಷರ ಜಾತಿಯನ್ನು ನೋಡಿದರೂ ಅವ ನಿಗುಂಟಾಗುವ [illegible] ಹಾಗಿದೆ. ಇದಕ್ಕಾಗಿ ಸ್ವರಾಜ್ಯದ ಲೇಖಕರ ತನಕ ಹೋಗಬೇಕಾಗಿದ್ದಿಲ್ಲ. ಆದುದರಿಂದ ಅದನ್ನು ಮೊದಲು ನಿರೀಕ್ಷಿಸಲಿ!

ಈ ಮೇರೆಗೆ ಆಕ್ಷೇಪ ಪಂಚಕದಲ್ಲಿ ೧, ೩, ೫ ಈ ವಿಷಮ ಪ್ರಶ್ನೆಗಳಿಗೆ ಉತ್ತರ ಕೊಟ್ಟಲ್ಲಿ ೨, ೪ ಈ ಪ್ರಶ್ನೆಗಳು ಉಳಿಯುವವು. ಇವುಗಳ ವಿಚಾರಮಾಡುವಾಗ ವೇದ, ಸ್ಮೃತಿ, ಪುರಾಣ, ಧರ್ಮಶಾಸ್ತ್ರ ಇವೇನೂ ಅವಶ್ಯವಿಲ್ಲ. ಈ ಎರಡೂ ಪ್ರಶ್ನೆಗಳ ಸ್ವರೂಪವನ್ನು ಒಂದೇ ವಾಕ್ಯದಲ್ಲಿ ಹೇಳಬಹುದೇನೆಂದರೆ ಸ್ವರಾಜ್ಯದಂತಹ ರಾಜಕೀಯ ಉತ್ಕರ್ಷಕ್ಕೂ ಜಾತಿಭೇದದಂತಹ ಸಾಮಾಜಿಕ ವಿಷಯಕ್ಕೂ ಕಾರ್ಯ ಕಾರಣಭಾವವಿದ್ದುದರಿಂದ ಜಾತಿಭೇದಗಳನ್ನು ಮುರಿಯಬೇಕು. ಈ ಅಂಶವನ್ನು ತೋರಿಸಲು ಆ ಎರಡು ಪ್ರಶ್ನೆಗಳಲ್ಲಿ ಆಕ್ಷೇಪಕರು ಪ್ರಯತ್ನಿಸಿರುವರು. ಆದರೆ ಇದೇ ಆಕ್ಷೇಪಕರಿಗೆ ಗೊತ್ತಾಗದ ಹಾಗೆ ಅವರು ನಮ್ಮ ಮೊದಲಿನ ಲೇಖದಲ್ಲಿ ತೋರಿಸಿರುವ ಮತವನ್ನೇ ಅನುವಾದಿಸಿರುತ್ತಾರೆ! "ಸರ್ವ ಜನರು ಸಾಯುತ್ತಾರಾದರೂ ಮರಣಕ್ಕೆ ಕಾರಣಗಳು ಹೇಗೆ ವಿವಿಧವಿರುತ್ತವೋ ಹಾಗೆಯೇ ಬ್ರಹ್ಮದೇಶದಲ್ಲಿಯೂ, ಆಯರ್ಲೆಂಡ್ ಮೊದಲಾದ ದೇಶಗಳಲ್ಲಿಯೂ ಜಾತಿಭೇದವಿಲ್ಲದಿದ್ದರೂ ಆ ದೇಶಗಳಲ್ಲಿ ಸ್ವರಾಜ್ಯ ನಷ್ಟವಾಗಲಿಕ್ಕೆ ಬೇರೆ ಕಾರಣಗಳು ಏಕೆ ಇರಕೂಡದು?" ಯಾರು ಇರಕೂಡದೆಂತ ಹೇಳಿದ್ದಾರೆ? ಸಾಮಾಜಿಕ ಸುಧಾರಣೆಯೇ ರಾಷ್ಟ್ರೋನ್ನತಿಗೆ ಕಾರಣ, ಜಾತಿಭೇದವೇ ರಾಷ್ಟ್ರ ಘಾತಕವೆಂತ ಹೇಳುವವರು ತಾವಲ್ಲವೇ? ಹೀಗಿದ್ದು ಈಗ ತಾವು ಈ ಪ್ರಕಾರ ಕೇಳುವುದೇಕೆ? ನಾವಂತು ಸ್ವರಾಜ್ಯಪ್ರಾಪ್ತಿಗೆ ಜಾತಿಭೇದವು ಕಾರಣವಲ್ಲ. ಅದಕ್ಕೆ ಕಾರಣವೇ ಬೇರೆ ಎಂದು ಅದೇ ಲೇಖದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಅದನ್ನೇ ಆಕ್ಷೇಪಿಗಳಾದ ತಾವು ಈ ರೂಪದಿಂದ ಒಪ್ಪಿಕೊಂಡಿರಿ ಇದು ಬಹು ಸಂತೋಷದ ಮಾತು ಆದುದರಿಂದ ನೀವು ಕೂಡ ನಮ್ಮಂತೆಯೇ ಸ್ವರಾಜ್ಯ ಪ್ರಾಪ್ತಿಗೆ ಜಾತಿಭೇದಗಳು ವಿಘಾತಕವಲ್ಲ, ಅವುಗಳನ್ನು ನಿವರ್ತಿಸಲೂ ಕಾರಣವಿಲ್ಲೆಂತಲೇ ಒಪ್ಪಿಕೊಂಡಂತಾಯಿತು. ಹೀಗಿರಲು ಎಂದರೆ ಅವುಗಳಲ್ಲಿ ವಾಸ್ತವವಾದ ಕಾರ್ಯಕಾರಣತ್ವವೇ ಇಲ್ಲಾಗಲು "ಜಾತಿಭೇದಗಳು ಉಂಟಾದಂದಿನಿಂದ ನಮ್ಮ ಹಿಂದೀ ದೇಶವು ಕೆಳಕೆಳಗೆ ಹೋಗುತ್ತದೆ"ಂದು ಭಾವಿಸುವುದು ಮೇಲಿನ ಒಪ್ಪಿಗೆಗೆ ವಿರೋಧವಾಗುವುದು. ಬ್ರಹ್ಮದೇಶದಲ್ಲಿ ಜಾತಿಭೇದವಲ್ಲದ ಬೇರೆ ಕಾರಣದಿಂದ ಹೇಗೆ ಸ್ವಾತಂತ್ರ್ಯವು ನಷ್ಟವಾಯಿತೋ ಹಾಗೆಯೇ ಇಲ್ಲಿಯೂ ಕೂಡ ಜಾತಿಭೇದವಲ್ಲದ ಬೇರೆ ಕಾರಣದಿಂದ ನಮ್ಮ ದೇಶವು "ಅಧೋಗತಿಗೆ ಇಳಿ"ದಿರಬಹುದು

೧ನೇ ಪ್ರಶ್ನೆಯಲ್ಲಿ "ಭಾರತೀಯನು" ಮತಭೇದಕ್ಕೂ ಜಾತಿಭೇದಕ್ಕೂ ತುಲನೆ ಮಾಡಿ "ಸ್ವರಾಜ್ಯದ ಪ್ರಾಪ್ತಿ ಮಟ್ಟಿಗೆ ಅಥವಾ ಜನಾಂಗದ ಏಕಮತದ ಮಟ್ಟಿಗೆ" ಮತಭೇದವಾದರೂ ಆದೀತು, ಆದರೆ ಜಾತಿಭೇದವು ಬೇಡ ಎಂದು ಅಭಿಪ್ರಾಯಪಡುತ್ತಿದ್ದಾನೆ ಆದರೆ ಇದು ಕೇವಲ ಅಜ್ಞಾನ ಮಾತೆಂದು ನಾವು ಖಂಡಿತವಾಗಿ ಹೇಳುತ್ತೇವೆ ಜನಾಂಗದ ಏಕಮತವಾಗಬೇಕಂತೆ, ಆದರೆ ಮತಭೇದವಿರಬಹುದಂತೆ. ಈ ಪರಸ್ಪರ ವಿರುದ್ಧ ವಿಧಾನಗಳ ಅರ್ಥವೇನು? ಮತಭೇದವಿದ್ದು ಏಕಮತವಾಗುವದೆಂದರೇನು? ನಮ್ಮ ಮತದಂತೆ ಜಾತಿಭೇದವಿದ್ದು ಏಕಮತವಾಗಬಹುದು; ಆದರೆ ಮತಭೇದವಿದ್ದು ಏಕಮತವಾಗುವುದೆಂದರೆ "ವದತೋ ಮೇ ಜಿಹ್ವಾನಾಸ್ತಿ" ಎಂಬ ಮಾತಿನಂತೆಯೇ ವಿರುದ್ಧವಾದುದು. ಕಾಂಗ್ರೇಸಿನಲ್ಲಿ ಬೇರೆಬೇರೆ ಜಾತಿಯವರು ಮಾತ್ರವಲ್ಲ, ವಿಧರ್ಮಿಯರು ಕೂಡ ಏಕತ್ರ ನೆರೆದು ರಾಷ್ಟ್ರಕಾರ್ಯ ಮಾಡುತ್ತಿದ್ದರಲ್ಲವೇ? ಅದರಲ್ಲಿ ಜಾತಿಭೇದ ಮೂಲಕ ಯಾವ ತೊಡಕೂ ಉಂಟಾಗಿದ್ದಿಲ್ಲ. ಆದರೆ ಅದೇ ಮತಭೇದವು ಪ್ರಾರಂಭಿಸಿತು ಕೂಡಲೇ ಬೇರೆ ಬೇರೆ ಮತಗಳಾದವು; ನಾಚಿಕರೇ, ಮತಭೇದದ ಮಹಾತ್ಮ್ಯವನ್ನು ನೋಡಿರಿ ಜಾತಿಭೇದ ಮತ್ತು ಮತಭೇದ ಇವುಗಳ ನ್ಯೂನಾಧಿಕ್ಯವನ್ನು ಪರೀಕ್ಷಿಸಲು ರಾಷ್ಟ್ರೀಯ ಸಭೆಯ ಉದಾಹರಣೆಯೆ ಬೇಕೆಂತಿಲ್ಲ. ಒಂದೇ ಜಾತಿಯಲ್ಲಿ, ಅಲ್ಲ; ಒಂದೇ ಕುಟುಂಬದಲ್ಲಿ, ಒಂದೇ ತಾಯಿಯ ಉದರದಲ್ಲಿ ಹುಟ್ಟಿದ ಅಣ್ಣತಮ್ಮಂದಿರು ಬರೇ ಮತಭೇದವೆಂಬ ಪಿಶಾಚಿಕೆಯ ಬಾಧೆಗೆ ಒಳಗಾದವರಾಗಿ ಯಾವಯಾವ ಅನರ್ಥಗಳನ್ನು ಮಾಡಿಕೊಳ್ಳುವರು! ಇದು [illegible] ತಿಳಿಯುವಷ್ಟು ಅನ್ಯರಿಗೆ ತಿಳಿಯದು. ಇಂತಹ ಅನೇಕ ಉದಾಹರಣೆಗಳನ್ನು ತೋರಿಸಬಹುದು. ಇರಲಿ ನಾವು ಇನ್ನೊಮ್ಮೆ ವಿಧಾನಮಾಡುವುದೇನೆಂದರೆ ಸ್ವರಾಜ್ಯದ ಪ್ರಾಪ್ತಿ ಮಟ್ಟಿಗಾಗಲಿ ಜನಾಂಗದ ಏಕಮತದ ಮಟ್ಟಿಗಾಗಲಿ [illegible] ಮತಭೇದವು ಸರ್ವಥಾ ಬೇಡ

ಅಸ್ತು ಈ ಉತ್ತರಾತ್ಮಕ ಲೇಖವು ಸ್ವಲ್ಪ ದೊಡ್ಡದಾಯಿತು. [illegible] ಸಂಚಾರದಲ್ಲಿ ನಮಗೆ ಒಂದೆರಡು [illegible] ಜಾತಿಯೆಂದು ಹೇಳುವ [illegible]

ಹೇಗೆ ಇದ್ದಾರೋ ಹಾಗೆಯೆ ಅದು ಸಕಾರಣವಾದುದು, ಭ್ರಾಂತಿಜನ್ಯವಲ್ಲವೆಂದು ಹೇಳುವ ಶ್ರೀ ಶ್ರೀಧರಪಂತ ಕೇತಕರ ಪಿ. ಎಚ್ ಡಿ. ಪ್ರಭೃತಿ ಅನೇಕ ವಿದ್ಯಾವಂತರು ಇದ್ದಾರೆ. ಅವರು ತಮ್ಮ ಗ್ರಂಥದಲ್ಲಿ ಇತಿಹಾಸ ಮತ್ತು ನ್ಯಾಯೋಪಪನ್ನವಾದ ಯುಕ್ತಿ ಇವುಗಳ ಮೂಲಕ ಜಾತಿಭೇದವನ್ನು ಸೋಪಪತ್ತಿಕವಾಗಿ ವಿವರಿಸಿರುವರು ಅದನ್ನು ಸಾಮಾಜಿಕ ಪ್ರಗತಿ ಪ್ರಿಯರೆಲ್ಲರೂ ನೋಡಬಹುದು. ಭಾಂಡಾರಕರರ ಪಕ್ಷವನ್ನು ಅನುವಾದಿಸಿದ್ದಲ್ಲಿ ಅದರ ಉತ್ತರ ಪಕ್ಷವನ್ನು ವಾಚಕರೆದುರಿನಲ್ಲಿಡುವುದು ನಮ್ಮ ಕರ್ತವ್ಯವೆಂದೆಣಿಸಿ ಈ ಆಕ್ಷೇಪ ಪಂಚಕಕ್ಕೆ ಉತ್ತರಕೊಟ್ಟಿರುತ್ತೇವೆ ಈ ಉತ್ತರದ ಮೇಲಿಂದ ನಮ್ಮ ಲೇಖಣಿಯು ಸಮಾಜ ಸುಧಾರಣೆಗೆ ವಿರೋಧಿಯಾಗಿದೆಂದು "ಭಾರತೀಯನು" ಕಿಂಬಹುನಾ ಅನೇಕರು ತಿಳಿಯಬಹುದು. ಆದರೆ ನಾವು ವಿಹಿತವಾದ ಸಾಮಾಜಿಕ ಸುಧಾರಣೆಗಳಿಗೆ ವಿರೋಧಿಗಳಲ್ಲ ಸುಧಾರಣೆಗಳು ತತ್ವತಃ ಅವಶ್ಯವೇ ಆದರೆ ಆಧುನಿಕ ಸುಧಾರಕರು ಪೂರ್ವ ಪರಂಪರೆಯಿಂದಲೂ ಕೂಡ ಅಂಗೀಕರಿಸಿರುವ ಸಾಧನೆಗಳು ಮಾತ್ರ ಬಹುಜನ ಸಮಾಜಕ್ಕೆ ಇನ್ನೂ ಮಾನ್ಯವಾಗಲಿಲ್ಲ ಇದೇ ಅವರ ಮಾರ್ಗದಲ್ಲಿ ಒಂದು ತೊಡಕು. ಇಡೀ ಸಮಾಜದ ಸುಧಾರಣೆಗಾಗಿ ಯತ್ನಿಸುವ ಸುಧಾರಕರು ಆ ಸಮಾಜದಿಂದ ಬಹಿಷ್ಕೃತರಾಗುವುದು ಯಾವದರ ಪರಿಣಾಮವೆಂದು ನೋಡಿದರೆ ಅವರ ಸುಧಾರಣಾ—ತತ್ವಗಳದ್ದಲ್ಲ, ಆದರೆ ಅವರು ಅಂಗೀಕರಿಸಿರುವ ಸಾಧನೆಗಳದ್ದೇ ಎಂದು ಹೇಳಬೇಕಾಗುತ್ತದೆ ಅತಿ ಘೋರವಾದ ಸುಧಾರಣೆಗಳನ್ನು ಒಮ್ಮಿಗಲೇ ಸಾಧಿಸುವುದು ನಾಲ್ಕು ಜನ ಸುಶಿಕ್ಷಿತರಿಗೆ ಮಾನ್ಯವಾದರೂ ಅಜ್ಞವಾದ ಬಹುಜನ ಸಮಾಜಕ್ಕೆ ಅಪ್ರಿಯವಾಗುವದರಿಂದ ಮೆಲ್ಲಮೆಲ್ಲನೆ ಸುಧಾರಣಾ ಮಾರ್ಗದಲ್ಲಿ ತಮ್ಮೊಟ್ಟಿಗೆ ಆ ಬಹುಜನ ಸಮಾಜವನ್ನು ಕೊಂಡುಹೋಗುವ ಸಂಪ್ರದಾಯವನ್ನಿಟ್ಟಿದಾದರೆ ಇಷ್ಟರೊಳಗೆ ಇವರ ಅನೇಕ ಮಾನ್ಯವಾದ ಸುಧಾರಣೆಗಳು ಸಫಲವಾಗುತ್ತಿದ್ದವು. ದೇಶದ ದುರ್ದೈವದಿಂದಲೋ ಏನೋ ಈ ಕಾರ್ಯದಲ್ಲಿ ಬಹುಜನ ಸಮಾಜದ ಸಾಹಾಯ್ಯವು ಬೇಕಾದ್ದು ಕಂಡುಬರುವುದಿಲ್ಲ ಆದರೆ ಇದು ದೂರದರ್ಶಿತ್ವವೆಂದು ನಾವು ತಿಳಿಯುವುದಿಲ್ಲ ಇರಲಿ. ಉತ್ತರವು ಬಹು ವಿಸ್ತೃತವಾಯಿತು. ಈ ಉತ್ತರಾತ್ಮಕ ಲೇಖದಲ್ಲಿ ಪ್ರಸಂಗವಶಾತ್ ಉಲ್ಲೇಖಿಸಲ್ಪಟ್ಟ ತೀವ್ರವಾದ ವಿಚಾರಸರಣಿಗಾಗಲಿ, ಶಬ್ದಗಳಿಗಾಗಲಿ ಹಾಗೆಯೆ ಸಾಮಾಜಿಕರಿಗೆ ಬಹು ಕಟುವಾಗಿ ತೋರುವಂತಹದಾದರೂ ನಮ್ಮ ಮಟ್ಟಿಗೆ ಪ್ರಾಮಾಣಿಕವಾಗಿ ಮಾಡಿರುವ ಈ ಕರ್ತವ್ಯಕ್ಕಾಗಲಿ "ಭಾರತೀಯ" ಪ್ರಭೃತಿಯರು ನಮ್ಮ ಮೇಲೆ ರೋಷವನ್ನು ತಾಳಲಿಕ್ಕಿಲ್ಲೆಂದು "ಮತಭೇದವಿದ್ದರೂ ಬಾಧಕವಿಲ್ಲ"ಎಂಬ ಅವರ ಸೂತ್ರದ ಆಧಾರದಿಂದಲೇ ಭರವಸೆಪಟ್ಟು ಈ ಲೇಖವನ್ನು ಸದ್ಯಃ ಇಲ್ಲಿಯೇ ಮುಗಿಸುತ್ತೇವೆ

ಜ್ಞಾನದ ಮಿರಾಯಿ.

(೬ನೇ ಪೊಟ್ಟಣ)

ಶಿವರಾತ್ರಿಯ ಕಲ್ಲುಗಳು!

ವಾಚಕರೇ! ಶಾನೆ ದಿವಸಗಳಾದವು, ನಮ್ಮ ಮಿರಾಯಿಯ ಪೊಟ್ಟಣವನ್ನು ಕಳುಹಿಸಿ ಅಲ್ಲವೆ? ಸಕ್ಕರೆಯನ್ನು ಪಾಕಕ್ಕಿಡೋಣ ಎಂತ ಎರಡು ಮೂರು ಸಾರೆ ಆಲೋಚಿಸಿ ಪೇಟೆಯನ್ನೆಲ್ಲ ಸುತ್ತಿದ್ದಾಯಿತು ಸಕ್ಕರೆಗೆ ಕ್ರಯವೇ ಹೆಚ್ಚಾಗಿದೆ ಏಕೆ? ಯುದ್ಧ! ಆಗ ನಮಗೊಂದು ವಿಧದ ಸಮಾಧಿಯೇ ಪ್ರಾಪ್ತವಾಯಿತು! ಪರದೇಶದ ಅಶುದ್ಧವಾದ ಸಕ್ಕರೆಯನ್ನು ತಿಂದು ದೇಹವನ್ನು ಅಪವಿತ್ರವಾದರೂ ಮಾಡಿಕೊಳ್ಳಬಹುದು, ಆದರೆ ಇಲ್ಲಿ ಸಾಕಷ್ಟು ಕಬ್ಬು ಬೆಳೆಯುವಾಗ ಅದನ್ನೇ ಇನ್ನು ಹೆಚ್ಚು ಸಾಗುಮಾಡಿ ಇಲ್ಲಿಂದಿಲ್ಲಿಯೇ ಸಕ್ಕರೆಯನ್ನು ತಯಾರಿಸುವಂತ ನಮಗೊಮ್ಮೆಯಾದರೂ ತೋರಿದ್ದುಂಟೇ? ಹಾಂ! ಈ ತರದ ಆಲೋಚನೆಗಳನ್ನು ಮಾಡುತ್ತ ಕೂತರೆ ಮತ್ತೆ ಆ ಆಲೋಚನೆಗಳಂತೆಯೇ ಅದರ ಕಾರಖಾನೆಗಳನ್ನಿಡಬೇಕಾಯಿತಲ್ಲ! ಸಕ್ಕರೆಯ ಕಾರಖಾನೆಯನ್ನಿಟ್ಟರೆ ಜಟಕ, ಮೋಟಾರಕಾರು ಇವುಗಳನ್ನು ಯಾರ್ಕೈಯ್ಯಾ ನಡಿಸುವುದು? ಜನರುಗಳಿಗೆ ಪ್ರವಾಸದ ಕಷ್ಟವೆಷ್ಟು? ನಾವು ಬಯಸುವುದು, ಇನ್ನೂ ನೂರಾರು ಮಾರ್ಗಗಳಾಗಬೇಕು; ಮತ್ತು ನಾವು ನಮ್ಮ ವಾಹನಗಳನ್ನು ಓಡಿಸಬೇಕು ಈ ಸಕ್ಕರೆ ಕಾರಖಾನೆ! ಪರದೇಶದ-ಸಕ್ಕರೆಯಲ್ಲಿ ಬಿಳುಪು, ಹೊಳಪು ಮುಂತಾದ ಎಷ್ಟೋ ಗುಣಗಳಿರುವಾಗ ನಿಮ್ಮ ಅಶುದ್ಧತೆಯನ್ನು ಯಾರು ಗಣ್ಯಮಾಡುವರು? ಈಗಿನ ಕಾಲದಲ್ಲಿ ಶುದ್ಧತೆ ಏನು, ಅಶುದ್ಧತೆ ಏನು! ಅವೆಲ್ಲ ಮೂಢಕಲ್ಪನೆ! ಆಯಿತು. ಶುದ್ಧತೆಯ ಪ್ರಸ್ತಾಪವು ಬೇಡ. ಕ್ರಯದ ಸಂಗತಿಯನ್ನಾದರೂ ಆಲೋಚಿಸಿ ಇಲ್ಲಿಯೇ ಅದನ್ನು ತಯಾರಿಸುವಂತೆ ಯೋಚಿಸಬಹುದೇ?—ಕ್ರಯವು ಹೆಚ್ಚಾಗಿದ್ದರೆ ಅವಶ್ಯವಿದ್ದರೆ ತಕೊಳ್ಳಬೇಕು. ಯಾರ ಚಿಂತ್ಯಾಯುವಿದೆ? ಹೀಗೆ ಅಂಗಡಿಗಾರರಾಗಲಿ, ಐಶ್ವರ್ಯವಂತರಾಗಲಿ ಹೇಳುವಾಗ ನಮಗೆ ಇನ್ನೊಂದು ಗತಿಯಿಲ್ಲಾದರೆ ಅದನ್ನೇ ತಕೊಳ್ಳಬೇಕಲ್ಲವೇ? ಆದರೂ ಹಾಸಿಗೆ ಇದ್ದಷ್ಟು ಕಾಲುಗಳನ್ನು ನೀಡಬೇಕಂತೆ. ಆದ್ದರಿಂದ ಈ ಯುದ್ಧ ಸಮಯದಲ್ಲಿ ಆಗಾಗ್ಗೆ ಆ ಹೆಚ್ಚಿನ ಕ್ರಯದ ಸಕ್ಕರೆಯನ್ನು ತಕೊಂಡು ಮಿರಾಯಿ ಮಾಡಿ ಕೊಡುವುದು ನಮಗೆ ಸ್ವಲ್ಪ ತೊಂದರೆಯ ಸಂಗತಿಯೇ ಸರಿ.

ಪಟ್ಟಣದ ಐಶ್ವರ್ಯವಂತರು ತಮ್ಮ ಹಣವನ್ನು ವಾಹನದಂತಹ ಬೇರೆ ಕೆಲಸದಲ್ಲಿ ಹಾಕುವುದು ಅವರಿಗೊಂದು ವಿನೋದವೆಂತ ಹೇಳುವ ಆದರೆ ಹಳ್ಳಿಯ ಧನಿಕರಾದವರೂ ಈ ಸಕ್ಕರೆಯ ಕಾರಖಾನೆಯ ವಿಷಯದಲ್ಲಿ ಮನಸ್ಸನ್ನು ಕೊಡುವರೇ? ಹಳ್ಳಿಯ ವಿಷಯ ಬಂದ ಕೂಡಲೆ ಒಂದು ಸಂಗತಿಯು ಆಲೋಚನೆಗೆ ಬರುವುದು. ಹಳ್ಳಿಯವರಿಗೆ ಸಕ್ಕರೆಯೇ ಹೆಚ್ಚು ಅವಶ್ಯವಿಲ್ಲೆಂತ ಕಾಣುತ್ತದೆ ಅವರ ಕಾಫಿ, ಅವರ ಹೋಳಿಗೆ, ಅವರ ಕಜ್ಜಾಯ ಇವೆಲ್ಲ,—ಬೆಲ್ಲದಿಂದಲೇ ಸಾಂಗವಾಗುವಾಗ ಅವರಿಗೆ ಸಕ್ಕರೆಯ ಆಕ್ಕರತೆಯೇಕೆ? ಈ ನಮ್ಮ ನಾಗರಿಕತಾ ದೇವಿಯ ಪ್ರವೇಶವು ಅವರಲ್ಲಿ ಇನ್ನೂ ಆಗಲಿಲ್ಲ ಆದುದರಿಂದ ಅವರು ನೀರುಬೆಲ್ಲ, ಮುದ್ದೆಬೆಲ್ಲ, ಅಚ್ಚುಬೆಲ್ಲ,—ಈ ಬಗೆಯಿಂದ ಒಂದೇ ಬೆಲ್ಲವನ್ನು ಬೇರೆ ಬೇರೆ ಹೆಸರುಗಳನ್ನು ಕೊಟ್ಟು ಉಪಯೋಗಿಸುತ್ತಿದ್ದಾರೆ ಇದು ಒಂದು ದೃಷ್ಟಿಯಿಂದ ಉತ್ತಮವೇ ಸರಿ ನಾಗರಿಕತೆಯ ಅಟ್ಟಹಾಸದಿಂದ ನಾವೆಲ್ಲ ಪಟ್ಟಣಿಗರು ಪರದ್ವೀಪಸ್ಥ ವ್ಯಾಪಾರಿಗಳ ದಲಾಲರಾಗಿರುವಂತೆ ನಮ್ಮ ಹಳ್ಳಿಯವರೂ ಹಾಗೆಯೆ ಆದರೆ ಮತ್ತೇನು ಗೋಳವೋ ಸರಿ! ಈ ಸಂಗತಿಗಳನ್ನಾಲೋಚಿಸಿದರೆ ಹಳ್ಳಿಯವರು ಎಷ್ಟೋ ಭಾಗ್ಯವಂತರೇ ಸರಿ ಆದರೂ ನಾವು ಈ ಮಿರಾಯಿಯನ್ನು ಹಂಚುವ ಒಂದು ವ್ರತವನ್ನು ಕೈಕೊಂಡಿರುವುದರಿಂದ ನಮಗೆ ಸಕ್ಕರೆಯನ್ನು ಪೇಟೆಯಲ್ಲಿ ಹುಡುಕಬೇಕಾಯಿತು ಅದಕ್ಕೆ ಕ್ರಯವು ವಿಪರೀತವಾದುದನ್ನು ನೋಡಿ ನಮ್ಮ ಕಾಲಿನ ಪಿತ್ತವು ತಲೆಗೇರಿತು! ಪಟ್ಟಣಿಗರಂತ ಸಕ್ಕರೆಯ ಕಾರಖಾನೆ ವಿಷಯದಲ್ಲಿ ಮನಸ್ಸು ಮಾಡುವುದಿಲ್ಲ ಹಳ್ಳಿಯ ಧನಿಕರಾದರೂ ಕೊಂಚ ಚಿತ್ತವಿಡುವರೇ ಎಂದು ಅವರ ಮನೆಗೆ ಹೋಗಿ ನೋಡಿದರೆ ಅವರಿಗೆ ಇದರ ಸುದ್ಧಿಯೇ ಇಲ್ಲ ಆದರೆ ಹಳ್ಳಿಯ ಧನಿಕರೇ! ನೀವು ಸಕ್ಕರೆಯನ್ನು ಅಷ್ಟೊಂದು ಉಪಯೋಗಿಸದಿದ್ದರೂ ಅದನ್ನು ಇಲ್ಲಿಯೇ ತಯಾರಿಸುವಂತೆ ಮಾಡಿದರೆ ಅದರಿಂದ ಪಟ್ಟಣಿಗರಿಗೊಂದು ದೊಡ್ಡ ಪ್ರಯೋಜನವುಂಟಾಗುವದು ನಿಮಗೆ ಸಕ್ಕರೆ ಬೇಡ, ಆದರೆ ನಂಬರದ ಉದ್ದಿಶ್ಯ ಪಟ್ಟಣದ ವಕೀಲರು ಬೇಕಲ್ಲವೇ? ಮಕ್ಕಳ ವಿದ್ಯೆಗಾಗಿ ಪಟ್ಟಣದ ಉಪಾಧ್ಯಾಯರು ಬೇಕಲ್ಲವೇ? ಆಸ್ತಿಯ ರಕ್ಷಣೆಗಾಗಿ ಪಟ್ಟಣದ ಅಧಿಕಾರಿಗಳು ಬೇಕಲ್ಲವೇ? ಆಹುದು ಹಾಗಾದರೆ ಈ ಎಲ್ಲರಿಗೆ ಕಾಫಿಯಲ್ಲಿ ಸಕ್ಕರೆಯು ಬೇಕೇ ಬೇಕು! ಅಂತಹ ಸಕ್ಕರೆಯ ಕಾರಖಾನೆಯನ್ನು ನೀವು ಮಾಡಿದ್ದಾದರೆ ನಿಮಗೆ ಬೇಡಾದರೂ ನಿಮಗೆ ಬೇಕಾದವರಿಗೆ ಉಪಯೋಗವಾದೀತು.

ಸಕ್ಕರೆಯ ಕಾರಖಾನೆಯನ್ನು ಹೊರಡಿಸುವದೇ ಅವಕಾಶ ಮತ್ತೆ ಆ ಸಕ್ಕರೆಗೆ ನೀವೇ ಗ್ರಾಹಕರಾಗುತ್ತೀರಿ ಈಗ ನೀವು ಸಕ್ಕರೆಯನ್ನು ಉಪಯೋಗಿಸದೆ ಬಿಟ್ಟರೂ ಮತ್ತೆ ಸಕ್ಕರೆಯೇ ನಿಮ್ಮನ್ನು ಬಿಡದು ಎಂದ ಮೇಲೆ ನಾವೆಲ್ಲ ಪಟ್ಟಣಿಗರು ಮೊದಲಿನಂತೆ ಆ ಪರದೇಶದ ವ್ಯಾಪಾರಿಗಳ ದಲಾಲರೇ ಆಗಬೇಕಾಯಿತು. ಅಥವಾ ತಾವು ನಮ್ಮ ಮೇಲಿನ ಪ್ರೀತಿಯಿಂದ ಸಕ್ಕರೆಯನ್ನುಪಯೋಗಿಸದೆ ಇಲ್ಲಿಗೇ ಕಳುಹಿಸಿ ಕೊಟ್ಟರೂ ನಾವು ಅದನ್ನುಪಯೋಗಿಸುವುದುಂಟೇ? ಹಾಂ! ನಾವು ಪಟ್ಟಣಿಗರು. ನಮಗೆ ಸಕ್ಕರೆ ಬರೆ ಸವಿಯಾದರೇ ಸಾಲದು ಅದು ನಮ್ಮ ದೃಷ್ಟಿನಂತೆಯೆ ಸ್ವಚ್ಛವಾಗಿಯೂ, ಚಂದವಾಗಿಯೂ ಇರಬೇಕು ನಿಮಗೊಂದು ವೇಳೆ ತೋರಬಹುದು "ನಾವು ಹಳ್ಳಿಯವರು ಸಕ್ಕರೆಯನ್ನು ಉಪಯೋಗಿಸುವುದೇ ಕಡಿಮೆ ನೀವು ಪಟ್ಟಣಿಗರು ಕೂಡ ಅದನ್ನು ಆಕ್ಷೇಪಿಸುವದಿಲ್ಲಾದರೆ ಅದಕ್ಕೆ ಗ್ರಾಹಕರಾರು? ನೀರಿನಲ್ಲಿ ಇಳಿದ ಹೊರತು ಈಸಲು ಬಾರದಂತೆ ಮೊದಲು ಅದನ್ನು ಗ್ರಾಹಕರು ತಕೊಳ್ಳದೆ ಅದರಲ್ಲಿ ಸುಧಾರಣೆ ಮಾಡುವುದು ಹೇಗೆ? ಒಂದೇ ಸಾರೆ ಉತ್ತಮವಾದ ಮಾಲನ್ನು ತಯಾರಿಸುವುದು ಸಾಧ್ಯವೇ?" ಹೀಗೆ ನಿಮ್ಮ ಅಭಿಪ್ರಾಯವಿರಬಹುದಲ್ಲವೆ? ಇದಕ್ಕೆ ನಮ್ಮ ಪಟ್ಟಣಿಗರ ಉತ್ತರ ಬಹು ಶ್ರವಣೀಯವಿದೆ ಕೆಮ್ಮಿಗೆ ಔಷಧ ಕೊಡುವ ತೊಂದರೆ ಏಕೆ? ಗಂಟಲನ್ನೇ ಕತ್ತರಿಸಿದರೆ ಸರಿ! ಮತ್ತೆ ಕೆಮ್ಮೇ ಕೇಳಿಸದು!

ಏವಂಚ, ವಾಚಕರೇ! "ಸಕ್ಕರೆ ಕಾರಖಾನೆ"ಯ ಈ ವಾಗ್ವಾದದಲ್ಲಿ ನಮಗೆ ಸಕ್ಕರೆಯು ದುರ್ಲಭವಾಗಿ ಕೊನೆಗೆ ಈ ಪೊಟ್ಟಣವನ್ನು ಕಲ್ಲುಗಳಿಂದ ತುಂಬಿಸಬೇಕಾಯಿತು! ಆದರೆ ಇವು ನಿನ್ನೆ ಶಿವರಾತ್ರಿಯಿಂದ ಬೀಳುತ್ತಿರುವ ಕಲ್ಲುಗಳು. ಈ ಶಿವರಾತ್ರಿಯ ಕಲ್ಲುಗಳಿಂದ ತಮಗೆ ಸಿಟ್ಟು ಬರಲಾರದೆಂತ ಕಾಣುತ್ತದೆ. ಕಾರಣವೇನೆಂದರೆ ಇದು ಶಿಷ್ಟಾಚಾರವು ಕೆಲವು ಅನೀತಿಯ ಸಂಗತಿಗಳಿಗಾದರೂ ಪ್ರಾಕ್ತನವರು ಒಂದೊಂದು ಸಮಯವನ್ನು ನೇಮಿಸಿ ಕೊಟ್ಟಿರುವರು. ಜೂಜು ಕೆಟ್ಟದ್ದು. ಆದರೂ ಚವತೀ ಸಮಯದಲ್ಲಿ ತೆಂಗಿನಕಾಯಿಗಳನ್ನು ಕಟ್ಟಬಹುದಂತೆ. ಸುಳ್ಳಾಡುವುದು, ತಮಾಶೆಮಾಡುವುದು ಅನೀತಿಯ ಕೆಲಸವು ಆದರೂ ಎಪ್ರಿಲಿನ ಯಾವುದೋ ಒಂದು ದಿವಸ ಈ ಅನೀತಿಗಳನ್ನೆಲ್ಲ ಶಿಷ್ಟಸಮ್ಮತವಾಗಿ ನಡಿಸಬಹುದಂತೆ. ಹಾಗೆಯೆ ಶಿವರಾತ್ರಿ ದಿವಸ ಕಲ್ಲುಗಳನ್ನೂ ಬೀಸಾಡಬಹುದಂತೆ. ಆದರೆ ವಾಚಕರೇ ನಾವು ಕಟ್ಟಿಕೊಡುವ ಈ ಕಲ್ಲುಗಳು ಯಾರ ತಲೆ ಮಂಡೆಗಳನ್ನಾಗಲಿ, ಮನೆ ಮಾಡುಗಳ ಹಂಚುಗಳನ್ನಾಗಲಿ ನಿಶ್ಚಯವಾಗಿ ಒಡೆಯಲಾರವು. ಆ ಭಯವನ್ನು ಬಿಟ್ಟುಬಿಡಿರಿ!

ಪತ್ರವ್ಯವಹಾರ.

ಯಕ್ಷಿಣೀ ವಿಲಾಸವು.

ಪ್ರಿಯ ವಾಚಕ ಮಹಾಶಯರೇ,

ಒಂದೆರಡು ವರುಷಗಳಿಂದೀಚೆಗೆ ನಮ್ಮ ಪ್ರಾಂತ್ಯವಾದ ಕುಂದಾಪುರ ತಾಲೂಕಿನ ಒಂದು ಗ್ರಾಮದ ಒಬ್ಬ ಗೃಹಸ್ಥರ ಮನೆಯಲ್ಲಿ ಒಂದು "ಯಕ್ಷಿಣೀ" ದೇವತೆಯು ವಾಸವಾಗಿದ್ದು, ರಾತ್ರೆ ಸಮಯ ತಾಳ, ತಬ್ಬಲೆ, ಇತ್ಯಾದಿ ಸಂಗೀತ ಸಾಹಿತ್ಯ ದೊಡನೆ ಇಂಪಾಗಿ ಗಾನಹಾಡುವುದೆಂಬ ವಾರ್ತೆ ಇದ್ದಿತು. ಅನಂತರ ಪೂಜಾದಿ ಸತ್ಕಾರಗಳನ್ನು ಅಮ್ಮನವರಿಗೆ ನಡೆಸಿಕೊಂಡಲ್ಲಿ, ಭಕ್ತರ ಇಚ್ಛಿತ ಕಾರ್ಯವನ್ನು ಸಾಧಿಸಿ ಕೊಡುತ್ತದೆಂತಲೂ, ಯಕ್ಷಿಣಿಯು ಪ್ರತ್ಯಕ್ಷವಾಗಿ ಪ್ರಸಾದವನ್ನೂ ಕೇಳುವ ಪ್ರಶ್ನೆಗಳಿಗೆ ತಕ್ಕ ಪ್ರತ್ಯುತ್ತರಗಳನ್ನೂ (ಕಾಗದದಲ್ಲಿ ಪೆನ್ಸಿಲಿನಿಂದ ಬರೆದು) ಕುಳಿತಲ್ಲಿಯೇ ಮೇಲಿನಿಂದ ಕೆಡಹುತ್ತದೆಂತಲೂ, ಕೂಡಾ ತಿಳಿದುಬಂದುದರಿಂದ ಯಕ್ಷಿಣಿಯ ಕರ್ತೃಗಳ ಬಂಧುವರ್ಗೀಯರೂ, ಸ್ವಮತಸ್ಥರಾದ ಆಸ್ಮದಾದಿ ಇಷ್ಟ ಜನರೂ, ಪೂಜಾದಿಗಳನ್ನಿತ್ತು ಸದ್ಭಾವದಿಂದ ನಡೆಸಿಕೊಳ್ಳುತ್ತಿದ್ದರು.

ಈಚೆಗೆ ಸುಮಾರು ಒಂದು ತಿಂಗಳ ಮೊದಲು ಏತದ್ವಾರ್ತೆಯು ಪರಕೀಯರಲ್ಲಿಯೂ ಪ್ರಚಾರವಾಗಿ ಮೊದಮೊದಲು ಒಬ್ಬಿಬ್ಬರು ಹೋಗಿ, ಕಾಣಿಕೆ ಸಮೇತ ಪೂಜೆ ಕೊಟ್ಟು ತಾವು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಪ್ರತ್ಯುತ್ತರಗಳನ್ನೂ ಪ್ರಸಾದವನ್ನೂ ಮೇಲಿನಿಂದ ಕುಳಿತ ಸ್ಥಳಕ್ಕೆ ಕೆಡಹಿದ ಯಕ್ಷಿಣಿಯ ಆಶ್ಚರ್ಯಕರವಾದ ಕೃತ್ಯವನ್ನೂ ಪ್ರತ್ಯಕ್ಷ ನೋಡಿ ಬಂದು, ಊರಲ್ಲೆಲ್ಲಾ ಏತದಾಶ್ಚರ್ಯ ವಾರ್ತೆಯನ್ನು ವಿಸ್ತರಿಸಲು, ಕುತೂಹಲಿಗಳಾದ ಸದ್ಗೃಹಸ್ಥರು ಯಕ್ಷಿಣೀ ತಂತ್ರಪ್ರೇಕ್ಷಣಾಕಾಂಕ್ಷಿಗಳಾಗಿ ಯಕ್ಷಿಣೀ ಕರ್ತೃಗಳ ಮನೆಯಲ್ಲಿ ಸಂಜೆ ಸಮಯ ನೆರೆಯತೊಡಗಿದರು.

ಹೀಗೆ ಭಜಕ ಜನಸ್ತೋಮವು ದಿನೇ ದಿನೇ ವರ್ಧಿಸುತ್ತಾ ಬರುತ್ತಿರುವಲ್ಲಿ ಕಳೆದ ತಾ. ೧೫-೨-೧೬ನೇ ಮಂಗಳವಾರ ದಿವಸ ರಾತ್ರೆ ಅನೇಕ ಜನ ಸದ್ಗೃಹಸ್ಥರು ನೆರೆದು, ಕರ್ತೃಗಳ ಮನೆ ಜಗಲಿಯಲ್ಲಿಯೂ ಹೆಬ್ಬಾಗಿಲು ಚಾವಡಿಯಲ್ಲಿಯೂ ಕುಳಿತುಕೊಂಡರು. ಆಗಲೇ ದೇವಿಯ ಕರ್ತೃಗಳ ಸ್ವಂತ ಪೂಜೆಯು ಪೂರೈಸಿದ್ದಿತು. ಹಿಂದೊಂದು ಸಲ ಬಂದು ಅಪೂರ್ಣವಾದ ಅಪ್ಪಣೆಯನ್ನು ಹೊಂದಿ ಈ ದಿವಸಕ್ಕಾಗಿ ಬರಲು ಹುಕುಮು ಪಡೆದ ಒಬ್ಬ ಸದ್ಭಕ್ತರ ಪ್ರಶ್ನೆಗಳನ್ನು ಪ್ರಥಮದಲ್ಲಿ ಹೇಳಬೇಕೆಂಬ ನಿರ್ಣಯವಾಗಿ ಅವರ ಪ್ರಶ್ನೆಗಳನ್ನೆಲ್ಲಾ ಪತ್ರದಲ್ಲಿ ಬರೆದು ಅದನ್ನು ಕರ್ತೃಗಳು ತೆಗೆದುಕೊಂಡು ಭಕ್ತಜನರೊಂದಿಗೆ ದೇವಿಯು ವಾಸಿಸಿಕೊಂಡಿರುವ ಚಾವಿ ಬಳಿಯ ಹೊಂಗಾರು ವೃಕ್ಷಕ್ಕೆ ತೂಗಹಾಕಿದ್ದ ಚಿಮಣಿ ಎಣ್ಣೆ ತುಂಬಿಸುವ ಖಾಲಿ ಡಬ್ಬಿಯ ಒಳಗೆ ಹೋಗಿ ಅದರೊಳಗೆ ಪ್ರಶ್ನಾಪತ್ರಿಕೆಯನ್ನಿಟ್ಟು ಯಕ್ಷಿಣಿಗೆ ಪ್ರಾರ್ಥನ ನಮಸ್ಕಾರಾದಿಗಳನ್ನು ಮಾಡಿ, ಪುನಃ ಮೊದಲಿನ ಸ್ಥಾನದಲ್ಲೇ ಕುಳಿತುಕೊಂಡರು. ತರುವಾಯ ಕಿಂಚಿತ್ಸಮಯದಲ್ಲೇ ಪ್ರಸಾದದೊಂದಿಗೆ, ಬಂದಿರುವ ಪ್ರತ್ಯುತ್ತರ ಪತ್ರಿಕೆಯು ಮಾಡಿನಿಂದ ಕೆಳಗೆ ಬಿದ್ದಿತು.

ಮನೆಯ ಜಗಲಿಯಲ್ಲಿ ಈ ರೀತಿ ಪ್ರಶ್ನೋತ್ತರಗಳು ನಡೆಯುತ್ತಿರಲು, ಹೆಬ್ಬಾಗಿಲಲ್ಲಿ ಕುಳಿತ ಕೆಲವು ಜನ ಸದ್ಗೃಹಸ್ಥರು ರಾತ್ರಿ ಹೆಚ್ಚಾದುದರಿಂದ ತಮಗೆ ಬೇಗನೇ ಪ್ರಸಾದ ಕೊಡಿಸಬೇಕಾಗಿ ಕರ್ತೃಗಳೊಂದಿಗೆ ಹೇಳಲು, ಕರ್ತೃಗಳು "ಅಮ್ಮ! ತೂ ಶ್ರೀಮಂತ ಮನುಷ್ಯ ಅಸ್ಸೆ, ತಕ್ಕ ಏಕಪ್ರಸಾದ ದಿವ್ಕ" ಎಂದು ಹೇಳಿಕೊಂಡರು. ಸ್ವಲ್ಪ ಸಮಯ ಕಳೆಯುತ್ತಲೇ ಹೆಬ್ಬಾಗಿಲಲ್ಲಿರುವ ಆ ಸದ್ಗೃಹಸ್ಥರಿಗೆ ಪುಷ್ಪಪ್ರಸಾದದೊಂದಿಗೆ, ಕುಂಕುಮದ ಪೊಟ್ಟಣ, ಲಾಡಿನ ಉಂಡೆ, ಒಂದು ಚೀಟಿ, ಇವನ್ನೆಲ್ಲಾ ಬಂಧಿಸಿದ ಕಟ್ಟೊಂದು ಬಿದ್ದಿತು. ಇವನ್ನು ಸ್ವೀಕರಿಸಿ ಆ ಚೀಟಿಯನ್ನು ಓದುತ್ತಿರುವಲ್ಲಿ "ಓ ಅಸ್ನ! ಎಂಬ ಆರ್ತ ಸ್ವರದಿಂದ ಕೂಗಿದ ಒಂದು ಸ್ತ್ರೀಧ್ವನಿಯು ಕೇಳಿಸಿತು. ಒಡನೆಯೇ ಗಾಬರಿಗೊಂಡು "ಕಿತೆ ಪ್ರತ್ತ" ಎನ್ನುತ್ತಾ ಕರ್ತೃಗಳೂ, "ಇದೇನು" ಎನ್ನುತ್ತಾ ನೆರೆದ ಜನರೂ, ಕೂಡಾ ಮನೆಯ ಎದುರು (ಹೆಬ್ಬಾಗಿಲಿಗೆ ತಾಗಿ) ಇರುವ ಕೊಟ್ಟಿಗೆಗೆ ಹೋಗುವಷ್ಟರಲ್ಲಿ ಸ್ತ್ರೀ ವ್ಯಕ್ತಿಯನ್ನು ನೆಲಕ್ಕೆ ಮಲಗಿಸಿ ಬಲವಾದ ಒಂದು ದೊಣ್ಣೆಯನ್ನು ಕೈಯಲ್ಲಿ ತಿರುಗಿಸುತ್ತಾ ಭಯಂಕರಾಕಾರದ ಒಂದು ಪುರುಷ ವ್ಯಕ್ತಿಯು ಕರ್ಕಶ ಸ್ವರದಿಂದ "ಹೋ" ಎಂದು ಕೂಗಿತು. ಜನರೆಲ್ಲಾ ಗಾಬರಿಗೊಂಡರು. ಕರ್ತೃಗಳು "ಕಲ್ಲುಕುಟಿಗ ಭೂತ" ಎಂದು ಹೇಳುತ್ತಾ ಹಿಂದಕ್ಕೆ ಸರಿದರು; ಅಷ್ಟರಲ್ಲಿ ಕಲ್ಲುಕುಟ್ಟಿ ಭೂತವು ಮತ್ತೊಮ್ಮೆ ಅದೇ ಸ್ವರದಿಂದ ಕೂಗುತ್ತಾ ಕೆಡವಿದ ಸ್ತ್ರೀಯನ್ನು ಆಚೆಗೆ ತಳ್ಳಿ ಬಾಗಿಲಲ್ಲಿ ಗುಂಪಾಗಿ ನಿಂತಿರುವ ಜನಸ್ತೋಮವನ್ನು ದೂರಿಕೊಂಡು ಹಿತ್ತಲನ್ನು ದಾಟಿ ಓಡಿಹೋಯಿತು.

ಕೃಪಣ ಶಿಖಾಮಣಿಗಳಾದ ಕರ್ತೃಗಳ ಸುರಕ್ಷಿತ ಭಂಡಾರದಲ್ಲಿ ಹಲವು ಜನ ವಿಧವೆಯರ ಅಪದ್ರವ್ಯಗಳು ಅಪರಿಮಿತವಾಗಿದ್ದರೂ, ಅಷ್ಟಕ್ಕೂ ತೃಪ್ತಿಯಾಗದೆ, ಇನ್ನೂ ಹೆಚ್ಚಿನ ದ್ರವ್ಯಾರ್ಜನಾಪೇಕ್ಷೆಯಿಂದ ಈ ತರದ ಕಪಟ ಕೃತಿಯನ್ನು ಹುಡುಕಿ, ತನ್ನ ಚಿಕ್ಕ ಚಿಕ್ಕ ಬಾಲಕಿಯರಿಗೂ, ಪತಿಯಿಂದ ದೂರೀಕೃತಳಾದ ಪ್ರಾಯಸ್ಥ ಜೇಷ್ಠ ಪುತ್ರಿಗೂ, ತಕ್ಕ ಯುಕ್ತಿಯನ್ನು ಬೋಧಿಸಿ ಎಲ್ಲರೂ ಏಕಮತ್ಯದಿಂದ ಏತಜ್ಜನ ವಂಚನೆಯ ಕಪಟ ನಾಟಕಕ್ಕೆ ಆವಶ್ಯೋಪಕರಣಗಳನ್ನು ಸಜ್ಜುಗೊಳಿಸಿ, ನೆರೆದ ಜನರು ಆಶ್ಚರ್ಯಪಡುವಂತೆ ನಟಿಸಿ ತೋರಿಸುತ್ತಿರಲು ಆಗಾಗ ಕೃತಿಯಲ್ಲಿ ಕೃತ್ರಿಮವು ತೋರಿಬಂದುದರಿಂದ ಕೆಲವರು ಈ ಜಾಲವಿದ್ಯದ ಮೂಲವನ್ನು ಶೋಧಿಸಿ ಬಯಲಿಗೆ ತರಲು ತಕ್ಕಕಾಲವನ್ನು ಸಾಧಿಸುತ್ತಿದ್ದು, ಆ ದಿವಸ ಚತುರನಾದೋರ್ವ ತರುಣನಿಗೆ ವೇಷವನ್ನು ಹಾಕಿಸಿ ಕರ್ತೃಗಳ ಕೊಟ್ಟಿಗೆಯಲ್ಲಿ ಅಡಗಿಸಿದ್ದರು. ಯಕ್ಷಿಣಿಯ ಪಾತ್ರವನ್ನು ಧರಿಸಿದ್ದ ಕರ್ತೃಗಳ ಜೇಷ್ಠ ಕನ್ಯೆಯು ಹೆಬ್ಬಾಗಿಲಲ್ಲಿ ಕುಳಿತಿರುವ ಗೃಹಸ್ಥರಿಗೆ ಮಾಳಿಗೆಯಿಂದ ಪ್ರಸಾದವನ್ನು ಬಿಸುಟು ತಿರುಗಿ ಬರುವಾಗ ಈ ಕಲ್ಲುಕುಟಿಗ ವೇಷಧಾರಿಯ ಕೈಗೆ ಸಿಲುಕಿ ನೆರೆದ ಜನರಿಗೆಲ್ಲಾ ಯಕ್ಷಿಣಿಯು ಪ್ರತ್ಯಕ್ಷ ದರ್ಶನವಿತ್ತಳು.

ಗಂಡನನ್ನಗಲಿದ ಪುಂಡುಹುಡುಗಿಯು, ಲಂಡತನದಿಂದ ಈ ರೀತಿ ಭಂಡಾಟಿಕೆಯನ್ನು ಮಾಡಿ ಜನರ ತಂಡ ತಂಡವನ್ನು ಕರೆಯಿಸಿ ತಂದೆಯ ಭಂಡಾರ ಭರ್ತಿಗೈಯ್ಯಲೆಳಸಿದ ಈ ಪ್ರಚಂಡ ಕೃತಿಯನ್ನು ವಾಚನಾಭಿರುಚಿಯುಳ್ಳ ಭಗಿನೀಮಣಿಗಳು ತಿಳಿದು ಆಕೆಯನ್ನು ಕೊಂಡಾಡದಿರರು.

ಇತಿ ಪ್ರತ್ಯಕ್ಷದರ್ಶಿ.

ಅಯ್ಯಾ ಪತ್ರಕರ್ತರೇ,

ಲೆಜಿಸ್ಲೆಟಿವ್ ಕೌನ್ಸಿಲ್ ಸಭೆಯಲ್ಲಿ ಪ್ರತಿನಿಧಿಯಾಗಿ ಚುನಾಯಿಸುವುದಕ್ಕೆ ದಕ್ಷಿಣ ಕನ್ನಡ ಮತ್ತು ಮಲೆಬಾರನ್ನು ಒಂದು ತುಕಡಿಯಾಗಿ ಸೇರಿಸುವುದರಿಂದ ನಮ್ಮ ಜಿಲ್ಲೆಯವರಿಗೆ ಹೆಚ್ಚಿನ ಪ್ರಯೋಜನವಿಲ್ಲವೆಂದು ನೀವು ಸೂಚಿಸಿದುದು ವಾಸ್ತವವಾದ್ದೆ. ಹಲವು ವಿಷಯಗಳಲ್ಲಿ ಮಲೆಬಾರಿಗೂ ದಕ್ಷಿಣ ಕನ್ನಡಕ್ಕೂ ಹೆಚ್ಚಿನ ಸಾಮ್ಯತೆಯೇ ಇಲ್ಲ. ಇಲ್ಲಿ ಸೆಟ್ಲ್‌ಮೆಂಟಿನಲ್ಲಿ ಮೂಲಗೇಣಿ ಆಸ್ತಿಗಳಿಗೆ ಹೆಚ್ಚಿನ ತೀರ್ವೆಯನು ಮೂಲಗೇಣಿದಾರರು ತೆರಬೇಕೊ ಮೂಲಿ ವರ್ಗದಾರರು ತೆರಬೇಕೊ ಎಂಬುದು ಇನ್ನೂ ನಿಶ್ಚಯವಾಗಿಲ್ಲ. ಅನೇಕ ಕಡೆಗಳಲ್ಲಿ ಮೂಲಿದಾರರಿಗೆ ಸಿಕ್ಕುವ ಗೇಣಿಗಿಂತ ಅವರು ತೆರುವ ತೀರ್ವೆಯು ಹೆಚ್ಚಾಗಿದ್ದು ಅವರ ಮೂಲಧನಕ್ಕೆ ಬಡ್ಡಿಯೇ ಸಿಕುವುದಿಲ್ಲ. ಇಂಥ ಮೂಲಗೇಣಿಯ ಕ್ರಮವು ಮಲೆಬಾರಿನಲ್ಲಿ ಇಲ್ಲ. ಅಲ್ಲಿ ಸರಕಾರಿ ಸ್ಥಳವೆಂಬುದೇ ಬಹಳ ಕಡಿಮೆ. ಎಲ್ಲವೂ ವರ್ಗಗಳಿಗೆ ಸೇರಿಹೋಗಿದೆ. ಆದ್ದರಿಂದ ಆಗಾಗ ಆಗುವ ದರ್ಖಾಸ್ತು ರೂಲಿನ ಬದಲಾವಣೆಗಳು ಅವರಿಗೆ ಬಾಧಿಸುವುದಿಲ್ಲ.

ಜೈನರು, ಲಿಂಗಾಯತರು, ದಖ್ಖಣಿ ಮುಹಮ್ಮದೀಯರು, ಕುಡುಬಿಗಳು ಮುಂತಾದ ಹಲವು ಜಾತಿಗಳು ದಕ್ಷಿಣ ಕನ್ನಡದಲ್ಲಿವೆ. ಮಲೆಬಾರಿನಲ್ಲಿಲ್ಲ. ಈ ಪೈಕಿ ಜೈನರಿಗೆ ಅವರ ಜನಸಂಖ್ಯೆ ಕಡಿಮೆಯಾಗುತ್ತ ಬರುವುದರಿಂದಲೂ ಅವರ ಆಸ್ತಿಗಳು ಕ್ರಮೇಣ ವಾರಿಸುದಾರರಿಲ್ಲದೆ ಸರಕಾರಕ್ಕೆ ಸೇರುವ ಸಂದರ್ಭವಿರುವುದರಿಂದಲೂ ಅವರ ಜಾತಿಯಲ್ಲಿ ವಿವಾಹವು ಕಾನೂನಿನ ಮಂಜೂರಾತಿಗೆ ಒಳಪಡದ್ದರಿಂದಲೂ ಮಕ್ಕಳ ಕಟ್ಟಿನ ಕ್ರಮವನ್ನಾಗಲಿ ಆಚರಿಸುವುದಕ್ಕೆ ಅಥವಾ ಅಗತ್ಯವಿರುವ ತಬ್ದೀಲಿಗಳನ್ನು ಮಾಡಿ ತಮ್ಮ ಆಸ್ತಿಗಳನ್ನು ಉಳಿಸಿಕೊಳ್ಳಲಿಕ್ಕೆ ಕಾನೂನು ಸಹಾಯವು ಬೇಕಾಗಿದೆ. ದಖ್ಖಣಿ ಮಹಮ್ಮದೀಯರಲ್ಲಿ ಅನೇಕರು ತೀರಾ ಬಡಬಗ್ಗರು; ಅವರಿಗೆ ಉದ್ಧಾರವಾಗುವುದಕ್ಕೆ ಯಾವ ಏರ್ಪಾಡುಗಳು ಅಗತ್ಯ ಇವೆ ಎಂಬುದನ್ನು ಮಲೆಬಾರಿನಲ್ಲಿ ಗೊತ್ತು ಹಚ್ಚುವ ಅಗತ್ಯವಿಲ್ಲ. ಅಲ್ಲಿ ಆ ಜಾತಿಯವರೂ ಇಲ್ಲ.

ಇದಲ್ಲದೆ ದಕ್ಷಿಣ ಕನ್ನಡದಲ್ಲಿರುವ ಕುಮಕಿ, ನೆತ್ತಿಕಟ್ಟು, ಮುಂತಾದ ಹಕ್ಕುಗಳ ಪ್ರಸ್ತಾಪವು ಮಲೆಬಾರಿನಲ್ಲಿ ಇಲ್ಲ.

ಇಲ್ಲಿ ಹಲವು ಚಿಕ್ಕ ದೊಡ್ಡ ಹೊಳೆಗಳಿಗೆ ಸಂಕಗಳ ಅಗತ್ಯವಿದೆ. ಹಳ್ಳಿ ದಾರಿಗಳು ಇನ್ನೂ ಆಗಬೇಕು.

ತಾಲೂಕು ಬೋರ್ಡುಗಳ ಒಳಗಿರುವ ಪ್ರದೇಶದ ವಿಸ್ತೀರ್ಣವು ವಿಪರೀತವಾಗಿದ್ದು ಎಲ್ಲಾ ಕಡೆಗೆ ಪ್ರಜಾ ಪ್ರತಿನಿಧಿಗಳ ಕಣ್ಣು ಚಲಿಸಲಿಕ್ಕೆ ಸಾಧ್ಯವಿಲ್ಲದೆ ಸ್ಥಳೀಯ ಸೌಕರ್ಯಗಳಿಗೆ ಇನ್ನೂ ವಿಲೆವಾರಿ ಆಗಲಿಲ್ಲ.

ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲೆಗಳ ಸಂಖ್ಯೆಯು ಸಾಕಷ್ಟು ಇಲ್ಲ. ಶಾಲೆಗಳಿಲ್ಲದ ಗ್ರಾಮಗಳು ಹಲವು ಇವೆ.

ಬಡಬಗ್ಗರಿಗೋಸ್ಕರ ಮಾಡಿದ ದರಖಾಸ್ತು ರೂಲ್ಸುಗಳಲ್ಲಿ ಸಾಕಷ್ಟು ಪ್ರಯೋಜನ ಸಿಕ್ಕಲಿಲ್ಲವಾದ್ದರಿಂದ ಯಾವ ಬದಲಾವಣೆಗಳು ಅಗತ್ಯವೆಂದು ಆಲೋಚಿಸುವವರು ಬೇಕಾಗಿದೆ.

ಫೊರೆಸ್ಟ್ ಕಮ್ಮಿಟಿಯವರು ನಮ್ಮ ಅಹವಾಲುಗಳನ್ನು ವಿಚಾರಿಸಲಿಕ್ಕೆ ಈ ಜಿಲ್ಲೆಗೂ ದಯಮಾಡಬೇಕಾಗಿ ಕೇಳಿದಾಗ್ಯೂ ಅವರು ಬಾರದ ಕಾರಣ ಇಲ್ಲಿಯ ಜನರಿಗೆ ಪೇಟೆಗೆ ಹತ್ತರವಾಗಿ ರಿಜರ್ವಗಳನ್ನು ಇರಿಸುವುದು ಮುಂತಾದ ಅವಾಂತರಗಳ ನಿವಾರಣೆಯು ಇನ್ನೂ ಆಗಿಲ್ಲ.

ಹಲವು ಹೊಳೆಗಳು ಬೇಸಿಗೆಯಲ್ಲಿ ಬತ್ತಿಹೋಗುತ್ತಿವೆ. ನೇತ್ರಾವತಿ ನದಿಯಲ್ಲಿ ಅಳಿವೆಯನ್ನು ದಾಟಿ ಹೋಗುವುದಕ್ಕೆ ಬೇಸಿಗೆಯಲ್ಲಿ ಅಡ್ಡಿಯಾಗುತ್ತದೆ.

ಇವೇ ಮುಂತಾದ ನಮ್ಮ ಅನನುಕೂಲತೆಗಳನ್ನು ಈ ಜಿಲ್ಲೆಗೆ ಕಾಲಿಡದ ಮಲೆಯಾಳದವರು ಪ್ರತಿನಿಧಿಗಳಾಗಿ ತಿಳಿದುಕೊಂಡು ಸರಕಾರದವರ ಮುಂದಿಡಲಿಕ್ಕೆ ಹೇಗೆ ಸಾಧ್ಯವಾಗುವದು ?

ಯುದ್ಧ ಸಮಾಚಾರ.

ತಾ. ೨೩ನೇ ಫೆಬ್ರುವರಿ.

ವೆರ್ಡನಿನ ಉತ್ತರದಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ. ಜರ್ಮನರು ಅಟ್ರ್ವಾಸಿನ ಮೇಲೆ ಎರಡಾವರ್ತಿ ಜೋರಾವರಿಯಿಂದ ನುಗ್ಗಿ ಬಂದರು. ಫ್ರೆಂಚರ ವಾಯುನಾವೆಗಳು ಡಿನೀಜನ ವಾಯುವ್ಯ ಮತ್ತು ಆಗ್ನೇಯ ದಿಕ್ಕಿನಲ್ಲಿರುವ ಜರ್ಮನರ ಮದ್ದುಗುಂಡುಗಳ ಕೊರಡಿಗಳ ಮೇಲೆ ಸಿಡಿಮದ್ದುಗಳನ್ನು ಬಿಸಾಡಿರುವವು. ಶತ್ರುಗಳ ವಾಯುನಾವೆಗಳು ಲುನವಿಲ್ಲೆ, ಡೊಂಟಿಸ್ಟ್, ಮತ್ತು ನಾನ್ಸಿಯ ಮೇಲೆ ಸಿಡಿಮದ್ದುಗಳನ್ನು ಹಾಕಿರುತ್ತವೆ. ಆದರೆ ವಿಶೇಷ ಹಾನಿಯಾಗಲಿಲ್ಲ.

ಬ್ರಿಟಿಷರ ೩೬ ವಾಯುನಾವೆಗಳು ಡೂನ್ ಎಂಬಲ್ಲಿದ್ದ ಜರ್ಮನರ ಮದ್ದುಗುಂಡುಗಳ ಕೊರಡಿಗಳ ಮೇಲೆ ಸಿಡಿಮದ್ದುಗಳನ್ನು ಹಾಕಿದ್ದರಿಂದ ಜರ್ಮನರಿಗೆ ವಿಶೇಷ ನಷ್ಟವಾಗಿರುವದು. ಬ್ರಿಟಿಷರ ಎಲ್ಲಾ ವಾಯುನಾವೆಗಳು ಸುರಕ್ಷಿತವಾಗಿ ಹಿಂದೆ ಬಂದಿರುತ್ತವೆ. ಶತ್ರುಗಳ ವಾಯುನಾವೆಗಳು ಕೂಡಾ ನಮ್ಮವರ ನೆಲೆಗಳ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಆದರೆ ಅವರಿಗೆ ಯುದ್ಧ ಸಂಬಂಧವಾದ ಪ್ರಯೋಜನವಾಗಲಿಲ್ಲ. ಫ್ರೆಂಚರು ಬ್ರಬಾಂಟ್ ಲೆ ರೋಯಿ ಎಂಬಲ್ಲಿ ಜರ್ಮನರ ಒಂದು ಜೆಪಲಿನ್ ನಾವೆಗೆ ಗುಂಡು ಹಾರಿಸಿ ಕೆಳಗೆ ದೊಬ್ಬಿರುತ್ತಾರೆ.

ಯುದ್ಧದ ಖರ್ಚಿಗೋಸ್ಕರ [illegible] ೪೨೦ ಮಿಲಿಯ ಪವನುಗಳನ್ನು ಸೆಂಕ್ಷನ್ ಮಾಡಬೇಕೆಂದು ಮಿ|| ಅಸ್ಕ್ವಿತರವರು ಬ್ರಿಟಿಷ ಪಾರ್ಲಿಮೆಂಟಿನ ಸಮ್ಮತಿಯನ್ನು ಕೇಳಿರುವರು. ಆಗ್ಗೆ ಈ ಯುದ್ಧಕ್ಕೆಲ್ಲಾ ಬ್ರಿಟಿಷ ಪಾರ್ಲಿಮೆಂಟ್ ಸಭೆಯವರು ೩೦೮೩ ಮಿಲಿಯ ಪವನುಗಳನ್ನು ಸೆಂಕ್ಷನ್ ಮಾಡಿದಂತಾಗುವದು. ಭೂಸೇನೆಯ ನೌಕಾವಳಿಯ ಮತ್ತು ಯುದ್ಧ ಸಾಮಗ್ರಿಗಳ ಬಗ್ಗೆ ಬ್ರಿಟಿಷ ಸರಕಾರಕ್ಕೆ ದಿನ ೧ಕ್ಕೆ ೫ ಮಿಲಿಯ ಪವನುಗಳು ಖರ್ಚಾಗುತ್ತವೆ.

ರುಶ್ಯನರ ರಿಗ್ಗಾ ರಣರಂಗದಲ್ಲಿ ತೋಪುಕಾಳಗವು ನಡೆಯುತ್ತಿದೆ.

ಪೂರ್ವ ಆಫ್ರಿಕದ ಉಗಂಡದ ಗಡಿಯಲ್ಲಿ ಬ್ರಿಟಿಷ ಸೇನಿಕರು ಶತ್ರುಗಳ ಒಂದು ಸೇನೆಯನ್ನು ಸೋಲಿಸಿ ಓಡಿಸಿರುವರು. ಶತ್ರುಗಳ ಸೇನೆಯಲ್ಲಿ ೪ ಯುರೋಪಿಯನರು, ೫೩ ದೇಶೀಯರು, ಒಂದು ಯಂತ್ರಚಾಲಿತ ಫಿರಂಗಿ, ೪೫ ರೈಫಲ್ ಕೋವಿಗಳ ನಷ್ಟವಾಗಿರುವದು. ಬ್ರಿಟಿಷರ ಸೇನೆಯಲ್ಲಿ ಏನೂ ನಷ್ಟವಾಗಲಿಲ್ಲ.

ಆಸ್ಟ್ರಿಯಾನರ ವಾಯುನಾವೆಗಳು ಇಟಲಿಯಾನರ ಕೆಲವು ಪಟ್ಟಣಗಳಿಗೆ ಬೊಂಬುಗಳನ್ನು ಎಸೆದಿರುತ್ತವೆ. ೪ ಮಂದಿ ಹತರಾಗಿರುವರು. ೧೩ ಮಂದಿ ಗಾಯ ಒಡೆದಿರುವರು.

ರುಶ್ಯನರು ಎರ್ಜರಮಿನಲ್ಲಿ ತುರ್ಕರನ್ನು ಹಿಂದಟ್ಟಿ ಪುನಃ ೩೫೪೯ ಸೇನಿಕರನ್ನೂ ೬ ಫಿರಂಗಿಗಳನ್ನೂ ಬಹಳ ಗುಂಡುಮದ್ದುಗಳನ್ನೂ ಹಿಡಿದಿರುತ್ತಾರೆ.

ರುಶ್ಯನರು ವ್ಹಾನ್ ಸರೋವರದ ಪ್ರಾಂತ್ಯವನ್ನೆಲ್ಲಾ ಸ್ವಾಧೀನ ಮಾಡಿಕೊಂಡಿರುವರು. ತುರ್ಕರು ಬಿಟ್ಲಿಸ್ ಪಟ್ಟಣವನ್ನು ಬಿಟ್ಟು ಹೋಗುತ್ತಿರುವರು. ರುಶ್ಯನರು ಟ್ರೆಬಿಜೊಂಡಿನ ಕಡೆಗೆ ಮುಂದರಿಯುತ್ತಲಿರುವರು.

ಜಪಾನರು ೩೫೦೦೦ ಟನ್ ಕಲ್ಲಿದ್ದಲನ್ನು ಈಜಿಪ್ತಿಗೆ ಕಳುಹಿಸಿರುವರು ಎಂತ ವಾರ್ತೆ ಇದೆ.

ತಾ. ೨೪ನೇ ಫೆಬ್ರುವರಿ.

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ "ಡಿಂಗ್ಲೆ" ಎಂಬ ಹಡಗವನ್ನು ಮುಳುಗಿಸಿರುವದು. ಒಬ್ಬನು ಮಾತ್ರ ಉಳಿದಿರುವನು.

ಡಚ್ಚರ "ಲಾಫ್ಲಾಂಡ್ರ" ಎಂಬ ಹಡಗವನ್ನು ಜರ್ಮನರ ಜಲಾಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ. ಈ ಹಡಗದ ಕೆಲವರನ್ನು ಬ್ರಿಟಿಷರ "ಫೆನ್ನಾಲ್" ಎಂಬ ನಾವೆಯು ರಕ್ಷಿಸಿರುವದು.

ಆರ್ಟ್ವಾಸಿನಲ್ಲಿ ಜರ್ಮನರು ಫ್ರೆಂಚರ ಕಂದಕಗಳ ಮೊದಲನೇ ಸಾಲುಗಳ ಮೇಲೆ ಅಭಿಯೋಗ ಮಾಡಿ ಕಂದಕಗಳ ಎರಡನೇ ಸಾಲುಗಳ ವರೆಗೆ ತಲಪಿದರು. ಆದರೆ ಫ್ರೆಂಚರು ಇವರ ಮೇಲೆ ನುಗ್ಗಿ ಹೋಗಿ ಹಿಂದಟ್ಟಿದರು. ಶತ್ರುಗಳ ೭ ಬಟಾಲಿಯನ್ ಸೇನಾಂಗಗಳು ಈ ಸ್ಥಳದಲ್ಲಿ ಕದನವನ್ನು ಮಾಡಿದವು. ಶತ್ರುಗಳಿಗೆ ಬಹಳ ನಷ್ಟವಾಗಿರುತ್ತದೆ. ವೆರ್ಡನಿನಲ್ಲಿಯೂ ತೋಪು ಕಾಳಗವು ಚಟುವಟಿಕೆಯಿಂದ ನಡೆಯುತ್ತಿದೆ. ಶತ್ರುಗಳ ಕಾಲಾಳು ಸೇನಿಕರು ಬ್ರಾಬಾಂಟ್-ಸುರ್-ಮ್ಯೂಸ್ ಎಂಬಲ್ಲಿ ಪೋಲ್ಯಾಯಿದು ಸ್ವಲ್ಪ ಮುಂದರಿದರು. ಆದರೆ ಫ್ರೆಂಚರು ಅವರನ್ನು ಹಿಂದಕ್ಕೆ ಓಡಿಸಿ ಅನೇಕರನ್ನು ಸೆರೆಹಿಡಿದರು. ಬೆಲ್ಜಿಯಂ ರಣರಂಗದಲ್ಲಿಯೂ ಕಠಿಣ ತೋಪು ಕಾಳಗವು ನಡೆಯುತ್ತಿದೆ.

ಇಟಲಿಯನರು ಟಿನೋ ಡಿಸ್ಟ್ರಿಕ್ಟಿನಲ್ಲಿ ಮುಂದರಿದಿರುತ್ತಾರೆ.

ಎರ್ಜರಮಿನಲ್ಲಿ ತುರ್ಕರಿಗೆ ೪೦ ಸಾವಿರ ಸೇನಿಕರ ನಷ್ಟವಾಗಿರುವದು. ರುಶ್ಯನರು ಕರಾವಳಿ ಪ್ರಾಂತ್ಯದಲ್ಲಿದ್ದ ತುರ್ಕರನ್ನು ೩೪ ತಾಸುಗಳ ವರೆಗೆ ಹಿಂದಟ್ಟಿ ೩೪ ಮೈಲು ದೂರ ಓಡಿಸಿರುವರು. ತುರ್ಕರು ಟ್ರೆಬಿಜೊಂಡನ್ನು ಬಿಟ್ಟು ಹೋಗಲು ಪ್ರಾರಂಭಿಸಿರುವರು ಎಂತ ವಾರ್ತೆ ಇದೆ.

ತಾ. ೨೫ನೇ ಫೆಬ್ರುವರಿ.

ವೆರ್ಡನಿನಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಮಿತ್ರ ಸೇನಿಕರು ಶತ್ರುಗಳನ್ನು ಎದುರಾಯಿಸಿ ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿರುವರು. ಜರ್ಮನರು ದೊಡ್ಡ ದೊಡ್ಡ ಫಿರಂಗಿಗಳಿಂದ ಎಡೆಬಿಡದೆ ಗುಂಡು ಹಾರಿಸುತ್ತಲಿರುವರು. ಮಿತ್ರ ಪಕ್ಷದವರು ಅಷ್ಟೇ ಬಲದಿಂದ ಶತ್ರುಗಳ ಮೇಲೆ ಗುಂಡು ಹಾರಿಸುತ್ತಲಿದಾರೆ.

ಜರ್ಮನರ ದೊಡ್ಡ ಕಾಲಾಳ ಸೇನೆಯು ಅಟಂಟ್ಸುರ್ ಮ್ಯೂಸ್ ಮತ್ತು ಒರ್ನೆಸಿನಲ್ಲಿ ಆಗಾಗ್ಯೆ ಅಭಿಯೋಗ ಮಾಡಿದರು. ಶತ್ರುಗಳು ಮಿತ್ರಸೇನಿಕರನ್ನು ಹರ್ಮಂಟ್ ಗ್ರಾಮದಿಂದ ಹಿಂದಟ್ಟಲು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ.

ಈಜಿಪ್ತಿನಲ್ಲಿ ಎಲ್ ಹಸನ್ನಾ ಎಂಬಲ್ಲಿದ್ದ ಶತ್ರುಗಳ ಪವರ್ ಸ್ಟೇಶನಿನ ಮೇಲೆ ಬ್ರಿಟಿಷ ವಾಯುನಾವಿಕರು ಬೊಂಬು ಹಾಕಿ ಅದನ್ನು ಹಾಳ ಮಾಡಿರುವರು.

ತಾ. ೨೬ನೇ ಫೆಬ್ರುವರಿ.

ಜಪಾನರ ಯುದ್ಧನಾವೆಗಳು ಮೆಡಿಟರೇನಿಯನ್ ಸಮುದ್ರಕ್ಕೆ ಹೋಗಿರುತ್ತವೆಯೆಂತ ಇಟಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವದು.

ವೆರ್ಡನಿನಲ್ಲಿ ರಾತ್ರಿಕಾಲವೆಲ್ಲಾ ಮ್ಯೂಸ್ ನದಿಯ ಬಲದಡದಿಂದ ಒರ್ನೆಸಿನ ದಕ್ಷಿಣದ ವರೆಗೆ ಕಠಿಣ ಕಾಳಗ ನಡೆದಿರುವದ. ಸಾಮೊಗ್ನೆಕ್ಸ್‌ನಲ್ಲಿ ಪೋಲ್ಯಾಯಿದ ಜರ್ಮನರ ಹಿಮ್ಮೆಟ್ಟಿರುವರು.

ಬಹಳ ಕಷ್ಟದಿಂದ ವಿಶೇಷ ನಷ್ಟಪಟ್ಟು ಮುಂದರಿದ ಜರ್ಮನರು ಮಿತ್ರಸೇನೆಯ ನೆಲೆಯನ್ನು ಯಾವ ಕಡೆಯಲ್ಲಿಯೂ ಭೇದಿಸಲು ಅಸಮರ್ಥರಾದರು. ಒನೆಕ್ ಮತ್ತು ಫ್ರೋನ್ಸ್ಯ ವಚ್ಛೆ ತೋಪುಗಳು ಎಡೆಬಿಡದೆ ಹಾರುತ್ತಲಿವೆ. ಲೊರೈನಿನಲ್ಲಿ ಜರ್ಮನರ ಸ್ವಲ್ಪ ಮುಂದರಿದರ. ಆದರೆ ತಕ್ಷಣವೇ ಮಿತ್ರಸೇನಿಕರು ಅವರನ್ನು ಹಿಂದಟ್ಟಿದರು.

ಬಸ್ಸರಬಿಯನ್ ಸಂಹದ್ದಿನಲ್ಲಿ ಸಣ್ಣ ಪುಟ್ಟ ಕದನಗಳು ನಡೆದಿರುವವು.

ಮೆಸಪಟೋಮಿಯ ರಣರಂಗದಲ್ಲಿ ಬಂದ ವಾರ್ತೆಯು ಈ ರೀತಿಯಾಗಿದೆ. ೨೨ನೇ ಫೆಬ್ರವರಿ --ನಿನ್ನೆಯ ದಿವ ಜನರಲ್ ಗೊರಿಂಜೆಯವರು ರಾತ್ರಿಕಾಲ ಉಮ್ಮಲ್ ಉರ್ರ್ ನದಿಯ ಬಲದಡದಲ್ಲಿ ಮುಂದರಿದು ಬೆಳಿಗ್ಗೆ ಎಲ್ ಹನ್ನಾದ ಹಿಂದುಗಡೆಯ ತುರ್ಕರ ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ಸೂರ್ಯ ಮೂಡುತ್ತಲೇ ನಮ್ಮವರ ಫಿರಂಗಿಗಳು ನದಿಯ ಆಚೇ ದಡದಲ್ಲಿರುವ ಶತ್ರುಗಳ ಪಾಳೆಯದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿದವು. ನಮ್ಮ ಗುಂಡುಗಳಲ್ಲಿ ಮೊದಲನೇ ಗುಂಡು ಅವರ ಪಾಳೆಯದಲ್ಲಿ ಸಿಡಿದಾಕ್ಷಣ ತುರ್ಕರ ಕುದುರೆಗಳೂ, ಒಂಟೆಗಳೂ ಕತ್ತೆಗಳೂ ಸವಾರರೂ ಪಾಳೆಯದಿಂದ ಹೊರಟು ಹಿಂದರಿಯಲು ಪ್ರಾರಂಭಿಸಿದರು. ತುರ್ಕಿ ಸೇನೆಯಲ್ಲಿ ಅಪಾರವಾದ ನಷ್ಟವಾಗಿರುವದು.

ತಾ. ೨೭ನೇ ಫೆಬ್ರುವರಿ.

ಜರ್ಮನ್ ಕೈಸರರು ಕಳದ ವಾರ ವಿಲ್‌ಹೆಲ್ಮ್ ಶೆವನ್ ಎಂಬಲ್ಲಿಗೆ ಹೋಗಿ ಅಲ್ಲಿದ್ದ ಜರ್ಮನ್ ಯುದ್ಧ ನಾವೆಗಳನ್ನು ಸಂದರ್ಶಿಸಿಕೊಂಡು ಅದೇ ಸಾಯಂಕಾಲ ಹಿಂದಿರುಗಿರುವರು.

ಜರ್ಮನರ ಜಲಾಂತರ್ಗಾಮಿ ನಾವೆಯು "ಡಿಡೊ" "ಡೆನಾಬಿ" "ಟಮ್ಮೊರ್" ಎಂಬ ಹಡಗಗಳನ್ನು ಮುಳುಗಿಸಿರುತ್ತವೆ. ಸ್ವೀಡಿನವರ "ಬಿರ್‌ಗಿಟ್" ಮತ್ತು ಬ್ರಿಟಿಷರ "ಫಾಸ್ಫೆನೆಟ್" ಎಂಬ ಹಡಗಗಳು ಪಶ್ಚಿಮ ಮೆಡಿಟರೇನಿಯನಿನಲ್ಲಿ ಮುಳುಗಿಸಲ್ಪಟ್ಟಿರುತವೆ.

ಪಿ. ಎಂಡ್ ಓ. ಕಂಪೆನಿಯ "ಮಲೋಜ" ಮೈಲ್ ಎಂಬ ಹಡಗವು ಡೋವರ್ ಎಂಬ ಜಲಸಂಧಿನಲ್ಲಿ ಮುಳುಗಿತು ಎಂಬ ವಾರ್ತೆ ಬಂದಿರುವದು. ಈ ಹಡಗವು ಸಿಡಿಮದ್ದಿನ ಗಣಿಗೆ ತಗಲಿ ಈ ಅವಸ್ಥೆಯನ್ನು ಹೊಂದಿತೆಂತ ತಿಳಿದುಬರುತ್ತದೆ. ಮಲೋಜದಲ್ಲಿ ೧೧೯ ಪ್ರಯಾಣಿಕರಿದ್ದರು. ಈ ಪೈಕಿ ೭ ಮಂದಿ ಮಕ್ಕಳು, ಪ್ರಯಾಣಿಕರು ಜಿಬ್ರಾಲ್ಟರ್, ಮಾರ್ಸೆಲಿಸ್, ಮಾಲ್ಟ, ಈಜಿಪ್ತ್, ಏಡನ್, ಮುಂಬಾಯಿ, ಮತ್ತು ಕರಾಚಿಗೆ ಹೋಗುವವರು. ಮಲೋಜ ಹಡಗವು ಜನವರಿ ೧೭ರಲ್ಲಿ ಮುಂಬಾಯಿಂದ ಹೊರಟು ಫೆಬ್ರವರಿ ತಾ ೮ರಲ್ಲಿ ಲಂಡನಿಗೆ ತಲಪಿತು. ಪುನಃ ಲಂಡನಿನಿಂದ ಮುಂಬಾಯಿಗೆ ಹಿಂದೆ ಪ್ರಯಾಣ ಮಾಡುತ್ತಿರುವಾಗ ಈ ಪರಿಣಾಮವನ್ನು ಹೊಂದಿತು. ಅದು ಮುಂಬಾಯಿಗೆ ಬಂದು ತಲಪಿದ್ದರೆ ಪುನಃ ಎಪ್ರಿಲ್ ತಾ ೯ರಲ್ಲಿ ಲಂಡನಿಗೆ ಹೊರಟು ಹೋಗುತ್ತಿತ್ತು. ಹಾರ್ಡಿಂಜ ಪ್ರಭುಗಳು ಇದೇ ಹಡಗದಲ್ಲಿ ಸೀಮೆಗೆ ಪ್ರಯಾಣ ಮಾಡುವದಾಗಿದ್ದರು. ಮಲೋಜವು ೧೨೪೩೧ ಟನ್‌ಗಳ ಬಾರವಿಳ ಹಡಗು. ೧೧೬೪ ಕುದುರೆ ಬಲವು ಈ ಹಡಗಕಿತ್ತು. ಮುಂಬಾಯಿಂದ ಲಂಡನಿಗೆ ಟಪಾಲು ಮತ್ತು ಪ್ರಯಾಣಿಕರನ್ನು ಈ ಹಡಗವು ಕ್ರಮವಾಗಿ ಕೊಂಡು ಹೋಗುತ್ತಿತ್ತು.

ಟಾಗಸಿನಲ್ಲಿ ಹಿಡಿಯಲ್ಪಟ್ಟ ಜರ್ಮನ ಮತ್ತು ಆಸ್ಟ್ರಿಯನರ ಹಡಗ ಒಟ್ಟಿಗೆ ೩೬. ಜರ್ಮನರ "ಹೊಚೆಫಲ್ಸ್" ಎಂಬ ಹಡಗವು ಮಡೀರಿಯದಿಂದ ತಪ್ಪಿಸಿಕೊಂಡು ಹೋಗಿರುವದು. ಪೋರ್ಚುಗಲಿನವರು ವರ್ದೆ ಭೂಶಿರದ ಬಳಿ ಪುನಃ ಜರ್ಮನರ ೮ ಹಡಗಗಳನ್ನು ಹಿಡಿದಿರುತ್ತಾರೆ.

ವೆರ್ಡನಿನ ಉತ್ತರದಲ್ಲಿ ಫಿರಂಗಿಗಳ ಹೊಡೆತವು ಸ್ವಲ್ಪ ಕಡಿಮೆಯಾಗಿರುತ್ತದೆ. ಜರ್ಮನರು ರಾತ್ರಿ ಕಾಲ ಅಭಿಯೋಗ ಮಾಡಲಿಲ್ಲ. ವೆರ್ಡನಿನ ಉತ್ತರದಲ್ಲಿ ವಿಶೇಷ ಹಿಮ ಬಿದ್ದಿರುವದು. ಮ್ಯೂಸಿನ ಪೂರ್ವದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಕೆಲವು ಕಡೆಗಳಲ್ಲಿ ಜರ್ಮನರು ಪೋಲ್ಯಾಯಿದ ಸಫಲ ಹೊಂದಲಿಲ್ಲ. ಲಫೋರ್ ಅಡವಿಯಲ್ಲಿ ಪೋಲ್ಯಾಯ್ದ ಜರ್ಮನರೂ ಹಿಂದೆ ಸರಿದಿರುವರು. ವೆರ್ಡನಿನ ಉತ್ತರದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಮಿತ್ರಸೇನಿಕರು ತಮ್ಮ ನೆಲೆಗಳನ್ನು ಬಿಟ್ಟುಕೊಟ್ಟಿಲ್ಲ. ಜರ್ಮನರು ಈ ರಣರಂಗದಲ್ಲಿ ವಿಶೇಷ ಪ್ರಾಣಾರ್ಪಣೆ ಮಾಡುತ್ತಿರುವರು. ಒಟ್ಟಾರೆ ಈ ರಣರಂಗದ ಕಾಳಗವು ಅತಿ ಘೋರವಾಗಿ ಪರಿಣಮಿಸಿರುವದ.

ವೆರ್ಡನಿಗೆ ಮುಂದರಿಯಲು ಜರ್ಮನರ ವ್ಯರ್ಥ ಪ್ರಯತ್ನದಿಂದಿರುವರು. ಜರ್ಮನ್ ಯುವರಾಜರು ಈ ಬಗ್ಗೆ ಅರ್ಧಮಿಲಿಯ ಜನರನ್ನು ತಂದೊಡ್ಡಿರುವರು. ರುಶ್ಯದಲ್ಲಿ ಜರ್ಮನ್ ಜನರಲ್ ಹಿಂಡೆನ್‌ಬರ್ಗರು ಕೈಕೊಂಡ ಕ್ರಮಕ್ಕನುಸಾರವಾಗಿ ಜರ್ಮನರು ಇಲ್ಲಿ ಅಭಿಯೋಗ ಮಾಡಬೇಕೆನ್ನುವರು. ೭ ಮೈಲ ವಿಸ್ತೀರ್ಣದ ಚಿಕ್ಕ ಒಂದು ರಣರಂಗದಲ್ಲಿ ಜರ್ಮನರ ಎರಡು ಸಾವಿರ ಸೇನಿಕರಿರುವರು. ಜರ್ಮನರು ತಮ್ಮ ೪೨ ಸೆಂಟಿಮೀಟರ್ ಫಿರಂಗಿಗಳನ್ನೆಲ್ಲಾ ಈ ಬಗ್ಗೆ ತಂದಿರುವರಲ್ಲದೆ ಶೂರರಾದ ಸೇನಿಕರನ್ನೂ ಇಲ್ಲಿಗೆ ತಂದಿರುತ್ತಾರೆ. ಜರ್ಮನರು ಫೆಬ್ರವರಿ ತಾ ೨೧ರಲ್ಲು ವೆರ್ಡನಿನ ಮೇಲೆ ಹಲ್ಲಾ ಮಾಡಲು ಪ್ರಾರಂಭಿಸಿ ಆ ದಿನ ಮತ್ತು ಮರುದಿನ ಫ್ರೆಂಚ ನೆಲೆಗಳ ಮೇಲೆ ವಿಶೇಷ ತೋರದ ತೋಪುಗುಂಡು ಹಾರಿಸಿದರು. ಜರ್ಮನರ ಕಾಲಾಳು ಸೇನಿಕರ ಮುಂದರಿಯಲು ಪ್ರಾರಂಭಿಸಿದರು. ಫ್ರೆಂಚರ ಯಂತ್ರಚಾಲಿತ ಫಿರಂಗಿಗಳು ಅವರನ್ನು ಹಿಂದಕ್ಕಟ್ಟಿದವು. ಯಾವ ಸ್ಥಳದಲ್ಲಿಯೂ ಫ್ರೆಂಚರ ನೆಲೆಗಳನ್ನು ಸ್ವಾಧೀನ ಮಾಡಿಕೊಳ್ಳಲು ಜರ್ಮನರಿಂದ ಸಾಧ್ಯವಾಗದೆ ಹೋಯಿತು. ತಾ ೨೩ರಲ್ಲು ಮುಂದರಿದ ಜರ್ಮನ ಸೇನಿಕರ ಒಂದು ಸೇನಾಂಗವೇ ನಿರ್ನಾಮವಾಯಿತೆಂತ ಕಣ್ಣಾರೆ ಕಂಡ ಬಾತ್ಮೀದಾರರೊಬ್ಬರು ತಿಳಿಸುವರು. ಒಂದು ಕಡೆಯಲ್ಲಿ ಜರ್ಮನರು ಎಂಟು ಸಾರಿ ಅಭಿಯೋಗ ಮಾಡಿ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು.

ಅಲ್ಬಾನಿಯದಲ್ಲಿ ಆಸ್ಟ್ರಿಯಾನರು ಡುರಾಜ್ಜೊ ಪಟ್ಟಣದ ಮೇಲೆ ಅಭಿಯೋಗ ಮಾಡಿರುತ್ತಾರೆ. ಅಲ್ಲಿದ್ದ ಅಲ್ಬಾನಿಯ ಮತ್ತು ಇಟಲಿ ಸೇನಿಕರು ಪಟ್ಟಣವನ್ನು ಬಿಟ್ಟು ಹೋಗಿರುವರು.

ಕೌಕಾಸಸಿನಲ್ಲಿ ರುಶ್ಯನರು ಇಶ್ಪನ್ ಪಟ್ಟಣವನ್ನು ನಾಶಮಾಡಿ ಎರ್ಜರಮ್ ಮತ್ತು ಕೈನ್ಸ್ ಪ್ರಾಂತ್ಯದಲ್ಲಿರುವ ತುರ್ಕರನ್ನು ಅಟ್ಟುವ ಕೆಲಸದಲ್ಲಿರುವರು.

ಕಪ್ಪು ಸಮುದ್ರದಲ್ಲಿ ರುಶ್ಯನರು ತುರ್ಕರ ೪ ಹಡಗಗಳನ್ನು ಮುಳುಗಿಸಿ ಅನಟೋಲಿಯನ್ [illegible] ಯನ್ನು ನಾಶಮಾಡಿರುವರು.

ರುಶ್ಯನರು ಎರ್ಜರಮಿನಲ್ಲಿ ಒಟ್ಟಿಗೆ ೧೩ ಸಾವಿರ ತುರ್ಕ[illegible]

ಯುದ್ಧ ಸಮಾಚಾರ.

ತಾ. ೨೩ನೇ ಫೆಬ್ರುವರಿ.

ವೆರ್ಡೂನಿನ ಉತ್ತರದಲ್ಲಿ ಕಠಿಣ ತೋಫು ಕಾಳಗವು ನಡೆಯುತ್ತಿದೆ. ಜರ್ಮನರು ಆರ್ಟೋಯಿಸಿನ ಮೇಲೆ ಎರಡಾವರ್ತಿ ಜೋರಾಗಿಯಿಂದ ನುಗ್ಗಿ ಬಂದರು. ಫ್ರೆಂಚರ ವಾಯುನಾವೆಗಳು ಡಿನೀನ್ಸ್, ವಾಯವ್ಯ ಮತ್ತು ಆಗ್ನೇಯ ದಿಕ್ಕಿನಲ್ಲಿರುವ ಜರ್ಮನರ ಮದ್ದುಗುಂಡುಗಳ ಕೊಠಡಿಗಳ ಮೇಲೆ ಸಿಡಿಮದ್ದುಗಳನ್ನು ಬಿಸಾಡಿರುವವು. ಶತ್ರುಗಳ ವಾಯುನಾವೆಗಳು ಲುನವಿಲ್ಲೆ, ಡೊಂಬೆಸ್ಲ್, ಮತ್ತು ನಾನ್ಸಿಯ ಮೇಲೆ ಸಿಡಿಮದ್ದುಗಳನ್ನು ಹಾಕಿರುತ್ತವೆ. ಆದರೆ ಶೇಷ ಹಾನಿಯಾಗಲಿಲ್ಲ.

ಬ್ರಿಟಿಷರ ೨೬ ವಾಯುನಾವೆಗಳು ಡೂನ್ ಎಂಬಲ್ಲಿದ್ದ ಜರ್ಮನರ ಮದ್ದುಗುಂಡುಗಳ ಕೊಠಡಿಗಳ ಮೇಲೆ ಸಿಡಿಮದ್ದುಗಳನ್ನು ಹಾಕಿದ್ದರಿಂದ ಜರ್ಮನರಿಗೆ ವಿಶೇಷ ನಷ್ಟವಾಗಿರುವದು. ಬ್ರಿಟಿಷರ ಎಲ್ಲಾ ವಾಯುನಾವೆಗಳು ಸುರಕ್ಷಿತವಾಗಿ ಹಿಂದೆ ಬಂದಿರುತ್ತವೆ. ಶತ್ರುಗಳ ವಾಯುನಾವೆಗಳು ಕೂಡಾ ನಮ್ಮವರ ನೆಲೆಗಳ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಆದರೆ ಅವರಿಗೆ ಯುದ್ಧ ಸಂಬಂಧವಾದ ಪ್ರಯೋಜನವಾಗಲಿಲ್ಲ. ಫ್ರೆಂಚರು ಬ್ರಬಂಟ್ ಲೆ ರೋಯಿ ಎಂಬಲ್ಲಿ ಜರ್ಮನರ ಒಂದು ಜೆಪಲಿನ್ ನಾವೆಗೆ ಗುಂಡು ಹಾರಿಸಿ ಕೆಳಗೆ ದೊಬ್ಬಿರುತ್ತಾರೆ.

ಯುದ್ಧದ ಖರ್ಚಿಗೋಸ್ಕರ ೩೦೧೪೨೦ ಮಿಲಿಯ ಪವನುಗಳನ್ನು ಸಂಕ್ಷನ್ ಮಾಡಬೇಕೆಂದು ಪ್ರಧಾನ ಅಮಾತ್ಯರವರು ಬ್ರಿಟಿಷ ಪಾರ್ಲಿಮೆಂಟಿನ ಸಮ್ಮತಿಯನ್ನು ಕೇಳಿರುವರು. ಆಗ್ಗೆ ಈ ಯುದ್ಧ ಕ್ಕೆಲ್ಲಾ ಬ್ರಿಟಿಷ ಪಾರ್ಲಿಮೆಂಟ್ ಸಭೆಯವರು ೨೦೮೨ ಮಿಲಿಯ ಪವನುಗಳನ್ನು ಸಂಕ್ಷನ್ ಮಾಡಿದಂತಾಗುವದು. ಭೂಸೇನೆಯ ನೌಕಾವಳಿಯ ಮತ್ತು ಯುದ್ಧ ಸಾಮಾಗ್ರಿಗಳ ಬಗ್ಗೆ ಬ್ರಿಟಿಷ ಸರಕಾರಕ್ಕೆ ದಿನ ೧೫ ೩ ಮಿಲಿಯ ಪವನುಗಳು ಖರ್ಚಾಗುತ್ತವೆ.

ರುಶ್ಯನರ ರಿಗ್ಗಾ ರಣರಂಗದಲ್ಲಿ ತೋಫುಕಾಳಗವು ನಡೆಯುತ್ತಿದೆ.

ಪೂರ್ವ ಆಫ್ರೀಕದ ಉಗಂಡದ ಗಡಿಯಲ್ಲಿ ಬ್ರಿಟಿಷ ಸೈನಿಕರು ಶತ್ರುಗಳ ಒಂದು ಸೇನೆಯನ್ನು ಸೋಲಿಸಿ ಓಡಿಸಿರುವರು. ಶತ್ರುಗಳ ಸೇನೆಯಲ್ಲಿ ೪ ಯುರೋಪಿಯನರು, ೫೩ ದೇಶೀಯರು, ಒಂದು ಯಂತ್ರಚಾಲಿತ ಫಿರಂಗಿ, ೪ ಮರ್‍ಟೈಸಲ್ ಕೋವಿಗಳ ನಷ್ಟವಾಗಿರುವದು. ಬ್ರಿಟಿಷರ ಸೇನೆಯಲ್ಲಿ ಏನೂ ನಷ್ಟವಾಗಲಿಲ್ಲ.

ಆಸ್ಟ್ರಿಯಾನರ ವಾಯುನಾವೆಗಳು ಇಟಲಿಯಾನರ ಕೆಲವು ಪಟ್ಟಣಗಳಿಗೆ ಬೊಂಬುಗಳನ್ನು ಎಸೆದಿರುತ್ತವೆ. ೪ ಮಂದಿ ಹತರಾಗಿರುವರು. ೧೨ ಮಂದಿ ಗಾಯ ಒಡೆದಿರುವರು.

ರುಶ್ಯನರು ಎರ್ಜರಮಿನಲ್ಲಿ ತುರ್ಕರನ್ನು ಹಿಂದಟ್ಟಿ ಪುನಃ ೨೫೪೯ ಸೇನಿಕರನ್ನೂ ೬ ಫಿರಂಗಿಗಳನ್ನೂ ಬಹಳ ಗುಂಡುಮದ್ದುಗಳನ್ನೂ ಹಿಡಿದಿರುತ್ತಾರೆ.

ರುಶ್ಯನರು ವಾನ್ ಸರೋವರದ ಪ್ರಾಂತ್ಯವನ್ನೆಲ್ಲಾ ಸ್ವಾಧೀನ ಮಾಡಿಕೊಂಡಿರುವರು. ತುರ್ಕರು ಬಿಟ್ಲಿಸ್ ಪಟ್ಟಣವನ್ನು ಬಿಟ್ಟು ಹೋಗುತ್ತಿರುವರು. ರುಶ್ಯನರು ಟ್ರೆಬಿಜೊಂಡಿನ ಕಡೆಗೆ ಮುಂದರಿಯುತ್ತಲಿರುವರು.

ಜಪಾನರು ೨೫,೦೦೦ ಟನ್ ಕಲ್ಲಿದ್ದಲನ್ನು ಈಜಿಪ್ಟಿಗೆ ಕಳುಹಿಸಿರುವರು ಎಂತ ವಾರ್ತೆ ಇದೆ.

ತಾ. ೨೪ನೇ ಫೆಬ್ರುವರಿ.

ಜರ್ಮನರ ಜಲಂತರ್ಗಾಮಿ ನಾವೆಯು ಬ್ರಿಟಿಷರ "ಡಿಂಗ್ಲೆ" ಎಂಬ ಹಡಗವನ್ನು ಮುಳುಗಿಸಿರುವದು. ಒಬ್ಬನು ಮಾತ್ರ ಉಳಿದಿರುವನು.

ಡಚ್ಚರ "ಲಾಫ್ಲಾಂಡ್ರೆ" ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ. ಈ ಹಡಗದ ಕೆಲವರನ್ನು ಬ್ರಿಟಿಷರ "ಚನ್ನೆಲ್" ಎಂಬ ನಾವೆಯು ರಕ್ಷಿಸಿರುವದು.

ಆರ್ಟೋಯಿಸಿನಲ್ಲಿ ಜರ್ಮನರು, ಫ್ರೆಂಚರ ಕಂದಕಗಳ ಮೊದಲನೇ ಸಾಲುಗಳ ಮೇಲೆ ಅಭಿಯೋಗ ಮಾಡಿ ಕಂದಕಗಳ ಎರಡನೇ ಸಾಲುಗಳ ವರೆಗೆ ತಲುಪಿದರು. ಆದರೆ ಫ್ರೆಂಚರು ಇವರ ಮೇಲೆ ನುಗ್ಗಿ ಹೋಗಿ ಹಿಂದಟ್ಟಿದರು. ಶತ್ರುಗಳ ೬ ಬಟಾಲಿಯನ್ ಸೇನಾಂಗಗಳು ಈ [illegible] ಮಾಡಿದವು. ಶತ್ರುಗಳಿಗೆ ಬಹಳ ನಷ್ಟವಾಗಿರುತ್ತದೆ. ವೆರ್ಡೂನಿನಲ್ಲಿಯೂ ತೋಫು ಕಾಳಗವು ಚಟುವಟಿಕೆಯಿಂದ ನಡೆಯುತ್ತದೆ. ಶತ್ರುಗಳ ಕಾಲಾಳು ಸೇನಿಕರು ಬ್ರಾಬಾಂಟ್-ಸುರ್-ಮ್ಯೂಸ್ ಎಂಬಲ್ಲಿ ಮೇಲ್ಬಾಯಿದು ಸ್ವಲ್ಪ ಮುಂದರಿದರು. ಆದರೆ ಫ್ರೆಂಚರು ಅವರನ್ನು ಹಿಂದಕ್ಕೆ ಓಡಿಸಿ ಅನೇಕರನ್ನು ಸೆರೆಹಿಡಿದರು. ಬೆಲ್ಜಿಯಂ ರಣರಂಗದಲ್ಲಿಯೂ ಕಠಿಣ ತೋಫು ಕಾಳಗವು ನಡೆಯುತ್ತಿದೆ.

ಇಟಲಿಯನರು ಟಿನೋ ಡಿಸ್ಟ್ರಿಕ್ಟಿನಲ್ಲಿ ಮುಂದರಿದಿರುತ್ತಾರೆ.

ಎರ್ಜರಮಿನಲ್ಲಿ ತುರ್ಕರಿಗೆ ೪೦ ಸಾವಿರ ಸೇನಿಕರ ನಷ್ಟವಾಗಿರುವದು. ರುಶ್ಯನರು ಕರಾವಳಿ ಪ್ರಾಂತ್ಯದಲ್ಲಿದ್ದ ತುರ್ಕರನ್ನು ೨೪ ತಾಸುಗಳ ವರೆಗೆ ಹಿಂದಟ್ಟಿ ೨೪ ಮೈಲು ದೂರ ಓಡಿಸಿರುವರು. ತುರ್ಕರು ಟ್ರೆಬಿಜೊಂಡನ್ನು ಬಿಟ್ಟು ಹೋಗಲು ಪ್ರಾರಂಭಿಸಿರುವರು ಎಂತ ವಾರ್ತೆ ಇದೆ.

ತಾ. ೨೫ನೇ ಫೆಬ್ರುವರಿ.

ವೆರ್ಡೂನಿನಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಮಿತ್ರಸೈನಿಕರು ಶತ್ರುಗಳನ್ನು ಎದುರಾಯಿಸಿ ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿರುವರು. ಜರ್ಮನರು ದೊಡ್ಡ ದೊಡ್ಡ ಫಿರಂಗಿಗಳಿಂದ ಎಡೆಬಿಡದೆ ಗುಂಡು ಹಾರಿಸುತ್ತಲಿರುವರು. ಮಿತ್ರ ಪಕ್ಷದವರು ಅಷ್ಟೇ ಬಲದಿಂದ ಶತ್ರುಗಳ ಮೇಲೆ ಗುಂಡು ಹಾರಿಸುತ್ತಲಿದ್ದಾರೆ.

ಜರ್ಮನರ ದೊಡ್ಡ ಮೊತ್ತದ ಸೇನೆಯು ಅರ್ಗಾಂಟ್ಸ್ರ್ ಮ್ಯೂಸ್ ಮತ್ತು ಒರ್ನೆಸಿನಲ್ಲಿ ಆಗಾಗ್ಗೆ ಅಭಿಯೋಗ ಮಾಡಿದರು. ಶತ್ರುಗಳು ಮಿತ್ರಸೈನಿಕರನ್ನು ಹರ್ಮೊಂಟ್ ಗ್ರಾಮದಿಂದ ಹಿಂದಟ್ಟಲು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ.

ಈಜಿಪ್ಟಿನಲ್ಲಿ ಎಲ್ ಹಸನ್ನಾ ಎಂಬಲ್ಲಿದ್ದ ಶತ್ರುಗಳ ಪಸರ್ ಸ್ಟೇಶನಿನ ಮೇಲೆ ಬ್ರಿಟಿಷ ವಾಯುನಾವಿಕರು ಬೊಂಬು ಹಾಕಿ ಅದನ್ನು ಹಾಳು ಮಾಡಿರುವರು.

ತಾ. ೨೬ನೇ ಫೆಬ್ರುವರಿ.

ಜಪಾನರ ಯುದ್ಧನಾವೆಗಳು ಮೆಡಿಟರೇನಿಯನ್ ಸಮುದ್ರಕ್ಕೆ ಹೋಗಿರುತ್ತವೆ ಎಂತ ಇಟಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವದು.

ವೆರ್ಡೂನಿನಲ್ಲಿ ರಾತ್ರಿಕಾಲವೆಲ್ಲಾ ಮ್ಯೂಸ್ ನದಿಯ ಬಲದಡದಿಂದ ಒರ್ನೆಸಿನ ದಕ್ಷಿಣದ ವರೆಗೆ ಕಠಿಣ ಕಾಳಗ ನಡೆದಿರುವದು. ಸಾಮ್ಗ್ನೆಸ್ನಲ್ಲಿ ಮೇಲ್ಬಾಯಿದ ಜರ್ಮನರ ಹಿಮ್ಮೆಟ್ಟಿರುವರು.

ಬಹಳ ಕಷ್ಟದಿಂದ ವಿಶೇಷ ನಷ್ಟಪಟ್ಟು ಮುಂದರಿದ ಜರ್ಮನರ ಮಿತ್ರಸೇನೆಯ ನೆಲೆಯನ್ನು ಯಾವ ಕಡೆಯಲ್ಲಿಯೂ ಭೇದಿಸಲು ಅಸಮರ್ಥರಾದರು. ಒರ್ನೆಸ್ ಮತ್ತು ಫ್ರೆಸ್ನೆಯ ಮಧ್ಯೆ ತೋಫುಗಳು ಎಡೆಬಿಡದೆ ಹಾರುತ್ತಲಿವೆ. ಲೊರೈನಿನಲ್ಲಿ ಜರ್ಮನರು ಸ್ವಲ್ಪ ಮುಂದರಿದರು. ಆದರೆ ಕೂಡಲೇ ಮಿತ್ರಸೇನಿಕರು ಅವರನ್ನು ಹಿಂದಟ್ಟಿದರು.

ಬಸ್ಸರೇಬಿಯನ್ ಸರಹದ್ದಿನಲ್ಲಿ ಸಣ್ಣ ಪುಟ್ಟ ಕದನಗಳು ನಡೆದಿರುವವು.

ಮೆಸಪಟೋಮಿಯ ರಣರಂಗದಲ್ಲಿ ಬಂದ ವಾರ್ತೆಯು ಈ ರೀತಿಯಾಗಿದೆ: ೨೩ನೇ ಫೆಬ್ರವರಿ ನಿನ್ನೆಯ ದಿವಸ ಜನರಲ್ ಗೊರಿಂಜಿಯವರು ರಾತ್ರಿಕಾಲ ಉಮ್ಮೆಲ್ ಉರ್ನ್ ನದಿಯ ಬಲದಡದಲ್ಲಿ ಮುಂದರಿದು ಬೆಳಗ್ಗೆ ಎಲ್ ಹನ್ನಾದ ಹಿಂದುಕಡೆಯ ತುರ್ಕರ ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ಸೂರ್ಯ ಮೂಡುತ್ತಲೇ ನಮ್ಮವರ ಫಿರಂಗಿಗಳು ನದಿಯ ಆಚೆ ದಡದಲ್ಲಿರುವ ಶತ್ರುಗಳ ಪಾಳೆಯದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿದವು. ನಮ್ಮ ಗುಂಡುಗಳಲ್ಲಿ ಮೊದಲನೇ ಗುಂಡು ಅವರ ಪಾಳೆಯದಲ್ಲಿ ಸಿಡಿದಾಕ್ಷಣ ತುರ್ಕರ ಕುದುರೆಗಳೂ, ಒಂಟೆಗಳೂ ಕತ್ತೆಗಳೂ ಸವಾರರೂ ಪಾಳೆಯದಿಂದ ಹೊರಟು ಹಿಂದರಿಯಲು ಪ್ರಾರಂಭಿಸಿದರು. ತುರ್ಕಿ ಸೇನೆಯಲ್ಲಿ ಅಪಾರವಾದ ನಷ್ಟವಾಗಿರುವದು.

ತಾ. ೨೮ನೇ ಫೆಬ್ರುವರಿ.

ಜರ್ಮನ್ ಕೈಸರರು ಕಳೆದ ವಾರ ವಿಲ್‌ಹೆಲ್ಮ್ ಶೆವೆನ್ ಎಂಬಲ್ಲಿಗೆ ಹೋಗಿ ಅಲ್ಲಿದ್ದ ಜರ್ಮನ್ ಯುದ್ಧ ನಾವೆಗಳನ್ನು ಸಂದರ್ಶಿಸಿಕೊಂಡು ಅದೇ ಸಾಯಂಕಾಲ ಹಿಂದೆರಳಿರುವರು.

ಜರ್ಮನರ ಜಲಂತರ್ಗಾಮಿ ನಾವೆಯು "ಡಿಡೊ" "ಡೆನಾಟಿ" "ಟಮ್ವೊಲ್" ಎಂಬ ಹಡಗಗಳನ್ನು ಮುಳುಗಿಸಿರುತ್ತವೆ. ಸ್ವೀಡನಿನವರ "ಬರ್ಗೆಟ್" ಮತ್ತು ಬ್ರಿಟಿಷರ ಫಾಸ್ಸನೆಟ್" ಎಂಬ ಹಡಗಗಳು ಪಶ್ಚಿಮ ಮೆಡಿಟರೇನಿಯನಿನಲ್ಲಿ ಮುಳುಗಿಸಲ್ಪಟ್ಟಿರುತವೆ.

ಪಿ. ಎಂಡ್ ಓ. ಕಂಪನಿಯ "ಮಲೋಜ" ಮೈಲ್ ಎಂಬ ಹಡಗವು ಡೋವರ್ ಎಂಬ ಜಲಸಂಧಿಯಲ್ಲಿ ಮುಳುಗಿತು ಎಂಬ ವಾರ್ತೆ ಬಂದಿರುವದು. ಈ ಹಡಗವು ಸಿಡಿಮದ್ದಿನ ಗಣಿಗೆ ತಗಲಿ ಈ ಅವಸ್ಥೆಯನ್ನು ಹೊಂದಿತೆಂತ ತಿಳಿದುಬರುತ್ತದೆ. ಮಲೋಜದಲ್ಲಿ ೧೧೯ ಪ್ರಯಾಣಿಕರಿದ್ದರು. ಈ ಪೈಕಿ ೭ ಮಂದಿ ಮಕ್ಕಳು, ಪ್ರಯಾಣಿಕರು ಜಿಬ್ರಾಲ್ಟರ್, ಮಾರ್ಸಲಿಸ್, ಮಾಲ್ಟ, ಈಜಿಪ್ಟ್, ಏಡೆನ್, ಮುಂಬಾಯಿ, ಮತ್ತು ಕರಾಚಿಗೆ ಹೋಗುವವರು. ಮಲೋಜ ಹಡಗವು ಜನವರಿ ೧೬ರಲ್ಲಿ ಮುಂಬಾಯಿಂದ ಹೊರಟು ಫೆಬ್ರುವರಿ ತಾ. ೮ರಲ್ಲಿ ಲಂಡನಿಗೆ ತಲುಪಿತು. ಪುನಃ ಲಂಡನಿನಿಂದ ಮುಂಬಾಯಿಗೆ ಹಿಂದೆ ಪ್ರಯಾಣ ಮಾಡುತ್ತಿರುವಾಗ ಈ ಪರಿಣಾಮವನ್ನು ಹೊಂದಿತು. ಅದು ಮುಂಬಾಯಿಗೆ ಬಂದು ತಲುಪಿದ್ದರೆ ಪುನಃ ಏಪ್ರಿಲ್ ತಾ. ೩ರಲ್ಲಿ ಲಂಡನಿಗೆ ಹೊರಟು ಹೋಗುತ್ತಿತ್ತು. ಹಾರ್ಡಿಂಜ ಪ್ರಭುಗಳು ಇದೇ ಹಡಗದಲ್ಲಿ ಸೀಮೆಗೆ ಪ್ರಯಾಣ ಮಾಡುವವರಾಗಿದ್ದರು. "ಮಲೋಜ"ವು ೧೨೪೩ ಟನ್‌ಗಳ ಬಾರವಣಿ ಹಡಗ ೧೧೬೪ ಕುದುರೆ ಬಲವು ಈ ಹಡಗಕಿತ್ತು. ಮುಂಬಾಯಿಂದ ಲಂಡನಿಗೆ ಟಪ್ಪಾಲು ಮತ್ತು ಪ್ರಯಾಣಿಕರನ್ನು ಈ ಹಡಗವು ಕ್ರಮವಾಗಿ ಕೊಂಡು ಹೋಗುತ್ತಿತ್ತು.

ಟಾಗಸಿನಲ್ಲಿ ಹಿಡಿಯಲ್ಪಟ್ಟ ಜರ್ಮನ ಮತ್ತು ಆಸ್ಟ್ರಿಯನರ ಹಡಗ ಒಟ್ಟಿಗೆ ೩೬. ಜರ್ಮನರ "ಹೊಚೆಪಲ್ಟ್" ಎಂಬ ಹಡಗವು ಮಡೀರಿಯದಿಂದ ತಪ್ಪಿಸಿಕೊಂಡು ಹೋಗಿರುವದು. ಪೋರ್ಚುಗಲಿನವರು ವರ್ಡೆ ಭೂಶಿರದ ಬಳಿ ಪುನಃ ಜರ್ಮನರ ೮ ಹಡಗಗಳನ್ನು ಹಿಡಿದಿರುತ್ತಾರೆ.

ವೆರ್ಡೂನಿನ ಉತ್ತರದಲ್ಲಿ ಫಿರಂಗಿಗಳ ಹೊಡೆತವು ಸ್ವಲ್ಪ ಕಡಿಮೆಯಾಗಿರುತ್ತದೆ. ಜರ್ಮನರು ರಾತ್ರಿ ಕಾಲ ಅಭಿಯೋಗ ಮಾಡಲಿಲ್ಲ. ವೆರ್ಡೂನಿನ ಉತ್ತರದಲ್ಲಿ ವಿಶೇಷ ಹಿಮ ಬಿದ್ದಿರುವದು. ಮ್ಯೂಸಿನ ಪೂರ್ವದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಕೆಲವು ಕಡೆಗಳಲ್ಲಿ ಜರ್ಮನರು ಮೇಲ್ಬಾಯಿದು ಸಫಲ ಹೊಂದಲಿಲ್ಲ. ಲಫೋಕ್ ಅಡವಿಯಲ್ಲಿ ಮೇಲ್ಬಾಯ್ದ ಜರ್ಮನರೂ ಹಿಂದೆ ಸರಿದಿರುವರು. ವೆರ್ಡೂನಿನ ಉತ್ತರದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಮಿತ್ರಸೇನಿಕರು ತಮ್ಮ ನೆಲೆಗಳನ್ನು ಬಿಟ್ಟುಕೊಟ್ಟಿಲ್ಲ. ಜರ್ಮನರು ಈ ರಣರಂಗದಲ್ಲಿ ವಿಶೇಷ ಪ್ರಾಕಾರ್ಯ ಮಾಡುತ್ತಿರುವರು. ಒಟ್ಟಾರೆ ಈ ರಣರಂಗದ ಕಾಳಗವು ಅತಿ ಘೋರವಾಗಿ ಪರಿಣಮಿಸಿರುವದು.

ವೆರ್ಡೂನಿಗೆ ಮುಂದಾಯಿತು ಜರ್ಮನರ ಘೋರ ಪ್ರಯತ್ನದಿಂದಿರುವರು. ಜರ್ಮನ್ ಯುವರಾಜರು ಈ ಬಗ್ಗೆ ಅರ್ಧಮಿಲಿಯ ಜನರನ್ನು ತಂದೊಡ್ಡಿರುವರು. ರುಶ್ಯದಲ್ಲಿ ಜರ್ಮನ್ ಜನರಲ್ ಹಿಂಡನ್ ಬರ್ಗರವರ ಕೈಕೆಳಗಿಂದ ಕ್ರಮಕ್ರಮಾನುಸಾರವಾಗಿ ಜರ್ಮನರು ಇಲ್ಲಿ ಅಭಿಯೋಗ ಮಾಡಬೇಕೆ ಇರುವರು. ೭ ಮೈಲ ವಿಸ್ತೀರ್ಣದ ಬಿಕ್ಕಟ್ಟಾದ ರಣರಂಗದಲ್ಲಿ ಜರ್ಮನರ ಎರಡು ಸಾವಿರ ಸೇನಿಕರಿರುವರು. ಜರ್ಮನರ ತಮ್ಮ ೪೨ ಸೆಂಟಿಮೀಟರ ಫಿರಂಗಿಗಳನ್ನೆಲ್ಲಾ ಈ ಬಗ್ಗೆ ತಂದಿರುವರಲ್ಲದೆ ಶೂರರಾದ ಸೇನಿಕರನ್ನೂ ಇಲ್ಲಿಗೆ ತಂದಿರುತ್ತಾರೆ. ಜರ್ಮನರು ಫೆಬ್ರುವರಿ ತಾ. ೨೧ರಲ್ಲಿ ವೆರ್ಡೂನಿನ ಮೇಲೆ ಹಲ್ಲಾ ಮಾಡಲು ಪ್ರಾರಂಭಿಸಿ ಆ ದಿನ ಮತ್ತು ಮರುದಿನ ಫ್ರೆಂಚ ನೆಲೆಗಳ ಮೇಲೆ ವಿಶ್ವ ತೋರದಂತೆ ಗುಂಡು ಹಾರಿಸಿದರು. ಜರ್ಮನರ ಕಾಲಾಳು ಸೇನಿಕರು ಮುಂದರಿಯಲು ಪ್ರಾರಂಭಿಸಿದರು. ಫ್ರೆಂಚರ ಯಂತ್ರಚಾಲಿತ ಫಿರಂಗಿಗಳು ಅವರನ್ನು ಹಿಂದಕ್ಕಟ್ಟಿದವು. ಯಾವ ಸ್ಥಳದಲ್ಲಿಯೂ ಫ್ರೆಂಚರ ನೆಲೆಗಳನ್ನು ಸ್ವಾಧೀನ ಮಾಡಿಕೊಳ್ಳಲು ಜರ್ಮನರಿಂದ ಸಾಧ್ಯವಾಗದೆ ಹೋಯಿತು. ತಾ. ೨೨ರಲ್ಲು ಮುಂದರಿದ ಜರ್ಮನ ಸೇನಿಕರ ಒಂದು ಸೇನಾಂಗವೇ ನಿರ್ನಾಮವಾಯಿತೆಂತ ಕಣ್ಣಾರೆ ಕಂಡ ಬಾತ್ಮಿದಾರರೊಬ್ಬರು ತಿಳಿಸುವರು. ಒಂದು ಕಡೆಯಲ್ಲಿ ಜರ್ಮನರು ಎಂಟು ಸಾರಿ ಅಭಿಯೋಗ ಮಾಡಿ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು.

ಅಲ್ಬಾನಿಯದಲ್ಲಿ ಆಸ್ಟ್ರಿಯಾನರು ಡುರಾಜ್ಜೊ ಪಟ್ಟಣದ ಮೇಲೆ ಅಭಿಯೋಗ ಮಾಡಿರುತ್ತಾರೆ. ಅಲ್ಲಿದ್ದ ಅಲ್ಬಾನಿಯ ಮತ್ತು ಇಟಲಿ ಸೇನಿಕರು ಪಟ್ಟಣವನ್ನು ಬಿಟ್ಟು ಹೋಗಿರುವರು.

ಕಾಕಾಸೆಸಿನಲ್ಲಿ ರುಶ್ಯನರು ಇಸ್ಪಿರ್ ಪಟ್ಟಣವನ್ನು ನಾಶಮಾಡಿ ಎರ್ಜರಮ್ ಮತ್ತು ಕೈಸ್ ಪ್ರಾಂತ್ಯದಲ್ಲಿರುವ ತುರ್ಕರನ್ನು ಅಟ್ಟುವ ಕೆಲಸದಲ್ಲಿರುವರು.

ಕಪ್ಪು ಸಮುದ್ರದಲ್ಲಿ ರುಶ್ಯನರು ತುರ್ಕರ ೪ ಹಡಗಗಳನ್ನು ಮುಳುಗಿಸಿ ಅನಟೋಲಿಯನ್ ಕರಾವಳಿಯಲ್ಲಿರುವ ರೈಲ್ವೇ ಸ್ಟೇಶನ ಯನ್ನು ನಾಶಮಾಡಿರುವರು.

ರುಶ್ಯನರು ಎರ್ಜರಮಿನಲ್ಲಿ [illegible] ೧೩ ಸಾವಿರ [illegible]

ಸೈನಿಕರನ್ನು, [illegible] ಫಿರಂಗಿಗಳನ್ನು ಬಹಳ ಯುದ್ಧ ಸಾಮಗ್ರಿ ಯನ್ನು ಹಿಡಿದಿರುವರು.

ತುರ್ಕರು ಎರ್ಜರಮಿನ ಪಶ್ಚಿಮದಲ್ಲಿ ೬೦ ಮೈಲು ದೂರ ದಲ್ಲಿರುವ ಪರ್ವತಗಳಲ್ಲಿ ನಿಂತು ರುಶ್ಯನರನ್ನು ಎದುರಾಯಿಸ ಹೇಳಿಕೊಂಡಿರುವರು.

ಪಾರ್ಶಿಸ್ಥಾನದಲ್ಲಿ ರುಶ್ಯನರು ಕಾವರ್ನಶಾ ಎಂಬ ಪಟ್ಟಣ ವನ್ನು ತೆಗೆದುಕೊಂಡಿರುವರು.

ತಾ. ೨೯ನೇ ಫೆಬ್ರುವರಿ.

[illegible] ಗಣಗೆ ಹಾಗಿ ಮುಣುಗಿದ "ಮಲೋಜ" ಹಡಗ ದಲ್ಲಿ ಒಟ್ಟಿಗೆ ೧೫೫ ಪ್ರಯಾಣಿಕರಿದ್ದರು. [illegible] [illegible] ಳುಳ್ಳಿರುವರು ಎಂತ ಪಿ. ಎಂಡ್. ಒ. ಕಂಪೆನಿಯವರು [illegible] ದರು. ಆದರೆ ಇತರ ವಾರ್ತೆಯಿಂದ ನಾವಿಕರೂ ಪ್ರಯಾಣಿಕರೂ ಒಟ್ಟಿಗೆ ಈ ಹಡಗದಲ್ಲಿ ೪೧೧ ಮಂದಿ ಇದ್ದರು. ಈ ಪೈಕಿ ೨೬೦ ಮಂದಿ ರಕ್ಷಿಸಲ್ಪಟ್ಟಿರುವರು ಎಂತ ತಿಳಿಯುಬರುತ್ತದೆ. "ಮಲೋಜ" ಕ್ಕೆ ಸಹಾಯಮಾಡಲು ಹೋದ "ಎಂಪ್ರೆಸ್ ಆಫ್ ಫೋರ್ಟ ನಿ ಯೇಂ" ಎಂಬ ಹಡಗವೂ [illegible] ಗಣಗೆ ಹಾಗಿ ಮುಣುಗಿರುವದು.

ವೆರ್ಡನ್ [illegible] ಇನ್ನೂ ಕೊನೆಗಾಣಲಿಲ್ಲ.

ವೆರ್ಡನ್‌ದಲ್ಲಿ [illegible] ಕೈಸರರು [illegible] [illegible] ಎಂತ [illegible] [illegible].

[illegible] [illegible] ಎಂಬ [illegible] ಹಡಗವು [illegible] [illegible].

[illegible] [illegible] [illegible] ಅಟ್ಟುವ ಕೆಲಸ ದಲ್ಲಿ [illegible]. [illegible] [illegible] [illegible] [illegible] [illegible] [illegible] [illegible]

~~~~~~

ಉತ್ತರ ಹಿಂದೂಸ್ಥಾನ.

~~~~~~

[illegible] [illegible] ಕಾಳು ಎಂಬ ಹೆಸರಿನ ಟಪ್ಪಾಲು [illegible] [illegible] ಇತರರ ಹೆಸರಿಗೆ ಬಂದ ಒಂದು [illegible] ತನ್ನ ಹೆಬ್ಬೆಟ್ಟಿನ ಗುರುತು ಹಾಕಿ ಆ ಹಣವನ್ನು ಸ್ವಂತ ಉಪಯೋಗ ಮಾಡಿಕೊಂಡದ್ದರಿಂದ ಸಕ್ಕೂರು ಸೆಶನ್ಸ್ ಜಡ್ಜರು ಅಪರಾಧಿತನಿಗೆ ೩ ವರ್ಷಗಳ ಕಠಿಣ ಸಜಾ ವಿಧಿಸಿದರು.

~~~~~~

ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿಯ ಪ್ರೊಫೆಸರ್ ಒಟನ ರಿಗೆ ಹೊಡೆದ ಸಂಬಂಧ ಕಾಲೇಜಿಯ ಅಧಿಕಾರಿಗಳು [illegible] ವಿದ್ಯಾರ್ಥಿಗಳನ್ನು ಕಾಲೇಜಿಯಿಂದ ತೆಗೆದು ಹಾಕಿ ದರೆಂತ ತಿಳಿಸಿದ್ದೆವಷ್ಟೆ. ಈ ವಿಷಯ ನಂತರ ಬಂದ ವಾರ್ತೆಯ [illegible] [illegible]. ಕಾಲೇಜಿಯ ಪ್ರಿನ್ಸಿಪಾಲರಾದ ವೆ. ಜೇಮ್ಸರವರು ತಾ. [illegible] ಇದರ ಪ್ರೊಫೆಸರೊಂದಿಗೆ ಏಡನ್ ಹಿಂದೂ ಹೊಸ್ಟೇಲಿಗೆ ಹೋಗಿ ಬಾಬು ಅನಂಗ ಮೋಹನ್ ದಾಸ್ ಎಂಬ ವಿದ್ಯಾ ರ್ಥಿಯನ್ನು ಕಂಡು ಸದರಿ ವಿದ್ಯಾರ್ಥಿಯು ಪ್ರೊಫೆಸರಿಗೆ ಹೊಡೆದ ತಕ್ಷೀರಿನಲ್ಲಿ ಸೇರಿದವನಾದ, ಕಾರಣ ಕಾಲೇಜಿ ಯಿಂದ ತೆಗೆದು ಹಾಕಿದ್ದೇವೆಂತ ತಿಳಿಸಿದರಲ್ಲದೆ ಕಾಲೇ ಜಿಯ ಅಧಿಕಾರಿಗಳಿಂದ ಬಹಿಷ್ಕಾರ ಮಾಡಲ್ಪಟ್ಟ "ಬಾಬು ಅನಂಗ ಮೋಹನ್ ದಾಸನು ಏಡನ್ ಹಿಂದೂ ಹೊಸ್ಟೆ ಲಿನ ಹೆಬ್ಬಾಗಿಲನ್ನು ಪ್ರವೇಶಿಸ ಕೂಡದು, ಹಿಂದೂ ಹೊಸ್ಟೆ ಲಿನ ಇತರ ವಿದ್ಯಾರ್ಥಿಗಳು ಅಗತ್ಯವಾದ ವಿಷಯದಲ್ಲಿ ಹೊಸ್ಟೆಲ್ ಸುಪರಿಂಟೆಂಡೆಂಟರ ಅಪ್ಪಣೆ ಪಡೆದು ಅಂದರೆ ಅವನ ಪುಸ್ತಕ ಇತ್ಯಾದಿಗಳನ್ನು ಅವನಿಗೆ ಕೊಡುವ ಸಂಗ ತಿಯಲ್ಲಿ ಅಲ್ಲದೆ ಇತರ ಸಂಗತಿಯಲ್ಲಿ ಅವನೊಡನೆ ಸಂಭಾಷಣ ಮಾಡ ಕೂಡದು. ಅವನ ಸಾಮಾನುಗಳನ್ನು ಊರಿಗೆ ಕೊಂಡು ಹೋಗುವ ವಿಷಯದಲ್ಲಿ ಬೇಕಾದ ಸಹಾಯವು ಅವನಿಗೆ ಕೊಡಲ್ಪಡುವದು. ಅವನಿಗೆ ಹಣ ಬೇಕಾದರೆ ಪ್ರಿನ್ಸಿಪಾಲರು ಕೊಡುವರು. ಈ ಸಾಯಂಕಾಲ ಅವನು ಸೈಲೆಟನಲ್ಲಿರುವ ಅವನ ಮನೆಗೆ ಹೊರಟು ಹೋಗಬೇಕಾಗುವದು ಎಂಬದಾಗಿ ಸೂಚಿ ಸುವ ನೋಟೀಸನ್ನು ಹೊಸ್ಟೆಲ್ ಬೋರ್ಡಿನಲ್ಲಿ ಹಚ್ಚಿಸಿ ದರು. ಎಸ್. ಚಂದ್ರ ಘೋಷನೆಂಬ ಇನ್ನೊಬ್ಬ ವಿದ್ಯಾರ್ಥಿ ಯನ್ನೂ ಕಾಲೇಜಿಯಿಂದ ಬಹಿಷ್ಕಾರ ಮಾಡಿರುವರು.

ಕಡೆಗೆ ಬಂದ ವಾರ್ತೆಯ ಪ್ರಕಾರ ಕಲ್ಕತ್ತಾ ಪ್ರೆಸಿ ಡೆನ್ಸಿ ಕಾಲೇಜಿಯ ಈ ಆಕಸ್ಮಿಕವಾದ ವಿಷಯವು ಕೌತುಕ ವಾದ ಪರಿಣಾಮವನ್ನು ಹೊಂದಿರುವದೆಂತ ತಿಳಿದುಬರು ವದು. ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿಯ ವ್ಯವಸ್ಥಾಕ್ರಮ ಇತ್ಯಾದಿಗಳನ್ನು ಕುರಿತು ವಿಚಾರಿಸುವದೆ ಬಂಗಾಳ ಸರ ಕಾರದವರು ಒಂದು ಕಮಿಟಿಯನ್ನು ನಿರ್ಮಿಸಿ, ತನ್ನನ್ನು ಅದರ ಮೆಂಬರರಲ್ಲೊಬ್ಬರಾಗಿ ಸೇರಿಸಿದ್ದಾರೆಂಬದಾಗಿ ಸದರಿ ಕಾಲೇಜಿಯ ಪ್ರಿನ್ಸಿಪಾಲ ಜೇಮ್ಸರವರಿಗೆ ತಿಳಿದು ಬಂದಾಕ್ಷಣ ಪ್ರಿನ್ಸಿಪಾಲ್ ಜೇಮ್ಸನವರು ಬಂಗಾಳ ಸರಕಾರದ ಕೌನ್ಸಿಲಿನ ವಿದ್ಯಾಖಾತೆಯ ಮೆಂಬರರಾಗಿ ರುವ ಮಾನ್ಯ ಮಿ. ಲಿಯೊನರಲ್ಲಿಗೆ ಹೋಗಿ ಅವರನ್ನು ಅವಮಾನಪಡಿಸಿ ಮಾತನಾಡಿದರಲ್ಲದೆ ಸರಕಾರದವರು ನೇಮಿಸಿದ ಈ ಕಮಿಟಿಯ ಮೆಂಬರರಲ್ಲಿ ಇಬ್ಬರನ್ನು ಬಿಟ್ಟು ತಾನು ಸರಕಾರಕ್ಕೆ ಬರೆಕೊಂಡ ಪತ್ರದ ನಕಲನ್ನು ಕಮಿಟಿಯ ಮುಂದಿಡಬೇಕೆಂದು ಸದರಿ ಕಮಿಟಿಯ ಸೆಕ್ರೆ ಟರಿಯನ್ನು ಕೇಳಿಕೊಂಡರು. ಈ ಕಾರಣದಿಂದ ಮಿ। ಜೇಮ್ಸರವರು ಸದರಿ ಕಾಲೇಜಿಯ ಪ್ರಿನ್ಸಿಪಾಲ ಕೆಲಸಕ್ಕೆ ಅಯೋಗ್ಯರೆಂಬದಾಗಿ ಬಂಗಾಳ ಗವರ್ನರರು ನಿರ್ಣಯಿಸಿ ಮಿ। ಜೇಮ್ಸರನ್ನು ಆ ಕೆಲಸದಿಂದ ತೆಗೆದಿರುವರಲ್ಲದೆ ಇನ್ನೊಂದು ಹುಕುಂ ಕೊಡುವ ವರೆಗೆ ಅಮಾನತು ಮಾಡಿ ಪ್ರೆಸಿಡೆನ್ಸಿ ಡಿವಿಜನ್ ಶಾಲೆಗಳ ಇನ್ಸ್‌ಪೆಕ್ಟರಾಗಿರುವ ಮಿ। ವರ್ಡ್ಸ್‌ವರ್ತರನ್ನು ಪ್ರೆಸಿಡೆನ್ಸಿ ಕಾಲೇಜಿಯ ಪ್ರಿನ್ಸಿಪಾಲ ರಾಗಿ ನೇಮಿಸಿರುತ್ತಾರೆ.

ಕಾಲೇಜ್ ಅಧಿಕಾರಿಗಳಿಂದ ಕಾಲೇಜಿಯಿಂದ ಬಹಿ ಷ್ಕಾರ ಮಾಡಲ್ಪಟ್ಟ ಎಮ್. ಎ. ಕ್ಲಾಸಿನ ವಿದ್ಯಾರ್ಥಿ ಯಾಗಿದ್ದ ಅನಂಗ ಮೋಹನ ದಾಸನು ತನನ್ನು ವಿಚಾರಿಸ ಬೇಕೆಂದು ಸರಕಾರದವರಿಂದ ನೇಮಿಸೋಣಾದ ಕಮಿ ಟಿಗೆ ಮನವಿಮಾಡಿಕೊಂಡಿರುವನು.

~~~~~~

ಇದೇ ಕಳೆದ ಫೆಬ್ರುವರಿ ತಾ. ೧೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೯೪೨೭ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೭೪೮೭ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂಧಿನಲ್ಲಿ ೧೫೭೮; ಮದ್ರಾಸ್ ೨೮೮, ಬಿಹಾರ್ ಮತ್ತು ಒರಿಸ್ಸ ೮೦೧; ಸಂ ಯುಕ್ತ ಸಂಸ್ಥಾನ ೧೯೩೪; ಪಂಜಾಬು ೧೧೫೫; ಬರ್ಮ ೫೪೭; ಮಧ್ಯಸಂಸ್ಥಾನ ೪೬; ಕಾಶ್ಮೀರ ೩ ಮರಣಗ ಳಾದವು.

~~~~~~

ಮುಂಬಯಿ ಹ್ಯಾಕೋರ್ಟಿನಲ್ಲಿ ನಾಮದಾರ ಸರ್. ದಿನಶಾ ಡಿ ಹಾವರ ಹ್ಯಾಕೋರ್ಟ ಜಡ್ಜ ಇವರ ಮುಂದೆ ಮೆಸರ್ಸ ಕೆ. ಟಿ. ಡೋಂಗರೆ ಮತ್ತು ಕಂಪೆನಿಯವರು ತಮ್ಮ ಟ್ರೇಡಮಾರ್ಕದಂತೆ ಇರುವ ಮಾರ್ಕವನ್ನುಪಯೋ ಗಿಸಿ "ಡಲಾರ್ಸ ಬಾಲಾಮೃತ"ವೆಂಬ ಔಷಧವನ್ನು ಮಾರಾಟ ಮಾಡಿ ತಮ್ಮ ವ್ಯಾಪಾರಕ್ಕೂ, ಸಾರ್ವಜನಿಕ ರೀತಿಯಿಂದ ತಾವು ಪಡೆದಿರುವ ಖ್ಯಾತಿಗೂ ಹಾನಿ ತಗು ಲುವಂಥ ಕೃತಿಯನ್ನು ಮಾಡಿದ್ದಕ್ಕಾಗಿ ಮಿ. ದಲಾರರವ ಮೇಲೆ ದಾವೆಯನ್ನು ಮಾಡಿ ತಮ್ಮ ಟ್ರೇಡಮಾರ್ಕದಂ ರುವ ಲೇಬಲನ್ನು ಉಪಯೋಗಿಸಬಾರದು ಮತ್ತು ಹಾ ಇವತ್ತಿನ ವರೆಗೆ ಮಾಡಿದ್ದರಿಂದ ತಮಗೆ ಸಂಭವಿಸಿ ಹಾನಿಯನ್ನು ತುಂಬಿಕೊಡಬೇಕೆಂಬ ವಿಷಯವಾ ಮಾಡಿದ ದಾವೆಯನ್ನು ನಾಮದಾರ ಜಡ್ಜರವರು ವಿಚಾ ಮಾಡಿದ್ದರಲ್ಲಿ ಪ್ರತಿವಾದಿಯು ಸ್ವಂತ ಒಪ್ಪಿಗೆಯ ಮೆ ಲಿಂದ ಮೆಸರ್ಸ ಡೋಂಗರೆಯವರ ಗುಣವಾಗಿ ತರ್ಪು ಹೇಳಿ ಮಿ. ದಲಾರರವರು ಇನ್ನು ಮುಂದೆ ಡೋಂಗರೆಯು ವರ ಟ್ರೇಡ ಮಾರ್ಕದಂತಿರುವ ತಮ್ಮ ಲೇಬಲನ್ನು ರದ್ದು ಪಡಿಸಬೇಕು. ಮತ್ತು ಡೋಂಗರೆಯವರಿಗೆ ಸಂಭವಿಸಿದ ದಾವೆಯ ಖರ್ಚಿನ ಹಣವನ್ನು (ರೂ. ೫೦೦) ಪ್ರತಿವಾ ದಿಯು ಕೊಡಬೇಕೆಂದು ತೀರ್ಮಾನಿಸಿದರು. ಇದರ ಮೇಲಿಂದ ವ್ಯಾಪಾರ ಮಾಡತಕ್ಕ ಎಲ್ಲ ಜನರು ಬೇರೆಯ ವರ ಟ್ರೇಡಮಾರ್ಕದಂತೆ ತಮ್ಮ ಟ್ರೇಡ ಮಾರ್ಕ ಮಾಡಿಸಿ ವ್ಯಾಪಾರ ಮಾಡುವದರಿಂದ ಕಾಯಿದೆಯಿಂದ ತಕ್ಷೀರು ಗಾರರಾಗಿ ಸರಕಾರದ ದಂಡನೆಗೆ ಪಾತ್ರರಾಗುತ್ತಾರೆಂಬ ದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂಬುವದು ಸ್ಪಷ್ಟವಾಗಿ ತೋರುತ್ತದೆ.

~~~~~~

ದಿಲ್ಲಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಲೇಡಿ ಹಾರ್ಡಿಂಜರ ಹೆಸರಿನ ಹೆಂಗಸರ ವೈದ್ಯ ಕಾಲೇಜು ಬಗ್ಗೆ ಇನ್ನೂ ಹೆಚ್ಚಿನ ಹಣವು ಅಗತ್ಯವೆಂದು ಹಾರ್ಡಿಂಜ ಪ್ರಭುಗಳವರು ಕಾಲೇಜು ಪ್ರತಿಷ್ಠೆಯ ದಿನ ಮಾಡಿಕೊಂಡ ವಿಜ್ಞಾಪನೆ ಯನ್ನು ಮಾನ್ಯ ಮಾಡಿ ಗ್ವಾಲಿಯೋರ್ ಮಹಾರಾಜರ ವರು ಅರ್ಧ ಲಕ್ಷ, ಭೋಪಾಲಿನ ಬೇಗಮರವರು ರೂ. ೫೦,೦೦೦, ಬಿಕಾನಿರ್ ಮಹಾರಾಜರವರು ೧೫,೦೦೦ ರೂಪಾಯಿ ದಾನ ಮಾಡಿರುವರು.

~~~~~~

ದಕ್ಷಿಣ ಹಿಂದೂಸ್ಥಾನ.

~~~~~~

ಮಿ। ಎಚ್. ಬಿ. ಹಾರ್ಡಿಂಜರವರನ್ನು ಕೊಲೆ ಮಾಡಿದ ಘಾತುಕನು ಸೇಲಂ ಜಿಲ್ಲೆಯ ತಿರುಪತ್ತೂರಿಗೆ ಸೇರಿದ ವನಿಯಂಬಾಡಿ ಎಂಬ ಸ್ಥಳದವನು. ಆತನ ಹೆಸರು ಸಯ್ಯದ್ ಇಸ್ಮಯೀಲ್. ವಯಸ್ಸು ೩೦-೩೫ ವರ್ಷಗ ಳಾಗಿರಬಹುದು. ಘಾತುಕನು ಸಬ್ ಜೈಲಿನಲ್ಲಿ ತಾ. ೭೩ನೇ ದಿನ ಜೈಲ್ ವಾರ್ಡರನಿಗೆ ಹೊಡೆದು ಘಾಯಪಡಿ ಸಿರುವನು. ಘಾತುಕನನ್ನು ಆಸ್ಪತ್ರೆಗೆ ಕೊಂಡುಹೋಗ ಲಿಕ್ಕಿರುವಾಗ ಅವನು ಥಕ್ಕನೇ ಗಾರ್ಡ್ಸ ಕೋಣೆಗೆ ಓಡಿ ಖಡ್ಗವನ್ನು ತೆಗೆದು ಅಲ್ಲಿದ್ದವರನ್ನೆಲ್ಲಾ ಓಡಿಸಿಕೊಂಡು ಹೋದನು; ವಾರ್ಡರನು ತಪ್ಪಿಸಿಕೊಳ್ಳಲಾರದವನಾದ್ದ ರಿಂದ ಘಾತುಕನು ಹೊಡೆದ ಪೆಟ್ಟು ವಾರ್ಡರನ ಎಡ ಕಿವಿಯ ಬಳಿ ತಾಗಿ ಜಖಂ ಆಯಿತು. ಅನಂತರ ಘಾತುಕ ನಿಗೆ ಗುಂಡುಹಾರಿಸಿ ಅವನ ಕೈಯ ಇದ್ದ ಖಡ್ಗವನ್ನು ತಕ್ಕೊಳ್ಳಬೇಕಾಯಿತು. ಗುಂಡು ಹಾರಿಸಿದ್ದರಿಂದ ಘಾತು ಕನ ಬಲಕೈಯಲ್ಲಿ ಜಖಂ ಆಯಿತು. ಘಾತುಕನಿಗೆ ಪ್ರಾ ಣಾಪಾಯವಿಲ್ಲ. ಆದರೆ ಸದರಿ ವಾರ್ಡರನು ಆಸ್ಪತ್ರೆ ಯಲ್ಲಿ ಮೋದಂಡಸ್ಥಿತಿಯಲ್ಲಿರುವನು.

~~~~~~

ಬೆಂಗಳೂರು ಸೆಂಟ್ರಲ್ ಕಾಲೇಜಿನ ಬಿ. ಎ. ತರಗ ತಿಯ ಕೃಷ್ಣಮೂರ್ತಿ ಎಂಬ ವಿದ್ಯಾರ್ಥಿಯು [illegible] ಮೆರ್ಕ್ಯೂರಿಕ್ [illegible] [illegible] [illegible] [illegible] [illegible]
~~~~~~

ಹೆಚ್ಚಿನ ಮಾರ್ಕುಗಳು ಸಿಕ್ಕದಿದ್ದುದೇ ಈ ಸ್ವಘಾತಕ್ಕೆ ಕಾರಣವಂತೆ.

~~~~~~

ಮದ್ರಾಸಿನಲ್ಲಿ ಪ್ರಕಟವಾಗುವ ಹಿಂದೂ ಪತ್ರಿಕೆಯ ಆಫೀಸಿಗೆ ಹತ್ತಿರವಿದ್ದ ಲಿರಿಕ್ ಥಿಯೇಟರಿಗೆ ತಾ. ೨೫ನೇ ಮಧ್ಯಾನ್ಹ 3 ಗಂಟೆಗೆ ಬೆಂಕಿ ಬಿದ್ದು ಸುಟ್ಟುಹೋಯಿತು. ಬೆಂಕಿ ಆರಿಸಲು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಯಿತು. ಈ ಥಿಯೇಟರಿನ ಸಮೀಪವಿದ್ದ ಇತರ ಕಟ್ಟೋಣಗಳು ದೈವವಶಾತ್ ಬೆಂಕಿಗೆ ಆಹುತಿಯಾಗಲಿಲ್ಲ

~~~~~~

ದಕ್ಷಿಣ ಕನ್ನಡ.

~~~~~~

ಪುತ್ತೂರು:— ಧರ್ಮಸ್ಥಳದ ಚಂದಯ್ಯ ಹೆಗ್ಗಡೆಯವರು ತನ್ನ ವಿವಾಹ ಕಾಲದಲ್ಲಿ ರೂ. ೨೦೦ರನ್ನು ಭಾರತಸೇವಾ ಸಮಾಜಕ್ಕೆ ಕೊಟ್ಟದ್ದಲ್ಲದೆ, ರೂ. ೧೦೦ನ್ನು ಜೈನ ವಿದ್ಯಾಸಮಾಜಕ್ಕೆ ಕೊಟ್ಟಿದ್ದಾರೆ.

ಕಾಸರಗೋಡು ಚಂದಾವರ ನರಸಿಂಗರಾಯರ ಮಗಳ ವಿವಾಹ ಕಾಲದಲ್ಲಿ ವಧೂವರರ ತರಫಿನವರು ಒಟ್ಟುಗೂಡಿ ಸದರಿ ಭಾರತ ಸೇವಾಸಮಾಜಕ್ಕೆ ರೂ. ೭ನ್ನೂ ಇಲ್ಲಿಯ ಟೋಲಗೇಟು ಕಂಟ್ರಾಕ್ಟರ್ ಪುರುಷೋತ್ತಮಪೈಗಳ ಮಗಳ ಮದುವೆಯ ಸಮಯ ಅದೇ ರೀತಿ ರೂ ೮ನ್ನೂ ಕೊಟ್ಟಿದ್ದಾರೆ. ಇನ್ನು ಮುಂದೆ ನಮ್ಮ ಜಿಲ್ಲೆಯಲ್ಲಿ ಯಾವ ವಿವಾಹ ಕಾರ್ಯವಾದರೂ ಹೀಗೆಯೇ ಭಾರತ ಸೇವಾ ಸಮಾಜಕ್ಕೆ ದಕ್ಷಿಣೆಯನ್ನು ಕೊಡುವ ಸಂಪ್ರದಾಯವು ಶಾಶ್ವಿತವಾಗಿ ನಡೆದು ಬಂದೀತೆಂದು ಕೋರುತ್ತಾರೆ.

ಈರೋಡಿನಲ್ಲಿ ಜರಗುವ ಪರಸ್ಪರ ಸಹಾಯದ ಪರಿಷತ್ತಿಗೆ ಡೆಲಿಗೇಟರಾಗಿ ಪುತ್ತೂರು ಸಂಘದಿಂದ ರಾ. ಬಿ ಆನಂದರಾಯರನ್ನೂ, ಸೆಂಟ್ರಲ್ ಬ್ಯಾಂಕಿನಿಂದ ರಾ ಬಿ ವೆಂಕಟ ಕೃಷ್ಣರಾಯರನ್ನೂ ಚುನಾಯಿಸಿದ್ದಾರೆ.

ಪುತ್ತೂರು ಪರಸ್ಪರ ಸಹಾಯಕ ಸಂಘಕ್ಕೆ ಇದುವರೆಗೆ ಇಡೀ ವರ್ಷದಲ್ಲಿ ಒಂದು ರಜಾದಿವಸವಾದರೂ ಇಲ್ಲದೆ ಎಡೆಬಿಡದೆ ಕಾರ್ಯನಿರ್ವಾಹ ಮಾಡುತ್ತಿದ್ದರು. ಇದರಿಂದ ಅನೇಕರಿಗೆ ತೊಂದರೆಯಾಗುತ್ತದೆಂದು ಕಂಡುಬಂದದ್ದರಿಂದ ಇನ್ನು ಮುಂದೆ ಈ ಕೆಳಗೆ ಕಾಣಿಸಿದ ದಿವಸಗಳು ಸಂಘಕ್ಕೆ ರಜಾ ದಿವಸಗಳೆಂಬುದಾಗಿಯೂ ಆ ದಿವಸಗಳಲ್ಲಿ ಸಂಘಕ್ಕೆ ಸಲ್ಲತಕ್ಕ ಐವಜುಗಳನ್ನು ಮರುದಿವಸ ಪಾವತಿ ಮಾಡತಕ್ಕದೆಂಬುದಾಗಿಯೂ ನಿರ್ಣಯಿಸಿದ್ದಾರೆ.

(೧) ಪ್ರತಿ ಆದಿತ್ಯವಾರ. (೨) ಮಹಾ ಶಿವರಾತ್ರಿ. (೩) ಚಂದ್ರಮಾನ ಯುಗಾದಿ. (೪) ಸೌರಮಾನ ಯುಗಾದಿ. (೫) ಗೂಡ್ ಫ್ರೈಡೇ. (೬) ಮಹಾಲಿಂಗೇಶ್ವರ ದೇವಸ್ಥಾನದ ರಥೋತ್ಸವದ ದಿನ. (೭) ರಮಜಾನ್ ಹಬ್ಬ. (೮) ಗೋಕುಲಾಷ್ಟಮಿ. (೯) ವಿನಾಯಕ ಚತುರ್ಥಿ. (೧೦) ಮಹಾಲಯ ಅಮವಾಸೆ. (೧೧) ದೀಪಾವಳಿ. (೧೨) ಕ್ರಿಸ್ಮಸ್ ಡೇ. (೧೩) ಮೊಹರಮ ಹಬ್ಬದ ಕಡೇ ದಿನ. (೧೪) ಜನವರಿ ತಾ. ೧.

ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ವೆರ್ಲಂಪಾಡಿಯ ಚೋಮಗೌಡ ಎಂಬವನನ್ನು ಚೂರಿಯಿಂದ ತಿವಿದು ಕೊಂದದ್ದಾಗಿ ವೆರ್ಲಂಪಾಡಿ [illegible] ಶಂಕರನಾಸ್ತಿ [illegible] ನ್ಯಾಯನ [illegible] ಇಲ್ಲಿಯ [illegible] [illegible] ನಡೆದು [illegible] ಕ್ಷಮಬ ಮಾಡಿದ್ದರು. ಇಲ್ಲಿಯ ಸಬ್ ಜೈಲಿನಲ್ಲಿ [illegible] ಲಿಸ್ ಭದ್ರತೆಯಲ್ಲಿದ್ದ ಇವನು ಸಬ್ ಜೈಲ ಬಾವಿಯಿಂದ ನೀರು ತೆಗಿಯುವಾಗ್ಯೆ ಬಾವಿಗೆ ಹಾರಿಬಿಟ್ಟನು. ಕೂಡಲೇ ಅವನನ್ನು ಬಾವಿಯಿಂದ ತೆಗೆದರೂ ಮೃತಪಟ್ಟನು. ಈ ಕುರಿತು ತನಿಖೆ ಒಗ್ಗೆ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳು ಇಲ್ಲಿಗೆ ಬಂದು ತನಿಖೆನಡಿಸಿ ವಾಪಾಸು ಹೋಗಿರುವರು.

ಇಲ್ಲಿಯ ವಕೀಲ ಮಿ| ರಾ ಗೆರ್ಸಪ್ಪೆ ವೆಂಕಟ್ರಾಯರವರಲ್ಲಿ ಇದೇ ಫೆಬ್ರುವರಿ ತಾ. ೨೧ರಲ್ಲಿ [illegible] ಮಗುವಿನ ಕೊಂಟಿದಿಂದ ಚಿನ್ನದ ಗೋಪು [illegible] ಬಿಟ್ಟರು. ಇಲ್ಲಿಯ ಸಬ್ ಇನಸ್ಪೆಕ್ಟರ್ ಮ. ರಾ. ಸದಾಶಿವರಾಯರು ಮತ್ತು ಪೋಲೀಸ್ ಕನಿಸ್ಟೇಬಲ್ ಶಿಕೇರರು [illegible] ಶಿವಪ್ಪ [illegible] ಎಂಬವನನ್ನು ಅನುಮಾನದ ಮೇಲೆ ಕೈದುಮಾಡಿದರು. [illegible] ಚಿನ್ನದ ಗೋಪನ್ನು ಕರಗಿಸಿ ಘಟ್ಟಿ ಮಾಡಿ [illegible] [illegible] ಕೃಷ್ಣ [illegible] ಶಿಕ್ಕದಲ್ಲದೆ ಕೆಲವು ವಸ್ತುಕೊಡ [illegible] ಕೊಂಡದ್ದು ಶಿಕ್ಕಿದೆ [illegible] ಮಾಡಿ ಸಬ್ ಜೈಲಿನಲ್ಲಿ ರಿಮಾಂಡಿನಲ್ಲಿಟ್ಟಿರುವರು.

~~~~~~

ಪಾಣೆಮಂಗಳೂರು:— ಕಳೆದ ೧೯೧೫ನೇ ಇಸ್ವಿ ಮಾರ್ಚ ತಿಂಗಳ ತಾ ೧೭ನೇ ದಿನ ಶುಭಮುಹೂರ್ತದಲ್ಲಿ ಈ ಊರಲ್ಲಿ ಸ್ಥಾಪಿಸಿದ ಇಲ್ಲಿಯ ಹುಡುಗಿಯರ ಶಾಲೆಯು ವಾರ್ಷಿಕೋದಯವು ಇಂದಿಗೆ ಪರಿಸಿತು. ಈ ಶಾಲೆಯು ಸ್ಥಾಪಿತವಾದಂದಿನಿಂದ ದಯಾಳು ಸರಕಾರದವರಿಂದಾಗಲೀ ಗ್ರಾಮಸ್ಥರಿಂದಾಗಲೀ ಯಾವ ವಿಧದ ದ್ರವ್ಯ ಸಹಾಯವನ್ನು ಈ ವರೆಗೆ ಪಡೆಯದೆ ಇದ್ದರೂ ಅದರಲ್ಲಿ ಕಲಿಯುವ ಎಲ್ಲಾ ಹುಡುಗಿಯರೂ ಇದೇ ಕಳೆದ ಫೆಬ್ರುವರಿ ತಾ. ೨೯ ವರೇಗೆ ದಮಾರ್ದವಾಗಿ ವಿದ್ಯಾರ್ಜನೆಯನ್ನು ಹೊಂದುತ್ತಾ ಇದ್ದರು. ಈ ವಿಷಯವನ್ನು ದಯಾಳು ತಾಲೂಕುಬೋರ್ಡಿನವರು ತಮ್ಮ ಅನುಭವಕ್ಕೆ ತಂದು ಕಳೆದ ತಿಂಗಳ ತಾ ೨೩ನೆ ಮಂಗಳವಾರ ಮಂಗಳೂರಲ್ಲಿ ಜರುಗಿದ ತಾಲೂಕುಬೋರ್ಡು ಮೀಟಿಂಗಿನಲ್ಲಿ ಸದರಿ ಶಾಲೆಯ ಆಡಳಿತೆಯನ್ನು ತಾಲೂಕಬೋರ್ಡಿನವರು ತಮ್ಮ ಸ್ವಾಧೀನಪಡಿಸಿಕೊಂಡರೆಂಬದಾಗಿ ಕೇಳುತ್ತೇವೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಡುವರೆ ಆತ್ಯಾತುರವುಳ್ಳ ದಯಾಳುವಾದ ಪ್ರೆಸಿಡೆಂಟರವರಿಗೆ ನಮ್ಮ ವಂದನವಾದಗಳನ್ನು ಸಮರ್ಪಿಸುತ್ತೇವೆ.

~~~~~~

ಕುಂಬಳೆ:— ಇಲ್ಲಿ ಬಹಿರಂಗವಾಗಿ ಗುಂಡುತಪರೆಯಾಟವು ಪ್ರಾರಂಭವಾಗಿದೆ. ಇದು ನೂರಾರು ಜನರು ಕೂಡುವ ಮಾರ್ಕೆಟಿನ ಒಳ ರಸ್ತೆಯಲ್ಲೇ ಆಡುವದರಿಂದ ವ್ಯಾಪಾರಕ್ಕಾಗಿ ಬರುವ ಹಳ್ಳಿಪ್ರಾಂತ್ಯಗಳ ಜನರು ಸಾಮಾನುಗಳಿಗೆ ಕ್ರಯ ಜಾಸ್ತಿಯಾಗಿರುವದೆಂತಲೋ ಏನೋ ಈ ವ್ಯಾಪಾರನಡಿಸಿ ನಿಶ್ಚಿಂತರಾಗಿ ತಮ್ಮ ಊರುಗಳಿಗೆ ತೆರಳಿರುತ್ತಾರೆ. ಪ್ರತಿ ದಿನ ಕೈಲ್ವೆಗಾಡಿಗಳು ಇಲ್ಲಿ ತಲಪುವ ಸಮಯದಲ್ಲಿ ವ ಪ್ರತೀ ಆದಿತ್ಯವಾರ ಸಹಾ ಈ ಆಟವೂ ಜಾಸ್ತಿ ಆಗುತ್ತದಂತೆ.

ಗೋಕರ್ಣ ಮಠದ ಶ್ರೀ ಪಾದಂಗಳವರು ತಮ್ಮ ಶಿಷ್ಯರೊಡನೆ ಹೊಸಮಾರ್ಗದಿಂದ ಲೋಕಲ್ಲಿನಲ್ಲಿ ಬರುತ್ತಾ ಇಲ್ಲಿಯ ಶಿಷ್ಯವರ್ಗದ [illegible] ಪತ್ರಿಸಿ [illegible] ಸಮಯದಲ್ಲೇ ಈ ಊರಿಗೆ ದಯಮಾಡಿಸುವರಾಗಿ ಅಷ್ಟು ಹೊತ್ತು ಮಂಜೇಶ್ವರಕ್ಕೆ ಬಿಜಯಂಗೈದರು.

ಇಲ್ಲಿಯ ಒಂದು ಹೊಟೇಲಿನಲ್ಲಿ ಕೆಲವು ಪ್ರಯಾಣಿಕರು ಕಾಫಿ ಕುಡಿಯುತ್ತಾ ವಿಷಪ್ರಯೋಗದಿಂದ ಮರಣ ಹೊಂದಿದರೆಂಬ [illegible] [illegible] [illegible] ಇಲ್ಲಿ ಸಂಭವಿಸಲೇ ಇಲ್ಲ

~~~~~~

ಮಂಗಳೂರು.

~~~~~~

ಆಯುರ್ವೇದಿಕ್ ಡಿಸ್ಪೆನ್ಸರಿ, ಮಂಗಳೂರು.

[illegible]

ತಿರುಚಿನಾಪಳ್ಳಿಗೆ ವರ್ಗಾಯಿಸಲ್ಪಟ್ಟ ದಕ್ಷಿಣ ಜಿಲ್ಲಾ ಕಲೆಕ್ಟರಾಗಿದ್ದ ಮಿ. [illegible] ದೊರೆಗಳವರು ಕಳೆದ ಆದಿತ್ಯವಾರದ ಮೈಲ್ ಬಂಡಿಯಲ್ಲಿ ತಿರುಚಿನಾಪಳ್ಳಿಗೆ ಹೊರಟು ಹೋದರು.

ತಿರುಚಿನಾಪಳ್ಳಿಯ ಡಿಸ್ಟ್ರಿಕ್ಟ್ ಕಲೆಕ್ಟರಾಗಿದ್ದ ಮಿ। ವೈಟರ್ ದೊರೆಗಳವರಿಗೆ ಇಲ್ಲಿಗೆ ವರ್ಗವಾಗಿರುವುದೆಂತ ಹಿಂದೆ ತಿಳಿಸಿದ್ದೇವಷ್ಟೆ. ಅದರೆ ಮಿ. ವೈಟರ್ ದೊರೆಗಳು ೧ ತಿಂಗಳ ರಜೆ ಪಡಕೊಂಡಿರುವದರಿಂದ ಮದ್ರಾಸ್ ರೆವಿನ್ಯು ಬೋರ್ಡು ಆಫೀಸಿನ ಮಿ। ಗಿಲ್ಲಿಟ ದೊರೆಗಳವರು ಇಲ್ಲಿಯ ಆಕ್ಟಿಂಗ್ ಡಿಸ್ಟ್ರಿಕ್ಟ ಕಲೆಕ್ಟರಾಗಿ ನೇಮಿಸಲ್ಪಟ್ಟು ತಾ. ೨೯ನೇ ಮಂಗಳವಾರದ ಮೈಲ್ ಬಂಡಿಯಲ್ಲಿ ಇಲ್ಲಿಗೆ ಬಂದು ತಲಪಿರುವರು.

ದೋಟಾರದ ಅಬ್ದುಲಖಾದರ್ ಸಾಹೇಬರ ಮೊಮ್ಮಗ ನಾಲ್ಕು ವರ್ಷ ವಯಸ್ಸಿನ ಬಾಬಾ ಎಂಬ ಹುಡುಗನು ಆಡುತ್ತಿರುವಾಗ ಯಾರೋ ಬಟ್ಟೆ [illegible] ಗಳ ರೂಪಾಯಿ ಕ್ರಯವಾಗುವ ಮಗುವಿನ [illegible] ದ್ದ ಮಗುವಿನ [illegible] ಹಿಂದೆ [illegible]
~~~~~~

ರವರು ತಲಾಸಿಯಿಂದ ಸೀದಿಬ್ಯಾರಿ ಎಂಬವನನ್ನು ಕಳವಾದ ಸೆರ ಸಹಿತ ಕೈದುಮಾಡಿರುತ್ತಾರೆ

ಕನ್ನಡ ಕ್ರೈಸ್ತ ಕುಟುಂಬ ಸಹಾಯಕ ಸಂಘದ ಕಳೆದ ವರ್ಷದ ಲೆಕ್ಕ ಪರಿಶೋಧನೆಯ ರಿಪೋರ್ಟು ಪ್ರಕಟಿಸಲ್ಪಟ್ಟಿರುವದು. ಈ ಸಹಾಯಕ ಸಂಘದಲ್ಲಿ ಒಟ್ಟಿಗೆ ಕಳೆದ ವರ್ಷ ನಿಯುಕ್ತರಿಗೆ ರೂ [illegible] ದ್ರವ್ಯ ಸಹಾಯ ಕೊಡಲ್ಪಟ್ಟಾಗಿರುವದು. ಸಂಘದ ಬಾಸೆಲ್ ಮಿಶ್ಶನ್ ಖಜಾನ್ಸಿಯವರ ಒಳ ರೂ [illegible] ನಿರಖು ಠೇವಣಿಯಲ್ಲಿರುವದು. ಒಟ್ಟಿಗೆ ಈ ವರ್ಷ ಜಮುಲಾ ರೂ [illegible] ಈ ಫಂಡಿನಲ್ಲಿ ಪ್ರತಿ ಒಬ್ಬ ಮೆಂಬರನ ಮರಣದ ಬಳಿಕ ಮಾತ್ರ ಇನ್ಸೂರು ಮಾಡಿರುತ್ತದೆ. ಅಂಥಾ ಪೋಲಿಸಿಗಳು [illegible] ಇವೆ ಎಂತ ಸದರಿ ರಿಪೋರ್ಟಿನಿಂದ ತೋರಿಬರುತ್ತದೆ. [illegible] ಸಾವಿರ ಕನ್ನಡ ಕ್ರೈಸ್ತ ಮೆಂಬರಿರುವ ಈ ಕ್ರೈಸ್ತ ಸಮಾಜದ [illegible] ಮಂದಿ ಮಾತ್ರ ಈ ಫಂಡಿನಲ್ಲಿ ಪೋಲಿಸಿದಾರರಾಗಿರುತ್ತಾರೆಂತ ತಿಳಿಯುವದರಿಂದ ಈ ಸಂಘಕ್ಕೆ ಕ್ರೈಸ್ತ [illegible] ಪ್ರೋತ್ಸಾಹವಿಲ್ಲವೆಂತಲೂ ಸಂಘದಿಂದ ಬರತಕ್ಕ ಪ್ರಯೋಜನವನ್ನು ಕ್ರೈಸ್ತರು ಇನ್ನೂ ಅರಿತಿಲ್ಲವೆಂತಲೂ ಧಾರಾಳವಾಗಿ ಹೇಳಬಹುದು. ಕ್ರೈಸ್ತ ಸಮಾಜದವರು ಮುಂದಕ್ಕಾದರೂ ಈ ಸಂಘದಿಂದ ಉಂಟಾಗತಕ್ಕ ಪ್ರಯೋಜನವನ್ನು ಅರಿತುಕೊಂಡು ಈ ಸಂಘಕ್ಕೆ ಪ್ರೋತ್ಸಾಹ ಕೊಡಬೇಕಾಗಿ ಹಾರೈಸುವೆವು

[illegible] ಬಂಡಾರಿಗಳನ್ನು ಕೊಂದರೆಂದಾಗಿ ಆಪಾದಿಸಲ್ಪಟ್ಟ ಸಾಯಿಬ್ಯಾರಿ ಮೊದಲಾದವರ ತನಿಕೆಯು ಇಲ್ಲಿಯ ಸೆಶ್ಶನ್ಸ್ ಕೋರ್ಟಿನಲ್ಲಿ ಇದೇ ತಿಂಗಳ ತಾ [illegible] ರಲ್ಲು ಪ್ರಾರಂಭವಾಗುವದು

ಮೈದಾನಿನ ಎಡದುಗಡೆಯಲ್ಲಿರುವ ಪೊಯಿಸೀರ್ ಸ್ಪೋರ್ಟ್ಸ್ ಕಂಪನಿ [illegible] ಕಳೆದ ಆದಿತ್ಯವಾರ ರಾತ್ರಿ ಯಾರೋ [illegible] ರೂ [illegible] ಕದ್ದುಕೊಂಡು ಹೋಗಿರುವವರಿಂದ ಪೋಲೀಸಿನವರು [illegible] ಒಬ್ಬ ಚಪಗಾರನನ್ನು ಕೈ [illegible] ಮಾಡಿರುವರು ಮೋಜಿಸ್ಟ್ರೇಟರು ಸದರಿ ಚಪರಾಸನನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ

[illegible] ವರ್ಷದ ಮಾರಿಪೂಜೆ ದಿವಸ ಕೃಷ್ಣ ಹೆಂಗಸಿನ ಸಣ್ಣ ಹುಡುಗನ ಕುತ್ತಿಗೆಯಿಂದ ಸುಮಾರು [illegible] ರೂಪಾಯಿ ಕ್ರಯಬಾಳುವ ಚಕ್ರಸರವನ್ನು ಜಾರಿಸಿದ ಕೊರಗನೆಂಬವನಿಗೆ ಮೇಜಿಸ್ಟ್ರೇಟರು [illegible] ತಿಂಗಳ ಸಜಾ ವಿಧಿಸಿರುತ್ತಾರೆ

ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿ, ಲಿಮಿಟೆಡ್ —ಈ ಕಂಪೆನಿಯವರು ಉಡ್ಪಿ ವರೆಗೆ ಮೋಟರ್ ಲೈನನ್ನು ತೆರೆಯುವರೆಂದಾಗಿ ಆಗ್ಗಾಗ್ಗೆ ತಿಳಿಸಿದ್ದೇವಾದರೂ ಸದರಿ ಕಂಪೆನಿಯವರಿಗೆ ಯುದ್ಧದ ಸಂಬಂಧ ತಕ್ಕ ಮೋಟರ್ ಬಸ್ಸುಗಳು ದೊರೆಯದ್ದರಿಂದ ಈ ವರೆಗೆ ಉಡ್ಪಿ ಲೈನನ್ನು ತೆರೆಯಲು ಅಸಾಧ್ಯವಾಯಿತು. ಆದರೆ ಈಗ ತಾನೇ ಉಡ್ಪಿ ಲೈನ್ ಬಗ್ಗೆ [illegible] ಜನರು ಕೂತುಕೊಳ್ಳಬಹುದಾದ [illegible] ಹೊಸ ಮೋಟರ್ ಬಸ್ಸುಗಳು ಮೋಟರ್ ಕಂಪೆನಿಯವರ ಪರವಾಗಿ ಒಂದು ತಲಪಿರುತ್ತವೆಯಾದ್ದರಿಂದ ಇದೇ ತಾ [illegible] ರಲ್ಲು ಉಡ್ಪಿ ಲೈನು ತೆರೆಯಲ್ಪಡಾಗುವದೆಂತ ತಿಳಿಯುತ್ತೇವೆ

ಶಿವರಾತ್ರಿ ಸಂಬಂಧ ಶುಕ್ರವಾರ ದಿನ ನಮ್ಮ ಆಫೀಸಿಗೆ ರಜೆ ಇದ್ದದ್ದರಿಂದ ಸ್ವದೇಶಾಭಿಮಾನಿಯು ತಾ. [illegible]ನೇ ಶನಿವಾರ ದಿನ ಪ್ರಕಟಿಸಲ್ಪಟ್ಟಿರುತ್ತದೆ.

ಒಬ್ಬ ಬಾತ್ಮೀದಾರರಿಂದ:—ಮಂಗಳೂರು ಶ್ರೀ ಗೋಕರ್ಣನಾಥ ಕ್ಷೇತ್ರದಿಂದ ಕಳೆದ ಜನವರಿ ತಾ. [illegible]ನೇ ದಿವಸ ಇದೇ ಶಿವರಾತ್ರಿ ಮಹೋತ್ಸವದ ಸಮ್ಮಂದ ದೇವಸ್ಥಾನದ ಅಧ್ಯಕ್ಷ ಮ। ರಾ। ಎಚ್ ಕೊರಗಪ್ಪನವರೂ 1ನೇ ಉಪಾಧ್ಯಕ್ಷರಾದ ಮ। ರಾ। ಸೆಟ್ಟೆ ಜಾರದ ಐತಪ್ಪನವರೂ ಸದರಿ 2ನೇಯವರ ಆಳಿಯ ಮ। ರಾ। ಜಾರಪ್ಪನಾಯಕರೂ ಕೂಡಾ [illegible] ಬಾಯಿಗೆ ಹೋದಾಗ್ಯೆ ಅಲ್ಲಿಯ ಸಂಪಾದಕರು ಕೊಟ್ಟ ರೂ [illegible] ಇದ್ಯಾ ಗ್ರಾಮದವರು [illegible] ರೂಪಾಯಿ ಕ್ರಯಬಾಳುವ ಬೆಳ್ಳಿಯ [illegible] ದೇವರನ್ನು ಮಾಡಿಸುವದಕ್ಕೆ ಮಂಗಳವಾಗಿ ಕೊಟ್ಟ ರೂ [illegible], ಮ। ರಾ। ಮಟ್ಟಿ ಪಿರಲ್‌ದಾಸ್ ದಯಾಳರವರಿಂದ ರೂ [illegible] ಮ। ರಾ। ಪಿವ [illegible] ದೊಡ್ಡಯ ಸೆಟ್ರು ರೂ [illegible], ಮ। ರಾ। ರಾಮಯ್ಯನವರು ರೂ [illegible] ಮ। ರಾ। ರಾಮರಾಯರು ರೂ [illegible] ಕೂಡ ಜಮ್ಮ ರೂ [illegible] ನ್ನೂ ಸಿಲಾರ್ಡ್ ದ್ವಾರಾ ರಾ ತೌದಪ್ಪನವರ ಪತಿ ಸೌ ಲಕ್ಷ್ಮೀಬಾಯಿಯವರು ಕಳುಹಿಸಿಕೊಟ್ಟ ರೂ [illegible] ನ್ನೂ ಶ್ರೀ ದೇವಸ್ಥಾನದ ಬಂಡಾರಕ್ಕೆ ಒಪ್ಪಿಸಿರುವದರಿಂದ ಶ್ರೀ ದೇವಸ್ಥಾನದ ಸಂಪಾದಕರೆಲ್ಲರೂ ಕೂಡಿ ಮೇಲೆ ವಿವರಿಸಿದ ಸಂಭಾವನ ದ್ರವ್ಯವನ್ನು ಕೊಟ್ಟವರ ಅಭಿವೃದ್ಧಿ ಗೋಸ್ಕರ ಶ್ರೀ ದೇವರಿಗೆ ಪೂಜಾರಾಧನಾದಿಗಳನ್ನು ಮಾಡಿಸಿ ಪ್ರಾರ್ಥಿಸಿರುತ್ತಾರೆ

~~~~~

ಬಾತ್ಮೀದಾರರಿಂದ — ಮುಂಬಾಯಿ ಇಲ್ಲಿಯ ಭಾರತಮಂಡಳಿಯವರು ನಾರಾಯಣಮಾಡುತ್ತಿದ್ದ ಶ್ರೀ ಮಹಾಭಾರತ ಮತ್ತು ತೊರವೆರಾಮಾಯಣವೆಂಬ ಗ್ರಂಥದ ಸಮಾಪ್ತಿ ಮಂಗಳೋತ್ಸವವನ್ನು ಕಳೆದ ಮಾಘ ಶುದ್ಧ [illegible]ಯು ಶನಿವಾರ ರಾತ್ರಿ ಆಚರಿಸಿ ಮಾರಣೇ ರವಿವಾರ ಪೂರ್ವಾಹ್ನೇ ಮಂಗಳದ ಸಹಸ್ರಭೋಜನಾನಂತರ ಅಪರಾಹ್ನೇ ಎರಡು ಘಂಟೆಗ ಸರಿಯಾಗಿ ಯುಕ್ತ ವಿಜೃಂಭಣೆಯಿಂದ ಶ್ರೀ ದೇವರ ಸಾನಿಧ್ಯದೊಡನೆ ಚೌಪಟಿಗೆ ಮೆರವಣಿಗೆ ಮಾಡಿಸ್ಸಿದರು. ಈ ಸತ್ಕಾರ್ಯವು ಪ್ರತೀ ವರ್ಷವೂ ನಡಕೊಂಡುಬರುವಂತೆ ಪರಮೇಶ್ವರನು ಅನುಗ್ರಹಿಸಲೆಂದು ಹಾರೈಸುತ್ತೇನೆ

~~~~~

ಮುಂಬಾಯಿ ಕನ್ನಡ ಗ್ರಂಥ ವಾಚನಾಲಯ ಸಂಘಕ್ಕೆ ವಂತಿಗೆ ಕೊಟ್ಟವರ ಹೆಸರು ಮೊಬಲಗು — ಮ। ರಾ। ರಾ। ಕಲ್ಲಂಗಾರದ ದುಪುತ್ರಸ್ವಾಯರವರ ಮುಖಾಂತರ ರೂ [illegible] ಮ। ರಾ। ರಾ। ಮಟ್ಟು ನಾರಾಯಣನವರ ಮುಖಾಂತರ ರೂ [illegible] ಮ। ರಾ। ರಾ। ಬೋಳ ಅಚ್ಚಣ್ಣ ಶೆಟ್ಟರವರ ಮುಖಾಂತರ ರೂ [illegible], ಮ। ರಾ। ರಾ। ಬಿ ಪಾವನಯ್ಯರ ಮುಖಾಂತರ ರೂ [illegible] ಮ। ರಾ। ರಾ। ಮುಲ್ಕಿ ಗುರುವ ಕುಂದಣ್ಣಾಯರವರ ಮುಖಾಂತರ ರೂ [illegible] ಮ। ರಾ। ರಾ। ಕೊಲ್ನಾಡು ಗುತ್ತು ನಿಂಲಯ್ಯ ಶೆಟ್ರವರ ಮುಖಾಂತರ ರೂ [illegible] ಮ। ರಾ। ರಾ। ಬೋಳೂರು ತ್ಯಾಂಪನವರಿಂದ ರೂ [illegible] ಮ। ರಾ। ರಾ। ಮುಲ್ಕಿ ಸುಬ್ಬಣ್ಣನವರ ಮುಖಾಂತರ ರೂ [illegible], ಮ। ರಾ। ರಾ। ಮುಲ್ಕಿ ಉಗ್ಗಪ್ಪ ಶೆಟ್ರವರಿಂದ ರೂ [illegible] ಮ। ರಾ। ರಾ। ಮುಲ್ಕಿ ಕೊರಗಪ್ಪನವರಿಂದ ರೂ [illegible], ಮ। ರಾ। ರಾ। ಪೆರ್ಮುಡೆ ಬಾಬುನವರಿಂದ ರೂ [illegible] ಮ। ರಾ। ರಾ। ಮುಲ್ಕಿ ದುರ್ಗಣನವರ ಮುಖಾಂತರ ರೂ [illegible] ಕಾಶೀಕ್ಷೇತ್ರ ಯಾತ್ರಿಕರೊಬ್ಬರಿಂದ ರೂ [illegible]

ಜಾ ರೂ [illegible]

Chandoo J Puthrannair,
M. Subbanna,
Joint Hony. Secretaries.

ಸ್ವೀಕಾರ: — ರಾವ್‌ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾದ ಪ್ರಥಮ ಚಿಕಿತ್ಸೆ ಎಂಬ ಪುಸ್ತಕದ ಕನ್ನಡ ಪ್ರತಿಯು ನಮಗೆ ತಲಪಿರುವದು. ಇದನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ರಾವ್‌ಸಾಹೇಬ್ ಡಾ। ರಾಮರಾಯರು ಈ ಪುಸ್ತಕದಲ್ಲಿ ಅಪಾಯ ಸಂಭವಿಸಿದಾಗ ವೈದ್ಯರ ಬಳಿಗೆ ಹೋಗುವ ಮೊದಲು ಮಾಡಬೇಕಾದ ಸುಲಭ ಚಿಕಿತ್ಸೆಯನ್ನು ಅನೇಕ ಚಿತ್ರಗಳ ಸಹಿತ ತೋರಿಸಿಕೊಟ್ಟಿರುತ್ತಾರೆ. ಶೈತೋಪಚಾರ ಕ್ರಮವು ಜನಸಾಮಾನ್ಯರಿಗೂ ತಿಳಿಯಬಹುದಾದ ಸುಲಭ ಕನ್ನಡದಲ್ಲಿ ವಿವರಿಸಲ್ಪಟ್ಟಾಗಿದೆ. ಈ ಪುಸ್ತಕದಲ್ಲಿ ಮನುಷ್ಯ ಶರೀರರಚನೆ, ಗಾಯದ ಕಟ್ಟುಗಳು, ಕೈತೂಗುಗಳು, ಮೂಳೆಮುರಿಯುವದು, ಉಸಿರುಕಟ್ಟುವದು ಮೊದಲಾದ ಅನೇಕ ವಿಷಯುಗಳು ಸೇರಿಕೊಂಡಿವೆ. [illegible] ಚಿತ್ರಗಳೊಡನೆ ಸಲಭ ಚಿಕಿತ್ಸಾ ಕ್ರಮವು ಈ ಪುಸ್ತಕದಲ್ಲಿ ತೋರಿಸಿಕೊಡಲ್ಪಟ್ಟಾಗಿರುವುದು. ಶಾಲೆಗಳಲ್ಲಿ ಈ ಪುಸ್ತಕವನ್ನು ಓದುಪಾಠ ಪುಸ್ತಕವಾಗಿಟ್ಟರೆ ಎಷ್ಟೋ ಉಪಕಾರವಾಗುವದು ಎಂತ ಧಾರಾಳವಾಗಿ ಹೇಳಬಹುದು. ಗ್ರಂಥಕರ್ತರು ಈ ಪುಸ್ತಕ ಮಾರಾಟದಿಂದ ಒಂದ ಹುಟ್ಟನ್ನು ಯುದ್ಧದ ರಿಲೀಫ್ ಫಂಡಿಗೆ ಕೊಡಲು ನಿರ್ಣಯಿಸಿರುವರು. ಗ್ರಾಮಸ್ಥರೂ, ಪೋಲೀಸಿನವರೂ, ಸಾಮಾನ್ಯ ಪ್ರಜೆಗಳೂ ಈ ಪುಸ್ತಕವನ್ನು ಕೊಂಡುಕೊಂಡು ತಾವೇ ಪ್ರಯೋಜನ ಹೊಂದುವದಲ್ಲದೆ ಮತ್ತೊಂದು ವಿಧದಲ್ಲಿ ಯುದ್ಧದ ರಿಲೀಫ್ ಫಂಡಿಗೂ ಸಹಾಯ್ಯಮಾಡಿದಂತಾಗುವದು. ಪುಸ್ತಕದ ಬೆಲೆ ೮ ಆಣೆ. ಪುಸ್ತಕವು ಶ್ರೀ ಕೃಷ್ಣನ್ ಬ್ರದರ್ಸ್, [illegible] ತಂಬೂಚೆಟ್ಟಿ ಬೀದಿ, ಮದರಾಸು. ಅಲ್ಲಿ ದೊರೆಯುವದು.

~~~~~

ಜೀನಸು ಧಾರಣೆ.

ಮಸೂರಿ ಹೊಸ ಅಕ್ಕಿ	5— 4—0	5—12—0
ಗಾಡಿ ರಾಶಿ ಹೊಸ ,,	4—10—0	4—13—0
ಗುಡ್ಡು ,, ,,	4—14—0	5— 4—0
ಅವ್ವಲ್ ಬೆಳ್ತಿಗೆ ,,	6— 0—0	6— 4—0
ಗುಡ್ಡು ಬೆಳ್ತಿಗೆ ,,	[illegible]— 8—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	10— 4—0	9— 4—0
ಗೋದಿ ಗೋಣಿ ೧ರ	13— 8—0	14— 0—0
ಹುರುಳಿ ಗೋಣಿ ೧ರ ...	6—12—0	6—10—0
ಕಡಲೆ ಗೋಣಿ ೧ರ ಬೊಂಬ್ಬೈ	9— 8—0	10—0—0
ತೊಗರಿ ಗೋಣಿ ೧ರ ...	12— 0—0	13— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 8—0
ಉದ್ದು ಗೋಣಿ ೧ರ	11— 0—0	10—12—0
ಊರುಬೆಲ್ಲ ಖಂಡಿ ೧ರ ...	...	49— 8—0
ಉಪ್ಪು ಗೋಣಿ ೧ರ		4— 4—0
ಕೊಬ್ರಿ ಖಂಡಿ ೧ರ	95— 0—0	105— 8—0
ಕೊಬ್ರಿಹಿಂಡಿ ಖಂಡಿ ೧ರ.	24—8—0	25— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬೈ	27— 8—0	32— 8—0
ಕೊಬ್ರಿ ಎಣ್ಣೆ ಮುಡಿ ೧ರ.	6—10—0	6—14—0
ಎಳ್ಳೆಣ್ಣೆ ಮುಡಿ ೧ರ(ಕುರಾಸೆವೆ)		5— 4—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4— 9—0	5— 8—0
ಮೋರಿಸ್ ಸಕ್ಕರೆ ಮುಡಿ ೧ರ.	4—12—0	4—13—0
ಕಾಫಿ ಖಂಡಿ ೧ರ	218— 0—0	225— 0—0
ಹೊಸಬೀಗೋಟು ಖಂಡಿ ೧ರ.	84— 0—0	86— 0—0
ಹೊಸ ಗೇರುಬೀಜ ಮುಡಿ ೧ರ.		2—15—0
ಕಬ್ಬಿಣ ಖಂಡಿ ೧ರ	60—0—0	70—0—0
ಕಾಂಚ್ರ ತಗಡು ಮುಡಿ ೧ರ	20—0—0	22— 8—0
ಕಾಂಚ್ರ, ಪಾತ್ರಗಳು [illegible]	[illegible]—0	25—0—0
[illegible]		18—12—0
[illegible]	[illegible]—14—0	[illegible]—0—0
~~~~~

S. NAGAPPA NAYAK,
K. Appaya Shenoy & Co.

Cloth Merchants, Car Street, Mangalore

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c. &c. of guaranteed colours and best patterns. Price very moderate

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ದಿವ್ಯಾಂಜನ. (Divyanjan).

ಸರ್ವ ತರಹದ ನೋವುಗಳ ಮೇಲೆ ರಾಮಬಾಣ ಔಷಧ.

ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ವಾಯು, ಅರ್ಧಾಂಗವಾಯು, ಉಳುಕು, ತುರಿಕಜ್ಜಿ, ಘಾಯ, ಸುಟ್ಟಘಾಯ, ಉರಿ, ಉಳುಕು, ಎಲುಬುಗಳ ನೋವು, ಕೈಕಾಲು ಬಾತುಬರುವುದು, ಇವೇ ಮೊದಲಾದವುಗಳ ಮೇಲೆ ದಿವ್ಯಔಷಧವಾಗಿರುತ್ತದೆ.

ಕ್ರಯ ಬಾಟ್ಲಿ 1ಕ್ಕೆ ರೂ. 0—8—0. ಡಜನ್ 1ಕ್ಕೆ ಕಮಿಶನ್ ಕಳೆದು ರೂ. 5—0—0. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ಡಬ್ಬಿ 1ಕ್ಕೆ ರೂ. 0—1—0. ಪೋಸ್ಟೇಜು ಮಾಫಿ.

ಸಿಕ್ಕುವ ಸ್ಥಳ:—

ಬಿ. ಎಸ್. ಹನುಮಂತಪ್ಪ ಮತ್ತು ಕಂಪೆನಿ, ಚಿಕ್ಕಮಂಗಳೂರು.

ಕೆ. ಬೋಗಯ್ಯ ಶೆಟ್ಟಿ, ದಾವಣಗೆರೆ.

ಅಥವಾ

Someshwar & Sons, ಸೋಮೇಶ್ವರ ಎಂಡ್ ಸನ್ಸ್,
Warden's Building, ವ್ರೊರ್ಡನ್ಸ್ ಬಿಲ್ಡಿಂಗ್,
FERGUSSON ROAD, BOMBAY. ಫರ್ಗುಸನ್ ರಸ್ತಾ, ಮುಂಬಯಿ.

ಸೂಚನೆ:—ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು ಇಂಗ್ಲಿಷಿನಿಂದಲೇ ಬರೆಯತಕ್ಕದ್ದು. ಕನ್ನಡದಿಂದ ಬರೆದರೆ ಕಾಗದಗಳು ಸರಿಯಾಗಿ ತಲಪುವದಿಲ್ಲ. ಔಷಧ ಬೇಕಾದವರು ವಿ. ಪಿ. ಮುಖಾಂತರ ಪಡಕೊಳ್ಳಬಹುದು. ಜಾಸ್ತಿಯಾಗಿ ಇದನ್ನು ತೆಗೆದುಕೊಂಡವರಿಗೆ ಅತಿಶಯ ಕಮಿಶನ್ ಕೊಡಲಾದೀತು. ಏಜಂಟರು ಬೇಕಾಗಿವೆ.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ ಚೆಟ್ಟಿ ಬೀದಿ, ಮದರಾಸು.

ಮಾರಾಟಕ್ಕಿದೆ!

ಕಳಸಾಪುರ ಕಾಫಿ ತೋಟ
ಕೊಪ್ಪ, ಕಡೂರು
ಮತ್ತು
ಗದ್ದೆಗಳು ಸಹಿತವಾದ ಒಳ್ಳೇ ಅಡಿಕೆ ತೋಟ ಸಹಾ.
ಅಪೇಕ್ಷರಿಗೆ ಪೂರ್ಣ ವಿವರವನ್ನು ತಿಳಿಸಲಾಗುವದು.

Address:— ವಿಳಾಸ:—
E. N. Leslie, ಇ. ಎನ್. ಲೆಸ್ಲಿ,
Kulsapoor Estate, ಕಳಸಾಪುರ ಎಸ್ಟೇಟ್,
KOPPA, KADUR DST ಕೊಪ್ಪ, ಕಡೂರು ಡಿಸ್ಟ್ರಿಕ್ಟ್.

ನೋಟೀಸು.

ಮಂಗಳೂರ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

ಕ್ರಮನಂಬ್ರ 181/1914 ಕ್ರಮ ಅಮಲ್‌ಜಾರಿ ನಂಬ್ರ 2/1916

ಹಾಜಿ ಅಬ್ದುಲ ಸತಾರ ಸೇಟ್. ವಾದಿ ಅಮಲ್‌ಜಾರಿ ಅರ್ಜಿದಾರ

1. ಇಬ್ರಾಹಿಬ್ಯಾರಿ ಕಾಟುಬ್ಯಾರಿ ಮಗ	ಪಡುಂಬೂರ ಮಾಗಣೆ	ಪ್ರತಿವಾದಿರು
2. ಇನ್ನಮ್ಮ ಕಾಟ ಬ್ಯಾರಿ ಮಗಳು, ಮ ಅಹಮ್ಮದ್ ಬ್ಯಾರಿ ಹೆಂಡತಿ	ತಣ್ಣೀರಬಾವಿ ಗ್ರಾಮ ದಲ್ಲಿರುವವರು.	ರೆಸ್ಪೊಂಡೆಂಟರು.

ಮೇಲಿನ ಅಮಲ್ಜಾರಿಯಲ್ಲಿ ಪ್ರತಿವಾದಿರ ಬಾಬ್ತು ಜಪ್ತಾದ ಮಂಗಳೂರ ಬಂದರದ ಎದುರು ತಂಡರಬೈಲು ಬೆಂಗರೆಯಲ್ಲಿರುವ ಮಂಗಳೂರ ಪೋರ್ಟಿನ ನಂಬ್ರ 31ನೇ ಸಯ್ಯದ್ ಗಾಂಜಾ ಎಂಬ ಕಿರೇರಿಕೊಟ್ಯ, ಮ ಅದಕ್ಕೆ ಒಪ್ಪಿದ ಹ್ಯಾ ಪಟ್ಟಿಗಳು, ಆಲಾದುಗಳು ವಗೈರೆ ಸಾಮಾನು ಸದರಿ ಬೆಂಗರೆಯಲ್ಲಿ ಇದ್ದ ಸ್ಥಳದಲ್ಲಿಯೇ ತಾ 20—3—1916ರಲ್ಲು ಏಲಮಿಗೆ ಇಟ್ಟಿರುತ್ತದೆಂಬ ಸಂಗತಿ ಈ ಮೂಲಕ ಸರ್ವ ಜನರಿಗೆ ಪ್ರಕಟಿಸಲಾಗಿರುತ್ತದೆ

ಮಂಗಳೂರ,
ತಾ. 26ನೇ ಫೆಬ್ರವರಿ 1916.

S. Narsinga Naik.
Pleader for petitioner.

ಕನ್ನಡ ಗ್ರಂಥಗಳು.

	ರೂ	ಆ		ರೂ.	ಆ.
ದ್ವಾದಶಸ್ಕಂದ ಭಾಗವತ	4	0	ತೊರವೆರಾಮಾಯಣ ಅವ್ವಲ್	1	8
ದಶಮಸ್ಕಂದ ಭಾಗವತ	1	8	ದುಯ್ಯಂ	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ದಶಪರ್ವ ಭಾರತ	2	0	ಜೈಮಿನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
			ಸಟೀಕ ಭಗವದ್ಗೀತೆ	0	8
ಸಟೀಕ ಜೈಮಿನಿ ಭಾರತ	4	0	ಸಟೀಕ ತ್ರಿಕಾಂಡ ಅಮರ	0	12
ಡಿಟೊ ಮೂಲ	0	12	ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ, ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಗಳು. ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ವೇದಮಂತ್ರಗಳಿಗೆ ಸ್ವರ ಹಾಕಿ, ದಪ್ಪ ಕಾಗದದಲ್ಲು ಕನ್ನಡ ಅಕ್ಷರದಿಂದ ಅಂದವಾಗಿ ಮುದ್ರಿಸಿದ

ಆಹ್ನಿಕಮಂಜರೀ

ಎಂಬ ಋಗ್ವೇದಿಯ ನಿತ್ಯಕರ್ಮ ಪದ್ಧತಿ ಪುಸ್ತಕ ೧ಕ್ಕೆ ರೂ. 1. ಈ ಪತ್ರಿಕೆಯ ಗ್ರಹಕರಿಗೆ ಮಾತ್ರ ಆಣೆ 12. ಪೋಸ್ಟು ಖರ್ಚು ಬೇರೆ.

ಸ್ವಲ್ಪವೇ ಇದೆ! ಬೇಗ ಬರೆಯಿರಿ!!

ವಿಳಾಸ:— ಎಚ್. ವಿ. ಕೃಷ್ಣಭಟ್ಟ,
ವೇದಪಾಠಶಾಲಾ, [illegible]

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಕಾನೇ ಅವಲಂಬಿಸಿರುತ್ತದೆ. ಆಚ್ಛ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕು ಸ್ತಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಜೀವಘಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಖಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಮುಫತ್! **ಕ್ಯಾಲೆಂಡರ್.** ಮುಫತ್!

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಮುಫತ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದರ ಬೆಲೆ 10 ಆಣೆ.

ವಾಲ್ಮೀಕಿಯ ಜಯ ಆಣೆ 6; ಮೈತ್ರೇಯಿ ಆಣೆ 5; ಸುಧರ್ಮ ಪ್ರಭಾವ ನಾಟಕ ಆಣೆ 3, ಸೂಕ್ತಿಮಾಲೆ, 1—2 ಭಾಗಗಳು ಆಣೆ 6, ಭಕ್ತಿಯೋಗ ಆಣೆ 3, ಆರ್ಯ ಮತಸಾರ ಆಣೆ 3; ಭರತ ಭೂಮಿಯ ಮಹರ್ಷಿಗಳು ಆಣೆ 2, ರಾಜಭಕ್ತಿ ಆಣೆ 6; ದೇಶಭಕ್ತಿ ಆಣೆ 10 ಗುರುಸ್ತುತಿ ಸುಮಾಂಜಲಿ ಆಣೆ 2

[ಈ ಪೈಕಿ ರೂ 2—0—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ.]

†ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1— 4	ಪ್ರಬಂಧ ಮುಕ್ತಾವಳಿ	0—12
ಹಾರ್ಮೋನಿಯಂ ಸ್ವಯಂ ಬೋಧಿನಿ	0— 4	ಕನ್ನಡ ಅರೇಬಿಯನ್ ನೈಟ್ಸ್	2— 2
ಬಾಲಿಕಾಗೀತ ಮುಕ್ತಾಕಲಾಪ ಸ್ವರಯುಕ್ತ	0— 9	ಮುದ್ರಾಮಂಜೂಷ	1—10
ಕಲ್ಯಾಣ ಗೀತಾವಳಿ	0— 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3— 2
ಅಭಿನವ ಸಂಗೀತ ಪಾರಿಜಾತ	0— 4	ಅಧ್ಯಾತ್ಮವಿಚಾರ (ಉತ್ತರ ಸಹಿತ)	2— 0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1— 9		
ಸ್ತ್ರೀಧರ್ಮನೀತಿ	0— 9	ಪ್ರಿಂಸೋಜಪಿಜಯಂ	1— 9

†ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್)		0—12	ಮಾಧವೀ ಕಂಕಣ (ಬಂಗಾಳಿ ನಾವೆಲ್)		1— 0
ಪ್ರಫುಲ್ಲೆ	,,	0—12	ಶಕ್ತಿ	,,	0—12
ಉಪಪತ್ನಿ	,,	0— 3	ಶೋಧನೆ	,,	0—12
ವಿಷ ವಿವಾಹ	,,	0— 4	ಚಂದ್ರಪ್ರಭಾ ಕಾದಂಬರಿ		0—14
ಸೌದಾಮಿನಿ	,,	0— 8	ಸುಭದ್ರೆ	,,	0— 5
ಸರಳಾ	,,	0— 2	ಕಲಿಯುಗ	,,	0— 5
ಸುಷಮಾ	,,	0— 2	ಕಲಾನಾಥ	,,	0— 8
ಅನಾಥ ಪ್ರೇತ	,,	0— 1	ನನ್ನ ಆಚಾರ್ಯ (My Master)		0— 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳಿಗೆ ಈ ಕ್ಯಾಲೆಂಡರ್ ಬಹುಮಾನ.

ಕಾದಂಬರಿಗಳು.

ಸುಶೀಲೆ-ಶ್ರೀ ತಿರುಮಲಮ್ಮನವರಿಂದ		0— 6	ದೇವಿ ಚೌಧುರಾಣಿ ಬಿ. ವೆಂಕಟಾಚಾರ್		1— 4
ಸತೀತ್ವ ರಕ್ಷಣೆ (ನಥಾ ಭಾಗ 1)	,,	0— 8	ಪರಿಮಳ	,,	0—10
ವಿರಾಗಿಣಿ (ಡಿಟೊ 2)	,,	1— 0	ಸಾಧನೆ	,,	0— 8
ವಿದ್ಯುಲ್ಲತಾ (ಹರಿಜ)	,,	0—14	ಚಿತ್ರವಿಚಿತ್ರಾವಳಿ ಭಾಗ I, II ಸೇರಿ		1— 0
ಚಿಕ್ಕ ಶಿಕ್ಷಾ (ವಿಂದಾ)	,,	1— 8	ವೀರರದೆ		0— 8

(ಇತ್ಯಾದಿ ಇತರ ಎಲ್ಲಾ ಕಾದಂಬರಿಗಳು

ಎಲಿಮೆಂಟರಿ ಶಾಲಾ ಉಪಾಧ್ಯಾಯರು

ಲಕ್ಷಿಸಬೇಕಾದ ಸಂಗತಿಗಳು.

ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳನ್ನೇ ಶಾಲೆಗಳಲ್ಲಿ ಉಪಯೋಗಿಸಬೇಕೆಂಬ ನಿರ್ಬಂಧವಿದೆ. ಬೋರ್ಡು ಶಾಲೆಗಳಲ್ಲಿಯೂ ಮ್ಯುನಿಸಿಪಾಲ್ ಶಾಲೆಗಳಲ್ಲಿಯೂ ಕೆಳಗೆ ಹೇಳೋಣಾದ ಪುಸ್ತಕಗಳು ಮಾತ್ರವೇ ಮಂಜೂರಾಗಿವೆ ಇತರ ಪುಸ್ತಕಗಳು ಪಠ್ಯಪುಸ್ತಕಗಳಾಗಿ ಈವರೆಗೆ ಮಂಜೂರಾಗಲಿಲ್ಲ ಎಂಬುದನ್ನು ಎಲ್ಲಾ ಉಪಾಧ್ಯಾಯರು

ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಲಕ್ಷ್ಯದಲ್ಲಿಡಬೇಕು.

ಮಾರ್ಸ್ಡೆನರ ಒಂದನೇ ಪುಸ್ತಕ	0	2	0
,, ಎರಡನೇ ,, ...	0	2	6
,, ಮೂರನೇ ,, ...	0	3	0
,, ನಾಲ್ಕನೇ ,, ...	0	4	0
,, ಐದನೇ ,, ...	0	5	0
,, ಆರನೇ ,, ...	0	5	0
,, ಏಳನೇ ,, ...	0	5	0
,, ಭೂಗೋಳ ಶಾಸ್ತ್ರ 1ನೇ ಭಾಗ	0	3	0
,, ,, ,, 2ನೇ ,, ...	0	3	0
,, ಮದ್ರಾಸ್ ಆಧಿಪತ್ಯದ ವಿವರ	0	5	0
,, ಹಿಂದೂ ದೇಶದ ಚರಿತ್ರೆಯ ಸುಲಭ ಪಾಠಗಳು ...	0	7	0
,, ಗಣಿತ ಪುಸ್ತಕ (ಲೋವರ್ ಪ್ರೈಮರಿ ತರಗತಿಗಳಿಗೆ)	0	4	0
,, ಅಂಕಗಣಿತ (ಅಪ್ಪರ್ ,, ,,)	0	4	0
,, ಬಾಲಶಿಕ್ಷೆ	0	1	6
,, ಮೂಲಪಾಠಕ	0	1	6
,, ಗಣಿತ ಹಸ್ತಾಮಲಕ	0	1	0

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಶನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಳೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಚಪಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ ಕೊಳೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕ್ರೂರ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0.

೮. ಅಮೃತಸಾರ್. ಇದು ವಾಯು ದುಷ್ಟ... ಎಂಬ ... ಕೊಳಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಳೆ ದ್ರಾವಣಕ್ಕೆ ರೂ. ೫.

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ... ಔಷಧಗಳಿರುತ್ತವೆ, ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಕುಂದಾಪುರ ತಾಲೂಕು ನಂಬ್ರ 19ನೆ ಕೊಲ್ಲೂರು ಗ್ರಾಮದಲ್ಲಿರುವ ಮಾತುಬ್ಬಾರ್ ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ 7 ತಿಂಗಳು ಹಿಂದೆ ಮಲಬಾರ್ ಪ್ರಾಂತದ ಟಿ. ಸುಬ್ರಹ್ಮಣ್ಯ ಅಯ್ಯರ್ ಎಂಬ ಒಬ್ಬ ಬ್ರಾಹ್ಮಣನು ಉಜ್ಜುಶಿವಾಯಿ ಮೂಲಬಿಂಬದ ಸಮೀಪದಲ್ಲಿ ಪ್ರವೇಶಿಸುವದನ್ನು ನೋಡಿ ಆಕ್ಷೇಪಿಸಿದಾಗ ಸದರಿ ಬ್ರಾಹ್ಮಣನು ಅಲ್ಲಿರುವ ರಾಮಚಂದ್ರ ಅಡಿಗಳೆಂಬ ಅರ್ಚಕರು ಕಾಡಭಟ್ಟರೆಂಬ ಕೀಳಶಾಂತಿಯವರು ಈ ಇಬ್ಬರ ಮೇಲೆ ಕೆಲವು ಕಲ್ಪನೆಯನ್ನು ಹೇರಿಸಿ ಕ್ರಿಮಿನಲ್ ಕೇಸು ನಡಿಸಿದಲ್ಲಿ ಅದು ಅನ್ಯಾಯವಾದ್ದೆಂತ ಕೋರ್ಟಿನವರು ತೆಗದುಹಾಕಿದರು ಹೀಗೆಯೇ ಯಾತ್ರಾರ್ಥವಾಗಿ ಬರತಕ್ಕ ವಗೈರೆ ಜನರು ಯಾರಾದರೂ ಇನ್ನು ಮುಂದೆ ನೆಮ್ಮದಿಗೆ ಭಂಗ ಸಂಭವಿಸತಕ್ಕ ಅಕ್ರಮವನ್ನು ನಡಿಸದೇ ಇರುವಗೋಸ್ಕರ ದೇವಸ್ಥಾನದ ಅರ್ಚಕರೂ ಮೊಕ್ತೇಸರರೂ ವಗೈರೇರು ಕೂಡಿ ಸ್ಥಳದ ನಡವಳಕೆ ಕುರಿತು ಕನ್ನಡದಿಂದಲೂ ಮಲಯಾಳದಿಂದಲೂ ಪ್ರತ್ಯೇಕ ಇಸ್ತಿಹಾರ್ ನಾಮೆಗಳನ್ನು ಪ್ರಿಂಟಮಾಡಿಸಿ ಇವುಗಳನ್ನೂ ಹಣ್ಣುಕಾಯಿ ಸಮರ್ಪಣೆ ಕುರಿತು ಮಾಡೋಣಾದ ಒಂದು ತಹನಾಮೆಯನ್ನೂ ಸಹ ಕಮಿಟಿ ಮೆಂಬರರ ಮಂಜೂರಿ ನಿಶಿ ಜಾರಿಗೆ ತಂದಿರುತ್ತಾರೆ ಈ ಸಂಗತಿಯು ಸರ್ವರಿಗೂ ಪಬ್ಲೀಕಾಗಿ ತಿಳಿಯುವಗೋಸ್ಕರ ಸದರಿ ಕನ್ನಡ ಇಸ್ತಿಹಾರ್‌ನಾಮೆ ಮತ್ತು ಕಮಿಟಿ ಮೆಂಬರರ ಮಂಜೂರಿ ಹುಕುಂ ಇವೆರಡರ ನಕ್ಕಲುಗಳು ಈ ಕೆಳಗೆ ವಿವರಿಸಲ್ಪಡುವವು

ಇಸ್ತಿಹಾರುನಾಮೆ.

1 ಈ ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ ಶಾಸ್ತ್ರಾಚಾರ ವ ಸ್ಥಳಾಚಾರದಂತೆ "ಲಕ್ಷ್ಮೀಮಂಟಪ" ಎಂದರೆ ಮೂಲಬಿಂಬದ ಎದುರೆ ಬೆಳ್ಳಿಯ ಬಾಗಿಲ ಒಳಗೆ ಇರತಕ್ಕ ಒಳವಾಗಿರುತ್ತೆ, ಇದರಲ್ಲಿ ಪಂಚದ್ರಾವಿಡ ಬ್ರಾಹ್ಮಣರು ಶಿವಾಯಿ ಬೇರೆ ಯಾರೊಬ್ಬರೂ ಕೂಡ ವ ವೈಲಿಗೆಯಲ್ಲಿಯೂ ಸಹ ಪ್ರವೇಶಮಾಡಕೂಡದು

2 ಪೈಕಿ ಪರಸ್ಥಳೀಕ ಬ್ರಾಹ್ಮಣರು ಪೂಜೆ ಮಾಡಿಸಿಕೊಳ್ಳತಕ್ಕ ಕಾರ್ಯವಿದ್ದರೆ ಮಾತ್ರ, ಅಡಿಗಳಿರತಕ್ಕ ಸಮಯ ನೋಡಿ, ತಾವಿರತಕ್ಕ ಮನೆಯವರ ಕರಕೊಂಡೇ ಆ ಲಕ್ಷ್ಮೀಮಂಟಪದೊಳಗೆ ಪ್ರವೇಶಮಾಡಬಹುದಲ್ಲದೆ ತಾವೇ ಏಕಾಏಕಿ ಪ್ರವೇಶಮಾಡಲೂ ಕೂಡದು, ಒಮ್ಮೆ ಆ ಪೂಜೆ ಮಾಡಿಸಿಕೊಳ್ಳತಕ್ಕವನು ಇತರ ಜಾತಿಯವನಾಗಿ, ವಂಚಿಸಿ ಒಳಗೆ ಪ್ರವೇಶಿಸಿದ್ದಲ್ಲಿ, ಆ ಸಂಬಂಧ ಪ್ರಾಯಶ್ಚಿತ್ತದ ಖರ್ಚಿನ ಬಗ್ಗೆ ಮನೆಯವರೇ ಜವಾಬ್ದಾರಿಯಾಗುತ್ತಾರಲ್ಲದೆ ಬೇರೆಯವರಾಗಲಾರರು

3 ಮತ್ತು ಒಳಸುತ್ತಿನ ಬಾಗಿಲ ನಡೆಯ ದಕ್ಷಿಣ ದಿಕ್ಕಿನಲ್ಲಿ ಚಾವಡಿಯಂತಿರುವ ಪುರಾಣಮಂಟಪದಲ್ಲಿಯೂ, ಗರ್ಭಗೃಹದ ದಕ್ಷಿಣ ದಿಕ್ಕಿನಲ್ಲಿ ಗಣಪತಿ ದೇವರಿರತಕ್ಕ ಜಪಮಂಟಪದಲ್ಲಿಯೂ, ಲಕ್ಷ್ಮೀಮಂಟಪದೊಳಗೆ ಪ್ರವೇಶಿಸಬಹುದಾದ ಜನರು ಶಿವಾಯಿ ಬೇರೆ ಜಾತಿಯವರು ಯಾರೂ ಹೋಗಿ ಕುಳಿತುಕೊಳ್ಳಕೂಡದು, ವ ಪುರಾಣಮಂಟಪದಲ್ಲಿರತಕ್ಕ ಕೂರ್ಮಾಸನದ ಮಣೆಯಲ್ಲಿ ಅಡಿಗಳು ಶಿವಾಯಿ ಬೇರೆ ಯಾರೂ ಕೂಡ ಕುಳಿತುಕೊಳ್ಳಲೂ ಕೂಡದು

4 ಹಾಗೇ ಅನ್ನನೈವೇದ್ಯ ಕಾಲದಲ್ಲಿ ಬ್ರಾಹ್ಮಣರ ಶಿವಾಯಿ ಒಳಸುತ್ತಿನೊಳಗೂ, ವ ಹಾನ್ನನೈವೇದ್ಯ ಕಾಲದಲ್ಲಿ ಅಡಿಗಳು ಶಿವಾಯಿ ಲಕ್ಷ್ಮೀಮಂಟಪದೊಳಗೂ, ಬೇರೆಯವರು ಯಾರೂ ಇರಕೂಡದು.

5 ಕ್ಷೇತ್ರಸ್ಥ ಬ್ರಾಹ್ಮಣರಲ್ಲಿಯೂ ಉಪಾಧಿವಂತರು ವ ಅಗತ್ಯಪಟ್ಟ ಒಳಗಿನ ನೌಕರರು ಆಯಾಯ ಕಾರ್ಯನಿಮಿತ್ತ ಲಕ್ಷ್ಮೀಮಂಟಪದೊಳಗೆ ಪ್ರವೇಶಿಸಬಹುದಲ್ಲದೆ, ಬೇರೆ ಜನರು—ಒಳಗೆ ಅಡಿಗಳಾಗಲಿ, ಕೀಳ್‌ಶಾಂತಿ ಬಟ್ಟರಾಗಲಿ, ಪಾರಾಳಿಗಳಾಗಲಿ ಇಲ್ಲದಿರುವಾಗ ಪ್ರವೇಶಿಸಕೂಡದು,

6 ಗರ್ಭಗೃಹದೊಳಗೆ ಬ್ರಾಹ್ಮಣರು, ಕ್ಷೇತ್ರಸ್ಥರು ಯಾ ಪರಸ್ಥಳೀಕರು ಯಾರೇಯಾಗಲಿ, ಯಜನಾದಿ ಷಟ್ಕರ್ಮವಿಶಿಷ್ಟರಾಗಿಯೂ ಪಂಕ್ತಿಭೋಜನವುಳ್ಳವರಾಗಿಯೂ, ಸಾಗ್ನಿಕರಾಗಿಯೂ ಇರತಕ್ಕ ಗೃಹಸ್ಥಾಶ್ರಮದವರಾಗಿದ್ದು, ಅಥವಾ ಯತಿಗಳಾಗಿದ್ದು, ಸ್ವಂತ ಪೂಜೆ ಇರುವ ಪಕ್ಷಕ್ಕೆ ಮಾತ್ರ ಆ ಪೂಜೆಯನ್ನು ಅಡಿಗಳಿಂದ ಮಾಡಿಸಿಕೊಳ್ಳುವ ಪೂರ್ತ ಪ್ರವೇಶಮಾಡಬಹುದಲ್ಲದೆ, ಇತರ ನಿಮಿತ್ತವಾಗಿಯೂ, ಅಡಿಗಳಿಲ್ಲದಿರುವಾಗಲೂ, ಕೀಳ್‌ಶಾಂತಿ ಬಟ್ಟರು ಶಿವಾಯಿ ಬೇರೆ ಜನರು ಪ್ರವೇಶಮಾಡಕೂಡದು

7 ಬ್ರಾಹ್ಮಣರು ಶಿವಾಯಿ ಬೇರೆ ಭಕ್ತಜನರು ಹಗಲಿನಲ್ಲಿ ಸಾಯಂಕಾಲದಲ್ಲಿಯಾಗಲಿ, ಒಳಸುತ್ತಿನಲ್ಲಿ ಬಂದ ಕೂಡಲೇ ದೇವರ ದರ್ಶನಮಾಡಿ ಐದು ಪ್ರದಕ್ಷಿಣೆ ವರೇಗೆ ಪೂರೈಸಿಕೊಂಡೂ, ಅವರು ಆಗ ಮಾತ್ರ ಬಂದವರಾಗಿದ್ದರೆ ದೇವರ ಎದುರೆ ಇರತಕ್ಕ ಸಿಂಹನ ದಕ್ಷಿಣಪಾರ್ಶ್ವವು ಬ್ರಾಹ್ಮಣರು ತೀರ್ಥಪ್ರಸಾದ ವಗೈರೆ ನಿಮಿತ್ತ ನಿಲ್ಲತಕ್ಕ ಸ್ಥಳವಾದ್ದರಿಂದ ಉತ್ತರಪಾರ್ಶ್ವದಲ್ಲಿಯೇ ನಿಂತು, ತೀರ್ಥಪ್ರಸಾದ ವಗೈರೆ ತೆಗೆದುಕೊಂಡೂ, ಆ ಮೇಲೆ ಹೊರಸುತ್ತಿನಲ್ಲಿ ಗಂಧ ತೇಯ್ಯತಕ್ಕ ಚಡಿ ಶಿವಾಯಿ ಬೇರೇ ಒಂದೊಂದು ಯೋಗ್ಯವಾದ ಸ್ಥಳದಲ್ಲಿದ್ದು ಭಜನೆ ವಗೈರೆ ಮಾಡಲೂ ಬಹುದು ಹಾಗೂ ಮಧ್ಯದಲ್ಲಿ,—ಹಗಲು ಪ್ರಾತಃಕಾಲ ಬಲಿಯಾದ ಕೂಡಲೇ, ರಾತ್ರೆ ಪ್ರದೋಷಕಾಲ ದೀಪಾರಾಧನೆಯಾದ ಕೂಡಲೇ, ತೀರ್ಥಪ್ರಸಾದ ಕೊಡತಕ್ಕ ಕಾಲಗಳಲ್ಲಿಯೂ, ಕಷಾಯತೀರ್ಥ ಕೊಡತಕ್ಕ ಕಾಲದ ವರೇಗಿನ ಎಲ್ಲಾ ಮಂಗಳಾರ್ತಿ ಕಾಲಗಳಲ್ಲಿಯೂ, ಸ್ವಂತ ಪೂಜೆ ಮಾಡಿಸತಕ್ಕ ಕಾಲಗಳಲ್ಲಿಯೂ ಸಹ ಒಳಸುತ್ತಿಗೆ ಬಂದು ಅದನ್ನು ಪೂರೈಸುವ ವರೇಗೆ ಮಾತ್ರ ಇದ್ದು ಆ ಮೇಲೆ ಹೊರಸುತ್ತಿಗೆ ಹೋಗತಕ್ಕದ್ದು ಶಿವಾಯಿ, ಎಲ್ಲಾ ಕಾಲಗಳಲ್ಲಿಯೂ ಇಚ್ಛಾನುಸಾರವಾಗಿ ಒಳಸುತ್ತಿಗೆ ಬಂದು ನಿಲ್ಲಕೂಡದು

8 ಒಳಸುತ್ತಿಗೂ ಹೊರಸುತ್ತಿಗೂ ಪ್ರವೇಶಿಸಲಿಕ್ಕಿರುವ ಬಾಗಿಲುಗಳೆರಡರ ಸಮೀಪದಲ್ಲಿ ಎಡಬಲಕ್ಕೆ ತೂಗ್ಯಾಡತಕ್ಕ ನಾಲ್ಕು ದೊಡ್ಡ ಘಂಟೆಗಳನ್ನೂ ಕ್ಲಪ್ತ ಜನರು ಶಿವಾಯಿ ಬೇರೆ ಯಾರೂ ಹೊಡೆಯಕೂಡದು

9 ಜಾತಾಶೌಚವುಳ್ಳವರೆಲ್ಲರೂ, ಕ್ಷೌರಿಕನೂ, ಸಮಗಾರನೂ, ಮಹಮ್ಮದಿಯವರೂ, ಕ್ರಿಸ್ತಿಯಾನರೂ ಕೂಡ ಒಳಸುತ್ತಿನೊಳಗೂ, ಹಳೇಪೈಕರು ಮುಂತಾದ ಮುಟ್ಟಾಳುಗಳಲ್ಲದವರೂ ವ ಪಾದರಕ್ಷೆಯ ತೆಗೆಯದೇ ಇರುವವರು ಯಾರಾದರೂ ಕೂಡ, ಹೊರಸುತ್ತಿನೊಳಗೆ ಎಂದರೆ ಮಹಾದ್ವಾರದೊಳಗೂ ಪ್ರವೇಶಿಸಕೂಡದು

10. ಮಲಯಾಳ ಜನರು ಯಾರೇ ಆಗಲಿ, ಶಂಕರಾಚಾರ್ಯರು ನಿಶ್ಚಯಿಸಿರುವಂತೆ ಕ್ಷೇತ್ರಸ್ಥರ ಮುಖಾಂತರ ವಿಧಿಪ್ರಕಾರ ದರ್ಶನಮಾಡಿ, ಅದಕ್ಕೆ ಕ್ಲಪ್ತವಾದ ಕಾಣಿಯನ್ನು ಕೊಡತಕ್ಕವರೇ ಶಿವಾಯಿ, ಅದಕ್ಕೆ ವಿರೋಧವಾಗಿ ನಡೆಯತಕ್ಕವರು ಮಹಾದ್ವಾರದೊಳಗೆ ಪ್ರವೇಶಿಸಕೂಡದು

11 ಈ ಜನರಲ್ಲಿಯೂ ಆ ದೇಶದ ನಡತೆಯಂತೆಯೇ ವೆಳ್ಳತ್ತಿರಿ, ವೆಳತೇಡನ್, ವಿದ್ಯೆಕಲಿಸುವ ನಿಮಿತ್ತ ವಿಶೇಷ ಹೆಸರುಹೊಂದತಕ್ಕ ಮೇಲಜಾತಿಯ ಎಳತೇಶನೆಂಬವನು ಶಿವಾಯಿ, ಕಟಿಪ್ಪೊಟ್ಟನ್ ಎಂಬ ಎಳತೇಶನ್, ಚಾಲ್ಯನ್,—ಈ ಜಾತಿಯವರು ಒಳಸುತ್ತಿನೊಳಗೂ ಮಣ್ಣಾನ್ ತೀಯನ್, ಕಣಿಯನ್, ಆಶಾರಿ, ಮೂಶಾರಿ, ತಟ್ಟಾನ್ ಮುಂತಾದ ದೂರಿನವರು ಮಹಾದ್ವಾರದೊಳಗೂ ಪ್ರವೇಶಿಸಕೂಡದು

12 ಇದಲ್ಲದೆ ದೇವಸ್ಥಾನದೊಳಗೆಲ್ಲಿಯಾಗಲಿ ಸರ್ವಸಾಧಾರಣಗಳಾದ ಮಲಮೂತ್ರವಿಸರ್ಜನ, ವಾಂತಿ, ರಕ್ತಸ್ರಾವ, ರೋದನ, ಪರಿಹಾಸ, ಅಸಭ್ಯಸಂಭಾಷಣ, ಅಶುಚಿಪ್ರವೇಶ, ಗರ್ಜನ ಮುಂತಾದ ಸಾನ್ನಿಧ್ಯಹಾನಿಕರಗಳಾದ ದೋಷಗಳನ್ನೂ ನಡಸಕೂಡದು

ಈ ನಿಬಂಧನೆಗಳಿಗೆ ಯಾರೊಬ್ಬರು ವಿರೋಧವಾಗಿ ನಡಿಯುತ್ತಾರೋ ಅವರು—ಪ್ರಾಯಶ್ಚಿತ್ತ, ಅಪರಾಧಕಾಣಿಕೆ, ಅತಿಕ್ರಮಪ್ರವೇಶ, ಚೌರ್ಯಾಪಾದನಶಂಕೆ ರೂಲಿನಂತೆ ಸರಿಪಡಿಸೋಣ,—ಇವುಗಳಲ್ಲಿ ಯುಕ್ತವಾದದ್ದೊಂದಕ್ಕಾದರೂ ಬದ್ಧರಾಗದೇ ಇರಲಾರರು

ತಾ 4ನೇ ಸಪ್ಟಂಬರ 1915ನೇ ಇಸವಿ

ಶ್ರೀಕ್ಷೇತ್ರ ಕೊಲ್ಲೂರು ದೇವಸ್ಥಾನದ ಅಡಿಗಳು ಮತ್ತು
ಮೊಕ್ತೇಸರ್ ನೋಟೀಸ್

ಕಮಿಟಿ ಮೆಂಬರರ ಹುಕುಂ.

No 1

ಹವ್ಯಕ ಮಠಸ್ಥಾಪನೆಗಳ ಕಮಿಟಿ ಮೆಂಬರರ ಆಫೀಸಿನಿಂದ—

ಶ್ರೀ ಕೊಲ್ಲೂರು ದೇವಸ್ಥಾನದ ಮೆನೇಜರ್ ಸುಬ್ರಾಯ ಅಡಿಗಳವರಿಗೆ ಕೊಟ್ಟ ಹುಕುಂ,

ನೀವು ರಿಪೋರ್ಟಿನ ಸಮೇತ ರವಾನಿಸಿದ ಇಸ್ತಿಹಾರುನಾಮೆಗಳು 2 ತಹನಾಮೆ 1 ಕೂಡಾ ತಳ್ಳಿ ಪರಾಂಬರಿಸಿ ದಸ್ಕತು ನಿಶಿ ಮಂಜೂರು ಮಾಡಿ ವಾಪಸ್ ರವಾನಿಸುವದಾಗಿದೆ.

ದೇವಸ್ಥಾನದಲ್ಲಿ ಶಾಸ್ತ್ರಾಚಾರ ವ ಸ್ಥಳಾಚಾರ ವಿಷಯ ಅರ್ಚಕರು ಯಾನೆ ಅಡಿಗಳು ಮುಖ್ಯ ಅಧಿಕಾರಿಗಳಾಗಿಯೂ ಅವುಗಳ ಅನುಕೂಲ ವಗೈರೆ ಮೊಕ್ತೇಸರ ಮೆನೇಜರರು ಮುಖ್ಯ ಅಧಿಕಾರಿಗಳಾಗಿಯೂ ಇರುವದರಿಂದ ಸದರಿ ಬಹು ಜನರ ದಸ್ಕತ್ತುಗಳು ಸಮೇತಗಳಾದ ಪ್ರತಿ 3ರಲ್ಲಿ 1 ಕನ್ನಡ ಇಸ್ತಿಹಾರುನಾಮೆಯು 4 ಜನ ಅಡಿಗಳ ಪೈಕಿ [illegible]ದಿಂದ ಇಟ್ಟುಕೊಳ್ಳತಕ್ಕ [illegible] ದಲ್ಲಿಯೂ ಬಾಕಿ ಮಲೆಯಾಳ ಇಸ್ತಿಹಾರುನಾಮೆ ಯಾನೆ ಪರಸ್ಪರ ತಹನಾಮೆ ಕೂಡ 2 ದೇವಸ್ಥಾನದಲ್ಲಿಯೂ ಭದ್ರತೆಯಿಂದ ಆಗತ್ಯ ಇಟ್ಟಿರುವಂತೆ ಸರಿಪಡಿಸತಕ್ಕದ್ದು.

ತಾ. 8 ನೇ ಜನವರಿ 1916ನೇ ಇಸವಿ

ಸುಳಗೋಡು ಪರಮೇಶ್ವರಯ್ಯ, ಅಡ್ಡಿ [illegible] ಸಣ್ಣಯ್ಯ, ಸುಳ್ಳೆ ಶೇಷಗಿರಿಯಪ್ಪ, ಕಮಿಟಿ ಮೆಂಬರರು.

ಕನ್ನಡ ಕಥ ಪುಸ್ತಕಗಳು.

ಮುದ್ರಾಮಂಜೂಷ	1	12	0	ನಿರ್ಮಲೆ	0	12	0
ಅರೇಬಿಯನ್ ನ್ಯಾಟ್ಸ್	2	4	0	ಸಚಿತ್ರ ಭಕ್ತಿ ವಿಕ್ರಮಾದಿತ್ಯ			
ರಮಾಮಾಧವ	0	6	0	ರಾಯನ ಕಥೆ	1	8	0
ನವೀನ ಭರತ ಖಂಡ	0	6	0	ವಿದ್ಯಾಮಂಜರಿ	1	4	0
ಕೃಷ್ಣಾಕುಮಾರಿ	0	10	0	ಪತಿವ್ರತಾ ಮಹಾತ್ಮ್ಯ	0	6	0
ಪರಿಮಳಾ	0	12	0	ಹರಿಶ್ಚಂದ್ರನ ಕಥೆ	0	4	0
ಮಹಾರಾಣಿ ಗೃಹಶೀಲೆ	0	3	0	ನಳದಮಯಂತಿಯ ಕಥೆ	0	6	0
ದುರ್ಗಾದಾಸ	0	12	0	ಶ್ರೀ ಕೃಷ್ಣಬೋಧಾಮೃತ.	0	8	0
ಚಂಚಲ ಕುಮಾರಿ	0	6	0	ಹಾಸ್ಯಸುಂದರಿ	0	8	0
ಪ್ರಬಂಧ ಮುಕ್ತಾವಳಿ	0	12	0	ಸೋಮಸುಂದರಿ	0	10	0
ಚಂದ್ರಮತಿ	1	0	0	ಮೂಷಕಾಸುರ ವಿಜಯ	0	1	6
ದಯಾಮತಿ	0	2	0	ಹಾಸ್ಯ ಸಂಜೀವಿನಿ	0	4	0
ಕಳಾವತಿ	0	2	0	ನಿರುಪಮಾ	0	12	0
ಸಂಗೀತ ಸಮಯಸಾರ	1	4	0	ಭಾನುಮತಿ	0	2	0
ಬಾಲಕಾಗೀತ ಮುಕ್ತಾವಳಿ	1	10	0	ಸಂತಾಪಕ	0	4	0
ವಿಷವೃಕ್ಷ	1	8	0	ವಸುಮತಿ	0	2	0
ದುರ್ಗೇಶನಂದಿನಿ	1	4	0	ಪದ್ಮಿನಿ	0	2	0
ಶ್ರೀಮಲೆಯಾಳ	0	8	0	ತಾರಾಸುಂದರಿ	0	8	0
ಶೇಕ್ಸ್[illegible]	0	2	0	ಅನಂಗಸುಂದರಿ	0	8	0
ಕುಮುದಿನಿ	0	6	0	ಸತ್ಯಸಂಜೀವಿನಿ	0	6	0
ಸಾಧ್ವಿಗುಣಮಂಜರಿ	[illegible]	[illegible]	0	ಮಹಾಬಧಿರ ಪ್ರಹಸನ	0	2	0
ಹಾರ್ಮೋನಿಯಂ ಸ್ವಯಂಬೋಧಿನಿ		4	0	ಅಸಹಾಯ ಶೂರಪ್ರಹಸನ.	0	2	0
ಸಂಗೀತ ಪಾರಿಜಾತ	0	4	0	ಪ್ರಹಸನ ತರಂಗ	0	3	0
ಸಂಗೀತ ಸಾರಸಂಗ್ರಹ	1	4	0	ಶೋಭನೆ	0	10	0
ಹನುಮದ್ರಾಮಾಯಣ	3	[illegible]	0	ಚಂದ್ರಕಳಾ	0	9	0
ರೋಹಿಣಿ (ಸಂತಸ್ಪತವ ಂವಳ)	1	0	0	ಸತೀರೋಹಿಣಿ	0	2	0

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಗೋರೋಚಿತ್ರಗಳೂ, ಅರಗಜ, ಫಿತ್ನ, ದಶಾಂಗ, ಗಂಧದಪಿಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರಿಯುವದು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಶ್ರೀ ರಾಧಾಕೃಷ್ಣ ವಿಲಾಸ್,
ರಥಬೀದಿ. ಮಂಗಳೂರು.

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ವಿಕೃತ ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ರಾವಳಿ ತೂಕ ಯಾ ಗೋಲಿಗಾತ್ರ ಅಭ್ಯಾಸಿಸುವವರು 2 ರಾವೆ ತೂಕ ರಾತ್ರಿ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಪ್ಪಿಗೆ ಕ್ರಯ. 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು ಇರತಕ್ಕದ್ದು, ತಾಚಪಿಂಡು ಗುಣ.

ಕ್ರಯ. ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0.

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0

ಚಂದನಾಸವ.—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ಕೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಓದಿ ಕಲೋನ್.:—ಇದು ವಿಲಾಯತಿಯಿಂದ ತರಿಸಿದ್ದಲ್ಲ. ನಮ್ಮ ಔಷಧಶಾಲೆಯಲ್ಲಿಯೇ ಸ್ವತಃ ತಯಾರಿಸಲ್ಪಟ್ಟಿದ್ದು ಮನಸ್ಸು ಸಂತೋಷವಾದಂತ ಸುವಾಸನೆಯಾದಂತಾದ್ದು. ಇದನ್ನು ದೇಹಕ್ಕೂ ಸವರಬಹುದು ಮತ್ತು ವಸ್ತ್ರಗಳಿಗೆ ಹಾಕಬಹುದು, ಇದರ ಉಪಯೋಗದಿಂದ ತಲೆಶೂಲಿ ಗುಣವಾಗುವದಲ್ಲದೆ ದೇಹ ಶ್ರಮವನ್ನು ತೀರಿಸುವದು. ಬಹಳ ಹೊತ್ತು ಇದನ್ನು ಉಪಯೋಗಿಸಿದವರನ್ನು ಸುತ್ತಲು ಅತಿವಾಸನೆಯಾಗಿರುವದು. ಸಾಧಾರಣವಾಗಿ ಅಂಗಡಿಗಳಲ್ಲಿ ಜಲಮಿಶ್ರವಾದಂತೆ ಇಲ್ಲದೆ ಇದೊಂದು ಸುಯವಾದ ವಾಸನೆಯಾದ ವಸ್ತುವು. ಅಂಗಡಿಗಳಲ್ಲಿ ಇರುವ ಓದಿ ಕಲೋನ್ 10 ತೊಟ್ಟು ಉಪಯೋಗಿಸುವುದಕ್ಕಿಂತಲು ನಮ್ಮಿಂದ ತಯಾರಾಗಿ ಮಾರುತ್ತಲಿರುವ ಓದಿ ಕಲೋನ್‌ನ್ನು 2 ತೊಟ್ಟು ಬಿಟ್ಟಲ್ಲಿ ಸಾಕಾಗುವದು. ಅರ್ಧ ಔನ್ಸು ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಅಣೆ.

ಬಟ್ಟೆಗಳಿಗೆ ಹಾಕುವ ಸುವಾಸನಾ ದ್ರವ್ಯಗಳು:—ಮನಮೋಹಿನಿ ಮನೋರಂಜನಿ, ಜಗನ್ಮೋಹಿನಿ, ಮದನವಿಲಾಸ, ಅಕ್‌ಬರ್ ಚಿರಾಯಿ, ಷಾಜಿಹಾನ್ ಚಿರಾಯಿ, ಎಂಬ ಆರು ವಿಧ ಸುವಾಸನೆಗಳುಂಟು. ಈ ದಿನಸುಗಳು ಈಗ ಪುಷ್ಪಿಸಿದ ಪುಷ್ಪಗಳಂತೆಯೇ ಪರಿಮಳಿಸುವದು. ಯಾವದು ಬೇಕಾದರೂ ಸೀಸೆ 1ಕ್ಕೆ 8 ಅಣೆಗಳು. ವಿ. ಪಿ. 1ರಿಂದ 3 ಸೀಸೆಗಳವರೆಗೂ 5 ಅಣೆಗಳು ಪ್ರತ್ಯೇಕವು.

ಕೇಸರಿ ಪವ್ಡರ್:—ಇದು ಒಂದು ವಿಧವಾದ ಹೆಚ್ಚು ಬೆಲೆಯಾದ ಸುಗಂಧ ಮಿಶ್ರವು. ಇದರಲ್ಲಿ ಸ್ವಲ್ಪ ಹುಡಿಯನ್ನು ತೆಗೆದು ನೀರಲ್ಲಿ ಆಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಿ ದೇಹಕ್ಕೆ ಹಚ್ಚಿಕೊಂಡದ್ದೇ ಆದರೆ ಸರ್ವಜನಗಳಿಗೆ ಸಂತೋಷವನ್ನು ಹೊಂದುವಂತೆ ಸುವಾಸನೆಯನ್ನು ಕೊಡುವದು. ವಿವಾಹ ಪ್ರಸ್ತಮೊದಲಾದ ಶುಭ ಪ್ರಯೋಜನಗಳಿಗೆ ಇದನ್ನು ಅವಶ್ಯ ಉಪಯೋಗಿಸಬೇಕು. ಇದನ್ನು ಶ್ರೀಗಂಧದಲ್ಲಿ ಸೇರಿಸಿದರೆ ಇತರ ಅತ್ತರು, ಪನ್ನೀರು, ಕುಂಕುಮದ ಹೂವು, ವಗೈರೆ ಯಾವ ಸುವಾಸನ ದ್ರವ್ಯಗಳು ಸೇರಿಸಬೇಕಾದವಶ್ಯವಿಲ್ಲ. ಕ್ರಯ ಸೀಸೆ 1ಕ್ಕೆ 8 ಅಣೆಗಳು. 1 ಮೊದಲು 6 ಸೀಸೆವರಿಗೆ ವಿ. ಪಿ. ಚಾರ್ಜು 5 ಅಣೆ ಪ್ರತ್ಯೇಕವು.

ಅರಗಜಾ:—ಇದು ಮತ್ತೊಂದು ವಿಧವಾದ ಪರಿಮಳ ದ್ರವ್ಯವು. ಇದನ್ನು ಪ್ರತ್ಯೇಕವಾಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಬಹುದು. ಪ್ರತ್ಯೇಕವಾಗಿ ಶರೀರಕ್ಕೆ ಹಚ್ಚಿಕೊಳ್ಳಬಹುದು. ಮುಖಕ್ಕೆ ತಿಲಕವನ್ನು ಇಟ್ಟುಕೊಳ್ಳಬಹುದು, ದಿವ್ಯವಾದ ಉಡುಪುಗಳಿಗೆ, ವಸ್ತ್ರಗಳಿಗೆ, ಕೈಗುಡ್ಡೆಗಳಿಗೆ ಹಚ್ಚಬಹುದು. ಇದರ ಸುವಾಸನೆಯನ್ನು ಹೇಳಲು ಸಾಧ್ಯವಿಲ್ಲ. ಇದನ್ನು ದೇಹಕ್ಕೆ ಹಚ್ಚಿಕೊಂಡನಂತರ ಮೂರು ದಿವಸದವರಿಗು ಪ್ರತಿನಿತ್ಯ ಅಭ್ಯಂಗಸ್ನಾನಮಾಡಿದರೂ ಪರಿಮಳ ಬಿಡದೇ ಇರುತ್ತದೆ. ಕ್ರಯ ಡಬ್ಬಿ 1ಕ್ಕೆ 8 ಅಣೆಗಳು 12 ಡಬ್ಬಿಗಳವರಿಗು ವಿ. ಪಿ. ಚಾರ್ಜು 5 ಅಣೆ ಪ್ರತ್ಯೇಕ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಶಂಬ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೪ ಸಾಲ್ಯ ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ರೂ ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣಕೊಡುವದು ಬಾಟ್ಲಿಗೆ ೨ ೮ ೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೪. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಪಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

ತಮ್ಮ ವಿಳಾಸ—**ಬಿ ಎಮ್. ನಾಥ್ ಮತ್ತು ಕಂಪೆನಿ,**

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ

೯. ವಾಸಾವಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೇ ಲೇಪನದೊಳಗಾಗಿ ಗೆಲ್ಲುವದು ಉರಿಯೂ ಇಲ್ಲ ಸುವಾಸಿಕವಾಗಿದೆ ಡಬ್ಬಿಗೆ ೪ ಆಣೆ.

೧೩ ಸುವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನು ಉಂಟುಮಾಡುವದು. ತೊಲೆಗೆ ೧ ರೂ

೧೪ ಬ್ರಾಹ್ಮೀ ಸಾರಸ್ವತ ಚೂರ್ಣ ಉನ್ಮಾದ ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಸೂಚಿತ ಬೆಲೆಗಳಲ್ಲಿ ಅಂಚೆ ಖರ್ಚು ಸೇರಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗಲಕ್ಷಣಗಳನ್ನು ಬರೆದು ತಿಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ಪತ್ರವ್ಯವಹಾರ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯುತ್ತದೆ

B M Nata & Co, *Ayurvedic Chemists,*

Vepery Post MADRAS.

ಪಿ. ಕೆ. ವೈದ್ಯರ್ ಇವರ ಸ್ವಾನುಭವಸಿದ್ಧವಾದ ಔಷಧಗಳು

ಸುಕುಮಾರ ಘೃತ. ಗರ್ಭ ಪ್ರತಿಬಂಧಕಗಳಾದ ಸ್ತ್ರೀಯರ ಸರ್ವ ರೋಗಗಳನ್ನೂ ಸಮೂಲವಾಗಿ ಛೇದಿಸಿ ಅಕಾಲ ಪ್ರಸವ ಮುಂತಾದ ದೋಷಗಳನ್ನೂ ಖಂಡಿಸಿ ಗರ್ಭಕ್ಕೆ ಪುಷ್ಟಿಯನ್ನೀಯುವದಲ್ಲದೆ, ಪುರುಷರಿಗೆ ವಾಯು, ಅಂತ್ರವಾಯು, ಕ್ಷಯ ಧಾತುಕ್ಷಯವೇ ಮುಂತಾದವುಗಳನ್ನ ಅಲ್ಪಕಾಲದಲ್ಲಿಯೇ ಪ್ರಶಮಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವುದು. ಕ್ರಯ ೨೦ ತೊಲೆಗೆ ರೂಪಾಯಿ 2–0–0.

ಸರ್ವಜನ ಹಿತಕಾರಿಣಿ ಲೇಹ್ಯ. ಕ್ಷಯ ಅಗ್ನಿಜ್ವರ, ಉಷ್ಣಮೂತ್ರ ಮೂತ್ರರೋಗ, ಪಿತ್ತಮೂಲವಾದ ಸಕಲ ರೋಗಗಳಿಗೆ ಅಮೃತ ಕಲ್ಪವಾಗಿರುವುದು. ಕ್ಷೀಣದೇಹಿಗಳು ಸೇವಿಸಿದ್ದಲ್ಲಿ ತಿಂಗಳು ಒಳಗೆ ೫ ರಾತ್ತಲಿನಂತೆ ತೂಕದಲ್ಲಿ ಹೆಚ್ಚಳಿಕ್ಕೆ ಏನೂ ಸಂಶಯವಿಲ್ಲ ದೇಹದ ಆರೋಗ್ಯಗಳನ್ನು ವೃದ್ಧಿಸಿ ರಕ್ತಶುದ್ಧಿಯನ್ನು ಗೈಯುವ ಪರಮೌಷಧ ತೊಲೆ ೨೪ರ ಸೇರು ೧ಕ್ಕೆ ರೂಪಾಯಿ 1–8–0

ಅಗಸ್ತ್ಯಕಲ್ಪವೆಂಬ ರಸಾಯನ. ಈ ರಸಾಯನ ಸೇವನೆಯಿಂದ ಧಾತುಬಲ, ಅಗ್ನಿಬಲ ವರ್ಧನೆಯಾಗುವದಲ್ಲದೆ ನಿಸ್ಸತ್ವರನ್ನು ಭೀಮಸತ್ವರನ್ನಾಗಿಯೂ ಅಕಾಲ ವೃದ್ಧರನ್ನು ಶುದ್ಧ ಯುವಕರನ್ನಾಗಿಯೂ ನೇರ್ಪಡಿಸುವ ದಿವ್ಯ ಮೂಲಿಕೆಗಳನ್ನೊಳಕೊಂಡಿರುವುದು ಅನುಭವವೇ ಪ್ರತ್ಯಕ್ಷ ಪ್ರಮಾಣ ತೊಲೆ ೨೪ರ ಸೇರು ೧ರ ಕ್ರಯ ರೂ 1–0–0

ಕ್ಷಯಸಂಹಾರಿ ತೈಲ. ಉಬ್ಬಸ, ಕೆಮ್ಮು, ಕಿವುಡತನ ಕರ್ಣಸ್ರಾವ, ಮುಂತಾದುವಕ್ಕೆ ಅತ್ಯುತ್ತಮ ಬಾಟ್ಲಿ ೧ರ ಕ್ರಯ 7 ಆಣೆ

ರಕ್ತಪಿತ್ತ ಕುಠಾರ. ಬಿಳಿ, ಕೆಂಪು ಅಥವಾ ಮಿಶ್ರ ಇರುವ ಪ್ರದರದ ಮೇಲೆ ಪ್ರಯೋಗಿಸ ಬಹುದು ಮೂಗಿನಲ್ಲಿ, ಬಾಯಿಯಲ್ಲಿ, ಕಿವಿಯಲ್ಲಿ ಮಲದಲ್ಲ ಸಹಾ ಕಾಣಬಹುದಾದ ರಕ್ತಪಿತ್ತ ದೋಷಗಳನ್ನು ಪರಿಹರಿಸುತ್ತದೆ. ೨೦ ಮಾತ್ರೆಗಳುಳ್ಳ ಬಾಟ್ಲಿ ೧ರ ಕ್ರಯ ರೂ 2–8–0

ಇವಲ್ಲದೆ ಇನ್ನೂ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿವೆ ಅನುಪಾನಪತ್ರಗಳೂ ಸೇವನಾಕ್ರಮಗಳೂ ಔಷಧದ ಸಂಗಡಲೇ ಕಳುಹಿಸೋಣಾಗುವುದು.

Address.— ವಿಳಾಸ:—

MANAGER, ಮೆನೇಜರ್,

The Universal Medical Hall, ವಿಶ್ವವೈದ್ಯಾಲಯ,

MANJESHWAR ಮಂಜೇಶ್ವರ.

ಡೋಂಗರೆ ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೋ.

Girgaum, Bombay. ಗಿರ್ಗಾಂವ ...

ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್ ...

... ದಲ್ಲಿಯೂ ದೊರೆಯುವದು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1 ಚಿಕ್ಕ ಸೀಸೆ ಆಣೆ 10 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ



ಶತಧೌತ ಘೃತ

ಗ್ರಂಥಿ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಂಪಲು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಪಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
15 ಅಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್

ತಂತಿ ವಿಳಾಸ —"ಪಂಡಿಟ್" ಮದರಾಸ್

ಫಿಜಾಬೆ ಮಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ, ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವವು.

ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುದು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ

ಪೆಟ್ಟಿಗೆ ಒಂದರ ಕ್ರಯ ರೂ 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0 ವಿ. ಪಿ. ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ ಒಲೆಯು



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು

೧೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ	17	8	0
ಬರೀ ಒಲೆಗೆ ಮಾತ್ರ ಕ್ರಯ ರೂ	15	12	0
೫ನೇ ಮತ್ತು ೧೦ನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟ್ಯಾವ್ ಡಿಪೊ, ೭೩೭ ಗಿರಗಾಂ, ಬೊಂಬಾಯಿ.

ಡಾಕ್ಟರ್ ನವರತ್ನರ

ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ ... ಇದರಂಥಾ ಇತರ ತೈಲಗಳಿಲ್ಲ ... ಒಂದು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪಾಲು ಚಾರ್ಜು 0—4—0

Dr Navaratna & Sons,
Kalbadevi Road, BOMBAY

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು, ಖಜ್ಜಿ, ಘುಟ್ಟ ಘಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಕಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೋ,
ಕದ್ರಿ, ಮಂಗಳೂರು.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮ॥ ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಿವರ್‌ರೋಜ್ ಆರ್ ಜೋಶಿರವರು, ಜೆ. ಪಿ. ಓನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:—ಮ॥ ಜೋರ್ಜ್‌ಕಿಂಗ್ ಎಪ್ ಎಫ್ ಎ. ಎಪ್ ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್ ರಾವ್, ಎಮ್ ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ॥ ಕೆ ಸುಬ್ರಮಣ್ಯಾಯ್ಯರ್, ಬಿ ಎ ಜೆ. ಪಿ. ಎಫ್. ಎಸ್ ಎ ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ —

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು

ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದ ದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗ್ಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ ಈ ತರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲಿ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡ್ಪಿ, ತಾ 20—8—1914

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No 1738

ಸಾಕ್ಷಿ—ಭವಾನೀಬಾಯಿಯ ಸೋದರ ರಾ॥ ಕೆ. ರಂಗಪ್ಪ ನಾಗಪ್ಪ

ಮಂಗಳೂರು, ತಾ 30—10—1914

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಏಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣದನ್ನು ನಾವಿದ್ದ ಸ್ಥಳಕ್ಕೆ ಬಂದು ಕೊತ್ತರು — ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಿಸ ಹಕ್ಕಿನ ಅಸಾಮಿ)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ** ಪ್ರಖ್ಯಾತವಾದ ಮತ್ತು ಈಗಿನ **ಕಾಲ**ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು **ಕೈ**ವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 **ದಿವಸ**ಗಳ ವರೆಗೂ ಪರಿಮಳವಿರುವದು.

	ರೂ.	ಆ	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್ .	2	0	0
ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ .	0	12	0

ವಿ ಪಿ ಚಾರ್ಜು 0—4—0 ಜಾಸ್ತಿ

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,

10 Princes Street, BOMBAY

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಸೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co.,	ಎಚ್. ಆರ್. ಮೋಡಿ ಎಂಡ್ ಕೊ.
Chemists,	ಕೆಮಿಸ್ಟ್ಸ್,
10 PRINCES ST., BOMBAY.	10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪಿಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳಪು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭಸ್ಥವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುವು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ 1—0—0.

" " 3ಕ್ಕೆ " 2-10—0

ವಿ ಪಿ ಚಾರ್ಜು ಅಲಾಯಿದ

N B — ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

" ಮಿಡಿಯಂ " " 0-12—0.

" ½ ಔನ್ಸಿನ " " 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದು.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಸ್ ಸಾಲ್ಟ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೇ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭವುಂಟು. ಕ್ರಯ ಬಾಕ್ಸು ಒಂದರ ರೂ 1—0—0. ಟಪ್ಪಾಲು ಖರ್ಚು 4 ಆಣೆ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

Printed & Published by V. S. Kamath at the Mangalore Trading Association's Sharada Press, Mangalore

Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಂದಕ್ಕೆ ರೂ 1—4—0. ಟಪ್ಪಾಲ ಖರ್ಚು ಸೇರಿ ರೂ 2—1—0.

ಪುಸ್ತಕ X ಮಂಗಳೂರು ತಾ 10ನೇ ಮಾರ್ಚಿ ಶುಕ್ರವಾರ 1916 ಸಂಚಿಕೆ 10

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

(ರಜಿಸ್ಟರ್ಡ)

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟಮಾಡನಂತರ ಅಥವಾ ಕಾಂಚಿಹಾಲವನ್ನು ಉಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನು ಉಪಯೋಗಿಸುತ್ತ ಬಂದರೆ ತಿಂದನ್ನವು ಜೀರ್ಣವಾಗುವದಲ್ಲದೆ, ಶಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಬಾವರೋಗಗಳಿಗೆ ಅವಕಾಶವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ವರ್ತಕರಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿ[illegible]

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ಕಾಲದ ರೋಗಗಳನ್ನೂ ಬಹು ಚಮತ್ಕಾರದಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟಣ 1ಕ್ಕೆ 0—2—0	200 ಮಾತ್ರೆಗಳ ಪೊಟ್ಟಣ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
95 „ „ „ 0—4—0	200 „ ಟಿನ್ „ 0—9—0	100 „ ಶೀಸೆ „ 0—4—6	1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ.ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:— ದಿ. ಊಲನ್ ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್.—ಸೆಶಿಂತಾನ್ ಡಿಪ್ಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ನಮ್ಮ ವ್ಯಕ್ತವಾಗುವದು. ಕನ್ನಡ ನುಡಿಯು ಒಡವೆಯಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

TYPE-WRITING.

ಮುದ್ರಣ ಅನುಕೂಲಗಳು.

ಅರ್ಜಿ, ದಾವೆಗಳ ಪ್ರತಿ, ಇತರ ದಸ್ತಾವೇಜುಗಳ ನಕಲುಗಳು ಇತ್ಯಾದಿ ಇಂಗ್ಲೀಷ ಭಾಷೆಯ ಬರವಣಿಕೆಗಳನ್ನು ಕೋರ್ಟು ಕಚೇರಿಗಳಲ್ಲಿ ದಾಖಲುಮಾಡುವ ಸಂದರ್ಭಗಳು ಬಹಳವಾಗಿ ಬಂದೊದಗುತ್ತವೆ. ಇಂಥವುಗಳು ಕೈಬರಹದಲ್ಲಿದ್ದರೆ ಓದಲು ಬಹಳ ಸಮಯವೂ ತೊಂದರೆಗಳೂ ಇರುವವು. ಆದ್ದರಿಂದ ಇವುಗಳನ್ನು ಛಾಪಾ ಹಾಕಿಸುತ್ತಾರೆ. ಹೆಚ್ಚು ಪ್ರತಿಗಳನ್ನು ಛಾಪೆ ಮಾಡಿಸಿದರೆ ಖರ್ಚು ಕಡಿಮೆ ಬೀಳುವದು. ಅರ್ಜಿ ಇತ್ಯಾದಿಗಳ ಹೆಚ್ಚು ಪ್ರತಿಗಳನ್ನು ಮಾಡಿಸುವದು ಹಲವು ಸರ್ತಿ ಅಗತ್ಯವಿರದು. ಇಂಥಾ ಸಂದರ್ಭಗಳಲ್ಲಿ "Type-writing Machine" ಎಂಬುವದರ ಮೂಲಕ ಅಚ್ಚು ಹಾಕಿಸುವದುಂಟು. ಇಂಥಾ ಯಂತ್ರವನ್ನು ಶಾರದಾ ಛಾಪಖಾನೆಯಲ್ಲಿ ತಂದು ಇಟ್ಟಿರುತ್ತೇವೆ. ಗಿರಾಕಿಗಳ ಅನುಕೂಲತೆ ಬಗ್ಗೆ ಅಚ್ಚು ಹಾಕಿಸುವ [illegible] ವಿನಹ ಟ್ಯಾಪ್‌ರೈಟಿಂಗ್ ಮೂಲಕ ಅರ್ಜಿ ಇತ್ಯಾದಿಗಳನ್ನು ಬಹಳ [illegible] ಮುದ್ರಿಸಿಕೊಡುತ್ತೇವೆ.

ದರ ಇತ್ಯಾದಿಗಳನ್ನು ಮ್ಯಾನೇಜರ್, ಶಾರದಾ ಛಾಪಖಾನೆ, [illegible] ಮಂಗಳೂರು ಇವರಿಂದ ತಿಳಿದುಕೊಳ್ಳಬಹುದು.

ಆರ್. ಮಾರ್ಟಿನ್ನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫ಼ೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿದಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೮—೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು, ಮೇಲ್ಪಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿ ... ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ...ದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮುತ್ತು ಕಂಪೆನಿ, **R. D. Kately & Co**
ನಂಬ್ರ ಡಿ ಫ್ರಿಯರ್ ರೋಡ್, *No D Frere Road,*
ಮುಂಬಯಿ. *Near Wright & Co. Fort Bombay*



ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ



ಅಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ ಈ ಗಡಿಯಾರ ಕಂಪೆನ್ಸೇಷನ್ ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಶ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ವಿಳಾಸ:— **ರಾಸ್ ವಾಚ್ ಅಂಡ್ ಕಂಪೆನಿ,**

3, ಇರುಳಪ್ಪನ ಬೀದಿ, ಮದರಾಸು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬದು ಬ್ರಾಹ್ಮಣರ ಮುಖ್ಯ ಧನವೂ, ಇದೇ ಶುದ್ಧ ತತ್ತ್ವಾರ್ಥವು ಮಾತ್ರವಲ್ಲ, ಇದರ ವಿಶೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಅಮೌಲ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ತ್ವವಿಷಯಗಳುಳ್ಳ ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನಿಸುವಂಥವರಿಗೆ ಏನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಘನ ಶ್ರೇಯಸ್ಸು ವ ಗೌರವವು ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯಮಾಡಿಸಿದ ದಾಸೋಹಂಭಾವದ ಈ ಗ್ರಂಥವು ಸರ್ವ ಪ್ರಿಯವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು.

ಕ್ರಯ ೧೦ ಆಣೆ.

ಪುಸ್ತಕಗಳ ಮಾರಾಟದ ಸ್ಥಳ:—
ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ.
ಮು. ಮು. ಶ್ರೀನಿವಾಸ ಹರಿದಾಸ್, ಫೀಲ್ಡ್ ಸ್ಟ್ರೀಟ್.
ಉಡ್ಪಿ, ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಶ್ರೀ ಮಾಂಗಿರೀಶ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳಿಗೂ, ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣಕಾಣುವುದು! ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ನಳಿಗೆಗಳು ಜಾಸ್ತಿ. ಸಂಪಲ್ ಡಬ್ಬಿ 1ಕ್ಕೆ 0—1—0 ಡಜನ್ ಡಬ್ಬಿಗಳಿಗೆ 0—13—0 ವಿ. ಪಿ. ಮಾಫಿ.

ವಿಸ್ಫೋಟಕ ಮುಷ್ಟಿ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟೆ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಬೇನೆಗೆ ಸಂಜೀವನದಂತಿರುವುದ 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು

ಸ್ವರಸುಖಿ—ಕೆಮ್ಮು, ಗಂಟಲುನೋವು, ಧ್ವನಿ ಬಿದ್ದುಹೋಗುವದು, ಅಗ್ನಿಮಾಂದ್ಯ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸುಲಭವಾಗುವದು. ದೊಡ್ಡ ಪೊಟ್ಟು 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ.

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ, 0—2—0.

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೆ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ಮೈ ಸ್ವಚ್ಛವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ 0—4—0. ಒಂದು ಡಜನ್ ಡಬ್ಬಿಗಳಿಗೆ ರೂ. 2—8—0 ವಿ. ಪಿ. ಬೇರೆ.

M. D. R. & Sons.
Srimangireesh Aushadalaya,
UDIPI S. C

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ, ಮುಂಬಯಿ ಕರ್ಣಾಟಕದ ಉತ್ಕರ್ಷ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಸಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ (ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦) ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಮ್ಯಾನೇಜರ್,

Peoples Park Fair Reward.

ಸುಂದರವಾದ] 1916 [ಕಾಲೆಂಡರು.

ಕರ್ಣಾಟಕ ದೇಶಾಭಿಮಾನಿಗಳಿಗೆ ತಿಳಿ ಸುವದೇನಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮ ಹೋತ್ಸವದ 1916 ಕಾಲೆಂಡರ್ ಬಹು ಸೊಗ ಸಾಗಿ ಡೆಮ್ಮಿ ಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇ ಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳ ಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾ ಮಾಗಿ ಕಳುಹಿಸುವೆವು. ತ್ವರೆಮಾಡಿರಿ

ವಿಳಾಸ:— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಸಾಯರ್ ಕೇಶನಾಶಿನಿ.

ಕೆಡಕಿಲ್ಲ! **ಕಲೆಯಿಲ್ಲ!!** ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದ ಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದ ದ್ದೆಂದು ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗ ಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯು ವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾ ಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾ ರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡವಾ ಧಿದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂನುಗಳುಳ್ಳ ಪೆಟ್ಟಿಗೆಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0 ಟಪ್ಪಾಲ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿ ಶನ್ ಕೊಡುತ್ತೇವೆ. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3, ಇರುಳಪ್ಪನ ಬೀದಿ,
ಮದ್ರಾಸು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ, ಆದಿಯಿಂದ ಬ್ರಿಟಿಷ್ ಮಹಾ ರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸಂ ಯೂಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಪ ಥಾ ಪ್ರಭುಗಳ ಚರಿತ್ರೆಗಳೂ, ಅಹಿಕ್ಷೇತ್ರ ದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ನೇಮಿಸಿದ 326 ಒಕ್ಕುಮಾನದ ಹೆಸರುಗಳೂ, ಅವರ ಸ್ಥಾನ ಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳ ಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ಪ್ರತಿಗಳೂ ಕೂಡಾ ಛರಿತ ವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಕಾರಿಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲ ವಾದ 296 ಪುಟಗಳು ಛರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ
ಸಮಯಾನುಸಾರ ಕ್ರಯವು 0—4—0 ಏರಿಸಲಾಗುವದು.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು.

ಪ್ರಾಮುಖ್ಯ ಏಜಂಟರು — ಎಸ್. ಎ ಶೀನಪ್ಪ ಹೆಗ್ಗಡೆ,
ಎಸ್. ಪಿ. ರಾಜ ಎಂಡ್ ಕೊ. ಅಮುಣಿಂಜೆಗುತ್ತು,
ಪೋಸ್ಟು ಪೊಳಲಿ, ದ ಕ ಗುರುಪುರ ಪೋಸ್ಟ್, ದ ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1 ಶಾರದಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು.
3. ಒಂಟಿರ ವಿದ್ಯಾರ್ಥಿಭವನ, ಮಂಗಳೂರು.
4. ಊಲನ್ ಮಾರ್ಟ್, ಮಂಗಳೂರು.
5 ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6 ಪ್ರಭಾಕರ ಮುದ್ರಾಯಂತ್ರ, ಉಡುಪಿ.
7 ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವದು.

ಗೃಹಸ್ಥಾಶ್ರಮವು ಸುಖದಾಯಕವಾಗಿ ಪರಿಣಮಿಸಬೇಕೆಂದು
ನಿಮಗೆ ನಿಶ್ಚಯವಾಗಿಯೂ ಮನಸ್ಸಿದೆಯೋ?

ಮದನಮಂಜರಿ ಮಾತ್ರೆ

ಗಳನ್ನುಪ್ರಯೋಗಿಸಿರಿ. ಇವು ಗೃಹಸ್ಥಾಶ್ರಮವು ಸಂತೋಷ ಪತ್ತು ಸುಖದಾಯಕವಾಗಿ ನಡಿಯುವಂತೆ ಮಾಡುವದು. ಇದು ಯಾವ ಕಾರಣದಿಂದಲಾದರೂ ಉಂಟಾದ ದುರ್ಬಲತ್ವವನ್ನು ಹೋಗಲಾಡಿಸುವವು. ಇದು ಮುದುಕರನ್ನು ಯುವಕರನ್ನಾಗಿ ಮಾಡುವದು.

ಕ್ರಯ: 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0

ಸಂತೋಷದಾಯಕವಾದ ಗೃಹಸ್ಥಾಶ್ರಮವನ್ನು ಪಡೆಯುವಂತೆ
ಮಾಡುವ ನಿಜವಾದ ಸಾಧನವು.

"ಪರ್ಪೆಚ್ಯುವಲ್ ಯೂತ್"

ಎಂಬ ನಮ್ಮ ಪುಸ್ತಕವನ್ನು ಓದುವದೇ ಆಗಿದೆ

ಯೌವನವು ಆಚಂದ್ರಾರ್ಕವಾಗಿ ಉಳಿಯುವಂತೆ ಮತ್ತು ಅದು ಫಕ್ಕನೇ ಅಳಿದುಹೋಗ ದಂತೆ ಮಾಡುವ ಉಪಾಯವು ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನಿಮ್ಮ ವಿಳಾಸ ಬರೆದು ಕಳು ಹಿಸಿದ್ದಲ್ಲಿ ಧರ್ಮಾರ್ಥವಾಗಿ ಈ ಪುಸ್ತಕವು ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ್ (ಕಾಠ್ಯಾವಾರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR)
Branch:—20 CHINA BAZAAR ROAD, MADRAS.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	371,976—4—4
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st. December 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	371,976—4—4
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷತೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents;—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಷ್ಟೆ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ದೊರಕುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಎಲಿಮೆಂಟರಿ ಶಾಲಾ ಉಪಾಧ್ಯಾಯರು

ಲಕ್ಷಿಸಬೇಕಾದ ಸಂಗತಿಗಳು.

ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳನ್ನೇ ಶಾಲೆಗಳಲ್ಲಿ ಉಪಯೋಗಿಸಬೇಕೆಂಬ ನಿರ್ಬಂಧವಿದೆ. ಬೋರ್ಡ್ ಶಾಲೆಗಳಲ್ಲಿಯೂ ಮ್ಯುನಿಸಿಪಾಲ್ ಶಾಲೆಗಳಲ್ಲಿಯೂ ಕೆಳಗೆ ಹೇಳೋಣಾದ ಪುಸ್ತಕಗಳು ಮಾತ್ರವೇ ಮಂಜೂರಾಗಿವೆ. ಇತರ ಪುಸ್ತಕಗಳು ಪಠ್ಯಪುಸ್ತಕಗಳಾಗಿ ಈವರೆಗೆ ಮಂಜೂರಾಗಲಿಲ್ಲ ಎಂಬುದನ್ನು ಎಲ್ಲಾ ಉಪಾಧ್ಯಾಯರು

ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಲಕ್ಷ್ಯದಲ್ಲಿಡಬೇಕು.

ಮಾರ್ಸ್ಡೆನರ ಒಂದನೇ ಪುಸ್ತಕ ...	0	2	0
,, ಎರಡನೇ ,, ...	0	2	6
,, ಮೂರನೇ ,, ...	0	3	0
,, ನಾಲ್ಕನೇ ,, ...	0	4	0
,, ಐದನೇ ,, ...	0	5	0
,, ಆರನೇ ,, ...	0	5	0
,, ಏಳನೇ ,, ...	0	5	0
,, ಭೂಗೋಳ ಶಾಸ್ತ್ರ ೧ನೇ ಭಾಗ ...	0	3	0
,, ,, ,, ೨ನೇ ,, ...	0	3	0
,, ಮದ್ರಾಸ್ ಅಧಿಪತ್ಯದ ವಿವರ ...	0	5	0
,, ಹಿಂದೂ ದೇಶದ ಚರಿತ್ರೆಯ ಸುಲಭ ಪಾಠಗಳು ..	0	7	0
,, ಗಣಿತ ಪುಸ್ತಕ (ಲೋವರ್ ಪ್ರಾಯಮರಿ ತರಗತಿಗಳಿಗೆ)	0	4	0
,, ಅಂಕಗಣಿತ (ಅಪ್ಪರ್ ,, ,,)	0	4	0
,, ಬಾಲಶಿಕ್ಷೆ ...	0	1	6
,, ಮೂಲಪಾಠಕ ...	0	1	6
,, ಗಣಿತ ಹಸ್ತಾಮಲಕ ...	0	1	0

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಮುಫತ್! **ಕ್ಯಾಲೆಂಡರ್.** ಮುಫತ್!

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಮುಫತ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದರ ಬೆಲೆ 10/ ಆಣೆ

ವಾಲ್ಮೀಕಿಯ ಜಯ ಆಣೆ 6; ಮೈತ್ರೇಯಿ ಆಣೆ 5, ಸುಧರ್ಮ ಪ್ರಭಾವ ನಾಟಕ ಆಣೆ 8; ಸೂಕ್ತಿಮಾಲೆ, 1—2 ಭಾಗಗಳು ಆಣೆ 6; ಭಕ್ತಿಯೋಗ ಆಣೆ 8; ಆರ್ಯ ಮತಸಾರ ಆಣೆ 3; ಭರತ ಭೂಮಿಯ ಮಹರ್ಷಿಗಳು ಆಣೆ 2; ರಾಜಭಕ್ತಿ ಆಣೆ 6; ದೇಶಭಕ್ತಿ ಆಣೆ 10, ಗುರುಸ್ತುತಿ ಸುಮಾಂಜಲಿ ಆಣೆ 2

ಈ ಪೈಕಿ [ರೂ.2—0—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ.]

†ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1— 4	ಪ್ರಬಂಧ ಮುಕ್ತಾವಳಿ	0—12
ಹಾರ್ಮೋನಿಯಂ ಸ್ವಯಂ ಬೋಧಿನಿ	0— 4	ಕನ್ನಡ ಅರೇಬಿಯನ್ ನೈಟ್ಸ್	2— 2
ಬಾಲಿಕಾಗೀತ ಮುಕ್ತಾಕಲಾಪ ಸ್ವರಯುಕ್ತ	0— 9	ಮುದ್ರಾಮಂಜೂಷ	1—10
ಕಲ್ಯಾಣ ಗೀತಾವಳಿ	0— 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3— 2
ಅಭಿನವ ಸಂಗೀತ ಪಾರಿಜಾತ	0— 4	ಅಧ್ಯಾತ್ಮವಿಚಾರ (ಉತ್ತರ ಸಹಿತ)	2— 0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1— 8	ಪ್ರಿಂರೋಜವಿಜಯ್ಯಂ	1— 9
ಸ್ತ್ರೀಧರ್ಮನೀತಿ	0— 9		

†ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವಿಲ್)		0—12	ಮಾಧವೀ ಕಂಕಣ (ಬಂಗಾಳಿ ನಾವಿಲ್)		1— 0
ಪ್ರಫುಲ್ಲೆ	,,	0—12	ಶಕ್ತಿ	,,	0—12
ಉನ್ಮತ್ತ	,,	0— 3	ಶೋಧನೆ	,,	0—12
ವಿಷ ವಿವಾಹ	,,	0— 4	ಚಂದ್ರಪ್ರಭಾ-ಕಾದಂಬರಿ		0—14
ಸೌದಾಮಿನಿ	,,	0— 8	ಸುಭದ್ರೆ	,,	0— 5
ಸರಲಾ	,,	0— 2	ಕಲಿಯುಗ	,,	0— 5
ಸುಷಮಾ	,,	0— 2	ಕೈಲಾಸನಾಥ	,,	0— 8
ಅನಾಥ ಪ್ರೇತ	,,	0— 1	ನನ್ನ ಆಚಾರ್ಯ (My Master)		0— 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳಿಗೆ ಈ ಕ್ಯಾಲೆಂಡರ್ ಬಹುಮಾನ.

ಕಾದಂಬರಿಗಳು.

ಸುಶೀಲೆ-ಶ್ರೀ ತಿರುಮಲಮ್ಮನವರಿಂದ	0— 6	ದೇವಿ ಚೌಧುರಾಣಿ ಬಿ. ವೆಂಕಟಾಚಾರ್	1— 4
ಸತೀತ್ವ ರಕ್ಷಣೆ (ಸ್ವಥಾ ಭಾಗ 1) ,,	0— 8	ಪರಿಮಳ ,,	0—10
ವಿರಾಗಿಣಿ (ಡಿಟೊ 2) ,,	1— 0	ಸಾಧನೆ ,,	0— 8
ವಿದ್ಯುಲ್ಲತಾ (ಹರಿಚೆ) ,,	0—14	ಚಿತ್ರವಿಚಿತ್ರಾವಳಿ ಭಾಗ I, II ಸೇರಿ	1— 0
ವಿಶ್ವ ಕನ್ಯಾ (ವಿಂದಾ) ,,	1— 8	ನೀರದೆ	0— 8

(ಇನ್ನೂ ಇತರ ಎಲ್ಲಾ ಕಾದಂಬರಿಗಳು.)

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು.] ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ಕಲ್ಪ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. 16 ಮಾತ್ರೆ ರೂ 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಲೆ 1ಕ್ಕೆ ರೂ 1

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾವಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣತೂ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0.

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಾಧೆ ಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲೆ ದ್ರಾವಕಕ್ಕೆ ರೂ 1.

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಇನಾಂ ಸಾಮಾನು 60! ಇನಾಂ ಸಾಮಾನು 60!

ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು ಇದರ ಪರಿಮಳ ವಾಸನೆ ಕೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮದುಳನ್ನು ಸಮಾಧಾನ ಮಾಡುವದು ಮುಖಕ್ಕೆ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ, ಬೇರೊಂದಿಲ್ಲ ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಶೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳು 6 ಮೈಫಿನ್ 1 ಕಾಂಟೂಲ ಮಾತ್ರೆ 40, ದಂತದ ಬಾಚಣಿಗೆ 1 ಸೊಗಸಾದ ಇಡಸಾನ್ ಕಾರೊನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬೆಲ್ಲಿ 1, ಗಂಧದ ಬಿಲ್ಲೆ 1 ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ. ಎ. ಎಸ್. ಪಾಣಿ ಕಂಪೆನಿ,
3 ಇರುಳಪ್ಪನ್ ಬೀದಿ, ಮದರಾಸು

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಲಾಹಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಎಂದಿಮಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12 0 ಪೋಸ್ಟುಖರ್ಚು ಪ್ರತ್ಯೇಕ ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. U. Amin**
C/o E. A. Goll Esq.
Sirdar Palace, Apollo Street, BOMBAY

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೫೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗೆ ಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ —

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ"

ಮ|| ರಾ|| ಬಿ ರಾಮರಾವ್ ಎಂ ಎ, ಎಲ್. ಎಲ್. ಬಿ, ಗವರ್ನಮೆಂಟ್ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ •••• ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಕತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನಕಟ್ಟಾ, ಮಂಗಳೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಒರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಹಾಯ ವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ॥ ರಾ॥ ಪಿ ಎಸ್. ಅಚ್ಯುತರಾವ್, ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ, ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ.

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0 **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೋಸೀಜರ್ ಕೋಡು.

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಒರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರಲ್ಲೊಬ್ಬನಾದ ಕೋಳೂರು ಶಂಕರ ಕವಿಯಿಂದ ೧೯ನೆಯ ಶತಮಾನದ ಆದಿಯಲ್ಲಿ ಭಾಮಿನಿಷಟ್ಪದಿ ರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಅಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಳಾಪವು, ಪಾರ್ವತೀಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚು ಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾ[illegible]

ಬೆಲೆ ರೂಪಾಯಿ ೧—೦—೦.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ, [illegible]

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವದು. ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದು. ಈ ಪುಸ್ತಕವು ಇನಾಮವಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ಶೀಘ್ರವಾಗಿಯೆ ಬರಿಯಬೇಕು. (8).

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ,
157 ಬ್ರಾಡ್ವೆ ಮದ್ರಾಸ್.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಬೆನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗ್ಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*
ಪೋಸ್ಟು ಪೊಳಲಿ, ದ. ಕ. POST POLALY, S. C.

S. U. N. & CO.,

BENARES CITY, U. P.

ಯೋಗ್ಯವಾದ ಕ್ರಯ!

ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯ್ದು ತಯಾರಿಸಿದ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಣ, ದೋಟಿ, ಕಾಶ್ಮೀರ ಶಾಲು, ದುಪ್ಪಟ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊರ್ನಾಡ, ಅತಳಿಪೇಟೆ, ಧರ್ಮವತ, ಈ ಮುಂತಾದ ಅನೇಕ ಹೊಸ ನಮೂನೆಯ ಸಾಮಾನುಗಳನ್ನು ಕಾಶಿಯಲ್ಲಿಯೆ ಈ ವರುಷ ಉತ್ಸವಕಾರ್ಯಗಳಿಗಾಗಿ ಅತಿ ಮೋಹನತ್ವದಿಂದ ತಯಾರಿಸಿರುವದು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವರಿಗೆ 100 ಪುಟವುಳ್ಳ 1 ಕೆಟಲಾಗು, 1 ಕಾಶಿ ಕಾಳಭೈರವ ದಾರವನ್ನು ಇನಾಮಾಗಿ ಕಳುಹಿಸಲಾದೀತು

ವಿಳಾಸ— ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

ಚಂದಾ ಕಡಮೆ! ನೋಡಿರಿ!! ಅಂದ ಹೆಚ್ಚು!!!

"ಕನ್ನಡ ಕೋಗಿಲೆ"

ವಾಙ್ಮಯ, ಧರ್ಮ, ಸಮಾಜ, ಶಾಸ್ತ್ರಾದಿ ಸದ್ವಿಷಯಗಳನ್ನೊಳಕೊಳ್ಳುವ ಈ ಮಾಸಪತ್ರಿಕೆಯು ಬರುವ ವಸಂತದ ಆದಿಯಿಂದ ಪ್ರಕಟಿತವಾಗುವುದು. ನಮ್ಮ ಚಾತುರ್ಯವನ್ನು ನಾವೇ ಪ್ರಕಟಿಸಿಕೊಳ್ಳುವುದು ಕರ್ತವ್ಯವಲ್ಲವಾದ ಕಾರಣ ನಿಜ ಸ್ಥಿತಿ ಮಾತ್ರ ಸೂಚಿಸೋಣಾಗಿದೆ. ಸ್ವಲ್ಪವು ಸಂಚಿಕೆಯು ನಮ್ಮ ಕೋಗಿಲೆಯು ಸುಸ್ವರವೇ ವಾಚಕರನ್ನು ನೋಡಿ ಕಿವಿನೆರೆಯುವಂತೆ ಮಾಡದಿರದು. ಬಿಡಿ ಪ್ರತಿ 1ಕ್ಕೆ 0-2-6.

ಚಂದಾ —

ಪೋಷಕರು ರೂ. 4—0—0; ಪ್ರೋತ್ಸಾಹಕರು ರೂ. 1—8—0

ಅಂಚೆ ವೆಚ್ಚ ಬೇರೆ.

ವಿಳಾಸ:—

ವಿದ್ಯಾರ್ಥಿ ಭವನದಲ್ಲಿರುವ ಪಿ. ಎಮ್. ಭಟ್ಟರು ನೋಡಿ ಕನ್ನಡ ಕೋಗಿಲೆ ಸಂಪಾದಕರಿಗೆ ತಲ್ಪಿಸುವದು

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಘತ್ತವಾಗುತ್ತವೆ. ೨೦—೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ಶಿಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಟ್ಟುವ ಹಚ್ಚೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲಾ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 10ನೇ ಮಾರ್ಚಿ 1916

ವಿದ್ಯಾಪ್ರಚಾರದ ಪರಿಷತ್ತು, ಮದ್ರಾಸು.

(1916ನೆ ಮಾರ್ಚಿ 16ನೆ ತಾರೀಕಿಗೆ ಮದ್ರಾಸಿನಲ್ಲಿ ಜರಗುವುದು)

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಕೆಪಿಟೇಶನ್ ಎಲ್ಲೊವೆನ್ಸ್ ಕ್ರಮವು ಚಲೋದೋ.— ಈ ಕ್ರಮವು ತರಬೇತಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುವುದಕ್ಕೂ ಮಕ್ಕಳ ಹಾಜರಿಯು ವೃದ್ಧಿಯಾಗುವುದಕ್ಕೂ ಸಹಾಯಕವೆಂದು ಸರಕಾರದವರ ತಿಳಿದಿರಬಹುದು ಇದು ಜ್ಯಾರಿಗೆ ಬಂದಂದಿನಿಂದ ಸರಿಯಾಗಿ ತನಿಖೆನಡಿಸಿದರೆ ತರಬೇತಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚಾಗುವುದಕ್ಕೆ ಈ ಏರ್ಪಾಡು ಯಾವಬಗೆಯಲ್ಲಿಯೂ ಸಹಾಯಕವಾಗಿಲ್ಲವೆಂದು ಗೊತ್ತಾಗುವುದು ತರಬೇತಾದ ಉಪಾಧ್ಯಾಯರನ್ನು ನೇಮಿಸುವ ಜವಾಬ್ದಾರಿ ಯಾರದು? ಬೋರ್ಡಿನವರದು ತರಬೇತಾದವರ ಸಂಖ್ಯೆ ಸಹಜವಾಗಿಯೇ ಬೇಕಾದಷ್ಟು ಇಲ್ಲದ್ದರಿಂದಲೇ ಟ್ರೈನಿಂಗ್ ಶಾಲೆಗಳ ಸಂಖ್ಯೆಯನ್ನೂ ಅವುಗಳಲ್ಲಿ ತರಬೇತಾಗುವ ಉಮೇದ್ವಾರರ ಸಂಖ್ಯೆಯನ್ನೂ ಅವರಿಗೆ ಸಿಕ್ಕುವ ವೇತನವನ್ನೂ ಈಚೆಗೆ ಹೆಚ್ಚಿಸಿದ್ದಾರೆ ಎಲ್ಲಾ ಬಗೆಯ ಎಲಿಮೆಂಟರಿ ಶಾಲೆಗಳಲ್ಲಿಯೂ ಈಗ ಟ್ರೈನಾಗದ ಉಪಾಧ್ಯಾಯರ ಸಂಖ್ಯೆ ಅಧಿಕವಾಗಿದೆ ಆದ್ದರಿಂದ ಕೆಪಿಟೇಶನ್ ಕ್ರಮವು ಇದಕ್ಕೆ ಏನೇನೂ ಸಹಾಯಕವಾಗಿಲ್ಲವೆಂದು ನಿರ್ಧರಿಸಬಹುದು

ಮಕ್ಕಳ ಸಂಖ್ಯೆ ಹೆಚ್ಚುವುದಕ್ಕೆ ಸ್ವಲ್ಪಮಟ್ಟಿಗೆ ಈ ಕ್ರಮವು ಸಹಾಯಕವಾಗಿದ್ದರೂ ಹಾಜರಿ ಹೆಚ್ಚುವುದಕ್ಕೆ ಇದು ಎಂದೆಂದಿಗೂ ಸಹಕಾರಿಯಾಗಲಾರದು ಅದಕ್ಕೆ ಬದಲಾಗಿ ಸುಳ್ಳುಹಾಜರಿ ಹಾಕಲಿಕ್ಕೆ ಇದೊಂದು ಉತ್ತೇಜನವೆಂದರೆ ಅತಿಶಯೋಕ್ತಿಯಲ್ಲ ಮಕ್ಕಳ ಸಂಖ್ಯೆಯೂ ಹಾಜರಿಯೂ ಹೆಚ್ಚಿದರೆ ಉಪಾಧ್ಯಾಯರ ಸಂಖ್ಯೆ ಹೆಚ್ಚಿಸಬೇಕಾಗುತ್ತದೆ ಆ ಸಮಯದಲ್ಲಿ ಪ್ರಯತ್ನ ಮಾಡಿದ ಉಪಾಧ್ಯಾಯರಿಗೆ ಸಹಜವಾಗಿಯೇ ಬಡ್ತಿ ಸಿಕ್ಕುವುದು ಇದಲ್ಲದೆ ಅನೇಕ ಬೋರ್ಡುಗಳು ಕೆಪಿಟೇಶನ್ ಹಣ ಕೊಡಲಿಕ್ಕೆ ದ್ರವ್ಯಾನುಕೂಲವಿಲ್ಲದೆ ಅದನ್ನು ಕೊಡುವದೇ ಇಲ್ಲ, ಅಥವಾ ಕಡಿಮೆ ದಾಮಾಶಾಯದಿಂದ ಕೊಡುತ್ತಾರೆ ಅನೇಕ ಸ್ಥಲ ಈ ಬೋರ್ಡುಗಳಿಗೆ ಈ ಬಗ್ಗೆ ಸರಕಾರಿ ದ್ರವ್ಯಸಹಾಯ ಸಿಕ್ಕಬೇಕಾಗುತ್ತದೆ

ಇದಲ್ಲದೆ ಎಲ್ಲಾ ಶಾಲೆಗಳ ಸ್ಥಿತಿ ಒಂದೇಯಾಗಿಲ್ಲ ಕೆಲವುಗಳಲ್ಲಿ ಉಪಾಧ್ಯಾಯರ ಪ್ರಯತ್ನಗಳು ಎಷ್ಟೇಇರಲಿ, ಸ್ವಾಭಾವಿಕವಾಗಿಯೇ ಹಾಜರಿ ಹೆಚ್ಚಾಗಿರುತ್ತದೆ. ಆಗ ಬೇರೆ ಉಪಾಧ್ಯಾಯರಿಗೆ ಗ್ರೆಂಟು ಹೆಚ್ಚು ಸಿಕ್ಕುವುದಾದರೆ ಇವರಿಗೆ ಹೊಟ್ಟೆಯುರಿಯಾವುದು ವಿಚಿತ್ರವಲ್ಲ. ಈ ರೀತಿಯ ಭೇದಾಭೇದಗಳಿಂದ ಉಪಾಧ್ಯಾಯರಲ್ಲಿ ಅಸಮಾಧಾನವೂ ಅಸ್ಪರ್ಧೆಯೂ ಹೆಚ್ಚುವುದಕ್ಕೆ ಕಾರಣವಾಗುತ್ತದೆ ಇದು ವಿನಹಾ 4ನೇ ದರ್ಜೆ ವರೆಗೆ ಇರುವ ಶಾಲೆಗಳಲ್ಲಿ ಕಲಿಸುವಿಕೆಯ ಕ್ಲಾಸುಗಳೂ ವಿಷಯಗಳೂ ಹೆಚ್ಚಾಗಿರುವ ಕಾರಣ ಉಪಾಧ್ಯಾಯರ ಸಂಖ್ಯೆ ಹೆಚ್ಚಿಸಬೇಕಾಗುತ್ತದೆ ಮತ್ತು ಇದಕ್ಕೆ ಎಜ್ಯುಕೇಶನಲ್ ರೂಲ್ಸ್ ಸಹಾ ಉತ್ತೇಜನ ಕೊಡುತ್ತವೆ ಆಗ ಉಪಾಧ್ಯಾಯರ ಸಂಖ್ಯೆ ಹೆಚ್ಚಿದಷ್ಟಕ್ಕೆ ಉಪಾಧ್ಯಾಯರಿಗೆ ಹಂಚಿದ ಮೊಬಲಗು ಸಹಜವಾಗಿಯೇ ಕಡಿಮೆಯಾಗುತ್ತದೆ. ಇದು ೪ನೇ ದರ್ಜೆಯನ್ನು ತೆಗದುಹಾಕಿಸಲಿಕ್ಕೂ ಆ ರೀತಿಯಿಂದ ವಿದ್ಯಾಭಿವೃದ್ಧಿಗೆ ಹಾನಿ ತರಲಿಕ್ಕೂ ಸಹಕಾರಿಯಾಗುವುದು ಆದಕಾರಣ ಈ ಗ್ರೆಂಟಿನ ಬದಲಾಗಿ ಉಪಾಧ್ಯಾಯರ ಸಂಬಳವನ್ನೇ ಹೊಸ ಗ್ರೇಡುಗಳಲ್ಲಿರಿಸಿ ಸ್ವಲ್ಪ ಹೆಚ್ಚಿಸುವುದು ಉತ್ತಮ ಸರಾಸರಿಯಾಗಿ ಒಬ್ಬ ಉಪಾಧ್ಯಾಯನಿಗೆ ೨೪ ರೂಪಾಯಿಗಿಂತ ಹೆಚ್ಚಿನ ಕೆಪಿಟೇಶನ್ ಗ್ರೆಂಟು ಸಿಕ್ಕುವುದಿಲ್ಲ ಇದನ್ನ ಸಂಬಳಕ್ಕೆ ಸೇರಿಸಿ ಕೀಳು ಗ್ರೇಡಿನ ಉಪಾಧ್ಯಾಯರಿಗೂ ತಿಂಗಳಿಗೆ ೧೨ ರೂಪಾಯಿ ಸಿಕ್ಕುವಂತೆ ಮಾಡಿದರೆ ಲೋಕಲ್ ಪ್ರೊವಿಡೆಂಟ್ ಫಂಡಿನ ಅನುಕೂಲತೆಯೂ ಅವರಿಗೆ ಸಿಕ್ಕಿದಂತಾಗುವದು

ಸೆಕೆಂಡರಿ ಮತ್ತು ಎಲಿಮೆಂಟರಿ ಶಾಲೆಗಳಿಗೆ ಇರುವ ಸಂಬಂಧ:— ಈಗಿನ ಸ್ಥಿತಿಯಲ್ಲಿ ಸೆಕೆಂಡರಿ ಶಾಲೆಗಳಿಗೆ ಎಲಿಮೆಂಟರಿ ಶಾಲೆಯಿಂದ ಬಂದವರು ದಾಖಲಾಗಬೇಕಾದರೆ ಸೆಕೆಂಡರಿ ಶಾಲಾ ಹೆಡ್‌ಮಾಸ್ತರುಗಳು ಅಂಥವರನ್ನು ಪರೀಕ್ಷಿಸಿ ಯೋಗ್ಯವೆಂದು ಕಾಣುವ ದರ್ಜೆಗೆ ದಾಖಲು ಮಾಡಬಹುದೆಂದೂ, ಹಾಗೆ ದಾಖಲು ಮಾಡಲ್ಪಡುವವರು ಯಾವ ದರ್ಜೆಗೆ ದಾಖಲಾಗುತ್ತಾರೋ ಆ ದರ್ಜೆಗಿಂತ ಕೆಳಗಿನ ದರ್ಜೆಯ ಒಂದು ವರ್ಷದ ಫೀಸನ್ನು ಪ್ರವೇಶಹಾಸಲಾಗಿ ತೆರಬೇಕೆಂದೂ ನಿಯಮವಿದೆ. ಇದು ಗವರ್ನಮೆಂಟ ಮತ್ತು ಬೋರ್ಡ ಶಾಲೆಗಳಲ್ಲಿ ವಸೂಲಾಗ ಬೇಕೆಂತಲೇ ನಿರ್ಬಂಧವಿದೆ, ಖಾಸಗಿ ಶಾಲೆಗಳಿಗೆ ಈ ಪ್ರತಿಬಂಧಕವಿಲ್ಲ ಇದರಿಂದ ಅನೇಕ ಕಡೆಗಳಲ್ಲಿ ಮುಂದೆ ಸೆಕೆಂಡರಿ ಶಾಲೆಗೆ ಕಳುಹಿಸಲುಳ್ಳವರು ತಮ್ಮ ಮಕ್ಕಳನ್ನು ಅತೀ ಸಣ್ಣ ಪ್ರಾಯದಲ್ಲಿಯೇ ತಮ್ಮ ಹಳ್ಳಿಯಿಂದ ದೂರವಿರುವ ಪೇಟೆಗೆ ಕಳುಹಿಸಿಕೊಡಬೇಕಾಗುತ್ತದೆ ಅಲ್ಲಿ ಬಿಡಾರದ ಖರ್ಚು ಬೇರೆ, ಸಣ್ಣ ಮಕ್ಕಳನ್ನು ದೂರದಲ್ಲಿಟ್ಟು ಇತರರ ಕೈಯಿಂದ ಮುಖ್ಯವಾಗಿ ಸಂಬಳದ ನೌಕರರಿಂದ ಆರೈಕೆನೋಡುವ ತೊಂದರೆ ಬೇರೆ. ಇದರಿಂದ ಹಳ್ಳಿಯಲ್ಲಿದ್ದವರಿಗೆ ಅನಾವಶ್ಯಕವಾಗಿ ಹೆಚ್ಚಿನ ಲಾಗ್ವಾಡು ತಗಲುತ್ತದೆ. ಅದಕ್ಕೆ ಬದಲಾಗಿ ೪ನೇ ದರ್ಜೆವರೆಗಾದರೂ ತಮ್ಮ ಹಳ್ಳಿಯಲ್ಲಿಯೇ ಅವರಿಗೆ ಶಿಕ್ಷಣದ ಅನುಕೂಲತೆ ದೊರಕುವುದು ಎಷ್ಟೊ ಮೇಲು ಈಗಿನಮಟ್ಟಿಗೆ ಸೆಕೆಂಡರಿ ಶಾಲೆಗಳ ಕೆಳಗಿನ ದರ್ಜೆಗಳಲ್ಲಿ ಫೀಸಿನ ದರ ಹೆಚ್ಚಿದ ಒಂದು ಸಂಗತಿ ಕಾಣಬರುವುದಲ್ಲದೆ ಅನೇಕ ಕಡೆಗಳಲ್ಲಿ ಎಲಿಮೆಂಟರಿ ಶಾಲೆಗಳಲ್ಲಿದ್ದಂತೆ ಲೋವರ್ ಸೆಕೆಂಡರಿ ವರೆಗೆ ಪಾಸಾದವರೇ ಕಲಿಸುತ್ತಾರೆ ವಿದ್ಯೆಯ ಮಟ್ಟಿಗೆ ಇಂಗ್ಲಿಷ್‌ಭಾಷೆಯಲ್ಲಿ ವಿನಹಾ ಇತರ ವಿಷಯಗಳಲ್ಲಿ ಎಲಿಮೆಂಟರಿಶಾಲೆಗಳಲ್ಲಿಯೂ ಸೆಕೆಂಡರಿಶಾಲೆಗಳ ಕೆಳಗಿನ ದರ್ಜೆಗಳಲ್ಲಿಯೂ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲವೆಂದು ಬಲ್ಲವರಿಂದ ನಾವು ತಿಳಿಯುತ್ತೇವೆ ಹಾಗಿದ್ದರೆ ಹೆಚ್ಚಿನ ಫೀಸು ತೆತ್ತು ಸಣ್ಣ ಮಕ್ಕಳಿಗೆ ದೂರದ ಪೇಟೆಗೆ ಕಳುಹಿಸುವ ಪ್ರಯೋಜನವೇನು? ಇದಕ್ಕೆ ಬದಲಾಗಿ I ಫಾರ್ಮಿನಿಂದ ಮೇಲ್ಪಟ್ಟ ಕ್ಲಾಸುಗಳನ್ನು ಮಾತ್ರವೇ ಸೆಕೆಂಡರಿಶಾಲೆಯಾಗಿಟ್ಟು ೪ನೇ ದರ್ಜೆವರೆಗೆ ಎಲ್ಲಾ ಶಾಲೆಗಳನ್ನು ಏಕಪ್ರಕಾರವಾಗಿ ಎಲಿಮೆಂಟರಿ ಶಾಲೆಗಳಾಗಿ ಇರಿಸುವುದು ಅತ್ಯುತ್ತಮ ಬೇರೆ ಬೇರೆ ಹಳ್ಳಿಶಾಲೆಗಳಿಂದ ಬಂದವರಲ್ಲಿ ಕೆಲವರಿಗೆ ಇಂಗ್ಲಿಷಭಾಷೆಯ ವಾಸನೆಯಿಲ್ಲ, ಇನ್ನೂ ಕೆಲವರಿಗೆ ಕೆಲವು ವಿಷಯಗಳಲ್ಲಿ ಚನ್ನಾಗಿ ಪರಿಶ್ರಮವಿಲ್ಲವೆಂದು ಸೆಕೆಂಡರಿಶಾಲೆಯವರು ವಾದಿಸುವುದಾದರೆ ಈ I ಫಾರ್ಮಿನಲ್ಲಿ ಆ ಮಕ್ಕಳನ್ನು ಬೇರೆ ಬೇರೆ ವರ್ಗವಾಗಿ ಮಾಡಿ ಅವರವರ ವಿವಿದ ತಿಳುವಳಿಕೆಯನ್ನು ಒಂದೇ ಮಟ್ಟಕ್ಕೆ ತರಲು ಅನುಕೂಲವಿದೆ ಹೀಗೆ ಮಾಡುವುದರಿಂದ ಮುಖ್ಯವಾಗಿ ಪೇಟೆಗಳಲ್ಲಿ ಸೆಕೆಂಡರಿ, ಎಲಿಮೆಂಟರಿ ಎಂಬ ಭೇದಗಳು—ಬರೆ ಹೆಸರಿಗೆ ಮಾತ್ರವೇ ಇರುವ ಭೇದಗಳು—ಹೋಗಿ ಎರಡು ಬಗೆಯ ಶಾಲೆಗಳಿಗೂ ಪ್ರಯೋಜನವುಂಟಾಗುವುದು

ಈಗ ಕೊಡುವ ಕೆಪಿಟೇಶನ್ ಮತ್ತು ಎಲ್ಲೊವೆನ್ಸುಗಳನ್ನು ಇರಗೊಡಿಸುವುದಾದರೆ, ಯಾವರೀತಿಯಿಂದ ದರವಾರು ಇಡಬೇಕು:— ಈಗ ಕೆಪಿಟೇಶನ್ ವಿನಹಾ ೮ ರೂಪಾಯಿ ಸಂಬಳ ಸಿಕ್ಕುವ ಉಪಾಧ್ಯಾಯನಿಗೆ ೨ರೂಪಾಯಿ ಮಾಹೆಯಾನಾ ಎಲ್ಲೊವೆನ್ಸ್ ಸಿಕ್ಕುತ್ತದೆ ಇಬ್ಬರು ಉಪಾಧ್ಯಾಯರೇ ಇರುವ ಶಾಲೆಗಳು ಹೆಚ್ಚು ಇವುಗಳಲ್ಲಿ ಇಬ್ಬರಿಗೂ ೧೦ ರೂಪಾಯಿ ಸಿಕ್ಕುತ್ತದೆಂದರೆ ತಮ್ಮೊಳಗೆ ಏನು ಭೇದವಿಲ್ಲವೆಂದು ಭಾವನೆಯುಂಟಾಗುವುದು ಇದಲ್ಲದೆ ಅನೇಕ ಕಡೆಗಳಲ್ಲಿ ೧೦ ರೂ ಬಹಳಕಾಲದಿಂದ ಹೊಂದಿ ೧೨ ರೂಪಾಯಿಯ ಬಡ್ತಿ ಸಿಕ್ಕುವುದಕ್ಕೆ ಊರು ಮನೆಯಿಂದ ಹಲವು ಮೈಲು ದೂರವಾಗಿರುವ ಬೇರೊಂದು ಹಳ್ಳಿಗೆ ಹೋಗಲಿಕ್ಕೆ ಸಾಧ್ಯವಾಗದೆ, ತಮಗಿಂತ ಕಡಿಮೆ ಸರ್ವಿಸುಳ್ಳವರು ಬಡ್ತಿಹೊಂದುವುದನ್ನು ನೋಡಿ ಮನಗುಂದುವರು ಇದರ ಬದಲಾಗಿ ಇಂಥವರ ಕೆಲಸವು ಸಮಾಧಾನಕರವಾಗಿದ್ದರೆ ೫ ವರ್ಷಗಳಿಗೊಮ್ಮೆ ೧ ರೂಪಾಯಿ ಬಡ್ತಿಸಿಕ್ಕುವಂತೆ ಮಾಡುವುದು ಎಷ್ಟೊ ವಾಸಿ. ಆಗ ೨೫ ವರ್ಷ ಸರ್ವಿಸು ಆಗುವಾಗ ಇದ್ದಲ್ಲಿಯೇ ೧೨+೫ ರೂಪಾಯಿ ಸಿಕ್ಕುವುದು ಈ ರೀತಿಯ ಉತ್ತೇಜನವು ಅತ್ಯಗತ್ಯವೆಂದು ನಮಗೆ ಕಾಣುತ್ತದೆ.

ಆಯಾಯ ಕ್ಲಾಸಿನ ಜವಾಬ್ದಾರಿಯನ್ನು ಅಧರಿಸಿ ಈ ಕೆಪಿಟೇಶನ್ ಮತ್ತು ಎಲ್ಲೊವೆನ್ಸ್ ಕೊಡಬೇಕೊ ಎಂಬ ಸೂಚನೆಯು ನಮಗೆ ಯುಕ್ತವಾಗಿ ಕಾಣುವುದಿಲ್ಲ. ಬಾಲಕದಿಂದ ೪ನೇ ದರ್ಜೆವರೆಗೆ ಕಲಿಸುವ ಜವಾಬ್ದಾರಿಯಲ್ಲಿ ಭೇದಕಾಣುವುದು ಅಷ್ಟು ಅಗತ್ಯವಲ್ಲ. ಆದರೆ ಬರೇ ಪ್ರೈಮರಿ ಪಾಸಾದವರಿಗೂ ಲೋವರ್‌ಸೆಕೆಂಡರಿ ಪಾಸಾದವರಿಗೂ ಅಲ್ಪ ಸ್ವಲ್ಪ ಎಲ್ಲೊವೆನ್ಸಿನಲ್ಲಿ ವ್ಯತ್ಯಾಸವಿರಬೇಕಾದುದು ಅಗತ್ಯ

ಈಗ ಸೆಕೆಂಡರಿ ಶಾಲೆಗಳಿಗೆ ಕೊಡುವ ಗ್ರೆಂಟಿನ ಕ್ರಮದಲ್ಲಿ ಬದಲಾವಣೆಗಳು ಅಗತ್ಯವೊ?:— ಈ ವಿಷಯವನ್ನು ಬೇರೆಯಾಗಿ ಇನ್ನೊಮ್ಮೆ ಚರ್ಚಿಸುವೆವು.

ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ದಾಖಲಾಗುವ ಹಿಂದುಳಿದ ಜಾತಿಯವರಿಗೆ ಸಿಕ್ಕುವ ರಿಯಾಯತಿಗಳು:— ಈಗ ಎಲಿಮೆಂಟರಿ ಶಾಲೆಗಳಲ್ಲಿ ಹಿಂದುಳಿದ ಜಾತಿಯವರಿಗೆ ಫೀಸು ಮಾಫಿಯಿಂದ ಕಲಿಸಬೇಕೆಂದು ನಿರ್ಣಯವಿದೆ ಮತ್ತು ಈ ಜಾತಿಗಳ ಸಂಖ್ಯೆಯು ಹೆಚ್ಚುತ್ತಲೆ ಇದೆ ಆದರೆ ವಿದ್ಯೆಯಲ್ಲಿ ಮುಂದಾದವರೆನ್ನಿಸುವವರಲ್ಲಿ ಕೆಲವು ಜಾತಿಯವರಿಗೆ ನಿಜವಾಗಿಯೂ ಸಹಾಯ ಅಗತ್ಯವಿದೆ ಈ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ವಾಸಮಾಡಿ ಒಂಜರಾದ ಭೂಮಿಯನ್ನು ಹಸನುಮಾಡಿ ಜೀವಿಸುವ ರೋಮನ್ ಕೆಥೋಲಿಕರೂ, ಅಲ್ಲಲ್ಲಿ ದೊಡ್ಡ ಊರುಗಳಲ್ಲಿ ಬಹಳ ಬಡತನದಿಂದ ಜೀವಿಸುವ ದಖ್ಖನಿ ಮುಸಲ್ಮಾನರೂ ಸರಕಾರದ ಆಶ್ರಯಕ್ಕೆ ಪಾತ್ರರಾಗಿದ್ದಾರೆ ಈ ಎರಡು ಜಾತಿಯವರೂ ತೀರಾ ಬಡವರು, ಮೊದಲನೆಯವರು ದಿನದಿನಕ್ಕೆ ತಮ್ಮ ಕಷ್ಟಕೆಲಸದಿಂದ ತಯಾರಿಸಿದ ತರಕಾರಿ, ಹೂ ಮುಂತಾದ್ದನ್ನು ಸಂತೆಗೆ ತಂದು ಮಾರಿ ದಿನದ ಜೀವನವನ್ನು ಕಳೆಯುವವರು ಎರಡನೆ ಜಾತಿಯವರಲ್ಲಿ ಗಂಡಸರು ಮಾತ್ರ ದುಡಿಯುತ್ತಾರೆ ಹೆಂಗಸರು ಘೋಷಾ ಕ್ರಮವನ್ನು ಅನುಸರಿಸುವುದರಿಂದ ಹೊರಗೆ ಬರಲಾರರು ಮನೆಯೊಳಗ ಅಡಿಗೆಕೆಲಸವೊಂದಲ್ಲದೆ ಬೇರೆ ಜೀವನಕ್ಕೆ ಸಹಕಾರಿಯಾಗುವ ಯಾವ ವೃತ್ತಿಯನ್ನೂ ಮಾಡಲಾರರು ಈ ಎರಡೂ ಜಾತಿಯವರಲ್ಲಿಯೂ ಕಲಿಯತಕ್ಕ ಆತುರವಿದ್ದರೂ ದ್ರವ್ಯಾನುಕೂಲ ಕಡಿಮೆಯಾಗಿ ವಿದ್ಯೆಯ ಪ್ರಯೋಜನವೇ ಅವರಿಗೆ ಸಿಕ್ಕುವುದಿಲ್ಲ ಇಂಥವರಿಗೆ ಬಡತನವನ್ನು ಆಲೋಚಿಸಿ ಫೀಸ ಮಾಫಿಮಾಡುವ ಏರ್ಪಾಡು ಅತೀ ಅಗತ್ಯ

~~~~~~~~

ಕೊಯಂಬುತ್ತೂರು ಸರ್ಕಲ್ ಸಹಕಾರದ ನಾಲ್ಕನೇ ಪರಿಷತ್ತು

~~~~~~~~

ಇದೇ ತಿಂಗಳ ತಾ ೪ ಮತ್ತು ೫ರಲ್ಲಿ ಈರೋಡಿನಲ್ಲಿ ಈ ಪರಿಷತ್ತು ಬಹುಮಾನಪಟ್ಟ ವಿ ಕೆ ರಾಮಾನುಜಾಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಕೂಡಿತು ಈ ಸರ್ಕಲಿಗೆ ಸೇರಿದ ಎಲ್ಲಾ ಜಿಲ್ಲೆಗಳಿಂದ ಸಹಕಾರ ಸಂಘಗಳ ಪ್ರತಿನಿಧಿಗಳು ಬಂದಿದ್ದರು ರಿಜಿಸ್ಟ್ರಾರ್ ಸಾಹೇಬರಾದ ಬಹುಮಾನಪಟ್ಟ ಎಲ್ ಡಿ ಸ್ವಾಮಿಕಣ್ಣುಪಿಳ್ಳೆಯವರೂ, ಈ ಸರ್ಕಲಿನ ಅಸಿಸ್ಟಾಂಟ್ ರಿಜಿಸ್ಟ್ರಾರರವರೂ ಬಹುಮಾನಪಟ್ಟ ನರಸಿಂಹಯ್ಯಂಗಾರರು ಸಂ ಲಿಂ ಮುದಲಿಯಾರ್, ರಾಮಲಿಂಗ ಚೆಟ್ಟಿಯವರ, ಸಿ ಎಸ್ ಕೃಷ್ಣಸ್ವಾಮಿ ಅಯ್ಯರ್ ಬೆಳ್ಗೌಂಡರ್, ಟಿ ವಿ ನಂಜುಂಡ ಅಯ್ಯರ್, ಡಿ ಎಸ್ ಕೃಷ್ಣರಾವ್ ಬೈಂದೂರು ಆನಂದರಾವ್, ಕೆ ವಿ ಕೃಷ್ಣಸ್ವಾಮಿ ಅಯ್ಯರ್, ಇವರೇ ಮೊದಲು ಅನೇಕ ಸಂಘಗಳ ಪ್ರತಿನಿಧಿಗಳೂ ಇತರ ಸದ್ಗೃಹಸ್ಥರೂ ದಯಮಾಡಿಸಿದ್ದರು

ಪರಿಷತ್ತಿನ ಸೆಕ್ರೆಟರಿಗಳಾದ ಎಸ್ ಆರ್ ರಂಗಸ್ವಾಮಿ ಅಯ್ಯಂಗಾರರು ಸ್ವಾಗತ ಉಪನ್ಯಾಸವನ್ನು ಓದಿದ ಕೂಡಲೇ ಸಭಿಕರು ವಿನ್ನವಿಸಿದ ಪ್ರಕಾರ ಮ। ರಾ। ರಾ। ರಾಮಾನುಜಾಚಾರ್ಯರು ಅಗ್ರಾಸನವನ್ನು ವಹಿಸಿಕೊಂಡರು ಸಭಾಧ್ಯಕ್ಷರ ಭಾಷಣವು ಬಹಳ ಉದ್ದವಾಗಿದೆ ಅದರ ಸಂಪೂರ್ಣವಾದ ಭಾಷಾಂತರವನ್ನು ಬರೆಯಲು ಸ್ಥಳ ಸಾಲದು ಆದರೆ ಅವರು ಒಟ್ಟಾರೆಯ ಮೇಲೆ ನಮ್ಮ ಬ್ರಿಟಿಷ್ ಸರಕಾರದವರಿಂದ ನಾವು ಹೊಂದಿದ ಅನೇಕಾನೇಕ ಪ್ರಯೋಜನಗಳಲ್ಲಿ ಸಹಕಾರದ ಏರ್ಪಾಡಿನಷ್ಟು ಮಹತ್ತರವಾದದ್ದೂ ಉತ್ಕೃಷ್ಟವಾದದ್ದೂ ಬೇರೆ ಯಾವುದೂ ಇಲ್ಲವೆಂದೂ ಹೇಳಿ, ಸಹಕಾರದಿಂದ ಆಗುವ ಅನೇಕ ಪ್ರಯೋಜನಗಳನ್ನು ಕೂಲಂಕಷವಾಗಿ ವಿವರಿಸಿ, ಸಹಕಾರ ಸಂಘಗಳು ಗ್ರಾಮಗಳ ಆರೋಗ್ಯದ ಕಡೆಗೂ ಗ್ರಾಮಸ್ಥರ ವಿದ್ಯಾಭ್ಯಾಸದ ಕಡೆಗೂ ಗಮನಕೊಡಬೇಕಾಗಿಯೂ, ಗ್ರಾಮಸ್ಥರೊಳಗೆ ಕಲಹ ವಿವಾದಗಳುಂಟಾದರೆ ಸಂಘದ ಪಂಚಾಯತರೇ ಅದನ್ನು ತೀರಿಸುವುದು ಬಹಳ ಒಳ್ಳೆಯದೆಂದೂ, ಹಾಗೆ ಮಾಡಿದರೆ ವ್ಯಾಜ್ಯ ವ್ಯವಹಾರಗಳ ಬಗ್ಗೆ ಜನರು ಮಾಡುವ ಖರ್ಚು ಕಡಿಮೆಯಾಗುತ್ತ ಬಂದು ಕ್ರಮೇಣ ಅಲ್ಪ ಕಾರಣಗಳಿಗೋಸ್ಕರ ಕೋರ್ಟನ್ನು ಹತ್ತುವ ಅಭ್ಯಾಸವೇ ನಿಂತುಹೋಗಿ ಆಗ ರಾಮರಾಜ್ಯದಲ್ಲಿದ್ದಂತೆ ಸರ್ವರೂ ಸಮಾಧಾನಿಗಳಾಗಿ ಸಂತೃಪ್ತರಾಗಿಯೂ ಇರಬಹುದೆಂದೂ ಹೇಳಿದರು

ಮಾರನೇ ದಿನ ಅಂದರೆ ತಾ ೫ರಲ್ಲಿ ಈ ಕೆಲವು ಠರಾವುಗಳು ನಿರ್ಣಯಿಸಲ್ಪಟ್ಟವು ಠರಾವುಗಳ ಸಾರಾಂಶ —

೧ ಕೊಯಂಬುತ್ತೂರು ಡಿಸ್ಟ್ರಿಕ್ಟ್ ಬ್ಯಾಂಕಿನವರು ತಮ್ಮ ಆಡಳಿತೆ ಸಭೆಗೆ ಕೊಯಂಬುತ್ತೂರು ಮತ್ತು ನೀಲಗಿರಿ ಜಿಲ್ಲೆಗಳಲ್ಲಿರುವ ಎಲ್ಲಾ ಸಹಕಾರದ ಮೂಲ ಸಂಘಗಳು ಸಾಕಷ್ಟು ಪ್ರತಿನಿಧಿಗಳನ್ನು ಕಳುಹಿಸುವಂತೆ ಏರ್ಪಾಡು ಮಾಡಿ ಆ ಸಂಘಗಳ ಮೇಲ್ವಿಚಾರಣೆಯ ಕೆಲಸವನ್ನು ವಹಿಸಿಕೊಳ್ಳಬೇಕಾಗಿಯೂ ಆ ವಿಷಯವಾದ ಎಲ್ಲಾ ತಪಶೀಲುಗಳನ್ನು ಆ ಬ್ಯಾಂಕಿನ ಆಡಳಿತೆ ಸಭೆಯವರು ಮತ್ತು ರಿಜಿಸ್ಟ್ರಾರ್ ಸಾಹೇಬರು ಆಲೋಚಿಸಿ ನಿರ್ಣಯಿಸಬೇಕಾಗಿಯೂ ಸದರಿ ಬ್ಯಾಂಕಿಗೆ ತಿಳಿಸತಕ್ಕದ್ದು.

ಮಲಬಾರು ಜಿಲ್ಲೆಯಲ್ಲಿ ಒಂದು ಸೆಂಟ್ರಲ್ ಬ್ಯಾಂಕಿಂಗ್ ಯೂನಿಯನ್ ಆಗಲೀ ಡಿಸ್ಟ್ರಿಕ್ಟ್ ಮೇಲ್ವಿಚಾರಣ ಸಹಕಾರ ಕೂಟವಾಗಲೀ (Supervising Union) ಏರ್ಪಡಿಸತಕ್ಕದ್ದು

೩ ಸರಕಾರದವರು ಇಂಪಿರಿಯಲ್ ಸಹಕಾರದ ಕಮ್ಮಿಟಿಯವರ ಶಿಫಾರಸುಗಳಿಗನುಗುಣವಾಗಿ ಯಾವ ಕ್ರಮ ಅಥವಾ ಏರ್ಪಾಡನ್ನಾಗಲಿ ಜ್ಯಾರಿಯಲ್ಲಿ ತರುವ ಮೊದಲು ಅಂಥಾ ಬದಲಾವಣೆಗಳ ವಿಷಯವಾಗಿ ಡಿಪಾರ್ಟುಮೆಂಟಿನಲ್ಲಿ ಇಲ್ಲದ ಇತರ ಎಲ್ಲವರು ತಂತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಸಾಕಷ್ಟು ಗಡುವನ್ನು ಕೊಡಬೇಕಾಗಿ ಈ ಪರಿಷತ್ತು ಅಭಿಪ್ರಾಯಪಡುತ್ತದೆ

೪ ಮಿತ ಬಡ್ಡಿ ಬಾಧ್ಯತೆಯ ಸಂಘಗಳು ತಮ್ಮ ನಿವ್ವಳ ಮುನಾಫೆಯಲ್ಲಿ ಶೇಕಡಾ ೫೦ರಷ್ಟು ಅಂಶವನ್ನು ಕ್ಷೇಮ ನಿಧಿಗೆ ಕೂಡಿಸಬೇಕಾಗಿ ಸರಕಾರದವರು ಪ್ರಕಟಿಸಿದ ಕ್ರಮವನ್ನು ಜಾರಿಗೆ ತಂದರೆ ಸಂಘಗಳ ನಾಶಕ್ಕೆ ಕಾರಣವಾದೀತೆಂದೂ ಆ ಕ್ರಮವನ್ನು ಹಿಂದೆಗೆಯಬೇಕೆಂದೂ ಸರಕಾರದವರೊಡನೆ ಬಿನ್ನೈಸಬೇಕಾಗಿ ಈ ಪರಿಷತ್ತು ಅಭಿಪ್ರಾಯಪಡುತ್ತದೆ

೫ ಈ ಸಂಸ್ಥಾನದಲ್ಲಿ ಎಪೆಕ್ಸ ಬ್ಯಾಂಕನ್ನು ಸ್ಥಾಪಿಸುವುದಾದರೆ ಪ್ರತಿಯೊಂದು ಸಂಘಕ್ಕೆ ಅದರಲ್ಲಿ ಪಾಲುಗಳನ್ನು ತೆಗೆದುಕೊಳ್ಳಬಹುದಾಗಿಯೂ ಪ್ರತಿಯೊಂದು ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಅದರ ಆಡಳಿತೆ ಸಭೆಯಲ್ಲಿ ಒಬ್ಬೊಬ್ಬ ಪ್ರತಿನಿಧಿಯನ್ನು ಕಳುಹಿಸಬೇಕಾಗಿಯೂ ಏರ್ಪಾಟು ಮಾಡಬೇಕಾಗಿ ಈ ಪರಿಷತ್ತು ಅಭಿಪ್ರಾಯಪಡುತ್ತದೆ

೬ (a) ಪ್ರತಿಯೊಂದು ಸಂಘದಲ್ಲಿಯೂ ಪ್ರೊವಿಡೆಂಟು ಮತ್ತು ಮಾಸಿಕ ಠೇವಣಾತಿಗಳನ್ನು ಏರ್ಪಡಿಸಿ ಮೆಂಬರರೊಳಗೆ ಮಿತವ್ಯಯಬುದ್ಧಿಯನ್ನು ಹುಟ್ಟಿಸಬೇಕು

(b) ಮೆಂಬರರಿಂದ ಹೊರಗೆ ಸಲ್ಲತಕ್ಕ ಸಾಲಗಳನ್ನು ಸಂಘದವರು ಪರಿಹಾರ ಮಾಡುವುದು ಸಂಘದ ಮುಖ್ಯ ಕರ್ತವ್ಯವಾದ್ದರಿಂದ ಎಲ್ಲಾ ಸಂಘಗಳಲ್ಲಿಯೂ ಹಿಂಧಾ ಸಾಲಗಳ ಪಟ್ಟಿಗಳನ್ನು ಇಡತಕ್ಕದ್ದು

(c) ಪ್ರತಿಯೊಂದು ಸಂಘದಲ್ಲಿಯೂ (೧) ಆಗಾಗ್ಗೆ ಮಹಾಸಭೆಗಳನ್ನು ಜರಗಿಸಿ ಮೆಂಬರುಗಳಿಗೆ ಉಪದೇಶ ಮಾಡಿ (೨) ಆಗಾಗ್ಗೆ ಉಪನ್ಯಾಸಗಳನ್ನು ಮಾಡಿ ಮತ್ತು ಸಹಕಾರದ ಕುರಿತು ಚಿಕ್ಕ ಪುಸ್ತಕಗಳನ್ನು ಬರೆದು ಅವುಗಳನ್ನು ಉಚಿತವಾಗಿ ಎಲ್ಲಾ ಮೆಂಬರರಿಗೂ ಕೊಟ್ಟು (೩) ನಿವ್ವಳ ಮುನಾಫೆಯ ಶೇಕಡಾ ೭॥ರಷ್ಟು ಹಣವನ್ನು ಪ್ರತ್ಯೇಕಿಸಿ ಪುಸ್ತಕಭಂಡಾರಗಳನ್ನೂ ವಾಚಕಮಂದಿರಗಳನ್ನೂ ಏರ್ಪಡಿಸಿ ಮೆಂಬರುಗಳಿಗೆ ಸಹಕಾರದ ತತ್ವವನ್ನು ಕಲಿಸಬೇಕು

(d) ಸಂಘಗಳ ಪಂಚಾಯತರು ಬುದ್ಧಿವಂತರೂ ಕಾರ್ಯಕುಶಲತೆಯುಳ್ಳವರೂ ಇರುವ ಗ್ರಾಮಗಳಲ್ಲಿ ವಿದ್ಯೆ, ಗ್ರಾಮದ ಆರೋಗ್ಯ ಮತ್ತು ಗ್ರಾಮದಲ್ಲಿ ನ್ಯಾಯಾಧಿಕಾರ ಇವುಗಳನ್ನು ನಡೆಯಿಸುವ ಕಾರ್ಯಗಳನ್ನು ಆ ಪಂಚಾಯತರಿಗೆ ಒಪ್ಪಿಸತಕ್ಕದ್ದು

(e) ಗ್ರಾಮಗಳಲ್ಲಿ ಕ್ರೆಡಿಟ್ ಸಂಘಗಳ ಒಟ್ಟಿಗೆ ಡಿಸ್ಟ್ರಿಬ್ಯೂಟಿವ್ ಸಂಘಗಳನ್ನೂ ಸ್ಥಾಪಿಸಬೇಕು

ಅದಲ್ಲದೆ ಹಿಂದಿನ ಪರಿಷತ್ತುಗಳಲ್ಲಿ ಈ ಕೆಳಗಿನ ಸಂಗತಿಗಳ ವಿಷಯವಾಗಿ ಮಾಡಿದ ನಿರ್ಣಯಗಳನ್ನು ಈ ಪರಿಷತ್ತು ಪುನಃ ಒತ್ತಿ ಹೇಳಿ ಅದೇ ಅಭಿಪ್ರಾಯಪಡುತ್ತದೆ

(೧) ಟ್ರಸ್ಟ್ ಫಂಡುಗಳನ್ನು ಡಿಸ್ಟ್ರಿಕ್ಟ್ ಬ್ಯಾಂಕುಗಳಲ್ಲಿ ಇಡುವುದರ ಯೋಗ್ಯತೆ.

(೨) ಕ್ರೆಡಿಟ್ ಸಂಘಗಳಲ್ಲದೆ ಇತರ ವಿಧದ ಸಂಘಗಳನ್ನು ಏರ್ಪಡಿಸುವುದರ ಅವಶ್ಯಕತೆ

ಈ ಠರಾವುಗಳನ್ನು ಸರ್ವಸಮ್ಮತದಿಂದ ನಿರ್ಣಯಿಸೋಣಾದ್ದ ಮೇಲೆ ರಾ। ಎಸ್. ಆರ್ ರಂಗಸ್ವಾಮಿ ಅಯ್ಯಂಗಾರರು ಅಧ್ಯಕ್ಷರಿಗೂ ಸಂಘಗಳ ಪ್ರತಿನಿಧಿಗಳಿಗೂ ಇತರ ಸಭಾಸದರಿಗೂ ತಾನು ತುಂಬಾ ಕೃತಜ್ಞನಾಗಿರುವೆನೆಂದು ಹೇಳಿ ವಂದಿಸಿದರು. ಅಂತ್ಯದಲ್ಲಿ ಸಂಘಗಳ ಪ್ರತಿನಿಧಿಗಳ ತರಫಿನಿಂದ ರಾ। ಬೈಂದೂರು ಆನಂದರಾಯರು ಎಲ್ಲಾ ಸಂಘಗಳಿಗೆ ಆಮಂತ್ರಣವನ್ನು ಕಳುಹಿಸಿ ಈರೋಡಿನಲ್ಲಿ ಎಲ್ಲಾ ಪ್ರತಿನಿಧಿಗಳಿಗೆ ಮನಃಪೂರ್ವಕವಾಗಿಯೂ ಭ್ರಾತೃಭಾವದಿಂದಲೂ ಮಾಡಿದ [illegible] ಸ್ವಾಗತ ಕಮಿಟಿಯವರಿಗೂ ಮುಖ್ಯವಾಗಿ ಕಾರ್ಯದರ್ಶಿ ಎಸ್ ಆರ್ ರಂಗಸ್ವಾಮಿ ಅಯ್ಯಂಗಾರ

ರಿಗೂ ಅನೇಕ ಧನ್ಯವಾದಗಳನ್ನು ಅರ್ಪಿಸಿ ಭಾಷಣ ಮಾಡಿದರು. ಅನಂತರ ಕೈ ಚಪ್ಪಾಳೆಯೊಡನೆ ಸಭೆಯು ಮುಕ್ತಾಯವಾಯಿತು.

ನಮ್ಮ ಜಿಲ್ಲೆಯ ಧಾರ್ಮಿಕ ಅವನತಿ.

ಜನಾಂಗದ ಅಥವಾ ರಾಷ್ಟ್ರದ ಅಭಿಮಾನದೇವತೆಯು ಯಾವುದು? ಈ ಪ್ರಶ್ನೆಗೆ "ಏಕರಾಷ್ಟ್ರೀಯತ್ವ"ವೆಂಬ ಉತ್ತರವು ಸರ್ವಸಮ್ಮತವಾದುದು. ಆದರೆ ಈ "ಏಕರಾಷ್ಟ್ರೀಯತ್ವ"ವು ಅನೇಕ ಸಂಗತಿಗಳನ್ನು ಒಳಕೊಂಡಿರುವುದರಿಂದ ಸಾಮಾನ್ಯವಾಚಕರಿಗೆ ಬರೇ "ಏಕರಾಷ್ಟ್ರೀಯತ್ವ"ವೆಂಬ ಶಬ್ದದಿಂದಲೇ ತಾದೃಶಬೋಧವುಂಟಾಗಲಾರದು. ಆದುದರಿಂದ ಈ ಉತ್ತರವನ್ನು ಬಿಟ್ಟು ಇದೇ ಪ್ರಶ್ನೆಗಿರುವ ಇನ್ನೊಂದುತ್ತರವನ್ನು ಪರಾಮರ್ಶಿಸುವ. ಈ ಉತ್ತರವು ಯಾವುದೆಂದರೆ "ಧರ್ಮ." ಈ "ಧರ್ಮ"ವೆಂಬ ಉತ್ತರವನ್ನು ಕೇಳಿದಕೂಡಲೆ ಈಗಿನ ಯಾಂತ್ರಿಕಯುಗದಲ್ಲಿ ಬುದ್ಧಿಸಾಮರ್ಥ್ಯದಿಂದ ಬೇಕಾದ ಸಂಗತಿಯನ್ನು ಹೆಚ್ಚಿನ ಆಯಾಸವಿಲ್ಲದೆ ಸಾಧಿಸಿಕೊಳ್ಳುವ ಯಾಂತ್ರಿಕರಿಗೆ ಈ ಧರ್ಮದ ವಿಷಯದಲ್ಲಿಯೂ ಒಂದು ಯಂತ್ರವನ್ನು ತಯಾರಿಸಿದ್ದರೆ ಅದರಿಂದ ತಮ್ಮ ಧರ್ಮರಥವನ್ನು, ವಾಯುವಿಮಾನದಂತೆ ಯಥೇಷ್ಟ ಉನ್ನತಿಯಲ್ಲಿ ಕೊಂಡುಹೋಗಿ ಅನ್ಯಧರ್ಮ ಸೈನ್ಯದಲ್ಲಿ ಬೇಕಷ್ಟು ಬೊಂಬಿನ ಗುಂಡುಗಳನ್ನು ಹಾಕಬಹುದಾಗಿತ್ತೆಂದು ಒಂದುವೇಳೆ ತೋರುತ್ತದೋ ಏನೋ? ಆಧುನಿಕ ಸಾಹಸಿಗಳ ಸುಮಾರು ಮೂರು ಮುಕ್ಕಾಲಷ್ಟು ಕಾರ್ಯಗಳು ಯಾಂತ್ರಿಕ ಸಹಾಯದಿಂದೊದಗುವಾಗ ಧರ್ಮದ ಖಾತೆಯಲ್ಲಿ ಮಾತ್ರ ಯಂತ್ರದ ಉಪಯೋಗವೇನೂ ಆಗುವುದಿಲ್ಲ; ಇನ್ನು ಆಗುವಂತೆಯೂ ಕಾಣುವುದಿಲ್ಲ; ಇದು ಯಾಂತ್ರಿಕರ ಉತ್ಸಾಹವನ್ನು ತಗ್ಗಿಸುವಂತಹ ಸಂಗತಿಯೆನ್ನುವುದಕ್ಕೆ ಅಡ್ಡಿಯಿಲ್ಲ. ಪರಂತು ಧರ್ಮದ ಸಂಗತಿಯಲ್ಲಿ, ಒಂದುವೇಳೆ ಅವರ ದೀರ್ಘಪರಿಶ್ರಮದಿಂದ ಮತ್ತು ಸಾಹಸದಿಂದ ಯಂತ್ರಗಳನ್ನು ಪ್ರಯೋಗಿಸುವ ಸುಪ್ರಸಂಗವು ಬಂದಲ್ಲಿ ನಮಗೂ ತುಂಬಾ ಸಂತೋಷವೇ ಸರಿ. ಅಷ್ಟರ ತನಕ ನಾವು ಆ ಯಂತ್ರದ ಗೊಡವೆಯನ್ನು ಬಿಟ್ಟು ತಂತ್ರಕ್ಕನುಕೂಲವಾಗಿ ಧಾರ್ಮಿಕ ವಿಷಯವನ್ನು ಚರ್ಚಿಸಲುಪಕ್ರಮಿಸಿದ್ದೇವೆ.

ಧರ್ಮವು ರಾಷ್ಟ್ರದ ಅಭಿಮಾನ ದೇವತೆಯೆಂದು ಮೇಲೆ ಹೇಳಿದೆ. ಇದರ ಸ್ಪಷ್ಟೀಕರಣವು ಅವಶ್ಯವೆಂದು ನಾವು ತಿಳಿಯುವುದಿಲ್ಲ. ಕಾರಣವೇನೆಂದರೆ ಒಂದು ಧರ್ಮದ ಪರಿಣಾಮವು ಜನಾಂಗದ ಮೇಲೆ ಯಾವ ಯಾವ ರೀತಿಯಿಂದುಂಟಾಗುತ್ತದೆಂಬುದು ಪ್ರಾಯಶಃ ಸಾಮಾನ್ಯ ವಾಚಕರಿಗೂ ತಿಳಿಯುವಂತಿದೆ. ಧರ್ಮದ ವೃಥಾ ಸ್ತೋಮ ಬೆಳೆಸುವುದು ಉಚಿತವೋ ಅನುಚಿತವೋ ಈ ವಿಷಯದಲ್ಲಿ ಮತಭೇದವಿದ್ದರೂ ಅದರ ಪರಿಣಾಮವು—ಅದು ಒಳ್ಳೇದಿರಲಿ, ಕೆಟ್ಟದಿರಲಿ, ಜನಾಂಗದ ಮೇಲೆ ಫಲಿಸುತ್ತದೆಂಬ ಮಾತನ್ನು ಮಾತ್ರ ಯಾರೂ ಅಲ್ಲಗಳೆಯರು. ಈ ಸಂಗತಿಯನ್ನು ಸಮ್ಮತಿಸಿದ್ದಲ್ಲಿ ಇದರೊಡನೆ ಇನ್ನೊಂದು ಸತ್ಯವನ್ನು ಒಪ್ಪಿಕೊಳ್ಳಬೇಕಾಗುವುದೇನೆಂದರೆ—ಧರ್ಮವು ಒಳ್ಳೇದಿದ್ದರೆ ಅದರಿಂದುಂಟಾಗುವ ಪರಿಣಾಮವು ಜನಾಂಗದ ಮೇಲೆ ಒಳ್ಳೇದಾಗುತ್ತದೆ. ಕೆಟ್ಟದಿದ್ದರೆ ಕೆಟ್ಟದಾಗುತ್ತದೆ. ಈಗ ಧರ್ಮದ ಒಳ್ಳೇತನ ಕೆಟ್ಟತನವನ್ನು ಆಯಾ ಧರ್ಮದ ಅನುಯಾಯಿಗಳ ದೆಸೆಯಿಂದ ಸಾಮಾನ್ಯವಾಗಿ ಲೋಕದಲ್ಲಿ ಸಂಭವಿಸುವ ಹಿತಾಹಿತಗಳ ಥರ್ಮೋಮಿಟರದಿಂದಲೇ ಪರೀಕ್ಷಿಸುವುದು ಅಸಾಧ್ಯವಲ್ಲಾದುದರಿಂದ ಅದನ್ನು ತಿರುಗಿ ಚರ್ಚಿಸಬೇಕೆಂತಿಲ್ಲ. ಇದಲ್ಲದೆ ಆ ವಿಷಯವು ನಮಗೆ ಈ ಲೇಖದಲ್ಲಿ ಅಪ್ರಕೃತವಾದುದು. ನಾವು ನಮ್ಮ ಪ್ರತಿಪಾದ್ಯವಿಷಯದ ಹತ್ತರ ಹತ್ತರ ಬರಬೇಕಾದರೆ ನಮ್ಮ ವೈದಿಕ ಧರ್ಮವನ್ನೇ ಕುರಿತು ಬರೆಯಬೇಕು. ನಮ್ಮ ಈ ವೈದಿಕ ಧರ್ಮವು ಸದ್ಯಃ ಹಿಂದೂಸ್ಥಾನದಲ್ಲಿ ವಿವಿಧ ಮಾರ್ಗಗಳಿಂದ ಅವನತಿಯನ್ನು ಹೊಂದುತ್ತಿದೆ. ನಮ್ಮ ವೈದಿಕ ಧರ್ಮದ ಖಜಾನೆಯು ಕ್ರಿಸ್ತ, ಮಹಮ್ಮದಿ ಮೊದಲಾದ ಧರ್ಮಗಳಂತೆ ಬೇರೆ ಬೇರೆ ಧರ್ಮಾನುಯಾಯಿಗಳಿಂದ ಹೆಚ್ಚಿಸಲ್ಪಡುವುದಿಲ್ಲ. ಇದರ ಅರ್ಥವೇನೆಂದರೆ—ಈ ಮೇಲೆ ಹೇಳಿದ ಧರ್ಮಗಳಲ್ಲಿ ಹೇಗೆ ಬೇರೆ ಬೇರೆ ಧರ್ಮಗಳಿಂದ ಜನರನ್ನು ತಂದು ಅವುಗಳನ್ನು ಬೆಳೆಸಬಹುದೋ ಹಾಗೆ ನಮ್ಮ ಧರ್ಮದಲ್ಲಿ ಉಪಾಯವಿಲ್ಲ. ನಮ್ಮ ಧರ್ಮದ ಖಜಾನೆಗೆ ಅಂತಃಪ್ರವೇಶದ ದಾರಿಯಿಲ್ಲ! ಹೊರಗೆ ಹೋಗಲು ಮಾತ್ರ ಒಂದು ದಾರಿಯಿದೆ! ಈ ಪರಿಸ್ಥಿತಿಯಿಂದ ದಿನೇ ದಿನೇ ಯುದ್ಧದಿಂದ ಲೋಕಸಂಖ್ಯೆಯು ಕಡಿಮೆಯಾಗುವಂತೆ ನಮ್ಮ ಅನುಯಾಯಿಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದಿದೆ. ಈ ಶೋಚನೀಯ ಸ್ಥಿತಿಯು ಸರ್ವತ್ರ ಇರುವಂತೆಯೇ ನಮ್ಮ ಜಿಲ್ಲೆಯಲ್ಲಿಯೂ ಕಂಡುಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಬೇರೆ ಚಳವಳಗಳಿಲ್ಲಾದರೂ ಧರ್ಮಾಂತರಮಾಡಲು ಸಹಾಯಕವಾಗುವ ಚಳವಳಗಳು ಯಥೇಷ್ಟ ಇದ್ದಾವೆ. ಒಂದು ಕಡೆಯಲ್ಲಿ ಕ್ರಿಸ್ತವೈದಿಕರು ಆರ್ತಭಕ್ತರನ್ನು ಕ್ರಿಸ್ತನ ಪಾದಕ್ಕೆ ಸೇರಿಸುತ್ತಿರುವಾಗ ಇನ್ನೊಂದು ಕಡೆಯಲ್ಲಿ ಪಳ್ಳಿಗಳು ಅನುಯಾಯಿಗಳನ್ನು ಸ್ವಾಗತೀಕರಿಸಲೋ ಎಂಬಂತೆ ಯಾವಾಗಲೂ ಬಾಗಿಲುಗಳನ್ನು ತೆರೆದುಕೊಂಡಿರುವವು! ಏತನ್ಮಧ್ಯೇ ಜನರನ್ನು "ಶಿವ ಶಿವ! ನಹಿಂದುರ್ನಯವನಃ" ಈ ತ್ರಿಶಂಕುವಿನ ಅವಸ್ಥೆಗೆ ತಂದುಸೇರಿಸುವ ಬ್ರಹ್ಮಸಮಾಜವು ನಶ್ಚಬಲೆಯನ್ನು ಆದಷ್ಟು ಬೀಸುತ್ತಿದೆ. "ಸನಾತನಧರ್ಮ" "ವಿಶ್ವಬಂಧುತ್ವ" ಮೊದಲಾದ ಮೋಹಕನಾಮಧೇಯಗಳಿಂದ ಕೊನೆಗೆ "ಸಬಗೋಳಂಕಾರ"ದಲ್ಲಿ ತಂದುಬಿಡುವ ಥಿಯೊಸೋಫಿಯು ಇತ್ತಿತ್ತ ತನ್ನ ಅಂಗಡಿಯನ್ನು ತೆರೆಯಲು ಪ್ರಾರಂಭಿಸಿದೆ. ಈ ರೀತಿಯಿಂದ ರೋಮಿಯ, ಪ್ರೊಟೆಸ್ಟಾಂಟ ಮಿಶನರಿಗಳೂ, ಮಹಮ್ಮದೀಯರೂ, ಬ್ರಹ್ಮೋ-ಸಾಮಾಜಿಕರೂ ಮತ್ತು ಥಿಯೊಸೋಫಿಸ್ಟರೂ ನಮ್ಮ ವೈದಿಕ ಧರ್ಮಮಂದಿರದ ಗೋಡೆಗಳನ್ನು ಮಿಷ್ಟಭಾಷಣದ ಗುದ್ದಲಿಯಿಂದ ಅಹರ್ನಿಶ ಒಡೆಯುತ್ತಿದ್ದಾರೆ. ಧರ್ಮ ಶೈಥಿಲ್ಯಕ್ಕೆ ಬೇಕಾದ ಸಂಗತಿಗಳು ಈ ಪ್ರಕಾರ ಅಕುಂಠಿತವಾಗಿ ನಡೆಯುತ್ತವೆ. ಇದು ನಮ್ಮ ಜಿಲ್ಲೆಯ ಪುರೋಗತಿಯೋ ಪರಾಗತಿಯೋ? ಈ ಸಂಗತಿಯನ್ನು ವಾಚಕರೇ ಊಹಿಸಬಹುದು. ಈ ಸಮಾಜಗಳು ಅಥವಾ ಥಿಯೊಸೋಫಿಯಂತಹ ನವೀನ ಪಂಥಗಳು ನಮ್ಮ ದೇಶಕ್ಕೆ ಏನೂ ಒಳ್ಳೇದನ್ನು ಮಾಡಲಿಲ್ಲ; ಎಲ್ಲ ಅಹಿತವನ್ನೇ ಸಾಧಿಸಿದ್ದಾವೆಂದು ನಮ್ಮ ಅಂಬೋಣವಲ್ಲ. ಇಂಗ್ಲಿಷ್ ವಿದ್ಯೆಯ ಮೊದಲನೆ ಪುಟದಲ್ಲಿ ತಯಾರಾಗಿ "ಧರ್ಮವೆಂದರೆ ಹೆಂಗಸರ ಡಿಪಾರ್ಟ್‌ಮೆಂಟಿಗೆ ಸೇರಿದ ಸಂಗತಿ" ಯೆಂದು ಅದನ್ನು ತಾತ್ಸಾರಮಾಡುತ್ತಿದ್ದ ಎಷ್ಟೋ ಮಹನೀಯರು ಥಿಯೊಸೋಫಿಯವರ ಪ್ರಯತ್ನದಿಂದ ಕಣ್ಣುತೆರೆದು ಧಾರ್ಮಿಕ ವಿಷಯಗಳ ಅಧ್ಯಯನವನ್ನು ಮಾಡಹತ್ತಿದರು. ವೇದಗಳಾಗಲಿ, ಪ್ರಾಚೀನ ಋಷಿಗಳ ಪುರಾಣಗಳಾಗಲಿ ಕಟ್ಟುಕಥೆಗಳಲ್ಲ! ಅವುಗಳಲ್ಲಿ ಕಲಿಯತಕ್ಕ ಅನೇಕ ಸಂಗತಿಗಳಿರುವವು; ಋಷಿಗಳು ತ್ರಿಕಾಲಜ್ಞರು ಎಂದೀ ತಿಳಿವು ಆ ಪಾಶ್ಚಾತ್ಯವಿದ್ಯೆಯ ಮೊದಲನೆಯ ಪುಟದ ಮಹನೀಯರಲ್ಲಿ ಉದಯಿಸಿತು. ನಿಜವಾಗಿ ನೋಡಿದರೆ ಧಾರ್ಮಿಕ ಇತಿಹಾಸದಲ್ಲಿ ಥಿಯೊಸೋಫಿಯು ಮಾಡಿದ ಈ ವಿಚಾರಕ್ರಾಂತಿಯು ಬಹು ಮೌಲ್ಯದ್ದಾಗಿದೆಂಬುದಕ್ಕೇನೂ ಸಂದೇಹವಿಲ್ಲ. ಆದರೆ ಈ ಮಹದುಪಕಾರದೊಡನೆಯೇ ಒಂದು ಅಪಕಾರವೂ ಬಂದಿದೆ; ಬರುತ್ತಿದೆ. ಇಂತಹ ಮಿಶ್ರಫಲಗಳನ್ನು ಪ್ರಸವಿಸುವ ಸಂಸ್ಥೆಗಳು ದೇಶಕ್ಕೆ ಉಪಕಾರಕಗಳೊ, ಉಪದ್ರವಕಾರಕಗಳೋ ಇದನ್ನು ಚರ್ಚಿಸಿ ಕಾಲಯಾಪನೆಮಾಡುವುದಕ್ಕಿಂತ ನಮ್ಮ ಜಿಲ್ಲೆಯ ಧಾರ್ಮಿಕ ಅವನತಿಯನ್ನು ಹೋಗಲಾಡಿಸಲು ಮುಖ್ಯ ಉಪಾಯ ಯಾವುದು ಇದನ್ನೇ ನೋಡುವುದು ಶ್ರೇಯಸ್ಕರವಾಗಿದೆ.

ಮೇಲೆ ಹೇಳಿದ್ದಂತೆ ನಮ್ಮ ಜಿಲ್ಲೆಯಲ್ಲಿ ಬೇಡದ್ದೆಲ್ಲ ಇದ್ದರೂ ಬೇಕಾದುದು ಮಾತ್ರ ಇಲ್ಲ. ಪರಧರ್ಮದವರಲ್ಲದೆ ನಮ್ಮಲ್ಲಿ ಬ್ರಹ್ಮೋಪ್ರಾರ್ಥನಾ ಸಮಾಜವಿದೆ, ಥಿಯೊಸೋಫಿಯಿದೆ; ಸುಧಾರಕರಿದ್ದಾರೆ. ಆದರೆ ಸನಾತನ ಭಾರತ ಧರ್ಮಮಹಾಮಂಡಲದ ಅನುಯಾಯಿಗಳು ಇಲ್ಲಿ ಯಾರೂ ಇದ್ದುದು ಕಂಡು ಬರುವುದಿಲ್ಲ. ಬೇಕಾದುದು ಇಲ್ಲೆಂತ ಹೇಳಿದ್ದು ಇದೇ ಸರಿ. ಈ ಮಹಾಮಂಡಲದ ಉಪದೇಶಕರು ಧರ್ಮವೆಂದರೇನು, ಧರ್ಮಗ್ರಂಥಗಳಾವವು, ಧರ್ಮದಲ್ಲಿ ಆಚಾರಪ್ರಾಧಾನ್ಯವು ಹೇಗೆ ಬಂತು, ಪುರಾಣಗಳ ಬೋಧನೆಯ ಸಾರವು ಯಾವುದು, ಜೀವಸಾರ್ಥಕ್ಯವು ಹೇಗಾಗುವುದು, ಮುಂತಾದ ಧರ್ಮತತ್ತ್ವಗಳನ್ನು ಬೋಧಿಸಿ ಜನರನ್ನು ಧರ್ಮಾಂತರದಿಂದ ವ್ಯಾವರ್ತಿಸುವರು. ಈ ಕಾಲದಲ್ಲಿ ನಮ್ಮ ಜನರು ಹುಟ್ಟು ಧರ್ಮದ ತತ್ತ್ವಗಳನ್ನರಿಯದೆ ಅನ್ಯ ಧರ್ಮಕ್ಕೆ ಮರುಳಾಗಿ ಧರ್ಮಾಂತರ ಮಾಡುತ್ತಾರೆಂದು ನೆನಸುವುದು ಅಗತ್ಯವಿಲ್ಲ. ಜನರಿಗೆ ಉದರ ನಿರ್ವಾಹಾರ್ಥವಾಗಿ ಧರ್ಮಾಂತರ ಮಾಡಬೇಕಾಗುತ್ತದಲ್ಲದೆ ಅನ್ಯ ಕಾರಣವಿಲ್ಲೆಂದು ಕೆಲವರು ಹೇಳುತ್ತಾರೆ. ಮತ್ತು ಈ ಮಾತು ಅನೇಕ ದೃಷ್ಟಿಯಿಂದ ನಿಜವೇ ಸರಿ. ಇಂತಹ ಉದರಾರ್ಥಿಗಳಿಗೂ ಕೂಡ ಮಹಾ ಮಂಡಲದವರು ಸಹಾಯ ಮಾಡುವ ಕೆಲವು ಏರ್ಪಾಡುಗಳನ್ನು ಮಾಡಿರುವರು. ಏವಂಚ ಈ ರೀತಿಯಿಂದ ಜ್ಞಾನೋಪದೇಶ ಮತ್ತು ದ್ರವ್ಯಸಹಾಯ್ಯ ಈ ಸಾಧನಗಳಿಂದ ಮಹಾ ಮಂಡಲವು ಪ್ರಕೃತಕಾಲದಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಧರ್ಮಸೇವೆಯನ್ನು ಮಾಡುತ್ತಿದೆ. ಈ ಮಹಾ ಮಂಡಲದಲ್ಲಿ ದೊಡ್ಡ ದೊಡ್ಡ ವಿದ್ಯಾವಂತರೂ, ಮಹಾರಾಜರೂ, ಮಧ್ಯಮತರಗತಿಯವರೂ ಕೆಲಸ ಮಾಡುತ್ತಿದ್ದಾರೆ. ಈ ಕೆಲಸವು ಧರ್ಮದ ಮಾತ್ರವಲ್ಲ ಪುಣ್ಯದ್ದಾಗಿರುತ್ತದೆ. ಆದುದರಿಂದ ಇಲ್ಲಿಯ ಧಾರ್ಮಿಕರು ಆ ಮಹಾ ಮಂಡಲದ ಮೆಂಬರರಾಗಿ ಅದೇ ಮಂಡಲದೊಂದು ಶಾಖೆಯನ್ನು ಇಲ್ಲಿ ಸ್ಥಾಪಿಸುವಂತೆ ಯತ್ನಿಸಿದ್ದಾದರೆ ನಮ್ಮ ಜಿಲ್ಲೆಯಲ್ಲಿ ಅವನತಿಯನ್ನು ಹೊಂದುತ್ತಿದ್ದ ವೈದಿಕಧರ್ಮಕ್ಕೆ ಅದರ ಉನ್ನತಿಗಾಗಿ ಸಹಾಯ ಮಾಡಿದ್ದಂತಾಗುವುದು. ಈ ವೈದಿಕಧರ್ಮದ ಸೇವೆಯಿಂದ ಯಾವ ಲೌಕಿಕ ಫಲವೊಂದುವೇಳೆ ದೊರಕಲಾರದು. ಆದರೂ [illegible]

ವಾಗಿಯೂ, ವೈದಿಕಋಷಿಗಳ ಪ್ರೀತ್ಯರ್ಥವಾಗಿಯೂ ಪಟ್ಟ ಪರಿಶ್ರಮಕ್ಕೆ ಸರಿಯಾದ ಪ್ರತಿಫಲವು ಈಶ್ವರನ ದರಬಾರಿನಲ್ಲಿ 'ರಾವಸಾಹೇಬ' 'ಸರ್' ಮುಂತಾದ ಪದವಿಗಳ ರೂಪದಿಂದಿಲ್ಲದಿದ್ದರೂ ಅನ್ಯರೂಪದಿಂದ ನಿಶ್ಚಯವಾಗಿ ಸಿಗದೆ ಇರದು. ಭಾರತ ಧರ್ಮ ಮಹಾ ಮಂಡಲದ ಮಾಹಿತಿಯು ನಮ್ಮ ಕನ್ನಡ ವಾಚಕರಿಗೆ ಇನ್ನೂ ವಿಸ್ತಾರವಾಗಿ ಹೇಳುವ ಹಾಗಿದೆ. ಆದರೆ ಈ ಹೊತ್ತು ಈ ಪ್ರಾಸ್ತಾವಿಕ ವಿಷಯದಲ್ಲಿಯೇ ಸ್ಥಳವು ಮುಗಿದು ಹೋದ ಕಾರಣ ಇನ್ನೊಮ್ಮೆ ಈ ವಿಷಯವನ್ನು ಯಥಾವಕಾಶ ವಿವರಿಸುವೆವು

Progress of Literature, Science and Art.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

ಸಮಾಜ ಸಂಸ್ಕರಣ ವಿಚಾರದಲ್ಲಿ ಭಾರತೀಯರ ಅಭಿಪ್ರಾಯಗಳು ಹೇಗೆ ಮೆಲ್ಲಮೆಲ್ಲನೆ ಅನುಕೂಲವಾಗುತ್ತ ನಡೆದಿವೆಯೆಂಬದನ್ನು ನಿದರ್ಶಿಸಿ ಸರ್ ನಾರಾಯಣ ಚಂದಾವರಕರ್‌ಯವರು ಒಂದು ಪತ್ರಿಕೆಗೆ ಬರೆದ ಉಪನ್ಯಾಸದಲ್ಲಿ ಕೆಲವು ಕಾಲಕ್ಕೆ ಹಿಂದೆ ನಡೆದ ಮನೋರಂಜಕವಾದ ಕೆಲಕೆಲವು ವಿಷಯಗಳನ್ನು ಕುರಿತು ಹೀಗೆ ಹೇಳಿರುವರು. ಕ್ರಿ ಶ ೧೮೫೧ರಲ್ಲಿ ಪೇಶ್ವೆಯರ ರಾಜ್ಯವು ಮುಳುಗಿ ಒರೀ ಮೂರು ವರ್ಷ ಕಳೆದಿದ್ದಾಗ ಗಂಗಾಧರ ದೀಕ್ಷಿತ ಗತಕೇ ಎಂಬ ಮಹಾರಾಷ್ಟ್ರ ಬ್ರಾಹ್ಮಣನೊಬ್ಬನು ಪೂನೆಯಿಂದ ಬೊಂಬಾಯಿಗೆ ಬಂದು, ಮೆರೀನ್ (Marine) ಇಲಾಖೆಯ ಅಧಿಕಾರಿಗಳಿಗೆ ಮರಾಠೀ ಭಾಷೆ ಕಲಿಸುತ್ತ ಆರು ವರ್ಷಗಳ ಕಾಲ ನಿಂತನು. ೧೮೫೭ರಲ್ಲಿ ಆತನು ಪೂನೆಗೆ ಹಿಂತಿರಿಗಿ ಹೋದೊಡನೆ ಆತನನ್ನು ಜಾತಿಯಿಂದ ಹೊರಕ್ಕೆ ತಳ್ಳಿಬಿಟ್ಟರು ತಾನು ಸಮುದ್ರವನ್ನು ದಾಟಿ ಬೊಂಬಾಯಿಗೆ ಹೋದುದು ನಿಜವಾದರೂ ಪೂರ್ವಾಚಾರವನ್ನು ಬಿಟ್ಟಿರಲಿಲ್ಲವೆಂದೂ ತನಗೆ ಪ್ರಾಯಶ್ಚಿತ್ತವನ್ನು ಕೊಡಿಸಬೇಕೆಂದೂ ಆತನು ಪ್ರಾರ್ಥಿಸಿ ಕೊಳ್ಳಲು, ಜಾತಿಯಲ್ಲಿ ಅರ್ಧ ಜನರು ಅವನ ಮಾತು ಸಯುಕ್ತಿಕವಾದುದೆಂದು ಒಪ್ಪಿ ಅವನನ್ನು ಪುನಃ ಜಾತಿಯಲ್ಲಿ ಒಳಮಾಡಿಕೊಂಡರು ಆದರೆ ಒಂದು ಭಾಗದವರು ಎಷ್ಟುಮಾತ್ರಕ್ಕೂ ಒಪ್ಪದೆ ಆತನ ವಿಷಯದಲ್ಲಿ ಕೊನೆಯವರೆಗೂ ಬಹಿಷ್ಕಾರವನ್ನು ಊರ್ಜಿತವಿಟ್ಟರು. ಕೆಲವು ವರ್ಷಗಳ ತರುವಾಯ ಬೊಂಬಾಯಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಹಿಂದೂಗಳು ಕೆಲವರು ಜಾತಿಭೇದವನ್ನು ನಿರ್ಮೂಲಗೊಳಿಸಬೇಕೆಂಬ ಉದ್ದೇಶದಿಂದ "ಪರಮ ಹಂಸಸಭಾ" ಎಂಬ ಗುಪ್ತಸಭೆಯನ್ನು ಹೂಡಿಸಿದರು ಆ ಸಭೆಯ ಸದಸ್ಯರು ಒಟ್ಟುಗೂಡಿದಾಗ ಸಮಸ್ತರೂ ಕ್ರೈಸ್ತನ ಕಯ್ಯ ರೊಟ್ಟಿಯನ್ನೂ ತುರುಷ್ಕನ ಕಯ್ಯ ಪಾನೀಯವನ್ನೂ ಸೇವಿಸಬೇಕೆಂಬುದು ಅವರ ಒಂದು ನಿಬಂಧನೆಯಾಗಿದ್ದಿತು ಒಂದೆರಡು ವರ್ಷಗಳ ಕಾಲ ಈ ಸಭೆ ಚೆನ್ನಾಗಿ ನಡೆಯಿತು. ತರುವಾಯ ಸಾರ್ವಜನಿಕರಲ್ಲೊಬ್ಬನು ಗುಟ್ಟನ್ನು ರಟ್ಟುಗೊಳಿಸಿ, ಸಭೆಯ ಪುಸ್ತಕಗಳನ್ನು ಕದ್ದು ಸದಸ್ಯರ ಹೆಸರುಗಳನ್ನು ಪತ್ರಿಕೆಗಳಲ್ಲಿ ಪ್ರಚುರಗೊಳಿಸಿದೊಡನೆ ಜನಸಮಾಜದಲ್ಲಿ ದೊಡ್ಡ ಕ್ಷೋಭವುಂಟಾಗಿ ಸಭೆಯು ಒಡನೆಯೇ ಮುರಿದುಹೋಯಿತು. ಆದರೂ ಸದಸ್ಯರಲ್ಲಿ ಕೆಲವರು ತಮ್ಮ ಪೂರ್ವ ಕ್ರಮವನ್ನು ಬಿಡಲಿಲ್ಲ ಬೊಂಬಾಯಿಯ ಬೈಕಲ್ಲಾ (Byculla) ದಲ್ಲಿ ಅಡೆಲ್ಪಿ ಹೋಟೆಲ್ (Adelphi) ಎಂಬ ಒಂದು ವಸತಿಯಿರುವುದು ಅದಕ್ಕೆ ವಾಕ್‌ಶಕ್ತಿಯಿದ್ದರೆ ಅದು ಎಷ್ಟೋ ಗುಪ್ತಸಮಾಚಾರಗಳನ್ನು ಹೇಳದಿರದು ಕ್ರಿ. ಶ ೧೮೭೦-೭೦ರ ಸುಮಾರಿಗೆ ಪಾಲಂಜಿ (Pallonji) ಎಂಬ ಪಾರಸೀಕನೊಬ್ಬನು ಅದರ ಒಡೆಯನಾಗಿದ್ದನು ಜಾತಿರೂಢಿಗೆ ಪ್ರತಿಕೂಲವಾಗಿ ತಿನ್ನಬೇಕೆಂದು ಅಪೇಕ್ಷೆಯುಳ್ಳವರು ಗುಟ್ಟಾಗಿ ಆತನಲ್ಲಿಗೆ ಹೋಗುತ್ತಿದ್ದರು. ಜನರು ಅವನನ್ನು ಪ್ರೀತಿಯಿಂದ "ಪಾಲಂಜೀ ಕಾಕಾ" ಎಂಬದಾಗಿ ಕರೆಯುತ್ತಿದ್ದರು ಆತನು ತನ್ನ ಹೊಟೇಲಿನ ಹಿಂಭಾಗದಲ್ಲಿ ತನ್ನ ಹಿಂದೂ ಮಿತ್ರರುಗಳಿಗಾಗಿಯೇ ಪ್ರತ್ಯೇಕವಾದ ಒಂದು ಕೊಠಡಿಯನ್ನು ಇಟ್ಟುಕೊಂಡಿದ್ದನು ಇನ್ನು ಕೆಲವು ವರ್ಷಗಳು ಹೀಗೆ ದಾಟಿದುವು ೧೮೭೯ರಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ಮೊದಲನೆಯ ಬಾರಿಗೆ ಬ್ರಾಹ್ಮಣರಲ್ಲಿ ವಿಧವಾ ವಿವಾಹವಾಯಿತು. ಆಗ ಭೋಜನಸಮಾರಂಭಕ್ಕೆ ಒರೀ ಏಳುಮಂದಿ ಹೋಗಿದ್ದರು. ಅವರು ಕೂಡ ವೇಷಾಂತರ ಮಾಡಿ ಪೋಲೀಸು ಸಹಾಯ ಪಡೆದು ಹೋಗಬೇಕಾಗಿದ್ದಿತು ಇಷ್ಟಾಗಿಯೂ ಅವರ ಹೆಸರುಗಳು ಜನರಿಗೆ ತಿಳಿದುಬಂದುವು. ಮತ್ತು ಉತ್ತರಕ್ಷಣದಲ್ಲಿಯೆ ಅವರಿಗೆ ಬಹಿಷ್ಕಾರಹಾಕಿದರು. ಇವರಲ್ಲಿ ಕೆಲವರು ಪ್ರಾಯಶ್ಚಿತ್ತಮಾಡಿ ಪುನಃ ಪಾವನರಾದರು; ಉಳಿದವರು ಅಚಲರಾಗಿ ನಿಂತರು ಅಂತು ಜನಸಮುದಾಯದಲ್ಲಿ ಈ ಏಳು ಮಂದಿಗೂ "ಸಪ್ತರ್ಷಿ"ಗಳೆಂಬ ಹೆಸರು ಉಂಟಾಯಿತು.

• •

ರೇಡಿಯಮ್ (Radium) ಧಾತುವಿಗಿಂತ ವಿಚಿತ್ರವಾದ ಒಂದು ಹೊಸ ಧಾತುವನ್ನು ಮಧ್ಯ ಆಸಿಯದ ಫೆರಘಾನಾ (Ferghana)-ಎಂಬಲ್ಲಿ ಕಂಡು ಹಿಡಿದಿರುವರೆಂದು ಒಂದು ಇಟಾಲಿಯನ್-ಪತ್ರಿಕೆಯಿಂದ ತಿಳಿಯಬರುತ್ತಿದೆ. ಕಂಡುಹಿಡಿದವನು ಅದನ್ನು ಮಾಸ್ಕೋ ಪಟ್ಟಣಕ್ಕೆ ಕೊಂಡುಹೋಗಿ ಪರೀಕ್ಷಿಸಿ ನೋಡಲಾಗಿ, ಆಮ್ಲ (Acid)ದೊಂದಿಗೆ ಸೇರಲಾಗಿ ಅದು ಅತಿ ಶೀತವಾಗಿ, ಅದನ್ನು ಗಾಜು, ಕಬ್ಬಿಣ, ಕಲ್ಲು ಪಾತ್ರೆ ಮುಂತಾಗಿ ಯಾವುದರಲ್ಲಿ ಹಾಕಿದರೂ ಅದನ್ನು ತೂತುತೂತಾಗಿ ಮಾಡುವುದೆಂತಲೂ ಕ್ಷಾರ (Alkali)ದೊಂದಿಗೆ ಕೂಡಿಸಿದರೆ ಬಿರುಸಾಗಿರುವುದಾದರೂ ತೂಕದಲ್ಲಿ ?ನೇ ಅಂಶದಷ್ಟು ಕಡಿಮೆಯಾಗುವುದೆಂತಲೂ ಕಂಡುಬಂದಿತು ಯಾವ ಪದಾರ್ಥವನ್ನು ಅದರೊಂದಿಗಿಟ್ಟರೂ ಆ ಪದಾರ್ಥದ ಭಾರವು ಕಡಿಮೆಯಾಗುವುದು ಆ ಧಾತುವಿನ ಬಹು ವಿಶೇಷವಾದ ಗುಣವಾಗಿದೆ.

ಪತ್ರವ್ಯವಹಾರ.

ಸ್ವಾಮಿ,

ವಿದ್ಯಾಭ್ಯಾಸದ ಬಗ್ಗೆ ಶಾಲೆಗೆ ಹೋಗುವ ಹುಡುಗರು ಹಣ ಸಹಾಯದ ಬಗ್ಗೆ ಮನೆಮನೆ ಬೇಡಲಿಕ್ಕೆ ಬರುವುದು ದಿನೇದಿನೇ ಹೆಚ್ಚುತ್ತಲೇ ಬರುತ್ತದೆ. ಕೆಲವು ತಿಂಗಳ ಮೊದಲು ಕಾಲೇಜಿನ ಒಬ್ಬ ಹುಡುಗನು ಒಬ್ಬ ಪ್ರೊಫೆಸರರ ಸರ್ಟಿಫಿಕೇಟು ಕೈಯಲ್ಲಿ ಹಿಡಕೊಂಡು ನನ್ನಲ್ಲಿಗೆ ಹಣಸಹಾಯದ ಬಗ್ಗೆ ಬಂದನು. ಸರ್ಟಿಫಿಕೇಟಿನಲ್ಲಿ "ಈ ಹುಡುಗನು ಬಹಳ ಚುರುಕು ಬುದ್ಧಿಯುಳ್ಳವನು, ವಿದ್ಯೆಯನ್ನು ಹೊಂದಲಿಕ್ಕೆ ಬಹಳ ಯೋಗ್ಯನು, ಪರಂತು ಶಾಲಾ ಫೀಸು ಕೊಡುವುದಕ್ಕೂ ಪೋಶಾಕು ಮತ್ತು ಪುಸ್ತಕಗಳ ಬಗ್ಗೆ ಖರ್ಚುಮಾಡುವುದಕ್ಕೂ ಉಪಾಯವಿಲ್ಲದ ದರಿದ್ರಿಯಾಗಿರುತ್ತಾನೆ" ಎಂತ ಬರೆದಿತ್ತು. ಕೆಲವು ಬ್ರಾಹ್ಮಣ ವಿಧವೆಯರು ಶಾಲೆಗೆ ಹೋಗುವ ಪ್ರಾಯದ ಮಕ್ಕಳನ್ನು ವಿದ್ಯಾಭ್ಯಾಸದ ಬಗ್ಗೆಂತ ಬೇಡುವುದಕ್ಕೆ ಕಳುಹಿಸುತ್ತಾರೆ. ಹೆಂಡತಿಯನ್ನು ಕಳಕೊಂಡ ಇನ್ನು ಕೆಲವರು ತಾಯಿ ಇಲ್ಲದ ತಮ್ಮ ಗಂಡುಮಕ್ಕಳನ್ನು ಬೇಡುವುದಕ್ಕೆ ಕಳುಹಿಸುತ್ತಾರೆ ಹುಡುಗರು ವಿದ್ಯೆ ಹೊಂದುವುದಕ್ಕೆ ಯೋಗ್ಯರಾದರೆ ಶಾಲಾ ಉಪಾಧ್ಯಾಯರು ಅಥವಾ ಪ್ರೊಫೆಸ್ಸರರು ಅಂತಹ ಅನಾಥ ಹುಡುಗರ ಬಗ್ಗೆ ತಾವೇ ಏಕೆ ಯಾವುದಾದರೂ ಏರ್ಪಾಟು ಮಾಡಕೂಡದು? ಮಕ್ಕಳನ್ನು ಬೇಡುವುದಕ್ಕೆ ಕಳುಹಿಸುವುದಕ್ಕಿಂತಲೂ, ವಿಧವೆ ತಾಯಂದಿರು ಅಥವಾ ವಿಧುರ ತಂದೆ ಏಕೆ ಸಹಾಯ ಬೇಡುವುದಕ್ಕೆ ಹೋಗಕೂಡದು?

ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಉಪಯೋಗಿಸುವ ಸಮಯವನ್ನು ಬೇಡುವ ಕೆಲಸಕ್ಕೆ ಹಾಕುವುದೂ, ಬೇಡಲಿಕ್ಕೆ ಹೋದ ಕೆಲವು ಕಡೆಗಳಲ್ಲಿ ಹಣ ಸಿಕ್ಕಿದರೂ ಕೆಲವು ಕಡೆಯಲ್ಲಿ "ಛೀ ಥೂ" ಅನ್ನಿಸಿಕೊಳ್ಳುವುದೂ ಈ ಬಾಲಕರ ಮುಂದಿನ ಅಭಿವೃದ್ಧಿಗೆ ಕ್ಷೇಮಕರವೋ? ವಾಚಕರೇ ವಿವೇಚಿಸಿ ನೋಡಲಿ.

ತಾ 6-3-16. ಇತಿ ಸ್ವಾಭಿಮಾನವ ಕಳಕೊಂಡ ಭಿಕಾರಿ

ಅಯ್ಯಾ ಪತ್ರಕರ್ತರೇ,

ಮುನ್ಸಿಪಾಲಿಟಿಗಳ ಮಾರ್ಕೆಟುಗಳಲ್ಲಿ ಸೆನಿಟರಿ ತರ್ಬೀತು ಹೊಂದಿದ್ದವರನ್ನೇ ಫೂಡ್ ಇನ್ಸ್‌ಪೆಕ್ಟರರಾಗಿ ನೇಮಿಸಬೇಕೆಂಬದಾಗಿ ಸರಕಾರದವರ ಹುಕುಂ ಇದೆ ಎಂಬದಾಗಿ ಕೇಳಿಬಲ್ಲೆ ಸರಕಾರದ ಈ ಆಜ್ಞೆಯು ಸ್ತುತ್ಯವಾದದ್ದೇ ಸೈ. ಆದರೆ ಎಲ್ಲಾ ಮುನ್ಸಿಪಾಲಿಟಿಗಳಲ್ಲಿಯೂ ಸರಕಾರದವರ ಈ ಆಜ್ಞೆಯು ಜಾರಿಗೆ ಬಂದಿರುವದೋ ಏನೋ ಎಂಬದು ಮಾತ್ರ ಪ್ರಶ್ನಾಸ್ಪದವಾಗಿದೆ. ಹೇಗೂ ಇರಲಿ; ಜನರ ಆರೋಗ್ಯವು ಪಟ್ಟಣದ ಮಾರ್ಕೆಟುಗಳ ಸ್ಥಿತಿಗತಿಯ ಮೇಲೆ ಹೊಂದಿಕೊಂಡಿರುತ್ತದೆ ಮಾರ್ಕೆಟಿಗೆ ಮಾರಾಟಕ್ಕೆ ಬರುವಂಥಾ ಕಾಯಿಪಲ್ಯ, ಮೀನು, ಮಾಂಸ ಇತ್ಯಾದಿ ಜನಸಾಮಾನ್ಯರ ಆಹಾರ ಪದಾರ್ಥಗಳು ಒಳ್ಳೇದಾಗಿದ್ದರೆನೇ ಜನರ ಆರೋಗ್ಯವು ಒಳ್ಳೇದಾಗಿದ್ದೀತು. ಇಂಥಾ ಆಹಾರ ಪದಾರ್ಥಗಳು ಒಳ್ಳೇದೋ ಕೆಟ್ಟದೋ ಎಂಬ ಪರೀಕ್ಷೆ ಮಾಡುವ ಭಾರವು ಫೂಡ್ ಇನ್ಸ್‌ಪೆಕ್ಟರರ ಮೇಲೆ ಹೊಂದಿಕೊಂಡಿರುತ್ತದೆ ಆದರೆ ಫೂಡ್ ಇನ್ಸ್‌ಪೆಕ್ಟರರು ಸೆನಿಟರಿ ತರ್ಬೀತು ಹೊಂದಿದವರಾಗಿದ್ದರೆ ತಾನೇ ಹೇ! ಈ ತಾರತಮ್ಯವನ್ನು ಕಂಡುಹಿಡಿಯಬಲ್ಲರು? ಒಂದು ಪಟ್ಟಣದ ಜನರ ಆರೋಗ್ಯವು ಒಳ್ಳೇದಿದ್ದರೆನೇ ಪಟ್ಟಣವು ಅಭಿವೃದ್ಧಿಯನ್ನು ಹೊಂದೀತು ಎಂಬದು ಸರಕಾರದವರಿಗೆ ಚೆನ್ನಾಗಿ ತಿಳಿದಿದೆ. ಆದುದರಿಂದಲೇ ಜನರ ಆರೋಗ್ಯ ಬಗ್ಗೆ ಸರಕಾರದವರು ವರ್ಷ ಒಂದಕ್ಕೆ ಸಾವಿರಾರು ರೂಪಾಯಿಗಳ ಖರ್ಚು ಮಾಡತ್ತಲಿರುವರು. ಸೆನಿಟರಿ ಇನ್ಸ್‌ಪೆಕ್ಟರರ ಸಂಖ್ಯೆಯನ್ನು ಹೆಚ್ಚಿಸಿರುವರು. ತರ್ಬೀತುಹೊಂದಿದ ಇನ್ಸ್‌ಪೆಕ್ಟರರೇ ಸಂಸ್ಥಾನದ ಮುನ್ಸಿಪಾಲಿಟಿಗಳಲ್ಲಿ ಫೂಡ್ ಇನ್ಸ್‌ಪೆಕ್ಟರರಾಗಿರಬೇಕೆಂಬ ಹುಕುಂ ಮಾಡಿರುವರು ಆದರೆ ಎಲ್ಲಾ ಮುನ್ಸಿಪಾಲಿಟಿಗಳಲ್ಲಿಯೂ ಸರಕಾರದವರ ಈ ಆಜ್ಞೆಯು ಜಾರಿಗೆ ಬಂದಿರುವದೋ? ಈ ಆಜ್ಞೆಯು ಇನ್ನೂ ಜಾರಿಗೆ ಬರಲಿಲ್ಲವಾದರೆ ಯಾಕೆ? ಸರಕಾರದವರ ಈ ಹೊಸ ಹುಕುಂ ಜಾರಿಗೆ ಬಂದು ಎಷ್ಟು ವರ್ಷಗಳು ಕಳೆದವು? ಮಾರ್ಕೆಟುಗಳ ಬಗ್ಗೆ ಬೇಕಾದ ಸೆನಿಟರಿ ಫೂಡ್ ಇನ್ಸ್‌ಪೆಕ್ಟರರುಗಳು ಸಿಕ್ಕುವದಿಲ್ಲವೋ? ಸಂಸ್ಥಾನದ ಯಾವ ಯಾವ ಮುನ್ಸಿಪಾಲಿಟಿಯ ಮಾರ್ಕೆಟುಗಳಲ್ಲಿ ಸೆನಿಟರಿ ತರ್ಬೀತು ಹೊಂದದ ಫೂಡ್ ಇನ್ಸ್‌ಪೆಕ್ಟರು ಎಷ್ಟು ಕಾಲದಿಂದ ಈ ಕೆಲಸ ನೋಡುತ್ತಿರುವರು ಎಂಬಿತ್ಯಾದಿ ವಿಚಾರವನ್ನು ಬಲ್ಲವರ್ಯಾರೂ ತಿಳಿಸುತ್ತಿದ್ದರೆ ಉಪಕಾರವಿತ್ತು.

ಉತ್ತರಾಭಿಲಾಷಿ.

ಯುದ್ಧ ಸಮಾಚಾರ.

ತಾ. ೧ನೇ ಮಾರ್ಚ.

ವೆರ್ಡಾನಿನ ಉತ್ತರದಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ. ಪೊವ್ರೆಗುಡ್ಡದ ಮೇಲೆ ಜರ್ಮನರು ಪುನಃ ಅಭಿಯೋಗ ಮಾಡಲಿಲ್ಲ. ಪೊವ್ರೆಯಲ್ಲಿಯೂ ಕಠಿಣ ಕಾಳಗ ನಡೆಯುತ್ತಿದೆ. ಎಕ್ಸ್ ಎಂಬಲ್ಲಿಯ ಕೈಲ್ಸಿ ಸ್ಟೇಶನನ್ನು ಜರ್ಮನರು ಒಮ್ಮೆ ಸ್ವಾಧೀನ ಮಾಡಿಕೊಂಡರು ಆದರೆ ಫ್ರೆಂಚರು ಅದನ್ನು ಪುನಃ ಹಿಂದಕ್ಕೆ ಪಡಕೊಂಡರು ಇತರ ಕಡೆಯಲ್ಲಿಯೂ ಮೇಲ್ಬಾಯಿದ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು.

ವೆರ್ಡಾನಿನಲ್ಲಿ ಈಚೆಗೆ ನಡೆದ ಕದನದಲ್ಲಿ ಜರ್ಮನರು ಹಿಡಿದ ಫ್ರೆಂಚ ಸೇನಿಕರ ಸಂಖ್ಯೆ ೫ ಸಾವಿರ ಸಹಾ ಇಲ್ಲ. ಆದರೆ ಜರ್ಮನರು ೧೦,೦೦೦ ಫ್ರೆಂಚರನ್ನು ಸೆರೆಹಿಡಿದಿದ್ದೇವೆಂದು ಪ್ರಕಟಿಸಿರುವರು

ಡುರಾಜ್ಜೋ ಪಟ್ಟಣವನ್ನು ಆಸ್ಟ್ರಿಯನರು ಸ್ವಾಧೀನ ಮಾಡಿಕೊಳ್ಳುವ ಮೊದಲೇ ಅಲ್ಬಾನಿಯದಲ್ಲಿದ್ದ ಇಟೆಲಿಯನ್ ಮತ್ತು ಅಲ್ಬಾನಿಯ ಸೇನೆಯೂ ಪ್ರಜಾಜನರಲ್ಲಿ ೩೦೦,೦೦೦ ಮಂದಿಯೂ ಪಟ್ಟಣವನ್ನು ಬಿಟ್ಟು ಹೋಗಿದ್ದರು.

ಈಜಿಪ್ಟಿನ ಅಗ್ಗಾಗಿಯ ಎಂಬಲ್ಲಿ ಶತ್ರುಗಳಿಗೂ ನಮ್ಮವರಿಗೂ ಕದನ ನಡೆದು ಶತ್ರುಗಳು ಪೂರ್ಣವಾಗಿ ಸೋತು ಹೋಗಿರುವರು ತುರ್ಕಿ ಮಂತ್ರಿ ಎನವರ್ ಪಾಶರ ಸೋದರನಾದ ಮುರಿಟೀ ಎಂಬವನು ಈ ಶತ್ರುಸೇನೆಯ ಸೇನಾಪತಿಯಾಗಿದ್ದನು. ಮುರಿಟೀ ಕದನದಲ್ಲಿ ಮಡಿದನು. ಲೆಫ್ಟನೆಂಟ ಗಾಫರ್ ಎಂಬವನು ಗಾಯ ಹೊಂದಿ ಸೆರೆ ಬಿದ್ದಿರುವನು ಶತ್ರುಗಳಲ್ಲಿ ೩೦೦ ಮಂದಿ ರಣರಂಗದಲ್ಲಿ ಸತ್ತು ಬಿದ್ದಿದ್ದರು. ಶತ್ರುಗಳ ಒಂದು ಯಂತ್ರಚಾಲಿತ ಫಿರಂಗಿಯು ನಮ್ಮವರಿಗೆ ಸಿಕ್ಕಿರುತ್ತದೆ.

ಎಜ್ಞರಮ್ ರುಶ್ಯನರ ಸ್ವಾಧೀನವಾದನಂತರ ಅರ್ಮೀನಿಯದ ೧೩ ಸಾವಿರ ಮಂದಿಯನ್ನು ತುರ್ಕರು ಕೊಲೆ ಮಾಡಿದರೆಂಬ ವಾರ್ತೆ ಬಂದದೆ.

ತಾ. ೩ನೇ ಮಾರ್ಚ.

ಸಲೋನಿಕಕ್ಕೆ ಫ್ರೆಂಚರ ಸೇನಿಕರನ್ನು ಕೊಂಡು ಹೋಗುತ್ತಿದ್ದ "ಪ್ರೊವೆನ್ಸ್" ಎಂಬ ಕ್ರೂಜರ್ ನಾವೆಯನ್ನು ಸೆಂಟ್ರಲ್ ಮೆಡಿಟರೇನಿಯನ್ ಸಮುದ್ರದಲ್ಲಿ ಶತ್ರುಗಳ ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು. ಈ ಹಡಗದಲ್ಲಿ ೧೮೦೦ ಮಂದಿ ಇದ್ದರು" ೬೯೬ ಮಂದಿ ರಕ್ಷಿಸಲ್ಪಟ್ಟಿರುವರು. ಹತಶೇಷರಲ್ಲಿ ೩೯೬ ಮಂದಿಯನ್ನು ಬ್ರಿಟಿಷ ನಾವೆಯು ಮಾಲ್ಟದಲ್ಲಿ ತಂದಿರಿಸಿರುವದು. "ಪ್ರೊವೆನ್ಸ್" ಹಡಗವು ೧೪ ನಿಮಿಷದೊಳಗೆ ಮುಳುಗಿ ಹೋಗಿರುವದು. ಒಟ್ಟಿಗೆ ೮೭೦ ಮಂದಿ ರಕ್ಷಿಸಲ್ಪಟ್ಟಿರುವರು ಎಂತ ಪಾರಿಸ್ ನಗರದಲ್ಲಿ ಪ್ರಕಟವಾಗಿದೆ.

ಹಿಂದೂಸ್ಥಾನಕ್ಕೆ ಬರುತ್ತಿದ್ದ ಪಿ. ಎಂಡ್ ಒ ಕಂಪೆನಿಯ ಮುಳುಗಿ ಹೋದ "ಮಲೋಜ" ಹಡಗದಲ್ಲಿದ್ದ ೭೩ ಪ್ರಯಾಣಿಕರೂ ೨೩೩ ನಾವಿಕರೂ ರಕ್ಷಣೆ ಹೊಂದಿರುವರು ೪೯ ಪ್ರಯಾಣಿಕರೂ ೧೦೬ ನಾವಿಕರೂ ಕಾಣೆಯಾಗಿರುವರು.

ಮೆಸೊಪಟಾಮಿಯದಲ್ಲಿ ಜನರಲ್ ಎಲ್ಮಯರರ ಸೇನೆಯು ಟೀಗ್ರಿಸ್ ನದಿಯ ಎಡದಡದಲ್ಲಿದ್ದ ಶತ್ರುಗಳ ಪಾಳೆಯದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿತು. ಶತ್ರುಗಳು ಫಕ್ಕನೇ ಆಶ್ಚರ್ಯಭರಿತರಾಗಿ ಏನನ್ನೂ ಮಾಡಲಾರದವರಾದರು. ಶತ್ರುಸೇನೆಯಲ್ಲಿ ವಿಶೇಷ ನಷ್ಟವಾಗಿರುವದು. ನಮ್ಮವರ ವಾಯುನಾವಿಕರು ಶತ್ರುಗಳ ಒಂದು ಪಾಳೆಯವನ್ನು ಕಂಡು ಹಿಡಿದು ತಿಳಿಸಿದ್ದರಿಂದ ನಮ್ಮ ಸೇನಿಕರು ಪಾಳೆಯದ ಮೇಲೆ ನುಗ್ಗಿ ಹೋಗಿ ಶತ್ರುಗಳನ್ನು ಸೋಲಿಸಿ ಹಿಂದಟ್ಟಿದರು. ಹನ್ನಾ ಎಂಬ ಸ್ಥಳದ ಸಮೀಪವಿರುವ ಶತ್ರುಗಳ ಪಾಳೆಯದ ಮೇಲೆ ನಮ್ಮ ಸೇನಿಕರು ಗುಂಡು ಹಾರಿಸ ಪ್ರಾರಂಭಿಸಿದ್ದಾರೆ. ಬಸ್ರಾದಿಂದ ಎರಡು ವಾಯುನಾವೆಗಳು ಎಲ್ಮಾಯರ್ಸರ ಸೇನೆಗೆ ಹೋಗಿ ಕೂಡಿರುವವು.

ಬೆಲ್ಜಿಯಂ ರಣರಂಗದಲ್ಲಿ ಬಿಮ್ಸ್ಟರ್ಸ್, ಎಕೂಲ್ಲ, ಮತ್ತು ಪ್ರೊಮೆಲ್ಲೆಸ್ ಎಂಬೀ ಸ್ಥಳದಲ್ಲಿದ್ದ ಜರ್ಮನರ ಕಂದಕಗಳ ಮೇಲೆ ನಮ್ಮವರ ತೋಪುಗಳು ಗುಂಡು ಹಾರಿಸುತ್ತಲಿವೆ. ವೈಪ್ರೆಸಿನಲ್ಲಿಯೂ ತೋಪು ಕಾಳಗ ನಡೆಯುತ್ತಿದೆ. ಜರ್ಮನರ ಎರಡು ವಿಮಾನಗಳನ್ನು ನಮ್ಮವರು ಕೆಳದೂಡಿರುವರು.

ವೆರ್ಡಾನಿನಲ್ಲಿ ಫಿರಂಗಿ ಕಾಳಗವು ನಡೆಯುತ್ತಿದೆ. ಡಾಮೊಂಟ್ ಗ್ರಾಮದಲ್ಲಿ ಫ್ರೆಂಚ ಸೇನಿಕರಿಗೂ ಶತ್ರು ಸೇನಿಕರಿಗೂ ಕೈಕಾಳಗ ನಡೆಯಿತು ಫ್ರೆಂಚ ಸೇನಿಕರು ಶತ್ರುಗಳನ್ನು ಹಿಂದಕ್ಕೆ ಓಡಿಸಿದರು ವೆರ್ಡಾನಿನ ಉತ್ತರ ಕಡೆಯಲ್ಲಿ ತೋಪುಗಳ ಚಟುವಟಿಕೆಯು ಹಿಂದಿನ ದಿನದಷ್ಟು ಇಲ್ಲ ಪೊವ್ರೆಯಲ್ಲಿ ಅಭಿಯೋಗ ಮಾಡಲು ಪ್ರಯತ್ನಿಸಿದ ಜರ್ಮನರನ್ನು ಫ್ರೆಂಚರ ತೋಪುಗಳು ತಡೆದಿರುವವು

ವೆರ್ಡಾನಿನ ಮುಖ್ಯ ರಣರಂಗವು ವೆರ್ಡನ್ ಪಟ್ಟಣದ ೫ ಮೈಲು ಉತ್ತರದಲ್ಲಿರುವ ಗುಡ್ಡಗಳಾಗಿರುವವು ಮುಖ್ಯ ಶಿಖರವು ಡೋವಾಮೊಂಟ್ ಎಂಬದಾಗಿದೆ, ಇದರ ಎತ್ತರವು ೧೩೦೦ ಅಡಿ, ಮತ್ತೊಂದು ಟಾಲೋಕ್ರೆಸ್ಟ್ ಇದರ ಎತ್ತರ ೮೦೦ ಅಡಿ ಪೊವ್ರೆರಿಜ್ಡ್ ಎಂಬ ಶಿಖರದ ಎತ್ತರ ೧೦೦೦ ಅಡಿ ಒಂದು ವಾರ ನಡೆದ ಕದನದಲ್ಲಿ ಫ್ರೆಂಚರ ಸೇನಾ ನೆಲೆಯು ಸುಮಾರ ೩ ಮೈಲು ಹಿಂದಕ್ಕೆ ಸರಿದಿರುವದು ಫ್ರೆಂಚರು ಕಳಕೊಂಡ ಈ ಸ್ಥಳವು ಅಷ್ಟೊಂದು ಮುಖ್ಯವಾದುದಲ್ಲ ಸ್ಥಳವನ್ನು ಕಳಕೊಂಡರೂ ಫ್ರೆಂಚರಿಗೆ ಸೇನೆಯು ನಷ್ಟವಾಗಲಿಲ್ಲ ವೆರ್ಡಾನಿನ ಕಾಳಗದಲ್ಲಿ ಜರ್ಮನರಿಗೆ ಆದ ಸೇನಿಕರ ನಷ್ಟವು ಅಪರಿಮಿತವಾಗಿದೆ ರಣರಂಗದಲ್ಲಿ ಸತ್ತು ಬಿದ್ದವರ ಜರ್ಮನ ಸೇನಿಕರ ಸಂಖ್ಯೆಯು ಸುಮಾರು ೩೦,೦೦೦-೪೫,೦೦೦ ಆಗಿರಬಹುದೆಂತ ಅಂದಾಜಾಗಿಯದೆ

ತಾ. ೪ನೇ ಮಾರ್ಚ.

ಇಂಗ್ಲಾಂಡಿನ ಆಗ್ನೇಯ ಕರಾವಳಿಯ ಮೇಲೆ ಜರ್ಮನರ ವಾಯುನಾವೆಯು ಹಾರಿ ಕೆಲವು ಬೊಂಬುಗಳನ್ನು ಹಾಕಿರುತ್ತದೆ ಸೇನಾ ಸಂಬಂಧವಾದ ಅಪಾಯ ಸಂಭವಿಸಲಿಲ್ಲ. ಒಂಭತ್ತು ತಿಂಗಳ ವಯಸ್ಸಿನ ಒಂದು ಮಗು ಮಾತ್ರ ಇದರಿಂದ ಹತವಾಗಿರುವದು ಎಂತ ವಾರ್ತೆ ಇದೆ

ವೈಪ್ರೆಸಿನ ಬಳಿ ಕಳದ ತಾ. ೧೪ರಲ್ಲಿ ಬ್ರಿಟಿಷರ ಕಳಕೊಂಡ ಕಂದಕಗಳನ್ನು ಪುನಃ ಜರ್ಮನರಿಂದ ಪಡಕೊಂಡಿರುತ್ತಾರೆ ಅನಂತರ ಶತ್ರುಗಳು ನಮ್ಮವರ ಮೇಲೆ ಹಲ್ಲಾ ಮಾಡಿ ಹಿಮ್ಮೆಟ್ಟಿದರು ೧೮೦ ಜರ್ಮನ ಸೇನಿಕರು (ಈ ಪೈಕಿ ೪ ಆಫೀಸರರು) ನಮ್ಮವರ ಸೆರೆಬಿದ್ದಿರುತ್ತಾರೆ ಉಭಯ ಕಡೆಗಳಲ್ಲಿಯೂ ತೋಪುಗಳ ಚಟುವಟಿಕೆಯು ವಿಶೇಷವಾಗಿರುವದು

ವೆರ್ಡನ್ ಪ್ರಾಂತ್ಯದಲ್ಲಿ ಕಾಲಾಳು ಸೇನೆಯ ಕದನ ನಡೆಯಲಿಲ್ಲ. ಜರ್ಮನರು ಮೊಲನ್‌ಕೋರ್ಟ ಮತ್ತು ಫೋರ್ಜೆಸ್, ಮ್ಯೂಸಿನ ಪೂರ್ವ ಮತ್ತು ಪಶ್ಚಿಮ ಕಡೆಗಳಲ್ಲಿ ತೋಪು ಹಾರಿಸುತ್ತಲಿದ್ದಾರೆ. ಪೊವ್ರೆಯಲ್ಲಿ ಫ್ರೆಂಚರ ತೋಪುಗಳು ಚಟುವಟಿಕೆಯಿಂದ ಗುಂಡು ಹಾರಿಸುತ್ತಲಿವೆ ರ್ಯಿಮ್ಸಿನ ಪೂರ್ವದಲ್ಲಿ ಮೇಲ್ಬಾಯಿದ ಜರ್ಮನರ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು ಲೊರೈನಿನಲ್ಲಿ ಶತ್ರುಗಳು ೪ ತಾಸಗಳ ವರೆಗೆ ಗುಂಡು ಹಾರಿಸಿದರು ಆದರೆ ಪೂರ್ಣವಾಗಿ ಸೋತು ಹೋದರು ವೆರ್ಡನ್ ಮತ್ತು ಪೊವ್ರೆಯಲ್ಲಿ ಪುನಃ ಕಠಿಣ ತೋಪು ಕಾಳಗವು ಪ್ರಾರಂಭವಾಗಿರುವದು. ಶತ್ರುಗಳು ಡೋವಾಮೊಂಟ್ ಪ್ರಾಂತ್ಯದ ಮೇಲೆ ಕಠಿಣವಾಗಿ ತೋಪು ಹಾರಿಸುತ್ತಲಿದ್ದಾರೆ ಶತ್ರುಗಳ ಕಾಲಾಳು ಸೇನಿಕರು ಮುಂದರಿದು ಫ್ರೆಂಚ ಸೇನಿಕರ ಮೇಲೆ ಅಭಿಯೋಗ ಮಾಡಿದರು ಆದರೆ ಹಿಮ್ಮೆಟ್ಟಿದರು ಫ್ರೆಂಚರ ವಾಯುನಾವೆಗಳು ಜರ್ಮನ ನೆಲೆಗಳ ಮೇಲೆ ಸಿಡಿಮದ್ದುಗಳನ್ನು ಹಾಕಿ ವಿಶೇಷ ನಷ್ಟಪಡಿಸಿರುವದು. ಫ್ರೆಂಚರ ಪ್ರೆಸಿಡೆಂಟ ಪೊಯಿನಕಾರೆಯವರು ವೆರ್ಡಾನಿಗೆ ಹೋಗಿರುತ್ತಾರೆ

ವೆರ್ಡಾನಿನಲ್ಲಿ ಜರ್ಮನರ ೧೩೫,೦೦೦ ಸೇನಿಕರ ನಷ್ಟವಾಗಿರುವರೆಂತ ಅಂದಾಜಾಗಿದೆ

ತುರ್ಕರು ಟ್ರೆಬಿಜೊಂಡನ್ನು ಬಿಟ್ಟುಹೋಗಿರುವರು

ಕರ್ಮಾನ್‌ಶಾ ಪ್ರಾಂತ್ಯದಲ್ಲಿ ರುಶ್ಯನರು ಶತ್ರುಗಳನ್ನು ಅಟ್ಟುತ್ತಿದ್ದಾರೆ

ತುರ್ಕರು ಎರ್ಜಿನ್ಝಾನ್ ಮತ್ತು ಬಿಟ್ಲಿಸ್ ಕಡೆಗೆ ಸರಿಯುತ್ತಿದ್ದಾರೆ

ರಿಗ್ಗಾ ಮತ್ತು ನಸಿಕ್ ಪ್ರಾಂತ್ಯದಲ್ಲಿ ಶತ್ರುಗಳ ವಾಯುನಾವೆಗಳು ಬೊಂಬುಗಳನ್ನು ಹಾಕುತ್ತಿವೆ ರುಶ್ಯನರು ನೊವೊಅಲೆಕ್ಸಾಂಡ್ರಾಪೊಸ್ಕಿನ ಮೇಲೆ ಗುಂಡು ಹಾರಿಸುತ್ತಲಿರುವರು. ಗೆಲೀಸಿಯದಲ್ಲಿ ಜರ್ಮನರು ಎರಡಾವರ್ತಿ ಮೇಲ್ಬಾಯಿದು ಹಿಮ್ಮೆಟ್ಟಿರುವರು.

ತಾ. ೬ ಮಾರ್ಚ.

ಪೂರ್ವ ಮೆಡಿಟರೇನಿಯದಲ್ಲಿ ಸಿಡಿಮದ್ದಿನ ಗಣೆಗಳನ್ನು ಹೆಕ್ಕತೆಗೆಯುವ ಕೆಲಸದಲ್ಲಿದ್ದ "ಪ್ರಿಮ್ಯೂಲ" ಎಂಬ ನಾವೆಯು ಶತ್ರುಗಳ ಜಲಾಂತರ್ಗಾಮಿ ನಾವೆಗೆ ಆಹುತಿಯಾಗಿರುವದು. ನಮ್ಮವರ ನಾವೆಯಲ್ಲಿದ್ದ ನಾವಿಕರಲ್ಲಿ ಮೂರುಮಂದಿಯ ಹೊರತು ಎಲ್ಲರೂ ರಕ್ಷಣೆಹೊಂದಿರುವರು. ಬ್ರಿಟಿಷರ "ಟಿಟೋನಿಯನ್" ಹಡಗವು ಮುಳುಗಿಸಲ್ಪಟ್ಟಿರುವದು. ನಾವಿಕರು ದಡಸೇರಿರುವರು.

ಜರ್ಮನರ "ಮೊವೆ" ಎಂಬ ಹಡಗವು ಮುಳುಗಿಸಿದ ಯಾ, ತಟಸ್ಥರಾಷ್ಟ್ರಗಳ ಬಂದರಗಳಿಗೆ ಕಳುಹಿಸಿದ ೧೫ ನಾವೆಗಳ ಹೆಸರುಗಳ ಪ್ರಕಟವಾಗಿರುವವು ಇವುಗಳಲ್ಲಿ "ಶೆಕ್ಸನ್ ಪ್ರಿನ್ಸ್" ಮತ್ತು ಫ್ರೆಂಚರ "ಮರೊನಿ" ಎಂಬ ಹಡಗಗಳು. ಹೊಸತಾಗಿ "ಮೊವೆ" ಹಡಗಕ್ಕೆ ತತ್ತಾದವುಗಳು ಅದಲ್ಲದೆ ಮೊವೆಹಡಗವು ಶತ್ರುಗಳ ಕರಾವಳಿಯಲ್ಲಿ ಸಿಡಿಮದ್ದಿನ ಗಣೆಗಳನ್ನು ಹಾಕಿ ಬಂದಿರುತ್ತದೆ ಬ್ರಿಟಿಷರ "ಕಿಂಗ್ ಎಡ್ವರ್ಡ VII" ಎಂಬ ಯುದ್ಧ ಹಡಗವು ಇಂಥಾ ಸಿಡಿಮದ್ದಿನ ಗಣೆಗಳಿಗೆ ತಾಗಿ ನಾಶವಾಗಿರುವದು.

ನಮ್ಮವರು ಶತ್ರುಗಳ ಸುಮಾರು ೩೦೦ ಗಜಗಳ ವರೆಗಿನ ಕಂದಕಗಳನ್ನು ಸ್ವಾಧೀನಮಾಡಿಕೊಂಡಿರುವರು ಶತ್ರುಗಳ ೫ ಆಫೀಸರರೂ ೩೪೯ ಸೇನಿಕರೂ ನಮ್ಮವರ ಸೆರೆಬಿದ್ದಿರುವರು ಕಳದ ರಾತ್ರಿ ನಮ್ಮವರು ಹೊಯೆನ್‌ಜೊಲರ್ನ್ ಎಂಬಲ್ಲಿ ಸಿಡಿಮದ್ದಿನ ೫ ಗಣೆಗಳನ್ನು ಹಾರಿಸಿರುತ್ತಾರೆ ಸಿಡಿಮದ್ದುಗಳನ್ನು ಹಾರಿಸಲು ಯತ್ನಿಸಿದ ಶತ್ರುಗಳನ್ನು ನಮ್ಮವರು ಅಟ್ಟಿರುತ್ತಾರೆ

ವೆರ್ಡಾನಿನ ಉತ್ತರದಲ್ಲಿ ತೋಪು ಕಾಳಗವು ನಡೆಯುತ್ತಿದೆ ಡೊವಾಮೊಂಟ್ ಪ್ರಾಂತ್ಯದಲ್ಲಿಯೂ ಕೋಟೆಯ ಉತ್ತರ ಪಶ್ಚಿಮದ ಗ್ರಾಮಗಳಲ್ಲಿಯೂ ಜರ್ಮನರ ಕಾಲಾಳ ಸೇನಿಕರ ಅತಿ ಘೋರವಾಗಿಯಿಂದ ಮೇಲ್ಬಾಯಿದ ಹಲವು ಸಾರಿ ಸೋತು ಹೋದರು. ಆದರೆ ಕಡೆಗೆ ಸ್ವಲ್ಪ ಮಂದರಿಯ ಶಕ್ತರಾದರು ಶತ್ರುಗಳು ಮೇಲ್ಬಾಯಿದ ಎಲ್ಲಾ ಸ್ಥಳಗಳಲ್ಲಿಯೂ ಫ್ರೆಂಚರು ಅವರ ಬಲವನ್ನು ಮುರಿದಿರುವರು. ಜರ್ಮನರು ಅವಸರದಿಂದ ಹಿಂದೆ ಓಡಿ ಹೋಗಿರುವರು ಅವರ ರಾಶಿ ರಾಶಿ ಹೆಣಗಳು ಬಾರ್ಬೆಡ್ ಸರಿಗೆಯಲ್ಲಿ ಸಿಕ್ಕಿಕೊಂಡಿರುತ್ತವೆ ಜರ್ಮನರು ರಾತ್ರೆಯೆಲ್ಲಾ ಪೊವ್ರೆಯಮೇಲೆ ತೋಪುಗಳನ್ನು ಹಾರಿಸಿರುತ್ತಾರೆ ಆದರೆ ನಮ್ಮವರ ತೋಪುಗಳು ಅವನ್ನು ತಡೆಯುತ್ತಿರುತ್ತವೆ ಜರ್ಮನರ ತೋಪುಗಳು ಮೆಲನ್‌ಕೋರ್ಟ ಮತ್ತು ಹಾರ್‌ಕೋರ್ಟನಲ್ಲಿ ಬಹಳ ಚಟುವಟಿಕೆಯಿಂದ ಇದೆ ಲೊರೈನಿನಲ್ಲಿ ಮೇಲ್ಬಾಯಿದ ಶತ್ರುಗಳನ್ನು ಫ್ರೆಂಚರು ದಿಕ್ಪಾಲು ಮಾಡಿರುತ್ತಾರೆ ವೆರ್ಡಾನಿನ ಎಲ್ಲಾ ಕಡೆಗಳಲ್ಲಿ ಶತ್ರುಗಳು ಎಡೆಬಿಡದೆ ತೋಪುಗಳನ್ನು ಹಾರಿಸಿದ್ದಾರಲ್ಲದೆ ಕಾಲಾಳು ಸೇನೆಯನ್ನು ಮುಂದಕ್ಕೆ ಕಳುಹಿಸಿರುವದಿಲ್ಲ ವೆರ್ಡಾನಿನ ಡೊವಾಮೊಂಟ್ ಪ್ರಾಂತ್ಯದ ಗ್ರಾಮವನ್ನು ಪಡಕೊಳ್ಳುವ ಬಗ್ಗೆ ಜೀವದ ಮರವೆ ಇಲ್ಲದೆ ಜರ್ಮನರು ಕಾದಾಡುತ್ತಿರುವರು ಫ್ರೆಂಚರು ಜರ್ಮನರಿಗೆ ಯಾವ ವಿಧದಲ್ಲಿಯೂ ಬಿಟ್ಟುಕೊಟ್ಟಿರುವದಿಲ್ಲ ಸಾಯಂಕಾಲ ಹೊತ್ತಿಗೆ ಜರ್ಮನರು ಡೊವಾಮೊಂಟಿನಿಂದ ಬೋಪೆಪತ್ರೆಮೆಂಟ್ ಎಂಬ ಸ್ಥಳದ ವರೆಗೆ ಫ್ರೆಂಚರ ಮೇಲೆ ಹಲ್ಲಾ ಮಾಡಿದರು, ಆದರೆ ಫ್ರೆಂಚರು ಅವರನ್ನು ಹಿಂದಕ್ಕೆ ಓಡಿಸಿದರು ಡೊವಾಮೊಂಟಿನಲ್ಲಿ ಜರ್ಮನರು ಜೀವದ ಮರವೆ ಇಲ್ಲದೆ ಅಭಿಯೋಗ ಮಾಡಿದರೂ ಫ್ರೆಂಚರು ಆ ಸ್ಥಳವನ್ನು ಅವರಿಗೆ ಬಿಟ್ಟುಕೊಡುವ ಕುರುಹುಗಳೇನೂ ಈ ವರೆಗೆ ತೋರಿಬರಲಿಲ್ಲ ಜರ್ಮನರು ವೆರ್ಡಾನಿನ ಡೋವಾಮೊಂಟನ್ನು ಸ್ವಾಧೀನ ಮಾಡಿಕೊಳ್ಳುವ ಉದ್ದೇಶದಿಂದ ಎಡೆಬಿಡದೆ ತೋಪುಗಳನ್ನು ಹಾರಿಸುತ್ತಿದ್ದರೂ ಶೂರರಾದ ಫ್ರೆಂಚರ ಮುಂದೆ ಬಲಸಾಲದವರಾಗಿರುವರು. ಜರ್ಮನರಿಗೆ ಇಲ್ಲಿ ಉಂಟಾದ ನಷ್ಟವು ಅಪರಿಮಿತವಾಗಿರುವದು.

ಕೈಸರರು ಜರ್ಮನಿಗೆ ಹಿಂದೆರಳಿಹೋಗಿರುವರೆಂಬ ವಾರ್ತೆ ಇದೆ

ರುಶ್ಯನರು ಬಿಟ್ಲಿಸ್ ಪಟ್ಟಣವನ್ನು ಹಲ್ಲಾಮಾಡಿ ೬ ಫಿರಂಗಿಗಳನ್ನು ಹಿಡಿದಿರುವರು ಇಲ್‌ಕಸ್ಟನಲ್ಲಿ ರುಶ್ಯನರು ೧೪ ಸಿಡಿಮದ್ದಿನ ಗಣೆಗಳನ್ನು ಹಾರಿಸಿರುವರು.

ಸಲೋನಿಕದಲ್ಲಿದ್ದ ಫ್ರೆಂಚರ ವಾಯುನಾವೆಗಳು ಸ್ಮಿರ್ನಕ್ಕೆ ಹೋಗಿ ಸಿಡಿಮದ್ದುಗಳನ್ನು ಹಾಕಿ ಸುರಕ್ಷಿತವಾಗಿ ಹಿಂದೆ ಬಂದಿರವದು.

ಕನ್‌ಸ್ಟಾಂಟಿನೋಪಲಿನಲ್ಲಿ ಜರ್ಮನರಿಗೆ ವಿರೋಧವಾದ ಸಂಸ್ಥೆಗಳು ಏರ್ಪಟ್ಟಿರುವವು. ಪ್ರಿನ್ಸ್ ಯೂಸಫ್ ಎಜಡಿನರವರ ಯುದ್ಧಕ್ಕೆ ವಿರೋಧವಾದ ಒಂದು ಪಕ್ಷವನ್ನು ಸೇರಿ, ಜರ್ಮನರನ್ನು ತೊರೆದು ಬಿಡಬೇಕಾಗಿಯೂ, ಈಗಡಿರುವ ಮಂತ್ರಿ ಸಭೆಯನ್ನು ವಿಸರ್ಜಿಸಬೇಕೆಂತಲೂ ಸುಲ್ತಾನರನ್ನು ಆಗ್ರಹ ಬಲವಂತಪಡಿಸಿದ್ದರು. ಕೆಲವು ದಿವಸಗಳ ಹಿಂದೆ ಪ್ರಿನ್ಸರು ಸುಲ್ತಾನರ ಬಳಿಗೆ ಹೋಗಿ ಈ ಬಗ್ಗೆ ಒಂದು [illegible]

ದಿಸಬೇಕೆಂದು ಬಯಸಿಕೊಂಡಿದ್ದರು. ಪ್ರಿನ್ಸರು ಸತ್ತುಹೋದರೆಂಬ ವಾರ್ತೆ ಕೇಳಿದಾಕ್ಷಣ ಸುಲ್ತಾನರು ಎನವರ್‌ಪಾಶರನ್ನೂ, ಜರ್ಮನ ರಾಯಭಾರಿಯನ್ನೂ ತನ್ನ ಬಳಿಗೆ ಬರಗೊಡಲಿಲ್ಲ ಸುಲ್ತಾನರು ಹೀಗೆ ಮಾಡಿದ್ದೇ ಆದರೆ ಸಿಂಹಾಸನದಿಂದ ತಳ್ಳಿ ಹಾಕುವೆವೆಂದು ಜರ್ಮನ್ ರಾಯಭಾರಿಯು ಸುಲ್ತಾನರನ್ನು ಹೆದರಿಸಿದ ನಂತರ ಸುಲ್ತಾನರು ಅವರು ಹೇಳಿದ ಹಾಗೆ ಕೇಳಲು ಪ್ರಾರಂಭ ಮಾಡಿದರು. ಪ್ರಿನ್ಸ್ ಯೂಸಫ್‌ರವರು ಸ್ವಘಾತ ಮಾಡಿಕೊಂಡರೆಂಬ ವಾರ್ತೆಯನ್ನು ಕನ್‌ಸ್ತಂತಿನೋಪಲಿನಲ್ಲಿ ಯಾರೂ ನಂಬುವದಿಲ್ಲ ಪ್ರಿನ್ಸರ ಮರಣದ ನಂತರ ಪ್ರಿನ್ಸರ ಪಕ್ಷದ ೧೭ ಮಂದಿಯನ್ನು ಬಂದಿಖಾನೆಯಲ್ಲಿ ಹಾಕಿದರು ೩ ಮಂದಿಯನ್ನು ಕೊಂದು ಹಾಕಿದರು ಟರ್ಕಿ ಸೇನೆಯಲ್ಲಿಯೇ ಎರಡು ಪಕ್ಷದವರಿರುವರು ಒಂದು ಪಕ್ಷದವರು ಜರ್ಮನರ ಪರವಾಗಿರುವರು. ಮತ್ತೊಂದು ಪಕ್ಷದವರು ಯುದ್ಧಕ್ಕೆ ವಿರೋಧ ಮತವುಳ್ಳವರು ಎನವರ್ ಪಾಶಾ ಮತ್ತು ತಾಲತ್‌ಬೇರವರು ಹಿಂದಿನಂತೆ ಜನರ ಪ್ರೀತಿ ಮನ್ನಣೆಗೆ ಪಾತ್ರರಾಗಿಲ್ಲ ಈಚೆಗೆ ಟಾಲತ್‌ಬೇರವರ ಮೇಲೆ ಯಾರೋ ೩ ಗುಂಡು ಹಾರಿಸಿದರು ಅದು ತಪ್ಪಿ ಹೋಯಿತು ಈಗ ತಾಲತ್‌ಬೇರವರು ರಕ್ಷಾಸೇನೆಯಿಲ್ಲದೆ ಹೊರಬರುವದಿಲ್ಲ ಎಂಬಿತ್ಯಾದಿ ವರ್ತಮಾನವು ಈಜಿಪ್ತಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ತಾ ೭ನೇ ಮಾರ್ಚ

ಜರ್ಮನರ ೩ ಜೆಪಲಿನ್ ನಾವೆಗಳು ಇಂಗ್ಲಾಂಡಿನ ಉತ್ತರ ಪೂರ್ವ ತೀರಾವಳಿಯಲ್ಲಿ ದಾಳಿ ಮಾಡಿರುವವು ಕೆಲವು ಸಿಡಿಮದ್ದುಗಳು ಸಮುದ್ರ ತೀರಾವಳಿಯಲ್ಲಿ ಬಿದ್ದಿರುತ್ತವೆ ಈ ನಾವೆಗಳು ಯೋರ್ಕ್‌ಶಯರ್, ಲಿಂಕೊನ್‌ಶಯರ್ ರಟ್‌ಲೆಂಡ್, ಹಂಟಿಂಗ್ಟನ್, ಕೇಂಬ್ರಿಜ್‌ಶಯರ್ ನೊರ್‌ಫೋಕ್ ಎಸೆಕ್ಸ್ ಮತ್ತು ಕೆಂಟ್ ಎಂಬೀ ಸ್ಥಳದ ಮೇಲೆ ಹಾರಿ ಸುಮಾರು ೪೦ ಸಿಡಿಮದ್ದುಗಳನ್ನು ಬಿಸಾಡಿರುತ್ತವೆ ೩ ಗಂಡಸರು, ೪ ಹೆಂಗಸರು ಮತ್ತು ೫ ಮಕ್ಕಳು ಹತರಾಗಿರುವರು ೩೩ ಮಂದಿ ಗಾಯವೊಡೆದಿರುವರು ಮನೆಗಳು ೨ ಮಾಳಿಗೆಗಳು, ಒಂದು ಆಫೀಸು, ಒಂದು ಸರಕಾರ ಮಂದಿರ ಕೆಲವು ಅಂಗಡಿಗಳಿಗೆ ಹಾನಿಯಾಗಿರುತ್ತದೆ

ಬ್ರಿಟಿಷರ "ರೊಕ್‌ನೇ" ಎಂಬ ಹಡಗವು ಮುಣುಗಿಸಲ್ಪಟ್ಟಿರುವದು

ಬ್ರಿಟಿಷ ಸರಕಾರದ ಸ್ವಾಧೀನದಲ್ಲಿ ಈಗ ಯುದ್ಧ ಸಾಮಾಗ್ರಿಗಳನ್ನು ಮಾಡುವ ೩೦೫೨ ಕಾರ್ಖಾನೆಗಳಿವೆಂತ ಮಿ! ಲೊಯಿಡ್ ಜೋರ್ಜರವರು ಹೇಳಿರುವರು

ಸಂಧಾನ ಮಾಡಿಕೊಳ್ಳಬೇಕೆಂದ ಪೋಪ ಗುರುಗಳವರು ಯುದ್ಧ ಮಾಡುತ್ತಿರುವ ರಾಜ್ಯಗಳವರನ್ನು ವಿಜ್ಞಾಪಿಸಿಕೊಂಡಿರುವರು

ಪೋರ್ತುಗೀಸರು ಮಡಿಗಾಯದಲ್ಲಿ ಪುನಃ ೪ ಜರ್ಮನರ ಹಡಗಗಳನ್ನು ಹಿಡಿದಿರುತ್ತಾರೆ

ಪೊಸ್ಮನ್ನಿನಲ್ಲಿ ಶತ್ರುಗಳ ಬಲಕಾಯಿಸಿಕೊಂಡ ೪ ಸ್ಥಳಗಳ ಕೆಲಸಗಳನ್ನು ಫ್ರೆಂಚರ ತೋಫುಗಳು ನಾಶಮಾಡಿರುತ್ತವೆ ವರ್ದನಿನ ಉತ್ತರದಲ್ಲಿ ಬ್ಯೊಸ್ ಕ್ಯಾರ್‍ನೆಂಟ್ ಮತ್ತು ಡೊಫೊಮೊಂಟ್ ಕೋಟೆಗಳ ಮಧ್ಯೆ ಕಠಿಣ ಕಾಳಗ ನಡಿಯುತ್ತಿದೆ ವಾಕರ್‌ವಿಲ್ಲೆ ಎಂಬಲ್ಲಿ ಅಭಿಯೋಗ ಮಾಡಿದ ಜರ್ಮನರು ಪೂರ್ಣವಾಗಿ ಹಿಮ್ಮೆಟ್ಟಿರುವರು ಷೆಂಪ್ರೆ ಪ್ರಾಂತ್ಯದಲ್ಲಿ ಕಠಿಣ ತೋಫು ಕಾಳಗ ನಡಿಯುತ್ತಿದೆ ಫ್ರೆಂಚರ ತೋಫುಗಳು ರಣರಂಗದಲ್ಲೆಲ್ಲಾ ಅತಿ ಚಟುವಟಿಕೆಯಿಂದಿವೆ

ವರ್ದನಿನಲ್ಲಿ ನಡೆದ ಕದನಗಳಲ್ಲಿ ಫ್ರೆಂಚಸೇನೆಯು ೩೦,೦೦೦ ಮಂದಿ ಪ್ರಾಣಾಪಾಯಹೊಂದಿರುವರೆಂತ ಪಾರಿಸಿನ "ಟ್ಯಾಮ್ಸ್" ತಂತೀ ವಾರ್ತೆಯಿಂದ ತಿಳಿದು ಬರುತ್ತದೆ ಜರ್ಮನರ ಸೇನೆಯಲ್ಲಿ ಫ್ರೆಂಚಸೇನೆಯ ಅಲ್ಲಿದ ಪ್ರಾಣಾಪಾಯಕ್ಕಿಂತ ೫ರಷ್ಟು ಹೆಚ್ಚಾಗಿರುವದೆಂತ ಮತ್ತೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ರುಶ್ಯನರು ಪಾರ್ಶಿಸ್ಥಾನದಲ್ಲಿ ಬಿಜ್ಜಾರ್ ಎಂಬ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುವರೆಂಬ ವಾರ್ತೆ ಬಂದಿದೆ ರುಶ್ಯನರ ಡಿಸ್ಟ್ರಾಯರ್ ನಾವೆಗಳು ಟ್ರೆಬಿಜೊಂಡಿಗೆ ತೋಫು ಹಾರಿಸ ಪ್ರಾರಂಭಿಸಿರುತ್ತವೆ ಬಂದರದಲ್ಲಿದ್ದ ಕೆಲವು ಹಡಗಗಳು ನಾಶವಾಗಿ ಹೋದವು.

ತುರ್ಕಿ ಮಂತ್ರಿಯಾಗಿರುವ ಎನ್‌ವರ್ ಪಾಶರವರಿಗೆ ಕನ್‌ಸ್ತಂತಿನೋಪಲಿನಲ್ಲಿ ಗುಂಡು ಹೊಡೆದು ಗಾಯಪಡಿಸಿರುವರು ಎಂಬ ವಾರ್ತೆ ಇದೆ.

ಬ್ರಿಟಿಷರ "ಮಸೂಂತ" ಎಂಬ ಹಡಗವು ಮುಣುಗಿಸಲ್ಪಟ್ಟಿರುತ್ತದೆ.

ಜರ್ಮನರು ವರ್ದನಿನಲ್ಲಿ ಪುನಃ ನುಗ್ಗಿ ಹೋಗುವ ಬಗ್ಗೆ ಇಕ್ಕಟ್ಟಾದ ರಣರಂಗದಲ್ಲಿ ೩೦೦,೦೦೦ ಸೇನಿಕರನ್ನು ಒಟ್ಟು ಹಾಕಿರುವರು.

~~~~~

ಉತ್ತರ ಹಿಂದೂಸ್ಥಾನ.

~~~~~

ಫೆಬ್ರವರಿ ತಿಂಗಳ ತಾ ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೯೨೧೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೭೫೦೫ ಮಂದಿ ಮೃತರಾದರು ಈ ಪೈಕಿ ಮುಂಬಾಯಿ ಮತ್ತು ಸಿಂಧಿನಲ್ಲಿ ೧೬೩೯, ಮದ್ರಾಸ್ ೨೬೦, ಬಂಗಾಳ ೧, ಬಿಹಾರ್ ಮತ್ತು ಒರಿಸ್ಸೆ ೮೬೬, ಸಂಯುಕ್ತ ಸಂಸ್ಥಾನ ೧೫೬೯, ಪಂಜಾಬು ೧೦೬, ಬರ್ಮ ೩೬೦ ಮಧ್ಯಸಂಸ್ಥಾನ ೭೯೬, ಮೈಸೂರು ೧೧೧, ಹೈದರಾಬಾದ್ ೧೮೬೯, ಮಧ್ಯಹಿಂದೂಸ್ಥಾನ ೨೩ ಮತ್ತು ಕಾಶ್ಮೀರ ೯ ಮರಣಗಳಾದವು

~~~~~

ಬಂಗಾಳ ಸರಕಾರದವರು ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲ್ ಜೇಮ್ಸರವರನ್ನು ಆ ಕೆಲಸದಿಂದ ತೆಗೆದು ಅವರಿಗೆ ಶಾಲೆಗಳ ಇನ್ಸ್‌ಪೆಕ್ಟರ್ ಕೆಲಸವನ್ನು ಕೊಟ್ಟಿರುವರು ಆದರೆ ಈ ಹೊಸ ಕೆಲಸದಲ್ಲಿ ಮಿ! ಜೇಮ್ಸರವರು ಅವಮಾನಿತರು ಮಾಡಲ್ಪಟ್ಟಿರುವರು ಮಿ! ಜೇಮ್ಸರವರು ಈಗ ಫರ್ಲೋ ರಜೆಗೆ ಬರಕೊಂಡಿರುವರು ಆದರೆ ಸರಕಾರದವರ ಅವಮಾನಿತ ಹುಕುಂ ಇರುವದರಿಂದ ಈ ಅವಮಾನಿತ ಹುಕುಂ ತೆಗೆಯಲ್ಪಡುವ ವರೆಗೆ ಅವರಿಗೆ ಫರ್ಲೋ ರಜೆ ದೊರಕುವದು ಸಿವಿಲ್ ಸರ್ವಿಸ್ ರೆಗ್ಯುಲೇಶನ್ ಪ್ರಕಾರ ಕಷ್ಟಸಾಧ್ಯವಾಗಿದೆ

ಬಂಗಾಳ ಸರಕಾರದವರು ಪ್ರೆಸಿಡೆನ್ಸಿ ಕಾಲೇಜನ್ನು ಮುಚ್ಚಿದ್ದೇ ಮಾತ್ರವಲ್ಲ, ಅದಕ್ಕೆ ತಾಗಿರುವ ಎಡೆನ್ ಹೊಸ್ಟೆಲನ್ನೂ ಮುಚ್ಚಲು ಹುಕುಂ ಮಾಡಿದ್ದಾರೆ ಪ್ರೆಸಿಡೆನ್ಸಿ ಕಾಲೇಜು ಬೇಗನೇ ತೆರೆಯಲ್ಪಡಬೇಕಾಗುವದು ಎಂಬ ನಿರೀಕ್ಷೆಯು ಸರಕಾರದವರ ಈ ಹುಕುಮಿನಿಂದ ಕುಂದಿದ ಹಾಗೆ ಆಯಿತು. ಕಾಲೇಜನ್ನು ಮುಚ್ಚಿದಾಗ ಹೊಸ್ಟೆಲಿನಿಂದ ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ದೊರೆಯಲಿಲ್ಲ ಆದರೆ ಹೊಸ್ಟೆಲನ್ನು ತೆರೆದು ಇಡುವದರಿಂದ ವಿದ್ಯಾರ್ಥಿಗಳಿಗೆ ಖರ್ಚಲ್ಲದೆ ಏನೊಂದು ಪ್ರಯೋಜನವಿಲ್ಲ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಹೊಸ್ಟೆಲ್ ಬಿಟ್ಟು ಮನೆಗೆ ಹೋಗಲಿಕ್ಕೆ ಬೇಕಾದ ಖರ್ಚಿನ ಹಣವನ್ನು ಅಧಿಕಾರಿಗಳು ಕೊಡಲು ಒಪ್ಪಿರುವರು ಎಂತ ತಿಳಿದುಬರುತ್ತದೆ ಹೊಸ್ಟೆಲಿನಿಂದ ಮನೆಗೆ ಹೋಗಲು ಅನಾನುಕೂಲತೆ ಇರುವ ವಿದ್ಯಾರ್ಥಿಗಳಿಗೆ ಬೇಕಾದ ಸಹಾಯವನ್ನು (ಆಹಾರ ಮತ್ತು ಸ್ಥಳ) ಕವಿರಾಜ ಉಪೇಂದ್ರನಾಥ ಸೇನರು ಕೊಡಲು ಒಪ್ಪಿರುವರು ಎಂಬ ವಾರ್ತೆಯು ಇದೆ

~~~~~

ಶಿವಪುರದ ಇಂಜಿನೀಯರಿಂಗ್ ಕಾಲೇಜಿಯ ಹೊಸ್ಟೆಲಿನಲ್ಲಿ ಆಹಾರ ಇತ್ಯಾದಿಗಳು ಸರಿಯಾಗಿ ಸಿಕ್ಕುವದಿಲ್ಲವೆಂಬ ಕಾರಣದಿಂದ ವಿದ್ಯಾರ್ಥಿಗಳು ನೀರಾಹಾರವನ್ನೇ ತ್ಯಜಿಸಿದ್ದರು ಕಾಲೇಜು ಪ್ರಿನ್ಸಿಪಾಲರು ತಕ್ಕ ಏರ್ಪಾಡು ಮಾಡುತ್ತೇನೆಂಬ ಭರವಸಕೊಟ್ಟದ್ದರಿಂದ ವಿದ್ಯಾರ್ಥಿಗಳು ಮುಷ್ಕರ ಬಿಟ್ಟಿರುತ್ತಾರೆ.

ಲಂಡನಿನಿಂದ ಕಳೆದ ತಾ. ೧೧ರಲ್ಲು ಹೊರಟ ಪಿ. ಎಂಡ್ ಒ. ಕಂಪೆನಿಯ "ಸಲಸೆಟ್ಟೆ" ಹಡಗವು ೧೧೧ ಪ್ರಯಾಣಿಕರ ಮತ್ತು ಟಪ್ಪಾಲು ಸಹಿತ ತಾ. ೨ರಲ್ಲು ಮುಂಬಾಯಿಗೆ ಬಂದು ತಲಪಿರುತ್ತದೆ.

~~~~~

ಸಿಂಧ್ಯ ಮಹಾರಾಜರವರು ಮೆಸೊಪಟೇಮಿಯದಲ್ಲಿ ನಡೆಯುವ ಯುದ್ಧದ ಬಗ್ಗೆ ಎರಡು ವಾಯುನಾವೆಗಳನ್ನು ದಾನಮಾಡಿರುವರು. ಹಿಂದೆ ಸಿಂಧ್ಯ ಮಹಾರಾಜರವರು ದಾನಮಾಡಿದ ೩ ವಾಯುನಾವೆಗಳು ಮೆಸೊಪಟಾಮಿಯದಲ್ಲಿ ನಷ್ಟವಾದ್ದರಿಂದ ಅದರ ಬದಲಿಗೆ ಸಿಂಧ್ಯ ಮಹಾರಾಜರವರು ಈ ಎರಡು ವಾಯುನಾವೆಗಳನ್ನು ದಾನ ಮಾಡಿದ್ದಾಗಿರುತ್ತದೆ.

~~~~~

ಇದೇ ಮಾರ್ಚ ತಾ. ೧ರಲ್ಲು ಶ್ರೇಷ್ಠ ನ್ಯಾಯವಿಧಾಯಕ ಸಭೆಯು ದಿಲ್ಲಿಯಲ್ಲಿ ಕೂಡಿ ಬಂತು. ವೈಸರಾಯ ಪ್ರಭುಗಳು ಈ ಸಭೆಯ ಅಧ್ಯಕ್ಷರಾಗಿದ್ದರು. ಕೋಶಾಧ್ಯಕ್ಷರಾದ ಬಹುಮಾನಪಟ್ಟ ಸರ್ ವಿಲಿಯಂ ಮೆಯರ್‌ರವರು ೧೯೧೭ ೧೮ನೇ ಇಸವಿಯ ಖರ್ಚು ಮತ್ತು ಆದಾಯಗಳ ಅಂದಾಜು ಪಟ್ಟಿಯನ್ನು ಸಭೆಯ ಮುಂದಿಟ್ಟಿರುವರು ಈ ವರ್ಷದಲ್ಲಿ ಕೆಲವು ಹೊಸ ತೆರಿಗೆಗಳನ್ನು ಹೊರಿಸದೆ ಖರ್ಚಿನ ಮತ್ತು ಆದಾಯದ ಅಂದಾಜನ್ನು ಮಾಡುವದು ಕೋಶಾಧ್ಯಕ್ಷರಿಗೆ ಅಸಾಧ್ಯವಾಗಿದೆಂಬದು ಕೋಶಾಧ್ಯಕ್ಷರ ಭಾಷಣದಿಂದ ತಿಳಿದುಬಂದಿರುತ್ತದೆ. ೧೯೧೬ ೧೭ನೇ ಇಸವಿಯ ಖರ್ಚು ಮತ್ತು ಆದಾಯದ ಅಂದಾಜು ಪಟ್ಟಿ ಪ್ರಕಾರ ಆದಾಯವು ಕಮ್ಮಿಯಾಗಿ ಸರಕಾರಕ್ಕೆ ಖರ್ಚ ಹೆಚ್ಚಾಗಿರುವದು. ಅಂದರೆ ಸರಕಾರದವರಿಗೆ ಮುಂದಿನ ವರ್ಷಕ್ಕಿಂತಲೂ ಈ ವರ್ಷ ೬,೦೦,೦೦೦ ಮಿಲಿಯ ಪವನುಗಳ ಹೆಚ್ಚು ಖರ್ಚು ತಗಲಿರುವದು ಟಪ್ಪಾಲು ಸಂಬಂಧವಾಗಿ ಸರಕಾರದವರು ೨೮೦,೦೦೦ ಪವನುಗಳ ಹೆಚ್ಚು ಖರ್ಚನ್ನೂ ಸೇನಾ ಸಂಬಂಧವಾಗಿ ೧೪೦,೮೦೦ ಪವನುಗಳ ಹೆಚ್ಚು ಖರ್ಚನ್ನೂ ಕಳೆದ ವರ್ಷ ಮಾಡಬೇಕಾದದ್ದೇ ಅಂದಾಜು ಪಟ್ಟಿಗಿಂತಲೂ ಖರ್ಚು ಅಧಿಕವಾಗಲು ಕಾರಣವಾಗಿರುವದು. ೧೯೧೬-೧೭ನೇ ಇಸವಿಯ ಅಂದಾಜು ಪಟ್ಟಿ ಪ್ರಕಾರ ಆದಾಯವು ೮೩,೫೫೨ ಮಿಲಿಯ ಪವನುಗಳು; ಖರ್ಚು ೮೯,೫೧೨ ಮಿಲಿಯ ಪವನುಗಳು ಅಂದರೆ ಆದಾಯಕ್ಕಿಂತ ೨,೯೬೦ ಮಿಲಿಯ ಪವನುಗಳು ಹೆಚ್ಚು ಖರ್ಚಾದಂತಾಗುವದು. ಆದಾಯಕ್ಕಿಂತಲೂ ಖರ್ಚು ಹೆಚ್ಚಾಗುವ ಕಾರಣ ಸರಕಾರದವರು ಕೆಲವು ಸಾಮಾನುಗಳ ಮೇಲೆ ಸ್ವಲ್ಪ ತೆರಿಗೆಯನ್ನು ಹೆಚ್ಚಿಸಿ ಈ ವರ್ಷದ ಖರ್ಚನ್ನು ಭರ್ತಿ ಮಾಡಬೇಕೆಂದಿರುವರು. ಹೊಸ ತೆರಿಗೆಯ ಪ್ರಕಾರ ಸಕ್ಕರೆಯ ಮೇಲೆ ಸೇಕಡಾ ೧೦ರಂತೆ ಹೆಚ್ಚಿನ ತೆರಿಗೆ ಹೆಚ್ಚಿಸುವದರಿಂದ ವರ್ಷಕ್ಕೆ ೪೦೦,೦೦೦ ಪವನುಗಳ ಹೆಚ್ಚು ಆದಾಯವಾಗುವದು. ಕಸ್ಟಮ್ಸ್ ಮತ್ತು ಮದ್ಯದ ಮೇಲಿನ ಡ್ಯೂಟಿಯನ್ನು ಹೆಚ್ಚಿಸುವದರಿಂದ ೨,೧೫೦,೦೦೦ ಪವನುಗಳ ಹೆಚ್ಚು ಆದಾಯವಾಗುವದು. ಉಪ್ಪಿನ ಮೇಲೆಯೂ ಸುಂಕವು ಹೆಚ್ಚಿಸಲ್ಪಟ್ಟಾಗಿರುವದು. ಈಗಲಿರುವ ಸುಂಕದ ಪ್ರಕಾರ ರಾತ್ತಲಿಗೆ ೧ನೇ ಆಣೆಯಂತೆ ಸುಂಕ ಬೀಳುವದು. ಆದರೆ ಹೊಸ ದರದ ಪ್ರಕಾರ ರಾತಲಿಗೆ ೩ ಆಣೆಯಂತೆ ಸುಂಕ ವಸೂಲಾಗುವದು. ಈ ಸುಂಕದಿಂದ ೧೯೧೭-೧೮ನೇ ಇಸವಿಯಲ್ಲಿ ಸರಕಾರದವರಿಗೆ ೬೦೦,೦೦೦ ಪವನುಗಳ ಆದಾಯ ಹೆಚ್ಚುವದೆಂತ

ಂದಾಜಾಗಿದ್ದುದೆ. ಉಪ್ಪಿನ ಮೇಲೆ ೧೮೮೮-೧೯೦೩ನೇ ಇಸವಿಯ ವರೆಗೆ ಮಣಕ್ಕೆ ರೂ. ೨||, ೧೯೦೩ನೇ ಇಸವಿಯಲ್ಲಿ ರೂ. ೨, ೧೯೦೫ರಲ್ಲಿ ರೂ ೧||, ೧೯೦೭ನೇ ಇಸವಿಯಲ್ಲಿ ರೂ ೧ ಸುಂಕವು ವಸೂಲಾಗುತ್ತಿತ್ತು ಒಂದು ಮಣ ಅಂದರೆ ೮೨ ರಾತ್ತಲಿಗಿಂತಲೂ ಸ್ವಲ್ಪ ಹೆಚ್ಚು ಹೀಗೆ ರಾತಲಿಗೆ ೫ನೇ ಆಣೆಯಂತೆ ವಸೂಲಾಗುತ್ತಿತ್ತು ಈಗ ರೂಪಾಯಿಗೆ ೪ ಆಣೆಯಂತೆ ಡ್ಯೂಟಿ ಹೆಚ್ಚಿಸಿದ ಹಾಗಾಯಿತು ಆದಾಯ ತೆರಿಗೆಯು ಈ ವರೆಗೆ ರೂಪಾಯಿಗೆ ೫ ಪೈಯಂತೆ ವಸೂಲಾಗುತ್ತಿತ್ತು ಈಗಿನ ಹೊಸ ದರದ ಪ್ರಕಾರ ರೂ ೫೦೦೦—ರೂ. ೯೯೯೯ ಆದಾಯ ಇರುವವರು ರೂಪಾಯಿಗೆ ೬ ಪೈ, ರೂ. ೧೦,೦೦೦—ರೂ ೨೪೯೯೯ ಆದಾಯವಿರುವವರು ರೂಪಾಯಿಗೆ ೯ ಪೈ ರೂ ೨೫೦೦೦ಕ್ಕಿಂತ ಹೆಚ್ಚು ಆದಾಯವಿರುವವರು ರೂಪಾಯಿಗೆ ೧ ಆಣೆಯಂತೆ ಆದಾಯ ತೆರಿಗೆ ಕೊಡಬೇಕಾಗುವದು ಇದರಿಂದ ೯೦೦,೦೦೦ ಪವನುಗಳ ಹುಟ್ಟು ಹೆಚ್ಚಾಗುವದು. ಹೀಗೆ ಈ ತೆರಿಗೆಗಳನ್ನು ಹೆಚ್ಚಿಸುವದರಿಂದ ಈ ವರ್ಷ ೩.೬ ಮಿಲಿಯ ಪವನುಗಳ ಆದಾಯ ಹೆಚ್ಚಿ ಸರಕಾರದವರ ಅಂದಾಜು ಖರ್ಚು ಬರ್ತಿಯಾಗಿ ೧,೦೫೨,೦೦೯ ಪವನುಗಳು ಉಳಿಯುವವು

~~~~~

ವೈನ್‌ವಾಲಿ ಡಿಸ್ಟ್ರಿಕ್ಟಿನಲ್ಲಿ ದಕಾಯಿತರಿಂದ ನಡೆದ ಒಂದು ಘೋರ ಕೃತ್ಯವು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿರುವದು ವೈನ್‌ವಾಲಿ ಡಿಸ್ಟ್ರಿಕ್ಟಿನ ಹಸಾನ್‌ಗಾರ ಎಂಬಲ್ಲಿಯ ಹಿಂದೂ ಸಾಹುಕಾರ ಲಾಲ ತಬ್ಲ ರಾಮು ಎಂಬವರ ಮನೆಗೆ ದಕಾಯಿತರು ನುಗ್ಗಿ ಅವರ ಮನೆಯಲ್ಲಿದ್ದ ಕೇವಚಂದರನ್ನೂ ಅವರ ಪತ್ನಿಯನ್ನೂ ತಿವಿದರು ಅವರ ೨೦ ವರ್ಷ ವಯಸ್ಸಿನ ವಿಧವೆ ಮಗಳನ್ನು ಅತಿ ಅವಮಾನುಷ ರೀತಿಯಿಂದ ಹಿಂಸಿಸಿದರು ಸಣ್ಣ ಹುಡುಗಿಯೊಬ್ಬಳಿಗೆ ತಲೆಯ ಮೇಲೆ ಗಾಯಪಡಿಸಿದರು ಅನಂತರ ಮತ್ತೊಂದು ಕೋಣೆಯಲ್ಲಿದ್ದ ತಬ್ಲ ರಾಮರನ್ನು ವಿವಿಧ ಬಗೆಯಿಂದ ಹಿಂಸಿಸಿ ಮನೆಯಲ್ಲಿದ್ದ ಹಣ ಆಭರಣಗಳನ್ನು ಸುಲಕೊಂಡರು. ದಕಾಯಿತರನ್ನು ಎದರಾಯಿಸಿದ ಮೆಹದ್‌ಚಂದ ಮತ್ತು ನಥರಾಮನಿಗೆ ಗುಂಡು ಹೊಡೆದರು ದಕಾಯಿತರೊಡನೆ ಕೋವಿ, ಸನೀನು, ಖಡ್ಗಗಳು ಇದ್ದುದರಿಂದ ಅವರನ್ನು ಎದುರಾಯಿಸುವದು ಅಸಾಧ್ಯವಾಯಿತು. ದಕಾಯಿತರ ತುತ್ತಾದವರು ಆಸ್ಪತ್ರಿಯಲ್ಲಿ ಮೋದಂಡ ಸ್ಥಿತಿಯಲ್ಲಿರುವರು ದಕಾಯಿತರು ಡ್ಗೇರಾಖಾನಿನವರು.

~~~~~

ಕಲ್ಕತೆಯ ಹೊರ ಪಟ್ಟಣಗಳಲ್ಲಿ ಪೋಲಿಸಿನವರು ಕೆಲವು ವಿದ್ಯಾರ್ಥಿಗಳನ್ನು ಕೈದು ಮಾಡಿ ಅವರನ್ನು ಪೋಲಿಸಿನವರು ಹೇಳಿದ ಸ್ಥಳ ಬಿಟ್ಟು ಹೋಗ ಕೂಡದೆಂಬ ಆಜ್ಞೆ ಮಾಡಿರುವರು. ಕಲ್ಕತ್ತೆಯಲ್ಲಿಯೂ ಪೋಲಿಸಿನವರು ಪ್ರೊಫೆಸರ್ ಒಟನರಿಗೆ ಹೊಡೆದವನೆಂಬ ಅನುಮಾನದ ಮೇಲೆ ಒಬ್ಬ ವಿದ್ಯಾರ್ಥಿಯನ್ನು ಕೈದುಮಾಡಿರುತ್ತಾರೆ. ಕಲ್ಕತ್ತೆಯಲ್ಲಿ ಒಬ್ಬ ವಕೀಲನ ಮನೆಯನ್ನು ಜಡ್ತಿಮಾಡಿ ಅವನನ್ನು ಕೈದುಮಾಡಿರುವರು. ಯುನಿವರ್ಸಿಟಿ ಲಾ ಕಾಲೇಜಿಯ ಇಬ್ಬರು ವಿದ್ಯಾರ್ಥಿಗಳನ್ನು ಕೈದುಮಾಡಿರುತ್ತಾರೆ ಪಟರ್‌ಸನ್ ಕಾಲೇಜು ವಿದ್ಯಾರ್ಥಿಯೊಬ್ಬನನ್ನು ಕೈದುಮಾಡಿರುತ್ತಾರೆ. ಒಟ್ಟಿಗೆ ಕೈದುಮಾಡಿದ ೨೦ ಮಂದಿಗೆ ಇಂಟರ್ನ್‌ಮೆಂಟ್ ಆರ್ಡರು ಕೊಟ್ಟಿರುತ್ತಾ

ಬಂಕೂರಾ ಡಿಸ್ಟ್ರಿಕ್ಟಿನಲ್ಲಿ ಬರಗಾಲಬಿದ್ದುದರಿಂದ ಅಲ್ಲಿಯ ಜನರ ಸ್ಥಿತಿಯು ಬಹಳ ಕನಿಷ್ಠಾವಸ್ಥೆಯಲ್ಲಿದೆ. ಬಂಕೂರದ ವೆಸ್ಲಿಯನ್ ಮಿಶ್ಯನ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ। ಮಿಚ್ಛೆಲರವರು ಬಂಕೂರದ ಒಂದು ಗ್ರಾಮದಲ್ಲಿ ತಾನು ಕಣ್ಣಾರೆಕಂಡ ಸ್ಥಿತಿಯನ್ನು ಬಂಗಾಳ ಸೋಶ್ಯಲ್ ಸರ್ವಿಸ್ ಲೀಗಿನ ಸೆಕ್ರೆಟರಿಯವರಿಗೆ ಬರೆದ ಪತ್ರದಿಂದ ಬಂಕೂರ ಜಿಲ್ಲೆಯ ಜನರು ಎಂಥಾ ಸ್ಥಿತಿಯಲ್ಲಿರುವರೆಂಬ ವಿಷಯವು ತಿಳಿದುಬರುವದು ಬಂಕೂರ ಡಿಸ್ಟ್ರಿಕ್ಟಿಗೆ ಸೇರಿದ ಛಾಟ್ನ ಎಂಬ ಒಂದು ದೊಡ್ಡ ಗ್ರಾಮದ ಜನರು ಬಹಳ ಕನಿಷ್ಠಾವಸ್ಥೆಯಲ್ಲಿರುವರು ಆಹಾರವಿಲ್ಲದ ಸಾವಿರಾರು ಜನರು ಪೋಲಿಸ್ ಸ್ಟೇಶನಿನ ಪರಾರದಲ್ಲಿ ಕೂಡಿರುವರು ಇವರೆಲ್ಲಾ ಅಸ್ಥಿಪಂಜರದಂತೆಯೇ ಕಾಣುವರು. ಕೆಲವರನ್ನು ನೋಡಲಿಕ್ಕೆ ಸಹಾ ಅಸಂಹ್ಯವಾಗುತ್ತದೆ ರಿಲೀಫ್ ಸಂಘದವರು ಇವರಲ್ಲಿ ಕೆಲವರಿಗೆ ಅಕ್ಕಿ ಹಂಚುತ್ತಿರುವರು ಆದರೆ ಇಂಥಾ ಜನರ ಸಂಖ್ಯೆಯು [illegible]ಷ್ಟು ಜನರಿಗಾದರೂ ಸಹಾಯಮಾಡಲು ರಿಲೀಫ್ ಸಂಘದವರಿಗೆ ಅಸಾಧ್ಯವಾಗಿದೆ ಚೌರಿ ಎಂಬ ಗ್ರಾಮದ ಪ್ರತಿ ಒಂದು ಮನೆಯವರಿಗೂ ಸಹಾಯವು ಅಗತ್ಯವಿದೆ ಕೆಲವರಿಗೆ ೩ ೪ ದಿವಸಗಳಿಂದ ಆಹಾರವಿಲ್ಲದಿದ್ದರೂ ತಮಗಾಗಿ ಸಹಾಯ ಕೇಳದೆ ಹಸಿವೆಯಿಂದ ಬಳಲುತ್ತಿರುವ ಮುದೀ ಹೆಂಗಸರ ಮತ್ತು ಮಕ್ಕಳ ಬಗ್ಗೆ ಸಹಾಯ ಕೇಳಿದರು ಇತರ ಗ್ರಾಮಗಳ ಸ್ಥಿತಿಯು ಇದೇ ರೀತಿ ಇದೆ ಸಹಾಯವು ಅಗತ್ಯವಿದೆ ಎಂಬದಾಗಿ ತಿಳಿಸಿರುವರು

ಬಂಕೂರದ ಜನರ ಬಗ್ಗೆ ಮದ್ರಾಸಿನಲ್ಲಿ ಒಂದು ರಿಲೀಫ್ ಫಂಡ್ ತೆರೆಯೋಣಾಗಿರುವದು ಈ ಫಂಡಿಗೆ ಈ ವರೆಗೆ ರೂ ೩೨೩೦—೧೫—೩ ಕೂಡಿರುತ್ತದೆ

~~~~~

ದಕ್ಷಿಣ ಹಿಂದೂಸ್ಥಾನ.

ಪ್ರೊಫೆಸರ್ ಕಾರ್ವೆಯವರು ಪೂನೆಯಿಂದ ಮದ್ರಾಸಿಗೆ ಚಿತ್ತೈಸಿರುವರು ಭಾರತ ಮಹಿಳೆಯರ ಬಗ್ಗೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಸಂಬಂಧವಲ್ಲಿ ದಕ್ಷಿಣ ಹಿಂದೂಸ್ಥಾನದ ಜನರನ್ನು ಪ್ರೋತ್ಸಾಹಿಸುವದೇ ಪ್ರೊಫೆಸರ್ ಕಾರ್ವೆಯವರು ಮದ್ರಾಸಿಗೆ ಚಿತ್ತೈಸಿದುದರ ಉದ್ದೇಶವಾಗಿರುವದು ಪ್ರೊಫೆಸರ್ ಕಾರ್ವೆಯವರು ಮದ್ರಾಸಿನ ಕ್ರೈಸ್ತ ಯುವಜನ ಸಮಾಜದ ಹೋಲಿನಲ್ಲಿ ಭಾಷಣ ಕೊಟ್ಟು ಹಿಂದೂಸ್ಥಾನದ ಮಹಿಳೆಯರ ಬಗ್ಗೆ ವಿಶ್ವವಿದ್ಯಾನಿಲಯದ ಅಗತ್ಯವೇನೆಂಬದನ್ನು ಕೂಡಿದ ಸಭಿಕರಲ್ಲಿ ಶ್ರುತಪಡಿಸಿ ಬರುವ ಜೂನು ತಾ ೨೦ರಲ್ಲು ಇಂಥಾ ಒಂದು ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವದೆಂತ ಹೇಳಿರುತ್ತಾರೆ

~~~~~

ತಿರುಚಿನಾಪಳ್ಳಿಯಲ್ಲಿ ಜಡ್ಜರಾಗಿದ್ದ ಮಿ। ಹಾರ್ಡಿಂಗ ದೊರೆಗಳನ್ನು ಕೊಂದ ಘಾತಕನು ಸಬ್‌ಜೈಲಿನಲ್ಲಿ ಗಾಯಪಡಿಸಿದ ಜೈಲ್‌ವಾರ್ಡರನು ಫೆಬ್ರುವರಿ ತಾ. ೨೮ರಲ್ಲು ಆಸ್ಪತ್ರಿಯಲ್ಲಿ ಸತ್ತು ಹೋದನು

~~~~~

Savings Bank Account opened for any sum not less than 4 As and multiples thereof and interest paid @ 4½ %.

Loans granted on proper securities and pledges.

Sealed Parcels for safe custody received on a moderate charge

Canara Bank Ltd.,
Mangalore, 1st December 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	371,976—4—4
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ 29,300ರದ ಭದ್ರತಾಪತ್ರಗಳಲ್ಲಿ ಠೇವಣಾಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂ 2ರ ವರೆಗಿನ 'ಬೋನಸ್' ಎಂಬ ಪಾರಿತೋಷಿಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ



ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.,
177 ಚೀನಾ ಬಜಾರ ರಸ್ತೆ, ಮದರಾಸು.

ಅರ್ಧ ಬೆಲೆ! ಅರ್ಧ ಬೆಲೆ!!

ಒಂದು ತಿಂಗಳು ಮಾತ್ರ.

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಒಳ್ಳೇ ಸಮಯ ಕೊಡುವಂಥಾದ್ದು, ಸದ್ಗೃಹಸ್ಥರು ಧರಿಸಲು ಯೋಗ್ಯವಾದದ್ದು ಆಗಿದೆ ಮೂರು ವರುಷದ ಗ್ಯಾರಂಟಿ ಇದೆ ಕ್ರಯ ರೂ 8 ಈಗ ರೂ 4 ಬೊನಲಿವರ್ ವಾಚು ಕ್ರಯ ರೂ 11 ಈಗ ರೂ 5 8—0 ನಿಕಲ್ ಹಂಟಿಂಗ್ ವಾಚು ಕ್ರಯ ರೂ 12 ಈಗ ರೂ 6 ಬೆಸ್ಟ್‌ರಿಸ್ಟ್ ವಾಚು ಚರ್ಮದ ಸ್ಟ್ರಾಪ್ ಸಹಿತ ರೂ 10 ಈಗ ರೂ 5 ಲೇಡಿಸ್ 9 ಕರೆಟ್ ಚಿನ್ನದ ವಾಚು ಕ್ರಯ ರೂ. 32 ಈಗಿನ ರೂ 16 ಲೇಡಿಸ್ ಬೆಳ್ಳಿ ವಾಚು ರೂ 14 ಈಗ ರೂ 7 ಗಟ್ಟಿ ಮತ್ತು ನಂಬಿಕೆಗೆ ಯೋಗ್ಯವಾದ 8 ದಿವಸಕ್ಕೊಮ್ಮೆ ಕೀ ಕೊಡುವ ಯೈಟ್ ಡೇಸ್ ವಾಚು ನಿಕಲ್‌ಕೇಸ್ ಒಪನ್ ಫೇಸ್ ರೂ 18 ಈಗ ರೂ 9 ಅದೇ ಬೆಳ್ಳಿಯ ಕೇಸ್ ಉಳ್ಳದ್ದು ರೂ 24 ಈಗ ರೂ 12 ಅದೇ ಬೆಳ್ಳಿ ಹಂಟಿಂಗ್ ಕೇಸ್ ರೂ 30 ಈಗ ರೂ 15 ರಿಸ್ಟ್ ವಾಚು ವಿನಹಾ ಇತರ ವಾಚುಗಳನ್ನು ಕೊಂಡುಕೊಳ್ಳುವ ಪ್ರತಿ ಗಿರಾಕಿಗಳಿಗೆ ಒಂದು ವಾಚುಸರಪಣಿಯೂ ಒಂದೇ ಸಲ 6 ವಾಚುಗಳನ್ನು ಕೊಂಡುಕೊಳ್ಳುವವರಿಗೆ ಒಂದು ವಾಚು ಪುಗಸಾಟೆಯಾಗಿಯೂ ದೊರಕುವದು

The Century Watch Agency,
25, Madan Mitra Lane CALCUTTA

ದಿವ್ಯಾಂಜನ. (Divyanjan).

ಸರ್ವ ತರಹದ ನೋವುಗಳ ಮೇಲೆ ರಾಮಬಾಣ ಔಷಧ.

ತಲೆನೋವು; ತಲೆಸಿಡಿತ, ವಾತ, ಸಂಧಿವಾತ, ವಾಯು, ಅರ್ಧಾಂಗವಾಯು, ಕಜ್ಜಿ, ತುರಿಕಜ್ಜಿ, ಘಾಯ, ಸುಟ್ಟಘಾಯ, ಉರಿ, ಉಳುಕು, ಎಲುಬುಗಳ ನೋವು, ಕೈಕಾಲು ಬಾತುಬರುವುದು, ಇವೇ ಮೊದಲಾದವುಗಳ ಮೇಲೆ ದಿವ್ಯಔಷಧವಾಗಿರುತ್ತದೆ

ಕ್ರಯ ಬಾಟ್ಲಿ 1ಕ್ಕೆ ರೂ. 0—8—0 ಡಜನ್ 1ಕ್ಕೆ ಕಮಿಶನ್ ಕಳೆದು ರೂ 5—0—0 ಟಪ್ಪಾಲು ಹಾಸಲು ಪ್ರತ್ಯೇಕ ಸೆಂಪಲ್ ಡಬ್ಬಿ 1ಕ್ಕೆ ರೂ 0—1—0. ಪೋಸ್ಟೇಜು ಮಾಫಿ

ಸಿಕ್ಕುವ ಸ್ಥಳ —

ಬಿ. ಎನ್. ಹನುಮಂತಪ್ಪ ಮತ್ತು ಕಂಪೆನಿ, ಚಿಕ್ಕಮಂಗಳೂರು.
ಕೆ. ಬೋಗಯ್ಯ ಶೆಟ್ಟಿ, ದಾವಣಗೆರೆ.

ಅಥವಾ

Someshwar & Sons, ಸೋಮೇಶ್ವರ ಎಂಡ್ ಸನ್ಸ್,
Warden's Building, ವ್ಹೊರ್ಡನ್ಸ್ ಬಿಲ್ಡಿಂಗ್,
FERGUSSON ROAD, BOMBAY ಫರ್ಗುಸನ್ ರಸ್ತಾ, ಮುಂಬಯಿ

ಸೂಚನೆ:—ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು ಇಂಗ್ಲಿಷಿನಿಂದಲೇ ಬರೆಯತಕ್ಕದ್ದು ಕನ್ನಡದಿಂದ ಬರೆದರೆ ಕಾಗದಗಳು ಸರಿಯಾಗಿ ತಲಪುವುದಿಲ್ಲ ಔಷಧ ಬೇಕಾದವರು ವಿ ಪಿ ಮುಖಾಂತರ ಪಡಕೊಳ್ಳಬಹುದು ಜಾಸ್ತಿಯಾಗಿ ಇದನ್ನು ತೆಗೆದುಕೊಂಡವರಿಗೆ ಅತಿಶಯ ಕಮಿಶನ್ ಕೊಡಲಾದೀತು. ಏಜಂಟರು ಬೇಕಾಗಿವೆ

ಕನ್ನಡ ಗ್ರಂಥಗಳು.

	ರೂ	ಆ.		ರೂ	ಆ
ದ್ವಾದಶಸ್ಕಂಧ ಭಾಗವತ	4	0	ತೊರವೆರಾಮಾಯಣ ಅವ್ವಲ್	1	8
ದಶಮಸ್ಕಂಧ ಭಾಗವತ	1	8	ದುಯ್ಯಂ	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	13
ದಶಪರ್ವ ಭಾರತ	2	0	ಜೈಮಿನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮಿನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ, ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಿಗಳು ವಗೈರೆ ಎಲ್ಲಾ ತರಹದ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

S. NAGAPPA NAYAK,
K. Appaya Shenoy & Co.

Cloth Merchants Car Street Mangalore

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills Tweeds Silks, Swadeshi cloths, &c &c of guaranteed colours and best patterns Price very moderate

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು ಸೇಲಂ ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು ದರಗಳು ಸುಲಭ ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು

ಕುಟುಂಬ ಸಂಜೀವಿನೀ.

ಲೋಕಪ್ರಸಿದ್ಧವಾದ ಈ ತೈಲವನ್ನು ವನಸ್ಪತಿಯಿಂದಲೇ ತಯಾರಿಸಿರುತ್ತದೆ. ತೈಲದ ಗುಣವು ಅತಿ ಆಶ್ಚರ್ಯಕರ! ಈ ತೈಲವನ್ನು ಮೂಸಿ ನೋಡುವದರಿಂದ ಶೀತ, ನೆಗಡಿ, ತಲೆನೋವು, ತಲೆಸಿಡಿತ, ಅಂತರ್ಧಾನವಾಗುವದು ಒಂದೆರಡು ತಟಕು ತೈಲವನ್ನು ಕುದಿಯುವ ನೀರಿನಲ್ಲಿ ಹಾಕಿ ಹಬೆಯನ್ನು ಆಘ್ರಾಣಿಸುವದರಿಂದ ಸರ್ವ ವಿಧದ ಕೆಮ್ಮು, ಉಬ್ಬಸ, ಕ್ಷಯರೋಗಕ್ಕೆ ಉಪಶಾಂತಿಯಾಗುವದು ಬಹಳ ದಣಿದು ಬೇಸತ್ತವರು ಈ ತೈಲದ ಒಂದೆರಡು ತಟಕನ್ನು ಬಿಸಿನೀರಿಗೆ ಹಾಕಿ ಸ್ನಾನಮಾಡುವದರಿಂದ ಹೊಸಜೀವ ಬಂದಂತಾಗುವುದು ಜ್ವರ, ಶೀತಜ್ವರ, ವಿಷಜ್ವರ, ಮಲೇರಿಯ ಎಂಬ ಛಳಿಜ್ವರಕ್ಕೆ ಇದಕ್ಕಿಂತ ಸುಲಭ ಚಿಕಿತ್ಸೆಯು ಬೇರೊಂದಿಲ್ಲ ಮಲೇರಿಯ ಜ್ವರದಿಂದ ಹೊಟ್ಟೆಯಲ್ಲಿ ಹುಟ್ಟುವ ಗಡ್ಡೆಯು ಕೂಡಾ ಈ ತೈಲದ ಸೇವನೆಯಿಂದ ನೀರಾಗುವದು ಹೊಟ್ಟೆನೋವು, ಹೊಟ್ಟೆಯುಕ್ರಿಮಿ, ಉಷ್ಣಭೇದಿ, ಶೀತಭೇದಿ, ಅಜೀರ್ಣ, ಅಗ್ನಿಮಾಂದ್ಯ ಮೊದಲಾದ ರೋಗಗಳಿಗೆ ಇದು ಸಂಜೀವಿನಿಯಂತಿದೆ ಕಿವಿನೋವು, ಕಿವಿಸೋರುವುದು, ಹಲ್ಲುನೋವು ಮತ್ತು ಮೇಹ ಮೊದಲಾದ ಗುಪ್ತವ್ಯಾಧಿಗಳು ಇದರ ಸೇವನೆಯಿಂದ ಪರಿಹಾರ. ಬೆಂಕಿಯ ಬೊಕ್ಕೆ, ಜಜ್ಜಿದ ಗಾಯ, ಗಾಯ, ಜೇನು ನೊಣ, ಚಾಡರಹುಳ ಮೊದಲಾದ ಜಂತುಗಳ ಕಡಿತಕ್ಕೆ ಈ ತೈಲವು ಅಮೃತದಂತಿದೆ ಪ್ರಸವ ವೇದನೆ ಕಾಲದಲ್ಲಿ ಹೆಂಗಸರ ಕಿಬ್ಬೊಟ್ಟೆಯ ಮೇಲೆ ಈ ತೈಲವನ್ನು ಹಚ್ಚಿದರೆ ಸುಖಪ್ರಸವವಾಗುವದು. ನೋವು ವಾತ, ಪಕ್ಷವಾತ, ಗಂಟುನೋವು, ಸೊಂಟನೋವು, ಎದೆನೋವುಗಳಿಗೆ ಇದನ್ನು ಹಚ್ಚುವದರಿಂದ ನೋವು ಗುಣವಾಗುವದು. ಅನುಪಾನ ಪತ್ರಿಕೆ ಸೀಸೆಯೊಂದಿಗೆ

ಔನ್ಸ್ ಸೀಸೆ 1ಕ್ಕೆ 5 ಆಣೆ. ವಿ ಪಿ. ಚಾರ್ಜು ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—10—0.

ಸೂಚನೆ —ಇಕ್ಲಿಪ್ಸ್ ಏಜನ್ಸಿಯು ತೈಲವೆಂದು ಕೆಲವರು ಗ್ರಾಹಕರನ್ನು ಮೋಸಗೊಳಿಸುತ್ತಿದ್ದಾರೆ ನಮ್ಮ ಲೇಬಲನ್ನೇ ನೋಡಿ ಕೊಂಡುಕೊಳ್ಳಿರಿ.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು

ದಯೆಯಿಟ್ಟು ಲಕ್ಷಿಸಿರಿ!

ಯಕ್ಷಗಾನ ಗ್ರಂಥಗಳು.

ಹರಿಶ್ಚಂದ್ರ ಮಹಾರಾಯನ ಕಥೆ	0	12	0
ನಳಚರಿತ್ರ	0	6	0
ಬಾಣಾಸುರನ ಕಥೆ	0	6	0
ತ್ರಿಪುರ ಸಂಹಾರದ ಕಥೆ	0	8	0
ದುಃಶಾಸನ ಕಥೆ	0	[illegible]	0
ದಕ್ಷಬ್ರಹ್ಮನ ಕಥೆ	0	8	0
ಪಂಚವಟಿ ರಾಮಾಯಣ	0	3	0

ಈ ಎಲ್ಲಾ ಪುಸ್ತಕಗಳನ್ನು ಒಂದೇಸಲ ತಕೊಳ್ಳುವವರಿಗೆ 1 — 8 — 0ಗೆ ಕೊಡತ್ತೇವೆ

ಲಾಕ್ಷಾ ಗೃಹದಹನದ ಕಥೆ	0	3	0
ಯಕ್ಷಗಾನ ಜಲಕ್ರೀಡೆ	0	3	0
ಪದ್ಮಕಾವ್ಯ ಐರಾವತ	0	4	0
ಯಕ್ಷಗಾನ ಐರಾವತ	0	4	0
ಪ್ರಹ್ಲಾದ ಚರಿತ್ರೆ	0	4	0
ಇಂದ್ರಜಿತು ಕಾಳಗ	0	4	0
ಕೃಷ್ಣಾರ್ಜುನರ ಕಾಳಗ		4	0
ಶಂಕರಾನಂದ ತತ್ವ	0	4	0
ಬ್ರಹ್ಮಾನಂದ ಶತಕ		[illegible]	0
ಅನುಭವ ರಸಾಯನ		6	0
ಅಮರಕೋಶದರ್ಪಣ	0	4	0

ಈ ಪುಸ್ತಕಗಳನ್ನು ಒಂದೇಸಲ ತರಿಸುವವರಿಗೆ 1 — 12 — 0ಗೆ ಕೊಡುತ್ತೇವೆ

ಜ್ಯೋತಿಷ ಸಂಗ್ರಹ	0	6	0
ಜ್ಯೋತಿಷ ಶಕುನ ಸಂಗ್ರಹ	0	6	0
ವೈದ್ಯ ಬಾಲಬೋಧೆ	0	[illegible]	0
ನಾಡಿಜ್ಞಾನ ಪ್ರಕಾಶಿಕೆ	0	[illegible]	0
ವಿಷಚಿಕಿತ್ಸೆ	0	4	0
ಭೋಜನ ಶ್ಲೋಕ	0	1	0
ಸದಾಶಿವ ಶತಕ	0	1	6
ಪ್ರಾಣೇಶ ಶತಕ	0	1	6
ಭಾವಾರ್ಥ ಶತಕ	0	1	6
ಸೋಮೇಶ್ವರ ಶತಕ	0	1	6
ದೇವೀ ಮಹಾತ್ಮೆ	0	8	0
ಸ್ತ್ರೀಧರ್ಮನೀತಿ	0	4	0

ಈ ಪುಸ್ತಕಗಳನ್ನು ಒಂದೇಸಲ ತರಿಸತಕ್ಕವರಿಗೆ 1 — 8 — 0ಗೆ ಕೊಡತೇವೆ

ಈ ಮೇಲ್ಕಂಡ 3 ಲೋಟ್‌ಗಳನ್ನೂ ಒಂದೇಸಲ ತಕೊಳ್ಳುವವರಿಗೆ 4 — 0 — 0ಗೆ ಕೊಡುತ್ತೇವೆ ವಿ ಪಿ ಟಪ್ಪಾಲ ಖರ್ಚು ಪ್ರತ್ಯೇಕ ಬೀಳುವದು

ಕಥೆಗಳು.

ಹರಿಶ್ಚಂದ್ರನ ಕಥೆ	0	4	0
ನಳದಮಯಂತಿಯರ ಕಥೆ	0	4	0
ನಗದವರನ್ನು ನಗಿಸುವ ಕಥೆ.	0	3	0
ಬೇತಾಳ ಪಂಚವಿಂಶತಿ ಕಥೆ	0	4	0
ಪಂಚತಂತ್ರ ಕಥೆ	0	8	0
ವಿನೋದರಸಮಂಜರಿ	0	6	0
ಚಂಚಲಕುಮಾರಿ	0	4	0
ಬಕಾವಳಿ ಕಥೆ	0	6	0
ಮೌನಧಾರಿಣಿ ಕಥೆ	0	6	0
ಶೃಂಗಾರ ಶುಕಸಪ್ತತಿ	0	5	0
ವೇದಾಂತ ಶುಕಸಪ್ತತಿ ಸಚಿತ್ರ	2	0	0
ವಿದ್ಯಾಮಂಜರಿ ಬಹು ವಿದ್ಯೆಗಳು	1	4	0
ಭಟ್ಟಿ ವಿಕ್ರಮಾದಿತ್ಯರಾಯನ ಕಥೆ	1	5	0
ಬೃಹತ್ ಕಥಾಮಂಜರಿ	0	1[illegible]	0
ಹುಚ್ಚು ಮಂಡೆಗರ ಕಥೆ	0	6	0
ಮಹಾಭಾರತ ಕಥಾಸಂಗ್ರಹ		6	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಶ್ರೀ ಕೃಷ್ಣಬೋಧಾಮೃತ	0	10	0
ಗಣೇಶ ಲೀಲಾತರಂಗಿಣಿ	0	8	0

ಶ್ರೀ ರಾಧಾಕೃಷ್ಣ ವಿಲಾಸ,

ರಥಬೀದಿ, ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:— ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:— ಕಣ್ಣಿಗೆ ಅಂಜನ ಮಾಡುವಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚವಿಂದು ಗುಣ

ಕ್ರಯ. ರೂ 0—12—0

ಮಹಾಜ್ವರಾಂಕುಶ:— ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0,

ಮೇಹಮುದ್ಗರವಟಿ:— 20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಾಲೆ, ಪಾಂಡು ಗುಣ ಡಜನ್ 1ರ ಕ್ರಯ: 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:— ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:— ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್,

ತೇರಬೀದಿ ಮನೆ ನಂಬ್ರ 288ನೇ, ಮಂಗಳೂರು

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಶಾಕ್ಕರೈನ್ — ಅಥವಾ ಪಂಚಾದರ ಬಿಲ್ಲೆಗಳು:— ಇವು ನಮಗಾಗಿ ಸೀಮೆಯಲ್ಲಿ ಮಾಡಲ್ಪಟ್ಟ ಅಪೂರ್ವವಾಗಿ ೫೦೦ ಮಡುಗುಗಳ ಹೆಚ್ಚಾಗಿ ಪಂಚದಾರ ರುಚಿಯನ್ನು ಕೊಡುವ ಚಿಕ್ಕ ಬಿಲ್ಲೆಗಳ ರೂಪದಲ್ಲಿ ನಾವು ಮಾಡುತ್ತಿರುವೆವು ಒಂದು ಶೇರು ಹಾಲು ಅಥವಾ ಕಾಪಿ ಮತ್ತು ಟೀ ಇವುಗಳ ಉಪಯೋಗದಲ್ಲಿ ಹೇಗೆ ಸಾಧಾರಣವಾದ ಪಂಚದಾರವನ್ನು ಹಾಕುವಲ್ಲಿ ಎಷ್ಟು ರುಚಿ ಕೊಡುವದೋ ಅದಕ್ಕಿಂತಲು ಅಪೂರ್ವವಾದ ಈ ಬಿಲ್ಲೆಗಳಲ್ಲಿ ಎರಡನ್ನು ಹಾಕಿ ಉಪಯೋಗಿಸಿದರೆ ಸಾಕಾಗುವದು ಇವಲ್ಲದೆ ಸರ್ವಸಾಧಾರಣವಾಗಿ ಪಂಚದಾರಿ ಉಪಯೋಗ ದೇಹಕ್ಕೆ ಹಾನಿಕರವಾದ ಬಹುಮೂತ್ರ ಇತ್ಯಾದಿ ಜಾಡ್ಯಗಳ ಅವಲಂಬನೆಯನ್ನು ಈ ಉಪಯೋಗವಾದ ವಸ್ತುವಿಂದ ತೊಲಗಿಸಬಹುದು ಅಥವಾ ಆ ಜಾಡ್ಯಗಳೆಲ್ಲವು ಸೇರಲು ಸಂಭವವಿಲ್ಲ. ಪಂಚದಾರಕ್ಕಿಂತಲು ಇದರ ಬೆಲೆ ಸ್ವಲ್ಪವು ಈಗ ಬಹು ಜನರು ಪಂಚದಾರ ಕಷ್ಟಕರವೆಂದು ಅದನ್ನು ಉಪಯೋಗಿಸದೆ ಕಾಪೀ, ಟೀ ಇತ್ಯಾದಿಗಳನ್ನು ಭಯದಿಂದ ನಿವಾರಿಸುವದು, ಅಲ್ಲದೆ ಪಂಚದಾರೆಯನ್ನು ಹಾಕದೆ ಉಪಯೋಗಿಸುವರು. ಇಂಥಾವರು ಮತ್ತು ಸರ್ವ ಜನರು ಅಭ್ಯಂತರ ಏನಾತ್ರವಿಲ್ಲದೆ, ಉಪಯುಕ್ತವಾದ "ಈಶಾಕ್ಕರೈನ್" ಎಂಬ ಈ ಬಿಲ್ಲೆಗಳನ್ನು ಉಪಯೋಗಿಸಬಹುದು ಇದರ ಉಪಯೋಗಗಳು ಅಸಾಧ್ಯ ಸೀಸಾ ೧ಕ್ಕೆ ೮ ಆಣೆ ವಿ ಪಿ. ೧ರಿಂದ ೧೨ ಸೀಸಾಗಳಿಗೆ ಆಣೆ ೫ ಪ್ರತ್ಯೇಕವು

ಧಾತುಪುಷ್ಟಿ ರಸಾಯನ.— ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿಧವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿ ಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತೀ ಅವಯವದ ನೋವೂ, ಅಶಕ್ತಿಯೂ ಹೋಗಿ ಪುಷ್ಟಿಯೂ, ಬಲವೂ ಉಂಟಾಗುವುದು. ಪೆಟ್ಟಿಗೆ ೧ಕ್ಕೆ ರೂ ೨, ವಿ ಪಿ ಥಾಂಗಿ ಚಾರ್ಜ ೬ ಆಣೆ

ಅಜೀರ್ಣ ಮಾತ್ರೆಗಳು.— ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮಲಬದ್ಧವಿಕೆ, ಹಸಿವಿಲ್ಲದಿರುವದು. ಪಿತ್ತದಿಂದ ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ರೆ ಹತ್ತದಿರುವಿಕೆ, ತಲೆತಿರುಗುವುದು ಇವೆಲ್ಲಾ ನಿರ್ಮೂಲವಾಗುವವು ಪೆಟ್ಟಿಗೆ ೧ಕ್ಕೆ ೮ ಆಣೆ, ವಿ ಪಿ ಥಾಂಗಿ ಚಾರ್ಜುಗಳು ೩ ಪೆಟ್ಟಿಗೆವರಿಗೂ ೫ ಆಣೆ

ಪ್ರಮೇಹ ನಿವಾರಣೆ:— ಯಾವ ಕಾರಣದಿಂದಲಾದರೂ ಸಂಭವಿಸಿದ ಕಷ್ಟನಿದ್ರೆಯಲ್ಲಿ ಉರಿ ಮುಂತಾದವು ವಾಸಿಯಾಗುವುದು. ಸ್ತ್ರೀಪುರುಷರು ಉಪಯೋಗಿಸಬಹುದು ಸೀಸೆ ಒಂದಕ್ಕೆ ರೂ ೧, ೬ ಸೀಸೆವರಿಗೂ ವಿ. ಪಿ. ಚಾರ್ಜ ೫ ಆಣೆ

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ಪೆರುಮಾಳ್ ಕೋಯಿಲ್ ದೇವಸ್ಥಾನ,
SANNATHY, TANJORE.	ಸನ್ನಧಿ, ತಂಜಾವೂರು

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 17ನೇ ಮಾರ್ಚ್ 1916

ಮುಂದಿನ ವರ್ಷದ ಜಮಾ ಖರ್ಚು.

ನಾವು ಕಳೆದ ಸಂಚಿಕೆಯಲ್ಲಿಯೇ ಹಿಂದೂಸ್ಥಾನ ಸರಕಾರದ ೧೯೧೬ನೇ ವರ್ಷದ ಜಮಾ ಖರ್ಚಿನ ವಿಷಯದಲ್ಲಿ ಬರೆಯುವದಿತ್ತು. ಆದರೆ ಮದ್ರಾಸ ವಿದ್ಯಾಇಲಾಖೆಯ ರಿಪೋರ್ಟು ಮುಂತಾದ ಹಲವು ವಿಷಯಗಳನ್ನು ಕುರಿತು ಬರೆಯಲಾರಂಭಿಸಿದ ಲೇಖನವನ್ನು ಕಳೆದಸಾರಿ ಮುಗಿಸುವ ಅಗತ್ಯವಿತ್ತು. ಆದುದರಿಂದ ಈ ಸ್ಟೇಟ್‌ಮೆಂಟನ್ನು ಅವಲೋಕಿಸಲು ಒಂದುವಾರವು ವಿಳಂಬವಾಯಿತು. ಈ ಬಗ್ಗೆ ವಾಚಕರು ಬೇಸರ ಪಡಲಾರರೆಂದು ನಂಬುತ್ತೇವೆ.

ಮೊದಲು ಪ್ರಸಿದ್ಧವಾದಂತೆ ಈ ತಿಂಗಳಿನ ತಾ ೧ರಲ್ಲಿ ದಿಲ್ಲೀಪಟ್ಟಣದಲ್ಲಿ ನೆರೆದಿರುವ ವರಿಷ್ಠಕಾಯದೆ ಕೌನ್ಸಿಲಿನಲ್ಲಿ ಹಿಂದೂಸ್ಥಾನ ಸರಕಾರದ ಕೋಶ ದಿವತಿಕಾರಿಗಳಾದ ಬಹುಮಾನಪಟ್ಟ ಸರ್ ವಿಲ್ಯಮ್ ಮೇಯರ ದೊರೆಗಳು ೧೯೧೬-೧೭ ವರ್ಷದ ಜಮಾಖರ್ಚಿನ ಮೊದಲನೇ ಅಂದಾಜು ಪತ್ರಕವನ್ನು ಪ್ರಕಟಪಡಿಸಿದರು. ಆದರ ಈ ಅಂದಾಜು ಪತ್ರಕದಲ್ಲಿಯ ಮುಖ್ಯಸಂಗತಿಗಳು ಸಾರಾಂಶರೂಪದಿಂದ ಕೆಳಗೆ ಕೊಡಲ್ಪಡುತ್ತವೆ

(೧) ೧೯೧೪-೧೫ನೇ ವರ್ಷದ ಸಮಾಪ್ತವಾದ ಲೆಕ್ಕ (೨) ೧೯೧೫-೧೬ನೇ ವರ್ಷದ ತಿದ್ದಿದ ಅಂದಾಜು. (೩) ೧೯೧೬-೧೭ನೇ ವರ್ಷದ ಜಮಾ ಖರ್ಚಿನ ಅಂದಾಜು,—ಹೀಗೆ ಮೂರು ಸಂಗತಿಗಳನ್ನು ತುಲನೆಗಾಗಿ ಕೋಶಮಂತ್ರಿಗಳಾದ ಮೇಯರ ದೊರೆಗಳು ಸಾದರಪಡಿಸಿರುವರು. ೧೯೧೪-೧೫ನೇ ವರ್ಷದ ಜಮೆಯು ೧೨೧೭೫ ಲಕ್ಷ ರೂಪಾಯಿ ಇರುವದು. ಮತ್ತು ಖರ್ಚು ೧೨೪೯೦ ಲಕ್ಷ ರೂಪಾಯಿ ಇರುವದು. ೧೯೧೫-೧೬ನೇ ವರ್ಷದಲ್ಲಿ ೧೨೬೮೫ ಲಕ್ಷ ರೂಪಾಯಿ ಜಮೆಯಾಗಿದ್ದು ೧೨೭೦೦ ಲಕ್ಷ ರೂಪಾಯಿ ಖರ್ಚಾಗಿರುವದು. ಈ ಎರಡು ವರ್ಷಗಳಲ್ಲಿ ಜಮೆಗಿಂತ ಖರ್ಚು ಹೆಚ್ಚಾಗಿರುವುದರಿಂದ ಕ್ರಮವಾಗಿ ೩೧೫ ಮತ್ತು ೩೦೫ ಲಕ್ಷ ರೂಪಾಯಿ ಆ ಎರಡೂ ವರ್ಷ ಕೂಡಿ ನಷ್ಟಬಂದಿದೆ. ಬರುವ ವರ್ಷದ ಎಂದರೆ ೧೯೧೬-೧೭ನೇ ವರ್ಷದ ಅಂದಾಜು ಕಂದಾಯ, ಅಬಕಾರಿ, ಸುಂಕ, ಸ್ಟಾಂಪು, ಉಪ್ಪು, ಪ್ರಾಪ್ತಿಕರ, ಅಫೀಮು, ಜಂಗಲು, ರೈಲ್ವೆ, ಕಾಲುವೆ, ಮುಂತಾದ ಉತ್ಪನ್ನದ ಬಾಬುಗಳಿಂದ ೧೨೯೬೦ ರೂಪಾಯಿ ಜಮೆಯಲ್ಲಿ ಇಟ್ಟುಕೊಳ್ಳಬಹುದು. ಮತ್ತು ಜಲಸ್ಥಲ ಸೈನ್ಯ ಬುದ್ದಿ, ರೈಲ್ವೆ, ಕಾಲುವೆಗಳಿಗೋಸ್ಕರ ಮತ್ತು ಬೇರೆ ಸಾಲ, ಲೋಕೋಪಯೋಗಿಕೃತ್ಯ, ಪೋಲೀಸ, ಮುಲಕಿ, ಪೆನಶನ್ ಮುಂತಾದ ಅನೇಕ ಖರ್ಚಿನ ಬಾಬುಗಳಲ್ಲಿ ಕೂಡಿ ೧೨೮೭೨ ಲಕ್ಷ ರೂಪಾಯಿ ಬೇಕಾಗುತ್ತದೆ. ಈ ಹೊಸ ವರ್ಷದ ಜಮಾಖರ್ಚನ್ನು ನೋಡಿದರೆ ಖರ್ಚಿಗಿಂತ ಜಮೆಯಲ್ಲಿ ೧೫ ಲಕ್ಷ ರೂಪಾಯಿ ಶಿಲ್ಲುಕಾಗಿ ಉಳಿಯುವುದೆಂದು ಅಂದಾಜು ಪತ್ರಕದಲ್ಲಿ ವಾಚಕರಿಗೆ ಕಂಡುಬರುವುದು. ಇದಲ್ಲದೆ ಈ ಅಂದಾಜ ಪತ್ರಕದಲ್ಲಿ ಇನ್ನೊಂದು ಸಂಗತಿಯು ಕಂಡುಬರುತ್ತದೆ. ಅದೇನೆಂದರೆ ರೈಲ್ವೆ, ಕಾಲುವೆ, ದಿಲ್ಲೀಪಟ್ಟಣ ಇವುಗಳ ಸಲುವಾಗಿ ಹಿಂದಿನ ಎರಡು ವರ್ಷಗಳಂತೆ ಬರುವ ವರ್ಷದಲ್ಲಿಯೂ ೫೯೨ ಲಕ್ಷ ರೂಪಾಯಿ ಸಾಲ ತೆಗೆಯಲಿವೆ.

ಈ ಪ್ರಕಾರ ಬೇರೆ ಬೇರೆ ಸಂಗತಿಗಳನ್ನು ಇನ್ನೂ ವಿವರವಾಗಿ ಹೇಳಿ ಕೋಶ ಮಂತ್ರಿಗಳು ಉಲ್ಲೇಖಿಸಿದ್ದೇನೆಂದರೆ ಸುಂಕ ಮತ್ತು ಅಬಕಾರಿ ಈ ಎರಡು ಖಾತೆಗಳ ಹೊರತು ಬೇರೆಯಾವ ಖಾತೆಗಳಲ್ಲಿಯೂ ಯುರೋಪದ ಯುದ್ಧದ ಮೂಲಕ ಹೇಳುವಷ್ಟು ನಷ್ಟಬಂದಿಲ್ಲ. ಆದರೂ ಕಂದಾಯ ಮತ್ತು ರೈಲ್ವೆ ಬಾಬಿನಲ್ಲಿ ನೆನೆಸಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಉತ್ಪನ್ನ ಬಂದುದರಿಂದಲೂ, ಇನ್ನು ಕೆಲವು ಖಾತೆಗಳ ಖರ್ಚಿನಲ್ಲಿ ಕೊಂಚ ಕೈಬಿಗಿಹಿಡಿದು ಉಳಿಸಿದುದರಿಂದಲೂ ನಷ್ಟಕ್ಕೆ ಆಸ್ಪದವಿಲ್ಲೆಂತ ಕಂಡರೂ ಯುದ್ಧದ ದೆಸೆಯಿಂದ ಲಷ್ಕರೀಖಾತೆಗೆ ಮೊದಲಿನ ಮಂಜೂರಾಯಿತಿಗಿಂತ ೨½ ಕೋಟಿ ಹಣವನ್ನು ಹೆಚ್ಚು ಖರ್ಚುಮಾಡಬೇಕಾಯಿತು. ೧೯೧೬-೧೭ನೇ ವರ್ಷದ ಕ್ರಮದಂತೆಯೇ ೧೯೧೬-೧೭ನೇ ವರ್ಷದಲ್ಲಿಯೂ ಅಂದಾಜ ಪತ್ರಕದಲ್ಲಿ ಜಮೆಯ ಸಂಗತಿಯನ್ನು ಹಿಡಿದು ಹೆಚ್ಚುತ್ತಿರುವ ಖರ್ಚಿನ ಲಕ್ಷ್ಯವನ್ನು ನೋಡಿದ್ದರೆ ಸಾಧಾರಣವಾಗಿ ನಾಲ್ಕು ಕೋಟಿಯ ನಷ್ಟವು ಬರಬಹುದೆಂತ ಕಾಣುತ್ತದೆ. ಇದಲ್ಲದೆ, ಈ ಯುದ್ಧವು ಇನ್ನೆಷ್ಟು ದಿವಸ ನಡೆದೀತೆಂದು ಹೇಳಲು ಸಾಧ್ಯವಿಲ್ಲ. ಈ ಕಾರಣಗಳಿಂದ ಖರ್ಚು ಕಳೆದು ವರ್ಷಾಂತ್ಯದಲ್ಲಿ ಸ್ವಲ್ಪ ದ್ರವ್ಯಶೇಷ ಉಳಿಸುವುದು ಇಷ್ಟವಿದ್ದ ಕಾರಣ

ನವೀನವಾಗಿ ಕೆಲವು ಕರಗಳು

ಹೆಚ್ಚಿಸಲ್ಪಡಬೇಕಾದವು. ಆದುದರಿಂದ ಆಯಾತನಿರ್ಗತ ಸಾಮಾನುಗಳ ಸುಂಕವನ್ನು ಹೆಚ್ಚಿಸಬೇಕಾಗಿದೆ. ಉಪ್ಪಿನ ಕರವು ಮಣಕ್ಕೆ ೧ ರೂ ಇದ್ದುದು ೧-೪ ಮಾಡಿಯದೆ. ಇದು ಹೊರತು ೫ ಸಾವಿರಕ್ಕಿಂತಲೂ ಹೆಚ್ಚಿನ ಉತ್ಪನ್ನದ ಪ್ರಾಪ್ತಿಕರವನ್ನು ಕೂಡ ಹೆಚ್ಚಿಸಬೇಕಾಯಿತು. ಈ ರೀತಿ ಕರವನ್ನೇರಿಸಲು ಸಕಾರಣವಾದ ತೊಂದರೆಗಳನ್ನು ತೋರಿಸಿ ವಿಲ್ಯಮ್ ಮೇಯರ ದೊರೆಗಳು ಆಯಾತನಿರ್ಗತ ಸಾಮಾನುಗಳ ಏರಿಸಿದ ಸುಂಕದ ಪಟ್ಟಿಯನ್ನೂ ಪ್ರಾಪ್ತಿಕರದ ಪಟ್ಟಿಯನ್ನೂ ಕೊಟ್ಟಿರುವರು. ಈ ಎರಡು ಪಟ್ಟಿಗಳಲ್ಲಿ ಪ್ರಾಪ್ತಿಕರದ ಪಟ್ಟಿಯನ್ನು ಮಾತ್ರ ನಾವು ಇಲ್ಲಿ ವಾಚಕರಿಗಾಗಿ ಕೊಡುತ್ತೇವೆ. ಆ ಪಟ್ಟಿಯಲ್ಲಿ ಮೊದಲಿನ ಮತ್ತು ಈಗಿನ ಎರಡೂ ಮಾನಗಳನ್ನು ಅನುಜವಾರ್ಥ ತೋರಿಸುತ್ತೇವೆ

ಪ್ರಾಪ್ತಿಕರ (ವರ್ಷ ೧ಕ್ಕೆ).

ಉತ್ಪನ್ನ	ಮೊದಲಿನ	ಈಗಿನ
(ಅ) ೧ ಸಾವಿರ ತನಕ	ಮಾಫ	ಮಾಫ
(ಆ) ೧ರಿಂದ ೨ ಸಾವಿರ ತನಕ	೧ ರೂಪ್ಯಾಗೆ ೪ ಪೈಯಂತೆ	೪ ಪೈಯಂತೆ
(ಇ) ೨ರಿಂದ ೫ ಸಾವಿರ ತನಕ	,, ,, ೫ ,,	೬ ,,
(ಈ) ೫ರಿಂದ ೧೦ ಸಾವಿರ ತನಕ	,, ,, ೬ ,,	೬ ,,
(ಉ) ೧೦ರಿಂದ ೨೫ ಸಾವಿರ ತನಕ	,, ,, ೯ ,,	೯ ,,
(ಊ) ೨೫ ಸಾವಿರದಿಂದ ಹೆಚ್ಚಿನ ರಖಂ	,, ,, ೬ ,,	೧೨ ,,

ಈ ರೀತಿಯಿಂದ ಹೆಚ್ಚಿಸಲ್ಪಟ್ಟ ಕರಭಾರದ ಉತ್ಪನ್ನವು ೬ ಕೋಟಿ ರೂ ಆಗುವುದು. ಈ ೬ ಕೋಟಿಯಿಂದ ಮೇಲೆ ತೋರಿಸಿದ ೪ ಕೋಟಿ ಹೆಚ್ಚಿನ ಖರ್ಚನ್ನು ವಜಾ ಹಾಕಿದರೆ ೧½ ಕೋಟಿ ದನವು ಸರ್ ವಿಲ್ಯಮ ದೊರೆಗಳಿಗೆ ಶಿಲಕಿನಲ್ಲಿ ಉಳಿಯುವುದೆಂಬ ಭರವಸೆಯುಂಟು.

ಅಸ್ತು, ಈಗ ತೋರಿಸಿರುವ ಕೋಶಾಧಿಕಾರಿಗಳ ಭಾಷಣ ಮತ್ತು ಲೆಕ್ಕದ ತಪಶೀಲು ಇವುಗಳ ಮೇಲಿಂದ ವಾಚಕರಿಗೆ ಕಂಡುಬರಬಹುದೇನಂದರೆ ಬರುವ ವರ್ಷ ಧಾನ್ಯ, ಪ್ರೆಸ್ ಮುಂತಾದ ಯಂತ್ರದ ಸಾಮಾನು, ರೈಲ್ವೆ, ತಾರಾಯಂತ್ರಗಳ ಸಾಹಿತ್ಯ, ಎಲುವಿನ ಜೀನಸುಗಳು, ಸ್ಪ್ರಿಂಗಗಳು, ಬೆಳ್ಳಿ, ಚಿನ್ನ ವಜ್ರ, ಹಾಗೂ ಸ್ಪಿರಿಟು ಮೊದಲಾದ ಆಯಾತನಿರ್ಗತ ಜೀನಸುಗಳ ಮೇಲೆ ಹಾಗೂ ವಿವಕ್ಷಿತ ಉತ್ಪನ್ನದ ಮೇಲೆ ಕೆಲಕೆಲವು ಕರಭಾರವನ್ನು ಹೆಚ್ಚಿಸುವುದು ಸರಕಾರಕ್ಕೆ ಬೇರೆ ಉಪಾಯವಿಲ್ಲಾದುದರಿಂದ ಅಗತ್ಯವೇ ಆಗಿದೆ. ಇಡೀ ಲೋಕವನ್ನು ವ್ಯಾಪಿಸುವಂತಹ ಜಗದ್ವ್ಯಾಪಿಯಾದ ಈವ ಹಾ ಯುದ್ಧವು ನಡೆಯುವಾಗ ಮತ್ತು ನಮ್ಮ ಸರಕಾರವೂ ಆ ಯುದ್ಧದಲ್ಲಿ ಒಂದು ಭಾಗವನ್ನು ವಹಿಸಿರುವಾಗ ಅದರ ಸೆರಗು ಕೊಂಚವೂ ನಮಗೆ ಹತ್ತಕೂಡದೆಂದು ನೆನೆಸುವುದು ಕೇವಲ ಅವ್ಯವಹಾರ್ಯವು. ಹೀಗಿರುವಲ್ಲಿ ಈ ಸ್ವಲ್ಪ ಕರಭಾರದಿಂದಲೇ ಈ ಒಡ ಹಿಂದೀ ರಾಷ್ಟ್ರಕ್ಕೆ ಚಾಣಾಕ್ಷ ಮತ್ತು ಸಹಾನ ಭೂತಿಪ್ರಿಯರಾದ ಮೇಯರ ದೊರೆಗಳು ವಿಡುಗಡೆ ಮಾಡಿದರು. ಇದು ಅವರ ಮತ್ತು ಲೋರ್ಡಹಾರ್ಡಿಂಜ ದೊರೆಗಳ ಉದಾರವಾದ ರಾಜ್ಯಧೋರಣಕ್ಕೆ ಅನುರೂಪವೇ ಆಗಿದೆ. ಇದಕ್ಕಾಗಿ ಈ ಉಭಯತರನ್ನು ಅಭಿನಂದಿಸದೆ ನಮ್ಮಿಂದಿರಲಾಗದು. ಇರಲಿ, ದಿಗ್ದರ್ಶಿಸಿದ ಈ ಅಂದಾಜ ಪತ್ರಕದ ವಿಷಯದಲ್ಲಿ ಕೌನ್ಸಿಲಿನಲ್ಲಿ ವಿವಾದ ನಡೆದು ಇದೇ ತಿಂಗಳಿನ ತಾ. ೨೪ನೆ ದಿವಸ ಇದರ ತೀರ್ಮಾನವು ಆಗುವದಿದೆ. ಆ ತೀರ್ಮಾನವು ಸುಖಪರಿಣಾಮಿಯಾಗಲೆಂದು ನಾವು ಕೋರುತ್ತೇವೆ.

೧೯೧೪-೧೫ನೇ ಒಫಿಶಿಯಲ್ ವರ್ಷದಲ್ಲಿ ಹಿಂದೂಸ್ಥಾನದಲ್ಲಿ ಪರಸ್ಪರ ಸಹಾಯ ಸಂಘಗಳ ಅಭಿವೃದ್ಧಿ.

ಈ ಒಫಿಶಿಯಲ್ ವರ್ಷದಲ್ಲಿ ಪರಸ್ಪರ ಸಹಾಯ ಸಂಘಗಳ ಸಂಖ್ಯೆಯು [illegible] ವರ್ಷಗಳಲ್ಲಿದ್ದಂತೆ ವೃದ್ಧಿಯಾಗಲಿಲ್ಲವೆಂದು ತಿಳಿದುಬರುತ್ತದೆ. ಇದಕ್ಕೆ ಹಲವು ಕಾರಣಗಳನ್ನು ಕೊಟ್ಟಿರುವರು. ಕೆಲವು ಪ್ರಾಂತ್ಯಗಳಲ್ಲಿ ಹಾಲಿ ಇದ್ದ ಸಂಘಗಳ ಸ್ಥಿತಿಯನ್ನು ಉನ್ನತಿಗೆ ತರುವುದಕ್ಕೆ ರಿಜಿಸ್ಟ್ರಾರುಗಳು [illegible] ಕೆಲವು

ಸಂಸ್ಥಾನಗಳಲ್ಲಿ ಜನರಿಂದ ಬಂದ ಅರ್ಜಿಗಳ ತನಖಿ ನಡಿಸಿ ಸಂಘಗಳನ್ನು ಬೇಗ, ಬೇಗನೆ ರಿಜಿಸ್ಟ್ರಿ ಮಾಡುವುದಕ್ಕೆ ಬೇಕಾದ ಸರಕಾರಿ ಮತ್ತು ಗೌರವಾರ್ಥವಾಗಿ ಕೆಲಸ ಮಾಡುವ ಸಿಬಂದಿ ಇಲ್ಲದೆ ಕಾಲ ವಿಳಂಬವಾಯಿತೆಂತಲೂ, ಇನ್ನೂ ಕೆಲವು ಕಡೆಗಳಲ್ಲಿ ಯುದ್ಧದ ಗಲಾಟೆಯಿಂದ ಹಣದ ತುಟ್ಟಿಯಾಗಿದ್ದು ಹೊಸ ಸಂಘಗಳನ್ನು ಸ್ಥಾಪಿಸುವುದಕ್ಕೆ ಅಡ್ಡಿಯಾಯಿತೆಂಬೂ ಕಂಡುಬರುವುದು. ಈಚೆಗೆ ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಆದ ಒಂದು ಚರ್ಚೆಯ ಮೇಲಿಂದ ಮದ್ರಾಸಿನಲ್ಲಿಯೂ ಸಂಘಗಳು ಬೇಗನೆ ರಿಜಿಸ್ಟ್ರಿಯಾಗುವುದಿಲ್ಲವೆಂಬುದು ತಿಳಿದುಬರುತ್ತದೆ. ಅಗತ್ಯವಿರುವ ವಿಚಾರ ನಡಿಸದೆ ಸಂಘಗಳನ್ನು ರಿಜಿಸ್ಟ್ರಿ ಮಾಡುವುದು ಸರಿಯಲ್ಲವೆಂದು ನಾವು ಒಪ್ಪುತ್ತೇವೆ. ದುಡುಕುತನದಿಂದ ಕೆಲಸವು ಹಾಳಾಗುವುದೆಂದು ಎಲ್ಲರಿಗೂ ತಿಳಿದೇ ಇದೆ. ಆದರೆ ಅಗತ್ಯವಿರುವ ಸಿಬಂದಿ ಹೆಚ್ಚಿಸಿದರೆ ಈ ರೀತಿಯ ವಿಚಾರವನ್ನು ನಡೆಸಲಿಕ್ಕೆ ಕಾಲ ವಿಳಂಬವಾಗುತ್ತಿದ್ದಿಲ್ಲ. ಕಾಲ ವಿಳಂಬ ನಿಗ್ರಹವೇ ತಮ್ಮ ಧ್ವಜವಾಗಿಟ್ಟುಕೊಂಡಿರುವ ಇಲಾಖೆಯಲ್ಲಿಯೂ, ಕಾಲ ವಿಳಂಬಕ್ಕೆ ಆಶ್ರಯ ದೊರೆತರೆ ಯಾರ ಬಳಿಯಲ್ಲಿ ದೂರಿಡಬೇಕು? ಒಂದು ವೇಳೆ ಈಗ ಸರಕಾರಿ ದ್ರವ್ಯಾನುಕೂಲವು ಈ ವಿಷಯದಲ್ಲಿ ತತ್ಕಾಲ ಒದಗದಿದ್ದರೆ ಸರಕಾರಿ ಮಂಜೂರಾತಿಯಿಂದ ಗೌರವಾರ್ಥವಾಗಿ ಕೆಲಸ ಮಾಡುವ ಅಸಿಸ್ಟಾಂಟ ರಿಜಿಸ್ಟ್ರಾರುಗಳಾಗಿ ಯೋಗ್ಯ ಗೃಹಸ್ಥರನ್ನು ಏತಕ್ಕೆ ನೇಮಿಸ ಬಾರದು? ಬರೇ ಪ್ರಯಾಣದ ಬತ್ತೆ ಮಾತ್ರ ಸರಕಾರದವರು ಇತರ ಮಾನ್ಯ ಉದ್ಯೋಗಸ್ಥರಿಗೆ ಕೊಟ್ಟಂತೆ ಇವರಿಗೂ ಕೊಡುವುದಾದರೆ ಎಷ್ಟೋ ಜನರು ಪರೋಪಕಾರಕ್ಕಾಗಿ ಈ ಕಾರ್ಯವನ್ನು ವಹಿಸಬಹುದು.

ಯಾವ ಏರ್ಪಾಡನ್ನು ಜಾರಿಗೆ ತರಲಿಕ್ಕೂ ಈಗ ಯುದ್ಧವು ಅಡ್ಡಿಬರುತ್ತದೆ. ಆದರೆ ಹಳ್ಳಿಪಳ್ಳಿಗಳಲ್ಲಿ ಸರಿಯಾಗಿ ವಿಚಾರ ಮಾಡಿದರೆ ಯುದ್ಧದ ದೆಸೆಯಿಂದ ಆದ ಹಣದ ತುಟ್ಟಿಗಿಂತಲೂ, ಈ ಸಂಘಗಳ ಪ್ರಯೋಜನವು ಸರಿಯಾಗಿ ಗೊತ್ತಿಲ್ಲದೆ ಇರುವಿಕೆಯೇ ಪ್ರತಿಬಂಧಕವಾಗಿದೆ ಎಂದು ಹೇಳಬೇಕು. ಈ ವಿಷಯ ಬೋಧನೆಯನ್ನು ಕೊಡುವುದಕ್ಕೆ ಈಗ ನಡೆದ ಪ್ರಯತ್ನಗಳೂ ಇನ್ನೂ ಸಾಕಾಗಲಿಲ್ಲವೆಂದು ನಾವು ದೃಢವಾಗಿ ಹೇಳಬಲ್ಲೆವು.

ಇಡೀ ಹಿಂದೂಸ್ಥಾನದಲ್ಲಿ (ದೊರೆಯ ರಾಜ್ಯಗಳು ಹೊರತು) ೧೯೧೩-೧೪ರಿಂದ ಸಂಘಗಳ ಸಂಖ್ಯೆಯು ೧೫,೬೫೭ಕ್ಕೆ ಏರಿತು ಎಂಬದೆ ಅದೊಂದು ದೊಡ್ಡ ಮಾತಲ್ಲ, ಈ ಪೈಕಿ ೩೯೭ ಸೆಂಟ್ರಲ್ ಸಂಘಗಳೂ, ೧೪೩ ವ್ಯವಸಾಯಕಲ್ಲದ ಸಂಘಗಳೂ ೧೩,೧೦೬ ವ್ಯವಸಾಯ ಸಂಬಂಧವಾದ ಸಂಘಗಳೂ ಇದ್ದವೆಂದು ಗೊತ್ತಾಗುತ್ತದೆ. ಮೆಂಬರುಗಳ ಸಂಖ್ಯೆಯು ೬,೪೪,೬೫೬ರಿಂದ ೮,೨೪,೪೬೯ಕ್ಕೆ ಏರಿತು, ಅವುಗಳ ಬಂಡವಾಳವು ೭೭೯ ಲಕ್ಷ ರೂಪಾಯಿಗಳಿಂದ ೬೯೭ಕ್ಕೆ ವೃದ್ಧಿಯಾಯಿತು. ೧೯೧೫ನೇ ಜೂನು ಅಂತ್ಯಕ್ಕೆ ಆಗ ಮೂರು ವರ್ಷಗಳ ಹಿಂದಿನ ವೃದ್ಧಿಯನ್ನು ಪರಿಶೋಧಿಸಿದರೆ ಮೂರು ವರ್ಷಗಳ ಹಿಂದೆ ೪೧೪೭ ಸಂಘಗಳೂ, ಎರಡು ವರ್ಷಗಳ ಹಿಂದೆ ೩,೩೪೯ ಸಂಘಗಳೂ ಕಳೆದ ವರ್ಷದಲ್ಲಿ ೧೬೪೪ ಸಂಘಗಳೂ ಜನ್ಮವೆತ್ತಿದುವೆಂದು ತಿಳಿದುಬರುತ್ತದೆ. ಇದರಿಂದ ಕಳೆದ ವರ್ಷ ಹೊಸ ಸಂಘಗಳು ಬಹಳ ಕಡಿಮೆಯೆಂದು ಕಾಣುತ್ತದೆ. ಬೆಳೆಯುವ ಸಹಕಾರ ವೃಕ್ಷಕ್ಕೆ ಅಲಕ್ಷ್ಯ, ಕಾಲವಿಳಂಬ ಮುಂತಾದ ಒದನಿಕೆ ಆವರಿಸಿ ವೃಕ್ಷವು ಕುಗ್ಗಿ ಹೋಗದಂತೆ ಪ್ರಯತ್ನಪಡುವುದು ಶ್ಲಾಘ್ಯವಾದರೂ ಜತೆಯಲ್ಲಿಯೆ ಅದು ಕವಲೊಡೆದು ಎಲ್ಲಾ ಕಡೆಗಳಿಗೂ ಪಸರಿಸಿ ಫಲಭರಿತವಾಗುವಂತೆ ಯತ್ನಿಸಲೂ ಬೇಕು. ಈಗ ನೋಡಿದ ಮಟ್ಟಿಗೆ ಎಲ್ಲಾ ವಿಷಯಗಳಲ್ಲಿಯೂ ಪಂಜಾಬು ಪ್ರಥಮ ಸ್ಥಾನವನ್ನು ಹೊಂದುತ್ತದೆಂದು ತಿಳಿದುಬರುತ್ತದೆ. ನಮ್ಮ ಸಂಸ್ಥಾನವು ಸಂಘಗಳ ಸಂಖ್ಯೆಯ ಮಟ್ಟಿಗೆ ಐದನೆದು, ಮೆಂಬರುಗಳ ಸಂಖ್ಯೆ ಮತ್ತು ಬಂಡವಾಳ ನೋಡಿದರೆ ಎರಡನೇದು. ಸೆಂಟ್ರಲ್ ಸಂಘಗಳ ಸಂಖ್ಯೆ ಬರ್ಮಾ ದೇಶದಲ್ಲಿ ಹೆಚ್ಚು. ಇದರಿಂದ ಮೂಲ ಸಂಘಗಳ ಮೇಲ್ವಿಚಾರದ ಭಾರದಲ್ಲಿ ಕೆಲವು ಅಂಶವನ್ನು ಈ ಸೆಂಟ್ರಲ್ ಸಂಘಗಳು ವಹಿಸಿಕೊಳ್ಳುತ್ತವೆ. ಮದ್ರಾಸು ಸಂಸ್ಥಾನದಲ್ಲಿ ಈ ಬಗೆಯ ಸಂಸ್ಥೆಗಳು ೩೦ ಮಾತ್ರವೇ ಇವೆ. ಪಂಜಾಬಿನಲ್ಲಿ ೪೦, ಬಂಗಾಳಿಯಲ್ಲಿ ೪೭, ಸಂಯುಕ್ತ ಸಂಸ್ಥಾನದಲ್ಲಿ ೫೬, ಬರ್ಮಾದಲ್ಲಿ ೧೧೭. ಮದ್ರಾಸು ಸಂಸ್ಥಾನದಲ್ಲಿ ಇಂಥ ಯೂನಿಯನ್ ಮುಂತಾದ ಸೆಂಟ್ರಲ್ ಸಂಘಗಳ ಸಂಖ್ಯೆ ಹೆಚ್ಚಿಸುವ ಕಡೆಗೆ ದೃಷ್ಟಿ ಇಡುವುದು ಅಗತ್ಯ.

ಈ ಯೂನಿಯನ್ನುಗಳೂ ಸೆಂಟ್ರಲ್ ಬೇಂಕುಗಳೂ ಮೂಲಸಂಘಗಳ ಲೆಖ್ಖ ತನಕಿಯನ್ನು ನಡಿಸುವುದಕ್ಕೆ ಬೇರೆ ಸಿಬಂದಿ ಇಡಬಹುದೆಂದೂ ಇದರ ಖರ್ಚನ್ನು ಆ ಮೂಲ ಸಂಘಗಳು ಸೆಂಟ್ರಲ್ ಬೇಂಕಿನಿಂದ ಪಡೆಯುವ ಸಾಲದ ಬಡ್ಡಿಯನ್ನು ದರ ಸ್ವಲ್ಪ ಹೆಚ್ಚಿಸಿ ಹುಟ್ಟುವ ಮುನಾಫೆಯಿಂದ ತಾಳಿಕೊಳ್ಳಬೇಕೆಂದು ಮದ್ರಾಸು ಗವರ್ನಮೆಂಟಿನವರು ನಿರ್ಣಯಿಸಿದ್ದಾರೆ. ಸೆಂಟ್ರಲ್ ಬೇಂಕುಗಳು ಮೂಲ ಸಂಘಗಳಿಗೆ ದ್ರವ್ಯಾನುಕೂಲವನ್ನು ಒದಗಿಸಿಕೊಳ್ಳುವ ಸಂಸ್ಥೆಗಳಾಗಿದ್ದು, ಅಂಥಾ ಮೂಲ ಸಂಘಗಳ ಸಾಲದ ಮಿತಿ ಮುಂತಾದ ಪ್ರಸ್ತಾಪದಲ್ಲಿ ಸಹಜವಾಗಿಯೇ ಕೈ ಹಾಕುವುದು ಅಗತ್ಯ. ಮತ್ತು ಅನೇಕ ಹಳ್ಳಿಗಳಲ್ಲಿ ಈ ಮೂಲಸಂಘಗಳ ಪಂಚಾಯತರು ಲೆಖ್ಖಪತ್ರದ ಅನುಭವ ಸಾಕಷ್ಟು ಇಲ್ಲದವರಾದ ಕಾರಣ ಅವರಿಗೆ ದಾರಿ ತಿದ್ದಿಕೊಡಲಿಕ್ಕೆ ಬೇರೆ ಸಿಬಂದಿ ಅಗತ್ಯವೇ ಇದೆ. ಆದರೆ ಸಾಲದ ಮೇಲಿನ ಬಡ್ಡಿಯ ದರವನ್ನು ಸ್ವಲ್ಪ ಹೆಚ್ಚಿಸಿದರಿಂದ ಉಂಟಾಗುವ ಮುನಾಫೆಯು ಈ ರೀತಿಯಲ್ಲಿ ಲೆಖ್ಖ ತನಕಿ ನೋಡುವ ಸುಪರ್ವೈಜರ್ ಅಥವಾ ಒಡಿಟರುಗಳನ್ನು ನೇಮಕಮಾಡುವುದಕ್ಕೆ ಎಷ್ಟರ ಮಟ್ಟಿಗೆ ಸಾಕಾದೀತು ಎಂದು ನೋಡಲಿಕ್ಕೆ ಇದೆ. ಒರೇ ೧೫ ಯಾ ೨೦ ರೂಪಾಯಿ ಸಂಬಳದವರನ್ನು ಇಡುವುದಕ್ಕಿಂತಲೂ ಆ ಹಣವನ್ನು ಸೆಂಟ್ರಲ್ ಬೇಂಕಿನವರು ಉಳಿಸಿಕೊಳ್ಳುವುದೇ ವಾಸಿ. ಸಾಕಷ್ಟು ವಿದ್ಯಾಬಲವೂ ಈ ಸಹಕಾರ ದ್ರವ್ಯಹಾರದಲ್ಲಿ ನಿಜವಾದ ಪ್ರೇಮವೂ ಇದ್ದವರನ್ನೆ ಈ ಕೆಲಸಕ್ಕೆ ಹಚ್ಚಿದಲ್ಲಿ ಮೂಲ ಸಂಘಗಳಿಗೂ ಈ ಹೊಸ ಸಿಬಂದಿಗಳಿಗೂ ವೈಮನಸ್ಸುಂಟಾಗದೆ ಕೆಲಸವು ಚೆನ್ನಾಗಿ ಸಾಗುವುದು. ಹಳ್ಳಿಪಳ್ಳಿಗಳಲ್ಲಿ ಸರಕಾರದ ಕೆಲಸ ನಡಿಸುವ ಕೀಳು ದರ್ಜೆಯ ನವುಕರ ರೀತಿಯಲ್ಲಿ ತಮ್ಮ ಅಧಿಕಾರ ಬಲವನ್ನು ಸುಪರ್ವೈಜರುಗಳು ತೋರಿಸಲಾರಂಭಿಸಿದರೆ ನೀರಲ್ಲಿ ಹೋಮವಿಟ್ಟಂತೆ ಆದೀತು.

ಇದಕ್ಕಾಗಿಯೇ ಇಂಥ ಕೆಲಸಕ್ಕೆ ಉದ್ಯುಕ್ತರಾಗುವವರು ಕನಿಷ್ಟಪಕ್ಷಕ್ಕೆ ಸ್ಕೂಲ್ ಫೈನಲ್ ಆದರೂ ಪಾಸಾಗಿ ತಮ್ಮ ಸ್ವಂತ ಖರ್ಚಿನಿಂದ ರಿಜಿಸ್ಟ್ರಾರರ ಬಳಿಯಲ್ಲಿ ಟ್ರೈನಿಂಗ್ ಹೊಂದಿ, ಒಳ್ಳೇ ಅನುಭವವುಳ್ಳ ಇನ್ಸ್‌ಪೆಕ್ಟರರ ಕೆಳಗೆ ಕೆಲವು ಸಮಯ ಸಂಘಗಳ ಪರಿಶೋಧನೆಯ ಕೆಲಸದಲ್ಲಿ ಸಹಾಯಕರಾಗಿರಬೇಕೆಂತಲೂ ಹೀಗೆ ತರಬೇತಾದವರ ಒಂದು ಪಟ್ಟಿಯನ್ನು ರಿಜಿಸ್ಟ್ರಾರವರು ತಮ್ಮ ಬಳಿಯಲ್ಲಿಟ್ಟು ಇಂಥವರನ್ನೆ ಸೆಂಟ್ರಲ್ ಬೇಂಕುಗಳ ಕಡೆಯಿಂದ ಒಡಿಟರ್‌ಗಳಾಗಿಯೂ, ಸರಕಾರಿ ಇನ್ಸ್‌ಪೆಕ್ಟರುಗಳಾಗಿಯೂ ನೇಮಿಸಬೇಕೆಂಥ ಮದ್ರಾಸು ಸರಕಾರದವರು ಹುಕುಂ ಕೊಟ್ಟಿರುವರು.

ಜೋಧಪುರದಲ್ಲಿಯ ರಾಜ್ಯಾಧಿಕಾರದ ಸಮಾರಂಭವು.

ಕಳೆದ ತಿಂಗಳ ತಾ ೩ರಲ್ಲಿ ಜೋಧಪುರದ ಮಹಾರಾಜರಿಗೆ ರಾಜ್ಯಾಧಿಕಾರದ ವಸ್ತ್ರಗಳನ್ನು ಸಮರ್ಪಿಸುವ ಸಮಾರಂಭವು ನಡೆಯಿತು. ಆ ಪ್ರಸಂಗದಲ್ಲಿ ಬಹುಮಾನಪಟ್ಟ ವೈಸರಾಯರಾದ ಲೋರ್ಡ ಹಾರ್ಡಿಂಜ ದೊರೆಗಳು ಮುಂದಿನ ಭಾಷಣ ಮಾಡಿದರು —

"ಮಹಾರಾಜಾ ಸರಪ್ರತಾಪ ಸಿಂಗ ಇವರು ಮಾಡಿದ ವಿಜ್ಞಾಪನೆಯನ್ನು ಅಮಾನ್ಯ ಮಾಡುವುದು ನನಗೆ ಬಹು ಭಾರವಾದುದರಿಂದ ಈ ಸಮಾರಂಭಕ್ಕೆ ಬರಲು ನಾನು ಒಪ್ಪಿಕೊಂಡೆನು. ರಾಜ್ಯಾಧಿಕಾರದ ವಸ್ತ್ರಗಳನ್ನು ಸಮರ್ಪಿಸುವ ಈ ಪ್ರಸಂಗವು ನನ್ನ ಆಳಿಕೆಯೊಳಗಿನ ಮೊದಲನೇದಾದ್ದುದರಿಂದ ಹಿಂದೀ ಸರಕಾರವು ದೇಶದೊಳಗಿನ ಸಂಸ್ಥಾನಿಕರ ವಿಷಯದಲ್ಲಿ ಯಾವ ಭಾವನೆಯನ್ನಿಟ್ಟುಕೊಂಡಿದೆ ಮತ್ತು ಹಿಂದಿ ಸಂಸ್ಥಾನಿಕರು ಸಾಮ್ರಾಜ್ಯ ಸಂರಕ್ಷಣೆಗಾಗಿ ಎಷ್ಟು ಮಹತ್ವದ ಕಾರ್ಯಭಾಗವನ್ನು ವಹಿಸಿರುವರು ಎಂಬ ವಿಷಯವಾಗಿ ಎರಡು ಮಾತುಗಳನ್ನು ಹೇಳಬೇಕೆಂತಿದ್ದೇನೆ. ಹಿಂದಿ ಸಂಸ್ಥಾನಿಕರು ತಮ್ಮ ಪೂರ್ವ ಪರಂಪರೆಗೆ ಅನುಗುಣವಾಗಿಯೇ ಸಾಮ್ರಾಜ್ಯ ನಿಷ್ಠೆಯ ಭಾವನೆಯನ್ನು ಸ್ವೀಕರಿಸಿರುವರು. ನಾವು ಕೂಡ ಅವರ ರಾಜ್ಯಕಾರಭಾರ ವಿಷಯದಲ್ಲಿ ಸಹಾನುಭೂತಿಯ ಮತ್ತು ವಿಶ್ವಾಸದ ಧೋರಣವನ್ನೇ ಅಂಗೀಕರಿಸಿದ್ದೇವೆ. ಸಂಸ್ಥಾನದ ಕೆಲಸವು ನ್ಯಾಯ ಮತ್ತು ಪ್ರಗತಿ ಪರವಾದ ಧೋರಣ ಇವುಗಳನ್ನವಲಂಬಿಸಿ ನಡೆದರೆ ಅದರಿಂದ ಸಾಮ್ರಾಜ್ಯಕ್ಕೆ ಬಹಳ ಸಹಾಯವಾಗುತ್ತದೆಂಬುದು ನಮ್ಮ ಪ್ರತ್ಯಯಕ್ಕೆ ಬಂದಿದೆ. ಸಂಸ್ಥಾನದ ಕಾರಭಾರ ವಿಷಯದಲ್ಲಿ ಅಕಾರಣವಾಗಿ ಬ[illegible]ಕ್ಷುಲ್ಲಕ ಮತ್ತು ತ್ರಾಸದಾಯಕ ಬಂಧನಗಳನ್ನು ಹಾಕಿದ್ದಲ್ಲಿ ಸಂಸ್ಥಾನಿಕರ ಸ್ವಾಭಿಮಾನಕ್ಕೆ ತಂಟೆ ಬಂದು ರಾಜ್ಯಕಾರಭಾರದ ಮೇಲೆ ಅದರ ಪರಿಣಾಮವು ಉಂಟಾ[illegible] ಸಂಸ್ಥಾನದ ಪ್ರಜೆಗಳಲ್ಲಿಯೂ ಅಸಂತೋಷ ಉಂಟಾಗುತ್ತದೆ. ಇದರಿಂದ ಸಂಸ್ಥಾನಿಕರ ಅಥವಾ ಪ್ರಜೆಗಳ ಹಾನಿ ಮಾತ್ರ ಸಂಭವಿಸುತ್ತದೆಂತಲ್ಲ, ಸಾಮ್ರಾಜ್ಯ ಸರಕಾರದ ಹಿತ ಸಂಬಂಧಕ್ಕೂ ತೊಡಕು ಬಂದೊದಗುವುದು. ಆದುದರಿಂದ ಸಂಸ್ಥಾನಿಕರ ಕಾ[illegible]ಭಾರದಲ್ಲಿ ನಾವು ಕೇವಲ ಮೇಲಿಂದ ಮೇಲೆ ದೃಷ್ಟಿಯನ್ನಿಡದೆ ಅವರೊಡನೆ ಆಗಾಗ ಒಡನಾಡಿ ಸ್ನೇಹ ಸಂಬಂಧವನ್ನು ಬೆಳಸುವುದು ಯೋಗ್ಯ[illegible], ಅವರ ಮೇ[illegible] ವಿಶ್ವಾಸವನ್ನಿಟ್ಟು ಅವರು ಸಾಮ್ರಾಜ್ಯ ಸರಕಾರದ ಕಾರ[illegible]ದಲ್ಲಿ [illegible] ಕೊಡುವ ಮತ್ತು ಸಹಾಯ ಮಾಡುವ ಮಿತ್ರರೆಂತಲೂ [illegible]

ದೇಶಕಂತಲೂ ನಾವು ಯೋಚಿಸಿದ್ದೇವೆ. ನಾವು ಬೇರೆಯವರೊಡನೆ ಪ್ರೇಮದಿಂದ ಮತ್ತು ವಿಶ್ವಾಸದಿಂದ ನಡೆದುಕೊಂಡರೆ ಅವರೂ ನಮ್ಮೊಡನೆ ಅದೇ ಭಾವನೆಯಿಂದ ವರ್ತಿಸು ವರು. ಇದೇ ತತ್ವವನ್ನವಲಂಬಿಸಿ ನಾನು ಹಿಂದೂ ಸಂಸ್ಥಾನಿಕರೊಡನೆ ವರ್ತಿಸು ತ್ತಿದ್ದೇನೆ; ನಾನು ಅವರ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ತೊಡಕು ಒಂದಿದ್ದು ಇಷ್ಟರ ವರೆಗೆ ಎಲ್ಲಿಯೂ ಕಂಡು ಬರುವುದಿಲ್ಲ. ಎಷ್ಟೋ ಪ್ರಸಂಗಗಳಲ್ಲಿ ನಾನು ಅವರ ಆಲೋಚನೆಯನ್ನು ಕೇಳಿದ್ದೇನೆ, ಮತ್ತು ಅದರ ಉಪಯೋಗವು ಸಹ ಬಹಳ ಚಲೋ ದಾಗಿದೆ. ಈಗಿನ ಯುದ್ಧ ಪ್ರಸಂಗದಲ್ಲಂತೂ ಸಂಸ್ಥಾನಿಕರು ಅತ್ಯಂತ ರಾಜನಿಷ್ಠೆ ಯಿಂದಿದ್ದು ನಮಗೆ ಸಾಂಪತ್ತಿಕ ದೃಷ್ಟಿಯಿಂದಲೂ, ಬೇರೆ ಅನೇಕ ವಿಧದಿಂದಲೂ ಅವರು ಮಾಡಿದ ಸಹಾಯವು ಬಹು ಬೆಲೆಯುಳ್ಳದ್ದಾಗಿದೆಂದು ಹೇಳದೆ ನನ್ನಿಂದಿರ ಲಾಗದು. ಸಾಮ್ರಾಜ್ಯ ಸಂರಕ್ಷಣೆಯ ಸಲುವಾಗಿ ತಮ್ಮ ದ್ರವ್ಯ ಸಂಚಯವನ್ನು ವೆಚ್ಚ ಮಾಡಿ, ಇನ್ನು ಕೆಲವು ಸಂಸ್ಥಾನಿಕರಂತೂ—ಇವರಲ್ಲಿ ಜೋಧಪುರದ ರೀಜಂಟ ಮಹಾ ರಾಜರು ಸಹ ಇದ್ದಾರೆ.—ಸ್ವತಃ ರಣಾಂಗಣದಲ್ಲಿ ಹೋಗಿ ಯಾವ ಸಹಾಯ ಮಾಡಿರುವರೋ ಆ ಕುರಿತು ಪರಮ ಪೂಜ್ಯರಾದ ನಮ್ಮ ಬಾದಶಹರು ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿರುತ್ತಾರೆ. ಸಾಮ್ರಾಜ್ಯಾಧಿಪತಿಗಳಿಗೆ ಹಿಂದೀ ಮಾಂಡ ಲಿಕರು ಮಾಡಿರುವ ಈ ಸಹಾಯದ ಉಲ್ಲೇಖವು ಹಿಂದೂಸ್ಥಾನದ ಇತಿಹಾಸದಲ್ಲಿ ಎಂದೂ ಮಾಯಿಸಿ ಹೋಗದಂತೆ ವಜ್ರಲೇಪವಾಗಿ ನಿಂತೀತೆಂಬುದಕ್ಕೇನೂ ಸಂದೇಹ ವಿಲ್ಲ."

ಈ ಪ್ರಕಾರ ವೈಸರಾಯ ದೊರೆಗಳು ಪ್ರಾಸ್ತಾವಿಕ ಭಾಷಣ ಮಾಡಿ ಅನಂತರ ಜೋಧಪುರದ ಇತಿಹಾಸವನ್ನು ಹೇಳಿದರು, ಮತ್ತು ಸಂಸ್ಥಾನದ ರೀಜಂಟ ಮಹಾ ರಾಜರಾದ ಸರ್ ಪ್ರತಾಪಸಿಂಗ ಇವರು ತಮ್ಮ ಆಳಿಕೆಯಲ್ಲಿ ಜೋಧಪುರ ಸಂಸ್ಥಾನದ, ಕಂದಾಯ ವಸೂಲಿ, ನ್ಯಾಯ, ಶಿಕ್ಷಣ ಈ ಖಾತೆಗಳಲ್ಲಿ ಪ್ರಗತಿಯನ್ನು ಮಾಡಿದ್ದಕ್ಕೆ ಅವರನ್ನು ಗೌರವಪೂರ್ವಕ ಉಲ್ಲೇಖಿಸಿ ಪೂರ್ವಪರಂಪರೆಯಂತೆಯೇ ಉದಾತ್ತ ತತ್ವ ವನ್ನಾಧರಿಸಿಕೊಂಡು ರಾಜ್ಯಕ್ರಮವನ್ನು ನಡಿಸಲು ನವೀನ ಮಹಾರಾಜರಿಗೆ ಉಪದೇಶ ಪರವಾದ ಆಲೋಚನೆಯನ್ನು ಕೊಟ್ಟರು

~~~~~~

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.
Progress of Literature, Science and Art

~~~~~~

ಸಂಯುಕ್ತ ಪ್ರಾಂತ್ಯಗಳಿಗೆ ಸೇರಿದ ಡೆಹರಾಡೂನಿನಲ್ಲಿ ಒಂದು ಹೊಸ ಕೈಗಾ ರಿಕೆಯು ಪ್ರಾರಂಭಿಸಲಾಗಿದೆ. ಇಲ್ಲಿ ಇಂಗ್ಲಿಷ್ ಜನಗಳೇ 'ಡಿಕ್ಸನ್ ಕೆಮಿಕಲ್ ಕಂಪೆನಿ' ಎಂಬ ವ್ಯಾಪಾರ ಸಂಘವನ್ನು ಏರ್ಪಡಿಸಿ, ಅಜವಾನ್ ಎಂಬ ಓಮದಿಂದ ಥೈಮಾಲ್ (Thymal) ಎಂಬ ಸಾರವನ್ನೂ, ವಿಧವಿಧವಾದ ಸತ್ವ ತೈಲಗಳನ್ನು ತೆಗೆ ಯುವ ಒಂದು ಕಾರ್ಖಾನೆಯನ್ನೂ ಹೊರಡಿಸಿರುವರು. ಇಲ್ಲಿ ತಯಾರಾಗುವ ಓಮದ ಸಾರವು ಸ್ವಚ್ಛ ಬಿಳಿದಾದ ಹರಳುಗಳಾಗಿ, ಜರ್ಮನಿಯಿಂದ ಇದುವರೆಗೆ ಈ ದೇಶಕ್ಕೆ ಬರುತ್ತಿದ್ದ ಜೀನಸಿಗಿಂತ ಉತ್ತಮವಾಗಿದೆ. ಇಷ್ಟೇ ಅಲ್ಲದೆ ಈ ಹರಳುಗಳನ್ನು ಮಾಡು ವಾಗಲೇ ಅದರ ಉಪಾಂಗ (Bye Product)ವಾಗಿ ಒಂದು ಪರಿಷ್ಕಾರವಾದ ದುರು ವಾಸನೆ ನಿವಾರಿಸುವ (Disinfectant) ಪದಾರ್ಥವೂ ಮಾಡಲಾಗುತ್ತಿದೆ. ಸತ್ವ ತೈಲಗಳನ್ನೂ, ಓಮದ ಸಾರವನ್ನೂ ತೆಗೆಯಲು ಬೇಕಾದಷ್ಟು ಬೀಜಗಳು ದೊರೆಯು ವಂತೆ ಆ ಕಂಪೆನಿಯವರು ಸಮೀಪದಲ್ಲಿಯೇ ವಿಸ್ತಾರವಾದ ಖಾಲಿ ಸ್ಥಳವನ್ನು ಕ್ರಯಕ್ಕೆ ಪಡೆದು ಆ ಬೀಜದ ಗಿಡಗಳನ್ನು ಅಲ್ಲಿಯೇ ಬೆಳೆಯಿಸಬೇಕೆಂದು ಉದ್ದೇಶಿಸಿರುವರು

* * *

ಮೌಲವಿ ಅಬ್ದುಲ್ ಕರೀಮ್ ಎಂಬ ಮಹಮ್ಮದೀಯ ಸದ್ಗೃಹಸ್ಥರು ಬಂಗಾಳಾ ಸಾಹಿತ್ಯದ ವಿಷಯದಲ್ಲಿ ಮಾಡಿದ ಅಮೋಘವಾದ ಪರಿಶೋಧನೆಗಳಿಗೆ ಮೆಚ್ಚಿ ಬಂಗಾ ಳದ 'ಧರ್ಮ ಮಂಡಲಿ' ಎಂಬ ಸಭೆಯವರು ಅವರಿಗೆ 'ಸಾಹಿತ್ಯ ವಿಶಾರದ' ಎಂಬ ಬಿರುದು ಕೊಟ್ಟು ಗೌರವಿಸಿರುವರಾಗಿ ತಿಳಿಯಬರುತ್ತಿದೆ. ಭಾಷಾ ವಿಷಯದಲ್ಲಿ ಜಾತಿ ಮತಭೇದವಿರುವುದಿಲ್ಲ. ಇದನ್ನು ಮನವರಿಕೆ ಮಾಡಿಕೊಂಡು ಮೌಲವೀ ಸಾಹೇಬರು ಬಂಗಾಳಿ ಭಾಷೆಯನ್ನು ಸ್ವಭಾಷೆಯೆಂದು ಪ್ರೀತಿಸಿದುದೂ ಹಿಂದೂ ಬಾಂಧವರು ಅವರ ವಿಷಯದಲ್ಲಿ ಸಂತುಷ್ಟರಾಗಿ ಅವರನ್ನು ಈ ರೀತಿ ಮನ್ನಿಸಿದುದೂ ಯುಕ್ತವಾಗಿದೆ.

* * *

ಕೇವಲ ಕಠಿಣವಾದ ವಸ್ತುವನ್ನು ವಜ್ರದ ಉಪಮೆ ಕೊಟ್ಟು ವರ್ಣಿಸುವುದು ಜಗತ್ತಿನಲ್ಲಿ ವಾಡಿಕೆಯಾಗಿರುವುದಾದರೂ ಅದಕ್ಕೂ ಗಟ್ಟಿಯಾದ "ಟೆಂಟಲಮ್, (Tantalum) ಎಂಬ ಒಂದು ಲೋಹವನ್ನು ರಸಾಯನ ಶಾಸ್ತ್ರಿಗಳು ಬಲ್ಲರು. ಈ ಟೆಂಟಲಮ್ ಲೋಹವು ದೊರೆವುದು ಅಪೂರ್ವವಾದರೂ ಕೇವಲ ದುಸ್ಸಾಧ್ಯವಲ್ಲ. ಅದರ ತೆಳುವಾದ ಒಂದು ತಗಡನ್ನು ವಜ್ರದ ಮೊನೆಯುಳ್ಳ ಬೈರಿಗೆಯಿಂದ ಅಹೋ ರಾತ್ರಿ ಮೂರು ದಿನ ಕೊರೆದರೂ ತೂತಾಗದೆ ಸಣ್ಣ ಗುರುತು ಮಾತ್ರ ಬಿದ್ದು ಬೈರಿ ಗೆಯ ಮೊನೆಯೇ ಸವೆದು ಹೋಯಿತು. ಈ ಲೋಹವನ್ನು ಕತ್ತರಿಸುವುದು ಕಷ್ಟ ವೆಂದೂ ತಕ್ಕಷ್ಟು ಪ್ರಮಾಣದಲ್ಲಿ ನಿರ್ಮಿಸಲು ಸಾಧ್ಯವಾದರೆ ಅದರಿಂದ ತುಂಬ ಉಪ ಯೋಗ ಹೊಂದಬಹುದೆಂದೂ ಗಟ್ಟಿಯಾದ್ದೂ ಪೆಡಸಾಗಿರದ ಸ್ವಲ್ಪ ವಸ್ತುಗಳೊಳಗೆ ಅದೂ ಒಂದಾಗಿರುವುದೆಂದೂ ತಿಳಿದುಬರುತ್ತದೆ

* * *

ಇಂದೋರಿನ ಹೋಳಕರ ಮಹಾರಾಜರವರು ಹಿಂದೀ ಮತ್ತು ಮರಾಠೀ ವಾಙ್ಮ ಯಗಳ ಉನ್ನತಿಗಾಗಿ ಈ ವರ್ಷದ ಬಗ್ಗೆ ಐದು ಸಾವಿರ ರೂಪಾಯಿ ಕೊಟ್ಟು ಅದರ ಆಡಳಿತೆ ನೋಡುವುದಕ್ಕೆ ಒಂದೊಂದು ಭಾಷೆಗೆ ಒಂದೊಂದು ಕಮಿಟಿ ನೇಮಿಸಿರುವರು. ಕೊಲ್ಹಾಪುರ, ಬಡೋದೆ, ಗ್ವಾಲೇರ, ಇಂದೋರ ಮೊದಲಾದ ದೇಶೀಯ ರಾಜ್ಯಗಳ ಸಹಾಯದಿಂದಲೇ ಮರಾಠಿಯು ಇತ್ತಲಾಗೆ ಬಹು ಪ್ರಬಲವಾಗ ತೊಡಗಿದೆ

* * *

ಕಳೆದ ನವೆಂಬರು ತಿಂಗಳಲ್ಲಿ ಕವಿವರ್ಯರಾದ ಡಾಕ್ಟರ್ ಸರ್ ರವೀಂದ್ರನಾಥ ಠಾಕೂರರವರು ಲಾಹೋರಿಗೆ ಹೋಗಿದ್ದಾಗ ಗಾನ ವಿಷಯವಾಗಿ ತಮ್ಮ ಅಭಿಪ್ರಾಯ ವನ್ನು ಈ ಕೆಳಗಿನಂತೆ ಪ್ರದರ್ಶಿಸಿದರು. "ಅಮೇರಿಕದ ಯೂನಿವರ್ಸಿಟಿಗಳ ಹಾಗೂ ಇಂಗ್ಲಂಡಿನ ಆಕ್ಸ್‌ಫರ್ಡ ಮತ್ತು ಕ್ಯಾಂಬ್ರಿಜ ಯೂನಿವರ್ಸಿಟಿಗಳ ಅಭ್ಯಾಸ ಕ್ರಮ ದಲ್ಲಿ ಗಾನವೂ ಸಮಾವಿಷ್ಟವಾಗಿರುವದಲ್ಲದೆ ಕೆಲಕೆಲವು ವಿಶ್ವವಿದ್ಯಾಲಯಗಳಲ್ಲಿ 'ಮಾಸ್ಟರ್ ಆಫ್ ಮ್ಯೂಝಿಕ್' (Master of music) ಎಂಬ ಪದವಿಯು ಕೂಡ ಕೊಡಲ್ಪಡುತ್ತದೆ. ಪೂರ್ವಕಾಲದಲ್ಲಿ ಗಾನ ಕಲೆಗೆ ಹಿಂದೂಸ್ಥಾನದಲ್ಲಿ ತುಂಬ ಪ್ರೋ ತ್ಸಾಹವಿದ್ದಿತು, ಮತ್ತು ಹೀಗಾಗಿ ಗಾನ ಕಲೆಯು ಬಹೂನ್ನತಿ ಸ್ಥಿತಿಗೆ ಏರಿತು ಅರ್ವಾಚೀನ ವಿದ್ಯಾವಂತರಿಗೆ ಗಾನದಲ್ಲಿ ಪ್ರೀತಿ ಇರುವುದಾದರೂ ಅದನ್ನು ವಿಕಾಸ ಗೊಳಿಸುವ ಶಕ್ತಿಯು ಅವರಲ್ಲಿ ಇರುವುದಿಲ್ಲ. ಹೆಣ್ಣು ಮಕ್ಕಳ ಶಾಲೆಗಳಲ್ಲಿ ಗಾನವು ಆವಶ್ಯಕ ವಿಷಯವಾಗಿರಬೇಕು. ತರುಣರು ಗಾನವನ್ನು ಅವಶ್ಯವಾಗಿ ಅಭ್ಯಸಿಸ ಬೇಕು, ಆದರೆ ಅದಕ್ಕಾಗಿ ಇತರ ಅಭ್ಯಾಸವನ್ನು ಉಪೇಕ್ಷಿಸಲಾಗದು. ಹಾರ್ಮೋ ನಿಯಂ ವಾದ್ಯದ ಸ್ವರವು ಕೇವಲ ಕರ್ಕಶವಾಗಿದೆ. ಅದನ್ನು ಅಲ್ಪ ಶ್ರಮ ವ್ಯಯ ದಿಂದ ಕಲಿಯಬಹುದಾದರೂ ಭಾರತೀಯರ ಅಭಿರುಚಿಗೆ ಅದು ಸರಿ ಹೋಗತಕ್ಕ ದಲ್ಲ. ದೊಡ್ಡ ಸ್ವರದ ಪರದೇಶೀಯ ವಾದ್ಯಗಳಲ್ಲಿ ನನಗೆ ಮೆಚ್ಚುಗೆ ಇಲ್ಲ. ಸತಾರ ಸಾರಂಗಿಯಂತೆ ಮೃದು ಮಂಜುಳವಾದ ಸ್ವರವುಳ್ಳ ದೇಶೀಯ ವಾದ್ಯಗಳೇ ನನಗೆ ಬಹು ಪ್ರಿಯವಾಗಿದೆ."

* * *

ಸಿಲೋನಿನ ಟೈಮ್ಸ್ ಎಂಬ ಪತ್ರಿಕೆಯಿಂದ ಈ ಕೆಳಗಣ ಸಮಾಚಾರವು ತಿಳಿದು ಬರುತ್ತಿದೆ —"ಹಲವು ಜನ ಡಾಕ್ಟರುಗಳನ್ನೂ ಇತರ ದೊಡ್ಡ ಮನುಷ್ಯರನ್ನೂ ಮುಂ ಟ್ಟುಕೊಂಡು ಎಮ್. ಡೋನಾಲ್ಡ್ ಉಬಯ ಶೇಖರ ಎಂಬವರು ಸರ್ಪದಂಶಕ್ಕೆ ಒಂದು ಸುಲಭ ಚಿಕಿತ್ಸೆ ಇರುವುದೆಂಬುದನ್ನು ಪರೀಕ್ಷಾಪ್ರಯೋಗದಿಂದ ತೋರಿಸಿ ಕೊಟ್ಟರು. ಸಾಮಾನ್ಯವಾದ ಒಂದು ನಾಯಿಯನ್ನು ಕಟ್ಟಿ ಹಾಕಿ, ತಂದಿದ್ದ ಒಂದು ನಾಗ ಹಾವಿಂದ ಆ ನಾಯಿಯನ್ನು ಚೆನ್ನಾಗಿ ಕಚ್ಚಿಸಿದರು. ನಾಯಿಯು ವೇದನೆಯಿಂದ ಕೂಗುತ್ತಾ ಕೆಲವು ನಿಮಿಷಗಳೊಳಗೆ ಮೂರ್ಛೆ ಹೊಂದಿ ಬಿದ್ದಿತು. ಆಗ (ಬಾಳೆಯ ಜಾತಿಭೇದವನ್ನು ಲೆಕ್ಕಿಸದೆ) ಒಂದು ಬಾಳೆಯ ಗಿಡದ ರಸವನ್ನು ಆಗಲೇ ಹಿಂಡಿ ಕಾಫಿ ಕುಡಿಯುವಂಥ ಗಿಂದಲು ತುಂಬ ರಸವನ್ನು ಅದಕ್ಕೆ ಕುಡಿಸಿದರು. ಬಳಿ ಕ್ಷಿಪ್ರದಲ್ಲಿಯೇ ನಾಯಿಗೆ ಎಚ್ಚರಿಕೆ ಬಂದಿತು ಮತ್ತು ಅರ್ಧ ತಾಸಿನೊಳಗಾಗಿ ನಾಯಿಯು ಪೂರಾ ಗುಣ ಹೊಂದಿ ನಿಂತುಕೊಂಡಿತು. ಅಲ್ಲಿ ನಿಂತಿದ್ದ ಡಾಕ್ಟರು ಗಳು ಪರೀಕ್ಷಿಸಿ ನಾಯಿ ದೇಹದೊಳಗಣ ವಿಷವು ಪರಿಹಾರವಾಯಿತೆಂದು ಒಪ್ಪಿದರು. ಇದೇ ರೀತಿ ಒಂದು ಕೋಳಿಯನ್ನು ಕೂಡ ಹಾವಿನಿಂದ ಕಚ್ಚಿಸಿ ಬದುಕಿಸಿದರು." —ಈ ಔಷಧವು ಬಹು ಸುಲಭವಾಗಿರುವುದರಿಂದ ನಾಗರ ಹಾವು ಕಚ್ಚಿದ ಸಂದರ್ಭಗಳಲ್ಲಿ ಜನರು ಅತ್ಯಗತ್ಯವಾಗಿ ಪರೀಕ್ಷಿಸಿ ನೋಡತಕ್ಕದಾಗಿದೆ

* * *

ವೈದ್ಯಶಾಸ್ತ್ರ ಪರಿಶೋಧನೆಗಾಗಿ ಅಮೇರಿಕದ ಕೋಟ್ಯಾಧೀಶರಾದ ಮಿ| ರಾ[illegible] ಫೆಲ್ಲರ್ ಎಂಬವರು ದೊಡ್ಡದಾದ ಒಂದು ವೃತ್ತಿ (Fellowship)ಯನ್ನು [illegible] ವರು. ಈ ವೃತ್ತಿಯನ್ನು ಪಡೆದವರಾದ [illegible]

...ತ್ರೆ'ವೆಂಬ ಭಯಂಕರವಾದ ವ್ಯಾಧಿಗೆ ಬಹು ಸಮರ್ಪಕವೂ ಕೇವಲ ಸುಲಭವೂ ಆದ ಚಿಕಿತ್ಸೆಯನ್ನು ಕಂಡು ಹಿಡಿದಿರುವರೆಂದು ಅಮೇರಿಕದ 'Journal of medical sciences' ಎಂಬ ಪತ್ರಿಕೆಯು ತಿಳಿಸುತ್ತಿದೆ. ಈ ಚಿಕಿತ್ಸೆಯನ್ನು ಅಮೇರಿಕದ ಹಲವು "ಆಸ್ಪತ್ರೆ"ಗಳಲ್ಲಿ ಉಪಯೋಗಿಸಿ ತುಂಬ ಅನುಕೂಲವಾದ ಫಲಿತಾಂಶವು ದೊರಕಿರುವುದು. ಈ ಔಷಧದಲ್ಲಿ ಮುಖ್ಯವಾಗಿ ಬ್ಯಾಕಾರ್ಬೋನೇಟ್ ಆಫ್ ಸೋಡಿಯಮ್ (Bicarbonate of Sodium) ಎಂಬ ಲವಣವೂ ತಿನ್ನುವ ಒಂದಿಷ್ಟು ಉಪ್ಪೂ ಬೀಳುತ್ತವಂತೆ. ಕೇವಲ ಅಪಾಯಕರವಾದ ಸ್ಥಿತಿಯಲ್ಲಿ ಕೂಡ ಇದನ್ನು ಪಿಚಕಾರಿಯ (Hypodermic Syringe) ಮೂಲಕ ಹೊಟ್ಟೆಗೆ ಸೇರಿಸಿ ಗುಣಪಡಿಸಬಹುದಾಗಿದೆಯಂತೆ. ಭಾರತ ವರುಷದಲ್ಲಿ ಇದನ್ನು ಪರೀಕ್ಷಿಸಿ ನೋಡುವುದು ಅಗತ್ಯವೆಂದು ನಾವು ತಿಳಿಯುತ್ತೇವೆ.

ಬ್ರಾಹ್ಮಣ ವಿಧವೆಯರ ಸರಕಾರೀ ವಸತಿಗೃಹ.

ಮದ್ರಾಸು ಪಟ್ಟಣದಲ್ಲಿ ಬ್ರಾಹ್ಮಣ ವಿಧವಾ ಸ್ತ್ರೀಯರಿಗಾಗಿ ಸರಕಾರದವರು ಒಂದು ವಸತಿಗೃಹ (Hostel) ವನ್ನು ಏರ್ಪಡಿಸಿರುವರೆಂತಲೂ ಈಗಿರುವುದಕ್ಕಿಂತಲೂ ಇನ್ನೂ ಹೆಚ್ಚು ವಿಧವೆಯರು ಆ ವಸತಿಗೃಹದ ಪ್ರಯೋಜನವನ್ನು ಪಡಕೊಳ್ಳಬಹುದೆಂತಲೂ ಸೆಂಟ್ರಲ್ ಸರ್ಕಲಿನ ಬಾಲಿಕಾ ಪಾಠಶಾಲೆಗಳ ಪರೀಕ್ಷಾಕರ್ತ್ರಿಯಾದ ಮಿಸೆಸ್ ಸಿ. ಎಮ್. ಲಿಂಚ್ ಬಿ. ಎ., ಇವರಿಂದ ಇಲ್ಲಿಯ ಅಸಿಸ್ಟಾಂಟ್ ಇನ್ಸ್‌ಪೆಕ್ಟರರುಗಳಿಗೆ ಒಂದು ಸರಕ್ಯುಲರ್ ಬಂದಿರುವುದು. ಅವರು ಅದನ್ನು ಪ್ರಕಟನಾರ್ಥ ನಮ್ಮ ಕಡೆಗೆ ಕಳುಹಿಸಿರುವರು. ಈ ಸರಕ್ಯುಲರಿನ ಸಾರಾಂಶವೇನೆಂದರೆ—

ಮದ್ರಾಸು ಪಟ್ಟಣದಲ್ಲಿ ೧೯೧೨ನೇ ಇಸವಿಯ ಸಪ್ಟಂಬರ ತಿಂಗಳಿನಲ್ಲಿ ಬ್ರಾಹ್ಮಣ ವಿಧವೆಯರಿಗಾಗಿ ಒಂದು ಹೊಸ್ಟೆಲು ಸ್ಥಾಪಿಸಲ್ಪಟ್ಟಿದೆ. ಈ ವಸತಿಗೃಹದಲ್ಲಿ ಪ್ರಕೃತ ೩೯ ಬಾಲವಿಧವೆಯರಿದ್ದು ಅವರು ಅಲ್ಲಿರುವ ಶಿಕ್ಷಕರಿಂದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ. ಸರಕಾರಿ ಸೆಕೆಂಡರಿ ಶಾಲೆಯಲ್ಲಾಗಲಿ, ಟ್ರಿಪ್ಲಿಕೇನಿನ ಟ್ರೇನಿಂಗ್ ಶಾಲೆಯಲ್ಲಾಗಲಿ ಪ್ರವೇಶಿಸುವ ಪಾತ್ರತೆಯು ವಿಧವೆಯರಲ್ಲಿ ಬರುವತನಕ ಅವರಿಗೆ ಈ ವಿದ್ಯಾಭ್ಯಾಸವು ಕೊಡಲ್ಪಡುತ್ತದೆ. ಇದು ಹೊರತು, ಆ ವಿಧವೆಯರಿಗೆ ಸಂಸ್ಕೃತ ಮತ್ತು ಸಂಗೀತ ಈ ವಿಷಯಗಳನ್ನು ಪ್ರತ್ಯೇಕವಾಗಿ ಕಲಿಸುವುದಲ್ಲದೆ ಅಧ್ಯಾಪನೆ ಹಾಗೂ ವೈದ್ಯಕ ವೃತ್ತಿಯಲ್ಲಿ ಅವರು ಅರ್ಹರಾಗುವಂತೆ ಬೇಕಾದ ಯತ್ನವು ಮಾಡಲ್ಪಡುತ್ತದೆ. ಈ ವಸತಿಗೃಹದ ಆಡಳಿತವನ್ನು ಮದ್ರಾಸು ಯುನಿವರ್ಸಿಟಿಯ ಗ್ರಾಜ್ಯುಯೇಟರಾದ ಮತ್ತು ಟ್ರಿಪ್ಲಿಕೇನಿನ ಶಾಲೆಯ ವಿದ್ಯಾಮಂಡಲದ ಮೆಂಬರುಗಳಾದ ಭಗಿನೀ ಎಚ್. ಎಸ್. ಸುಬ್ಬಾಲಕ್ಷ್ಮಿ ಅಮ್ಮಾ ಇವರು ನಡಿಸುತ್ತಲಿದ್ದಾರೆ. ಆ ವಿಸ್ತೃತವಾದ ವಸತಿಗೃಹದಲ್ಲಿ ಖಾಲಿಯಾದ ಸ್ಥಳವು ಸದ್ಯ ಇರುವುದರಿಂದ ಕನಿಷ್ಟಪಕ್ಷಕ್ಕೆ ೭೫ ಬ್ರಾಹ್ಮಣ ವಿಧವೆಯರಿಗೆ ಅನುಕೂಲತೆಯುಂಟಾಗಲು ಅಡ್ಡಿಯಿಲ್ಲ. ಆದುದರಿಂದ ಈ ಜಿಲ್ಲೆಯಲ್ಲಿ ಇದ್ದ ಬ್ರಾಹ್ಮಣ ಬಾಲವಿಧವೆಯರನ್ನು ಈ ವಸತಿಗೃಹದ ಸುದ್ದಿ ಕೊಟ್ಟು ಕಳುಹಿಸಲು ಅಸಿಸ್ಟಾಂಟ್ ಇನ್ಸ್‌ಪೆಕ್ಟರರಿಗೆ ಮಿಸ್. ಲಿಂಚ್ ದೊರೆಸಾನಿಯವರು ವಿನಂತಿ ಮಾಡಿರುತ್ತಾರೆ.

ವಸ್ತುತಃ ವಿಚಾರ ಮಾಡಿ ನೋಡಿದರೆ ಪೂನಾದಲ್ಲಿ ಪ್ರೊ. ಕರ್ವೆಯವರಂತೆ ಜನರೇ ಇಂತಹ ಸಂಸ್ಥೆಗಳನ್ನು ಸ್ಥಾಪಿಸಬೇಕಾದುದು. ಆದರೆ ನಮ್ಮ ಈ ಮದ್ರಾಸ ಸಂಸ್ಥಾನವು ಸ್ವಾವಲಂಬನೆಯ ಕೆಲಸದಲ್ಲಿ ಹಿಂದುಳಿಯುತ್ತದೆಂಬುದು ಸರ್ವರಿಗೆ ಗೊತ್ತಿದ್ದ ಸಂಗತಿಯೇ. ಸ್ವಾವಲಂಬನೆಯು ಬಹುಮಾನಪಡಿಯಲಾಗದೇ ಇದ್ದರೂ ಸರಕಾರದವರು ಪ್ರಾರಂಭಿಸಿದ ಈ ಕಾರ್ಯದಲ್ಲಿ ಜನರು—ವಿಶೇಷತಃ ನಮ್ಮ ಜಿಲ್ಲೆಯವರು—ಮನಸ್ಸು ಹಾಕುವುದು ಯುಕ್ತವೆಂದು ನಾವು ಭಾವಿಸುತ್ತೇವೆ. ಬಾಲವಿಧವೆಯರ ಶೀಲಕ್ಕೆ ಹಾನಿಬಾರದಂತೆ ಅಲ್ಲಿಯ ಅಧಿಕಾರಸ್ಥರು ನೋಡಿಕೊಂಡಿರುವರೆಂಬುದಕ್ಕೇನೂ ಸಂದೇಹವಿಲ್ಲ. ಆದುದರಿಂದ ಈ ವಿಷಯದಲ್ಲಿ ಯಾರೂ ಸಂಶಯಪಡಲಾರರೆಂದು ನಂಬುತ್ತೇವೆ. ಆ ವಸತಿಗೃಹದಲ್ಲಿ ಪ್ರವೇಶಿಸಲಿಚ್ಛಿಸುವವರು ಬಾಲಿಕಾ ಪಾಠಶಾಲೆಯ ಪರೀಕ್ಷಾಕರ್ತ್ರಿಯಾದ ಮೇಲ್ಕಂಡ ಮಿಸ್. ಲಿಂಚ ಇವರ ವಿಳಾಸಕ್ಕಾಗಲಿ, ಇಲ್ಲಿಯ ಅಸಿಸ್ಟಂಟ ಇನ್ಸ್‌ಪೆಕ್ಟರರಿಗಾಗಲಿ ಇಲ್ಲವೆ ಸ್ವದೇಶಾಭಿಮಾನಿ ಸಂಪಾದಕರಿಗಾಗಲಿ ಪತ್ರ ಬರೆದು ಬೇಕಾದ ವಿಶೇಷ ಸಂಗತಿಗಳನ್ನೆಲ್ಲ ತಿಳಿದುಕೊಳ್ಳಬಹುದು.

ಪತ್ರವ್ಯವಹಾರ.

ಆಯ್ಯಾ ಪತ್ರಕರ್ತರೇ,

ಶಾಲಾ ವಿದ್ಯಾರ್ಥಿಗಳಲ್ಲಿ ಸಿಗರೇಟು, ಬೀಡಿ ಸೇದುವ ಅಭ್ಯಾಸವು ದಿನೇ ದಿನೇ ವೃದ್ಧಿಯಾಗುವಂತೆ ತೋರುತ್ತಿದೆ. ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಮಕ್ಕಳು ಬೀಡಿ ಸೇದುವ ಅಭ್ಯಾಸವನ್ನೂ ಸೆಕಂಡರಿ ವ ಕಾಲೇಜು ತರಗತಿಯ ವಿದ್ಯಾರ್ಥಿಗಳು ಸಿಗರೇಟು ಸೇದುವ ಅಭ್ಯಾಸವನ್ನೂ ಬಹಳೇ ಮಾಡಿ ಕಲಿತಿರುವರು ಎಂಬ ಮಾತನ್ನು ೪-೫ ಗಂಟೆ ಸಮಯಕ್ಕೆ ಶಾಲೆ ಕಾಲೇಜಿಯಿಂದ ಮನೆ ಅಥವಾ ಮೈದಾನಿಗೆ ಹೋಗುವ ವಿದ್ಯಾರ್ಥಿಗಳನ್ನು ದಾರಿಯಲ್ಲಿ ನೋಡಿದವರಾದೂ ಅಲ್ಲಗಳೆಯರು. ಸಿಗರೇಟು, ಬೀಡಿಗಳು ಬಾಯಿಗೆ ರುಚಿಕರವಾಗಿಯೂ ರಮಣೀಯಕವಾಗಿಯೂ ಆಗಿರಬಹುದು. ಆದರೆ ಸಿಗರೇಟ್ ದೇಶದ ಭವಿಷತ್ ಉನ್ನತಿಗೆ ಮೂಲಕಾರಣರಾದ ವಿದ್ಯಾರ್ಥಿಗಳನ್ನು ದೌರ್ಬಲ್ಯರಾಗ ಮಾಡಿ ಬೇಗನೇ ಸಮಾಧಿಯ ಕಡೆಗೆ ಸೈಯ್ಯುವ ಉದ್ದೇಶದಿಂದ ಯಾವದೋ ಒಂದು ಕೆಟ್ಟ ದೇವತೆಯಿಂದ ರಮಣೀಯಕವಾಗಿಯೂ ಮೋಹಕವಾಗಿಯೂ ಮಾಡಲ್ಪಟ್ಟಂಥಾ ಒಂದು ಮಹಾ ವಿಷ ಪದಾರ್ಥವಾಗಿದೆಂಬ ವಿಷಯವು ಈಗಲೀಗ ಹೆಚ್ಚಿನವರಿಗೆ ತಿಳಿದು ಬಂದದೆ. ಮಹಾ ಕವಿಯಾದ ರೋಬರ್ಟ್ ಬರ್ನ್ಸ್ ಎಂಬವರು "ಸಿಗರೇಟ್ ಸೇದುವ ಹುಡುಗನು ಮಗ್ಗುಲನ್ನು ಕಡಿದು ಬಿಟ್ಟ ಸೊನ್ನೆ (0) ಯಂತೆ ಇದ್ದಾನೆ" ಎಂದು ಹೇಳುವರು. ಹೀಗಿರುವಾಗ ವಿದ್ಯಾರ್ಥಿಗಳಲ್ಲಿ ಅಂಕುರಿಸಿಕೊಂಡು ದೇಶಕ್ಕೆ ಅಧೋಗತಿಯನ್ನು ಬರ ಮಾಡುವ ಈ ಸಿಗರೇಟ್ ಅಭ್ಯಾಸವನ್ನು ಆಮೂಲಾಗ್ರವಾಗಿ ಕಿತ್ತು ಬಿಡುವದು ಸಾಧ್ಯವೊ? ಇದು ಸಾಧ್ಯವೇ. ಆದರೆ ಮಕ್ಕಳ ಹೆತ್ತವರಿಂದಲೂ ಶಾಲಾ ಉಪಾಧ್ಯಾಯರಿಂದಲೂ ಸಾಧ್ಯವಲ್ಲ. ಸಿಗರೇಟ್ ಸೇದಕೂಡದೆಂದು ಹೆತ್ತವರೂ ಉಪಾಧ್ಯಾಯರೂ ಆಜ್ಞಾಪಿಸಬಹುದು. ಸಿಗರೇಟಿನಿಂದ ಉಂಟಾಗುವ ಕೆಟ್ಟ ಫಲಗಳನ್ನು ಮಕ್ಕಳಿಗೆ ಬೋಧಿಸಬಹುದು. ಆದರೆ ಇವೆಲ್ಲವೂ ಬೋರ್ಗಲ್ಲಿನ ಮೇಲೆ ಮಳೆಗರೆದಂತೆಯೇ ಇದೆ. ಹಾಗಾದರೆ ಮಾಡುವದೇನು? ವಿದ್ಯಾರ್ಥಿಗಳಲ್ಲಿ ಹತ್ತಿಕೊಂಡಿರುವ ಈ ದುರಭ್ಯಾಸವನ್ನು ಅಡಗಿಸುವದು ವಿದ್ಯಾರ್ಥಿಗಳಿಂದಲೇ ಸಾಧ್ಯ.

ಮಂಗಳೂರಲ್ಲಿ ವಿದ್ಯಾರ್ಥಿ ಭ್ರಾತೃಸಂಘವೆಂಬ ಒಂದು ವಿದ್ಯಾರ್ಥಿ ಸಂಘವಿದೆ. ಈ ಸಂಘದಲ್ಲಿ ಸೇರಿದ ಮೆಂಬರರು ತಾವಾಗಿ ಪ್ರಥಮತಾ ಬೀಡಿ ಸಿಗರೇಟು ಸೇದುವ ಅಭ್ಯಾಸಕ್ಕೆ ಮಂಗಳ ಹಾಕಬೇಕು. ಸಿಗರೇಟು ಬೀಡಿಗಳನ್ನು ಸಿಕ್ಕಿ ಸಿಕ್ಕಿದಲ್ಲಿ ಸುಟ್ಟು ಬಿಸಾಡಬೇಕು. (ಅಂದರೆ ಸಿಗರೇಟಿನ ಒಂದು ತುದಿಯನ್ನು ಬೆಂಕಿಯಿಂದ ಸುಟ್ಟು ಮತ್ತೊಂದು ತುದಿಗೆ ಬಾಯಿಕೊಡುವದಲ್ಲ.) ಆಯಾ ಶಾಲೆ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಯಾರ್ಯಾರು ಬೀಡಿ ಸೇದುವರೆಂಬ ವಿಷಯವು ಈ ಭ್ರಾತೃಸಂಘದವರಿಗೆ ತಿಳಿದುಬರುವಷ್ಟು ಸುಲಭವಾಗಿ ಇತರರಿಗೆ ತಿಳಿಯಲಾರದ್ದಾದ್ದರಿಂದ ಈ ಭ್ರಾತೃಸಂಘದ ಮೆಂಬರರು ಈ ದುರಭ್ಯಾಸಕ್ಕೆ ತುತ್ತಾದವರ ಹೆಸರನ್ನು ಗೊತ್ತುಮಾಡಿಕೊಂಡು ಅಂಥವರನ್ನು ತಮ್ಮ ಸಂಘದ ಮೆಂಬರರಾಗಿ ಸೇರಿಸಿಕೊಂಡು ಬೀಡಿ ಸಿಗರೇಟು ಸೇದುವದಿಲ್ಲ ಎಂಬ ಕಟ್ಟನ್ನು ಕ್ರಮೇಣ ಅಂಥಾ ಮೆಂಬರರಿಂದ ಮಾಡಿಸಿಕೊಂಡರೆ ಈ ಅಭ್ಯಾಸವು ಮೆಲ್ಲನೇ ಕಡಿಮೆಯಾಗುವದು. ಉಪಾಧ್ಯಾಯರೂ ಪಟ್ಟಣದ ಸದ್ಗೃಹಸ್ಥರೂ ಈ ವಿದ್ಯಾರ್ಥಿ ಭ್ರಾತೃ ಸಂಘಕ್ಕೆ ಬೆಂಬಲವಾಗಿದ್ದು ವಿದ್ಯಾರ್ಥಿ ಭ್ರಾತೃ ಸಂಘದವರಿಂದ ಈ ಕೆಲಸವನ್ನು ಮಾಡಿಸುವದಾದರೆ ಮಂಗಳೂರಿಗೆ ಮಾತ್ರವಲ್ಲ; ಇಡೀ ದೇಶಕ್ಕೆ ಮಹಾ ಉಪಕಾರವಾಗುವದೆಂದು ಬೇರೆ ಹೇಳಬೇಕೇ? ನಾನು ಸೂಚಿಸಿದ ಈ ಉಪಾಯವು ಸರಿ ತೋರುವದಿಲ್ಲವಾದರೆ ಯಾರಾದರೂ ಬೇರೆ ಉಪಾಯವನ್ನಾದರೂ ತೋರಿಸಿಕೊಟ್ಟು ಈ ಅಭ್ಯಾಸದ ಹುಟ್ಟಡಗಿಸುವರೆ ಸಾಧನೆ ಮಾಡಬೇಕಾಗಿ ಅಪೇಕ್ಷಿಸುವ,

ವಿದ್ಯಾರ್ಥಿಗಳ ಸ್ನೇಹಿತ.

ಆಯ್ಯಾ ಪತ್ರಕರ್ತರೇ,

ಕಾಸರಗೋಡು ಟೌನಿನ ಮಧ್ಯದಲ್ಲಿ ಸರಕಾರದ ಕೆಲವು ಬಾವಿಗಳು ಇರುತ್ತವೆ. ಈ ಬಾವಿಗಳ ಒಳಗೆ ಕೆಲವು ವ್ಯಾಪಾರಸ್ಥರೂ ಇತರ ಜನರೂ ಕೊಳಕು ಪದಾರ್ಥಗಳನ್ನು ಬಿಸಾಡುವದರಿಂದ ಜನರ ಪ್ರಯೋಜನಾರ್ಥವಾಗಿ ಅಗಿಸಿದ ಬಾವಿಗಳ ನೀರು ಕುಡಿಯಬಾರದಷ್ಟು ಕೆಟ್ಟ ಸ್ಥಿತಿಯಲ್ಲಿದ್ದು ಸಹಿಸಲಾರದಷ್ಟು ದುರ್ವಾಸನೆ ಬರುತ್ತದೆ. ಇದೇ ನೀರಿನಿಂದ ಸೋಡಾ ಲೆಮ್ನೇಡು ಕಾಫಿ-ಚಾ ಮುಂತಾದ ಪಾನಕ ಪದಾರ್ಥಗಳನ್ನು ಸಹಾ ಮಾಡುವದರಿಂದ ಇವುಗಳನ್ನು ಪಾನಕ ಮಾಡುವ ಜನರ ಆರೋಗ್ಯವು ಎಷ್ಟರ ಮಟ್ಟಿಗೆ ಕೆಟ್ಟು ಹೋಗಬಹುದೆಂಬದನ್ನು ಪ್ರತ್ಯೇಕ ಹೇಳಬೇಕೆಂಬದಿಲ್ಲ. ಇದರ ಕುರಿತು ಸ್ಥಳೀಕ ವೈದ್ಯ ಉದ್ಯೋಗಸ್ಥರು ತಕ್ಕ ನಿಗಾ ಕೊಡುವರಾಗಿ ಅಪೇಕ್ಷಿಸುವ

ಆರೋಗ್ಯ ಅಭಿಲಾಷಿ.

ಯುದ್ಧ ಸಮಾಚಾರ.

ತಾ॥ ೮ನೇ ಮಾರ್ಚಿ.

ಕಳೆದ ಆದಿತ್ಯವಾರ ರಾತ್ರಿ ಶತ್ರುಗಳ ವಾಯುನಾವೆಗಳು ಇಂಗ್ಲಾಂಡ್ ಕರಾವಳಿಯ ಮೇಲೆ ಒಟ್ಟಿಗೆ ೯ ಬೊಂಬುಗಳನ್ನು ಹಾಕಿದ್ದವು. ಇದರಿಂದ ಹೆಚ್ಚಿನ ಹಾನಿಯಾಗಲಿಲ್ಲ.

ಕಳೆದ ರಾತ್ರಿ ನಮ್ಮವರು ವರ್ಮೆಲ್ಲಿಸ್ ಎಂಬಲ್ಲಿ ಶತ್ರುಗಳ ಒಂದು ಸಿಡಿಮದ್ದಿನ ಗಣಿಯನ್ನು ಹಾರಿಸಿದರು. ಈ ದಿನ ಶತ್ರುಗಳು ಹೊಹೆನ್‌ಝೊಲ್ಲರ್ನ್ ಎಂಬಲ್ಲಿ ಒಂದು ಸಿಡಿಮದ್ದಿನ ಗಣಿಯನ್ನು ಹಾರಿಸಿರುವರು. ಅಲ್ಬರ್ಟ್, ಹುಲ್ಲಕ್ ಮತ್ತು ವೈಪ್ರೆಸಿನಲ್ಲಿ ತೋಪು ಕಾಳಗವು ಎಂದಿನಂತೆಯೇ ನಡೆಯುತ್ತಿದೆ.

ಶಂಪೇನೆಯಲ್ಲಿ ಶತ್ರುಗಳು ಫ್ರೆಂಚರ ಮೈಸನ್ಸ್ ಎಂಬಲ್ಲಿಯ ನೆಲೆಯ ಮೇಲೆ ಬೆಂಕಿಯ ದ್ರಾವಕವನ್ನು ಹಾರಿಸಿದರು. ಫ್ರೆಂಚರು ಹಿಂದೆ ತೋಪು ಹಾರಿಸಿದ್ದರಿಂದ ಶತ್ರುಗಳಿಗೆ ಕಂದಕಗಳನ್ನು ಬಿಟ್ಟು ಬರಲು ಅಸಾಧ್ಯವಾಯಿತು. ಆರ್ಗೋನ್ನೆಯಲ್ಲಿ ಫ್ರೆಂಚರು ಕೋರ್ಟೆ ಗೊಟಿಸ್ ಎಂಬಲ್ಲಿ ಫ್ರೆಂಚರು ಒಂದು ಸಿಡಿಮದ್ದಿನ ಗಣಿಯನ್ನು ಹಾರಿಸಿ ಜರ್ಮನರ ಒಂದು ಕೋಟೆಯನ್ನು ನಾಶಮಾಡಿದರು. ಶತ್ರುಗಳು ಒಂದು ಸ್ಥಳದಲ್ಲಿ ಸ್ವಲ್ಪ ಮುಂದರಿದರು. ಆದರೆ ಫ್ರೆಂಚರು ಅವರನ್ನು ಹಿಂದಕ್ಕೆ ಓಡಿಸಿದರು.

ರುಶ್ಯದಲ್ಲಿ ಥಿಯಾವಿಲ್ಲೆ ಎಂಬ ಸ್ಥಳದ ಬಳಿ ಶತ್ರುಗಳಿಗೆ ಸಿಕ್ಕಿದ ನೆಲೆಗಳನ್ನು ರುಶ್ಯನರ ತೋಪುಗಳ ಹೊಡತವನ್ನು ತಡೆಯಲಾರದೆ ಜರ್ಮನರು ಬಿಟ್ಟುಹೋಗಿರುತ್ತಾರೆಂಬ ವಾರ್ತೆಯನ್ನು ಜರ್ಮನರು ಒಪ್ಪಿರುತ್ತಾರೆ.

ಟ್ರೆಬಿಜೋಂಡಿಗೆ ೬೫ ಮೈಲು ಪೂರ್ವದಲ್ಲಿರುವ ಏಟಸ ಎಂಬ ಸ್ಥಳದಲ್ಲಿ ರುಶ್ಯನರು ಇಳಿದು ತುರ್ಕರನ್ನು ಆ ಡಿಸ್ಟ್ರಿಕ್ಟಿನಿಂದ ಓಡಿಸಿ ೨೮೭ ಮಂದಿಯನ್ನೂ, ೨ ಫಿರಂಗಿಗಳನ್ನೂ, ಬಹಳ ಮದ್ದುಗುಂಡುಗಳನ್ನೂ ಸೆರೆ ಹಿಡಿದಿರುವರು. ಮರುದಿನ ರುಶ್ಯನರು ಎಟೀನ ಮತ್ತು ರಿಜೆಯು ಎಂಬ ಸ್ಥಳಗಳ ಮಧ್ಯೆ ಇರುವ ಮಪಾವ್ರಿ ಎಂಬ ಗ್ರಾಮವನ್ನು ಹಿಡಕೊಂಡರು. ಈ ಸ್ಥಳವು ಟ್ರೆಬಿಜೊಂಡಿಗೆ ೪೦ ಮೈಲು ಪೂರ್ವದಲ್ಲಿದೆ. ಕಳೆದ ತಿಂಗಳಲ್ಲಿ ರುಶ್ಯನರು ಕೌಕಾಸಸಿನಲ್ಲಿ ತುರ್ಕರು ಬಲಕಾಯಿಸಿಕೊಂಡಿದ್ದ ೧೪ ಸ್ಥಳಗಳನ್ನು ಗೆದ್ದುಕೊಂಡಿರುವರು. ಈ ಪೈಕಿ ೭ ಸ್ಥಳಗಳನ್ನು ಕಳೆದ ಒಂದು ವಾರದಲ್ಲಿ ರುಶ್ಯನರು ಸ್ವಾಧೀನಮಾಡಿಕೊಂಡರು.

ತುರ್ಕರು ಸ್ವಿಜರ್‌ಲೇಂಡಿನವರ ಮೂಲಕ ಸಂಧಾನ ಪ್ರಸ್ತಾಪವನ್ನು ಎತ್ತಿರುವರೆಂಬ ವಾರ್ತೆ ಇದೆ. ಸ್ಮಿರ್ನದಲ್ಲಿ ತುರ್ಕ ಸೇನಿಕರು ದಂಗೆ ಎದ್ದಿರುವರು ಎಂಬ ವಾರ್ತೆ ಇದೆ.

ತುರ್ಕರ ಸೇನೆಯು ಪಲೆಸ್ತೀನ ದೇಶವನ್ನು ಬಿಟ್ಟು ಹೋಗಿರುವದೆಂತ ಕೈರೋ ಬಾತ್ಮಿದಾರರು ಒಂದು ಪತ್ರಿಕೆಗೆ ಬರೆದಿರುವರು. ರುಮೇನಿಯಾದವರು ಮಿತ್ರರಾಜ್ಯಗಳ ಪಕ್ಷ ಸೇರಲು ನಿರ್ಣಯ ಮಾಡಿರುವರು. ರುಶ್ಯನರು ಅವರಿಗೆ ಕುದುರೆ ಇತ್ಯಾದಿಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಬ್ರಿಟಿಷರು ರುಮೇನಿಯದವರಿಗೆ ಗೋಧಿಯನ್ನು ಸಾಲವಾಗಿ ಕೊಟ್ಟಿರುತ್ತಾರೆ.

ತಾ. ೯ನೇ ಮಾರ್ಚಿ.

ಹಿಂದೂಸ್ಥಾನದಿಂದ ಸೀಮೆಗೆ ಹೋಗುತ್ತಿದ್ದ ಪಟ್ಟಣದ "ಬೇಂಡೋಯೆಂಗ್" ಎಂಬ ಹಡಗದ ಮೇಲೆ ಶತ್ರುಗಳು ಮೆಡಿಟರೇನಿಯನ್ ಸಮುದ್ರದಲ್ಲಿ ಗುಂಡು ಹಾರಿಸಿರುವರು. "ಲೈಫ್ ಬೋಟು" ಎಂಬ ಸಂರಕ್ಷಣಾ ದೋಣಿಗಳಿಗೆ ಹಾನಿಯಾಗಿರುವದು.

ವರ್ದ್ಯೂನಿನ ಪಶ್ಚಿಮದಲ್ಲಿ ತೋಪುಗಳು ಎಡೆಬಿಡದೆ ಗುಂಡುಗಳನ್ನು ಸುರಿಸುತ್ತಲಿವೆ. ಬೆಥೆನ್ ಕೋರ್ಟ ಎಂಬಲ್ಲಿ ಮೇಲ್ಬಿದ್ದ ಜರ್ಮನರು ಹಿಮ್ಮೆಟ್ಟಿರುವರು. ಹಾರ್ಡಮೊಂಟ ಪ್ರಾಂತ್ಯದಲ್ಲಿ ಜರ್ಮನರು ಭೀಕರವಾದ ತೋಪುಗಳನ್ನು ಹಾರಿಸಿ ಸ್ವಲ್ಪ ಮುಂದರಿದರು. ಆದರೆ ಫ್ರೆಂಚರು ನುಗ್ಗಿ ಹೋಗಿ ಆ ಸ್ಥಳದಿಂದ ಜರ್ಮನರನ್ನು ಹಿಂದಕ್ಕೆ ಓಡಿಸಿದರು.

ಜರ್ಮನರು ವೋವ್ರೆಯ ಫ್ರೆಸ್‌ನೆಸ್ ಗ್ರಾಮದಲ್ಲಿ ಕಠಿಣ ಕಾಳಗ ಮಾಡಿ ವಿಶೇಷ ನಷ್ಟಪಟ್ಟು ಕಡೆಗೆ ಆ ಗ್ರಾಮವನ್ನು ಸ್ವಾಧೀನಮಾಡಿಕೊಂಡರು. ವೋಸ್ಜೆಸಿನಲ್ಲಿ ಫ್ರೆಂಚರು ಕೆಲವು ಸ್ಥಳಗಳ ಮೇಲೆ ತೋಪುಗಳನ್ನು ಹಾರಿಸಿರುವರು. ಆರ್ಗೋನ್ನೆಯಲ್ಲಿ ಜರ್ಮನರ ಒಂದು ವಾಯುನಾವೆಯನ್ನು ಫ್ರೆಂಚರು ಕೆಳಕೆಡವಿರುವರು.

ವೋರ್ಜೆಸಿನ [illegible] ಯನ್ನು ಜರ್ಮನರು ತಕ್ಕೊಂಡಿರುವರು. ಜರ್ಮನರು ಡೊವ್ವೊಮೊಂಟಿನ ಮೇಲೆ ಹಲ್ಲಾ ಮಾಡುವುದನ್ನು ನಿಲ್ಲಿಸಿರುವರು. ಮ್ಯೂಸಿನ ಪಶ್ಚಿಮ ದಡದಲ್ಲಿದ್ದ ಜರ್ಮನರ ಕಾಲಾಳು ಸೇನೆಯು ಪೂರಾ ನಷ್ಟವಾಗಿರುವದು. ಮ್ಯೂಸಿನ ಪಶ್ಚಿಮದಲ್ಲಿ ಫ್ರೆಂಚರು ನುಗ್ಗಿ ಹೋಗಬೇಕೆಂದು ನಿಶ್ಚಯಿಸಿ ಬೇಕಾದ ಸನ್ನಾಹ ಮಾಡಿರುವರು. ಮ್ಯೂಸ್ ತಗ್ಗುಗಳಲ್ಲಿ ನೆರೆ ತುಂಬಿರುವದರಿಂದ ಜರ್ಮನರಿಗೆ ಅಭಿಯೋಗ ಮಾಡಲು ಈ ಪ್ರಾಂತವು ಕಷ್ಟದ್ದಾಗಿದೆ. ಆದ್ದರಿಂದ ಈ ತಗ್ಗಿನ ಬಳಿ ಇರುವ ವೋರ್ಜೆಸ್ ಪ್ರಾಂತವನ್ನು ಫ್ರೆಂಚರು ಬಿಟ್ಟು ಮೊರ್ತ್‌ಹೋಮ್ ಎಂಬಲ್ಲಿ ಬಲಕಾಯಿಸಿಕೊಂಡಿರುವರು. ವರ್ದ್ಯೂನಿನಲ್ಲಿ ನಡೆದ ಕದನಗಳಲ್ಲಿ ಈ ವರೆಗೆ ಜರ್ಮನರ ೫ ಸೇನಾಧಿಪತಿಗಳು ಹತರಾಗಿರುವರು.

ಕನ್‌ಸ್ಟಾಂಟಿನೋಪಲಿನಲ್ಲಿ ಜರ್ಮನ ಸೇನಿಕರು ತುಂಬಾ ಇದ್ದಾರೆ. ಜರ್ಮನರ ಹೊಸ ಜೆಪ್ಲಿನ ಸೇನಿಕರೂ ಫಿರಂಗಿಗಳೂ ಯುದ್ಧ ಸಾಮಗ್ರಿಗಳೂ ಕನ್‌ಸ್ಟಾಂಟಿನೋಪಲಿಗೆ ಕಳುಹಿಸಲ್ಪಡುತ್ತಿವೆ. ತುರ್ಕರು "ಗಿಮೊವೆನ್" ಮತ್ತು "ಹೆಲೆನಾಡಿಯ" ಯುದ್ಧನಾವೆಗಳಲ್ಲಿ ಹೊಸ ಫಿರಂಗಿಗಳನ್ನು ಜೋಡಿಸಿರುವರು.

ತಾ ೧೦ನೇ ಮಾರ್ಚಿ

ವರ್ದ್ಯೂನಿನ ಪಶ್ಚಿಮದಲ್ಲಿ ಜರ್ಮನರು ಸ್ವಲ್ಪ ಬಿಡದೆ ತೋಪುಗಳನ್ನು ಹಾರಿಸುತ್ತಲಿದ್ದಾರೆ. ಆದರೆ ಅವರ ಕಾಲಾಳು ಸೇನೆಯು ಕಾರ್ಯಕ್ಕೆ ನಿಲ್ಲಲಿಲ್ಲ. ಮ್ಯೂಸಿನ ಪೂರ್ವ [illegible] ಪಶ್ಚಿಮದಲ್ಲಿ ಫ್ರೆಂಚರ [illegible] ಹಾರಿಸುತ್ತಲಿರುವರು. [illegible] ಯಲ್ಲಿ ಫ್ರೆಂಚರು ಬ್ರಾಸ್ಸಿ, ಗ್ರಿಮ್ ಕೋರ್ಟ ಮತ್ತು ನೆಸ್ನೆಸ್ ಎಂಬ ಸ್ಥಳಗಳ ಮೇಲೆ ಫಿರಂಗಿಗಳನ್ನು ಹಾರಿಸುತ್ತಿದ್ದಾರೆ. ಶಂಪೇನ್ಯಲ್ಲಿ ಜರ್ಮನರು ವಶಪಡಿಸಿಕೊಂಡಿದ್ದ ಕಂದಕಗಳನ್ನು ಫ್ರೆಂಚರು ಪುನಃ ಹಿಂದಕ್ಕೆ ಪಡೆದಿರುತ್ತಾರೆ. ಫ್ರೆಂಚರು ಜರ್ಮನ ಸೇನಿಕರಲ್ಲಿ ಅನೇಕರನ್ನು ಕೊಂದು ನುಗ್ಗಿ ಬಂದ ಶತ್ರು ಸೇನೆಯನ್ನು ಹಿಂದಕ್ಕೆ ಓಡಿಸಿದರು.

ಮ್ಯೂಸಿನ ಪಶ್ಚಿಮದಲ್ಲಿ ಶತ್ರುಗಳು ಪುನಃ ತೋಪುಗಳನ್ನು ವಿಶೇಷವಾಗಿ ಹಾರಿಸಿ ಮುಂದರಿಯಲು ಯತ್ನಿಸಿದರು. ಆದರೆ ಹಿಮ್ಮೆಟ್ಟಿದರು. ಮ್ಯೂಸಿನ ಬಲದಂಡೆಯಲ್ಲಿಯೂ ಜರ್ಮನರು ವಿಶೇಷ ಗುಂಡುಗಳನ್ನು ಹಾರಿಸಿ ಡೊವ್ವೊಮೊಂಟಿನ ಪೂರ್ವಕೋಟೆಯ ಮೇಲೆ ಹಲ್ಲಾಮಾಡಲು ಯತ್ನಿಸಿ ಗೆಲಲಾರದೆ ಹೋದರು.

ಫ್ರೆಂಚರ [illegible] ಮೆಟ್ಜ್ ಸೆಬ್ಲೋನಿನ ಮೇಲೆ ೧೩೪ ಬೊಂಬುಗಳನ್ನು ಹಾಕಿ [illegible] ಬಿಟ್ಟಿರುವವು.

ಡೊವ್ವೊಮೊಂಟ್ ಮತ್ತು ವೋವ್ರೆಯ ಮಧ್ಯೆ ಘೋರಕಾಳಗವು ನಡೆಯುತ್ತಿದೆ. ಜರ್ಮನರು [illegible] ಹಿಮ್ಮೆಟ್ಟಿರುವರು. ವೋವ್ರೆನಲ್ಲಿ ಜರ್ಮನರ ಕಾಲಾಳು ಸೇನಿಕರು ಮುಂದರಿಯಲು ಪ್ರಯತ್ನಿಸಿದರು. ಆದರೆ ಫ್ರೆಂಚ ಸೇನಿಕರು ಸನ್ಮುಖಕಾಳಗ ಮಾಡಿ ಶತ್ರುಗಳನ್ನು ಹಿಂದಕ್ಕಟ್ಟಿದರು.

ಏಶ್ಯಾಮೈನರಿನಲ್ಲಿ ರುಶ್ಯನರು ರಿಜೆ ಎಂಬ ಸ್ಥಳವನ್ನೂ ಪರ್ಶಿಯಾದಲ್ಲಿ ಸೆನ್ನಾ ಎಂಬ ಸ್ಥಳವನ್ನೂ ಸ್ವಾಧೀನಮಾಡಿಕೊಂಡಿರುತ್ತಾರೆ.

ತಾ ೧೧ನೇ ಮಾರ್ಚಿ.

ಬ್ರಿಟಿಷರ "ಕೊಕ್ಕೆಟ್ಟಿ" ಎಂಬ ಡಿಸ್ಟ್ರೋಯರ್ ನಾವೆ ಮತ್ತು ಒಂದು ಟೋರ್ಪೆಡೋ ದೋಣಿಯು ಕಲ್ಲಿದ್ದಲ್ಲಿನ ಗಣಿಗೆ ತಾಗಿ ಮುಳುಗಿರುವವು. ೪ ಆಫೀಸರರೂ ೪೧ ನಾವಿಕರೂ ಪ್ರಾಣಾಪಾಯ ಹೊಂದಿರುವರು.

ಡೊವ್ವೊಮೊಂಟಿನ ದಕ್ಷಿಣ ವರೆಗೆ ಜರ್ಮನರು ಹಲವು ಸಾರಿ ಹಲ್ಲಾಮಾಡಿರುವರು. ಡೊವ್ವೊಮೊಂಟಿನ ಗ್ರಾಮದಿಂದ ಮೇಲೆ ಹಲ್ಲಾಮಾಡಿದ ಜರ್ಮನರ ಸೇನಿಕರನ್ನು ಫ್ರೆಂಚರ ತೋಪುಗಳು ಹತಪಡಿಸಿರುವವು. ವಾರ್ಕ್ಸ್ ಗ್ರಾಮದ ಮೇಲೆ ಹಲ್ಲಾಮಾಡಿದ ಜರ್ಮನ ಸೇನಿಕರೂ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಕಡೆಗೆ ಜರ್ಮನರು ವೋಕ್ಸ್ ಕೋಟೆ ಗಡಿಯಲ್ಲಿರುವ ಕಂದಕಗಳ ಮೇಲೆ ಭೀಕರವಾಗಿ ಮೇಲ್ಬಿದ್ದರು. ಆದರೆ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ರುಶ್ಯದಲ್ಲಿ ಡ್ವಿನದಿಂದ ಗೆಲೀಸಿಯದ ವರೆಗೆ ರಣರಂಗಗಳಲ್ಲಿ ಕದನವು ಪ್ರಾರಂಭವಾಗಿದೆ. ಡ್ವಿನಾನದಿಯನ್ನು ದಾಟಲು ಪ್ರಯತ್ನಿಸಿದ ಜರ್ಮನರು ಹಿಮ್ಮೆಟ್ಟಿರುವರು.

ಪೂರ್ವ ಆಫ್ರಿಕದಲ್ಲಿ ಬ್ರಿಟಿಷ ಸೇನೆಯು ಕಿಲಿಮಂಜೀರದ ಕಡೆಗೆ ಮುಂದರಿದಿರುವದು.

[illegible] ಕಲ್ಲಿದ್ದಲು ಮತ್ತು ಯುದ್ಧ ಸಾಮಗ್ರಿಗಳನ್ನು ಕೊಂಡುಹೋಗುತ್ತಿದ್ದ ನಾಲ್ಕು ಹಡಗಗಳನ್ನು ರುಶ್ಯನರು ಮುಳುಗಿಸಿರುತ್ತಾರೆ.

ಎರ್ಝರಮ್ ರುಶ್ಯನರಿಗೆ ವಶವಾಗುವ ಮೊದಲು ಅಲ್ಲಿ ೪೦,೦೦೦ ಅರ್ಮೀನಿಯರಿದ್ದರು. ಆದರೆ ರುಶ್ಯನರು ಆ ಪಟ್ಟಣವನ್ನು ಪ್ರವೇಶಿಸಿದಾಗ ಜೀವಿತರಾಗಿದ್ದ ೧೬ ಅರ್ಮೀನಿಯರು ಮಾತ್ರ ಕಾಣಸಿಕ್ಕಿದರು. ಉಳಿದ ಅರ್ಮೀನಿಯರನ್ನು ಕೋಟೆಯು ಬೀಳುವ ಮೊದಲು ತುರ್ಕರು ಓಡಿಸಬೇಕು ಇಲ್ಲವೆ ಕೊಂದಿರಬೇಕು.

ತಾ ೧೩ನೇ ಮಾರ್ಚಿ.

ಜರ್ಮನರು ಪೋರ್ಚುಗಲ್ ದೇಶದ ಮೇಲೆ ಯುದ್ಧ ಸಾರಿರುವರು.

ಫ್ರೆಂಚರ ವಾಯುನಾವೆಗಳು ಜರ್ಮನ ನೆಲೆಗಳ ಮೇಲೆ ಹಾರಿ ೧೫ ಜರ್ಮನ ವಾಯುನಾವೆಗಳನ್ನು ಅಟ್ಟಿಬಿಟ್ಟಿರುವವು. ಶತ್ರುಗಳ ಎರಡು ವಾಯು ನಾವೆಗಳು ಶಂಪೇನೆಯಲ್ಲಿಯೂ ಮೂರು ವಾಯು ನಾವೆಗಳು ವರ್ದ್ಯೂನಿನಲ್ಲಿಯೂ ಕೆಳಬಿದ್ದಿರುವವು.

ಶತ್ರುಗಳು ಮ್ಯೂಸಿನ ಕೊರ್ಬೆಕ್ಸ್ ಅಡವಿಯಲ್ಲಿ ಭೀಕರವಾಗಿ ಹಲ್ಲಾಮಾಡಿದರು. ಕೆಲವು ಸಾರೆ ಮೇಲ್ಬಿದ್ದ ಜರ್ಮನರನ್ನು ಶತ್ರುಗಳ ಹಿಂದೆ ಅಟ್ಟಿದರು. ಜರ್ಮನರಿಗೆ ವಿಶೇಷ ನಷ್ಟವಾಗಿರುವದು. ಜರ್ಮನರ ಕಡೆಗೆ ಬಹಳ ಪ್ರಯತ್ನದಿಂದ ಸದರಿ ಅಡವಿಯ ಒಂದಂಶವನ್ನು ಸ್ವಾಧೀನಮಾಡಿಕೊಂಡರು.

ಇತರ ಕಡೆಗಳಲ್ಲಿ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು. ಐನೆಯಲ್ಲಿ ಜರ್ಮನರು ವಿಶೇಷ ತೋಪುಗಳನ್ನು ಹಾರಿಸಿ ಫ್ರೆಂಚರ ಮೇಲೆ ಬಿದ್ದರು. ಆದರೆ ಫ್ರೆಂಚರು ಜೀವದ ಮರವೆ ಇಲ್ಲದೆ ಕಾದಾಡಿ ಶತ್ರುಸೇನೆಯನ್ನು ಹಿಂದಕ್ಕಟ್ಟಿದರು. ಮೊವಾಮೊ ಓಸ್ನಿದ ವೋಕ್ಸಿನವರೆಗೆ ತೋಪುಕಾಳಗವು ಎಡೆಬಿಡದೆ ನಡೆಯುತ್ತಿದೆ. ಯಾವ ಸ್ಥಳದಲ್ಲಿಯೂ ಫ್ರೆಂಚರು ಶತ್ರುಗಳಿಗೆ ಬಿಟ್ಟು ಕೊಟ್ಟಿರುವದಿಲ್ಲ.

ವರ್ದ್ಯೂನಿನಲ್ಲಿ ಜರ್ಮನರಿಗಾದ ವಿಪರೀತ ನಷ್ಟದ ವರ್ತಮಾನವು ಜರ್ಮನರಿಗೆ ತಲುಪಿದವರಿಂದ ಮಾರ್ಚಿ ತಾ ೭ರಲ್ಲು ಕೆಸೆರೋನ್ ಪಟ್ಟಣದಲ್ಲಿ [illegible] ನಡೆದಿರುವದೆಂಬ ವಾರ್ತೆ ಇದೆ.

ರುಶ್ಯನರು ಈಗ ಟ್ರೆಬಿಜೊಂಡಿಗೆ ಬಹಳ ಹತ್ತರ ಸೇರಿರುವರು.

ತಾ ೧೫ನೇ ಮಾರ್ಚಿ.

ವೆರ್ದ್ಯೂನಿನಲ್ಲಿ ಜರ್ಮನರಿಗೆ ಈವರೆಗೆ ೨೦೦,೦೦೦ ಜನರ ನಷ್ಟವಾಗಿರಬೇಕೆಂತ ಅಂದಾಜಾಗಿಯದೆ. ಫ್ರೆಂಚರು ಜರ್ಮನರ ಸೈನ್ಯ ಸೇನೆಯನ್ನು ಹಿಂದಕ್ಕೆ ಹತಪಡಿಸುತ್ತಿದ್ದಾರೆ.

ಶತ್ರುಗಳ ಜಲ ತಾರ್ಮಿನಾವೆಯು ಮರ್ಮಾರದಲ್ಲಿ ರುಶ್ಯನರ ಒಂದು ಟೋರ್ಪೆಡೋ ದೋಣಿಯನ್ನು ಮುಳುಗಿಸಿರುತ್ತದೆ.

ರುಶ್ಯನರು ಬಾಗ್ದಾದಿಗೆ ೩೦ ಮೈಲು ದೂರದಲ್ಲಿರುವ ಕರೀಸ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಶ್ರೇಷ್ಠ ನ್ಯಾಯವಿಧಾಯಕ ಸಭೆಯು ತಾ ೭ರಲ್ಲು ದಿಲ್ಲಿ ನಗರದ ಕೌನ್ಸಿಲ್ ಸಭಾಸದನದಲ್ಲಿ ಕೂಡಿ ಬಂತು. ಬಹುಮಾನಪಟ್ಟ ಸರ್ ವಿಲಿಯಂ ಕ್ಲಾರ್ಕರು ಸಭಾಧ್ಯಕ್ಷರಾಗಿದ್ದರು. ಹಿಂದೂಸ್ಥಾನದ ಸರ್ವ ಸೇನಾಧಿಪತಿಯವರು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿಗನುಸಾರವಾಗಿ ವಿದೇಶಿಯರಿಗೆ ಕೋರ್ಟ ಮಾರ್ಶಲ್ ಆಕ್ಟಿನ ಪ್ರಕಾರ ವಿಚಾರಣೆ ಮಾಡುವ ಒಂದು ಮಸೂದೆಯನ್ನು ಸಭೆಯ ಮುಂದೆ ತಂದರು. ಈ ಮಸೂದೆಯು ಚರ್ಚೆ ಇಲ್ಲದೆ ಮಂಜೂರಾಯಿತು.

ಟೆರಿಫ್ ಬೀಲ್ ಸಂಬಂಧವಾಗಿ ಆರಿಸಲ್ಪಟ್ಟ ಕಮಿಟಿಯವರ ರಿಪೋರ್ಟನ್ನು ಸರ್ ವಿಲಿಯಂ ಮೇಯರರು [illegible] ಹೇಳಿದರು. ಅನಂತರ ದಾದಾಭಾಯಿರವರು [illegible] ಅಂದಾಜು ಪಟ್ಟಿಯಲ್ಲಿ ಉಪ್ಪಿನ ಮೇಲೆ ಮಹಸೂಲ [illegible]

ಹೆಚ್ಚಿಗೆ ತೆರಿಗೆಯನ್ನು ಹೆಚ್ಚಿಸಿದುದರ ಸಂಬಂಧ ಚರ್ಚೆ ನಡಿಸಿ ಈ ತೆರಿಗೆಯಲ್ಲಿ ತಿದ್ದುಪಡಿಮಾಡಬೇಕೆಂತ ಸೂಚಿಸಿದರು. ಆದರೆ ಸರ್ ವಿಲಿಯಂ ಮೇಯರರು ಉಪ್ಪಿನ ಮೇಲೆ ಮಣ ೧ಕ್ಕೆ ರೂ ೧ ಆಣೆ ೪ ತೆರಿಗೆ ಮಾಡಿದ್ದು ಹೆಚ್ಚಲ್ಲ ಎಂತ ತೋರಿಸಿ ಕೊಟ್ಟದ್ದರಿಂದ ಮಾನ್ಯ ದಾದಾಭಾಯೀರವರು ತನ್ನ ಸೂಚನೆಯನ್ನು ಹಿಂದೆಗೆದರು. ಇನ್‌ಕಮ್‌ಟೇಕ್ಸ್ ಬಿಲಿನ ವಿಷಯವಾಗಿ ಕಮಿಟಿಯವರು ಬರೆದ ರಿಪೋರ್ಟನ್ನು ಸರ್ ವಿಲಿಯಂ ಮೇಯರರು ಓದಿ ಹೇಳಿದರು. ಸರ್ ಇಬ್ರಾಹಿಂ ರಹಿಮತ್ತುಲ್ಲಾರವರು ಇನ್‌ಕಮ್‌ಟೇಕ್ಸ್ ಬಿಲನ್ನು ವಿರೋಧಿಸಿ ಸುಮಾರು ೩೦ ನಿಮಿಷಗಳ ವರೆಗೆ ಭಾಷಣ ಮಾಡಿದರು. ಈ ವಿಷಯ ಚರ್ಚೆ ನಡೆದು ಇನ್‌ಕಮ್‌ಟೇಕ್ಸ್‌ನಲ್ಲಿ ತಿದ್ದುಪಡಿಮಾಡಬೇಕೆಂಬ ಸೂಚನೆಯು ಮಂಜೂರಾಯಿತು. ಉಪ್ಪಿನ ಮೇಲೆ ಹೆಚ್ಚಿಗೆ ತೆರಿಗೆ ಹಾಕಿದ್ದನ್ನು ಕಡಿಮೆಮಾಡಬೇಕೆಂಬ ಸರ್ ಇಬ್ರಾಹಿಂ ರಹಿಮತ್ತುಲ್ಲಾರವರ ಸೂಚನೆಯನ್ನು ಮಾ| ಸುರೇಂದ್ರನಾಥ ಬೇನರ್ಜಿ ಮತ್ತು ಪಂಡಿತ ಮಾಲವೀಯರವರು ಅನುಮೋದಿಸಿದರು. ಆದರೆ ಸರ್ ವಿಲಿಯಂ ಮೇಯರರು ಉಪ್ಪಿನ ಮೇಲಿನ ತೆರಿಗೆಯು ಹೆಚ್ಚಲ್ಲ ಎಂತ ಸೂಚಿಸಿ ಚರ್ಚಿಸಿದರು. ಸರ್ ರಹಿಮತ್ತುಲ್ಲಾರವರು ತನ್ನ ಸೂಚನೆಯನ್ನು ಹಿಂದೆಗೆಯಲು ಒಪ್ಪದ್ದರಿಂದ ಈ ಸೂಚನೆಯನ್ನು ಓಟಿಗೆ ಹಾಕಿದ್ದಲ್ಲಿ ಬಹುಮತದಿಂದ ಸರ್ ರಹಿಮತ್ತುಲ್ಲಾರವರ ಸೂಚನೆಯು ಬಿದ್ದುಹೋಯಿತು.

~~~~~

ಮಾರ್ಚ ತಾ ೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೧,೧೯೪, ಮಂದಿಗೆ ಪ್ಲೇಗ ಬೇನೆಯು ಸೋಂಕಿ ೭೭೬ ಮಂದಿ ಮೃತರಾದರು. ಈ ಪೈಕಿ ದಿಲ್ಲಿಯಲ್ಲಿ ೬, ಮುಂಬಯಿ ಮತ್ತು ಸಿಂದಿ ೧೯೬೧, ಮದ್ರಾಸ್ ೨೪೬, ಬಂಗಾಳ ೫, ಬಿಹಾರ್ ಮತ್ತು ಒರಿಸ್ಸ ೭೪೮೧, ಸಂಯುಕ್ತ ಸಂಸ್ಥಾನ ೨೯೯೦, ಪಂಜಾಬು ೧೬೦ ಬರ್ಮ ೨೭, ಮಧ್ಯ ಸಂಸ್ಥಾನ ೯೫, ಮೈಸೂರು ೨೫೫, ಹೈದರಾಬಾದ್ ೭೬೭ ಮಧ್ಯಹಿಂದೂಸ್ಥಾನ ೧೮, ಕಾಶ್ಮೀರ ೧ ಮರಣಗಳಾದವು.

~~~~~

ಮುಂಬಯಿ ಮ್ಯುನಿಸಿಪಾಲಿಟಿಯವರು ವೈಸರಾಯ ಹಾರ್ಡಿಂಜ ಪ್ರಭುಗಳವರಿಗೆ ಏಪ್ರಿಲ್ ತಾ ೧೮ರಲ್ಲು ಸಾಯಂಕಾಲ ೫ ಗಂಟೆ ೩೦ಕ್ಕೆ ಸ್ವಸ್ತಿ ವಚನವನ್ನು ಒಪ್ಪಿಸುವರು.

~~~~~

ಬಂಗಾಳ ಪ್ರೆಸಿಡೆನ್ಸಿ ಕಾಲೇಜಿನ ವ್ಯವಸ್ಥಾಕ್ರಮದ ಸಮ್ಬಂಧ ತನಕಿ ನಡಿಸುವದಕ್ಕೆ ನೇಮಿಸಲ್ಪಟ್ಟ ಕಮಿಟಿಯವರ ಕೆಲಸವು ಈಗ ತಾನೇ ಮುಗಿದಿರುವದು. ಈ ಕಮಿಟಿಯವರು ಮಾಡಿದ ನಿರ್ಣಯವು ಸ್ವಲ್ಪ ದಿವಸಗಳಲ್ಲಿಯೇ ತಿಳಿದು ಬರುವದು.

~~~~~

ಯುದ್ಧ ಪ್ರಾರಂಭವಾದ ಕೂಡಲೇ ಡಾಕ್ಟರ್ ಎಸ್ ಎನ್ ಚೌದುರಿಯವರು ಬ್ರಿಟನಿಗೆ ಹೋಗಿ ಅಲ್ಲಿ ಸ್ವಲ್ಪ ಕಾಲವಿದ್ದು ಅನಂತರ ಸೌತ್ ಹೆಮ್ಟನ್ ಮತ್ತು ಅಲೆಕ್ಝಾಂಡ್ರಿಯ ವರೆಗೆ ಹೋಗಿ ಬರುತ್ತಿದ್ದ ಆಸ್ಪತ್ರೆ ಹಡಗದಲ್ಲಿ ಲೆಫ್ಟನೆಂಟರಾಗಿ ಕೆಲಸ ನೋಡುತ್ತಿದ್ದರು. ಇವರ ಅನ್ಮೂಲ್ಯವಾದ ಕೆಲಸವನ್ನು ಸರಕಾರದವರು ಮಾನ್ಯ ಮಾಡಿ ಕಳೆದ ಫೆಬ್ರವರಿ ತಾ. ೯ರಿಂದ ಲೆಫ್ಟನೆಂಟ್ ಚೌದುರಿಯವರಿಗೆ ಕೆಪ್ಟನ್ ರೇಂಕ್ ಕೊಟ್ಟಿರುತ್ತಾರೆ. ಕೆಪ್ಟನ್ ಚೌದುರಿಯವರು ಜಸ್ಟಿಸ್ ಚೌದುರಿಯವರ ಸಹೋದರರಾಗಿರುತ್ತಾರೆ. ಇನ್ನೊಬ್ಬ ಸಹೋದರರನು ಮೆಜರ್ ಐ. ಎಮ್ ಎಸ್‌ರಾಗಿದ್ದು ಮೆಸೊಪಟಾಮಿಯ ರಣರಂಗದಲ್ಲಿರುವರು.

~~~~~

ಬಂಗಾಳ ಸರಕಾರದವರು ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿಯ ಸಂಬಂಧ ತನಕಿ ನಡಿಸುವರೆ ನೇಮಿಸಿದ ಕಮಿಟಿಯವರ ಆಲೋಚನೆಯನ್ನು ಕೇಳಿಕೊಂಡು ಕಾಲೇಜಿನ ಈಗಿನ ಕಾರ್ಯನಿರ್ವಹಣ ಕಾಲವು ಅಂತ್ಯವಾಗುವ ವರೆಗೆ ಸದರಿ ಕಾಲೇಜನ್ನು ಮುಚ್ಚಬೇಕೆಂದು ನಿರ್ಣಯಿಸಿರುವರು. ಹಾಗೂ ಕಾಲೇಜು ಪ್ರಿನ್ಸಿಪಾಲರು ೧ನೇ ಮತ್ತು ೩ನೇ ವರ್ಷದ ವಿದ್ಯಾರ್ಥಿಗಳ ವರ್ಷಾಂತ್ಯದ ಪರೀಕ್ಷೆಯನ್ನು ಮಾಡುವರು. ೨ನೇ ವರ್ಷದ ವಿದ್ಯಾರ್ಥಿಗಳಿಗೆ ಯುನಿವರ್ಸಿಟಿ ಪರೀಕ್ಷೆಗೆ ನಿಲ್ಲಲು ಹುಕುಂ ಆಗಿದೆ. ಕಾಲೇಜು ಪ್ರಿನ್ಸಿಪಾಲರಾಗಿದ್ದ ಮಿ| ಜೇಮ್ಸರವರು ಕ್ಷಮಾಪಣೆ ಕೇಳಿಕೊಂಡದ್ದರಿಂದ ಸರಕಾರದವರು ಅಮಾನತು ಹುಕುಮನ್ನು ಹಿಂತೆಗೆದು ಮಿ| ಜೇಮ್ಸರವರಿಗೆ ಅವರು ಕೇಳಿಕೊಂಡ ಫರ್ಲೊ ರಜೆಯನ್ನು ಕೊಟ್ಟಿರುತ್ತಾರೆ.

~~~~~

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ನ್ಯಾಯವಿಧಾಯಕ ಸಭೆಯು ಇದೇ ತಾ ೩ರಲ್ಲು ಕೂಡಿ ಬಂದಿರುವದು. ಈ ಸಭೆಗೆ ಮದ್ರಾಸ್ ಗವರ್ನರರಾದ ಪೆಂಟಲೇಂಡ ಪ್ರಭುಗಳವರು ಅಧ್ಯಕ್ಷರಾಗಿದ್ದರು. ಬಹುಮಾನಪಟ್ಟ ಮೆಂಬರರಲ್ಲಿ ಹೆಚ್ಚು ಕಡಿಮೆ ಎಲ್ಲರೂ ಸಭೆಯಲ್ಲಿ ಹಾಜರಿದ್ದರು. ಕೋಶಾಧ್ಯಕ್ಷರಾದ ಬಹುಮಾನಪಟ್ಟ ಸರ್ ಹರೋಲ್ಡ ಸ್ಟುಆರ್ಟರವರು ಸಭೆಯ ಮುಂದೆ ೧೯೧೬-೧೭ನೇ ಇಸವಿಯ ಜಮಾ ಖರ್ಚಿನ ಪರಿಷ್ಕರಿಸಿದ ಅಂದಾಜು ಪಟ್ಟಿಯನ್ನು ಇಟ್ಟಿರುವರು. ಈಗ ನಡಿಯುವ ಅಂದರೆ ೧೯೧೫-೧೬ನೇ ಇಸವಿಯ ಅಂದಾಜು ಪಟ್ಟಿ ಪ್ರಕಾರ ಜಮಾ ರೂ. ೭೬೪ ೬೩ಲಕ್ಷ, ಖರ್ಚು ರೂ. ೭೭೧ ೯೩ ಲಕ್ಷ, ಅಂದರೆ ಖರ್ಚು ೧೫೭೪ ಲಕ್ಷ ರೂಪಾಯಿ ಹೆಚ್ಚಾದಂತಾಯಿತು. ಪರಿಷ್ಕರಿಸಿದ ಅಂದಾಜು ಪಟ್ಟಿ ಪ್ರಕಾರ ಜಮಾ ರೂ. ೭೬೬.೯೭ ಲಕ್ಷ, ಖರ್ಚು ರೂ ೭೭೦.೯೩ ಲಕ್ಷ. ಈ ಎರಡು ಅಂದಾಜು ಪಟ್ಟಿಯನ್ನು ಹೋಲಿಸಿ ನೋಡಲು ೭೩ ಲಕ್ಷ ರೂಪಾಯಿಯ ವ್ಯತ್ಯಾಸವು ಕಂಡು ಬರುವದು. ೧೯೧೬-೧೭ನೇ ಇಸವಿಯ ಜಮಾ ಖರ್ಚಿನ ಅಂದಾಜು ಪಟ್ಟಿಯ ಪ್ರಕಾರ ಜಮಾ ರೂ ೭೭೦ ೧೫ ಲಕ್ಷ, ಖರ್ಚು ೭೭೩ ೧೪ ಲಕ್ಷ ರೂಪಾಯಿಗಳಾಗಿರುವವು. ಜಮಾ ರೂಪಾಯಿಗಳ ಪೈಕಿ ತೆರಿಗೆಯಿಂದ ರೂ ೩೫೦ ೭೦ ಲಕ್ಷ, ಸ್ಟಾಂಪುಗಳಿಂದ ರೂ ೭೭.೯೦ ಲಕ್ಷ, ಸುಂಕದಿಂದ ರೂ ೧೭೭ ೬೮ ಲಕ್ಷ, ಇನ್‌ಕಮ್ ಟೇಕ್ಸಿನಿಂದ ರೂ ೨೬ ೧೦ ಲಕ್ಷ, ಫೋರೆಸ್ಟ್ ರೂ ೩೯ ೫೦ ಲಕ್ಷ, ರಿಜಿಸ್ಟ್ರೇಶನ್ ರೂ ೨೪ ೦೦ ಲಕ್ಷ, ಸಯನ್ಟಿಫಿಕ್ ಮತ್ತು ದಾಗುದೂಜಿ ಇಲಾಖೆಗಳಿಂದ ರೂ. ೧೦.೮೭ ಲಕ್ಷ ಇತರ ಇಲಾಖೆಗಳಿಂದ ರೂ. ೪೭ ೮೫ ಲಕ್ಷ, ಇಂಪೀರಿಯಲ್ ಮತ್ತು ಪ್ರೊವಿನ್ಸಿಯಲ್ ರೆವಿನ್ಯುಗಳ ವರ್ಗಾವರ್ಗಿಗಳಿಂದ ರೂ. ೧೭.೪೫ ಲಕ್ಷ ಹುಟ್ಟುತ್ತಿರುವದು. ಖರ್ಚಿನ ಅಂದಾಜು ಪಟ್ಟಿಯು ಈ ರೀತಿಯಾಗಿರುವದು:—ಲೇಂಡ್ ರೆವಿನ್ಯುಗಳ ಬಗ್ಗೆ ರೂ ೧೨೭.೦೪ ಲಕ್ಷ; ಫೋರೆಸ್ಟ್ ೨೮.೮೭ ಲಕ್ಷ; ಆ ಕೋರ್ಟುಗಳ ಬಗ್ಗೆ ೮೫.೩೯ ಲಕ್ಷ; ಪೋಲಿಸ್ ೧೯೭.೪೧; ವಿದ್ಯಾಭ್ಯಾಸ ೮೦.೮೫; ವೈದ್ಯಕ ಬಗ್ಗೆ ೩೯.೬೮ ಲಕ್ಷ; ವ್ಯವಸಾಯ ೧೧.೮೭ ಲಕ್ಷ; ಸಯನ್ಟಿಫಿಕ್ ಮತ್ತು ದಾಗದೂಜಿ ಇಲಾಖೆ ೧೭.೩೭ ಲಕ್ಷ; ಮೈನರ್ ವರ್ಕ್ಸ್ ಮತ್ತು ನೆವಿಗೇಶನ್-ಸಿವಿಲ್ ೮.೦೦ ಲಕ್ಷ; ಮೈನರ್ ವರ್ಕ್ಸ್ ಮತ್ತು ಪಬ್ಲಿಕ್ ವರ್ಕ್ಸ್ ೩೭ ೦೧ ಲಕ್ಷ; ಸಿವಿಲ್ ವರ್ಕ್ಸ್-ಸಿವಿಲ್ ೧೮.೫೩ ಲಕ್ಷ; ಸಿವಿಲ್ ವರ್ಕ್ಸ್- ಪಬ್ಲಿಕ್ ವರ್ಕ್ಸ್ ಇಲಾಖೆ ೬೪.೧೭ ಲಕ್ಷ, ಇತರ ಇಲಾಖೆಗಳ ಬಗ್ಗೆ ೧೪.೮೫ ಲಕ್ಷ ರೂಪಾಯಿಗಳ ಖರ್ಚು ತಗಲುವದು ಎಂತ ಅಂದಾಜಾಗಿದೆ. ವಿದ್ಯಾಭ್ಯಾಸದ ಬಗ್ಗೆ ಇಂಪೀರಿಯಲ್, ಪ್ರೊವಿನ್ಸಿಯಲ್ ಲೋಕಲ್ ಮತ್ತು ಮುನ್ಸಿಪಲ್ ಫಂಡುಗಳಿಂದ ೧೯೧೬–೧೭ನೇ ಇಸವಿಯಲ್ಲಿ ೧೧೦.೪೫ ಲಕ್ಷ ರೂಪಾಯಿ ಕೊಡೋಣಾಗುವದೆಂತಲೂ ಈ ಪೈಕಿ ಬರೇ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ರೂ. ೬೮.೫೯ ಲಕ್ಷ ರೂಪಾಯಿ ಕೊಡೋಣಾಗುವದೆಂತಲೂ ಅಂದಾಜಾಗಿಯದೆ.

~~~~~

ದಕ್ಷಿಣ ಕನ್ನಡ.

ಉಡುಪಿ:—ಶ್ರೀಮನ್ ಮಧ್ವಮತ ಶ್ರೀಕೃಷ್ಣ ಶ್ರೀ ಮದುತ್ತಪ್ರೇಕ್ಷಾಚಾರ್ಯರ ಸಂಸ್ಥಾನವಾದ, ಶ್ರೀಮದ್ಭೀಮಸೇತು ಮುನಿವೃಂದ ಮಠದ, ಶ್ರೀಮದ್ರಘು ಭೂಷಣ ತೀರ್ಥ ಶ್ರೀಪಾದಂಗಳವರು ತಮ್ಮ ಮಠದಿಂದ ಹುಟ್ಟಿ ಬಂದ ಪರಸ್ಪರ ದ್ವಂದ್ವಸಂಪ್ರದಾಯವುಳ್ಳ ಶ್ರೀಭಂಡಾರಿಕೇರಿ ಮಠಕ್ಕೆ ದ್ವಂದ್ವ ಹಕ್ಕಿನ ಮೇಲೆ ಶ್ರೀಸ್ವಾಮಿಗಳವರನ್ನು ನೇಮಕ ಮಾಡಿದ ವಿಷಯದಲ್ಲಿ ಉಡುಪಿಯ ಶ್ರೀ ಅಧಮಾರು ಮುಂತಾದ ಅಷ್ಟಮಠಗಳ ಶ್ರೀಪಾದಂಗಳವರು ಒಂದಾಗಿ "ಸದರಿ ಬಂಡಾರಿಕೇರಿ ಮಠಕ್ಕೆ ಸ್ವಾಮಿಗಳನ್ನು ನೇಮಿಸತಕ್ಕ ಹಕ್ಕು ಉಡುಪಿ ಪರಿಯಾಯ ಮಠದವರದ್ದೇ" ಎಂದು ಮತವಾಗಿ ನ್ಯಾಯಸ್ಥಾನದಲ್ಲಿ ೧೯೧೮ನೇ ಇಸವಿಯ ಲಾಗಾಯಿತು ವಾದಿಸುತ್ತಾ ಬಂದಿರುವರಷ್ಟೇ! ಈ ವಿವಾದವು ಇದೇ ೧೯೧೬ನೇ ಇಸವಿ ಫೆಬ್ರವರಿ ತಾ. ೨೯ನೇ ದಿನ ಮದ್ರಾಸ್ ಹೈಕೋರ್ಟಿನಲ್ಲಿ "ಶ್ರೀಭಂಡಾರಿಕೇರಿ ಮಠಕ್ಕೆ ಸ್ವಾಮಿಗಳನ್ನು ನೇಮಿಸುವ ಪೂರ್ಣ ಅಧಿಕಾರವು, ನ್ಯಾಯವಾದ ದ್ವಂದ್ವ ಹಕ್ಕು ಪ್ರಕಾರ ಶ್ರೀಮದ್ಭೀಮಸೇತು ಮುನಿವೃಂದ (ಭೀಮನ ಕಟ್ಟೆ) ಮಠದ ಶ್ರೀಪಾದಂಗಳವರದ್ದೇ ಸರಿ" ಎಂದು ತೀರ್ಮಾನಿಸಲ್ಪಟ್ಟ ತಂತೆ 'ಸತ್ಯಮೇವಜಯತೇ' ಎಂದು ಜನರು ಆಡಿಕೊಳ್ಳುತ್ತಿರುವರು.

~~~~~

ಪುತ್ತೂರು:—ಇಲ್ಲಿಯ ಕಾಯಂ ಸಬ್ ರಿಜಿಸ್ಟ್ರಾರರಾಗಿದ್ದ ಮ. ರಾ. ಎಮ್. ಬಾಬುರಾಯರವರು ಕಾಹಿಲೆ ಸಂಬಂಧ ರಜೆ ಮೇಲೆ ಇರುವದರಿಂದ ಇವರ ಕೆಲಸವನ್ನು ಮ. ಬಿ. ಎನ್ ರೆಬೆಲ್ಲರವರು ನೋಡುತ್ತಿರುವರು.

ಇಲ್ಲಿ ಯೂನಿಯನ್ ಪಂಚಾಯತಿ ಯಾನೆ ಚಿಕ್ಕ ಮುನ್ಸಿಪಾಲಿಟಿ ಜ್ಯಾರಿಗೆ ತರುವದರ ಕುರಿತು ಕಳೆದ ದಶಂಬರ ತಿಂಗಳಲ್ಲಿ ನಮ್ಮ ಡಿವಿಜನ ಡಿಪ್ಯುಟಿ ಕಲೆಕ್ಟರಾಗಿದ್ದ ಮ. ರಾ. ರಾ. ಪಿ. ಸೀತಾರಾಮರಾವ್‌ರ ಅಧ್ಯಕ್ಷತೆಯಲ್ಲಿ ಸಭೆ ಕೂಡಿದಾಗ ಬಹು ಸ್ವಲ್ಪ ಮಂದಿ ಮಾತ್ರ ಅದಕ್ಕೆ ಸಮ್ಮತಪಟ್ಟಿದ್ದರು. ಯೂನಿಯನ್ ಏರ್ಪಾಡಿನ ಬಗ್ಗೆ ಶ್ಯಾನುಭ್ಯಾಗರು ಮನೆ [illegible] ಲೆಖ್ಖ ತೆಗೆದದ್ದರಿಂದ [illegible]
ಸುತ್ತಾರಂಭ, ಸಂಗತಿ [illegible]

ಶಲ್ಲಿ ಯೂನಿಯನ್ ಪಂಚಾಯತಿ ಕ್ರಮವನ್ನು ಜ್ಯಾರಿಗೆ ತರಬಾರದಾಗಿ ಶ್ರೀಮಾಲಿಂಗೇಶ್ವರ ದೇವಸ್ಥಾನದಲ್ಲಿ ಇಲ್ಲಿಯ ಜವಿಾನುದಾರರು ಮ. ರಾ ರಾ ಬ್ರಹ್ಮಯ್ಯ ಶೆಟ್ರುವರ ಅಧ್ಯಕ್ಷತೆಯಲ್ಲಿ ಸಭೆ ಸೇರದು ನಮ್ಮ ಈ ಚಿಕ್ಕ ಗ್ರಾಮಕ್ಕೆ ಯೂನಿಯನ್ ಜ್ಯಾರಿಗೆ ತರುವದರ ಕುರಿತು ಆಕ್ಷೇಪಿಸಿ ಗವರ್ನಮೆಂಟಿಗೆ ಮನವಿ ಬರಕೊಂಡಿರುವರು. ಈ ಸಭೆಗೆ ಬಹಳ ಮಂದಿ ಸೇರಿದ್ದರು.

~~~~~

ಸುಳ್ಯ:—ಅರಂತೋಡಿನಿಂದ ತೊಡಿಕಾನದ ವರೆಗೆ ಹೋಗುವ ಬ್ರ್ಯಾಡ್ಲ ಪಾತನ್ನು ಅಗಲ ಮಾಡಿ ಬಂಡಿ ಹೋಗುವರೆ ಮಾಡಿಕೊಡಬೇಕೆಂಬದಾಗಿ ಊರು ನಿವಾಸಿಕರು ತಮ್ಮ ತಮ್ಮ ವರ್ಗ ಸ್ಥಳಗಳನ್ನು ಪ್ರತಿಫಲವಿಲ್ಲದೆ ಮಾರ್ಗದ ಉಪಯೋಗಕ್ಕೆ ಬಿಟ್ಟಿದ್ದಲ್ಲದೆ ಅಲ್ಪ ಹಣ ಸಹಾಯ ಕೂಡಾ ಮಾಡುತ್ತೇವೆಂಬದಾಗಿ ವಾಗ್ದಾನ ಮಾಡಿರುತ್ತಾರಂತೆ ಆದರೆ ವರ್ಗಸ್ಥಳ ಮತ್ತು ರೆವಿನ್ಯೂ ಸ್ಥಳಗಳಲ್ಲಿ ಅಲ್ಲಲ್ಲಿ ರಸ್ತೆ ಆಗಿಯದೆ ತೊಡಿಕಾನ ಬ್ಲೋಕಿನಲ್ಲಿ ಈ ವರೆಗೂ ರಸ್ತೆ ಆಗಲಿಲ್ಲ ಬ್ಲೋಕು ಸ್ಥಳ ಫೋರೆಸ್ಟು ಡಿಪಾರ್ಟಮೆಂಟಿನವರು ಬಿಟ್ಟುಕೊಡದೆ ಇದ್ದುದರಿಂದ ರಸ್ತೆ ಮಾಡಲಿಕ್ಕೆ ಅನುಕೂಲವಾಗಲಿಲ್ಲ ಎಂತ ತಿಳಿಯುತ್ತೇವೆ ಆದ್ದರಿಂದ ಆದಷ್ಟು ಬೇಗನೇ ಈ ರಸ್ತೆಯನ್ನು ಮಾಡಿಸುವರೆ ದಯಾಳು ಸರಕಾರದವರು ಮನಸ್ಸು ಕೊಟ್ಟರೆ ಬಹು ಉಪಕಾರವಾಗುತ್ತಿತ್ತು

~~~~~

ಬಂಟ್ವಾಳ·—ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಕಾಲಾವಧಿ ರಥೋತ್ಸವವು ಬಹು ಸಾಂಗವಾಗಿ ನಡೆಯಿತು

ದಾಚಿನವರು ಕೂಡಲೇ ಈ ವಿಷಯವನ್ನು ಪೋಲೀಸ್ ಠಾಣೆಗೆ ತಿಳಿಸುತ್ತಲೇ ಸ್ಟೇಶನ್ ಚಾರ್ಜಿಯಲ್ಲಿದ್ದ ಹೆಡ್ ಕನ್‌ಸ್ಟೇಬಲ ಮಂಜುನಾಥನವರು ತಕ್ಷಣವೇ ಅಲ್ಲಿಗೆ ಬಂದು ಮನೆಯನ್ನು ಜಡ್ತಿ ಮಾಡಿದ್ದಲ್ಲಿ ಚೆನ್ನಪ್ಪನ ಚೀಲದಿಂದ ಕಳವಾದ ೧೬೦೦ ಮುತ್ತುಗಳ ಪೈಕಿ ಕೆಲವು ಮುತ್ತುಗಳೂ ೧೨ ಶೆಲ್ಯಾಣಿ ಕಲ್ಲುಗಳೂ ಕಳವಾದ ನಗದಿ ರೂಪಾಯಿ ೫೦ ಮತ್ತು ೨ ಪವನುಗಳ ಪೈಕಿ ೩೦ ರೂಪಾಯಿಗಳೂ ಗೋಡೆಯ ಮೇಲಿಟ್ಟಿದ್ದ ೮ ಯುವಕರ ಅಂಗೀ ಚೀಲಗಳಲ್ಲಿಯೂ ಚೆನ್ನಪ್ಪನ ಬೀಗ ಮುರಿದ ರತ್ನದ ಚೀಲವು ಮನೆಯ ಒಳಗೂ ದೊರಕಿದವೆಂತಲೂ ಫಿರ್ಯಾದು ಆಗಿರುವದು. ಈ ಕೃತ್ಯವನ್ನು ನಡಿಸಿದ ಪೋಲಿಸ್ ಕನ್‌ಸ್ಟೇಬಲ್ ಟಿ. ರಾಮರಾವ್, ಶಾಂತ, ಮತ್ತು ರಾಮಚಂದ್ರ ಇವರು ಪರಾರಿಯಾಗಿರುವರಂತೆ. ಚೆನ್ನಪ್ಪನ ಕುತ್ತಿಗೆಯಲ್ಲಿ ಗಾಯಗಳಾಗಿರುವವು. ಈ ಸಂಬಂಧ ಹೆಚ್ಚಿನ ತನಿಕೆ ನಡಿಯುತ್ತಿದೆ.

ಇದೇ ಕಳೆದ ಫೆಬ್ರುವರಿ ತಿಂಗಳಲ್ಲಿ ಹಂಪನಕಟ್ಟೆಯಲ್ಲಿ ಬೈಸಿಕಲನ್ನು ಖುಳ್ಳಾಲ ಶರೀಫ ಗುತ್ತೆದಾರ ಬಂಟಪ್ಪನ ಮೇಲೆ ಹಾಕಿದ ಬಾಪು ಎಂಬವನಿಗೆ ರೂ. ೧೫ ಜುಲುಮಾನೆಯೂ, ಮ. ರಾ। ಸಿ. ರಘುನಾಥ ಕಮ್ತಿಯರ ಮೇಲೆ ಬೈಸಿಕಲ್ ಹಾಕಿದ ಕ್ಲಾರ್ಕ ಪರಮೇಶ್ವರನಿಗೆ ರೂ. ೧೦ ಜುಲುಮಾನೆಯೂ ವಿಧಿಸೋಣಾಗಿದೆ. ಬೈಸಿಕಲ್ ಸವಾರರು ಇದರಿಂದ ಎಚ್ಚರಗೊಂಡು ಮುಂದಕ್ಕಾದರೂ ಜನ ತುಂಬಿದ ಬೀದಿಗಳಲ್ಲಿ ಮೆಲ್ಲನೆ ಸವಾರಿ ಮಾಡಬೇಕಾಗಿ ಅಪೇಕ್ಷಿಸುವೆವು.

ಇದೇ ಕಳೆದ ಆದಿತ್ಯವಾರ ರಾತ್ರಿ ಬಂದರದಲ್ಲಿ ಒಂದು ದೊಡ್ಡ ಡೊಂಬಿ ನಡೆದಿರುವದು. ರಾತ್ರಿಕಾಲ ಇಬ್ರಾಹಿಮ್ ಮತ್ತು ಮುಸ್ತಾದ್ ಅಹ್ಮದ್ ಎಂಬ ಇಬ್ಬರು ಕುಡಿದು ಮತ್ತರಾಗಿ ಬಂದರದ ಬಾಪುಸ್ವಾಮಿನ ಹೋಟೇಲಿಗೆ ಊಟಕ್ಕೆ ಹೋದರೆಂತಲೂ ಹೋಟೇಲಿನವರು ಬಡಿಸಿದ್ದ ಮಿಠಾಯಿ ಪದಾರ್ಥವನ್ನು ಅವರಿಬ್ಬರೂ ತಿಂದು ಇನ್ನೂ ಹೆಚ್ಚಿಗೆ ಮೊಸು ಪದಾರ್ಥ ಕೊಡಬೇಕೆಂದು ಹೋಟೇಲಿನವರನ್ನು ಕೇಳಿದರೆಂತಲೂ ಆದರೆ ಹೋಟೇಲಿನಲ್ಲಿ ಮೇಲೋಗರವು ದೊರಕದ್ದರಿಂದ ಹೋಟೇಲಿನವರಿಗೆ ಅವರಿಬ್ಬರೂ ಚೆನ್ನಾಗಿ ಬೈದರೆಂತಲೂ ಹೀಗೆ ಬೈದಾಟವು ಗುದ್ದಿನ ಪರಿಣಾಮವನ್ನು ಹೊಂದಿತೆಂತಲೂ ಕೇಳುತ್ತೇವೆ. ಇದರಿಂದ ಉಂಟಾದ ಗದ್ದಲವನ್ನು ಕೇಳಿ ಸಮೀಪದ ನೂರಾರು ಮಾಪಿಳ್ಳೆಯರು ಹೋಟೇಲಿನೊಳಗೆ ನುಗ್ಗಿ ಸದರಿ ಬಾಪುಸ್ವಾಮಿಗೂ ಅವನ ಮಗನಿಗೂ ಚೆನ್ನಾಗಿ ಹೊಡೆದು ಹೋಟೇಲಿನ ಬಾಗಿಲನ್ನು ಕಿತ್ತು ಬಿಸಾಡಿದರೆಂತಲೂ ಬಾಪುಸ್ವಾಮಿಯು ಏನು ಮಾಡಬೇಕೆಂದರಿಯದೆ ಕೈಯಲ್ಲಿದ್ದ ಚೂರಿಯಿಂದ ತನ್ನ ಮೈ ಮೇಲೆ ಬಿದ್ದವರಿಗೆಲ್ಲಾ ತಿವಿದನೆಂತಲೂ ಕೇಳುತ್ತೇವೆ. ಇದರಿಂದ ಇಬ್ಬರಿಗೆ ಕಠಿಣ ಗಾಯಗಳಾಗಿ ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುವರು. ಇನ್ನು ಕೆಲವರಿಗೆ ಸಾಧಾರಣ ಗಾಯಗಳಾಗಿರುವವು. ಹೆಚ್ಚಿನ ತನಿಕೆ ನಡಿಯುತ್ತಿದೆ.

ಕದ್ರಿಯಲ್ಲಿರುವ ಸೆನಿಟರಿ ಅಸಿಸ್ಟಾಂಟ ರಾ। ರಾಮರಾಯರ ಮನೆಗೆ ರಾತ್ರಿಕಾಲ ಯಾರೋ ಕನ್ನ ಹಾಕಿ ಸುಮಾರು ೩೦ ರೂಪಾಯಿ ಕ್ರಯಬಾಳುವ ಒಂದು ಬೆಳ್ಳಿಯ ಬಟ್ಟಲನ್ನು ಕಳವು ಮಾಡಿರುವರು. ಕಳ್ಳರೂ ಕಳವಾದ ಮಾಲೂ ಪತ್ತೆಯಾಗಲಿಲ್ಲ.

ಇದೇ ತಾ. ೨೭ನೇ ಬುಧವಾರ ದಿನ ಕಂಕನಾಡಿ ಜೆ ಡಿ. ಫೆರ್ನಾಂಡಿಸರ ಮನೆಯಲ್ಲಿ ೧೦ ಪವನು ತೂಕದ ಒಂದು ಚಿನ್ನದ ಕಂಠೀ ಸರವು ಕಳವಾಗಿರುವದು. ಆ ದಿನ ಬೆಳಗ್ಗೆ ಅವರ ಮನೆಗೆ ಬಂದೆರಡು ಕೂಲಿಯಾಳುಗಳು ಸುಣ್ಣ ಬಳಿಯಲಿಕ್ಕೆ ಬಂದಿದ್ದರು. ಚಿನ್ನದ ಸರವಿದ್ದ ಕೋಣೆಯ ಸಾಮಾನುಗಳನ್ನು ಈ ಕೂಲಿಯವರು ಹೊರಗೆ ಇಟ್ಟ ನಂತರ ಮನೆಯ ಯಜಮಾನಿಗೆ ಸರದ ಜ್ಞಾಪಕ ಬಂದು ಒಳ ಹೋಗಿ ನೋಡಲು ಸರವಿರಲಿಲ್ಲ. ಅಂದೇ ಸಾಯಂಕಾಲ ಈ ವಿಷಯವು ಪೊ. ಸ. ಇನ್ಸ್‌ಪೆಕ್ಟರ್ ರಾ। ಅಮೃತರಾಯರಿಗೆ ತಿಳಿಯುತ್ತಲೇ ಅವರು ಅಲ್ಲಿಗೆ ಹೋಗಿ ಕೂಲಿಯಾಳುಗಳ ಪೈಕಿ ಮಧ್ಯಾನ್ಹ ಊಟಕ್ಕೆ ಹೋಗಿದ್ದ ಲಾಜರ್ ಚಿನ್ನಪ್ಪನನ್ನು ವಿಚಾರಿಸಿ ಕಳವಾದ ಸರವನ್ನು ಲಾಜರ್ ಚಿನ್ನಪ್ಪನಲ್ಲಿ ಕಂಡು ಅವನನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರು.

ಪಟ್ಟಣದ ಕೆಲವು ಮಾನ್ಯ ಗೃಹಸ್ಥರ ಮನೆಗಳ ಚಾವಡಿಯೊಳಗಿಟ್ಟಿದ್ದ ಅಂಗೀ ಇತ್ಯಾದಿ ಚಿಲ್ಲರೆ ಸಾಮಾನುಗಳ ಕಳವುಗಳು ಇತ್ತೀಚೆಗೆ ಹೆಚ್ಚಿದೆ ಎಂಬ ವಾರ್ತೆಯು ಇದೆ. ಸಂಬಂಧಪಟ್ಟ ಅಧಿಕಾರಿಗಳು ರೋಗಕ್ಕೆ ಚಿಕಿತ್ಸೆ ಮಾಡುವದಕ್ಕಿಂತಲೂ ರೋಗಕ್ಕೆ ಪ್ರತಿ ವಿಧಾನವನ್ನು ಮಾಡುವದು ಲೇಸೆಂತ ಈ ಮೂಲಕ ಸೂಚಿಸಿರುವೆವು.

ರಾಮ ಭಂಡಾರಿಯವರನ್ನು ಕೊಂದರೆಂಬ ತಕ್ಸೀರಿನ ಮೇಲೆ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟ ಸಾಯಿರಿ ಬ್ಯಾರಿ, ಹಮ್ಮದ್, ಹುಸೇನಬ್ಬ ಇವರ ಮೊಕದಮೆ ತನಿಕೆಯು ಇದೇ ತಾ. ೨೬ನೇ ಬುಧವಾರಕ್ಕೆ ಅಂತ್ಯವಾಯಿತು. ಎಸ್ಸೆಸ್ಸರುಗಳು ೧ನೇ ಅಪಾದಿತ ಸಾಯಿರಿ, ಮತ್ತು ಹಮ್ಮದ್ ತಪ್ಪಿತಸ್ಥರೆಂದೂ, ೩ನೇ ಅಪಾದಿತ ಹುಸೇನಬ್ಬ ತಪ್ಪಿತಸ್ಥನಲ್ಲವೆಂದೂ ಅಭಿಪ್ರಾಯ ಕೊಟ್ಟಿರುವರು. ಜಡ್ಜರು ತೀರ್ಮಾನವನ್ನು ಬರುವ ಸೋಮವಾರಕ್ಕೆ ಬಾಕಿ ಇಟ್ಟಿರುತ್ತಾರೆ.

ಬಸವನಗುಡಿ ವೈರಿ ಹೆಂಗಸನ್ನು ಚಾಯಬ್ಯಾರಿ ಎಂಬವನು ಖೂನಿ ಮಾಡಿದ್ದನೆಂಬ ಅನುಮಾನದ ಮೇಲೆ ಪೋಲಿಸಿನವರು ಅವನನ್ನು ಕೈದು ಮಾಡಿದ್ದರೆಂದೂ ಡಿಸ್ಟ್ರಿಕ್ಟ್ ಸರ್ಜನರು ಶವ ಪರೀಕ್ಷೆ ಮಾಡಿ ಸದರಿ ಹೆಂಗಸು ಸ್ವಾಭಾವಿಕ ವ್ಯಾಧಿಯಿಂದ ಮೃತಪಟ್ಟಳೆಂಬ ಅಭಿಪ್ರಾಯಪಟ್ಟದ್ದರಿಂದ ಪೋಲಿಸಿನವರು ಅವನನ್ನು ಬಿಟ್ಟು ಬಿಟ್ಟರೆಂದೂ ತಿಳಿಸಿತ್ತಷ್ಟೆ. ಆದರೆ ಸದರಿ ಹೆಂಗಸಿಗೆ ಚಾಯಬ್ಯಾರಿಯು ಹೊಡೆದಿದ್ದನೆಂಬದಕ್ಕೆ ತಕ್ಕ ರುಜುವಾತು ಇದ್ದದರಿಂದ ಪೋಲಿಸಿನವರು ಪುನಃ ಅವನನ್ನು ಕೈದು ಮಾಡಿ ವಿಚಾರಣೆಗೆ ಗುರಿಮಾಡಿದ್ದರು. ಈ ಮೊಕದಮೆಯ ವಿಚಾರಣೆ ನಡೆಸಿ ಸ್ಟೇಶನರಿ ಸಬ್ ಮೇಜಿಸ್ಟ್ರೇಟರು ಸದರಿ ಚಾಯಬ್ಯಾರಿಯನ್ನು ಚಾರ್ಜುಮಾಡಿರುತ್ತಾರೆಂತ ತಿಳಿಯುತ್ತೇವೆ.

ಜಾಲ್ಲಿ ಸ್ಕಾಲರ್‌ಸಿಫ್ ಫಂಡಿನ ಬ್ರಾಹ್ಮಣ ವೇತನದ ಬಗ್ಗೆ ಮೇಲಾಟದ ಪರೀಕ್ಷೆಯು ಇದೇ ಬರುವ ಅಗೋಸ್ತು ತಿಂಗಳ ತಾ. ೭ರಲ್ಲು ಗವರ್ನಮೆಂಟ ಕಾಲೇಜಿಯಲ್ಲಿ ಹಗಲು ೧೦ ಘಂಟೆಗೆ ನಡೆಯುವದು. ಇದರ ಕ್ರಮ, ಅರ್ಜಿ ಫೋರ್ಮುಗಳು ಡಿಸ್ಟ್ರಿಕ್ಟ್ ಜಡ್ಜರ ಆಫೀಸಿನಲ್ಲಿ ೨ ಆಣೆ ಮತ್ತು ೧ ಆಣೆಗೆ ದೊರಕುವದು. ಉಮೇದ್ವಾರರ ಅರ್ಜಿಯು ಇದೇ ಜುಲಾಯಿ ತಾ. ೩೧ರ ಒಳಗೆ ಸದರಿ ಆಫೀಸಿಗೆ ತಲಪತಕ್ಕದ್ದು ಎಂಬದಾಗಿ ಈ ಫಂಡಿನ ಪ್ರೆಸಿಡೆಂಟರಾಗಿರುವ ಡಿಸ್ಟ್ರಿಕ್ಟ್ ಜಡ್ಜರಿಂದ ಪ್ರಕಟಿಸೋಣಾಗಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಟ್ಟ ಮಿ। ಎ. ಎಲ್. ವೈಬರ್ಟ್ ಐ. ಸಿ. ಎಸ್. ದೊರೆಗಳವರು ಇದೇ ತಾ. ೧೭ರಲ್ಲು ಇಲ್ಲಿಗೆ ಚಿತ್ತೈಸಿ, ತಾ. ೧೮ರಲ್ಲು ಮಿ। ಗೆಲಟಿ ದೊರೆಗಳವರಿಂದ ಚಾರ್ಜು ತಕ್ಕೊಂಡಿರುವರು.

ಮಿ। ಗೆಲಟಿ ದೊರೆಗಳವರು ಕಡಪ್ಪ ಡಿಸ್ಟ್ರಿಕ್ಟಿನ ಸಿಡ್ವೌಟ್ ಡಿವಿಜನಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮ. ರಾ. ಬಿ. ಮಹಾಬಲ ಹೆಗ್ಗಡೆಯವರು ಮಂಗಳೂರು ಮುನಿಸಿಪಾಲಿಟಿ ಕೌನ್ಸಿಲರರಾಗಿ ನೇಮಿಸಲ್ಪಟ್ಟಿರುವರು.

ಭಿಷಗ್ಮಣಿ ಔಷಧಾಲಯ, ಹರಪನಹಳ್ಳಿ — ಇವರಿಂದ ಕಳುಹಲ್ಪಟ್ಟ "ಪ್ರತ್ಯಕ್ಷ ಆರೂಢ ಪ್ರಶ್ನಚಂದ್ರಿಕೆ"ಯ ಜ್ಯಾಹೀರಾತನ್ನು ಈ ಸಂಚಿಕೆಯೊಂದಿಗೆ ...

ಸಹಕಾರ.

ಸರ್ಕಿಲಾರು ನಂಬ್ರ ೨೮

ಕ್ಷೇಮ ನಿಧಿಯ ನಿಜವಾದ ಉದ್ದೇಶ.

ಮೆಂಬರರು ಸಂಘಗಳಲ್ಲಿ ತೆಗೆದುಕೊಳ್ಳುವ ಶ್ರಮಕ್ಕೆ ಅವರಿಗೆ ಸಿಕ್ಕುವ ಪ್ರತಿಫಲವು ಯಾವದೆಂದು ಹಿಂದಿನ ಸರ್ಕಿಲಾರಿನಲ್ಲಿ ಹೇಳಲ್ಪಟ್ಟಿತು. ಆದರೆ ಅದು ನಗದು ಪ್ರತಿಫಲವಲ್ಲವೆಂದು ಅನೇಕರು ವಾದಿಸಬಹುದು. ನಮ್ಮ ಸಂಘಗಳಲ್ಲಿ ಹೆಚ್ಚಾಗಿ ಪಾಲುವಂತಿಗೆಯ ದರವು ಪಾಲು ಒಂದಕ್ಕೆ ಒಂದುರೂಪಾಯಿ ಮಾತ್ರವಾಗಿರುತ್ತದೆ. ಮತ್ತು ಯಾವ ಮೆಂಬರನಾದರೂ ೧೦ ಪಾಲುಗಳಿಗಿಂತ ಹೆಚ್ಚು ಪಾಲುಗಳನ್ನು ಪಡಕೊಳ್ಳಕೂಡದಾಗಿರುತ್ತದೆ. ಆದುದರಿಂದ ಯಾವ ಮೆಂಬರನಾದರೂ ಪಾಲು ವಂತಿಗೆಯ ಸಲುವಾಗಿ ಸಂಘದಲ್ಲಿ ೧೦ ರೂಪಾಯಿಗಳಿಗಿಂತ ಹೆಚ್ಚು ಹಣವನ್ನಿಡಲು ಸಾಧ್ಯವಿಲ್ಲ. ಅಷ್ಟು ಚಿಲ್ಲರೆ ಹಣಕ್ಕೆ ನಗದಾಗಿ ಎಷ್ಟು ಪ್ರತಿಫಲ ಸಿಕ್ಕೀತು ಎಂಬದನ್ನು ಎಲ್ಲವರೂ ಆಲೋಚಿಸಬೇಕು.

ಲಾಭವನ್ನು ಹಂಚಿಕೊಳ್ಳುವುದರಿಂದ ಮನಸ್ಸು ಲಾಭದ ಆಸೆಯಲ್ಲಿಯೇ ಸಿಲುಕಿ, ಲಾಭಾಂಶವನ್ನು ಹೆಚ್ಚಿಸಬೇಕೆಂಬ ಇರಾದೆಯು ಬೆಳೆಯುತ್ತಲೇ ಇರುವುದು. ಇದರಿಂದ ಮೆಂಬರರಿಗೆ ಹೆಚ್ಚು ಸಾಲಗಳನ್ನು ಕೊಡುವುದೇ ಲಾಭವನ್ನು ಹೆಚ್ಚಿಸಿಕೊಳ್ಳುವ ಉಪಾಯವಾದುದರಿಂದ, ಸಾಲಗಳನ್ನು ಸೇಂಕ್ಷನ್ ಮಾಡುವುದರಲ್ಲಿ ಇರಬೇಕಾದ ಜಾಗರೂಕತೆಯು ಕ್ರಮೇಣವಾಗಿ ಕ್ಷೀಣಿಸುತ್ತದೆ. ಈ ಪರಿಣಾಮದಿಂದ ಸಂಘಕ್ಕೂ ಸಂಘದ ಎಲ್ಲಾ ಮೆಂಬರರಿಗೂ ತಗಲಬಹುದಾದ ಅಪಾಯಗಳನ್ನು ಬಿಡಿಸಿ ಹೇಳಬೇಕೆಂದಿಲ್ಲವಷ್ಟೆ. ಹೀಗಾಗಿ ಲಾಭವನ್ನು ಹಂಚಿಕೊಳ್ಳುವ ಸಂಪ್ರದಾಯವು ಸಂಘಗಳಿಗೆ—ಮುಖ್ಯವಾಗಿ ಅಮಿತ ಜವಾಬದಾರಿಯ ಸಂಘಗಳಿಗೆ—ಅತ್ಯಂತ ಹಾನಿಕರವಾಗಿರುತ್ತದೆ.

ಕ್ಷೇಮನಿಧಿಯ ನಿಜವಾದ ಉದ್ದೇಶವು ಸಂಘಗಳ ಕ್ರಮಗಳಲ್ಲಿ ಹೀಗೆಂದು ವಿವರಿಸಲ್ಪಟ್ಟಿದೆ:—"ಕ್ಷೇಮನಿಧಿಯು ಹಂಚಿಕೊಳ್ಳುವಂಥಾದ್ದಲ್ಲದ ದ್ರವ್ಯವಾಗಿರತಕ್ಕದ್ದು. ಅದು ಸಂಘದ ಎಲ್ಲಾ ಮೆಂಬರರಿಗೆ ಸೇರಿದ ಒಂದು ಸ್ವತ್ತಾಗಿದ್ದು ಅನಿರೀಕ್ಷಿತವಾದ ನಷ್ಟಗಳನ್ನು ಭರ್ತಿಮಾಡಲಿಕ್ಕೆ ಉದ್ದೇಶಿಸಲ್ಪಟ್ಟಿದೆ." ಇದೇ ಅದರ ನಿಜವಾದ ಉದ್ದೇಶವಾಗಿರುತ್ತದೆ. ಸಂಘದ ಕೆಲಸಗಳನ್ನು ಎಷ್ಟು ಜಾಗರೂಕತೆಯಿಂದ ನಡೆಯಿಸಿದರೂ, ದುರಾದೃಷ್ಟವಶದಿಂದ ಸಂಘಕ್ಕೆ ನಷ್ಟವು ಸಂಭವಿಸಿದರೆ, ಅದರ ಬಾಧೆಯು ಅಮಿತವಾಗಿ ಜವಾಬುದಾರರಾದ ಮೆಂಬರರಿಗೆ ತಟ್ಟಕೂಡದೆಂದೇ ಕ್ಷೇಮನಿಧಿಯು ಏರ್ಪಟ್ಟದ್ದಾಗಿರುತ್ತದೆ. ವ್ಯಾಪಾರಿ ಬ್ಯಾಂಕು ಮುಂತಾದುವುಗಳಲ್ಲಿ ಕ್ಷೇಮನಿಧಿಯ ಹಣಕ್ಕೆ ಆಪದ್ಧನವೆಂದು ಹೆಸರು. ಆ ಹೆಸರಿನಲ್ಲಿ ಅದರ ಉದ್ದೇಶವು ಇನ್ನೂ ವಿಶದವಾಗುತ್ತದೆ. ಜವಾಬದಾರಿಯು ಅಮಿತವಾದುದರಿಂದ ಲಾಭದ ಮೊಬಲಗನ್ನು ಪೂರಾ ಆಪದ್ಧನವಾಗಿ ಪ್ರತ್ಯೇಕಿಸಿಡುವುದೇ ಭದ್ರವಾದ ಮಾರ್ಗವಾಗಿರುತ್ತದೆ.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು ತಾ. 20—...

ಯು. ಅನಂತರಾವ್
ಕಾರ್ಯದರ್ಶಿ.

SUPPLIMENT TO THIS ISSUE

ಅತ್ಯದ್ಭುತ ! ಭಾರತೀಯರಿಗೆ ಇದು ಒಂದು ಲಾಭಕರವಾದ ಕಾಲ !! ಅತ್ಯಾಶ್ಚರ್ಯ !!!

ಈ ಜಾಹೀರಾತನ್ನು ದಯಮಾಡಿ ಮೊದಲಿನಿಂದಲು, ಸಂಪೂರ್ಣವಾಗಿ ಓದಿಕೊಂಡು ನಿಮ್ಮ ಮಿತ್ರರಿಗೆ ತೋರಿಸಿರಿ.

ೞೞ೦ ಪುಟವುಳ್ಳ ಪುಸ್ತಕ ! ಜಗತ್ಪ್ರಸಿದ್ಧ !! ಅಂದವಾದ ಬೈಂಡು

ಪ್ರತ್ಯಕ್ಷ ಆರೂಢ ಪ್ರಶ್ನಚಂದ್ರಿಕೆ.

ದ್ವಿತೀಯ ಮುದ್ರಣ.

ಗಾರ್ನ್ಮೆಂಟಿನಲ್ಲಿ ಕಾಫೀರೈಟು ರಜಸ್ಟ್ರಾಗಿರುತ್ತೆ ಈಗ್ರಂಥವನ್ನು ಗಾರ್ನ್ಮೆಂಟಿನವರು ಲಂಡನ್ ನಗರದಲ್ಲಿರುವ ಇಂಡಿಯಾ ಲೈಬ್ರರಿ ಆಫೀಸಿಗೆ ಕಳುಹಿಸುವದೆಯೆಂದ ಕೋರಿರುತ್ತಾರೆ.

ಪ್ರಪಂಚದಲ್ಲಿ ಇಂಥಾ ಅದ್ಭುತ ಅತ್ಯಾಶ್ಚರ್ಯ ಅಪೂರ್ವಗ್ರಂಥವು ಇದುವರಿಗೂ ಅಚ್ಚಾಗಿ ಪ್ರಚಾರಕ್ಕೆ ಬರಲಿಲ್ಲ. ಮುಂದೆ ಬರುವದೂ ಇಲ್ಲಾ.

ಈಗತಾನೆ ದ್ವಿತೀಯ ಮುದ್ರಣವಾಗಿ ವಿಕರಿಗೆ ಸಿದ್ಧವಾಗಿರುತ್ತೆ. ಈ ಗ್ರಂಥವನ್ನು ತರಿಸಿಕೊಂಡು ಓದಿನೋಡಿ ಮನಸ್ಸಿಗೆ ಬಾರದಿದ್ದರೆ ವಾಪ್ಪಸ್ಸುಮಾಡಿರಿ. ದೇಶಬಾಂಧವರೇ! ನಮ್ಮ ಪ್ರಥಮ ಮುದ್ರಣದ ಪ್ರತಿಗಳೆಲ್ಲವು ಆಗಲೇ ಖರ್ಚಾಗಿಹೋದವು. ದೇಶಾಭಿಮಾನಿಗಳು ಈ ಗ್ರಂಥವನ್ನು ಕೊಂಡಾಡಿ ಬಹುಜನರು ಅನೇಕ ಆರ್ಡರುಗಳನ್ನು ಕೊಟ್ಟು ಪ್ರೋತ್ಸಾಹಪಡಿಸಿದ್ದರಿಂದ ಈಗ ನಾವು ದ್ವಿತೀಯಮುದ್ರಣ ಮಾಡಿಸಿರುವೆವು. ದರಖಾಸ್ತುದಾರರಿಗು ದರಖಾಸ್ತುಮಾಡುವವರಿಗೂ ಕಳುಹಿಸಿಕೊಡುತ್ತೇವೆ. ನಾವು ಜನೋಪಕಾರಕ್ಕಾಗಿ ಅಥರ್ವಣವೇದ ಮೊದಲಾದ ಅನೇಕ ತಾಳೇವಾಲೆಯ ಪುರಾತನ ಗ್ರಂಥಗಳನ್ನು ಕಂಚಿನ ಪತ್ರಗಳು ತಾಮ್ರದ ತಗಡುಗಳು ಇವುಗಳಲ್ಲಿರುವ ಲಿಪಿಗಳನ್ನು ಚನ್ನಾಗಿ ಪರಿಶೋಧಿಸಿ ಪ್ರತಿಯೊಂದು ವಿಷಯಕ್ಕೂ ಪ್ರಮಾಣಶ್ಲೋಕಗಳನ್ನು ಕೊಟ್ಟು ಕನ್ನಡವಚನರೂಪವಾಗಿ ಚಿಕ್ಕ ಬಾಲಕರಿಗೆ ಸಹಾ ಚನ್ನಾಗಿ ತಿಳಿಯುವಂತೆ ಪ್ರತ್ಯಕ್ಷ ಆರೂಢಪ್ರಶ್ನಚಂದ್ರಿಕೆಯನ್ನು ರಚಿಸಿಪ್ರಚಾರಪಡಿಸಿರುತ್ತೇವೆ. ಈ ಗ್ರಂಥದ ಯಂತ್ರಭಾಗದೊಳು:-ಒಂದು ಕ್ರಮ ಮಾಡಿದಕೂಡ್ಲೆ ಮನೆತುಂಬ ಹಾವು ಚೇಳು ಬೆಕ್ಕು ಮುಂಗಿಲಿಗಳು ಕಾಣಬರುತ್ತವೆ. ಪುಸ್ತಕಪಠಣಕೌತುಕವು ಅಂದರೆ ಎಷ್ಟು ಓದಿದರೂ ನಿದ್ರೆಬಾರದಿರುವಿಕೆ. ವೃಷಭ ಸಿಂಹಕೌತುಕವು. ಕನ್ನಡಿಯಲ್ಲಿ ಒಂದು ಕ್ರಮ ಮಾಡಿದಕೂಡ್ಲೆ ಭೂತಪಿಶಾಚಗಳು ಕಾಣಬರುತ್ತವೆ. ಮಧ್ಯಾಹ್ನಕಾಲದೊಳು ರಥ ಕುದುರೆ ಸಾರಥಿಸಹಿತನಾದ ಸೂರ್ಯನು ಕಾಣುವ ಕೌತುಕಕ್ರಮವು ಇದು ಪರಮಾಶ್ಚರ್ಯವು. ತಲೆಯಮೇಲೆ ಬೆಂಕಿ ಇಟ್ಟರೂ ಸುಡದಿರುವಿಕೆ. ಗಡಿಗೆಯ ತುಂಬ ನೀರುಹಾಕಿ ಹಾಲನ್ನು ಮಾಡುವಿಕೆ. ತಾನು ರಾಕ್ಷಸನಂತೆ ಕಾಣಿಸಿಕೊಂಡು ನೋಡಿದಕೂಡ್ಲೆ ಪಶುಪಕ್ಷಿಗಳೆಲ್ಲವೂ ಹೆದರಿಹೋಗುತ್ತವೆ. ತನಗೆ ಅನೇಕವಿಧವಾದ ಹುಳಗಳು ಪಕ್ಷಿ ಮೊದಲಾದ ಜೀವಜಂತುಗಳು ಸ್ವಾಧೀನವಾಗುವಂತೆ ಮಾಡುವ ಕೌತುಕವು. ಮೇಲ್ಕಂಡ ಯಾವತ್ತು ಕೌತುಕಗಳು ಮಂತ್ರಶಕ್ತಿಯಿಂದಲೂ ಗಿಡಮೂಲಿಕೆಗಳ ಶಕ್ತಿಯಿಂದಲೂ ಪ್ರತ್ಯಕ್ಷವಾಗಿ ಕಾಣಿಸುತ್ತವೆ. ಇಂದ್ರಜಾಲಮಹೇಂದ್ರಜಾಲ ವಿದ್ಯಗಳನ್ನು ವಿಶದವಾಗಿ ಬರೆದಿರುತ್ತೆ, ಮತ್ತು ಅಗ್ನಿಸ್ತಂಭನ, ವಾಯುಸ್ತಂಭನ, ಮೇಘಸ್ತಂಭನ, ಜಲಸ್ತಂಭನ, ಯಕ್ಷಿಣಿ ದೇವತೆಗಳನ್ನು ವಶಮಾಡಿಕೊಳ್ಳುವ ಮಂತ್ರಸಾಧನಕ್ರಮಗಳು ಅಂದರೆ ಧನಯಕ್ಷಿಣಿ, ಸಂತಾನಯಕ್ಷಿಣಿ ದಾರಿದ್ರನಿವಾರಿಣಿ ಯಕ್ಷಿಣಿ. ದೇವತೆಗಳ ಮಂತ್ರಸಾಧನಕ್ರಮಗಳನ್ನು ಮಾಡಿಕೊಂಡರೆ ಆಯಾ ವಿಷಯಗಳಿಗೆ ಹೇಳಿರುವ ಯಕ್ಷಿಣೀದೇವತೆಗಳು ವಶರಾಗಿ ಸರ್ವಕಾರ್ಯಗಳನ್ನು ತಾವೇ ನಿಂತು ಮಾಡಿಕೊಡುವರು. ಕರ್ಣಪಿಶಾಚಿನೀಯನ್ನು ವಲಿಸಿಕೊಳ್ಳುವ ಸಾಧನಕ್ರಮಗಳನ್ನು ಇದನ್ನು ವಲಿಸಿಕೊಂಡರೆ ಭೂತಭವಿಷ್ಯದ್ವರ್ತಮಾನ ಫಲಗಳನ್ನು ಕಿವಿಯಲ್ಲಿ ಪ್ರತ್ಯಕ್ಷವಾಗುವಂತೆ ಹೇಳಿಬಿಡುತ್ತೆ. ಗಿಡಮೂಲಿಕೆಯಿಂದ ರಜತಸುವರ್ಣವನ್ನು ಮಾಡುವ ಕ್ರಮ. ನರಿ, ನಾಯಿ, ಹುಲಿ, ಸರ್ಪ, ಮುಂತಾದ ದುಷ್ಟಪ್ರಾಣಿಗಳು ಮುಟ್ಟದೇ ಇರುವದಕ್ಕೆ ಕಟ್ಟುಮಾಡುವ ಕ್ರಮ. ಭೂತ ಮೋಡೀವಿದ್ಯ ಜೇವಿನನೊಪ್ಪನ್ನು ಹರಿದು ಚಲ್ಲಿದ ಕೂಡ್ಲೆ ಪ್ರತ್ಯಕ್ಷ ಚೇಳುಗಳು ಕಾಣುವಿಕೆ. ಗಿಡಮೂಲಿಕೆಶಕ್ತಿಯಿಂದ ಹಾವುಗಳನ್ನು ನಿಲ್ಲಿಸಿ ಕೈಯಲ್ಲಿ ಹಿಡಿಯುವ ಕ್ರಮ. ಭೂಮಿಯಲ್ಲಿರುವ ದ್ರವ್ಯ ಮುಂತಾದ ನಿಧಿ ನಿಕ್ಷೇಪಾದಿಗಳು ಕಾಣಿಸುವದಕ್ಕೆ ಅಂಜನೆಯನ್ನು ಹಾಕುವ ಕ್ರಮಗಳು. ಕೈಯಲ್ಲಿ ಬೆಂಕಿಹಿಡಿಯುವದು. ಮುಳ್ಳುಗಳಮೇಲೆ ಕೂತುಕೊಳ್ಳುವದು. ವಿಶೇಷವಾಗಿ ಭೋಜನಮಾಡುವದು. ಅಂಕೋಲೆತೈಲವನ್ನು ಮಾಡುವಕ್ರಮ, ಈ ತೈಲದಿಂದ ತಕ್ಷಣ ಹಾವು ಚೇಳು ಬೆಕ್ಕು ಮುಂತಾದವುಗಳನ್ನು ಮಾಡುವ ಕ್ರಮ. ಗಿಡಮೂಲಿಕೆಶಕ್ತಿಯಿಂದ ಕಲ್ಲು ಗುಂಡುಗಳನ್ನು ಬಡದಾಡುವಂತೆ ಪ್ರತ್ಯಕ್ಷವಾಗಿ ಕಾಣುವಹಾಗೆ ಮಾಡುವ ಕ್ರಮ. ಕಾಗದದಲ್ಲಿ ಅಕ್ಷರಗಳನ್ನು ಬರದದ್ದನ್ನು ಸುಟ್ಟು ಕೈಯ್ಯಲ್ಲಿ ತೋರಿಸುವ ಕ್ರಮ. ಕಾಗದದಲ್ಲಿ ಕರಿಗಡಬನ್ನು ಕಾಗದ ಸುಡದಂತೆ ಕರಿಯುವ ಕ್ರಮ. ಕಾದ ಹಾರಿಯನ್ನು ಕೈಯ್ಯಲ್ಲಿ ಹಿಡಿಯುವ ಕ್ರಮ. ಚಿಕ್ಕಮಕ್ಕಳಿಗೆ ೧೨ ವರುಷಗಳವರೆಗೂ ಆಯಾ ತಿಂಗಳು ವರುಷಗಳಲ್ಲಿ ಉಂಟಾಗುವ ಬಾಲಗ್ರಹ ಪೀಡೆ ಲಕ್ಷಣಗಳು ಅವುಗಳ ನಿವಾರಣೆಯಾಗುವದಕ್ಕೆ ಮಾಡುವ ಕ್ರಮಗಳು. ಧೂಪ ಬಲಿಹಾಕುವ ಕ್ರಮಗಳು. ಹಾವು ಚೇಳು ಕಡಿದರೆ ಇಳಿಯುವ ಮಂತ್ರಗಳು ಕರೇನೂಲಿನ ಮಂತ್ರ ಇದರಿಂದ ಹೊಗೆಸುಟ್ಟದ್ದು ದಾಟು ಪರಿಹಾರವಾಗುವದು. ವೀಭೂತಿಮಂತ್ರ ಮಕ್ಕಳ ದೃಷ್ಟಿಮಂತ್ರ ಇಳುವಿಗೆ ಮಂತ್ರಗಳು. ತಗುಣಿ ಹೋಗುವದಕ್ಕೆ ಮಾಡುವ ಕ್ರಮಗಳು. ಛಳಿ ಜ್ವರ ತಲೆಶೂಲೆ ಮುಂತಾದವುಗಳು ನಿವಾರಣೆಯಾಗುವದಕ್ಕೆ ಮಂತ್ರಿಸುವ ಮಂತ್ರಗಳು, ಹೊಲಗಳಿಗೆ ಮೃಗ ಪಕ್ಷಿ ಹುಳಗಳಬಾಧೆ ಉಂಟಾಗದಂತೆ ಮಾಡುವ ಕ್ರಮಗಳು ಪ್ಲೇಗು ಮಾರಿಕಾ ರೋಗಗಳು ಗ್ರಾಮಕ್ಕೆ ತಗಲದಹಾಗೆ ಕಟ್ಟುಮಾಡುವ ಕ್ರಮಗಳು. ಉನ್ಮತ್ತರುದ್ರ ಮಂತ್ರಸಾಧನದಿಂದ ಚೋರರು ಮಂಕುಬೂದಿಯನ್ನು ಹಲ್ಲಿ ಜನರನ್ನು ಮಂಕುಮಾಡಿ ಅಪಹರಿಸುವ ಪದಾರ್ಥಗಳು ಹೋಗದಂತೆ ಕಟ್ಟುಮಾಡುವ ಕ್ರಮ. ಭೂತವಿದ್ಯಾ ಅಂದರೆ ಭೂತಗಳನ್ನು ವಲಿಸಿಕೊಳ್ಳುವ ಮಂತ್ರಸಾಧನಗಳು ಇದರಿಂದ ಭೂತಗಳು ವಶವಾಗಿ ಬೇಕಾದ ಕಾರ್ಯಗಳನ್ನು ಮಾಡಿಕೊಡುತ್ತವೆ. ಭೂತಗಳು ಪ್ರತ್ಯಕ್ಷವಾಗಿ ಕಾಣಿಸುವದಕ್ಕೆ ಭೂತಾಂಜನವನ್ನು ಮಾಡುವ ಕ್ರಮ. ತೆಂಗಿನಕಾಯನ್ನು ಮುಟ್ಟಿದಕೂಡ್ಲೆ ಒಡೆಯುವದನ್ನು ಮಾಡುವ ಕ್ರಮ. ಒಂದು ಗಡಿಗಿಗೆ ಅನೇಕ ತೂತುಗಳನ್ನು ಮಾಡಿ ಅದರತುಂಬಾ ನೀರು ಹಾಕಿದರೆ ಒಂದು ಹನಿ ಸಹಾ ಸೋರದಂತೆ ಮಾಡುವ ಕ್ರಮ. ಬರೇಕಾಗದದಲ್ಲಿ ಅಕ್ಷರಗಳನ್ನು ತೋರಿಸುವ ಕ್ರಮ. ಈ ಕ್ರಮದಿಂದ ಅಂತರಂಗ ವಿಷಯಗಳನ್ನು ಬರೆಯುವದಕ್ಕೆ ತುಂಬಾ ಅನುಕೂಲವು. ಬಟ್ಟೆಯಲ್ಲಿ ಜೋಳವನ್ನು ಹಾಕಿ ಬೆಂಕಿ ಇಲ್ಲದೆ ಅರಳುಮಾಡುವಿಕೆ, ಕುಸ್ತಿ, ಟೆಗರಿನ ಕಾಳಗವನ್ನು ಗೆಲ್ಲುವುದಕ್ಕೆ ಮಾಡುವಕ್ರಮ, ಕಾಗದವನ್ನು ಸುಟ್ಟರೂ ಸುಡದೆ ಇರುವದನ್ನು ಮಾಡುವಮ್ಮ, ಕಲ್ಲುಗುಂಡಿ ಮೊದಲಾದ ಭಾರವನ್ನು ಬಹು ಸುಲಭವಾಗಿ ಎತ್ತುವ ಕ್ರಮಗಳು, ವ್ಯವಹಾರ ವಿವಾದ ವಿಜಯ ಯಂತ್ರಗಳು ರಾಜಸನ್ಮಾನ ಯಂತ್ರಗಳು ಸರ್ವಕಾರ್ಯಜಯಕ್ಕೆ ವೀರಭದ್ರದೇವರ ವುದ್ಧರಣೆಯು, ಛಳಿ ಜ್ವರ ಸ್ವಪ್ನ ಸಂಣಮಕ್ಕಳ ಜ್ವರ ನಿವಾರಣೆಯಂತ್ರಗಳು, ಮಕ್ಕಳ ದೃಷ್ಟಿದೋಷ ನಿವಾರಣೆಯಂತ್ರಗಳು, ಪತಿಯಲ್ಲಿ ಇಷ್ಟತೆ ಇಲ್ಲದ ಸ್ತ್ರೀಯಳಿಗೂ ಸ್ತ್ರೀಯಲ್ಲಿ ಇಷ್ಟತೆ ಇಲ್ಲದ ಪತಿಗೂ ಪರಸ್ಪರ ಪ್ರೀತಿವುಂಟಾಗುವದಕ್ಕೆ ಕಟ್ಟುವ ಯಂತ್ರಗಳು, ಗರ್ಭರಕ್ಷಾಕರ ಯಂತ್ರಗಳು ಅಂದರೆ ಗರ್ಭಿಣಿಸ್ತ್ರೀಯಳಿಗೆ ಪ್ರಸವಪೀಡೆ ವುಂಟಾಗುವದಿಲ್ಲ ಸುಖವಾಗಿ ಜನನವಾಗುವದಕ್ಕೂ ಮಕ್ಕಳಫಲ ವುಂಟಾಗುವದಕ್ಕೂ ಕಟ್ಟುವ ಯಂತ್ರಗಳು, ದೆವ್ವಗಳನ್ನು ಬಿಡಿಸುವಯಂತ್ರಗಳು, ಅಳುವ ಮಕ್ಕಳಿಗು ಮೊಲೆ ತಿನ್ನದೆ ಇರುವ ಮಕ್ಕಳಿಗೂ ಕಟ್ಟುವ ಯಂತ್ರಗಳು ಪಶುಗಳ ದೃಷ್ಟಿನಿವಾರಣೆ ಯಂತ್ರ ಪಶುಗಳು ತಪ್ಪಿಸಿಕೊಂಡು ಹೋದರೆ ಅವು ಶಿಕ್ಕುವದಕ್ಕೆ ಮಾಡುವ ಯಂತ್ರ ಹೊಲಗಳಿಗೆ ಹುಳಹತ್ತಿದರೆ ಕಟ್ಟುವ ಯಂತ್ರ ಪಶುಗಳ ವುಣಿನಿವಾರಣೆ ಯಂತ್ರ ಗಾಳಿ ಗ್ರಹಸೋಂಕು ದೆವ್ವಗಳನ್ನು ಬಿಡಿಸುವ ಯಂತ್ರ ಇನ್ನೂ ಅನೇಕವಿಧವಾದ ಯಂತ್ರಗಳನ್ನು ಬೀಜಾಕ್ಷರಗಳನ್ನು ತುಂಬ ವಿಶದವಾಗಿ ಬರೆದಿರುತ್ತೆ.

ಪ್ರಶ್ನ ಭಾಗದೊಳಗೆ:-ಉದ್ಯೋಗ ವ್ಯವಹಾರ ರಾಜಪ್ರಶ್ನ, ರೋಗ ಮರಣಪ್ರಶ್ನ, ವಿವಾಹ ಪ್ರಶ್ನ, ಸ್ತ್ರೀಪುತ್ರಪ್ರಶ್ನ, ವಿದ್ಯಾ, ಧನ, ಭೂಮಿ, ಜಲಪ್ರಶ್ನ, ಲಾಭಾಲಾಭಪ್ರಶ್ನ, ನಷ್ಟಪ್ರಶ್ನ, ಚೋರಪ್ರಶ್ನ, ಶತ್ರುಪ್ರಶ್ನ, ಮುಷ್ಟಿಪ್ರಶ್ನ, ದೂತಲಕ್ಷಣದಿಂದ ಹೇಳುವಪ್ರಶ್ನ, ಅಂಗಚೇಷ್ಟೆಪ್ರಶ್ನ, ಪ್ರಯಾಣಪ್ರಶ್ನ, ಲಕ್ಷ್ಮೋಟಿಪ್ರಶ್ನ, ನವರತ್ನ ಪ್ರಶ್ನ, ಜನನಪ್ರಶ್ನ, ಚೋರಪ್ರಶ್ನ, ಚೋರನಜಾತಿಯನ್ನು, ಹೋದ ವಸ್ತುವು [illegible] ಯಾವದಿಕ್ಕಿನಲ್ಲಿ ಯಾವಜಾಗದಲ್ಲಿರುವದು, ಎಷ್ಟು ದಿವಸಗಳಲ್ಲಿ ದೊರೆಯುತ್ತೆ, ಅಥವಾ ಇಲ್ಲವೆ ಕೈಯಲ್ಲಿ ಹಿಡಿದಿರುವದನ್ನು ಹೇಳುವಪ್ರಶ್ನ, [illegible] ಭೋಜನಮಾಡಿದನು [illegible] ಹೇಳುವಪ್ರಶ್ನೆ, ಮನೆಯೊಳದೇಶದ ಕವಡಿಪ್ರಶ್ನೆ, ಮನೋಗತಪ್ರಶ್ನೆ ಅದು ಎಷ್ಟು ದಿವಸದಲ್ಲಿ ಆಗುತ್ತೆ ಅದನ್ನು ಹೇಳುವಪ್ರಶ್ನೆ, ಸ್ವಪ್ನಪ್ರಶ್ನ, ಪ್ರಯೋಗ [illegible]

ನೋಡುವ ಶುಭಾಶುಭ ಶಕುನಗಳ ವಿವರವು, ಪ್ರಯಾಣಹೊರಡುವ ವೇಳೆಯಿಂದ ತನಗೆ ಮುಂದೆ ಇಂಥಾಶಕುನಗಳೇ ಆಗುತ್ತದೆಂಬುದನ್ನು ತಿಳಿಯುವ ಕ್ರಮ, ಪ್ರಯಾಣಕ್ಕೆ ಮುಖ್ಯವಾಗಿ ನೋಡತಕ್ಕ ಆನಂದಾದಿಯೋಗವುಳ್ಳ ರಾಜಮುಹೂರ್ತ ಚಕ್ರವು, ಪ್ರಯಾಣ, ವುದ್ಯೋಗ, ವ್ಯವಹಾರ, ಮುಂತಾದ ಎಲ್ಲಾ ನೂತನಕಾರ್ಯಗಳಿಗೂ ನೋಡತಕ್ಕ ಅಮೃತ ಚಕ್ರಗಳುಳ್ಳ ಶಿವಲಿಖಿತ ಚಕ್ರಗಳು ಪ್ರಯಾಣಕ್ಕೆ ನೋಡುವ ತಿಥಿ ವಾರ ನಕ್ಷತ್ರ ಘೋದದಿಕ್ಕುಗಳ ಫಲ, ಗೃಹದಲ್ಲಿ ಜೇನು ಇಟ್ಟ ಫಲ, ಅಂತಪ್ರಶ್ನೆ, ತಂಡುಲಪ್ರಶ್ನೆ, ಶಿವ ಚಿಂತಾಮಣಿಪ್ರಶ್ನೆ, ಹಲ್ಲಿಶಕುನಶಾಸ್ತ್ರವು, ಸಂಖ್ಯಾಪ್ರಶ್ನೆ ಗಂಡಹೆಂಡರಪೈಕಿ ಯಾರು ಮುಂಚಿತವಾಗಿ ಮರಣ ಹೊಂದುವದನ್ನು ತಿಳಿಯುವ ಕ್ರಮ, ಕುಸ್ತಿ ಜೂಜು ನಾಟಕ ಬೈಲಾಟ ಮುಂತಾದ ಆಟಗಳನ್ನು ಸೋಲು ಗೆಲು ಆಗುವದನ್ನು ತಿಳಿಯುವ ಪ್ರಶ್ನೆ, ಹಾಲಿ ನಿನಗೆ ಎಷ್ಟುಮಂದಿ ಹೆಣ್ಣುಮಕ್ಕಳು ಎಷ್ಟುಮಂದಿ ಗಂಡುಮಕ್ಕಳು ಇರುತ್ತಾರೆಂದು ಹೇಳುವಪ್ರಶ್ನೆ, ನೂತನಗೃಹನಿರ್ಮಾಣಪ್ರಶ್ನೆ, ಗೃಹವಾಸಪ್ರಶ್ನೆ, ೭೪ ಸಂಖ್ಯಾಪ್ರಶ್ನೆ, ಈ ದಿವಸ ಮಳೆಬರುತ್ತೋ ಇಲ್ಲವೋ ಎಂಬುದನ್ನು ಹೇಳುವಪ್ರಶ್ನೆ, ವೈದ್ಯನಿಂದ ರೋಗ ಗುಣವಾಗುತ್ತದೊ ಇಲ್ಲವೊ ಅದನ್ನು ಹೇಳುವಪ್ರಶ್ನೆ, ಯಿಂಥಾನಕ್ಷತ್ರ ಯಿಂಥಾವಾರ ಯಿಂಥಾ ತಿಥಿದಿವಸ ಜ್ವರ ಬಂದರೆ ಎಷ್ಟು ದಿವಸಗಳಲ್ಲಿ ನಿಲ್ಲುತ್ತವೆಂಬುದನ್ನು ಹೇಳುವಪ್ರಶ್ನೆ, ಪುತ್ರಾರಿಷ್ಟಪ್ರಶ್ನೆ, ಸಂಭೋಗಪ್ರಶ್ನೆ, ಫಲಾನಿ ಭೂಮಿಯಲ್ಲಿ ನಿಧಿ ನಿಕ್ಷೇಪ ಇರುತ್ತದೋ ಇಲ್ಲವೋ ಇದನ್ನು ಹೇಳುವಪ್ರಶ್ನೆ, ಇಷ್ಟೇವರುಷ ಆಯುಸ್ಸೆಂದು ಹೇಳುವಪ್ರಶ್ನೆ, ಲಗ್ನಾದಿ ೧೨ ಭಾವಗಳಿಂದ ಹೇಳುವಪ್ರಶ್ನೆ, ಕಾರ್ಯಸಿದ್ಧಿ ನಿರ್ಣಯಪ್ರಶ್ನೆ, ಕಾಲವಿಳಂಬ ಕಾರ್ಯಸಿದ್ಧಿಪ್ರಶ್ನೆ, ಇದಿನದಿಂದ ೧೫ ದಿನಗಳವರಿಗೇ ಆಗುವ ಕಾರ್ಯಸಿದ್ಧಿಪ್ರಶ್ನೆ, ಧಾತು ಮೂಲ ಜೀವ ಚಿಂತಾಪ್ರಶ್ನೆ, ಮೇಷಾದಿ ೧೨ ರಾಶಿಗಳಲ್ಲಿ ಪ್ರಶ್ನೆ ಮಾಡಿದ ಫಲ ಇನ್ನು ಅನೇಕ ವಿಧವಾದ ಅನುಭವಕ್ಕೆ ಬರುವ ನವೀನಪ್ರಶ್ನೆಗಳನ್ನು ತಾವೇ ಸ್ವತಃ ನೋಡಿಕೊಳ್ಳುವಂತೆ ವಿಶದವಾಗಿ ಬರೆದಿರುತ್ತೆ ಮತ್ತು ಸ್ತ್ರೀಪುರುಷರ ಹಸ್ತಸಾಮುದ್ರಿಕ ಅಂಗಸಾಮುದ್ರಿಕ ಮುಂತಾದ ಸಾಮುದ್ರಿಕ ಶಾಸ್ತ್ರವನ್ನು ಪುರಾತನ ಗ್ರಂಥಾಧಾರದಿಂದ ಶೋಧಿಸಿ ಹಾಕಿರುತ್ತೆ ಈ ಸಾಮುದ್ರಿಕ ಶಾಸ್ತ್ರದಲ್ಲಿ ಹಸ್ತದಲ್ಲಿರುವ ರೇಖೆಗಳಿಂದ ಯಿಷ್ಟೆವರುಷ ಆಯುಸ್ಸು, ಮಧ್ಯದಲ್ಲಿಬರುವ ಕಂಟಕಗಳವಿಷಯ, ಯಿಷ್ಟೇಜನ ಹೆಂಡತಿಯರು, ಯಿಷ್ಟೇ ಜನಮಕ್ಕಳು, ಇಷ್ಟೇಜನ ಅಣ್ಣತಮ್ಮಂದಿರು, ಯೋಗಫಲಗಳು ಮುಂದೆ ವುಂಟಾಗುವ ಅನೇಕ ಫಲಗಳನ್ನು ಚಿಕ್ಕವರು ತಮ್ಮ ಹಸ್ತದ ರೇಖೆಗಳನ್ನು ನೋಡಿ ಹೇಳಲಿಕ್ಕೆ ಬರುವಂತೆ ವಿಶದವಾಗಿ ಬರದಿರುತ್ತೆ. ಸ್ತ್ರೀಯರ ಅಂಗಸಾಮುದ್ರಿಕೆಯನ್ನು ಬಹುಚನ್ನಾಗಿ ಬರೆದುಇರುತ್ತೆ. ಪ್ರಥಮ ಕನ್ಯೆಯನ್ನು ನೋಡತಕ್ಕವರಿಗೆ ಇದು ತುಂಬಾ ಅನುಕೂಲವು. ಮತ್ತು ಜಲಸಿದ್ಧಿಶಾಸ್ತ್ರವನ್ನು ಬಹಳ ವಿವರವಾಗಿ ಅಂದರೆ ಇಂಥಾ ಭೂಮಿಯಲ್ಲಿ ಇಷ್ಟು ಪುರುಷಪ್ರಮಾಣದೊಳು ಇಂಥಾದಿಕ್ಕಿನಿಂದಲೇ ಇಂಥಾಜಲವೇ ಬೀಳುತ್ತದೆಂಬುವ ವಿಷಯವನ್ನು ಬರೆದು ಇರುತ್ತೆ. ಬಾವಿ ತೆಗೆಯುವ ಸಮಯದಲ್ಲಿ ಕೆಳಗೆ ಕಲ್ಲುಇದ್ದರೆ ಅದನ್ನು ಸುಲಭವಾಗಿ ಒಡೆಯುವ ಕ್ರಮಗಳನ್ನು ಚನ್ನಾಗಿ ಬರೆದು ಇರುತ್ತೆ.

ವೈದ್ಯಭಾಗದೊಳು—ಸಮಸ್ತವಿಧವಾದ ಗಿಡಮೂಲಿಕೆಗಳನ್ನು ತರುವ ಕ್ರಮಗಳು. ಎಲ್ಲಾವಿಧವಾದ ಜ್ವರ ಹುಟ್ಟುವದಕ್ಕೆ ಕಾರಣಗಳು. ಸಮಸ್ತ ರೋಗಗಳಿಗೆ ಔಷಧಮಾಡುವ ಕ್ರಮಗಳು. ತಮ್ಮ ಮನೆ ಹಿತ್ತಲಲ್ಲಿಯೂ ಹೊಲಗಳಲ್ಲಿಯೂ ಸುಲಭವಾಗಿ ದೊರೆಯುವ ಗಿಡಮೂಲಿಕೆಗಳನ್ನು ತಂದು ಮನೆಯಲ್ಲಿ ಚಿಕ್ಕ ಬಾಲಕರಿಗೂ ಸ್ತ್ರೀಪುರುಷರಿಗು ಉಂಟಾಗುವ ರೋಗಗಳು ಅಂದರೆ—ನೇತ್ರರೋಗ ನೆಗಡಿ ಕೆಮ್ಮು ತಲೆನೋವು ಛಳಿಜ್ವರ ವ್ರಣ ಅಜೀರ್ಣ ನೋಪಜ್ವರ ಇದ್ದಲಸಿ ಹೊಟ್ಟೆಶೂಲೆಗಳು. ಎಲ್ಲಾ ವಿಧವಾದ ವಾಯುಶೂಲೆಗಳು ಕೈಕಾಲು ಸೊಂಟ ಬೆನ್ನುಶೂಲೆ ವಾತಪಿತ್ತ ಶ್ಲೇಷ್ಮಜ್ವರಗಳು ಇನ್ನೂ ಅನೇಕ ವಿಧವಾದ ಕುಟುಂಬದಲ್ಲಿ ಉಂಟಾಗುವ ರೋಗಗಳಿಗೆಲ್ಲ ವೈದ್ಯರನ್ನು ಕಾಯದಂತೆ ತಾವೇ ಸ್ವತಃ ಸುಲಭ ಇಲ್ಲದೆ ಔಷಧಗಳನ್ನು ಮಾಡುವ ಕ್ರಮಗಳನ್ನು ಪಥ್ಯ ಪಗ್ಗೆರೆ ಅನುಪಾನಾದಿಗಳ ಕ್ರಮಗಳನ್ನು ವಿಶಧವಾಗಿ ಬರೆದಿರುತ್ತೆ: ಬುಲಾಬು ವಾಂತಿಕಾರೋಗಕ್ಕೆ ಸುಲಭವಾಗಿ ಔಷಧಮಾಡುವ ಕ್ರಮ. ವಿಷಮಜ್ವರ ಅಜೀರ್ಣ ವಾಯು ಕಫರೋಗ ಆಮಶಂಖ ಶೀತೋಷ್ಣಭೇದಿ ಮಲಮೂತ್ರಕಟ್ಟು, ಇವೇ ಮುಂತಾದ ರೋಗಗಳಿಗೆ ಔಷಧಗಳನ್ನು ಮಾಡುವ ಕ್ರಮ. ಮಕ್ಕಳಿಗಾಗುವ ಬಾಲಗ್ರಹ ಕಂದಿಮುಳ್ಳು ಕಾಮಾಲೆ ಮೂವಳ್ಳಿಬ್ಯಾನೆ ಶಟರೋಗ ಸಂದುರೋಗ ಗಂಟಲಚಟಿಗೆ ಅರಸಿ ದೃಷ್ಟಿದೋಷ ಮೊಲೆ ಕಿನ್ನದೆಯಿರುವದು ಮುಟ್ಟುನಿಲುವದು, ಇವೇ ಮೊದಲಾದ ಚಿಕ್ಕಮಕ್ಕಳ ಯಾವತ್ತು ರೋಗಗಳಿಗೆ ಔಷಧಮಾಡುವ ಕ್ರಮ. ಹಾವು ಚೇಳಿನ ಔಷಧ ಕ್ರಮ. ಊಟದಲ್ಲಿ ಮದ್ದು ಇಟ್ಟರೆ ಪರಿಹಾರವಾಗುವದಕ್ಕೂ ಉಸುರುಕಟ್ಟು ಸ್ತ್ರೀಯರ ಹೊಟ್ಟೆಕುಟ್ಟು ಗಂಡಮಾಲೆ ಜಲ್ಲಿ ಕುಣ್ಣು ಆರಸುಹುಣ್ಣು ಕೀಲುಸಂಕವಾಲೆ ವಶುಗಳಿಗೆ ಆಗುವ ಪಿತ್ತರೋಗ ಗುಂಡಿಗೆಶಲಿ ಕುಂದುರೋಗ ಕರ್ಣಮೂಲ ಹಲಿಗೆಬ್ಯಾನೆ ಮುಳುವುಬ್ಯಾನೆ ಕಾಲುಜ್ವರ ಬಾಯಿಬ್ಯಾನೆ ಪಶುಗಳಿಗೆ ಹುಳ ಮುಟ್ಟಿದ್ದಕ್ಕೂ, ಇವೇ ಮೊದಲಾದ ಪಶುಗಳ ಸಮಸ್ತ ರೋಗಗಳಿಗು ಖಾತ್ರಿಯಾದ ಔಷಧಗಳನ್ನು ಮಾಡುವ ಕ್ರಮಗಳು. ಗುಲ್ಮರೋಗ ಮೇಹಸಂಬಂಧವಾದ ಸಮಸ್ತ ರೋಗಗಳಿಗೂ ಔಷಧಮಾಡುವ ಕ್ರಮ. ಮೇಹವ್ರಣಚಿಕಿತ್ಸೆ ಮೇಹಕಾರಕ ಶಲ್ದಿಗೆ ಚಿಕಿತ್ಸೆಕ್ರಮ ಧಾತುವೃದ್ಧಿಗೆ ಚಿಕಿತ್ಸೆಗಳು. ಕೂಷ್ಮಾಂಡಲೇಹವನ್ನು ಮಾಡುವ ಕ್ರಮ. ಮದನಕಾಮೇಶ್ವರಿ ಚೂರ್ಣ ಮದನಾನಂದಚೂರ್ಣ ಕಾಮವರ್ಧನಚೂರ್ಣ ಇತ್ಯಾದಿ ಚೂರ್ಣಗಳನ್ನು ಮಾಡುವ ಕ್ರಮಗಳು. ಧಾತುಸ್ತಂಭನ ಗುಳಿಗೆಗಳನ್ನು ಮಾಡುವ ಕ್ರಮ. ಷಂಡತ್ವಂಹನಿತೈಲವನ್ನು ಮಾಡುವ ಕ್ರಮ. ಬಾದಾಮಿಹಲ್ವಾ ಶೊಂಠಿರಸಾಯನ ಚ್ಯವನಪ್ರಾಶಾದಿರಸಾಯನ ಶೊಂಠಿಮೊರಬ್ಬಾ ಹಸಿಶೊಂಠಿಮುರಬ್ಬಾ ನುಗ್ಗೆಹುವ್ವಿನ ರಸಾಯನ, ಇತ್ಯಾದಿ ರಸಾಯನಗಳನ್ನು ಮಾಡುವ ಕ್ರಮಗಳು. ಮುತ್ತು ವಜ್ರ ಮೊದಲಾದ ನವರತ್ನಗಳನ್ನು ಪರೀಕ್ಷೆಮಾಡುವ ಕ್ರಮ. ವಜ್ರೋತ್ಪತ್ತಿಕ್ರಮ ವಜ್ರದ ಗುಣ ವಜ್ರದ ಪರೀಕ್ಷೆ ಮಾಡುವ ಕ್ರಮ. ಮುತ್ತುಗಳ ಉತ್ಪತ್ತಿಕ್ರಮ. ದಾಳಿಂಬೆಹಣ್ಣಿನ ಪರಬತ್ತು, ನಿಂಬೆಹಣ್ಣಿನ ಷರಬತ್ತು, ಗುಲಾಬಿಹುವ್ವಿನ ಷರಬತ್ತು, ಮೇಹಶಮನ ಷರಬತ್ತು, ಇತ್ಯಾದಿ ಷರಬತ್ತುಗಳನ್ನು ಮಾಡುವ ಕ್ರಮಗಳನ್ನು ವಿಶಧವಾಗಿ ಬರೆದಿರುತ್ತೇವೆ. ಇನ್ನೂ ಅನೇಕವಿಧವಾದ ಅಪೂರ್ವವಿಷಯಗಳನ್ನು ಇತರರ ಸಹಾಯವಿಲ್ಲದೆ ತಾವೇ ಸ್ವತಃ ಮೇಲ್ಕಂಡ ಯಾವತ್ತು ವಿಷಯಗಳನ್ನು ಬಹು ಸುಲಭವಾಗಿ ಮಾಡಿಕೊಳ್ಳುವ ವಿಧಾನವನ್ನು ವಿಸ್ತಾರವಾಗಿ ಬರೆದಿರುತ್ತೆ. ಪ್ರತಿಯೊಂದು ವಿಷಯಕ್ಕೂ ಪ್ರಮಾಣ ಶ್ಲೋಕಗಳನ್ನು ಬರೆದಿರುತ್ತೆ. ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕೆ ಎಷ್ಟು ಖರ್ಚು ಮಾಡಿದರೂ ಸಿಕ್ಕಲಾರವು. ಇದು ಒಂದು ಗ್ರಂಥವು ಹತ್ತರವಿದ್ದರೆ ಒಬ್ಬ ಸಿದ್ಧಾಂತಿ, ಒಬ್ಬ ವೈದ್ಯನು, ಒಬ್ಬ ಮಾಂತ್ರಿಕನು ಇದ್ದಂತೆ ಆಗುತ್ತೆ. ಈಗ್ರಂಥವು ಪ್ರತಿಯೊಂದು ಕುಟುಂಬದಲ್ಲಿ ಅವಶ್ಯಕವಾಗಿರಲೆಂದು ಕ್ರಯವನ್ನು ಬಹಳ ಕಡಿಮೆಮಾಡಿಟ್ಟಿರುತ್ತೇವೆ. ಈ ಗ್ರಂಥವನ್ನು ನೋಡಿದಮೇಲೆ ನಾವು ಪಟ್ಟಿರುವ ಶ್ರಮವು ತಮಗೆ ಗೋಚರವಾಗದೇ ಇರಲಾರದು. ಈ ಗ್ರಂಥವನ್ನು ಯಾವಾಗ್ಯೂ ಹತ್ತಿರವೇ ಇಟ್ಟುಕೊಳ್ಳದೆ ಇರಲಾರರು. ಹಾಗಿಲ್ಲದಿದ್ದರೆ ವ್ಯಾಪ್ತಮಾಡಬಹುದು. ದ್ವಿತೀಯಮುದ್ರಣದ ಗ್ರಂಥಗಳಿಲ್ಲವೂ ಪೂರೈಸುವಂತೆ ಆರ್ಡರುಗಳು ಬರುತ್ತಲಿವೆ. ಆಲಸ್ಯಮಾಡಿದರೆ ಪುಂಡಿಕ ದೊರೆಯಲಾರವು. ಆದಕಾರಣ ಗ್ರಂಥಾಪೇಕ್ಷೆ ವುಳ್ಳವರು ಬೇಗನೆ ತರಿಸಿಕೊಳ್ಳಿರಿ.

ಕ್ರಯ ಪ್ರತಿ ೧ಕ್ಕೆ ರೂ. ೧

ಈ ಗ್ರಂಥವ ದೆಸೆಯಿಂದ ಬಹುಜನರು ಅನೇಕ್ಷೆಪಟ್ಟು ಶಿಫಾರ್ಸುಪತ್ರಗಳನ್ನು ಬರೆಯುತ್ತಲಿರುವರು. ಮೈಸೂರು ಗೌರ್ನಮೆಂಟಿನವರು ಈ ಗ್ರಂಥವನ್ನು ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸು ಲೈಬ್ರರಿಗೆ ಕಳುಹಿಸುವದಕೆಯಿಂದ ಈ ಕೆಳಗೆ ಬರೆದಿರುವಪ್ರಕಾರ ಇಂಗ್ಲೀಷಿನಲ್ಲಿ ಬರೆದಿರುತ್ತಾರೆ.

From C. H. Yates Esq. Registrar of Authorized,

No. 42. Date 24-12-15. *Publications in Mysore, Bangalore.*

Sir please supply to this office by V. P. Post the marginally noted book (ಪ್ರತ್ಯಕ್ಷ ಆರೂಢಪ್ರಶ್ನೆ ಚಂದ್ರಿಕಾ)

for forwardal to the India office Library. London.

ಕೃಪ ಇರುತ್ತೆ.

ಈ ಗ್ರಂಥವು 1914ನೇ ಇಸವಿಯಲ್ಲಿ ಕಾಪಿರೈಟು ರಿಜಿಸ್ಟರಾಗಿರುತ್ತೆ. ಈ ಗ್ರಂಥವನ್ನು ಇತರರ್‍ಯಾರೇ ಸಂಪೂರ್ಣವಾಗಲಿ ಅಥವಾ ಇದರೊಳು ಒಂದು ಭಾಗವನ್ನಾಗಲಿ ಪ್ರಕಟನೆ ಮಾಡುವದನ್ನಾಗಲಿ ಮತ್ತೊಂದು ಭಾಷೆಯಲ್ಲಿ ತರ್ಜುಮೆ ಮಾಡುವದನ್ನಾಗಲಿ ನಮ್ಮ ಅಪ್ಪಣೆ ಇಲ್ಲದೆ ಪ್ರಿಂಟುಮಾಡುವುದಕ್ಕೆ ಹಕ್ಕುದಾರರು ವೆಂದು ಇದರಮೂಲಕ ತಿಳಿಯಪಡಿಸಿದೆ. ಕಾರಣ ಈ ಗ್ರಂಥವನ್ನು ಯಾರೂ ಪ್ರಿಂಟುಮಾಡಿಸಬಾರದು. ಇದರಲ್ಲಿರುವ ಒಂದು ವಿಷಯವನ್ನಾದರೂ ತೆಗೆದುಕೊಂಡು ಇತರ ರೂಪವಿಧದಿಂದಲಾದರೂ ಪ್ರಕಟನೆಗೊಳಿಸಬಾರದು. ಈ ಗ್ರಂಥವನ್ನು [illegible] ನಮ್ಮ [illegible] ಗೆ ಪಾತ್ರರಾಗುತ್ತಾರೆ. ಅಲ್ಲದೆ ಗ್ರಂಥಕರ್ತರಾದ ಟಿ. ಜೆ. ಎಂ. ಸಿದ್ಧಾಂತಿ ವೆಂಕಟಾಚಲಶಾಸ್ತ್ರಿಗಳವರ ದಸ್ಕತ್ತು ಇಲ್ಲದೆ, ಈ ಗ್ರಂಥವನ್ನು ಅಥವಾ ಈ ಹೆಸರಿನ ಗ್ರಂಥವನ್ನು ಯಾರು ಇಟ್ಟುಕೊಂಡಾಗ್ಯೂ ಅದು ಕಳವು ಮಾಲೆಂದು ಭಾವಿಸಲ್ಪಡುತ್ತೆ. ಕಾರಣ ಈ ಆರೂಢಪ್ರಶ್ನಚಂದ್ರಿಕೆ ಗ್ರಂಥದ ಎಲ್ಲಾ ಪ್ರತಿಗಳಲ್ಲಿಯೂ ಸಹ ಶಾಸ್ತ್ರಿಗಳವರ ಖುದ್ದು ದಸ್ಕತ್ತು ಇರುತ್ತದೆ. [illegible] ಈ ಕೆಳಗೆ ಬರೆದಿರುವ ಅಡ್ರೆಸ್ಸುಪ್ರಕಾರ ಬರೆದು ತರಿಸಿಕೊಳ್ಳಬೇಕು.

ವಿಳಾಸ:— ಮೇನೇಜರ್ ಭವಿಷ್ಯ[illegible]ಲಯ.

Peoples Park Fair Reward.

ಸುಂದರವಾದ] 1916 [ಕಾಲೆಂಡರು.



ಕರ್ನಾಟಕ ದೇಶಾಭಿಮಾನಿಗಳಿಗೆ ತಿಳಿಸುವದೇನೆಂದರೆ—ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಮಾಡಬೇಕೆಂದು ಈ ಜನವರಿ ಮಹೋತ್ಸವದ 1916 ಕಾಲೆಂಡರ್ ಬಹು ಸೊಗಸಾಗಿ ಡೆಮ್ಮಿಗ್ಲೇಜು ಕಾಗದದಲ್ಲಿ ಮುದ್ರಿಸಿ ಕನ್ನಡ ಅಭಿಮಾನಿಗಳಿಗೆ ಸಂತೋಷಮಾಡಬೇಕೆಂದು ಪ್ರಕಟಿಸಿ ಇರುತ್ತೇವೆ. ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ 1 ಕಾಲೆಂಡರು, 64 ಪೇಜುಗಳುಳ್ಳ ದೊಡ್ಡ ಕನ್ನಡ ಕ್ಯಾಟಲಾಗು ಇನಾಮಾಗಿ ಕಳುಹಿಸುವೆವು. ತ್ವರೆಮಾಡಿರಿ.

ವಿಳಾಸ:— ರತ್ನಂ ಕಂಪೆನಿ,
ಸಾಹುಕಾರ ಪೇಟೆ,
3, ಇರುಳಪ್ಪನ ಬೀದಿ,
ಮದ್ರಾಸು.

ದರ್ಬಾರ್ ಸೋಪ್.

ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ.

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿರುವಂತೆ ಗುಣಕಾರಿಯಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು. ಮೂರು ಸಾಬೂಪುಗಳುಳ್ಳ ಪೆಟ್ಟಿಗೆ 0—14—0. ಒಂದೇ ಬಾರಿಗೆ ಎರಡು ಪೆಟ್ಟಿಗೆ ತರಿಸಿಕೊಂಡರೆ 1—10—0. ಟಪ್ಪಾಲು ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಷನ್ ಕೊಡಲಾಗುವುದು. ಬೇಗನೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3, ಇರುಳಪ್ಪನ ಬೀದಿ,
ಮದ್ರಾಸು.

USEFUL IN PEACE AND WAR] [BY RAU SAHIB DR. U. RAMA RAU

FIRST AID IN ACCIDENTS.

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ. ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡಿಸಬೇಕಾದ

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗಾಚಾರ್ಯರಿಂದ ಸುಲಭವಾಗಿ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದು.

Dedicated To H. H. The Maharaja of Mysore.

ಅಪಾಯಕ್ಕೆ ಗುರಿಯಾದ ಮನುಷ್ಯನ ಅವಸ್ಥೆಯು, ಮೊದಲು ಅವನ ಮೇಲೆ ಕೈಗೆ ಸಿಕ್ಕಿ ಬೀಳುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಸ್ಥಳದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪು ಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತಮ್ಮ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

"ಅಲ್ಪಜ್ಞಾನವು ಅಪಾಯಹೇತು" ಎಂಬ ನಾಣ್ಣುಡಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅಲ್ಪಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ತೀವ್ರವಾದ ವೇದನೆಯನ್ನೂ ನೀಗಿಸಬಹುದು! ಎಷ್ಟೋ ಪ್ರಾಣಗಳನ್ನುಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸಾಕ್ರಮದಲ್ಲಿ ಅತ್ಯಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಿಗಳು ಬದುಕಿಕೊಂಡಿರುವುವು.

ಸಾಮಾನ್ಯವಾಗಿ ಬೇರೊಬ್ಬರಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ನಮ್ಮೆಲ್ಲರಿಗೂ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ ಅನೇಕರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು. ತಾವು ಕೈಯಿಡುವುದರಿಂದ ಮೊದಲಿದ್ದುದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ತಟಸ್ಥರಾಗುವರು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈತೂಗಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡ ಅಗ್ನಿಗಂಡ, ಏರಗಳು ಕಡಿಯುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಉಡುಪು, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸುವುದು ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು. ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆಮಾಡಿರುವೆವು. ಪುಸ್ತಕದ ಬೆಲೆ 0—8—0, ಟಪ್ಪಾಲು ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್,
323, ತಂಬುಚೆಟ್ಟಿ ಬೀದಿ, ಮದರಾಸು. ಪೋಸ್ಟ್ ಬಾಕ್ಸ್ 166

ಗೃಹಸ್ಥಾಶ್ರಮವು ಸುಖದಾಯಕವಾಗಿ ಪರಿಣಮಿಸಬೇಕೆಂದು ನಿಮಗೆ ನಿಶ್ಚಯವಾಗಿಯೂ ಮನಸ್ಸಿದೆಯೋ?

ಮದನಮಂಜರಿ ಮಾತ್ರೆ

ಗಳನ್ನು ಪ್ರಯೋಗಿಸಿರಿ. ಇವು ಗೃಹಸ್ಥಾಶ್ರಮವು ಸಂತೋಷ ಮತ್ತು ಸುಖದಾಯಕವಾಗಿ ನಡೆಯುವಂತೆ ಮಾಡುವವು. ಇವು ಯಾವ ಕಾರಣದಿಂದಲಾದರೂ ಉಂಟಾದ ದುರ್ಬಲತ್ವವನ್ನು ಹೋಗಲಾಡಿಸುವವು. ಇದು ಮದನನನ್ನು ಯುವಕನಾಗಿಸುವವು.

ಕ್ರಯ: 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ್ (ಕಾಠ್ಯಾವರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

ಸಂತೋಷದಾಯಕವಾದ ಗೃಹಸ್ಥಾಶ್ರಮವನ್ನು ಪಡೆಯುವಂತೆ ಮಾಡುವ ನಿಜವಾದ ಸಾಧನವು.

"ಪರ್ಪೆಚುವಲ್ ಯೂತ್"

ಎಂಬ ನಮ್ಮ ಪುಸ್ತಕವನ್ನು ಪಠಿಸುವದೇ ಆಗಿದೆ.

ಯೌವನವು ಆಚಂದ್ರಾರ್ಕವಾಗಿ ಉಳಿಯುವಂತೆ ಮತ್ತು ಆದು ಥಕ್ಕನೇ ಅಳಿದುಹೋಗದಂತೆ ಮಾಡುವ ಉಪಾಯವು ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನಮ್ಮ ವಿಳಾಸ ಬರೆದು ಕಳುಹಿಸಿದ್ದಲ್ಲಿ ಧರ್ಮಾರ್ಥವಾಗಿ ಈ ಪುಸ್ತಕವು ಕಳುಹಿಸಲ್ಪಡುವದು.

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR).
Branch:—20 CHINA BAZAAR ROAD, MADRAS.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಪೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿತಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗಂಟಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೮೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಜಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, ನಂಬ್ರ ಡಿ. ಫ್ರೆಯರ್ ರೋಡ್, ಮುಂಬಯಿ.

R. D. Kately & Co
No. D. Frere Road,
Near Wright & Co Fort Bombay.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9 ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.

ಆಯ್ಯಾ, ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ. ಈ ಗಡಿಯಾರ ಕಂಪೆನ್ ಸೇಪನ್ ಬಲಿಷ್ಟವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು, ಬ್ಯಾಂಕಿನಲ್ಲಿರುವ ದೊರೆಗಳು, ಕೊಂಡುಕೊಳ್ಳುತ್ತಾ ಇದ್ದಾರೆ. ಇಂಡಿಯಾ ದೇಶದಲ್ಲಿ ಪ್ರತಿ ದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ. ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ. ಬಹುಮಾನ ತಪಸೀಲು—(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಷರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.



ವಿಳಾಸ:— ದಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ಬೀದಿ, ಮದರಾಸು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾದ

ಗಾಯತ್ರ್ಯರ್ಥ ಭಾಸ್ಕರ.

ಬ್ರಹ್ಮವಿದ್ಯೆ ಎಂಬದು ಬ್ರಾಹ್ಮಣರ ಮುಖ್ಯ ಧನವೂ, ಇದೇ ಶುದ್ಧ ತತ್ವಾರ್ಥವು ಮಾತ್ರವಲ್ಲ, ಇದರ ವಿಶೇಷಣವೇನಂದರೆ ಬ್ರಾಹ್ಮಣನ ತಂದೆತಾಯಿಗಳಾದ ಪ್ರಣವ ಗಾಯತ್ರಿಗಳು ಎಷ್ಟು ಅಮೌಲ್ಯಕರವಾದ ಮಹಾ ಜನರಿಂದ ಹೇಳಲ್ಪಟ್ಟಿರುವ ತತ್ವ ವಿಷಯಗಳುಳ್ಳ ದೇವ ಮತ್ತು ದೇವೀ ಸ್ವರೂಪಗಳೆಂದು ಇದರಲ್ಲಿ ವಿಶ್ವಾಸಿಸಿ ಧ್ಯಾನಿಸುವಂಥವರಿಗೆ ಏನೆಲ್ಲಾ ಕೊಡಲಿಕ್ಕೆ ಸ್ವತೇವ ಸಹಜವಾದ ಬ್ರಹ್ಮ ಜನರ ಪ್ರಾರ್ಥನಾ ಪಾತ್ರತೆಯುಳ್ಳ ಸಂಸಿದ್ಧವಾದವುಗಳೆಂದೂ, ಬ್ರಹ್ಮಜನರ ಘನ ಶ್ರೇಯಸ್ಸು ವ ಗೌರವವು ಎಷ್ಟರಮಟ್ಟಿನದೆಂದೂ ಈ ಮೂಲಕ ವೇದ್ಯವರಿಸಿದ ದಾಸೊಹಂಭಾವದ ಈ ಗ್ರಂಥವು ಸರ್ವ ಪ್ರಿಯವಾದದ್ದೆಂದೂ ಪಡಕೊಂಡು ಓದುವವರಿಗೆ ಸುಲಭವಾಗಿ ತಿಳಿಯುವುದು.

ಕ್ರಯ ೧೦ ಆಣೆ.

ಪುಸ್ತಕಗಳ ಮಾರಾಟದ ಸ್ಥಳ:—

ಮಂಗಳೂರು, ಕೆ. ಎಮ್. ದಾಸ ಪ್ರಭು, ರಥಬೀದಿ
ಮು. ಮು. ಶ್ರೀನಿವಾಸ ಹರಿದಾಸ್, ಫೀಲ್ಡ್ ಸ್ಟ್ರೀಟ್.
ಉಡುಪಿ, ಪಿ. ಎ. ಪೈ ಬ್ರದರ್ಸ್, ಬುಕ್‌ಸೇಲರ್ಸ್.

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳಿಗೂ, ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣವಾಗುವುದು. ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವದರಿಗೆ 2 ನಳಿಗೆಗಳು ಬಹುಮಾನ. ಸೆಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0. ವಿ. ಪಿ. ಮಾಫಿ.

ವಿಸ್ಫೋಟಕ ಮುಟ್ಟಿಂ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟಿ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಜೀಷ್ಟಿಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು.

ಸ್ವರಸುಖಿ—ಕೆಮ್ಮು, ಗಂಟಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವುದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಲ 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ.

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ. 0—2—0.

ಗಜಕರ್ಣ ಯಾನೆ ದದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ಮೈ ಸ್ವಚ್ಛವಾಗುವದು. ಗ್ಲಾಸಿನ ಡಬ್ಬಿ 1ರ ಕ್ರಯ. 0—4—0. ಒಂದು ಡಜನ್ ಡಬ್ಬಿಗಳಿಗೆ ರೂ. 2—8—0 ವಿ. ಪಿ. ಬೇರೆ.

M. D. R. & Sons.
Srimangireesh Aushadalaya,
UDIPI S. C.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
[illegible]

ಹುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ವೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದವರು ಸ್ವಲ್ಪವಾದರೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಹಣವನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.)

ಉಡುಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ರಮ' ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟು ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾರಿದ್ದ ಸ್ಥಳಕ್ಕೆ ಬಂದು ಕೊಟ್ಟರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ಪಾಲಿಸಿ ಹಕ್ಕಿನ ಆಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚೆಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ** ಪ್ರಖ್ಯಾತವಾದ ಮತ್ತು ಈಗಿನ **ಕಾಲ**ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು **ಕೈ** ವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 **ದಿವಸ**ಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ಪ್ರಶ್ನೆಪತ್ರ

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ,
Chemists, ಕೆಮಿಸ್ಟ್ಸ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಷ್ಟು ಸಾರತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು. ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದು.



ಶತಧೌತ ಘೃತ

ಗಳೆಂಬ [ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು. ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದು.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೧೫ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ಟೆಲಿಗ್ರಾಫ ವಿಳಾಸ:—"ಪಂಡಿಟ್" ಮದರಾಸ್.

ಮಜಾಟಿ ಮಶ್ಶಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ಶೋಭಾಯಮಾನವಾಗುವವು.

ಈ ಕೂದಲು ರಂಗಿನಲ್ಲಿ ಏಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತಪುದು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡಯಿಸಬೇಕು.

Address:—

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ ಒಲೆಯು



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧ಂನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ.	7	8	0
ಬರೀ ಒಲೆಗೆ ಮಾತ್ರ ಕ್ರಯ ರೂ.	5	12	0
೫ನೇ ಮತ್ತು ೧ಂನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟಾವ್ ಡಿಪೊ, ೭೩೭ ಗಿರಗಾಂ ಬೊಂಬಾಯಿ.

ಡಾಕ್ತರ್ ನವರತ್ನರ

ಪರ್ಕ್ಯಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಶೋಭಾಯಮಾನವಾಗುತ್ತದೆ. ಇದಕ್ಕೆ ಸರ್ವಸಮವಾಗಿ ಎ ... ಟಿ ... ಸುವಾಸನೆ ... ಬಣ್ಣ ... ಬಹಳ ... ಕಪ್ ಮತ್ತು

ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons.
Kalbadevi Road BOMBAY.

ವಿಜೆಂಟರು:—ದಿ. ಉಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA).

AGENT FOR

Mlbar and South Canara.

ಪಂಡಿತ್ ಟಿ. ಭಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜುಮುರ್, ಉಳುಕು, ಗಾಯಗಳು, ಪಕ್ಷವಾತ, ಬೆನ್ನುನೋವು, ಅನೇಕಾಯ ಬಿಚ್ಚ, ಸುಟ್ಟ ಗಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಚಾರ್ಜು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳು ಮಾರಾಟಕ್ಕೆ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
... ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಕಾಂತಿದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಯು ಬಿರುದಿನ ದಿಳ್ಳಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪಳಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಉಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರನಳಿ, ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ಹುಳುಕಡ್ಡಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಿಲ್ಲ. ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೪. ಸಪ್ತೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿಮಾಂದ್ಯ ಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. [illegible] ಮಧುರವಾಗಿರಿಸುವದು. [illegible] ೧೦ ತೊಲೆಗೆ ೩ ರೂ. ೮ ಆಣೆ.

[illegible] ನಮ್ಮಲ್ಲಿ ಶಾಸ್ತ್ರೀಯ [illegible] ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. [illegible] ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ [illegible] ತಕ್ಷಣದಿಂದ [illegible]

B. M. Nath & Co., *Ayurvedic Chemists*

Vepery Post. MADRAS.

ಪಿ. ಕೆ. ವೈದ್ಯರ್ ಇವರ ಸ್ವಾನುಭವಸಿದ್ಧವಾದ ಔಷಧಗಳು.

ಸುಕುಮಾರ ಘೃತ. ಗರ್ಭ ಪ್ರತಿಬಂಧಕಗಳಾದ ಸ್ತ್ರೀಯರ ಸರ್ವ ರೋಗಗಳನ್ನೂ ಸಮೂಲವಾಗಿ ಛೇದಿಸಿ ಅಕಾಲ ಪ್ರಸವ ಮುಂತಾದ ದೋಷಗಳನ್ನು ಖಂಡಿಸಿ ಗರ್ಭಕ್ಕೆ ಪುಷ್ಟಿಯನ್ನುಂಟುಮಾಡುವದಲ್ಲದೆ, ಪುರುಷರಿಗೆ ವಾಯು, ಅಂಡ್ರವಾಯು, ಕ್ಷಯ, ಧಾತುಕ್ಷಯವೇ ಮುಂತಾದವುಗಳನ್ನು ಅಲ್ಪಕಾಲದಲ್ಲಿಯೇ ಪ್ರಶಮಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವುದು. ಕ್ರಯ ೨೦ ತೊಲೆಗೆ ರೂಪಾಯಿ 2—0—0.

ಸರ್ವಜನ ಹಿತಕಾರಿಣಿ ಲೇಹ್ಯ. ಕ್ಷಯ, ಅಸ್ಥಿಜ್ವರ, ಉರಿಮೂತ್ರ, ಮೂತ್ರರೋಗ, ಪಿತ್ತಮೂಲವಾದ ಸಕಲ ರೋಗಗಳಿಗೆ ಅಮೃತ ಕಲ್ಪವಾಗಿರುವುದು. ಕ್ಷೀಣದೇಹಿಗಳು ಸೇವಿಸಿದ್ದಲ್ಲಿ, ರೋಗಗಳು ಒಂದೆರಡು ವಾರಗಳೊಳಗೆ ತೂಕದಲ್ಲಿ ಹೆಚ್ಚಳಿಕ್ಕೆ ಏನೇನೂ ಸಂಶಯವಿಲ್ಲ. ದೇಹದ ತೇಜಾರೋಗ್ಯಗಳನ್ನು ವೃದ್ಧಿಸಿ ರಕ್ತಶುದ್ಧಿಯನ್ನು ಗೈಯುವ ಪರಮೌಷಧ. ತೊಲೆ ೨೪ರ ಸೇರು ೧ಕ್ಕೆ ರೂಪಾಯಿ 1—8—0.

ಅಗಸ್ತ್ಯಕಲ್ಪವೆಂಬ ರಸಾಯನ. ಈ ರಸಾಯನ ಸೇವನೆಯಿಂದ ಧಾತುಬಲ, ಅಗ್ನಿಬಲ ವರ್ಧನೆಯಾಗುವದಲ್ಲದೆ ನಿಸ್ಸತ್ವರನ್ನು ಭೀಮಸತ್ವರನ್ನಾಗಿಯೂ ಅಕಾಲ ವೃದ್ಧರನ್ನು ಶುದ್ಧ ಯುವಕರನ್ನಾಗಿಯೂ ಮಾರ್ಪಡಿಸುವ ದಿವ್ಯ ಮೂಲಿಕೆಗಳನ್ನೊಳಕೊಂಡಿರುವುದು. ಅನುಭವವೇ ಪ್ರತ್ಯಕ್ಷ ಪ್ರಮಾಣ. ತೊಲೆ ೨೪ರ ಸೇರು ೧ರ ಕ್ರಯ ರೂ. 1—0—0.

ಕ್ಷಯಸಂಹಾರಿ ತೈಲ. ಉಬ್ಬಸ, ಕೆಮ್ಮು, ಕಿವುಡತನ, ಕರ್ಣಸ್ರಾವ, ಮುಂತಾದುದಕ್ಕೆ ಅತ್ಯುತ್ತಮ. ಬಾಟ್ಲಿ ೧ರ ಕ್ರಯ 7 ಆಣೆ.

ರಕ್ತಪಿತ್ತ ಕುಠಾರ. ಬಿಳಿ, ಕೆಂಪು ಅಥವಾ ಮಿಶ್ರ ಇರುವ ಪ್ರದರದ ಮೇಲೆ ಪ್ರಯೋಗಿಸಬಹುದು. ಮೂಗಿನಲ್ಲಿ, ಬಾಯಿಯಲ್ಲಿ, ಕಿವಿಯಲ್ಲಿ ಮಲದಲ್ಲಿ ಸಹಾ ಕಾಣಬಹುದಾದ ರಕ್ತಪಿತ್ತ ದೋಷಗಳನ್ನು ಪರಿಹರಿಸುತ್ತದೆ. ೨೦ ಮಾತ್ರೆಗಳುಳ್ಳ ಬಾಟ್ಲಿ ೧ರ ಕ್ರಯ ರೂ. 2—8—0.

ಇವಲ್ಲದೆ ಇನ್ನೂ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿವೆ. ಅನುಪಾನಪತ್ರಗಳೂ ಸೇವನಾಕ್ರಮಗಳೂ ಔಷಧದ ಸಂಗಡಲೇ ಕಳುಹಿಸೋಣಾಗುವುದು.

Address:—	ವಿಳಾಸ —
MANAGER,	ಮೆನೇಜರ್,
The Universal Medical Hall,	ವಿಶ್ವವೈದ್ಯಾಲಯ,
MANJESHWAR.	ಮಂಜೇಶರ.

ಡೋಂಗರೆ
ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೋ.

Girgaum, Bombay. ಗಿರಗಾಂ ಬೊಂಬಾಯಿ.

'ಊಲನ್ ಮಾರ್ಟ್', ಮಾಧವ ಬಿಲ್ಡಿಂಗ್ಸ್, ಮಂಗಳೂರು. ಇವರಲ್ಲಿಯೂ ದೊರಕುವದು.

ಚಂದಾ ಕಡಿಮೆ! ನೋಡಿರಿ!! ಅಂದ ಹೆಚ್ಚು!!!

"ಕನ್ನಡ ಕೋಗಿಲೆ"

ವಾಙ್ಮಯ, ಧರ್ಮ, ಸಮಾಜ, ಶಾಸ್ತ್ರಾದಿ ಸದ್ವಿಷಯಗಳನ್ನೊಳಕೊಳ್ಳುವ ಈ ಮಾಸಪತ್ರಿಕೆಯು ಬರುವ ವಸಂತದ ಆದಿಯಿಂದ ಪ್ರಕಟಿತವಾಗುವುದು. ನಮ್ಮ ಚಾತುರ್ಯವನ್ನು ನಾವೇ ಪ್ರಕಟಿಸಿಕೊಳ್ಳುವುದು ಕರ್ತವ್ಯವಲ್ಲವಾದ ಕಾರಣ ನಿಜಸ್ಥಿತಿ ಮಾತ್ರ ಸೂಚಿಸಲ್ಪಟ್ಟಿದೆ. ಪ್ರಥಮ ಸಂಚಿಕೆಯ ನಮ್ಮ ಕೋಗಿಲೆಯ ಸುಸ್ವರವೇ ವಾಚಕರನ್ನು ನೋಡಿ ಕಿವಿದೆರೆಯುವಂತೆ ಮಾತಾಡಿರುವುದು. ಬಿಡಿ ಪ್ರತಿ 1ಕ್ಕೆ 0-2-6.

ಚಂದಾ:—

ಪೋಷಕರು ರೂ. 4—0—0; ಪ್ರೋತ್ಸಾಹಕರು ರೂ. 1—8—0

ಅಂಚೆ ವೆಚ್ಚ ಬೇರೆ.

ವಿಳಾಸ:—

ಮಂಗಳೂರು ವಿದ್ಯಾರ್ಥಿ ಭವನದಲ್ಲಿರುವ ಪಿ. ಎಮ್. ಭಟ್ಟರು ನೋಡಿ ಕನ್ನಡ ಕೋಗಿಲೆ ಸಂಪಾದಕರಿಗೆ ತಲ್ಪಿಸುವದು.

ಶ್ರೀಮತ್ ಕಲ್ಯಾಣ ಬಂಧುಗಳೇ

ಇತ್ತ ಕಡೆ ನೋಡಿರಿ

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ. ಕ. POST POLALY, S. C.

S. U. N. & CO.,

BENARES CITY, U. P.

ಯೋಗ್ಯವಾದ ಕ್ರಯ!

ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ಸಿಮುದು ತಯಾರಿಸಿರುವ ಉತ್ತಮವಾದ ಬನಾರಸ್ ಜರಿ ಸೀರೆಗಳು, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮುಗುಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು, ಕೊರ್ನಾಡು, ಅರಳೆಪೇಟೆ, ಧರ್ಮಾವರ, ಈ ಮುಂತಾದ ಅನೇಕ ಹೊಸ ನಮೂನೆಯ ಸಾಮಾನುಗಳನ್ನು ಕಾಶಿಯಲ್ಲಿಯೇ ಈ ವರುಷ ಲಗ್ನಕಾರ್ಯಗಳಿಗಾಗಿ ಅತಿ ಮೋಹನತ್ವದಿಂದ ತಯಾರಿಸಿರುವದು. ಈ ಅಮೂಲ್ಯವಾದ ಸರಕುಗಳ ಕೆಟಲಾಗನ್ನು ಅಪೇಕ್ಷಿಸುವರಿಗೆ 100 ಫೋಟೋಗಳು, 1 ಕೆಟಲಾಗು, 1 ಕಾಶಿ ಕಾಲಭೈರವ ದಾರವನ್ನು ಇನಾಮಾಗಿ ಕಳುಹಿಸಲಾದೀತು.

ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ಮೈಸೂರು ಏಜಂಟರು:—

ಮ॥ ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,

ದಿ. ಚಾಂಪಿಯನ್ ಅಥವಾ(?) ಏಜನ್ಸಿ ಮೈಸೂರು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕಪ್ಪು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಸೈಮುಸ ಮಾಡಿಕೊಂಡ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದ ರೋಗ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಶಾಳದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿದ್ವೀಪ, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1–8–0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2–12–0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5–0–0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ. ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಎ. ಎನ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಗಿಯರಿವೇನ್ ನಂ. 2. ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಚಳಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಸುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ.

ದ್ವಾದಶ ಧ್ಯಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0–1–6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಜಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12–0–0, 5–0–0, 3–0–0, 2–8–0, 1–4–0, 1–0–0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2–0–0, 1–0–0, 0–12–0, 0–6–0

ಸುಗಂಧಿ ಕಾಡ್ರು 1ಕ್ಕೆ 0–1–0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0–8–0. **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0–2–0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಚಿನ್ನದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು.

೭೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಇಂಗ್ಲಿಷ್ ಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದ್ದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩. ಅಂಚೆ ಹಾಸಲು ೫ ಆಣೆ.

ನವಮೋಹನತರಂಗಿಣಿ.

ಈ ಗ್ರಂಥವು ವೀರಶೈವಮತದ ಕವಿಶ್ರೇಷ್ಠರಲ್ಲೊಬ್ಬನಾದ ಕೋಳೂರು ಶಂಕರಕವಿಯಿಂದ ೧೯ನೆಯ ಶತಮಾನದ ಆದಿಯಲ್ಲಿ ಭಾಮಿನಿಷಟ್ಪದಿ ರೂಪಕವಾಗಿ ರಚಿತವಾದದ್ದು. ಇದರಲ್ಲಿ ಬಾಣಾಸುರನ ಪ್ರತಾಪವು, ತ್ರಿಪುರದೈತ್ಯರ ಆಟೋಪವು ಸುರಾಸುರರ ವಿಪ್ರಲಾಪವು, ಹರನೇತ್ರಾಗ್ನಿಯ ಪ್ರತಾಪವು, ರತಿಪ್ರಳಾಪವು, ಪಾರ್ವತೀ ಪರಮೇಶ್ವರರ ಸಂಯೋಗವು, ಷಣ್ಮುಖೋದಯವು, ತಾರಕಾದಿಗಳ ವಿಧ್ವಂಸನವು, ಮನ್ಮಥ ಶಾಪವಿಮೋಚನವು, ದ್ವಾರಕಾಪುರವರ್ಣನವು, ಕೃಷ್ಣಬಲರಾಮರ ವೀರಪ್ರತಾಪವು, ಪ್ರದ್ಯುಮ್ನೋದಯವು, ಅನಿರುದ್ಧನ ಜನನವು, ಉಷಾಕನ್ಯಾ ಪರಿಣಯವೇ ಮೊದಲಾದ ವಿಷಯಗಳು ಬಹು ಸರಸವಾಗಿ ವರ್ಣಿಸಲ್ಪಟ್ಟಿವೆ. ಓದುವವರಿಗೆ ಅತ್ಯಂತ ಸಂತೋಷವುಂಟಾಗುವಂತೆ ಕವಿಯು ಸರಸಪದಬಂಧುರವಾಗಿ ಗ್ರಂಥವನ್ನು ವಿರಚಿಸಿರುವನು. ಉತ್ತಮವಾದ ಕಾಗದಗಳ ಮೇಲೆ ಸುರೇಖಾಕ್ಷರಗಳಿಂದ ಅಚ್ಚು ಮಾಡಿಸಲ್ಪಟ್ಟಿದೆ. ತೆಗೆದುಕೊಂಡು ಒಂದು ಸಲ ಓದಿದರೆ ಈ ಗ್ರಂಥದ ಗುಣವು ಗೊತ್ತಾಗುತ್ತೆ.

ಬೆಲೆ ರೂಪಾಯಿ ೧–೦–೦.

ವಿಳಾಸ— ಟಿ. ಎ. ಮಾಣಿಕ್ಯಂ ಶೆಟ್ಟಿ,
ಬಾಲಕೃಷ್ಣಮಂದಿರ ಬುಕ್ ಡಿಪೋ. ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾಗದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ವಾಂಸರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ), ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯು ನೋವು, ಮೈಯಲ್ಲಿಯು ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಸ್ಸಿದರೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ. 1—0—0.
„ „ 3ಕ್ಕೆ „ 2-10—0.
ವಿ. ಪಿ. ಚಾರ್ಜು ಅಲಾಯಿದ.

N. B.—ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎಂದವನ್ನೇ ತೆಗೆದುಕೊಳ್ಳಿರಿ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ. ಇದು ಎಲ್ಲರೂ ಉಪಯೋಗಿಸಿ ನೋಡಿ ತಾರೀಫು ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ತಪ್ಪಿಯನ್ನು ಪ್ಯಾಕಿಂಗ್ ಒಡೆಯದಿರುವುವನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.
„ ಮಿಡಿಯಂ „ „ 0-12—0.
„ ಕ್ಷಿಸ್ಟನ „ „ 2—0—0.
ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.
ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪ್ರಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ. ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭವುಂಟು. ಕ್ರಯ ಬಾಟ್ಲಿ ಒಂದರ ರೂ. 1—0—0. ಟಪ್ಪಾಲು ಖರ್ಚು 4 ಆಣೆ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET, BOMBAY 2.

ಪ್ರಧಾನ ಏಜಂಟರು: ಡಿ. ಊಲನ್ ಮಾರ್ಟ್, ಮಂಗಳೂರು ದ. ಕನಡಾ.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X ಮಂಗಳೂರು ತಾ 31ನೇ ಮಾರ್ಚಿ ಶುಕ್ರವಾರ 1916. ಸಂಚಿಕೆ 13

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ.

(ರಜಿಸ್ಟರ್ಡ್)

1. ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45	ಮಾತ್ರೆಗಳ ಪೊಟ್ಟ 1ಕ್ಕೆ	0—2—0	200	ಮಾತ್ರೆಗಳ ಪೊಟ್ಟ 1ಕ್ಕೆ	0—7—0	80	ಮಾತ್ರೆಗಳ ಟಿನ್ 1ಕ್ಕೆ	0—4—0	650	ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ	1—0—0
95	,, ,, ,,	0—4—0	200	,, ಟಿನ್ ,,	0—9—0	100	,, ಶೀಸೆ ,,	0—4—6	1200	,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ.ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು:— ದಿ. ಊಲನ್‌ಮಾರ್ಟ್, ಮಂಗಳೂರು.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪ್ಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಷಚಿಕಿತ್ಸಾ ರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ್ಯ ವ್ಯಕ್ತವಾಗುವದು. ಕನ್ನಡ ನುಡಿಯು ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ! ಆರ್ಷಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,

TYPE-WRITING.

ಮುದ್ರಣ ಅನುಕೂಲಗಳು.

ಅರ್ಜಿ, ದಾವೆಗಳ ಪ್ರತಿ, ಇತರ ದಸ್ತಾವೇಜುಗಳ ನಕಲುಗಳು ಇತ್ಯಾದಿ ಇಂಗ್ಲಿಷ ಭಾಷೆಯ ಬರವಣಿಗೆಗಳನ್ನು ಕೋರ್ಟು ಕಚೇರಿಗಳಲ್ಲಿ ದಾಖಲುಮಾಡುವ ಸಂದರ್ಭಗಳು ಬಹಳವಾಗಿ ಬಂದೊದಗುತ್ತವೆ. ಇಂಥವುಗಳು ಕೈಬರಹದಲ್ಲಿದ್ದರೆ ಓದಲು ಬಹಳ ಸಮಯವೂ ತೊಂದರೆಗಳೂ ಇರುವವು. ಆದ್ದರಿಂದ ಇವುಗಳನ್ನು ಛಾಪಾ ಹಾಕಿಸುತ್ತಾರೆ. ಹೆಚ್ಚು ಪ್ರತಿಗಳನ್ನು ಛಾಪೆ ಮಾಡಿಸಿದರೆ ಖರ್ಚು ಕಡಿಮೆ ಬೀಳುವದು. ಅರ್ಜಿ ಇತ್ಯಾದಿಗಳ ಹೆಚ್ಚು ಪ್ರತಿಗಳನ್ನು ಮಾಡಿಸುವದು ಹಲವು ಸರ್ತಿ ಅಗತ್ಯವಿರದು. ಇಂಥಾ ಸಂದರ್ಭಗಳಲ್ಲಿ "Type-writing Machine" ಎಂಬುವದರ ಮೂಲಕ ಅಚ್ಚು ಹಾಕಿಸುವದುಂಟು. ಇಂಥಾ ಯಂತ್ರವನ್ನು ಕಾರದಾ ಛಾಪಖಾನೆಯಲ್ಲಿ ತಂದು ಇಟ್ಟಿರುತ್ತೇವೆ. ಗಿರಾಕಿಗಳ ಅನುಕೂಲತೆ ಬಗ್ಗೆ ಅಚ್ಚು ಹಾಕಿಸುವ ಕೆಲಸ ವಿನಹ ಟೈಪ್‌ರೈಟಿಂಗ್ ಮೂಲಕ ಅರ್ಜಿ ಇತ್ಯಾದಿಗಳನ್ನು ಬಹು ಸುಲಭ ದರದಲ್ಲಿ ಮುದ್ರಿಸಿಕೊಡುತ್ತೇವೆ.

ದರ [illegible]

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ತೆಗೆದುಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1 ಚಿಕ್ಕ ಸ್ಯಾಜು ಆಣೆ 10 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ



ಶತಧೌತ ಘೃತ

ಇದರಿಂದ ಈ ಘೃತವು ಪ್ಲೇಗ್ ಕ್ರಿಮಿ ಎಂಬ ಗೆಡ್ಡೆಯನ್ನೂ, ಹಚ್ಚು ನಾಯಿ ಕಡಿತಗಳನ್ನೂ, ಹುಣ್ಣು ವ್ರಣ ಮತ್ತು ನಾರು ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 1? ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್

ಆಯುರ್ವೇದಾಶ್ರಮ,
57 ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್

ತಂತಿ ವಿಳಾಸ — "ಪಂಡಿಟ್" ಮದರಾಸ್

ಖಜಾಬೆ ಮುಶ್ಕಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಹಚ್ಚುವುದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವವು.



ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ, ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ಸ್ವಾಭಾವಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ಕವುಚು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ ಒಲೆಯು



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಸುಲಭವಾಗಿ ಶುದ್ಧಮಾಡಬಹುದು. ಮತ್ತು ನಾವೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ	7	8	0
ಬರೀ ಒಲೆಗೆ ಮಾತ್ರ ಕ್ರಯ ರೂ.	5	12	0
೫ನೇ ಮತ್ತು ೧೦ನೇ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ	2	4	0

ಟಪ್ಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟವ್ ಡಿಪೊ, ೭೩೭ ಗಿರಗಾಂ ಬೊಂಬಾಯಿ.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. ನಿರೆದ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎಲ್ಲರೂ ಉಪಯೋಗಿಸುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಒಣ್ಣ ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr Navaratna & Sons,
Kalbadevi Road, BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

B. Narasimha Prabhu,
Bantval, (SOUTH CANARA).
AGENT FOR
Mlbar and South Canara.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕಣ್ಣಿ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜುಮುರ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆಕಾಲು, ಚಿಬ್ಬು, ಸುಟ್ಟ ಘಾಯ, ಕೈಕಾಲು ಮತ್ತು ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ಹೋಗುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಚಾರ್ಜು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ತೈಲಗಳೂ ಇರುವದರಿಂದ ಪಟ್ಟಿಗಾಗಿ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
[illegible] ಮಂಗಳೂರು

ಕೊಡ್‍ಲಿವರ್ ಎಣ್ಣೆ.

ಈ ಎಣ್ಣೆಯು ಕೆತೆಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡ್ಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ [illegible]ತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವುದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ|ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾವರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ, ಇದು ಎಲ್ಲಾ ಕಡೆಗಳಲ್ಲಿ ದೊರಕುವದು, ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3 – 4 – 0. ಅರ್ಧ ಬಾಟ್ಲಿಗೆ 1 – 12 – 0.

ದಿ ಊಲನ್ ಮಾರ್ಟ್, ಮಂಗಳೂರು, ದ. ಕ.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಮುಫತ್! **ಕ್ಯಾಲೆಂಡರ್.** ಮುಫತ್!

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ಮುಫತ್ತಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ— ಇದರ ಬೆಲೆ 10 ಆಣೆ.

ವಾಲ್ಮೀಕಿಯ ಜಯ ಆಣೆ 6; ಮೈತ್ರೇಯಿ ಆಣೆ 5; ಸುಧರ್ಮ ಪ್ರಭಾವ ನಾಟಕ ಆಣೆ 8; ಸೂಕ್ತಿಮಾಲೆ, 1 – 2 ಭಾಗಗಳು ಆಣೆ 6; ಭಕ್ತಿಯೋಗ ಆಣೆ 8; ಆರ್ಯ ಮತಸಾರ ಆಣೆ 3; ಭರತ ಭೂಮಿಯ ಮಹರ್ಷಿಗಳು ಆಣೆ 2; ರಾಜಭಕ್ತಿ ಆಣೆ 6; ದೇಶ ಭಕ್ತಿ ಆಣೆ 10; ಗುರುಸ್ಮೃತಿ ಸುಮಾಂಜಲಿ ಆಣೆ 2.

ಈ ಪೈಕಿ [ರೂ. 2 – 0 – 0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ.]

†ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1 – 4	ಪ್ರಬಂಧ ಮುಕ್ತಾವಳಿ	0 – 12
ಹಾರ್ಮೋನಿಯಂ ಸ್ವಯಂ ಬೋಧಿನಿ	0 – 4	ಕನ್ನಡ ಅರೇಬಿಯನ್ ನೈಟ್ಸ್	2 – 2
ಬಾಲಿಕಾಗೀತ ಮುಕ್ತಾಕಲಾಪ(ಸ್ವರಯುಕ್ತ)	0 – 9	ಮುದ್ರಾಮಂಜೂಷ	1 – 10
ಕಲ್ಯಾಣ ಗೀತಾವಳಿ	0 – 6	ಭಕ್ತವಿಜಯ (ವಿಷ್ಣುಭಕ್ತರ ಕಥೆ)	3 – 2
ಅಭಿನವ ಸಂಗೀತ ಪಾರಿಜಾತ	0 – 4	ಅಧ್ಯಾತ್ಮವಿಚಾರ (ಉತ್ತರ ಸಹಿತ)	2 – 0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1 – 8	ಪ್ರಿಂರೋಜವಿಜಯಂ	1 – 9
ಸ್ತ್ರೀಧರ್ಮನೀತಿ	0 – 9		

†ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವಿಲ್)		0 – 12	ಮಾಧವೀ ಕಂಕಣ (ಬಂಗಾಳಿ ನಾವಿಲ್)		1 – 0
ಪ್ರತಾಪ್	,,	0 – 12	ಶಕ್ತಿ	,,	0 – 13
ಉನ್ಮತ್ತ	,,	0 – 3	ಶೋಧನೆ	,,	0 – 12
ವಿಷ ವಿವಾಹ	,,	0 – 4	ಚಂದ್ರಪ್ರಭಾ ಕಾದಂಬರಿ		0 – 14
ಸೌದಾಮಿನಿ	,,	0 – 8	ಸುಭದ್ರೆ	,,	0 – 5
ಸರಳಾ	,,	0 – 2	ಕಲಿಯುಗ	,,	0 – 5
ಸುಹಮಾ	,,	0 – 2	ಕಲಾನಾಥ	,,	0 – 8
ಅನಾಥ ಪ್ರೇತ	,,	0 – 1	ನನ್ನ ಆಚಾರ್ಯ (My Master)		0 – 4

ಈ ಪೈಕಿ 5 ರೂಪಾಯಿ ಬೆಲೆಯ ಪುಸ್ತಕಗಳಿಗೆ ಈ ಕ್ಯಾಲೆಂಡರ್ ಬಹುಮಾನ.

[illegible] ಕಾದಂಬರಿಗಳು.

ಸುಶೀಲೆ-ಶ್ರೀ ತಿರುಮಲಯ್ಯನವರಿಂದ	0 – 6	ದೇವಿ ಚೌಧುರಾಣಿ ಬಿ. ವೆಂಕಟಾಚಾರ್	1 – 4
ಸತೀತ್ವ ರಕ್ಷಣೆ (ನಥಾ ಭಾಗ 1) ,,	0 – 8	ಪರಿಮಳ ,,	0 – 10
ವಿರಾಗಿಣಿ (,, 2) ,,	1 – 0	ಸಾಧನೆ ,,	0 – 8
[illegible] ,,	0 – 14	ಚಿತ್ರವಿಚಿತ್ರಾವಳಿ ಭಾಗ I, II ಸೇರಿ	1 – 0
[illegible] ,,	1 – 8	ಶಾರದೆ	0 – 8

([illegible] ಇತರ ಎಲ್ಲಾ ಕಾದಂಬರಿಗಳು.)

ಎಲಿಮೆಂಟರಿ ಶಾಲಾ ಉಪಾಧ್ಯಾಯರು

ಲಕ್ಷಿಸಬೇಕಾದ ಸಂಗತಿಗಳು.

ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳನ್ನೇ ಶಾಲೆಗಳಲ್ಲಿ ಉಪಯೋಗಿಸಬೇಕೆಂಬ ನಿರ್ಬಂಧವಿದೆ. ಬೋರ್ಡು ಶಾಲೆಗಳಲ್ಲಿಯೂ ಮ್ಯುನಿಸಿಪಾಲ್ ಶಾಲೆಗಳಲ್ಲಿಯೂ ಕೆಳಗೆ ಹೇಳೋಣಾದ ಪುಸ್ತಕಗಳು ಮಾತ್ರವೇ ಮಂಜೂರಾಗಿವೆ. ಇತರ ಪುಸ್ತಕಗಳು ಪಠ್ಯಪುಸ್ತಕಗಳಾಗಿ ಈವರೆಗೆ ಮಂಜೂರಾಗಲಿಲ್ಲ ಎಂಬುದನ್ನು ಎಲ್ಲಾ ಉಪಾಧ್ಯಾಯರು

ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಲಕ್ಷ್ಯದಲ್ಲಿಡಬೇಕು.

ಮಾರ್ಸ್ಡೆನರ	ಒಂದನೇ ಪುಸ್ತಕ	0	2	0
,,	ಎರಡನೇ ,, ...	0	2	6
,,	ಮೂರನೇ ,, ...	0	3	0
,,	ನಾಲ್ಕನೇ ,, ...	0	4	0
,,	ಐದನೇ ,, ...	0	5	0
,,	ಆರನೇ ,, ...	0	5	0
,,	ಏಳನೇ ,, ...	0	5	0
,,	ಭೂಗೋಳ ಶಾಸ್ತ್ರ ೧ನೇ ಭಾಗ	0	3	0
,,	,, ,, ೨ನೇ ,, ...	0	3	0
,,	ಮದ್ರಾಸ್ ಆಧಿಪತ್ಯದ ವಿವರ	0	5	0
,,	ಹಿಂದೂ ದೇಶದ ಚರಿತ್ರೆಯ ಸುಲಭ ಪಾಠಗಳು ...	0	7	0
,,	ಗಣಿತ ಪುಸ್ತಕ (ಲೋವರ್ ಪ್ರೈಮರಿ ತರಗತಿಗಳಿಗೆ)	0	4	0
,,	ಅಂಕಗಣಿತ (ಅಪ್ಪರ್ ,, ,,)	0	4	0
,,	ಬಾಲಶಿಕ್ಷೆ	0	1	6
,,	ಮೂಲಪಾಠಕ	0	1	6
,,	ಗಣಿತ ಹಸ್ತಾಮಲಕ	0	1	0

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ.

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕು! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ಸಪ್ತೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಲಿ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1 – 4 – 0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಚಿವ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೊಲಿ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1 – 8 – 0.

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಪುಟಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ತೋರುತ್ತದೆ. ಬಾಟ್ಲಿ 1ಕ್ಕೆ 0 – 8 – 0.

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಚಿಪಿ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲಿ ದ್ರಾವಕಕ್ಕೆ ರೂ. 1.

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು [illegible]ರುತ್ತವೆ. ನಮ್ಮ ಕಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

(E)STABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

(A)uthorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
(I)ssued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
(S)ubscribed Capital	219,100—0—0	ಪ್ರತಿಜ್ಞಾತ ಮೂಲ ಧನವು ,,	219,100—0—0
(P)aid up Capital	194,100—0—0	ಆಗತ ಮೂಲ ಧನವು ,,	194,100—0—0
(D)eposits	371,976—4—4	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	371,976—4—4
(R)eserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/- 25% of the (n)et profits are added annually to the Reserve Fund. Rs. (2)8,485/ have been invested in Government Paper of the face (v)alue of Rs. 29,300/-

Dividends of not less than 6% paid during the past years (a)nd a bonus of 1% to 2% paid in addition during the last (t)hree years.

Fixed Deposits of Rs. 50/- and above in multiples of (R)s. 5/ received for 3, 6, 12 and 24 months @ 4, 4½, 5 and (5)½% respectively at the discretion of the managing committee

Short-notice Deposits requiring one weeks notice of (w)ithdrawal after one month received @ 2½% per annum at (t)he discretion of the managing committee.

Current Deposit Account opened free of charge.

Savings Bank Account opened for any sum not less (t)han 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.
ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ
ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st December 1915.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಸಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
Agents:—**Bhagavandas Choonilal & Co.,**
177 China Bazar Road, Mad(ras)

ಪ್ರೊಪ್ರೈಟರರು:—ಒರಿಯೆಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 31ನೇ ಮಾರ್ಚಿ 1916

ರಾಜ ಪ್ರಜಾವತ್ಸಲರಾದ ಹಾರ್ಡಿಂಜ ದೊರೆಗಳು.

(ಅವರ ಬಹುಮಾನವೂ ಉಪದೇಶವೂ)

"ನರಪತಿ ಹಿತಕರ್ತಾ ದ್ವೇಷ್ಯತಾಂ ಯಾತಿಲೋಕೇ
ಜನಪದ ಹಿತಕರ್ತಾ ತ್ಯಜ್ಯತೇ ಪಾರ್ಥಿವೇಂದ್ರೈಃ ॥
ಇತಿ ಮಹತಿ ವಿರೋಧೇ ವಿದ್ಯಮಾನೇ ಸಮಾನೇ
ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥ ೧ ॥

ಭರ್ತೃಹರಿ

ನಮ್ಮ ಲೋಕಪ್ರಿಯ ವೈಸರಾಯರಾದ ಲೋರ್ಡ ಹಾರ್ಡಿಂಜ ದೊರೆಯವರು ೫॥ ವರ್ಷದ ಸಂಸ್ಮರಣೀಯವಾದ ತಮ್ಮ ಆಳಿಕೆಯನ್ನು ಮುಗಿಸಿ ಸ್ವದೇಶಕ್ಕೆ ಬೇಗನೆ ತೆರಳುವವರಿದ್ದಾರೆ. ಆದುದರಿಂದ ಕಳೆದ ೨೫ನೇ ತಾರೀಕಿನ ದಿವಸ ದಿಲ್ಲಿ ಪಟ್ಟಣದೊಳಗಿನ ಮೆಟ್‌ಕಾಫ್ ಹೌಸಿನಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯ ಲೋಕನಿಯುಕ್ತ ಪ್ರತಿನಿಧಿಗಳು ಲೋರ್ಡ ಹಾರ್ಡಿಂಜ ದೊರೆಗಳಿಗೆ ಒಂದು ಮೇಜವಾನಿಯನ್ನು ಕೊಟ್ಟು ಮಾನಪತ್ರವನ್ನು ಸಮರ್ಪಿಸಿದರು. "ಮಾನ್ಯಾನ್ ಮಾನಯ" ಈ ನ್ಯಾಯದಂತೆ ಮಾನ ಪಾತ್ರರನ್ನು ಬಹುಮಾನಿಸುವುದು ಗುಣಜ್ಞರ ಕರ್ತವ್ಯವು. ಅದರಲ್ಲಿಯೂ ಲೋರ್ಡ್ ಹಾರ್ಡಿಂಜರು ನಮಗೆ ಬರೇ ಮಾನ ಪಾತ್ರರಾದ ಅಭ್ಯಾಗತರಲ್ಲ, ಸಕ್ರಿಯವಾದ ಸಹಾನುಭೂತಿಯಿಂದಲೂ, ವಾತ್ಸಲ್ಯದಿಂದಲೂ ೫ ವರ್ಷಗಳಿಗಿಂತಲೂ ಹೆಚ್ಚು ಸಮಯ ಈ ದೇಶವನ್ನಾಳಿದ ಲೋರ್ಡ್ ಹಾರ್ಡಿಂಜರು ರಾಜ ಪ್ರತಿನಿಧಿಗಳಾಗಿರುವರು. ಇಂಥವರಿಗೆ ಬಹುಮಾನ ಸಮರ್ಪಣೆಯನ್ನು ಮಾಡಿ ತಮ್ಮ ಗುಣಗ್ರಾಹಕತೆಯನ್ನೂ, ಕೃತಜ್ಞತೆಯನ್ನೂ ವ್ಯಕ್ತಗೊಳಿಸುವುದು ಹಿಂದೀ ಜನರ ಕರ್ತವ್ಯವೇ ಸರಿ. ಮತ್ತು ಆದುದರಿಂದಲೇ ಆ ಮಾನಪತ್ರದ ಸಮರ್ಪಣ ಸಮಾರಂಭಕ್ಕಾಗಿ ಈ ದೇಶದ ಬೇರೆ ಬೇರೆ ಪ್ರಾಂತಗಳ ಅನೇಕ ಪ್ರಮುಖ ಗೃಹಸ್ಥರು ಹಾಜರಿದ್ದರು. ಲೋರ್ಡ್ ರಿಪನ್ ದೊರೆಗಳ ನಂತರ ಬಂದ ವೈಸರಾಯರಲ್ಲಿ ಉದಾರವಾದ ಮತ್ತು ಸಹಾನುಭೂತಿ ಪೂರ್ಣವಾದ ರಾಜ್ಯಧೋರಣವುಳ್ಳ ರಾಜಪ್ರತಿನಿಧಿಗಳು ಹಾರ್ಡಿಂಜಪ್ರಭುಗಳಲ್ಲದೆ ಇನ್ನಾರೂ ಇರಲಿಲ್ಲ. ಹಿಂದೂಸ್ಥಾನದ ಈ ವರೆಗಿನ ವೈಸರಾಯರಿಗಿಂತ ಇವರು ಇಂಡಿಯಾ ದೇಶಕ್ಕೂ ಇಡೀ ಸಾಮ್ರಾಜ್ಯಕ್ಕೂ ಸಂಬಂಧಪಟ್ಟ ಅನೇಕ ಹಿತಕಾರಕ ಸಂಗತಿಗಳನ್ನು ಸಾಧಿಸಿ ಇಲ್ಲಿಯ ರಾಜ್ಯಕಾರಭಾರಕ್ಕೆ ಪ್ರಾಗತಿಕವಾದ ಒಂದು ಹೊಸ ಪದ್ಧತಿಯನ್ನು ಹಾಕಿಕೊಟ್ಟಿರುವರು. ದೃಢನಿಶ್ಚಯದ ಮತ್ತು ಉದಾರವಾದ ತಮ್ಮ ಆಳಿಕೆಯಿಂದ ಹಿಂದೀ ರಾಜ್ಯಕಾರಭಾರದ ನಾವೆಯನ್ನು ಬಹು ಜಾಗರೂಕತೆಯಿಂದ ನಡಿಸಿ ಹಿಂದೀ ಜನರ ಮನೋಭೂಮಿಯಲ್ಲಿ ಬ್ರಿಟಿಷ್ ರಾಜ್ಯಾಧಿಕಾರಿಗಳ ವಿಷಯದಲ್ಲಿ ರಾಜನಿಷ್ಠೆಯ ಉದಾತ್ತಭಾವನೆಯ ಬೀಜವನ್ನು ಬಿತ್ತಿ ಇವರು ಯಾವ ಉತ್ಕೃಷ್ಟ ಸೇವೆಯನ್ನು ಮಾಡಿರುವರೋ ಅಂಥ ಕಾರ್ಯವು ಈವರೆಗಿನ ವೈಸರಾಯರಲ್ಲಿ ಇನ್ನಾರಿಗೂ ಸಾಧ್ಯವಾಗಲಿಲ್ಲ. ಇದಲ್ಲದೆ, ಇವರು 'ರಾಜಪ್ರತಿನಿಧಿ' ಈ ಹೆಸರಿನಿಂದ ಈ ದೇಶಕ್ಕೆ ಬಂದವರಾದರೂ ಈ ಲೇಖದ ಶಿರೋಭಾಗದ ಶ್ಲೋಕದಲ್ಲಿ ಹೇಳಿದ್ದಂತೆ ರಾಜಪ್ರಜಾ ಹಿತದಲ್ಲಿ ಏಕಪ್ರಕಾರವಾಗಿ ತಮ್ಮ ಆಸಕ್ತಿಯನ್ನು ವ್ಯಕ್ತಗೊಳಿಸಿರುವರು. ಇವರ ಆಳಿಕೆಯು ಈ ಪ್ರಕಾರ ಅನೇಕ ದೃಷ್ಟಿಯಿಂದ ಮಹತ್ವವುಳ್ಳದ್ದು. ಹಾಗು ಸಂಸ್ಮರಣೀಯವಾದರೂ ಮೊನ್ನೆ ಮುಂಬಯಿ ಪಟ್ಟಣದಲ್ಲಿ ನೆರೆದ ಸಭೆಯಲ್ಲಿ ಸರ್ ನಾರಾಯಣ ರಾಯರು ಹೇಳಿದ್ದಂತೆ "ವಸಾಹತಿಯೊಳಗಿನ ಜನರ ಮತ್ಸರಯುಕ್ತ ಮತ್ತು ನೀಚವಾದ ಮನೋವೃತ್ತಿಗಳಿಂದ ಹಿಂದೂಸ್ಥಾನದ ನಾಗರೀಕತ್ವವೆಂದರೆ ಒಂದು ಘಾಸಿಂತಲೇ ನಮ್ಮೆಲ್ಲರ ತಿಳುವಳಿಕೆಯಾಗುವ ಸಮಯ ಒದಗಿತ್ತು; ಆದರೆ ಇಂಥ ಸಮಯದಲ್ಲಿ ಹಾರ್ಡಿಂಜ ಪ್ರಭುಗಳು ಹಿಂದೂಸ್ಥಾನದ ಕಡೆಯಿಂದ ಮುಂದೆ ಬಂದು ಹಿಂದೀ ಜನರಿಗೆ ಅಪಮಾನಾಸ್ಪದವಾದ ವಸಾಹತಿ ಜನರ ಶರ್ತುಗಳನ್ನು ಅವರೇ ಹಿಂದಕ್ಕೆ ತಕ್ಕೊಳ್ಳುವಂತೆ ಮಾಡಿದರು." ಪ್ರಕೃತ ಮಹಾಯುದ್ಧದ ಸಮಯದಲ್ಲಂತೂ ಇವರ ದೂರದರ್ಶಿತ್ವವೂ ಮುತ್ಸದಿತನವೂ ಪೂರ್ಣವಾಗಿ ವ್ಯಕ್ತವಾಗಿವೆ. ಇಂಥ ಅನೇಕ ಸಂಗತಿಗಳು ಇವರ ಪ್ರಜಾಹಿತ ತತ್ಪರತೆಯ ಸಾಕ್ಷಿ ಕೊಡುತ್ತವೆ. "ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ" ಎಂದು ಭರ್ತೃಹರಿಯು ಹೇಳಿದ "ದುರ್ಲಭ"ರೊಳಗೆ ಇವರೇ ಈಗಿನ ಕಾಲದಲ್ಲಿ ಅಗ್ರಗಣ್ಯರೆಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಾಗಲಿಕ್ಕಿಲ್ಲ. ಹಾರ್ಡಿಂಜ ದೊರೆಗಳ ನ್ಯಾಯನೀತಿ ದಯಾಪ್ರೇರಿತವಾದ ಆಳಿಕೆಯನ್ನು ವಿವರವಾಗಿ ಸಮಾಲೋಚಿಸುವಷ್ಟು ನಮಗೆ ಅವಕಾಶವಿಲ್ಲದಿದ್ದರೂ ಒಂದು ಮಾತನ್ನು ಹೇಳದೆ ನಮ್ಮಿಂದಿರಲಾಗದು. ಅದೇನೆಂದರೆ ಲೋರ್ಡ್ ರಿಪ್ಪನ್ ದೊರೆಗಳ ನಂತರ ಬಂದ ವೈಸರಾಯರಲ್ಲಿ ಇವರಷ್ಟು ಲೋಕಪ್ರಿಯರಾಗಿ ಲೋಕಾದರವನ್ನು ಪಡೆದವರು—ಅನನ್ವಯಾಲಂಕಾರದಿಂದ ಹೇಳುವದಾದರೆ ಇವರೇ ಸರಿ. ಮೊನ್ನೆಯ ಸ್ವಸ್ತಿವಾಚನಿಕವಾದ ಮಾನಪತ್ರದ ಸಮರ್ಪಣೆಯಿಂದಲೂ ಇದೇ ಸಂಗತಿಯು ವ್ಯಕ್ತವಾಗುತ್ತದೆ. ಲೋಕಪ್ರತಿನಿಧಿಗಳಿಂದ ಕೊಡಲ್ಪಟ್ಟ ಮಾನಪತ್ರವನ್ನು ಬಹುಮಾನಪಟ್ಟ ಸುರೇಂದ್ರನಾಥ ಬಾನರ್ಜಿಯವರು ಓದಿ ತೋರಿಸಿದರು. ಅದರ ಮುಖ್ಯ ಸಂಗತಿಗಳಾವವೆಂದರೆ —

"ಲೋರ್ಡ ರಿಪನ್ ದೊರೆಗಳ ನಂತರ ಬಂದ ವೈಸರಾಯರಲ್ಲಿ ತಾವೇ ಶ್ರೇಷ್ಠರಾದ ಕಾರಣ ನಾವು ತಮ್ಮನ್ನು ವಂದಿಸುತ್ತೇವೆ. ಕಾರ್ಯಾಸಕ್ತರಾಗಿ ಅತಿ ತತ್ಪರತೆಯಿಂದ ಕರ್ತವ್ಯಗಳನ್ನು ಮಾಡುವಾಗ ತಮ್ಮ ಮೇಲೆ ಬಂದ ಭಯಂಕರ ಆಪತ್ತುಗಳನ್ನು ಸ್ಮರಿಸಿದರೆ ನಮಗೆ ಬಹು ದುಃಖವಾಗುತ್ತದೆ. ತಾವು ಈ ಬಗೆಯ ತೊಂದರೆ ಮತ್ತು ಕಷ್ಟಗಳಲ್ಲಿರುವಾಗ ಈ ರಾಷ್ಟ್ರಕ್ಕೆ ತಮ್ಮ ವಿಷಯದಲ್ಲಿ ನೈಜ ಮತ್ತು ಪೂರ್ಣವಾದ ಸಹಾನುಭೂತಿಯಿತ್ತು. ತಾವು ಇಷ್ಟು ಮಹತ್ತೆಯಿಂದ ನಡಿಸಿದ ಈ ದೇಶದ ಮೇಲೆ ಇನ್ನು ಮುಂದೆಯೂ ಇದೇ ತಮ್ಮ ಆಸಕ್ತಿಯು ಇರುವದೆಂದು ನಾವು ನಿಃಸಂದೇಹವಾಗಿ ನಂಬುತ್ತೇವೆ. ಆದರೆ ಅದೇ ಸಮಯದಲ್ಲಿ, ಹಿಂದೀ ದೇಶದೊಡನೆ ಇದ್ದ ಮತ್ತು ಆ ದೇಶದ ಇತಿಹಾಸದಲ್ಲಿ ಒಂದು ಉಜ್ವಲವಾದ ಪ್ರಕರಣವಾಗಲಿಕ್ಕಿದ್ದ ತಮ್ಮ ಸಂಸ್ಮರಣೀಯವಾದ ರಾಜ್ಯಕಾರಭಾರದ ಸಂಬಂಧವು ಇಲ್ಲಿಗೆ ಮುಗಿದು ತಾವು ನಮ್ಮನ್ನು ಬಿಟ್ಟು ಹೋಗುವದರಿಂದ ನಮಗೆ ಅತಿ ದುಃಖವೂ ಉಂಟಾಗುತ್ತದೆ. ತಮಗೆ ದೀರ್ಘಾಯುಷ್ಯವೂ ಸುಖಾಭಿವೃದ್ಧಿಯೂ ಉಂಟಾಗಲಿ. ಮತ್ತು ಸಕಲ ಶುಭದಾತನಾದ ದೇವರು ತಮ್ಮ ಮೇಲೆ ಶ್ರೇಯಸ್ಸುಗಳನ್ನು ವರ್ಷಿಸಲಿ."

ಈ ಪ್ರಕಾರ ಸಮರ್ಪಿಸಿದ ಮಾನಪತ್ರಕ್ಕೆ ಅನಂತರ ವೈಸರಾಯ ಪ್ರಭುಗಳು ಪ್ರತ್ಯುತ್ತರವನ್ನು ಕೊಟ್ಟರು. ಆ ಉತ್ತರದಲ್ಲಿ ಅನೇಕ ಸಂಗತಿಗಳು ಒಳಕೊಂಡಿದ್ದವು. ಇಡೀ ಹಿಂದೂಸ್ಥಾನದ ಪ್ರತಿನಿಧಿಗಳು—ನಾನು ಮಾಡಿರುವ ಸೇವೆಗೆ ಅದಕ್ಕಿಂತಲೂ ಅತ್ಯಧಿಕವಾದ ಈ ಬಹುಮಾನ ಪತ್ರವನ್ನು ಕೊಟ್ಟು ನನ್ನ ಮೇಲೆ ಈ ಭಾರವನ್ನು ಹೊರಿಸಿದ್ದರಿಂದ ನಾನು ನಿಮ್ಮ ಆಭಾರಿಯಾಗಿದ್ದೇನೆಂತ ಹೇಳುವದು ಬರೇ ಉಪಚಾರದ ಮಾತು ಎಂಬ ತರದಿಂದ ವಿನಯ ಪೂರ್ವಕ ಆಭಾರವನ್ನು ಪ್ರದರ್ಶಿಸಿ ರಾಜ್ಯಕಾರಭಾರದಲ್ಲಿ ಹಿಂದೀ ಜನಾಂಗದ ಮಹತ್ವಾಕಾಂಕ್ಷೆಯು ದಿನೇ ದಿನೇ ವೃದ್ಧಿಂಗತವಾಗುತ್ತಿರುವದು ಸುಚಿಹ್ನವೆಂತಲೂ, ಬಾಲ್ಯ ಮತ್ತು ಪ್ರೌಢಾವಸ್ಥೆಯ ಇಚ್ಛೆಗಳನ್ನು ಪೂರೈಸಲು ನಾನು ಈ ಸ್ಥಾನವನ್ನು ಒಪ್ಪಿಕೊಂಡದ್ದಲ್ಲ, ನನ್ನ ಪೂರ್ವಿಕರಾದ ಮಹನೀಯರ ಕರ್ತವ್ಯ ಮಾರ್ಗವನ್ನು ಹಿಂಬಾಲಿಸಲಿಕ್ಕೂ, ಹಿಂದೀ ದೇಶದಲ್ಲಿ ಸುಖಾಭಿವೃದ್ಧಿ, ಆತ್ಮಪ್ರತ್ಯಯ ಮತ್ತು ವೈಭವ ಇವುಗಳನ್ನು ಹೆಚ್ಚಿಸಲಿಕ್ಕೂ ನಾನು ಈ ಕರ್ತವ್ಯವನ್ನು ಕೈಕೊಂಡದ್ದಾಗಿರುತ್ತದೆಂತಲೂ ವೈಸರಾಯರು ಉತ್ತರದಲ್ಲಿ ಹೇಳಿದರು. ಅನಂತರ ಹಿಂದೀದೇಶದ ಕೀರ್ತಿ, ಮಹಾ ಯುದ್ಧದಲ್ಲಿ ಅದು ಮಾಡಿರುವ ಸಹಾಯ, ಲೋಕ ಮತದ ಬೆಳವಣಿಗೆ ಮುಂತಾದ ವಿಷಯಗಳನ್ನೆಲ್ಲ ಸಮಾಲೋಚಿಸಿ ಉಪಸಂಹಾರದಲ್ಲಿ ಲೋರ್ಡ ಹಾರ್ಡಿಂಜ ಪ್ರಭುಗಳು ಪುನಃ ತಮ್ಮ ಸನ್ಮಾನಕ್ಕಾಗಿ ಅಂತಃಕರಣಪೂರ್ವಕ ಆಭಾರವನ್ನು ಪ್ರದರ್ಶಿಸಿ ಈ ವಿಸ್ತಾರವಾದ ದೇಶದ ಮೇಲಿರುವ ತನ್ನ ಅಕೃತ್ರಿಮ ಸಹಾನುಭೂತಿಯನ್ನು ಇಲ್ಲಿ ನೆರೆದ ದೂರ ದೂರ ಭಾಗದ ಬೇರೆ ಬೇರೆ ಪ್ರತಿನಿಧಿಗಳು [illegible] ತಿಳಿಸಬೇಕೆಂದು [illegible] ಹೇಳಿದರು.

---

* ರಾಜಹಿತ ಮಾಡುವವರನ್ನು ಜನರು ದ್ವೇಷಿಸುವರು; ಲೋಕಹಿತ ಮಾಡುವವರನ್ನು ಅರಸರು ಬಿಟ್ಟುಬಿಡುವರು. ಈ ಬಗೆಯ ವಿರೋಧವಿರಲು ರಾಜಪ್ರಜಾಹಿತ ಮಾಡುವವನು (ಲೋಕದಲ್ಲಿ) ದುರ್ಲಭನು.

ಅನಂತರ ಅಯೋಧ್ಯ ತಾಲೂಕದಾರರಿಂದಲೂ, ದಿಲ್ಲಿ ಮುನ್ಸಿಪಾಲಿಟಿ ಕಡೆಯಿಂದಲೂ ಕೊಡೋಣಾದ ಮಾನ ಪತ್ರಗಳಿಗೆ ವೈಸರಾಯ ದೊರೆಗಳು ಯಥೋಚಿತ ಉತ್ತರಗಳನ್ನು ಕೊಟ್ಟರು.

ತಾ. ೨೪ನೇ ದಿವಸ ಆದ ನ್ಯಾಯ ವಿಧಾಯಕ ಸಭೆಯ ಅಧಿವೇಶನದಲ್ಲಿ ವೈಸರಾಯ ಪ್ರಭುಗಳು ಮಾಡಿದ ಸಮಾಲೋಚನ ಪರವಾದ ಭಾಷಣವು ಅತಿ ಮಹತ್ವವುಳ್ಳದ್ದಾಗಿತ್ತು. ಆ ಭಾಷಣದೊಳಗಣ ಕೆಲವು ಸಂಗತಿಗಳನ್ನು ಬರುವ ಸಂಚಿಕೆಯಲ್ಲಿ ಬರೆದು ನಮ್ಮ ವಿಚಾರಗಳನ್ನೂ ಕೊಡಲು ಆಲೋಚನೆಯುಂಟು.

ನಮ್ಮ ಪ್ರಾಂತದ ಸುಶಿಕ್ಷಿತರು.

ಲೇಖಾಂಕ ೧.

ಪ್ರಸ್ತಾವನೆ.

ಜನಾಂಗದ ಏಳಿಗೆಯು ಆ ಜನಾಂಗದ ಸುಶಿಕ್ಷಿತರ ಮೇಲೆ ಹೊಂದಿಕೊಂಡಿರುತ್ತದೆ. ಜನಾಂಗ ಅಥವಾ ದೇಶ ಈ ಶಬ್ದದಿಂದ ನದೀ, ಹೊಲ, ಮರ, ಪಶು, ಪಕ್ಷಿ, ಮಾನವ ಮುಂತಾದ ಎಲ್ಲವುಗಳ ಬೋಧವುಂಟಾಗುತ್ತದೆಂಬುದು ನಿಜವು. ಹೊಳೆ, ಹೊಲ ಮುಂತಾದ ಈ ಎಲ್ಲವು ಜನಾಂಗದ ಘಟಕಗಳೇ ಸರಿ. ಆದರೆ ಜನಾಂಗದ ಏಳಿಗೆಯು ಮಾನವ ಸೃಷ್ಟಿಯನ್ನು ಹೊಂದಿಕೊಂಡೇ ಇರುವುದು; ಉಳಿದವುಗಳು ಈ ವಿಷಯದಲ್ಲಿ ಅಷ್ಟು ಸಾಧಕಗಳಲ್ಲ. ಇದೇ ವಿಚಾರ ಸರಣಿಯಿಂದ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಆಲೋಚಿಸಿದರೆ ಕಂಡು ಬರುವ ಹಾಗಿದೆ. ಅದೇನೆಂದರೆ, ಒಬ್ಬನಿಗೆ ಹತ್ತು ಕೋಟಿ ಹೊಟ್ಟೆ ಭತ್ತದ ಉತ್ಪತ್ತಿ ಇದ್ದರೆ ಅದು ಅವನಿಗೆ ಹೇಗೆ ಅಪ್ರಯೋಜನಕರವೋ ಅಥವಾ ಒಂದು ಸುಂದರವಾದ ಉದ್ಯಾನದಲ್ಲಿ ಮುಳ್ಳಿನ ಗಿಡಗಳೇ ಯಥೇಷ್ಟ ಬೆಳೆದಿರುವುದು ಹೇಗೆ ನಿರರ್ಥಕವೋ, ಹಾಗೆಯೇ ಒಂದು ಜನಾಂಗದಲ್ಲಿ ಕಾರ್ಯಾಸಕ್ತಿ ಇಲ್ಲದ ಜನರು ಬೇಕಷ್ಟು ಇದ್ದರೂ ಆ ಜನ ಸಂಖ್ಯೆಯು ಜನಾಂಗದ ಏಳಿಗೆಯ ದೃಷ್ಟಿಯಿಂದ ನಿಷ್ಪ್ರಯೋಜನವೇ ಸರಿ. ಉದ್ಯಾನದ ಸೌಂದರ್ಯಕ್ಕೆ ಅಥವಾ ಉಪಯುಕ್ತತೆಗೆ ಮುಳ್ಳುಗಿಡಗಳು ಪ್ರತಿಕೂಲವಾಗಿರುವುದರಿಂದ ಮಾಲಾಕಾರನು (ತೋಟಕಾಯುವವನು) ಅವುಗಳನ್ನು ಹೇಗೆ ಕಿತ್ತು ಹಾಕುವನೋ ಹಾಗೆಯೆ ಬಲಿಷ್ಟ ಪ್ರಜೆಯನ್ನು ಮಾತ್ರ ಸಂವರ್ಧಿಸಲು ದುರ್ಬಲ ಪ್ರಜೆಯನ್ನು ಕೊಲ್ಲುತ್ತಿದ್ದ ಸ್ಪಾರ್ಟನ್ನರಂತೆ ಕಾರ್ಯಾಸಕ್ತರಲ್ಲದವರನ್ನೆಲ್ಲ ಗುಂಡಿನ ಬಾಯಿಗೆ ಕೊಡಬೇಕೆಂದು ನಮ್ಮ ಮೇಲಿನ ಮಾತಿನ ತಾತ್ಪರ್ಯವೆಂದು ಯಾರಾದರೂ ದೀರ್ಘದರ್ಶಿಗಳು ತಿಳಿದರೆ ಅದು ಕೇವಲ ತಪ್ಪಾಗಿರುವುದು. ಮಾಲಾಕಾರನಿಗೆ ಮುಳ್ಳುಗಿಡಗಳನ್ನು ಕೀಳುವುದು ಅಗತ್ಯವೇ ಅಲ್ಲ, ಅಪರಿಹಾರ್ಯವೇ ಸರಿ. ಕಾರಣವೇನೆಂದರೆ, ಆ ಮುಳ್ಳಿನ ಗಿಡಗಳನ್ನು ಕೀಳದೆ ಕೃಷಿ ಮಾಡಿದರೂ ಅದರಿಂದ ಅವುಗಳ ಅಭಿವೃದ್ಧಿಯೇ ಆದೀತಲ್ಲದೆ ಮಾವು, ದ್ರಾಕ್ಷಿ, ಇತ್ಯಾದಿ ಗಿಡಗಳಲ್ಲಿ ಅವುಗಳ ರೂಪಾಂತರವಾಗಲಿಕ್ಕಿಲ್ಲ. ಆದರೆ ಸ್ವಸ್ವರೂಪಜ್ಞಾನವಿಲ್ಲದೆ ಕಾರ್ಯಪರಾಙ್ಮುಖರಾದ ಜನರಿಗೆ ಜ್ಞಾನದಾನದಿಂದ ಕಾರ್ಯದಲ್ಲಿ ಆಸಕ್ತಿಯನ್ನು ಹುಟ್ಟಿಸಬಹುದಾದ ಕಾರಣ ಅವರನ್ನು ಗುಂಡಿನ ಬಾಯಿಗೆ ಕೊಟ್ಟು ನಿಷ್ಕಾರಣ ಜನ ಸಂಹಾರದಿಂದ ಸಂಭವಿಸುವ ಪಾಪವನ್ನು ಸೆರಗಿನಲ್ಲಿ ಕಟ್ಟಿಕೊಳ್ಳಲು ಯಾರು ಉಪದೇಶಿಸುವರು? ಕಾರ್ಯಪರಾಙ್ಮುಖರಾದವರು ದೇಶದ ಅಭ್ಯುದಯಕ್ಕೆ ಕಾರಣರಲ್ಲ. ಈ ಮಾತಿನ ತಾತ್ಪರ್ಯವು ಅವರಲ್ಲಿ ಕಾರ್ಯಾಸಕ್ತಿಯನ್ನು ಹುಟ್ಟಿಸಬೇಕು ಇದೇ ಇರುತ್ತದೆ; ಹೊರತು ಅವರನ್ನು ಗುಂಡಿನ ಬಾಯಿಗೆ ಕೊಡಬೇಕೆಂತಲ್ಲ. ಮಾಲಾಕಾರ ಮತ್ತು ಅವನ ಉದ್ಯಾನ ಇದು ಪ್ರಕೃತ ವಿಷಯಕ್ಕೆ ಅಷ್ಟೊಂದು ಅನುಗುಣವಾದ ದೃಷ್ಟಾಂತವಲ್ಲ; ಇದಕ್ಕೆ ಉಪಮೆಯನ್ನು ಕೊಡುವದಾದರೆ ನಿರ್ಜೀವ ಮತ್ತು ನಿಶ್ಚಲವಾದ ಹೊಗೆ ಬಂಡಿಯಲ್ಲಿ ಅದರ ಡ್ರಾಯವ್ಹರನು ಹೇಗೆ ಇಷ್ಟಗತಿಯನ್ನು ಹುಟ್ಟಿಸುವನೋ ಹಾಗೆ ಕುಶಲರಾದ ಕರ್ಣಧಾರರಂತಿರುವ ಸುಶಿಕ್ಷಿತರು ಸಾಮಾನ್ಯ ಜನರಲ್ಲಿ ಕಾರ್ಯಾಸಕ್ತಿಯನ್ನುಂಟು ಮಾಡಿ ತನ್ಮೂಲಕ ದೇಶದ ಅಭಿವೃದ್ಧಿಯನ್ನು ಸಾಧಿಸುವರು. ಮೇಲೆ ತೋರಿಸಿರುವ ಹೊಟ್ಟೆ ಭತ್ತದ ಅಥವಾ ಉದ್ಯಾನದ ಇಲ್ಲವೆ ಈ ಹೊಗೆ ಬಂಡಿಯ ದೃಷ್ಟಾಂತಗಳನ್ನೇ ಬಿಟ್ಟು ಮಹಾಕವಿ ಕಾಲಿದಾಸನ "ನಕ್ಷತ್ರ ತಾರಾಗ್ರಹ ಸಂಕುಲಾಪಿ ಜ್ಯೋತಿಷ್ಮತೀ ಚಂದ್ರಮಸೈವ ರಾತ್ರಿಃ" ಈ ದೃಷ್ಟಾಂತದಿಂದ ಹೇಳುವುದಾದರೆ–ನಕ್ಷತ್ರಗಳೂ ತಾರೆಗಳೂ, ಗ್ರಹಗಳೂ ಯಥೇಷ್ಟ ಇದ್ದರೂ ರಾತ್ರಿಗೆ "ಜ್ಯೋತಿಷ್ಮತಿ–ಪ್ರಕಾಶವುಳ್ಳದ್ದು" ಎಂಬ ಹೆಸರು ಚಂದ್ರನಿಂದಲೇ ಹೇಗೆ ಬಂದಿರುವುದೋ ಹಾಗೆ ಸುಶಿಕ್ಷಿತರಿಂದಲೇ ವಿವಕ್ಷಿತ ಭೂಪ್ರದೇಶಕ್ಕೆ ಜನಾಂಗ, ದೇಶ ಕಿಂಬಹುನಾ ರಾಷ್ಟ್ರ ಮೊದಲಾದ ಹೆಸರುಗಳು ಬಂದಿರುವವು. ಇದಲ್ಲದೆ, ರಾಷ್ಟ್ರದ ಯಶಸ್ಸಾಗಲಿ, ಅಪಯಶಸ್ಸಾಗಲಿ ಸುಶಿಕ್ಷಿತರ ಕರ್ತೃತ್ವವೇ ಕಾರಣವಾ[illegible]ದೆಂಬುದಕ್ಕೆ ಇನ್ನೂ ಕೆಲವು ದೃಷ್ಟಾಂತಗಳನ್ನು ತೋರಿಸಬಹುದು. ಶಿಕ್ಷಣ, ಅನುಭವ, ಸಂಸ್ಕೃತಿ ಮುಂತಾದ ಯಾವ ಸಾಧನವೂ ಇಲ್ಲದ ಹಾಗು ಅದ್ಯಾಪಿಬಾಲ್ಯಾವಸ್ಥೆಯಲ್ಲಿ ಇದ್ದ ಕೆಲವು ಮಾನವ ಸಮಾಜಗಳನ್ನು ನಿರೀಕ್ಷಿಸಿದರೆ ಅವರ ಹೀನಸ್ಥಿತಿಯ ಪರಿಮಾರ್ಜನವು ಶಿಕ್ಷಣದ ಮತ್ತು ಶಿಕ್ಷಣವನ್ನು ಹೊಂದಿದ ಅನ್ಯೇ ಸಮಾಜಗಳೊಗಿನ ಸುಶಿಕ್ಷಿತರ ಹೊರತು ಆಗುವುದು ಅಶಕ್ಯವೆಂತ ಹೇಳಬೇಕಾಗುತ್ತದೆ. ಅಂತಹ ಗಾಢ ಅಜ್ಞಾನದಲ್ಲಿರುವ ಸಮಾಜದಲ್ಲಿ ಶಿಕ್ಷಣೆಯ ಸ್ವಲ್ಪ ಪ್ರಸಾರಣೆಯಾಗಲು ವಿದ್ಯೆಯ ಪುಷ್ಟಿಕಾರಕವಾದ ತಿಂಡಿಯನ್ನು ಸೇವಿಸಿದವರು ತಮ್ಮ ಸಮಾಜವನ್ನು ಬೇಗನೆ ಮುಂದಕ್ಕೆ ಕೊಂಡುಹೋಗುವರು. ಜಪಾನವು ೩೦ ವರ್ಷಗಳೊಳಗೆ ಶಿಕ್ಷಣದ ಬಲದಿಂದ ಎಷ್ಟು ಉನ್ನತಿಯನ್ನು ಹೊಂದಿದೆಂಬುದಕ್ಕೆ ಬೇರೆ ವಿವರಣೆಯು ಅಗತ್ಯವಿಲ್ಲ. ಪಾಶ್ಚಾತ್ಯ ಶಿಕ್ಷಣದ ವಿಶೇಷಗಳನ್ನರಿತು ಸುಶಿಕ್ಷಿತರಾದ ಜಪಾನಿಗಳು ಬೇರೆ ಬೇರೆ ದೇಶಗಳಿಗೆ ಹೋಗಿ ನವೀನ ವಿದ್ಯೆ, ನವೀನ ಕಲೆಗಳನ್ನು ಅಭ್ಯಾಸಿಸಿ ತಮ್ಮ ದೇಶಕ್ಕೆ ಉಚ್ಚಸ್ಥಿತಿಯನ್ನು ತಂದುಕೊಟ್ಟಿರುವರು. ಚೀನಾದೇಶದ ಏಳಿಗೆಯೂ ಕೂಡ ಸುಶಿಕ್ಷಿತರಿಂದಲೇ ಆಗುತ್ತಿದೆ. ಈ ಪ್ರಕಾರ ಸುಶಿಕ್ಷಿತರು ಯಶಸ್ಸಿಗೆ ಪಾತ್ರರಾಗುವಂತೆ ಅಪಯಶಸ್ಸಿಗೂ ಪಾತ್ರರಾಗುತ್ತಾರೆ. ಮೇಲಿನ ಸ್ಪಾರ್ಟದೇಶದ ಸುಶಿಕ್ಷಿತರು ತಮ್ಮ ದೇಶೋದ್ಧಾರಕ್ಕೆ ಅಪ್ರಯೋಜನವಾದ ಕಲ್ಪನೆಗಳನ್ನು ಕಟ್ಟಿಕೊಂಡು ಇಡೀ ದೇಶವನ್ನೇ ಸ್ಮೃತಿಶೇಷವಾಗಿ ಮಾಡಿದರು. ಈ ಮಾದರಿಯ ಅನೇಕ ಉದಾಹರಣೆಗಳು ಇತಿಹಾಸಜ್ಞರಿಗೆ ಗೊತ್ತಿವೆ. ಅಸ್ತು, ಸಾರಾಂಶವೇನೆಂದರೆ ನಾವು ಪ್ರಥಮದಲ್ಲಿಯೆ ಹೇಳಿದ್ದಂತೆ ಒಂದು ಜನಾಂಗದ ಏಳಿಗೆಯು ಆ ಜನಾಂಗದ ಸುಶಿಕ್ಷಿತರ ಮೇಲೆ ಹೊಂದಿಕೊಂಡಿರುತ್ತದೆ.

ಈ ಮೇಲಿನ ಉಪಪಾದನೆಯಿಂದ "ಜನಾಂಗದ ಏಳಿಗೆ" ಅಥವಾ "ರಾಷ್ಟ್ರದ ಅಭ್ಯುದಯ" ಈ ಜೋಡು ಮಾತುಗಳಲ್ಲಿ ಎಷ್ಟು ಅರ್ಥವು ಗರ್ಭಿತವಾಗಿದೆ, ಅಥವಾ ಈ ಮಾತುಗಳಿಂದ ಯಾವ ಯಾವ ಕಲ್ಪನೆಗಳು ಕಣ್ಣೆದುರು ನಿಲ್ಲುತ್ತವೆ,– ಇದು ವಾಚಕರಿಗೆ ಸಾಮಾನ್ಯ ಸ್ವರೂಪದಿಂದಾದರೂ ಗೊತ್ತಾಗಬಹುದು. ಸಾಮಾನ್ಯ ದೃಷ್ಟಿಯಿಂದ ವಿವೇಚಿಸಿದ ಈ ವಿಷಯವನ್ನೇ ನಮ್ಮ ಈ ಕರ್ನಾಟಕ ಪ್ರಾಂತದ–ಅದರಲ್ಲಿಯೂ ನಮ್ಮ ಕನ್ನಡ ಜಿಲ್ಲೆಯ ಸುಶಿಕ್ಷಿತರಿಗೆ ಅನ್ವಯಿಸಿ ನೋಡೋಣ. ಕಳೆದ ವರ್ಷದ ಒಂದು ಲೇಖದಲ್ಲಿ ನಾವು ಹೇಳಿದ್ದಂತೆ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಿಗೂ ನಮ್ಮ ಕರ್ನಾಟಕ ಪ್ರಾಂತಕ್ಕೂ ತುಲನೆ ಮಾಡಿದ್ದಲ್ಲಿ ಕರ್ನಾಟವು ಅನೇಕ ಸಂಗತಿಗಳಲ್ಲಿ ಬಹಳೇ ಹಿಂದಿರುವುದೆಂದು ಎಲ್ಲರೂ ಪ್ರಾಂಜಲತನದಿಂದ ಒಪ್ಪಿಕೊಳ್ಳಬೇಕಾದ ಸಂಗತಿಯು. ವಾಙ್ಮಯ, ವಿದ್ಯೆ, ಉದ್ಯೋಗ, ಕಲಾಕೌಶಲ್ಯ, ಸ್ವಧರ್ಮಸೇವೆ, ದೇಶಭಕ್ತಿ ಮುಂತಾದ ಹಲವು ಆವಶ್ಯಕ ಸಂಗತಿಗಳು ಕನ್ನಡಿಗರಲ್ಲಿ ಇನ್ನೂ ನೆಲೆಗೊಳ್ಳಲಿಲ್ಲ. ಈಗಿನ ನಮ್ಮ ಪರಿಸ್ಥಿತಿಯಲ್ಲಿ ಹಿಂದೂದೇಶದ ಪ್ರಾಮಾಣಿಕವಾದ ರಾಜಕೀಯ ಆಕಾಂಕ್ಷೆಯು ಯಾವುದು, ದೇಶೀಯ ವಾಙ್ಮಯ, ಉದ್ಯೋಗ ಮುಂತಾದವುಗಳ ಅಭಿವೃದ್ಧಿಯು ಯಾವ ಉಪಾಯದಿಂದ ಸಾಧ್ಯವಾಗುವುದು ಇಂತಹ ಅನೇಕ ಸಂಗತಿಗಳಲ್ಲಿ ಬೇರೆ ಬೇರೆ ಭಾಗದ ಸುಶಿಕ್ಷಿತರು ಯತ್ನ ಮಾಡುತ್ತಿರುವಲ್ಲಿ–ನಮ್ಮ ಕನ್ನಡಿಗರು ತಂತಮ್ಮ ವೈಯಕ್ತಿಕ ಹಿತಸಾಧನದಲ್ಲಿಯೆ ನಿಮಗ್ನರಾಗಿರುವರು. ಇದು ಕರ್ನಾಟಕದ ಸೌಭಾಗ್ಯವೇ? ಕನ್ನಡಿಗರಿಗೆ ಭೂಷಣಾಸ್ಪದವೇ? ದೇಶದ ಏಳಿಗೆಗೆ ಕಾರಣವೇ? ಅಥವಾ ವೈಯಕ್ತಿಕ ಹಿತಕ್ಕಾದರೂ ಹೇತುವೇ? ಅಲ್ಲ. ಅನ್ಯದೇಶಬಾಂಧವರು ದೇಶಹಿತಕ್ಕಾಗಿ ಕಷ್ಟ ಪಡುತ್ತಿರುವಾಗ ಅವರಿಗೆ ಯಾವ ಸಹಾಯವನ್ನೂ–ಪರಾಂಬರಿಸಿ ನೋಡಿದರೆ ಅನ್ಯರಿಗೆ ಸಹಾಯವಲ್ಲ, ತಮಗೇ ಸಹಾಯವನ್ನೂ–ಮಾಡದೆ ಇರುವದರಿಂದ–ಈ ಉದಾಸೀನ ಭಾವದಿಂದ ಕಿಂಬಹುನಾ ಮೂಕ ವೃತ್ತಿಯಿಂದ ದೇಶದ ಯಾವ ಉನ್ನತಿಯೂ ಆಗಲಾರದು. ಹೀಗಿರುವಲ್ಲಿ ಕನ್ನಡಿಗರು ತಮ್ಮ ಈ ಬಿರುದನ್ನು ಬಿಟ್ಟು ಬಿಡುವುದು ಎಷ್ಟು ಆವಶ್ಯಕವಿದೆ, ಮತ್ತು ಬೇರೆ ಪ್ರಾಂತದ ದೇಶಬಾಂಧವರ ಕೈ ಕೈಹಿಡಿದುಕೊಂಡು ಅವರ ಸಂಗಡಲೇ ಮುಂದರಿಸುವುದರಲ್ಲಿ ಇವರಿಗೆ ಎಷ್ಟು ಪ್ರಯೋಜನವಿದೆ? ಈ ವಿಷಯಗಳನ್ನೆಲ್ಲ ಕುರಿತು "ನಮ್ಮ ಪ್ರಾಂತದ ಸುಶಿಕ್ಷಿತರು" ಎಂಬೀ ಲೇಖ ಮಾಲೆಯಲ್ಲಿ ವಿವರಿಸಲು ಆಲೋಚಿಸಿದ್ದೇವೆ. ಜನಾಂಗದ ಶ್ರೇಯಸ್ಸಿಗೆ ಸುಶಿಕ್ಷಿತರು ಕಾರಣರು; ಆ ಸುಶಿಕ್ಷಿತರು ವಿದ್ಯೆ, ವಾಙ್ಮಯ, ಉದ್ಯೋಗ, ಕಲಾಕೌಶಲ್ಯ ಇತ್ಯಾದಿ ವಿಷಯಗಳಲ್ಲಿ ಕಾರ್ಯಾಸಕ್ತರಾಗಿರಬೇಕು. ಆದರೆ ನಮ್ಮ ಕನ್ನಡಿಗರು ಈ ಎಲ್ಲ ವಿಷಯಗಳಲ್ಲಿ ಹೇಗಿರುವರು! ಈ ಸಂಗತಿಯನ್ನು ಬರುವ ಲೇಖ[illegible]ದಲ್ಲಿ ಸಂಕ್ಷೇಪವಾಗಿ ತೋರಿಸಿ ಅನಂತರ ಯಾವ ಯಾವ [illegible] ಸಾಧಿಸಬೇಕೆಂಬುದನ್ನು ವಿವರಿಸುವೆವು. [illegible] ಕೆಲವು [illegible]

ನೋಡಿ "ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ" ಈ ನ್ಯಾಯದಿಂದ ಅನೇಕ ಸುಶಿಕ್ಷಿತರ ರೋಷಕ್ಕೆ ನಾವು ಪಾತ್ರರಾದೇವು. ಇದನ್ನೂ ಕೂಡ ನಾವು ತಿಳಿದೇ ಇದ್ದೇವೆ. ಆದರೆ ವರ್ತಮಾನ ಪತ್ರಕಾರರ ಕರ್ತವ್ಯವು ಯಾವುದೆಂಬುದನ್ನು ಸುಶಿಕ್ಷಿತರು ಮೊದಲು ನೋಡಬೇಕು. ಪತ್ರಕಾರರ ಕರ್ತವ್ಯವು ಬರೇ "ಬಾತಮಿ"ಗಳನ್ನೇ ಪ್ರಕಟಿಸುವುದಲ್ಲ, ಲಬ್ಧ ಪ್ರತಿಷ್ಠಿತರ ಚಿತ್ತಾನುರೋಧದಿಂದ ವರ್ತಿಸುವುದೂ ಅಲ್ಲ; ಅಥವಾ ಕೇವಲ ಲೋಕರಂಜನೆಯನ್ನೇ ಮಾಡುವುದೂ ಅಲ್ಲ. ಆದರೆ ದೇಶಹಿತಕ್ಕೆ ಬಾಧಕವಾದ ತಮ್ಮವರ ದೋಷಗಳನ್ನು ಬಹಿರಂಗಪಡಿಸುವುದೂ, ಲೋಕವು ತಕ್ಕ ಉತ್ತಮವಾದ ಮಾರ್ಗವನ್ನು ತೋರಿಸಿ ಕೊಡುವುದೂ ಹಾಗೂ ತಮ್ಮ ಪ್ರಾಮಾಣಿಕವಾದ ಮತಗಳನ್ನು ಪ್ರತಿಪಾದಿಸುವುದೂ ಅವರ ಪವಿತ್ರ ಕರ್ತವ್ಯವಾಗಿರುವುದರಿಂದ ನಮ್ಮ ಸುಶಿಕ್ಷಿತರ ರೋಷವನ್ನು ಗಣ್ಯಮಾಡದೆ ನಮಗೆ ಈ ಕರ್ತವ್ಯ ಮಾಡಬೇಕಾಗಿ ಬಂದಿದೆ. ಈ ವಿಷಯದಲ್ಲಿ ನಮ್ಮನ್ನು ಅವರು ಕ್ಷಮಿಸುವರೆಂದು ಆಶಿಸುತ್ತೇವೆ. ಇರಲಿ. ಈ ಹೊತ್ತು ಈ ಪ್ರಾಸ್ತಾವಿಕ ಲೇಖನವೇ ದೊಡ್ಡದಾದ ಕಾರಣ ಬರುವ ಸಂಚಿಕೆಯಿಂದ ಕ್ರಮೇಣ ಮೇಲಣ ಪ್ರಶ್ನೆಗಳನ್ನು ಚರ್ಚಿಸುವ.

ಮದ್ರಾಸ್ ಸಂಸ್ಥಾನದಲ್ಲಿ ಪ್ರೌಢ ವಿದ್ಯಾಭ್ಯಾಸ.

ಸೆಕೆಂಡರಿ ಶಾಲೆಗಳ ವಿಷಯವಾಗಿ ಕಳೆದ ಸಂಚಿಕೆಯಲ್ಲಿ ವಿವರಿಸಿರುವೆವು. ಕಾಲೇಜುಗಳ ಸ್ಥಿತಿಯೇನು ಎಂದು ನೋಡೋಣ.

ಕಾಲೇಜುಗಳ	1902-03	1906-07	1911-12	1914-15
ಸಂಖ್ಯೆ.	40	36	32	32

ಈ ೧೩ ವರ್ಷಗಳಲ್ಲಿ ೮ ಕಾಲೇಜುಗಳು ಅಳಿದು ಹೋದುವು. ಇದು ವಿದ್ಯಾಭ್ಯಾಸಕ್ಕೆ ತೊಡಕೆಂದು ನಾವು ಥಟ್ಟನೆ ಗ್ರಹಿಸುವೆವು. ಆದರೆ ವಿದ್ಯಾರ್ಥಿಗಳ ಸಂಖ್ಯೆ ನೋಡಿರಿ.

1902-03	1606-07	1911-12	1914-15
3779	4674	4922	8094

ಈ ಹದಿಮೂರು ವರ್ಷಗಳಲ್ಲಿ ಸಂಖ್ಯೆಯು ಇಮ್ಮಡಿಗೆ ಮಿಕ್ಕಿತು. ಅಳಿದು ಹೋದ ಕಾಲೇಜುಗಳಲ್ಲಿ ೭ ಮಿಶನ್ ಕಾಲೇಜುಗಳು, ಅವುಗಳಲ್ಲಿ ಯಫ್. ಎ. ವರೆಗೆ ಕಲಿಸುತ್ತಿದ್ದರು. ಈಗಿನ ಯೂನಿವರ್ಸಿಟಿಯ ಕ್ರಮಗಳ ಪ್ರಕಾರ ಅಗತ್ಯವಿರುವ ಖರ್ಚನ್ನು ಮಾಡಲಾರದೆ ಅವು ಹೈಸ್ಕೂಲು ಅಥವಾ ಸೆಕೆಂಡರಿ ಶಾಲೆಗಳಾದುವು. ಬಳ್ಳಾರಿಯಲ್ಲಿ ಮ್ಯೂನಿಸಿಪಾಲಿಟಿಯಲ್ಲಿದ್ದ ಎರಡನೆ ದರ್ಜೆ ಕಾಲೇಜು ಹೈಸ್ಕೂಲಾಯಿತು. ಆದರೆ ಈಗ ಅನಂತಪುರ ಜಿಲ್ಲೆಯಲ್ಲಿ ಸರಕಾರದವರು ಹೊಸ ಕಾಲೇಜನ್ನು ಎತ್ತಲೂ ಉಪಕ್ರಮಿಸಿರುವರು.

ಹೀಗೆ ಸರಕಾರದವರು ಶ್ರೀಮನ್ಮಹಾರಾಜರ ವಾಗ್ದತ್ತವನ್ನು ಭಕ್ತಿಪುರಸ್ಸರವಾಗಿ ಜಾರಿಗೆ ತರುವಂತೆ ಪ್ರಯತ್ನಿಸುತ್ತಿರುವಲ್ಲಿ ಆಕಾಲಿಕ ಯುದ್ಧವೊಂದು ತಲೆದೋರಿ ಸರಕಾರದ ಕೈಕಟ್ಟಿಸಿ ಹೋದಂತಾಗಿದೆ. ಆದರೂ ಮುಂದಿನ ಅಭಿವೃದ್ಧಿಯನ್ನು ದೃಷ್ಟಿಪಥದಲ್ಲಿಟ್ಟು ಕೆಲವು ಸೂಚನೆಗಳನ್ನು ಕೊಡುವೆವು.

ನಮ್ಮ ಪಶ್ಚಿಮ ಕರಾವಳಿಯಲ್ಲಿ ಮಂಗಳೂರಲ್ಲಿ ಮಾತ್ರ ಬಿ. ಎ. ವರೆಗೆ ಕಲಿಸುವ ಕಾಲೇಜು ಒಂದು ಇದೆ. ಮಿಕ್ಕವುಗಳಲ್ಲಿ ಇಂಟರ್‌ಮಿಡಿಯೆಟ್ ವರೆಗೆ ಮಾತ್ರ ಕಲಿಸುವರು. ಹೀಗಾಗಿ ಈ ಜಿಲ್ಲೆ ಮತ್ತು ಮಲೆಬಾರ್ ಜಿಲ್ಲೆಯವರು ಮದ್ರಾಸಿಗೆ ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಹೋಗಬೇಕಾಗುವುದು. ಇದರಿಂದ ಬಡವರಾದರೂ ಬುದ್ಧಿ ತೀಕ್ಷ್ಣತೆಯಿರುವ ಅನೇಕ ವಿದ್ಯಾರ್ಥಿಗಳಿಗೆ ಯೂನಿವರ್ಸಿಟಿಯ ಪ್ರಯೋಜನವೇ ದೊರಕುವುದಿಲ್ಲ. ಮಂಗಳೂರಿನಲ್ಲಿರುವ ವಿದ್ಯಾಲಯವು ಮಿಶ್ಯನ್ ಕಾಲೇಜು ಆಗಿದ್ದು ಬಿ. ಎ. ಪರೀಕ್ಷೆಗೆ ಇದ್ದ ಎಲ್ಲಾ ವಿಷಯಗಳನ್ನು ಕಲಿಸುವುದಿಲ್ಲ. ಹೀಗಾದ ಕಾರಣ ಪಶ್ಚಿಮ ತೀರದಲ್ಲಿ ಇನ್ನೊಂದು ಕಾಲೇಜು ಏರ್ಪಡಿಸುವುದು ಅತ್ಯಗತ್ಯ. ನೂತನವಾಗಿ ಒಂದನ್ನು ಏರ್ಪಡಿಸುವುದು ಸರಕಾರದವರಿಗೆ ಥಟ್ಟನೆ ಸಾಧ್ಯವಾಗಲಾರದು. ಆದರೆ ಮಂಗಳೂರಿನಲ್ಲಿ ಇರುವ ಗವರ್ನಮೆಂಟು ಕಾಲೇಜಿನಲ್ಲಿಯೇ ಬಿ. ಎ. ವರೆಗೆ ಕಲಿಸುವ ಏರ್ಪಾಡು ಮಾಡುವುದು ಅತ್ಯಗತ್ಯ. ದಕ್ಷಿಣ ಕನ್ನಡಕ್ಕಿಂತ ಮಲೆಬಾರು ದೊಡ್ಡ ಜಿಲ್ಲೆಯಾಗಿರುವುದರಿಂದ ಕಾಲೇಜನ್ನು ಅಲ್ಲಿ ಇರಗೊಡಿಸಬೇಕೆಂದು ಕೆಲವರು ವಾದಿಸಬಹುದು. ಈಗ ಮಂಗಳೂರ ಕಾಲೇಜಿನಲ್ಲಿ ಹೈಸ್ಕೂಲು ಡಿಪಾರ್ಟಮೆಂಟಿನಲ್ಲಿ ಹುಡುಗರ ಸಂಖ್ಯೆ ಬಹಳ ಕಡಿಮೆ. ಆ ದರ್ಜೆಗಳನ್ನು ತೆಗೆದು ಹಾಕಿ ಬಿ. ಎ. ಕ್ಲಾಸುಗಳನ್ನು ಏರ್ಪಡಿಸುವದಲ್ಲಿ ಸರಕಾರದವರಿಗೆ ಹೆಚ್ಚಿನ ಖರ್ಚು ತಗಲದು. ಸೆಂಟ್ ಎಲೊಯಿಸಿಯಸ್ ಕಾಲೇಜಿನಲ್ಲಿ ಕಲಿಸದ ವಿಷಯಗಳನ್ನು ಈ ಹೊಸ ಕಾಲೇಜಿನಲ್ಲಿ ಕಲಿಸಬಹುದು. ನೂತನ ಸೃಷ್ಟಿಯನ್ನು ಮಲೆಬಾರಿನಲ್ಲಿ ಮಾಡುವುದಕ್ಕೆ ಅಗತ್ಯವಿರುವ ಕಟ್ಟಡಗಳು ಅಲ್ಲಿ ಈಗಿನ ಕಾಲೇಜುಗಳಿಗೆ ಇಲ್ಲ. ಹೊಸ ಕಟ್ಟಡಗಳ ಖರ್ಚು ವಿಪರೀತವಾಗುವುದರಿಂದ ಈಗ ಸರಕಾರದವರಿಗೆ ಆ ವಿಷಯವು ಮನಸ್ಸಿಗೆ ಹತ್ತದು. ಈ ವಿಷಯದಲ್ಲಿ ಪ್ರಜಾಜನಗಳಲ್ಲಿ ಮುಖಂಡರು ಸರಕಾರದವರಿಗೆ ಮನವಿ ಮಾಡುವುದು ಅವರ ಕರ್ತವ್ಯ. ಮಂಗಳೂರಿನಲ್ಲಿ ಸಾಕಷ್ಟು ಸೆಕೆಂಡರಿ ಶಾಲೆಗಳಿರುವುದರಿಂದ ಗವರ್ನಮೆಂಟ ಕಾಲೇಜಿನ ಸೆಕೆಂಡರಿ ಡಿಪಾರ್ಟಮೆಂಟನ್ನು ತೆಗೆದು ಹಾಕಿದ್ದಲ್ಲಿ ಜನರಿಗೆ ಕಷ್ಟವಾಗಲಾರದು. ಯಾತಕ್ಕೆಂದರೆ ಈ ಡಿಪಾರ್ಟಮೆಂಟಿನಲ್ಲಿ ಫೀಸಿನ ದರವೂ ಹೆಚ್ಚು, ಬಡಮಕ್ಕಳಿಗೆ ಮಾಫಿಯ ಕ್ರಮವೂ ಇಲ್ಲ.

ದಕ್ಷಿಣ ಕನ್ನಡ ಮತ್ತು ಮಲೆಬಾರ ಜಿಲ್ಲೆಗಳ ಕಡೆಯಿಂದ ನ್ಯಾಯವಿಧಾಯಕ ಸಭೆಗೆ ಮೆಂಬರರು.

ಮ। ರಾ। ಕಾಸರಗೋಡು ಸದಾಶಿವ ಭಟ್ಟ್ ಬಿ. ಎ., ಬಿ. ಎಲ್. ಇವರು ದಕ್ಷಿಣ ಕನ್ನಡ ಮತ್ತು ಮಲೆಬಾರ ಜಿಲ್ಲೆಗಳ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಕಡೆಯಿಂದ ಉಮೇದ್ವಾರರಾಗಿ ನಿಂತಿರುವುದು ವಾಚಕರಿಗೆ ಈ ಮೊದಲೇ ಗೊತ್ತಿರುವುದು. ದಕ್ಷಿಣ ಕನ್ನಡ ಜಿಲ್ಲೆಯಿಂದ ಇವರಿಗೆ ಪ್ರೋತ್ಸಾಹ ದೊರಕುವುದು ಅತ್ಯಾಶ್ಚರ್ಯವಲ್ಲ. ಈಚೆಗೆ ಅವರು ಮಲೆಬಾರಿನಲ್ಲಿಯೂ ಸಂಚಾರ ಮಾಡಿ ಬಂದಾಗ ಅನೇಕಾನೇಕ ವೋಟರುಗಳು ಮಲೆಬಾರಿನಲ್ಲಿಯೂ ಇವರಿಗೆ ಸಹಾಯ ಮಾಡುತ್ತೇವೆಂದು ವಾಗ್ದತ್ತ ಮಾಡಿರುವುದನ್ನು ತಿಳಿಸುವುದಕ್ಕೆ ನಾವು ತುಂಬಾ ಸಂತೋಷಪಡುತ್ತೇವೆ. ನಮ್ಮ ಜಿಲ್ಲೆಯ ವಿನಂತಿಯನ್ನು ಈ ಸಲ ಮಲಬಾರಿನವರು ನಿಃಪಕ್ಷಪಾತ ಭಾವದಿಂದ ಅಂಗೀಕರಿಸಿದ್ದಕ್ಕೆ ನಾವು ಅವರಿಗೆ ಆಭಾರಿಯಾಗಿರುವೆವು.

ಚುನಾವಣೆಯ ತಾರೀಕು ಇನ್ನೂ ನಿಶ್ಚಯವಾಗಲಿಲ್ಲ; ಮತ್ತು ಬೇರೆ ಉಮೇದ್ವಾರರು ತಮ್ಮನ್ನು ಚುನಾಯಿಸಿಕೊಳ್ಳುವಂತೆ ಪ್ರಯತ್ನಮಾಡುತ್ತಲೇ ಇರುವುದಾದರೂ ಯೋಗ್ಯತಾಯೋಗ್ಯತೆಗಳನ್ನು ಪರಿಶೀಲಿಸಿದ್ದಲ್ಲಿ ಇತರರಿಗಿಂತ ರವಷ್ಟಾದರೂ ಕಡಿಮೆಯಿಲ್ಲದ ಮ। ರಾ। ಭಟ್ಟರಿಗೆ ಈ ಸಲ ಚುನಾವಣೆಯಾಗುವುದೆಂದು ನಮಗೆ ಭರವಸೆಯಿದೆ. ಕಾನೂನಿನ ಮಾಹಿತಿಯೂ, ವಿದ್ಯಾಬಲವೂ, ಯೌವನವೂ, ಉತ್ಸಾಹವೂ, ಲೋಕವ್ಯವಹಾರಜ್ಞಾನವೂ, ವಾಕ್ಪಟುತ್ವವೂ, ರಾಜವಿಶ್ವಾಸವೂ, ಪ್ರಜಾಪ್ರೇಮವೂ, ಅಸ್ವಾರ್ಥತೆಯೂ ಏಕಪ್ರಕಾರವಾಗಿ ಐಕ್ಯವಾಗಿರುವ ಮ। ರಾ। ಭಟ್ಟರನ್ನು ಚುನಾಯಿಸುವುದರಲ್ಲಿ ಮಲೆಬಾರಿನವರು ಮನೋದಾರ್ಢ್ಯವನ್ನು ತೋರ್ಪಡಿಸುವುದು ಒಂದು ವಿಚಿತ್ರ ವಿಷಯವಲ್ಲ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

Progress of Literature, Science and Art.

ಶ್ರೀಯುತ ರಾಯಬಹದ್ದೂರ್ ಶರಚ್ಚಂದ್ರದಾಸ ಸಿ. ಆಯ್. ಇ. ಯವರು ಎರಡಾವರ್ತಿ ತಿಬೇತು (Tibet) ದೇಶಕ್ಕೆ ಹೋಗಿ ಬಂದು ಆ ಭಾಷೆಯ ಒಂದು ಕೋಶವನ್ನು ಕೂಡ ಬರೆದು ಬಹು ಪ್ರಸಿದ್ಧರಾಗಿರುವರು. ಇವರಿಗೆ ಈಗ ೭೦ ವರ್ಷ ವಯಸ್ಸು ನಡೆಯುತ್ತಿದ್ದರೂ ಕೇವಲ ಯುವ್ವನಸ್ಥರಂತೆ ದೃಢಕಾಯರಾಗಿರುವರು. ಮಾನ್ಯರಾದ ಹಲವು ಜಪಾನೀ ಸದ್ಗೃಹಸ್ಥರ ಪ್ರಾರ್ಥನೆಯನ್ನು ಅಂಗೀಕರಿಸಿ ಈ ಮಹನೀಯರು ಜಪಾನ್ ದೇಶಕ್ಕೆ ಹೋಗಿ ಈಗ ತಾನೇ ತಿರಿಗಿ ಬಂದಿರುವರು. ಜಪಾನ್ ದೇಶದ ವಿಷಯವಾಗಿ ಅವರು ತಮ್ಮ ಅಭಿಪ್ರಾಯವನ್ನು ಈ ಕೆಳಗಿನಂತೆ ಕೊಟ್ಟಿರುವರು: "ನಾನು ಶ್ರೀಮಂತ ವರ್ಗದ ಎರಡು ಮನೆತನಗಳಲ್ಲಿ ಅತಿಥಿಯಾಗಿದ್ದೆನು. ಜಪಾನೀ ಜನರು ಪೂರ್ವದಂತೆಯೆ ಇಂದಿಗೂ ತಮ್ಮ ಜೀವನ ಕ್ರಮದ ವಿಷಯದಲ್ಲಿ ಸುಲಭರೂ ಪ್ರಾಚಪದ್ಧತಿಯನ್ನನುಸರಿಸುವವರೂ ಆಗಿರುವುದನ್ನು ನೋಡಿ ನನಗೆ ಪರಮಾಶ್ಚರ್ಯವುಂಟಾಯಿತು. ಯಾವ ಮನೆಯಲ್ಲಿಯೂ ಒಂದು ಕುರ್ಚಿಯಾಗಲಿ ಮೇಜಾಗಲಿ ಕಂಡುಬರುವುದಿಲ್ಲ. ಭಾರತೀಯರ ಮನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಸ್ತುಗಳೇ ಇಲ್ಲಿಯೂ ಕಂಡು ಬರುತ್ತಿವೆ. ಊಟ ಉಡಿಗೆಗಳ ವಿಷಯದಲ್ಲಿ ಅವರು ಅಪ್ಪಟ ರಾಷ್ಟ್ರೀಯರು. ಜಪಾನಿನಲ್ಲಿ ಗೋಮಾಂಸ ಸೇವನೆಯಿಲ್ಲ. ಅಲ್ಲಿನ ದನಗಳು ತಿಬೇತಿನ ಯಾಕ್ (Yak)ಗಳನ್ನು ಬಹುಶಃ ಹೋಲುವವುಗಳಾಗಿವೆ. ಈ ಜನರು ಮೀನನ್ನೂ ತರಕಾರಿಯನ್ನೂ ತಿನ್ನುವರು. ಚೀನೀ ಜನರಿಗೂ ಇವರಿಗೂ ಸ್ವಚ್ಛತೆ ವಿಷಯದಲ್ಲಿ ಬಹಳ ಹೆಚ್ಚು ಕಡಿಮೆ ಇದೆ. ಜಪಾನೀ ಜನರು ನಮ್ಮ

ವು ಪಾಶ್ಚಿಮಾತ್ಯರನ್ನು ಕೂಡಾ ನಾಚಿಸತಕ್ಕದಾಗಿದೆ. ದೇಶದಲ್ಲಿ ಎಲ್ಲಿ ನೋಡಿರೂ ಕೊಳೆಯೆಂಬುದೇ ಕಾಣಿಸದು. ಇನ್ನೊಂದು ವಿಶೇಷವೇನೆಂದರೆ, ಈ ದೇಶದಲ್ಲಿ ವ್ಯಾಪಾರದ ಜೀನಸುಗಳಿಗೆ ಖಂಡಿತವಾಗಿ ಒಂದೇ ಬೆಲೆ ಹೇಳುವರು; ಕಸಾಕಸಿಯಿಂದ ಕಡಿಮೆಮಾಡುವುದೆಂದಿಲ್ಲ. ಇಲ್ಲಿಯ ಮತಾಚಾರ್ಯರುಗಳು ಮತವಿಷಯಗಳಲ್ಲಿ ಉದಾರ ಮನಸ್ಕರು; ಹಿಂದೂಸ್ಥಾನದ ಅಥವಾ ತಿಬೇತಿನ ಮತಾಚಾರ್ಯರಂತಲ್ಲ. ಈ ಮತಾಚಾರ್ಯರು ಗೃಹಸ್ಥಾಶ್ರಮಿಗಳು, ಬ್ರಹ್ಮಚಾರಿಗಳಲ್ಲ. ಜಪಾನೀ ಸ್ತ್ರೀಯರು ಬಹು ವಿನಯಸಂಪನ್ನೆಯರಾದರೂ ಅದು ಕೃತಕವಿನಯವಲ್ಲ. ಜಪಾನಿನ ಜನರು ಸಂಸ್ಕೃತಿಯ ವಿಷಯದಲ್ಲಿ ತುಂಬ ಉನ್ನತಸ್ಥಾನದಲ್ಲಿರುವರು, ಸಭ್ಯತನದ ಮತ್ತು ಪರರನ್ನು ಮರ್ಯಾದೆಯಿಂದ ಕಾಣುವ ವಿಷಯದಲ್ಲಿ ಇವರು ಅಸಮಾನರೇ ಎನ್ನಬಹುದು. ನಮ್ಮ ಭಾರತ ವರ್ಷದ ಕುಲವಧುಗಳು ಇಂಥ ಅಜ್ಞಾನದೆಶೆಯಲ್ಲಿರುವುದನ್ನೂ ಅವರ ಉನ್ನತಿಗಾಗಿ ನಾವು ಹೆಚ್ಚು ಪ್ರಯತ್ನ ಪಡದಿರುವುದನ್ನೂ ಕೇಳಿ ಅವರಲ್ಲಿ ದೊಡ್ಡ ಮನುಷ್ಯರನೇಕರು ಆಶ್ಚರ್ಯಪಟ್ಟರು. ಜಾತಿಜಾತಿಗಳೊಳಗೆ ಐಕ್ಯಮತವಿಲ್ಲವೆಂದೂ ಜಾತಿಕ್ರಮವೇ ನಿಂದ್ಯವೆಂದೂ ಅವರು ಆಕ್ಷೇಪಿಸಿದರು."

• • •

ಕ್ಯಾನ್ಸರ್ (Cancer) ಎಂಬ ಮಹಾ ವ್ರಣಚಿಕಿತ್ಸೆಯಲ್ಲಿ ಪ್ರವೀಣರೆಂದು ಪ್ರಸಿದ್ಧರಾದ ಡಾಕ್ಟರ್ ಬೆಲ್ (Bell) ಎಂಬುವರು ಶಾಕಾಹಾರಪಕ್ಷವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಗ್ರೇಟ್ ಬ್ರಿಟನಿನಲ್ಲಿ ಈ ವ್ಯಾಧಿಯು ಪ್ರಬಲವಾಗುವುದಕ್ಕೆ ಮಾಂಸಾಹಾರವೇ ಕಾರಣವೆಂದೂ, ಆ ದೇಶದಲ್ಲಿ ಕಳೆದ ನಲವತ್ತೈದು ವರ್ಷಗಳಲ್ಲಿ ಈ ರೋಗದ ಪ್ರಮಾಣವು ಒಂದಕ್ಕೆ ಮೂರರಂತೆ ಹೆಚ್ಚಿರುವುದೆಂದೂ, ಅಲ್ಲಿ ಪ್ರತಿ ವರ್ಷವೂ ಮೂವತ್ತು ಸಾವಿರ ಜನರು ಈ ರೋಗದಿಂದ ಸಾಯುವರೆಂದೂ, ನಲವತ್ತಯಿದು ವರ್ಷಕ್ಕೆ ಹಿಂದೆ ತಲೆಗೆ ಐದು ರಾತಲಿನಂತೆ ಮಾಂಸವು (Chilled meat) ಪರದೇಶಗಳಿಂದ ಇಂಗ್ಲಂಡಿಗೆ ಬರುತ್ತಿದ್ದದು ಈಗ ತಲೆಗೆ ಅರುವತ್ತು ಪೌಂಡಿನಂತೆ ಬರುತ್ತಿರುವುದೆಂದೂ, ಆಹಾರವನ್ನು ಬೇಯಿಸಿ ತಿನ್ನುವುದು ಮನುಷ್ಯಪ್ರಾಣಿಗೆ ಮಾತ್ರ ವಿಶೇಷವೆಂದೂ ಅದು ಸ್ವಭಾವಿಕವಲ್ಲವೆಂದೂ ಈ ವಿದ್ವಾಂಸರು ಹೇಳುತ್ತಿದ್ದಾರೆ.

• • •

ಪಂಜಾಬಿಗೆ ಸೇರಿದ ತಕ್ಷಶಿಲಾ ಎಂಬ ಪ್ರಾಚೀನ ನಗರಿಯಲ್ಲಿ ಬಹು ವಿಶೇಷವಾದ ಒಂದು ಪುರಾತನ ನಿಕ್ಷೇಪವು 'ಆರ್ಕಿಯಾಲಜಿ'ಯ ಇಲಾಖೆಯವರಿಂದ ಇತ್ತಲಾಗೆ ಕಂಡುಹಿಡಿಯಲಾಗಿದೆ. ಆ ನಿಕ್ಷೇಪವು ಒಂದು ಕರಡಿಗೆಯಾಗಿದ್ದು ಅದರಲ್ಲಿ ಎಲುಬುಗಳಿವೆ ಮತ್ತು ಆ ಎಲುಬುಗಳು ಭಗವಾನ್ ಬುದ್ಧದೇವನವೆಂಬ ಲೇಖನಗಳು ಆ ಕರಡಿಗೆಯ ಮೇಲೆ ಕೊರೆಯಲ್ಪಟ್ಟಿರುವವು. ಹೀಗೆ ಭಾರತ ವರ್ಷದಲ್ಲಿ ಕಂಡುಹಿಡಿಯಲಾದ ಇಂಥ ನಿಕ್ಷೇಪಗಳೊಳಗೆ ಇದು ಮೂರನೆಯದು. ಮೊದಲನೆಯದು ನೇಪಾಳ ರಾಜ್ಯದ ಸೀಮಾಂತದಲ್ಲಿ ಕೆಲವು ವರ್ಷಗಳಿಗೆ ಹಿಂದೆ ಸಿಕ್ಕಿದ್ದಿತು. ಎರಡನೆಯದು ಇತ್ತಲಾಗೆ ಪೇಷಾವರದ ಬಳಿಯಲ್ಲಿ ದೊರೆತಿದ್ದಿತು. ಈ ಎಲುಬುಗಳು ನಿಜವಾಗಿ ಬುದ್ಧನವೆಯೋ ಹೇಗೆಂಬ ವಿಷಯದಲ್ಲಿ ಪಂಡಿತರೊಳಗೆ ಸಂದೇಹವಿದ್ದೇ ಇರುವುದಾದರೂ, ಇಂಥ ಎಲುಬುಗಳು ಬೇರೆ ಬೇರೆ ಮೂರು ಕಡೆಗಳಲ್ಲಿ ದೊರೆತವೆಂಬ ಒಂದೇ ವಿಷಯವು ಅವುಗಳ ನಿಜತ್ವವನ್ನು ಖಂಡಿಸಲು ಸಾಕಾಗಿರುವುದಿಲ್ಲ. ಏಕೆಂದರೆ ಬುದ್ಧ ಪ್ರಭುವಿನ ದಹನಾನಂತರದಲ್ಲಿ ಆತನ ಎಲುಬುಗಳು ಆತನ ಶಿಷ್ಯಮಂಡಲಿಗೆ ಹಂಚಿಕೊಡಲಾದುವೆಂದೂ ಅವನ್ನವರು ಬೇರೆಬೇರೆ ಕಡೆಗಳಿಗೊಯ್ದು ಬಹು ಜತನದಿಂದ ಕಾಪಾಡಿಯಿಟ್ಟು ಕೊನೆಗೆ ಭಕ್ತಿಪುರಸ್ಸರವಾಗಿ ಭೂಮಿಯಲ್ಲಿ ಹೂತಿಟ್ಟರೆಂದೂ ಬುದ್ಧ ಚರಿತ್ರೆಯಲ್ಲಿಯೇ ಹೇಳಿದೆ. ಸರ್ ಜಾನ್ ಮಾರ್ಷಲ್ (Sir John Marshal) ರವರು ಇನ್ನು ಹಲವು ವಸ್ತುಗಳನ್ನು ತಕ್ಷಶಿಲೆಯಲ್ಲಿ ಕಂಡುಹಿಡಿದಿರುವರೆಂದು ತಿಳಿಯಬರುತ್ತಿದೆಯಾದರೂ ಅದೇನೆಂದು ಇದುವರೆಗೆ ಪ್ರಕಟವಾಗಿ ತಿಳಿದು ಬಂದಿಲ್ಲ.

ಒಂದು ಸೂಚನೆ.

ಕಾಸರಗೋಡಿನ ನಮ್ಮೊಬ್ಬ "ಬಾತಮೀದಾರ"ರಿಂದ ನಮಗೆ ಒಂದು ಪತ್ರವು ಬಂದಿದೆ. ಆ ಪತ್ರವನ್ನು ನೋಡುವಾಗ ಕಂಡುಬರುವದೇನೆಂದರೆ—ಹೈಸ್ಕೂಲಿನ ಮತ್ತು ಕೊಲೇಜಿನ ವಿದ್ಯಾಭ್ಯಾಸಕ್ಕಾಗಿ ಬೇರೆ ಬೇರೆ ಹಳ್ಳಿಗಳಿಂದ ಬಂದಿರುವ ಅಪ್ರಾಯಸ್ಥ ಮತ್ತು ಪ್ರಾಯಸ್ಥರಾದ ಯುವಕರಿಗೆ ಕಾಫಿ, ಚಾ, ಲಡ್ಡು ಮುಂತಾದ ಮೋಹಕ ಪೇಯ ಮತ್ತು ತಿಂಡಿಗಳನ್ನು ಕೊಟ್ಟು ಅವರನ್ನು "ವ್ಯಭಿಚಾರಾ"ದಿ ದುರ್ಮಾರ್ಗಗಳಲ್ಲಿ ಪ್ರವೇಶಿಸಿ, ಆ ದುರ್ವ್ಯಸನಗಳಿಗೆ ಬೇಕಾದ ರೂಪಾಯಿಗಳನ್ನು ಕೊಟ್ಟು ಅವರಿಂದ ಡಿಮಾಂಡ ನೋಟು ಮುಂತಾದ್ದನ್ನು ಬರಿಸಿಕೊಳ್ಳುವಂಥ ಒಂದು ಗುಪ್ತವಾದ ಮಂಡಳಿಯು ಈ ಪಟ್ಟಣದ ಮಧ್ಯದಲ್ಲಿರುತ್ತದೆ. ಈ ವರೆಗೆ ಈ ಗುಪ್ತ ಮಂಡಳಿಯು ಇಂತ ತರುಣ ಹುಡುಗರಿಂದ ಸಾವಿರಾರು ರೂಪಾಯಿಗಳ ಎಷ್ಟೋ ನೋಟುಗಳನ್ನು ಬರಿಸಿಕೊಂಡಿದೆಂತ "ಬಾತಮಿ" ಪತ್ರದಿಂದ ತಿಳಿಯುತ್ತೇವೆ. ಬಾತಮಿದಾರರು ಹೇಳುವ ಈ ಸಂಗತಿಯು ನಿಜವಾದದ್ದಾದರೆ ನಮ್ಮ ಸರಕಾರದವರ ಕೈಯಲ್ಲಿರುವ ಬಹುಚಾಣಾಕ್ಷರಾದ ಪೋಲಿಸರು ಈ ಮಂಡಲಿಯನ್ನು ಬೇಗನೆ ಬಹಿರಂಗಪಡಿಸಿ ಅವರವರ ಕರ್ಮಕ್ಕೆ ತಕ್ಕದಾದ ಫಲವು ಅವರಿಗೆ ಸಿಗುವಂತೆ ಮಾಡುವರೆಂದು ನಾವು ನಂಬುತ್ತೇವೆ. ಇನ್ನು ಇಂಥ ಹುಡುಗರ ಪಾಲಕರು ಈ ವಿಷಯದಲ್ಲಿ ಜಾಗ್ರತೆಯನ್ನು ತಕ್ಕೊಂಡು ಪೋಲಿಸರಿಗೆ ಸಹಾಯ ಮಾಡಿದರೆ ಇಂಥ ಕೆಲಸಗಳು ಬಹು ಸುಲಭದಿಂದ ಸಾಧ್ಯವಾದಾವೆಂತ ನಮ್ಮ ಸೂಚನೆಯು.

ಪತ್ರವ್ಯವಹಾರ.

ಹೋಳಿ ಅಂದರೇನು?

ಅಯ್ಯಾ ಪತ್ರಕರ್ತರೇ,

ಈ ಮೇಲಿನ ವಿಷಯದ ಕುರಿತು ನಾನು ಎಷ್ಟೋ ವಿಚಾರಣೆ ಮಾಡಿದರೂ ಇದರ ನಿಜ ಸಂಗತಿ ತಿಳಿಯಲಸಾಧ್ಯವಾಯಿತು. ಸಾಮಾನ್ಯವಾಗಿ ವಾಡಿಕೆಯಿಂದ ಹಿಂದುಗಳೂ ಯೆಹೂದ್ಯರೂ ಆಚರಿಸಿಕೊಂಡು ಬರುವ ಈ ಹೋಳಿ ಹಬ್ಬದ ಸಂಬಂಧ ಹಲವರು ಅನೇಕ ವಿಧದಿಂದ ಆಡಿಕೊಳ್ಳುತ್ತಾರೆ. ಕೆಲವರು ಇದು "ದೇವಕಾರ್ಯಾರ್ಥ ಹೋಗಿ ತ್ರ್ಯಂಬಕನಿಂದ ದಹಿಸಲ್ಪಟ್ಟ ಕಾಮನ ಸ್ಮರಣಾರ್ಥ" ಆಗಿರುತ್ತದೆಂತಲೂ, ಇನ್ನು ಕೆಲವರು "ಹಿರಣ್ಯಾಕ್ಷನು ತನ್ನ ತಂಗಿಯ ಮೂಲಕ ವೈಷ್ಣವಾಗ್ರಗಣ್ಯ ಪ್ರಹ್ಲಾದನನ್ನು ಸುಟ್ಟುಬಿಡಬೇಕೆಂತ ಮಾಡಿದ ಯತ್ನವು ದೈವೇಚ್ಛೆಯಿಂದ ಪ್ರತಿಕೂಲವಾಗಿ ಅವಳನ್ನೇ ಸುಟ್ಟುಬಿಟ್ಟದ್ದರಿಂದ ಅವಳ ಜ್ಞಾಪಕಾರ್ಥ ಪ್ರಹ್ಲಾದನಿಂದ ಈ ಉತ್ಸವವು ರೂಢಿಯಾಗಿ ಆಚರಿಸಲ್ಪಡುತ್ತ ಬಂದದ್ದಾಗಿರುತ್ತದೆ ಎಂತಲೂ, ಮತ್ತೆ ಕೆಲವರು "ಆದಿಯಲ್ಲಿ ಅಪ್ಸರ ಸ್ತ್ರೀಯೊಬ್ಬಳು ಪರಮೇಶ್ವರನ ಶಾಪದಿಂದ ದಹಿಸಲ್ಪಡಲಾಗಿ ಕನಿಕರಪಟ್ಟ ಪರಮೇಶ್ವರನು ಅವಳನ್ನು ಪುನಃ ಸೃಷ್ಟಿಸಿ, ಪ್ರತ್ಯಕ್ಷನಾಗಿದ್ದೇನೆ, ವರವನ್ನು ಬೇಡಿಕೊಳ್ಳು ಎನಲು ಹೇ ಪ್ರಭೋ! ವರವನ್ನು ಹೊಂದಲು ನಾನು ಅರ್ಹಳಾಗಿದ್ದರೆ ಸರ್ವಶಕ್ತ ಪರಮೇಶ್ವರನಾದ ತಮ್ಮ ಶಾಪದಿಂದ ಅಬಲೆಯಾದ ನಾನು ದಹಿಸಲ್ಪಟ್ಟ ಈ ದಿನವನ್ನು ಲೋಕದ ಜನರು ಪರಂಪರೆಯಾಗಿ ಆಚರಿಸಿಕೊಂಡು ಬರುವಂತೆ ವರವನ್ನು ದಯಪಾಲಿಸಬೇಕು" ಎಂಬದಾಗಿ ಬೇಡಿಕೊಂಡದ್ದರಿಂದ ಎಂತಲೂ ಈ ಪ್ರಕಾರ ಅನೇಕರು ಅನೇಕ ವಿಧದಲ್ಲಿ ಆಡಿಕೊಳ್ಳುತ್ತಲಿರುತ್ತಾರೆ. ಇದರ ನಿಜವಾದ ಕಾರಣವನ್ನು ಗೊತ್ತುಮಾಡಲಾಗುವದಿಲ್ಲವಾದರೂ ಈ ಮೇಲಿನ ಯಾವುದೋ ಒಂದು ಕಾರಣದಿಂದ ಹಿಂದೂ ಜನರು ಆಚರಿಸಿಕೊಂಡು ಬರುವ ಈ ಹಬ್ಬವನ್ನು ಯೆಹೂದ್ಯರು ಆಚರಿಸಲು ಕಾರಣವೇನು? ಇದರ ನಿಜವಾದ ಕಾರಣಕ್ಕೆ ತಾವು ಅಥವಾ ತಮ್ಮ ವಾಚಕ ಮಹಾಶಯರು ಈ ಪತ್ರಮೂಲಕ ತಿಳಿಯಪಡಿಸಿದ್ದಲ್ಲಿ ಮಹೋಪಕಾರವಾಗುವದು.

ವೈ. ಕೆ.

ಅಪರೂಪ! ಸಂದರ್ಭ!!

ಮಾರಾಟಕ್ಕೆ ಇವೆ.

1. ಗಾಡಿಗೂ ಟ್ರಿನ್ಸಿಟ್ ಯಾನೆ ಟೊಂಗಾಗಳಿಗೂ ಕಟ್ಟಲಿಕ್ಕೆ ಅಭ್ಯಾಸ ಮಾಡಲ್ಪಟ್ಟ ಮೈಸೂರಿನ ಒಂದು ಜೋಡು ಒಳ್ಳೇ ಎತ್ತುಗಳು.

ಕ್ರಯ ರೂ. 260—0—0.

2. ಕುದುರೆಗಳನ್ನೂ ಎತ್ತುಗಳನ್ನೂ ಕಟ್ಟಲಿಕ್ಕೆ ಅನುಕೂಲವಾದ ನಾಲ್ಕು ಚಕ್ರಗಳ ಟ್ರಿನ್ಸಿಟ್ ಯಾನೆ ಟೊಂಗಾಗಾಡಿ ಒಂದು.

ಕ್ರಯ ರೂ. 110—0—0.

3. ಸಾಧಾರಣ ಹೊಸದಾಗಿರುವ ಕಾಲಿನಿಂದ ಕೆಲಸಮಾಡುವ 'ಸಿಂಗರ್' ಹೊಲಿಯುವ ಯಂತ್ರ ಒಂದು.

ಕ್ರಯ ರೂ. 70—0—0.

ನೋಟ್:—ಈ ಮೇಲಿನ ಸಾಮಾನುಗಳನ್ನು ಕೆಳಗೆ ಕಾಣಿಸಿದ ಕಡೆಯಲ್ಲಿ ನೋಡಿಕೊಳ್ಳಬಹುದು.

ಸಿ. ಎ. ಮೆಕೆನ್ಸಿ,
ರೈಲ್ವೆ ಪಿ. ಡಬ್ಲ್ಯು ಇನ್ಸ್‌ಪೆಕ್ಟರ್,
ಮಂಗಳೂರು.

WANTED.

A trained teacher for Kaliyur Elementry School in Kasargod Range on a salary of Rs. 10/ per month as a start.

Apply— **To the Manager,**
Kaliyur Elementary School,
MANJESHWAR P. O.

ಯುದ್ಧ ಸಮಾಚಾರ.

ತಾ. ೨೧ನೇ ಮಾರ್ಚಿ.

ಅಡ್ರಿಯಾಟಿಕ್ ಸಮುದ್ರದಲ್ಲಿ ಶತ್ರುಗಳ ಜಲಾಂತರ್ಗಾಮಿ ನಾವೆಯು ಫ್ರೆಂಚರ "ರೆನಾಡಿನ್" ಎಂಬ ಡಿಸ್ಟ್ರೋಯರ್ ನಾವೆಯನ್ನು ಮುಣುಗಿಸಿರುತ್ತದೆ. ೪ ಆಫೀಸರರೂ ೪೪ ಸೇನಿಕರೂ ಕಾಣೆಯಾಗಿರುವರು. ೩ ಆಫೀಸರರೂ ೩೪ ಸೇನಿಕರೂ ರಕ್ಷಿಸಲ್ಪಟ್ಟಿರುವರು ಎಂತ ಫ್ರೆಂಚಸರಕಾರದವರು ಪ್ರಕಟಿಸಿರುತ್ತಾರೆ.

ರೈವ್ಸಿನ ಉತ್ತರದಲ್ಲಿ ಫ್ರೆಂಚರು ಶತ್ರುಗಳ ಕಂದಕಗಳನ್ನು ಕೆಡವುಹಾಕಿರುವರು. ವೆರ್ಡನಿನ ಉತ್ತರದಲ್ಲಿ ಶತ್ರುಗಳ ಫಿರಂಗಿಗಳ ಹಾರಾಟವು ಕಡಿಮೆಯಾಗಿದೆ. ಆದಿತ್ಯವಾರ ಶತ್ರುಗಳು ನುಗ್ಗಿ ಹೋಗಿ ಕದನಮಾಡಿ ಹಿಮ್ಮೆಟ್ಟಿದರು. ಸೆಂಟ್‌ಮಿಚಯೇಲಿನ ಸಮೀಪ ಇರುವ ಶತ್ರುಗಳ ಕೋಟೆಗಳ ಮೇಲೆ ಫ್ರೆಂಚರ ತೋಪುಗಳು ಗುಂಡುಹಾರಿಸುತ್ತಲಿವೆ.

ಮುಲನ್‌ಕೋರ್ಟಿನ ದಕ್ಷಿಣದಲ್ಲಿ ಶತ್ರುಗಳು ಬಹಳ ಕಠಿಣ ರೀತಿಯಿಂದ ಫಿರಂಗಿಗಳನ್ನು ಹಾರಿಸಿ, ನಂತರ ಪೂರ್ವದಿಕ್ಕಿಯಲ್ಲಿ ಗುಂಡುಹಾರಿಸಿ ಪೂರ್ಣವಾಗಿ ಸೋತುಹೋದರು. ಮಿತ್ರರ ವಾಯುನಾವೆಗಳು ಜಬ್ರುಗೆಯ ಮೇಲೆ ಹಲ್ಲೆಮಾಡಿದವು. ಫ್ರೆಂಚರ ೯ ವಾಯುನಾವೆಗಳು ಇದರಲ್ಲಿ ಪಾಲು ತೆಗೆದುಕೊಂಡಿದ್ದವು. ...ಸ್ಟೆಂಡಿನ ೬ ಮೈಲು ಪೂರ್ವದಲ್ಲಿರುವ ಶತ್ರುಗಳ ವಾಯುನಾವೆಗಳ ಸೆಡ್ಡಿಗೆ ಇವುಗಳು ಬೊಂಬುಹಾಕಿರುತ್ತವೆ. ಎಲ್ಲಾ ವಾಯುನಾವೆಗಳು ಸುರಕ್ಷಿತವಾಗಿ ಹಿಂದೆರಳಿರುವವು.

ತಾ. ೨೨ನೇ ಮಾರ್ಚಿ.

ಬ್ರಿಟಿಷರ "ಪೋರ್ಟಡಾಲ್‌ಹೌಸಿ" ಮತ್ತು ನೋರ್ವೆದೇಶದ "ಲಿಂಗೆಲ್ಲಿ" ಎಂಬ ಹಡಗಗಳು ಮುಣುಗಿಸಲ್ಪಟ್ಟಿರುವವು. "ಡಾಲ್‌ಹೌಸಿ" ಹಡಗದ ೬ ಮತ್ತು "ಲಿಂಗೆಲ್ಲಿ" ಹಡಗದ ೧೬ ಮಂದಿ ಹತಶೇಷರು ದಡಸೇರಿರುವರು. ಡಚ್ಚರ "ಸ್ಟೂಸ್‌ಬರ್ಗ" ಹಡಗವು ಮುಣುಗಿಸಲ್ಪಟ್ಟಿರುವದು. ೪ ಮಂದಿ ಮುಣುಗಿರುವರು.

ಲೂಸ್, ವೈಪ್ರೆಸಿನ ಬಳಿ ತೋಪುಕಾಳಗಗಳು ನಡೆಯುತ್ತಿವೆ. ನ್ಯೂಸಿಂಗೆಯ ಬಳಿ ಶತ್ರುಗಳು ಮುಂದರಿದರು. ಆದರೆ ನಮ್ಮವರು ಕೂಡಲೇ ನುಗ್ಗಿಹೋಗಿ ಶತ್ರುಗಳನ್ನು ಓಡಿಸಿದರು.

ಅರ್ಗೋನ್ನೆಯಲ್ಲಿ ಫ್ರೆಂಚರು ಶತ್ರುಗಳ ಕಂದಕಗಳನ್ನು ಒಡೆಮುಹಾಕಿರುವರು. ಮ್ಯೂಸಿನ ಪಶ್ಚಿಮದಲ್ಲಿ ಶತ್ರುಗಳು ದೊಡ್ಡ ದೊಡ್ಡ ಸಿಡಿಮದ್ದುಗಳನ್ನು ಹಾಕಿ ಮುಂದೆ ನುಗ್ಗಲು ಪ್ರಯತ್ನಿಸಿದರು. ಹೊಸ ಹೊಸ ಸೇನೆಗಳನ್ನು ತಂದೊಡ್ಡಿ ಬೆಂಕಿಯ ರಸವನ್ನು ಚೆಲ್ಲಿದರು. ಆದರೆ ಫ್ರೆಂಚರ ಕಾಲಾಳುಸೇನಿಕರೂ ಯಂತ್ರಚಾಲಿತ ಫಿರಂಗಿಗಳೂ ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಹಿಂದಕ್ಕೆ ಓಡಿಸಿದವು.

ರುಷ್ಯನರು ಎರ್ಜರಮಿನಿಂದ ೭೦ ಮೈಲು ಪಶ್ಚಿಮಕ್ಕೆ ಮುಂದರಿಸಿ ಹೋಗಿರುವರು.

ತಾ. ೧೬ರಲ್ಲು ತುರ್ಕರು ಏಡೆನಿಗೆ ೧೦ ಮೈಲು ದೂರದಲ್ಲಿರುವ ಇಮಾದ್ ಎಂಬಲ್ಲಿ ಹಲ್ಲಾಮಾಡಿ ಹಿಮ್ಮೆಟ್ಟಿದರು. ಬ್ರಿಟಿಷ ಸೇನಿಕರು ೪ ಮೈಲುಗಳ ವರೆಗೆ ಅವರನ್ನು ಅಟ್ಟಿಕೊಂಡುಹೋದರು. ಶತ್ರುಗಳಲ್ಲಿ ೧೭ ಮಂದಿ ಸತ್ತುಬಿದ್ದರು. ಬ್ರಿಟಿಷರಲ್ಲಿ ಒಬ್ಬನು ಹತನಾಗಿರುವನು. ೧೭ ಮಂದಿ ಗಾಯಬಡೆದಿರುವರು.

ತಾ. ೨೩ನೇ ಮಾರ್ಚಿ.

ಬ್ರಿಟಿಷರ ೪ ಡಿಸ್ಟ್ರೋಯರ್ ನಾವೆಗಳು ಬೆಲ್ಜಿಯಮ್ ಕರಾವಳಿಯಲ್ಲಿ ಜರ್ಮನರ ೪ ಡಿಸ್ಟ್ರೋಯರ್ ನಾವೆಗಳನ್ನು ಕಂಡು ಅವುಗಳ ಮೇಲೆ ತೋಪು ಹಾರಿಸಿದವು. ಅವುಗಳು ಕೂಡಲೇ ಜೀಬ್ರುಗ್ಗೆಗೆ ಓಡಿಹೋದವು. ಜರ್ಮನರ ೩ ಡಿಸ್ಟ್ರೋಯರ್ ನಾವೆಗಳಿಗೆ ನಮ್ಮವರು ಹಾರಿಸಿದ ಗುಂಡು ಹೋಗಿ ಬಿದ್ದಿರುತ್ತವೆ. ನಮ್ಮವರ ಹಡಗದ ೪ ಮಂದಿಗೆ ಗಾಯವಾಗಿದೆ.

ಜರ್ಮನರು ಎವೋಕೋರ್ಟು ಮತ್ತು ಮೆಲನ್‌ಕೋರ್ಟಿನಲ್ಲಿ ಎಡೆಬಿಡದೆ ದೊಡ್ಡ ಗುಂಡುಗಳನ್ನು ಹಾರಿಸಿದರು, ಉರಿಯುವ ಬೆಂಕಿದ್ರಾವಕವನ್ನು ಸುರಿಸಿದರು. ಫ್ರೆಂಚರು ಹಾರಿಸಿದ ತೋಪುಗಳಿಂದ ಶತ್ರುಸೇನೆಯಲ್ಲಿ ಬಹಳ ನಷ್ಟವಾದರೂ ಶತ್ರುಗಳು ಹೆಜ್ಜೆ ಹೆಜ್ಜೆ ಮುಂದರಿದು ಮ್ಯಾಲನ್‌ಕೋರ್ಟು ಅಡವಿಯ ಒಂದು ಭಾಗವಾದ ಬ್ಲೋಸ್ ಡಿ ಅವಕೋರ್ಟು ಎಂಬ ಸ್ಥಳವನ್ನು ಹಿಡಿದರು. ವೆರ್ಡನ್ ಪ್ರಾಂತ್ಯದಲ್ಲಿ ಈ ದಿನ ಬಹಳ ಶಾಂತವಾಗಿದೆ. ಚೆಂಪೆನ್ನಿಯಲ್ಲಿ ಮೇಲ್ಬಾಯಿದ ಶತ್ರುಗಳು ಕೂಡಲೇ ಹಿಮ್ಮೆಟ್ಟಿರುವರು. ಮ್ಯೂಸಿನ ಎಡದಡದ ಮೆಲನ್‌ಕೋರ್ಟಿನ ಆಚುಬಾಜಿನಲ್ಲಿ ಕಠಿಣ ತೋಪುಕಾಳಗ ನಡಿಯುತ್ತಿದೆ.

ವೆರ್ಡನಿನಲ್ಲಿ ಜರ್ಮನರು ನುಗ್ಗಿಹೋಗಿ ಮಾಡಿದ ಕದನದಲ್ಲಿ ಜರ್ಮನರು ಪೂರ್ಣವಾಗಿ ಹತಬಡಿಯಲ್ಪಟ್ಟಿದ್ದಾರೆಂತ ವರ್ತಮಾನ ಪತ್ರಿಕೆಗಳು ಹೇಳುತ್ತಿವೆ.

ಗೆಲೀಸಿಯ ರಣರಂಗದಲ್ಲಿ ರುಷ್ಯನರ ಜನರಲ್ ಇವನೊಫರವರು ಫೆಬ್ರುವರಿ ತಿಂಗಳಲ್ಲಿ ಜೆನೋವಿಡ್ಡಿಗೆ ೩೫ ಮೈಲು ಉತ್ತರದಲ್ಲಿರುವ ಅಸ್ಸಿಜ್ಯವನ್ನು ತಕ್ಕೊಂಡು ಈಗ ಒಂದು ಪ್ರಾಮುಖ್ಯ ಸೇತುವೆಯನ್ನು ಹಿಡಿದಿರುತ್ತಾರೆ. ಜೆನೋವಿಡ್ಡಿಗೆ ಸುಮಾರು ೧೦ ಮೈಲು ದೂರದಲ್ಲಿ ನಡೆದ ಕದನದಲ್ಲಿ ಶತ್ರುಗಳಿಗೆ ಬಹಳ ನಷ್ಟವಾಗಿದೆ.

ರುಷ್ಯನರು ಪರ್ಶಿಯಾದಲ್ಲಿ ಇಸ್ಪಹಾನನ್ನು ಸ್ವಾಧೀನಮಾಡಿಕೊಂಡಿರುವರು.

ತಾ. ೨೪ನೇ ಮಾರ್ಚಿ.

ಮ್ಯೂಸಿನ ಪಶ್ಚಿಮದಲ್ಲಿ ಶತ್ರುಗಳು ದಿನವೆಲ್ಲಾ ತೋಪುಗಳನ್ನು ಹಾರಿಸಿ ಎವೋಕೋರ್ಟು ಅಡವಿ ಮತ್ತು ಎವೋಕೋರ್ಟಿನಲ್ಲಿ ಕೆಲವುಸಾರಿ ಮೇಲ್ಬಾಯಿದರು. ಆದರೆ ಎವೋಕೋರ್ಟು ಅಡವಿಯಿಂದ ಫ್ರೆಂಚರನ್ನು ಓಡಿಸಲು ಮಾಡಿದ ಶತ್ರುಗಳ ಪ್ರಯತ್ನವನ್ನು ಫ್ರೆಂಚರ ತೋಪುಗಳ ಮತ್ತು ಕಾಲಾಳುಸೇನಿಕರ ಗುಂಡಿನಮಳೆಯು ತಡೆಹಿಡಿಯಿತು.

ಶತ್ರುಗಳು ಕಳೆದ ರಾತ್ರಿ ಸಿಡಿಮದ್ದಿನ ೩ ಗಣಿಗಳನ್ನು ಹಾರಿಸಿದರು. ಆದರೆ ಪ್ರಾಣಾಪಾಯವಾಗಲಿಲ್ಲ.

ಜೀಬ್ರುಗ್ಗೆಯ ಮೇಲೆ ನಮ್ಮವರ ವಾಯುನಾವೆಗಳು ಮಾಡಿದ ದಾಳಿಯಿಂದ ವಿಶೇಷ ಅನಾಹುತ ಸಂಭವಿಸಿರುವದೆಂತ ತಿಳಿದುಬಂದದೆ.

ರುಷ್ಯಾ ರಣರಂಗದಲ್ಲೆಲ್ಲಾ ಕಾಳಗವು ನಡಿಯುತ್ತಿದೆ. ಜಾಕೊಬ್‌ಸ್ಟಡ್‌ನ ಸಮೀಪ ರುಷ್ಯನರು ೩ ಅಡವಿಗಳನ್ನೂ ನಿಸಿಕ್‌ನ ದಕ್ಷಿಣದಲ್ಲಿ ಕಂದಕಗಳ ಸಾಲನ್ನೂ ಹಿಡಕೊಂಡಿರುವರು. ನಿಸಿಕ್ ಮತ್ತು ವಿಲ್ನಾದ ಮಧ್ಯೆ ಇರುವ ಪೋಸ್ತವೆಯಲ್ಲಿ ಕಠಿಣಕಾಳಗ ನಡಿಯುತ್ತಿದೆ. ಕಂದಕಗಳನ್ನು ಪುನಃ ಪಡಿಯಲು ಯತ್ನಿಸಿದ ಶತ್ರುಗಳು ಸಫಲಹೊಂದಲಿಲ್ಲ.

ನಾರೊಕ್ ಸರೋವರದ ಬಳಿ ನಡೆದ ಕದನಗಳಲ್ಲಿಯೂ ರುಷ್ಯನರಿಗೆ ಜಯವಾಗಿರುವದು. ಇಲ್ಲಿ ಜರ್ಮನರು ವಿಷಗಾಳಿ ಪ್ರಯೋಗಿಸಿ ಕಠಿಣವಾಗಿ ಹೋರಾಡಿದರೂ ರುಷ್ಯನರು ೧೦೦೦ ಕ್ಕಿಂತಲೂ ಹೆಚ್ಚಿನ ಸೇನಿಕರನ್ನೂ ೧೩ ಯಂತ್ರಚಾಲಿತ ಫಿರಂಗಿಗಳನ್ನೂ ಇತರ ಯುದ್ಧಸಾಮಗ್ರಿಗಳನ್ನೂ ಸೆರೆಹಿಡಿದಿರುವರು.

ತಾ. ೨೫ನೇ ಮಾರ್ಚಿ.

ಮ್ಯೂಸಿನ ಪಶ್ಚಿಮದಲ್ಲಿ ಶತ್ರುಗಳ ತೋಪುಗಳ ಹೊಡತವು ಸ್ವಲ್ಪ ಕಡಿಮೆಯಾಗಿದೆ.

ರಿಗ್ಗಾ ಪ್ರಾಂತ್ಯದಲ್ಲಿ ರುಷ್ಯನರಿಗೂ ಶತ್ರುಗಳಿಗೂ ಕಠಿಣ ಕಾಳಗ ನಡಿಯುತ್ತಿದೆ. ರುಷ್ಯನರು ಜಯಪ್ರದರಾಗಿ ಮುಂದರಿದು ಜಾಕೊಬಸ್ಟಡ್ಟ್ ಎಂಬಲ್ಲಿ ಶತ್ರುಗಳ ನೆಲೆಯನ್ನು ಹಾಳುಪಡಿಸಿರುವರು. ಕಠಿಣ ಕಾಳಗ ನಡಿಯುತ್ತದೆ.

ತಾ. ೨೬ನೇ ಮಾರ್ಚಿ.

ಬ್ರಿಟಿಷರ ವಾಯುನಾವೆಗಳು ಜರ್ಮನರ ಕರಾವಳಿಯ ಶೆಲಿಸ್ ವಿಗ್-ಹೊಲಿಸ್ಟಿನ್ ಎಂಬ ಸ್ಥಳದ ಮೇಲೆ ಬೊಂಬುಗಳನ್ನು ಹಾಕಿರುತ್ತವೆ.

"ಇಂಗ್ಲಿಷ್ ಮೇನ್" ಎಂಬ ಹಡಗವು ಶತ್ರುಗಳ ಜಲಾಂತರ್ಗಾಮಿ ನಾವೆಗೆ ತುತ್ತಾಗಿರುವದು. ಈ ವರೆಗೆ ೬೮ ಹತಶೇಷರು ದಡಸೇರಿರುವರು.

ಬ್ರಿಟಿಷರ "ಫಲ್‌ಮರ್" ಮತ್ತು "ಹಿಲ್ಡಿಯ" ಎಂಬ ಹಡಗಗಳೂ ಡಚ್ಚರ "ಕ್ರಿಸ್ಟಿಯನ್‌ಸೇಂಡ್" ಎಂಬ ಹಡಗವೂ ಮುಣುಗಿಸಲ್ಪಟ್ಟವೆ. ಬ್ರಿಟಿಷರ "ಫೆನೆಟ್ರಿಡ್" ಎಂಬ ಹಡಗವೂ ಮುಣುಗಿಸಲ್ಪಟ್ಟಿರುವದು.

ಬ್ರಿಟಿಷರ ಕ್ರೋಸ್ ಚೆನಲ್ ಸ್ಟೀಮರು "ಸಸೆಕ್ಸ್" ಎಂಬ ಹಡಗವು ನಿನ್ನೆಯ ದಿನ ಮುಣುಗಿಸಲ್ಪಟ್ಟಿರುವದು. ಈ ಹಡಗದಲ್ಲಿ ಹಿಂದುಸ್ಥಾನಕ್ಕೆ ಮತ್ತು ವಸಾಹತುಗಳಿಗೆ ಬರುವ ಟಪ್ಪಾಲು ಇತ್ತು. ೩೫೦ ಪ್ರಯಾಣಿಕರಿದ್ದರು. ಪ್ರಯಾಣಿಕರಲ್ಲಿ ಸುಮಾರು ೫೦ ಮಂದಿ ಹತರಾಗಿರುವರು. ಉಳಿದವರು ರಕ್ಷಿಸಲ್ಪಟ್ಟಿರುವರು. ಈ ಹಡಗದಲ್ಲಿ ೨೫ ಅಮೇರಿಕದ ಪ್ರಯಾಣಿಕರಿದ್ದರು. ಈ ಪೈಕಿ ೮ ಮಂದಿ ಕಾಣೆಯಾಗಿರುವರು. ಕೆಲವರನ್ನು ಆಸ್ಪತ್ರೆಗೆ ಕೊಂಡುಹೋಗಿರುವರು.

ಫ್ರಾನ್ಸ್ ರಣರಂಗದಲ್ಲಿ ಈ ದಿನ ವಿಶೇಷ ಕದನಗಳೇನೂ ನಡೆದಿರುವದಿಲ್ಲ.

ರುಶ್ಯಾ ರಣರಂಗದ ಜಾಕೊಬ್‌ಸ್ಟಾಡ್ಟ ಎಂಬಲ್ಲಿ ರುಷ್ಯನರು ಶತ್ರುಗಳನ್ನು ಸೋಲಿಸಿರುವರು. ನಾರ್ಗನೆಕ್ ಸರೋವರದ ಬಳಿ ರುಷ್ಯನರು ನುಗ್ಗಿಹೋಗಿ ಕದನಮಾಡುತ್ತಿರುವರು. ವಿಡ್ಜಿ ಮತ್ತು ಶಿಲ್ಪ ಎಂಬಲ್ಲಿ ಸನೀನುಕಾಳಗ ನಡೆದಿರುವದು. ಶತ್ರುಗಳು ವಿಶೇಷ ಗುಂಡಿನ ಮಳೆಯನ್ನು ಸುರಿಸಿದರೂ ಶತ್ರುಗಳು ಬಲವಾಯಿಸಿಕೊಂಡ ಸ್ಥಳಗಳ ಮೇಲೆ ರುಷ್ಯನರು ಹಲ್ಲಾಮಾಡಿ ಶತ್ರುಗಳನ್ನು ಹಿಂದಕ್ಕೆ ಓಡಿಸಿದರು. ನಾರೊಚ್ ಸರೋವರದ ಬಳಿ ರುಷ್ಯನರು ಶತ್ರುಗಳ ೧೩೭೪ ಸೇನಿಕರನ್ನೂ ೧೮ ಫಿರಂಗಿಗಳನ್ನೂ ೪ ಮೋರ್ಟರ್‌ಗಳನ್ನೂ ಹಿಡಿದಿರುತ್ತಾರೆ.

ವಿ. ಕಾವ್ಕೋ ಡಿಸ್ಟ್ರಿಕ್ಟಿನಲ್ಲಿ ನುಗ್ಗಿಬಂದ ಶತ್ರುಗಳನ್ನು ರುಷ್ಯನರು ಓಡಿಸಿರುತ್ತಾರೆ. ನಿಸಿಕಿನ ಪಶ್ಚಿಮದಲ್ಲಿ ಶತ್ರುಗಳ ಕಂದಕಗಳು ರುಷ್ಯನರಿಗೆ ದೊರಕಿರುತ್ತವೆ. ಮೊಸ್ಟಾವಿ ಮತ್ತು ನಾರೊಚ್ ಸರೋವರದ ಪ್ರಾಂತ್ಯಗಳಲ್ಲಿ ಕಠಿಣ ಕಾಳಗ ನಡಿಯುತ್ತಿದೆ.

ಪೂರ್ವ ಆಫ್ರಿಕದಲ್ಲಿ ಬ್ರಿಟಿಷರಿಗೆ ಕಿಲಮಂಜಾರೋ ಮತ್ತು ಅರೂಶ ಪ್ರಾಂತ್ಯಗಳು ದೊರಕಿರುತ್ತವೆ.

ಬಾಲ್ಕಾನಿನಲ್ಲಿ ಜರ್ಮನರು ಡೊಯಿರಾನ್ ಪ್ರಾಂತ್ಯದಲ್ಲಿ ಕದನಕ್ಕೆ ನಿಂತಿರುವರು. ಫ್ರೆಂಚರು ಜರ್ಮನರ ಅಭಿಯೋಗವನ್ನು ಎದುರಾಯಿಸುತ್ತಲಿದ್ದಾರೆ.

ಕೌಕಾಸಸಿನಲ್ಲಿ ರುಷ್ಯನರು ಮುಂದರಿಯುತ್ತಿದ್ದಾರೆ.

ತಾ. ೨೭ನೇ ಮಾರ್ಚಿ.

"ಸಸೆಕ್ಸ್" ಹಡಗದಲ್ಲಿದ್ದ ಪ್ರಯಾಣಿಕರಲ್ಲಿ ೧೦೦ ಮಂದಿ ಹತರಾದರೆಂತ ತಿಳಿದು ಬರುತ್ತದೆ. ಅಮೇರಿಕದ ಪ್ರೊಫೆಸರ್ ಕಾಲ್ಡ್‌ವಿನ್‌ರವರೂ ಅವರ ಪತ್ನಿಯವರೂ ಹತರಾದವರ ಪಟ್ಟಿಯಲ್ಲಿ ಸೇರಿರುವರು.

ಬ್ರಿಟಿಷರ "ಸಿಸಿಲಿಯನ್" ಮತ್ತು "ಮಿನ್ನೆಪೊಲಿಸ್" ಎಂಬ ಹಡಗಗಳು ಶತ್ರುಗಳ ಜಲಾಂತರ್ಗಾಮಿ ನಾವೆಗೆ ತುತ್ತಾಗಿರುವವು.

ಬಾಲ್ಕಾನಿನಲ್ಲಿ ಬಲ್ಗೇರಿಯರ ಆಯುಧಸಾಮಗ್ರಿಗಳ ಒಂದು ದೊಡ್ಡ ಕೋಠಡಿಯನ್ನು ಮಿತ್ರಸೇನಿಕರು ಹಾರಿಸಿರುವರು. ಗ್ರೀಕ ಪ್ರಾಂತ್ಯದಲ್ಲಿದ್ದ ಎಲ್ಲಾ ಶತ್ರುಜನಗಳನ್ನು ಫ್ರೆಂಚರು ಹೊರಗೆ ಓಡಿಸಿರುವರು.

ಉತ್ತರ ಹಿಂದೂಸ್ಥಾನ.

ಭಾರತೀಯ ಹೆಂಗಸರ ಬಗ್ಗೆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶದಿಂದ ಪೂನೆಯ ಪಂಡಿತ ಕಾರ್ವೆಯವರು ಮದ್ರಾಸ್ ಸಂಸ್ಥಾನದ ಆಯಾ ಸ್ಥಳಗಳನ್ನು ಸಂದರ್ಶಿಸಿ ಈಗ ತಾನೇ ಉತ್ತರ ಹಿಂದೂಸ್ಥಾನದ ಕಲ್ಕತ್ತಾ, ಲಾಹೋರು ಮೊದಲಾದ ಸ್ಥಳಗಳಲ್ಲಿ ಸಂದರ್ಶಿಸುತ್ತಲಿರುವರು. ಅಲ್ಲಿಯೂ ಅವರ ಈ ಮಹಾಕಾರ್ಯಕ್ಕೆ ಬೇಕಾದ ಉತ್ತೇಜನ ದೊರಕಿರುವದು.

ಮೊಗಲ್‌ಸಾರಿ ಮತ್ತು ಒಕ್ಸರಿಸ್ಟೇಶನುಗಳ ಮಧ್ಯ ಡಿಲ್ಲಿ ಹೌರ ಎಕ್ಸ್‌ಪ್ರೆಸ್‌ಟ್ರೇನ್ ಮತ್ತು ಗೂಡ್ಸುಟ್ರೇನ ಒಂದಕ್ಕೊಂದು ತಗಲಿ ದೊಡ್ಡ ಅವಗಡವು ಸಂಭವಿಸಿರುವದೆಂತ ವಾರ್ತೆ ಬಂದದೆ. ಕೆಲವು ಪ್ರಯಾಣಿಕರಿಗೆ ವಿಶೇಷ ಜಖಂ ಆಗಿರುವದು. ಎಕ್ಸ್‌ಪ್ರೆಸ್ ಟ್ರೇನಿನ ಡ್ರೈವರರೂ ಗೂಡ್ಸುಟ್ರೇನಿನ ಗಾರ್ಡನೂ ಮೃತರಾದರು ಎಂತ ಅವಗಡದ ಹತಶೇಷರು ಹೇಳುವರು. ಈ ಟ್ರೇನಿನ ಮೂರು ನಾಲ್ಕು ಗಾಡಿಗಳು ಪುಡಿ ಪುಡಿಯಾಗಿರುವವು. ಮಿ| ಎಸ್. ಸಿಕ್ಕರವರು ಈ ಗಾಡಿಯಲ್ಲಿ ಇದ್ದರು. ಅ

ದೈವವಶಾತ್ ಅವರಿಗೆ ಏನೊಂದೂ ಅಪಾಯ ಸಂಭವಿಸಲಿಲ್ಲ.

"ಆಲ್ ಇಂಡಿಯಾ ಹಿಂದೂ ಸನಾತನ ಧರ್ಮ ಕನ್ಫರೆನ್ಸ್" ಎಂಬ ಸಭೆಯು ದರ್ಭಂಗ ಮಹಾರಾಜರ ಅಧ್ಯಕ್ಷತೆಯಲ್ಲಿ ಮುತ್ರಾದಲ್ಲಿ ಇದೇ ತಾ ೨೦ರಲ್ಲಿ ಕೂಡಿಬಂದಿರುತ್ತದೆ ಹಿಂದೂಸ್ಥಾನದ ಆಯಾ ಪ್ರಾಂತ್ಯಗಳಿಂದ ಬಹಳ ಮಂದಿ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು.

ಮುಂಬಾಯಿ ಸಂಸ್ಥಾನದಲ್ಲಿರುವ ಮರಾಠಿ ಜನರೊಳಗೆ ವಿದ್ಯಾಭ್ಯಾಸವನ್ನು ಹರಡಿಸುವ ಬಗ್ಗೆ ಗ್ವಾಲಿಯೋರಿನ ಮಹಾರಾಜರವರು ರೂ ೧೦೦,೦೦೦ ವಂತಿಗೆ ಕೊಟ್ಟಿರುವರು

ಡಿಲ್ಲಿಯಲ್ಲಿ ಸ್ಥಾಪಿಸೋಣಾದ ಲೇಡಿ ಹಾರ್ಡಿಂಜ ವೈದ್ಯಕಾಲೇಜಿನ ಬಗ್ಗೆ ಹಣಸಹಾಯ ಮಾಡಬೇಕೆಂದು ಮುಂಬಾಯಿಯ ಗವರ್ನರರ ಪತ್ನಿಯಾದ ಲೇಡಿ ವಿಲಿಂಗ್ಡನರವರು ಮಾಡಿಕೊಂಡ ವಿಜ್ಞಾಪನೆಯ ಮೂಲಕ ಮುಂಬಯಿಯಲ್ಲಿ ೭ ಲಕ್ಷ ರೂಪಾಯಿ ಕೂಡಿರುವವು

ಮಾರ್ಚಿ ತಾ ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೦,೧೫೮ ಮಂದಿಗೆ ಪ್ಲೇಗಬೇನೆಯು ಸೋಂಕಿ ೮೫೨೦ ಮಂದಿ ಮೃತರಾದರು ಈ ಪೈಕಿ ಡಿಲ್ಲಿ ೬, ಮುಂಬಾಯಿ ಮತ್ತು ಸಿಂಧು ೧೧೭೮, ಮದ್ರಾಸ್ ೧೧೩, ಬಂಗಾಳ ೪, ಬಿಹಾರ್ ಮತ್ತು ಒರಿಸ್ಸ ೧೭೮೮, ಸಂಯುಕ್ತ ಸಂಸ್ಥಾನ ೨೭೬೬, ಪಂಜಾಬು ೧೮೬೬ ಬರ್ಮ ೬೧೦, ಮಧ್ಯಸಂಸ್ಥಾನ ೬೫೫, ಮೈಸೂರು ೪೦, ಹೈದರಾಬಾದ್ ೧೪೫೭, ಮಧ್ಯ ಹಿಂದೂಸ್ಥಾನ ೬೩ ಮರಣಗಳಾಗಿರುವವು

ವೈಸರಾಯ್ ಹಾರ್ಡಿಂಜಪ್ರಭುಗಳವರ ಸ್ಮಾರಕವನ್ನು ಮಾಡುವ ಬಗ್ಗೆ ಡಿಲ್ಲಿಯಲ್ಲಿ ಒಂದು ಫಂಡು ತೆರೆಯಲಾಗಿರುವದು ಈ ಫಂಡಿಗೆ ಈಗಲೇ ಅರ್ಧ ಲಕ್ಷ ರೂಪಾಯಿ ವಂತಿಗೆಯು ವಾಗ್ದಾನವಾಗಿದೆ ಇನ್ನೂ ಹೆಚ್ಚು ರೂಪಾಯಿ ಕೂಡಲಿಕ್ಕಿದೆ

ವೈಸರಾಯ ಹಾರ್ಡಿಂಜ ಪ್ರಭುಗಳವರು ಹಿಂದೂಸ್ಥಾನದಲ್ಲಿ ಮಾಡಿದ ಕೆಲಸವನ್ನು ಮಾನ್ಯಮಾಡಿ ಜೋರ್ಜ ಚಕ್ರವರ್ತಿಯವರು ಅವರಿಗೆ ನೈಟ್ ಆವ್ ದಿ ಗಾರ್ಟರ್ ಎಂಬ ಬಿರುದು ಕೊಟ್ಟಿರುತ್ತಾರೆ

ಹಿಂದೂಸ್ಥಾನಕ್ಕೆ ವೈಸರಾಯರಾಗಿ ನೇಮಿಸಲ್ಪಟ್ಟ ಚೆಮ್ಸಫರ್ಡ ಪ್ರಭುಗಳವರು ಎಪ್ರೀಲ್ ತಾ ೬ರಲ್ಲಿ ಡಿಲ್ಲಿಗೆ ತಲಪುವರು.

ಇದೇ ತಾ ೨೪ರಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರು ವೈಸರಾಯ ಪ್ರಭುಗಳವರಿಗೆ ಸ್ವಸ್ತಿ ವಚನವನ್ನು ಕೊಡುವ ಬಗ್ಗೆ ಪ್ರಭುಗಳವರನ್ನು ಗಾರ್ಡನ್ ಪಾರ್ಟಿಗೆ ಆಮಂತ್ರಿಸಿದ್ದರು ಮಾನ್ಯ ಸುರೇಂದ್ರನಾಥ ಬೆನರ್ಜಿಯವರು ವೈಸರಾಯ ಪ್ರಭುಗಳವರು ಹಿಂದೂಸ್ಥಾನದ ಒಳ್ಳಿತನ್ನು ಚಿಂತಿಸಿ ಮಾಡಿದ ಕಾರ್ಯವನ್ನು ಹೊಗಳಿ ಸ್ವಸ್ತಿ ವಚನವನ್ನು ನುಡಿದರು ವೈಸರಾಯ ಪ್ರಭುಗಳವರು ಸ್ವಸ್ತಿ ವಚನಕ್ಕೆ ಉಪಕಾರಸ್ಮರಣೆಯನ್ನು ಮಾಡಿ ಅರ್ಥಗರ್ಭಿತವಾದ ಭಾಷಣವನ್ನು ಮಾಡಿದ್ದರು. ಅನಂತರ ಅಯೋಧ್ಯೆಯ ತಾಲೂಕುದಾರರೂ, ಡಿಲ್ಲಿ ಮುನ್ಸಿಪಾಲಿಟಿಯವರೂ ವೈಸರಾಯ ಪ್ರಭುಗಳವರಿಗೆ ಬಹುಮಾನ ಪತ್ರವನ್ನು ಓದಿದರು. ಈ ಬಹುಮಾನ ಪತ್ರಗಳಿಗೂ ವೈಸರಾಯ ಪ್ರಭುಗಳವರು ಕಾಲೋಚಿತ ಉತ್ತರಗಳನ್ನು ದಯಪಾಲಿಸಿರುವರು

ಡಿಲ್ಲಿಯಲ್ಲಿ ಹೆಂಗಸರ ಬಗ್ಗೆ ಸ್ಥಾಪಿಸಲ್ಪಟ್ಟ ಲೇಡಿ ಹಾರ್ಡಿಂಜರ ಮೆಡಿಕಲ್ ಕಾಲೇಜಿನ ಪ್ರತಿಷ್ಠೆಯ ದಿನ ವೈಸರಾಯ ಪ್ರಭುಗಳವರು ಮಾಡಿಕೊಂಡ ವಿಜ್ಞಾಪನೆಯಿಂದ ಒಂದೇ ತಿಂಗಳಲ್ಲಿ ೫ ಲಕ್ಷ ರೂಪಾಯಿಗಿಂತಲೂ ಹೆಚ್ಚಿಗೆ ವಂತಿಗೆ ವಾಗ್ದಾನವಾಗಿರುತ್ತದೆ ವಿದ್ಯಾರ್ಥಿ ವೇತನಗಳನ್ನು ಕೊಡುವ ಕೆಲವು ವಾಗ್ದಾನಗಳೂ ಆಗಿರುತ್ತವೆ

ಭಾರತೀಯ ಕವಿಶ್ರೇಷ್ಠರೆಂದು ಹೆಸರು ಪಡೆದ ಮಿಸೆಸ್ ಸರೋಜಿನಿ ನ್ಯಾಡುರವರು ಕಠಿಣ ಅಸ್ವಸ್ಥದಲ್ಲಿರುವರು.

ಹಾರ್ಡಿಂಜ ಪ್ರಭುಗಳವರು ಎಪ್ರೀಲ್ ತಾ ೧ರಲ್ಲಿ ಮುಂಬಾಯಿಗೆ ಬಂದು ತಲಪುವರು ಮರುದಿನ "ಬೊಂಬೆ ಚೇಂಬರ್ ಆವ್ ಕಮ್ಮರ್ಸ್" ಮತ್ತು "ಇಂಡಿಯನ್ ಮರ್ಚೆಂಟ್ಸ್ ಚೇಂಬರ್" ಎಂಬ ವಾಣಿಜ್ಯ ಸಂಘಗಳವರು ಸರಕಾರ ಮಂದಿರದಲ್ಲಿ ಹಾರ್ಡಿಂಜ ಪ್ರಭುಗಳವರಿಗೆ ಬಹುಮಾನ ಪತ್ರವನ್ನು ಓದುವರು ಮಧ್ಯಾನ್ಹದನಂತರ ಬೊಂಬಾಯಿ ಯುನಿವರ್ಸಿಟಿಯವರು ವೈಸರಾಯ ಪ್ರಭುಗಳವರಿಗೆ ಎಲ್ ಎಲ್ ಡಿಗ್ರಿಯನ್ನು ಕೊಡುವರು ಅನಂತರ ಗಾರ್ಡನ್ ಪಾರ್ಟಿ ನಡೆಯುವದು ಗಾರ್ಡನ್ ಪಾರ್ಟಿ ಕಾಲ ಮುಂಬಾಯಿ ಪಟ್ಟಣಿಗರ ಮತ್ತು ಮುಂಬಯಿ ಸಂಸ್ಥಾನದ ಆಯಾ ಜಿಲ್ಲೆಗಳ ಪರವಾಗಿ ಬಹುಮಾನ ಪತ್ರಗಳನ್ನು ಪ್ರಭುಗಳವರು ಸ್ವೀಕರಿಸುವರು

ಹೊಸ ವೈಸರಾಯ ಚೇಮ್ಸಫರ್ಡ ಪ್ರಭುಗಳವರು "ಕೈಸರ್ ಇ ಹಿಂದ್" ಹಡಗದಲ್ಲಿ ತಾ ೩ನೇ ಮಂಗಳವಾರ ಬೆಳಿಗ್ಗೆ ೭ ಗಂಟೆಗೆ ಮುಂಬಾಯಿ ಬಂದರಕ್ಕೆ ತಲಪುವರು. ೮ ಗಂಟೆಗೆ ಅಪಲ್ಲೊ ಬಂದರದಲ್ಲಿ ಇಳಿಯುವರು. ಮುನ್ಸಿಪಾಲ್ ಕೌನ್ಸಿಲಿನವರು ಸ್ವಾಗತ ಭಾಷಣವನ್ನು ಕೊಡುವರು ಅಂದೇ ಬೆಳಿಗ್ಗೆ ಚೆಮ್ಸಫರ್ಡ ಪ್ರಭುಗಳವರಿಗೆ "ಬೊಂಬೆ ಚೇಂಬರ್ ಆವ್ ಕಮ್ಮರ್ಸ್" ಮತ್ತು "ಇಂಡಿಯನ್ ಮರ್ಚೆಂಟ್ಸ್ ಚೇಂಬರ್" ಎಂಬ ವಾಣಿಜ್ಯ ಸಂಘಗಳವರು ಬಹುಮಾನ ಪತ್ರಿಕೆಗಳನ್ನೂ ಓದುವರು ತಾ ೩ನೇ ಮಂಗಳವಾರ ಮಧ್ಯಾನ್ಹ ೩ ೩೦ ಗಂಟೆಗೆ ಹಾರ್ಡಿಂಜ ಪ್ರಭುಗಳವರು ಅಪಲ್ಲೊ ಬಂದರಿಗೆ ಹೋಗುವರು. ೪ ಗಂಟೆಗೆ ಮುಂಬಾಯಿ ಮುನ್ಸಿಪಾಲ್ ಪರವಾಗಿ ಸ್ವಸ್ತಿವಚನವು ಕೊಡೋಣಾಗುವದು ೫ ೩೦ ಗಂಟೆಗೆ ಚೆಮ್ಸಫರ್ಡ ಪ್ರಭುಗಳವರು ಸೆಕ್ರೆಟೈರಿಟ್ ಆಫೀಸಿನಲ್ಲಿ ಚಾರ್ಜು ತಕೊಳ್ಳುಂಡು ರಾತ್ರಿ ೧೦ ೩೦ಕ್ಕೆ ಮುಂಬಾಯಿಯನ್ನು ಬಿಟ್ಟು ತೆರಳುವರು

ಇದೇ ತಿಂಗಳ ತಾ ೨೨ರಿಂದ ತಾ ೨೭ರ ವರೆಗೆ ಬರೋಡೆಯಲ್ಲಿ ಗಾಯಕವಾಡರ ಆಶ್ರಯದೊಳಗೆ "ಅಖಿಳ ಭಾರತ ವರ್ಷೀಯ ಗಾಯನ ಸಮ್ಮೇಳನ"ವು ನಡೆದು ಬಂತು ಯಾವತ್ತು ಭಾರತವರ್ಷಕ್ಕೆ ಸರಿಹೋಗಬಹುದಾದ ಸುಲಭವಾದ ಒಂದು ಸ್ವರಸಂಕೇತವನ್ನು ಏರ್ಪಡಿಸುವದು, ಶಾಲಾವಿದ್ಯಾರ್ಥಿಗಳಿಗಾಗಿ ಕ್ರಮಿತ ಗಾನಪುಸ್ತಕಗಳನ್ನು ಬರೆಯಿಸುವದು—ಪ್ರಾಚೀನವಾದ ಗಾನಪುಸ್ತಕಗಳನ್ನು ಸಂಗ್ರಹಿಸುವದು. ಅರ್ವಾಚೀನ ಶಾಸ್ತ್ರ ರೀತ್ಯಾ ವಾದ್ಯಸಾಧನಗಳಲ್ಲಿ ಸುಧಾರಣೆಗಳನ್ನು ಮಾಡುವುದು, ಉತ್ತರ ಮತ್ತು ದಕ್ಷಿಣಾತ್ಯ ಪದ್ಧತಿಗಳನ್ನು ಒಂದುಗೂಡಿಸುವದು ಇತ್ಯಾದಿ ಹಲವು ಸಂಗತಿಗಳು ಸಮ್ಮೇಳನದಲ್ಲಿ ಚರ್ಚಿಸಲ್ಪಟ್ಟಿರುವದು. ಸಮ್ಮೇಳನವನ್ನು ಬರೋಡೆಯ ಗಾಯಕವಾಡರವರೇ ತೆರೆದಿರುವರು. ೨೪ ಮಂದಿ ಗಾಯನ ಸಂಬಂಧ ಸುರಸವಾದ ಉಪನ್ಯಾಸಗಳನ್ನು ಓದಿದರು ಮದ್ರಾಸ್ ಸಂಸ್ಥಾನದ ಗಾಯನಪಂಡಿತರೇ ಈ ಸಮ್ಮೇಳನದಲ್ಲಿ ಹೆಚ್ಚಿನ ಉಪನ್ಯಾಸಗಳನ್ನು ಓದಿ ಕೂಡಿದ ಸಭಿಕರನ್ನು ಗಾಯನವಿದ್ಯೆಯಲ್ಲಿ ಪ್ರೋತ್ಸಾಹಿಸಿದರೆನ್ನಬಹುದು ಮದ್ರಾಸಿನ ರಾವ್ ಸಾಹೇಬ್ ಅಬ್ರಹಾಮ್ ಪಾಂಡಿಯವರು ತಮಿಳು ಗಾಯನಶಾಸ್ತ್ರಕ್ಕನುಸಾರವಾಗಿ ಶ್ರುತಿ ಸಂಬಂಧವಾದ ಓದಿದ ಉಪನ್ಯಾಸವು ಅತಿ ಸಾರಸ್ಯವಾಗಿತ್ತು. ಕರ್ನಾಟಕ ಗಾಯನಸಂಬಂಧವಾಗಿ ಪ್ರತಾಪ ರಾಮಸಾಮಿ ಭಕ್ತಾರರು ಒಂದು ಲೇಖನವನ್ನು ಸಂಸ್ಕೃತಭಾಷೆಯಲ್ಲಿ ಓದಿದರು ಮಲಬಾರಿನ ರಿಟಾಯರ್ಡ ಜಡ್ಜರಾದ ರಾಮಕೃಷ್ಣಯ್ಯರರು ಗುಮ್ಮಹೊಡೆಯುವ ಪದ್ಧತಿಯನ್ನು ಕುರಿತು ಬಹು ಹೃದಯಂಗಮವಾದ ಭಾಷಣವನ್ನು ಕೊಟ್ಟು ಕೂಡಿದ ಸಭಿಕರನ್ನು ಆನಂದಗೊಳಿಸಿದರು

ದಕ್ಷಿಣ ಹಿಂದೂಸ್ಥಾನ.

ಮದ್ರಾಸಿನ ರೋಯಪೆಟ್ಟಾದಲ್ಲಿರುವ ವೆಸ್ಲಿ ಕಾಲೇಜಿಯಲ್ಲಿ ನಡೆದ ಒಂದು ಆಕಸ್ಮಿಕ ವಿಷಯವು ಆ ಕಾಲೇಜಿಯಲ್ಲಿ ಓದುವ ವಿದ್ಯಾರ್ಥಿಗಳ ಹೆತ್ತವರಲ್ಲಿ ವಿಷಾದವನ್ನುಂಟುಮಾಡಿರುವದು ಸದರಿ ಕಾಲೇಜಿಯ VI ಫೋರ್ಮಿನ ವಿದ್ಯಾರ್ಥಿಗಳು ಸ್ಕೂಲ್ ಫೈನಲ್ ಪರೀಕ್ಷೆಗೆ ಓದುವ ಬಗ್ಗೆ ರಜೆ ಕೇಳಿದರು ಆದರೆ ಹೈಸ್ಕೂಲ್ ಡಿಪಾರ್ಟಮೆಂಟಿನ ಸುಪರಿಂಟೆಂಡೆಂಟರಾದ ಮೆ। ಪಿ ಸಿ ಬನ್ಸ್ಟರವರು ರಜೆ ಕೊಡಲಿಲ್ಲವಾದ್ದರಿಂದ ಶುಕ್ರವಾರ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಕ್ಲಾಸಿನಲ್ಲಿ ಹಾಜರಿರಲಿಲ್ಲ. ಸೋಮವಾರ ದಿನವೂ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗೈರ್ಹಾಜರಿಯಾದರು. ಇದರಿಂದ ಸುಪರಿಂಟೆಂಡೆಂಟರವರಿಗೆ ಬಹಳ ಸಿಟ್ಟುಬಂದು ಈ ವಿಷಯ ವೈಸ್ ಪ್ರಿನ್ಸಿಪಾಲರಾದ ಮೆ। ಕಿಂಗ್ಸ್ ವಿಲಿಯಮ್ಸ್ಸರ ಕೂಡೆಯೂ ಹೈಸ್ಕೂಲು ಹೆಡ್ಮಾಸ್ತರರಾದ ರಾ। ವಾಸುದೇವಾಚಾರ್ಯರೊಡನೆಯೂ ಆಲೋಚನೆ ನಡಿಸಿದರು. ರಾ। ವಾಸುದೇವಾಚಾರ್ಯರವರು ವಿದ್ಯಾರ್ಥಿಗಳು ಮಂಗಳವಾರ ದಿವಸ ಹಾಜರಾಗದಿದ್ದರೆ ಕಠಿಣವಾಗಿ ಶಿಕ್ಷಿಸಲ್ಪಡುವರೆಂಬ ನೋಟೀಸನ್ನು ಕೊಡುವದು ವಿಹಿತವೆಂದು ಹೇಳಿದ್ದರಿಂದ ಸುಪರಿಂಟೆಂಡೆಂಟರವರು ಹಾಗೆಯೇ ಮಾಡಿದರು. ಈ ನೋಟೀಸನ್ನು ನೋಡಿದ ವಿದ್ಯಾರ್ಥಿಗಳು ಮಂಗಳವಾರ ಕ್ಲಾಸಿಗೆ ಹಾಜರಾದರು. ಆದರೆ ಸುಪರಿಂಟೆಂಡೆಂಟರೂ ವೈಸ್ ಪ್ರಿನ್ಸಿಪಾಲರೂ ಇದರಿಂದ ತೃಪ್ತರಾಗದೆ ಬುಧವಾರ ದಿನ ವಿದ್ಯಾರ್ಥಿಗಳನ್ನು ಮಾಳಿಗೆ ಮೇಲೆ ಕರಕೊಂಡು ಹೋಗಿ ವಿದ್ಯಾರ್ಥಿಗಳ ಬೆನ್ನಿನ ಮೇಲೆ ವ ಕುಂಡೆಯ ಮೇಲೆ ಹೊಡೆದರು. ಈ ವಿಷಯವು ಇತರರಿಗೆ ತಿಳಿದು ಬಂದ ಕೂಡಲೇ ಸದರಿ ಕಾಲೇಜಿಯ ಕೆಲವು ಉಪಾಧ್ಯಾಯರೂ ಸುಮಾರು ೩೦ ವಿದ್ಯಾರ್ಥಿಗಳೂ ಮೇಲೆಹೋಗಿ ರಾ। ವಾಸುದೇವಾಚಾರ್ಯರಿಗೆ [illegible] ರಾ। ವಾಸುದೇವಾಚಾರ್ಯರವರು [illegible] ಹಾಲರಾದ [illegible]

ರೆಂಡ ಟಿ. ಇ. ಸ್ಟೈಲರವರಿಗೆ ತಿಳಿಸಿದ್ದರಿಂದ ರೆವರೆಂಡ ಸ್ಟೈಲರವರು ತಕ್ಷಣವೇ ಕಾಲೇಜಿಗೆ ಬಂದರು. ಅವರು ಬರುವ್ವಾಗ ವಿದ್ಯಾರ್ಥಿಗಳಿಗೆ ಶಿಕ್ಷೆಕೊಡುವದು ನಿಲ್ಲಿಸಲ್ಪಟ್ಟಿತ್ತು. VI ಫೋರ್ಮಿನ ವಿದ್ಯಾರ್ಥಿಗಳನ್ನು ಅಮಾನುಷ ರೀತಿಯಿಂದ ಶಿಕ್ಷಿಸಿದ ಈ ವಿಷಯವನ್ನು ಮದ್ರಾಸಿನ ಪತ್ರಿಕೆಗಳು ಬಹಳವಾಗಿ ಖಂಡಿಸುತ್ತಲಿವೆ. ವೆಸ್ಲಿ ಕಾಲೇಜಿಗೆ ಸೇರಿದ ಹೊಸ್ಟೆಲಿನಲ್ಲಿರುವ ವಿದ್ಯಾರ್ಥಿಗಳು ಸಭೆ ಕೂಡಿ ಸುಪರಿಂಟೆಂಡೆಂಟರವರ ಮತ್ತು ವೈಸ್ ಪ್ರಿನ್ಸಿಪಾಲರ ಈ ವರ್ತನವನ್ನು ಖಂಡಿಸಿರುವರು.

ದಕ್ಷಿಣ ಕನ್ನಡ.

ಕಾಸರಗೋಡು:—ಅಡ್ಕತ ಬೈಲು ಗ್ರಾಮದಲ್ಲಿ "ಶ್ರೀ ಮದನಂತೇಶ್ವರ ವಿದ್ಯಾನಿಲಯ"ಎಂಬ ಹೆಸರಿನಿಂದ ರಾ| ಬಿ. ಸುಬ್ರಾಯರು ಹೆಚ್ಚು ಪ್ರಯತ್ನದಿಂದ ಸ್ಥಾಪಿಸಿದ ವಿಷಯವನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿತ್ತಷ್ಟೆ. ಅದೇ ವಿದ್ಯಾನಿಲಯದಲ್ಲಿ ಹಗಲಿನ ಸಮಯದಲ್ಲಿ ವಿದ್ಯೆಯನ್ನು ಕಲಿಯಲಿಕ್ಕೆ ಅನಾನುಕೂಲವಾದ ಅನೇಕ ಬಡವರಿಗೆ ಫಲಾಪೇಕ್ಷೆ ಇಲ್ಲದೆ ರಾತ್ರಿಕಾಲದಲ್ಲಿ ವಿದ್ಯಾದಾನವನ್ನು ಮಾಡುವರೆ ಸದರಿ ಸುಬ್ರಾಯರು ಕಳೆದ ವಾರದಿಂದ ಪ್ರಾರಂಭಿಸಿರುತ್ತಾರೆ. ಇಂಥಾ ಒಳ್ಳೇ ಸಂದರ್ಭವನ್ನು ಕಾಸರಗೋಡಿನ ವಿದ್ಯಾಹೀನರು ವೃಥಾ ಕಳಕೊಳ್ಳದೆ ತಮ್ಮ ಪ್ರಯೋಜನಕ್ಕೆ ಉಪಯೋಗಿಸಿ ಕೈಲಾದಷ್ಟು ಮಟ್ಟಿಗೆ ವಿದ್ಯೆಯನ್ನು ಕಲಿಯುವರಾಗಿ ನಂಬುತ್ತೇನೆ.

ಕಾಸರಗೋಡಿನಲ್ಲಿ ಕೆಲವು ವರ್ಷದ ಹಿಂದೆ ಸ್ಥಾಪಿಸಿದ "ವಿವೇಕಾನಂದ ಮಂದಿರ" ಎಂಬ ವಾಚಕಾಲಯವು ಯಾವ ಸ್ಥಿತಿಯಲ್ಲಿ ಉಂಟೆಂಬದು ಅದರ ಮೆಂಬರರಿಗಾಗಲಿ ಬೇರೆಯವರಿಗಾಗಲಿ ಗೊತ್ತೇ ಇಲ್ಲ. ಹೆಚ್ಚು ಕಾಲದಿಂದ ಯಾವ ತರದ ಸಭೆಯು-ಕೂಡದೆ ಅದರ ಆದಾಯ ವೆಚ್ಚವು ಯಾವ ಸ್ಥಿತಿಯಲ್ಲಿ ನಡಿಯುತ್ತದೆಂಬದು ತಿಳಿಯದೆ ನಿದ್ರಾವಸ್ಥೆಯಲ್ಲಿರುವಾಗ ಇತ್ತಲಾಗೆ ಇಲ್ಲಿಯ ಡಾಕ್ಟರು ರಾ| ಸಿ. ರಾಮಕಾಮತ್‌ರವರು ಇದರ ದೀನ ಸ್ಥಿತಿಯನ್ನು ನೋಡಿ ಕನಿಕರಪಟ್ಟು ಅದರ ಕಾರ್ಯಭಾರವನ್ನು ಮಾನ್ಯಡಾಕ್ಟರೇ ವಹಿಸಿಕೊಂಡು ಬಹಳ ಶ್ರದ್ಧೆಯಿಂದ ಮಂದಿರದ ಕಾರ್ಯಗಳನ್ನು ನಡಿಸುತ್ತಾ ಒರುವದನ್ನು ವಾಚಕರಿಗೂ ಮಂದಿರದ ಮೆಂಬರರಿಗೂ ತಿಳಿಸುವರೆ ಸಂತೋಷಪಡುತ್ತೇನೆ.

ಗೌಡ ಸಾರಸ್ವತ ಬ್ರಾಹ್ಮಣರ ಗೋಕರ್ಣ ಮಠದ ಸ್ವಾಮಿಗಳವರು ಶಿಷ್ಯರೊಡಗೂಡಿ ಇಲ್ಲಿಗೆ ಚಿತ್ತೈಸಿ ತಮ್ಮ ಶಿಷ್ಯ ಮಂಡಳಿಯವರ ಪೂಜೆ ಸತ್ಕಾರಗಳನ್ನು ಬಹಳ ಸಂತೋಷದಿಂದ ಸ್ವೀಕರಿಸಿ ಕಳೆದ ಆದಿತ್ಯವಾರ ಕಣ್ಣಾನೂರು ಅತ್ತಕಡೆ ತೆರಳಿದರು.

ಕಾಸರಗೋಡಿನಲ್ಲಿ ಬೈಸಿಕಲಿನ ಅಪಘಡಗಳು ಹೆಚ್ಚುತ್ತಾ ಬರುತ್ತವೆ. ಇಲ್ಲಿ ಹೆಚ್ಚಾಗಿ ಶಾಕಪೋಕರೂ ಜೀವನೋಪಾಯಕ್ಕೆ ಯಾವ ಗತಿಯೂ ಇಲ್ಲದೆ ಇರುವ ಅನೇಕ ಕೆಟ್ಟ ಹುಡುಗರೂ ಯುವ್ವನಸ್ಥರೂ ಬಾಡಿಗೆಗೆ ತಕ್ಕೊಂಡ ಬೈಸಿಕಲುಗಳನ್ನು ಹೆಚ್ಚು ವಹಿವಾಟು ಇರುವ ಮಾರ್ಗಗಳಲ್ಲಿ ಓಡಿಸುವದರಿಂದ ಹಲ್ಲಿನ ಅಪಾಯವು ಸಂಭವಿಸುತ್ತದೆ. ಅನೇಕ ಹುಡುಗರು ಪೂರ್ಣ ತರಬೇತಾಗದೆ [illegible] ಇರುವ ಮಾರ್ಗಗಳಲ್ಲಿ ಬೈಸಿಕಲುಗಳನ್ನು ಓಡಿಸಿದರೆ ಅಪಾಯಗಳು ಸಂಭವಿಸದೆ ಇರುವದೆ?

ಪಿಟ್ಲ:—ಇಲ್ಲಿಯ ಎಲಿಮೆಂಟರಿ ಶಾಲೆಗಳ ಸುಪರ್‌ವ್ಯಾಜರ್‌ರಾದ ಮ| ರಾ| ರಾ| ಪಡುಕೋಣೆ ಗಣೇಶರಾಯರವರಿಗೆ ಇಲ್ಲಿಂದ ಕಾರ್ಕಳಕ್ಕೆ ವರ್ಗವಾಗಿಯದೆ.

ಮಂಗಳೂರು.

ಜಿಲ್ಲಾ ಕಲೆಕ್ಟರ ದೊರೆಗಳವರು ಮಾರ್ಚ ತಾ. ೩೦ ೩೧ರಲ್ಲು ಮೂಡಬಿದ್ರೆಗೆ, ಎಪ್ರಿಲ್ ತಾ ೧-೩ ಮೂಡಬಿದ್ರೆ, ತಾ ೪ ಕಾರ್ಕಳ, ತಾ ೫ ಉಡುಪಿ, ತಾ ೬ರಿಂದ ೧೬ ಕಾಪು ಮತ್ತು ಉಡುಪಿ (ಜಮಾಬಂದಿ) ತಾ ೧೭ ಮಂಗಳೂರು, ತಾ ೨೮ ಮೂಡಬಿದ್ರೆ, ತಾ ೨೯ ೩೦ ಮೂಡಬಿದ್ರೆ, ಮೇ ತಿಂಗಳ ತಾ ೧ ೨ ಕಾರ್ಕಳ, ತಾ ೩-೪ ಹೆಬ್ರಿ, ತಾ ೫ ೧೫ ಬ್ರಹ್ಮಾವರ ಮತ್ತು ಕೋಟೆ (ಜಮಾಬಂದಿ) ಈ ರೀತಿ ಸರ್ಕೀಟು ಬೆಳಸುವರು.

ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿರುವ ಮ| ಬಿ. ಎಸ್. ಅಲ್ಬುಕರ್ಕರಿಗೆ ೬ ವಾರಗಳ ರಜೆ ಕೊಡೋಣಾಗಿರುತ್ತದೆ.

ರಾಮಚಂದ್ರಾರಿಯವರನ್ನು ಖೂನಿ ಮಾಡಿದ್ದಾರೆಂದು ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ೧ನೇ ಅಪಾದಿತ ಸಾಯಿಬ್ಯಾರಿಗೆ ಫಾಶಿ ಶಿಕ್ಷೆಯೂ, ೨ನೇ ಅಪಾದಿತ ಹಸೈನನಿಗೆ ಜನ್ಮಾಂತರ ಶಿಕ್ಷೆಯೂ ಇದೇ ಕಳೆದ ಸೋಮವಾರ ದಿನ ಸೆಶ್ಶನ್ಸ್ ಜಡ್ಜರವರಿಂದ ವಿಧಿಸೋಣಾಗಿರುವದು. ೩ನೇ ಅಪಾದಿತ ಹುಸೇನಬ್ಬನ ಮೇಲೆ ತಕ್ಕ ರುಜುವಾತಿಲ್ಲದ್ದರಿಂದ ಜಡ್ಜರವರು ಅವನನ್ನು ಖುಲಾಸೆಪಡಿಸಿರುವರು.

ಕುಂದಾಪುರದಿಂದ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಕುಂಬಾರ ಮಾಲಿಂಗ ಎಂಬವನ ಮೇಲಿನ ತನಿಖೆ ನಡೆದು ಜಡ್ಜರವರು ಸೋಮವಾರ ದಿನ ಅಪಾದಿತನಿಗೆ ೭ ವರ್ಷಗಳ ಕಠಿಣ ಸಜಾ ವಿಧಿಸಿದರು. ಈ ಮೊಕದ್ದಮೆಯಲ್ಲಿ ಅಪಾದಿತ ಕುಂಬಾರ ಮಾಲಿಂಗನಿಗೂ ಅವನ ಭಾವದಾರನಿಗೂ ಎಂದರೆ ಬಾಳೆಗೊನೆ ಸಂಬಂಧ ಮಾತಿಗೆ ಮಾತ್ಕ ನಡೆದು ಕಡೆಗೆ ಮಾಲಿಂಗನು ಕೈಯಲ್ಲಿದ್ದ ಅಡಿಕೆ ತುಂಡು ಮಾಡುವ ಚೂರಿಯಿಂದ ಭಾವನಿಗೆ ಹೊಡದ ಪೆಟ್ಟಿನಿಂದ ಅವನು ಮೃತನಾಗಿದ್ದನು.

ಕಳೆದ ಮಂಗಳವಾರ ಫಾದರ್ ರುದ್ರಿಕ್ಸರವರು ರಾತ್ರಿ ಕಾಲ ಕೊಡಿಯಾಲಬೈಲಿನಿಂದ ರುಜಾರಿಯೋ ಇಗರ್ಜಿಗೆ ಹೋಗುತ್ತಿರುವಾಗ ಮಿಶ್ಶನ್ ಬುಕ್‌ಶಾಪಿನ ಒಳಿ ಯಾರೋ ಅವರ ಮೇಲೆ ಬಿದ್ದು ವಾಚನ್ನು ಎಳೆಯಲಿಕ್ಕಿರುವಾಗ ಫಾದರ್ ರುದ್ರಿಕ್ಸರು ಕೈಯಲ್ಲಿದ್ದ ಬೆಳ್ಳಿ ಕಟ್ಟಿದ ಬೆತ್ತವನ್ನು ಬೀಸಿದ್ದರಿಂದ ಅವರ ಬೆತ್ತವನ್ನೇ ಕಳ್ಳರು ಎಳಕೊಂಡು ಓಡಿ ಹೋದರೆಂತ ಕೇಳುತ್ತೇವೆ.

ಮದ್ರಾಸಿನ ಆಸಿಸ್ಟಾಂಟ ಪೋರ್ಟ್ ಹೆಲ್ತ ಆಫೀಸರರಾಗಿರುವ ಡಾಕ್ಟರ್ ಬೆನಗಲ್ ರಾಘವೇಂದ್ರರಾಯರು ಉಡ್ಪಿ ಕಸಬೆಯಲ್ಲಿರುವ ಅವರ ಸ್ವಾರ್ಜಿತದ ರೂ. ೩೦೦೦ ಅಂದಾಜು ಕ್ರಯವಾಗುವ ೮ ಎಕ್ರೆ ಬಾಗ್ಯಾತು ಸ್ಥಳವನ್ನೂ ಅದರಲ್ಲಿರುವ ಕಟ್ಟೋಣಗಳು ಮತ್ತು ಮರಮಟ್ಟು ಸಹಿತ ಪಂಚಮರ ಪ್ರಯೋಜನದ ಬಗ್ಗೆ ಉಪಯೋಗಿಸುವ ಗೋಸ್ಕರ ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘದವರಿಗೆ ರಿಜಿಸ್ಟ್ರನಿಶಿ ದಾನಮಾಡಿ ಕೊಟ್ಟಿದ್ದಾರೆಂತ ತಿಳಿಯುತ್ತೇವೆ.

ಇದೇ ತಿಂಗಳ ೨೩ನೇ ತಾರೀಕಿನ ರಾತ್ರೆ ಚಿಮ್ಮು ಪಂಚಮ [illegible] ಶಾಲೆಗೆ ವಿರೋಧಿಗಳಾಗಿದ್ದ ಯಾರೋ

ತುಂಟರು ಶಾಲೆಯ [illegible] ಯಾರೆ ಮತ್ತು [illegible] ಕಳವುಮಾಡಿ ಕೊ[illegible]

ಹಳೇಅಂಗಡಿ ಬ್ರೀ[illegible]ಯಿಂದ ಒಂದ ಒಂದು ಇನ್ನೂ[illegible] ಸದರಿ ಬ್ರೇಂಚ್ ಪೋಸ್ಟಾಪೀಸಿ[illegible] ಶಿರೂಗಳಿ ಅಸಾದಿ ಸಾಹೇಬರವರು ಕಳವುಮಾಡಿದ್ದರೆಂತ ರಿಪೋರ್ಟು ಅಪ್ಪರಿಂ ಆಫೀಸುಗಳ ಇನ್ಸ್‌ಪೆಕ್ಟರರು ಅಲ್ಲಿಗೆ ತನಿಕೆಗೆ ಹೋ ಸಾಹೇಬರವರು ಪರಾರಿಯಾಗಿದ್ದರೆಂತಲೂ ಮಂಗಳೂರು ಸಬ್ ಇನ್ಸ್‌ಪೆಕ್ಟರ್ ಸೋಜರವರು ತಲಾಶಿಯಿಂದ ಅವರನ್ನು ಕೈದುಮಾಡಿ ರಿಮಾಂಡಿನಕ್ಷಿಟ್ಟಿರುವರೆಂತಲೂ ತಿಳಿಯುತ್ತೇವೆ.

ಇಲ್ಲಿಯ ಅಬ್ದುಲ್ಲ ಕಾಪ್ರಿ ಸಾಹೇಬರ ಮನೆಯವರು ಮಲಬಾರಿನಿಂದ ಇಲ್ಲಿಗೆ ಚಿನ್ನದ ಕೆಲಸ ಮಾಡಲಿಕ್ಕೆ ಒಂದಿದ್ದ ಕೇಳಪ್ಪ ಮತ್ತು ರಾಮನ್ ಎಂಬವರ ಕೈಯ ಆಭರಣ ಮಾಡಲಿಕ್ಕೆಂತ ಕೊಟ್ಟ ಚಿನ್ನ ಸಹಿತ ಸದರಿ ಕೇಳಪ್ಪ ಮತ್ತು ರಾಮನ್‌ರು ಪರಾರಿಯಾಗಿದ್ದರೆಂತಲೂ ಮಂಜೇಶ್ವರ ಪೋಲೀಸಿನವರು ಅವರನ್ನು ಮಂಜೇಶ್ವರದಲ್ಲಿ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರೆಂತಲೂ ಕೇಳುತ್ತೇವೆ.

ಕದ್ರೆ ಸೆಮಿಟರಿ ಆಸಿಸ್ಟಾಂಟರಾದ ರಾ ರಾಮರಾಯರ ಮನೆಯಿಂದ ಸುಮಾರು ೩೦ ರೂಪಾಯಿ ಕ್ರಯಬಾಳುವ ಬೆಳ್ಳಿಯ ಬಟ್ಟಲು ಕಳವಾಯಿತೆಂದು ಕಳೆದಸಾರಿ ತಿಳಿಸಿತ್ತಷ್ಟೆ. ಈ ಸಂಬಂಧ ಪೋಲೀಸಿನವರು ಅನುಮಾನದ ಮೇಲೆ ಕೆ ಪಿ ಪೂವ ಗಟ್ಟಿ ಎಂಬವನನ್ನು ಕೈದುಮಾಡಿರುತ್ತಾರೆ.

ಗ್ರೇಸಾನ್ ತೌರೋ ಎಂಬವನು ತನ್ನನ್ನು ಸೇನೆಗೆ ಬರಿಸಿಕೊಂಡು ನಂತರ ತಲೆ ತಪ್ಪಿಸಿಕೊಂಡು ಬಂದಿದ್ದನು. ಅವನನ್ನು ಪೋಲಿಸ್ ಹೆಡ್‌ಕನ್‌ಸ್ಟೇಬಲ ರಾ| ಜೆ. ಸಿ. ಮಾರ್ಟಿನರು ತಲಾಸಿಯಿಂದ ಹಿಡಿದು ಕೊಟ್ಟದ್ದರಿಂದ ಮಲ್ಲಾಬಬಾದ್ ಲೈಟ್ ಇನ್‌ಫೇಂಟರಿ ಸೇನೆಯ ಕಮಾಂಡರರವರು ಸದರಿ ಮಾರ್ಟಿನರಿಗೆ ರೂ ೨೦ ಬಹುಮಾನ ಕಳುಹಿಸಿ ಕೊಟ್ಟಿರುತ್ತಾರೆ.

ಕಾಫಿ ಮೊಕದ್ದಮೆಯಲ್ಲಿ ಮೆಹನತ್ತು ತಕ್ಕೊಂಡ ಪ್ರೊಸಿಕ್ಯೂಶನ್ ಇನ್ಸ್‌ಪೆಕ್ಟರರಿಗೆ ರೂ ೫೦; ಸರ್ಕಲ್ ಇನ್ಸ್‌ಪೆಕ್ಟರರಿಗೆ ರೂ ೫೦, ಸಬ್ ಇನ್ಸ್‌ಪೆಕ್ಟರ್ ಚಮ್ಮಾಡರವರಿಗೆ ರೂ ೨೫, ಕನ್‌ಸ್ಟೇಬಲ್ ಈಶ್ವರಯ್ಯರಿಗೆ ರೂ. ೧೫, ಮ| ಎಮ್. ನೌರೋಜಿ ಸೇಟರ ಆಫೀಸ್ ಹೆಡ್ ಕ್ಲಾರ್ಕ ಮ| ಎ ಎಸ್ ಸೋನ್ಸರಿಗೆ ರೂ. ೧೨; ಈ ಸಂಗತಿಯನ್ನು ಪೋಲೀಸಿಗೆ ತಿಳಿಸಿದವರಾದ ಚಾರಪ್ಪನಿಗೆ ರೂ ೧೦, ತನಿಯನಿಗೆ ರೂ. ೫; ಪಕೀರನಿಗೆ ರೂ. ೫; ನೂರ್ ಮಹಮ್ಮದನಿಗೆ ರೂ ೨; ಈ ಪ್ರಕಾರ ಸರಕಾರದವರು ಇನಾಂ ಕೊಟ್ಟಿರುತ್ತಾರೆಂತ ತಿಳಿಯುತ್ತೇವೆ.

ಇದೇ ತಿಂಗಳ ತಾ ೨೮ನೇ ಮಂಗಳವಾರ ಬೆಳಿಗ್ಗೆ ಸುಮಾರು ೪ ಘಂಟೆಗೆ ಗದ್ದೆಕೇರಿಯಲ್ಲಿರುವ ಬಂಟ್ವಾಳ ನರ್ಸಯ್ಯ ಕ್ಯಾನಭಾಗರ ಮನೆಗೆ ಕನ್ನ ಕೊರೆದು ಬಾಗಲಿನ ಕೀಲನ್ನು ಎಳೆಯುವ ಶಬ್ದವನ್ನು ಕೇಳಿ ಮನೆಯವರು ಎಚ್ಚರಿಕೆಯಾದದರಿಂದ ಕಳ್ಳರು ಓಡಿಹೋಗಿರುವರು. ಸದರಿ ಮನೆಗೆ ಸುಮಾರು ೭ ತಿಂಗಳ ಮುಂಚೆ ಇದೇ ಪ್ರಕಾರ ಕನ್ನ ಕೊರೆದು ಸುಮಾರು ೩೦-೪೦ ರೂ[illegible]

ಶ್ರೀ ಮಾಂಗಿರೀಷ ಬಾಮ್.

ತಲೆನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳಿಗೂ, ಉಳುಕು ಮುಂತಾದವುಗಳಿಗೆ ತಿಕ್ಕುವುದರಿಂದ ಶೀಘ್ರವಾಗಿ ಗುಣಕಾಣುವುದು ಸ್ಕ್ರೂ ಬಾಯಿಯ ನಳಿಗೆ 1ರ ಕ್ರಯ 0—8—0 ಒಂದು ಡಜನ್ ತರಿಸಿಕೊಳ್ಳುವವರಿಗೆ 2 ನಳಿಗೆಗಳು ಹೆಚ್ಚಿಗೆ. ಸಂಪಲ್ ಡಬ್ಬಿ 1ಕ್ಕೆ 0—1—6 ಡಜನ್ ಡಬ್ಬಿಗಳಿಗೆ 0—13—0 ವಿ. ಪಿ. ಮಾಫಿ.

ವಿಸ್ಫೋಟಕ ಮಾತ್ರೆ—ಈ ಮಾತ್ರೆಯು ಮಲೇರಿಯಾ, ಸಿಡುಬು, ಕೋರ, ಕೋಟಿ ಮುಂತಾದವುಗಳ ಜ್ವರಗಳಿಗೆ ಅತ್ಯುತ್ತಮವಾದದ್ದು. ಮಕ್ಕಳ ಬೇನೆಗೆ ಸಂಜೀವನದಂತಿರುವುದು 12 ಮಾತ್ರೆಗಳ ಪೊಟ್ಲ 1ಕ್ಕೆ 0—1—0 ನೂರು ಮಾತ್ರೆಗಳಿಗೆ ರೂ. 2—8—0 ಒಮ್ಮೆ ಪರೀಕ್ಷಿಸಿ ನೋಡಿದರೆ ತಿಳಿದೀತು

ಸ್ವರಸುಧಿ—ಕೆಮ್ಮು, ಗಂಟಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಗುಣಕಾರಿ. ಎಲೆಅಡಿಕೆಯ ಸಂಗಡ ತಿನ್ನುವದರಿಂದ ಬಾಯಿಯು ಸುಗಂಧವಾಗಿ ಜೀರ್ಣವು ಸರಿಯಾಗುವದು. ದೊಡ್ಡ ಪೊಟ್ಲ 1ಕ್ಕೆ ಕ್ರಯ 0—1—6 ಸೆಂಪಲ್ 6ಪೈ

ಕಾರ್ಬೋಲಿಕ್ ಟೂತ್ ಪೌಡರ್—ಈ ಹುಡಿಯಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುವದರಿಂದ ಬಾಯಿ ದುರ್ವಾಸನೆ, ಹಲ್ಲುಹುಳುಕ, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ. 0—2—0

ಗಜಕರ್ಣ ರಿಂಗ್‌ವರ್ಮ್ ಗಿದ್ದಿಗೆ—ಈ ಮುಲಾಮನ್ನು ತುರಿಸುವಿಕೆ ಶುರುವಾದ ಕೂಡಲೇ ತಿಕ್ಕುವದರಿಂದ ಖಂಡಿತವಾಗಿ 3 ದಿನಗಳಲ್ಲಿ ವಾಸಿ ಸ್ವಚ್ಛವಾಗುವದು. ಗಾಜಿನ ಡಬ್ಬಿ 1ರ ಕ್ರಯ. 0—4—0. ಒಂದು ಡಜನ್ ಡಬ್ಬಿಗಳಿಗೆ ರೂ. 2—8—0 ವಿ ಪಿ ಬೇರೆ.

M. D. R & Sons.
Srimangiresh Aushadalaya,
UDIPI S. C.

ಸಂತೋಷಕರವಾದ ಪ್ರಕಟನೆ!

ಹೊಸ ನಮೂನೆ ಗಡಿಯಾರ! ಸಂತೋಷಕರವಾದ ಬಹುಮಾನ!!

ಸುಂದರವಾದ ಜೂಬಿಲಿ ಪಾಕೆಟ್ ವಾಚ್.

9-ಬಹುಮಾನಗಳ ಸಹಿತ ರೂ. 3—0—0.

6 ವರ್ಷದ ಗ್ಯಾರಂಟಿ ಕೊಡಲ್ಪಡುತ್ತೆ.



ಅಯ್ಯಾ. ಈ ನಕ್ಷೆಯಲ್ಲಿ ತೋರಿಸಿರುವ ಭಾರೀ ಕ್ರಯದ ಘಡಿಯಾರ ನಾವು ಸೀಮೆಯಿಂದ ಸ್ವಲ್ಪ ಮಾತ್ರ ತರಿಸಿರುತ್ತೇವೆ ಈ ಗಡಿಯಾರ ಕಂಪೆನಿ ಸೇಷನ್ ಬಲಿಷ್ಠವಾದ ಸಾಮಾನುಗಳಿಂದಲೂ ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟಿದ್ದು. ಈ ಗಡಿಯಾರವನ್ನು ಭಾರಿಭಾರಿ ಉದ್ಯೋಗಸ್ಥರು, ಬ್ಯಾಂಕಿನಲ್ಲಿರುವ ದೊರೆಗಳ, ಕೊಂಡುಕೊಳ್ಳುತ್ತಾ ಇದ್ದಾರೆ ಇಂಡಿಯಾ ದೇಶದಲ್ಲಿ ಪ್ರತಿದಿನ ನೂರಾರು ಗಡಿಯಾರಗಳು ಖರ್ಚು ಆಗುತ್ತವೆ ಜಾಗ್ರತೆ ಈ ಸೊಗಸಾದ ಗಡಿಯಾರವನ್ನು ತರಿಸಿಕೊಂಡು ಸಂತೋಷಪಡುವಿರಿ ಬಹುಮಾನ ಕಲಸೀಲು—(1) ಸರಪಣಿ, (2) ಕಂಪಾಸ್, (3) ಜಪಾನ್ ಕರವಸ್ತ್ರ, (4) ಕೈ ಉಂಗುರ, (5) ಪರಟು ಗುಂಡಿ, (6) ಸುವಾಸನೆ ಸೆಂಟ್, (7) ಕೈಗುಂಡಿಗಳು, (8) ರೇಷ್ಮೆ ಕೆಲಸ ಮಾಡಿದ ಪೆಟ್ಟಿಗೆ, (9) ಗಿಲೀಟ್ ಬಟನ್.

ವಿಳಾಸ:— ರಾನ್ ವಾಚ್ ಅಂಡ್ ಕಂಪೆನಿ,
8, ಇರುಳಪ್ಪನ ಬೀದಿ, ಮದ್ರಾಸು.

USEFUL IN PEACE AND WAR]. [BY RAU SAHIB DR. U. RAMA RAU

FIRST AID IN ACCIDENTS

ಪ್ರತಿಯೊಬ್ಬರೂ ಅವಶ್ಯಕವಾಗಿ ಓದಿ ತಿಳಿದಿರಬೇಕಾದ ಪುಸ್ತಕ. ಆಕಸ್ಮಿಕವಾಗಿ ಸಂಭವಿಸುವ ಗಾಯ ಮುಂತಾದ ಅಪಾಯಗಳಿಗೆ ತಾತ್ಕಾಲಿಕವಾಗಿ ನಡಿಸ...

ಪ್ರಥಮ ಚಿಕಿತ್ಸೆ.

ರಾವ್ ಸಾಹೇಬ್ ಡಾಕ್ಟರ್ ಯು. ರಾಮರಾವ್ ಇವರಿಂದ ರಚಿತವಾಗಿ ಮದರಾಸ್ ಕ್ರಿಶ್ಚಿಯನ್ ಕಾಲೇಜು ಪಂಡಿತರಾದ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಸುಲಭವಾಗಿ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದ್ದು

Dedicated To H. H. The Maharaja of Mysore.

ಅಪಾಯಕ್ಕೆ ಗುರಿಯಾದ ಮನುಷ್ಯನ ಅದೃಷ್ಟವು, ಮೊದಲು ಅವನು ಯಾರ ಕೈಗೆ ಸಿಕ್ಕಿ ಬೀಳುವನೋ, ಅವರ ಕಾರ್ಯಗಳಿಗೆ ತಕ್ಕಂತಿರುವುದು. ಸಾಮಾನ್ಯವಾಗಿ ಲೋಕದಲ್ಲಿ ಒಬ್ಬ ಮನುಷ್ಯನಿಗೆ ಆಕಸ್ಮಿಕವಾಗಿ ಏನಾದರೂ ಅಪಾಯವು ಸಂಭವಿಸಿದ ಪಕ್ಷದಲ್ಲಿ, ಇತರ ಜನರು ನಾಲ್ಕಾರು ಕಡೆಯಿಂದ ಬಂದು ಗುಂಪು ಕೂಡುವುದನ್ನು ನಾವು ನೋಡುತ್ತಿರುವೆವು. ಈ ಜನರ ಗುಂಪಿನಲ್ಲಿ ಯಾವನಾದರೂ ಒಬ್ಬನು, ಮೊದಲು ಮಾಡಬೇಕಾದ ಚಿಕಿತ್ಸಾಕ್ರಮವನ್ನು ಸ್ವಲ್ಪವಾದರೂ ತಿಳಿದವನಾಗಿದ್ದು, ಒಡನೆಯೇ ಆಯಾ ಅಪಾಯಗಳಿಗೆ ತಕ್ಕ ಚಿಕಿತ್ಸೆಯನ್ನು ನಡಿಸಿದ್ದರೆ, ನಿಸ್ಸಂದೇಹವಾಗಿ ಬದುಕಬಹುದಾಗಿದ್ದ ಪ್ರಾಣವೂ ಕೂಡ, ಅಂತಹ ಸಹಾಯವಿಲ್ಲದುದರಿಂದ ನಷ್ಟವಾಗುವುದು. ಈ ವಿಧವಾಗಿ ಪ್ರತಿ ವರ್ಷವೂ ಎಷ್ಟೋ ಬೆಲೆಯುಳ್ಳ ಜೀವಗಳು ಮರಣಹೊಂದುತ್ತಿರುವುವು.

ಒಬ್ಬ ಮನುಷ್ಯನಿಗೆ ಅಕಸ್ಮಾತ್ತಾಗಿ ದೇಹದಲ್ಲಿ ಅಸ್ವಸ್ಥತೆಯಾಗಲಿ, ಇಲ್ಲವೇ ಯಾವುದಾದರೂ ಅಪಾಯವಾಗಲಿ ಸಂಭವಿಸಿದಾಗ, ಸಮರ್ಥರಾದ ವೈದ್ಯರ ಸಹಾಯವು ಬಂದೊದಗುವುದರೊಳಗಾಗಿ, ತತ್ಕಾಲಕ್ಕೆ ತನ್ನ ಕೈಗೆ ಸಿಕ್ಕಿದ ಸಾಧನಗಳನ್ನೇ ಉಪಯೋಗಿಸಿ, ಶೀಘ್ರವಾಗಿ ತಕ್ಕ ಚಿಕಿತ್ಸೆಯನ್ನು ಮಾಡುವುದೇ ಪ್ರಥಮ ಸಹಾಯವೆನಿಸುವುದು. ಈ ಸ್ವಲ್ಪ ಕಾರ್ಯಕ್ಕೆ ಬೇಕಾದ ಜ್ಞಾನವೂ ಕೂಡ ಅದಕ್ಕಾಗಿ ಪ್ರತ್ಯೇಕವಾದ ಶಿಕ್ಷಣವನ್ನು ಹೊಂದಿಯೇ ಲಭಿಸಬೇಕು.

“ಅಲ್ಪಜ್ಞಾನವು ಅಪಾಯ ಹೇತು” ವೆಂಬ ಸಾಮತಿಯು ಲೋಕದಲ್ಲಿ ವಾಡಿಕೆಯಿದ್ದರೂ, ಇತರ ವಿಷಯಗಳಲ್ಲಿ ಇದಕ್ಕೆ ಪ್ರಾಧಾನ್ಯವನ್ನು ಕೊಡಬಹುದೇ ಹೊರತು, ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಆ ನಿಯಮವಿಲ್ಲ. ಇದರಲ್ಲಿ ಅತ್ಯಲ್ಪ ಜ್ಞಾನದಿಂದಲೇ ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ಭಯಂಕರವಾದ ಅಪಾಯಗಳನ್ನು ತಪ್ಪಿಸಬಹುದು! ಎಷ್ಟೋ ಕ್ರೂರವಾದ ವೇದನೆಯನ್ನು ನೀಗಿಸಬಹುದು! ಎಷ್ಟೋ ಪ್ರಾಣಗಳನ್ನುಳಿಸಬಹುದು! ಬಹಳವಾಗಿ ರಕ್ತಸ್ರಾವಕ್ಕೆ ಕಾರಣವಾದ ಮಹಾ ವಿಪತ್ತುಗಳಲ್ಲಿಯೂ ಬೆಂಕಿ ತಗಲುವುದು, ಮೂಳೆ ಮುರಿಯುವುದು, ನೀರಿನಲ್ಲಿ ಬಿದ್ದು ಉಸಿರುಕಟ್ಟಿ ಸಾಯುವುದು, ವಿಷಭಕ್ಷಣ, ಹಾವು ಕಚ್ಚುವುದು, ಮುಂತಾದ ಇನ್ನೂ ಅನೇಕ ವಿಧವಾದ ಅಪಾಯಗಳಲ್ಲಿಯೂ ಆಯಾ ಕಾಲಕ್ಕೆ ತಕ್ಕ ಚಿಕಿತ್ಸೆಯನ್ನು ತಿಳಿಯದಿರುವುದೇ ಮೃತ್ಯುಕಾರಣವಾಗುವುದು. ತಕ್ಕ ಚಿಕಿತ್ಸೆಯಿಂದ ಸುಲಭವಾಗಿ ಬದುಕಬಹುದಾಗಿದ್ದ ಪ್ರಾಣಗಳೂ ಕೂಡ, ಸಮರ್ಥರಾದ ವೈದ್ಯರು ಬರುವಷ್ಟರೊಳಗಾಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋಗುವುದರಿಂದ ನಷ್ಟವಾಗುತ್ತಿರುವುವು. ಈ ಪ್ರಥಮ ಚಿಕಿತ್ಸೆಯ ವಿಷಯದಲ್ಲಿ ಅತ್ಯಲ್ಪ ಜ್ಞಾನವನ್ನು ಪಡೆದು, ಅದನ್ನುಪಯೋಗಿಸುವುದರಿಂದಲೇ ಸಾಯುವ ಸ್ಥಿತಿಯಲ್ಲಿದ್ದ ಸಾವಿರಾರು ಜೀವಿಗಳು ಬದುಕಿಕೊಂಡಿರುವುವು.

ಸಾಮಾನ್ಯವಾಗಿ ಬೇರೊಬ್ಬರಿಗೆ ಅಪಾಯವುಂಟಾದ ಸಂದರ್ಭವನ್ನು ನೋಡಿದಾಗ, ಅವರಿಗೆ ಸಹಾಯಮಾಡಬೇಕೆಂಬ ಬುದ್ಧಿಯು ನಮ್ಮೆಲ್ಲರಿಗೂ ಹುಟ್ಟುವುದು ಸಹಜವು. ಆದರೆ ಯಾವ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂದು ತಿಳಿಯದೆ ಅನೇಕ ಜನರು ಈ ವಿಷಯದಲ್ಲಿ ಪ್ರವರ್ತಿಸುವುದಕ್ಕೆ ಹೆದರುವರು ತಾವು ಕೈಯಿಕ್ಕುವುದರಿಂದ ಮೊದಲಿದ್ದುದಕ್ಕಿಂತಲೂ ಹೆಚ್ಚಾದ ಅಪಾಯಕ್ಕೆ ಕಾರಣವಾಗಬಹುದೆಂಬ ಭಯದಿಂದ ಕೆಲವರು ತಟಸ್ಥರಾಗುವರು.

ಇದಕ್ಕಾಗಿ ಈ ಪುಸ್ತಕದಲ್ಲಿ—ಮನುಷ್ಯ ಶರೀರದ ರಚನೆ, ಗಾಯದ ಕಟ್ಟುಗಳು, ಕೈತೂಗುಗಳು, ಮೂಳೆ ಮುರಿಯುವುದು, ಉಸಿರುಕಟ್ಟುವುದು, ವಿಷವು ಹೊಟ್ಟೆಗೆ ಸೇರುವುದು, ಜಲಗಂಡೆ, ಅಗ್ನಿಗಂಡ ನರಗಳು ಕದಲುವುದು, ರಕ್ತಸ್ರಾವ, ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತ ಮುಂತಾದ ಅಪಾಯಗಳಿಗೆ ತತ್ಕಾಲಿಕ ಚಿಕಿತ್ಸೆ, ರೋಗಿಗಳನ್ನು ಅಪಾಯವಿಲ್ಲದೆ ಬೇರೆ ಕಡೆಗೆ ಸಾಗಿಸುವುದು, ಅವರಿಗೆ ಊಟ ಪಥ್ಯ, ಹಾಸಿಗೆ, ಮುಂತಾದ ಸೌಕರ್ಯಗಳನ್ನು ಕಲ್ಪಿಸಿಡುವುದು, ಇನ್ನೂ ಇದರಂತೆಯೇ ಅನೇಕ ವಿಷಯಗಳುಂಟು ಇದರಲ್ಲಿ 125 ಚಿತ್ರಪಟಗಳೊಡನೆ ಇಷ್ಟು ವಿಷಯಗಳಿದ್ದರೂ, ಸರ್ವಸಾಮಾನ್ಯವಾಗಿ ಎಲ್ಲರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದಲೇ ಬೆಲೆಯನ್ನು ಬಹಳ ಕಡಮೆ ಮಾಡಿರುವೆವು. ಪುಸ್ತಕದ ಬೆಲೆ 0—8—0, ಟಪ್ಪಾಲು ಹಾಸಲು ಬೇರೆ.

ಪುಸ್ತಕ ದೊರೆಯುವ ಸ್ಥಳ:—ಶ್ರೀ ಕೃಷ್ಣನ್ ಬ್ರದರ್ಸ್,
323, ತಂಬೂಚೆಟ್ಟಿ ಬೀದಿ, ಮದರಾಸು. ಪೋಸ್ಟ್ ಬಾಕ್ಸ್ 166ರ

ಗೃಹಸ್ಥಾಶ್ರಮವು ಸುಖದಾಯಕವಾಗಿ ಪರಿಣಮಿಸಬೇಕೆಂದು
ನಿಮಗೆ ನಿಶ್ಚಯವಾಗಿಯೂ ಮನಸ್ಸಿದೆಯೋ?

ಮದನಮಂಜರಿ ಮಾತ್ರೆ

ಗಳನ್ನು ಪ್ರಯೋಗಿಸಿರಿ ಇವು ಗೃಹಸ್ಥಾಶ್ರಮವು ಸಂತೋಷ ಮತ್ತು ಸುಖದಾಯಕವಾಗಿ ನಡಿಯುವಂತೆ ಮಾಡುವದು. ಇದು ಯಾವ ಕಾರಣದಿಂದಲಾದರೂ ಉಂಟಾದ ದುರ್ಬಲತ್ವವನ್ನು ಹೋಗಲಾಡಿಸುವದು. ಇದು ಮುದುಕರನ್ನು ಯುವಕರಾಗಮಾಡುವದು.

ಕ್ರಯ: 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ್ (ಕಾಥ್ಯಾವರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು

ಸಂತೋಷದಾಯಕವಾದ ಗೃಹಸ್ಥಾಶ್ರಮವನ್ನು ಪಡೆಯುವಂತೆ
ಮಾಡುವ ನಿಜವಾದ ಸಾಧನವು.

“ಪರ್ಪೆಚ್ಯುವಲ್ ಯೂತ್”

ಎಂಬ ನಮ್ಮ ಪುಸ್ತಕವನ್ನು ಪಠಿಸುವದೇ ಆಗಿದೆ.

ಯೌವನವು ಆಚಂದ್ರಾರ್ಕವಾಗಿ ಉಳಿಯುವಂತೆ ಮತ್ತು ಅದು ಥಟ್ಟನೇ ಅಳಿದುಹೋಗದಂತೆ ಮಾಡುವ ಉಪಾಯವು ಈ ಪುಸ್ತಕದಲ್ಲಿ ಹೇಳಲ್ಪಟ್ಟಿದೆ. ನಿಮ್ಮ ವಿಳಾಸ ಬರೆದು ಕಳುಹಿಸಿದ್ದಲ್ಲಿ ಧರ್ಮಾರ್ಥವಾಗಿ ಈ ಪುಸ್ತಕವು ಕಳುಹಿಸಲ್ಪಡುವದು.

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR),
Branch:—20 CHINA BAZAAR ROAD, MADRAS.

ಆರ್. ಮಾರ್ಟಿನ್ನರ ಮಾತ್ರೆಗಳು ನಂ. 2.

ಡಮಿಯಾನ್ ಮತ್ತು ಕಂಪೌಂಡ್ ಫೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಎಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ ಬಾಟ್ಲಿಗೆ ರೂ ೧—೮—೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦

ಆರ್. ಮಾರ್ಟಿನ್ನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತ ಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಮೂತ್ರ ಉರಿಯುವುದನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ —

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co**
ನಂಬ್ರ ಡಿ. ಫ್ರೇರ್ ರೋಡ್, *No D Frere Road,*
ಮುಂಬಯಿ. *Near Wright & Co. Fort Bombay*

ಯುಗಾದಿ ಬಹುಮತಿ! ಹೊಸ ಕಂಪೆನಿ! ಹೊಸ ಸರಕುಗಳು!

ಅಮೇರಿಕ ದೇಶದ ಇಲೆಕ್ಟ್ರಿಕ್ ಮೂರು ಬೊಟ್ಟು 300 ರೂಪಾಯಿ ಬೆಲೆ ಬಾಳತಕ್ಕದ್ದನ್ನ ರೂ. 1—8—0 ಕೊಡುವೆವು ಇದನ್ನು ನವ್ಮ ಸ್ವಂತ ಆರ್ಡರು ಮೇಲೆ ಅಮೇರಿಕ ದೇಶದಲ್ಲಿ ಕಂಡುಹಿಡಿಯಲ್ಪಟ್ಟ ಇಮಿಟೇಶನ್ ವಜ್ರಗಳಿಂದ ತಯಾರಿಸಿ ಕಳುಹಿಸಿರುತ್ತಾರೆ ಇದರ ಕಲ್ಲುಗಳು ಕೋಟಿಸೂರ್ಯ ಪ್ರಕಾಶಕ್ಕೆ ಥಳಥಳಿಸುವದು. ಭಂಗಾರಕ್ಕೆ ಸಮಾನವಾದ ಒಂದು ವಿಧವಾದ ಲೋಹದಿಂದ ಕಟ್ಟಿ ಇರುತ್ತ ಇದನ್ನು ನೋಡುವವರು ವಜ್ರವಾಗವೆಂದು ಹೇಳುವರು ಅಷ್ಟು ಸೂರ್ಯಪ್ರಕಾಶಕ್ಕೆ ಥಳಥಳಿಸುವದು. ಬೇಗಬೇಗನೆ ವ್ಯಾಪಾರ ಮಾಡುವವರಿಗೆ ಒಳ್ಳೇ ಫಾಯಿದೆ ದೊರಕುವದು ಇದೇ ತಿಂಗಳ ಒಳಗಾಗಿ ಈ ಸೀರೆ ತರಿಸಿಕೊಳ್ಳುವವರಿಗೆ ಈ ಮೇಲ್ಕಂಡ

ರೂ. 1—8—0 ರೂಪಾಯಿನ ಮೂರು ಬೊಟ್ಟು ಇನಾಂ ಕಳುಹಿಸುವೆವು

ಮಲ್ಲಿಗೆ ಹುವ್ವಿನ ಶೀರೆ.

ಈ ಸೀರೆಗಳನ್ನು ಯುಗಾದಿ ಹಬ್ಬಕ್ಕಾಗಿ ತರಿಸಿ ಇರುತ್ತೇವೆ ಇದರ ಕ್ರಯ ರೂ 3 ವಿ ಪಿ ಚಾರ್ಜು 8 ಆಣೆ ಪ್ರತ್ಯೇಕ ಮೇಲ್ಕಂಡ ಮೂರು ಬೊಟ್ಟು ಇನಾಂ ಎಲ್ಲರೂ ವಿಕ್ರಯಿಸಿದ ಮಧುರೆ ಹವಳದ ಬಳ್ಳಿಗಳುಳ್ಳ ಭಾರಿ ಕ್ರಯದ ಶೀರೆಗಳು ಇದು ಉಡುವದಕ್ಕೆ ಧಡುತಆಗಿಯೂ ನೋಡುವದಕ್ಕೆ ಸೊಗಸಾಗಿಯೂ ಇದೆ ಬಣ್ಣಕ್ಕೆ ಗ್ಯಾರಂಟು ಕೊಡುವೆವು ಸೀರೆಯ ಉದ್ದ 16 ಮೊಳ ಸೊಗಸಾದ ಅಂಚು ಕಟ್ಟಿ ಇರುತ್ತ ಇದು ಎಲ್ಲರೂ ಉಡುವದಕ್ಕೆ ಲಾಯಖಾದದ್ದು ಪ್ರತಿದಿನ ಸಾವಿರಾರು ಸೀರೆಗಳು ವಿಕ್ರಯಿಸುತ್ತವೆ ದಯಮಾಡಿ 1 ಸೀರೆಯನ್ನು ತರಿಸಿಕೊಂಡು ಅಲಂಕಾರಭೂಷಿತರಾಗಿ ಇರುವರೆಂದು ಧ್ವನಿ. ನಮ್ಮ ಕಂಪೆನಿಯಲ್ಲಿ ಅನೇಕ ತರದ ಜವಳಿ ದಿನಸುಗಳು ಸಿಕ್ಕುತ್ತ

ವಿಳಾಸ:— ರತ್ನಂ ಕಂಪೆನಿ,
ಕ್ಲೋತ್ ಮರ್ಚೆಂಟ್ಸ್,
3. ಇರುಳಪ್ಪನ ಬೀದಿ, ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಹುಳಕಡ್ಡಿಗೆ ಔಷಧಿ — ಚರ್ಮರೋಗಕ್ಕೂ ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದುಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ ಸೀಸೆ 1ಕ್ಕೆ 4 ಆಣೆ ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ

ವಿರೇಚನ ಮಾತ್ರೆಗಳು. — ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ವಿರೇಚನೆಯಾಗುವದು ಮಲಬಂಧ ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ ಇವುಗಳನ್ನು ವಾಸಿ ಮಾಡುವುದ ಸೀಸೆ 1ಕ್ಕೆ 8 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ ೨ ಆಣೆ

ಜ್ವರ ಸಂಹಾರಿ ಎಲ್ಲಾ ವಿಧವಾದ ಜ್ವರ ವಿಷಮ ಶೀತಜ್ವರ 2ರ 3ರ 4ರ, ಛಳಿ, ಇನ್‌ಫ್ಲುಯನ್ಜ, ಧೀಜ್ವರ, ವಾತರೋಗ ಇವುಗಳನ್ನು ಸಂಪೂರ್ಣವಾಗಿ ವಾಸಿಮಾಡುವದು ಪೆಟ್ಟಿಗೆ 1ಕ್ಕೆ ರೂ 1 ವಿ ಪಿ ಚಾರ್ಜು 5 ಆಣೆ

ಕೂದಲು ಉದರಿಹೋಗುವದಕ್ಕೆ — ಕೂದಲು ಬೆಳೆದಿರ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೨ ನಿಮಿಷಗಳಲ್ಲಿಯೇ ಉದರಿಹೋಗುವದು ಸೀಸೆ 1ಕ್ಕೆ 4 ಆಣೆ, ವಿ ಪಿ ಚಾರ್ಜು ೬ ಸೀಸೆವರಿಗೂ ೫ ಆಣೆ

ಸುಗಂಧದಂತ ಚೂರ್ಣ — ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡಿ, ಆಹಾರವನ್ನು ಜೀರ್ಣಕ್ಕೆ ತರುವುದು ಸೀಸೆ 1ಕ್ಕೆ 3 ಆಣೆ, ವಿ ಪಿ 5 ಸೀಸೆವರಿಗೂ 5 ಆಣೆ

ಸ್ಖಲಿತರಕ್ಷಣಿ: - ಬಲಹೀನದಿಂದಲೂ, ಉಷ್ಣದಿಂದಲೂ, ಬಾಲ್ಯಾವಸ್ಥೆಗಳಲ್ಲಿ ನಡದಂತಾ ಕೆಟ್ಟ ಚಾಳಿಗಳಿಂದಲೂ, ನಿದ್ರೆಯಲ್ಲಿಯೂ ಸ್ವಪ್ನದಲ್ಲಿಯೂ, ಸ್ಖಲಿತವಾದ ಇಂದ್ರಿಯವನ್ನು ನಿಲ್ಲಿಸಿ ದೇಹದೃಢವನ್ನು ತರುವುದು ಸೀಸೆ 1ಕ್ಕೆ 8 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ

ಅತ್ಯುತ್ತಮವಾದ ಕಸ್ತೂರಿ: — ಕಾಶ್ಮೀರದಿಂದ ತರಿಸಿರುವದು ಅತ್ಯುತ್ತಮವಾದದ್ದು ಮತ್ತು ಒಂದೇ ರೀತಿ ಇರತಕ್ಕದ್ದು ತೊಲ 1ಕ್ಕೆ ರೂ 48 ಚಿಲ್ಲರೆಯಾಗಿ 1 ರೂಪಾಯಿಗೂ ದೊರಕುತ್ತದೆ ವಿ ಪಿ ಅಲಾಯಿದ

ಚೇಳಿನ ಔಷಧಿ: — ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟರೆ ತಕ್ಷಣವೇ ಉರಿಯ ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ 1ಕ್ಕೆ 4 ಆಣೆ ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ 12 ಸೀಸೆಗಳನ್ನು ಒಂದಾವರ್ತಿ ತರಿಸಿಕೊಂಡರೆ ಬೆಲೆ ರೂ 1 8-0 ವಿ ಪಿ. ಚಾರ್ಜು ಅಲಾಯಿದ

☞ ಈ ಪ್ರಾಂತ್ಯದಲ್ಲಿ ಕನ್ನಡ,ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ ಸುಬ್ಬರಾಯಿ
Ayurvedic Pharmacy,	ಆಯುರ್ವೇದ ಔಷಧಶಾಲಾ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ
SANNATHY, TANJORE.	— ಸನ್ನದಿ, ತಂಜಾವೂರು

ಮೈಸೂರು ಊದುಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಜಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದುಬತ್ತಿಗಳು 24 ರೂ ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0

ಸುಗಂಧಿ ಕಾಡ್ರು 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು,-ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಶ್ರೀಮತ್ ಕಲ್ಯಾಣ . ಬಂಧುಗಳೇ!

ಈ ಕಡೆ ನೋಡಿ!

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir*

ಪೋಸ್ಟು ಪೊಳಲಿ, ದ. ಕ. POST POLALY, S. C.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ಮೈಸೂರು ಏಜಂಟರು:—

ಮ। ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,

ದಿ ಚಾಂಪಿಯನ್ ಅಥಲೆಟಿಕ್ ಏಜನ್ಸಿ, ಮೈಸೂರು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇಸ್ಪುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ. ೨೦—೨೫ ವರ್ಷಗಳ ಹಳತ, ಸ್ಥೈಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಿಬ್ಬುಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಕಾಂತಿ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ

ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೬ ಬಾಟ್ಲಿಗೆ ೫ ರೂ ೧೦ ಆಣೆ

೩ ಪ್ರಮೇಹರಿಪು ಬಿಂದು ಉರಿಯು ಹ್ನು ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟಿಗೆ ೨-೮-೦.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಶ್ರೌತ್ತಿಕವಾಗಿದ ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಕಠಿಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ

೧೦. ವಾಸಾವಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ಹಸ್ತಮೈಥುನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲುವದು ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ಡಬಿಗೆ ೪ ಆಣೆ

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ ಅಪಸ್ಮಾರ ಬುದ್ಧಿಮಾಂದ್ಯ ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists,*

Vepery Post. MADRAS.

ಪಿ. ಕೆ. ವೈದ್ಯರ್ ಇವರ ಸ್ವಾನುಭವಸಿದ್ಧವಾದ ಔಷಧಗಳು.

ಸುಕುಮಾರ ಘೃತ. ಗರ್ಭ ಪ್ರತಿಬಂಧಕಗಳಾದ ಸ್ತ್ರೀಯರ ಸರ್ವ ರೋಗಗಳನ್ನೂ ಸಮೂಲವಾಗಿ ಛೇದಿಸಿ ಅಕಾಲ ಪ್ರಸವ ಮುಂತಾದ ದೋಷಗಳನ್ನು ಖಂಡಿಸಿ ಗರ್ಭಕ್ಕೆ ಪುಷ್ಟಿಯನ್ನೀಯುವದಲ್ಲದೆ, ಪುರುಷರಿಗೆ ವಾಯು, ಅಂತ್ರವಾಯು, ಕ್ಷಯ, ಧಾತುಕ್ಷಯವೇ ಮುಂತಾದವುಗಳನು ಅಲ್ಪಕಾಲದಲ್ಲಿಯೇ ಪ್ರಶಮಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವುದು ಕ್ರಯ ೨೦ ತೊಲೆಗೆ ರೂಪಾಯಿ 2—0—0.

ಸರ್ವಜನ ಹಿತಕಾರಿಣಿ ಲೇಹ್ಯ. ಕ್ಷಯ, ಅಸ್ಥಿಜ್ವರ, ಉರಿಮೂತ್ರ, ಮೂತ್ರರೋಗ, ವಿಶ್ರಮಫಲವಾದ ಸಕಲ ರೋಗಗಳಿಗೆ ಅಮೃತ ಕಲ್ಪವಾಗಿರುವುದು. ಕ್ಷೀಣದೇಹಿಗಳು ಸೇವಿಸಿದ್ದಲ್ಲಿ ತಿಂಗಳು ಒಂದರ ೫ ರಾತ್ಲನಂತೆ ತೂಕದಲ್ಲಿ ಹೆಚ್ಚಳಿಕ್ಕೆ ಏನೇನೂ ಸಂಶಯವಿಲ್ಲ ದೇಹದ ತೇಜಾರೋಗ್ಯಗಳನ್ನು ವೃದ್ಧಿಸಿ ರಕ್ತಶುದ್ಧಿಯನ್ನು ಗೈಯುವ ಪರಮೌಷಧ. ತೂಲೆ ೨೪ರ ಸೇರು ೧ಕ್ಕೆ ರೂಪಾಯಿ 1—8—0.

ಅಗಸ್ತ್ಯಕಲ್ಪವೆಂಬ ರಸಾಯನ. ಈ ರಸಾಯನ ಸೇವನೆಯಿಂದ ಧಾತುಬಲ, ಅಗ್ನಿಬಲ ವರ್ಧನೆಯಾಗುವದಲ್ಲದೆ ನಿಸ್ಸತ್ವರನ್ನು ಭೀಮಸತ್ವರನ್ನಾಗಿಯೂ ಅಕಾಲ ವೃದ್ಧರನ್ನು ಶುದ್ಧ ಯುವಕರನ್ನಾಗಿಯೂ ನೇರ್ಪಡಿಸುವ ದಿವ್ಯ ಮೂಲಿಕೆಗಳನ್ನೊಳಕೊಂಡಿರುವುದು ಅನುಭವವೇ ಪ್ರತ್ಯಕ್ಷ ಪ್ರಮಾಣ. ತೂಲೆ ೨೪ರ ಸೇರು ೧ರ ಕ್ರಯ ರೂ 1—0—0

ಕ್ಷಯಸಂಹಾರಿ ತೈಲ. ಉಬ್ಬಸ, ಕೆಮ್ಮು, ಕಿವುಡತನ, ಕರ್ಣಸ್ರಾವ, ಮುಂತಾದುವಕ್ಕೆ ಅತ್ಯುತ್ತಮ. ಬಾಟ್ಲಿ ೧ರ ಕ್ರಯ 7 ಆಣೆ.

ರಕ್ತಪಿತ್ತ ಕುಠಾರ. ಬಿಳಿ, ಕೆಂಪು ಅಥವಾ ಮಿಶ್ರ ಇರುವ ಪ್ರದರದ ಮೇಲೆ ಪ್ರಯೋಗಿಸಬಹುದು. ಮೂಗಿನಲ್ಲಿ, ಬಾಯಿಯಲ್ಲಿ, ಕಿವಿಯಲ್ಲಿ ಮಲದಲ್ಲಿ ಸಹಾ ಕಾಣಬಹುದಾದ ರಕ್ತಪಿತ್ತ ದೋಷಗಳನ್ನು ಪರಿಹರಿಸುತ್ತದೆ. ೩೦ ಮಾತ್ರೆಗಳುಳ್ಳ ಬಾಟ್ಲಿ ೧ರ ಕ್ರಯ ರೂ 2 8—0

ಇವಲ್ಲದೆ ಇನ್ನೂ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿವೆ ಅನುಪಾನಪತ್ರಗಳೂ ಸೇವನಾಕ್ರಮಗಳೂ ಔಷಧದ ಸಂಗಡಲೇ ಕಳುಹಿಸೋಣಾಗುವದು.

Address:— ವಿಳಾಸ—

MANAGER, ಮೆನೇಜರ್,

The Universal Medical Hall, ವಿಶ್ವವೈದ್ಯಾಲಯ,

MANJESHWAR. ಮಂಜೇಶ್ವರ.

ಡೋಂಗರೆ
ಇವರ ಬಾಲಾಮೃತ.

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಬಟ್ಟು ತಕ್ಕೊಳ್ಳುವವು. ಇದರಿಂದ ಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಸಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ, ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ

Girgaum, Bombay. ಗಿರಗಾಂ [illegible]

ಊಲನ್ ಮಾರ್ಟ, ಮಾಧವ ಬಿಲ್ಡಿಂಗ್ಸ್, [illegible] ಇವರಲ್ಲಿಯೂ ದೊರಕುವದು.

ಅರ್ಧ ಬೆಲೆ! ಅರ್ಧ ಬೆಲೆ!!

ಒಂದು ತಿಂಗಳು ಮಾತ್ರ.



ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಒಳ್ಳೇ ಸಮಯ ಕೊಡುವಂಥಾದ್ದು, ಸದ್ಗೃಹಸ್ಥರ ಧರಿಸಲು ಯೋಗ್ಯವಾದದ್ದು ಆಗಿದೆ ಮೂರು ವರುಷದ ಗ್ಯಾರಂಟಿ ಇದೆ ಕ್ರಯ ರೂ ೪. ಈಗ ರೂ 4. ಬೊನಸೀವಲ್ ವಾಚು ಕ್ರಯ ರೂ 1 ಈಗ ರೂ 5—8—0 ನಿಕಲ್ ಹಂಟಿಂಗ್ ವಾಚು ಕ್ರಯ ರೂ 12 ಈಗ ರೂ 6 ಬೆಸ್ಟ್ ರಿಸ್ಟ್ ವಾಚು ಚರ್ಮದ ಸ್ಟ್ರಾಪ್ ಸಹಿತ ರೂ. 10 ಈಗ ರೂ 5 ಲೇಡಿಸ್ 9 ಕರೆಟ್ ಚಿನ್ನದ ವಾಚು ಕ್ರಯ ರೂ. 32 ಈಗಿನ ರೂ 16 ಲೇಡಿಸ್ ಬೆಳ್ಳಿ ವಾಚು ರೂ 14 ಈಗ ರೂ 7 ಗಟ್ಟಿ ಮತ್ತು ನಂಬಿಕೆಗೆ ಯೋಗ್ಯವಾದ ೮ ದಿವಸಕ್ಕೊಮ್ಮೆ ಕೀ ಕೊಡುವ ಯೈಟ್ ಡೇಸ್ ವಾಚು ನಿಕಲ್ ಕೇಸ್ ಒಪನ್ ಫೇಸ್ ರೂ 18 ಈಗ ರೂ 9 ಅದೇ ಬೆಳ್ಳಿಯ ಕೇಸ್ ಉಳ್ಳದ ರೂ 24 ಈಗ ರೂ 12 ಅದೇ ಬೆಳ್ಳಿ ಹಂಟಿಂಗ್ ಕೇಸ್ ರೂ 30 ಈಗ ರೂ 15 ರಿಸ್ಟ್ ವಾಚು ವಿನಾ ಇತರ ವಾಚುಗಳನ್ನು ಕೊಂಡುಕೊಳ್ಳುವ ಪ್ರತಿ ಗಿರಾಕಿಗಳಿಗೆ ಒಂದು ವಾಚ ಸರಪಣಿಯೂ ಒಂದೇ ಸಲ 6 ವಾಚುಗಳನ್ನು ಕೊಂಡುಕೊಳ್ಳುವರಿಗೆ ಒಂದು ವಾಚು ಪುಗಸಾಟೆಯಾಗಿಯೂ ದೊರಕುವದು

The Century Watch Agency,
Madun Mitra Lane, CALCUTTA

ದಿವ್ಯಾಂಜನ. (Divyanjan).

ಸರ್ವ ತರಹದ ನೋವುಗಳ ಮೇಲೆ ರಾಮಬಾಣ ಔಷಧ.

ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ವಾಯು, ಅರ್ಧಾಂಗವಾಯು, ಕಜ್ಜಿ, ತುರಿಕಜ್ಜಿ, ಹಾವು, ಸುಟ್ಟಗಾಯ, ಉರಿ, ಉಳುಕು, ಎಲುಬುಗಳ ನೋವು, ಕೈಕಾಲು ಜಾತ ಒಡೆವುದು, ಇವೇ ಮೊದಲಾದವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ

ಕ್ರಯ ಡಬ್ಬಿ 1ಕ್ಕೆ ರೂ 0—8—0. ಡಜನ್ 1ಕ್ಕೆ ಕಮಿಶನ್ ಕಳೆದು ರೂ 5—1—0 ಟಪ್ಪಾಲು ಹಾಸಲು ಪ್ರತ್ಯೇಕ ಸಂಪಲ್ ಡಬ್ಬಿ 1ಕ್ಕೆ ರೂ 0—1—0 ಪೋಸ್ಟೇಜು ಮಾಫಿ

ಸಿಕ್ಕುವ ಸ್ಥಳ —

ಬಿ ಎಸ್ ಹನುಮಂತಪ್ಪ ಮತ್ತು ಕಂಪನಿ, ಚಿಕ್ಕಮಂಗಳೂರು.
ಕೆ. ಬೋರಯ್ಯ ಶೆಟ್ಟಿ, ದಾವಣಗೆರೆ.

ಅಥವಾ

Someshwar & Sons — ಸೋಮೇಶ್ವರ ಎಂಡ್ ಸನ್ಸ್.
Wardens Building — ವೊರ್ಡನ್ಸ್ ಬಿಲ್ಡಿಂಗ್,
FERGUSSON ROAD, BOMBAY — ಫರ್ಗುಸನ್ ರಸ್ತಾ, ಮುಂಬಯಿ

ಸೂಚನೆ — ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು ಇಂಗ್ಲಿಷಿನಿಂದಲೇ ಬರೆಯತಕ್ಕದ್ದು ಕನ್ನಡದಿಂದ ಬರೆದರೆ ಕಾಗದಗಳು ಸರಿಯಾಗಿ ತಲಪುವದಿಲ್ಲ ಔಷಧ ಬೇಕಾದವರು ವಿ ಪಿ ಮುಖಾಂತರ ತರಿಸಿಕೊಳ್ಳಬಹುದು ಜಾಸ್ತಿಯಾಗಿ ಇದನ್ನು ತೆಗೆದುಕೊಂಡವರಿಗೆ ಅತಿಶಯ ಕಮಿಶನ್ ಕೊಡಲ್ಪಡುವದು ಏಜಂಟರು ಬೇಕಾಗಿವೆ

ಕನ್ನಡ ಗ್ರಂಥಗಳು.

	ರೂ	ಆ		ರೂ	ಆ
ದ್ವಾದಶಸ್ಕಂದ ಭಾಗವತ	4	0	ತೊರವೆರಾಮಾಯಣ ಅವ್ವಲ್	1	8
ದಶಮ ಸ್ಕಂದ ಭಾಗವತ	1	8	ದುಯ್ಯಂ	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ದಶಪರ್ವ ಭಾರತ	2	0	ಜೈಮಿನಿ ಕಥಾಸಂಗ್ರಹ	0	12
ಅಶ್ವಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮುನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬೃಹತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕ ಜ್ಯೋತಿಷ್ಯ, ವೈದ್ಯ, ಯಕ್ಷಗಾನ ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಿಗಳು ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

S. NAGAPPA NAYAK,
K. Appaya Shenoy & Co.

Cloth Merchants Car Street Mangalore.

Beg to inform the public that they keep for sale a large and varied stock of lacebordered and Silk Sadies, Dhotis, Turbans, Caps, Shirtings, Twills, Tweeds, Silks, Swadeshi cloths, &c &c of guaranteed colours and best patterns Price very moderate

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜೀಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಅಂಗಿಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು ದರಗಳು ಸುಲಭ ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು

ಕುಟುಂಬ ಸಂಜೀವಿನೀ.

ಲೋಕಪ್ರಸಿದ್ಧವಾದ ಈ ತೈಲವನ್ನು ವನಸ್ಪತಿಯಿಂದಲೇ ತಯಾರಿಸಿರುತ್ತದೆ. ತೈಲದ ಗುಣವು ಅತಿ ಆಶ್ಚರ್ಯಕರ! ಈ ತೈಲವನ್ನು ಮೂಸಿ ನೋಡುವದರಿಂದ ಶೀತ, ನೆಗಡಿ, ತಲೆನೋವು, ತಲೆಸಿಡಿತ, ಅಂತರ್ಧಾನವಾಗುವದು ಒಂದೆರಡು ತಟಕು ತೈಲವನ್ನು ಕುದಿಯುವ ನೀರಿನಲ್ಲಿ ಹಾಕಿ ಹಬೆಯನ್ನು ಅಘ್ರಾಣಿಸುವದರಿಂದ ಸರ್ವ ವಿಧದ ಕೆಮ್ಮು, ಉಬ್ಬಸ, ಕ್ಷಯರೋಗಕ್ಕೆ ಉಪಶಾಂತಿಯಾಗುವದು. ಬಹಳ ದಣಿದು ಬೇಸತ್ತವರು ಈ ತೈಲದ ಒಂದೆರಡು ತಟಕನ್ನು ಬಿಸಿನೀರಿಗೆ ಹಾಕಿ ಸ್ನಾನಮಾಡುವದರಿಂದ ಹೊಸಜೀವ ಬಂದಂತಾಗುವದು ಜ್ವರ, ಶೀತಜ್ವರ, ವಿಷಜ್ವರ, ಮಲೇರಿಯ ಎಂಬ ಛಳಿಜ್ವರಕ್ಕೆ ಇದಕ್ಕಿಂತ ಸುಲಭ ಚಿಕಿತ್ಸೆಯು ಬೇರೊಂದಿಲ್ಲ ಮಲೇರಿಯ ಜ್ವರದಿಂದ ಹೊಟ್ಟೆಯಲ್ಲಿ ಹುಟ್ಟುವ ಗಡ್ಡೆಯು ಕೂಡಾ ಈ ತೈಲದ ಸೇವನೆಯಿಂದ ನೀರಾಗುವದು. ಹೊಟ್ಟೆನೋವು, ಹೊಟ್ಟೆಯ ಕ್ರಿಮಿ, ಉಷ್ಣಭೇದಿ, ಶೀತಭೇದಿ, ಅಜೀರ್ಣ, ಅಗ್ನಿಮಾಂದ್ಯ ಮೊದಲಾದ ರೋಗಗಳಿಗೆ ಇದು ಸಂಜೀವಿನಿಯಂತಿದೆ ಕಿವಿನೋವು, ಕಿವಿಸೋರುವುದು, ಹಲ್ಲುನೋವು ಮತ್ತು ಮೇಹ ಮೊದಲಾದ ಗುಪ್ತವ್ಯಾಧಿಗಳು ಇದರ ಸೇವನೆಯಿಂದ ಪರಿಹಾರ. ಬೆಂಕಿಯ ಬೊಕ್ಕೆ, ಜಜ್ಜಿದ ಗಾಯ, ಗಾಯ, ಚೇಳು ನೊಣ, ಜಾಡರಹುಳ, ಮೊದಲಾದ ಜಂತುಗಳ ಕಡಿತಕ್ಕೆ ಈ ತೈಲವು ಅಮೃತದಂತಿದೆ. ಪ್ರಸವ ವೇದನೆ ಕಾಲದಲ್ಲಿ ಹೆಂಗಸರ ಕಿಬ್ಬೊಟ್ಟೆಯ ಮೇಲೆ ಈ ತೈಲವನ್ನು ಹಚ್ಚಿದರೆ ಸುಖಪ್ರಸವವಾಗುವದು. ನೋವು, ವಾತ, ಪಕ್ಷವಾತ, ಗಂಟುನೋವು, ಸೊಂಟನೋವು, ಎದೆನೋವುಗಳಿಗೆ ಇದನ್ನು ಹಚ್ಚುವದರಿಂದ ನೋವು ಗುಣವಾಗುವದು. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಔನ್ಸ್ ಸೀಸೆ 1ಕ್ಕೆ 5 ಆಣೆ ವಿ. ಪಿ. ಚಾರ್ಜು ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—10—0.

ಸೂಚನೆ.—ಇಕ್ಲಿಪ್ಸ್ ಏಜನ್ಸಿಯ ತೈಲವೆಂದು ಕೆಲವರು ಗ್ರಾಹಕರನ್ನು ಮೋಸಗೊಳಿಸುತ್ತಿದ್ದಾರೆ ನಮ್ಮ ಲೇಬಲನ್ನೇ ನೋಡಿ ಕೊಂಡುಕೊಳ್ಳಿರಿ.

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಹುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು ಮುಂಬಯಿ

ಅಧ್ಯಕ್ಷರು:—ಬಹುಮಾನಪಟ್ಟ ಮಿ। ಲಲ್ಲುಭಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ

ಮೆನೇಜಿಂಗ್ ಡಿರೆಕ್ಟರರು:—ಪ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ

ಎಕ್ಚುವೆರಿ:—ಮಿ। ಜೋರ್ಜ್ ಕಿಂಗ್ ಎಫ್ ಎಫ್ ಎ ಎಫ್ ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್ ರಾವ್, ಎಮ್. ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ ಸುಬ್ರಮಣ್ಯಯ್ಯರ್, ಬಿ ಎ ಜೆ. ಪಿ. ಎಫ್. ಎಸ್ ಎ ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ 1,55,000ವನ್ನು ಠೇವಣಾತಿ ಮಾಡಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡ, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ 3 – 7 – 1914

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬ ಈ ಜೀವವಿಮೆ ಉತ್ತರವಾದಿಯಿರುವ ಸಂಘದ ಬಗ್ಗೆ ನಾವು ಏನೊಂದೂ ವಿಳಂಬವಿಲ್ಲದೆ, ರೂ 986–10–0ನ್ನು ನನಗೆ ಪಾವತಿಮಾಡಿದ ದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕರಿಕಾದ ಆಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಹಣವನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ತಿಳಿಯಪಡಿಸಿ. ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲಿ ನಂಬುಗೆ ಹುಟ್ಟುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) ಹಾರಾಡಿ ಆನಂದರಾಯ ಘುಡಿಯಾರನ ರುಜು

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು)

ಉಡ್ಪಿ, ತಾ 20 – 8 – 1914

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಕುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No 1738

ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ

ಮಂಗಳೂರು, ತಾ 30 – 10 – 1914

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! ಕ್ಲೇಮು ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ಬೇಕಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು—ಇದೊಂದು ವಿಶೇಷವು. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕುಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ಪಾಲಿಸಿ ಪತ್ರಿಕೆ ಆಸಾಮಿ)

ಒಂದು ಸಾರಿ ಕೊಂಡು, ನೋಡಿರಿ!!

ಒಟ್ಟೋ ದಿಲ್-ಚಮಾನ್

(ರಿಜಿಸ್ಟರ್ಡ.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳಪಿರುವದು.

	ರೂ	ಆ	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 „	0	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್ ಚಮಾನ್ ಪರಿಮಳ ಕಾರ್ಡುಗಳ ಡಜನಿಗೆ	0	12	0

ವಿ. ಪಿ. ಚಾರ್ಜು 0 – 4 – 0 ಬೇರೆ

ಪ್ರಾಮುಖ್ಯ ಏಜಂಟರ —

ಎಚ್. ಆರ್. ಮೋದಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,
10 Prince Street BOMBAY.

ವಿಶೇಷವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ರಕ್ತಶುದ್ಧಿಯ ದೀಪಕ

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ 30 ಮಾತ್ರೆಗಳ ಶೀಸೆ 1ಕ್ಕೆ ರೂ 1 – 8 – 0

ರಾಮಬಾಣ ಗಜಕರ್ಣ ಮುಲಾಮ

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ ಡಬ್ಬಿ 1ಕ್ಕೆ 4 ಆಣೆ

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋದಿ ಎಂಡ್ ಕೊ
Chemists, ಕೆಮಿಸ್ಟ್ಸ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧಾಂತವು. ಕ್ಷಯರೋಗ, ಎಳವು (ಹಿಸ್ಟೀರಿಯಾ) ವೀರ್ಯದೌರ್ಲಭ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯ ನೋವು, ಮುಖದಲ್ಲಿಯ ಬಿಳುಪು, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುಚ್ಛಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ. ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು. ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೆಯೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ. ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೆನೇ ನಂಬಿಕೆಯುಂಟಾಗುವುದು.

25 ಮಾತ್ರೆಗಳ ಸೀಸೆ 1ಕ್ಕೆ ರೂ 1—4—0. 40 ಮಾತ್ರೆಗಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ.

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು. ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈದು ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ. ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲಿವುಳ್ಳದ್ದಾಗಿಯೂ, ನೋಡಲು ರೇಶ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಸ್ವಲ್ಪ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ.

ಕ್ರಯ ಸೀಸೆ 1ಕ್ಕೆ ರೂ 1—0—0.

,, ,, 3ಕ್ಕೆ ,, 2-10—0

ವಿ. ಪಿ. ಚಾರ್ಜು ಅಲಾಯಿದ

N. B — ಕಾಮಿನಿಯಾ ಎಣ್ಣೆಯನ್ನು ಕೊಂಡುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎಂಬುದನ್ನೇ ತೆಗೆದುಕೊಳ್ಳಿರಿ

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್‌ಮನ್ಸ್ ಸ್ಪೈಪ್ರಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮಿನ ಸ್ಪರ್ಶದಿಂದ ಶೀಘ್ರವಾಗಿ ನಿವೃತ್ತಿಯಾಗುತ್ತದೆ. ಒಂದು ಸಲ ಉಪಯೋಗಿಸಿ ನೋಡಿರಿ ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭವುಂಟು. ಕ್ರಯ ಬಾಟ್ಲಿ ಒಂದರ ರೂ 1—0—0. ಟಪ್ಪಾಲು ಖರ್ಚು 4 ಆಣೆ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್‌ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯೂ ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ. ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ. ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್‌ಬಹಾರ್" ಡಬ್ಬಿಯನ್ನು ಪೇಕಿಂಗ್ ಒತೆಯುದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ.

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

ಮಿಡಿಯಂ ,, ,, 0-12—0.

,, ½ ಔನ್ಸಿನ ,, ,, 2—0—0.

ಆಟೋ ದಿಲ್‌ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಆಡ್‌ಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್‌ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ ಕೂಲಿನ್ ಮಾರ್ಟ್, ಮಂಗಳೂರು ದ. ಕನಡಾ.

Printed & Published by V. S. Kamath at the Mangalore Trading Association's Sharada Press, Mangalore